ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಶಾಂತಿಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೨೬

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 26

ಮುದ್ರಕರು:
ಭಾರತ ದರ್ಶನ ಮುದ್ರಣಾಲಯ
163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,
ಬೆಂಗಳೂರು - 560 028
ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ಎ. ಸೂರ್ಯನಾರಾಯಣ್, M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ದಯಾಮಯನಾದ ಪರಮಾತ್ಮನ ಅನುಗ್ರಹದಿಂದಲೂ, ಗುರು ಭಗವಂತನ ಆಶೀರ್ವಾದಗಳಿಂದಲೂ, ಸತ್ಪುರುಷರ ಸಹಕಾರ-ಸದಾಶಯ ಗಳಿಂದಲೂ ಶ್ರೀಮನ್ಮಹಾಭಾರತದ 26ನೆಯ ಸಂಪುಟರೂಪವಾದ ದಿವ್ಯ ಕುಸುಮವನ್ನು ಭಗವಂತನ ಪಾದಾರವಿಂದಗಳಲ್ಲಿ ಸಮರ್ಪಿಸಿ, ಪ್ರಸಾದ ರೂಪವಾದ ಈ ಕುಸುಮವನ್ನೇ ನಮ್ಮ ಪ್ರಿಯವಾಚಕರ ಅಂಜಲಿಪುಟ ಗಳಲ್ಲಿಡುತ್ತಿದ್ದೇವೆ. ಈ ಸಂಪುಟದೊಡನೆ ಹದಿನಾಲ್ಕು ಸಾವಿರಕ್ಕೂ ಹೆಚ್ಚು ಶ್ಲೋಕಗಳಿರುವ ಶಾಂತಿಪರ್ವವು ಮುಗಿದಿರುವುದಲ್ಲದೇ ಅನುಶಾಸನ ಪರ್ವವೂ ಈ ಸಂಪುಟದಲ್ಲಿಯೇ ಪ್ರಾರಂಭವಾಗಿದೆ. ಅನುಶಾಸನಪರ್ವವು ಶಾಂತಿಪರ್ವದಿಂದ ಮುಂದುವರಿದ ಭಾಗವೇ ಆಗಿದೆ. ಶಾಂತಿಪರ್ವ ದಂತೆಯೇ ಈ ಪರ್ವದಲ್ಲಿಯೂ ಯುಧಿಷ್ಠಿರ-ಭೀಷ್ಮರ ಪ್ರಶ್ನೋತ್ತರಗಳು ಮುಂದುವರಿದಿವೆ. ಅನುಶಾಸನಪರ್ವದ ಮತ್ತೊಂದು ಹೆಸರು ದಾನಧರ್ಮ ಪರ್ವ ಎಂದು. ಏಕೆಂದರೆ : ಅನುಶಾಸನಪರ್ವದ ಕಡೆಯವರೆಗೂ ದಾನಧರ್ಮಪರ್ವವೇ ಇದೆ. ಈ ಸಂಪುಟದಲ್ಲಿ ಹಯಗ್ರೀವಾವತಾರ, ನಾರಾಯಣೀಯ, ಶುಕವೃತ್ತಾಂತ, ನಾರದರು ಮಾಡಿರುವ ವಿಷ್ಣು ಸ್ತೋತ್ರ, ಶಿಲೋಂಛವೃತ್ತಿಯ ಮಹಿಮೆ–ಇತ್ಯಾದಿ ಅನೇಕಪ್ರಕರಣಗಳಿದ್ದು ಅಧ್ಯಾತ್ಮಪಿಪಾಸುಗಳಿಗೆ, ಭಕ್ತಜನರಿಗೆ, ತತ್ತ್ವಾನ್ವೇಷಕರಿಗೆ ಈ ಸಂಪುಟವು ಮನಸ್ತೃಪ್ತಿಯನ್ನುಂಟುಮಾಡುವುದಾಗಿದೆ.

೨೫ನೆಯ ಸಂಪುಟದ ಪ್ರಕಾಶನವಾದನಂತರ ನಮ್ಮ ಕಾರ್ಯ ಕ್ರಮದಂತೆ ಹಿಂದಿನ ೧೧ನೆಯ ಸಂಪುಟದ ಪುನರ್ಮುದ್ರಣವನ್ನು ಮುಗಿಸಿ ಈ ಸಂಪುಟವನ್ನು ಹೊರತಂದಿರುತ್ತೇವೆ. ಏಣಿಯನ್ನೇರುವಾಗ ಮೇಲಕ್ಕೇರಿ

ದಂತೆಲ್ಲಾ ಏರುಸಿರು ಬರುವಂತೆ ಕಡೆಯ ಹಂತವನ್ನು ಮುಟ್ಟುತ್ತಿರುವಂತೆ ನಮಗೂ ಏರುಸಿರು ಪ್ರಾರಂಭವಾಗಿದೆ. ಹನ್ನೊಂದನೆಯ ಸಂಪುಟದ ಪುನರ್ಮುದ್ರಣಕ್ಕೂ ಮತ್ತು ಈ ಸಂಪುಟಕ್ಕೂ ನಮಗೆ ರಿಯಾಯಿತಿ ದರದಲ್ಲಿ ಕಾಗದವು ಸಿಕ್ಕಲಿಲ್ಲ. ಒಂದು ರೀಮಿಗೆ ೬೦ ರೂ.ಗಳನ್ನು ಕೊಡುವುದಕ್ಕೆ ಬದಲಾಗಿ ೧೦೦ ರೂ.ಗಳನ್ನು ಕೊಡಬೇಕಾಗಿ ಬಂದಿದೆ. ಇದರಿಂದ ಈ ೨೬ನೆಯ ಸಂಪುಟಕ್ಕೆ ಕಾಗದಕ್ಕಾಗಿಯೇ ೨೦ ಸಾವಿರ ರೂ.ಗಳಷ್ಟು ಹೆಚ್ಚು ವೆಚ್ಚವಾಗಿದೆ. ಗಾಯದ ಮೇಲೆ ಬರೆ ಎಳೆದಂತೆ ತಿರುಪತಿ ದೇವಸ್ಥಾನದಿಂದ ಬರುತ್ತಿದ್ದ ಐದು ಸಾವಿರ ರೂ.ಗಳ ಸಹಾಯಧನವೂ ನಿಂತಿದೆ. ಧರ್ಮಾಭಿಮಾನಿಗಳಾಗಿದ್ದ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ಅಲ್ಲಿಂದ ನಿರ್ಗಮಿಸಿದ್ದೇ ಇದಕ್ಕೆ ಕಾರಣವೆನ್ನದೇ ವಿಧಿಯಿಲ್ಲ. ಅವರಿತ್ತಿದ್ದ ಆಜ್ಞಾಪತ್ರದಲ್ಲಿ ಮುದ್ರಣವಾಗುವ ಶ್ರೀಮನ್ಮಹಾಭಾರತದ ಎಲ್ಲ ಸಂಪುಟಗಳಿಗೂ ಐದು ಸಾವಿರ ರೂ.ಗಳ ಸಹಾಯಧನವನ್ನು ಕೊಡುವುದಾಗಿ ಖಚಿತವಾಗಿಯೇ ತಿಳಿಸಿದ್ದರೂ– ಈಗಿನ ಅಲ್ಲಿಯ ಆಡಳಿತಾಧಿಕಾರಿಗಳು ಅದರಂತೆ ನಡೆದುಕೊಳ್ಳಲು ನಿರಾಕರಿಸಿದ್ದಾರೆ. ಎಲ್ಲ ವಿಷಯಗಳನ್ನೂ ಸ್ಪಷ್ಟಪಡಿಸಿ ಅವರಿಗೆ ನಾಲ್ಕಾರು ಪತ್ರಗಳನ್ನು ಬರೆದರೂ ಪ್ರಯೋಜನವಾಗಲಿಲ್ಲ.

ನಮ್ಮ ಪ್ರಕಾಶನದ ಭಾರವನ್ನು ಪರಮಾತ್ಮನೇ ಹೊತ್ತಿರುವಾಗ ನಮಗೆ ಈ ವಿಷಯದ ಬಗೆಗೆ ಅಷ್ಟು ಆತಂಕವಿಲ್ಲ. ಸಮಯವರಿತು ದಯಾಮಯನಾದ ಪರಮಾತ್ಮನು ಹಾದಿಯನ್ನು ತೋರಿಸಿಕೊಡುತ್ತಾನೆ. ಇದು ನಮ್ಮ ದೈನಂದಿನದ ಅನುಭವವೇ ಆಗಿದೆ. ಆದರೆ ಸತ್ಯಮೂರ್ತಿಯಾದ, ಸತ್ಯಪ್ರಿಯನಾದ, ಸತ್ಯಾತ್ಮನಾದ, ಸತ್ಯಸಂಕಲ್ಪನಾದ, ದೇವದೇವನಾದ ಶ್ರೀವೆಂಕಟೇಶ್ವರನಿಗೆ ಸೇರಿದ ಈ ಮಹಾಸಂಸ್ಥೆಯಲ್ಲಿಯೇ ಇಂತಹ ವಚನಭಂಗದ ಪ್ರಕರಣವು ನಡೆದಿರುವುದು ನಿಶ್ಚಯವಾಗಿಯೂ ವಿಷಾದಕರ.

ನಮ್ಮ ಪ್ರಕಟಣೆಯ ವಿಷಯವಾಗಿ ಅವರಿಗೆ ಎಲ್ಲ ವಿಷಯಗಳನ್ನೂ ಸ್ಪಷ್ಟಪಡಿಸಿದೆವು. ಇದನ್ನು ವ್ಯಾಪಾರೀಧರ್ಮದಿಂದ ಮಾಡುತ್ತಿಲ್ಲವೆಂಬುದನ್ನೂ ಅಂಕಿ-ಅಂಶಗಳಿಂದ ತಿಳಿಸಿದೆವು. ಈ ಎಲ್ಲವನ್ನೂ ಪರಿಶೀಲಿಸಿಯೇ ಹಿಂದಿನ ಆಡಳಿತಾಧಿಕಾರಿಗಳು ಅಂತಹ ಆಜ್ಞೆಯನ್ನು ಹೊರಡಿಸಿರುವ

ರೆಂದೂ ತಿಳಿಸಿದೆವು. ಆದರೆ ಈಗಿನ ಆಡಳಿತಾಧಿಕಾರಿಗಳಿಗೆ ಯಾವುದೂ ಮನಸ್ಸಿಗೆ ಹಿಡಿಸಲೇ ಇಲ್ಲ. ತಮ್ಮ ಸಲ್ಲದ ವಾದವನ್ನೇ ಮುಂದಿಟ್ಟು ಸಹಾಯಧನವನ್ನು ನಿರಾಕರಿಸಿದ್ದಾರೆ. ಆಂಧ್ರದ ಮುಖ್ಯಮಂತ್ರಿಗಳ ಅವಗಾಹನೆಗೂ ಈ ವಿಷಯವನ್ನು ತಿಳಿಸುವ ಆಶಯವಿದೆ. ಪ್ರಯತ್ನವು ನಮ್ಮದು ; ಫಲಿತಾಂಶವು ಪರಮಾತ್ಮನಿಗೆ ಸೇರಿದುದು. ತಿರುಪತಿಯ ಸಹಾಯಧನವು ನಿಂತುದಕ್ಕಾಗಲೀ, ಕಾಗದಕ್ಕೆ ಹೆಚ್ಚು ವೆಚ್ಚವಾದುದ ಕ್ಕಾಗಲೀ–ನಾವು ಹೆಚ್ಚು ಅಧೀರರಾಗಿಲ್ಲ. ಭಯಕೃದ್ಭಯನಾಶನಃ ಎಂಬಂತೆ ಭಗವಂತನೇ ಒಮ್ಮೆ ಭಯವನ್ನು ಹುಟ್ಟಿಸುತ್ತಾನೆ ; ಮತ್ತೊಮ್ಮೆ ಧೈರ್ಯವನ್ನು ತುಂಬುತ್ತಾನೆ. ಕಾಗದದ ಬೆಲೆಯ ಹೆಚ್ಚಳದಿಂದಾಗಿ ಒಂದು ಪ್ರತಿಗೆ ೨ ರೂ.ಗಳನ್ನು ಹೆಚ್ಚಿಸಬೇಕಾಗಿದ್ದಿತು. ಬಹಳ ಸಂಕೋಚದಿಂದಲೇ ಸಂಪುಟವೊಂದಕ್ಕೆ ಒಂದು ರೂ. ಮಾತ್ರ ಹೆಚ್ಚಿಸಲಾಗಿದೆ. ಪೂರ್ಣಮಾಲೆಯ ಚಂದಾಹಣವನ್ನು ಹೆಚ್ಚಿಸಿಲ್ಲ. ಪೂರ್ಣಮಾಲೆಯ ಗ್ರಾಹಕರ ಸಂಖ್ಯೆಯು ಹೆಚ್ಚಬೇಕೆಂಬ ಆಶಯವೇ ಇದಕ್ಕೆ ಮುಖ್ಯಕಾರಣವಾಗಿದೆ. ೨೫ನೆಯ ಸಂಪುಟದ ಪ್ರಕಾಶನದಿಂದ ಈಚೆಗೆ ಗ್ರಾಹಕರ ಸಂಖ್ಯೆಯು ಸ್ವಲ್ಪ ಸುಧಾರಿಸುತ್ತಿದೆ. ಆದರೆ ನಮ್ಮ ಆಶಯವಿನ್ನೂ ಪೂರ್ಣವಾಗಿಲ್ಲ. ಗ್ರಾಹಕರೆಲ್ಲರೂ ಸಂಪೂರ್ಣವಾಗಿ ಸಹಕರಿಸಿ ನಮ್ಮ ಆಶಯವನ್ನು ಪೂರ್ಣಗೊಳಿಸಿ ಕೊಡಬೇಕಾಗಿದೆ. ಇತ್ತೀಚೆಗೆ ಕರ್ಣಾಟಕ ಬ್ಯಾಂಕಿನವರು ಪರಿಪತ್ರವನ್ನು ಹೊರಡಿಸಿ 1983ನೇ ವರ್ಷದ ಕಡೆಯವರೆಗೂ ಸಾಲದ ಅವಧಿಯನ್ನು ವಿಸ್ತರಿಸಿದ್ದಾರೆ. ಪ್ರತಿಯೊಂದು ಶಾಖೆಯವರೂ ಐದು ಅಥವಾ ಹತ್ತು ಮಂದಿಗೆ ಸಾಲಕೊಡಬಹುದೆಂದು ಸೂಚಿಸಿದ್ದಾರೆ. ನಮ್ಮ ಕನ್ನಡ ಬಂಧುಗಳು ಈ ಸದವಕಾಶವನ್ನು ಉಪಯೋಗಿಸಿಕೊಳ್ಳಬೇಕಾಗಿ ವಿನಂತಿಸುತ್ತೇವೆ. ಕೆನರಾ ಮತ್ತು ಸಿಂಡಿಕೇಟ್ ಬ್ಯಾಂಕಿನವರು 1984ರ ಕಡೆಯವರೆಗೂ ಸಾಲದ ಅವಧಿಯನ್ನು ವಿಸ್ತರಿಸಿರುತ್ತಾರೆ. ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕಿನವರು ಕಳೆದ ಆರು ತಿಂಗಳಲ್ಲಿ ಹೆಚ್ಚುಮಂದಿಗೆ ಮಹಾಭಾರತದ ಪೂರ್ಣಮಾಲೆಗೆ ಸುಲಭಕಂತುಗಳ ಸಾಲವನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಗ್ರಾಹಕರಾಗಲು ಇಚ್ಛಿಸುವವರು ಈ ಬ್ಯಾಂಕಿನ ನೆರವನ್ನು ಪಡೆಯಬಹುದು. ಎಷ್ಟೇ ನಷ್ಟವಾಗಲೀ ಮುಗಿದು ಹೋಗಿರುವ ಎಲ್ಲ ಸಂಪುಟಗಳನ್ನೂ ಒಂದಾದಮೇಲೆ ಮತ್ತೊಂದ

ರಂತೆ ಪುನರ್ಮುದ್ರಣಮಾಡಲಾಗುವುದು. ಯಾರಿಗೂ ಯಾವ ಸಂಪುಟವೂ ಲೋಪವಾಗದ ರೀತಿಯಲ್ಲಿ ವ್ಯವಸ್ಥೆಮಾಡಲಾಗುವುದು. ಈ ನಮ್ಮ ಪ್ರತಿವಚನವನ್ನು ಪಡೆದು ಸಾವಿರಾರು ಸಂಖ್ಯೆಯಲ್ಲಿ ಗ್ರಾಹಕರಾಗಬೇಕೆಂದು ಪುನಃ ಪುನಃ ವಿನಂತಿಸುತ್ತೇವೆ.

ರಾಜ್ಯದಲ್ಲಿರುವ ಸುಮಾರು ೨,೫೦೦ ಪ್ರೌಢಶಾಲೆಗಳ ಗ್ರಂಥಭಂಡಾರ ಗಳಿಗೂ ಸಂಪುಟಗಳನ್ನು ತೆಗೆದುಕೊಳ್ಳುವುದಾಗಿ ಸತ್ಪುರುಷರಿಂದ ತುಂಬಿದ್ದ ಮಹಾಸಭೆಯಲ್ಲಿ ಇತ್ತಿದ್ದ ಇಬ್ಬರು ಮುಖ್ಯಮಂತ್ರಿಗಳ ಆಶ್ವಾಸನೆಯೂ ಹಾಗೆಯೇ ಉಳಿಯಿತು. ಕಾರ್ಯಗತವಾಗಲಿಲ್ಲ. ಈ ಕಾರ್ಯವನ್ನು ಮಾಡಿ ಕೊಡುವ ಭಾಗ್ಯವು ಯಾರದ್ದಾಗಿದೆಯೆಂಬುದನ್ನು ಕಾದುನೋಡಬೇಕಾಗಿದೆ. 'ಮರಳಿ ಯತ್ನವ ಮಾಡು'–ಎಂದು ಹೇಳಿರುವ ವರಕವಿಯ ಮಾತನ್ನು ಮಾತ್ರ ನಾವು ಯಾವ ಕಾರಣದಿಂದಲೂ ಉಲ್ಲಂಘಿಸುವುದಿಲ್ಲ.

ದಿನಾಂಕ 10-10-1982ನೆಯ ಭಾನುವಾರದಂದು ಬೆಂಗಳೂರಿನ ಹೊಂಬೇಗೌಡನಗರ (ವಿಲ್ಸನ್‌ಗಾರ್ಡನ್) ದಲ್ಲಿರುವ ಧರ್ಮಸೇವಾನಿರತ ಶ್ರೀ ಎಮ್. ಮರಿಸ್ವಾಮಪ್ಪನವರ ಕಲ್ಯಾಣಮಂಟಪದಲ್ಲಿ ಶ್ರೀಮನ್ಮಹಾ ಭಾರತದ 25ನೆಯ ಸಂಪುಟದ ಪ್ರಕಾಶನಸಮಾರಂಭವನ್ನು ಏರ್ಪಡಿಸ ಲಾಗಿತ್ತು.

ವೇದವಿದ್ವಾಂಸರ ವೇದಘೋಷದಿಂದ ಕಾರ್ಯಕ್ರಮವು ಪ್ರಾರಂಭ ಗೊಂಡಿತು. ವಿದ್ವಾನ್ ಹ. ವೆ. ನಾರಾಯಣಶಾಸ್ತ್ರಿಗಳು ರಚಿಸಿದ ಸ್ವಾಗತ ಪದ್ಯಮಾಲಿಕೆಯನ್ನು ಶ್ರೀಮತೀ ಕಮಲಾ ಅವರು ಸುಶ್ರಾವ್ಯವಾಗಿ ವಾಚಿಸಿದರು. ಬಳಿಕ ಪ್ರಕಾಶನಸಂಸ್ಥೆಯ ಪರವಾಗಿ ವಿದ್ವಾನ್ ಹೆಚ್.ಎನ್. ರಂಗಸ್ವಾಮಿಗಳು ಸ್ವಾಗತಭಾಷಣವನ್ನು ಮಾಡಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಬೇಲೀಮಠದ ಚರಮೂರ್ತಿ ಶ್ರೀ ಶ್ರೀ ಶಿವರುದ್ರಸ್ವಾಮಿಗಳವರು ವೇದವ್ಯಾಸ-ಶಾರದಾಮಾತೆಯವರಿಗೂ ಹಾಗೂ ಭಾರತಸರಸ್ವತಿಗೂ ಪೂಜೆಯನ್ನು ಸಲ್ಲಿಸಿ ವಿದ್ವಾಂಸರ ಶಾಂತಿಮಂತ್ರಪಠನ, ಸಭ್ಯರ ಪ್ರಚಂಡಕರತಾಡನ ಹಾಗೂ ನಾಗಸ್ವರವಾದ್ಯದ ಮಂಜುಳಧ್ವನಿಗಳ ಮಧ್ಯೆ 25ನೆಯ ಸಂಪುಟವನ್ನು ಬಿಡುಗಡೆಮಾಡಿ ವೇದಿಕೆಯ ಮೇಲೆ

ಉಪಸ್ಥಿತರಿದ್ದ ಗಣ್ಯರಿಗೆ ಒಂದೊಂದು ಪ್ರತಿಯನ್ನು ನೀಡಿದರು. ಶ್ರೀಮತಿ ಲಲಿತಾ-ಲಕ್ಷ್ಮೀನಾರಾಯಣ್ ಅವರು ಪ್ರಕಾಶಿತಸಂಪುಟದಿಂದ ಆಯ್ದ ಶ್ಲೋಕಗಳನ್ನು ಹಾಡಿದರು.

ಅನಂತರ ಪ್ರಕಾಶನದ ಅಧ್ಯಕ್ಷರಾದ ವೇ|| ಬ್ರ|| ಶ್ರೀ ಹೆಚ್.ಎಸ್. ವರದದೇಶಿಕಾಚಾರ್ಯರಂಗಪ್ರಿಯರು ಪ್ರಕಾಶಿತಸಂಪುಟವನ್ನು ಪರಿಚಯಿಸುತ್ತಾ–"ಈ ಸಂಪುಟದಲ್ಲಿ ಶಾಸ್ತ್ರಗಳಲ್ಲೆಲ್ಲಾ ಮೂರ್ಧನ್ಯವೆನಿಸಿದ ಅಧ್ಯಾತ್ಮಶಾಸ್ತ್ರದ ಉಪದೇಶಭಾಗಗಳು ಮುಂದುವರಿದಿವೆ. ಶಿವ-ವಿಷ್ಣು ತತ್ತ್ವಗಳಲ್ಲಿ ಭೇದವಿಲ್ಲ. ಎಲ್ಲವೂ ಅದ್ವಿತೀಯವಾದ ಪರಬ್ರಹ್ಮತತ್ತ್ವಕ್ಕೇ ಸೇರಿದ್ದೆಂದು ಶ್ರುತಪಡಿಸಲು ಶಿವಸಹಸ್ರನಾಮದ ಹೋಲಿಕೆಯಿರುವ ಶಿವಸ್ತುತಿಯು ಬಹಳ ಚೆನ್ನಾಗಿಯೂ ಚೇತೋಹಾರಿಯಾಗಿಯೂ ಮೂಡಿಬಂದಿದೆ. ಸಾಂಖ್ಯ ಮತ್ತು ಯೋಗ–ಇವುಗಳು ಬೇರೆಯಲ್ಲ–ಎಂದು ಭಗವದ್ಗೀತೆಯಲ್ಲಿ ಹೇಳಿರುವುದನ್ನೇ ನಿಖರವಾಗಿ ಇಲ್ಲಿ ಸ್ಪಷ್ಟಪಡಿಸಲಾಗಿದೆ. ಷಡ್ದರ್ಶನಗಳಲ್ಲಿ ಒಂದಾದ ಸಾಂಖ್ಯದ ಬಗೆಗೆ ಪೂರ್ಣವಾದ ಮಾಹಿತಿಗಳನ್ನು ಒದಗಿಸುವ ಈ ಸಂಪುಟದಲ್ಲೇ ಇವೆಲ್ಲವನ್ನೂ ಮೀರಿಸಿದಂತಹ 26ನೆಯ ತತ್ತ್ವವಾದ ಪುರುಷೋತ್ತಮತತ್ತ್ವವನ್ನು ಕುರಿತು ಉಪದೇಶಿಸಲಾಗಿದೆ. ಇವಲ್ಲದೇ ಅನೇಕೋಪಾಖ್ಯಾನಗಳು, ಪರಾಶರಗೀತೆ, ಹಂಸಗೀತೆ, ಕರಾಳಜನಕ-ವಸಿಷ್ಠರ ಸಂವಾದ, ಅಸಿತ-ದೇವಲರ ಸಂವಾದ, ದ್ಯುಮತ್ಸೇನ-ಸತ್ಯವಾನರ ಸಂವಾದಗಳಿಂದ ಭರಿತವಾಗಿರುವ ಈ ಸಂಪುಟವು ಸಾರ್ವಕಾಲಿಕಮೌಲ್ಯಗಳ ಬಗೆಗೆ ಚಿಂತಿಸುವವರಿಗೆ ಕರದೀಪದಂತಿದೆ"–ಎಂದು ತಿಳಿಸಿದರು.

ಬಳಿಕ ಬೇಲೀಮಠದ ಪೂಜ್ಯ ಶ್ರೀ ಶ್ರೀ ಶಿವರುದ್ರಸ್ವಾಮಿಗಳವರು ಮಾತನಾಡಿ–"ಭಾರತ ದರ್ಶನ ಪ್ರಕಾಶನದವರು ಅತ್ಯಂತ ಆಸ್ಥೆ-ಮುತುವರ್ಜಿ-ಶ್ರಮವಹಿಸಿ ಮೂವತ್ತು ಸಂಪುಟಗಳಲ್ಲಿ ಹೊರತರುತ್ತಿರುವ ಶ್ರೀಮನ್ಮಹಾಭಾರತದ ಪ್ರಕಟಣಾಯೋಜನೆಯು ಈ ಶತಮಾನದ ಅತ್ಯಂತ ಅಮೂಲ್ಯವೂ, ಸ್ತುತ್ಯವೂ, ಸಾರ್ಥಕವೂ ಆದ ಕಾರ್ಯವಾಗಿದೆ. ಕನ್ನಡಾಂಬೆಯ ಸುಪುತ್ರರೆಲ್ಲರ ಮನೆ-ಮನೆಗಳನ್ನೂ ಈ ಸಂಪುಟಗಳು ಪ್ರವೇಶಿಸುವಂತೆ ಆಗಬೇಕು"–ಎಂದು ನುಡಿದರು.

ಶ್ರೀ ಶ್ರೀಗಳವರು ಮುಂದುವರಿದು–"ಮಹಾಭಾರತದಂತಹ ಗ್ರಂಥವು ಭಾರತೀಯ ಜೀವನವಾಹಿನಿ. ಅದರಲ್ಲೂ ಶಾಂತಿಪರ್ವದಂತಹ ಆದರ್ಶ ಉಪದೇಶಭಾಗಗಳು ಇರುವುದರಿಂದಲೇ ಇಂದಿಗೂ ಸಹ ಶಾಂತಿಯ ಧಾಮವನ್ನರಸುವ ವಿದೇಶೀಬಾಂಧವರು ಭಾರತದತ್ತ ಕಣ್ಣನ್ನು ಹಾಯಿಸುತ್ತಿದ್ದಾರೆ. ಭಾರತ ದರ್ಶನದವರು ಮಹಾಭಾರತದ ದರ್ಶನ ವನ್ನಷ್ಟೇ ಮಾಡಿಸುತ್ತಿಲ್ಲ ; ಇಡೀ ಭಾರತದೇಶದ ಸಮ್ಯಗ್ದರ್ಶನವನ್ನೂ ಮಾಡಿಸುತ್ತಿದ್ದಾರೆ"–ಎಂದೂ ನುಡಿದರು. "ರೈತರು, ರಾಜರು, ಮುನಿಗಳು, ವ್ಯಾಪಾರಿಗಳು–ಇತ್ಯಾದಿ ಸಮಾಜದ ಎಲ್ಲ ವರ್ಗಗಳ ಜನರ ಜೀವನದ ರೀತಿ-ನೀತಿಗಳನ್ನು ಇಲ್ಲಿ ಪ್ರತಿಬಿಂಬಿಸಲಾಗಿದೆ. 1972ರಲ್ಲಿ ಈ ಯೋಜನೆಯು ಆರಂಭಗೊಂಡಾಗ ಸಾರ್ವಜನಿಕರಲ್ಲಿ ಹಾಗೂ ಪ್ರಕಾಶಕರಲ್ಲೇ ಇದು ಸುಸೂತ್ರವಾಗಿ ಪೂರ್ಣಗೊಳ್ಳುತ್ತದೆ–ಎಂಬ ವಿಶ್ವಾಸವು ಮೂಡಿರಲಿಲ್ಲವೆಂದು ತೋರುತ್ತದೆ. ಪ್ರಕಾಶಕರ, ಸಂಪಾದಕಮಂಡಲಿಯ ವಿದ್ವಾಂಸರ ಹಾಗೂ ಪ್ರಚಾರಕರ ನಿಷ್ಠೆ, ಕಾರ್ಯಶ್ರದ್ಧೆ, ಕರ್ತವ್ಯಪ್ರಜ್ಞೆ, ಸೇವಾಭಾವಗಳಿಂದ ಇಂದು ಈ ಸಂಪುಟಗಳು ತ್ರಿವಿಕ್ರಮನ ರೂಪವನ್ನು ತಳೆದು ನಿಂತಿವೆ. ಉಳಿದಿರುವ ಐದು ಸಂಪುಟಗಳೂ ಮೈತುಂಬಿಕೊಂಡು ಸಕಾಲದಲ್ಲಿ ಹೊರಬರಲಿ"–ಎಂದು ತುಂಬುಹೃದಯದಿಂದ ಹಾರೈಸಿದರು.

ಬಳಿಕ ಶ್ರೀರಾಮಚಂದ್ರಾಪುರಮಠದ ಶ್ರೀ ಶ್ರೀ ರಾಘವೇಂದ್ರಭಾರತೀ ಸ್ವಾಮಿಗಳವರು ಅನುಗ್ರಹಿಸಿಕೊಟ್ಟ ಸುವರ್ಣಮಂತ್ರಾಕ್ಷತೆಗಳನ್ನು ಶ್ರೀ ಶ್ರೀಗಳವರು ಸಂಪಾದಕಮಂಡಲಿಯ ಸದಸ್ಯರಿಗೆ ವಿತರಿಸಿದರು. ವಿದ್ವಾನ್ ಪಿ.ಎಸ್. ರಾಮೇಶ್ವರಾವಧಾನಿಗಳು ಧನ್ಯವಾದಗಳನ್ನು ಸಲ್ಲಿಸಿದರು.

ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ಹೆಚ್.ಎಸ್. ವರದದೇಶಿಕಾ ಚಾರ್ಯರಂಗಪ್ರಿಯರ ನೇತೃತ್ವದಲ್ಲಿ ಗ್ರಂಥಸಂಪಾದನೆಯು ವ್ಯವಸ್ಥಿತವಾಗಿ ನಡೆಯುತ್ತಿದೆ. ಸಂಪಾದಕಮಂಡಲಿಯ ವಿದ್ವಾಂಸರು ಹೆಚ್ಚು ಶ್ರಮವಹಿಸು ತ್ತಿದ್ದಾರೆ. ಈ ಮಹಾಗ್ರಂಥವು ಎಷ್ಟು ಬೇಗ ಮುಕ್ತಾಯವಾದೀತೆಂಬ ಆಕಾಂಕ್ಷೆಯಿಂದಿದ್ದಾರೆ. ಇವರ ವಿಷಯದಲ್ಲಿ ಎಷ್ಟು ಹಾಡಿ ಹೊಗಳಿ ದರೂ ಅಲ್ಪವೇ ಸರಿ. ಕರ್ನಾಟಕದ ಜನತೆಯೇ ಇವರಿಗೆ ಕೃತಜ್ಞರಾಗಿರ

ಬೇಕಾಗಿದೆ. ಇವರೆಲ್ಲರಿಗೂ ಕೃತಜ್ಞತಾಪೂರ್ವಕವಾದ ಅಭಿನಂದನೆಗಳನ್ನು ಸಮರ್ಪಿಸುತ್ತೇವೆ.

ನಮ್ಮ ಹಿತೈಷಿಗಳೂ, ಪಠ್ಯಪುಸ್ತಕಗಳ ಇಲಾಖೆಯ ನಿವೃತ್ತ ನಿರ್ದೇಶಕರೂ ಆದ ಸನ್ಮಾನ್ಯ ಶ್ರೀ ಎಚ್.ವಿ. ಶ್ರೀರಂಗರಾಜ್–ಅವರು ಈ ಸಂಪುಟಕ್ಕೆ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಅವರಿಗೆ ನಮ್ಮ ಹೃತ್ಪೂರ್ವಕವಂದನೆಗಳು.

ಪ್ರಚಾರಕಾರ್ಯದಲ್ಲಿ ನೂರಾರು ಮಂದಿ ನೆರವಾಗುತ್ತಿದ್ದಾರೆ. ಪ್ರಕಾಶಕರು ಪ್ರಾರ್ಥಿಸಿರುವಂತೆ ಇಬ್ಬರು ಹೊಸಗ್ರಾಹಕರನ್ನು ಮಾಡಿ ಕೊಡುವುದು ತಮ್ಮ ಕರ್ತವ್ಯವೆಂದು ಭಾವಿಸಿ ಗ್ರಾಹಕರನ್ನು ಮಾಡಿ ಕೊಟ್ಟವರೂ ನೂರಾರು ಮಂದಿ ಇದ್ದಾರೆ. ಗ್ರಾಹಕರ ಮನೆಯ ಬಾಗಿಲಿಗೆ ಸಂಪುಟಗಳನ್ನು ಒಯ್ದುಕೊಟ್ಟು ಹಣವನ್ನು ಸಂಗ್ರಹಿಸಿ ಕಳುಹಿಸುವ ಪುಣ್ಯಾತ್ಮರೂ ಧನ್ಯಾತ್ಮರೂ ಅನೇಕರಿದ್ದಾರೆ. ಹಿಮಾಲಯದಂತಹ ಮಹಾಭಾರತದ ಪ್ರಕಟಣೆಯನ್ನು ಮಾಡಲು ಹೊರಟಿರುವಾಗ ಒಬ್ಬಿಬ್ಬರಿಂದ ಈ ಕಾರ್ಯವು ಸಾಧ್ಯವಾದೀತೇ? ದಯಾಮಯನಾದ ಪರಮಾತ್ಮನು ಎಲ್ಲ ಸವಲತ್ತುಗಳನ್ನೂ ಒದಗಿಸಿಕೊಟ್ಟು ಈ ಕಾರ್ಯವನ್ನು ಆಗುಮಾಡಿಸುತ್ತಿದ್ದಾನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಈ ಕಾರ್ಯದಲ್ಲಿ ನೆರವಾದವರೆಲ್ಲರಿಗೂ ಮತ್ತು ನಮ್ಮ ಪ್ರಿಯ ಓದುಗರಿಗೂ ಸರ್ವೇಶ್ವರನು ಸಮಸ್ತಸನ್ಮಂಗಲಗಳನ್ನೂ ಕರುಣಿಸಲೆಂಬ ಪ್ರಾರ್ಥನೆಯೊಡನೆ ವಿರಮಿಸುತ್ತೇವೆ.

ಶಾನ್ತಿಸ್ತುಷ್ಟಿಃ ಪುಷ್ಟಿಶ್ಚಾಸ್ತು

ಸಮಸ್ತಸನ್ಮಙ್ಗಲಾನಿ ಭವನ್ತು

—ಪ್ರಕಾಶಕರು

ಮುನ್ನುಡಿ

ಸುಮಾರು ಇಪ್ಪತ್ತೈದು ವರ್ಷಗಳಿಂದ ಮಹಾಭಾರತವನ್ನು ಕನ್ನಡ ಜನರಲ್ಲಿ ಪ್ರಚಾರಮಾಡಲು ಕಂಕಣಬದ್ಧರಾಗಿ ತಮ್ಮ ಪ್ರಯತ್ನದಲ್ಲಿ ಯಶಸ್ಸನ್ನು ಸಾಧಿಸಿರುವ ಶ್ರೀ ಕೌಶಿಕರು, ಭಾರತ ದರ್ಶನ ಪ್ರಕಾಶನ ಸಮಿತಿಯ ಅಧ್ಯಕ್ಷರು ಮತ್ತು ಸಂಪಾದಕಮಂಡಲಿಯವರು ಅಭಿನಂದನೆಗೆ ಅರ್ಹರಾಗಿದ್ದಾರೆ. ಶ್ರೀ ಕೌಶಿಕರಿಗೆ ಪ್ರೋತ್ಸಾಹವನ್ನು ಕೊಡುತ್ತಿರುವ ಕರ್ನಾಟಕ ರಾಜ್ಯ ಸರ್ಕಾರವೂ–ಕನ್ನಡ ಜನತೆಯೂ ಅಭಿನಂದನಾರ್ಹರಾಗಿದ್ದಾರೆ. ಈಗಾಗಲೇ ಇಪ್ಪತ್ತೈದು ಸಂಪುಟಗಳನ್ನು ಹೊರತಂದು ಈಗ ಇಪ್ಪತ್ತಾರನೆಯ ಸಂಪುಟವನ್ನು ಹೊರತರುತ್ತಿರುವ ಶ್ರೀ ಕೌಶಿಕರು ಇನ್ನುಳಿದ ನಾಲ್ಕು ಅಥವಾ ಐದು ಸಂಪುಟಗಳನ್ನು ಬೇಗನೆ ಪ್ರಕಟಪಡಿಸಿ ಕನ್ನಡ ಪ್ರಕಾಶನಪ್ರಪಂಚದಲ್ಲಿ ಒಂದು ವಿಕ್ರಮವನ್ನು ಸಾಧಿಸುತ್ತಾರೆ–ಎಂಬ ಭರವಸೆ ನನಗಿದೆ. ಅವರಿಗೆ ಜಯವನ್ನು ಬಯಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಜಾಗತಿಕ ಸಾಹಿತ್ಯದಲ್ಲಿ ಮಹಾಭಾರತ ಒಂದು ಅದ್ವಿತೀಯ ಕೃತಿ. ಅದರ ಜೊತೆಗೆ ಸಮನಾಗಿ ನಿಲ್ಲಬಲ್ಲ ಬೇರೊಂದು ಕೃತಿ ಇಲ್ಲ–ಎಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅದರ ಕಥೆಗೇ ಕೋಟ್ಯಂತರ ಜನರು ಮಾರು ಹೋಗಿದ್ದಾರೆ ; ಹೋಗುತ್ತಿದ್ದಾರೆ. ಆ ಮಹಾಕೃತಿಯ ಒಂದು ಭಾಗವನ್ನೋ ಅಥವಾ ಒಂದು ಘಟನೆಯನ್ನೋ ಆಧರಿಸಿರುವ ಒಂದು ನಾಟಕವನ್ನೋ, ಬಯಲುನಾಟಕವನ್ನೋ, ಹರಿಕಥೆಯನ್ನೋ ಗಂಟೆಗಟ್ಟಲೆ ಕುಳಿತು ಕೇಳುವುದು ಅಥವಾ ನೋಡುವುದು ನಮ್ಮ ದೇಶದಲ್ಲಿ ಸಾಮಾನ್ಯವಾದುದು. ಮೌಲ್ಯಗಳೇ ಬದಲಾಗುತ್ತಿರುವ ಈ ಕಾಲದಲ್ಲಿಯೂ ಮಹಾಭಾರತದ ಒಂದು ಪ್ರಸಂಗವನ್ನು ಅನುಸರಿಸಿ ತಯಾರಾದ ಚಲನಚಿತ್ರಗಳು ಜನಪ್ರಿಯವಾಗಿಯೇ ಇವೆ. ಹೀಗೆ ಸರ್ವಕಾಲದಲ್ಲಿಯೂ ಜನಮನವನ್ನು ರಂಜಿಸುತ್ತಿರುವುದು ಮಹಾಭಾರತ ಕಥೆಯ ಒಂದು ವೈಶಿಷ್ಟ್ಯ. ಇನ್ನು ಅದರಲ್ಲಿ ಬರುವ ಪಾತ್ರಗಳ ವೈವಿಧ್ಯತೆಯೋ! ಮಾನವನ ಅತ್ಯುನ್ನತ ಅಥವಾ ಅತಿಹೀನಭಾವನೆಗಳೆಲ್ಲಕ್ಕೂ ಕ್ಷ-ಕಿರಣವನ್ನು ಹರಿಸಿ ದಿವ್ಯವ್ಯಕ್ತಿಗಳ ಚಿಂತನದೊಂದಿಗೆ ನಮ್ಮನ್ನು ಮೇಲಕ್ಕೊಯ್ಯುವ ಸಾಮರ್ಥ್ಯ ಮಹಾಭಾರತ ಕರ್ತೃವಿಗೆ ಸಿದ್ಧಿಸಿರುವಂತೆ ಬೇರೊಬ್ಬ ಮಹಾಸಾಹಿತಿಗೆ ಸಿದ್ಧಿಸಿಲ್ಲ ಎನ್ನಬಹುದು. ಭೀಷ್ಮ, ಧರ್ಮರಾಯ, ಶ್ರೀಕೃಷ್ಣ, ವಿದುರರಂಥ ಮಹಾಮಹಿಮ

ರನ್ನೂ-ಭೀಮ, ಅರ್ಜುನ, ದುರ್ಯೋಧನ, ಕರ್ಣ, ಅಶ್ವತ್ಥಾಮರಂಥ ಅಸಾಧಾರಣರಾದವರನ್ನೂ–ದುಃಶಾಸನ, ಶಕುನಿಯರಂಥ ನೀಚರನ್ನೂ ಮತ್ತೆ ಯಾವ ಕೃತಿಯಲ್ಲಿ ಅಥವಾ ಸಾಹಿತಿಯಲ್ಲಿ ನೋಡಬಹುದು? ಭೀಷ್ಮ, ಧರ್ಮರಾಯ, ಶ್ರೀಕೃಷ್ಣರು ತಮ್ಮ ದೈವೀಗುಣಗಳಿಂದ ಮನುಷ್ಯನು ಅತ್ಯುತ್ತಮಾಂಶಗಳ ಪ್ರತೀಕವಾಗಿದ್ದರೆ–ದುಃಶಾಸನ, ಶಕುನಿಯರು ಅವನು ಯಾವ ಅಧೋಗತಿಗೆ ಇಳಿಯಬಲ್ಲ–ಎಂಬುದರ ಸಾಕಾರಮೂರ್ತಿಗಳಾಗಿದ್ದಾರೆ.

ಇನ್ನು ಅದರಲ್ಲಿ ಬರುವ ಆಧ್ಯಾತ್ಮಿಕ ಅಂಶಗಳು ಪ್ರಾಯಶಃ ಮಾನವನು ಯಾವುದನ್ನು ಅತಿ ಶುಭಕರವಾದುದು ಮಂಗಳವಾದುದು ಎಂಬುದನ್ನು ನಂಬಿದ್ದನೋ–ಅವೆಲ್ಲವುದರ ಜಿಜ್ಞಾಸೆ ಈ ಮೇರುಕೃತಿಯಲ್ಲಿ ಬರುತ್ತದೆ. ಇಪ್ಪತ್ತಾರನೆಯ ಸಂಪುಟದ ಪ್ರಮುಖಭಾಗವಾಗಿರುವ ಶಾಂತಿಪರ್ವದ 'ಮೋಕ್ಷಧರ್ಮಪರ್ವ'ವು ಇಂಥ ವಿಷಯವನ್ನೊಳಗೊಂಡ ಮಹಾಭಾರತದ ಒಂದು ಭಾಗ. ಈ ದೇಶದಲ್ಲಿ ಮಾನವನಿಗೆ ಸರ್ವಕಾಲಕ್ಕೂ ಮಂಗಳವನ್ನುಂಟುಮಾಡುವಂಥದು ಯಾವುದು? ಯಾವುದರಿಂದ ಅವನಿಗೆ ಮನಶ್ಶಾಂತಿ ದೊರೆಯುತ್ತದೆ? ಯಾವ ಸಾಧನೆಯಿಂದ ಅವನಿಗೆ ಸತ್ಯ ಹೊಳೆಯುತ್ತದೆ?– ಎಂಬುದನ್ನು ಇಲ್ಲಿಯ ಮಹಾಪುರುಷರು ಚಿಂತಿಸಿದ್ದಾರೆ. ಅಂಥಹವರೆಲ್ಲರ ಭಾವನೆಗಳ ಸಾರಾಂಶವನ್ನು ಈ ಭಾಗದಲ್ಲಿ ಕಾಣುತ್ತೇವೆ.

ಮಾನವನನ್ನು ಎರಡು ಬಗೆಯ ಚಿಂತೆಗಳು ಪೀಡಿಸುತ್ತವೆ. ಒಂದು ತಾತ್ಕಾಲಿಕಜೀವನಕ್ಕೆ ಸಂಬಂಧಿಸಿದ ಆರ್ಥಿಕ - ಸಾಮಾಜಿಕಸಮಸ್ಯೆಗಳು. ಇನ್ನೊಂದು ಬಗೆಯವು ಯಾವ ಮಾನವನನ್ನೂ, ಏಕೆ ಯಾವ ಜೀವಿಯನ್ನೂ ಬಿಡದ ವ್ಯಾಧಿ-ಜರಾ-ಮರಣಗಳು. ಮೊದಲನೆಯ ಬಗೆಯ ಸಮಸ್ಯೆಗಳು ವಿವೇಕಪೂರಿತವಾದ ಆರ್ಥಿಕ-ಸಾಮಾಜಿಕವ್ಯವಸ್ಥೆಯಿಂದ ಬಹುಮಟ್ಟಿಗೆ ಪರಿಹಾರವಾಗುತ್ತವೆ. ಜಗತ್ತಿನ ಶ್ರೀಮಂತರಾಷ್ಟ್ರಗಳು ಬಹುಮಟ್ಟಿಗೆ ಬಡತನವನ್ನು ದೂರಮಾಡಿವೆ. ಆದರೆ ಅಲ್ಲಿ ಸುಖ-ಶಾಂತಿಗಳಿವೆ ಎಂದು ಹೇಳಲು ಸಾಧ್ಯವಾಗಿಲ್ಲ. ಏಕೆಂದರೆ.: ವ್ಯಾಧಿ-ಜರಾ-ಮರಣಗಳಿಂದ ಬರುವ ಕಾತರತೆ, ಭಯ, ಸಂಕಟ, ಅಶಾಂತಿಗಳನ್ನು ಯಾವ ಶ್ರೀಮಂತರಾಷ್ಟ್ರವೂ ನಿವಾರಿಸಲು ಸಾಧ್ಯವಾಗಿಲ್ಲ. ನಮ್ಮವರು ಜೀವನದ ಈ ಮೂಲಸಮಸ್ಯೆಗಳನ್ನು ಕುರಿತು ಚಿಂತನೆ ಮಾಡಿದರು. ಅದಕ್ಕೆ ತಕ್ಕ ಪರಿಹಾರವನ್ನು ಕಂಡುಕೊಂಡರು.

ಜಗತ್ತಿನ ಹಿತಕ್ಕಾಗಿ ಅವುಗಳನ್ನು ಸಾರಿಯೂ ಸಾರಿದರು. ವೈಯ್ಯಕ್ತಿಕ ಜೀವನದಲ್ಲಿ ಸಂಯಮ, ಸರ್ವಜನರಲ್ಲಿ ಮೈತ್ರೀ, ಸಕಲಜೀವಿಗಳಲ್ಲಿ ಅನುಕಂಪಗಳನ್ನು ಹೊಂದಿರುವವನು ಶಾಂತಿಯನ್ನು ಹೊಂದಬಲ್ಲ. ಅವನು ತಾನೂ ಪರಮಸುಖಿಯಾಗಿ ಇತರರಿಗೂ ಸುಖ ಕೊಡುವವನಾಗಿರುತ್ತಾನೆ. ಈ ಜೀವನಮೌಲ್ಯಗಳು ತಾತ್ಕಾಲಿಕಸಮಸ್ಯೆಗಳ ಪರಿಹಾರಕ್ಕೂ ಸಹಾಯಕವಾಗಬಲ್ಲುವು.

"ಯಮನು ಪ್ರಮಾದದಿಂದ ಕೂಡಿದ ಇಂದ್ರಿಯಗಳನ್ನು ಮುಂದಿಟ್ಟು ಕೊಂಡು ನಿನ್ನ ಮೇಲೆ ತನ್ನ ಸೇನೆಯ ಆಕ್ರಮಣವನ್ನು ಮಾಡಿಸುತ್ತಾನೆ. ಅದು ನಿನ್ನನ್ನು ಆಕ್ರಮಿಸುವ ಮೊದಲೇ ನೀನು ಜಾಗ್ರತನಾಗಿ ಮೇಲೆದ್ದು ಧರ್ಮವನ್ನು ಪಾಲಿಸುವುದರಲ್ಲಿ ತ್ವರೆಮಾಡು."

(೩೨೧ನೆಯ ಅಧ್ಯಾಯ, ೬೪ನೆಯ ಶ್ಲೋಕ)

"ಯಾವನಿಂದ ಇತರ ಪ್ರಾಣಿಗಳು ಭಯಗೊಳ್ಳುವುದಿಲ್ಲವೋ, ಯಾವನು ಇತರ ಪ್ರಾಣಿಗಳಿಂದ ಭಯಭೀತನಾಗುವುದಿಲ್ಲವೋ, ಯಾವನು ಯಾವ ವಸ್ತುವನ್ನೂ ಇಚ್ಛಿಸುವುದಿಲ್ಲವೋ ಮತ್ತು ಯಾರನ್ನೂ ದ್ವೇಷಿಸುವು ದಿಲ್ಲವೋ–ಅಂತಹವನು ಬ್ರಹ್ಮಭಾವವನ್ನು ಹೊಂದುತ್ತಾನೆ."

"ಯಾವಾತನು ಕರ್ಮ, ಮನಸ್ಸು ಮತ್ತು ಮಾತುಗಳಿಂದ ಯಾವುದೇ ಪ್ರಾಣಿಯ ವಿಷಯದಲ್ಲಿಯೂ ಪಾಪಭಾವವನ್ನು ಹೊಂದಿರುವುದಿಲ್ಲವೋ, ಸಮಸ್ತಪ್ರಾಣಿಗಳಲ್ಲಿಯೂ ದಯಾಪೂರ್ಣನಾಗಿ ದ್ವೇಷರಹಿತನಾಗಿರು ವನೋ–ಅಂತಹವನು ಬ್ರಹ್ಮಭಾವವನ್ನು ಹೊಂದುತ್ತಾನೆ."

(೩೨೬ನೆಯ ಅಧ್ಯಾಯ, ೩೩-೩೪ನೆಯ ಪದ್ಯಗಳು)

ಪರಮಾಣು ಬಾಂಬಿನ ಭಯದಿಂದ ತತ್ತರಿಸುತ್ತಿರುವ ಈ ಆಧುನಿಕ ಮಾನವನಿಗೆ, ದ್ವೇಷ-ಅಸೂಯೆಗಳಿಂದ ಬೆಂದುಹೋಗುತ್ತಿರುವ ಇಂದಿನ ನಾಗರಿಕನಿಗೆ ಈ ಜೀವನಧರ್ಮ ಸಂಜೀವಿನಿಯಾಗುತ್ತದೆ. ಇಂಥ ಅನೇಕಾನೇಕ ಉದಾತ್ತಭಾವನೆಗಳನ್ನು ಮಹಾಭಾರತದ ಈ ಭಾಗದಲ್ಲಿ ಕಾಣಬಹುದು.

ಕೇವಲ ಪಂಡಿತನಾದವನಿಗೂ ಆಸಕ್ತಿಯನ್ನುಂಟುಮಾಡುವ ಅನೇಕಾ ನೇಕ ಅಂಶಗಳು ಇಲ್ಲಿವೆ. ಉದಾಹರಣೆಗೆ ೩೩೬ನೆಯ ಅಧ್ಯಾಯದಲ್ಲಿ ಬರುವ ಯಜ್ಞದ ವಿಷಯ.

"ಆ ಯಜ್ಞವು ಹಿಂಸೆಯಿಂದ ರಹಿತವಾಗಿದ್ದಿತು. ಪವಿತ್ರವಾಗಿದ್ದಿತು.

ಉದಾರವಾಗಿದ್ದಿತು. ಫಲಸಂಕಲ್ಪರಹಿತವಾಗಿದ್ದಿತು. ಯಜ್ಞಕರ್ಮಗಳಿಂದ ಶ್ಲಾಘ್ಯವಾಗಿದ್ದಿತು. ಕಾಡಿನಲ್ಲಿ ಸಿಕ್ಕುವ ಕಂದ-ಮೂಲ-ಫಲ ಇತ್ಯಾದಿಗಳೇ ದೇವತೆಗಳ ಹವಿರ್ಭಾಗಗಳಾಗಿ ಸಿದ್ಧಗೊಳಿಸಲ್ಪಟ್ಟಿದ್ದುವು."

(೧೧ನೆಯ ಶ್ಲೋಕ)

ಮಹಾಭಾರತದ ಈ ಭಾಗ ರಚಿತವಾಗುವ ಹೊತ್ತಿಗೆ ಹಿಂಸಾಸಹಿತವಾದ ಯಜ್ಞವು ದೂಷ್ಯವಾದುದು ಎಂಬ ಭಾವನೆ ಅಂದಿನ ಧೀಮಂತರಲ್ಲಿ ಬೆಳೆದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಇಂಥ ಒಂದು ಸುಧಾರಣೆ ಬರಲು ಯಾವ ಸಾಮಾಜಿಕ ಮತ್ತು ಪ್ರಾಕೃತಿಕಪರಿಸರಗಳು ಕಾರಣಗಳಾಗಿರಬಹುದು ಎಂಬುದು ಒಬ್ಬ ಇತಿಹಾಸಸಂಶೋಧಕನಿಗೆ ಯೋಗ್ಯವಾದ ವಸ್ತುವಾಗಬಲ್ಲದು.

ಮಹಾಭಾರತ ಒಂದು ಬಗೆಯ ವಿಶ್ವಕೋಶ. ಆದರೆ ಕಾವ್ಯರೂಪದ ವಿಶ್ವಕೋಶ. ಇದರ ಪಾರಾಯಣದಿಂದ ಚಿತ್ತ ಶುದ್ಧವಾಗುತ್ತದೆ. ವಿಚಾರ ಹರಿತವಾಗುತ್ತದೆ. ಶೀಲ ಬಲಗೊಳ್ಳುತ್ತದೆ. ಕನ್ನಡಿಗರು ಭಾರತ ದರ್ಶನದ ಈ ಪ್ರಯತ್ನದಿಂದ ಲಾಭಹೊಂದಿ ತಮ್ಮ ಬಾಳನ್ನು ಹಸನುಮಾಡಿಕೊಳ್ಳಲಿ ಎಂದು ಹಾರೈಸುತ್ತೇನೆ.

ಜೇತವನ, ಮೈಸೂರು
9-3-1983

ಎಚ್.ವಿ. ಶ್ರೀರಂಗರಾಜ್

ಮಹಾಭಾರತ-ಶಾಂತಿಪರ್ವ: ಇಪ್ಪತ್ತಾರನೆಯ ಸಂಪುಟದ ವಿಷಯಾನುಕ್ರಮಣಿಕೆ

ಅಧ್ಯಾಯ	ವಿಷಯಗಳು		ಪುಟಸಂಖ್ಯೆ
ಮೋಕ್ಷಧರ್ಮಪರ್ವ			
೩೧೯	ಹುಟ್ಟು-ಸಾವುಗಳನ್ನು ಅತಿಕ್ರಮಿಸುವ ವಿಷಯದಲ್ಲಿ ಜನಕರಾಜ ಮತ್ತು ಪಂಚಶಿಖರ ಸಂವಾದ	....	2935
೩೨೦	ಜನಕರಾಜನನ್ನು ಪರೀಕ್ಷಿಸುವ ಸಲುವಾಗಿ ಬಂದ ಸುಲಭೆಯು ಜನಕನ ಶರೀರದಲ್ಲಿ ಪ್ರವೇಶಿಸಿದುದು : ಜನಕರಾಜನು ಅವಳ ಮೇಲೆ ದೋಷಾರೋಪಣೆ ಮಾಡಿದುದು : ಸುಲಭೆಯು ಯುಕ್ತಿಯುಕ್ತವಾಗಿ ಜನಕನು ಮಾಡಿದ ಆಪಾದನೆಗಳನ್ನು ನಿರಾಕರಿಸುತ್ತಾ ಅವನನ್ನು ಅಜ್ಞಾನಿಯೆಂದು ಪ್ರತಿಪಾದಿಸಿದುದು	....	2939
೩೨೧	ವ್ಯಾಸರಿಂದ ಪುತ್ರನಾದ ಶುಕನಿಗೆ ವೈರಾಗ್ಯ-ಧರ್ಮಗಳ ಉಪದೇಶ	....	2991
೩೨೨	ಶುಭಾಶುಭಕರ್ಮಗಳ ಫಲವನ್ನು ಕರ್ತೃವು ಅನುಭವಿಸಲೇಬೇಕೆಂಬುದರ ಪ್ರತಿಪಾದನೆ	....	3017
೩೨೩	ಪುತ್ರಪ್ರಾಪ್ತಿಗಾಗಿ ವ್ಯಾಸರಿಂದ ತಪಶ್ಚರಣೆ : ಶಂಕರನಿಂದ ವರವನ್ನು ಪಡೆದುದು	....	3023
೩೨೪	ಶುಕದೇವನ ಜನ್ಮ ಮತ್ತು ಅವನ ಉಪನಯನಾದಿ ಸಂಸ್ಕಾರಗಳ ವಿವರಣೆ	....	3028
೩೨೫	ವ್ಯಾಸರ ಆಜ್ಞೆಯಂತೆ ಮಿಥಿಲಾಪಟ್ಟಣಕ್ಕೆ ಶುಕನ ಆಗಮನ : ಮಂತ್ರಿಯೇ ಮೊದಲಾದವರಿಂದ ಸತ್ಕಾರ	....	3032
೩೨೬	ಜನಕರಾಜನಿಂದ ಶುಕನಿಗೆ ಸತ್ಕಾರ : ಜನಕನು ಶುಕನ ಪ್ರಶ್ನೆಗೆ ಉತ್ತರಿಸುತ್ತಾ ಬ್ರಹ್ಮಚರ್ಯಾಶ್ರಮದಲ್ಲಿ ಪರಮಾತ್ಮಪ್ರಾಪ್ತಿಯಾದ ಬಳಿಕ ಉಳಿದ ಮೂರು ಆಶ್ರಮಗಳ ಅವಶ್ಯಕತೆಯಿಲ್ಲವೆಂದು ಪ್ರತಿಪಾದಿಸಿ ಮುಕ್ತಪುರುಷನ ಲಕ್ಷಣಗಳನ್ನು ತಿಳಿಸಿದುದು	....	3040

ಅಧ್ಯಾಯ	ವಿಷಯಗಳು		ಪುಟಸಂಖ್ಯೆ
೩೨೭	ತಂದೆಯ ಬಳಿಗೆ ಶುಕದೇವನ ಪ್ರತ್ಯಾಗಮನ : ವ್ಯಾಸರಿಂದ ಶಿಷ್ಯರಿಗೆ ಸ್ವಾಧ್ಯಾಯದ ವಿಧಿಯ ಉಪದೇಶ	....	3052
೨೨೮	ಶಿಷ್ಯರೆಲ್ಲರೂ ಹೊರಟುಹೋದನಂತರ ವ್ಯಾಸರ ಆಶ್ರಮಕ್ಕೆ ನಾರದರ ಆಗಮನ : ವೇದಪಾರಾಯಣಕ್ಕಾಗಿ ನಾರದರಿಂದ ಪ್ರಚೋದನೆ : ವ್ಯಾಸರಿಂದ ಶುಕನಿಗೆ ಪ್ರವಹವೇ ಮೊದಲಾದ ಏಳು ವಾಯುಗಳ ಪರಿಚಯ	....	3061
೩೨೯	ನಾರದರಿಂದ ಶುಕನಿಗೆ ವೈರಾಗ್ಯದ ಮತ್ತು ಜ್ಞಾನದ ಉಪದೇಶ	....	3073
೩೩೦	ನಾರದರಿಂದ ಶುಕನಿಗೆ ಸದಾಚಾರ-ಅಧ್ಯಾತ್ಮ ವಿಷಯಗಳ ಉಪದೇಶ	....	3089
೩೩೧	ನಾರದರಿಂದ ಶುಕನಿಗೆ ಕರ್ಮಫಲಪ್ರಾಪ್ತಿಯಲ್ಲಿ ಅಸ್ವಾತಂತ್ರ್ಯದ ನಿರೂಪಣೆ : ಸೂರ್ಯಮಂಡಲದ ಮಾರ್ಗವಾಗಿ ಪರಮಪದಕ್ಕೆ ಹೋಗಲು ಶುಕನ ನಿರ್ಧಾರ	....	3098
೩೩೨	ಶುಕದೇವನ ಊರ್ಧ್ವಗತಿಯ ವರ್ಣನೆ	....	3113
೩೩೩	ಶುಕನಿಗೆ ಪರಮಪದಪ್ರಾಪ್ತಿ : ಪುತ್ರಶೋಕದಿಂದ ವ್ಯಾಕುಲರಾಗಿದ್ದ ವ್ಯಾಸರಿಗೆ ಮಹಾದೇವನಿಂದ ಆಶ್ವಾಸನೆ	....	3117
೩೩೪	ಬದರಿಕಾಶ್ರಮದಲ್ಲಿ ನಾರದರ ಪ್ರಶ್ನೆಗೆ ಭಗವಂತನಿಂದ ಶ್ರೀಮನ್ನಾರಾಯಣನ ಸರ್ವಶ್ರೇಷ್ಠತ್ವ ಪ್ರತಿಪಾದನೆ	....	3123
೩೩೫	ನಾರದರಿಂದ ಶ್ವೇತದ್ವೀಪದ ದರ್ಶನ : ಅಲ್ಲಿಯ ನಿವಾಸಿಗಳ ಸ್ವರೂಪವರ್ಣನೆ : ಉಪರಿಚರವಸುವಿನ ಚರಿತ್ರೆ : ಪಾಂಚರಾತ್ರದ ಉತ್ಪತ್ತಿಯ ಪ್ರಸಂಗ	....	3133
೩೩೬	ಉಪಚರನ ಯಜ್ಞದಲ್ಲಿ ಭಗವಂತನ ವಿಷಯದಲ್ಲಿ ಬೃಹಸ್ಪತಿಯ ಕೋಪ : ಏಕತನೇ ಮೊದಲಾದ ಋಷಿಗಳು ಶ್ವೇತದ್ವೀಪದ ಮತ್ತು ಭಗವಂತನ		

ಅಧ್ಯಾಯ	ವಿಷಯಗಳು		ಪುಟಸಂಖ್ಯೆ
	ಮಹಿಮೆಯನ್ನು ಹೇಳಿ ಬೃಹಸ್ಪತಿಯನ್ನು ಸಮಾಧಾನಗೊಳಿಸಿದುದು	....	3146
೩೩೭	ಯಜ್ಞದಲ್ಲಿ ಹೋಮಕ್ಕಾಗಿ ಉಪಯೋಗಿಸಬೇಕಾದ 'ಅಜ' ಶಬ್ದದ ಅರ್ಥ 'ಧಾನ್ಯಬೀಜ' ಎಂದೇ ಹೊರತು ಆಡಲ್ಲ–ಎಂಬ ವಿಷಯವು ತಿಳಿದಿದ್ದರೂ ಉಪರಿಚರವಸುವು ಪಕ್ಷಪಾತವನ್ನು ತೋರಿದನಾದ ಕಾರಣ ಸ್ವರ್ಗದಿಂದ ಭ್ರಷ್ಟನಾದುದು : ಭಗವಂತನ ಕೃಪೆಯಿಂದ ಪುನಃ ಸ್ವಸ್ಥಾನವನ್ನು ಸೇರಿದುದು	....	3158
೩೩೮	ನಾರದಕೃತ ಭಗವನ್ನಾಮಸ್ತೋತ್ರ	....	3166
೩೩೯	ಶ್ವೇತದ್ವೀಪದಲ್ಲಿ ನಾರದರಿಗೆ ಭಗವಂತನ ದರ್ಶನ : ಭಗವಂತನಿಂದ ವಾಸುದೇವ-ಸಂಕರ್ಷಣಾದಿ ವ್ಯೂಹರೂಪಗಳ ಪರಿಚಯ : ಭವಿಷ್ಯದಲ್ಲಿ ಆಗುವ ಅವತಾರಗಳ ಸೂಚನೆ : ಕಥಾಶ್ರಮದ ಮಹಿಮೆ	....	3173
೩೪೦	ಭಗವಂತನು ಬ್ರಹ್ಮಾದಿಗಳಿಗೆ ಉಪದೇಶಿಸಿದ ಪ್ರವೃತ್ತಿ ಮತ್ತು ನಿವೃತ್ತಿಧರ್ಮಗಳ ರಹಸ್ಯವನ್ನು ವ್ಯಾಸರು ತಮ್ಮ ಶಿಷ್ಯರಿಗೆ ಹೇಳಿದುದು	....	3204
೩೪೧	ಶ್ರೀಕೃಷ್ಣನು ಅರ್ಜುನನೊಡನೆ ತನ್ನ ಪ್ರಭಾವವನ್ನು ತಿಳಿಸುತ್ತಾ ತನ್ನ ನಾಮಧೇಯಗಳ ವ್ಯುತ್ಪತ್ತಿಯನ್ನೂ ಮತ್ತು ಮಾಹಾತ್ಮ್ಯವನ್ನೂ ಹೇಳಿದುದು	....	3229
೩೪೨	ಶ್ರೀಕೃಷ್ಣನಿಂದ ಸೃಷ್ಟಿಯ ಪ್ರಾರಂಭದ ವರ್ಣನೆ : ಬ್ರಾಹ್ಮಣರ ಮಹಿಮಾರೂಪವಾದ ಅನೇಕಕಥೆಗಳ ಉಲ್ಲೇಖ : ರುದ್ರ-ನಾರಾಯಣರ ಯುದ್ಧದಲ್ಲಿ ನಾರಾಯಣನ ವಿಜಯ	....	3241
೩೨೩	ದೇವರ್ಷಿಗಳಾದ ನಾರದರು ಶ್ವೇತದ್ವೀಪಕ್ಕೆ ಹೋಗಿ ನರ-ನಾರಾಯಣರನ್ನು ಸಂಧಿಸಿದುದು : ಅಲ್ಲಿಯ ಮಹತ್ವಪೂರ್ಣ ದೃಶ್ಯಗಳ ವರ್ಣನೆ	....	3282

ಅಧ್ಯಾಯ	ವಿಷಯಗಳು		ಪುಟಸಂಖ್ಯೆ
೩೪೪	ನರ-ನಾರಾಯಣರು ನಾರದರನ್ನು ಪ್ರಶಂಸಿಸಿ ವಾಸುದೇವನ ಮಾಹಾತ್ಮ್ಯವನ್ನು ಹೇಳಿದುದು	....	3295
೩೪೫	ವರಾಹಸ್ವಾಮಿಯು ಪಿತೃಪೂಜೆಯನ್ನು ನಿಯಮಗೊಳಿಸಿದುದು	....	3301
೩೪೬	ನಾರಾಯಣನ ಮಾಹಾತ್ಮ್ಯಕಥನದ ಉಪಸಂಹಾರ	....	3307
೩೪೭	ಹಯಗ್ರೀವಾವತಾರದ ಕಥೆ : ವೇದಗಳ ಉದ್ಧಾರ : ಮಧು-ಕೈಟಭರ ವಧೆ : ನಾರಾಯಣನ ಮಹಿಮೆ	....	3311
೩೪೮	ಸಾತ್ವತಧರ್ಮದ ಉಪದೇಶಪರಂಪರೆ : ಭಗವಂತನಲ್ಲಿ ಅನನ್ಯಭಕ್ತಿಯ ಮಹಿಮೆ	....	3330
೩೪೯	ವ್ಯಾಸರು ಮೊದಲು ಅಪಾಂತರತಮನಾಗಿ ಹುಟ್ಟಿದುದು : ಆ ಅವತಾರದಲ್ಲಿ ಅವರ ಪ್ರಭಾವ	....	3347
೩೫೦	ವೈಜಯಂತಪರ್ವತದ ಮೇಲೆ ಬ್ರಹ್ಮ-ರುದ್ರರ ಸಮಾಗಮ ಬ್ರಹ್ಮನಿಂದ ನಾರಾಯಣನ ಮಹಿಮೆಯ ವರ್ಣನೆ	....	3360
೩೫೧	ನಾರಾಯಣನ ಮಹಿಮೆಯ ವರ್ಣನೆ	....	3364
೩೫೨	ಇಂದ್ರನು ನಾರದರಿಂದ ಉಂಛವೃತ್ತಿಯ ಬ್ರಾಹ್ಮಣನ ಕಥೆಯನ್ನು ಕೇಳಿದುದು	....	3371
೩೫೩	ಮಹಾಪದ್ಮಪುರದಲ್ಲಿದ್ದ ಬ್ರಾಹ್ಮಣನ ಸದಾಚಾರ ವರ್ಣನೆ : ಅವನ ಮನೆಗೆ ಅತಿಥಿಯ ಆಗಮನ	....	3373
೩೫೪	ಅತಿಥಿಯಿಂದ ಸ್ವರ್ಗದ ವಿಭಿನ್ನಮಾರ್ಗಗಳ ಕಥನ	....	3375
೩೫೫	ಅತಿಥಿಯಿಂದ ನಾಗರಾಜನ ಸದಾಚಾರ-ಸದ್ಗುಣಗಳ ವರ್ಣನೆ	....	3379
೩೫೬	ಅತಿಥಿಯ ಮಾತಿನಿಂದ ಸಂತುಷ್ಟನಾದ ಬ್ರಾಹ್ಮಣನು ನಾಗರಾಜನ ಬಳಿಗೆ ಹೋದುದು	....	3381
೩೫೭	ನಾಗರಾಜನ ಗೃಹಕ್ಕೆ ಬ್ರಾಹ್ಮಣನ ಆಗಮನ : ನಾಗಪತ್ನಿಯಿಂದ ಸತ್ಕಾರ	....	3384

ಅಧ್ಯಾಯ	ವಿಷಯಗಳು	ಪುಟಸಂಖ್ಯೆ
೩೫೮	ನಾಗರಾಜನ ದರ್ಶನಕ್ಕಾಗಿ ಬ್ರಾಹ್ಮಣನಿಂದ ತಪಶ್ಚರಣೆ	3386
೩೫೯	ನಾಗರಾಜನು ಮನೆಗೆ ಹಿಂದಿರುಗಿದುದು : ಪತ್ನಿಯೊಡನೆ ಧರ್ಮಸಂಬಂಧವಾದ ಸಂಭಾಷಣೆ : ಬ್ರಾಹ್ಮಣನನ್ನು ಸಂದರ್ಶಿಸಲು ಪತಿಗೆ ನಾಗಪತ್ನಿಯ ಒತ್ತಾಯ	3388
೩೬೦	ಪತ್ನಿಯ ಧರ್ಮಯುಕ್ತವಾದ ಮಾತುಗಳನ್ನು ಕೇಳಿ ನಾಗರಾಜನ ಸಂತೋಷ : ಬ್ರಾಹ್ಮಣನ ಬಳಿಗೆ ಹೋಗಲು ನಿಶ್ಚಯಿಸಿದುದು	3391
೩೬೧	ಬ್ರಾಹ್ಮಣ-ನಾಗರಾಜರ ಸಮಾಗಮ ಮತ್ತು ಸಂಭಾಷಣೆ	3396
೩೬೨	ಬ್ರಾಹ್ಮಣನಿಗೆ ನಾಗರಾಜನಿಂದ ಸೂರ್ಯ ಮಂಡಲದಲ್ಲಿನ ಆಶ್ಚರ್ಯಕರವಾದ ಘಟನೆಗಳ ವಿವರಣೆ	3401
೩೬೩	ಉಂಛವೃತ್ತಿಯಿಂದಲೇ ಸಿದ್ಧಿಯನ್ನು ಪಡೆದ ಪುರುಷನಿಗೆ ಲಭಿಸಿದ ಗತಿಯ ವರ್ಣನೆ	3405
೩೬೪	ಬ್ರಾಹ್ಮಣನು ಉಂಛವೃತ್ತಿಯಿಂದ ಜೀವಿಸುವುದಾಗಿ ನಿಶ್ಚಯಿಸಿ ಮನೆಗೆ ಹಿಂದಿರುಗಲು ನಾಗರಾಜನ ಅನುಮತಿಯನ್ನು .... ಕೇಳಿದುದು	3407
೩೬೫	ಬ್ರಾಹ್ಮಣನು ನಾಗರಾಜನ ಅನುಮತಿಯನ್ನು ಪಡೆದು ಚ್ಯವನಮಹರ್ಷಿಯ ಬಳಿಗೆ ಹೋಗಿ ಉಂಛವೃತ್ತಿಯ ದೀಕ್ಷೆಯನ್ನು ಕೈಗೊಂಡುದು	3410

ಅನುಶಾಸನಪರ್ವ

ದಾನಧರ್ಮಪರ್ವ

೧	ಯುಧಿಷ್ಠಿರನನ್ನು ಸಮಾಧಾನಗೊಳಿಸಲು ಭೀಷ್ಮನಿಂದ ಗೌತಮೀಬ್ರಾಹ್ಮಣೀ, ವ್ಯಾಧ, ಸರ್ಪ, ಮೃತ್ಯು ಮತ್ತು ಕಾಲ–ಇವರ ಪರಸ್ಪರಸಂವಾದಗಳ ವಿವರಣೆ	3415

ಅಧ್ಯಾಯ	ವಿಷಯಗಳು		ಪುಟಸಂಖ್ಯೆ
೨	ಪ್ರಜಾಪತಿಮನುವಂಶದ ವರ್ಣನೆ : ಅಗ್ನಿಯ ಮಗನಾದ ಸುದರ್ಶನನು ಅತಿಥಿಸತ್ಕಾರರೂಪವಾದ ಧರ್ಮದಿಂದ ಮೃತ್ಯುವನ್ನು ಜಯಿಸಿದುದು	....	3438
೩	ವಿಶ್ವಾಮಿತ್ರನ ಬ್ರಾಹ್ಮಣ್ಯಪ್ರಾಪ್ತಿಯ ವಿಷಯವಾಗಿ ಯುಧಿಷ್ಠಿರನ ಪ್ರಶ್ನೆ	....	3454
೪	ಅಜಮೀಢವಂಶದ ವರ್ಣನೆ : ವಿಶ್ವಾಮಿತ್ರನ ಜನ್ಮಕಥೆ : ಅವನ ಪುತ್ರರ ಹೆಸರುಗಳು	....	3457
೫	ಸ್ವಾಮಿಭಕ್ತನಾದ ದಯಾಳುಪುರುಷನ ಶ್ರೇಷ್ಠತೆಯ ವಿಷಯದಲ್ಲಿ ಇಂದ್ರನ ಮತ್ತು ಗಿಳಿಯ ಸಂವಾದ	....	3468
೬	ದೈವಕ್ಕಿಂತಲೂ ಪುರುಷಪ್ರಯತ್ನದ ಶ್ರೇಷ್ಠತೆ	....	3474
೭	ಕರ್ಮಫಲಗಳ ವರ್ಣನೆ	....	3487
೮	ಶ್ರೇಷ್ಠನಾದ ಬ್ರಾಹ್ಮಣನ ಮಹಿಮೆ	....	3495
೯	ಬ್ರಾಹ್ಮಣನಿಗೆ ವಾಗ್ದಾನಮಾಡಿ ತಪ್ಪಿದರೆ ಆಗುವ ಪರಿಣಾಮದ ವಿಷಯವಾಗಿ ನರಿಗೂ ಮತ್ತು ಕಪಿಗೂ ನಡೆದ ಸಂವಾದ : ಬ್ರಾಹ್ಮಣರಿಗೆ ದಾನಮಾಡುವುದರ ಮಹಿಮೆ	....	3502
೧೦	ಅನಧಿಕಾರಿಗೆ ಮಾಡುವ ಉಪದೇಶದ ಹಾನಿಯ ವಿಷಯವಾಗಿ ಶೂದ್ರನ ಮತ್ತು ತಪಸ್ವಿಯಾದ ಬ್ರಾಹ್ಮಣನ ಕಥೆ	....	3508
೧೧	ಲಕ್ಷ್ಮಿಯ ನಿವಾಸಕ್ಕೆ ಯೋಗ್ಯರಾದ ಹಾಗೂ ಅಯೋಗ್ಯರಾದ ಸ್ತ್ರೀ-ಪುರುಷರ ರೂಪ-ಲಕ್ಷಣಗಳು	....	3521
	ಪರಿಶಿಷ್ಟ	....	5479

ದ್ವಿತೀಯ ಮುದ್ರಣದ ಪ್ರಸ್ತಾವನೆ

ಭಗವಂತನ ದಯೆಯಿಂದ ಮಹಾಭಾರತದ 26ನೆಯ ಸಂಪುಟದ ಪುನರ್ಮುದ್ರಣವನ್ನು ಮುಗಿಸುತ್ತಿದ್ದೇವೆ. ೨೫-೨೬ನೇ ಸಂಪುಟಗಳ ವಿತರಣೆ ಯಿಂದ ಸುಮಾರು ಐದುನೂರು ಮಂದಿ ಗ್ರಾಹಕರಿಗೆ ಮಹಾಭಾರತದ ಪೂರ್ಣಮಾಲೆಯು ಸೇರಿದಂತಾಗುತ್ತದೆ. ಪ್ರಸಕ್ತ ಮಹಾಭಾರತ ವಿಭಾಗದಲ್ಲಿ ಹೊಸ ಗ್ರಾಹಕರಿಗೆ ೧೭ ಸಂಪುಟಗಳು ಸಿಕ್ಕುತ್ತವೆ. ಆದರೆ 1-2-3ನೇ ಸಂಪುಟಗಳು ಇಲ್ಲದಿರುವುದು ಒಂದು ಕೊರತೆಯಾಗಿದೆ. ರಾಮಾಯಣದ ೧೦ನೆ ಸಂಪುಟವು ಮುಗಿದನಂತರ ಮಹಾಭಾರತದ 1-2-3ನೇ ಸಂಪುಟಗಳನ್ನು ಪುನರ್ಮುದ್ರಣ ಮಾಡಲು ಯೋಚಿಸಲಾಗಿದೆ. ಮಹಾಭಾರತದ ಪೂರ್ಣಮಾಲೆಯ ಚಂದಾಹಣವನ್ನು ಸ್ವಲ್ಪ ಹೆಚ್ಚಿಸಲಾಗಿದೆ. ಸಾಧಾರಣ ಪ್ರತಿಗಳ ಸೆಟ್ಟಿಗೆ 470/- ರೂ.ಗಳು ಕ್ಯಾಲಿಕೋ ಪ್ರತಿಗಳ ಸೆಟ್ಟಿಗೆ 570/- ರೂ.ಗಳು. ರಾಮಾಯಣ ವಿಭಾಗದಲ್ಲಿಯೂ ನಾಲ್ಕು ಸಂಪುಟಗಳು ಮುಗಿದಿರುವುದರಿಂದ ಪುನರ್ಮುದ್ರಣದ ಸಮಸ್ಯೆಯನ್ನು ಹೇಗೆ ಎದುರಿಸಬೇಕೆಂಬುದು ತಿಳಿಯುತ್ತಿಲ್ಲ. ಪರಮಾತ್ಮನೇ ಮಾರ್ಗದರ್ಶಕನಾಗಬೇಕಾಗಿದೆ. ಕನ್ನಡಬಂಧುಗಳು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಗ್ರಾಹಕರಾದರೆ ಸಮಸ್ಯೆಯು ಬಗೆಹರಿಯಬಹುದು. ಈ ಸಂಪುಟಗಳನ್ನು ಪಡೆದುಕೊಳ್ಳುವ ಪ್ರತಿಯೊಬ್ಬ ಗ್ರಾಹಕರೂ ಕಡೆಯಪಕ್ಷ ಇಬ್ಬರು ಗ್ರಾಹಕರನ್ನಾದರೂ ಮಾಡಿಕೊಟ್ಟರೆ ನಮ್ಮ ಸಮಸ್ಯೆಯು ಬಗೆಹರಿಯುತ್ತದೆ. ದಯಮಾಡಿ ಸಹಕರಿಸಿರಿ.

ಹಿಂದಿನಂತೆಯೇ ಸಂಪಾದಕಮಂಡಲಿಯ ವಿದ್ವಾಂಸರು ಈ ಸಂಪುಟದ ತಪ್ಪು-ಒಪ್ಪುಗಳನ್ನು ನೋಡಿಕೊಟ್ಟು ಸಹಕರಿಸಿರುತ್ತಾರೆ. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ದಯಾಮಯನಾದ ಪರಮಾತ್ಮನ ದಯೆಯಿಂದ ನಮ್ಮ ಗ್ರಾಹಕ ರೆಲ್ಲರಿಗೂ ಶಾಂತಿ-ಪುಷ್ಟಿ-ತುಷ್ಟಿಗಳು ದೊರೆಯುವಂತಾಗಲಿ.

— ಪ್ರಕಾಶಕರು

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ॐ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ–ಶಾಂತಿಪರ್ವ

ಇಪ್ಪತ್ತಾರನೆಯ ಸಂಪುಟ

೩೧೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಹುಟ್ಟು-ಸಾವುಗಳನ್ನು ಅತಿಕ್ರಮಿಸುವ ವಿಷಯದಲ್ಲಿ ಜನಕರಾಜ ಮತ್ತು ಪಂಚಶಿಖರ ಸಂವಾದ

ವೈಶಂಪಾಯನರು ಪ್ರಣವೋಚ್ಚಾರಣಪೂರ್ವಕವಾಗಿ ಪ್ರವಚನವನ್ನು ಮುಂದುವರಿಸುತ್ತಾ ಹೇಳುತ್ತಾರೆ :

ಜನಮೇಜಯ! ಯುಧಿಷ್ಠಿರನು, ಶರತಲ್ಪದಲ್ಲಿ ಮಲಗಿದ್ದ ಭೀಷ್ಮನನ್ನು ಪ್ರಶ್ನಿಸುತ್ತಾನೆ :

ಐಶ್ವರ್ಯಂ ವಾ ಮಹತ್ಪ್ರಾಪ್ಯ ಧನಂ ವಾ ಭರತರ್ಷಭ ।
ದೀರ್ಘಮಾಯುರವಾಪ್ಯಾಥ ಕಥಂ ಮೃತ್ಯುಮತಿಕ್ರಮೇತ್ ॥೧॥

“ಭರತಶ್ರೇಷ್ಠನೇ! ಮಹೈಶ್ವರ್ಯವನ್ನಾಗಲೀ, ಅಪಾರವಾದ ಧನವನ್ನಾಗಲೀ ಮತ್ತು ದೀರ್ಘಾಯುಷ್ಯವನ್ನಾಗಲೀ ಹೊಂದಿದ ಬಳಿಕ ಮನುಷ್ಯನು ಯಾವ ರೀತಿಯಲ್ಲಿ ಮೃತ್ಯುವನ್ನು ದಾಟಬಲ್ಲನು?

ತಪಸಾ ವಾ ಸುಮಹತಾ ಕರ್ಮಣಾ ವಾ ಶ್ರುತೇನ ವಾ ।
ರಸಾಯನಪ್ರಯೋಗೈರ್ವಾ ಕೈರ್ನಾಪ್ನೋತಿ ಜರಾನ್ತಕೌ ॥೨॥

ಮಹಾತಪಸ್ಸನ್ನು ಮಾಡುವುದರಿಂದಾಗಲೀ, ಕರ್ಮಗಳ ಅನುಷ್ಠಾನದಿಂದಾಗಲೀ, ವೇದ-ಶಾಸ್ತ್ರಗಳ ಅಧ್ಯಯನದಿಂದಾಗಲೀ, ರಸಾಯನಗಳ ಪ್ರಯೋಗಗಳಿಂದಾಗಲೀ (ಕಾಯಕಲ್ಪಗಳಿಂದಾಗಲೀ) ಅಥವಾ ಬೇರೆ

ಯಾವುದಾದರೂ ಉಪಾಯದಿಂದಾಗಲೀ–ಮನುಷ್ಯನು ಜರಾ-ಮೃತ್ಯುಗಳಿಂದ ತಪ್ಪಿಸಿಕೊಳ್ಳಬಲ್ಲನೇ?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಭಿಕ್ಷುವಾದ ಪಂಚಶಿಖನಿಗೂ-ಜನಕರಾಜನಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ಉದಾಹರಿಸುತ್ತಾರೆ. ಆ ಸಂವಾದವನ್ನೇ ನಿನಗೂ ತಿಳಿಸುತ್ತೇನೆ ; ಕೇಳು.

ಒಮ್ಮೆ ವಿದೇಹಾಧಿಪತಿಯಾದ ಜನಕರಾಜನು ವೇದವಿದರಲ್ಲಿ ಶ್ರೇಷ್ಠನಾದ, ಧರ್ಮಾರ್ಥಗಳ ವಿಷಯದಲ್ಲಿ ಸಂಶಯರಹಿತನಾಗಿದ್ದ, ಮಹರ್ಷಿಯಾದ ಪಂಚಶಿಖನನ್ನು ಪ್ರಶ್ನಿಸಿದನು :

ಕೇನ ವೃತ್ತೇನ ಭಗವನ್ನತಿಕ್ರಾಮೇಜ್ಜರಾನ್ತಕೌ ।
ತಪಸಾ ವಾಥ ಬುದ್ಧ್ಯಾ ವಾ ಕರ್ಮಣಾ ವಾ ಶ್ರುತೇನ ವಾ ॥೫॥

"ಪೂಜ್ಯರೇ! ಯಾವ ವಿಧವಾದ ಆಚರಣೆಯಿಂದ, ತಪಸ್ಸಿನಿಂದ, ಬುದ್ಧಿಯಿಂದ, ಕರ್ಮದಿಂದ ಅಥವಾ ಶಾಸ್ತ್ರಜ್ಞಾನದಿಂದ ಮುಪ್ಪನ್ನೂ ಮತ್ತು ಮೃತ್ಯುವನ್ನೂ ಉಲ್ಲಂಘಿಸಲು ಸಾಧ್ಯವಾಗುತ್ತದೆ?"

ಜನಕನು ಹೀಗೆ ಪ್ರಶ್ನಿಸಲಾಗಿ, ಅಪರೋಕ್ಷಜ್ಞಾನಿಯಾದ ಪಂಚಶಿಖನು ವೈದೇಹನನ್ನು ಕುರಿತು ಹೇಳಿದನು :

ನಿವೃತ್ತಿರ್ನ ತಯೋರಸ್ತಿ ನಾನಿವೃತ್ತಿಃ ಕಥಂಚನ ॥೬॥

"ಜನಕ! ಮುಪ್ಪು ಮತ್ತು ಮೃತ್ಯುಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಯಾವ ರೀತಿಯಿಂದಲೂ ಅವುಗಳ ನಿವೃತ್ತಿಯಾಗುವುದಿಲ್ಲವೆಂದೂ ತಿಳಿಯಬಾರದು.

(ಸಂಸಾರದಲ್ಲಿರುವವರೆಗೂ ಮುಪ್ಪು-ಸಾವುಗಳು ಇದ್ದೇ ಇರುತ್ತವೆ. ಮೇಲೆ ಹೇಳಿದ ಐಶ್ವರ್ಯ, ಧನ, ಕರ್ಮ, ರಸಾಯನಪ್ರಯೋಗ– ಇತ್ಯಾದಿಗಳಿಂದ ಅವುಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಜ್ಞಾನದಿಂದ ಪುನರ್ಜನ್ಮವೇ ತಪ್ಪಿಹೋಗುವುದರಿಂದ ಆಗ ಆ ಹುಟ್ಟು-ಸಾವುಗಳಿಂದಲೂ ಬಿಡುಗಡೆಯು ಆಗಿಯೇ ಆಗುತ್ತದೆ.)

ನ ಹ್ಯಹಾನಿ ನಿವರ್ತನ್ತೇ ನ ಮಾಸಾ ನ ಪುನಃ ಕ್ಷಪಾಃ ।
ಸೋಽಯಂ ಪ್ರಪದ್ಯತೇಽಧ್ವಾನಂ ಚಿರಾಯ ಧ್ರುವಮಧ್ರುವಃ ॥೭॥

ಹಗಲುಗಳೂ, ರಾತ್ರಿಗಳೂ, ಮಾಸಗಳೂ–ಚಲಿಸುತ್ತಲೇ ಇರುತ್ತವೆ. ಯಾವುವೂ ಹಿಂದಿರುಗಿ ಬರುವುದಿಲ್ಲ. ಅವು ಅಶಾಶ್ವತ. ಆದರೆ ಬಹಳ ಕಾಲವು ಕಳೆದನಂತರ ಕೆಲವೊಮ್ಮೆ ಮರಣಧರ್ಮನಾದ, ಅಶಾಶ್ವತನಾದ ಈ ಮನುಷ್ಯನು ಶಾಶ್ವತವಾದ ಮೋಕ್ಷಮಾರ್ಗವನ್ನು ಆಶ್ರಯಿಸುತ್ತಾನೆ.

ಸರ್ವಭೂತಸಮುಚ್ಛೇದಃ ಸ್ರೋತಸೇವೋಹ್ಯತೇ ಸದಾ ।
ಊಹ್ಯಮಾನಂ ನಿಮಜ್ಜನ್ತಮಪ್ಲವೇ ಕಾಲಸಾಗರೇ ।
ಜರಾಮೃತ್ಯುಮಹಾಗ್ರಾಹೇ ನ ಕಶ್ಚಿದಭಿಪದ್ಯತೇ ॥೮॥

ನದಿಯ ಪ್ರವಾಹವು ತನ್ನಲ್ಲಿರುವ ವಸ್ತುಗಳನ್ನು ತೇಲಿಸಿಕೊಂಡು ಹೋಗುವಂತೆ–ಸರ್ವಪ್ರಾಣಿಗಳನ್ನೂ ವಿನಾಶಗೊಳಿಸುವ ಕಾಲನು ತನ್ನ ಪ್ರವಾಹವೇಗದಿಂದ ಪ್ರಾಣಿಗಳನ್ನು ಒಯ್ಯುತ್ತಿರುತ್ತಾನೆ. ಮುಪ್ಪು ಮತ್ತು ಸಾವುಗಳೆಂಬ ಮೊಸಳೆಗಳಿಂದ ಕೂಡಿರುವ, ನೌಕೆಯಿಲ್ಲದ ಕಾಲಸಮುದ್ರದಲ್ಲಿ ಮುಳುಗಿಹೋಗುತ್ತಿರುವ ಜೀವನನ್ನು ಯಾವನೊಬ್ಬನೂ ಪಾರು ಮಾಡಲಾರನು.

ನೈವಾಸ್ಯ ಕಶ್ಚಿದ್ಭವತಿ ನಾಸೌ ಭವತಿ ಕಸ್ಯಚಿತ್ ।
ಪರಿಸಙ್ಗತಮೇವೇದಂ ದಾರೈರನ್ಯೈಶ್ಚ ಬನ್ಧುಭಿಃ ॥೯॥

ನಾಯಮತ್ಯನ್ತಸಂವಾಸೋ ಲಬ್ಧಪೂರ್ವೋ ಹಿ ಕೇನಚಿತ್ ॥೧೦॥

ಈ ಜೀವಕ್ಕೆ ತನ್ನದೆಂಬುದು ಯಾವುದೂ ಇರುವುದಿಲ್ಲ. ಇದು ಬೇರೆ ಯಾರಿಗೆ ಸೇರಿದ್ದೂ ಆಗಿರುವುದಿಲ್ಲ. ದಾರಿಹೋಕರು ಒಂದೆಡೆಯಲ್ಲಿ ಸೇರುವಂತೆ–ಪತ್ನೀ ಮತ್ತು ಇತರ ಬಂಧುಗಳೊಡನೆ ಜೀವನು ಸೇರಿಕೊಂಡಿರುತ್ತಾನೆ. ಆದರೆ ಇದುವರೆಗೆ ಯಾರೂ ಯಾರೊಡನೆಯೂ ಎಂದೆಂದಿಗೂ ಸಹವಾಸವನ್ನು ಮಾಡಿಕೊಂಡಿರುವುದು ಇಲ್ಲವೇ ಇಲ್ಲ.

ಕ್ಷಿಪ್ಯನ್ತೇ ತೇನ ತೇನೈವ ನಿಷ್ಟನನ್ತಃ ಪುನಃ ಪುನಃ ।
ಕಾಲೇನ ಜಾತಾ ಯಾತಾ ಹಿ ವಾಯುನೇವಾಭ್ರಸಂಚಯಾಃ ॥೧೧॥

ಯಾವ ರೀತಿಯಲ್ಲಿ ಗರ್ಜಿಸುತ್ತಿರುವ ಮೇಘಗಳನ್ನು ವಾಯುವು ಪುನಃ ಪುನಃ ಚದುರಿಸಿಬಿಡುವುದೋ – ಅದೇ ರೀತಿಯಲ್ಲಿ ಕಾಲನು ಇಲ್ಲಿ ಹುಟ್ಟುವ ಪ್ರಾಣಿಗಳನ್ನು ತನ್ನ ಚಕ್ರದಲ್ಲಿ ಸಿಲುಕಿಸಿ ಕಾಲಾಗ್ನಿಯಲ್ಲಿ ಬೇಯಿಸಿ ಅನಂತರ ಎಲ್ಲೆಲ್ಲಿಗೋ ಎಸೆದುಬಿಡುತ್ತಾನೆ. ಕಾಲನಿಂದಲೇ ಪ್ರಾಣಿಗಳು ಹುಟ್ಟುತ್ತವೆ ಮತ್ತು ಸಾಯುತ್ತವೆ.

ಜರಾಮೃತ್ಯೂ ಹಿ ಭೂತಾನಾಂ ಖಾದಿತಾರೌ ವೃಕಾವಿವ ।
ಬಲಿನಾಂ ದುರ್ಬಲಾನಾಂ ಚ ಹ್ರಸ್ವಾನಾಂ ಮಹತಾಮಪಿ ॥೧೨॥

ಬಲಿಷ್ಠರೇ ಆಗಿರಲಿ, ದುರ್ಬಲರೇ ಆಗಿರಲಿ, ಕುಬ್ಜರೇ ಆಗಿರಲಿ, ದೀರ್ಘದೇಹಿಗಳೇ ಆಗಿರಲಿ – ಎಲ್ಲ ಪ್ರಾಣಿಗಳನ್ನೂ ತೋಳಗಳಂತಿರುವ ಮುಪ್ಪು-ಸಾವುಗಳು ತಿಂದುಹಾಕಿಬಿಡುತ್ತವೆ.

ಏವಂಭೂತೇಷು ಭೂತಾತ್ಮಾ ನಿತ್ಯಭೂತೋಽಧ್ರುವೇಷು ಚ ।
ಕಥಂ ಹಿ ಹೃಷ್ಯೇಜ್ಜಾತೇಷು ಮೃತೇಷು ಚ ಕಥಂ ಜ್ವರೇತ್ ॥೧೩॥

ಹೀಗೆ ಪ್ರಾಣಿಗಳೆಲ್ಲವೂ ಅಶಾಶ್ವತವಾಗಿರುವುದರಿಂದ ನಿತ್ಯವಾದ ಆತ್ಮನು ಪ್ರಾಣಿಗಳು ಹುಟ್ಟಿದರೆ ಏಕೆ ಸಂತೋಷಪಡಬೇಕು? ಅವು ಸತ್ತರೆ ಏಕೆ ದುಃಖಿಸಬೇಕು?

ಕುತೋಽಹಮಾಗತಃ ಕೋಽಸ್ಮಿ ಕ್ವ ಗಮಿಷ್ಯಾಮಿ ಕಸ್ಯ ವಾ ।
ಕಸ್ಮಿನ್ಸ್ಥಿತಃ ಕ್ವ ಭವಿತಾ ಕಸ್ಮಾತ್ಕಿಮನುಶೋಚಸಿ ॥೧೪॥

ನಾನು ಯಾರು? ಎಲ್ಲಿಂದ ಬಂದೆನು? ಎಲ್ಲಿಗೆ ಹೋಗುತ್ತೇನೆ? ನಾನು ಯಾರಿಗೆ ಸಂಬಂಧಿಸಿದವನು? ನಾನೀಗ ಎಲ್ಲಿದ್ದೇನೆ? ಪುನಃ ಎಲ್ಲಿ ಹುಟ್ಟುತ್ತೇನೆ?–ಇವೆಲ್ಲವನ್ನೂ ಕೂಲಂಕಷವಾಗಿ ವಿಚಾರಮಾಡಿದ ಬಳಿಕವೂ ನೀನು ಯಾರಿಗೋಸ್ಕರ ಏತಕ್ಕಾಗಿ ಶೋಕಿಸುತ್ತಿರುವೆ?

ದ್ರಷ್ಟಾ ಸ್ವರ್ಗಸ್ಯ ಕೋಽನ್ಯೋಽಸ್ತಿ ತಥೈವ ನರಕಸ್ಯ ಚ ।
ಆಗಮಾಂಸ್ತ್ವನತಿಕ್ರಮ್ಯ ದದ್ಯಾಚ್ಚೈವ ಯಜೇತ ಚ ॥೧೫॥

ಸ್ವರ್ಗವನ್ನಾಗಲೀ–ನರಕವನ್ನಾಗಲೀ (ಜ್ಞಾನಿಗಳಲ್ಲದೇ) ಬೇರೆ ಯಾರು ತಾನೇ ನೋಡಿದ್ದಾರೆ? ಆದುದರಿಂದ ಅಂತಹ ಅಪರೋಕ್ಷಜ್ಞಾನ

ವಿಲ್ಲದವರು ಶಾಸ್ತ್ರಗಳ ಆಜ್ಞೆಗಳನ್ನು ಉಲ್ಲಂಘಿಸದೇ ಅವುಗಳ ವಿಧಿಯಂತೆ ಸತ್ಪಾತ್ರರಿಗೆ ಯಥಾಶಕ್ತಿ ದಾನವನ್ನು ಮಾಡಬೇಕು. ಯೋಗ್ಯವಾದ ಕಾಲಗಳಲ್ಲಿ ಯಜ್ಞವೇ ಮೊದಲಾದ ಸತ್ಕರ್ಮಗಳನ್ನೂ ಮಾಡುತ್ತಿರಬೇಕು."

ಇ೧೯ನೆಯ ಅಧ್ಯಾಯವು ಮುಗಿಯಿತು.

ಇ೨೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜನಕರಾಜನನ್ನು ಪರೀಕ್ಷಿಸುವ ಸಲುವಾಗಿ ಬಂದ ಸುಲಭೆಯು ಜನಕನ ಶರೀರದಲ್ಲಿ ಪ್ರವೇಶಿಸಿದುದು: ಜನಕರಾಜನು ಅವಳ ಮೇಲೆ ದೋಷಾರೋಪಣೆ ಮಾಡಿದುದು: ಸುಲಭೆಯು ಯುಕ್ತಿಯುಕ್ತವಾಗಿ ಜನಕನು ಮಾಡಿದ ಆಪಾದನೆಗಳನ್ನು ನಿರಾಕರಿಸುತ್ತಾ ಅವನನ್ನು ಅಜ್ಞಾನಿಯೆಂದು ಪ್ರತಿಪಾದಿಸಿದುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅಪರಿತ್ಯಜ್ಯ ಗಾರ್ಹಸ್ಥ್ಯಂ ಕುರುರಾಜರ್ಷಿಸತ್ತಮ ।
ಕಃ ಪ್ರಾಪ್ತೋ ವಿನಯಂ ಬುದ್ಧ್ಯಾಮೋಕ್ಷತತ್ತ್ವಂ ವದಸ್ವ ಮೇ ॥೧॥

"ಕುರುಕುಲರಾಜರ್ಷಿಗಳಿಗೆ ಶಿರೋಮಣಿಪ್ರಾಯನಾಗಿರತಕ್ಕವನೇ! ಪಿತಾಮಹನೇ! ಗೃಹಸ್ಥಾಶ್ರಮವನ್ನು ಪರಿತ್ಯಜಿಸದೆಯೇ ಬುದ್ಧಿಯ ಸಂಯಮರೂಪವಾದ ಮೋಕ್ಷತತ್ತ್ವವನ್ನು ಇದುವರೆಗೆ ಯಾವನು ಹೊಂದಿದ್ದಾನೆ? ಈ ವಿಷಯವನ್ನು ತಿಳಿಯಪಡಿಸು.*

ಸಂನ್ಯಸ್ಯತೇ ಯಥಾತ್ಮಾಯಂ ವ್ಯಕ್ತಸ್ಯಾತ್ಮಾ ಯಥಾ ಚ ಯತ್ ।
ಪರಂ ಮೋಕ್ಷಸ್ಯ ಯಚ್ಚಾಪಿ ತನ್ಮೇ ಬ್ರೂಹಿ ಪಿತಾಮಹ ॥೨॥

ಆತ್ಮಸಂನ್ಯಾಸವು ಹೇಗೆ? ಹಾಗೆ ಆತ್ಮಸಂನ್ಯಾಸಮಾಡಿದವನು

---

* ವಿನಯಃ–ಇಂದ್ರಿಯನಿಗ್ರಹಃ ; ಸಂಯಮ. ವ್ಯಾಖ್ಯಾನಕಾರರು ವಿಲೀನಃ ಎಂದು ಅರ್ಥಮಾಡಿರುತ್ತಾರೆ. ಬುದ್ಧ್ಯಾ ಬುದ್ಧೇಃ ವಿನೀಯತೇ ಲೀಯತೇ ಅ ಸ್ಮಿನ್ನಿತಿ ವಿನಯಃ। ಲಯಸ್ಥಾನಂ, ಮೋಕ್ಷತತ್ತ್ವಂ–ಬುದ್ಧಿಯು ಲಯಹೊಂದುವ ಸ್ಥಾನ, ಮೋಕ್ಷತತ್ತ್ವ.

ವ್ಯಕ್ತಕ್ಕೆ ಸಂಬಂಧಿಸಿದಂತೆ ಯಾವ ರೀತಿಯಲ್ಲಿ ವ್ಯವಹರಿಸುತ್ತಾನೆ? ಈ ವಿಷಯಗಳನ್ನು ಹೇಳು. ಮೋಕ್ಷದ ಪರತತ್ತ್ವವು ಯಾವುದಿದೆಯೋ ಅದನ್ನೂ ಹೇಳು."

(ಸ್ಥೂಲ - ಸೂಕ್ಷ್ಮಶರೀರಗಳ ಮೇಲಿನ ಅಭಿಮಾನವನ್ನು ಜೀವನು ಹೇಗೆ ತ್ಯಾಗಮಾಡುತ್ತಾನೆ? –ಎಂಬುದಾಗಿ ವ್ಯಾಖ್ಯಾನಕಾರರು ವ್ಯಾಖ್ಯಾನಿಸಿದ್ದಾರೆ. ಪಾಠಾಂತರದಲ್ಲಿ **ವ್ಯಕ್ತಸ್ಯಾತ್ಮಾ ಯಥಾ ಚ ಯತ್** ಎಂಬುದಕ್ಕೆ ಬದಲಾಗಿ **ಸಂನ್ಯಸ್ಯಾತ್ಮಾ ಯಥಾ ಚ ಯಃ**–ಎಂಬುದಾಗಿದೆ.)"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಜನಕರಾಜನಿಗೂ ಸುಲಭೆಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ಉದಾಹರಿಸುತ್ತಾರೆ. ಅದನ್ನೇ ತಿಳಿಸುವೆನು, ಕೇಳು :

ಹಿಂದೆ ಮಿಥಿಲಾಪಟ್ಟಣದಲ್ಲಿ ಜನಕನ ವಂಶದಲ್ಲಿ ಧರ್ಮಧ್ವಜನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದ ರಾಜನೊಬ್ಬನಿದ್ದನು. ಅವನು ಯದ್ಯಪಿ ಗೃಹಸ್ಥನಾಗಿಯೇ ಇದ್ದರೂ ಸಂನ್ಯಾಸತ್ವದಿಂದ ಪ್ರಾಪ್ತವಾಗುವ ಸಮ್ಯಗ್ಜ್ಞಾನ ಫಲವನ್ನು ಹೊಂದಿದವನಾಗಿದ್ದನು. (ಗೃಹಸ್ಥನಾಗಿದ್ದರೂ ಬ್ರಹ್ಮಜ್ಞಾನಿಯಾಗಿದ್ದನು.) ಅವನು ವೇದಗಳಲ್ಲಿಯೂ, ಮೋಕ್ಷಶಾಸ್ತ್ರದಲ್ಲಿಯೂ, ಕ್ಷತ್ರಧರ್ಮಸಹಜವಾದ ದಂಡನೀತಿಯಲ್ಲಿಯೂ ಪರಿಶ್ರಮವನ್ನು ಹೊಂದಿದ್ದನು. ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡು ಈ ಭೂಮಿಯನ್ನು ಆಳುತ್ತಿದ್ದನು. ಲೋಕದಲ್ಲಿ ಪ್ರಾಜ್ಞರಾದ, ವೇದವಿದರಾದ ವಿದ್ವಾಂಸರು ಧರ್ಮಧ್ವಜನ ಅಂತಹ ಸದ್ವೃತ್ತಿಯನ್ನು ನೋಡಿ ಮತ್ತು ಕೇಳಿ ತಾವೂ ಅವನಂತೆಯೇ ಸದ್ವೃತ್ತಿಯವರಾಗಬೇಕೆಂದು ಆಶಿಸುತ್ತಿದ್ದರು.

ಧರ್ಮಧ್ವಜನು ರಾಜ್ಯವನ್ನು ಪರಿಪಾಲಿಸುತ್ತಿದ್ದ ಅಂತಹ ಧರ್ಮಯುಗದಲ್ಲಿ ಯೋಗಧರ್ಮದ ಮೂಲಕವಾಗಿ ಸಿದ್ಧಿಯನ್ನು ಪಡೆದಿದ್ದ 'ಸುಲಭಾ' ಎಂಬ ಹೆಸರಿನ ಒಬ್ಬಳು ಸಂನ್ಯಾಸಿನಿಯು ಏಕಾಕಿನಿಯಾಗಿ ಭೂಮಿಯಲ್ಲಿ ಸಂಚರಿಸುತ್ತಿದ್ದಳು. ಹೀಗೆಯೇ ಅವಳು ಅಖಂಡವಾದ ಭೂಮಂಡಲವನ್ನೂ ಸುತ್ತುತ್ತಿದ್ದಾಗ – ತ್ರಿದಂಡಿ* ಸಂನ್ಯಾಸಿಗಳು ಮೋಕ್ಷ

* ತ್ರಿದಣ್ಡೀ – ವಾಗ್ದಂಡ, ಮನೋದಂಡ ಮತ್ತು ಕಾಯದಂಡಸೂಚಕವಾದ

ತತ್ತ್ವದ ವಿಷಯದಲ್ಲಿ ಮಿಥಿಲೇಶ್ವನಾದ ಧರ್ಮಧ್ವಜನನ್ನು ಪ್ರಶಂಸಿಸುತ್ತಿದ್ದುದು ಅಲ್ಲಲ್ಲಿ ಕೇಳಿಬರುತ್ತಿದ್ದಿತು. ಧರ್ಮಧ್ವಜನು ಹೇಳುತ್ತಿದ್ದ ಅತಿಸೂಕ್ಷ್ಮವಾದ ಪರಬ್ರಹ್ಮವಿಷಯಾತ್ಮಕವಾದ ಕಥೆಯನ್ನು ಇತರರಿಂದ ಕೇಳಿದ ಸುಲಭೆಯು ಜನಕನು ಹೇಳಿದನೆಂದು ಹೇಳುತ್ತಿರುವ ಆ ತ್ರಿದಂಡಿಸಂನ್ಯಾಸಿಗಳ ಮಾತು ನಿಜವಿರಬಹುದೇ ಅಥವಾ ಸುಳ್ಳಾಗಿರಬಹುದೇ? – ಎಂದು ಸಂಶಯಿಸಿದಳು. ಅದನ್ನು ನಿಶ್ಚಯಿಸಲು ಸುಲಭೆಯು ಜನಕನನ್ನೇ ಸಂದರ್ಶಿಸಲು ಸಂಕಲ್ಪಿಸಿದಳು.

ಒಡನೆಯೇ ನಿಷ್ಕಳಂಕವಾದ ಅಂಗಗಳಿಂದ ಪರಿಶೋಭಿಸುತ್ತಿದ್ದ ಸುಲಭೆಯು ಯೋಗಶಕ್ತಿಯಿಂದ ತನ್ನ ಹಿಂದಿನ ರೂಪವನ್ನು ವಿಸರ್ಜಿಸಿ ಕಡುಚೆಲುವಾದ ಮತ್ತೊಂದು ರೂಪವನ್ನು ಧರಿಸಿದಳು. ವೇಗವಾಗಿ ಹೋಗುವ ಅಸ್ತ್ರದಂತೆ–ಅತಿಶೀಘ್ರಗಾಮಿನಿಯಾದ, ಕಮಲದಂತೆ ಕಣ್ಣುಗಳನ್ನು ಹೊಂದಿದ್ದ, ಸುಂದರವಾದ ಮತ್ತು ಡೊಂಕಾದ ಹುಬ್ಬುಗಳಿಂದ ಪರಿಶೋಭಿಸುತ್ತಿದ್ದ ಸುಲಭೆಯು ಕಣ್ಣುಮುಚ್ಚಿ-ತೆರೆಯುವುದರೊಳಗಾಗಿ ವಿದೇಹರಾಜನ ಪಟ್ಟಣಕ್ಕೆ ತೆರಳಿದಳು. ಅಸಂಖ್ಯಾತರಾದ ಜನರಿಂದ ಸಮಾಕುಲವಾಗಿದ್ದ, ಅತ್ಯಂತರಮ್ಯವಾಗಿದ್ದ ಮಿಥಿಲಾಪಟ್ಟಣವನ್ನು ಪ್ರವೇಶಿಸಿದ ಸುಲಭೆಯು ಭಿಕ್ಷೆಯನ್ನು ಬೇಡುವ ನೆಪದಿಂದ ಮಿಥಿಲೇಶ್ವರನಾದ ಧರ್ಮಧ್ವಜನನ್ನು ಸಂದರ್ಶಿಸಿದಳು. ರಾಜನು ಅವಳ ಅತ್ಯಂತ ಸುಕೋಮಲವಾದ ಶರೀರವನ್ನು ನೋಡಿ ಆಶ್ಚರ್ಯಚಕಿತನಾದನು. 'ಇವಳು ಯಾರಾಗಿರಬಹುದು? ಎಲ್ಲಿಂದ ಬಂದಿರಬಹುದು?' ಮುಂತಾಗಿ ಯೋಚಿಸತೊಡಗಿದನು. ಬಳಿಕ ಧರ್ಮಧ್ವಜನು ಸುಲಭೆಯನ್ನು ಸ್ವಾಗತಿಸಿ ಸುಂದರವಾದ ಆಸನದಲ್ಲಿ ಕುಳ್ಳಿರಿಸಿ ಕಾಲುಗಳನ್ನು ತೊಳೆದು ಯಥೋಚಿತವಾಗಿ ಪೂಜೆಯನ್ನು ಮಾಡಿ, ಮೃಷ್ಟಾನ್ನವನ್ನು ಭೋಜನಮಾಡಿಸಿ ಅವಳನ್ನು ತೃಪ್ತಿಪಡಿ

ತ್ರಿದಂಡವನ್ನು ಹಿಡಿದಿರುವ ಸಂನ್ಯಾಸಿ. ಅವಾಚ್ಯ, ಅಶ್ಲೀಲ ಮತ್ತು ನಿಷಿದ್ಧವಾದ ಮಾತುಗಳನ್ನಾಡದಿರುವುದು ವಾಗ್ದಂಡ. ಮನಸ್ಸಿನಲ್ಲಿ ಯಾರಿಗೂ ಯಾವ ವಿಧವಾದ ದ್ರೋಹವನ್ನೂ ಮತ್ತು ಹಿಂಸೆಯನ್ನೂ ಚಿಂತಿಸದೆ ಸಂಯಮದಿಂದಿರುವುದು ಮನೋದಂಡ. ನಿಷಿದ್ಧವಾದ ಕಾರ್ಯಗಳಲ್ಲಿ ತೊಡಗದಿರುವುದು ಕಾಯದಂಡ.

ಸಿದನು. ಮಿಷ್ಟಾನ್ನವನ್ನು ಭೋಜನಮಾಡಿ ಪರಮಪ್ರೀತಳಾದ ಸಂನ್ಯಾಸಿನಿಯು ಸರ್ವಭಾಷ್ಯಗಳನ್ನೂ ತಿಳಿದಿದ್ದ ವಿದ್ವಾಂಸರ ಮಧ್ಯದಲ್ಲಿ ಮಂತ್ರಿಗಳಿಂದ ಸಮಾವೃತನಾಗಿ ಕುಳಿತಿದ್ದ ರಾಜನನ್ನು ವಾಕ್ಯಾರ್ಥಕ್ಕಾಗಿ ಪ್ರಚೋದಿಸಿದಳು. ಧರ್ಮದ ವಿಷಯದಲ್ಲಿ ರಾಜನನ್ನು ಪ್ರಶ್ನಿಸಲಿಚ್ಛಿಸಿದ್ದ ಸುಲಭೆಯು ರಾಜನು ಜೀವನ್ಮುಕ್ತನಾಗಿರುವನೋ – ಇಲ್ಲವೋ? –ಎಂದು ಸಂದೇಹಿಸಿದಳು. ಅದನ್ನು ಪರೀಕ್ಷಿಸುವ ಸಲುವಾಗಿ ಯೋಗಶಾಸ್ತ್ರದಲ್ಲಿ ನಿಪುಣೆಯಾಗಿದ್ದ ಸುಲಭೆಯು ತನ್ನ ಬುದ್ಧಿಯನ್ನು ರಾಜನ ಬುದ್ಧಿಯಲ್ಲಿ ಸಮಾವೇಶಗೊಳಿಸಿದಳು.

ನೇತ್ರಾಭ್ಯಾಂ ನೇತ್ರಯೋರಸ್ಯ ರಶ್ಮೀನ್ಸಂಯಮ್ಯ ರಶ್ಮಿಭಿಃ ।
ಸಾ ಸ್ಮ ತಂ ಚೋದಯಿಷ್ಯನ್ತೀ ಯೋಗಬನ್ಧೈರ್ಬಬನ್ಧ ಹ ॥೧೭॥

ಸುಲಭೆಯು ಜನಕನನ್ನು ವಾಕ್ಯಾರ್ಥಕ್ಕಾಗಿ ಪ್ರಚೋದಿಸುತ್ತಾ ತನ್ನ ಕಣ್ಣುಗಳ ಕಿರಣಗಳ ಮೂಲಕವಾಗಿ ರಾಜನ ಕಣ್ಣುಗಳ ಕಿರಣಗಳನ್ನು ಸ್ತಬ್ಧಗೊಳಿಸಿ ಯೋಗಬಂಧಗಳಿಂದ ಅವನ ಮನಸ್ಸನ್ನೂ ಬಂಧಿಸಿದಳು. (ವಶಪಡಿಸಿಕೊಂಡಳು).

ಜನಕೋಽಪ್ಯುತ್ಸ್ಮಯನ್ರಾಜಾ ಭಾವಮಸ್ಯಾ ವಿಶೇಷಯನ್ ।
ಪ್ರತಿಜಗ್ರಾಹ ಭಾವೇನ ಭಾವಮಸ್ಯಾ ನೃಪೋತ್ತಮ ॥೧೮॥

ಯುಧಿಷ್ಠಿರ! ಜನಕನೂ ಸುಲಭೆಯ ಆಶಯವನ್ನು ತಿಳಿದು ನಸುನಗುತ್ತಾ ಅವಳ ಭಾವವನ್ನು ಪರಾಭವಗೊಳಿಸುತ್ತಾ ತನ್ನ ಭಾವದಿಂದ ಅವಳ ಭಾವವನ್ನು ಪ್ರತಿಗ್ರಹಿಸಿದನು. (ಯೋಗದ ಮೂಲಕವಾಗಿ ರಾಜನ ಮನಸ್ಸನ್ನು ಬಂಧಿಸಬೇಕೆಂದಿದ್ದ ಸುಲಭೆಯ ಪ್ರಯತ್ನವನ್ನು ವಿಫಲಗೊಳಿಸಿ ಅವಳ ಮನಸ್ಸನ್ನೇ ರಾಜನು ಆಕ್ರಮಿಸಿದನು. ಅವಳ ಮನಸ್ಸನ್ನೇ ವಶಪಡಿಸಿಕೊಂಡನು.)

ತದೇಕಸ್ಮಿನ್ನಧಿಷ್ಠಾನೇ ಸಂವಾದಃ ಶ್ರೂಯತಾಮಯಮ್ ।
ಛತ್ರಾದಿಷು ವಿಮುಕ್ತಸ್ಯ ಮುಕ್ತಾಯಾಶ್ಚ ತ್ರಿದಣ್ಡಕೇ ॥೧೯॥

ಆ ಸಮಯದಲ್ಲಿ ರಾಜನು ಛತ್ರ-ಚಾಮರಾದಿಗಳಿಂದ ವಿಯುಕ್ತನಾಗಿ

ದ್ದನು. ಸುಲಭೆಯು ತ್ರಿದಂಡದಿಂದ ವಿಯುಕ್ತಳಾಗಿದ್ದಳು. ಜನಕನ ಶರೀರವನ್ನೇ ಆಶ್ರಯವನ್ನಾಗಿ ಮಾಡಿಕೊಂಡು ಮಾತನಾಡುತ್ತಿದ್ದ ಅವರಿಬ್ಬರ ಸಂವಾದವನ್ನು ಯಥಾವತ್ತಾಗಿ ಹೇಳುವೆನು ; ಕೇಳು. (ಸುಲಭೆಯು ತನ್ನ ಮನಸ್ಸಿನ ಮೂಲಕವಾಗಿ ಜನಕನನ್ನು ಪ್ರವೇಶಿಸಿ ಅವನ ಮನಸ್ಸನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಿದಳು. ಮನಸ್ಸಿನ ಮೂಲಕವಾಗಿ ಸುಲಭೆಯು ಪರಕಾಯಪ್ರವೇಶಮಾಡಿದ್ದಳು. ಆದುದರಿಂದ ಅವಳು ತ್ರಿದಂಡವನ್ನು ಧರಿಸಿದ್ದ ಸಂನ್ಯಾಸಿನೀದೇಹದಿಂದ ಮುಕ್ತಳಾಗಿದ್ದಳು. ಜನಕನೂ ಯೋಗವಿದ್ಯಾಪಾರಂಗತನೇ ಆಗಿದ್ದುದರಿಂದ ತನ್ನನ್ನು ಪ್ರವೇಶಿಸಿದ್ದ ಸುಲಭೆಗೆ ವಶನಾಗದೇ ಅವಳನ್ನೇ ವಶಪಡಿಸಿಕೊಂಡನು. ಇದು ಮನಸ್ಸಿನಿಂದ ಕೂಡಿದ ಚೇತನನ ಕಾರ್ಯವಾಗಿದ್ದಿತು. ಛತ್ರ-ಚಾಮರಾದಿಗಳಿಂದ ಕೂಡಿದ ಪ್ರಾಕೃತಜನಕರಾಜನ ಕಾರ್ಯವೇನೂ ಇರಲಿಲ್ಲ. ಮನಸ್ಸಿನಿಂದ ಕೂಡಿದ ಜನಕನ ಚೇತನ ಮತ್ತು ಮನಸ್ಸಿನಿಂದ ಕೂಡಿದ ಸುಲಭೆಯ ಚೇತನ –ಇವೆರಡೂ ಜನಕನ ಶರೀರದಲ್ಲಿ ವಾದ-ವಿವಾದವನ್ನು ಪ್ರಾರಂಭಿಸಿದುವು.)

ಜನಕನು ತನ್ನ ಚೇತನದ ಮೂಲಕವಾಗಿ ಸುಲಭೆಯ ಚೇತನವನ್ನು ಪ್ರಶ್ನಿಸಿದನು :

ಭಗವತ್ಯಾಃ ಕ್ವ ಚರ್ಯೇಯಂ ಕೃತಾ ಕ್ವ ಚ ಗಮಿಷ್ಯಸಿ ।
ಕಸ್ಯ ಚ ತ್ವಂ ಕುತೋ ವೇತಿ ಪಪ್ರಚ್ಛೈನಾಂ ಮಹೀಪತಿಃ ॥೨೦॥

“ಭಗವತಿ! ಈ ಸಂನ್ಯಾಸದೀಕ್ಷೆಯನ್ನು ಎಲ್ಲಿಂದ ಪಡೆದುಕೊಂಡೆ? ನೀನು ಮುಂದೆ ಎಲ್ಲಿಗೆ ಹೋಗಲಿರುವೆ? ನೀನು ಯಾರವಳಾಗಿರುವೆ? ಎಲ್ಲಿಂದ ಬಂದಿರುವೆ?

ಶ್ರುತೇ ವಯಸಿ ಜಾತೌ ಚ ಸದ್ಭಾವೋ ನಾಧಿಗಮ್ಯತೇ ।
ಏಷ್ವರ್ಥೇಷೂತ್ತರಂ ತಸ್ಮಾತ್ಪ್ರವೇದ್ಯಂ ಮತ್ಸಮಾಗಮೇ ॥೨೧॥

ಒಬ್ಬರು ಮತ್ತೊಬ್ಬರನ್ನು ಪ್ರಶ್ನಿಸದಿದ್ದರೆ ಅವರ ಶಾಸ್ತ್ರಜ್ಞಾನ ದಲ್ಲಾಗಲೀ, ವಯಸ್ಸಿನಲ್ಲಾಗಲೀ, ಜಾತಿಯ ವಿಷಯದಲ್ಲಾಗಲೀ–ಒಳ್ಳೆಯ ಅಭಿಪ್ರಾಯವು ಉಂಟಾಗಲು ಸಾಧ್ಯವಾಗುವುದಿಲ್ಲ. ನನ್ನೊಡನೆ ನಿನ್ನ

ಸಮಾಗಮವಾಗಿರುವಾಗ ಈ ಎಲ್ಲ ವಿಷಯಗಳಿಗೂ ಸಮಂಜಸವಾದ ಉತ್ತರವನ್ನು ತಿಳಿದುಕೊಳ್ಳಬೇಕಾಗಿದೆ.

ಛತ್ರಾದಿಷು ವಿಶೇಷೇಷು ಮುಕ್ತಂ ಮಾ ವಿದ್ಧಿ ತತ್ತ್ವತಃ ।
ಸ ತ್ವಾಂ ಸಮ್ಮನ್ತುಮಿಚ್ಛಾಮಿ ಮಾನಾರ್ಹಾ ಹಿ ಮತಾಸಿ ಮೇ ॥೨೨॥

ಛತ್ರ-ಚಾಮರಗಳೇ ಮೊದಲಾದ ವಿಶೇಷವಾದ ರಾಜಚಿಹ್ನೆಗಳಿಂದ ನಾನು ಮುಕ್ತನಾಗಿರುವೆನೆಂಬುದನ್ನು ನೀನು ಯಥಾವತ್ತಾಗಿ ತಿಳಿಯಬೇಕು. ನನಗೆ ಆ ರಾಜವೈಭವದ ಸಂಗವಿಲ್ಲ. ಎಲ್ಲವನ್ನೂ ಪರಿತ್ಯಾಗಮಾಡಿರುವ ನಾನು ನಿನ್ನನ್ನು ಸಮ್ಮಾನಿಸುವ ಆಶಯದಿಂದಿರುತ್ತೇನೆ. ಏಕೆಂದರೆ : ನೀನು ಸಮ್ಮಾನಕ್ಕೆ ಯೋಗ್ಯಳೆಂಬುದು ನನ್ನ ಅಭಿಪ್ರಾಯವಾಗಿದೆ.

ಯಸ್ಮಾಚ್ಚೈತನ್ಮಯಾ ಪ್ರಾಪ್ತಂ ಜ್ಞಾನಂ ವೈಶೇಷಿಕಂ ಪುರಾ ।
ಯಸ್ಯ ನಾನ್ಯಃ ಪ್ರವಕ್ತಾಸ್ತಿ ಮೋಕ್ಷಂ ತಮಪಿ ಮೇ ಶೃಣು ॥೨೩॥

ಸರ್ವಶ್ರೇಷ್ಠವಾದ ಮೋಕ್ಷವಿಧಾಯಕವಾದ ಜ್ಞಾನವು ನನಗೆ ಯಾರಿಂದ ಪ್ರಾಪ್ತವಾಯಿತೋ, ಯಾವ ಜ್ಞಾನದ ಪ್ರತಿಪಾದನೆಯನ್ನು ಅವನ ಹೊರತಾಗಿ ಬೇರೆ ಯಾರೂ ಮಾಡುವುದಿಲ್ಲವೋ –ಅಂತಹ ಪರಮಗುರುವಿನ ವಿಷಯವನ್ನೂ ಮತ್ತು ಅವನು ಪ್ರತಿಪಾದಿಸಿರುವ ಮೋಕ್ಷದ ವಿಷಯವನ್ನೂ ನನ್ನಿಂದ ಕೇಳು.

ಪರಾಶರಸಗೋತ್ರಸ್ಯ ವೃದ್ಧಸ್ಯ ಸುಮಹಾತ್ಮನಃ ।
ಭಿಕ್ಷೋಃ ಪಞ್ಚಶಿಖಸ್ಯಾಹಂ ಶಿಷ್ಯಃ ಪರಮಸಮ್ಮತಃ ॥೨೪॥

ನಾನು ಪರಾಶರಗೋತ್ರೋದ್ಭವನಾದ, ವೃದ್ಧನಾದ, ಮಹಾತ್ಮನಾದ, ಸಂನ್ಯಾಸಿಯಾದ ಪಂಚಶಿಖನ ಪರಮಪ್ರಿಯನಾದ ಶಿಷ್ಯನು.

ಸಾಂಖ್ಯಜ್ಞಾನೇ ಚ ಯೋಗೇ ಚ ಮಹೀಪಾಲವಿಧೌ ತಥಾ ।
ತ್ರಿವಿಧೇ ಮೋಕ್ಷಧರ್ಮೇಽಸ್ಮಿನ್ಗತಾಧ್ವಾ ಛಿನ್ನಸಂಶಯಃ ॥೨೫॥

ಸಾಂಖ್ಯಜ್ಞಾನ, ಯೋಗವಿದ್ಯೆ ಮತ್ತು ರಾಜಧರ್ಮ –ಈ ಮೂರು ಪ್ರಕಾರವಾದ ಮೋಕ್ಷಧರ್ಮಗಳಲ್ಲಿಯೂ ಪರಿಣತನಾಗಿದ್ದೇನೆ ಮತ್ತು ಸಂಶಯರಹಿತನಾಗಿಯೂ ಇದ್ದೇನೆ.

ಸ ಯಥಾಶಾಸ್ತ್ರದೃಷ್ಟೇನ ಮಾರ್ಗೇಣೇಹ ಪರಿಭ್ರಮನ್ ।
ವಾರ್ಷಿಕಾಂಶ್ಚತುರೋ ಮಾಸಾನ್ಪುರಾ ಮಯಿ ಸುಖೋಷಿತಃ ॥೨೬॥

ಹಿಂದೊಮ್ಮೆ ನನ್ನ ಪರಮಗುರುವಾದ ಪಂಚಶಿಖನು ಶಾಸ್ತ್ರೋಕ್ತವಾದ ಮಾರ್ಗದಿಂದಿರುತ್ತಾ ಇಲ್ಲಿ ಸಂಚರಿಸುತ್ತಿದ್ದಾಗ ವರ್ಷರ್ತುವಿನ ನಾಲ್ಕು ಮಾಸಗಳು ನನ್ನ ಅರಮನೆಯಲ್ಲಿ ಸುಖವಾಗಿ ತಂಗಿದ್ದನು.

ತೇನಾಹಂ ಸಾಂಖ್ಯಮುಖ್ಯೇನ ಸುದೃಷ್ಟಾರ್ಥೇನ ತತ್ತ್ವತಃ ।
ಶ್ರಾವಿತಸ್ತ್ರಿವಿಧಂ ಮೋಕ್ಷಂ ನ ಚ ರಾಜ್ಯಾದ್ಧಿ ಚಾಲಿತಃ ॥೨೭॥

ಸಾಂಖ್ಯಶಾಸ್ತ್ರದಲ್ಲಿ ಪ್ರಮುಖವಿದ್ವಾಂಸನಾದ, ಸಾಂಖ್ಯಶಾಸ್ತ್ರದ ಅರ್ಥವನ್ನು ದೃಷ್ಟಾಂತಪೂರ್ವಕವಾಗಿ ತಿಳಿದುಕೊಂಡಿದ್ದ ಪಂಚಶಿಖನು ನನಗೆ ಮೂರು ಪ್ರಕಾರವಾದ ಮೋಕ್ಷಮಾರ್ಗಗಳನ್ನು ಯಥಾವತ್ತಾಗಿ ಉಪದೇಶಿಸಿದನು. ಆದರೆ ಅವನು ರಾಜ್ಯವನ್ನು ತೊರೆದು ಹೋಗಲು ನನಗೆ ಅನುಮತಿಯನ್ನು ಕೊಡಲಿಲ್ಲ.

ಸೋಽಹಂ ತಾಮಖಿಲಾಂ ವೃತ್ತಿಂ ತ್ರಿವಿಧಾಂ ಮೋಕ್ಷಸಂಹಿತಾಮ್ ।
ಮುಕ್ತರಾಗಶ್ಚರಾಮ್ಯೇಕಃ ಪದೇ ಪರಮಕೇ ಸ್ಥಿತಃ ॥೨೮॥

ಪಂಚಶಿಖನಿಂದ ಉಪದೇಶವನ್ನು ಪಡೆದ ನಾನು ರಾಗ-ದ್ವೇಷಾದಿಗಳಿಂದ ವಿಮುಕ್ತನಾಗಿ, ಮೋಕ್ಷಕ್ಕೆ ಸಂಬಂಧಿಸಿದಂತೆ ಮೂರು ಪ್ರಕಾರವಾದ ವೃತ್ತಿಗಳನ್ನು ಆಚರಿಸುತ್ತಾ ಏಕಾಕಿಯಾಗಿ ಯಾವಾಗಲೂ ಪರಮಾತ್ಮ ಭಾವದಲ್ಲಿಯೇ ಇದ್ದುಬಿಟ್ಟಿದ್ದೇನೆ. (ಸ್ಥಿತಪ್ರಜ್ಞನಾಗಿದ್ದೇನೆ.)

ವೈರಾಗ್ಯಂ ಪುನರೇತಸ್ಯ ಮೋಕ್ಷಸ್ಯ ಪರಮೋ ವಿಧಿಃ ।
ಜ್ಞಾನಾದೇವ ಚ ವೈರಾಗ್ಯಂ ಜಾಯತೇ ಯೇನ ಮುಚ್ಯತೇ ॥೨೯॥

ವೈರಾಗ್ಯವೇ ಮುಕ್ತಿಗೆ ಪ್ರಧಾನಕಾರಣವಾಗಿದೆ. ಯಾವುದರಿಂದ ಮನುಷ್ಯನು ಮುಕ್ತನಾಗುವನೋ–ಅಂತಹ ವೈರಾಗ್ಯವು ಜ್ಞಾನದಿಂದ ಮಾತ್ರವೇ ಹುಟ್ಟುತ್ತದೆ.

ಜ್ಞಾನೇನ ಕುರುತೇ ಯತ್ನಂ ಯತ್ನೇನ ಪ್ರಾಪ್ಯತೇ ಮಹತ್ ।
ಮಹದ್ದ್ವಂದ್ವಪ್ರಮೋಕ್ಷಾಯ ಸಾ ಸಿದ್ಧಿರ್ಯಾ ವಯೋಽತಿಗಾ ॥೩೦॥

ಮನುಷ್ಯನು ಜ್ಞಾನದ ಮೂಲಕವಾಗಿ ವೈರಾಗ್ಯವನ್ನೂ, ವೈರಾಗ್ಯದ ಮೂಲಕವಾಗಿ ಮೋಕ್ಷವನ್ನೂ ಪಡೆಯಲು ಪ್ರಯತ್ನಿಸುತ್ತಾನೆ. ಅಂತಹ ಪ್ರಯತ್ನದಿಂದ ಮಹತ್ತರವಾದ ಆತ್ಮಜ್ಞಾನವನ್ನೇ ಹೊಂದುತ್ತಾನೆ. ಅಂತಹ ಆತ್ಮಜ್ಞಾನವು ಸುಖ-ದುಃಖಾದಿ ದ್ವಂದ್ವಗಳಿಂದ ಮನುಷ್ಯನನ್ನು ಮುಕ್ತನನ್ನಾಗಿ ಮಾಡುತ್ತದೆ. ಅದೇ ಪರಮಸಿದ್ಧಿಯು. ಅದು ಕಾಲಾತೀತವಾದುದು.

ಸೇಯಂ ಪರಮಿಕಾ ಬುದ್ಧೇಃ ಪ್ರಾಪ್ತಾ ನಿರ್ದ್ವನ್ದ್ವತಾ ಮಯಾ ।
ಇಹೈವ ಗತಮೋಹೇನ ಚರತಾ ಮುಕ್ತಸಙ್ಗಿನಾ ॥೩೧॥

ನಿರ್ಮೋಹನಾದ ನಿಸ್ಸಂಗನಾದ ನಾನು ಗೃಹಸ್ಥಾಶ್ರಮದಲ್ಲಿಯೇ ಇದ್ದರೂ ದ್ವಂದ್ವಗಳಿಂದ ರಹಿತವಾದ, ಕಷ್ಟ-ಸುಖಗಳನ್ನು ಸಮವಾಗಿ ಕಾಣುವ, ಶ್ರೇಷ್ಠವಾದ ಬುದ್ಧಿಯನ್ನು ಹೊಂದಿದ್ದೇನೆ.

ಯಥಾ ಕ್ಷೇತ್ರಂ ಮೃದೂಭೂತಮದ್ಭಿರಾಪ್ಲಾವಿತಂ ತಥಾ ।
ಜನಯತ್ಯಙ್ಕುರಂ ಕರ್ಮ ನೃಣಾಂ ತದ್ವತ್ಪುನರ್ಭವಮ್ ॥೩೨॥

ಯಾವ ರೀತಿಯಲ್ಲಿ ಉತ್ತು ನೀರುಹಾಯಿಸಿದ ಗದ್ದೆಯು ಬಿತ್ತಿದ ನಂತರ ಮೊಳಕೆಗಳನ್ನು ಹೊಂದುವುದೋ–ಹಾಗೆಯೇ ಕ್ಷೇತ್ರರೂಪವಾದ ಶರೀರವು ಶುಭಾಶುಭಕರ್ಮಗಳೆಂಬ ಕೃಷಿಯಿಂದ ಪುನರ್ಜನ್ಮರೂಪವಾದ ಮೊಳಕೆಗಳನ್ನು ಹೊಂದುತ್ತದೆ.

ಯಥಾ ಚೋತ್ತಾಪಿತಂ ಬೀಜಂ ಕಪಾಲೇ ಯತ್ರ ತತ್ರ ವಾ ।
ಪ್ರಾಪ್ಯಾಪ್ಯಙ್ಕುರಹೇತುತ್ವಮಬೀಜತ್ವಾನ್ನ ಜಾಯತೇ ॥೩೩॥

ತದ್ವದ್ಭಗವತಾನೇನ ಶಿಖಾ ಪ್ರೋಕ್ತೇನ ಭಿಕ್ಷುಣಾ ।
ಜ್ಞಾನಂ ಕೃತಮಬೀಜಂ ಮೇ ವಿಷಯೇಷು ನ ಜಾಯತೇ ॥೩೪॥

ಯಾವ ರೀತಿಯಲ್ಲಿ ಹುರಿಯುವ ಓಡಿನಲ್ಲಿ ಅಥವಾ ಮತ್ತಾವುದೇ ಪಾತ್ರೆಯಲ್ಲಿ ಹುರಿಯಲ್ಪಟ್ಟ ಬೀಜವು ಅಬೀಜವಾಗುವುದರಿಂದ–ಮೊಳೆಯಲು ಯೋಗ್ಯವಾದ ಹುಲುಸಾದ ಕ್ಷೇತ್ರದಲ್ಲಿ ಬಿತ್ತಿದರೂ ಮೊಳೆಯುವುದೇ ಇಲ್ಲವೋ–ಅದೇ ರೀತಿಯಲ್ಲಿ ಸಂನ್ಯಾಸಿಯಾದ ಭಗವಾನ್ ಪಂಚಶಿಖನು

ಉಪದೇಶಿಸಿದ ಜ್ಞಾನವು ನನ್ನ ಶುಭಾಶುಭಕರ್ಮಗಳೆಲ್ಲವನ್ನೂ ಅಬೀಜ ವನ್ನಾಗಿ ಮಾಡಿಬಿಟ್ಟಿದೆ. ವಿಷಯಗಳಿಂದ ತುಂಬಿರುವ ಕ್ಷೇತ್ರಗಳಲ್ಲಿ ಅವು ಮೊಳೆಯುವುದಿಲ್ಲ. (ಶುಭಾಶುಭಕರ್ಮಗಳಿಂದ ಉಂಟಾಗುವ ಪುನರ್ಜನ್ಮ ಗಳು ನನಗಿರುವುದಿಲ್ಲ.)

ನಾಭಿರಜ್ಯತಿ ಕಸ್ಮಿಂಶ್ಚಿನ್ನಾನರ್ಥೇ ನ ಪರಿಗ್ರಹೇ ।
ನಾಭಿರಜ್ಯತಿ ಚೈತೇಷು ವ್ಯರ್ಥತ್ವಾದ್ರಾಗರೋಷಯೋಃ ॥೩೫॥

ನನ್ನ ಬುದ್ಧಿಯು ಯಾವಾಗಲೂ ಅಪ್ರಯೋಜಕವಾದ ವಿಷಯ ಗಳಲ್ಲಿಯೂ–ಪರಿಗ್ರಹಾದಿಗಳಲ್ಲಿಯೂ (ಭೋಗ್ಯವಸ್ತುಗಳ ಸಂಗ್ರಹಗಳ ಲ್ಲಿಯೂ) ಅನುರಕ್ತವಾಗುವುದಿಲ್ಲ. ಪಶು-ಪತ್ನೀ-ಸುತಾಲಯಾದಿಗಳ ಮೇಲಿನ ಅನುರಾಗ, ಶತ್ರುಗಳ ಮೇಲಿನ ರೋಷ –ಇವುಗಳೂ ವ್ಯರ್ಥವಾದುದರಿಂದ ಅಂತಹ ರಾಗ-ದ್ವೇಷಾದಿಗಳಲ್ಲಿಯೂ ನನ್ನ ಮನಸ್ಸು ಆಸಕ್ತವಾಗುವುದಿಲ್ಲ.

ಯಶ್ಚ ಮೇ ದಕ್ಷಿಣಂ ಬಾಹುಂ ಚನ್ದನೇನ ಸಮುಕ್ಷಯೇತ್ ।
ಸವ್ಯಂ ವಾಸ್ಯಾಪಿ ಯಸ್ತಕ್ಷೇತ್ಸಮಾವೇತಾವುಭೌ ಮಮ ॥೩೬॥

ನನ್ನ ಬಲದ ತೋಳನ್ನು ಚಂದನದಿಂದ ಲೇಪಿಸುವವನೂ ಮತ್ತು ನನ್ನ ಎಡತೋಳನ್ನು ಬಾಚಿಯಿಂದ ಕತ್ತರಿಸುವವನೂ –ಈ ಇಬ್ಬರೂ ನನಗೆ ಸಮಾನರೇ ಆಗಿರುತ್ತಾರೆ. ತೋಳಿಗೆ ಗಂಧವನ್ನು ಪೂಸಿದವನನ್ನು ನಾನು ಪ್ರೀತಿಸುವುದೂ ಇಲ್ಲ ; ತೋಳನ್ನು ಕತ್ತರಿಸಿಹಾಕಿದವನನ್ನು ನಾನು ದ್ವೇಷಿಸುವುದೂ ಇಲ್ಲ.

ಸುಖೀ ಸೋऽಹಮವಾಪ್ತಾರ್ಥಃ ಸಮಲೋಷ್ಟಾಶ್ಮಕಾಞ್ಚನಃ ।
ಮುಕ್ತಸಙ್ಗಃ ಸ್ಥಿತೋ ರಾಜ್ಯೇ ವಿಶಿಷ್ಟೋऽನ್ಯೈಸ್ತ್ರಿದಣ್ಡಿಭಿಃ ॥೩೭॥

ಆಪ್ತಕಾಮನಾದ ನಾನು (ಬ್ರಹ್ಮಜ್ಞಾನವನ್ನು ಪಡೆದಿರುವ ನಾನು) ಸರ್ವದಾ ಸುಖವನ್ನೇ ಅನುಭವಿಸುತ್ತಿದ್ದೇನೆ. ಮಣ್ಣುಹೆಂಟೆಯನ್ನೂ, ಕಲ್ಲನ್ನೂ ಮತ್ತು ಚಿನ್ನವನ್ನೂ ಸಮಾನವಾಗಿ ಕಾಣುತ್ತೇನೆ. ಎಲ್ಲದರಲ್ಲಿಯೂ ಅನಾಸಕ್ತನಾಗಿದ್ದು ರಾಜ್ಯದಲ್ಲಿದ್ದರೂ ನಾನು ಇತರ ತ್ರಿದಂಡೀ ಸಂನ್ಯಾಸಿಗಳಿಗಿಂತ ವಿಶಿಷ್ಟನಾಗಿದ್ದೇನೆ.

ಮೋಕ್ಷೇ ಹಿ ತ್ರಿವಿಧಾ ನಿಷ್ಠಾ ದೃಷ್ಟಾನ್ಯೈರ್ಮೋಕ್ಷವಿತ್ತಮೈಃ ।
ಜ್ಞಾನಂ ಲೋಕೋತ್ತರಂ ಯಚ್ಚ ಸರ್ವತ್ಯಾಗಶ್ಚ ಕರ್ಮಣಾಮ್ ॥೩೮॥

ಮೋಕ್ಷಮಾರ್ಗವನ್ನು ತಿಳಿದಿರುವವರಲ್ಲಿ ಶ್ರೇಷ್ಠರಾದವರು ಮೂರು ವಿಧವಾದ ಮೋಕ್ಷನಿಷ್ಠೆಯಿದೆಯೆಂಬುದನ್ನು ಕಂಡುಕೊಂಡಿರುತ್ತಾರೆ. ಲೋಕೋತ್ತರವಾದ (ಸರ್ವಶ್ರೇಷ್ಠವಾದ) ಜ್ಞಾನವೆಂಬುದು ಸರ್ವಕರ್ಮಗಳ ತ್ಯಾಗರೂಪವಾದುದು.

ಜ್ಞಾನನಿಷ್ಠಾಂ ವದನ್ತ್ಯೇಕೇ ಮೋಕ್ಷಶಾಸ್ತ್ರವಿದೋ ಜನಾಃ ।
ಕರ್ಮನಿಷ್ಠಾಂ ತಥೈವಾನ್ಯೇ ಯತಯಃ ಸೂಕ್ಷ್ಮದರ್ಶಿನಃ ॥೩೯॥

ಮೋಕ್ಷಶಾಸ್ತ್ರವನ್ನು ತಿಳಿದಿರುವ ಮಹಾತ್ಮರಲ್ಲಿ ಕೆಲವರು ಜ್ಞಾನನಿಷ್ಠೆಯೇ ಮೋಕ್ಷಕ್ಕೆ ಸಾಧನವೆನ್ನುತ್ತಾರೆ. ಸೂಕ್ಷ್ಮದರ್ಶಿಗಳಾದ ಕೆಲವರು ಯತಿಗಳು ಕರ್ಮನಿಷ್ಠೆಯೇ ಮೋಕ್ಷಕ್ಕೆ ಸಾಧನೋಪಾಯವೆನ್ನುತ್ತಾರೆ.

ಪ್ರಹಾಯೋಭಯಮಪ್ಯೇವ ಜ್ಞಾನಂ ಕರ್ಮ ಚ ಕೇವಲಮ್ ।
ತೃತೀಯೇಯಂ ಸಮಾಖ್ಯಾತಾ ನಿಷ್ಠಾ ತೇನ ಮಹಾತ್ಮನಾ ॥೪೦॥

ಮಹಾತ್ಮನಾದ ಪಂಚಶಿಖನು ಕೇವಲ ಜ್ಞಾನನಿಷ್ಠೆ ಮತ್ತು ಕೇವಲ ಕರ್ಮನಿಷ್ಠೆ –ಈ ಎರಡು ಮಾರ್ಗಗಳನ್ನೂ ಬಿಟ್ಟು ನನಗೆ ಮೂರನೆಯದಾದ ನಿಷ್ಠೆಯೊಂದನ್ನು ಹೇಳಿರುತ್ತಾನೆ.

ಯಮೇ ಚ ನಿಯಮೇ ಚೈವ ಕಾಮೇ ದ್ವೇಷೇ ಪರಿಗ್ರಹೇ ।
ಮಾನೇ ದಮ್ಭೇ ತಥಾ ಸ್ನೇಹೇ ಸದೃಶಾಸ್ತೇ ಕುಟುಮ್ಬಿಭಿಃ ॥೪೧॥

ಮೂರನೆಯದಾದ ಈ ನಿಷ್ಠೆಯನ್ನು ಅವಲಂಬಿಸಿರುವವರು ಯಮ, ನಿಯಮ, ಕಾಮ, ದ್ವೇಷ, ಪರಿಗ್ರಹ, ಮಾನ, ದಂಭ ಮತ್ತು ಸ್ನೇಹ –ಇವುಗಳಲ್ಲಿ ಗೃಹಸ್ಥರಂತೆಯೇ ಇರುತ್ತಾರೆ.

ತ್ರಿದಣ್ಡಾದಿಷು ಯದ್ಯಸ್ತಿ ಮೋಕ್ಷೋ ಜ್ಞಾನೇನ ಕಸ್ಯಚಿತ್ ।
ಛತ್ರಾದಿಷು ಕಥಂ ನ ಸ್ಯಾತ್ತುಲ್ಯಹೇತೌ ಪರಿಗ್ರಹೇ ॥೪೨॥

ಸಂನ್ಯಾಸೀ ಎನಿಸಿಕೊಂಡವನು ತ್ರಿದಂಡವನ್ನು ಧಾರಣೆಮಾಡುತ್ತಾನೆ.

ಗೃಹಸ್ಥನಾದ ರಾಜನು ಛತ್ರ-ಚಾಮರಾದಿಗಳನ್ನು ಧರಿಸುತ್ತಾನೆ. ಯಾವನಿಗಾದರೂ ಒಬ್ಬನಿಗೆ ತ್ರಿದಂಡಾದಿಗಳ ಧಾರಣದಿಂದಲೇ ಜ್ಞಾನವುಂಟಾಗಿ ಮೋಕ್ಷವು ಲಭಿಸುವುದಾದರೆ–ಛತ್ರ-ಚಾಮರಾದಿಗಳನ್ನು ಧರಿಸಿರುವವನಿಗೆ ಅದೇ ಮೋಕ್ಷವು ಏಕೆ ಲಭಿಸುವುದಿಲ್ಲ? ಪ್ರತಿಬಂಧಕ್ಕೆ ಕಾರಣವಾದ ಪರಿಗ್ರಹವು ಎರಡರಲ್ಲಿಯೂ ಸಮಾನವಾಗಿಯೇ ಇದೆ. ಒಬ್ಬನು ತ್ರಿದಂಡವನ್ನು ಸಂಗ್ರಹಿಸುತ್ತಾನೆ ; ಮತ್ತೊಬ್ಬನು ಛತ್ರ-ಚಾಮರಗಳನ್ನು ಸಂಗ್ರಹಿಸುತ್ತಾನೆ.

ಯೇನ ಯೇನ ಹಿ ಯಸ್ಯಾರ್ಥಃ ಕಾರಣೇನೇಹ ಕರ್ಮಣಿ ।
ತತ್ತದಾಲಮ್ಬತೇ ಸರ್ವಃ ಸ್ವೇ ಸ್ವೇ ಸ್ವಾರ್ಥಪರಿಗ್ರಹೇ ॥೪೩॥

ತಮ್ಮ ತಮ್ಮ ಅಭೀಷ್ಟಕ್ಕೆ ಸಂಬಂಧಿಸಿದ ವಸ್ತುಗಳನ್ನು ಪರಿಗ್ರಹಿಸುವುದರಲ್ಲಿ ಯಾವ ಯಾವ ಕಾರಣದಿಂದ ಯಾವ ಯಾವ ಕರ್ಮದಲ್ಲಿ ಆ ವಸ್ತುಗಳು ಸಂಗ್ರಹಿಸಲ್ಪಡುವುವೋ –ಅಂತಹ ಕರ್ಮವನ್ನೇ ಮನುಷ್ಯನು ಆಶ್ರಯಿಸುತ್ತಾನೆ.

ದೋಷದರ್ಶೀ ತು ಗಾರ್ಹಸ್ಥ್ಯೇ ಯೋ ವ್ರಜತ್ಯಾಶ್ರಮಾನ್ತರೇ ।
ಉತ್ಸೃಜನ್ಪರಿಗೃಹ್ಣಂಶ್ಚ ಸೋಽಪಿ ಸಙ್ಗಾನ್ನ ಮುಚ್ಯತೇ ॥೪೪॥

ಗೃಹಸ್ಥಾಶ್ರಮದಲ್ಲಿ ದೋಷವಿರುವುದನ್ನು ಕಂಡು ಯಾವಾತನು ಆ ಗೃಹಸ್ಥಾಶ್ರಮವನ್ನು ಪರಿತ್ಯಜಿಸಿ ಆಶ್ರಮಾಂತರಕ್ಕೆ ಹೋಗುವನೋ– ಅಂತಹವನು ಆ ಆಶ್ರಮದಲ್ಲಿಯೂ ಕೆಲವನ್ನು ತ್ಯಜಿಸುತ್ತಾನೆ. ಬೇರೆ ಕೆಲವನ್ನು ಸಂಗ್ರಹಿಸುತ್ತಾನೆ. ಆದುದರಿಂದ ಆಗಲೂ ಅವನು ಸಂಗದೋಷದಿಂದ ಮುಕ್ತನಾಗುವುದಿಲ್ಲ.

ಆಧಿಪತ್ಯೇ ತಥಾ ತುಲ್ಯೇ ನಿಗ್ರಹಾನುಗ್ರಹಾತ್ಮಕೇ ।
ರಾಜಭಿರ್ಭಿಕ್ಷುಕಾಸ್ತುಲ್ಯಾ ಮುಚ್ಯನ್ತೇ ಕೇನ ಹೇತುನಾ ॥೪೫॥

ದುಷ್ಟರನ್ನು ನಿಗ್ರಹಿಸುವಿಕೆ ಮತ್ತು ಶಿಷ್ಟರಲ್ಲಿ ಅನುಗ್ರಹ ತೋರುವಿಕೆ ಎಂಬುದರಲ್ಲಿಯೂ ಮತ್ತು ಆಧಿಪತ್ಯದಲ್ಲಿಯೂ (ಪ್ರಭುತ್ವಪ್ರದರ್ಶನದಲ್ಲಿಯೂ) ರಾಜ-ಸಂನ್ಯಾಸಿಗಳಿಬ್ಬರೂ ಸಮಾನರೇ ಆಗಿರುತ್ತಾರೆ. ಹೀಗೆ

ರಾಜರೊಡನೆ ಸಂನ್ಯಾಸಿಗಳೂ ಸಮಾನಧರ್ಮಿಗಳಾಗಿರುವಾಗ ಸಂನ್ಯಾಸಿಗಳು ಮಾತ್ರವೇ ಯಾವ ಕಾರಣದಿಂದ ಮುಕ್ತರಾಗುತ್ತಾರೆ?

ಅಥ ಸತ್ಯಾಧಿಪತ್ಯೇऽಪಿ ಜ್ಞಾನೇನೈವೇಹ ಕೇವಲಮ್ ।
ಮುಚ್ಯನ್ತೇ ಸರ್ವಪಾಪೇಭ್ಯೋ ದೇಹೇ ಪರಮಕೇ ಸ್ಥಿತಾಃ ॥೪೬॥

ಹಾಗೆ ರಾಜ್ಯಾಧಿಕಾರದಲ್ಲಿದ್ದರೂ ಶ್ರೇಷ್ಠವಾದ ಜ್ಞಾನದೇಹಗಳಲ್ಲಿರುವವರು ಕೇವಲಜ್ಞಾನಮಾತ್ರದಿಂದ ಸಕಲಪಾಪಗಳಿಂದಲೂ ವಿಮುಕ್ತರಾಗುತ್ತಾರೆ. ಇದು ಸಂನ್ಯಾಸೀ ಮತ್ತು ರಾಜಾ–ಇಬ್ಬರಿಗೂ ಸಮ.

ಕಾಷಾಯಧಾರಣಂ ಮೌಣ್ಡ್ಯಂ ತ್ರಿವಿಷ್ಟಬ್ಧಂ ಕಮಣ್ಡಲುಮ್ ।
ಲಿಙ್ಗಾನ್ಯುತ್ಪಥಭೂತಾನಿ ಮೋಕ್ಷಾಯೇತಿ ಮೇ ಮತಿಃ ॥೪೭॥

ಕಾವಿಬಟ್ಟೆಗಳನ್ನು ಧರಿಸುವುದು, ತಲೆಯನ್ನು ಬೋಳಿಸಿಕೊಳ್ಳುವುದು, ತ್ರಿದಂಡವನ್ನು ಧರಿಸುವುದು ಮತ್ತು ಕಮಂಡಲುವನ್ನು ಹಿಡಿದುಕೊಂಡಿರುವುದು–ಎಂಬ ಈ ಚಿಹ್ನೆಗಳಿದ್ದರೂ ದುರ್ಮಾರ್ಗವನ್ನು ಹಿಡಿದವನಿಗೆ ಇವು ಮೋಕ್ಷಕ್ಕೆ ಯಾವ ವಿಧವಾದ ಸಾಧನಗಳೂ ಆಗುವುದಿಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ.

ಯದಿ ಸತ್ಯಪಿ ಲಿಙ್ಗೇऽಸ್ಮಿಞ್ಜ್ಞಾನಮೇವಾತ್ರ ಕಾರಣಮ್ ।
ನಿರ್ಮೋಕ್ಷಾಯೇಹ ದುಃಖಸ್ಯ ಲಿಙ್ಗಮಾತ್ರಂ ನಿರರ್ಥಕಮ್ ॥೪೮॥

ತ್ರಿದಂಡ-ಕಮಂಡಲುಗಳೇ ಮೊದಲಾದ ಚಿಹ್ನೆಗಳಿದ್ದರೂ ದುಃಖದಿಂದ ಸರ್ವಥಾ ಮುಕ್ತಿಯನ್ನು ಹೊಂದಲು ಕೇವಲಜ್ಞಾನವೇ ಕಾರಣವೆನ್ನುವುದಾದರೆ –ತ್ರಿದಂಡಾದಿ ಚಿಹ್ನೆಗಳು ಮಾತ್ರವೇ ಇರುವುದು ಸರ್ವಥಾ ನಿಷ್ಪ್ರಯೋಜಕಗಳೇ ಸರಿ.

ಅಥವಾ ದುಃಖಶೈಥಿಲ್ಯಂ ವೀಕ್ಷ್ಯ ಲಿಙ್ಗೇ ಕೃತಾ ಮತಿಃ ।
ಕಿಂ ತದೇವಾರ್ಥಸಾಮಾನ್ಯಂ ಛತ್ರಾದಿಷು ನ ಲಕ್ಷ್ಯತೇ ॥೪೯॥

ಅಥವಾ ತ್ರಿದಂಡ ಮತ್ತು ಕಾವಿಬಟ್ಟೆಗಳನ್ನು ಧರಿಸುವುದರಿಂದ ದುಃಖವು ಸ್ವಲ್ಪ ಕಡಿಮೆಯಾಗುತ್ತದೆ ; ಆದುದರಿಂದ ಸಂನ್ಯಾಸಿಗಳು ಇವನ್ನು

ಧರಿಸಲು ಮನಸ್ಸುಮಾಡಿದ್ದಾರೆ–ಎನ್ನುವುದಾದರೆ ಈ ಅರ್ಥಸಾಮಾನ್ಯವೇ (ಈ ಅಭಿಪ್ರಾಯವೇ) ಛತ್ರ-ಚಾಮರಾದಿಗಳಲ್ಲಿಯೂ ಏಕಿರಬಾರದು?

ಆಕಿಂಚನ್ಯೇ ನ ಮೋಕ್ಷೋಽಸ್ತಿ ಕಿಂಚನ್ಯೇ ನಾಸ್ತಿ ಬನ್ಧನಮ್ ।
ಕಿಂಚನ್ಯೇ ಚೇತರೇ ಚೈವ ಜನ್ತುರ್ಜ್ಞಾನೇನ ಮುಚ್ಯತೇ ॥೫೦॥

ದಾರಿದ್ರ್ಯದಲ್ಲಿ ಮೋಕ್ಷವೆಂಬುದೇನೂ ಇರುವುದಿಲ್ಲ. ಮೋಕ್ಷಪ್ರಾಪ್ತಿಗೆ ದರಿದ್ರರಾಗಿರಬೇಕೆಂಬ ನಿಯಮವೇನೂ ಇಲ್ಲ ; ದರಿದ್ರರೆಲ್ಲರಿಗೂ ಮೋಕ್ಷವು ಪ್ರಾಪ್ತಿಯಾಗುತ್ತದೆ–ಎಂಬುದೂ ಇಲ್ಲ. ಅರ್ಥಾತ್ ಮೋಕ್ಷಕ್ಕೆ ದಾರಿದ್ರ್ಯವು ಸಾಧನವಾಗುವುದಿಲ್ಲ. ಅವಶ್ಯವಸ್ತುಗಳ ಸಂಪನ್ನತೆಯಿದ್ದರೆ ಅದು ಬಂಧನಕ್ಕೆ ಕಾರಣವೇನೂ ಆಗುವುದಿಲ್ಲ. ಆಢ್ಯನಾಗಲೀ, ದರಿದ್ರನಾಗಲೀ–ಮನುಷ್ಯನು ಜ್ಞಾನಮಾತ್ರದಿಂದಲೇ ಬಂಧನದಿಂದ ಮುಕ್ತಿಯನ್ನು ಹೊಂದುತ್ತಾನೆ.

ತಸ್ಮಾದ್ಧರ್ಮಾರ್ಥಕಾಮೇಷು ತಥಾ ರಾಜ್ಯಪರಿಗ್ರಹೇ ।
ಬನ್ಧನಾಯತನೇಷ್ವೇಷು ವಿದ್ಧ್ಯಬನ್ಧೇ ಪದೇ ಸ್ಥಿತಮ್ ॥೫೧॥

ಬಂಧನಕ್ಕೆ ತೌರುಮನೆಗಳಂತಿರುವ ಧರ್ಮಾರ್ಥ-ಕಾಮಗಳಲ್ಲಿಯೂ ರಾಜ್ಯಾಧಿಪತ್ಯದಲ್ಲಿಯೂ ತೊಡಗಿಕೊಂಡಿದ್ದರೂ –ಬಂಧನರಹಿತವಾದ ಜೀವನ್ಮುಕ್ತನ ಸ್ಥಾನದಲ್ಲಿ ನಾನಿರುವೆನೆಂಬುದನ್ನು ತಿಳಿಯುವವಳಾಗು.

ರಾಜ್ಯೈಶ್ವರ್ಯಮಯಃ ಪಾಶಃ ಸ್ನೇಹಾಯತನಬನ್ಧನಃ ।
ಮೋಕ್ಷಾಶ್ಮನಿಶಿತೇನೇಹ ಛಿನ್ನಸ್ತ್ಯಾಗಾಸಿನಾ ಮಯಾ ॥೫೨॥

ರಾಜ್ಯೈಶ್ವರ್ಯಮಯವಾದ ಹಗ್ಗವನ್ನೂ–ಸ್ನೇಹಕ್ಕೆ ಆಶ್ರಯಭೂತರಾದ ಪತ್ನೀ-ಪುತ್ರರೇ ಮೊದಲಾದ ಮಮತ್ವಬಂಧನಗಳೆಲ್ಲವನ್ನೂ– ಮೋಕ್ಷವೆಂಬ ಉಜ್ಜುಗಲ್ಲಿನಿಂದ ಚೂಪಾಗಿ ಮಾಡಲ್ಪಟ್ಟ ತ್ಯಾಗರೂಪವಾದ ಕತ್ತಿಯಿಂದ ಕತ್ತರಿಸಿಬಿಟ್ಟಿದ್ದೇನೆ.

ಸೋಽಹಮೇವಂಗತೋ ಮುಕ್ತೋ ಜಾತಾಸ್ತ್ವಯ್ಯಿ ಭಿಕ್ಷುಕಿ ।
ಅಯಥಾರ್ಥಂ ಹಿ ತೇ ವರ್ಣಂ ವಕ್ಷ್ಯಾಮಿ ಶೃಣು ತನ್ಮಮ ॥೫೩॥

ಸಂನ್ಯಾಸಿನಿಯೇ! ಹೀಗೆ ನಾನು ಜೀವನ್ಮುಕ್ತನಾಗಿದ್ದೇನೆ. ಆದರೆ ನಿನ್ನಲ್ಲಿರುವ ಯೋಗದ ಪ್ರಭಾವವನ್ನು ನೋಡಿ ನನಗೆ ನಿನ್ನ ವಿಷಯದಲ್ಲಿ ಆಸ್ಥೆಯುಂಟಾಗಿದೆ. ಆದರೆ ಈ ನಿನ್ನ ಸೌಂದರ್ಯವು ಯೋಗಸಾಧನೆಗೆ ಯೋಗ್ಯವಲ್ಲ. ಇದೇ ವಿಷಯದಲ್ಲಿ ಕೆಲವು ಮಾತುಗಳನ್ನು ಹೇಳುವೆನು ; ಕೇಳು.

ಸೌಕುಮಾರ್ಯಂ ತಥಾ ರೂಪಂ ವಪುರಗ್ರ್ಯಂ ತಥಾ ವಯಃ ।
ತವೈತಾನಿ ಸಮಸ್ತಾನಿ ನಿಯಮಶ್ಚೇತಿ ಸಂಶಯಃ ॥೫೪॥

ಸುಕುಮಾರತೆ, ಶ್ರೇಷ್ಠವಾದ ರೂಪ, ಸುಂದರವಾದ ಶರೀರ, ಯೌವನಾವಸ್ಥೆ –ಈ ಎಲ್ಲವೂ ಯೋಗಸಾಧನೆಗೆ ವಿರುದ್ಧಗಳಾಗಿವೆ. ಆದರೆ ನೀನು ಸಂನ್ಯಾಸವ್ರತನಿಯಮದಲ್ಲಿಯೂ ಇರುವೆ. ಇದು ಹೇಗೆಂಬುದೇ ನನಗೆ ಈಗ ಉಂಟಾಗಿರುವ ಸಂಶಯ.

ಯಚ್ಚಾಪ್ಯನನುರೂಪಂ ತೇ ಲಿಙ್ಗಸ್ಯಾಸ್ಯ ವಿಚೇಷ್ಟಿತಮ್ ।
ಮುಕ್ತೋಽಯಂ ಸ್ಯಾನ್ನ ವೇತಿ ಸ್ಯಾದ್ಧರ್ಷಿತೋ ಮತ್ಪರಿಗ್ರಹಃ ॥೫೫॥

ನೀನು ತ್ರಿದಂಡವನ್ನು ಧರಿಸಿರುವುದಕ್ಕೆ ಅನುರೂಪವಾಗಿ ವರ್ತಿಸುತ್ತಿಲ್ಲ. ಇವನು (ನಾನು) ಮುಕ್ತನಾಗಿರುವನೇ, ಇಲ್ಲವೇ?– ಎಂಬುದನ್ನು ಪರೀಕ್ಷಿಸುವ ಸಲುವಾಗಿ ಬಲಾತ್ಕಾರಪೂರ್ವಕವಾಗಿ ನೀನು ನನ್ನಲ್ಲಿ ಬಂದು ಸೇರಿಕೊಂಡು ನನ್ನನ್ನು ಆಕ್ರಮಿಸಿರುವೆ.

ನ ಚ ಕಾಮಸಮಾಯುಕ್ತೇ ಯುಕ್ತೇಽಪ್ಯಸ್ತಿ ತ್ರಿದಣ್ಡಕೇ ।
ನ ರಕ್ಷ್ಯತೇ ತ್ವಯಾ ಚೇದಂ ನ ಮುಕ್ತಸ್ಯಾಸ್ತಿ ಗೋಪನಾ ॥೫೬॥

ಮನುಷ್ಯನು ಯೋಗಯುಕ್ತನಾಗಿದ್ದರೂ ಕಾಮಭೋಗಗಳಲ್ಲಿ ಆಸಕ್ತ ನಾಗಿರುವುದಾದರೆ –ತ್ರಿದಂಡವನ್ನು ಧರಿಸುವುದು ಅನುಚಿತವೂ ವ್ಯರ್ಥವೂ ಆಗುತ್ತದೆ. ನೀನು ನಿನ್ನ ಈ ವ್ಯವಹಾರದಿಂದ ಸಂನ್ಯಾಸಧರ್ಮವನ್ನು ರಕ್ಷಿಸಿಕೊಳ್ಳುತ್ತಿಲ್ಲ. ನಿನ್ನ ಸ್ವರೂಪವನ್ನು ಮುಚ್ಚಲು ನೀನೇನಾದರೂ ಈ ಕಾರ್ಯವನ್ನು ಮಾಡಿರುವೆಯಾದರೆ –ಅದು ಸರಿಯಲ್ಲ. ಏಕೆಂದರೆ : ಜೀವನ್ಮುಕ್ತನಿಗೆ ಗೋಪನದ ಆವಶ್ಯಕತೆಯೇ ಇಲ್ಲ.

ಮತ್ಪಕ್ಷಸಂಶ್ರಯಾಚ್ಚಾಯಂ ಶೃಣು ಯಸ್ತೇ ವ್ಯತಿಕ್ರಮಃ ।
ಆಶ್ರಯನ್ತ್ಯಾಃ ಸ್ವಭಾವೇನ ಮಮ ಪೂರ್ವಪರಿಗ್ರಹಮ್ ॥೫೭॥

ನೀನು (ಈಗ ದೇಹಾತೀತನಾಗಿರುವ) ನನ್ನ ಹಿಂದಿನ (ಭೌತಿಕ) ದೇಹವನ್ನು ನಿನ್ನ ಭಾವದಿಂದ ಪ್ರವೇಶಿಸಿ ನನ್ನ ವಶಳಾಗಿಬಿಟ್ಟಿರುವೆ. ನೀನು ಹೀಗೆ ನನ್ನಲ್ಲಿ ಪ್ರವೇಶಿಸಿರುವುದರಿಂದ ನೀನು ಹೇಗೆ ಮರ್ಯಾದೆಯನ್ನು ಮೀರಿ ನಡೆದುಕೊಂಡಿರುವೆ –ಎಂಬುದನ್ನು ಹೇಳುವೆನು ; ಕೇಳು.

ಪ್ರವೇಶಸ್ತೇ ಕೃತಃ ಕೇನ ಮಮ ರಾಷ್ಟ್ರೇ ಪುರೇಽಪಿ ವಾ ।
ಕಸ್ಯ ವಾ ಸಂನಿಕರ್ಷಾತ್ತ್ವಂ ಪ್ರವಿಷ್ಟಾ ಹೃದಯಂ ಮಮ ॥೫೮॥

ನೀನು ಯಾವ ಕಾರಣದಿಂದ ನನ್ನ ರಾಷ್ಟ್ರವನ್ನು ಅಥವಾ ಪುರವನ್ನು ಪ್ರವೇಶಿಸಿದೆ? ಯಾರ ಸಂಕೇತದಿಂದಾಗಿ ನೀನು ನನ್ನ ಹೃದಯವನ್ನು ಪ್ರವೇಶಿಸಿದೆ?

ವರ್ಣಪ್ರವರಮುಖ್ಯಾಸಿ ಬ್ರಾಹ್ಮಣೀ ಕ್ಷತ್ರಿಯಸ್ತ್ವಹಮ್ ।
ನಾವಯೋರೇಕಯೋಗೋಽಸ್ತಿ ಮಾ ಕೃಥಾ ವರ್ಣಸಂಕರಮ್ ॥೫೯॥

ನೀನು ಬ್ರಾಹ್ಮಣಿಯಾಗಿದ್ದು ಎಲ್ಲ ವರ್ಣಗಳಿಗೂ ಶ್ರೇಷ್ಠವಾದ ಬ್ರಾಹ್ಮಣವರ್ಣದ ಮುಖ್ಯಸ್ಥಳಾಗಿರುವೆ. ನಾನು ಕ್ಷತ್ರಿಯನಾಗಿದ್ದೇನೆ. ಆದುದರಿಂದ ನಾವಿಬ್ಬರೂ ಒಂದೇ ಸ್ಥಳದಲ್ಲಿ ಸೇರಿರುವುದು ಖಂಡಿತ ವಾಗಿಯೂ ಉಚಿತವಲ್ಲ. ಬಲಾತ್ಕಾರಪೂರ್ವಕವಾಗಿ ನನ್ನಲ್ಲಿ ಸೇರಿಕೊಂಡು ನೀನು ವರ್ಣಸಂಕರಕ್ಕೆ ಕಾರಣಳಾಗಬೇಡ.

ವರ್ತಸೇ ಮೋಕ್ಷಧರ್ಮೇಣ ತ್ವಂ ಗಾರ್ಹಸ್ಥ್ಯೇಽಹಮಾಶ್ರಮೇ ।
ಅಯಂ ಚಾಪಿ ಸುಕಷ್ಟಸ್ತೇ ದ್ವಿತೀಯೋಽಶ್ರಮಸಂಕರಃ ॥೬೦॥

ನೀನು ಮೋಕ್ಷಧರ್ಮದ ಆಶ್ರಮಕ್ಕೆ ಅನುಸಾರವಾಗಿ ವ್ಯವಹರಿಸುತ್ತಿ ರುವೆ. ನಾನು ಗೃಹಸ್ಥಾಶ್ರಮದಲ್ಲಿದ್ದೇನೆ. ಸಂನ್ಯಾಸಿನಿಯಾದವಳು ಗೃಹಸ್ಥ ನೊಡನಿರುವುದು ನಿನಗೆ ಅತ್ಯಂತಕಷ್ಟವೇ (ದೋಷವೇ) ಆಗುತ್ತದೆ. ಇದರಿಂದ ಎರಡನೆಯದಾದ ಆಶ್ರಮಸಂಕರವೆಂಬ ದೋಷವೂ ನಿನಗೆ ಪ್ರಾಪ್ತವಾಗಿದೆ.

ಸಗೋತ್ರಾಂ ವಾಸಗೋತ್ರಾಂ ವಾ ನ ವೇದ ತ್ವಾಂ ನ ವೇತ್ಥ ಮಾಮ್ ।
ಸಗೋತ್ರಮಾವಿಶನ್ತ್ಯಾಸ್ತೇ ತೃತೀಯೋ ಗೋತ್ರಸಂಕರಃ ॥೬೧॥

ನೀನು ನನ್ನ ಸಗೋತ್ರಳೋ ಅಸಗೋತ್ರಳೋ (ಅನ್ಯಗೋತ್ರಳೋ)–ಎಂಬ ವಿಷಯವೂ ನನಗೆ ಗೊತ್ತಿಲ್ಲ. ನಾನು ಯಾವ ಗೋತ್ರದವನೆಂಬ ವಿಷಯವು ನಿನಗೂ ತಿಳಿಯದು. ಒಂದು ವೇಳೆ ನೀನು ಸಗೋತ್ರಳೇ ಆಗಿದ್ದರೆ ನನ್ನೊಳಗೆ ಪ್ರವೇಶಿಸಿರುವ ನಿನಗೆ ಗೋತ್ರಸಂಕರವೆಂಬ ಮೂರನೆಯ ದೋಷವೂ ಪ್ರಾಪ್ತವಾಗಿದೆ.

ಅಥ ಜೀವತಿ ತೇ ಭರ್ತಾ ಪ್ರೋಷಿತೋಽಪ್ಯಥವಾ ಕ್ವಚಿತ್ ।
ಅಗಮ್ಯಾ ಪರಭಾರ್ಯೇತಿ ಚತುರ್ಥೋ ಧರ್ಮಸಂಕರಃ ॥೬೨॥

ಒಂದು ಪಕ್ಷ ನೀನು ಸಂನ್ಯಾಸಿನಿಯಾಗಿರದೇ ನಿನ್ನ ಪತಿಯು ಜೀವಿಸಿದ್ದರೆ ಅಥವಾ ಬೇರೆಲ್ಲಿಯೋ ಪ್ರವಾಸಮಾಡುತ್ತಿದ್ದರೆ–ನೀನು ಪರಭಾರ್ಯೆಯಾಗುವೆ. ಪರಭಾರ್ಯೆಯು ಸಮಾಗಮಕ್ಕೆ ಅಯೋಗ್ಯಳು. ಹಾಗೆ ನೀನು ಪರಭಾರ್ಯೆಯಾಗಿದ್ದೂ ನನ್ನೊಳಗೆ ಪ್ರವೇಶಿಸಿದ್ದರೆ–ಇದು ನಿನ್ನ ನಾಲ್ಕನೆಯ ಧರ್ಮಸಂಕರದೋಷವಾಗಿದೆ.

ಸಾ ತ್ವಮೇತಾನ್ಯಕಾರ್ಯಾಣಿ ಕಾರ್ಯಾಪೇಕ್ಷಾ ವ್ಯವಸ್ಯಸಿ ।
ಅವಿಜ್ಞಾನೇನ ವಾ ಯುಕ್ತಾ ಮಿಥ್ಯಾಜ್ಞಾನೇನ ವಾ ಪುನಃ ॥೬೩॥

ನೀನು ಕಾರ್ಯಸಾಧನೆಯನ್ನೇ ಮುಖ್ಯವಾದ ಅಪೇಕ್ಷೆಯನ್ನಾಗಿಟ್ಟು ಕೊಂಡು ಅಜ್ಞಾನದಿಂದ ಅಥವಾ ಮಿಥ್ಯಾಜ್ಞಾನದಿಂದ ಯುಕ್ತಳಾಗಿ ಮಾಡಬಾರದ ಈ ಅಕಾರ್ಯಗಳೆಲ್ಲವನ್ನೂ ಮಾಡಿರುವೆ.

ಅಥವಾಪಿ ಸ್ವತನ್ತ್ರಾಸಿ ಸ್ವದೋಷೇಣೇಹ ಕರ್ಹಿಚಿತ್ ।
ಯದಿ ಕಿಂಚಿಚ್ಛ್ರುತಂ ತೇಽಸ್ತಿ ಸರ್ವಂ ಕೃತಮನರ್ಥಕಮ್ ॥೬೪॥

ಅಥವಾ ನಾನು ಏನು ಮಾಡಲೂ ಸ್ವತಂತ್ರಳೆಂದು ಭಾವಿಸಿರುವೆಯಾದರೆ–ನೀನು ಹಿಂದೆ ಯಾವಾಗಲಾದರೂ ಸ್ವಲ್ಪವಾದರೂ ಶಾಸ್ತ್ರಶ್ರವಣವನ್ನು ಮಾಡಿರುವುದೂ ನಿನ್ನ ಈ ದೋಷದ ಕಾರಣದಿಂದಲೇ ವ್ಯರ್ಥವಾಗಿ ಮಾಡ

ಲ್ಪಟ್ಟಿದೆ. (ಏಕೆಂದರೆ : ಶಾಸ್ತ್ರವಿಧಿಗಳನ್ನೂ ಕಡೆಗಣಿಸಿ ಉಚ್ಛೃಂಖಲಳಾಗಿ ವರ್ತಿಸುವುದು ಮುಕ್ತರಾದವರ ಲಕ್ಷಣವಲ್ಲ.)

ಇದಮನ್ಯಚ್ಚತುರ್ಥಂ ತೇ ಭಾವಸ್ಪರ್ಶವಿಘಾತಕಮ್ ।
ದುಷ್ಟಾಯಾ ಲಕ್ಷ್ಯತೇ ಲಿಙ್ಗಂ ವಿವೃಣ್ವತ್ಯಾಪ್ರಕಾಶಿತಮ್ ॥೬೫॥

ನಿನ್ನಲ್ಲಿರುವ ದೋಷಗಳೆಲ್ಲವನ್ನೂ ನೀನೇ ಪ್ರಕಾಶಗೊಳಿಸಿರುವೆ. ನಿನ್ನಲ್ಲೀಗ ದುಷ್ಟೆಯ ಲಕ್ಷಣಗಳು ಕಾಣುತ್ತಿವೆ. ಭಾವ (ಚಿತ್ತದ) ಸ್ಪರ್ಶಕ್ಕೆ (ಐಕ್ಯಕ್ಕೆ) ಅಥವಾ ಪ್ರೀತಿಗೆ ವಿಘಾತರೂಪವಾದ ಮತ್ತೊಂದು ದುಷ್ಟತಾ ರೂಪವಾದ ನಾಲ್ಕನೆಯ ದೋಷವೂ ನಿನ್ನಲ್ಲಿ ಕಾಣುತ್ತಿದೆ.

ನ ಮಯ್ಯೇವಾಭಿಸಂಧಿಸ್ತೇ ಜಯೈಷಿಣ್ಯಾ ಜಯೇ ಕೃತಃ ।
ಯೇಯಂ ಮತ್ಪರಿಷತ್ಕೃತ್ಸ್ನಾ ಜೇತುಮಿಚ್ಛಸಿ ತಾಮಪಿ ॥೬೬॥

ನನ್ನನ್ನು ಜಯಿಸಲು ಇಚ್ಛಿಸಿರುವ ನೀನು ವಿಜಯಗಳಿಸಲು ಪ್ರಯತ್ನ ವನ್ನೇನೋ ಮಾಡಿದೆ. ಆದರೆ ನಿನಗೆ ನನ್ನೊಬ್ಬನನ್ನೇ ಜಯಿಸಬೇಕೆಂಬುದರಲ್ಲಿ ಅಭಿಪ್ರಾಯವಿಲ್ಲ. ಇಲ್ಲಿರುವ ಸಮಗ್ರವಾದ ಸಭೆಯನ್ನೇ ಜಯಿಸಲು ಇಚ್ಛಿಸಿರುವೆ.

ತಥಾರ್ಹತಸ್ತತಶ್ಚ ತ್ವಂ ದೃಷ್ಟಿಂ ಸ್ವಾಂ ಪ್ರತಿಮುಞ್ಚಸಿ ।
ಮತ್ಪಕ್ಷಪ್ರತಿಘಾತಾಯ ಸ್ವಪಕ್ಷೋದ್ಭಾವನಾಯ ಚ ॥೬೭॥

ನೀನು ನನ್ನ ಪಕ್ಷವನ್ನು ಪರಾಜಯಗೊಳಿಸುವ ಸಲುವಾಗಿಯೂ ನಿನ್ನ ಪಕ್ಷವನ್ನು ಎತ್ತಿಹಿಡಿಯುವ ಸಲುವಾಗಿಯೂ ಮಾನನೀಯರಾದ ನನ್ನ ಸಭಾ ಸದರ ಕಡೆಗೂ ಪದೇ-ಪದೇ ನಿನ್ನ ದೃಷ್ಟಿಯನ್ನು ಬೀರುತ್ತಿರುವೆ.

ಸಾ ಸ್ವೇನಾಮರ್ಷಜೇನ ತ್ವಮೃದ್ಧಿಮೋಹೇನ ಮೋಹಿತಾ ।
ಭೂಯಃ ಸೃಜಸಿ ಯೋಗಾಂಸ್ತ್ವಂ ವಿಷಾಮೃತಮಿವೈಕತಾಮ್ ॥೬೮॥

ನೀನು ನಿನ್ನ ಪರೋತ್ಕರ್ಷದ ಅಸಹನೆಯಿಂದ ಹುಟ್ಟಿದ ಯೋಗ ಸಮೃದ್ಧಿಯ ಮೋಹದಿಂದ ವಿಮೋಹಿತಳಾಗಿ –ವಿಷ ಮತ್ತು ಅಮೃತ ಗಳೆರಡನ್ನೂ ಒಂದುಮಾಡಲು ಪ್ರಯತ್ನಿಸುವಂತೆ–ಅಸಹನೆಯಿಂದಲೂ, ವಿಮೋಹದಿಂದಲೂ ಕೂಡಿರುವಳಾಗಿ ಯೋಗಮಾಯೆಗಳನ್ನು ಪುನಃ ಪುನಃ ಸೃಷ್ಟಿಸುತ್ತಿರುವೆ.

(ಯೋಗವು ಅಮೃತವಿದ್ದಂತೆ. ಅಸಹನೆ ಮತ್ತು ಮೋಹಗಳು ವಿಷವಿದ್ದಂತೆ. ಎರಡೂ ಒಂದುಗೂಡಿರಲು ಸಾಧ್ಯವೇ ಇಲ್ಲ. ಆದರೂ ನೀನು ಎರಡನ್ನೂ ಒಂದುಗೂಡಿಸಲು ಪ್ರಯತ್ನಿಸುತ್ತಿರುವಂತೆ ಕಾಣುತ್ತದೆ.)

ಇಚ್ಛತೋರತ್ರ ಯೋ ಲಾಭಃ ಸ್ತ್ರೀಪುಂಸೋರಮೃತೋಪಮಃ ।
ಅಲಾಭಶ್ಚಾಪಿ ರಕ್ತಸ್ಯ ಸೋಽಪಿ ದೋಷೋ ವಿಷೋಪಮಃ ॥೧೯॥

ಸ್ತ್ರೀ-ಪುರುಷರು ಯಾವಾಗ ಪರಸ್ಪರವಾಗಿ ಒಬ್ಬರನ್ನೊಬ್ಬರು ಅಪೇಕ್ಷಿಸುವರೋ–ಆಗ ಉಂಟಾಗುವ ಪರಸ್ಪರಸಮಾಗಮವು ಅಮೃತೋಪಮವಾಗಿರುತ್ತದೆ. (ಆನಂದದಾಯಕವಾಗಿರುತ್ತದೆ.) ಅನುರಕ್ತಳಾದ ಸ್ತ್ರೀಗೆ ಅನುರಕ್ತನಾದ ಪುರುಷನು ಸಿಕ್ಕದಿದ್ದರೆ ಅಂತಹ ದೋಷವು ವಿಷಕ್ಕೆ ಸಮಾನವಾದುದು. (ಅತ್ಯಂತದುಃಖಪ್ರದವಾದುದು.)

ಮಾ ಸ್ಪ್ರಾಕ್ಷೀಃ ಸಾಧು ಜಾನೀಷ್ವ ಸ್ವಶಾಸ್ತ್ರಮನುಪಾಲಯ ।
ಕೃತೇಯಂ ಹಿ ವಿಜಿಜ್ಞಾಸಾ ಮುಕ್ತೋ ನೇತಿ ತ್ವಯಾ ಮಮ ।
ಏತತ್ಸರ್ವಂ ಪ್ರತಿಚ್ಛನ್ನಂ ಮಯಿ ನಾರ್ಹಸಿ ಗೂಹಿತುಮ್ ॥೨೦॥

ಸಂನ್ಯಾಸಿನಿಯೇ! ನನ್ನನ್ನು ಮುಟ್ಟಬೇಡ. ನನ್ನನ್ನು ಉತ್ತಮಚಾರಿತ್ರ್ಯನೆಂದೂ ನಿಷ್ಕಳಂಕನೆಂದೂ ಚೆನ್ನಾಗಿ ತಿಳಿಯುವವಳಾಗು. ನಿನ್ನ ಶಾಸ್ತ್ರವನ್ನು (ಸಂನ್ಯಾಸಧರ್ಮವನ್ನು) ಪರಿಪಾಲಿಸು. ಜನಕರಾಜನು ಮುಕ್ತನಾಗಿರುವನೇ, ಇಲ್ಲವೇ? –ಎಂಬ ಜಿಜ್ಞಾಸೆಯನ್ನು ನೀನು ಮಾಡುತ್ತಿರುವೆ. ಈ ಎಲ್ಲ ಅಭಿಪ್ರಾಯಗಳೂ ನಿನ್ನ ಮನಸ್ಸಿನಲ್ಲಿ ನಿಗೂಢವಾಗಿವೆ. ಈ ವಿಷಯವನ್ನು ನನ್ನಿಂದ ಗೋಪ್ಯವಾಗಿಡುವುದು ನಿನಗೆ ಉಚಿತವಲ್ಲ.

ಸಾ ಯದಿ ತ್ವಂ ಸ್ವಕಾರ್ಯೇಣ ಯದ್ಯನ್ಯಸ್ಯ ಮಹೀಪತೇಃ ।
ತತ್ತ್ವಂ ಸತ್ರಪ್ರತಿಚ್ಛನ್ನಾ ಮಯಿ ನಾರ್ಹಸಿ ಗೂಹಿತುಮ್ ॥೨೧॥

ನೀನು ಸ್ವಕಾರ್ಯಸಿದ್ಧಿಗೇ ಆಗಲೀ, ಬೇರೊಬ್ಬ ರಾಜನ ಕಾರ್ಯಸಿದ್ಧಿಗೇ ಆಗಲೀ –ಹೀಗೆ ವೇಷವನ್ನು ಮರೆಸಿಕೊಂಡು ಬಂದಿರುವೆಯಾದರೆ ಆ ವಿಷಯವನ್ನು ನನ್ನಿಂದ ಮರೆಮಾಚುವುದು ನಿನಗೆ ಉಚಿತವಲ್ಲ.

ನ ರಾಜಾನಂ ವೃಷಾ ಗಚ್ಛೇನ್ನ ದ್ವಿಜಾತಿಂ ಕಥಂಚನ ।
ನ ಸ್ತ್ರಿಯಂ ಸ್ತ್ರಿಗುಣೋಪೇತಾಂ ಹನ್ಯುರ್ಹ್ಯೇತೇ ಮೃಷಾ ಗತಾ ॥

ಯಾವನೇ ಆಗಲೀ –ರಾಜನ ಬಳಿಗೆ ಛದ್ಮವೇಷವನ್ನು ಧರಿಸಿ ಹೋಗಬಾರದು. ಹಾಗೆಯೇ ಬ್ರಾಹ್ಮಣನ ಬಳಿಗೂ ಮತ್ತು ಪತಿವ್ರತೆಯಾದ ಹೆಂಗಸಿನ ಬಳಿಗೂ ಸ್ವರೂಪವನ್ನು ಮರೆಸಿಕೊಂಡು ಹೋಗಬಾರದು. ಹಾಗೇನಾದರೂ ಹೋದರೆ ರಾಜನೂ, ಬ್ರಾಹ್ಮಣನೂ ಮತ್ತು ಸಾಧ್ವಿಯೂ ಛದ್ಮವೇಷಧಾರಿಯನ್ನು ವಿನಾಶಗೊಳಿಸುತ್ತಾರೆ.

ರಾಜ್ಞಾಂ ಹಿ ಬಲಮೈಶ್ವರ್ಯಂ ಬ್ರಹ್ಮ ಬ್ರಹ್ಮವಿದಾಂ ಬಲಮ್ ।
ರೂಪಯೌವನಸೌಭಾಗ್ಯಂ ಸ್ತ್ರೀಣಾಂ ಬಲಮನುತ್ತಮಮ್ ॥೭೩॥

ರಾಜರಿಗೆ ಐಶ್ವರ್ಯವೇ ಬಲವಾಗಿರುತ್ತದೆ. ಬ್ರಾಹ್ಮಣರಿಗೆ ಅಧ್ಯಾತ್ಮ ಜ್ಞಾನವೇ ಅಥವಾ ವೇದವೇ ಬಲವಾಗಿರುತ್ತದೆ. ಸ್ತ್ರೀಯರಿಗೆ ರೂಪ-ಯೌವನ-ಸೌಭಾಗ್ಯಗಳೇ ಉತ್ತಮವಾದ ಬಲವಾಗಿರುತ್ತವೆ.

ಅತ ಏತೈರ್ಬಲೈರೇವ ಬಲಿನಃ ಸ್ವಾರ್ಥಮಿಚ್ಛತಾ ।
ಆರ್ಜವೇನಾಭಿಗನ್ತವ್ಯಾ ವಿನಾಶಾಯ ಹ್ಯನಾರ್ಜವಮ್ ॥೭೪॥

ಹೀಗೆ ರಾಜರೂ, ಬ್ರಾಹ್ಮಣರೂ, ಸಾಧ್ವೀಸ್ತ್ರೀಯರೂ ಕ್ರಮವಾಗಿ ಐಶ್ವರ್ಯ-ವೇದ-ರೂಪ-ಯೌವನಗಳಿಂದಲೇ ಬಲಿಷ್ಠರಾಗಿರುತ್ತಾರೆ. ಇಂತಹವರಿಂದ ಅಭೀಷ್ಟಾರ್ಥಗಳನ್ನು ಪಡೆದುಕೊಳ್ಳಲು ಇಚ್ಛಿಸುವ ಮನುಷ್ಯನು ಋಜುಮಾರ್ಗದಿಂದಲೇ ಅವರ ಬಳಿಗೆ ಹೋಗಬೇಕು. ವಕ್ರಮಾರ್ಗದಿಂದ ವೇಷವನ್ನು ಮರೆಸಿಕೊಂಡು ಹೋಗುವುದು ವಿನಾಶಕ್ಕೆ ಕಾರಣವಾಗುತ್ತದೆ.

ಸಾ ತ್ವಂ ಜಾತಿಂ ಶ್ರುತಂ ವೃತ್ತಂ ಭಾವಂ ಪ್ರಕೃತಿಮಾತ್ಮನಃ ।
ಕೃತ್ಯಮಾಗಮನೇ ಚೈವ ವಕ್ತುಮರ್ಹಸಿ ತತ್ತ್ವತಃ ॥೭೫॥

ಸಂನ್ಯಾಸಿನಿಯೇ! ಆದುದರಿಂದ ನೀನು ನಿನ್ನ ಜಾತಿ, ನೀನು ಕಲಿತಿರುವ ವಿದ್ಯೆ, ನಿನ್ನ ಚಾರಿತ್ರ್ಯ, ನಿನ್ನ ಅಭಿಪ್ರಾಯ, ನಿನ್ನ ಸ್ವಭಾವ, ನೀನು ಇಲ್ಲಿಗೆ ಆಗಮಿಸಿರುವುದರ ಕಾರಣ –ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ತಿಳಿಸುವುದೇ ಸಾಧುವಾಗಿದೆ.”

ಭೀಷ್ಮನು ಹೇಳುತ್ತಾನೆ :

ಇತ್ಯೇತೈರಸುಖೈರ್ವಾಕ್ಯೈರಯುಕ್ತೈರಸಮಞ್ಜಸೈಃ ।
ಪ್ರತ್ಯಾದಿಷ್ಟಾ ನರೇನ್ದ್ರೇಣ ಸುಲಭಾ ನ ವ್ಯಕಮ್ಪತ ॥೭೬॥

ಯುಧಿಷ್ಠಿರ! ಇವೇ ಮುಂತಾದ ದುಃಖಕರವಾದ, ಅಯುಕ್ತವಾದ, ಅಸಮಂಜಸವಾದ ಮಾತುಗಳನ್ನು ರಾಜನು ಸುಲಭೆಗೆ ಹೇಳಿದರೂ ಸುಲಭೆಯು ಸ್ವಲ್ಪವಾದರೂ ವಿಚಲಿತಳಾಗಲಿಲ್ಲ.

ಉಕ್ತವಾಕ್ಯೇ ತು ನೃಪತೌ ಸುಲಭಾ ಚಾರುದರ್ಶನಾ ।
ತತಶ್ಚಾರುತರಂ ವಾಕ್ಯಂ ಪ್ರಚಕ್ರಾಮಾಥ ಭಾಷಿತುಮ್ ॥೭೭॥

ಜನಕರಾಜನು ಮಾತನ್ನು ಮುಗಿಸಿದನಂತರ –ದೃಷ್ಟಿಗೆ ರಮಣೀಯಳಾಗಿದ್ದ ಸುಲಭೆಯು ಅದಕ್ಕಿಂತಲೂ ಹೆಚ್ಚು ರಮಣೀಯವಾದ ವಾಕ್ಯಗಳನ್ನು ಹೇಳಲು ಆರಂಭಿಸಿದಳು :

ನವಭಿರ್ನವಭಿಶ್ಚೈವ ದೋಷೈರ್ವಾಗ್ಬುದ್ಧಿದೂಷಣೈಃ ।
ಅಪೇತಮುಪಪನ್ನಾರ್ಥಮಷ್ಟಾದಶಗುಣಾನ್ವಿತಮ್ ॥೭೮॥

ಸೌಕ್ಷ್ಮ್ಯಂ ಸಾಂಖ್ಯಕ್ರಮೌ ಚೋಭೌ ನಿರ್ಣಯಃ ಸಪ್ರಯೋಜನಃ ।
ಪಞ್ಚೈತಾನ್ಯರ್ಥಜಾತಾನಿ ವಾಕ್ಯಮಿತ್ಯುಚ್ಯತೇ ನೃಪ ॥೭೯॥

“ರಾಜನೇ! ಕಠೋರಶಬ್ದಗಳಿಂದ ಯುಕ್ತವಾದ ಒಂಬತ್ತು ವಿಧವಾದ ವಾಗ್ದೋಷಗಳಿಂದಲೂ, ಕಾಮ-ಕ್ರೋಧಗಳೇ ಮೊದಲಾದ ಒಂಬತ್ತು ವಿಧವಾದ ಬುದ್ಧಿದೋಷಗಳಿಂದಲೂ ರಹಿತವಾದ, ಮಧುರಾಕ್ಷರ ಸಂಯುಕ್ತವಾದ ಒಂಬತ್ತು ವಿಧವಾದ ವಾಗ್ಗುಣಗಳಿಂದಲೂ, ದಯೆ–ಋಜುತ್ವಾದಿಯಾದ ಒಂಬತ್ತು ವಿಧವಾದ ಬುದ್ಧಿಗುಣಗಳಿಂದಲೂ ಯುಕ್ತವಾದ, ಯುಕ್ತಿಸಂಗತವಾದ, ಅರ್ಥಯುಕ್ತವಾದ ಸೌಕ್ಷ್ಮ್ಯ,* ಸಾಂಖ್ಯ, ಕ್ರಮ, ನಿರ್ಣಯ ಮತ್ತು ಪ್ರಯೋಜನ –ಈ ಐದು ಪ್ರಕಾರವಾದ ಗುಣಗಳಿಂದ ಯುಕ್ತವಾದ ಪದಗಳ ಸಮೂಹಕ್ಕೆ ವಾಕ್ಯವೆನ್ನುತ್ತಾರೆ.

---

* ಸೌಕ್ಷ್ಮ್ಯಾದಿಗಳಿಗೆ ವ್ಯಾಖ್ಯಾನಕಾರರು ಹೀಗೆ ವಿವರಣೆಯನ್ನು ಕೊಟ್ಟಿರುತ್ತಾರೆ : ಸೌಕ್ಷ್ಮ್ಯಂ – ಸಂಶಯಸ್ಯ ವಿಷಯೀಭೂತಂ ಪದಾದಿಸಂದಿಗ್ಧಾರ್ಥತ್ವಂ =

ಏಷಾಮೇಕೈಕಶೋಽರ್ಥಾನಾಂ ಸೌಕ್ಷ್ಮ್ಯಾದೀನಾಂ ಸ್ವಲಕ್ಷಣಮ್
ಶೃಣು ಸಂಸಾರ್ಯಮಾಣಾನಾಂ ಪದಾರ್ಥಪದವಾಕ್ಯತಃ ॥೮೦॥

ಈ ಸೌಕ್ಷ್ಮ್ಯಾದಿಗಳಲ್ಲಿ ಒಂದೊಂದಕ್ಕೂ ಯಾವ ಯಾವ ಅರ್ಥಗಳಿವೆಯೋ ಅವುಗಳು ಪದ, ವಾಕ್ಯ, ಪದಾರ್ಥ ಮತ್ತು ವಾಕ್ಯಾರ್ಥ–ಎಂಬ ನಾಲ್ಕು ವಿಧವಾದ ವಿಷಯಭೇದಗಳಿಂದ ವಿವರಿಸಲ್ಪಟ್ಟಿವೆ. ಇವುಗಳಲ್ಲಿನ ಪ್ರತಿಯೊಂದರ ಲಕ್ಷಣಗಳನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಹೇಳುವೆನು, ಕೇಳು.

ಜ್ಞಾನಂ ಜ್ಞೇಯೇಷು ಭಿನ್ನೇಷು ಯದಾ ಭೇದೇನ ವರ್ತತೇ ।
ತತ್ರಾತಿಶಾಯಿನೀ ಬುದ್ಧಿಸ್ತತ್ಸೌಕ್ಷ್ಮ್ಯಮಿತಿ ವರ್ತತೇ ॥೮೧॥

ವಾಕ್ಯಾರ್ಥಗಳನ್ನು ತಿಳಿಯಬೇಕಾಗಿರುವಾಗ ಆ ವಾಕ್ಯಕ್ಕೆ ಭಿನ್ನ-ಭಿನ್ನವಾದ ಅರ್ಥಗಳಿರಲಾಗಿ ಜ್ಞಾನವೂ ಭಿನ್ನ-ಭಿನ್ನವಾಗಿಯೇ ಇರುತ್ತದೆ. (ವಾಕ್ಯಕ್ಕೆ ನಿರ್ದಿಷ್ಟವಾದ ಅರ್ಥವಾಗದಿದ್ದರೆ ನಿರ್ದಿಷ್ಟವಾದ ಜ್ಞಾನವೂ ಲಭ್ಯವಾಗುವುದಿಲ್ಲ.) ಆ ಸಮಯದಲ್ಲಿ ಶ್ರೇಷ್ಠವಾದ ಬುದ್ಧಿಯೇ ವಾಕ್ಯದ ಅರ್ಥವನ್ನು ನಿರ್ಣಯಿಸುತ್ತದೆ. ಅಂತಹ ಬುದ್ಧಿಯು 'ಸೌಕ್ಷ್ಮ್ಯ' ಎಂಬ ಸಂಜ್ಞೆಯಿಂದ ವ್ಯವಹರಿಸಲ್ಪಡುತ್ತದೆ.

ದೋಷಾಣಾಂ ಚ ಗುಣಾನಾಂ ಚ ಪ್ರಮಾಣಂ ಪ್ರವಿಭಾಗತಃ ।
ಕಂಚಿದರ್ಥಮಭಿಪ್ರೇತ್ಯ ಸಾ ಸಂಖ್ಯೇತ್ಯುಪಧಾರ್ಯತಾಮ್ ॥೮೨॥

ವಾಕ್ಯಕ್ಕೆ ಯಾವುದೋ ಅಭೀಷ್ಟವಾದ ಅರ್ಥವನ್ನು ಅಂಗೀಕರಿಸಿ ಆ ಅರ್ಥದ ದೋಷಗಳ ಮತ್ತು ಗುಣಗಳ ಪ್ರಮಾಣವನ್ನು ವಿಭಾಗ ಪೂರ್ವಕವಾಗಿ ಎಣಿಸುವುದಕ್ಕೆ ಸಂಖ್ಯಾ ಅಥವಾ ಸಾಂಖ್ಯ ಎಂದು ಹೆಸರು.

ಸಂಶಯಕ್ಕೆ ವಿಷಯೀಭೂತವಾದ ಸಂದಿಗ್ಧಾರ್ಥವುಳ್ಳ ಪದಗಳು. ಸಾಂಖ್ಯಂ–ಪೂರ್ವಪಕ್ಷೇ ಸಿದ್ಧಾಂತೇ ಚ ಗುಣದೋಷಸಂಖ್ಯಾನಂ = ಪೂರ್ವಪಕ್ಷ ಮತ್ತು ಸಿದ್ಧಾಂತಗಳಲ್ಲಿರುವ ಗುಣದೋಷಗಳ ಗಣನೆ. ಕ್ರಮಃ–ಸಂಖ್ಯಾತಾನಾಂ ಗುಣದೋಷಾಣಾಂ ಬಲಾಬಲ ವಿಚಾರಣಮ್ = ಸಂಖ್ಯಾತವಾದ ಗುಣದೋಷಗಳ ಬಲಾಬಲಪರಾಮರ್ಶೆ. ನಿರ್ಣಯಃ–ಸಿದ್ಧಾಂತ. ಪ್ರಯೋಜನಂ–ಅನುಷ್ಠಾನ.

ಇದಂ ಪೂರ್ವಮಿದಂ ಪಶ್ಚಾದ್ವಕ್ತವ್ಯಂ ಯದ್ವಿವಕ್ಷಿತಮ್ ।
ಕ್ರಮಯೋಗಂ ತಮಪ್ಯಾಹುರ್ವಾಕ್ಯಂ ವಾಕ್ಯವಿದೋ ಜನಾಃ ॥೮೩॥

ಹೀಗೆ ಗುಣ-ದೋಷಗಳನ್ನು ವಿವೇಚಿಸಿ ಗಣನೆಮಾಡಿದ ಬಳಿಕ– 'ಇದನ್ನು ಮೊದಲು ಹೇಳಬೇಕು ; ಇದನ್ನು ಅನಂತರ ಹೇಳಬೇಕು'– ಎಂದು ನಿರ್ಣಯಿಸಿ ಹೇಳುವುದಕ್ಕೆ ಕ್ರಮಯೋಗವೆಂದು ಹೆಸರು. ವಾಕ್ಯಕ್ರಮವನ್ನು ತಿಳಿದ ವಿದ್ವಾಂಸರು ಇಂತಹ ವಾಕ್ಯವನ್ನು ಕ್ರಮವಾಕ್ಯವೆಂದು ಹೇಳುತ್ತಾರೆ.

ಧರ್ಮಕಾಮಾರ್ಥಮೋಕ್ಷೇಷು ಪ್ರತಿಜ್ಞಾಯ ವಿಶೇಷತಃ ।
ಇದಂ ತದಿತಿ ವಾಕ್ಯಾನ್ತೇ ಪ್ರೋಚ್ಯತೇ ಸ ವಿನಿರ್ಣಯಃ ॥೮೪॥

ಧರ್ಮ-ಕಾಮಾರ್ಥ-ಮೋಕ್ಷಗಳಲ್ಲಿ ಯಾವುದನ್ನಾದರೂ ವಿಶೇಷವಾಗಿ ಪ್ರತಿಪಾದಿಸಿ –'ಇದೇ ಆ ಅಭೀಷ್ಟವಿಷಯವಾಗಿದೆ'–ಎಂದು ವಾಕ್ಯದ ಕಡೆಯಲ್ಲಿ ಹೇಳುವುದಕ್ಕೆ 'ನಿರ್ಣಯ' ವೆಂದು ಹೆಸರು.

ಇಚ್ಛಾದ್ವೇಷಭವೈರ್ದುಃಖೈಃ ಪ್ರಕರ್ಷೋ ಯತ್ರ ಜಾಯತೇ ।
ತತ್ರ ಯಾ ನೃಪತೇ ವೃತ್ತಿಸ್ತತ್ಪ್ರಯೋಜನಮಿಷ್ಯತೇ ॥೮೫॥

ಇಚ್ಛಾ-ದ್ವೇಷಗಳಿಂದ ಉಂಟಾಗುವ ದುಃಖಗಳ ಮೂಲಕ ಎಲ್ಲಿ ಹೆಚ್ಚಿನ ಪೀಡೆಯು ಉಂಟಾಗುವುದೋ, ಆ ಸಮಯದಲ್ಲಿ ಮನುಷ್ಯನು ಅದನ್ನು ಪರಿಹರಿಸಿಕೊಳ್ಳಲು ಯಾವ ವೃತ್ತಿಯನ್ನು ಅವಲಂಬಿಸುವನೋ – ಅದಕ್ಕೆ ಪ್ರಯೋಜನವೆಂದು ಹೆಸರು.

ತಾನ್ಯೇತಾನಿ ಯಥೋಕ್ತಾನಿ ಸೌಕ್ಷ್ಮ್ಯಾದೀನಿ ಜನಾಧಿಪ ।
ಏಕಾರ್ಥಸಮವೇತಾನಿ ವಾಕ್ಯಂ ಮಮ ನಿಶಾಮಯ ॥೮೬॥

ಜನೇಶ್ವರ! ಯಾವ ವಾಕ್ಯದಲ್ಲಿ ಹಿಂದೆ ಹೇಳಿದ ಸೌಕ್ಷ್ಮ್ಯಾದಿ ಗುಣಗಳು ಒಂದೇ ಅರ್ಥದಲ್ಲಿ ಸಮಾವೇಶಗೊಂಡಿವೆಯೋ–ಅಂತಹ ನನ್ನ ವಾಕ್ಯವನ್ನು ಕೇಳು.

ಉಪೇತಾರ್ಥಮಭಿನ್ನಾರ್ಥಂ ನ್ಯಾಯವೃತ್ತಂ ನ ಚಾಧಿಕಮ್ ।
ನಾಶ್ಲಕ್ಷ್ಣಂ ನ ಚ ಸಂದಿಗ್ಧಂ ವಕ್ಷ್ಯಾಮಿ ಪರಮಂ ತತಃ ॥೮೭॥

ನಾನು ಅರ್ಥಸಹಿತವಾದ, ಅರ್ಥಭೇದವಿಲ್ಲದಿರುವ (ನಾನಾರ್ಥಗಳಿಲ್ಲದಿರುವ), ನ್ಯಾಯಯುಕ್ತವಾದ (ಶ್ಲಾಘ್ಯವಾದ ವಿಶೇಷಣಗಳಿಂದ ಕೂಡಿರುವ), ಅವಶ್ಯವಾಗಿರುವುದಕ್ಕಿಂತಲೂ ಸ್ವಲ್ಪವಾದರೂ ಅಧಿಕವಾಗಿಲ್ಲದ (ಸಂಕ್ಷಿಪ್ತವಾದ), ಶ್ರುತಿಕಟುವಲ್ಲದ (ಮೃದುವಾದ), ಸಂದೇಹರಹಿತವಾದ, ಪರಮಶ್ರೇಷ್ಠವಾದ ವಾಕ್ಯಗಳನ್ನೇ ಹೇಳುತ್ತೇನೆ.

ನ ಗುರ್ವಕ್ಷರಸಂಯುಕ್ತಂ ಪರಾಙ್ಮುಖಸುಖಂ ನ ಚ ।
ನಾನೃತಂ ನ ತ್ರಿವರ್ಗೇಣ ವಿರುದ್ಧಂ ನಾಪ್ಯಸಂಸ್ಕೃತಮ್ ॥೮೮॥

ನಾನು ಹೇಳುವ ವಾಕ್ಯಗಳು[೧] ಕಠಿನವಾದ ಅಕ್ಷರಗಳಿಂದ ಕೂಡಿರುವುದಿಲ್ಲ. ಸುಕೋಮಲವಾದ ಪದಜಾಲಗಳಿಂದ ಕೂಡಿರುತ್ತವೆ. ಪರಾಙ್ಮುಖನಾದವನಿಗೆ (ಅಂತರ್ಮುಖನಲ್ಲದವನಿಗೆ) ಸುಖವನ್ನುಂಟುಮಾಡುವುದಿಲ್ಲ. (ನಾನು ಹೇಳುವ ಮಾತು ಗ್ರಾಮ್ಯವಾಗಿರುವುದಿಲ್ಲ.)[೨] ಅನೃತದಿಂದ ಕೂಡಿರುವುದಿಲ್ಲ. ಧರ್ಮಾರ್ಥ-ಕಾಮಗಳೆಂಬ ತ್ರಿವರ್ಗಕ್ಕೆ ವಿರೋಧವಾಗಿರುವುದಿಲ್ಲ. ನಾನು ಹೇಳಲಿರುವ ವಾಕ್ಯಗಳು ಸಂಸ್ಕಾರಶೂನ್ಯವೂ ಆಗಿರುವುದಿಲ್ಲ.[೩]

ನ ನ್ಯೂನಂ ಕಷ್ಟಶಬ್ದಂ ವಾ ವಿಕ್ರಮಾಭಿಹಿತಂ ನ ಚ ।
ನ ಶೇಷಮನುಕಲ್ಪೇನ ನಿಷ್ಕಾರಣಮಹೇತುಕಮ್ ॥೮೯॥

ನಾನು ಹೇಳಲಿರುವ ವಾಕ್ಯಗಳಲ್ಲಿ ನ್ಯೂನಪದತ್ವವೆಂಬ ದೋಷವಿರುವುದಿಲ್ಲ. ಕಷ್ಟಕರ*ವಾದ (ಕ್ಲಿಷ್ಟವಾದ) ಶಬ್ದಗಳ ಪ್ರಯೋಗವಿರುವುದಿಲ್ಲ.

---

೧ 'ಶುಷ್ಕೋ ವೃಕ್ಷಸ್ತಿಷ್ಠತ್ಯಗ್ರೇ'–ಎಂಬ ವಾಕ್ಯವನ್ನು ಗುರ್ವಕ್ಷರಯುಕ್ತವಾದ ವಾಕ್ಯಕ್ಕೆ ಉದಾಹರಣೆಯಾಗಿ ವ್ಯಾಖ್ಯಾನಕಾರರು ಹೇಳಿದ್ದಾರೆ.

೨ ಅಶ್ಲೀಲಾಮಙ್ಗಲಘೃಣಾವದರ್ಥಂ ಗ್ರಾಮ್ಯಂ-ಅಶ್ಲೀಲವಾದುದು, ಅಮಂಗಲವಾದುದು, ಅಸಹ್ಯವಾದ ಪದಗಳಿಂದ ಕೂಡಿರುವುದು ಗ್ರಾಮ್ಯ.

೩ ಸಂಸ್ಕಾರಶೂನ್ಯವಾಗಿರುವುದಕ್ಕೆ ವ್ಯಾಖ್ಯಾನಕಾರರು ಒಂದು ಶ್ಲೋಕವನ್ನು ಉದಾಹರಿಸಿದ್ದಾರೆ. ಗಲ್ಲೌ ಲಾವಣ್ಯತಲ್ಲೌ ತೇ ಲಡಹೌ ಮಡಹೌ ಭುಜೌ । ನೇತ್ರೇ ಸೇವಾಟ್ಟಕಂ ದೋಟ್ಟ ಮೋಟ್ಟಾಯಿತ ಸಖೇ ಸಖಿ ॥

* ದೂರಂ ಯಸ್ಯಾರ್ಥಸಂವೃತ್ತಿಃ ಕ್ಲಿಷ್ಟಂ ನೇಷ್ಟಂ ಹಿ ತತ್ಸತಾಮ್ ॥ ಯಾವ

ಕ್ರಮತಪ್ಪಿ ಹೇಳುವುದಿಲ್ಲ. ನಾನು ಹೇಳುವ ವಾಕ್ಯಗಳಲ್ಲಿ ಇತರ ಯಾವ ಪದಗಳನ್ನೂ ಅಧ್ಯಾಹಾರಮಾಡಿಕೊಳ್ಳಬೇಕಾಗುವುದಿಲ್ಲ. ಆ ವಾಕ್ಯವು ನಿಷ್ಪ್ರಯೋಜಕವಾಗಿಯೂ ಇರುವುದಿಲ್ಲ. ನಿಷ್ಕಾರಣವಾಗಿಯೂ ಯುಕ್ತಿ ಶೂನ್ಯವಾಗಿಯೂ ಇರುವುದಿಲ್ಲ.

ಕಾಮಾತ್ಕ್ರೋಧಾದ್ಭಯಾಲ್ಲೋಭಾದ್ದೈನ್ಯಾಚ್ಚಾನಾರ್ಯಕಾತ್ತಥಾ ।
ಹ್ರೀತೋಽನುಕ್ರೋಶತೋ ಮಾನಾನ್ನ ವಕ್ಷ್ಯಾಮಿ ಕಥಂಚನ ॥೯೦॥

ಕಾಮದಿಂದಾಗಲೀ, ಕ್ರೋಧದಿಂದಾಗಲೀ, ಲೋಭದಿಂದಾಗಲೀ, ದೈನ್ಯದಿಂದಾಗಲೀ, ಅನಾರ್ಯತ್ವದಿಂದಾಗಲೀ (ದರ್ಪದಿಂದಾಗಲೀ), ಲಜ್ಜೆಯಿಂದಾಗಲೀ, ದಯೆಯಿಂದಾಗಲೀ, ಸ್ವಾಭಿಮಾನದಿಂದಾಗಲೀ– ಯಾವ ಮಾತನ್ನೂ ಹೇಳುವುದಿಲ್ಲ.

ವಕ್ತಾ ಶ್ರೋತಾ ಚ ವಾಕ್ಯಂ ಚ ಯದಾ ತ್ವವಿಕಲಂ ನೃಪ ।
ಸಮಮೇತಿ ವಿವಕ್ಷಾಯಾಂ ತದಾ ಸೋಽರ್ಥಃ ಪ್ರಕಾಶತೇ ॥೯೧॥

ಮಾತನಾಡಲು ಇಚ್ಛೆಯುಂಟಾದಾಗ ಮಾತನಾಡುವವನು, ಕೇಳುವವನು ಮತ್ತು ಮಾತು –ಈ ಮೂರೂ ನ್ಯೂನಾತಿರೇಕವಿಲ್ಲದೇ ಸಮತ್ವವನ್ನು ಹೊಂದಿರುವುದಾದರೆ (ಹೇಳುವವನೂ–ಕೇಳುವವನೂ ಏಕಾಗ್ರಚಿತ್ತರಾಗಿದ್ದು ಮಾತು ಕೂಡ ನಿರ್ದುಷ್ಟವಾಗಿರುವುದಾದರೆ)–ಆಗ ವಾಕ್ಯದ ಅರ್ಥವು ಪ್ರಕಾಶಿಸುತ್ತದೆ. (ಕೇಳುವವನಿಗೆ ವಾಕ್ಯದ ಅರ್ಥವು ಸ್ಪಷ್ಟವಾಗಿ ತಿಳಿಯುತ್ತದೆ.)

ವಾಕ್ಯದ ಅರ್ಥವು ಅತಿದೂರವಾಗಿರುತ್ತದೆಯೋ ಸುಲಭವಾಗಿರುವುದಿಲ್ಲವೋ–ಅದಕ್ಕೆ ಕ್ಲಿಷ್ಟವೆಂದು ಹೆಸರು. ಇಂತಹ ಪದಪ್ರಯೋಗವು ಸತ್ಪುರುಷರಿಗೆ ಇಷ್ಟವಾಗುವುದಿಲ್ಲ. ವಿಜಿತಾತ್ಮಭವದ್ವೇಷೀ -ಎಂಬ ಸಮಸ್ತಪದವನ್ನು ಕ್ಲಿಷ್ಟಪದಗಳ ಪ್ರಯೋಗಕ್ಕೆ ಉದಾಹರಿಸಿದ್ದಾರೆ. ವಿನಾ = **ಗರುತ್ಮತಾ**, ಜಿತಃ = ಇಂದ್ರಃ ತಸ್ಯ ಆತ್ಮ ಭವಃ = ಅರ್ಜುನಃ, ತಸ್ಯ ದ್ವೇಷೀ = ಕರ್ಣಃ–ಗರುಡನಿಂದ ಜಯಿಸಲ್ಪಟ್ಟ ಇಂದ್ರನ ಮಗನಾದ ಅರ್ಜುನನ ಶತ್ರುವಾದ ಕರ್ಣ.

ವಕ್ತವ್ಯೇ ತು ಯದಾ ವಕ್ತಾ ಶ್ರೋತಾರಮವಮನ್ಯ ವೈ ।
ಸ್ವಾರ್ಥಮಾಹ ಪರಾರ್ಥಂ ತತ್ತದಾ ವಾಕ್ಯಂ ನ ರೋಹತಿ ॥೯೨॥

ಮಾತನಾಡುವವನು-ತಾನು ಮಾತನಾಡುವಾಗ ಕೇಳುವವನನ್ನು ಅವಮಾನಿಸಿ ತನ್ನ ಅಭಿಪ್ರಾಯವನ್ನು ಮತ್ತೊಬ್ಬನ ಅಭಿಪ್ರಾಯವೆಂದು ಬಗೆದು ಹೇಳಿದರೆ-ಅವನ ಅಭಿಪ್ರಾಯವು ಮತ್ತೊಬ್ಬನಲ್ಲಿ ಉದ್ದಿಷ್ಟವಾದ ಪ್ರತಿಕ್ರಿಯೆಯನ್ನು ಉಂಟುಮಾಡುವುದಿಲ್ಲ (ಆ ವಾಕ್ಯವು ಬೆಳೆಯುವುದಿಲ್ಲ.)

ಅಥ ಯಃ ಸ್ವಾರ್ಥಮುತ್ಸೃಜ್ಯ ಪರಾರ್ಥಂ ಪ್ರಾಹ ಮಾನವಃ ।
ವಿಶಙ್ಕಾ ಜಾಯತೇ ತಸ್ಮಿನ್ವಾಕ್ಯಂ ತದಪಿ ದೋಷವತ್ ॥೯೩॥

ಯಾವ ಮಾನವನು ಸ್ವಾಭಿಪ್ರಾಯವನ್ನೇ ಹೇಳದೇ ಇತರರು ಹೇಳಿದುದನ್ನೇ ಹೇಳುವನೋ-ಅಂತಹವನ ಮಾತಿನ ವಿಷಯದಲ್ಲಿಯೂ ಶ್ರೋತೃವಿಗೆ ವಿಶೇಷವಾದ ಸಂದೇಹವೇ ಉಂಟಾಗುತ್ತದೆ. ಆದುದರಿಂದ ಹಾಗೆ ಹೇಳುವ ಮಾತೂ ದೋಷಯುಕ್ತವೇ ಆಗುತ್ತದೆ.

ಯಸ್ತು ವಕ್ತಾ ದ್ವಯೋರರ್ಥಮವಿರುದ್ಧಂ ಪ್ರಭಾಷತೇ ।
ಶ್ರೋತುಶ್ಚೈವಾತ್ಮನಶ್ಚೈವ ಸ ವಕ್ತಾ ನೇತರೋ ನೃಪ ॥೯೪॥

ತನ್ನ ಅಭಿಪ್ರಾಯ ಮತ್ತು ಶ್ರೋತೃವಿನ ಅಭಿಪ್ರಾಯ –ಎರಡಕ್ಕೂ ವಿರೋಧವು ಬರದಂತೆ ಹೊಂದುವ ರೀತಿಯಲ್ಲಿ ಮಾತನಾಡುವವನೇ ನಿಜವಾದ ವಾಗ್ಮಿಯು. ಬೇರೆಯವನಲ್ಲ.

ತದರ್ಥವದಿದಂ ವಾಕ್ಯಮುಪೇತಂ ವಾಕ್ಯಸಮ್ಪದಾ ।
ಅವಿಕ್ಷಿಪ್ತಮನಾ ರಾಜನ್ನೇಕಾಗ್ರಃ ಶ್ರೋತುಮರ್ಹಸಿ ॥೯೫॥

ಮಹಾರಾಜ! ಆದುದರಿಂದ ಅಂತಹ ವಾಕ್ಯಗಳೆಂಬ ಸಂಪತ್ತಿನಿಂದ ಕೂಡಿರುವ ಅರ್ಥವತ್ತಾದ ನನ್ನ ಮಾತನ್ನು ತಿರಸ್ಕಾರದ ಮನಸ್ಸಿನವನಾಗದೇ ಏಕಾಗ್ರಚಿತ್ತನಾಗಿ ನೀನು ಕೇಳಬೇಕು.

ಕಾಸಿ ಕಸ್ಯ ಕುತಶ್ಚೇತಿ ತ್ವಯಾಹಮಭಿಚೋದಿತಾ ।
ತತ್ರೋತ್ತರಮಿದಂ ವಾಕ್ಯಂ ರಾಜನ್ನೇಕಮನಾಃ ಶೃಣು ॥೯೬॥

'ನೀನು ಯಾರು? ಯಾರವಳು? ಎಲ್ಲಿಂದ ಬಂದೆ?'-ಎಂದು

ನನ್ನನ್ನು ಪ್ರಶ್ನಿಸಿದೆ. ಇದಕ್ಕೆ ಉತ್ತರವಾಗಿ ನಾನು ಹೇಳಲಿರುವುದನ್ನು ಏಕಾಗ್ರಚಿತ್ತನಾಗಿ ಕೇಳು.

ಯಥಾ ಜತು ಚ ಕಾಷ್ಠಂ ಚ ಪಾಂಸವಶ್ಚೋದಬಿನ್ದವಃ ।
ಸಂಶ್ಲಿಷ್ಟಾನಿ ತಥಾ ರಾಜನ್ಪ್ರಾಣಿನಾಮಿಹ ಸಮ್ಭವಃ ॥೯೭॥

ಯಾವ ರೀತಿಯಲ್ಲಿ ಅರಗು ಮತ್ತು ಕಡ್ಡಿಗಳು ಸೇರಿರುವುವೋ ಧೂಳು ಮತ್ತು ನೀರಿನ ತೊಟ್ಟುಗಳು ಸೇರಿರುವುವೋ–ಅದೇ ರೀತಿಯಲ್ಲಿ ಈ ಜಗತ್ತಿನಲ್ಲಿ ತತ್ತ್ವಗಳ ಸೇರುವಿಕೆಯಿಂದ ಪ್ರಾಣಿಗಳ ಉತ್ಪತ್ತಿಯಾಗುತ್ತದೆ.

ಶಬ್ದಃ ಸ್ಪರ್ಶೋ ರಸೋ ರೂಪಂ ಗನ್ಧಃ ಪಞ್ಚೇನ್ದ್ರಿಯಾಣಿ ಚ ।
ಪೃಥಗಾತ್ಮಾನ ಆತ್ಮಾನಂ ಸಂಶ್ಲಿಷ್ಟಾ ಜತುಕಾಷ್ಠವತ್ ।
ನ ಚೈಷಾಂ ಚೋದನಾ ಕಾಚಿದಸ್ತೀತ್ಯೇವ ವಿನಿಶ್ಚಯಃ ॥೯೮॥

ಶಬ್ದ, ಸ್ಪರ್ಶ, ರಸ, ರೂಪ, ಗಂಧಗಳೂ ಮತ್ತು ಪಂಚೇಂದ್ರಿಯಗಳೂ ಆತ್ಮಕ್ಕಿಂತಲೂ ಪ್ರತ್ಯೇಕವಾಗಿದ್ದರೂ–ಅರಗು ಕಡ್ಡಿಯೊಳಗೆ ಸೇರಿಕೊಂಡಿರುವಂತೆ ಆತ್ಮದೊಡನೆ ಸೇರಿಕೊಂಡಿವೆ. ಆದರೆ ಶಬ್ದ-ಸ್ಪರ್ಶ-ರೂಪ-ರಸ-ಗಂಧಗಳಿಗಾಗಲೀ, ಇಂದ್ರಿಯಗಳಿಗಾಗಲೀ ಸ್ವತಂತ್ರವಾಗಿ (ಆತ್ಮವನ್ನು) ಪ್ರಚೋದಿಸುವ ಯಾವ ಶಕ್ತಿಯೂ ಇರುವುದಿಲ್ಲ–ಎಂಬುದು ವಿದ್ವಾಂಸರ ಸಿದ್ಧಾಂತವಾಗಿದೆ.

ಏಕೈಕಸ್ಯೇಹ ವಿಜ್ಞಾನಂ ನಾಸ್ತ್ಯಾತ್ಮನಿ ತಥಾ ಪರೇ ।
ನ ವೇದ ಚಕ್ಷುಶ್ಚಕ್ಷುಷ್ಟಂ ಶ್ರೋತ್ರಂ ನಾತ್ಮನಿ ವರ್ತತೇ ॥೯೯॥

ಈ ಐದು ಇಂದ್ರಿಯಗಳಲ್ಲಿ ಒಂದೊಂದಕ್ಕೂ ತಾನು ಯಾರೆಂಬ ಜ್ಞಾನವಾಗಲೀ–ಇತರರ ಜ್ಞಾನವಾಗಲೀ ಇರುವುದಿಲ್ಲ. ಕಣ್ಣಿಗೆ ತನಗೆ ನೋಡುವ ಶಕ್ತಿಯಿದೆಯೆಂಬುದು ತಿಳಿದಿರುವುದಿಲ್ಲ. ಕಿವಿಗೆ ತನಗೆ ಕೇಳುವ ಶಕ್ತಿಯಿದೆಯೆಂಬುದು ತಿಳಿದಿರುವುದಿಲ್ಲ.

ತಥೈವ ವ್ಯಭಿಚಾರೇಣ ನ ವರ್ತನ್ತೇ ಪರಸ್ಪರಮ್ ।
ಪುಶ್ಲಿಷ್ಟಂ ಚ ನ ಜಾನನ್ತಿ ಯಥಾಪ ಇವ ಪಾಂಸವಃ ॥೧೦೦॥

ಹೇಗೆ ನೀರು ಮತ್ತು ಧೂಳು ಪರಸ್ಪರವಾಗಿ ಬೆರೆತುಕೊಂಡಿದ್ದರೂ ನೀರಿನ ಗುಣವನ್ನು ಧೂಳಾಗಲೀ, ಧೂಳಿನ ಗುಣವನ್ನು ನೀರಾಗಲೀ ಅರಿತಿರುವುದಿಲ್ಲವೋ–ಅದೇ ರೀತಿಯಲ್ಲಿ ಇಂದ್ರಿಯಗಳೂ ಮತ್ತು ವಿಷಯಗಳೂ ಪರಸ್ಪರವಾಗಿ ಬೆರೆತುಕೊಂಡಿದ್ದರೂ ವಿಷಯಸುಖವನ್ನು ಇಂದ್ರಿಯಗಳಾಗಲೀ–ಇಂದ್ರಿಯಗಳ ಸ್ವರೂಪವನ್ನು ವಿಷಯಗಳಾಗಲೀ ತಿಳಿದುಕೊಂಡಿರುವುದಿಲ್ಲ.

ಬಾಹ್ಯಾನನ್ಯಾನಪೇಕ್ಷನ್ತೇ ಗುಣಾಂಸ್ತಾನಪಿ ಮೇ ಶೃಣು ।
ರೂಪಂ ಚಕ್ಷುಃ ಪ್ರಕಾಶಶ್ಚ ದರ್ಶನೇ ಹೇತವಸ್ತ್ರಯಃ ॥೧೦೧॥

ಶರೀರಸ್ಥವಾಗಿರುವ ಇಂದ್ರಿಯಗಳು ವಿಷಯಾನುಭವವನ್ನು ಪಡೆಯುವ ಸಮಯದಲ್ಲಿ ಇತರ ಬಾಹ್ಯಗುಣಗಳನ್ನೂ ಅಪೇಕ್ಷಿಸುತ್ತವೆ. ಆ ಗುಣಗಳು ಯಾವುವೆಂಬುದನ್ನು ಹೇಳುವೆನು ; ಕೇಳು. ದರ್ಶನದಲ್ಲಿ ರೂಪ, ಕಣ್ಣು ಮತ್ತು ಪ್ರಕಾಶ – ಈ ಮೂರೂ ಕಾರಣಗಳಾಗಿರುತ್ತವೆ.

ಯಥೈವಾತ್ರ ತಥಾನ್ಯೇಷು ಜ್ಞಾನಜ್ಞೇಯೇಷು ಹೇತವಃ ।
ಜ್ಞಾನಜ್ಞೇಯಾನ್ತರೇ ತಸ್ಮಿನ್ಮನೋ ನಾಮಾಪರೋ ಗುಣಃ ॥೧೦೨॥

ವಿಚಾರಯತಿ ಯೇನಾಯಂ ನಿಶ್ಚಯೇ ಸಾಧ್ವಸಾಧುನೀ ॥೧೦೩॥

ಯಾವ ರೀತಿಯಲ್ಲಿ ದರ್ಶನದಲ್ಲಿ ಮೂರು ಕಾರಣಗಳಿರುತ್ತವೆಯೋ–ಅದೇ ರೀತಿಯಲ್ಲಿ ಬೇರೆಯ ಜ್ಞಾನ-ಜ್ಞೇಯಗಳಲ್ಲಿಯೂ ಮೂರು ವಿಧವಾದ ಕಾರಣಗಳಿರುತ್ತವೆ. ಜ್ಞಾನ ಮತ್ತು ಜ್ಞೇಯಗಳ ಮಧ್ಯದಲ್ಲಿ ಮನಸ್ಸೆಂಬ ಮತ್ತೊಂದು ಗುಣವೂ ಇದೆ. ಜೀವಾತ್ಮವು ಯಾವುದಾದರೂ ಕಾರ್ಯವು ಸಾಧುವೇ ಅಸಾಧುವೇ?–ಎಂಬುದನ್ನು ಮನಸ್ಸಿನಿಂದ ವಿಚಾರಮಾಡಿ ನಿಶ್ಚಯಿಸುತ್ತದೆ.

ದ್ವಾದಶಸ್ತ್ವಪರಸ್ತತ್ರ ಬುದ್ಧಿರ್ನಾಮ ಗುಣಃ ಸ್ಮೃತಃ ।
ಯೇನ ಸಂಶಯಪೂರ್ವೇಷು ಬೋದ್ಧವ್ಯೇಷು ವ್ಯವಸ್ಯತಿ ॥೧೦೪॥

ಐದು ಜ್ಞಾನೇಂದ್ರಿಯಗಳೂ, ಐದು ಕರ್ಮೇಂದ್ರಿಯಗಳೂ ಮತ್ತು ಮನಸ್ಸೂ ಆದನಂತರ ಹನ್ನೆರಡನೆಯದಾದ ಮತ್ತೊಂದು ಗುಣವೂ ಇದೆ. ಅದನ್ನು 'ಬುದ್ಧಿ' ಎಂದು ಕರೆಯುತ್ತಾರೆ. ಯಾವುದಾದರೊಂದು ತಿಳಿಯ

ಬೇಕಾದ ವಿಷಯದಲ್ಲಿ ಸಂಶಯವುಂಟಾದಾಗ ಮನುಷ್ಯನು ಬುದ್ಧಿಯ ಮೂಲಕವಾಗಿ ನಿಶ್ಚಯಕ್ಕೆ ಬರುತ್ತಾನೆ.

ಅಥ ದ್ವಾದಶಕೇ ತಸ್ಮಿನ್ಸತ್ತ್ವಂ ನಾಮಾಪರೋ ಗುಣಃ ।
ಮಹಾಸತ್ತ್ವೋಽಲ್ಪಸತ್ತ್ವೋ ವಾ ಜನ್ತುರ್ಯೇನಾನುಮೀಯತೇ ॥೧೦೫॥

ಹನ್ನೆರಡನೆಯದಾದ ಬುದ್ಧಿಯಲ್ಲಿಯೇ ಹದಿಮೂರನೆಯದಾದ 'ಸತ್ತ್ವ' ಎಂಬ ಗುಣವಿದೆ. ಪ್ರಾಣಿಯು ಮಹಾಸತ್ತ್ವವೋ ಅಲ್ಪಸತ್ತ್ವವೋ –ಎಂಬುದು ಬುದ್ಧಿಯಲ್ಲಿರುವ ಈ 'ಸತ್ತ್ವ'ದಿಂದ ಊಹಿಸಲ್ಪಡುತ್ತದೆ.

ಅಹಂ ಕರ್ತೇತಿ ಚಾಪ್ಯನ್ಯೋ ಗುಣಸ್ತತ್ರ ಚತುರ್ದಶಃ ।
ಮಮಾಯಮಿತಿ ಯೇನಾಯಂ ಮನ್ಯತೇ ನ ಮಮೇತಿ ಚ ॥೧೦೬॥

ಈ ಸತ್ತ್ವದೊಡನೆ 'ಅಹಂ' 'ನಾನು' ಎಂಬ ಅಭಿಮಾನಸೂಚಕವಾದ ಅಹಂಕಾರವೆಂಬ ಹದಿನಾಲ್ಕನೆಯ ಗುಣವಿರುತ್ತದೆ. ಈ ಗುಣದಿಂದ ಜೀವಾತ್ಮವು – 'ಇದು ನನ್ನದು', 'ಇದು ನನ್ನದಲ್ಲ' –ಎಂದು ಭಾವಿಸಿ ಕೊಳ್ಳುತ್ತದೆ.

ಅಥ ಪಞ್ಚದಶೋ ರಾಜನ್ಗುಣಸ್ತತ್ರಾಪರಃ ಸ್ಮೃತಃ ।
ಪೃಥಕ್ಕಲಾಸಮೂಹಸ್ಯ ಸಾಮಗ್ರ್ಯಂ ತದಿಹೋಚ್ಯತೇ ॥೧೦೭॥

ಗುಣಸ್ತ್ವೇವಾಪರಸ್ತತ್ರ ಸಂಘಾತ ಇವ ಷೋಡಶಃ ।
ಪ್ರಕೃತಿರ್ವ್ಯಕ್ತಿರಿತ್ಯೇತೌ ಗುಣೌ ಯಸ್ಮಿನ್ಸಮಾಶ್ರಿತೌ ॥೧೦೮॥

ಆ ಅಹಂಕಾರದಲ್ಲಿ 'ವಾಸನಾ' ಎಂಬ ಹದಿನೈದನೆಯದಾದ ಮತ್ತೊಂದು ಗುಣವೂ ಇದೆ. ಪ್ರತ್ಯೇಕವಾದ ಕಲಾಸಮೂಹಗಳ ಸಾಮಗ್ರ್ಯ ವೆಂದು ಇದನ್ನು ಹೇಳುತ್ತಾರೆ.* ಇದಲ್ಲದೇ ಸಂಘಾತವೆಂಬ ಹೆಸರಿನ ಹದಿನಾರನೆಯ ಗುಣವಿದೆ. ಪ್ರಕೃತಿ ಮತ್ತು ಪುರುಷ-ಇವೆರಡು ಗುಣಗಳೂ

---

* ಹದಿನಾರು ಕಲೆಗಳು : ಪ್ರಾಣ, ಶ್ರದ್ಧೆ, ಆಕಾಶ, ವಾಯು, ತೇಜಸ್ಸು, ಜಲ, ಪೃಥ್ವೀ, ಇಂದ್ರಿಯ, ಮನಸ್ಸು, ಅನ್ನ, ವೀರ್ಯ, ತಪಸ್ಸು, ಮಂತ್ರ, ಕರ್ಮ, ಲೋಕ ಮತ್ತು ನಾಮ –ಈ ಹದಿನಾರು ಮನುಷ್ಯನ ರಚನೆಗೆ ಬೇಕಾದ ಹದಿನಾರು ಕಲೆಗಳು ಅಥವಾ ಉಪಾಧಿಗಳು.

ಸಂಘಾತಗುಣವನ್ನು ಸಮಾಶ್ರಯಿಸಿದೆ. ಇದುವರೆಗೆ ಒಟ್ಟು ಗುಣಗಳು ಹದಿನೆಂಟಾದುವು.)

ಸುಖಾಸುಖೇ ಜರಾಮೃತ್ಯೂ ಲಾಭಾಲಾಭೌ ಪ್ರಿಯಾಪ್ರಿಯೇ ।
ಇತಿ ಚೈಕೋನವಿಂಶೋಽಯಂ ದ್ವನ್ದ್ವಯೋಗ ಇತಿ ಸ್ಮೃತಃ ॥೧೦೯॥

ಸುಖ-ದುಃಖ, ಮುಪ್ಪು-ಸಾವು, ಲಾಭ-ಹಾನಿ, ಪ್ರಿಯ-ಅಪ್ರಿಯ ಇವೇ ಮುಂತಾದ ದ್ವಂದ್ವಗಳ ಯೋಗವು ಹತ್ತೊಂಬತ್ತನೆಯ ಗುಣವೆಂದು ಹೇಳುತ್ತಾರೆ.

ಊರ್ಧ್ವಂ ಚೈಕೋನವಿಂಶತ್ಯಾ ಕಾಲೋ ನಾಮಾಪರೋ ಗುಣಃ ।
ಇತೀಮಂ ವಿದ್ಧಿ ವಿಂಶತ್ಯಾ ಭೂತಾನಾಂ ಪ್ರಭವಾಪ್ಯಯಮ್ ॥೧೧೦॥

ಹತ್ತೊಂಬತ್ತು ಗುಣಗಳಿಂದಲೂ ಮುಂದೆ ಕಾಲವೆಂಬ ಮತ್ತೊಂದು ಗುಣವಿದೆ. ಇದು ಇಪ್ಪತ್ತನೆಯ ಗುಣ. ಹೀಗೆ ಈ ಇಪ್ಪತ್ತು ಗುಣಗಳಿಂದ ಪ್ರಾಣಿಗಳ ಉತ್ಪತ್ತಿ-ಲಯಗಳು ಸಂಭವಿಸುವುದೆಂಬುದನ್ನು ತಿಳಿ.

ವಿಂಶಕಶ್ಚೈವ ಸಂಘಾತೋ ಮಹಾಭೂತಾನಿ ಪಞ್ಚ ಚ ।
ಸದಸದ್ಭಾವಯೋಗೌ ತು ಗುಣಾವನ್ಯೌ ಪ್ರಕಾಶಕೌ ॥೧೧೧॥

ಈ ಇಪ್ಪತ್ತು ಗುಣಗಳ ಸಮುದಾಯ, ಪಂಚಮಹಾಭೂತಗಳು, ಪ್ರಕಾಶಕಗುಣಗಳಾದ ಸದ್ಭಾವಯೋಗ-ಅಸದ್ಭಾವಯೋಗ* ಇವೆರಡೂ ಸೇರಿ ಒಟ್ಟು ಇಪ್ಪತ್ತೇಳು ಗುಣಗಳಾಗುತ್ತವೆ.

ಇತ್ಯೇವಂ ವಿಂಶಕಶ್ಚೈವ ಗುಣಾಃ ಸಪ್ತ ಚ ಯೇ ಸ್ಮೃತಾಃ ।
ವಿಧಿಃ ಶುಕ್ರಂ ಬಲಂ ಚೇತಿ ತ್ರಯ ಏತೇ ಗುಣಾಃ ಪರೇ ॥೧೧೨॥

ಹೀಗೆ ಗುಣಗಳೆಂದು ಯಾವುವು ಹೇಳಲ್ಪಟ್ಟಿವೆಯೋ–ಅವುಗಳ ಒಟ್ಟು

---

* ಸದಸದ್ಭಾವಯೋಗೌ = ಪ್ರಮಾಭ್ರಮವಿಷಯೌ = ಯಥಾರ್ಥಜ್ಞಾನ ಮತ್ತು ಮಿಥ್ಯಾಜ್ಞಾನ. ಸತ್ತಾಸೂಚಕ–ಅಸತ್ತಾಸೂಚಕಗಳು.

ಸಂಖ್ಯೆ ಇಪ್ಪತ್ತೇಳು. ಈ ಗುಣಗಳೇ ಅಲ್ಲದೇ ವಿಧಿ, ಶುಕ್ರ ಮತ್ತು ಬಲಗಳೆಂಬ* ಮತ್ತೂ ಮೂರು ಗುಣಗಳಿವೆ.

ವಿಂಶತಿರ್ದಶ ಚೈವಂ ಹಿ ಗುಣಾಃ ಸಂಖ್ಯಾನತಃ ಸ್ಮೃತಾಃ ।
ಸಮಗ್ರಾ ಯತ್ರ ವರ್ತನ್ತೇ ತಚ್ಛರೀರಮಿತಿ ಸ್ಮೃತಮ್ ॥೧೧೬॥

ಹೀಗೆ ಲೆಕ್ಕ ಮಾಡಿದರೆ ಸಂಖ್ಯೆಯಲ್ಲಿ ಒಟ್ಟು ಮೂವತ್ತು ಗುಣಗಳೂ ಸಮಗ್ರವಾಗಿ ಎಲ್ಲಿ ಸೇರಿರುತ್ತವೆಯೋ –ಅದಕ್ಕೆ ಶರೀರವೆಂದು ಹೆಸರು.

ಅವ್ಯಕ್ತಂ ಪ್ರಕೃತಿಂ ತ್ವಾಸಾಂ ಕಲಾನಾಂ ಕಶ್ಚಿದಿಚ್ಛತಿ ।
ವ್ಯಕ್ತಂ ಚಾಸಾಂ ತಥಾ ಚಾನ್ಯಃ ಸ್ಥೂಲದರ್ಶೀ ಪ್ರಪಶ್ಯತಿ ॥೧೧೭॥

ಈ ಮೂವತ್ತು ಕಲೆ ಅಥವಾ ಗುಣಗಳಿಗೂ ಅವ್ಯಕ್ತವಾದ ಪ್ರಕೃತಿಯೇ (ಮೂಲಪ್ರಕೃತಿಯೇ) ಕಾರಣವೆಂದು ಕೆಲವರು ವಿದ್ವಾಂಸರು ಹೇಳುತ್ತಾರೆ. ವ್ಯಕ್ತಪ್ರಕೃತಿಯೇ ಎಂದರೆ ಪರಮಾಣುಗಳೇ ಈ ಕಲೆಗಳಿಗೆ ಮೂಲಕಾರಣ ವೆಂದು ಸ್ಥೂಲದರ್ಶಿಗಳಾದ ಕೆಲವರು ಚಾರ್ವಾಕವಿದ್ವಾಂಸರು ಹೇಳುತ್ತಾರೆ.

ಅವ್ಯಕ್ತಂ ಯದಿ ವಾ ವ್ಯಕ್ತಂ ದ್ವಯೀಮಥ ಚತುಷ್ಟಯೀಮ್ ।
ಪ್ರಕೃತಿಂ ಸರ್ವಭೂತಾನಾಂ ಪಶ್ಯನ್ತ್ಯಧ್ಯಾತ್ಮಚಿನ್ತಕಾಃ ॥೧೧೮॥

ಈ ಮೂವತ್ತು ಗುಣಗಳು ಅವ್ಯಕ್ತದಿಂದ ಹುಟ್ಟಿರಲಿ ಅಥವಾ ವ್ಯಕ್ತದಿಂದ ಹುಟ್ಟಿರಲಿ, ಇಲ್ಲವೇ ವ್ಯಕ್ತ-ಅವ್ಯಕ್ತ ಇವೆರಡರಿಂದ ಹುಟ್ಟಿರಲಿ ಅಥವಾ ವ್ಯಕ್ತ, ಅವ್ಯಕ್ತ, ಪುರುಷ ಮತ್ತು ಈಶ್ವರ ಈ ನಾಲ್ಕರಿಂದ ಹುಟ್ಟಿರಲಿ–ಹೇಗೂ ಪ್ರಕೃತಿಯೇ ಸರ್ವಪ್ರಾಣಿಗಳಿಗೂ ಮೂಲಕಾರಣವೆಂದು ಅಧ್ಯಾತ್ಮಚಿಂತಕರು ಹೇಳುತ್ತಾರೆ.

(ಕಾಪಿಲಮತದಲ್ಲಿ ಅವ್ಯಕ್ತವೇ ಕಾರಣವೆನ್ನುತ್ತಾರೆ. ಚಾರ್ವಾಕರು

---

* ವಿಧಿಃ : ವಾಸನಾಬೀಜಭೂತಧರ್ಮಾಧರ್ಮೌ = ವಾಸನಾಬೀಜಭೂತವಾದ ಧರ್ಮಾಧರ್ಮಗಳು.

ಶುಕ್ರಂ : ವಾಸನೋದ್ಬೋಧಕಃ ಸಂಸ್ಕಾರಃ = ವಾಸನೆಯನ್ನು ಉದ್ದೀಪನಗೊಳಿಸುವ ಸಂಸ್ಕಾರ.

ಬಲಂ : ವಾಸನಾವಿಷಯಪ್ರಾಪ್ತ್ಯನುಕೂಲೋ ಯತ್ನಃ = ವಾಸನೆಗೆ ವಿಷಯವಾದ ಪದಾರ್ಥವನ್ನು ಪಡೆಯಲು ಅನುಕೂಲವಾದ ಪ್ರಯತ್ನ.

ವ್ಯಕ್ತವಾದ ನಾಲ್ಕು ಬಗೆಯ ಪರಮಾಣುಗಳೇ ಕಾರಣವೆನ್ನುತ್ತಾರೆ. ವ್ಯಕ್ತಾವ್ಯಕ್ತಗಳೆರಡೇ ಕಾರಣಗಳೆಂಬುದು ಕಾಣಾದರ ಮತವಾಗಿದೆ. ಇವೆರಡರ ಜೊತೆಯಲ್ಲಿ ಪುರುಷ ಮತ್ತು ಈಶ್ವರರನ್ನೂ ಸೇರಿಸಿ ನಾಲ್ಕು ಕಾರಣಗಳೆನ್ನುತ್ತಾರೆ ಯೋಗಮತದವರು. ಆದರೆ ಪುರುಷನು ತನ್ನ ಸಾನ್ನಿಧ್ಯದಿಂದ ಮಾತ್ರವೇ ಕಾರಣನಾಗುತ್ತಾನೆ. ಈಶ್ವರನೂ ನಿಮಿತ್ತಕಾರಣ ಮಾತ್ರ. ಪ್ರಕೃತಿಯೊಂದೇ ಉಪಾದಾನಕಾರಣವೆಂಬುದು ಈ ಮತಗಳ ಸಮನ್ವಯ.)

ಯೇಯಂ ಪ್ರಕೃತಿರವ್ಯಕ್ತಾ ಕಲಾಭಿರ್ವ್ಯಕ್ತತಾಂ ಗತಾ ।
ಅಹಂ ಚ ತ್ವಂ ಚ ರಾಜೇನ್ದ್ರ ಯೇ ಚಾಪ್ಯನ್ಯೇ ಶರೀರಿಣಃ ॥೧೧೬॥

ರಾಜೇಂದ್ರನೇ! ಎಲ್ಲಕ್ಕೂ ಮೂಲಕಾರಣವಾದ ಅವ್ಯಕ್ತವಾದ ಈ ಪ್ರಕೃತಿಯು ತನ್ನಿಂದಲೇ ಪ್ರಾದುರ್ಭೂತವಾದ ಕಲೆಗಳ ರೂಪದಲ್ಲಿ ವ್ಯಕ್ತವೆಂಬ ಸಂಜ್ಞೆಯನ್ನು ಪಡೆದಿದೆ. ನಾನು, ನೀನು ಮತ್ತು ಇತರ ಎಲ್ಲ ಶರೀರಿಗಳೂ ಅವ್ಯಕ್ತವಾದ ಪ್ರಕೃತಿಯಿಂದಲೇ ವ್ಯಕ್ತವಾದ ಈ ಶರೀರಗಳನ್ನು ಪಡೆದುಕೊಂಡಿರುತ್ತೇವೆ.

ಬಿನ್ದುನ್ಯಾಸಾದಯೋಽವಸ್ಥಾಃ ಶುಕ್ರಶೋಣಿತಸಮ್ಭವಾಃ ।
ಯಾಸಾಮೇವ ನಿಪಾತೇನ ಕಲಲಂ ನಾಮ ಜಾಯತೇ ॥೧೧೭॥

ಶುಕ್ರ-ಶೋಣಿತಗಳ (ರಜಸ್ಸುಗಳ) ಸಂಯೋಗದಿಂದ ರೇತಸ್ಸಿಂಚನವೇ ಮೊದಲಾದ ಅವಸ್ಥೆಗಳು ಉಂಟಾಗುತ್ತವೆ. ರೇತಸ್ಸಿಂಚನದಿಂದ ಕಲಲ* ವೆಂಬ ಹೆಸರಿನ ಪದಾರ್ಥವು ಹುಟ್ಟುತ್ತದೆ.

ಕಲಲಾದ್ಬುದ್ಬುದೋತ್ಪತ್ತಿಃ ಪೇಶೀ ಚ ಬುದ್ಬುದಾತ್ಸ್ಮೃತಾ ।
ಪೇಶ್ಯಾಸ್ತ್ವಙ್ಗಾಭಿನಿರ್ವೃತ್ತಿರ್ನಖರೋಮಾಣಿ ಚಾಙ್ಗತಃ ॥೧೧೮॥

ಕಲಲದಿಂದ ಬುದ್ಬುದದ ಉತ್ಪತ್ತಿಯಾಗುತ್ತದೆ. ಕಲಲವೇ ಐದು ದಿವಸಗಳು ಕಳೆದ ನಂತರ ಬುದ್ಬುದವಾಗುತ್ತದೆ.[1] ವರ್ತುಲಾಕಾರವಾಗು

---

* ಕಲಲಂ : ಗರ್ಭದ ಮೊದಲನೆಯ ಅವಸ್ಥೆ ; ಸ್ತ್ರೀಯರ ಗರ್ಭಕೋಶವನ್ನು ಪ್ರವೇಶಿಸಿದ ಮೊದಲನೆಯ ರಾತ್ರಿಯಲ್ಲಿ ಉಂಟಾಗುವ ರೇತಸ್ಸಿನ ವಿಕಾರ.

[1] ಕಲಲಂ ತ್ವೇಕರಾತ್ರೇಣ ಪಞ್ಚರಾತ್ರೇಣ ಬುದ್ಬುದಮ್ ॥

ತ್ತದೆ.) ಬುದ್ಬುದದಿಂದ ಪೇಶಿ (ಮಾಂಸಪಿಂಡ) ಯಾಗುತ್ತದೆ. (ಮಾಸವು ಕಳೆದ ನಂತರ) ಆ ಮಾಂಸಪಿಂಡದಲ್ಲಿ ಶಿರಸ್ಸು, ಕೈ-ಕಾಲುಗಳೇ ಮೊದಲಾದ ಅವಯವಗಳು ಮೂಡುತ್ತವೆ. (ಮೂರನೆಯ ಮಾಸದಲ್ಲಿ) ಅಂಗಗಳ ದೆಸೆಯಿಂದ ಉಗುರುಗಳೂ ರೋಮಗಳೂ ಹುಟ್ಟುತ್ತವೆ.

ಸಮ್ಪೂರ್ಣೇ ನವಮೇ ಮಾಸಿ ಜನ್ತೋರ್ಜಾತಸ್ಯ ಮೈಥಿಲ ।
ಜಾಯತೇ ನಾಮರೂಪತ್ವಂ ಸ್ತ್ರೀ ಪುಮಾನ್ವೇತಿ ಲಿಙ್ಗತಃ ॥೧೧೯॥

ಮಿಥಿಲಾಧಿಪತಿಯೇ! ಗರ್ಭದಲ್ಲಿ ಒಂಬತ್ತು ಮಾಸಗಳು ಪೂರ್ಣವಾಗಿ ಕಳೆದನಂತರ ಹುಟ್ಟಿದ ಪ್ರಾಣಿಗೆ (ಮನುಷ್ಯನಿಗೆ) ನಾಮ ಮತ್ತು ರೂಪಗಳು ಉಂಟಾಗುತ್ತವೆ ; ವಿಶಿಷ್ಟವಾದ ಚಿಹ್ನೆಯಿಂದ ಹೆಣ್ಣು ಅಥವಾ ಗಂಡು ಎಂಬುದೂ ತಿಳಿಯುತ್ತದೆ.

ಜಾತಮಾತ್ರಂ ತು ತದ್ರೂಪಂ ದೃಷ್ಟ್ವಾ ತಾಮ್ರನಖಾಙ್ಗುಲಿ ।
ಕೌಮಾರಂ ರೂಪಮಾಪನ್ನಂ ರೂಪತೋ ನೋಪಲಭ್ಯತೇ ॥೧೨೦॥

ಹುಟ್ಟಿದೊಡನೆಯೇ ತಾಮ್ರವರ್ಣದ (ಕೆಂಪಾದ) ಉಗುರುಗಳಿಂದಲೂ ಬೆರಳುಗಳಿಂದಲೂ ಕೂಡಿರುವ ರೂಪವನ್ನು ನೋಡಿದನಂತರ, ಮುಂದೆ ಅದೇ ಶಿಶುವಿನ ಒಳ್ಳೆಯ ರೂಪಿನಿಂದ ಕೂಡಿರುವ ಕೌಮಾರಾವಸ್ಥೆಯನ್ನು ಕಾಣಬಹುದು. ಕೌಮಾರಾವಸ್ಥೆಯನ್ನು ಕಾಣುವಾಗ ಹುಟ್ಟಿದಾಗಿನ ರೂಪವನ್ನು ಹೊಂದಲು ಸಾಧ್ಯವಾಗುವುದಿಲ್ಲ.

ಕೌಮಾರಾದ್ಯೌವನಂ ಚಾಪಿ ಸ್ಥಾವಿರ್ಯಂ ಚಾಪಿ ಯೌವನಾತ್ ।
ಅನೇನ ಕ್ರಮಯೋಗೇನ ಪೂರ್ವಂ ಪೂರ್ವಂ ನ ಲಭ್ಯತೇ ॥೧೨೧॥

ಹೀಗೆಯೇ ಆ ಶಿಶುವು ಕೌಮಾರಾವಸ್ಥೆಯಿಂದ ಯೌವನಾವಸ್ಥೆಯನ್ನೂ–ಯೌವನಾವಸ್ಥೆಯಿಂದ ವಾರ್ಧಕ್ಯಾವಸ್ಥೆಯನ್ನೂ ಅನುಕ್ರಮವಾಗಿ ಹೊಂದುವುದನ್ನು ಕಾಣಬಹುದು. ಆದರೆ ಕಳೆದುಹೋದ ಹಿಂದಿನ ಅವಸ್ಥೆಯನ್ನು ಪುನಃ ಹೊಂದಲು ಸಾಧ್ಯವಾಗುವುದಿಲ್ಲ.

ಕಲಾನಾಂ ಪೃಥಗರ್ಥಾನಾಂ ಪ್ರತಿಭೇದಃ ಕ್ಷಣೇ ಕ್ಷಣೇ ।
ವರ್ತತೇ ಸರ್ವಭೂತೇಷು ಸೌಕ್ಷ್ಮ್ಯಾತ್ತು ನ ವಿಭಾವ್ಯತೇ ॥೧೨೨॥

ಎಲ್ಲ ಪ್ರಾಣಿಗಳಲ್ಲಿಯೂ ಪ್ರತ್ಯೇಕ-ಪ್ರತ್ಯೇಕವಾದ ಅವಸ್ಥೆಗಳಿ

ಗಾಗಿಯೇ ಇರುವ ಕಲೆಗಳ ಸ್ವರೂಪಗಳಲ್ಲಿ ಪ್ರತಿಕ್ಷಣದಲ್ಲಿಯೂ ಪರಿವರ್ತನೆಯಾಗುತ್ತಲೇ ಇರುತ್ತದೆ. ಆದರೆ ಆ ಪರಿವರ್ತನೆಯು ಅತ್ಯಂತ ಸೂಕ್ಷ್ಮವಾಗಿರುವುದರಿಂದ ಮನುಷ್ಯನು ತನ್ನ ಶರೀರದಲ್ಲಿ ಪ್ರತಿಕ್ಷಣದಲ್ಲಿಯೂ ಪರಿವರ್ತನೆಯಾಗುತ್ತಿರುವುದೆಂಬುದನ್ನು ಭಾವಿಸುವುದಿಲ್ಲ.

ನ ಚೈಷಾಮತ್ಯಯೋ ರಾಜಲ್ಲಕ್ಷ್ಯತೇ ಪ್ರಭವೋ ನ ಚ ।
ಅವಸ್ಥಾಯಾಮವಸ್ಥಾಯಾಂ ದೀಪಸ್ಯೇವಾರ್ಚಿಷೋ ಗತಿಃ ॥೧೨೩॥

ಜನಕರಾಜ! ಮನುಷ್ಯನ ಒಂದೊಂದು ಅವಸ್ಥೆಯಲ್ಲಿಯೂ ಈ ಕಲೆಗಳೂ ಲಯಹೊಂದುತ್ತಲೇ ಇರುತ್ತವೆ ; ಹುಟ್ಟುತ್ತಲೇ ಇರುತ್ತವೆ. ಆದರೆ ದೀಪದಲ್ಲಿರುವ ಜ್ವಾಲೆಗಳು ಎಡೆಬಿಡದೇ ಲಯವಾಗುತ್ತಲೂ ಮತ್ತು ಹುಟ್ಟುತ್ತಲೂ ಇದ್ದರೂ ಲಕ್ಷ್ಯಕ್ಕೆ ಬಾರದಿರುವಂತೆ –ಮನುಷ್ಯನಲ್ಲಿರುವ ಕಲೆಗಳು ಅವಸ್ಥೆಗಳಿಗೆ ಅನುಗುಣವಾಗಿ ಲಯಹೊಂದುತ್ತಲೂ ಹುಟ್ಟುತ್ತಲೂ ಇದ್ದರೂ ಮನುಷ್ಯನ ಲಕ್ಷ್ಯಕ್ಕೆ ಬರುವುದಿಲ್ಲ.*

ತಸ್ಯಾಪ್ಯೇವಂ ಪ್ರಭಾವಸ್ಯ ಸದಶ್ವಸ್ಯೇವ ಧಾವತಃ ।
ಅಜಸ್ರಂ ಸರ್ವಲೋಕಸ್ಯ ಕಃ ಕುತೋ ವಾ ನ ವಾ ಕುತಃ ॥೧೨೪॥

ಕಸ್ಯೇದಂ ಕಸ್ಯ ವಾ ನೇದಂ ಕುತೋ ವೇದಂ ನ ವಾ ಕುತಃ ।
ಸಮ್ಬನ್ಧಃ ಕೋಽಸ್ತಿ ಭೂತಾನಾಂ ಸ್ವೈರಪ್ಯವಯವೈರಿಹ ॥೧೨೫॥

ಯಾವ ರೀತಿಯಲ್ಲಿ ಒಳ್ಳೆಯ ಜಾತಿಯ ಕುದುರೆಯು ಅತ್ಯಂತವೇಗ ದಿಂದ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಓಡುವುದೋ –ಅದೇ ರೀತಿಯಲ್ಲಿ ಕುದುರೆಯಂತೆಯೇ ಅತ್ಯಂತವೇಗದಿಂದ ಓಡುವ ಪ್ರಭಾವವನ್ನು

---

* ಎಣ್ಣೆಯ ದೀಪವಾಗಲೀ–ವಿದ್ಯುದ್ದೀಪವಾಗಲೀ ಉರಿಯುತ್ತಿರುವಾಗ ಅಖಂಡವಾದ ಒಂದೇ ಜ್ಯೋತಿಯು ಅಥವಾ ಬೆಳಕು ಉರಿಯುತ್ತಿದೆಯೆಂದು ಭಾವಿಸುತ್ತೇವೆ. ಹಾಗೆ ಜ್ಯೋತಿಯು ಅಥವಾ ಬೆಳಕು ಒಂದೇ ಆಗಿದ್ದರೆ ದೀಪದಲ್ಲಿರುವ ಎಣ್ಣೆಯಾಗಲೀ ವಿದ್ಯುದ್ದೀಪದ ವಿದ್ಯುಚ್ಛಕ್ತಿಯಾಗಲೀ ವ್ಯಯವಾಗುತ್ತಿರಲಿಲ್ಲ. ಸೊಡರಿನಲ್ಲಿರುವ ಎಣ್ಣೆಯೂ ಮತ್ತು ಗಾಜಿನ ಬುರುಡೆಯಲ್ಲಿ ಹರಿದುಬರುವ ವಿದ್ಯುಚ್ಛಕ್ತಿಯೂ ಪ್ರತಿಕ್ಷಣದಲ್ಲಿಯೂ ವ್ಯಯವಾಗುತ್ತಲೇ ಇರುವುದರಿಂದ ಜ್ಯೋತಿಯು ಅಥವಾ ಬೆಳಕು ಒಂದೇ ಎಂದು ಕಂಡುಬಂದರೂ ಅವು ಪ್ರತಿಕ್ಷಣದಲ್ಲಿಯೂ ಲಯಹೊಂದುತ್ತಲೂ ಉತ್ಪತ್ತಿಯಾಗುತ್ತಲೂ ಇರುವುದೆಂಬುದನ್ನು ಮನಗಾಣಬಹುದಾಗಿದೆ.

ಹೊಂದಿರುವ ಸರ್ವಲೋಕವೂ (ಎಲ್ಲ ಪ್ರಾಣಿಗಳೂ) ಒಂದು ಅವಸ್ಥೆಯಿಂದ ಮತ್ತೊಂದು ಅವಸ್ಥೆಗೆ ಹೆಚ್ಚು ವೇಗವಾಗಿ ಹೋಗುತ್ತಿರುತ್ತವೆ. ಆದುದರಿಂದ ಯಾರಿವನು? ಎಲ್ಲಿಂದ ಬಂದವನು? ಎಲ್ಲಿಂದ ಬಂದವನಲ್ಲ? ಇದು ಯಾರದು? ಯಾರದಲ್ಲ? ಇದು ಎಲ್ಲಿಂದ ಬಂದುದು? ಎಲ್ಲಿಂದ ಬಂದುದಲ್ಲ? –ಎಂಬ ಯಾವ ಪ್ರಶ್ನೆಯನ್ನೂ ಕೇಳಲು ಸಾಧ್ಯವೇ ಆಗುವುದಿಲ್ಲ. ಒಂದೊಂದು ಅವಯವವೂ ಪ್ರತಿಕ್ಷಣದಲ್ಲಿಯೂ ವ್ಯತ್ಯಾಸ ಹೊಂದುತ್ತಲೇ ಇರುವಾಗ ನಿರ್ದಿಷ್ಟವಾಗಿ ಯಾವುದನ್ನೂ ಹೇಳಲೂ ಸಾಧ್ಯವಾಗುವುದಿಲ್ಲ. ಪ್ರತಿಕ್ಷಣದಲ್ಲಿಯೂ ಲಯೋತ್ಪತ್ತಿಗಳನ್ನು ಹೊಂದು ತ್ತಲೇ ಇರುವ ಅವಯವಗಳಿಗೂ ಪ್ರಾಣಿಗಳಿಗೂ ಯಾವ ಸಂಬಂಧವಿದೆ? ಅರ್ಥಾತ್ ಯಾವ ಸಂಬಂಧವೂ ಇಲ್ಲ. ಅವಯವಗಳು ಪ್ರಾಣಿಗಳ ಹಿಡಿತಕ್ಕೆ ಸಿಕ್ಕದೆಯೇ ವ್ಯತ್ಯಾಸಹೊಂದುತ್ತಿರುತ್ತವೆ.

ಯಥಾದಿತ್ಯಾನ್ಮಣೇಶ್ಚಾಪಿ ವೀರುದ್ಭ್ಯಶ್ಚೈವ ಪಾವಕಃ ।
ಜಾಯನ್ತ್ಯೇವಂ ಸಮುದಯಾತ್ಕಲಾನಾಮಿವ ಜನ್ತವಃ ॥೧೨೬॥

ಯಾವ ರೀತಿಯಲ್ಲಿ ಸೂರ್ಯನ ಕಿರಣಗಳ ಸಂಪರ್ಕವನ್ನು ಹೊಂದಿದ ಸೂರ್ಯಕಾಂತಮಣಿಯಲ್ಲಿ ಅಗ್ನಿಯು ಆವಿರ್ಭವಿಸುವುದೋ– ಪರಸ್ಪರ ಸಂಘರ್ಷದಿಂದ ಬಳ್ಳಿಗಳಲ್ಲಿ (ಅರಣಿಗಳಲ್ಲಿ) ಅಗ್ನಿಯು ಹುಟ್ಟುವುದೋ–ಅದೇ ರೀತಿಯಲ್ಲಿ ಕಲೆಗಳ ಸಮುದಾಯದಿಂದ ಪ್ರಾಣಿಗಳು ಹುಟ್ಟುತ್ತವೆ.

ಆತ್ಮನ್ಯೇವಾತ್ಮನಾತ್ಮಾನಂ ಯಥಾ ತ್ವಮನುಪಶ್ಯಸಿ ।
ಏವಮೇವಾತ್ಮನಾತ್ಮಾನಮನ್ಯಸ್ಮಿನ್ಕಿಂ ನ ಪಶ್ಯಸಿ ॥೧೨೭॥

ಯಾವ ರೀತಿಯಲ್ಲಿ ನೀನು ನಿನ್ನ ಮನಸ್ಸಿನ ಮೂಲಕವಾಗಿ ನಿನ್ನಲ್ಲಿರುವ ಆತ್ಮವನ್ನು ಕಾಣುವೆಯೋ –ಅದೇ ರೀತಿಯಲ್ಲಿ ನಿನ್ನ ಮನಸ್ಸಿನಿಂದ ಇತರರಲ್ಲಿರುವ ಆತ್ಮವನ್ನೇಕೆ ಕಾಣುತ್ತಿಲ್ಲ?

ಯದ್ಯಾತ್ಮನಿ ಪರಸ್ಮಿಂಶ್ಚ ಸಮತಾಮಧ್ಯವಸ್ಯಸಿ ।
ಅಥ ಮಾಂ ಕಾಸಿ ಕಸ್ಯೇತಿ ಕಿಮರ್ಥಮನುಪೃಚ್ಛಸಿ ॥೧೨೮॥

ನಿನ್ನಲ್ಲಿಯೂ ಮತ್ತು ಬೇರೆಯವನಲ್ಲಿಯೂ ಆತ್ಮಸಾಮ್ಯವಿದೆಯೆಂದು ಭಾವಿಸಿರುವೆಯಾದರೆ (ಸರ್ವಸಮತ್ವವನ್ನು ಅಧ್ಯಾತ್ಮದರ್ಶನದಿಂದ ಸಾಧಿ

ಸಿರುವೆಯಾದರೆ)–'ನೀನು ಯಾರು? ಯಾರವಳು?'–ಎಂದು ನನ್ನನ್ನು ಏಕೆ ಪ್ರಶ್ನಿಸುವೆ?

ಇದಂ ಮೇ ಸ್ಯಾದಿದಂ ನೇತಿ ದ್ವಂದ್ವೈರ್ಮುಕ್ತಸ್ಯ ಮೈಥಿಲ ।
ಕಾಸಿ ಕಸ್ಯ ಕುತೋ ವೇತಿ ವಚನೈಃ ಕಿಂ ಪ್ರಯೋಜನಮ್ ॥೧೨೯॥

ಮಿಥಿಲಾಧಿಪತಿಯೇ! 'ಇದು ನನ್ನದಾಗಿರಬಹುದು ; ಇದು ನನ್ನದಾಗಿರಲಾರದು' –ಇವೇ ಮುಂತಾದ ದ್ವಂದ್ವಗಳಿಂದ ವಿಮುಕ್ತನಾಗಿರುವ ನಿನಗೆ–'ನೀನು ಯಾರು? ಎಲ್ಲಿಂದ ಬಂದವಳು?'–ಮುಂತಾದ ಮಾತುಗಳಿಂದ ಅಥವಾ ಪ್ರಶ್ನೆಗಳಿಂದ ಪ್ರಯೋಜನವೇನಿದೆ?

ರಿಪೌ ಮಿತ್ರೇಽಥ ಮಧ್ಯಸ್ಥೇ ವಿಜಯೇ ಸಂಧಿವಿಗ್ರಹೇ ।
ಕೃತವಾನ್ಯೋ ಮಹೀಪಾಲಃ ಕಿಂ ತಸ್ಮಿನ್ಮುಕ್ತಲಕ್ಷಣಮ್ ॥೧೩೦॥

ಶತ್ರು, ಮಿತ್ರ ಮತ್ತು ಮಧ್ಯಸ್ಥರಿಗೆ ಸಂಬಂಧಿಸಿದ ವಿಜಯ, ಸಂಧಿ ಮತ್ತು ಯುದ್ಧಕ್ರಿಯೆಗಳಲ್ಲಿ ಯಾವ ರಾಜನು ಸಮುಚಿತವಾದ ಕಾರ್ಯಗಳನ್ನು ಮಾಡುತ್ತಿರುವನೋ–ಅಂತಹ ರಾಜನಲ್ಲಿ ಜೀವನ್ಮುಕ್ತನ ಯಾವ ಲಕ್ಷಣವು ತಾನೇ ಇದ್ದೀತು? (ಲೋಕವ್ಯವಹಾರಗಳಲ್ಲಿ ನಿರತನಾಗಿರುವ ರಾಜನಲ್ಲಿ ಮುಕ್ತನ ಲಕ್ಷಣಗಳಿರಲು ಸಾಧ್ಯವೇ ಇಲ್ಲ.)

ತ್ರಿವರ್ಗಂ ಸಪ್ತಧಾ ವ್ಯಕ್ತಂ ಯೋ ನ ವೇದೇಹ ಕರ್ಮಸು ।
ಸಙ್ಗವಾನ್ಯಸ್ತ್ರಿವರ್ಗೇಣ ಕಿಂ ತಸ್ಮಿನ್ಮುಕ್ತಲಕ್ಷಣಮ್ ॥೧೩೧॥

ಧರ್ಮ-ಅರ್ಥ-ಕಾಮಗಳೆಂಬ ತ್ರಿವರ್ಗವು ಈ ಲೋಕದ ಕರ್ಮಗಳಲ್ಲಿ (ಧರ್ಮ, ಅರ್ಥ, ಕಾಮ, ಧರ್ಮಾರ್ಥಗಳು, ಧರ್ಮ-ಕಾಮಗಳು, ಕಾಮಾರ್ಥಗಳು, ಧರ್ಮಾರ್ಥ-ಕಾಮಗಳು–ಎಂಬುದಾಗಿ) ಏಳು ಪ್ರಕಾರವಾಗಿ ವ್ಯಕ್ತಪಡುತ್ತದೆ. ಯಾವನು ಇದರ ಅರಿವಿಲ್ಲದೆಯೇ ಅವುಗಳಲ್ಲಿ ಆಸಕ್ತನಾಗಿರುವನೋ (ನಿರ್ಲಿಪ್ತನಾಗಿರುವುದಿಲ್ಲವೋ)–ಅಂತಹವನಲ್ಲಿ ಮುಕ್ತಾತ್ಮನ ಲಕ್ಷಣವು ಯಾವುದು ತಾನೇ ಕಂಡುಬಂದೀತು?

ಪ್ರಿಯೇ ವಾಪ್ಯಪ್ರಿಯೇ ವಾಪಿ ದುರ್ಬಲೇ ಬಲವತ್ಯಪಿ ।
ಯಸ್ಯ ನಾಸ್ತಿ ಸಮಂ ಚಕ್ಷುಃ ಕಿಂ ತಸ್ಮಿನ್ಮುಕ್ತಲಕ್ಷಣಮ್ ॥೧೩೨॥

ಪ್ರಿಯನಾದವನಲ್ಲಿಯೂ, ಅಪ್ರಿಯನಾದವನಲ್ಲಿಯೂ, ದುರ್ಬಲನಲ್ಲಿಯೂ, ಬಲಿಷ್ಠನಲ್ಲಿಯೂ ಯಾವನಿಗೆ ಸಮದೃಷ್ಟಿಯಿರುವುದಿಲ್ಲವೋ–ಅಂತಹವನಲ್ಲಿ ಮುಕ್ತನ ಯಾವ ಲಕ್ಷಣವಿದ್ದೀತು?

ತದಯುಕ್ತಸ್ಯ ತೇ ಮೋಕ್ಷೇ ಯೋಽಭಿಮಾನೋ ಭವೇನ್ನೃಪ ।
ಸುಹೃದ್ಭಿಃ ಸಂನಿವಾರ್ಯಸ್ತೇಽವಿರಕ್ತಸ್ಯೇವ ಭೇಷಜಮ್ ॥೧೩೩॥

ನರೇಶ್ವರನೇ! ವಾಸ್ತವವಾಗಿ ನೀನು ಯೋಗಯುಕ್ತನೇ ಆಗಿಲ್ಲ. ಆದುದರಿಂದ ಮೋಕ್ಷಕ್ಕೆ ಅರ್ಹತೆಯನ್ನು ಪಡೆದುಕೊಂಡಿರುವುದಿಲ್ಲ. ಆದರೂ ನಿನಗೆ ಜೀವನ್ಮುಕ್ತನೆಂಬ ಅಭಿಮಾನವಿದೆ. ನಿನ್ನ ಸುಹೃದರೂ ನಿನ್ನನ್ನು ಜೀವನ್ಮುಕ್ತನೆಂದೇ ಭಾವಿಸಿದ್ದಾರೆ. ಆದರೆ ಪಥ್ಯಮಾಡದ ರೋಗಿಗೆ ಔಷಧವನ್ನು ಕೊಡದಂತೆ–ವಿರಕ್ತನಲ್ಲದ ನಿನಗೆ ಜೀವನ್ಮುಕ್ತನೆಂಬ ಗೌರವವನ್ನು ನಿನ್ನ ಸ್ನೇಹಿತರು ಕೊಡಬಾರದು. ನಿನ್ನ ಅಭಿಮಾನವನ್ನು ಅವರು ನಿವಾರಿಸಬೇಕು.

ತಾನಿ ತಾನಿ ತು ಸಂಚಿನ್ತ್ಯ ಸಙ್ಗಸ್ಥಾನಾನ್ಯರಿಂದಮ ।
ಆತ್ಮನಾತ್ಮನಿ ಸಮ್ಪಶ್ಯೇತ್ಕಿಮನ್ಯನ್ಮುಕ್ತಲಕ್ಷಣಮ್ ॥೧೩೪॥

ಅರಿಂದಮನೇ! ಆಸಕ್ತಿಯನ್ನು ಹುಟ್ಟಿಸುವ ಆ ಸ್ಥಾನಗಳು ಯಾವುವೆಂಬುದನ್ನು ವಿವೇಕದಿಂದ ತಿಳಿದುಕೊಳ್ಳಬೇಕು. (ಹೊರಗಿನ ಪದಾರ್ಥಗಳಲ್ಲಿ ಆಸಕ್ತಿಯು ಇರಬಾರದು.) ನಿನ್ನೊಳಗೇ ಆತ್ಮನನ್ನು ಕಾಣುತ್ತಾ ಆತ್ಮಾರಾಮನಾಗಿರಬೇಕು. ಇದಕ್ಕಿಂತಲೂ ಮುಕ್ತನ ಲಕ್ಷಣ ಬೇರೇನಿದೆ?

('ಆತ್ಮಕ್ರೀಡಃ ಆತ್ಮರತಿಃ ಕ್ರಿಯಾವಾನೇಷ ಬ್ರಹ್ಮವಿದಾಂ ವರಿಷ್ಠಃ।' 'ಯಸ್ತ್ವಾತ್ಮರತಿರೇವ ಸ್ಯಾದಾತ್ಮತೃಪ್ತಶ್ಚ ಮಾನವಃ।' 'ಆತ್ಮನ್ಯೇವಾತ್ಮನಾ ತುಷ್ಟಃ'–ಎಂಬ ಗೀತೋಪನಿಷದ್ವಾಕ್ಯಗಳೂ ಇದನ್ನೇ ಪ್ರತಿಪಾದಿಸುತ್ತವೆ.)

ಇಮಾನ್ಯನ್ಯಾನಿ ಸೂಕ್ಷ್ಮಾಣಿ ಮೋಕ್ಷಮಾಶ್ರಿತ್ಯ ಕಾನಿಚಿತ್ ।
ಚತುರಙ್ಗಪ್ರವೃತ್ತಾನಿ ಸಙ್ಗಸ್ಥಾನಾನಿ ಮೇ ಶೃಣು ॥೧೩೫॥

ಮೋಕ್ಷಧರ್ಮಕ್ಕೆ ಸಂಬಂಧಪಟ್ಟಂತೆ ಇವಲ್ಲದೇ ಸೂಕ್ಷ್ಮವಾದ ಬೇರೆ ಸಂಗಮಸ್ಥಾನಗಳಿವೆ. ಅವು (ಶಯನ, ಉಪಭೋಗ, ಭೋಜನ, ಆಚ್ಛಾ

ದನ ಎಂಬ) ನಾಲ್ಕು ಅಂಗಗಳಲ್ಲಿ ತೊಡಗುತ್ತವೆ. ಅವು ಯಾವುವೆಂಬುದನ್ನು ಹೇಳುವೆನು ; ಕೇಳು.

ಯ ಇಮಾಂ ಪೃಥಿವೀಂ ಕೃತ್ಸ್ನಾಮೇಕಚ್ಛತ್ರಾಂ ಪ್ರಶಾಸ್ತಿ ಹ ।
ಏಕ ಏವ ಸ ವೈ ರಾಜಾ ಪುರಮಧ್ಯಾವಸತ್ಯುತ ॥೧೩೬॥

ಯಾವನು ಈ ಸಮಗ್ರಭೂಮಂಡಲವನ್ನೂ ಏಕಚ್ಛತ್ರಾಧಿಪತಿಯಾಗಿ ಆಳುವನೋ–ಅಂತಹ ಚಕ್ರವರ್ತಿಯೂ ಒಂದು ಪುರದಲ್ಲಿ ವಾಸಮಾಡುತ್ತಾನೆ. (ಭೂಮಂಡಲಕ್ಕೆಲ್ಲ ಚಕ್ರವರ್ತಿಯಾಗಿದ್ದರೂ ಭೂಮಂಡಲವನ್ನೆಲ್ಲಾ ಆವರಿಸಿಕೊಂಡಿರಲು ಅವನಿಗೆ ಸಾಧ್ಯವಾಗುವುದಿಲ್ಲ. ರಾಜಧಾನಿಯಲ್ಲಿ ವಾಸಮಾಡಬೇಕು.)

ತತ್ಪುರೇ ಚೈಕಮೇವಾಸ್ಯ ಗೃಹಂ ಯದಧಿತಿಷ್ಠತಿ ।
ಗೃಹೇ ಶಯನಮಪ್ಯೇಕಂ ನಿಶಾಯಾಂ ಯತ್ರ ಲೀಯತೇ ॥೧೩೭॥

ಅಂತಹ ಚಕ್ರವರ್ತಿಗೆ ಆ ಒಂದು ನಗರವನ್ನೂ ಸಂಪೂರ್ಣವಾಗಿ ಆವರಿಸಿಕೊಂಡಿರಲು ಸಾಧ್ಯವಾಗುವುದಿಲ್ಲ. ಆ ಪುರದಲ್ಲಿರುವ ಒಂದು ಅರಮನೆಯಲ್ಲಿ ಅವನು ವಾಸಮಾಡುತ್ತಿರುತ್ತಾನೆ. ಆ ಅರಮನೆಯಲ್ಲಿಯೂ ಒಂದು ಹಾಸಿಗೆಯಿರುತ್ತದೆ. ಆ ಒಂದು ಹಾಸಿಗೆಯಲ್ಲೇ ಅವನು ರಾತ್ರಿಯಲ್ಲಿ ಮಲಗುತ್ತಾನೆ.

ಶಯ್ಯಾರ್ಧಂ ತಸ್ಯ ಚಾಪ್ಯತ್ರ ಸ್ತ್ರೀಪೂರ್ವಮಧಿತಿಷ್ಠತಿ ।
ತದನೇನ ಪ್ರಸಙ್ಗೇನ ಫಲೇನೈವೇಹ ಯುಜ್ಯತೇ ॥೧೩೮॥

ಹಾಸಿಗೆಯಲ್ಲಿ ಪೂರ್ತಿಯಾಗಿಯೂ ಅವನು ಮಲಗಲು ಸಾಧ್ಯವಾಗುವುದಿಲ್ಲ. ಅರ್ಧಭಾಗವನ್ನು ಮೊದಲಾಗಿಯೇ ರಾಣಿಯು ಆಕ್ರಮಿಸಿರುತ್ತಾಳೆ. ಆದುದರಿಂದ ಅಖಂಡಭೂಮಂಡಲಕ್ಕೆ ಅಧಿಪತಿಯಾಗಿದ್ದರೂ ಅವನು ಅದರಿಂದ ಪಡೆಯುವ ಫಲವು ಅತ್ಯಲ್ಪವಾಗಿರುತ್ತದೆ.

ಏವಮೇವೋಪಭೋಗೇಷು ಭೋಜನಾಚ್ಛಾದನೇಷು ಚ ।
ಗುಣೇಷು ಪರಿಮೇಯೇಷು ನಿಗ್ರಹಾನುಗ್ರಹಂ ಪ್ರತಿ ॥೧೩೯॥

ಪರತನ್ತ್ರಃ ಸದಾ ರಾಜಾ ಸ್ವಲ್ಪೇಷ್ವಪಿ ಪ್ರಸಜ್ಜತೇ ।
ಸಂಧಿವಿಗ್ರಹಯೋಗೇ ಚ ಕುತೋ ರಾಜ್ಞಃ ಸ್ವತನ್ತ್ರತಾ ॥೧೪೦॥

ಹೀಗೆಯೇ ನಾನಾವಿಧವಾದ ಉಪಭೋಗಗಳಲ್ಲಿಯೂ, ಭೋಜನಗಳಲ್ಲಿಯೂ, ವಸ್ತ್ರಗಳ ಧಾರಣೆಯಲ್ಲಿಯೂ, ವಿಷಯಗಳ ಪರಿಮಿತಸೇವನೆಗಳಲ್ಲಿಯೂ, ದುಷ್ಟನಿಗ್ರಹ-ಶಿಷ್ಟಪರಿಪಾಲನೆಗಳಲ್ಲಿಯೂ–ರಾಜನು ಯಾವಾಗಲೂ ಪರತಂತ್ರನಾಗಿಯೇ ಇರುತ್ತಾನೆ. ಅತ್ಯಲ್ಪವಿಷಯಗಳಲ್ಲಿಯೂ ಅವನಿಗೆ ಸ್ವಾತಂತ್ರ್ಯವೇ ಇರುವುದಿಲ್ಲ. ಹೀಗಿದ್ದರೂ ರಾಜನು ಅವುಗಳಲ್ಲಿ ಆಸಕ್ತನಾಗಿರುತ್ತಾನೆ. ಶತ್ರುಗಳೊಡನೆ ಸಂಧಿಮಾಡಿಕೊಳ್ಳುವುದಕ್ಕಾಗಲೀ, ಯುದ್ಧಮಾಡುವುದಕ್ಕಾಗಲೀ ರಾಜನಿಗೆ ಸ್ವಾತಂತ್ರ್ಯವೆಲ್ಲಿದೆ?

ಸ್ತ್ರೀಷು ಕ್ರೀಡಾವಿಹಾರೇಷು ನಿತ್ಯಮಸ್ಯಾಸ್ವತನ್ತ್ರತಾ ।
ಮನ್ತ್ರೇ ಚಾಮಾತ್ಯಸಮಿತೌ ಕುತಸ್ತಸ್ಯ ಸ್ವತನ್ತ್ರತಾ ॥೧೪೧॥

ಸ್ತ್ರೀಯರೊಡನೆ ರಮಿಸಲೂ, ವಿಹರಿಸಲೂ ಮತ್ತು ಉದ್ಯಾನವನಗಳಲ್ಲಿ ಸಂಚರಿಸಲೂ ರಾಜನಿಗೆ ಸ್ವಾತಂತ್ರ್ಯವಿರುವುದಿಲ್ಲ. ಸ್ವೇಚ್ಛೆಯಿಂದ ಮನಬಂದಂತೆ ನಡೆದುಕೊಳ್ಳಲು ರಾಜನಾದವನಿಗೆ ಸಾಧ್ಯವಾಗುವುದೇ ಇಲ್ಲ. ಹೀಗಿರುವಾಗ ಮಂತ್ರಿಮಂಡಲದಲ್ಲಿ ಮಾಡುವ ಮಂತ್ರಾಲೋಚನೆಯಲ್ಲಿ ರಾಜನಿಗೆ ಸ್ವಾತಂತ್ರ್ಯವೆಂಬುದೆಲ್ಲಿದೆ? (ಮಂತ್ರಿಗಳ ಸಲಹೆಯಂತೆ ನಡೆಯುವುದೇ ರಾಜನಿಗೆ ಅನಿವಾರ್ಯವಾಗುತ್ತದೆ.)

ಯದಾ ಹ್ಯಾಜ್ಞಾಪಯತ್ಯನ್ಯಾಂಸ್ತತ್ರಾಸ್ಯೋಕ್ತಾ ಸ್ವತನ್ತ್ರತಾ ।
ಅವಶಃ ಕಾರ್ಯತೇ ತತ್ರ ತಸ್ಮಿಂಸ್ತಸ್ಮಿನ್ ಕ್ಷಣೇ ಸ್ಥಿತಃ ॥೧೪೨॥

ಯಾವಾಗ ರಾಜನು ಯಾವುದಾದರೂ ಕಾರ್ಯವನ್ನು ಮಾಡಲು ಇತರರಿಗೆ ಆಜ್ಞೆಯನ್ನು ಮಾಡುವನೋ–ಆಗ ಅವನಿಗೆ ಸ್ವಾತಂತ್ರ್ಯವಿರುವುದೆಂದು ಹೇಳುತ್ತಾರೆ. ಆದರೆ ಆಯಾ ಸಮಯಗಳಲ್ಲಿ ಇತರರ ಸಲಹೆಗೆ ಅಧೀನನಾಗಿಯೇ ಅವನು ಆಜ್ಞೆಯನ್ನು ನೀಡಬೇಕಾಗುತ್ತದೆ. (ಆದುದರಿಂದ ರಾಜನು ಆಜ್ಞೆಮಾಡಿದ ಮಾತ್ರಕ್ಕೆ ಆ ಆಜ್ಞೆಯನ್ನು ರಾಜನೇ ಸ್ವೇಚ್ಛೆಯಿಂದ ಮಾಡಿದನೆಂದೂ ಹೇಳಲಾಗುವುದಿಲ್ಲ. ತೋರಿಕೆಗೆ ಮಾತ್ರವೇ ಅದು ರಾಜಾಜ್ಞೆಯಾಗಿರುತ್ತದೆ.)

ಸ್ವಪ್ನಕಾಮೋ ನ ಲಭತೇ ಸ್ವಪ್ತುಂ ಕಾರ್ಯಾರ್ಥಿಭಿರ್ಜನೈಃ ।
ಶಯನೇ ಚಾಪ್ಯನುಜ್ಞಾತಃ ಸುಪ್ತ ಉತ್ಥಾಪ್ಯತೇಽವಶಃ ॥೧೪೩॥

ರಾಜನಾದವನು ಮಲಗಿ ನಿದ್ರಿಸಬೇಕೆಂದು ಇಚ್ಛಿಸಿದರೂ ಕಾರ್ಯಾರ್ಥಿಗಳಾದ ಜನರಿಂದ ಯಾವಾಗಲೂ ಸುತ್ತುವರಿಯಲ್ಪಟ್ಟಿರುವುದರಿಂದ ತನ್ನ ಇಚ್ಛೆಯಂತೆ ಅವನಿಗೆ ಮಲಗಲೂ ಸಾಧ್ಯವಾಗುವುದಿಲ್ಲ. ಒಂದು ವೇಳೆ ಅವರ ಅನುಮತಿಯನ್ನು ಪಡೆದು ಮಲಗಿದರೂ ಅಸ್ವತಂತ್ರನಾದ ರಾಜನು ಕಾರ್ಯಾರ್ಥಿಗಳಾದ ಜನರಿಂದ ಎಚ್ಚರಗೊಳಿಸಲ್ಪಡುತ್ತಾನೆ.

ಸ್ನಾಹ್ಯಾಲಭ ಪಿಬ ಪ್ರಾಶ ಜುಹುಧ್ಯಗ್ನೀನ್ಯಜೇತ್ಯಪಿ ।
ಬ್ರವೀಹಿ ಶೃಣು ಚಾಪೀತಿ ವಿವಶಃ ಕಾರ್ಯತೇ ಪರೈಃ ॥೧೪೪॥

ನಿನ್ನ ಸೇವಕರು ಬಂದು–'ಮಹಾಸ್ವಾಮಿಗಳೇ! ಸ್ನಾನಮಾಡಿರಿ'–ಎನ್ನುತ್ತಾರೆ. ನಿನಗೆ ಆ ಸಮಯದಲ್ಲಿ ಇಷ್ಟವಿರಲಿ ಇಷ್ಟವಿಲ್ಲದಿರಲಿ–ಸ್ನಾನ ಮಾಡಬೇಕು. ಎಣ್ಣೆಯಿಂದ ಶರೀರವನ್ನು ಮರ್ದಿಸಿಕೊಳ್ಳುವಂತೆ ಹೇಳುತ್ತಾರೆ. ನೀರುಕುಡಿಯಲು ಹೇಳುತ್ತಾರೆ. ಊಟಮಾಡಲು ಹೇಳುತ್ತಾರೆ. ಪುರೋಹಿತರು ಬಂದು ಅಗ್ನಿಹೋತ್ರಮಾಡಲು ಹೇಳುತ್ತಾರೆ. ಯಜ್ಞಮಾಡಲು ಹೇಳುತ್ತಾರೆ. ವಿದೇಶೀಯರು ಬಂದಾಗ ಅವರೊಡನೆ ಮಾತನಾಡಲು ಮಂತ್ರಿಗಳು ಆದೇಶಿಸುತ್ತಾರೆ. ಇತರರ ಮನವಿಗಳನ್ನು ಕೇಳುವಂತೆಯೂ ಹೇಳುತ್ತಾರೆ. ಹೀಗೆ ಇತರರು–ಅಸ್ವತಂತ್ರನಾದ ನಿನ್ನಿಂದ ಈ ಕಾರ್ಯಗಳೆಲ್ಲವನ್ನೂ ಮಾಡಿಸುತ್ತಾರೆ.

ಅಭಿಗಮ್ಯಾಭಿಗಮ್ಯೈವಂ ಯಾಚನ್ತೇ ಸತತಂ ನರಾಃ ।
ನ ಚಾಪ್ಯುತ್ಸಹತೇ ದಾತುಂ ವಿತ್ತರಕ್ಷೀ ಮಹಾಜನಾನ್ ॥೧೪೫॥

ಯಾಚಕರು ರಾಜನ ಹತ್ತಿರ ಬಂದು ಸರ್ವಕಾಲದಲ್ಲಿಯೂ ಧನವನ್ನು ಯಾಚಿಸುತ್ತಲೇ ಇರುತ್ತಾರೆ. ಆದರೆ ಧನವನ್ನು ರಕ್ಷಿಸುವುದರಲ್ಲಿಯೇ ನಿರತನಾದ ರಾಜನಿಗೆ ಹೆಚ್ಚುಮಂದಿ ಯಾಚಕರಿಗೆ ಬೇಡಿದುದನ್ನು ಕೊಡಲು ಉತ್ಸಾಹವು ಬರುವುದಿಲ್ಲ.

ದಾನೇ ಕೋಶಕ್ಷಯೋಽಪ್ಯಸ್ಯ ವೈರಂ ಚಾಸ್ಯಾಪ್ರಯಚ್ಛತಃ ।
ಕ್ಷಣೇನಾಸ್ಯೋಪವರ್ತನ್ತೇ ದೋಷಾ ವೈರಾಗ್ಯಕಾರಕಾಃ ॥೧೪೬॥

ಯಾಚಿಸುವವರೆಲ್ಲರಿಗೂ ದಾನಕೊಡುತ್ತಲೇ ಇದ್ದರೆ ಭಂಡಾರವೇ ಬರಿದಾಗುತ್ತದೆ. ದಾನವನ್ನು ಕೊಡದೆಯೇ ಇದ್ದರೆ ಎಲ್ಲರೊಡನೆಯೂ ವೈರವುಂಟಾಗುತ್ತದೆ. ರಾಜಕಾರ್ಯಗಳಲ್ಲಿಯೇ ವೈರಾಗ್ಯವನ್ನು ಹುಟ್ಟಿಸುವ ಇಂತಹ ದೋಷಗಳು ರಾಜನ ಮುಂದೆ ಬರುತ್ತಲೇ ಇರುತ್ತವೆ.

ಪ್ರಾಜ್ಞಾಞ್ಶೂರಾಂಸ್ತಥೈವಾಢ್ಯಾನೇಕಸ್ಥಾನಪಿ ಶಙ್ಕತೇ ।
ಭಯಮಪ್ಯಭಯೇ ರಾಜ್ಞೋ ಯೈಶ್ಚ ನಿತ್ಯ ಮುಪಾಸ್ಯತೇ ॥೧೪೭॥

ಪ್ರಾಜ್ಞರು, ಶೂರರು, ಆಢ್ಯರು ಒಂದೆಡೆಯಲ್ಲಿ ಸೇರಿದರೆ ರಾಜನು ಸಂದೇಹಿಸುತ್ತಾನೆ. ಯಾರಿಂದ ತನಗೆ ಭಯವೇ ಇರುವುದಿಲ್ಲವೋ ಅಂತಹವರ ವಿಷಯದಲ್ಲಿಯೂ ರಾಜನು ಭಯಪಡುತ್ತಾನೆ. ಅನುದಿನವೂ ತನ್ನ ಸಮೀಪದಲ್ಲಿ ಓಡಾಡುವವರ ವಿಷಯದಲ್ಲಿಯೂ ರಾಜನು ಭಯಪಡುತ್ತಾನೆ.

ತಥಾ ಚೈವ ಪ್ರದುಷ್ಯನ್ತಿ ರಾಜನ್ಯೇ ಕೀರ್ತಿತಾ ಮಯಾ ।
ತಥೈವಾಸ್ಯ ಭಯಂ ತೇಭ್ಯೋ ಜಾಯತೇ ಪಶ್ಯ ಯಾದೃಶಮ್ ॥

ನಾನು ಹೇಳಿದ ಪ್ರಾಜ್ಞರು, ಶೂರರು, ಆಢ್ಯರು–ರಾಜನಿಗೆ ತಮ್ಮ ವಿಷಯದಲ್ಲಿ ಉಂಟಾಗಿರುವ ಸಂದೇಹವನ್ನು ಕಂಡು ರಾಜನ ವಿಷಯದಲ್ಲಿ ದುರ್ಭಾವನೆಯನ್ನು ಹೊಂದುತ್ತಾರೆ. ಅಂತಹ ಸನ್ನಿವೇಶಗಳಲ್ಲಿ ರಾಜನಿಗೆ ಅವರಿಂದ ಎಂತಹ ಭಯವಿರುವುದೆಂಬುದನ್ನು ನೀನೇ ತಿಳಿದುಕೊಳ್ಳಬಹುದು.

ಸರ್ವಃ ಸ್ವೇ ಸ್ವೇ ಗೃಹೇ ರಾಜಾ ಸರ್ವಃ ಸ್ವೇ ಸ್ವೇ ಗೃಹೇ ಗೃಹೀ ।
ನಿಗ್ರಹಾನುಗ್ರಹಾನ್ಕುರ್ವಂಸ್ತುಲ್ಯೋ ಜನಕ ರಾಜಭಿಃ ॥೧೪೯॥

ಜನಕ! ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ರಾಜರೇ ಆಗಿರುತ್ತಾರೆ. ಎಲ್ಲರೂ ತಮ್ಮ-ತಮ್ಮ ಮನೆಗಳಲ್ಲಿ ಯಜಮಾನರೇ ಆಗಿರುತ್ತಾರೆ. ಎಲ್ಲರೂ ತಮಗೆ ಬೇಕಾದವರಿಗೆ ಅನುಗ್ರಹವನ್ನೂ–ಬೇಡದವರಿಗೆ ಶಿಕ್ಷೆಯನ್ನೂ ಕೊಡುತ್ತಲೇ ಇರುತ್ತಾರೆ. ಆದುದರಿಂದ ಎಲ್ಲ ಪ್ರಜೆಗಳೂ ರಾಜರಿಗೆ ಸಮಾನರೇ ಆಗಿರುತ್ತಾರೆ.

ಪುತ್ರಾ ದಾರಾಸ್ತಥೈವಾತ್ಮಾ ಕೋಶೋ ಮಿತ್ರಾಣಿ ಸಂಚಯಾಃ ।
ಪರೈಃ ಸಾಧಾರಣಾ ಹ್ಯೇತೇ ತೈಸ್ತೈರೇವಾಸ್ಯ ಹೇತುಭಿಃ ॥೧೫೦॥

ಪುತ್ರರು, ಪತ್ನಿಯರು, ಶರೀರ, ಕೋಶ, ಮಿತ್ರರು ಮತ್ತು ಧನ ಸಂಗ್ರಹ –ಇತ್ಯಾದಿಗಳು ರಾಜನಲ್ಲಿರುವಂತೆಯೇ ಇತರರಲ್ಲಿಯೂ ಸಾಧಾರಣವಾಗಿ ಇದ್ದೇ ಇರುತ್ತವೆ. ಯಾವ ಯಾವ ಕಾರಣಗಳಿಂದ ಒಬ್ಬನನ್ನು ರಾಜನೆಂದು ಕರೆಯುವರೋ–ಆಯಾ ಕಾರಣಗಳಿಂದಲೇ ಇತರರನ್ನೂ ರಾಜನಿಗೆ ಸಮಾನರೆಂದೇ ಹೇಳಬಹುದು.

ಹತೋ ದೇಶಃ ಪುರಂ ದಗ್ಧಂ ಪ್ರಧಾನಃ ಕುಞ್ಜರೋ ಮೃತಃ ।
ಲೋಕಸಾಧಾರಣೇಷ್ವೇಷು ಮಿಥ್ಯಾಜ್ಞಾನೇನ ತಪ್ಯತೇ ॥೧೫೧॥

'ದೇಶವು ನಷ್ಟವಾಗಿ ಹೋಯಿತು. ರಾಜಧಾನಿಯು ಸುಟ್ಟು ಹೋಯಿತು. ಪಟ್ಟದಾನೆಯು ಸತ್ತುಹೋಯಿತು' –ಇವೆಲ್ಲವೂ ಲೋಕ ಸಾಧಾರಣವಾದ ವಿಷಯಗಳೇ ಆಗಿವೆ. ಈ ವಿಷಯಗಳು ರಾಜನಿಗೆ ಎಷ್ಟು ಸಂಬಂಧಿಸಿವೆಯೋ –ಅಷ್ಟೇ ಪರಿಮಿತಿಯಲ್ಲಿ ಪ್ರಜೆಗಳಿಗೂ ಸಂಬಂಧಿಸಿವೆ. ಆದರೆ ರಾಜನು ತನ್ನಲ್ಲಿರುವ ಮಿಥ್ಯಾಜ್ಞಾನದ ಕಾರಣದಿಂದ–'ನನ್ನ ದೇಶವು ನಷ್ಟವಾಗಿ ಹೋಯಿತು. ನನ್ನ ಪಟ್ಟಣವು ಭಸ್ಮವಾಗಿ ಹೋಯಿತು. ನನ್ನ ಪಟ್ಟದಾನೆಯು ಸತ್ತುಹೋಯಿತು'–ಎಂಬುದಾಗಿ ಪರಿತಪಿಸುತ್ತಾನೆ.

ಅಮುಕ್ತೋ ಮಾನಸೈರ್ದುಃಖೈರಿಚ್ಛಾದ್ವೇಷಭಯೋದ್ಭವೈಃ ।
ಶಿರೋರೋಗಾದಿಭೀ ರೋಗೈಸ್ತಥೈವಾಭಿನಿಯನ್ತೃಭಿಃ ॥೧೫೨॥

ಇಚ್ಛೆ, ದ್ವೇಷ ಮತ್ತು ಭಯಗಳಿಂದ ಹುಟ್ಟುವ ಮಾನಸಿಕದುಃಖಗಳು ರಾಜನಿಗೂ ತಪ್ಪಿದ್ದಲ್ಲ. ಹಾಗೆಯೇ ಅವನ ಚಲನ-ವಲನಗಳನ್ನೂ ರಾಜಕಾರ್ಯಗಳನ್ನೂ ಮೊಟಕುಗೊಳಿಸುವ ತಲೆನೋವೇ ಮೊದಲಾದ ಶಾರೀರಕರೋಗಗಳಿಂದಲೂ ಮುಕ್ತನಾಗುವುದಿಲ್ಲ. (ರಾಜನಾದವನಿಗೆ ಸರ್ವಸಾಮಾನ್ಯವಾದ ಆಧಿ-ವ್ಯಾಧಿಗಳು ಇದ್ದೇ ಇರುತ್ತವೆ.)

ದ್ವನ್ದ್ವೈಸ್ತೈಸ್ತೈರುಪಹತಃ ಸರ್ವತಃ ಪರಿಶಙ್ಕಿತಃ ।
ಬಹುಪ್ರತ್ಯರ್ಥಿಕಂ ರಾಜ್ಯಮುಪಾಸ್ತೇ ಗಣಯನ್ನಿಶಾಃ ॥೧೫೩॥

ರಾಜನೆನಿಸಿಕೊಳ್ಳುವವನು ನಾನಾಪ್ರಕಾರವಾದ ದ್ವಂದ್ವಗಳಿಂದ ಪೀಡಿಸಲ್ಪಟ್ಟವನಾಗಿ, ಎಲ್ಲ ಕಡೆಗಳಿಂದಲೂ ಸಂದೇಹಿಸಲ್ಪಟ್ಟವನಾಗಿ (ಎಲ್ಲರ

ಸಂದೇಹಕ್ಕೂ ಪಾತ್ರನಾಗಿ) ರಾತ್ರಿಗಳನ್ನೆಣಿಸುತ್ತಾ ಅನೇಕ ಶತ್ರುಗಳಿಂದ ತುಂಬಿರುವ ರಾಜ್ಯವನ್ನು ಆಳುತ್ತಿರುತ್ತಾನೆ.

ತದಲ್ಪಸುಖಮತ್ಯರ್ಥಂ ಬಹುದುಃಖಮಸಾರವತ್ ।
ತೃಣಾಗ್ನಿಜ್ವಲನಪ್ರಖ್ಯಂ ಫೇನಬುದ್ಬುದಸಂನಿಭಮ್ ।
ಕೋ ರಾಜ್ಯಮಭಿಪದ್ಯೇತ ಪ್ರಾಪ್ಯ ಚೋಪಶಮಂ ಲಭೇತ್ ॥೧೫೪॥

ರಾಜ್ಯಪರಿಪಾಲನೆಯೆಂಬುದು ಅತ್ಯಲ್ಪಸುಖದಾಯಕವಾದುದು. ಬಹುದುಃಖವನ್ನುಂಟುಮಾಡತಕ್ಕುದು. ಸಾರಹೀನವಾದುದು. ಹುಲ್ಲಿಗೆ ಬಿದ್ದ ಬೆಂಕಿಯು ಕ್ಷಣಮಾತ್ರದಲ್ಲಿ ಆರಿಹೋಗುವಂತೆ–ಕ್ಷಣಿಕವಾದ ಅಧಿಕಾರ ಸಂಪತ್ತಿಯಿಂದ ಕೂಡಿದುದು. ನೊರೆ ಮತ್ತು ನೀರುಗುಳ್ಳೆಗಳಂತೆ ಕ್ಷಣ ಭಂಗುರವಾದುದು. ಇಂತಹ ರಾಜ್ಯಾಧಿಕಾರವನ್ನು ಪ್ರಾಜ್ಞರಾದ ಯಾರು ತಾನೇ ವಹಿಸಿಕೊಳ್ಳುತ್ತಾರೆ? ವಹಿಸಿಕೊಂಡನಂತರ ಯಾವನು ತಾನೇ ಶಾಂತಿಯನ್ನು ಪಡೆಯುತ್ತಾನೆ? (ಉಪದ್ರವಕರವಾದ ರಾಜ್ಯಾಧಿಕಾರವನ್ನು ಯಾರೂ ವಹಿಸಿಕೊಳ್ಳಲು ಹೋಗುವುದಿಲ್ಲ. ಒಂದು ವೇಳೆ ವಹಿಸಿಕೊಂಡರೆ ಅವರಿಗೆ ಶಾಂತಿಯೆಂಬುದೇ ಇರುವುದಿಲ್ಲ.)

ಮಮೇದಮಿತಿ ಯಚ್ಚೇದಂ ಪುರಂ ರಾಷ್ಟ್ರಂ ಚ ಮನ್ಯಸೇ ।
ಬಲಂ ಕೋಶಮಮಾತ್ಯಾಂಶ್ಚ ಕಸ್ಯೈತಾನಿ ನ ವಾ ನೃಪ ॥೧೫೫॥

ನರೇಶ್ವರ! ನೀನು ಈ ರಾಜಧಾನಿಯನ್ನೂ, ರಾಷ್ಟ್ರವನ್ನೂ, ಸೈನ್ಯವನ್ನೂ, ಭಂಡಾರವನ್ನೂ, ಅಮಾತ್ಯರನ್ನೂ ನಿನ್ನದೆಂದು ಭಾವಿಸಿದರೆ– ಅದು ಕೇವಲ ಭ್ರಾಂತಿಯೇ ಸರಿ. ನಾನು ನಿನ್ನನ್ನು ಪ್ರಶ್ನಿಸುತ್ತೇನೆ : ಇವುಗಳು ಯಾರಿಗೆ ಸೇರಿದುವುಗಳಾಗಿವೆ? ಯಾರಿಗೆ ಸೇರಿದುವುಗಳಾಗಿಲ್ಲ? (ಪುರ-ರಾಷ್ಟ್ರ-ಸೈನ್ಯ-ಕೋಶಗಳು ಒಬ್ಬನಿಗೆ ಸೇರಿದುವುಗಳಲ್ಲ. ಎಲ್ಲ ಪ್ರಜೆಗಳಿಗೂ ಇವು ಸೇರಿದುವುಗಳಾಗಿವೆ.

ಮಿತ್ರಾಮಾತ್ಯಪುರಂ ರಾಷ್ಟ್ರಂ ದಣ್ಡಃ ಕೋಶೋ ಮಹೀಪತಿಃ ।
ಸಪ್ತಾಙ್ಗಸ್ಯಾಸ್ಯ ರಾಜ್ಯಸ್ಯ ತ್ರಿದಣ್ಡಸ್ಯೇವ ತಿಷ್ಠತಃ ॥೧೫೬॥

ಅನ್ಯೋನ್ಯಗುಣಯುಕ್ತಸ್ಯ ಕಃ ಕೇನ ಗುಣತೋಽಧಿಕಃ ॥೧೫೭॥

ಮಿತ್ರರು, ಅಮಾತ್ಯರು, ನಗರ, ರಾಷ್ಟ್ರ, ದಂಡ, ಕೋಶ ಮತ್ತು ರಾಜ –ಇವು ರಾಜ್ಯದ ಸಪ್ತಾಂಗಗಳು. ನನ್ನ ಕೈಯ್ಯಲ್ಲಿ ಈ ತ್ರಿದಂಡವಿರುವಂತೆ ನಿನ್ನ ಅಧೀನದಲ್ಲಿ ಈ ರಾಜ್ಯವಿದೆ. ನಿನ್ನಲ್ಲಿರುವ ಸಪ್ತಾಂಗಯುಕ್ತವಾದ ರಾಜ್ಯವೂ –ನನ್ನಲ್ಲಿರುವ ಈ ತ್ರಿದಂಡವೂ ಪರಸ್ಪರವಾಗಿ ಉತ್ಕೃಷ್ಟವಾದ ಗುಣಗಳಿಂದ ಕೂಡಿವೆ. ಹೀಗಿರುವಾಗ ಯಾವನು ಯಾರಿಗೆ ಯಾವ ಗುಣದಿಂದ ಅಧಿಕನಾಗಿದ್ದಾನೆ?

ತೇಷು ತೇಷು ಹಿ ಕಾಲೇಷು ತತ್ತದಙ್ಗಂ ವಿಶಿಷ್ಯತೇ ।
ಯೇನ ಯತ್ಸಿಧ್ಯತೇ ಕಾರ್ಯಂ ತತ್ಪ್ರಾಧಾನ್ಯಾಯ ಕಲ್ಪತೇ ॥೧೫೮॥

ರಾಜ್ಯದ ಸಪ್ತಾಂಗಗಳಲ್ಲಿ ಒಂದೊಂದು ಅಂಗವೂ ಆಯಾ ಕಾಲಗಳಲ್ಲಿ ತನ್ನ ವೈಶಿಷ್ಟ್ಯವನ್ನು ಪ್ರಕಟಿಸುತ್ತದೆ. ಯಾವ ಅಂಗದಿಂದ ಒಂದು ಕಾರ್ಯವು ಸಿದ್ಧಿಸುವುದೋ –ಆ ಅಂಗವು ಆ ಸಮಯದಲ್ಲಿ ಪ್ರಧಾನವಾದ ಅಂಗ ವೆನಿಸಿಕೊಳ್ಳುತ್ತದೆ.

ಸಪ್ತಾಙ್ಗಶ್ಚೈವ ಸಂಘಾತಸ್ತ್ರಯಶ್ಚಾನ್ಯೇ ನೃಪೋತ್ತಮ ।
ಸಮ್ಭೂಯ ದಶವರ್ಗೋಽಯಂ ಭುಙ್ಕ್ತೇ ರಾಜ್ಯಂ ಹಿ ರಾಜವತ್ ॥೧೫೯॥

ಈ ಸಪ್ತಾಂಗಗಳ ಸಮುದಾಯವೂ ಮತ್ತು ಮೂರು ಇತರ ಶಕ್ತಿಗಳೂ (ಪ್ರಭುಶಕ್ತಿ, ಉತ್ಸಾಹಶಕ್ತಿ ಮತ್ತು ಮಂತ್ರಶಕ್ತಿಗಳು) ಸೇರಿ ಹತ್ತರ ವರ್ಗವಾಗುತ್ತದೆ. ಈ ಹತ್ತರ ವರ್ಗವೂ ಸಂಘಟಿತವಾಗಿ ರಾಜನಂತೆಯೇ ರಾಜ್ಯವನ್ನು ಉಪಭೋಗಿಸುತ್ತದೆ.

ಯಶ್ಚ ರಾಜಾ ಮಹೋತ್ಸಾಹಃ ಕ್ಷತ್ರಧರ್ಮೇ ರತೋ ಭವೇತ್ ।
ಸ ತುಷ್ಯೇದ್ದಶಭಾಗೇನ ತತಸ್ತ್ವನ್ಯೋ ದಶಾವರೈಃ ॥೧೬೦॥

ಯಾವ ರಾಜನು ಮಹೋತ್ಸಾಹಿಯಾಗಿಯೂ, ಕ್ಷತ್ರಧರ್ಮ ನಿರತನಾಗಿಯೂ ಇರುವನೋ ಅವನು, ಪ್ರಜೆಗಳು ತಮ್ಮ ಆದಾಯದಲ್ಲಿ ಕೊಡುವ ಹತ್ತನೆಯ ಒಂದು ಭಾಗ ರಾಜಾದಾಯದಿಂದ ತೃಪ್ತನಾಗುತ್ತಾನೆ. ಸಾಧಾರಣನಾದ ರಾಜನು ಅದಕ್ಕಿಂತಲೂ ಕಡಿಮೆಯದಾದ ರಾಜಾದಾಯ ದಿಂದಲೇ ತೃಪ್ತನಾಗುತ್ತಾನೆ.

ನಾಸ್ತ್ಯಸಾಧಾರಣೋ ರಾಜಾ ನಾಸ್ತಿ ರಾಜ್ಯಮರಾಜಕಮ್ ।
ರಾಜ್ಯೇಽಸತಿ ಕುತೋ ಧರ್ಮೋ ಧರ್ಮೇಽಸತಿ ಕುತಃ ಪರಮ್ ॥

ಯಾವ ರಾಜ್ಯದಲ್ಲಿಯೇ ಆಗಲೀ ಸಾಮಾನ್ಯವಾಗಿ ಅಸಾಧಾರಣನಾದ ಅದ್ಭುತಬಲ-ಪರಾಕ್ರಮಗಳುಳ್ಳ ರಾಜನೇನೂ ಇರುವುದಿಲ್ಲ. ಸಾಧಾರಣ ರಾಜರೇ ಇದ್ದರೂ ರಾಜ್ಯವು ಅರಾಜಕವಾಗುವುದಿಲ್ಲ. ರಾಜ್ಯವೇ ಇಲ್ಲದಿದ್ದರೆ ಧರ್ಮವೆಲ್ಲಿರುತ್ತದೆ? ಧರ್ಮವೇ ಇಲ್ಲದಿದ್ದರೆ ಪರಮಪದದ ಪ್ರಾಪ್ತಿ ಯಾದರೂ ಹೇಗಾಗುತ್ತದೆ?

ಯೋಽಪ್ಯತ್ರ ಪರಮೋ ಧರ್ಮಃ ಪವಿತ್ರಂ ರಾಜರಾಜ್ಯಯೋಃ ।
ಪೃಥಿವೀ ದಕ್ಷಿಣಾ ಯಸ್ಯ ಸೋಽಶ್ವಮೇಧೇನ ಯುಜ್ಯತೇ ॥೧೬೨॥

ಯಾವ ರಾಜನಲ್ಲಿ ಮತ್ತು ರಾಜ್ಯದಲ್ಲಿ ಶ್ರೇಷ್ಠವಾದ ಯಾವ ಧರ್ಮವು ಪವಿತ್ರವೆಂದು ಭಾವಿಸಲ್ಪಟ್ಟಿರುವುದೋ –ಯಾವ ರಾಜನಿಗೆ ಪೃಥಿವಿಯೇ ದಕ್ಷಿಣಾರೂಪವಾಗಿರುವುದೋ (ಯಾವ ರಾಜನು ಇಡೀ ಭೂಮಿಯನ್ನೇ ದಕ್ಷಿಣೆಯ ರೂಪದಲ್ಲಿ ದಾನಮಾಡಲು ಸದಾ ಸಿದ್ಧನಾಗಿರುವನೋ)– ಅಂತಹ ರಾಜನು ಅಶ್ವಮೇಧಯಜ್ಞವನ್ನು ಮಾಡಿದ ಫಲಕ್ಕೆ ಭಾಗಿ ಯಾಗುತ್ತಾನೆ.

ಸಾಹಮೇತಾನಿ ಕರ್ಮಾಣಿ ರಾಜದುಃಖಾನಿ ಮೈಥಿಲ ।
ಸಮರ್ಥಾ ಶತಶೋ ವಕ್ತುಮಥವಾಪಿ ಸಹಸ್ರಶಃ ॥೧೬೩॥

ಮಿಥಿಲಾಧಿಪತಿಯೇ! ರಾಜನಿಗೆ ದುಃಖವನ್ನುಂಟುಮಾಡುವ ಕರ್ಮ ಗಳನ್ನು ನಾನು ನೂರು ಸಂಖ್ಯೆಯಲ್ಲಿ ಅಥವಾ ಸಾವಿರ ಸಂಖ್ಯೆಯಲ್ಲಿ ಪಟ್ಟಿಮಾಡಿ ಹೇಳಲು ಸಮರ್ಥಳಾಗಿದ್ದೇನೆ.

ಸ್ವದೇಹೇನಾಭಿಷಙ್ಗೋ ಮೇ ಕುತಃ ಪರಪರಿಗ್ರಹೇ ।
ನ ಮಾಮೇವಂವಿಧಾಂ ಯುಕ್ತಾಮೀದೃಶಂ ವಕ್ತುಮರ್ಹಸಿ ॥೧೬೪॥

ನನ್ನ ವಿಷಯವನ್ನು ಹೇಳಬೇಕಾದರೆ ನನ್ನ ದೇಹದ ಮೇಲೆಯೇ ನನಗೆ ಯಾವ ವಿಧವಾದ ಆಸಕ್ತಿಯೂ ಇಲ್ಲ. ಹೀಗಿರುವಾಗ ಪರಪುರುಷರನ್ನು ಪರಿಗ್ರಹಿಸುವುದರಲ್ಲಿ ನನಗೆ ಹೇಗೆ ತಾನೇ ಆಸಕ್ತಿಯಿದ್ದೀತು?

ಹೀಗೆ ಯೋಗಯುಕ್ತಳಾಗಿರುವ ನನ್ನನ್ನು ಈ ರೀತಿಯಲ್ಲಿ ದೂಷಿಸುವುದು ನಿನಗೆ ಯೋಗ್ಯವಲ್ಲ.

ನನು ನಾಮ ತ್ವಯಾ ಮೋಕ್ಷಃ ಕೃತ್ಸ್ನಃ ಪಞ್ಚಶಿಖಾಚ್ಛ್ರುತಃ ।
ಸೋಪಾಯಃ ಸೋಪನಿಷದಃ ಸೋಪಾಸಙ್ಗಃ ಸುನಿಶ್ಚಯಃ ॥೧೬೫॥
ತಸ್ಯ ತೇ ಮುಕ್ತಸಙ್ಗಸ್ಯ ಪಾಶಾನಾಕ್ರಮ್ಯ ತಿಷ್ಠತಃ ।
ಛತ್ರಾದಿಷು ವಿಶೇಷೇಷು ಪುನಃ ಸಙ್ಗಃ ಕಥಂ ನೃಪ ॥೧೬೬॥

ನರೇಶ್ವರ! ನೀನು ಪಂಚಶಿಖನಿಂದ ಉಪಾಯಯುಕ್ತವಾದ (ನಿಧಿಧ್ಯಾಸನಯುಕ್ತವಾದ), ಉಪನಿಷದುಕ್ತವಾದ (ಶ್ರವಣ-ಮನನಗಳಿಂದ ಕೂಡಿದ), ಉಪಾಸಂಗಯುಕ್ತವಾದ (ಯಮ-ನಿಯಮಾದಿ ಯೋಗಾಂಗ ಯುಕ್ತವಾದ), ಸುನಿಶ್ಚಿತವಾದ (ಅನುಭವದಿಂದ ಸಿದ್ಧಾಂತಿಸಿದ) ಮೋಕ್ಷ ಶಾಸ್ತ್ರವನ್ನು ಸಮಗ್ರವಾಗಿ ಕೇಳಿರುವೆಯಲ್ಲವೇ? ಪಂಚಶಿಖನ ಉಪದೇಶ ದಿಂದಾಗಿ ಆಸಕ್ತಿಗಳಿಂದಲೂ ವಿಮುಕ್ತನಾಗಿರುವೆಯಲ್ಲವೇ? ಎಲ್ಲ ವಿಧವಾದ ಬಂಧನಗಳನ್ನೂ ಮೀರಿ ನಿಂತಿರುವೆಯಲ್ಲವೇ? ಹೀಗಿರುವಾಗ ನಿನಗೆ ರಾಜಯೋಗ್ಯವಾದ ಛತ್ರ-ಚಾಮರಾದಿ ವಿಶೇಷವಸ್ತುಗಳಲ್ಲಿ ಆಸಕ್ತಿಯು ಹೇಗೆ ತಾನೇ ಉಂಟಾಯಿತು?

ಶ್ರುತಂ ತೇ ನ ಶ್ರುತಂ ಮನ್ಯೇ ಮೃಷಾ ವಾಪಿ ಶ್ರುತಂ ಶ್ರುತಮ್ ।
ಅಥವಾ ಶ್ರುತಸಂಕಾಶಂ ಶ್ರುತಮನ್ಯಚ್ಛ್ರುತಂ ತ್ವಯಾ ॥೧೬೭॥

ನಿನ್ನ ಈ ವಿಪರೀತವಾದ ವರ್ತನೆಯಿಂದಾಗಿ ಪಂಚಶಿಖನು ಉಪ ದೇಶಿಸಿದ ಮೋಕ್ಷಶಾಸ್ತ್ರವನ್ನು ನೀನು ಕೇಳಿಲ್ಲವೆಂದೇ ನಾನು ಭಾವಿಸುತ್ತೇನೆ. ಹಾಗೆ ಒಂದು ವೇಳೆ ಕೇಳಿದ್ದರೂ ಮಿಥ್ಯಾಶಾಸ್ತ್ರವನ್ನು ಕೇಳಿರಬಹುದು ಅಥವಾ ಮೋಕ್ಷಶಾಸ್ತ್ರದಂತೆ ತೋರುವ ಬೇರೆ ಯಾವುದೋ ಶಾಸ್ತ್ರವನ್ನಾದರೂ ನೀನು ಕೇಳಿರಬಹುದು.

ಅಥಾಪೀಮಾಸು ಸಂಜ್ಞಾಸು ಲೌಕಿಕೀಷು ಪ್ರತಿಷ್ಠಸೇ ।
ಅಭಿಷಙ್ಗಾವರೋಧಾಭ್ಯಾಂ ಬದ್ಧಸ್ತ್ವಂ ಪ್ರಾಕೃತೋ ಯಥಾ ॥೧೬೮॥

ಪಂಚಶಿಖನಿಂದ ಮೋಕ್ಷಶಾಸ್ತ್ರವನ್ನು ಕೇಳಿದನಂತರವೂ–'ವಿದೇಹ ರಾಜ', 'ಮಿಥಿಲಾಧಿಪತಿ'–ಮೊದಲಾದ ಲೌಕಿಕಸಂಜ್ಞೆಗಳಲ್ಲಿ ಪ್ರತಿಷ್ಠಿತ ನಾಗಿರುವೆಯಾದರೆ –ಸಾಮಾನ್ಯಜನರಂತೆ ನೀನು ಕೂಡ ಮಾನಾಪಮಾನ ಗಳಿಂದಲೂ ಪಟ್ಟಮಹಿಷಿಯಿಂದಲೂ ಬಂಧಿಸಲ್ಪಟ್ಟಿರುವೆಯೆಂದೇ ಹೇಳ ಬಹುದಾಗಿದೆ.

ಸತ್ತ್ವೇನಾನುಪ್ರವೇಶೋ ಹಿ ಯೋಽಯಂ ತ್ವಯಿ ಕೃತೋ ಮಯಾ ।
ಕಿಂ ತವಾಪಕೃತಂ ತತ್ರ ಯದಿ ಮುಕ್ತೋಽಸಿ ಸರ್ವಶಃ ॥೧೯॥

ನೀನು ಸರ್ವಥಾಮುಕ್ತನೇ ಆಗಿರುವುದಾದರೆ–ನಾನು ಬುದ್ಧಿಯ ಮೂಲಕವಾಗಿ ನಿನ್ನಲ್ಲಿ ಮಾಡಿರುವ ಪ್ರವೇಶದಿಂದಾಗಿ ನಿನಗೆ ಯಾವ ಅಪಕಾರವನ್ನು ಮಾಡಿದಂತಾಯಿತು?

ನಿಯಮೋ ಹ್ಯೇಷು ವರ್ಣೇಷು ಯತೀನಾಂ ಶೂನ್ಯವಾಸಿತಾ ।
ಶೂನ್ಯಮಾವೇಶಯನ್ತ್ಯಾ ಚ ಮಯಾ ಕಿಂ ಕಸ್ಯ ದೂಷಿತಮ್ ॥೨೦॥

ಎಲ್ಲ ವರ್ಣದವರಲ್ಲಿಯೂ ಯತಿಗಳು ಏಕಾಂತಸ್ಥಾನದಲ್ಲಿರಬೇಕೆಂಬ ನಿಯಮವಿದೆ. ಈ ನಿಯಮಾನುಸಾರವಾಗಿ ಯತಿಧರ್ಮದಲ್ಲಿರುವ ನಾನು ಶೂನ್ಯವಾಗಿದ್ದ ನಿನ್ನ ಹೃದಯದಲ್ಲಿ ಪ್ರವೇಶಿಸಿದೆನು. ಇದರಿಂದ ನಾನು ಯಾರ ಮತ್ತು ಯಾವ ವಸ್ತುವನ್ನು ದೂಷಿಸಿದಂತಾಗಿದೆ? (ಅಪವಿತ್ರವನ್ನಾಗಿ ಮಾಡಿದಂತಾಗಿದೆ?)

ನ ಪಾಣಿಭ್ಯಾಂ ನ ಬಾಹುಭ್ಯಾಂ ಪಾದೋರುಭ್ಯಾಂ ನ ಚಾನಘ ।
ನ ಗಾತ್ರಾವಯವೈರನ್ಯೈಃ ಸ್ಪೃಶಾಮಿ ತ್ವಾಂ ನರಾಧಿಪ ॥೨೧॥

ನಿಷ್ಪಾಪನೇ! ಮಹಾರಾಜ! ನನ್ನ ಬುದ್ಧಿಯ ಮೂಲಕವಾಗಿ ನಿನ್ನನ್ನು ಪ್ರವೇಶಿಸಿರುವೆನೇ ಹೊರತು ನನ್ನ ಕೈಗಳಿಂದಾಗಲೀ, ತೋಳುಗಳಿಂದಾಗಲೀ, ಪಾದಗಳಿಂದಾಗಲೀ, ತೊಡೆಗಳಿಂದಾಗಲೀ, ಶರೀರದ ಇತರ ಯಾವುದೇ ಅವಯವಗಳಿಂದಾಗಲೀ ನಿನ್ನನ್ನು ನಾನು ಮುಟ್ಟಿರುವುದಿಲ್ಲ.

ಕುಲೇ ಮಹತಿ ಜಾತೇನ ಹ್ರೀಮತಾ ದೀರ್ಘದರ್ಶಿನಾ ।
ನೈತತ್ಸದಸಿ ವಕ್ತವ್ಯಂ ಸದ್ವಾಸದ್ವಾ ಮಿಥಃ ಕೃತಮ್ ॥೨೨॥

ಮಹಾಕುಲದಲ್ಲಿ ಹುಟ್ಟಿರುವ, ಲಜ್ಜಾಶೀಲನಾದ ಮತ್ತು ಮುಂದಾಗುವುದನ್ನು ಇಂದೇ ಆಲೋಚಿಸಿ ತಿಳಿಯುವ ಸಾಮರ್ಥ್ಯವುಳ್ಳ ನೀನು– ನಮ್ಮಿಬ್ಬರ ನಡುವೆ ಏಕಾಂತದಲ್ಲಿ ನಡೆದ ವ್ಯವಹಾರವನ್ನು.–ಅದು ಒಳ್ಳೆಯದಾಗಿರಲಿ ; ಕೆಟ್ಟದ್ದೇ ಆಗಿರಲೀ–ತುಂಬಿದ ಸಭೆಯಲ್ಲಿ ಹೇಳಬಾರದಾಗಿತ್ತು.

ಬ್ರಾಹ್ಮಣಾ ಗುರವಶ್ಚೇಮೇ ತಥಾ ಮಾನ್ಯಾ ಗುರೂತ್ತಮಾಃ ।
ತ್ವಂ ಚಾಥ ಗುರುರಪ್ಯೇಷಾಮೇವಮನ್ಯೋನ್ಯಗೌರವಮ್ ॥೧೭೩॥

ಈ ಮಹಾಸಭೆಯಲ್ಲಿ ಸಕಲವರ್ಣದವರಿಗೂ ಗುರುಸ್ವರೂಪವಾದ ಈ ಬ್ರಾಹ್ಮಣರಿದ್ದಾರೆ. ಇವರಿಗಿಂತಲೂ ಶ್ರೇಷ್ಠರಾದ ಮಾನ್ಯರಾದ ಮಹಾ ಗುರುಗಳೂ ಇಲ್ಲಿದ್ದಾರೆ. ನೀನು ರಾಜನಾಗಿರುವುದರಿಂದ ಇವರೆಲ್ಲರಿಗೂ ಗುರುಸ್ವರೂಪನಾಗಿರುವೆ. ಹೀಗೆ ಈ ಸಭೆಯಲ್ಲಿ ಗೌರವವೆಂಬುದು ಪರಸ್ಪರಾವಲಂಬಿಯಾಗಿದೆ.

ತದೇವಮನುಸಂದೃಶ್ಯ ವಾಚ್ಯಾವಾಚ್ಯಂ ಪರೀಕ್ಷತಾ ।
ಸ್ತ್ರೀಪುಂಸೋಃ ಸಮವಾಯೋಽಯಂ ತ್ವಯಾ ವಾಚ್ಯೋ ನ ಸಂಸದಿ ॥

ಹೀಗೆ ವಿಚಾರಮಾಡಿ ಈ ಮಹಾಸಭೆಯಲ್ಲಿ ಯಾವುದನ್ನು ಹೇಳಬಹುದು ಮತ್ತು ಯಾವುದನ್ನು ಹೇಳಬಾರದು?–ಎಂಬ ಬಗೆಗೆ ಚೆನ್ನಾಗಿ ವಿಚಾರಮಾಡಬೇಕಾಗಿರುವ ನೀನು ಸ್ತ್ರೀ–ಪುರುಷರ ಸಮಾಗಮದ ಈ ವಿಷಯವನ್ನು ಇಲ್ಲಿ ಹೇಳಲೇಬಾರದಾಗಿತ್ತು.

ಯಥಾ ಪುಷ್ಕರಪರ್ಣಸ್ಥಂ ಜಲಂ ತತ್ಪರ್ಣಮಸ್ಪೃಶತ್ ।
ತಿಷ್ಠತ್ಯಸ್ಪೃಶತೀ ತದ್ವತ್ತ್ವಯಿ ವತ್ಸ್ಯಾಮಿ ಮೈಥಿಲ ॥೧೭೫॥

ಮಿಥಿಲೇಶನೇ! ಕಮಲದೆಲೆಯ ಮೇಲಿರುವ ನೀರು ಕಮಲದೆಲೆಯನ್ನು ಸ್ಪರ್ಶಿಸದೆಯೇ ಯಾವ ರೀತಿಯಲ್ಲಿ ನಿಂತಿರುವುದೋ–ಹಾಗೆಯೇ ನಾನೂ ನಿನ್ನನ್ನು ಸ್ಪರ್ಶಿಸದೆಯೇ ನಿನ್ನಲ್ಲಿ ವಾಸಮಾಡುತ್ತಿದ್ದೇನೆ.

ಯದಿ ವಾಪ್ಯಸ್ಪೃಶನ್ತ್ಯಾ ಮೇ ಸ್ಪರ್ಶಂ ಜಾನಾಸಿ ಕಞ್ಚನ ।
ಜ್ಞಾನಂ ಕೃತಮಬೀಜಂ ತೇ ಕಥಂ ತೇನೇಹ ಭಿಕ್ಷುಣಾ ॥೧೭೬॥

ಯದ್ಯಪಿ ನಾನು ನಿನ್ನನ್ನು ಮುಟ್ಟದೆಯೇ ಇದ್ದರೂ ನಿನಗೆ ನನ್ನ ಸ್ಪರ್ಶದ ಅನುಭವವು ಉಂಟಾಗಿದ್ದರೆ–ಭಿಕ್ಷುವಾದ ಪಂಚಶಿಖನು ನಿನ್ನ ಜ್ಞಾನವನ್ನು ಹೇಗೆ ನಿರ್ಬೀಜವನ್ನಾಗಿ (ನಿಃಶೇಷವನ್ನಾಗಿ) ಮಾಡಿರುವನು?– ಎಂದು ನಾನು ಪ್ರಶ್ನಿಸಬೇಕಾಗಿದೆ.

ಸ ಗಾರ್ಹಸ್ಥ್ಯಾಚ್ಚ್ಯುತಶ್ಚ ತ್ವಂ ಮೋಕ್ಷಂ ಚಾನಾಪ್ಯ ದುರ್ವಿದಮ್
ಉಭಯೋರನ್ತರಾಲೇ ವೈ ವರ್ತಸೇ ಮೋಕ್ಷವಾರ್ತಿಕಃ ॥೧೭೭॥

ಪರಸ್ತ್ರೀಸ್ಪರ್ಶವನ್ನು ಅನುಭವಿಸಿದ ಕಾರಣದಿಂದ ನೀನು ಗೃಹಸ್ಥ ಧರ್ಮದಿಂದ ಚ್ಯುತನಾಗಿರುವೆ. ದುರ್ಬೋಧವಾದ ಮತ್ತು ದುರ್ಲಭವಾದ ಮೋಕ್ಷವನ್ನೂ ಹೊಂದದೇ ಮೋಕ್ಷದ ವಿಷಯವಾಗಿ ಉದ್ದುದ್ದವಾದ ಪ್ರವಚನಗಳನ್ನು ಮಾತ್ರ ಮಾಡುತ್ತಾ ಗಾರ್ಹಸ್ಥ್ಯ ಮತ್ತು ಮೋಕ್ಷ–ಈ ಎರಡರ ಮಧ್ಯದಲ್ಲಿ ತೂಗಾಡುತ್ತಿರುವೆ.

ನ ಹಿ ಮುಕ್ತಸ್ಯ ಮುಕ್ತೇನ ಜ್ಞಸ್ಯೈಕತ್ವಪೃಥಕ್ತ್ವಯೋಃ ।
ಭಾವಾಭಾವಸಮಾಯೋಗೇ ಜಾಯತೇ ವರ್ಣಸಂಕರಃ ॥೧೭೮॥

ಜ್ಞಾನಿಯಾದ ಜೀವನ್ಮುಕ್ತನಿಗೆ ಮತ್ತೊಬ್ಬ ಜೀವನ್ಮುಕ್ತನೊಡನೆ ಸಮಾಗಮವಾದರೆ –ಅಲ್ಲಿ ವರ್ಣಸಂಕರವೇನೂ ಆಗುವುದಿಲ್ಲ. (ಏಕೆಂದರೆ ಶುದ್ಧಾತ್ಮನಿಗೆ ವರ್ಣವೇ ಇಲ್ಲ.) ಹಾಗೆಯೇ ಅಖಂಡವಾದ ಯಾವ ಪದಾರ್ಥವೂ ಮತ್ತು ಅದರ ಖಂಡಗಳೂ ಸೇರಿದಾಗಲೂ ವರ್ಣಸಂಕರವಿಲ್ಲ. (ಏಕೆಂದರೆ ಅವೆಲ್ಲವೂ ಒಂದೇ ಜಾತಿಯವು.) ಸತ್ತಾಸ್ವರೂಪವಾದ ಶುದ್ಧವಾದ ಆತ್ಮವೂ ಮತ್ತು ಅಸತ್ತಾಗಿರುವ ಪ್ರಕೃತಿಯೂ ಸೇರಿದರೂ ವರ್ಣಸಂಕರವಾಗುವುದಿಲ್ಲ. (ಏಕೆಂದರೆ ಅವುಗಳಲ್ಲಿ ಆತ್ಮವು ನಿರ್ವಿಕಾರ, ಗುಣಾತೀತ. ಪ್ರಕೃತಿಯು ವಿಕಾರಿ ಮತ್ತು ತ್ರಿಗುಣಾತ್ಮಿಕ. ಎರಡರ ಸ್ವಭಾವವೂ ಬೇರೆ ಬೇರೆಯಾದ್ದರಿಂದ ಒಂದರೊಡನೆ ಒಂದು ಸೇರುವುದೇ ಇಲ್ಲ. ಅಲ್ಲಿ ವರ್ಣಸಂಕರವು ಹೇಗಾಗುತ್ತದೆ?)

ವರ್ಣಾಶ್ರಮಾಃ ಪೃಥಕ್ತ್ವೇನ ದೃಷ್ಟಾರ್ಥಸ್ಯಾಪೃಥಕ್ತ್ವಿನಃ ।
ನಾನ್ಯದನ್ಯದಿತಿ ಜ್ಞಾತ್ವಾ ನಾನ್ಯದನ್ಯತ್ರ ವರ್ತತೇ ॥೧೭೯॥

ಸಮಸ್ತವರ್ಣಗಳೂ ಮತ್ತು ಆಶ್ರಮಗಳೂ ಪ್ರತ್ಯೇಕ-ಪ್ರತ್ಯೇಕ

ವಾಗಿವೆ. ಆದರೆ ಯಾವನು ದೃಷ್ಟಾರ್ಥನಾಗಿರುವನೋ (ಆತ್ಮದರ್ಶನ ಮಾಡಿರುವನೋ) ಅವನಿಗೆ –ಆತ್ಮದ ಹೊರತಾಗಿ ಬೇರೆ ಯಾವುದೂ ಇಲ್ಲವೆಂದು ತಿಳಿದುಕೊಂಡಿರುವವನಿಗೆ ಮತ್ತು ಎಲ್ಲವೂ ಆತ್ಮನಲ್ಲಿಯೇ ಸಮಾವೇಶಗೊಂಡಿವೆಯೇ ಹೊರತು ಆತ್ಮನಿಂದ ಭಿನ್ನವಾಗಿ ಯಾವುದೂ ಇರುವುದಿಲ್ಲ –ಎಂಬ ಅನುಭವವನ್ನು ಆತ್ಮಸಾಕ್ಷಾತ್ಕಾರದಿಂದ ಪಡೆದು ಕೊಂಡಿರುವವನಿಗೆ –ಈ ವರ್ಣಗಳು ಮತ್ತು ಆಶ್ರಮಗಳು ಬ್ರಾಹ್ಮೀ ಸ್ಥಿತಿಯಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿರುವುದಿಲ್ಲ. ಆದುದರಿಂದ ಜೀವನ್ಮುಕ್ತರ ಸಮಾಗಮದಿಂದ ವರ್ಣಸಂಕರವಾಗುವುದಿಲ್ಲ.

ಪಾಣೌ ಕುಣ್ಡಂ ತಥಾ ಕುಣ್ಡೇ ಪಯಃ ಪಯಸಿ ಮಕ್ಷಿಕಾ ।
ಆಶ್ರಿತಾಶ್ರಯಯೋಗೇನ ಪೃಥಕ್ತ್ವೇನಾಶ್ರಿತಾಃ ಪುನಃ ॥೧೮೦॥

ಕೈಯಲ್ಲಿ ಬಿಂದಿಗೆಯಿದೆ, ಹಾಗೆಯೇ ಬಿಂದಿಗೆಯಲ್ಲಿ ಹಾಲಿದೆ. ಹಾಲಿನಲ್ಲಿ ನೊಣವು ಬಿದ್ದಿದೆ. ಇವು ಮೂರು ಒಂದು ಆಶ್ರಯ ಮತ್ತೊಂದು ಆಶ್ರಿತ ಎಂಬ ಸಂಬಂಧದಿಂದ ಒಟ್ಟಿಗಿದ್ದರೂ ಅವು ಸ್ವರೂಪತಃ ಬೇರೆ-ಬೇರೆಯೇ ಆಗಿವೆ. ಒಂದರೊಡನೆ ಮತ್ತೊಂದರ ಸಾಂಕರ್ಯವುಂಟಾಗುವುದಿಲ್ಲ.

ನ ತು ಕುಣ್ಡೇ ಪಯೋಭಾವಃ ಪಯಶ್ಚಾಪಿ ನ ಮಕ್ಷಿಕಾ ।
ಸ್ವಯಮೇವಾಪ್ನುವನ್ತ್ಯೇತೇ ಭಾವಾ ನನು ಪರಾಶ್ರಯಮ್ ॥೧೮೧॥

ಪರಸ್ಪರಾಶ್ರಯದಿಂದ ಏಕತ್ವವನ್ನು ಹೊಂದಿದ್ದರೂ–ಅವುಗಳ ಭಾವವು ಯಾವ ರೀತಿಯಲ್ಲಿಯೂ ವ್ಯತ್ಯಾಸವಾಗುವುದಿಲ್ಲ. ಕೈಯಲ್ಲಿ ಬಿಂದಿಗೆ ಇದ್ದ ಮಾತ್ರಕ್ಕೆ ಕೈಯಿನ ಸ್ವಭಾವವನ್ನು ಬಿಂದಿಗೆಯು ಹೊಂದುವುದಿಲ್ಲ. ಬಿಂದಿಗೆಯಲ್ಲಿ ಹಾಲಿದ್ದ ಮಾತ್ರಕ್ಕೆ ಹಾಲಿನ ಭಾವವು (ಸ್ವಭಾವವು) ಬಿಂದಿಗೆಗೆ ಬಂದುಬಿಡುವುದಿಲ್ಲ. ಹಾಲಿನಲ್ಲಿ ನೊಣವಿದ್ದ ಮಾತ್ರಕ್ಕೆ ಹಾಲಿನ ಭಾವವು ನೊಣದಲ್ಲಿರುವುದಿಲ್ಲ. ಪದಾರ್ಥಗಳೆಲ್ಲವೂ ತಮ್ಮದೇ ಆದ ಭಾವಗಳನ್ನು ಹೊಂದಿರುತ್ತವೆ. ಭಾವವು ಯಾವಾಗಲೂ ಪರಾಶ್ರಯದಿಂದ ಬರತಕ್ಕುದಲ್ಲ. ಗಡಿಗೆಯಲ್ಲಿರುವ ಹಾಲಿನಂತೆ–ನಾನು ಬುದ್ಧಿಯ ಮೂಲಕವಾಗಿ ನಿನ್ನ ಆಶ್ರಯದಲ್ಲಿದ್ದೇನೆ. ಗಡಿಗೆಯು ಆಧಾರವಾಗಿರುವುದರಿಂದ ಹಾಲಿನ ಗುಣವು

ಏನೂ ವ್ಯತ್ಯಾಸವಾಗದಂತೆ ನಾನು ನಿನ್ನಲ್ಲಿ ಆಶ್ರಯಪಡೆದಿದ್ದರೂ ನನ್ನ ಸ್ವಭಾವದಲ್ಲಿ ಯಾವ ವ್ಯತ್ಯಾಸವೂ ಆಗಿರುವುದಿಲ್ಲ. ಆದುದರಿಂದ ಇಲ್ಲಿ ನಮ್ಮ ಸಮಾಗಮದಲ್ಲಿ ವರ್ಣಸಂಕರದೋಷವು ಬರುವುದಿಲ್ಲ.

ಪೃಥಕ್ತ್ವಾದಾಶ್ರಮಾಣಾಂ ಚ ವರ್ಣಾನ್ಯತ್ವೇ ತಥೈವ ಚ ।
ಪರಸ್ಪರಪೃಥಕ್ತ್ವಾಚ್ಚ ಕಥಂ ತೇ ವರ್ಣಸಂಕರಃ ॥೧೮೨॥

ಆಶ್ರಮಗಳೂ ಪ್ರತ್ಯೇಕ-ಪ್ರತ್ಯೇಕವಾಗಿಯೇ ಇವೆ. ವರ್ಣಗಳೂ ಬೇರೆ-ಬೇರೆಯವೇ ಆಗಿವೆ. ಇವು ಪರಸ್ಪರವಾಗಿ ಪ್ರತ್ಯೇಕವಾಗಿರುವುವೆಂದೂ–ಆತ್ಮಭಾವದಲ್ಲಿ ಈ ಯಾವ ಧರ್ಮವೂ ಇಲ್ಲವೆಂದೂ ನೀನು ತಿಳಿದಿದ್ದ ಪಕ್ಷದಲ್ಲಿ ನಿನಗೆ ವರ್ಣಸಂಕರದೋಷವು ಹೇಗೆ ಬಂದಿತು?

ನಾಸ್ಮಿ ವರ್ಣೋತ್ತಮಾ ಜಾತ್ಯಾ ನ ವೈಶ್ಯಾ ನಾವರಾ ತಥಾ ।
ತವ ರಾಜನ್ಸವರ್ಣಾಸ್ಮಿ ಶುದ್ಧಯೋನಿರವಿಪ್ಲುತಾ ॥೧೮೩॥

ಮಹಾರಾಜ! ನಾನು ಜಾತಿಯಿಂದ ಬ್ರಾಹ್ಮಣಿಯಲ್ಲ; ವೈಶ್ಯೆಯೂ ಅಲ್ಲ; ಶೂದ್ರಳೂ ಅಲ್ಲ. ನಿನಗೆ ಸಮಾನವರ್ಣದ ಕ್ಷತ್ರಿಯಸ್ತ್ರೀಯೇ ಆಗಿದ್ದೇನೆ. ಸತ್ಕುಲಪ್ರಸೂತಳಾಗಿದ್ದೇನೆ. ಬ್ರಹ್ಮಚರ್ಯೆಯಿಂದ ಭ್ರಷ್ಟಳಾಗಿರುವುದಿಲ್ಲ.

ಪ್ರಧಾನೋ ನಾಮ ರಾಜರ್ಷಿರ್ವ್ಯಕ್ತಂ ತೇ ಶ್ರೋತ್ರಮಾಗತಃ ।
ಕುಲೇ ತಸ್ಯ ಸಮುತ್ಪನ್ನಾಂ ಸುಲಭಾಂ ನಾಮ ವಿದ್ಧಿ ಮಾಮ್ ॥

ಪ್ರಧಾನನೆಂಬ ರಾಜರ್ಷಿಯ ಹೆಸರನ್ನು ನೀನು ಕೇಳಿರಬಹುದು. ಅವನ ಕುಲದಲ್ಲಿ ಹುಟ್ಟಿರುವ ನನ್ನನ್ನು ಸುಲಭಾ ಎಂಬ ಹೆಸರಿನವಳೆಂದು ತಿಳಿ.

ದ್ರೋಣಶ್ಚ ಶತಶೃಙ್ಗಶ್ಚ ಚಕ್ರದ್ವಾರಶ್ಚ ಪರ್ವತಃ ।
ಮಮ ಸತ್ರೇಷು ಪೂರ್ವೇಷಾಂ ಚಿತಾ ಮಘವತಾ ಸಹ ॥೧೮೫॥

ನನ್ನ ಪೂರ್ವಜರು ಇಂದ್ರನೊಡನೆ ಕೂಡಿ ಯಜ್ಞಮಾಡಿದರು. ಅವರ ಆ ಯಜ್ಞಗಳಲ್ಲಿ ದ್ರೋಣ, ಶತಶೃಂಗ ಮತ್ತು ಚಕ್ರದ್ವಾರವೆಂಬ ಪರ್ವತಗಳು ಯಜ್ಞವೇದಿಕೆಯ ಇಟ್ಟಿಗೆಗಳಾಗಿ ಇಡಲ್ಪಟ್ಟಿದ್ದುವು.

ಸಾಹಂ ತಸ್ಮಿನ್ಕುಲೇ ಜಾತಾ ಭರ್ತರ್ಯಸತಿ ಮದ್ವಿಧೇ ।
ವಿನೀತಾ ಮೋಕ್ಷಧರ್ಮೇಷು ಚರಾಮ್ಯೇಕಾ ಮುನಿವ್ರತಮ್ ॥೧೮೩॥

ಅಂತಹ ಮಹಾತ್ಮರ ಕುಲದಲ್ಲಿ ಹುಟ್ಟಿರುವ ನಾನು –ನನಗೆ ಅನುರೂಪನಾದ ಪತಿಯು ಸಿಕ್ಕದಿರಲಾಗಿ, ಮೋಕ್ಷಧರ್ಮದಲ್ಲಿ ಶಿಕ್ಷಣವನ್ನು ಪಡೆದೆನು ಮತ್ತು ಮುನಿವ್ರತವನ್ನು ಕೈಗೊಂಡು ಏಕಾಕಿನಿಯಾಗಿ ಈ ಭೂಮಂಡಲದಲ್ಲಿ ಸುತ್ತುತ್ತಿದ್ದೇನೆ.

ನಾಸ್ಮಿ ಸತ್ರಪ್ರತಿಚ್ಛನ್ನಾ ನ ಪರಸ್ವಾಪಹಾರಿಣೀ ।
ನ ಧರ್ಮಸಂಕರಕರೀ ಸ್ವಧರ್ಮೇಽಸ್ಮಿ ಧೃತವ್ರತಾ ॥೧೮೭॥

ನಾನು ಕಪಟವೇಷಧಾರಿಣಿಯಾದ ಸಂನ್ಯಾಸಿನಿಯಲ್ಲ. ನಾನು ಇತರರ ಸ್ವತ್ತನ್ನು ಅಪಹರಿಸುವವಳಲ್ಲ. ಧರ್ಮಸಂಕರವನ್ನು ಮಾಡತಕ್ಕವಳೂ ಅಲ್ಲ. ದೃಢವಾಗಿ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಾ ಸ್ವಧರ್ಮದಲ್ಲಿಯೇ ನಿರತಳಾಗಿದ್ದೇನೆ.

ನಾಸ್ಥಿರಾ ಸ್ವಪ್ರತಿಜ್ಞಾಯಾಂ ನಾಸಮೀಕ್ಷ್ಯ ಪ್ರವಾದಿನೀ ।
ನಾಸಮೀಕ್ಷ್ಯಾಗತಾ ಚೇಹ ತ್ವತ್ಸಕಾಶಂ ಜನಾಧಿಪ ॥೧೮೮॥

ಜನಾಧಿಪನೇ! ನಾನು ನನ್ನ ಪ್ರತಿಜ್ಞೆಯಲ್ಲಿ ಯಾವಾಗಲೂ ವಿಚಲಿತ ಳಾಗಿರುವುದಿಲ್ಲ. ಚೆನ್ನಾಗಿ ಯೋಚಿಸದೇ ಯಾವ ಮಾತನ್ನೂ ಆಡುವವಳಲ್ಲ. ಚೆನ್ನಾಗಿ ಯೋಚಿಸದೇ–ವಿಚಾರಮಾಡದೇ ನಿನ್ನ ಬಳಿಗೂ ಬಂದಿರುವುದಿಲ್ಲ.

ಮೋಕ್ಷೇ ತೇ ಭಾವಿತಾಂ ಬುದ್ಧಿಂ ಶ್ರುತ್ವಾಹಂ ಕುಶಲೈಷಿಣೀ ।
ತವ ಮೋಕ್ಷಸ್ಯ ಚಾಪ್ಯಸ್ಯ ಜಿಜ್ಞಾಸಾರ್ಥಮಿಹಾಗತಾ ॥೧೮೯॥

ನಿನ್ನ ಬುದ್ಧಿಯು ಮೋಕ್ಷಮಾರ್ಗದಲ್ಲಿ ಸಂಲಗ್ನವಾಗಿರುವುದೆಂಬುದನ್ನು ಕೇಳಿ ನಿನಗೆ ಕುಶಲವನ್ನು ಬಯಸಲು ಮತ್ತು ನೀನು ಪಡೆದುಕೊಂಡಿರುವ ಮೋಕ್ಷಜ್ಞಾನದ ಮರ್ಮವನ್ನು ತಿಳಿಯುವ ಸಲುವಾಗಿ ಇಲ್ಲಿಗೆ ಆಗಮಿಸಿದೆನು.

ನ ವರ್ಗಸ್ಥಾ ಬ್ರವೀಮ್ಯೇತತ್ಸ್ವಪಕ್ಷಪರಪಕ್ಷಯೋಃ ।
ಮುಕ್ತೋ ವ್ಯಾಯಚ್ಛತೇ ಯಶ್ಚ ಶಾನ್ತೌ ಯಶ್ಚ ನ ಶಾಮ್ಯತಿ ॥೧೯೦॥

'ಇದು ನನ್ನ ಪಕ್ಷ ; ಇದನ್ನು ಹೇಗಾದರೂ ಸಮರ್ಥಿಸಿಕೊಳ್ಳಬೇಕು. ಇದು ಪರಪಕ್ಷ ; ಇದನ್ನು ಹೇಗಾದರೂ ಪರಾಜಯಗೊಳಿಸಬೇಕು'–ಎಂಬ ಪಕ್ಷಪಾತಭಾವನೆಯಿಂದ ನಾನು ಮಾತನಾಡುತ್ತಿಲ್ಲ. ಯಾವನು ಪಕ್ಷ ಸಮರ್ಥನೆಗಾಗಿ ಮಾತಿನ ವ್ಯಾಯಾಮವನ್ನು (ವಾದಶ್ರಮವನ್ನು) ಮಾಡಿ ಕೊಳ್ಳುವುದಿಲ್ಲವೋ ಮತ್ತು ಪರಬ್ರಹ್ಮದಲ್ಲಿ ಶಾಂತಿಯನ್ನು ಪಡೆ ಯುತ್ತಾನೆಯೋ –ಅವನೇ ಜೀವನ್ಮುಕ್ತನು.

ಯಥಾ ಶೂನ್ಯೇ ಪುರಾಗಾರೇ ಭಿಕ್ಷುರೇಕಾಂ ನಿಶಾಂ ವಸೇತ್ ।
ತಥಾಹಂ ತ್ವಚ್ಛರೀರೇಽಸ್ಮಿನ್ನಿಮಾಂ ವತ್ಸ್ಯಾಮಿ ಶರ್ವರೀಮ್ ॥೧೯೧॥

ಪಟ್ಟಣದ ಒಂದು ಶೂನ್ಯಗೃಹದಲ್ಲಿ ಸಂನ್ಯಾಸಿಯೊಬ್ಬನು ಒಂದು ರಾತ್ರಿಯನ್ನು ಯಾವ ರೀತಿಯಲ್ಲಿ ಕಳೆಯುವನೋ –ಅದೇ ರೀತಿಯಲ್ಲಿ ನಾನು ಈ ರಾತ್ರಿ ನಿನ್ನ ಶರೀರದಲ್ಲಿ ವಾಸಮಾಡುತ್ತೇನೆ.

ಸಾಹಂ ಮಾನಪ್ರದಾನೇನ ವಾಗಾತಿಥ್ಯೇನ ಚಾರ್ಚಿತಾ ।
ಸುಪ್ತಾ ಸುಶರಣಂ ಪ್ರೀತಾ ಶ್ವೋ ಗಮಿಷ್ಯಾಮಿ ಮೈಥಿಲ ॥೧೯೨॥

ಮಿಥಿಲಾಧಿಪತಿಯೇ! ಜನಕರಾಜ! ನೀನು ನನ್ನನ್ನು ಯಥಾಯೋಗ್ಯ ವಾದ ಸಮ್ಮಾನದಿಂದಲೂ ಮತ್ತು ಮಾತಿನ ರೂಪವಾದ ಆತಿಥ್ಯದಿಂದಲೂ ಚೆನ್ನಾಗಿ ಸತ್ಕರಿಸಿರುವೆ. ನಾನೀಗ ಪರಮಪ್ರೀತಳಾಗಿ ನಿನ್ನ ಶರೀರರೂಪವಾದ ಸುಂದರಗೃಹದಲ್ಲಿ ಮಲಗಿದ್ದು ನಾಳೆ ಹೊರಟುಹೋಗುತ್ತೇನೆ."

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

"ಯುಧಿಷ್ಠಿರ! ಸುಲಭೆಯ ಯುಕ್ತಿಯುಕ್ತವಾದ ಮತ್ತು ಅರ್ಥವತ್ತಾದ ಆ ಮಾತುಗಳನ್ನು ಕೇಳಿ ಜನಕರಾಜನು ಪುನಃ ಯಾವ ಮಾತನ್ನೂ ಆಡಲಿಲ್ಲ."

ಇ೨೦ನೆಯ ಅಧ್ಯಾಯವು ಮುಗಿಯಿತು.

೩೨೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವ್ಯಾಸರಿಂದ ಪುತ್ರನಾದ ಶುಕನಿಗೆ ವೈರಾಗ್ಯ-ಧರ್ಮಗಳ ಉಪದೇಶ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ನಿರ್ವೇದಮಾಪನ್ನಃ ಶುಕೋ ವೈಯಾಸಕಿಃ ಪುರಾ ।
ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ॥೧॥

"ಪಿತಾಮಹ! ಹಿಂದೆ ವ್ಯಾಸರ ಮಗನಾದ ಶುಕನು ಹೇಗೆ ವೈರಾಗ್ಯವನ್ನು ಹೊಂದಿದನು? ಈ ವಿಷಯವನ್ನು ಕೇಳಲು ಅಪೇಕ್ಷಿಸುತ್ತೇನೆ. ಇದನ್ನು ಕೇಳಲು ನನಗೆ ಹೆಚ್ಚಿನ ಕುತೂಹಲವಿದೆ.

ಅವ್ಯಕ್ತವ್ಯಕ್ತತತ್ತ್ವಾನಾಂ ನಿಶ್ಚಯಂ ಬುದ್ಧಿನಿಶ್ಚಯಮ್ ।
ವಕ್ತುಮರ್ಹಸಿ ಕೌರವ್ಯ ದೇವಸ್ಯಾಜಸ್ಯ ಯಾ ಕೃತಿಃ ॥೨॥

ಇಷ್ಟು ಮಾತ್ರವಲ್ಲದೇ ವ್ಯಕ್ತ ಮತ್ತು ಅವ್ಯಕ್ತತತ್ತ್ವಗಳ ವಿಷಯದಲ್ಲಿ ಬುದ್ಧಿಯ ಮೂಲಕವಾಗಿ ನಿಶ್ಚಯಿಸಿರುವ ಸಿದ್ಧಾಂತವೇನೆಂಬುದನ್ನೂ ಮತ್ತು ದೇವದೇವನಾದ, ಜನ್ಮರಹಿತನಾದ ಪರಮಾತ್ಮನ ಚರಿತ್ರೆಯನ್ನೂ ಹೇಳುವ ಕೃಪೆಮಾಡು."

ಭೀಷ್ಮನು ಉತ್ತರಿಸುತ್ತಾನೆ :

"ಯುಧಿಷ್ಠಿರ! ಶುಕನು ಸಾಧಾರಣಮನುಷ್ಯನಂತೆ ವ್ಯವಹರಿಸುತ್ತಾ ಭಯರಹಿತನಾಗಿ ಲೋಕದಲ್ಲಿ ಸಂಚರಿಸುತ್ತಿರುವುದನ್ನು ಕಂಡು ಪಿತೃವರ್ಯರಾದ ವ್ಯಾಸರು ಮಗನಿಗೆ ಸಕಲವೇದಗಳನ್ನೂ ಅಧ್ಯಯನಮಾಡಿಸಿ ಮಾಡಬೇಕಾದ ಕರ್ತವ್ಯಗಳ ವಿಷಯವಾಗಿ ಈ ರೀತಿಯಲ್ಲಿ ಉಪದೇಶಿಸಿದರು :

ಧರ್ಮಂ ಪುತ್ರ ನಿಷೇವಸ್ವ ಸುತೀಕ್ಷ್ಣೌ ಚ ಹಿಮಾತಪೌ ।
ಕ್ಷುತ್ಪಿಪಾಸೇ ಚ ವಾಯುಂ ಚ ಜಯ ನಿತ್ಯಂ ಜಿತೇನ್ದ್ರಿಯಃ ॥೪॥

"ಮಗು! ಸರ್ವದಾ ಧರ್ಮವನ್ನು ಆಚರಿಸುತ್ತಿರು. ಜಿತೇಂದ್ರಿಯ

ನಾಗಿ ಅತ್ಯಂತತೀಕ್ಷ್ಣವಾದ ಚಳಿಯನ್ನೂ, ಬಿಸಿಲನ್ನೂ, ಹಸಿವನ್ನೂ, ಬಾಯಾರಿಕೆಯನ್ನೂ, ವಾಯುವನ್ನೂ ಜಯಿಸು.*

ಸತ್ಯಮಾರ್ಜವಮಕ್ರೋಧಮನಸೂಯಾಂ ದಮಂ ತಪಃ ।
ಅಹಿಂಸಾಂ ಚಾನೃಶಂಸ್ಯಂ ಚ ವಿಧಿವತ್ಪರಿಪಾಲಯ ॥೫॥

ಸತ್ಯ, ಸರಳತೆ, ಕೋಪಗೊಳ್ಳದಿರುವುದು, ಇತರರಲ್ಲಿರುವ ದೋಷಗಳನ್ನು ಎಣಿಸದಿರುವುದು, ಇಂದ್ರಿಯಸಂಯಮ, ತಪಸ್ಸು, ಅಹಿಂಸೆ, ದಯೆ – ಮೊದಲಾದ ಧರ್ಮಗಳನ್ನು ನಿಯಮಪೂರ್ವಕವಾಗಿ ಪರಿಪಾಲಿಸು.

ಸತ್ಯೇ ತಿಷ್ಠ ರತೋ ಧರ್ಮೇ ಹಿತ್ವಾ ಸರ್ವಮನಾರ್ಜವಮ್ ।
ದೇವತಾತಿಥಿಶೇಷೇಣ ಮಾತ್ರಾಂ ಪ್ರಾಣಸ್ಯ ಸಂಲಿಹ ॥೬॥

ಸತ್ಯದಲ್ಲಿಯೇ ನಿಷ್ಠನಾಗಿರು. ಸಕಲವಿಧವಾದ ಕೌಟಿಲ್ಯಗಳನ್ನೂ ಬಿಟ್ಟು ಧರ್ಮದಲ್ಲಿಯೇ ಅನುರಾಗವುಳ್ಳವನಾಗು. ದೇವತೆಗಳಿಗೆ ವೈಶ್ವದೇವಾದಿ ಬಲಿಗಳನ್ನಿತ್ತು ಪೂಜಿಸಿ, ಅತಿಥಿಗಳಿಗೆ ಅನ್ನ-ಪಾನಾದಿಗಳನ್ನಿತ್ತು ಸತ್ಕರಿಸಿ ಬಳಿಕ ಉಳಿಯುವ ಅನ್ನವನ್ನು ಪ್ರಾಣರಕ್ಷಣೆಗಾಗಿ ಭುಜಿಸು.

ಫೇನಮಾತ್ರೋಪಮೇ ದೇಹೇ ಜೀವೇ ಶಕುನಿವತ್ಸ್ಥಿತೇ ।
ಅನಿತ್ಯೇ ಪ್ರಿಯಸಂವಾಸೇ ಕಥಂ ಸ್ವಪಿಷಿ ಪುತ್ರಕ ॥೭॥

ಶುಕ! ದೇಹವು ನೀರಮೇಲಿನ ನೊರೆಯಂತಿರುವಾಗ, ಅಂತಹ ನಶ್ವರವಾದ ಶರೀರದಲ್ಲಿ ಜೀವವು ಪಕ್ಷಿಯೋಪಾದಿಯಲ್ಲಿರುವಾಗ, ಪ್ರಿಯ ಸಹವಾಸವು ಅನಿತ್ಯವಾಗಿರುವಾಗ –ನಿಶ್ಚಿಂತನಾಗಿ ಹೇಗೆ ತಾನೇ ಮಲಗುವೆ?

ಅಪ್ರಮತ್ತೇಷು ಜಾಗ್ರತ್ಸು ನಿತ್ಯಯುಕ್ತೇಷು ಶತ್ರುಷು ।
ಅನ್ತರಂ ಲಿಪ್ಸಮಾನೇಷು ಬಾಲಸ್ತ್ವಂ ನಾವಬುಧ್ಯಸೇ ॥೮॥

ಶತ್ರುಗಳು ನಿನ್ನನ್ನು ವಿನಾಶಗೊಳಿಸಲು ಸದಾ ಉದ್ಯುಕ್ತರಾಗಿರುವಾಗ, ಅಸಾವಧಾನರಾಗಿರದೇ ಜಾಗರೂಕರಾಗಿರುವಾಗ, ನಿನ್ನನ್ನು ಆಕ್ರಮಿಸಲು

---

* ವಾಯುವನ್ನು ಜಯಿಸುವುದೆಂದರೆ : ಪ್ರಾಣಾಯಾಮದ ಮೂಲಕವಾಗಿ ಪ್ರಾಣವಾಯುವನ್ನು ಹತೋಟಿಯಲ್ಲಿಟ್ಟುಕೊಳ್ಳುವುದು.

ನಿನ್ನಲ್ಲಿರುವ ದೌರ್ಬಲ್ಯವನ್ನು ಅರಸುತ್ತಿರುವಾಗ –ನಿನಗೆ ಅದರ ಪರಿವೆಯೇ ಇಲ್ಲವಾಗಿದೆ. ನೀನಿನ್ನೂ ಬಾಲಕನಾಗಿರುವುದರಿಂದ, ಅಂತಹ ಶತ್ರುಗಳು ಯಾರೆಂಬುದನ್ನೂ ನೀನು ತಿಳಿದುಕೊಂಡಿರುವುದಿಲ್ಲ.

ಅಹಃಸು ಗಣ್ಯಮಾನೇಷು ಕ್ಷೀಯಮಾಣೇ ತಥಾಯುಷಿ ।
ಜೀವಿತೇ ಶಿಷ್ಯಮಾಣೇ ಚ ಕಿಮುತ್ಥಾಯ ನ ಧಾವಸಿ ॥೯॥

ಒಂದಾದ ಮೇಲೊಂದರಂತೆ ದಿವಸಗಳು ಕಳೆದುಹೋಗುತ್ತಿರುವಾಗ, ಆಯುಷ್ಯವು ಕ್ಷೀಣಿಸುತ್ತಿರುವಾಗ, ಜೀವಿತವು ಸ್ವಲ್ಪ ಮಾತ್ರವೇ ಉಳಿದಿರುವಾಗ ಮೇಲೆದ್ದು (ಕರ್ತವ್ಯಪಾಲನೆಗೆ) ಏಕೆ ಓಡಿಹೋಗುತ್ತಿಲ್ಲ?

ಐಹಲೌಕಿಕಮೀಹನ್ತೇ ಮಾಂಸಶೋಣಿತವರ್ಧನಮ್ ।
ಪಾರಲೌಕಿಕಕಾರ್ಯೇಷು ಪ್ರಸುಪ್ತಾ ಭೃಶನಾಸ್ತಿಕಾಃ ॥೧೦॥

ಅತ್ಯಂತನಾಸ್ತಿಕರಾದ ಮನುಷ್ಯರು ಮಾಂಸ-ರಕ್ತವರ್ಧಕವಾದ ಇಹ ಲೋಕದ ಸುಖೋಪಭೋಗಗಳನ್ನೇ ಬಯಸುತ್ತಾರೆ. ಪರಲೋಕಪ್ರಾಪ್ತಿಗೆ ಸಂಬಂಧಿಸಿದ ಕಾರ್ಯಗಳಲ್ಲಿ (ಕಾರ್ಯಗಳನ್ನು ಮಾಡಬೇಕಾದ ಸಮಯಗಳಲ್ಲಿ) ಸ್ವಸ್ಥವಾಗಿ ಮಲಗಿಬಿಡುತ್ತಾರೆ.

ಧರ್ಮಾಯ ಯೇಽಭ್ಯಸೂಯನ್ತಿ ಬುದ್ಧಿಮೋಹಾನ್ವಿತಾ ನರಾಃ ।
ಅಪಥಾ ಗಚ್ಛತಾಂ ತೇಷಾಮನುಯಾತಾಪಿ ಪೀಡ್ಯತೇ ॥೧೧॥

ಮೋಹವಶವಾದ ಬುದ್ಧಿಯುಳ್ಳ, ಧರ್ಮದಲ್ಲಿ ದೋಷವನ್ನೆಣಿಸುವ, ಕುತ್ಸಿತವಾದ ಮಾರ್ಗವನ್ನು ಹಿಡಿದು ಹೋಗುತ್ತಿರುವ ನಾಸ್ತಿಕರನ್ನು ಹಿಂಬಾಲಿಸುವವನೂ ನಾನಾವಿಧವಾದ ಕಷ್ಟಗಳಿಗೆ ಗುರಿಯಾಗುತ್ತಾನೆ. (ಹೀಗೆಂದ ಮೇಲೆ ನಾಸ್ತಿಕನೇ ಅನುಭವಿಸಬೇಕಾದ ಕಷ್ಟಗಳೆಷ್ಟೆಂಬುದನ್ನು ವಿವರಿಸಬೇಕಾಗಿಯೇ ಇಲ್ಲ.)

ಯೇ ತು ತುಷ್ಟಾಃ ಶ್ರುತಿಪರಾ ಮಹಾತ್ಮಾನೋ ಮಹಾಬಲಾಃ ।
ಧರ್ಮ್ಯಂ ಪನ್ಥಾನಮಾರೂಢಾಸ್ತಾನುಪಾಸ್ವ ಚ ಪೃಚ್ಛ ಚ ॥೧೨॥

(ಯಾರ ಬಳಿಗೆ ಓಡಿ ಹೋಗಬೇಕೆಂಬುದನ್ನು ಈ ಶ್ಲೋಕದಲ್ಲಿ ವ್ಯಾಸರು ಶುಕನಿಗೆ ವಿವರಿಸುತ್ತಾರೆ.) ಯಾರು ಮಹತ್ತರವಾದ ಧರ್ಮಬಲದಿಂದ

ಸಂಪನ್ನರಾಗಿರುವರೋ, ಮಹಾತ್ಮರೋ, ಸದಾ ತುಷ್ಟರೋ, ವೇದಶಾಸ್ತ್ರ ಪರಾಯಣರೋ, ಯಾವಾಗಲೂ ಧರ್ಮಮಾರ್ಗದಲ್ಲಿಯೇ ಪ್ರತಿಷ್ಠಿತ ರಾಗಿರುವರೋ –ಅಂತಹವರನ್ನು ಸೇವಿಸುತ್ತಿರು. ನಿನ್ನ ಕರ್ತವ್ಯದ ವಿಷಯವಾಗಿ ಅವರನ್ನು ಪ್ರಶ್ನಿಸು.

ಉಪಧಾರ್ಯ ಮತಂ ತೇಷಾಂ ಬುಧಾನಾಂ ಧರ್ಮದರ್ಶಿನಾಮ್ ।
ನಿಯಚ್ಛ ಪರಯಾ ಬುದ್ಧ್ಯಾ ಚಿತ್ತಮುತ್ಪಥಗಾಮಿ ವೈ ॥೧೩॥

ಧರ್ಮದರ್ಶಿಗಳಾದ ವಿದ್ವಾಂಸರ ಅಭಿಪ್ರಾಯವನ್ನು (ಉಪದೇಶ ವನ್ನು) ಚೆನ್ನಾಗಿ ಮನನಮಾಡಿಕೊಂಡು ಶ್ರೇಷ್ಠವಾದ ನಿನ್ನ ಬುದ್ಧಿಯಿಂದ ಮನಸ್ಸನ್ನು ನಿಯಂತ್ರಿಸು. ಮನಸ್ಸು ಯಾವಾಗಲೂ ತಪ್ಪುದಾರಿಗೇ ಹೋಗುತ್ತಿರುತ್ತದಲ್ಲವೇ?

ಆದ್ಯಕಾಲಿಕಯಾ ಬುದ್ಧ್ಯಾ ದೂರೇ ಶ್ವ ಇತಿ ನಿರ್ಭಯಾಃ ।
ಸರ್ವಭಕ್ಷ್ಯಾ ನ ಪಶ್ಯಂತಿ ಕರ್ಮಭೂಮಿಮಚೇತಸಃ ॥೧೪॥

ತಾತ್ಕಾಲಿಕವಾದ ಸುಖದಲ್ಲಿಯೇ ನಿರತವಾದ ಬುದ್ಧಿಯಿಂದ ಕೂಡಿರು ವವರು, ನಾಳೆಯೆಂಬುದು ಬಹುದೂರವಿದೆಯೆಂದೇ ಭಾವಿಸಿ ಯಾವ ವಿಧವಾದ ಭಯವೂ ಇಲ್ಲದೇ ಅಭಕ್ಷ್ಯಪದಾರ್ಥಗಳನ್ನೂ ತಿನ್ನುತ್ತಿರುತ್ತಾರೆ. ಬುದ್ಧಿಹೀನರಾದ ಅವರು ಕರ್ಮಭೂಮಿಯ ಮಹತ್ತ್ವವೇನೆಂಬುದನ್ನು ತಿಳಿದವರಾಗಿಲ್ಲ.

ಧರ್ಮಂ ನಿಃಶ್ರೇಣಿಮಾಸ್ಥಾಯ ಕಿಂಚಿತ್ಕಿಂಚಿತ್ಸಮಾರುಹ ।
ಕೋಶಕಾರವದಾತ್ಮಾನಂ ವೇಷ್ಟಯನ್ನಾನುಬುಧ್ಯಸೇ ॥೧೫॥

ಧರ್ಮವೆಂಬ ಏಣಿಯನ್ನು ಹಿಡಿದುಕೊಂಡು ಸ್ವಲ್ಪ-ಸ್ವಲ್ಪವಾಗಿಯೇ ಹತ್ತುತ್ತಿರು. ರೇಷ್ಮೆಯ ಹುಳುವು ತನ್ನ ಸುತ್ತಲೂ ಆವರಣವನ್ನು ಕಲ್ಪಿಸಿಕೊಂಡು ತಾನೇ ಕಲ್ಪಿಸಿಕೊಂಡ ಗೂಡಿನಲ್ಲಿ ಬಂದಿಯಾಗಿ ಉಳಿಯುವಂತೆ–ನೀನು ನಿನ್ನ ಕರ್ಮಗಳಿಂದಲೇ ಕರ್ಮಫಲರೂಪವಾದ ಅಥವಾ ವಾಸನಾರೂಪವಾದ ಆವರಣವನ್ನು ಕಲ್ಪಿಸಿಕೊಂಡು ಆ ಆವರಣದಲ್ಲಿಯೇ ಬಂಧಿಸಲ್ಪಟ್ಟಿರುವೆ. ವಾಸನಾರೂಪವಾದ ಕರ್ಮಫಲಗಳಿಂದ ಬಂಧಿಸಲ್ಪಟ್ಟಿರುವೆನೆಂಬುದನ್ನು ನೀನು ತಿಳಿದವನಾಗಿಲ್ಲ.

ನಾಸ್ತಿಕಂ ಭಿನ್ನಮರ್ಯಾದಂ ಕೂಲಪಾತಮಿವ ಸ್ಥಿತಮ್ ।
ವಾಮತಃ ಕುರು ವಿಸ್ರಬ್ಧೋ ನರಂ ವೇಣುಮಿವೋದ್ಧೃತಮ್ ॥೧೬॥

ದಡಗಳನ್ನು ಕೊಚ್ಚಿಕೊಂಡು ಎಲ್ಲ ಕಡೆಗಳಲ್ಲಿಯೂ ನುಗ್ಗುವ ಸ್ವಭಾವವುಳ್ಳ ಜಲಪ್ರವಾಹದಂತಿರುವ, ಮರ್ಯಾದೆಗೆಟ್ಟ, ನಾಸ್ತಿಕನಾದ ಮನುಷ್ಯನನ್ನು –ಕಿತ್ತುಹಾಕಿದ ಬಿದಿರುಮೆಳೆಯೋಪಾದಿಯಲ್ಲಿ –ಯಾವ ವಿಧವಾದ ಭಯವೂ ಇಲ್ಲದೇ ತ್ಯಾಗಮಾಡು.

ಕಾಮಂ ಕ್ರೋಧಂ ಚ ಮೃತ್ಯುಂ ಚ ಪಞ್ಚೇನ್ದ್ರಿಯಜಲಾಂ ನದೀಮ್ ।
ನಾವಂ ಧೃತಿಮಯೀಂ ಕೃತ್ವಾ ಜನ್ಮದುರ್ಗಾಣಿ ಸಂತರ ॥೧೭॥

ಕಾಮ-ಕ್ರೋಧ-ಮೃತ್ಯುಗಳನ್ನೂ, ಪಂಚೇಂದ್ರಿಯಗಳೆಂಬ ನೀರಿನಿಂದ ಕೂಡಿದ ನದಿಯನ್ನೂ ನೀನು ಸಾತ್ತ್ವಿಕೀಧೃತಿರೂಪವಾದ* ನಾವೆಯನ್ನು ಮಾಡಿಕೊಂಡು ದಾಟುವವನಾಗು. ಹೀಗೆ ದಾಟಿ ದುರ್ಗಮವಾದ ಜನ್ಮ ಮೃತ್ಯುಸಂಕಟದಿಂದ ಪಾರಾಗು.

ಮೃತ್ಯುನಾಭ್ಯಾಹತೇ ಲೋಕೇ ಜರಯಾ ಪರಿಪೀಡಿತೇ ।
ಅಮೋಘಾಸು ಪತನ್ತೀಷು ಧರ್ಮಪೋತೇನ ಸಂತರ ॥೧೮॥

ಲೋಕವು ಮೃತ್ಯುವಿನಿಂದ ಅಪ್ಪಳಿಸಲ್ಪಡುತ್ತಿದೆ. ಮುಪ್ಪಿನಿಂದ ಪೀಡಿ ಸಲ್ಪಡುತ್ತಿದೆ. ಮನುಷ್ಯನ ಆಯುಷ್ಯವನ್ನು ಕ್ಷೀಣಿಸುವುದರಲ್ಲಿ ಸಫಲವಾದ ರಾತ್ರಿಗಳು ಕಳೆದುಹೋಗುತ್ತಿವೆ. ಇದನ್ನು ಮನಗಂಡು ನೀನು ಧರ್ಮವೆಂಬ ನಾವೆಯಿಂದ ಈ ಸಂಸಾರಸಾಗರವನ್ನು ದಾಟಿಹೋಗು.

ತಿಷ್ಠನ್ತಂ ಚ ಶಯಾನಂ ಚ ಮೃತ್ಯುರನ್ವೇಷತೇ ಯದಾ ।
ನಿವೃತ್ತಿಂ ಲಭತೇ ಕಸ್ಮಾದಕಸ್ಮಾನ್ಮೃತ್ಯುನಾಶಿತಃ ॥೧೯॥

ಮೃತ್ಯುವು ನಿಂತಿದ್ದವನನ್ನೂ –ಮಲಗಿದ್ದವನನ್ನೂ ಹುಡುಕಿಕೊಂಡು

---

* ಸಾತ್ತ್ವಿಕಧೃತಿ : ಯೋಗದ ಮೂಲಕ ಮನಸ್ಸು, ಪ್ರಾಣ ಮತ್ತು ಇಂದ್ರಿಯ ವ್ಯಾಪಾರಗಳನ್ನು ನಿಯಂತ್ರಿಸುವ, ವಿಷಯಾಂತರದಲ್ಲಿ ಆಸಕ್ತವಾಗದ ಧೃತಿಯು ಸಾತ್ತ್ವಿಕಧೃತಿ.

ಹೋಗಿ ಆಕ್ರಮಿಸುತ್ತದೆ. ಅದು ನಿನ್ನನ್ನು ಕೂಡ ಆಕಸ್ಮಿಕವಾಗಿ ನುಂಗಿಹಾಕಬಹುದು. ಅಂತಹ ಮೃತ್ಯುವಿನಿಂದ ಪಾರಾಗುವ ಮಾರ್ಗವನ್ನು ಹುಡುಕದೇ ನೆಮ್ಮದಿಯಿಂದೇಕಿರುವೆ?

ಸಂಚಿನ್ವಾನಕಮೇವೈನಂ ಕಾಮಾನಾಮವಿತೃಪ್ತಕಮ್ ।
ವೃಕೀವೋರಣಮಾಸಾದ್ಯ ಮೃತ್ಯುರಾದಾಯ ಗಚ್ಛತಿ ॥೨೦॥

ಯಾವಾಗಲೂ ಭೋಗಸಾಮಗ್ರಿಗಳನ್ನೂ ಧನವನ್ನೂ ಸಂಗ್ರಹಿಸುತ್ತಿರುವ, ಪ್ರಾಪಂಚಿಕವಾದ ಕಾಮನೆಗಳಲ್ಲಿ ತೃಪ್ತಿಯನ್ನೇ ಹೊಂದದಿರುವ ಮನುಷ್ಯನನ್ನು –ಹೆಣ್ಣುತೋಳವು ಕುರಿಮರಿಯನ್ನು ಕಚ್ಚಿಕೊಂಡು ಹೋಗುವಂತೆ –ಮೃತ್ಯುವು ಕಚ್ಚಿಕೊಂಡು ಹೋಗುತ್ತದೆ.

ಕ್ರಮಶಃ ಸಂಚಿತಶಿಖೋ ಧರ್ಮಬುದ್ಧಿಮಯೋ ಮಹಾನ್ ।
ಅನ್ಧಕಾರೇ ಪ್ರವೇಷ್ಟವ್ಯಂ ದೀಪೋ ಯತ್ನೇನ ಧಾರ್ಯತಾಮ್ ॥೨೧॥

ಸಂಸಾರವೆಂಬ ಅಂಧಕಾರದಲ್ಲಿ ನೀನು ಪ್ರವೇಶಿಸಬೇಕಾಗಿದೆ. ಹಾಗೆ ಪ್ರವೇಶಿಸುವಾಗ ದೀಪವು ಅತ್ಯಾವಶ್ಯಕ. ಧರ್ಮಮಯವಾದ ಬುದ್ಧಿಯೇ ಅಂತಹ ದೀಪವಾಗಿದೆ. ಅನುಕ್ರಮವಾಗಿ ವರ್ಧಿಸುತ್ತಾ ಹೋಗುವ ಜ್ವಾಲೆಯಿಂದ ಕೂಡಿದ ಆ ದಿವ್ಯದೀಪವನ್ನು ಪ್ರಯತ್ನಪೂರ್ವಕವಾಗಿ ಧರಿಸು. (ಸಂಸಾರವೆಂಬ ಅಂಧಕಾರವನ್ನು ಹೋಗಲಾಡಿಸಲು ಜ್ಞಾನದೀಪವನ್ನು ಪಡೆದುಕೋ.)

ಸಮ್ಪತನ್ದೇಹಜಾಲಾನಿ ಕದಾಚಿದಿಹ ಮಾನುಷೇ ।
ಬ್ರಾಹ್ಮಣ್ಯಂ ಲಭತೇ ಜನ್ತುಸ್ತತ್ಪುತ್ರ ಪರಿಪಾಲಯ ॥೨೨॥

ಜೀವವು ಅನೇಕಪ್ರಕಾರವಾದ ಪ್ರಾಣಿಗಳ ದೇಹಗಳಲ್ಲಿ ಹುಟ್ಟಿ ಸಾಯುತ್ತಾ ಯಾವುದೋ ಒಂದು ಸಮಯದಲ್ಲಿ ಮನುಷ್ಯಶರೀರದಲ್ಲಿ ಹುಟ್ಟಿ ಅನುಕ್ರಮವಾಗಿ ಬ್ರಾಹ್ಮಣ್ಯವನ್ನು ಹೊಂದುತ್ತದೆ. ಅಂತಹ ಬ್ರಾಹ್ಮಣ್ಯವು ಈಗ ನಿನಗೆ ಪ್ರಾಪ್ತವಾಗಿದೆ. ಆದುದರಿಂದ ಬ್ರಾಹ್ಮಣೋಚಿತವಾದ ಕರ್ತವ್ಯಗಳನ್ನು ಪರಿಪಾಲಿಸು.

ಬ್ರಾಹ್ಮಣಸ್ಯ ತು ದೇಹೋಽಯಂ ನ ಕಾಮಾರ್ಥಾಯ ಜಾಯತೇ ।
ಇಹ ಕ್ಲೇಶಾಯ ತಪಸೇ ಪ್ರೇತ್ಯ ತ್ವನುಪಮಂ ಸುಖಮ್ ॥೨೩॥

ಈ ಬ್ರಾಹ್ಮಣದೇಹವು ಕಾಮಾರ್ಥಗಳ ಉಪಭೋಗಕ್ಕಾಗಿ ಹುಟ್ಟಿರುವುದಿಲ್ಲ. ಇಹದಲ್ಲಿ ತಪಶ್ಚರ್ಯೆಯ ಮೂಲಕ ಕ್ಲೇಶಗಳನ್ನು ಅನುಭವಿಸುವುದಕ್ಕೂ ಪರದಲ್ಲಿ ಅನುಪಮವಾದ ಸುಖಾನುಭವಕ್ಕೂ ಈ ಬ್ರಾಹ್ಮಣ ಶರೀರವು ಹುಟ್ಟಿದೆ.

ಬ್ರಾಹ್ಮಣ್ಯಂ ಬಹುಭಿರವಾಪ್ಯತೇ ತಪೋಭಿ–
ಸ್ತಲ್ಲಬ್ಧ್ವಾ ನ ರತಿಪರೇಣ ಹೇಲಿತವ್ಯಮ್ ।
ಸ್ವಾಧ್ಯಾಯೇ ತಪಸಿ ದಮೇ ಚ ನಿತ್ಯಯುಕ್ತಃ
ಕ್ಷೇಮಾರ್ಥೀ ಕುಶಲಪರಃ ಸದಾ ಯತಸ್ವ ॥೨೪॥

ಅನೇಕಜನ್ಮಗಳಲ್ಲಿ ಅನೇಕಪ್ರಕಾರವಾದ ತಪಸ್ಸುಗಳನ್ನು (ಪುಣ್ಯ ಕಾರ್ಯಗಳನ್ನು) ಮಾಡುವುದರಿಂದ ಮಾತ್ರವೇ ಬ್ರಾಹ್ಮಣ್ಯವು ಲಭಿಸುತ್ತದೆ. ಅಂತಹ ಶ್ರೇಷ್ಠವಾದ ಬ್ರಾಹ್ಮಣಶರೀರವನ್ನು ಪಡೆದುಕೊಂಡಿರುವಾಗ ವಿಷಯಾಸಕ್ತನಾಗಿ ಕಾಮಕೇಳಿಗಳಲ್ಲಿ ಆಸಕ್ತನಾಗಬಾರದು. ನೀನು ನಿನ್ನ ಯೋಗ-ಕ್ಷೇಮಗಳನ್ನು ಆಶಿಸುವೆಯಾದರೆ–ಸ್ವಾಧ್ಯಾಯ, ತಪಸ್ಸು ಮತ್ತು ಇಂದ್ರಿಯನಿಗ್ರಹಗಳಲ್ಲಿ ಸದಾ ನಿರತನಾಗಿರುತ್ತಿದ್ದು ಜಾಣತನದಿಂದ ಆತ್ಮೋದ್ಧಾರಕ್ಕಾಗಿ ಸದಾಕಾಲದಲ್ಲಿಯೂ ಪ್ರಯತ್ನಿಸುತ್ತಿರು.

ಅವ್ಯಕ್ತಪ್ರಕೃತಿರಯಂ ಕಲಾಶರೀರಃ
ಸೂಕ್ಷ್ಮಾತ್ಮಾ ಕ್ಷಣತ್ರುಟಿಶೋ ನಿಮೇಷರೋಮಾ ।
ಋತ್ವಾಸ್ಯಃ ಸಮಬಲಶುಕ್ಲ ಕೃಷ್ಣ ನೇತ್ರೋ
ಮಾಸಾಙ್ಗೋ ದ್ರವತಿ ವಯೋಹಯೋ ನರಾಣಾಮ್ ॥

ತಂ ದೃಷ್ಟ್ವಾ ಪ್ರಸೃತಮಜಸ್ರಮುಗ್ರವೇಗಂ
ಗಚ್ಛನ್ತಂ ಸತತಮಿಹಾವ್ಯವೇಕ್ಷಮಾಣಮ್ ।
ಚಕ್ಷುಸ್ತೇ ಯದಿ ನ ಪರಪ್ರಣೇತೃನೇಯಂ
ಧರ್ಮೇ ತೇ ಭವತು ಮನಃ ಪರಂ ನಿಶಾಮ್ಯ ॥೨೬॥

ಮನುಷ್ಯನ ಆಯುಷ್ಯವೆಂಬ ಕುದುರೆಯು ಬಹಳ ವೇಗವಾಗಿ ಓಡಿ

ಹೋಗುತ್ತಿದೆ. ಆ ಕುದುರೆಯ ಸ್ವಭಾವವು ಅವ್ಯಕ್ತವಾದುದು. ಯಾರಿಗೂ ಗೋಚರಿಸತಕ್ಕುದಲ್ಲ. ಕಲಾ (೪೫೦ ಸಲ ರೆಪ್ಪೆಯಾಡಿಸುವಷ್ಟು ಕಾಲ) ಎಂಬುದೇ ಆ ಕುದುರೆಯ ಶರೀರವಾಗಿದೆ. ಅದರ ಸ್ವರೂಪವು ಅತ್ಯಂತ ಸೂಕ್ಷ್ಮವಾದುದು. ಕ್ಷಣ (ನಿಮೇಷದ ನಾಲ್ಕನೆಯ ಒಂದು ಭಾಗದಷ್ಟು ಕಾಲ), ನಿಮೇಷ (ಕಣ್ಣುಮಿಟುಕಿಸುವಷ್ಟು ಕಾಲ), ತ್ರುಟಿ (ಅತಿ ಸೂಕ್ಷ್ಮಕಾಲಮಾನ.) ಇವುಗಳೇ ಅದರ ರೋಮಗಳು. ವಸಂತಾದಿ ಋತುಗಳೇ ಅದರ ಮುಖ. ಸಮಾನಬಲವುಳ್ಳ ಶುಕ್ಲ ಮತ್ತು ಕೃಷ್ಣಪಕ್ಷಗಳೇ ಆ ಕುದುರೆಯ ಕಣ್ಣುಗಳು. ಮಾಸಗಳೇ ಅದರ ಇತರ ಅವಯವಗಳು. ಭಯಂಕರವಾದ ವೇಗವುಳ್ಳ ಆಯುಷ್ಯವೆಂಬ ಆ ಕುದುರೆಯು ಯಾವುದನ್ನೂ ಅಪೇಕ್ಷಿಸದೇ ಸತತವಾಗಿ ಓಡುತ್ತಿರುತ್ತದೆ. ಅದನ್ನು ನೋಡಿ ನಿನ್ನ ಜ್ಞಾನದೃಷ್ಟಿಯು ಇತರರಿಂದ ಚಲಿಸುವಂತೆ ಮಾಡಲ್ಪಟ್ಟರೂ ವಿಚಲಿತವಾಗದಿರಲಿ. ನಿನ್ನ ಮನಸ್ಸು ಯಾವಾಗಲೂ ಧರ್ಮದಲ್ಲಿಯೇ ಆಸಕ್ತವಾಗಿರಲಿ.

ಯೇ ಚಾತ್ರ ಪ್ರಚಲಿತಧರ್ಮಕಾಮವೃತ್ತಾಃ
ಕ್ರೋಶನ್ತಃ ಸತತಮನಿಷ್ಟಸಮ್ಪ್ರಯೋಗಾಃ ।
ಕ್ಲಿಶ್ಯನ್ತಃ ಪರಿಗತವೇದನಾಶರೀರಾ
ಬಹ್ವೀಭಿಃ ಸುಭೃಶಮಧರ್ಮಕಾರಣಾಭಿಃ ॥೨೭॥

ಯಾರು ಈ ಲೋಕದಲ್ಲಿ ಧರ್ಮದಿಂದ ವಿಚಲಿತರಾಗಿ ಸ್ವೇಚ್ಛಾಚಾರದಲ್ಲಿ ಪ್ರವೃತ್ತರಾಗಿರುವರೋ, ಇತರರನ್ನು ನಿಂದಿಸುತ್ತಿರುವರೋ, ಯಾವಾಗಲೂ ಅನಿಷ್ಟಕರವಾದ ಅಶುಭಕರ್ಮಗಳಲ್ಲಿಯೇ ನಿರತರಾಗಿರುವರೋ –ಅಂತಹವರು ಮರಣಾನಂತರದಲ್ಲಿ ಯಮಲೋಕದಲ್ಲಿ ಯಾತನಾಮಯವಾದ ಶರೀರವನ್ನು ಹೊಂದಿ ತಾವು ಮಾಡಿದ ಅನೇಕಪಾಪಕರ್ಮಗಳ ಕಾರಣದಿಂದಾಗಿ ನಾನಾವಿಧವಾದ ಕ್ಲೇಶಗಳನ್ನು ಅನುಭವಿಸುತ್ತಾರೆ.

ರಾಜಾ ಸದಾ ಧರ್ಮಪರಃ ಶುಭಾಶುಭಸ್ಯ ಗೋಪ್ತಾ
ಸಮೀಕ್ಷ್ಯ ಸುಕೃತಿನಾಂ ದಧಾತಿ ಲೋಕಾನ್ ।
ಬಹುವಿಧಮಪಿ ಚರತಃ ಪ್ರದಿಶತಿ
ಸುಖಮನುಪಗತಂ ನಿರವದ್ಯಮ್ ॥೨೮॥

ಯಮರಾಜನು ಸದಾ ಧರ್ಮಪರನಾಗಿರತಕ್ಕವನು. ಮನುಷ್ಯರು ಮಾಡಿದ ಶುಭಾಶುಭಕರ್ಮಫಲಗಳನ್ನು ರಕ್ಷಿಸಿಕೊಂಡಿರತಕ್ಕವನು. ಪುಣ್ಯವಂತರ ಪುಣ್ಯಗಳನ್ನು ಚೆನ್ನಾಗಿ ಪರಿಶೀಲಿಸಿ ಅದಕ್ಕನುಗುಣವಾದ ಲೋಕಗಳನ್ನು ದಯಪಾಲಿಸುತ್ತಾನೆ. ನಾನಾವಿಧವಾದ ಶುಭಕರ್ಮಗಳನ್ನು ಮಾಡುವವರಿಗೆ ಸಾವಿರಾರು ಜನ್ಮಗಳಲ್ಲಿಯೂ ಹೊಂದದೇ ಇರುವ ಉತ್ಕೃಷ್ಟವಾದ ಸುಖವನ್ನು ದಯಪಾಲಿಸುತ್ತಾನೆ.

ಶ್ವಾನೋ ಭೀಷಣಕಾಯಾ ಅಯೋಮುಖಾನಿ ವಯಾಂಸಿ
ಬಲಗೃಧ್ರಕುಲಪಕ್ಷಿಣಾಂ ಚ ಸಂಘಾಃ ।
ನರಕದನೇ ರುಧಿರಪಾ ಗುರುವಚನ–
ನುದಮುಪರತಂ ವಿಶಸನ್ತಿ ॥೨೯॥

ಮಾತಾ-ಪಿತೃ-ಗುರುಜನರ ಮಾತುಗಳನ್ನು ದೂರೀಕರಿಸುವವನು ಮರಣಾನಂತರದಲ್ಲಿ ನರಕಕ್ಕೆ ಹೋಗುತ್ತಾನೆ. ಅಲ್ಲಿ ಯಾತನಾಮಯವಾದ ಶರೀರವನ್ನು ಹೊಂದಿರುವ ಅವನನ್ನು ಭಯಂಕರವಾದ ಶರೀರವುಳ್ಳ ನಾಯಿಗಳೂ, ಲೋಹಮಯವಾದ ಮುಖಗಳನ್ನು ಹೊಂದಿರುವ ಪಕ್ಷಿಗಳೂ, ಕಾಗೆ-ಹದ್ದು ಇವೇ ಮೊದಲಾದ ಪಕ್ಷಿಗಳ ಸಮೂಹಗಳೂ ಕುಕ್ಕಿ ಕಿತ್ತು-ಕಿತ್ತು ಹಾಕುತ್ತವೆ.

ಮರ್ಯಾದಾನಿಯತಾಃ ಸ್ವಯಮ್ಭುವಾ ಯ ಇಹೇಮಾಃ
ಪ್ರಭಿನತ್ತಿ ದಶಗುಣಾ ಮನೋऽನುಗತ್ವಾತ್ ।
ನಿವಸತಿ ಭೃಶಮಸುಖಂ ಪಿತೃವಿಷಯ–
ವಿಪಿನಮವಗಾಹ್ಯ ಸ ಪಾಪಃ ॥೩೦॥

ಯಾವ ಮನುಷ್ಯನು ಕಾಮಾಭಿಭೂತವಾದ ಮನಸ್ಸನ್ನು ಅನುಸರಿಸಿ ಹೋಗುವ ಕಾರಣದಿಂದ ಸ್ವಯಂಭುವಿನಿಂದ ವಿಧಿಸಲ್ಪಟ್ಟಿರುವ ಹತ್ತು ಪ್ರಕಾರವಾದ ಧರ್ಮ*ದ ಮರ್ಯಾದೆಗಳನ್ನು ಉಲ್ಲಂಘಿಸುವನೋ–

---

* ಧರ್ಮದ ಹತ್ತು ಪ್ರಕಾರಗಳು :
ಧೃತಿಃ ಕ್ಷಮಾ ದಮೋऽಸ್ತೇಯಂ ಶೌಚಮಿನ್ದ್ರಿಯನಿಗ್ರಹಃ ।
ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಮ್ ॥ [ಮನುಸ್ಮೃತಿಃ]

ಅವನು ಮರಣಾನಂತರದಲ್ಲಿ ಯಮಲೋಕದಲ್ಲಿರುವ ಅಸಿಪತ್ರವನಕ್ಕೆ ಹೋಗಿ ಅಲ್ಲಿ ಅತಿಕಷ್ಟವನ್ನು ಅನುಭವಿಸುತ್ತಿರುತ್ತಾನೆ.

ಯೋ ಲುಬ್ಧಃ ಸುಭೃಶಂಪ್ರಿಯಾನೃತಶ್ಚ ಮನುಷ್ಯಃ
ಸತತನಿಕೃತಿವಞ್ಚನಾಭಿರತಿಃ ಸ್ಯಾತ್ ।
ಉಪನಿಧಿಭಿರಸುಖಕೃತ್ಸ ಪರಮನಿರಯಗೋ
ಭೃಶಮಸುಖಮನುಭವತಿ ದುಷ್ಕೃತಕರ್ಮಾ ॥೩೧॥

ಯಾವ ಮನುಷ್ಯನು ಅತ್ಯಂತಲೋಭಿಯೋ, ಸುಳ್ಳನ್ನಾಡುವುದರಲ್ಲಿಯೇ ಹೆಚ್ಚು ಆಸಕ್ತಿಯುಳ್ಳವನೋ, ಸದಾಕಾಲದಲ್ಲಿಯೂ ಕಪಟ-ಮೋಸ-ವಂಚನೆಗಳಲ್ಲಿಯೇ ನಿರತನಾಗಿರುವನೋ, ರಕ್ಷಣೆಗಾಗಿಟ್ಟಿದ್ದ ನಿಧಿಗಳನ್ನು ದುರುಪಯೋಗಮಾಡಿಕೊಂಡು ನಿಧಿಗಳನ್ನಿಟ್ಟವರಿಗೆ ದುಃಖವನ್ನುಂಟುಮಾಡುವನೋ–ಅಂತಹ ದುಷ್ಕರ್ಮಿಯಾದ ಪಾಪಾತ್ಮನು ಮರಣಾನಂತರದಲ್ಲಿ ಘೋರವಾದ ನರಕಕ್ಕೆ ಹೋಗಿ ಅಲ್ಲಿ ಅತ್ಯಂತ ದುಃಖವನ್ನು ಅನುಭವಿಸುತ್ತಾನೆ.

ಉಷ್ಣಾಂ ವೈತರಣೀಂ ಮಹಾನದೀ-
ಮವಗಾಢೋಽಸಿಪತ್ರವನಭಿನ್ನಗಾತ್ರಃ ।
ಪರಶುವನಶಯೋ ನಿಪತಿತೋ
ವಸತಿ ಚ ಮಹಾನಿರಯೇ ಭೃಶಾರ್ತಃ ॥೩೨॥

ಇಷ್ಟುಮಾತ್ರವಲ್ಲ : ಅಂತಹ ಪಾಪಿಯು ಕುದಿಯುತ್ತಿರುವ ವೈತರಣೀ ನದಿಯಲ್ಲಿ ಮುಳುಗಬೇಕಾಗುತ್ತದೆ. ಕತ್ತಿಗಳೇ ಎಲೆಗಳಾಗಿರುವ ವೃಕ್ಷಗಳಿಂದ ತುಂಬಿರುವ ವನದಲ್ಲಿ ವಾಸಮಾಡುವುದರಿಂದ ಅವನ ಯಾತನಾಮಯವಾದ ಶರೀರವು ಛಿನ್ನ-ಭಿನ್ನವಾಗುತ್ತದೆ. ಮುಂದೆ ಅವನು ಗಂಡುಗೊಡಲಿಗಳೇ ಎಲೆಗಳಾಗಿ ಉಳ್ಳ ವೃಕ್ಷಗಳಿಂದ ಕೂಡಿರುವ ವನದಲ್ಲಿ ಮಲಗಬೇಕಾಗುತ್ತದೆ. ಹೀಗೆ ಆ ಪಾಪಿಷ್ಠನು ನಾನಾವಿಧಗಳಿಂದ ಪೀಡಿಸಲ್ಪಡುತ್ತಾ ಘೋರನರಕದಲ್ಲಿ ವಾಸಮಾಡುತ್ತಾನೆ.

ಧೈರ್ಯ, ಕ್ಷಮೆ, ಮನೋನಿಗ್ರಹ, ಅಸ್ತೇಯ, ಪವಿತ್ರತೆ, ಇಂದ್ರಿಯನಿಗ್ರಹ, ಬುದ್ಧಿ, ವಿದ್ಯೆ, ಸತ್ಯ ಮತ್ತು ಅಕ್ರೋಧ –ಇವು ಹತ್ತು ಧರ್ಮದ ಲಕ್ಷಣಗಳು.

ಮಹಾಪದಾನಿ ಕತ್ಥಸೇ ನ ಚಾಪ್ಯವೇಕ್ಷಸೇ ಪರಮ್ ।
ಚಿರಸ್ಯ ಮೃತ್ಯುಕಾರಿಕಾಮನಾಗತಾಂ ನ ಬುಧ್ಯಸೇ ॥೩೩॥

ಮಗು! ಶುಕ! ನೀನು ಬ್ರಹ್ಮಲೋಕವೇ ಮೊದಲಾದ ದೊಡ್ಡ-ದೊಡ್ಡ ಲೋಕಗಳ ವಿಷಯಗಳನ್ನೇ ಹೇಳುವೆ. ಆದರೆ ಎಲ್ಲ ಲೋಕಗಳಿಗಿಂತಲೂ ದೊಡ್ಡದಾದ ಪರಮಪದದ ಕಡೆಗೆ ನಿನ್ನ ದೃಷ್ಟಿಯೇ ಇಲ್ಲವಾಗಿದೆ. ಈಗಿನ್ನೂ ಬರದಿರುವ ಮೃತ್ಯುವಿಗೆ ಕಾರಣವಾದ ವೃದ್ಧಾಪ್ಯವು ಮುಂದೆ ಬರಲಿದೆ. ಅದನ್ನು ನೀನು ತಿಳಿದವನಾಗಿಲ್ಲ.

ಪ್ರಯಾಯತಾಂ ಕಿಮಾಸ್ಯತೇ ಸಮುತ್ಥಿತಂ ಮಹದ್ಭಯಮ್ ।
ಅತಿಪ್ರಮಾಥಿ ದಾರುಣಂ ಸುಖಸ್ಯ ಸಂವಿಧೀಯತಾಮ್ ॥೩೪॥

ವತ್ಸ! ಸುಮ್ಮನೇಕೆ ಕುಳಿತಿರುವೆ? ಶೀಘ್ರವಾಗಿ ಮುಂದೆ ಹೋಗು. ಹೃದಯವನ್ನೇ ಕದಡಿಬಿಡುವ ದಾರುಣವಾದ ಮಹಾಭಯವು ಉತ್ಪನ್ನ ವಾಗಿದೆ. ಆದುದರಿಂದ ಪರಮಾನಂದಪ್ರಾಪ್ತಿಗೆ ಪ್ರಯತ್ನಿಸು.

ಪುರಾ ಮೃತಃ ಪ್ರಣೀಯತೇ ಯಮಸ್ಯ ರಾಜಶಾಸನಾತ್ ।
ತ್ವಮನ್ತಕಾಯ ದಾರುಣೈಃ ಪ್ರಯತ್ನಮಾರ್ಜವೇ ಕುರು ॥೩೫॥

ನಿನ್ನ ಮರಣವಾದೊಡನೆಯೇ ಯಮರಾಜನ ಆಜ್ಞೆಯ ಪ್ರಕಾರ ಭಯಂಕರರಾದ ಯಮದೂತರು ಬಂದು ಪಾಶದಿಂದ ಬಂಧಿಸಿ ನಿನ್ನನ್ನು ಯಮನ ಬಳಿಗೆ ಕರೆದೊಯ್ಯುತ್ತಾರೆ. ಹಾಗಾಗುವುದಕ್ಕೆ ಮೊದಲೇ ನೀನು ಆರ್ಜವವನ್ನು (ಧರ್ಮವನ್ನು ಅಥವಾ ಜ್ಞಾನವನ್ನು) ಹೊಂದಲು ಪ್ರಯತ್ನಿಸು.

ಪುರಾ ಸಮೂಲಬಾನ್ಧವಂ ಪ್ರಭುರ್ಹರತ್ಯದುಃಖವಿತ್ ।
ತವೇಹ ಜೀವಿತಂ ಯಮೋ ನ ಚಾಸ್ತಿ ತಸ್ಯ ವಾರಕಃ ॥೩೬॥

ಪ್ರಭುವಾದ ಯಮನು ಯಾರ ಕಷ್ಟ-ಸುಖಗಳನ್ನೂ ತಿಳಿದವನಾಗಿಲ್ಲ. (ಮನುಷ್ಯರು ಕಷ್ಟದಲ್ಲಿಯೇ ಇರಲಿ ; ಸುಖವಾಗಿಯೇ ಇರಲಿ –ಅವನಿಗೆ ಅದರ ಪರಿವೆಯೇ ಇರುವುದಿಲ್ಲ.) ಅವನು ವಾಸನಾಮಯವಾದ ಶರೀರದ ಸಹಿತವಾಗಿ ನಿನ್ನ ಜೀವವನ್ನು ಇಲ್ಲಿಂದಲೇ ಅಪಹರಿಸಿಕೊಂಡು ಹೋಗು ತ್ತಾನೆ. ಅವನನ್ನು ತಡೆಯುವವರು ಯಾರೂ ಇರುವುದಿಲ್ಲ.

ಪುರಾಭಿವಾತಿ ಮಾರುತೋ ಯಮಸ್ಯ ಯಃ ಪುರಃಸರಃ ।
ಪುರೈಕ ಏವ ನೀಯಸೇ ಕುರುಷ್ವ ಸಾಮ್ಪರಾಯಿಕಮ್ ॥೩೭॥

ಯಮರಾಜನ ಮುಂದೆ ಹೋಗುವ, ಕಾಲರೂಪವಾದ ಮಾರುತನೊಬ್ಬನೇ ನಿನ್ನ ಮುಂದೆ ಬರುತ್ತಾನೆ ಮತ್ತು ನಿನ್ನನ್ನು ಯಮಾಲಯಕ್ಕೆ ಒಯ್ದುಬಿಡುತ್ತಾನೆ. ಹಾಗೆ ಒಯ್ಯುವುದಕ್ಕೆ ಮೊದಲೇ–ಮರಣಾನಂತರದಲ್ಲಿ ಪರಮಸುಖಕ್ಕೆ ಸಾಧನಭೂತವಾದ ಧರ್ಮಾಚರಣೆಗಳನ್ನು ಮಾಡು.

ಪುರಾ ಸ ಹಿ ಕ್ವ ಏವ ತೇ ಪ್ರವಾತಿ ಮಾರುತೋಽನ್ತಕಃ ।
ಪುರಾ ಚ ವಿಭ್ರಮನ್ತಿ ತೇ ದಿಶೋ ಮಹಾಭಯಾಗಮೇ ॥೩೮॥

ಹಿಂದಿನ ಜನ್ಮದಲ್ಲಿಯೂ ಆ ಯಮನೇ ನಿನ್ನ ಪ್ರಾಣಗಳನ್ನು ಒಯ್ದಿದ್ದನು. ಈಗಲೂ ವಾಯುರೂಪನಾದ ಆ ಅಂತಕನೇ ನಿನ್ನ ಮುಂದೆ ಬರುತ್ತಾನೆ. ನಿನಗೆ ಆ ಸಮಯದಲ್ಲಿ ಮಹಾಭಯವುಂಟಾಗುತ್ತದೆ. ದಿಕ್ಕುಗಳೆಲ್ಲವೂ ತಿರುಗುತ್ತಿರುವಂತೆ ಕಾಣುತ್ತದೆ. ಹಾಗಾಗುವುದಕ್ಕೆ ಮೊದಲೇ ನೀನು ಪರಮಸುಖಸಾಧನಭೂತವಾದ ಧರ್ಮಾಚರಣೆಗಳನ್ನು ಮಾಡು.

ಸ್ಮೃತಿಶ್ಚ ಸಂನಿರುಧ್ಯತೇ ಪುರಾ ತವೇಹ ಪುತ್ರಕ ।
ಸಮಾಕುಲಸ್ಯ ಗಚ್ಛತಃ ಸಮಾಧಿಮುತ್ತಮಂ ಕುರು ॥೩೯॥

ಮಗು! ನೀನು ಈ ಶರೀರವನ್ನು ಬಿಟ್ಟುಹೋಗುವಾಗ ವ್ಯಾಕುಲಿತನಾಗುವ ನಿನಗೆ ಸ್ಮೃತಿಯೂ ನಷ್ಟವಾಗಿ ಹೋಗುತ್ತದೆ. ಹಾಗಾಗುವುದಕ್ಕೆ ಮೊದಲೇ ನೀನು ಉತ್ತಮವಾದ ಸಮಾಧಿಯೋಗವನ್ನು ಅಭ್ಯಸಿಸು.

ಶುಭಾಶುಭೇ ಪುರಾ ಕೃತೇ ಪ್ರಮಾದಕರ್ಮವಿಪ್ಲುತೇ ।
ಸ್ಮರನ್ಪುರಾ ನ ತಪ್ಯಸೇ ನಿಧತ್ಸ್ವ ಕೇವಲಂ ನಿಧಿಮ್ ॥೪೦॥

ಹಿಂದೆ ನೀನು ಅಜಾಗರೂಕತೆಯಿಂದ ಪೀಡಾರೂಪವಾದ ಕರ್ಮಗಳನ್ನು ಮಾಡಿರುವೆ. ಆದುದರಿಂದಲೇ ನೀನು ಈ ಜನ್ಮದಲ್ಲಿ ಅದರ ಶುಭಾಶುಭಫಲಗಳನ್ನು ಅನುಭವಿಸಬೇಕಾಗಿದೆ. ಅದನ್ನು ಸ್ಮರಿಸಿ ಪಶ್ಚಾತ್ತಾಪಪಡುವುದಕ್ಕೆ ಮೊದಲೇ ಅಂತಹ ಕರ್ಮಗಳನ್ನು ಮಾಡಹೋಗದೇ ಜ್ಞಾನಭಂಡಾರವನ್ನೇ ಸಂಗ್ರಹಿಸು. ಇದರಿಂದ ನೀನು ಪರಿತಪಿಸಬೇಕಾಗುವುದಿಲ್ಲ.

ಪುರಾ ಜರಾ ಕಲೇವರಂ ವಿಜರ್ಜರೀಕರೋತಿ ತೇ ।
ಜಲಾಙ್ಗರೂಪಹಾರಿಣೀ ನಿಧತ್ಸ್ವ ಕೇವಲಂ ನಿಧಿಮ್ ॥೪೧॥

ಮುಂದೆ ಈ ನಿನ್ನ ಶರೀರವನ್ನು ಮುಪ್ಪು ಜೀರ್ಣಗೊಳಿಸಿಬಿಡುತ್ತದೆ. ನಿನ್ನ ಅಂಗೋಪಾಂಗಗಳ ಬಲವನ್ನು ಅಪಹರಿಸಿಬಿಡುತ್ತದೆ. ರೂಪವನ್ನೂ ನಾಶಪಡಿಸುತ್ತದೆ. ಹಾಗಾಗುವ ಮೊದಲೇ ನೀನು ಜ್ಞಾನಭಂಡಾರವನ್ನು ತುಂಬಿಕೋ. (ಆ ಜ್ಞಾನವು ಜರಾ-ಮೃತ್ಯುಗಳೆರಡನ್ನೂ ಜಯಿಸಬಲ್ಲುದು.)

ಪುರಾ ಶರೀರಮನ್ತಕೋ ಭಿನತ್ತಿ ರೋಗಸಾರಥಿಃ ।
ಪ್ರಸಹ್ಯ ಜೀವಿತಕ್ಷಯೇ ತಪೋ ಮಹತ್ಸಮಾಚರ ॥೪೨॥

ರೋಗವನ್ನೇ ಸಾರಥಿಯನ್ನಾಗಿ ಹೊಂದಿರುವ ಕಾಲನು ಬಲಾತ್ಕಾರ ಪೂರ್ವಕವಾಗಿ ಶರೀರವನ್ನು ನಾಶಗೊಳಿಸುತ್ತಾನೆ. ಆದುದರಿಂದ ನಿನ್ನ ಜೀವಿತವು ವಿನಾಶಹೊಂದುವ ಮೊದಲೇ ಆತ್ಮೋದ್ಧಾರಕವಾದ ಮಹಾ ತಪಸ್ಸನ್ನು ಆಚರಿಸು.

ಪುರಾ ವೃಕಾ ಭಯಂಕರಾ ಮನುಷ್ಯದೇಹಗೋಚರಾಃ ।
ಅಭಿದ್ರವನ್ತಿ ಸರ್ವತೋ ಯತಸ್ವ ಪುಣ್ಯಶೀಲನೇ ॥೪೩॥

ಮನುಷ್ಯನ ದೇಹದಲ್ಲಿ ಗೋಚರವಾಗುವ ಭಯಂಕರವಾದ ತೋಳ ಗಳ ರೂಪದಲ್ಲಿರುವ ಕಾಮ-ಕ್ರೋಧಾದಿಗಳು ಎಲ್ಲ ಕಡೆಗಳಿಂದಲೂ ನಿನಗೆ ಅಭಿಮುಖವಾಗಿ ಓಡಿಬರುತ್ತವೆ. ಅವು ನಿನ್ನ ಬಳಿಗೆ ಬರುವ ಮೊದಲೇ ನೀನು ಪುಣ್ಯಶೀಲನಾಗಲು ಪ್ರಯತ್ನಿಸು.

ಪುರಾನ್ಧಕಾರಮೇಕಕೋಽನುಪಶ್ಯಸಿ ತ್ವರಸ್ವ ವೈ ।
ಪುರಾ ಹಿರಣ್ಮಯಾನ್ನಗಾನ್ನಿರೀಕ್ಷಸೇಽದ್ರಿಮೂರ್ಧನಿ ॥೪೪॥

ಮರಣಕ್ಕೆ ಮೊದಲು ನೀನು ಘೋರಾಂಧಕಾರವನ್ನು ನೋಡುವೆ. ಪರ್ವತದ ಶಿಖರದಲ್ಲಿ ಸುವರ್ಣಮಯವಾದ ವೃಕ್ಷಗಳನ್ನು ಕಾಣುವೆ. ಹಾಗೆ ಕಾಣುವ ಮೊದಲೇ ನೀನು ಶೀಘ್ರವಾಗಿ ಆತ್ಮೋದ್ಧಾರಕವಾದ ತಪಸ್ಸನ್ನು ಆಚರಿಸು.

(ಜೀವನು ದೇಹವನ್ನು ಬಿಟ್ಟುಹೋಗುವಾಗ ಸುವರ್ಣವೃಕ್ಷಗಳೇ

ಮೊದಲಾದುವನ್ನು ಕಾಣುತ್ತಾನೆ. ಮುಮೂರ್ಷುವು ಅವುಗಳನ್ನು ಕಂಡರೆ ಮೃತ್ಯುವು ಸನ್ನಿಹಿತವಾಯಿತೆಂದೇ ತಿಳಿಯಬೇಕು.)

ಪುರಾ ಕುಸಜ್ಜತಾನಿ ತೇ ಸುಹೃನ್ಮುಖಾಶ್ಚ ಶತ್ರವಃ ।
ವಿಚಾಲಯನ್ತಿ ದರ್ಶನಾದ್ಘಟಸ್ವ ಪುತ್ರ ಯತ್ಪರಮ್ ॥೪೫॥

ಈ ಪ್ರಪಂಚದಲ್ಲಿ ದುಷ್ಟಪುರುಷರ ಸಹವಾಸವು ಕರ್ತವ್ಯದಿಂದ ಚ್ಯುತನಾಗುವಂತೆ ಮಾಡುತ್ತದೆ. ಸ್ನೇಹಿತರ ಮುಖವಾಡವನ್ನು ಧರಿಸಿರುವ ಶತ್ರುಗಳು ದರ್ಶನಮಾತ್ರದಿಂದಲೇ ನಿನ್ನನ್ನು ಕರ್ತವ್ಯಭ್ರಷ್ಟನನ್ನಾಗಿ ಮಾಡುತ್ತಾರೆ. ಆದುದರಿಂದ ಹಾಗಾಗುವ ಮೊದಲೇ ನೀನು ಪರಮಪದವನ್ನು ಪಡೆಯಲು ಪ್ರಯತ್ನಿಸು.

ಧನಸ್ಯ ಯಸ್ಯ ರಾಜತೋ ಭಯಂ ನ ಚಾಸ್ತಿ ಚೋರತಃ ।
ಮೃತಂ ಚ ಯನ್ನ ಮುಞ್ಚತಿ ಸಮರ್ಜಯಸ್ವ ತದ್ಧನಮ್ ॥೪೬॥

ಯಾವ ಧನಕ್ಕೆ ರಾಜನಿಂದಾಗಲೀ, ಚೋರನಿಂದಾಗಲೀ – ಭಯವಿಲ್ಲವೋ, ಯಾವ ಧನವು ಸತ್ತುಹೋದರೂ ನಿನ್ನನ್ನು ತ್ಯಜಿಸಿ ಹೋಗುವುದಿಲ್ಲವೋ–ಅಂತಹ ಧರ್ಮಧನವನ್ನು ಸಂಪಾದಿಸು.

ನ ತತ್ರ ಸಂವಿಯುಜ್ಯತೇ ಸ್ವಕರ್ಮಭಿಃ ಪರಸ್ಪರಮ್ ।
ಯದೇವ ಯಸ್ಯ ಯೌತಕಂ ತದೇವ ತತ್ರ ಸೋಽಶ್ನುತೇ ॥೪೭॥

ಮಾವನು ಅಳಿಯನಿಗೆ ಕೊಟ್ಟ ಬಳುವಳಿಯನ್ನು ಬೇರೆ ಯಾರೂ ಹಂಚಿಕೊಳ್ಳಲು ಸಾಧ್ಯವಾಗದಂತೆ–ತಾನು ಇಲ್ಲಿ ಮಾಡಿದ ಕರ್ಮಗಳಿಂದ ಸಂಪಾದಿಸಿದ ಫಲವನ್ನು ಪರಲೋಕದಲ್ಲಿ ಪರಸ್ಪರವಾಗಿ ಹಂಚಿಕೊಳ್ಳಲು ಸಾಧ್ಯವಾಗುವುದಿಲ್ಲ. ಆ ಕರ್ಮಗಳ ಫಲವನ್ನು ಅವನೊಬ್ಬನೇ ಪರಲೋಕದಲ್ಲಿ ಅನುಭವಿಸುತ್ತಾನೆ.

ಪರತ್ರ ಯೇನ ಜೀವ್ಯತೇ ತದೇವ ಪುತ್ರ ದೀಯತಾಮ್ ।
ಧನಂ ಯದಕ್ಷರಂ ಧ್ರುವಂ ಸಮರ್ಜಯಸ್ವ ತತ್ಸ್ವಯಮ್ ॥೪೮॥

ಯಾವುದನ್ನು ದಾನಮಾಡಿದರೆ ಪರಲೋಕದಲ್ಲಿ ಸುಖವಾಗಿ ಜೀವಿಸಲು

ಸಾಧ್ಯವಾಗುವುದೋ–ಅಂತಹ ಉತ್ತಮಪದಾರ್ಥಗಳನ್ನೇ ದಾನಮಾಡು. ಧರ್ಮರೂಪವಾದ ಯಾವ ಧನವು ಅವಿನಾಶಿಯೂ ಶಾಶ್ವತವೂ ಆಗಿರುವುದೋ –ಅದನ್ನೇ ಸಂಪಾದಿಸು.

ನ ಯಾವದೇವ ಪಚ್ಯತೇ ಮಹಾಜನಸ್ಯ ಯಾವಕಮ್ ।
ಅಪಕ್ವ ಏವ ಯಾವಕೇ ಪುರಾ ಪ್ರಲೀಯಸೇ ತ್ವರ ॥೪೯॥

ಮಹಾಜನರಿಗೋಸ್ಕರ ನೀನು ಗಂಜಿಯನ್ನು ಬೇಯಿಸುತ್ತಿದ್ದರೆ ಅದು ಬೇಯುವಷ್ಟರೊಳಗಾಗಿಯೇ ನೀನು ಮರಣಹೊಂದಿಬಿಡಬಹುದು. ಆದುದರಿಂದ ಅತಿಶೀಘ್ರವಾಗಿ ಧರ್ಮವನ್ನಾಚರಿಸು. ('ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ । ನಿತ್ಯಂ ಸನ್ನಿಹಿತೋ ಮೃತ್ಯುಃ'–ಎಂಬುದನ್ನೇ ಈ ಶ್ಲೋಕವು ಪ್ರತಿಪಾದಿಸುತ್ತದೆ.)

ನ ಮಾತೃಪುತ್ರಬಾನ್ಧವಾ ನ ಸಂಸ್ತುತಃ ಪ್ರಿಯೋ ಜನಃ ।
ಅನುವ್ರಜನ್ತಿ ಸಂಕಟೇ ವ್ರಜನ್ತಮೇಕಪಾತಿನಮ್ ॥೫೦॥

ಜೀವವು ಯಾವಾಗ ಏಕಾಕಿಯಾಗಿ ಪರಲೋಕದ ಕಡೆಗೆ ಪ್ರಯಾಣ ಮಾಡುವುದೋ –ಅಂತಹ ಸಂಕಟದ ಸಮಯದಲ್ಲಿಯೂ ತಾಯಿ ಯಾಗಲೀ, ಮಕ್ಕಳಾಗಲೀ, ಭಾರ್ಯೆಯಾಗಲೀ, ಬಂಧುಗಳಾಗಲೀ, ಹಿಂದೆ ಪರಿಚಿತರಾಗಿದ್ದ ಪ್ರಿಯಜನರಾಗಲೀ–ಆ ಜೀವನನ್ನು ಅನುಸರಿಸಿ ಹೋಗು ವುದಿಲ್ಲ. (ಆದುದರಿಂದ ಈ ಸಂಸಾರದಲ್ಲಿ ಭ್ರಾಂತಿಯನ್ನು ಹೊಂದದೆ ಆತ್ಮೋದ್ಧಾರಕ್ಕಾಗಿ ಪ್ರಯತ್ನಿಸು.)

ಯದೇವ ಕರ್ಮ ಕೇವಲಂ ಪುರಾ ಕೃತಂ ಶುಭಾಶುಭಮ್ ।
ತದೇವ ಪುತ್ರ ಸಾರ್ಥಿಕಂ ಭವತ್ಯಮುತ್ರ ಗಚ್ಛತಃ ॥೫೧॥

ಪುತ್ರಕ! ಪರಲೋಕಕ್ಕೆ ಹೋಗುವಾಗ ತಾನು ಹಿಂದೆ ಮಾಡಿದ ಯಾವ ಶುಭಾಶುಭಕರ್ಮಫಲಗಳಿವೆಯೋ–ಅವು ಮಾತ್ರವೇ ಜೊತೆಯಲ್ಲಿರುತ್ತವೆ.

ಹಿರಣ್ಯರತ್ನಸಂಚಯಾಃ ಶುಭಾಶುಭೇನ ಸಂಚಿತಾಃ ।
ನ ತಸ್ಯ ದೇಹಸಂಕ್ಷಯೇ ಭವನ್ತಿ ಕಾರ್ಯಸಾಧಕಾಃ ॥೫೨॥

ಮನುಷ್ಯನು ಕೆಟ್ಟ ದಾರಿಯಿಂದ ಅಥವಾ ಒಳ್ಳೆಯ ದಾರಿಯಿಂದ ಸಂಪಾದಿಸಿದ ಯಾವ ಧನ-ಕನಕ-ವಸ್ತು-ವಾಹನಾದಿಗಳಿವೆಯೋ–ಅವು ಯಾವುವೂ ಆ ಮನುಷ್ಯನ ದೇಹವು ನಾಶವಾದಾಗ ಕಾರ್ಯಸಾಧಕಗಳಾಗುವುದಿಲ್ಲ (ಯಾವ ಕಾರ್ಯವನ್ನೂ ಸಾಧಿಸಿಕೊಡುವುದಿಲ್ಲ).

ಪರತ್ರಗಾಮಿಕಸ್ಯ ತೇ ಕೃತಾಕೃತಸ್ಯ ಕರ್ಮಣಃ ।
ನ ಸಾಕ್ಷಿ ಆತ್ಮನಾ ಸಮೋ ನೃಣಾಮಿಹಾಸ್ತಿ ಕಶ್ಚನ ॥೫೩॥

ಪರಲೋಕಯಾತ್ರೆಯನ್ನು ಮಾಡುವಾಗ ಮನುಷ್ಯರಿಗೆ ಈ ಲೋಕದಲ್ಲಿ ಮಾಡಿದ ಮತ್ತು ಮಾಡದೇ ಇದ್ದ ಕರ್ಮಗಳ ವಿಷಯದಲ್ಲಿ–ಆತ್ಮನಿಗೆ ಸಮಾನನಾದ ಬೇರೆ ಯಾವ ಸಾಕ್ಷಿಯೂ ಇರುವುದಿಲ್ಲ. (ಇಹದಲ್ಲಿ ಮಾಡುವ ಕಾರ್ಯಾಕಾರ್ಯಗಳಿಗೂ ಮತ್ತು ಮರಣಕಾಲದಲ್ಲಿಯೂ ಮನುಷ್ಯನಿಗೆ ಆತ್ಮನೇ ಸಾಕ್ಷಿಯಾಗಿರುತ್ತಾನೆ.)

ಮನುಷ್ಯದೇಹಶೂನ್ಯಕಂ ಭವತ್ಯಮುತ್ರ ಗಚ್ಛತಃ ।
ಪ್ರವಿಶ್ಯ ಬುದ್ಧಿಚಕ್ಷುಷಾ ಪ್ರದೃಶ್ಯತೇ ಹಿ ಸರ್ವಶಃ ॥೫೪॥

ಪರಲೋಕಕ್ಕೆ ಹೋಗುವಾಗ ಮನುಷ್ಯದೇಹವಿರುವುದಿಲ್ಲ. ಜೀವವು ಸೂಕ್ಷ್ಮಶರೀರವನ್ನು ಪ್ರವೇಶಿಸಿ ಬುದ್ಧಿರೂಪವಾದ ಕಣ್ಣಿನ ಮೂಲಕವಾಗಿ ಎಲ್ಲ ಕಡೆಗಳಲ್ಲಿಯೂ ನೋಡುತ್ತದೆ.

ಇಹಾಗ್ನಿಸೂರ್ಯವಾಯವಃ ಶರೀರಮಾಶ್ರಿತಾಸ್ತ್ರಯಃ ।
ತ ಏವ ತಸ್ಯ ಸಾಕ್ಷಿಣೋ ಭವನ್ತಿ ಧರ್ಮದರ್ಶಿನಃ ॥೫೫॥

ಈ ಲೋಕದಲ್ಲಿ ಅಗ್ನಿ, ವಾಯು ಮತ್ತು ಸೂರ್ಯ –ಈ ಮೂರು ದೇವತೆಗಳು ಮನುಷ್ಯರ ಶರೀರಗಳನ್ನು ಆಶ್ರಯಿಸಿರುತ್ತಾರೆ. ಈ ಮೂವರು ದೇವತೆಗಳೇ ಮನುಷ್ಯರ ಧರ್ಮಾಚರಣೆಗಳನ್ನು ವೀಕ್ಷಿಸುತ್ತಿರುತ್ತಾರೆ ಮತ್ತು ಇವರೇ ಪರಲೋಕದಲ್ಲಿ ಮನುಷ್ಯರು ಮಾಡಿದ ಕರ್ಮಗಳಿಗೆ ಸಾಕ್ಷಿಯಾಗಿರುತ್ತಾರೆ.

ಅಹರ್ನಿಶೇಷು ಸರ್ವತಃ ಸ್ಪೃಶತ್ಸು ಸರ್ವಚಾರಿಷು ।
ಪ್ರಕಾಶಗೂಢವೃತ್ತಿಷು ಸ್ವಧರ್ಮಮೇವ ಪಾಲಯ ॥೫೬॥

ಹಗಲು–ಎಲ್ಲ ಪದಾರ್ಥಗಳನ್ನೂ ಪ್ರಕಾಶಗೊಳಿಸುತ್ತದೆ. ರಾತ್ರಿಯು–ಎಲ್ಲ ಪದಾರ್ಥಗಳನ್ನೂ ಮುಚ್ಚಿಬಿಡುತ್ತದೆ. ಈ ಅಹರ್ನಿಶೆಗಳು ಸರ್ವತ್ರ ವ್ಯಾಪಿಸುತ್ತಾ ಎಲ್ಲ ಪದಾರ್ಥಗಳನ್ನೂ ಸ್ಪರ್ಶಿಸುತ್ತವೆ. ನೀನು ಈ ಅಹರ್ನಿಶಿಗಳೆರಡರಲ್ಲೂ ಸದಾ ನಿನ್ನ ಧರ್ಮವನ್ನೇ ಪರಿಪಾಲಿಸುತ್ತಿರು.

ಅನೇಕಪಾರಿಪನ್ಥಿಕೇ ವಿರೂಪರೌದ್ರಮಕ್ಷಿಕೇ ।
ಸ್ವಮೇವ ಕರ್ಮ ರಕ್ಷ್ಯತಾಂ ಸ್ವಕರ್ಮ ತತ್ರ ಗಚ್ಛತಿ ॥೫೭॥

ಪರಲೋಕದ ಮಾರ್ಗದಲ್ಲಿ ಅನೇಕ ತಲೆಗಡುಕರಿರುತ್ತಾರೆ. ಅಲ್ಲದೇ ಕರಾಳರೂಪದ ಭಯಂಕರವಾದ ನೊಣಗಳಿಂದ ಆ ಮಾರ್ಗವು ವ್ಯಾಪ್ತವಾಗಿದೆ. ಆ ಭಯಂಕರಮಾರ್ಗದಲ್ಲಿ ನೀನು ಮಾಡಿದ ಕರ್ಮವು ಮಾತ್ರವೇ ನಿನ್ನ ಜೊತೆಯಲ್ಲಿ ಬರುತ್ತದೆ. ಆದುದರಿಂದ ನಿನ್ನ ಸತ್ಕರ್ಮಗಳನ್ನು ರಕ್ಷಣೆಮಾಡಿಕೊಳ್ಳಬೇಕು.

ನ ತತ್ರ ಸಂವಿಭಜ್ಯತೇ ಸ್ವಕರ್ಮಣಾ ಪರಸ್ಪರಮ್ ।
ತಥಾ ಕೃತಂ ಸ್ವಕರ್ಮಜಂ ತದೇವ ಭುಜ್ಯತೇ ಫಲಮ್ ॥೫೮॥

ತನ್ನ ಕರ್ಮಾನುಸಾರವಾಗಿ ಯಾವ ಫಲವು ಪ್ರಾಪ್ತವಾಗಿರುವುದೋ ಆ ಫಲವನ್ನು ಪರಲೋಕದಲ್ಲಿ ಪರಸ್ಪರವಾಗಿ ವಿನಿಮಯಮಾಡಿಕೊಳ್ಳಲು ಅಥವಾ ವಿಭಾಗಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲ. ಅಲ್ಲಿ ತಾನು ಮಾಡಿದ ಕರ್ಮಗಳ ಫಲವನ್ನೇ ತಾನು ಅನುಭವಿಸಬೇಕಾಗುತ್ತದೆ.

ಯಥಾಪ್ಸರೋಗಣಾಃ ಫಲಂ ಸುಖಂ ಮಹರ್ಷಿಭಿಃ ಸಹ ।
ತಥಾಪ್ನುವನ್ತಿ ಕರ್ಮಜಂ ವಿಮಾನಕಾಮಗಾಮಿನಃ ॥೫೯॥

ಯಾವ ರೀತಿಯಲ್ಲಿ ಅಪ್ಸರೆಯರ ಗುಂಪುಗಳು ಮಹರ್ಷಿಗಳೊಡನೆ ಪುಣ್ಯಫಲಸ್ವರೂಪವಾದ ಸುಖವನ್ನು ಅನುಭವಿಸುವರೋ –ಅದೇ ರೀತಿಯಲ್ಲಿ ಪುಣ್ಯಾತ್ಮರಾದವರು ವಿಮಾನಗಳಲ್ಲಿ ಕುಳಿತು ಇಚ್ಛಾನುಸಾರವಾಗಿ ಸಂಚರಿಸುತ್ತಾ ಪುಣ್ಯಕರ್ಮಜನಿತವಾದ ಸುಖವನ್ನು ಅನುಭವಿಸುತ್ತಾರೆ.

ಯಥೇಹ ಯತ್ಕೃತಂ ಶುಭಂ ವಿಪಾಪ್ಮಭಿಃ ಕೃತಾತ್ಮಭಿಃ ।
ತದಾಪ್ನುವನ್ತಿ ಮಾನವಾಸ್ತಥಾ ವಿಶುದ್ಧಯೋನಯಃ ॥೬೦॥

ಪಾಪರಹಿತರಾದ, ಪರಿಶುದ್ಧಹೃದಯರಾದ ಮಾನವರು ಯಾವ ರೀತಿಯಲ್ಲಿ ಎಂತಹ ಶುಭಕರ್ಮವನ್ನು ಮಾಡುವರೋ –ಅದಕ್ಕನುಸಾರ ವಾಗಿ ಜನ್ಮಾಂತರದಲ್ಲಿ ಸತ್ಕುಲಗಳಲ್ಲಿ ಜನ್ಮವನ್ನು ತಾಳಿ ಹಿಂದಿನ ಜನ್ಮದಲ್ಲಿ ಮಾಡಿದ ಶುಭಕರ್ಮಗಳಿಗೆ ಅನುರೂಪವಾದ ಫಲಗಳನ್ನೇ ಪಡೆದು ಕೊಳ್ಳುತ್ತಾರೆ.

ಪ್ರಜಾಪತೇಃ ಸಲೋಕತಾಂ ಬೃಹಸ್ಪತೇಃ ಶತಕ್ರತೋಃ ।
ವ್ರಜನ್ತಿ ತೇ ಪರಾಂ ಗತಿಂ ಗೃಹಸ್ಥಧರ್ಮಸೇತುಭಿಃ ॥೬೧॥

ಗೃಹಸ್ಥರಾದವರು –ಗೃಹಸ್ಥಧರ್ಮವೆಂಬ ಸೇತುವೆಗಳ ಮೂಲಕವಾಗಿ ಸದ್ಗತಿಯನ್ನು ಹೊಂದಿ ಪ್ರಜಾಪತಿಯ, ಬೃಹಸ್ಪತಿಯ ಅಥವಾ ಇಂದ್ರನ ಲೋಕಗಳಿಗೆ ಹೋಗುತ್ತಾರೆ.

ಸಹಸ್ರಶೋಽಪ್ಯನೇಕಶಃ ಪ್ರವಕ್ತುಮುತ್ಸಹಾಮ ತೇ ।
ಅಬುದ್ಧಿಮೋಹನಂ ಪುನಃ ಪ್ರಭುರ್ವಿನಾಯ ಪಾವಕಃ ॥೬೨॥

ವತ್ಸ! ನಿನಗೆ ಸಾವಿರ ಸಲ ಮತ್ತು ಇನ್ನೂ ಹಲವಾರು ಬಾರಿ ಈ ವಿಷಯವನ್ನು ಹೇಳುವ ಉತ್ಸಾಹದಿಂದಿದ್ದೇನೆ. ಸರ್ವಶಕ್ತಿವಂತನಾದ ಮತ್ತು ಎಲ್ಲರನ್ನೂ ಪವಿತ್ರಗೊಳಿಸುವ ಧರ್ಮನು ಯಾರ ಬುದ್ಧಿಯನ್ನು ವಿಮೋಹಗೊಳಿಸುವುದಿಲ್ಲವೋ –ಅಂತಹ ಪುಣ್ಯಪುರುಷನನ್ನು ಆ ಪವಿತ್ರ ಬುದ್ಧಿಯ ಮೂಲಕವಾಗಿಯೇ ಪುಣ್ಯಲೋಕಗಳಿಗೆ ಒಯ್ಯುತ್ತಾನೆ.

ಗತಾ ತ್ರಿರಷ್ಟವರ್ಷತಾ ಧ್ರುವೋಽಸಿ ಪಞ್ಚವಿಂಶಕಃ ।
ಕುರುಷ್ವ ಧರ್ಮಸಂಚಯಂ ವಯೋ ಹಿ ತೇಽತಿವರ್ತತೇ ॥೬೩॥

ಶುಕ! ನಿನಗೆ ಈಗಾಗಲೇ ಇಪ್ಪತ್ತುನಾಲ್ಕು ವರ್ಷಗಳು ಕಳೆದು ಹೋದುವು. ನಿಶ್ಚಯವಾಗಿಯೂ ಈಗ ನೀನು ಇಪ್ಪತ್ತೈದನೆಯ ವರ್ಷದವನಾಗಿರುವೆ. ನಿನ್ನ ವಯಸ್ಸು ಹೀಗೆಯೇ ಕಳೆದುಹೋಗುತ್ತಿರುತ್ತದೆ. ಆದುದರಿಂದ ಈಗಲೇ ನೀನು ಧರ್ಮವನ್ನು ಸಂಗ್ರಹಿಸು. (ಧರ್ಮಕಾರ್ಯ ಗಳನ್ನು ಮಾಡು.)

ಪುರಾ ಕರೋತಿ ಸೋಽನ್ತಕಃ ಪ್ರಮಾದಗೋಮುಖಾಂ ಚಮೂಮ್ ।
ಯಥಾಗೃಹೀತಮುತ್ಥಿತಸ್ತ್ವರಸ್ವ ಧರ್ಮಪಾಲನೇ ॥೬೪॥

ಯಮನು ಪ್ರಮಾದದಿಂದ (ಅಸಾವಧಾನತೆಯಿಂದ) ಕೂಡಿದ ಇಂದ್ರಿಯಗಳನ್ನು ಮುಂದಿಟ್ಟುಕೊಂಡು ನಿನ್ನ ಮೇಲೆ ತನ್ನ ಸೇನೆಯ ಆಕ್ರಮಣವನ್ನು ಮಾಡಿಸುತ್ತಾನೆ. ಅದು ನಿನ್ನನ್ನು ಆಕ್ರಮಿಸುವ ಮೊದಲೇ ನೀನು ಜಾಗ್ರತನಾಗಿ ಮೇಲೆದ್ದು ಧರ್ಮವನ್ನು ಪರಿಪಾಲಿಸುವುದರಲ್ಲಿ ತ್ವರೆಮಾಡು.

(ಆ ಯಮನು ಮೊದಲು ನಿನ್ನ ಇಂದ್ರಿಯಗಳು ಅಜಾಗರೂಕ ವಾಗಿರುವಂತೆ ಮಾಡಿ ಅನಂತರ ತನ್ನ ಸೇನೆಯನ್ನು ನಿನ್ನ ಮೇಲೆ ಬಿಡುತ್ತಾನೆ. ಆ ಸೇನೆಯು ಆಕ್ರಮಿಸುವ ಮೊದಲೇ ನೀನು ಮೇಲೆದ್ದು ಜಾಗರೂಕನಾಗಿ ಧರ್ಮರಕ್ಷಣೆಯಲ್ಲಿ ತ್ವರೆಮಾಡು.)

ಯಥಾ ತ್ವಮೇವ ಪೃಷ್ಠತಸ್ತ್ವಮಗ್ರತೋ ಗಮಿಷ್ಯಸಿ ।
ತಥಾ ಗತಿಂ ಗಮಿಷ್ಯತಃ ಕಿಮಾತ್ಮನಾ ಪರೇಣ ವಾ ॥೬೫॥

ನೀನು ಈ ಶರೀರವನ್ನು ತ್ಯಜಿಸಿ ಪರಲೋಕಕ್ಕೆ ಹೋಗುವ ಆ ಸಮಯದಲ್ಲಿ ಮುಂದೂ ನೀನೇ ಹೋಗುವೆ ; ಹಿಂದೂ ನೀನೇ ಹೋಗುವೆ. ನೀನು ಪರಲೋಕಕ್ಕೆ ಹೋಗುವಾಗ ನೀನೊಬ್ಬನೇ ಹೋಗಬೇಕಾಗುತ್ತದೆ. ನಿನ್ನ ಹಿಂದೆ ಮತ್ತು ಮುಂದೆ ಯಾರೂ ಇರುವುದಿಲ್ಲ. ಹಾಗೆ ಏಕಾಕಿಯಾಗಿ ಒಬ್ಬನೇ ಪರಲೋಕದ ಹಾದಿಯನ್ನು ಹಿಡಿದು ಸೂಕ್ಷ್ಮಶರೀರವನ್ನು ಧರಿಸಿ ಹೋಗಬೇಕಾಗಿರುವಾಗ ಈ ನಿನ್ನ ದೇಹದಿಂದಾಗಲೀ ಇತರರಿಂದಾಗಲೀ ಯಾವ ಪ್ರಯೋಜನವಿದೆ?

ಯದೇಕಪಾತಿನಾಂ ಸತಾಂ ಭವತ್ಯಮುತ್ರ ಗಚ್ಛತಾಮ್ ।
ಭಯೇಷು ಸಾಮ್ಪರಾಯಿಕಂ ನಿಧತ್ಸ್ವ ಕೇವಲಂ ನಿಧಿಮ್ ॥೬೬॥

ಏಕಾಕಿಗಳಾಗಿ ಪರಲೋಕಕ್ಕೆ ಹೋಗುವ ಸತ್ಪುರುಷರಿಗೆ ಉಂಟಾಗುವ ಭಯಗಳಲ್ಲಿ ಯಾವುದು ಭಯವನ್ನು ಹೋಗಲಾಡಿಸಿ ಪರಲೋಕದಲ್ಲಿ ಹಿತವನ್ನುಂಟುಮಾಡುವುದೋ –ಅಂತಹ ನಿಧಿರೂಪವಾದ ಜ್ಞಾನವನ್ನೇ ನಿನ್ನಲ್ಲಿಟ್ಟುಕೊ.

ಸಕೂಲಮೂಲಬಾನ್ಧವಂ ಪ್ರಭುರ್ಹರತ್ಯಸಙ್ಗವಾನ್ ।
ನ ಸನ್ತಿ ಯಸ್ಯ ವಾರಕಾಃ ಕುರುಷ್ವ ಧರ್ಮಸಂನಿಧಿಮ್ ॥೬೭॥

ಸರ್ವಸಮರ್ಥವಾದ ಕಾಲವು ಸಂಗರಹಿತವಾದುದು. ಯಾರೊಡನೆಯೂ ಅದು ಸ್ನೇಹಮಾಡುವುದಿಲ್ಲ. ಈ ಕಾರಣದಿಂದಲೇ ಅದು ಸಕೂಲ-ಸಮೂಲವಾಗಿ (ಆದ್ಯಂತಸಹಿತವಾಗಿ) ಸಮಸ್ತಬಂಧುಗಳನ್ನೂ ಅಪಹರಿಸಿಕೊಂಡು ಹೋಗುತ್ತದೆ. ಹಾಗೆ ಅಪಹರಿಸಿಕೊಂಡು ಹೋಗುವಾಗ ಅದನ್ನು ತಡೆಯುವವರು ಯಾರೂ ಇರುವುದಿಲ್ಲ. ಅಂತಹ ಕಾಲವನ್ನು ಜಯಿಸುವ ಸಲುವಾಗಿ ಧರ್ಮಸಂಗ್ರಹವನ್ನು ಮಾಡು.

ಇದಂ ನಿದರ್ಶನಂ ಮಯಾ ತವೇಹ ಪುತ್ರ ಸಾಮ್ಪ್ರತಮ್ ।
ಸ್ವದರ್ಶನಾನುಮಾನತಃ ಪ್ರವರ್ಣಿತಂ ಕುರುಷ್ವ ತತ್ ॥೬೮॥

ವತ್ಸ! ನಾನು ನನ್ನ ಶಾಸ್ತ್ರಜ್ಞಾನದಿಂದಲೂ ಯುಕ್ತಿಯಿಂದಲೂ ಈಗ ನಿನಗೆ ಯಾವ ಜ್ಞಾನದ ಉಪದೇಶವನ್ನು ಮಾಡಿರುವೆನೋ –ಆ ನನ್ನ ಉಪದೇಶಾನುಸಾರವಾಗಿ ನೀನು ಧರ್ಮಾಚರಣೆಯನ್ನು ಮಾಡು.

ದಧಾತಿ ಯಃ ಸ್ವಕರ್ಮಣಾ ದದಾತಿ ಯಸ್ಯ ಕಸ್ಯಚಿತ್ ।
ಅಬುದ್ಧಿಮೋಹಜೈರ್ಗುಣೈಃ ಸ ಏಕ ಏವ ಯುಜ್ಯತೇ ॥೬೯॥

ಯಾವ ಪುರುಷನು ತನ್ನ ಸತ್ಕರ್ಮಗಳ ಮೂಲಕವಾಗಿ ಪುಣ್ಯವನ್ನು ಸಂಪಾದಿಸುವನೋ ಮತ್ತು ತಾನು ಸಂಪಾದಿಸಿದ್ದನ್ನು ನಿಷ್ಕಾಮನೆಯಿಂದ ಯಾವನಿಗಾದರೂ ದಾನಮಾಡುವನೋ – ಅಂತಹ ಪುರುಷನೊಬ್ಬನೇ ವಿಮೋಹಗೊಳ್ಳದ ಬುದ್ಧಿಯಿಂದ ಪ್ರಾಪ್ತವಾಗುವ ಗುಣಗಳಿಂದ ಕೂಡಿದವನಾಗುತ್ತಾನೆ.

ಶ್ರುತಂ ಸಮಸ್ತಮಶ್ನುತೇ ಪ್ರಕುರ್ವತಃ ಶುಭಾಃ ಕ್ರಿಯಾಃ ।
ತದೇತದರ್ಥದರ್ಶನಂ ಕೃತಜ್ಞಮರ್ಥಸಂಹಿತಮ್ ॥೭೦॥

ಯಾವನು ಸಮಸ್ತಶಾಸ್ತ್ರಗಳ ಜ್ಞಾನವನ್ನೂ ಪಡೆದುಕೊಂಡಿರುವನೋ ಮತ್ತು ತಾನು ಪಡೆದುಕೊಂಡಿರುವ ಶಾಸ್ತ್ರಜ್ಞಾನಕ್ಕೆ ಅನುಸಾರವಾಗಿ ಶುಭಕರ್ಮಗಳನ್ನು ಅನುಷ್ಠಾನಮಾಡುವನೋ – ಅಂತಹವನಿಗೆ ಈ

ಅಧ್ಯಾತ್ಮಜ್ಞಾನವನ್ನು ಉಪದೇಶಿಸಬೇಕು. ಏಕೆಂದರೆ : ಕೃತಜ್ಞನಾದವನಿಗೆ ಯಾವುದನ್ನೇ ಉಪದೇಶಿಸಿದರೂ ಅದು ಸಫಲವಾಗುತ್ತದೆ.

ನಿಬನ್ಧನೀ ರಜ್ಜುರೇಷಾ ಯಾ ಗ್ರಾಮೇ ವಸತೋ ರತಿಃ ।
ಛಿತ್ತ್ವೈತಾಂ ಸುಕೃತೋ ಯಾನ್ತಿ ನೈನಾಂ ಛಿನ್ದನ್ತಿ ದುಷ್ಕೃತಃ ॥೭೨॥

ಮನುಷ್ಯನು ಗ್ರಾಮದಲ್ಲಿ ಅಥವಾ ಪಟ್ಟಣದಲ್ಲಿ ವಾಸಮಾಡುತ್ತಾ ಅಲ್ಲಿಯ ಸುಖೋಪಭೋಗಗಳಲ್ಲಿಯೇ ಆಸಕ್ತನಾಗಿರುವನು. ಆ ಆಸಕ್ತಿಯೆಂಬುದೇ ಅವನನ್ನು ಬಂಧಿಸಿರುವ ಹಗ್ಗವಾಗಿರುತ್ತದೆ. ಪುಣ್ಯಾತ್ಮರು ಆ ಆಸಕ್ತಿಯೆಂಬ ಹಗ್ಗವನ್ನು ಕತ್ತರಿಸಿ ಹಾಕಿ ಪರಮಪದವನ್ನು ಸೇರುತ್ತಾರೆ. ಪಾಪಾತ್ಮರು ವಿಮೋಹಿತರಾಗಿ ಅದನ್ನು ಕತ್ತರಿಸುವ ಪ್ರಯತ್ನವನ್ನೇ ಮಾಡುವುದಿಲ್ಲ.

ಕಿಂ ತೇ ಧನೇನ ಕಿ ಬನ್ಧುಭಿಸ್ತೇ
ಕಿಂ ತೇ ಪುತ್ರೈಃ ಪುತ್ರಕ ಯೋ ಮರಿಷ್ಯಸಿ ।
ಆತ್ಮಾನಮನ್ವಿಚ್ಛ ಗುಹಾಂ ಪ್ರವಿಷ್ಟಂ
ಪಿತಾಮಹಾಸ್ತೇ ಕ್ವ ಗತಾಶ್ಚ ಸರ್ವೇ ॥೭೨॥

ವತ್ಸ! ನೀನು ಎಂದಾದರೊಂದು ದಿನ ಮರಣಹೊಂದುವೆ. ಇದರಲ್ಲಿ ಸಂಶಯವೇ ಇಲ್ಲ. ಮರಣಧರ್ಮನಾದ ನಿನಗೆ ಧನದಿಂದಾಗಲೀ, ಬಂಧುಗಳಿಂದಾಗಲೀ, ಮಕ್ಕಳಿಂದಾಗಲೀ –ಆಗಬೇಕಾದುದೇನಿದೆ? ಆದುದರಿಂದ ಹೃದಯರೂಪವಾದ ಗುಹೆಯಲ್ಲಿ ಅಡಗಿರುವ ಆತ್ಮತತ್ತ್ವವನ್ನು ಅನುಸಂಧಾನ ಮಾಡು. ನಿನ್ನ ತಾತ-ಮುತ್ತಾತಂದಿರೆಲ್ಲರೂ ಎಲ್ಲಿಗೆ ಹೋಗಿರುವರೆಂಬುದನ್ನು ನೀನೇ ಯೋಚಿಸು.

ಶ್ವಃ ಕಾರ್ಯಮದ್ಯ ಕುರ್ವೀತ ಪೂರ್ವಾಹ್ಣೇ ಚಾಪರಾಹ್ಣಿಕಮ್ ।
ನ ಹಿ ಪ್ರತೀಕ್ಷತೇ ಮೃತ್ಯುಃ ಕೃತಂ ವಾಸ್ಯ ನ ವಾ ಕೃತಮ್ ॥೭೩॥

ನಾಳೆಯ ಕಾರ್ಯವನ್ನು ಇಂದೇ ಮಾಡಬೇಕು. ಮಧ್ಯಾಹ್ನದಲ್ಲಿ ಮಾಡಬೇಕಾದ ಕಾರ್ಯವನ್ನು ಬೆಳಿಗ್ಗೆಯೇ ಮಾಡಿಮುಗಿಸಬೇಕು. ಏಕೆಂದರೆ : ಮೃತ್ಯುವು ಅವನ ಕಾರ್ಯವು ಮುಗಿಯಿತೇ ಅಥವಾ ಇಲ್ಲವೇ ಎಂಬುದನ್ನು ನೋಡುತ್ತಾ ಕುಳಿತುಕೊಳ್ಳುವುದಿಲ್ಲ.

ಅನುಗಮ್ಯ ವಿನಾಶಾನ್ತೇ ನಿವರ್ತನ್ತೇ ಹ ಬಾನ್ಧವಾಃ ।
ಅಗ್ನೌ ಪ್ರಕ್ಷಿಪ್ಯ ಪುರುಷಂ ಜ್ಞಾತಯಃ ಸುಹೃದಸ್ತಥಾ ॥೭೪॥

ಮನುಷ್ಯನು ಮರಣಹೊಂದಿದನಂತರ ಅವನ ಸಹೋದರರೂ, ಮಕ್ಕಳೂ, ಸುಹೃದರೂ ಮತ್ತು ಬಂಧುಗಳೂ ಶ್ಮಶಾನದವರೆಗೂ ಜೊತೆಯಲ್ಲಿ ಹೋಗುತ್ತಾರೆ. ಅಲ್ಲಿ ಆ ಮೃತನನ್ನು ಚಿತೆಯ ಮೇಲಿಟ್ಟು ಬೆಂಕಿಯನ್ನು ಹೊತ್ತಿಸಿ ಅನಂತರ ಎಲ್ಲರೂ ತಮ್ಮ ತಮ್ಮ ಮನೆಗಳಿಗೆ ಹಿಂದಿರುಗುತ್ತಾರೆ.

ನಾಸ್ತಿಕಾನ್ನಿರನುಕ್ರೋಶಾನ್ನರಾನ್ಪಾಪಮತೇ ಸ್ಥಿತಾನ್ ।
ವಾಮತಃ ಕುರು ವಿಸ್ರಬ್ಧಂ ಪರಂ ಪ್ರೇಪ್ಸುರತನ್ದ್ರಿತಃ ॥೭೫॥

ಪರಮಾತ್ಮತತ್ತ್ವವನ್ನು ಪಡೆದುಕೊಳ್ಳಲಿಚ್ಛಿಸುವ ನೀನು ಆಲಸ್ಯವನ್ನು ತೊರೆದು ನಾಸ್ತಿಕರನ್ನೂ, ದಯಾಹೀನರನ್ನೂ, ಪಾಪಬುದ್ಧಿಯುಳ್ಳವರನ್ನೂ ಯಾವ ವಿಧವಾದ ಭಯವೂ ಇಲ್ಲದೇ ಆಲಸ್ಯವೂ ಇಲ್ಲದೇ ಪರಿತ್ಯಾಗ ಮಾಡು.

ಏವಮಭ್ಯಾಹತೇ ಲೋಕೇ ಕಾಲೇನೋಪನಿಪೀಡಿತೇ ।
ಸುಮಹದ್ಧೈರ್ಯಮಾಲಮ್ಬ್ಯ ಧರ್ಮಂ ಸರ್ವಾತ್ಮನಾ ಕುರು ॥೭೬॥

ಹೀಗೆ ಲೋಕವು ಕಾಲನಿಂದ ಅಪ್ಪಳಿಸಲ್ಪಟ್ಟು ಪೀಡಿಸಲ್ಪಡುತ್ತಿರುವಾಗ ನೀನು ಪ್ರಚಂಡವಾದ ಧೈರ್ಯವನ್ನು ಆಶ್ರಯಿಸಿ ಸಂಪೂರ್ಣವಾದ ಮನಸ್ಸಿನಿಂದ ಧರ್ಮವನ್ನಾಚರಿಸು.

ಅಥೇಮಂ ದರ್ಶನೋಪಾಯಂ ಸಮ್ಯಗ್ಯೋ ವೇತ್ತಿ ಮಾನವಃ ।
ಸಮ್ಯಕ್ಸ್ವಧರ್ಮಂ ಕೃತ್ವೇಹ ಪರತ್ರ ಸುಖಮಶ್ನುತೇ ॥೭೭॥

ಯಾವ ಮನುಷ್ಯನು ಪರಮಾತ್ಮಸಾಕ್ಷಾತ್ಕಾರದ ಈ ಉಪಾಯವನ್ನು ಚೆನ್ನಾಗಿ ತಿಳಿದಿರುವನೋ –ಅವನು ಈ ಲೋಕದಲ್ಲಿ ಸ್ವಧರ್ಮವನ್ನು ಚೆನ್ನಾಗಿ ಪರಿಪಾಲಿಸುತ್ತಾ ಪರಲೋಕದಲ್ಲಿಯೂ ಸುಖವನ್ನು ಅನುಭವಿಸುತ್ತಾನೆ.

ನ ದೇಹಭೇದೇ ಮರಣಂ ವಿಜಾನತಾಂ
ನ ಚ ಪ್ರಣಾಶಃ ಸ್ವನುಪಾಲಿತೇ ಪಥಿ ।

ಧರ್ಮಂ ಹಿ ಯೋ ವರ್ಧಯತೇ ಸ ಪಣ್ಡಿತೋ
ಯ ಏವ ಧರ್ಮಾಚ್ಚ್ಯವತೇ ಸ ಮುಹ್ಯತಿ ॥೭೮॥

ದೇಹವು ವಿನಾಶವಾದರೂ ಆತ್ಮವು ವಿನಾಶಹೊಂದುವುದಿಲ್ಲವೆಂದೂ, ಶಿಷ್ಟರಿಂದ ಪರಿಪಾಲಿಸಲ್ಪಟ್ಟ ಧರ್ಮಮಾರ್ಗದಲ್ಲಿಯೇ ಇರುವವನು ವಿನಾಶ ಹೊಂದುವುದಿಲ್ಲವೆಂದೂ ಯಾವನು ತಿಳಿಯುವನೋ–ಅವನೇ ವಿದ್ವಾಂಸನು. ಈ ಎಲ್ಲ ವಿಷಯಗಳನ್ನೂ ಚೆನ್ನಾಗಿ ಸಮಾಲೋಚಿಸಿ ಧರ್ಮಮಾರ್ಗವನ್ನು ವೃದ್ಧಿಗೊಳಿಸುವವನೇ ಪಂಡಿತನು. ಧರ್ಮದಿಂದ ಚ್ಯುತನಾದವನು ವಿಮೋಹಗೊಳ್ಳುತ್ತಾನೆ.

ಪ್ರಯುಕ್ತಯೋಃ ಕರ್ಮಪಥಿ ಸ್ವಕರ್ಮಣೋಃ
ಫಲಂ ಪ್ರಯೋಕ್ತಾ ಲಭತೇ ಯಥಾಕೃತಮ್ ।
ನಿಹೀನಕರ್ಮಾ ನಿರಯಂ ಪ್ರಪದ್ಯತೇ
ತ್ರಿವಿಷ್ಟಪಂ ಗಚ್ಛತಿ ಧರ್ಮಪಾರಗಃ ॥೭೯॥

ಕರ್ಮಮಾರ್ಗದಲ್ಲಿ ಆಚರಿಸುವ ತನ್ನ ಯಾವ ಶುಭಾಶುಭಕರ್ಮ ಗಳಿವೆಯೋ –ಆ ಕರ್ಮಗಳ ಅನುಸಾರವಾಗಿ ಕರ್ಮಮಾಡಿದವನು ಆಯಾ ಕರ್ಮಾನುರೂಪವಾದ ಫಲವನ್ನು ಪಡೆಯುತ್ತಾನೆ. ನೀಚಕರ್ಮವನ್ನು ಮಾಡಿದವನು ನರಕವನ್ನು ಹೊಂದುತ್ತಾನೆ. ಧರ್ಮಾಚರಣೆಯಲ್ಲಿ ಪಾರಂಗತನಾದವನು ಸ್ವರ್ಗವನ್ನು ಹೊಂದುತ್ತಾನೆ.

ಸೋಪಾನಭೂತಂ ಸ್ವರ್ಗಸ್ಯ ಮಾನುಷ್ಯಂ ಪ್ರಾಪ್ಯ ದುರ್ಲಭಮ್ ।
ತಥಾತ್ಮಾನಂ ಸಮಾದಧ್ಯಾದ್ಭ್ರಶ್ಯತೇ ನ ಪುನರ್ಯಥಾ ॥೮೦॥

ಸ್ವರ್ಗಕ್ಕೆ ಸೋಪಾನದಂತಿರುವ ಸುದುರ್ಲಭವಾದ ಮನುಷ್ಯಶರೀರ ವನ್ನು ಪಡೆದನಂತರವೂ ಮನುಷ್ಯತ್ವದಿಂದ ಭ್ರಷ್ಟನಾಗಿ ನೀಚಯೋನಿಗಳಲ್ಲಿ ಹುಟ್ಟದಿರುವ ರೀತಿಯಲ್ಲಿ ಧರ್ಮಾಚರಣೆಗಳಿಂದ ತನ್ನನ್ನು ಉನ್ನತಸ್ಥಾನಕ್ಕೆ ಏರಿಸಿಕೊಳ್ಳಬೇಕು.

ಯಸ್ಯ ನೋತ್ಕ್ರಾಮತಿ ಮತಿಃ ಸ್ವರ್ಗಮಾರ್ಗಾನುಸಾರಿಣೀ ।
ತಮಾಹುಃ ಪುಣ್ಯಕರ್ಮಾಣಮಶೋಚ್ಯಂ ಪುತ್ರಬಾನ್ಧವೈಃ ॥೮೧॥

ಯಾವನ ಸ್ವರ್ಗಮಾರ್ಗಾನುಸಾರಿಯಾದ ಬುದ್ಧಿಯು ಧರ್ಮಮಾರ್ಗವನ್ನು ಅತಿಕ್ರಮಿಸಿ ಹೋಗುವುದಿಲ್ಲವೋ–ಅಂತಹವನನ್ನು ಪುಣ್ಯಕರ್ಮನೆಂದು ಜನರು ಹೇಳುತ್ತಾರೆ. ಅಂತಹವನು ಪುತ್ರ-ಮಿತ್ರ-ಬಂಧು-ಬಾಂಧವರ ಶೋಕಕ್ಕೆ ಕಾರಣನಾಗುವುದಿಲ್ಲ.

ಯಸ್ಯ ನೋಪಹತಾ ಬುದ್ಧಿರ್ನಿಶ್ಚಯೇ ಹ್ಯವಲಮ್ಬತೇ ।
ಸ್ವರ್ಗೇ ಕೃತಾವಕಾಶಸ್ಯ ನಾಸ್ತಿ ತಸ್ಯ ಮಹದ್ಭಯಮ್ ॥೮೨॥

ಯಾವನ ಬುದ್ಧಿಯು ದೂಷಿತವಾಗಿಲ್ಲವೋ, ದೃಢನಿಶ್ಚಯವನ್ನೇ ಯಾವಾಗಲೂ ಆಶ್ರಯಿಸಿರುವುದೋ (ದೃಢವಾಗಿರುವುದೋ)–ಅಂತಹವನಿಗೆ ಸ್ವರ್ಗದಲ್ಲಿ ಸ್ಥಾನವು ಸಿದ್ಧವಾಗಿಯೇ ಇರುತ್ತದೆ. ಅವನಿಗೆ ಮಹಾಭಯರೂಪವಾದ ನರಕವು ಪ್ರಾಪ್ತವಾಗುವುದಿಲ್ಲ.

ತಪೋವನೇಷು ಯೇ ಜಾತಾಸ್ತತ್ರೈವ ನಿಧನಂ ಗತಾಃ ।
ತೇಷಾಮಲ್ಪತರೋ ಧರ್ಮಃ ಕಾಮಭೋಗಾನಜಾನತಾಮ್ ॥೮೩॥

ತಪೋವನಗಳಲ್ಲಿಯೇ ಹುಟ್ಟಿ ಅಲ್ಲಿಯೇ ಮರಣವನ್ನು ಹೊಂದುವವರಿಗೆ ಪ್ರಾಪ್ತವಾಗುವ ಧರ್ಮವು ಅತ್ಯಲ್ಪವಾದುದು. ಏಕೆಂದರೆ : ತಪೋವನದಲ್ಲಿರುವ ಅವರಿಗೆ ಕಾಮಭೋಗಗಳ ವಿಷಯವೇ ತಿಳಿದಿರುವುದಿಲ್ಲ. (ತ್ಯಾಗರೂಪವಾದ ಕಷ್ಟಸಹಿಷ್ಣುತೆಯು ಅವರಿಗಿರುವುದಿಲ್ಲ.)

ಯಸ್ತು ಭೋಗಾನ್ಪರಿತ್ಯಜ್ಯ ಶರೀರೇಣ ತಪಶ್ಚರೇತ್ ।
ನ ತೇನ ಕಿಂಚಿನ್ನ ಪ್ರಾಪ್ತಂ ತನ್ಮೇ ಬಹು ಮತಂ ಫಲಮ್ ॥೮೪॥

ಯಾವನು ಸುಖೋಪಭೋಗಗಳೆಲ್ಲವನ್ನೂ ಸಂಪೂರ್ಣವಾಗಿ ಪರಿತ್ಯಜಿಸಿ ಅರಣ್ಯಕ್ಕೆ ಹೋಗಿ ಶಾರೀರಕವಾದ ತಪಸ್ಸುಮಾಡುವನೋ–ಅಂತಹವನಿಗೆ ಅತ್ಯಧಿಕವಾದ ಫಲವು ಪ್ರಾಪ್ತವಾಗುವುದೆಂಬುದು ನನ್ನ ಅಭಿಮತವಾಗಿದೆ. ಅವನಿಗೆ ತಪಸ್ಸಿನಿಂದ ಪ್ರಾಪ್ತವಾಗದಿರುವ ವಸ್ತುವೇ ಯಾವುದೂ ಇರುವುದಿಲ್ಲ. ಯಾವ ವಸ್ತುವನ್ನು ಬೇಕಾದರೂ ಅವನು ತಪಸ್ಸಿನಿಂದ ಪಡೆದುಕೊಳ್ಳಬಹುದು.

ಮಾತಾಪಿತೃಸಹಸ್ರಾಣಿ ಪುತ್ರದಾರಶತಾನಿ ಚ ।
ಅನಾಗತಾನ್ಯತೀತಾನಿ ಕಸ್ಯ ತೇ ಕಸ್ಯ ವಾ ವಯಮ್ ॥೮೫॥

ನನಗೂ ಮತ್ತು ನಿನಗೂ ಸಾವಿರಾರು ತಾಯಂದಿರೂ, ಸಾವಿರಾರು ತಂದೆಗಳೂ, ನೂರಾರು ಪುತ್ರರೂ, ನೂರಾರು ಭಾರ್ಯೆಯರೂ ಹಿಂದಿನ ಜನ್ಮಗಳಲ್ಲಿ ಆಗಿಹೋಗಿದ್ದಾರೆ. ಮುಂದೆಯೂ ನಾವು ಹಾಗೆಯೇ ತಾಯಿ-ತಂದೆ-ಪುತ್ರ-ಪುತ್ರಿಯರನ್ನು ಅಪಾರಸಂಖ್ಯೆಯಲ್ಲಿ ಪಡೆದು ಕೊಳ್ಳುತ್ತೇವೆ. ಹೀಗಿರುವಾಗ ಅವರೆಲ್ಲರೂ ಯಾವನಿಗೆ ಸೇರಿದವರು? ನಾವಾದರೂ ಯಾವನಿಗೆ ಸೇರಿದವರು? (ಯಾರಿಗೂ ಯಾವ ವಿಧವಾದ ಸಂಬಂಧವೂ ಇರುವುದಿಲ್ಲ.)

ಅಹಮೇಕೋ ನ ಮೇ ಕಶ್ಚಿನ್ನಾಹಮನ್ಯಸ್ಯ ಕಸ್ಯಚಿತ್ ।
ನ ತಂ ಪಶ್ಯಾಮಿ ಯಸ್ಯಾಹಂ ತನ್ನ ಪಶ್ಯಾಮಿ ಯೋ ಮಮ ॥೮೬॥

ನಾನು ಏಕಾಂಗಿ. ನನಗೆ ಸಂಬಂಧಿಸಿದವನು ಬೇರೆ ಯಾವನೂ ಇರುವುದಿಲ್ಲ. ನಾನೂ ಬೇರೆ ಯಾವನಿಗೂ ಸೇರಿದವನೂ ಅಲ್ಲ. ನಾನು ಯಾರವನೋ ಅವನನ್ನು ನಾನು ಇದುವರೆಗೂ ನೋಡಿರುವುದಿಲ್ಲ. ಯಾವನು ನನ್ನವನೋ ಅವನನ್ನು ಕೂಡ ನಾನು ಇದುವರೆಗೂ ನೋಡಿರುವುದಿಲ್ಲ.

ನ ತೇಷಾಂ ಭವತಾ ಕಾರ್ಯಂ ನ ಕಾರ್ಯಂ ತವ ತೈರಪಿ ।
ಸ್ವಕೃತೈಸ್ತಾನಿ ಯಾತಾನಿ ಭವಾಂಶ್ಚೈವ ಗಮಿಷ್ಯತಿ ॥೮೭॥

ಅವರಿಗೆ ನಿನ್ನಿಂದ ಯಾವ ಕಾರ್ಯವೂ ಆಗಬೇಕಾಗಿಲ್ಲ. ಅವರಿಂದ ನಿನಗೂ ಯಾವ ಕಾರ್ಯವೂ ಆಗಬೇಕಾಗಿಲ್ಲ. ಆ ಪ್ರಾಣಿಗಳೆಲ್ಲವೂ ಅವುಗಳು ಮಾಡಿದ ಕರ್ಮಗಳೊಡನೆ ಹೊರಟುಹೋದುವು. ಹಾಗೆಯೇ ನೀನು ಹೋಗುವೆ.

ಇಹ ಲೋಕೇ ಹಿ ಧನಿನಾಂ ಸ್ವಜನಃ ಸ್ವಜನಾಯತೇ ।
ಸ್ವಜನಸ್ತು ದರಿದ್ರಾಣಾಂ ಜೀವತಾಮಪಿ ನಶ್ಯತಿ ॥೮೮॥

ಲೋಕದಲ್ಲಿ ಧನಿಕರೊಡನೆ–ಅವರ ಸ್ವಜನರು-ಸ್ವಜನರಂತೆ ವ್ಯವಹರಿಸುತ್ತಾರೆ. ಆದರೆ ದರಿದ್ರರೊಡನೆ ಅವರ ಸ್ವಜನರು ಸ್ವಜನರಂತೆ ವ್ಯವಹರಿಸದೇ ಇರುವುದು ಮಾತ್ರವಲ್ಲದೇ, ದರಿದ್ರರು ಬದುಕಿರುವಾಗಲೇ ಅವರ

ಕಣ್ಣಿಗೆ ಬೀಳದಂತೆ ತಿರುಗುತ್ತಿರುತ್ತಾರೆ. ದರಿದ್ರರ ಪಾಲಿಗೆ ಸ್ವಜನರು ಇದ್ದರೂ ಇಲ್ಲದಿದ್ದಂತೆಯೇ ಸರಿ.

ಸಂಚಿನೋತ್ಯಶುಭಂ ಕರ್ಮ ಕಲತ್ರಾಪೇಕ್ಷಯಾ ನರಃ ।
ತತಃ ಕ್ಲೇಶಮವಾಪ್ನೋತಿ ಪರತ್ರೇಹ ತಥೈವ ಚ ॥೮೯॥

ಮನುಷ್ಯನು ತನ್ನ ಪತ್ನಿಯೇ ಮೊದಲಾದ ರಕ್ಷಣೀಯರಾದವರ ಸಲುವಾಗಿ ಅಶುಭವಾದ (ಪಾಪಕರವಾದ) ಕರ್ಮಗಳನ್ನೇ ಮಾಡುತ್ತಿರುತ್ತಾನೆ. ಹೀಗೆ ಮಾಡುವುದರಿಂದ ಅವನು ಇಹ-ಪರಗಳೆರಡರಲ್ಲಿಯೂ ಕ್ಲೇಶವನ್ನು ಹೊಂದುತ್ತಾನೆ.

ಪಶ್ಯತಿ ಛಿನ್ನಭೂತಂ ಹಿ ಜೀವಲೋಕಂ ಸ್ವಕರ್ಮಣಾ ।
ತತ್ಕುರುಷ್ವ ತಥಾ ಪುತ್ರ ಕೃತ್ಸ್ನಂ ಯತ್ಸಮುದಾಹೃತಮ್ ॥೯೦॥

ಪುತ್ರಕ! ಮನುಷ್ಯನು ತನ್ನ ಕರ್ಮದಿಂದ ಜೀವಲೋಕವು ಛಿನ್ನ-ಭಿನ್ನವಾಗಿರುವುದನ್ನಾಗಿ ಕಾಣುತ್ತಾನೆ. ಆದುದರಿಂದ ನಾನು ಯಾವುದನ್ನು ಹೇಗೆ ಉಪದೇಶಿಸಿರುವೆನೋ–ಅದೆಲ್ಲವನ್ನೂ ಸಮಗ್ರವಾಗಿ ಹಾಗೆಯೇ ಮಾಡು.

ತದೇತತ್ಸಮ್ಪ್ರದೃಶ್ಯೈವ ಕರ್ಮಭೂಮಿಂ ಪ್ರಪಶ್ಯತಃ ।
ಶುಭಾನ್ಯಾಚರಿತವ್ಯಾನಿ ಪರಲೋಕಮಭೀಪ್ಸತಾ ॥೯೧॥

ಈ ಲೋಕವು 'ಕರ್ಮಭೂಮಿ'–ಎಂಬುದನ್ನು ಚೆನ್ನಾಗಿ ತಿಳಿದುಕೊಂಡು ಪರಲೋಕವನ್ನು ಇಚ್ಛಿಸುವ ಪುರುಷನು ಶುಭಕರ್ಮಗಳನ್ನೇ ಯಾವಾಗಲೂ ಆಚರಿಸುತ್ತಿರಬೇಕು.

ಮಾಸರ್ತುಸಂಜ್ಞಾಪರಿವರ್ತಕೇಣ
ಸೂರ್ಯಾಗ್ನಿನಾ ರಾತ್ರಿದಿವೇನ್ಧನೇನ ।
ಸ್ವಕರ್ಮನಿಷ್ಠಾಫಲಸಾಕ್ಷಿಕೇಣ
ಭೂತಾನಿ ಕಾಲಃ ಪಚತಿ ಪ್ರಸಹ್ಯ ॥೯೨॥

ಕಾಲನೆಂಬ ಪಾಚಕನು–ಕರ್ಮಫಲಕ್ಕೆ ಸಾಕ್ಷಿಭೂತವಾದ ಹಗಲು ಮತ್ತು ರಾತ್ರಿಗಳೆಂಬ ಕಟ್ಟಿಗೆಗಳಿಂದಲೂ, ಸೂರ್ಯನೆಂಬ ಅಗ್ನಿಯಿಂದಲೂ

ಮಾಸ ಮತ್ತು ಋತುಸಂಜ್ಞಕವಾದ ಮಗುಚುಕೈಯಿಂದ ಪ್ರಾಣಿಗಳನ್ನು ಪದೇ ಪದೇ ಮೊಗಚಿಹಾಕುತ್ತಾ (ಮೇಲೆ-ಕೆಳಗೆ ಮಾಡುತ್ತಾ) ಬಲಾತ್ಕಾರವಾಗಿ ಬೇಯಿಸುತ್ತಾನೆ.

ಧನೇನ ಕಿಂ ಯನ್ನ ದದಾತಿ ನಾಶ್ನುತೇ
ಬಲೇನ ಕಿಂ ಯೇನ ರಿಪುಂ ನ ಬಾಧತೇ ।
ಶ್ರುತೇನ ಕಿಂ ಯೇನ ನ ಧರ್ಮಮಾಚರೇತ್
ಕಿಮಾತ್ಮನಾ ಯೋ ನ ಜಿತೇನ್ದ್ರಿಯೋ ವಶೀ ॥೯೩॥

ಬೇರೆಯವರಿಗೂ ದಾನಮಾಡದೇ ತಾನೂ ಉಪಭೋಗಿಸದ ಧನದಿಂದೇನು ಪ್ರಯೋಜನ? ಶತ್ರುಗಳನ್ನು ಪೀಡಿಸದೇ ಇರುವ ಬಲದಿಂದೇನು ಪ್ರಯೋಜನ? ಧರ್ಮಾಚರಣೆಗೆ ಸಾಧಕವಾಗದ ಶಾಸ್ತ್ರಜ್ಞಾನವಿದ್ದೇನು ಪ್ರಯೋಜನ? ಜಿತೇಂದ್ರಿಯನೂ ಮತ್ತು ಮನಸ್ಸನ್ನು ವಶಪಡಿಸಿಕೊಂಡವನೂ ಆಗಿರದಿದ್ದರೆ ಅವನಿಗೆ ಈ ದೇಹದಿಂದೇನು ಪ್ರಯೋಜನ?”

ಭೀಷ್ಮನು ಯುಧಿಷ್ಠಿರನಿಗೆ ಹೇಳುತ್ತಾನೆ :

“ಯುಧಿಷ್ಠಿರ! ವ್ಯಾಸರು ಹೇಳಿದ ಹಿತಕರವಾದ ಪ್ರವಚನವನ್ನು ಕೇಳಿ ಶುಕನು ತಂದೆಯನ್ನು ಪರಿತ್ಯಜಿಸಿ ಮೋಕ್ಷತತ್ತ್ವೋಪದೇಶಕನಾದ ಗುರುವನ್ನು ಹುಡುಕಿಕೊಂಡು ಹೊರಟುಹೋದನು.”

ಳಿ೨೧ನೆಯ ಅಧ್ಯಾಯವು ಮುಗಿಯಿತು.

೩೨೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶುಭಾಶುಭಕರ್ಮಗಳ ಫಲವನ್ನು ಕರ್ತೃವು ಅನುಭವಿಸಲೇಬೇಕೆಂಬುದರ ಪ್ರತಿಪಾದನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದ್ಯಸ್ತಿ ದತ್ತಮಿಷ್ಟಂ ವಾ ತಪಸ್ತಪ್ತಂ ತಥೈವ ಚ ।
ಗುರೂಣಾಂ ವಾಪಿ ಶುಶ್ರೂಷಾ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹನೇ! ದಾನ, ಯಜ್ಞ, ತಪಸ್ಸು ಮತ್ತು ಗುರುಶುಶ್ರೂಷೆ

ಗಳಿಂದ ಯಾವುದಾದರೂ ಫಲವು ದೊರೆಯುವುದಾಗಿದ್ದರೆ ಅದು ಎಂತಹ ಫಲವೆಂಬುದನ್ನು ನನಗೆ ತಿಳಿಸು.”

ಭೀಷ್ಮನು ಹೇಳುತ್ತಾನೆ :

ಆತ್ಮನಾನರ್ಥಯುಕ್ತೇನ ಪಾಪೇ ನಿವಿಶತೇ ಮನಃ ।
ಸ ಕರ್ಮ ಕಲುಷಂ ಕೃತ್ವಾ ಕ್ಲೇಶೇ ಮಹತಿ ಧೀಯತೇ ॥೨॥

“ಯುಧಿಷ್ಠಿರ! ಬುದ್ಧಿಯು ಕಾಮ-ಕ್ರೋಧ-ಲೋಭ-ಮೋಹಾದಿ ಅನರ್ಥಕರವಾದ ಗುಣಗಳಿಂದ ಯುಕ್ತವಾದಾಗ –ಅಂತಹ ಬುದ್ಧಿಯಿಂದ ಪ್ರೇರಿತವಾದ ಮನುಷ್ಯನ ಮನಸ್ಸು ಪಾಪಕಾರ್ಯಗಳಲ್ಲಿ ಪ್ರವೃತ್ತವಾಗುತ್ತದೆ. ಆಗ ಮನುಷ್ಯನು ದೋಷಯುಕ್ತವಾದ ಕರ್ಮಗಳನ್ನೇ ಮಾಡಿ ಅದರ ಪರಿಣಾಮವಾಗಿ ಮಹಾಕ್ಲೇಶದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೆ.

ದುರ್ಭಿಕ್ಷಾದೇವ ದುರ್ಭಿಕ್ಷಂ ಕ್ಲೇಶಾತ್ಕ್ಲೇಶಂ ಭಯಾದ್ಭಯಮ್ ।
ಮೃತೇಭ್ಯಃ ಪ್ರಮೃತಾ ಯಾನ್ತಿ ದರಿದ್ರಾಃ ಪಾಪಕರ್ಮಿಣಃ ॥೩॥

ಪಾಪಕರ್ಮಗಳನ್ನು ಮಾಡುವ ದರಿದ್ರಮನುಷ್ಯರು ದುರ್ಭಿಕ್ಷವುಳ್ಳ ದೇಶದಿಂದ ಮತ್ತೂ ದುರ್ಭಿಕ್ಷವುಳ್ಳ ದೇಶಕ್ಕೆ ಹೋಗುತ್ತಾರೆ. ಸುಭಿಕ್ಷವಾಗಿರುವ ದೇಶದಲ್ಲಿ ಅಂತಹವರಿಗೆ ನೆಲೆಯೇ ಸಿಕ್ಕುವುದಿಲ್ಲ. ಒಂದು ಕ್ಲೇಶವನ್ನು ಅನುಭವಿಸಿದ ಕೂಡಲೇ ಮತ್ತೊಂದು ಕ್ಲೇಶವು ಇವರಿಗಾಗಿ ಕಾದಿರುತ್ತದೆ. ಒಂದು ಭಯದಿಂದ ಮತ್ತೊಂದು ಭಯವು ಹುಟ್ಟಿಕೊಳ್ಳುತ್ತದೆ. ಸತ್ತವರಿಗಿಂತಲೂ ಅವರು ಹೆಚ್ಚು ಸತ್ತವರಾಗುತ್ತಾರೆ.

ಉತ್ಸವಾದುತ್ಸವಂ ಯಾನ್ತಿ ಸ್ವರ್ಗಾತ್ಸ್ವರ್ಗಂ ಸುಖಾತ್ಸುಖಮ್ ।
ಶ್ರದ್ದಧಾನಾಶ್ಚ ದಾನ್ತಾಶ್ಚ ಧನಸ್ಥಾಃ ಶುಭಕಾರಿಣಃ ॥೪॥

ಶ್ರದ್ಧಾಳುಗಳಾದ, ಜಿತೇಂದ್ರಿಯರಾದ, ಶುಭಕರ್ಮಗಳನ್ನೇ ಮಾಡುವ ಧನಿಕರು ಒಂದು ಉತ್ಸವದಿಂದ (ಆನಂದದಿಂದ) ಮತ್ತೊಂದು ಉತ್ಸವವನ್ನು ಪಡೆಯುತ್ತಾರೆ. ಸದಾ ಆನಂದೋತ್ಸವಗಳಲ್ಲಿಯೇ ತಲ್ಲೀನರಾಗಿರುತ್ತಾರೆ. ಒಂದು ಸ್ವರ್ಗದಿಂದ ಮತ್ತೊಂದು ಸ್ವರ್ಗವನ್ನು ಪಡೆಯುತ್ತಾರೆ. ಒಂದು ಸುಖದಿಂದ ಮತ್ತೊಂದು ಸುಖವನ್ನು ಪಡೆಯುತ್ತಾರೆ.

ವ್ಯಾಲಕುಞ್ಜರದುರ್ಗೇಷು ಸರ್ಪಚೌರಭಯೇಷು ಚ ।
ಹಸ್ತಾವಾಪೇನ ಗಚ್ಛನ್ತಿ ನಾಸ್ತಿಕಾಃ ಕಿಮತಃ ಪರಮ್ ॥೫॥

ರಾಜನಿಂದ ಶಿಕ್ಷಿಸಲ್ಪಟ್ಟ ನಾಸ್ತಿಕರು ಕೈಗಳೆರಡರಲ್ಲಿಯೂ ಸಂಕೋಲೆಗಳನ್ನು ಧರಿಸಿ ಹಾವು ಮತ್ತು ಚೋರರ ಭಯದಿಂದ ಯುಕ್ತವಾದ, ವಿಷಜಂತುಗಳಿಂದಲೂ ಕಾಡಾನೆಗಳಿಂದಲೂ ವ್ಯಾಪ್ತವಾದ ಅತ್ಯಂತ ದುರ್ಗಮವಾದ ಪ್ರದೇಶಗಳಲ್ಲಿ ಹೋಗುತ್ತಿರುತ್ತಾರೆ. ಅಂತಹವರಿಗೆ ಇದಕ್ಕಿಂತಲೂ ಬೇರೆ ಯಾವ ಶಿಕ್ಷೆಯಿದೆ?

ಪ್ರಿಯದೇವಾತಿಥೇಯಾಶ್ಚ ವದಾನ್ಯಾಃ ಪ್ರಿಯಸಾಧವಃ ।
ಕ್ಷೇಮ್ಯಮಾತ್ಮವತಾಂ ಮಾರ್ಗಮಾಸ್ಥಿತಾ ಹಸ್ತದಕ್ಷಿಣಾಃ ॥೬॥

ಯಾರಿಗೆ ದೇವತೆಗಳೂ ಮತ್ತು ಅತಿಥಿಗಳೂ ಪ್ರಿಯವಾಗಿರುವರೋ, ಯಾರು ಉದಾರಿಗಳೋ, ದಕ್ಷಿಣೆನೀಡುವ ಹಸ್ತಗಳುಳ್ಳವರೋ (ದಾನಶೀಲರೋ), ಯಾರಿಗೆ ಸಾಧುಗಳು ಪ್ರಿಯರಾಗಿರುವರೋ– ಅಂತಹವರು ಋಜುವಾದ ಮತ್ತು ಕ್ಷೇಮಕರವಾದ ಆತ್ಮಜ್ಞಾನಿಗಳ ಮಾರ್ಗವನ್ನು ಆಶ್ರಯಿಸಿರುತ್ತಾರೆ.

ಪುಲಾಕಾ ಇವ ಧಾನ್ಯೇಷು ಪೂತ್ಯಣ್ಡಾ ಇವ ಪಕ್ಷಿಷು ।
ತದ್ವಿಧಾಸ್ತೇ ಮನುಷ್ಯೇಷು ಯೇಷಾಂ ಧರ್ಮೋ ನ ಕಾರಣಮ್ ॥

ಮನುಷ್ಯರಲ್ಲಿ ಯಾರಿಗೆ ಧರ್ಮವು ಜೀವನದ ಪರಮೋದ್ದೇಶವಾಗಿಲ್ಲವೋ –ಅವರು ಧಾನ್ಯಗಳಲ್ಲಿ ಜೊಳ್ಳಿನಂತೆಯೂ –ಪಕ್ಷಿಗಳಲ್ಲಿ ಕೊಳೆತ ಮೊಟ್ಟೆಗಳಂತೆಯೂ ನಿಷ್ಪ್ರಯೋಜಕರಾಗುತ್ತಾರೆ.

ಸುಶೀಘ್ರಮಪಿ ಧಾವನ್ತಂ ವಿಧಾನಮನುಧಾವತಿ ।
ಶೇತೇ ಸಹ ಶಯಾನೇನ ಯೇನ ಯೇನ ಯಥಾ ಕೃತಮ್ ॥೮॥

ಉಪತಿಷ್ಠತಿ ತಿಷ್ಠನ್ತಂ ಗಚ್ಛನ್ತಮನುಗಚ್ಛತಿ ।
ಕರೋತಿ ಕುರ್ವತಃ ಕರ್ಮ ಚ್ಛಾಯೇವಾನುವಿಧೀಯತೇ ॥೯॥

ಮನುಷ್ಯನು ಯಾವ ಯಾವ ಕರ್ಮಗಳನ್ನು ಮಾಡಿರುವನೋ ಆಯಾ ಕರ್ಮಗಳ ಫಲವು ಯಾವಾಗಲೂ ಅವನ ಹಿಂದೆಯೇ ಇರುತ್ತದೆ.

ಅವನು ಅತ್ಯಂತಶೀಘ್ರವಾಗಿ ಓಡುತ್ತಿದ್ದರೆ ಕರ್ಮಫಲವೂ ಅವನನ್ನೇ ಅನುಸರಿಸಿ ಅಷ್ಟೇ ಶೀಘ್ರವಾಗಿ ಓಡಿಹೋಗುತ್ತದೆ. ಮಲಗಿದ್ದರೆ ಕರ್ಮ ಫಲವೂ ಅವನೊಡನೆ ಮಲಗಿರುತ್ತದೆ. ಕರ್ತೃವು ನಿಂತಿದ್ದರೆ ಅದೂ ಅವನ ಜೊತೆಯಲ್ಲಿ ನಿಂತೇ ಇರುತ್ತದೆ. ಹೋಗುತ್ತಿದ್ದರೆ ಕರ್ಮಫಲವೂ ಅವನನ್ನು ಅನುಸರಿಸಿ ಹೋಗುತ್ತಿರುತ್ತದೆ. ಅವನು ಯಾವುದಾದರೂ ಕೆಲಸ ಮಾಡುತ್ತಿದ್ದರೂ ಕರ್ಮಫಲವು ಅವನಲ್ಲಿ ಸೇರಿಕೊಂಡಿದ್ದು ಆ ಕರ್ಮವನ್ನು ತಾನೂ ಮಾಡುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಕರ್ಮಫಲವೆಂಬುದು ಯಾವಾಗಲೂ ನೆಳಲಿನಂತೆ ಮನುಷ್ಯನ ಜೊತೆಯಲ್ಲಿಯೇ ಇರುತ್ತದೆ.

ಯೇನ ಯೇನ ಯಥಾ ಯದ್ಯತ್ಪುರಾ ಕರ್ಮ ಸುನಿಶ್ಚಿತಮ್ ।
ತತ್ತದೇಕತರೋ ಭುಙ್ಕ್ತೇ ನಿತ್ಯಂ ವಿಹಿತಮಾತ್ಮನಾ ॥೧೦॥

ಯಾವ ಯಾವ ಮನುಷ್ಯನು ತನ್ನ ಹಿಂದಿನ ಜನ್ಮಗಳಲ್ಲಿ ಯಾವ ಯಾವ ಕರ್ಮಗಳನ್ನು ಮಾಡಿರುವನೋ –ಅವನು ಆಯಾ ಕರ್ಮಗಳಿಗೆ ಅನುಗುಣವಾದ ಫಲವನ್ನೇ ಏಕಾಕಿಯಾಗಿ ಅನುಭವಿಸುತ್ತಾನೆ.

ಸ್ವಕರ್ಮಫಲನಿಕ್ಷೇಪಂ ವಿಧಾನಪರಿರಕ್ಷಿತಮ್ ।
ಭೂತಗ್ರಾಮಮಿಮಂ ಕಾಲಃ ಸಮನ್ತಾದಪಕರ್ಷತಿ ॥೧೧॥

ವಿಧಿಯಿಂದ ರಕ್ಷಿಸಲ್ಪಡುತ್ತಿರುವ ಸ್ವಕರ್ಮಫಲವೆಂಬ ನಿಧಿಯನ್ನು ಹೊಂದಿರುವ ಪ್ರಾಣಿಗಳ ಸಮುದಾಯವನ್ನು ಕಾಲಪುರುಷನು ಆ ಪ್ರಾಣಿಗಳ ಕರ್ಮಫಲಾನುಸಾರವಾಗಿ ಎಲ್ಲ ಕಡೆಗಳಿಂದಲೂ ಸೆಳೆಯುತ್ತಿರುತ್ತಾನೆ.

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।
ಸ್ವಂ ಕಾಲಂ ನಾತಿವರ್ತನ್ತೇ ತಥಾ ಕರ್ಮ ಪುರಾ ಕೃತಮ್ ॥೧೨॥

ಫಲ-ಪುಷ್ಪಗಳು ಯಾರ ಪ್ರೇರಣೆಯೂ ಇಲ್ಲದೇ, ಮೂಡಿಬರಬೇಕಾದ ಕಾಲವನ್ನು ಅತಿಕ್ರಮಿಸದೇ ಕಾಲಕ್ಕೆ ಸರಿಯಾಗಿ ಮೂಡಿಬರುವಂತೆ –ಹಿಂದೆ ಮಾಡಿದ ಕರ್ಮಗಳ ಫಲಗಳು ಕಾಲಕ್ಕೆ ಸರಿಯಾಗಿ ಮನುಷ್ಯನಲ್ಲಿ ಫಲಿಸುತ್ತವೆ.

ಸಮ್ಮಾನಶ್ಚಾವಮಾನಶ್ಚ ಲಾಭಾಲಾಭೌ ಕ್ಷಯೋದಯೌ ।
ಪ್ರವೃತ್ತಾ ವಿನಿವರ್ತನ್ತೇ ನಿಧನಾನ್ತಾಃ ಪದೇ ಪದೇ ॥೧೩॥

ಸಮ್ಮಾನ-ಅವಮಾನ, ಲಾಭ-ನಷ್ಟ, ಉನ್ನತಿ-ಅವನತಿ ಇವುಗಳು ಪೂರ್ವಜನ್ಮದ ಕರ್ಮಫಲಾನುಸಾರವಾಗಿ ಅಡಿಗಡಿಗೂ ಬರುತ್ತಿರುತ್ತವೆ. ಅವುಗಳನ್ನು ಅನುಭವಿಸಿದನಂತರ ಹೊರಟುಹೋಗುತ್ತವೆ.

ಆತ್ಮನಾ ವಿಹಿತಂ ದುಃಖಮಾತ್ಮನಾ ವಿಹಿತಂ ಸುಖಮ್ ।
ಗರ್ಭಶಯ್ಯಾಮುಪಾದಾಯ ಭುಜ್ಯತೇ ಪೌರ್ವದೇಹಿಕಮ್ ॥೧೪॥

ದುಃಖವೆಂಬುದೂ ತಾನೇ ಮಾಡಿದ ಕರ್ಮಗಳ ಫಲದಿಂದಾಗಿ ಲಭ್ಯವಾಗುತ್ತದೆ. ಸುಖವೆಂಬುದೂ ತಾನೇ ಮಾಡಿದ ಕರ್ಮಗಳ ಫಲದಿಂದಾಗಿ ಲಭಿಸುತ್ತದೆ. ತಾಯಿಯ ಗರ್ಭಾಶಯದಲ್ಲಿ ಸೇರಿಕೊಂಡೊಡನೆಯೇ ಜೀವವು ತಾನು ಹಿಂದಿನ ಜನ್ಮಗಳಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲಗಳನ್ನು ಉಪಭೋಗಿಸಲು ಪ್ರಾರಂಭಿಸುತ್ತದೆ.

ಬಾಲೋ ಯುವಾ ವಾ ವೃದ್ಧಶ್ಚ ಯತ್ಕರೋತಿ ಶುಭಾಶುಭಮ್ ।
ತಸ್ಯಾಂ ತಸ್ಯಾಮವಸ್ಥಾಯಾಂ ಭುಙ್ಕ್ತೇ ಜನ್ಮನಿ ಜನ್ಮನಿ ॥೧೫॥

ಬಾಲಕನಾಗಲೀ, ಯುವಕನಾಗಲೀ, ವೃದ್ಧನಾಗಲೀ–ಆಯಾ ಅವಸ್ಥೆಗಳಲ್ಲಿ ಯಾವ ಶುಭಾಶುಭಕರ್ಮಗಳನ್ನು ಮಾಡುವನೋ –ಅದರ ಫಲವನ್ನು ಮರುಹುಟ್ಟಿನಲ್ಲಿ ಆಯಾ ಅವಸ್ಥೆಗಳಲ್ಲಿದ್ದಾಗಲೇ ಅನುಭವಿಸು ತ್ತಾನೆ. (ಬಾಲಕನಾಗಿದ್ದಾಗ ಮಾಡಿದ ಕರ್ಮದ ಫಲವನ್ನು ಮರುಹುಟ್ಟಿನಲ್ಲಿ ಬಾಲಕನಾಗಿದ್ದಾಗಲೇ ಅನುಭವಿಸುತ್ತಾನೆ. ವಯಸ್ಸಾದನಂತರ ನಾನಾ ರೋಗಗಳು ಹುಟ್ಟಿಕೊಳ್ಳುವುದು ಮತ್ತು ಆಕಸ್ಮಿಕವಾಗಿ ಐಶ್ವರ್ಯವು ಲಭಿಸುವುದು –ಇತ್ಯಾದಿಗಳಿಗೂ ಹಿಂದಿನ ಜನ್ಮದಲ್ಲಿ ವಯಸ್ಸಾದ ನಂತರ ಮಾಡಿದ ಕರ್ಮಫಲಗಳೇ ಕಾರಣಗಳಾಗಿರುತ್ತವೆ.)

ಯಥಾ ಧೇನುಸಹಸ್ರೇಷು ವತ್ಸೋ ವಿನ್ದತಿ ಮಾತರಮ್ ।
ತಥಾ ಪೂರ್ವಕೃತಂ ಕರ್ಮ ಕರ್ತಾರಮನುಗಚ್ಛತಿ ॥೧೬॥

ಯಾವ ರೀತಿಯಲ್ಲಿ ಸಾವಿರಾರು ಹಸುಗಳು ಒಂದೆಡೆಯಲ್ಲಿದ್ದರೂ ಕರುವು ತನ್ನ ತಾಯಿಯನ್ನೇ ಹುಡುಕಿಕೊಂಡು ಹೋಗಿ ಅದರೊಡನೆ ಸೇರಿ ಕೊಳ್ಳುವುದೋ–ಅದೇ ರೀತಿಯಲ್ಲಿ ಹಿಂದೆ ಮಾಡಿದ ಕರ್ಮಗಳು ಕರ್ತೃವನ್ನೇ

ಅನುಸರಿಸಿ ಹೋಗುತ್ತವೆ. ಒಬ್ಬನು ಮಾಡಿದ ಕರ್ಮಗಳ ಫಲವು ಮತ್ತೊಬ್ಬನನ್ನು ಸೇರುವುದಿಲ್ಲ.

ಮಲಿನಂ ಹಿ ಯಥಾ ವಸ್ತ್ರಂ ಪಶ್ಚಾಚ್ಛುದ್ಧ್ಯತಿ ವಾರಿಣಾ ।
ಉಪವಾಸೈಃ ಪ್ರತಪ್ತಾನಾಂ ದೀರ್ಘಂ ಸುಖಮನನ್ತಕಮ್ ॥೧೭॥

ಕೊಳೆಯಾದ ಬಟ್ಟೆಯು ನೀರಿನಲ್ಲಿ ಒಗೆದನಂತರ ಶುಭ್ರವಾಗುವಂತೆ–ಮಲಿನವಾದ ಮನುಷ್ಯನ ಮನಸ್ಸು ಉಪವಾಸಾದಿಗಳ ಮೂಲಕವಾಗಿ ಮಾಡುವ ತಪಸ್ಸಿನಿಂದ ಶುದ್ಧವಾಗುತ್ತದೆ. ಮನಸ್ಸು ಶುದ್ಧವಾದನಂತರ ದೀರ್ಘಕಾಲದ, ಅನಂತವಾದ ಸುಖವು ಲಭ್ಯವಾಗುತ್ತದೆ.

ದೀರ್ಘಕಾಲೇನ ತಪಸಾ ಸೇವಿತೇನ ಮಹಾಮತೇ ।
ಧರ್ಮನಿರ್ಧೂತಪಾಪಾನಾಂ ಸಂಸಿಧ್ಯನ್ತೇ ಮನೋರಥಾಃ ॥೧೮॥

ಮಹಾಮತಿಯೇ! ಧರ್ಮಾಚರಣೆಯಿಂದ ಹೋಗಲಾಡಿಸಲ್ಪಟ್ಟ ಪಾಪವುಳ್ಳವರಿಗೆ ಬಹಳ ಕಾಲದವರೆಗೂ ಮಾಡಿದ ತಪಸ್ಸಿನಿಂದ ಸಕಲ ಮನೋರಥಗಳೂ ಸಿದ್ಧಿಸುತ್ತವೆ.

ಶಕುನಾನಾಮಿವಾಕಾಶೇ ಮತ್ಸ್ಯಾನಾಮಿವ ಚೋದಕೇ ।
ಪದಂ ಯಥಾ ನ ದೃಶ್ಯೇತ ತಥಾ ಪುಣ್ಯಕೃತಾಂ ಗತಿಃ ॥೧೯॥

ಆಕಾಶದಲ್ಲಿ ಪಕ್ಷಿಗಳ ಮತ್ತು ನೀರಿನಲ್ಲಿ ಮೀನುಗಳ ಹೆಜ್ಜೆಯ ಗುರುತುಗಳು ಹೇಗೆ ಕಾಣುವುದಿಲ್ಲವೋ–ಹಾಗೆಯೇ ಪುಣ್ಯಾತ್ಮರಾದ ಜ್ಞಾನಿಗಳ ಮಾರ್ಗವು ಯಾವುದೆಂಬುದು ತಿಳಿಯುವುದಿಲ್ಲ.

ಅಲಮನ್ಯೈರುಪಾಲಬ್ಧೈಃ ಕೀರ್ತಿತೈಶ್ಚ ವ್ಯತಿಕ್ರಮೈಃ ।
ಪೇಶಲಂ ಚಾನುರೂಪಂ ಚ ಕರ್ತವ್ಯಂ ಹಿತಮಾತ್ಮನಃ ॥೨೦॥

ನಾನಾಪ್ರಕಾರವಾಗಿ ನಾನಾಕಾರಣಗಳನ್ನು ಮುಂದೆಮಾಡಿ ಇತರರನ್ನು ನಿಂದಿಸುವುದನ್ನು ನಿಲ್ಲಿಸಬೇಕು. ಇತರರು ಮಾಡಿದ ಅಪರಾಧಗಳ ವಿಷಯವಾಗಿ ಚರ್ಚಿಸುವುದನ್ನು ನಿಲ್ಲಿಸಬೇಕು. ಸುಂದರವೂ, ಅನುಕೂಲವೂ ಮತ್ತು ಹಿತಕರವೂ ಆದ ಕರ್ತವ್ಯಕರ್ಮಗಳನ್ನು ಮಾಡುತ್ತಿರಬೇಕು.”

ಇ೨೨ನೆಯ ಅಧ್ಯಾಯವು ಮುಗಿಯಿತು.

ಪುತ್ರಪ್ರಾಪ್ತಿಗಾಗಿ ವ್ಯಾಸರಿಂದ ತಪಶ್ಚರಣೆ: ಶಂಕರನಿಂದ ವರವನ್ನು ಪಡೆದುದು

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕಥಂ ವ್ಯಾಸಸ್ಯ ಧರ್ಮಾತ್ಮಾ ಶುಕೋ ಜಜ್ಞೇ ಮಹಾತಪಾಃ ।
ಸಿದ್ಧಿಂ ಚ ಪರಮಾಂ ಪ್ರಾಪ್ತಸ್ತನ್ಮೇ ಬ್ರೂಹಿ ಪಿತಾಮಹ ॥೧॥

“ಭೀಷ್ಮಪಿತಾಮಹನೇ! ವ್ಯಾಸರಿಗೆ ಮಹಾತಪಸ್ವಿಯಾದ, ಧರ್ಮಾತ್ಮನಾದ ಶುಕನು ಹೇಗೆ ಹುಟ್ಟಿದನು? ಶುಕನು ಪರಮಸಿದ್ಧಿಯನ್ನು ಹೇಗೆ ಪಡೆದನು? –ಆ ವಿಷಯವನ್ನು ನನಗೆ ಹೇಳು.

ಕಸ್ಯಾಂ ಚೋತ್ಪಾದಯಾಮಾಸ ಶುಕಂ ವ್ಯಾಸಸ್ತಪೋಧನಃ ।
ನ ಹ್ಯಸ್ಯ ಜನನೀಂ ವಿದ್ಮ ಜನ್ಮ ಚಾಗ್ರ್ಯಂ ಮಹಾತ್ಮನಃ ॥೨॥

ತಪೋಧನರಾದ ವ್ಯಾಸರು ಯಾವ ಸ್ತ್ರೀಯ ಗರ್ಭದಿಂದ ಶುಕನನ್ನು ಪಡೆದುಕೊಂಡರು? ಮಹಾತ್ಮನಾದ ಶುಕನ ತಾಯಿಯು ಯಾರೆಂಬುದನ್ನಾಗಲೀ–ಶ್ರೇಷ್ಠವಾದ ಜನ್ಮವೃತ್ತಾಂತವನ್ನಾಗಲೀ ನಾವು ತಿಳಿಯೆವು.

ಕಥಂ ಚ ಬಾಲಸ್ಯ ಸತಃ ಸೂಕ್ಷ್ಮಜ್ಞಾನೇ ಗತಾ ಮತಿಃ ।
ಯಥಾ ನಾನ್ಯಸ್ಯ ಲೋಕೇಽಸ್ಮಿನ್ದ್ವಿತೀಯಸ್ಯೇಹ ಕಸ್ಯಚಿತ್ ॥೩॥

ಬಾಲಕನಾಗಿದ್ದಾಗಲೇ ಶುಕನಿಗೆ ಸೂಕ್ಷ್ಮವಾದ ಅಧ್ಯಾತ್ಮಜ್ಞಾನದಲ್ಲಿ ಬುದ್ಧಿಯು ಹೇಗೆ ಪ್ರವೃತ್ತವಾಯಿತು? ಈ ಪ್ರಪಂಚದಲ್ಲಿ ಶುಕನಿಗೆ ಹೊರತಾಗಿ ಬೇರೆ ಯಾವನಿಗೂ ಅಂತಹ ಸೂಕ್ಷ್ಮಬುದ್ಧಿಯಿರುವುದಿಲ್ಲ.

ಮಹಾಮತಿಯೇ! ಶುಕನ ವಿಷಯವನ್ನು ನಾನು ವಿಸ್ತಾರವಾಗಿ

---

* ಈ ಅಧ್ಯಾಯದಲ್ಲಿ ವ್ಯಾಸ-ಶುಕರ ಕಥೆಯು ಮುಂದುವರಿದಿದೆ. ೩೨೧ನೆಯ ಅಧ್ಯಾಯವೂ ವ್ಯಾಸ-ಶುಕರ ಸಂವಾದದ್ದೇ ಆಗಿತ್ತು. ಮಧ್ಯದಲ್ಲಿ ಈ ಎರಡು ಅಧ್ಯಾಯಗಳಿಗೂ ಸಂಬಂಧಿಸದಿರುವ ೩೨೨ನೆಯ ಅಧ್ಯಾಯವು ಬಂದಿರುತ್ತದೆ. ಈ ಅಧ್ಯಾಯವು ಕೆಲವು ಪುಸ್ತಕಗಳಲ್ಲಿರುವುದಿಲ್ಲ.

ನಿನ್ನಿಂದ ಕೇಳಬೇಕೆಂದಿರುತ್ತೇನೆ. ಅಮೃತಕ್ಕೆ ಸಮಾನವಾದ ಉತ್ತಮೋತ್ತಮವಾದ ಮತ್ತು ಮಧುರವಾದ ನಿನ್ನ ಪ್ರವಚನವನ್ನು ಕೇಳುತ್ತಿರುವ ನನಗೆ ತೃಪ್ತಿಯೇ ಉಂಟಾಗುತ್ತಿಲ್ಲ. ಮತ್ತೂ ಕೇಳಬೇಕೆನಿಸುತ್ತದೆ. ಶುಕದೇವನಲ್ಲಿದ್ದ ಮಾಹಾತ್ಮ್ಯ, ಆತ್ಮಯೋಗ ಮತ್ತು ವಿಜ್ಞಾನ –ಇವುಗಳನ್ನು ಅನುಕ್ರಮವಾಗಿ ಯಥಾವತ್ತಾಗಿ ಹೇಳು.”

ಭೀಷ್ಮನು ಹೇಳುತ್ತಾನೆ :

ನ ಹಾಯನೈರ್ನ ಪಲಿತೈರ್ನ ವಿತ್ತೈರ್ನ ಚ ಬನ್ಧುಭಿಃ ।
ಋಷಯಶ್ಚಕ್ರಿರೇ ಧರ್ಮಂ ಯೋಽನೂಚಾನಃ ಸ ನೋ ಮಹಾನ್ ॥

“ಧರ್ಮಜ! ಹೆಚ್ಚು ವಯಸ್ಸಾಗಿರುವುದರಿಂದಾಗಲೀ, ಕೂದಲು ನರೆತಿವೆಯೆಂದಾಗಲೀ, ಅಧಿಕವಾದ ಧನವಿದೆಯೆಂದಾಗಲೀ, ಬಂಧುಗಳು ಅಧಿಕಸಂಖ್ಯೆಯಲ್ಲಿರುವರೆಂದಾಗಲೀ – ಒಬ್ಬನು ಧರ್ಮಿಷ್ಠನೆನಿಸಿಕೊಳ್ಳುವುದಿಲ್ಲ. ಯಾವನು ಷಡಂಗಯುಕ್ತವಾದ ವೇದವನ್ನು ಅಧ್ಯಯನಮಾಡಿರುವನೋ –ಅವನೇ ನಮ್ಮೆಲ್ಲರಿಗಿಂತಲೂ ಶ್ರೇಷ್ಠನು. ಋಷಿಗಳು ಹೀಗೆ ಧರ್ಮನಿಯಮವನ್ನು ಮಾಡಿರುತ್ತಾರೆ.

ತಪೋಮೂಲಮಿದಂ ಸರ್ವಂ ಯನ್ಮಾಂ ಪೃಚ್ಛಸಿ ಪಾಣ್ಡವ ।
ತದಿನ್ದ್ರಿಯಾಣಿ ಸಂಯಮ್ಯ ತಪೋ ಭವತಿ ನಾನ್ಯಥಾ ॥೭॥

ನೀನು ನನ್ನನ್ನು ಯಾವ ತಪಸ್ಸಿನ ವಿಷಯವಾಗಿ ಕೇಳುತ್ತಿರುವೆಯೋ ಅಂತಹ ತಪಸ್ಸೇ ಎಲ್ಲಕ್ಕೂ ಮೂಲಭೂತವಾದುದು. ಇಂದ್ರಿಯಗಳನ್ನು ಅಂಕೆಯಲ್ಲಿಟ್ಟುಕೊಳ್ಳುವುದೇ ತಪಸ್ಸು. ಬೇರೆ ಯಾವುದೂ ತಪಸ್ಸಲ್ಲ.

ಇನ್ದ್ರಿಯಾಣಾಂ ಪ್ರಸಙ್ಗೇನ ದೋಷಮೃಚ್ಛತ್ಯಸಂಶಯಮ್ ।
ಸಂನಿಯಮ್ಯ ತು ತಾನ್ಯೇವ ಸಿದ್ಧಿಮಾಪ್ನೋತಿ ಮಾನವಃ ॥೮॥

ಮನುಷ್ಯನು ಇಂದ್ರಿಯಗಳ ಸ್ವೇಚ್ಛಾಪ್ರವೃತ್ತಿಯಿಂದಲೇ ಪಾಪಯುಕ್ತನಾಗುವನೆಂಬುದರಲ್ಲಿ ಸಂಶಯವೇ ಇಲ್ಲ. ಇಂದ್ರಿಯಗಳನ್ನೇ ಹತೋಟಿಯಲ್ಲಿಟ್ಟುಕೊಂಡರೆ ಮನುಷ್ಯನು ಸಿದ್ಧಿಯನ್ನು ಹೊಂದುತ್ತಾನೆ.

ಅಶ್ವಮೇಧಸಹಸ್ರಸ್ಯ ವಾಜಪೇಯಶತಸ್ಯ ಚ ।
ಯೋಗಸ್ಯ ಕಲಯಾ ತಾತ ನ ತುಲ್ಯಂ ವಿದ್ಯತೇ ಫಲಮ್ ॥೯॥

ಸಾವಿರಾರು ಅಶ್ವಮೇಧಗಳನ್ನೂ ನೂರಾರು ವಾಜಪೇಯಗಳನ್ನೂ ಮಾಡುವುದರಿಂದ ಯಾವ ಫಲವು ಪ್ರಾಪ್ತವಾಗುವುದೋ –ಆ ಫಲವು ಯೋಗಸಿದ್ಧಿಯಿಂದ ಪ್ರಾಪ್ತವಾಗುವ ಮಹಾಫಲದ ಹದಿನಾರನೆಯ ಒಂದು ಭಾಗದಷ್ಟು ಫಲಕ್ಕೂ ಸಾಟಿಯಾಗುವುದಿಲ್ಲ.

ಅತ್ರ ತೇ ವರ್ತಯಿಷ್ಯಾಮಿ ಜನ್ಮಯೋಗಫಲಂ ತಥಾ ।
ಶುಕಸ್ಯಾಗ್ರ್ಯಾಂ ಗತಿಂ ಚೈವ ದುರ್ವಿದಾಮಕೃತಾತ್ಮಭಿಃ ॥೧೦॥

ಯುಧಿಷ್ಠಿರ! ಈಗ ನಾನು ನಿನಗೆ ಶುಕನ ಜನ್ಮವೃತ್ತಾಂತವನ್ನೂ, ಯೋಗಸಿದ್ಧಿಯನ್ನೂ, ಜಿತೇಂದ್ರಿಯರಲ್ಲದವರಿಂದ ಹೊಂದಲು ಸಾಧ್ಯವಿಲ್ಲದ ಶುಕನ ಶ್ರೇಷ್ಠವಾದ ಗತಿಯನ್ನೂ ಹೇಳುತ್ತೇನೆ.

ಹಿಂದೊಮ್ಮೆ ಕರ್ಣಿಕಾರವನಗಳಿಂದ ಸುಶೋಭಿತವಾಗಿದ್ದ ಮೇರು ಪರ್ವತದ ಶಿಖರದಲ್ಲಿ ಭಗವಾನ್ ಶಂಕರನು ಭಯಂಕರವಾದ ಭೂತಗಣ ಗಳಿಂದ ಸುತ್ತುವರಿಯಲ್ಪಟ್ಟವನಾಗಿ ವಿಹರಿಸುತ್ತಿದ್ದನು. ಗಿರಿರಾಜಕುಮಾರಿ ಯಾದ ಉಮಾದೇವಿಯು ಕೂಡ ಅಲ್ಲಿ ಶಿವನೊಡನಿದ್ದಳು. ಅದೇ ಸಮಯದಲ್ಲಿ ಕೃಷ್ಣದ್ವೈಪಾಯನವ್ಯಾಸರು ಅದೇ ಪರ್ವತದಲ್ಲಿ ದಿವ್ಯವಾದ ತಪಸ್ಸನ್ನು ಮಾಡುತ್ತಿದ್ದರು. ಯೋಗಧರ್ಮಪರಾಯಣರಾದ ವ್ಯಾಸರು ಯೋಗದ ಮೂಲಕವಾಗಿ ತಮ್ಮ ಮನಸ್ಸನ್ನು ಪರಮಾತ್ಮನಲ್ಲಿ ಯೋಜಿಸಿ ಪುತ್ರನನ್ನು ಪಡೆಯುವ ಸಲುವಾಗಿ ಧಾರಣಾಪೂರ್ವಕವಾಗಿ ತಪಸ್ಸನ್ನು ಮಾಡುತ್ತಿದ್ದರು.

‘ನನಗೆ ಅಗ್ನಿ, ಭೂಮಿ, ಜಲ, ವಾಯು ಮತ್ತು ಆಕಾಶ ಇವುಗಳ ಧೈರ್ಯಕ್ಕೆ ಸಮಾನವಾದ ಧೈರ್ಯವುಳ್ಳ ಪುತ್ರನು ಹುಟ್ಟಲಿ’–ಎಂಬುದಾಗಿ ವ್ಯಾಸರು ಸಂಕಲ್ಪಿಸಿ ತಪಸ್ಸನ್ನು ಮಾಡುತ್ತಿದ್ದರು. ಈ ವಿಧವಾದ ಸಂಕಲ್ಪದಿಂದಲೂ ಮತ್ತು ಯೋಗದಿಂದಲೂ ಉತ್ತಮವಾದ ತಪಸ್ಸಿನಲ್ಲಿ ನಿರತರಾಗಿದ್ದ ವ್ಯಾಸರು ಜಿತೇಂದ್ರಿಯರಲ್ಲದವರಿಂದ ಹೊಂದಲು ಅಸಾಧ್ಯವಾದ ವರವನ್ನು ದೇವೇಶನಾದ ಮಹಾದೇವನಿಂದ ಪ್ರಾರ್ಥಿಸಿದರು. ಶಕ್ತಿಶಾಲಿಗಳಾದ ವ್ಯಾಸರು

ನೂರು ವರ್ಷಗಳ ಪರ್ಯಂತವಾಗಿ ವಾಯುವನ್ನೇ ಆಹಾರವನ್ನಾಗಿ ಮಾಡಿಕೊಂಡು ಬಹುರೂಪಧಾರಿಯಾದ ಉಮಾಪತಿಯಾದ ಮಹಾದೇವ ನನ್ನು ಆರಾಧಿಸುತ್ತಿದ್ದರು. ಮೇರುಪರ್ವತದ ಶಿಖರದಲ್ಲಿ ಎಲ್ಲ ಬ್ರಹ್ಮರ್ಷಿ ಗಳೂ, ರಾಜರ್ಷಿಗಳೂ, ಲೋಕಪಾಲರೂ, ಅನೇಕ ಅನುಚರರಿಂದ ಕೂಡಿದ್ದ ಸಾಧ್ಯರೂ, ಆದಿತ್ಯರೂ, ರುದ್ರರೂ, ಸೂರ್ಯ-ಚಂದ್ರರೂ, ವಸುಗಳೂ, ಮರುತ್ತರೂ, ಸಾಗರಗಳೂ, ನದಿಗಳೂ, ಅಶ್ವಿನೀದೇವತೆ ಗಳೂ, ದೇವತೆಗಳೂ, ಗಂಧರ್ವರೂ, ನಾರದರೂ, ಪರ್ವತರೂ, ಗಂಧರ್ವರಾಜನಾದ ವಿಶ್ವವಸುವೂ, ಸಿದ್ಧರೂ ಮತ್ತು ಅಪ್ಸರೆಯರೂ ಲೋಕೇಶ್ವರನಾದ ಮಹಾದೇವನನ್ನು ಆರಾಧಿಸುತ್ತಿದ್ದರು. ಅಲ್ಲಿ ಮಹಾದೇವ ನಾದ ರುದ್ರನು ಮಂಗಳಕರವಾದ ಕರ್ಣಿಕಾರಪುಷ್ಪಮಯವಾದ ಮಾಲೆ ಯನ್ನು ಧರಿಸಿ ಬೆಳದಿಂಗಳಿನಿಂದ ಕೂಡಿದ ಚಂದ್ರನಂತೆಯೇ ಪ್ರಕಾಶಿಸುತ್ತಿ ದ್ದನು. ದೇವರ್ಷಿಗಳಿಂದ ಸಮಾಕುಲವಾಗಿದ್ದ, ದಿವ್ಯವಾದ, ರಮ್ಯವಾದ ವನದಲ್ಲಿ ಶ್ರೇಷ್ಠವಾದ ಯೋಗವನ್ನು ಆಶ್ರಯಿಸಿ ವಿಚಲಿತರಾಗದ ವ್ಯಾಸರು ಪುತ್ರನನ್ನು ಪಡೆಯುವ ಸಲುವಾಗಿ ತಪಸ್ಸನ್ನು ಮಾಡುತ್ತಿದ್ದರು. ಅಂತಹ ಕಠೋರವಾದ ತಪಸ್ಸನ್ನು ಮಾಡುತ್ತಿದ್ದರೂ ವ್ಯಾಸರ ಪ್ರಾಣಗಳು ಹಾರಿ ಹೋಗಲಿಲ್ಲ. ಅವರಿಗೆ ಯಾವ ವಿಧವಾದ ಆಯಾಸವೂ ಉಂಟಾಗಲಿಲ್ಲ. ಮೂರು ಲೋಕದವರಿಗೂ ಅದು ಪರಮಾದ್ಭುತವಾಗಿ ಕಂಡಿತು. ಯೋಗ ಯುಕ್ತರಾಗಿದ್ದ, ಮಹಾತೇಜಸ್ವಿಗಳಾಗಿದ್ದ ವ್ಯಾಸರ ಜಟೆಗಳು ಅವರ ತೇಜಸ್ಸಿನಿಂದಾಗಿ ಅಗ್ನಿಯ ಜ್ವಾಲೆಗಳಂತೆ ಪ್ರಜ್ವಲಿಸುತ್ತಿರುವುವೋ ಎಂಬಂತೆ ಕಾಣುತ್ತಿದ್ದುವು. ಭಗವಾನ್ ಮಾರ್ಕಂಡೇಯಮಹರ್ಷಿಗಳು ನನಗೆ ಈ ವೃತ್ತಾಂತವನ್ನು ಹೇಳಿದರು. ಅವರು ಯಾವಾಗಲೂ ನನಗೆ ದೇವತೆಗಳ ಚರಿತ್ರೆಗಳನ್ನು ಹೇಳುತ್ತಲೇ ಇರುತ್ತಿದ್ದರು. ಆಗ ಮಾಡಿದ ತಪಸ್ಸಿನಿಂದ ಉದ್ದೀಪ್ತವಾಗಿದ್ದ, ಮಹಾತ್ಮರಾದ ವ್ಯಾಸರ ಜಟೆಗಳು ಈಗಲೂ ಅಗ್ನಿಯ ವರ್ಣಕ್ಕೆ ಸಮಾನವಾದ ವರ್ಣದಿಂದ ಪ್ರಜ್ವಲಿಸುತ್ತಿವೆ. ವ್ಯಾಸರ ಅಂತಹ ತಪಸ್ಸಿನಿಂದಲೂ ಮತ್ತು ಭಕ್ತಿಯಿಂದಲೂ ಪ್ರಸನ್ನಚಿತ್ತನಾದ ಮಹೇಶ್ವರನು ವ್ಯಾಸರಿಗೆ ಅಭೀಷ್ಟವಾದ ವರವನ್ನು ಕೊಡಲು ಮನಸ್ಸಿನಲ್ಲಿಯೇ

ನಿಶ್ಚಯಿಸಿದನು. ಭಗವಾನ್ ತ್ರ್ಯಂಬಕನು ವ್ಯಾಸರ ಬಳಿಗೆ ಬಂದು ನಗುತ್ತಿರುವಂತಿರುವ ಮುಖಭಾವದಿಂದ ಕೂಡಿದವನಾಗಿ ವ್ಯಾಸರೊಡನೆ ಹೇಳಿದನು :

ಏವಂವಿಧಸ್ತೇ ತನಯೋ ದ್ವೈಪಾಯನ ಭವಿಷ್ಯತಿ ॥೨೭॥

"ದ್ವೈಪಾಯನಮಹರ್ಷಿಯೇ! ಎಂತಹ ಪುತ್ರನಾಗಬೇಕೆಂದು ನೀನು ಇಷ್ಟಪಡುವೆಯೋ ಅಂತಹ ಪುತ್ರನೇ ನಿನಗೆ ಹುಟ್ಟುತ್ತಾನೆ. ಯಾವ ರೀತಿಯಲ್ಲಿ ಅಗ್ನಿ, ವಾಯು, ಭೂಮಿ, ಜಲ ಮತ್ತು ಅಂತರಿಕ್ಷ –ಇವುಗಳು ಪರಿಶುದ್ಧವಾಗಿವೆಯೋ –ಅದೇ ರೀತಿಯಲ್ಲಿ ನಿನ್ನ ಮಗನೂ ಪರಿಶುದ್ಧನೂ ಮಹಾತ್ಮನೂ ಆಗುತ್ತಾನೆ.

ತದ್ಭಾವಭಾವೀ ತದ್ಬುದ್ಧಿಸ್ತದಾತ್ಮಾ ತದಪಾಶ್ರಯಃ ।
ತೇಜಸಾವೃತ್ಯ ಲೋಕಾಂಸ್ತ್ರೀನ್ಯಶಃ ಪ್ರಾಪ್ಸ್ಯತಿ ತೇ ಸುತಃ ॥೨೯॥

ನಿನ್ನ ಮಗನು ಯಾವಾಗಲೂ ಭಗವದ್ಭಾವದಲ್ಲಿಯೇ ಇರುತ್ತಾನೆ. ಅವನ ಬುದ್ಧಿಯೂ ಮತ್ತು ಮನಸ್ಸೂ ಪರಮಾತ್ಮನಲ್ಲಿಯೇ ಲೀನವಾಗಿರುತ್ತವೆ. ಏಕಮಾತ್ರ ಭಗವಂತನನ್ನೇ ಆ ಶುಕನು ತನ್ನ ಆಶ್ರಯನನ್ನಾಗಿ ಭಾವಿಸುತ್ತಾನೆ. ಅವನ ತೇಜಸ್ಸು ಮೂರು ಲೋಕಗಳಲ್ಲಿಯೂ ವ್ಯಾಪಿಸುತ್ತದೆ. ನಿನ್ನ ಮಗನು ಮಹಾಯಶಸ್ಸನ್ನು ಹೊಂದುತ್ತಾನೆ."

ಇ೨ಇನೆಯ ಅಧ್ಯಾಯವು ಮುಗಿಯಿತು.

ಇ೨೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶುಕದೇವನ ಜನ್ಮ ಮತ್ತು ಅವನ ಉಪನಯನಾದಿ ಸಂಸ್ಕಾರಗಳ ವಿವರಣೆ

ಭೀಷ್ಮನು ಮುಂದುವರಿಸುತ್ತಾ ಹೇಳುತ್ತಾನೆ :

"ಯುಧಿಷ್ಠಿರ! ಸತ್ಯವತಿಯ ಮಕ್ಕಳಾದ ವ್ಯಾಸರು ಮಹಾದೇವನಿಂದ ಶ್ರೇಷ್ಠವಾದ ಪುತ್ರಪ್ರಾಪ್ತಿಯ ವರವನ್ನು ಪಡೆದುಕೊಂಡು ಆಶ್ರಮಕ್ಕೆ ಹಿಂದಿರುಗಿ ಅಗ್ನಿಯನ್ನು ಪಡೆಯುವ ಸಲುವಾಗಿ ಎರಡು ಅಗ್ನಿಮಂಥನ ದಂಡಗಳನ್ನು ಹಿಡಿದುಕೊಂಡು ಕಡೆಯತೊಡಗಿದರು. ಆ ಸಮಯದಲ್ಲಿ ಭಗವಾನ್ ವ್ಯಾಸಮುನಿಗಳು, ತನ್ನ ತೇಜಸ್ಸಿನಿಂದ ಅನುಪಮವಾದ ಮತ್ತು ಪರಮಶ್ರೇಷ್ಠವಾದ ರೂಪವನ್ನು ಹೊಂದಿದ್ದ ಘೃತಾಚೀ ಎಂಬ ಹೆಸರಿನ ಅಪ್ಸರೆಯನ್ನು ನೋಡಿದರು. ಯುಧಿಷ್ಠಿರ! ಆ ಸಮಯದಲ್ಲಿ ಅರಣ್ಯದಲ್ಲಿದ್ದ ಭಗವಾನ್ ವ್ಯಾಸರು ಆ ಅಪ್ಸರೆಯನ್ನು ನೋಡಿ ಒಡನೆಯೇ ಕಾಮಾಭಿ ಭೂತರಾದರು. ಕಾಮದಿಂದ ವ್ಯಾಕುಲಗೊಂಡ ಮನಸ್ಸನ್ನು ಹೊಂದಿದ್ದ ವ್ಯಾಸರನ್ನು ನೋಡಿ ಘೃತಾಚೀಯು ಗಿಳಿಯ ರೂಪವನ್ನು ಧರಿಸಿ ಮಹರ್ಷಿಗಳ ಸಮೀಪಕ್ಕೆ ಹೋದಳು. ಹಾಗೆ ಬೇರೆಯ ರೂಪವನ್ನು ಧರಿಸಿಬಂದ ಆ ಅಪ್ಸರೆಯನ್ನು ನೋಡಿ ವ್ಯಾಸರ ಅಂಗಾಂಗಗಳಲ್ಲಿಯೂ ಕಾಮವೇದನೆಯುಂಟಾಯಿತು. ವ್ಯಾಸರು ಮಹಾಧೈರ್ಯವನ್ನು ಅವಲಂಬಿಸಿ

ಹೃದಯವನ್ನು ಆಕ್ರಮಿಸಿದ್ದ ಕಾಮವನ್ನು ನಿಗ್ರಹಿಸಲು ಪ್ರಯತ್ನಿಸಿದರು. ಆದರೆ ಅವರಿಗೆ ಅಪ್ಸರೆಯ ಕಡೆಗೆ ಹೋಗಿದ್ದ ತಮ್ಮ ಮನಸ್ಸನ್ನು ನಿಯಂತ್ರಿಸಲು ಸಾಧ್ಯವಾಗಲೇ ಇಲ್ಲ. ಮೊದಲೇ ತನ್ನ ಅನುಪಮವಾದ ರೂಪವನ್ನು ಘೃತಾಚಿಯು ತೋರಿಸಿದ್ದುದರಿಂದ ಅವಳ ಅಂತಹ ಅನುಪಮವಾದ ಶರೀರಸೌಂದರ್ಯದಿಂದ ಆಕರ್ಷಿತರಾಗಿದ್ದ ವ್ಯಾಸರು ತಮ್ಮ ಮನಸ್ಸಿನಲ್ಲುಂಟಾಗಿದ್ದ ಕಾಮವೇಗವನ್ನು ಪ್ರಯತ್ನಪೂರ್ವಕವಾಗಿ ತಡೆಹಿಡಿಯುತ್ತಿದ್ದರೂ –ಅಗ್ನಿಯ ಸಲುವಾಗಿ ಅರಣಿಯನ್ನು ದಂಡದಿಂದ ಕಡೆಯುತ್ತಿದ್ದಾಗ ಅವರ ವೀರ್ಯವು ಒಡನೆಯೇ ಅರಣಿಯಲ್ಲಿಯೇ ಬಿದ್ದುಬಿಟ್ಟಿತು. ಆ ಸಮಯದಲ್ಲಿಯೂ ದ್ವಿಜಶ್ರೇಷ್ಠರಾದ ಬ್ರಹ್ಮರ್ಷಿಗಳಾದ ವ್ಯಾಸರು ಯಾವ ವಿಧವಾದ ಶಂಕೆಯೂ ಇಲ್ಲದ ಮನಸ್ಸಿನಿಂದ ಕೂಡಿದವರಾಗಿ ಅರಣಿಗಳ ಮಂಥನವನ್ನು ಮುಂದುವರಿಸಿದರು. ಹಾಗೆಯೇ ಕಡೆಯುತ್ತಿದ್ದಾಗ ಆ ಎರಡು ಅರಣಿಗಳ ಮಧ್ಯದಲ್ಲಿ ಅಗ್ನಿಗೆ ಬದಲಾಗಿ ಅಗ್ನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಶುಕನು ಜನ್ಮತಾಳಿದನು.

(ಪುತ್ರಾರ್ಥವಾಗಿ ತಪಶ್ಚರ್ಯೆಯನ್ನು ಮಾಡಿ ಬಂದಿದ್ದ ವ್ಯಾಸರಿಗೆ ಅಲೌಕಿಕರೀತಿಯಲ್ಲಿ ಪುತ್ರೋತ್ಪತ್ತಿಯಾಗಬೇಕೆಂಬುದು ದೈವಸಂಕಲ್ಪ ವಾಗಿದ್ದಿತು. ಆ ಸಮಯವು ಮಹಾಚೇತನವೊಂದರ ಉತ್ಪತ್ತಿಗೆ ಸಕಾಲ ವಾಗಿತ್ತು. ಈ ಒಂದು ವ್ಯಾಜದಿಂದ ಶುಕಬ್ರಹ್ಮನ ಉತ್ಪತ್ತಿಯಾಯಿತು.)

ಶುಕ್ರೇ ನಿರ್ಮಥ್ಯಮಾನೇ ಸ ಶುಕೋ ಜಜ್ಞೇ ಮಹಾತಪಾಃ ।
ಪರಮರ್ಷಿರ್ಮಹಾಯೋಗೀ ಅರಣೀಗರ್ಭಸಮ್ಭವಃ ॥೯॥

ಅರಣಿಯಲ್ಲಿ* ವೀರ್ಯವನ್ನು ಮಥಿಸುತ್ತಿದ್ದಾಗ ಮಹಾತಪಸ್ವಿಯಾದ, ಮಹಾಯೋಗಿಯಾದ, ಪರಮರ್ಷಿಯಾದ ಶುಕನು ಹುಟ್ಟಿದನು. ಆದುದರಿಂದ ಶುಕನನ್ನು ಅರಣೀಗರ್ಭಸಂಭವನೆಂದು ಕರೆಯುತ್ತಾರೆ. ಶುಕ್ರವನ್ನು ಕಡೆಯುತ್ತಿದ್ದ ಸಮಯದಲ್ಲಿ ಹುಟ್ಟಿದ್ದರಿಂದ ರೇಫಲೋಪ

---

* ಅರಣಿ : ಅಗಲವಾಗಿರುವ ಮರದಹಲಿಗೆಯ ರೂಪದ ವಸ್ತು. ಮಂಥನದಂಡ : ಅರಣಿಯನ್ನು ಕಡೆಯಲು ಉಪಯೋಗಿಸುವ ಕಡೆಗೋಲಿನಂತಿರುವ ಮರದ ತುಂಡು. ಇದನ್ನು ಉತ್ತರಾರಣಿ–ಎಂದೂ ಹೇಳುತ್ತಾರೆ.

ವಾಗಿ ಶುಕನೆಂಬ ಹೆಸರಿನಿಂದ ವ್ಯಾಸಪುತ್ರನು ಪ್ರಸಿದ್ಧನಾದನು. ಯಾವ ರೀತಿ ಯಲ್ಲಿ ಯಜ್ಞದಲ್ಲಿ ಚೆನ್ನಾಗಿ ಹುತಮಾಡಿದ ಅಗ್ನಿಯು ಹವಿಸ್ಸನ್ನು ಹೊತ್ತು ಪ್ರಕಾಶಿಸುತ್ತದೆಯೋ–ಹಾಗೆಯೇ ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವನೋ ಎಂಬಂತೆ ಅಗ್ನಿಗೆ ಸಮಾನರೂಪನಾದ ಶುಕನು ಹುಟ್ಟಿದನು. ತನ್ನ ತಂದೆ ಯಂತೆಯೇ ಶ್ರೇಷ್ಠವಾದ ರೂಪ-ವರ್ಣಗಳನ್ನು ಹೊಂದಿದ್ದ ಪವಿತ್ರಾತ್ಮನಾದ ಶುಕನು ಧೂಮರಹಿತನಾದ ಯಜ್ಞೇಶ್ವರನಂತೆಯೇ ವಿರಾಜಮಾನ ನಾಗಿದ್ದನು.

ಆ ಸಮಯದಲ್ಲಿ ಸರಿತ್ತುಗಳಲ್ಲಿ ಶ್ರೇಷ್ಠಳಾದ ಗಂಗಾದೇವಿಯು ದಿವ್ಯವಾದ ಸ್ತ್ರೀರೂಪವನ್ನು ಧರಿಸಿ ಮೇರುಪರ್ವತಕ್ಕೆ ಬಂದು ಶುಕನನ್ನು ನೀರಿನಿಂದ ತೃಪ್ತಿಗೊಳಿಸಿದಳು. (ಹುಟ್ಟಿದ ಮಗುವನ್ನು ನೀರಿನಿಂದ ತೊಳೆ ದಳು.) ಮಹಾತ್ಮನಾದ ಶುಕನ ಸಲುವಾಗಿ ಅಂತರಿಕ್ಷದಿಂದ ದಂಡ-ಕೃಷ್ಣಾಜಿನ ಗಳು ಭೂಮಿಯ ಮೇಲೆ ಬಿದ್ದುವು. ಶುಕನು ಹುಟ್ಟಿದ ಆ ಸಮಯದಲ್ಲಿ ಗಂಧರ್ವರು ಗಾಯನಮಾಡುತ್ತಿದ್ದರು. ಅಪ್ಸರೆಯರು ನರ್ತನಮಾಡುತ್ತಿ ದ್ದರು. ಮಹಾಶಬ್ದವನ್ನುಂಟುಮಾಡುವ ದೇವದುಂದುಭಿಗಳು ಮೊಳಗಿ ದುವು. ಗಂಧರ್ವರಾಜನಾದ ವಿಶ್ವಾವಸು, ತುಂಬುರು- ನಾರದರು, ಹಾಹಾ- ಹೂಹೂ ಎಂಬ ಗಂಧರ್ವಯುಗ್ಮರು–ಇವರೆಲ್ಲರೂ ಶುಕನ ಜನ್ಮೋತ್ಸವ ವನ್ನು ನಾನಾಪ್ರಕಾರವಾದ ಸ್ತೋತ್ರಗಳಿಂದ ಕೊಂಡಾಡಿದರು. ಶುಕನಿದ್ದ ಮೇರುಪರ್ವತದ ಶಿಖರಕ್ಕೆ ಇಂದ್ರನೇ ಮೊದಲಾದ ಲೋಕಪಾಲರೂ, ದೇವತೆಗಳೂ, ದೇವರ್ಷಿಗಳೂ, ಬ್ರಹ್ಮರ್ಷಿಗಳೂ ಆಗಮಿಸಿದರು. ವಾಯುವು ದಿವ್ಯವಾದ ಸಕಲವಿಧವಾದ ಪುಷ್ಪಗಳನ್ನೂ ಶುಕನ ಮೇಲೆ ಸುರಿಸಿದನು. ಶುಕನು ಹುಟ್ಟಿದುದರಿಂದಾಗಿ ಚರಾಚರಸಹಿತವಾದ ಸಕಲ ಜಗತ್ತೂ ಪ್ರಹೃಷ್ಟವಾಯಿತು. ಎಲ್ಲರೂ ಆನಂದಭರಿತರಾದರು. ಮಹಾ ದ್ಯುತಿಮಂತನಾದ, ಮಹಾತ್ಮನಾದ ಮಹಾದೇವನು ಪಾರ್ವತೀದೇವಿ ಯೊಡನೆ ಅಲ್ಲಿಗೆ ಆಗಮಿಸಿ ಆಗ ತಾನೇ ಹುಟ್ಟಿದ್ದ ವ್ಯಾಸರ ಮಗನನ್ನು ಪ್ರೀತಿ ಪೂರ್ವಕವಾಗಿ ಎತ್ತಿಕೊಂಡು ವಿಧಿಪೂರ್ವಕವಾಗಿ ತಾನೇ ಅವನಿಗೆ ಉಪ ನಯನಸಂಸ್ಕಾರವನ್ನು ಮಾಡಿದನು. ದೇವೇಶ್ವರನಾದ ಇಂದ್ರನು ಶುಕನಿಗೆ ದಿವ್ಯವಾದ ಮತ್ತು ಅದ್ಭುತವಾಗಿ ಕಾಣುತ್ತಿದ್ದ ಕಮಂಡಲುವನ್ನೂ,

ದೇವೋಚಿತವಾದ ವಸ್ತ್ರಗಳನ್ನೂ ಪ್ರೀತಿಪೂರ್ವಕವಾಗಿ ಕೊಟ್ಟನು. ಸಾವಿರಾರು ಹಂಸಗಳೂ, ಶತಪತ್ರಪಕ್ಷಿಗಳೂ, ಸಾರಸಪಕ್ಷಿಗಳೂ, ಗಿಣಿಗಳೂ, ಹಂಗನಹಕ್ಕಿಗಳೂ ಶುಕನಿಗೆ ಪ್ರದಕ್ಷಿಣೆಮಾಡಿದುವು.



ಹೀಗೆ ಅರಣಿಸಂಭೂತನಾದ, ಮೇಧಾವಿಯಾದ, ಮಹಾದ್ಯುತಿಮಂತನಾದ ಶುಕನು ದಿವ್ಯವಾದ ಜನ್ಮವನ್ನು ಪಡೆದು ಮೇರುಪರ್ವತದ ತಪ್ಪಲಿನಲ್ಲಿಯೇ ಏಕಾಗ್ರಚಿತ್ತನಾಗಿ ವ್ರತಾನುಷ್ಠಾನಗಳನ್ನು ಮಾಡುತ್ತಾ ಇದ್ದುಬಿಟ್ಟನು. ರಹಸ್ಯಯುಕ್ತವಾದ, ಸಂಗ್ರಹಯುಕ್ತವಾದ ವೇದಗಳು ತಂದೆಯವರಾದ ವೇದವ್ಯಾಸರನ್ನು ಸೇವಿಸಿದಂತೆಯೇ–ರಹಸ್ಯಯುಕ್ತವಾದ ಮತ್ತು

ಸಂಗ್ರಹಯುಕ್ತವಾದ ವೇದಗಳು ಹುಟ್ಟಿದೊಡನೆಯೇ ಶುಕನನ್ನೂ ಸೇವಿಸತೊಡಗಿದುವು. (ಹುಟ್ಟಿದೊಡನೆಯೇ ಶುಕನು ವೇದ-ವೇದಾಂಗ ಪಾರಂಗತನಾದನು.) ವೇದ-ವೇದಾಂಗಗಳನ್ನು ಭಾಷ್ಯಸಹಿತವಾಗಿ ತಿಳಿದು ಕೊಂಡಿದ್ದ ಶುಕನು ಧರ್ಮವನ್ನೇ ಚಿಂತಿಸುತ್ತಾ ತನಗೆ ತಿಳಿದಿದ್ದುದನ್ನು ಗುರುವಿನ ಮೂಲಕ ದೃಢಪಡಿಸಿಕೊಳ್ಳುವ ಸಲುವಾಗಿ ದೇವಗುರುವಾದ ಬೃಹಸ್ಪತಿಯನ್ನು ಉಪಾಧ್ಯಾಯನನ್ನಾಗಿ ಮಾಡಿಕೊಂಡನು. ಮಹಾಮುನಿಯಾದ ಶುಕನು ಬೃಹಸ್ಪತಿಯಿಂದ ರಹಸ್ಯಯುಕ್ತವಾದ, ಸಂಗ್ರಹಯುಕ್ತವಾದ ಸಕಲವೇದ ಗಳನ್ನೂ, ಇತಿಹಾಸ-ಪುರಾಣಗಳನ್ನೂ, ಸಮಗ್ರವಾದ ರಾಜಶಾಸ್ತ್ರಗಳನ್ನೂ ಅಧ್ಯಯನಮಾಡಿ, ಗುರುದಕ್ಷಿಣೆಯನ್ನೂ ಸಮರ್ಪಿಸಿ ತನ್ನ ಆಶ್ರಮಕ್ಕೆ ಹಿಂದಿರುಗಿದನು.

ಬ್ರಹ್ಮಚಾರಿಯಾದ ಶುಕನು ಏಕಾಗ್ರಚಿತ್ತನಾಗಿ ಉಗ್ರವಾದ ತಪಸ್ಸನ್ನು ಮಾಡಲು ಉಪಕ್ರಮಿಸಿದನು. ಮಹಾತಪಸ್ವಿಯಾಗಿದ್ದ ಶುಕನು ಜ್ಞಾನ ದಿಂದಲೂ ಮತ್ತು ತಪಸ್ಸಿನಿಂದಲೂ ದೇವತೆಗಳಿಗೂ ಮತ್ತು ಋಷಿಗಳಿಗೂ ಬಾಲ್ಯದಲ್ಲಿಯೇ ಮಾನ್ಯನಾಗಿದ್ದನು. ಸಮಯಗಳಲ್ಲಿ ದೇವರ್ಷಿಗಳಿಗೆ ಸಲಹೆಗಳನ್ನು ಕೊಡುವ ದಿವ್ಯಜ್ಞಾನವೂ ಶುಕನಿಗಿದ್ದಿತು. ಮೋಕ್ಷಧರ್ಮ ದಲ್ಲಿಯೇ ನೆಟ್ಟದೃಷ್ಟಿಯುಳ್ಳವನಾಗಿದ್ದ ಶುಕನ ಬುದ್ಧಿಯು ಗೃಹಸ್ಥಾಶ್ರಮವನ್ನೇ ಅವಲಂಬಿಸಿರುವ ಗೃಹಸ್ಥ-ವಾನಪ್ರಸ್ಥ-ಸಂನ್ಯಾಸಾಶ್ರಮಗಳಲ್ಲಿ ಆಸಕ್ತ ವಾಗಲಿಲ್ಲ."

ಙ೨೪ನೆಯ ಅಧ್ಯಾಯವು ಮುಗಿಯಿತು.

ಙ೨೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವ್ಯಾಸರ ಆಜ್ಞೆಯಂತೆ ಮಿಥಿಲಾಪಟ್ಟಣಕ್ಕೆ ಶುಕನ ಆಗಮನ: ಮಂತ್ರಿಯೇ ಮೊದಲಾದವರಿಂದ ಸತ್ಕಾರ

ಮಹಾರಾಜ! ಭೀಷ್ಮನು ಹೇಳುತ್ತಾನೆ :

ಸ ಮೋಕ್ಷಮನುಚಿನ್ತ್ಯೈವ ಶುಕಃ ಪಿತರಮಭ್ಯಗಾತ್ ।
ಪ್ರಾಹಾಭಿವಾದ್ಯ ಚ ಗುರುಂ ಶ್ರೇಯೋಽರ್ಥೀ ವಿನಯಾನ್ವಿತಃ ॥೧॥

“ಯುಧಿಷ್ಠಿರ! ಶುಕನು ಮೋಕ್ಷದ ವಿಷಯವನ್ನು ಕುರಿತು ಯೋಚಿಸುತ್ತಲೇ ತಂದೆಯ ಬಳಿಗೆ ಹೋದನು. ಶ್ರೇಯೋಭಿಲಾಷಿಯಾದ, ವಿನಯಶೀಲನಾದ ಶುಕನು ತಂದೆಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಹೇಳಿದನು :

“ಪ್ರಭುವೇ! ನೀನು ಮೋಕ್ಷಧರ್ಮದಲ್ಲಿ ಕುಶಲನಾಗಿರುವೆ. ನನ್ನ ಮನಸ್ಸಿಗೆ ಪರಮಶಾಂತಿಯುಂಟಾಗುವ ರೀತಿಯಲ್ಲಿ ನನಗೆ ಉಪದೇಶಿಸು.”

ಯುಧಿಷ್ಠಿರ! ಮಗನು ಹೇಳಿದ ಈ ಮಾತನ್ನು ಕೇಳಿ ಪರಮರ್ಷಿಗಳಾದ ವ್ಯಾಸರು ಹೇಳಿದರು : “ಮಗು! ನೀನು ಮೋಕ್ಷಶಾಸ್ತ್ರವನ್ನೂ, ನಾನಾವಿಧವಾದ ಇತರ ಧರ್ಮಗ್ರಂಥಗಳನ್ನೂ ಅಧ್ಯಯನಮಾಡು.”

ಯುಧಿಷ್ಠಿರ! ತಂದೆಯ ಈ ಆದೇಶದಂತೆ ಧರ್ಮಾತ್ಮರಲ್ಲಿ ಶ್ರೇಷ್ಠನಾದ ಶುಕನು ಸಮಗ್ರವಾದ ಯೋಗಶಾಸ್ತ್ರವನ್ನು ಅಧ್ಯಯನಮಾಡಿದನು. ಯೋಗ-ಸಾಂಖ್ಯಶಾಸ್ತ್ರಗಳನ್ನು ಸಂಪೂರ್ಣವಾಗಿ ಅಧ್ಯಯನಮಾಡಿಬಂದ, ಬ್ರಹ್ಮತೇಜಸ್ಸಿನಿಂದ ಸಂಪನ್ನನಾಗಿದ್ದ, ಬ್ರಹ್ಮನ ಪರಾಕ್ರಮಕ್ಕೆ ಸಮಾನವಾದ ಪರಾಕ್ರಮವನ್ನು ಹೊಂದಿದ್ದ (ಸಕಲವಿದ್ಯಾಪಾರಂಗತನಾಗಿದ್ದ) ಮಗನನ್ನು ನೋಡಿ–ತಮ್ಮ ಪುತ್ರನು ಮೋಕ್ಷಧರ್ಮವಿಶಾರದನಾಗಿಯೂ ಇರುವನೆಂದು ವ್ಯಾಸರು ಭಾವಿಸಿದರು. ಬಳಿಕ ಮಗನನ್ನು ಪುನಃ ಕರೆದು ಹೇಳಿದರು :

“ಮಗು! ಮಿಥಿಲೇಶ್ವರನಾದ ಜನಕನ ಬಳಿಗೆ ಹೋಗು. ಅವನು ನಿನಗೆ ಸಂಪೂರ್ಣವಾಗಿ ಮೋಕ್ಷಶಾಸ್ತ್ರದ ಸಿದ್ಧಾಂತವನ್ನು ಹೇಳುತ್ತಾನೆ.”

ಕೌಂತೇಯ! ತಂದೆಯ ಆದೇಶದಂತೆ ಶುಕನು ಧರ್ಮದ ನಿಶ್ಚಯ ವೇನೆಂಬುದನ್ನು ಕೇಳುವುದಕ್ಕೂ ಮತ್ತು ಮೋಕ್ಷದ ಪರಮಸಿದ್ಧಾಂತವನ್ನು ಕೇಳುವುದಕ್ಕೂ ಮಿಥಿಲಾಪಟ್ಟಣಕ್ಕೆ ಹೋದನು. ಮಗನು ಹೊರಡುವ ಸಮಯದಲ್ಲಿ ವ್ಯಾಸರು ಅವನೊಡನೆ ಹೇಳಿದರು :

“ಶುಕ! ನೀನು ಮಿಥಿಲಾಪಟ್ಟಣಕ್ಕೆ ಪ್ರಯಾಣಮಾಡುವಾಗ ಅಹಂಕಾರರಹಿತನಾಗಿ ಮನುಷ್ಯರು ಸಂಚರಿಸುವ ಮಾರ್ಗವನ್ನೇ ಹಿಡಿದು

ಹೋಗು. ಯೋಗದ ಪ್ರಭಾವವನ್ನು ಆಶ್ರಯಿಸಿ ಅಂತರಿಕ್ಷಮಾರ್ಗದ ಮೂಲಕವಾಗಿ ಅಲ್ಲಿಗೆ ಹೋಗಬಾರದು.

ಆರ್ಜವೇಣೈವ ಗನ್ತವ್ಯಂ ನ ಸುಖಾನ್ವೇಷಿಣಾ ತಥಾ ।
ನಾನ್ವೇಷ್ಟವ್ಯಾ ವಿಶೇಷಾಸ್ತು ವಿಶೇಷಾ ಹಿ ಪ್ರಸಜ್ಗಿನಃ ॥೯॥

ವಿನಮ್ರನಾಗಿಯೇ ನೀನು ಅಲ್ಲಿಗೆ ಹೋಗಬೇಕು. ಸುಖವನ್ನು ಅರಸಿ ಕೊಂಡು ಹೋಗಬಾರದು. ವಿಶೇಷವಾದ ಸ್ಥಾನ-ಮಾನಗಳನ್ನು ಹುಡುಕಿ ಕೊಂಡು ಹೋಗಬಾರದು. ಏಕೆಂದರೆ : ವಿಶೇಷವಾದ ಸ್ಥಾನ-ಮಾನಗಳನ್ನು ಅಪೇಕ್ಷಿಸುವುದರಿಂದ ಅವುಗಳಲ್ಲಿ ಹೆಚ್ಚಿನ ಆಸಕ್ತಿಯುಂಟಾಗುತ್ತದೆ.

ಅಹಂಕಾರೋ ನ ಕರ್ತವ್ಯೋ ಯಾಜ್ಯೇ ತಸ್ಮಿನ್ನರಾಧಿಪೇ ।
ಸ್ಥಾತವ್ಯಂ ಚ ವಶೇ ತಸ್ಯ ಸ ತೇ ಛೇತ್ಸ್ಯತಿ ಸಂಶಯಮ್ ॥೧೦॥

ಯಾಜ್ಯನಾದ ಜನಕನ ಮುಂದೆ ಅಹಂಕಾರವನ್ನು ಪ್ರದರ್ಶಿಸಬಾರದು. ಸರ್ವಪ್ರಕಾರದಿಂದಲೂ ಅವನ ಆಜ್ಞೆಗೆ ಒಳಪಟ್ಟಿರಬೇಕು. ಅವನು ನಿನ್ನ ಎಲ್ಲ ಸಂಶಯಗಳನ್ನೂ ನಿವಾರಿಸುತ್ತಾನೆ.

ಸ ಧರ್ಮಕುಶಲೋ ರಾಜಾ ಮೋಕ್ಷಶಾಸ್ತ್ರವಿಶಾರದಃ ।
ಯಾಜ್ಯೋ ಮಮ ಸ ಯದ್ಬ್ರೂಯಾತ್ತತ್ಕಾರ್ಯಮವಿಶಜ್ಕಯಾ ॥೧೧॥

ನನ್ನ ಯಾಜ್ಯನಾದ ಜನಕನು–ಧರ್ಮದಲ್ಲಿ ನಿಪುಣನು. ಮೋಕ್ಷಶಾಸ್ತ್ರ ವಿಶಾರದನು. ಅವನು ನಿನಗೆ ಯಾವ ಕಾರ್ಯವನ್ನು ಹೇಳುವನೋ–ಆ ಕಾರ್ಯವನ್ನು ನೀನು ಸ್ವಲ್ಪವೂ ಸಂದೇಹಿಸದೇ ಮಾಡಬೇಕು.”

ಯುಧಿಷ್ಠಿರ! ತಂದೆಯಿಂದ ಹೀಗೆ ಆಜ್ಞಪ್ತನಾದ ಶುಕನು, ತನಗೆ ಸಾಗರಯುಕ್ತವಾದ ಭೂಮಂಡಲವನ್ನೂ ಯೋಗಬಲದಿಂದ ಅಂತರಿಕ್ಷದ ಮೂಲಕವಾಗಿಯೇ ದಾಟುವ ಸಾಮರ್ಥ್ಯವಿದ್ದರೂ–ತಂದೆಯ ಮಾತಿನಂತೆ ಕಾಲ್ನಡಿಗೆಯಲ್ಲಿಯೇ ಮಿಥಿಲಾಪಟ್ಟಣಕ್ಕೆ ಪ್ರಯಾಣಮಾಡಿದನು.

ಮಾರ್ಗದಲ್ಲಿ ಶುಕನು ಅನೇಕ ಪರ್ವತ-ನದೀ-ತೀರ್ಥಗಳನ್ನೂ,

ಸರಸ್ಸುಗಳನ್ನೂ, ಸರ್ಪವೇ ಮೊದಲಾದ ಅನೇಕ ವಿಷಜಂತುಗಳಿಂದಲೂ–ವನ್ಯಪ್ರಾಣಿಗಳಿಂದಲೂ ವ್ಯಾಪ್ತವಾಗಿದ್ದ ಕಾಡುಗಳನ್ನೂ ಮತ್ತು ವನಗಳನ್ನೂ ದಾಟಿ ಅನುಕ್ರಮವಾಗಿ ಮೇರುವರ್ಷವನ್ನೂ (ಇಲಾವೃತವರ್ಷವನ್ನೂ), ಹರಿವರ್ಷವನ್ನೂ, ಹೈಮವತವರ್ಷವನ್ನೂ (ಕಿಂಪುರುಷವರ್ಷವನ್ನೂ) ಅತಿಕ್ರಮಿಸಿ ಭಾರತವರ್ಷಕ್ಕೆ ಆಗಮಿಸಿದನು. ಮಹಾಮುನಿಯಾದ ಶುಕನು ಚೀನ-ಹೂಣರೇ ಮೊದಲಾದವರು ವಾಸಿಸುತ್ತಿದ್ದ ವಿವಿಧದೇಶಗಳನ್ನೂ ಸಂದರ್ಶಿಸುತ್ತಾ ಈ ಆರ್ಯಾವರ್ತ ಅಥವಾ ಭಾರತವರ್ಷಕ್ಕೆ ಆಗಮಿಸಿದನು. ತಂದೆಯ ಅಪ್ಪಣೆಯಂತೆ ನಡೆದುಕೊಳ್ಳುತ್ತಾ ಮತ್ತು ಅವರ ಆದೇಶವನ್ನೇ ಪುನಃ ಪುನಃ ಸ್ಮರಿಸಿಕೊಳ್ಳುತ್ತಾ –ಪಕ್ಷಿಯು ಆಕಾಶಮಾರ್ಗದಲ್ಲಿ ಸಂಚರಿಸುವಂತೆ –ಭೂಮಿಯ ಮೇಲೆ ನಡೆದುಹೋಗುತ್ತಿದ್ದನು. ಹೋಗುತ್ತಿರುವಾಗ ಮಾರ್ಗದಲ್ಲಿ ರಮ್ಯವಾದ ಪಟ್ಟಣಗಳನ್ನೂ, ಧನ-ಧಾನ್ಯಗಳಿಂದ ಸಮೃದ್ಧವಾದ ನಗರಗಳನ್ನೂ, ವಿಚಿತ್ರವಾದ ರತ್ನಗಳನ್ನೂ ನೋಡುತ್ತಿದ್ದರೂ ಅವುಗಳಾವುವೂ ಕಣ್ಣುಗಳಿಗೆ ಕಾಣಲೇ ಇಲ್ಲವೋ ಎಂಬ ರೀತಿಯಲ್ಲಿಯೇ ಅವುಗಳ ಕಡೆಗೆ ಸ್ವಲ್ಪವಾದರೂ ಗಮನವನ್ನು ಹರಿಸದೇ ಮುಂದೆ-ಮುಂದೆ ಹೋಗುತ್ತಿದ್ದನು. ಪಥಿಕನಾದ ಶುಕನು ರಮ್ಯವಾದ ಉದ್ಯಾನವನಗಳನ್ನೂ, ಸುಂದರವಾದ ಸೌಧಗಳನ್ನೂ, ಅನೇಕಪುಣ್ಯತೀರ್ಥಗಳನ್ನೂ ಅತಿಕ್ರಮಿಸಿ ಮುಂದೆಹೋದನು.

ಹೀಗೆಯೇ ಪ್ರಯಾಣಮಾಡುತ್ತಾ ಶುಕನು ಅತ್ಯಲ್ಪಕಾಲದಲ್ಲಿಯೇ ಮಹಾತ್ಮನಾದ, ಧರ್ಮಪ್ರಭುವಾದ ಜನಕನಿಂದ ಪರಿಪಾಲಿಸಲ್ಪಡುತ್ತಿದ್ದ ವಿದೇಹರಾಜ್ಯಗಳನ್ನು ತಲುಪಿದನು. ಅನ್ನ-ಪಾನಗಳಿಂದಲೂ–ನಾನಾಪ್ರಕಾರವಾದ ಖಾದ್ಯವಸ್ತುಗಳಿಂದಲೂ ಸಮೃದ್ಧವಾಗಿದ್ದ ವಿದೇಹನ ರಾಜ್ಯದಲ್ಲಿದ್ದ ಅನೇಕಗ್ರಾಮಗಳನ್ನೂ, ಧನ-ಧಾನ್ಯಗಳಿಂದ ಸಮೃದ್ಧವಾಗಿದ್ದ ಹಳ್ಳಿಗಳನ್ನೂ, ಅಸಂಖ್ಯಾತವಾದ ಗೋವುಗಳ ಸಮೂಹಗಳಿಂದ ತುಂಬಿಹೋಗಿದ್ದ ಗೊಲ್ಲರ ಹಳ್ಳಿಗಳನ್ನೂ ನೋಡುತ್ತಾ ಶುಕನು ಮುಂದೆ ನಡೆದನು. ಭತ್ತ ಮತ್ತು ಹಸುಗಳು ತಿನ್ನುವ ಹುಲ್ಲುಗಳಿಂದ ತುಂಬಿಹೋಗಿದ್ದ ಗದ್ದೆಗಳನ್ನೂ, ಹಾಗೆಯೇ ಹಂಸ-ಸಾರಸಪಕ್ಷಿಗಳಿಂದ ಸೇವಿಸಲ್ಪಡುತ್ತಿದ್ದ, ಕಾಂತಿಯುಕ್ತವಾಗಿದ್ದ, ಕಮಲಗಳಿಂದ ಸಮಲಂಕೃತವಾಗಿದ್ದ ನೂರಾರು ಸರೋವರ

ಗಳನ್ನೂ ನೋಡುತ್ತಾ ಮುಂದೆ ನಡೆದನು. ಹೀಗೆ ಸಮೃದ್ಧವಾದ ಧನ-ಧಾನ್ಯಾದಿಗಳನ್ನು ಹೊಂದಿರುವ ಜನರು ವಾಸಿಸುತ್ತಿದ್ದ ವಿದೇಹದೇಶ ಗಳಲ್ಲಿ ಮುಂದೆ-ಮುಂದೆ ಹೋಗುತ್ತಾ ಕಡೆಗೆ ಸಕಲವಿಧವಾದ ವಸ್ತು ಗಳಿಂದಲೂ ಸಮೃದ್ಧವಾಗಿದ್ದ, ಬಹುರಮ್ಯವಾಗಿದ್ದ ಮಿಥಿಲಾಪಟ್ಟಣದ ಉಪವನವನ್ನು ಸೇರಿದನು. ಅಚ್ಯುತನಾದ ಶುಕನು ಆನೆಗಳಿಂದಲೂ, ಕುದುರೆಗಳಿಂದಲೂ, ರಥಗಳಿಂದಲೂ ವ್ಯಾಪ್ತವಾಗಿದ್ದ, ನರ-ನಾರಿಯರಿಂದ ತುಂಬಿಹೋಗಿದ್ದ, ಸುಂದರವಾಗಿದ್ದ ಆ ಉಪವನವನ್ನು ಕೂಡ ನೋಡಿಯೂ ನೋಡದಂತೆ ಅದನ್ನೂ ಅತಿಕ್ರಮಿಸಿ ಮುಂದೆ ನಡೆದನು. ತಿಳಿಯಬೇಕಾದ ವಿಷಯದ ಭಾರವನ್ನೇ ಮನಸ್ಸಿನಿಂದ ಹೊತ್ತುಕೊಂಡು ಅದರ ಅಂತರಾರ್ಥವೇನೆಂಬುದನ್ನೇ ಮನಸ್ಸಿನಲ್ಲಿ ವಿಚಾರಮಾಡುತ್ತಾ ಆತ್ಮಾರಾಮನಾದ ಶುಕನು ಪ್ರಸನ್ನಾತ್ಮನಾಗಿ ಮಿಥಿಲಾಪಟ್ಟಣವನ್ನು ಸೇರಿದನು. ಶುಕನು ಮಿಥಿಲಾಪಟ್ಟಣದ ಹೆಬ್ಬಾಗಿಲಿಗೆ ಬಂದು ಯಾವ ವಿಧವಾದ ಶಂಕೆಯೂ ಇಲ್ಲದೇ ಒಳಕ್ಕೆ ಪ್ರವೇಶಿಸಿದನು. ಆದರೆ ಅಲ್ಲಿದ್ದ ದ್ವಾರಪಾಲಕರು ತಮ್ಮ ಅನುಮತಿಯೇ ಇಲ್ಲದೇ ಒಳಕ್ಕೆ ಹೋಗುತ್ತಿದ್ದ ಶುಕನನ್ನು ಕಠಿನವಾದ ಮಾತುಗಳಿಂದ ಮುಂದಕ್ಕೆ ಹೋಗದಂತೆ ತಡೆದು ನಿಲ್ಲಿಸಿದರು. ದ್ವಾರಪಾಲಕರು ಕಠಿನವಾದ ಮಾತುಗಳನ್ನಾಡುತ್ತಿದ್ದರೂ ಸ್ವಲ್ಪವಾದರೂ ಕೋಪಿಸಿಕೊಳ್ಳದೇ ಶುಕನು ಅಲ್ಲಿಯೇ ನಿಂತುಬಿಟ್ಟನು. ಅವನಿಗೆ ಆ ಸಮಯದಲ್ಲಿ ಯಾವ ವಿಧವಾದ ಮಾರ್ಗಾಯಾಸವಾಗಲೀ ಇರಲಿಲ್ಲ. ಸೂರ್ಯನ ತಾಪವು ಹೆಚ್ಚಾಗಿದ್ದರೂ ಅವನಿಗೆ ಅದರಿಂದ ಆಯಾಸವಾಗಿರ ಲಿಲ್ಲ. ಹಸಿವು-ಬಾಯಾರಿಕೆಗಳ ಬಳಲಿಕೆಯಿಂದ ಕೂಡಿದ್ದರೂ ಬಿಸಿಲಿನ ಬೇಗೆಯಿಂದಾಗಿ ಶುಕನಿಗೆ ಪರಿತಾಪವಾಗಲೀ, ಆಯಾಸವಾಗಲೀ ಉಂಟಾಗ ಲಿಲ್ಲ. ಬಿಸಿಲಿನ ಬೇಗೆಯನ್ನು ತಪ್ಪಿಸಿಕೊಳ್ಳಲು ಅವನು ಅಲ್ಲಿಂದ ಚಲಿಸಲೂ ಇಲ್ಲ. ಆದರೆ ಅವನ ಸ್ಥಿತಿಯನ್ನು ನೋಡಿ ಆ ದ್ವಾರಪಾಲಕರ ಸಮುದಾಯ ದಲ್ಲಿ ಒಬ್ಬನಿಗೆ ಮಾತ್ರ ದುಃಖವಾಯಿತು. ಮಧ್ಯಾಹ್ನದ ಸೂರ್ಯನಂತೆಯೇ ತೇಜಸ್ಸಿನಿಂದ ಜಾಜ್ವಲ್ಯಮಾನನಾಗಿ ಕಾಣುತ್ತಿದ್ದ ಶುಕದೇವನು ಯಾವ ಮಾತನ್ನೂ ಆಡದೇ ನಿಂತಿರುವುದನ್ನು ನೋಡಿ ಆ ದ್ವಾರಪಾಲಕನು

ಬದ್ಧಾಂಜಲಿಯಾಗಿ ಅಭಿವಾದನಮಾಡಿ ಯಥಾವಿಧಿಯಾಗಿ ಸಂಪೂಜಿಸಿ ರಾಜನ ಅರಮನೆಯ ಎರಡನೆಯ ಆವರಣಕ್ಕೆ ಕಳುಹಿಸಿಕೊಟ್ಟನು.



ನೆಳಲನ್ನೂ ಮತ್ತು ಬಿಸಿಲನ್ನೂ ಸಮವಾಗಿ ಭಾವಿಸಿದ್ದ, ಮಹಾ ಕಾಂತಿಯುಕ್ತನಾಗಿದ್ದ ಶುಕದೇವನು ಎರಡನೆಯ ಆವರಣದಲ್ಲಿದ್ದ ಒಂದು ಜಗುಲಿಯ ಮೇಲೆ ಕುಳಿತು ಮೋಕ್ಷದ ವಿಷಯವನ್ನೇ ಚಿಂತಿಸುತ್ತಿದ್ದನು. ಸ್ವಲ್ಪ ಹೊತ್ತಿನಲ್ಲಿಯೇ ರಾಜನ ಮಂತ್ರಿಯು ಬದ್ಧಾಂಜಲಿಯಾಗಿ ಶುಕನ ಬಳಿಗೆ ಬಂದು ಅವನನ್ನು ರಾಜನ ಅರಮನೆಯ ಮೂರನೆಯ ಆವರಣಕ್ಕೆ ಕರೆದೊಯ್ದನು. ಆ ಮೂರನೆಯ ಆವರಣದಲ್ಲಿ ಅಂತಃಪುರಕ್ಕೆ ಸಂಬಂಧಿಸಿದಂತೆ

ಸುಂದರವಾದ ಮತ್ತು ವಿಶಾಲವಾದ ಪ್ರಮದೆಯರ ಉದ್ಯಾನವನವಿದ್ದಿತು. ಆ ಉದ್ಯಾನವನವು ಕುಬೇರನ ಉದ್ಯಾನವನವಾದ ಚೈತ್ರರಥಕ್ಕೆ ಸಮಾನ ವಾಗಿದ್ದಿತು. ಅಲ್ಲಿ ಪ್ರತ್ಯೇಕ-ಪ್ರತ್ಯೇಕವಾಗಿ ಜಲಕ್ರೀಡೆಯಾಡಲು ಸುಂದರ ವಾದ ಜಲಾಶಯಗಳಿದ್ದುವು. ಆ ಉದ್ಯಾನವನದಲ್ಲಿ ಹೂಗಳಿಂದ ಸಮ ಲಂಕೃತವಾಗಿದ್ದ, ರಮ್ಯವಾಗಿದ್ದ ಅನೇಕವೃಕ್ಷಗಳಿದ್ದುವು. ರಾಜನ ಮಂತ್ರಿಯು ಅಂತಹ ಪ್ರಮದಾವನಕ್ಕೆ ಶುಕನನ್ನು ಕರೆದೊಯ್ದನು. ಕುಳಿತುಕೊಳ್ಳಲು ಶುಕನಿಗೆ ಆಸನವನ್ನಿತ್ತು ಮಂತ್ರಿಯು ಹೊರಟುಹೋದನು. ಮಂತ್ರಿಯು ಹೊರಟುಹೋದೊಡನೆಯೇ ಐದು ನೂರು ವಾರಾಂಗನೆಯರು ಶುಕನ ಬಳಿಗೆ ಧಾವಿಸಿ ಬಂದರು. ಅವರೆಲ್ಲರೂ ಸುಂದರವಾದ ವೇಷ-ಭೂಷಣಗಳನ್ನು ಧರಿಸಿದ್ದರು. ಸುಂದರವಾದ ನಿತಂಬವುಳ್ಳವರಾಗಿದ್ದರು. ತರುಣಿ ಯರಾಗಿದ್ದರು. ಪ್ರಿಯವಾದ ದರ್ಶನಸುಖವನ್ನು ಉಂಟುಮಾಡುವವರಾಗಿ ದ್ದರು. ನವಿರಾದ ಕೆಂಪು ಸೀರೆಗಳನ್ನುಟ್ಟಿದ್ದರು. ಪುಟಕ್ಕೆ ಹಾಕಿದ ಚಿನ್ನದ ಆಭರಣಗಳನ್ನು ತೊಟ್ಟಿದ್ದರು. ಸರಸ-ಸಲ್ಲಾಪಗಳಲ್ಲಿ ಅತ್ಯಂತಕುಶಲೆಯ ರಾಗಿದ್ದರು. ನೃತ್ಯ-ಗೀತಗಳಲ್ಲಿ ಪ್ರವೀಣೆಯರಾಗಿದ್ದರು. ಇತರರೊಡನೆ ಮಂದಹಾಸವನ್ನು ಬೀರುತ್ತಾ ಮಾತನಾಡುವವರಾಗಿದ್ದರು. ರೂಪದಲ್ಲಿ ಅಪ್ಸರೆಯರಿಗೆ ಸಮಾನರಾಗಿದ್ದರು. ಕಾಮಪ್ರಚೋದನೆಯಾಗುವಂತೆ ಉಪ ಚರಿಸುವುದರಲ್ಲಿ ಅತ್ಯಂತಕುಶಲೆಯರಾಗಿದ್ದರು. ಇತರರ ಮನಸ್ಸಿನ ಇಂಗಿತ ವನ್ನು ತಿಳಿಯುವವರಾಗಿದ್ದರು. ಸಕಲಕಲೆಗಳನ್ನೂ ತಿಳಿದವರಾಗಿದ್ದರು. ಅಂತಹ ಐದು ನೂರು ಮಂದಿ ವೇಶ್ಯೆಯರು ಶುಕದೇವನ ಸುತ್ತಲೂ ಗುಂಪುಗೂಡಿದರು. ಅವರೆಲ್ಲರೂ ಸೇರಿ ಶುಕದೇವನಿಗೆ ಅರ್ಘ್ಯ-ಪಾದ್ಯಾದಿ ಗಳನ್ನಿತ್ತು ಶ್ರೇಷ್ಠವಾದ ಪೂಜೆಯಿಂದ ಅವನನ್ನು ಸಮ್ಮಾನಿಸಿದರು. ಆ ಕಾಲದಲ್ಲಿ ಲಭ್ಯವಾದ ರುಚಿಕರವಾದ ಭೋಜನದಿಂದ ತೃಪ್ತಿಪಡಿಸಿದರು. ಶುಕದೇವನಿಗೆ ಭೋಜನಮಾಡಿಸಿದ ನಂತರ ಆ ವೇಶ್ಯೆಯರು ಶುಕನನ್ನು ಜೊತೆಯಲ್ಲಿ ಕರೆದುಕೊಂಡು ಪ್ರಮದಾವನದ ಸುತ್ತಲೂ ತಿರುಗಾಡಿಸುತ್ತಾ ಅವನಿಗೆ ಅಲ್ಲಿದ್ದ ಎಲ್ಲ ವಸ್ತುಗಳನ್ನೂ ಒಂದೊಂದನ್ನಾಗಿ ತೋರಿಸಿದರು. ಉದಾರಸತ್ತ್ವನಾದ ಶುಭಚರಿತ್ರನಾದ ಶುಕದೇವನನ್ನು – ಅವನ ಸತ್ತ್ವ

ವೆಷ್ಟೆಂಬುದನ್ನು ತಿಳಿದಿದ್ದ ವಾರಾಂಗನೆಯರು-ಅನೇಕವಿಧವಾದ ಮನೋ ಲ್ಲಾಸಕರವಾದ ಆಟ-ಪಾಟಗಳನ್ನಾಡುತ್ತಾ, ಕಿಲ-ಕಿಲನೆ ನಗುತ್ತಾ, ಗಾಯನಮಾಡುತ್ತಾ ಉಪಚರಿಸುತ್ತಿದ್ದರು. ಆದರೆ ಅರಣಿಸಂಭವನಾದ, ಶುದ್ಧಾತ್ಮನಾದ, ಸಂಶಯರಹಿತನಾದ, ಕರ್ತವ್ಯಪಾಲನೆಯಲ್ಲಿ ನಿರತನಾಗಿದ್ದ,

ಇಂದ್ರಿಯಗಳನ್ನು ವಶಪಡಿಸಿಕೊಂಡಿದ್ದ, ಕ್ರೋಧವನ್ನು ಜಯಿಸಿದ್ದ ಶುಕನು ವೇಶ್ಯೆಯರ ಆಟ-ಪಾಟಗಳನ್ನೂ, ಕ್ರೀಡಾಹಸಿತಗಳನ್ನೂ ನೋಡಿ ಸಂತೋ ಷಿಸುತ್ತಲೂ ಇರಲಿಲ್ಲ ; ಕೋಪಗೊಳ್ಳುತ್ತಲೂ ಇರಲಿಲ್ಲ. ಆ ವಾರಾಂಗನೆ ಯರು ಆಟ-ಪಾಟಗಳನ್ನಾಡಿ ಮುಗಿಸಿದ ನಂತರ ಶುಕದೇವನಿಗೆ ದಿವ್ಯವಾದ,

ದೇವಾರ್ಹವಾದ, ರತ್ನಭೂಷಿತವಾದ ಬಹುಮೂಲ್ಯವಾದ ರತ್ನಗಂಬಳಿಯಿಂದ ಆಚ್ಛಾದಿತವಾಗಿದ್ದ ಹಾಸಿಗೆಯನ್ನು ಮಲಗಲು ಸಿದ್ಧಗೊಳಿಸಿದರು.

ಆದರೆ ಶುಕನು ಕೈ-ಕಾಲುಗಳನ್ನು ತೊಳೆದುಕೊಂಡು ಸಂಧ್ಯೋಪಾಸನೆಯನ್ನು ಮಾಡಿ ಶುಭಾಸನದಲ್ಲಿ ಕುಳಿತು ಮೋಕ್ಷದ ವಿಷಯವನ್ನೇ ಚಿಂತಿಸುತ್ತಿದ್ದನು. ಪ್ರಭುವಾದ, ಧೀಮಂತನಾದ ಶುಕನು ರಾತ್ರಿಯ ಮೊದಲನೆಯ ಯಾಮದಲ್ಲಿ ಧ್ಯಾನಪರಾಯಣನಾಗಿದ್ದು ಮಧ್ಯರಾತ್ರಿಯಲ್ಲಿ (ಎರಡನೆಯ ಮತ್ತು ಮೂರನೆಯ ಯಾಮಗಳಲ್ಲಿ) ಯಥೋಚಿತವಾಗಿ ನಿದ್ರಿಸಿದನು. ಶುಕನು ಬ್ರಾಹ್ಮಮುಹೂರ್ತದಲ್ಲಿ ಮೇಲೆದ್ದು ಶೌಚ-ಮುಖ ಮಾರ್ಜನ-ಸ್ನಾನ-ಸಂಧ್ಯಾದಿಗಳನ್ನು ಮುಗಿಸಿಕೊಂಡು ಸ್ತ್ರೀಯರಿಂದ ಪರಿವೃತನಾಗಿದ್ದರೂ ಧ್ಯಾನದಲ್ಲಿಯೇ ನಿಮಗ್ನನಾಗಿದ್ದನು. ಅಚ್ಯುತನಾದ, ವ್ಯಾಸರ ಪುತ್ರನಾದ ಶುಕನು ಈ ವಿಧಾನದಿಂದ ಹಗಲಿನ ಶೇಷವನ್ನೂ ಮತ್ತು ರಾತ್ರಿಯನ್ನೂ ರಾಜಭವನದಲ್ಲಿ ಕಳೆದನು."

೩೨೫ನೆಯ ಅಧ್ಯಾಯವು ಮುಗಿಯಿತು.

೩೨೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಜನಕರಾಜನಿಂದ ಶುಕನಿಗೆ ಸತ್ಕಾರ: ಜನಕನು ಶುಕನ ಪ್ರಶ್ನೆಗೆ ಉತ್ತರಿಸುತ್ತಾ ಬ್ರಹ್ಮಚರ್ಯಾಶ್ರಮದಲ್ಲಿ ಪರಮಾತ್ಮಪ್ರಾಪ್ತಿಯಾದ ಬಳಿಕ ಉಳಿದ ಮೂರು ಆಶ್ರಮಗಳ ಆವಶ್ಯಕತೆಯಿಲ್ಲವೆಂದು ಪ್ರತಿಪಾದಿಸಿ ಮುಕ್ತಪುರುಷನ ಲಕ್ಷಣಗಳನ್ನು ತಿಳಿಸಿದುದು

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಬಳಿಕ ಜನಕರಾಜನು ಪುರೋಹಿತರನ್ನೂ, ಅಂತಃಪುರದ ಸ್ತ್ರೀಯರನ್ನೂ ಮುಂದೆಮಾಡಿಕೊಂಡು ಆಸನವನ್ನೂ, ವಿಧ-ವಿಧವಾದ ಅನರ್ಘವಾದ ರತ್ನಗಳನ್ನೂ ತೆಗೆಸಿಕೊಂಡು ಅರ್ಘ್ಯಪಾತ್ರೆಯನ್ನು ತಲೆಯ ಮೇಲಿಟ್ಟುಕೊಂಡು ಮಂತ್ರಿಗಳೊಡನೆ ಗುರುಪುತ್ರನ ಬಳಿಗೆ ಹೋದನು. ಪುರೋಹಿತರಿಂದ ಸಂಗ್ರಹಿಸಲ್ಪಟ್ಟಿದ್ದ, ಅನೇಕರತ್ನಗಳಿಂದ ಸಮ

ಲಂಕೃತವಾಗಿದ್ದ, ಬಹುಮೂಲ್ಯವಾದ ರತ್ನಗಂಬಳಿಯಿಂದ ಆಚ್ಛಾದಿತವಾಗಿದ್ದ, ಪರಿಪೂರ್ಣವಾಗಿದ್ದ, ಸರ್ವತೋಭದ್ರವೆಂಬ ಪೂಜಾರ್ಹವಾದ ಆಸನವನ್ನು ರಾಜನು ಕೈಯಲ್ಲಿ ಹಿಡಿದುಕೊಂಡು ಗುರುಪುತ್ರನಾದ ಶುಕನಿಗೆ ಅರ್ಪಿಸಿದನು. ಸರ್ವತೋಭದ್ರಾಸನದಲ್ಲಿ ಕುಳಿತಿದ್ದ ಶುಕದೇವನನ್ನು ಜನಕನು ಶಾಸ್ತ್ರೋಕ್ತವಾಗಿ ಸತ್ಕರಿಸಿದನು. ಮೊದಲು ಪಾದ್ಯವನ್ನು ಅರ್ಪಿಸಿ, ಅನಂತರ ಅರ್ಘ್ಯವನ್ನೂ ಮತ್ತು ಗೋವನ್ನೂ ಶುಕನಿಗೆ ಸಮರ್ಪಿಸಿದನು. ದ್ವಿಜಶ್ರೇಷ್ಠನಾದ ಶುಕದೇವನು ಜನಕನಿಂದ ಅರ್ಪಿತವಾದ ಮಂತ್ರಪೂರ್ವಕವಾದ ಸತ್ಕಾರವನ್ನು ಯಥಾವಿಧಿಯಾಗಿ ಪ್ರತಿಗ್ರಹಿಸಿದನು. ಅನಂತರ ಮಹಾತೇಜಸ್ವಿಯಾದ ಶುಕನು ಗೋವನ್ನು ಬಿಟ್ಟುಬಿಡುವಂತೆ ಆಜ್ಞಾಪಿಸಿ ರಾಜನನ್ನು ಯಥೋಚಿತವಾಗಿ ಗೌರವಿಸಿ, ಅವನ ಅಕ್ಷಯವಾದ ಕುಶಲಸಮಾಚಾರವನ್ನು ಕೇಳಿದನು. ಬಳಿಕ ಶುಕನು ಅನುಯಾಯಿಗಳಿಂದ ಯುಕ್ತನಾದ ರಾಜನ ಕ್ಷೇಮಸಮಾಚಾರವನ್ನು ಕೇಳಿದನು. ಶುಕನ ಆದೇಶದಂತೆ ರಾಜನು ತನ್ನ ಅನುಚರರೊಡನೆ ಅಲ್ಲಿಯೇ ನೆಲದ ಮೇಲೆ ಕುಳಿತುಕೊಂಡನು. ಉದಾರಹೃದಯನಾದ, ಸತ್ಕುಲಪ್ರಸೂತನಾದ ರಾಜನು ಬದ್ಧಾಂಜಲಿಯಾಗಿ ಶುಕನನ್ನು ಕುರಿತು ಅಕ್ಷಯವಾದ ಕುಶಲಪ್ರಶ್ನೆಯನ್ನು ಮಾಡಿ ಅವನ ಆಗಮನದ ಕಾರಣವನ್ನು ಕೇಳಿದನು.”

ಶುಕನು ತನ್ನ ಆಗಮನಕ್ಕೆ ಕಾರಣವನ್ನು ಹೇಳತೊಡಗಿದನು :

“ಜನಕರಾಜ! ನಿನಗೆ ಮಂಗಳವಾಗಲಿ. ನನ್ನ ತಂದೆಯು ನನ್ನನ್ನು ಕುರಿತು ಹೀಗೆಂದು ಹೇಳಿ ನನ್ನನ್ನಿಲ್ಲಿಗೆ ಕಳುಹಿಸಿಕೊಟ್ಟಿದ್ದಾನೆ. ‘ವತ್ಸ! ಮೋಕ್ಷಧರ್ಮಾರ್ಥಕುಶಲನಾದ, ನನಗೆ ಯಾಜ್ಯನಾದ ಜನಕನೆಂಬ ಹೆಸರಿನಿಂದ ಪ್ರಸಿದ್ಧನಾಗಿರುವ ವಿದೇಹರಾಜನಿದ್ದಾನೆ. ಪ್ರವೃತ್ತಿಮಾರ್ಗದಲ್ಲಾಗಲೀ, ನಿವೃತ್ತಿಮಾರ್ಗದಲ್ಲಾಗಲೀ.–ನಿನ್ನ ಮನಸ್ಸಿನಲ್ಲಿ ಯಾವುದಾದರೂ ಸಂಶಯವಿದ್ದರೆ ಶೀಘ್ರವಾಗಿ ಆ ಜನಕರಾಜನ ಬಳಿಗೆ ಹೋಗು. ಅವನು ನಿನ್ನ ಸಂಶಯವನ್ನು ಸಂಪೂರ್ಣವಾಗಿ ಹೋಗಲಾಡಿಸುತ್ತಾನೆ.’ ಹೀಗೆ ಹೇಳಿದ ನನ್ನ ತಂದೆಯ ಆಜ್ಞಾನುಸಾರವಾಗಿ ನಿನ್ನನ್ನು ಮೋಕ್ಷದ

ವಿಷಯವಾಗಿ ಪ್ರಶ್ನಿಸಲು ನಿನ್ನ ಬಳಿಗೆ ಬಂದಿರುತ್ತೇನೆ. ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ನಾನು ಕೇಳಲಿರುವ ಪ್ರಶ್ನೆಗಳಿಗೆ ಯಥಾವತ್ತಾಗಿ ಉತ್ತರಿಸು.

ಕಿಂ ಕಾರ್ಯಂ ಬ್ರಾಹ್ಮಣೇನೇಹ ಮೋಕ್ಷಾರ್ಥಶ್ಚ ಕಿಮಾತ್ಮಕಃ ।
ಕಥಂ ಚ ಮೋಕ್ಷಃ ಪ್ರಾಪ್ತವ್ಯೋ ಜ್ಞಾನೇನ ತಪಸಾಥವಾ ॥೧೩॥

ಬ್ರಾಹ್ಮಣನ ಕರ್ತವ್ಯವೇನು? ಮೋಕ್ಷವೆಂಬ ಪುರುಷಾರ್ಥದ ಸ್ವರೂಪವೇನು? ಮೋಕ್ಷವನ್ನು ಪಡೆದುಕೊಳ್ಳುವುದು ಹೇಗೆ? ಮೋಕ್ಷವು ಜ್ಞಾನದಿಂದ ಪ್ರಾಪ್ತವಾಗುವುದೋ ಅಥವಾ ತಪಸ್ಸಿನಿಂದ ಪ್ರಾಪ್ತ ವಾಗುವುದೋ?"

ಜನಕನು ಹೇಳುತ್ತಾನೆ :

"ಶುಕದೇವ! ಹುಟ್ಟಿದ ಮೊದಲ್ಗೊಂಡು ಬ್ರಾಹ್ಮಣನಿಗಿರುವ ಕರ್ತವ್ಯಗಳನ್ನು ಹೇಳುವೆನು, ಕೇಳು.

ಕೃತೋಪನಯನಸ್ತಾತ ಭವೇದ್ವೇದಪರಾಯಣಃ ।
ತಪಸಾ ಗುರುವೃತ್ತ್ಯಾ ಚ ಬ್ರಹ್ಮಚರ್ಯೇಣ ವಾ ವಿಭೋ ।
ದೇವತಾನಾಂ ಪಿತೄಣಾಂ ಚಾಪ್ಯನೃಣೋ ಹ್ಯನಸೂಯಕಃ ॥೧೪॥

ವೇದಾನಧೀತ್ಯ ನಿಯತೋ ದಕ್ಷಿಣಾಮಪವರ್ಜ್ಯ ಚ ।
ಅಭ್ಯನುಜ್ಞಾಮಥ ಪ್ರಾಪ್ಯ ಸಮಾವರ್ತೇತ ವೈ ದ್ವಿಜಃ ॥೧೫॥

ಉಪನಯನಸಂಸ್ಕಾರವಾದನಂತರ ಬ್ರಾಹ್ಮಣವಟುವು ವೇದಾಧ್ಯಯನ ತತ್ಪರನಾಗಿರಬೇಕು. ತಪಸ್ಸಿನಿಂದಲೂ, ಗುರುಶುಶ್ರೂಷೆಯಿಂದಲೂ ಮತ್ತು ಬ್ರಹ್ಮಚರ್ಯವ್ರತಾನುಷ್ಠಾನದಿಂದಲೂ ಎಲ್ಲ ವೇದಗಳನ್ನೂ, ವೇದಾಂಗ ಗಳನ್ನೂ ಅಧ್ಯಯನಮಾಡಬೇಕು. ಹವನಾದಿಗಳಿಂದ ದೇವತೆಗಳ ಋಣ ವನ್ನೂ, ತರ್ಪಣಾದಿಗಳಿಂದ ಪಿತೃಗಳ ಋಣವನ್ನೂ ತೀರಿಸಬೇಕು. ಯಾರೊ ಬ್ಬರಲ್ಲಿಯೂ ದೋಷವನ್ನೆಣಿಸದೇ ಸಂಯಮಿಯಾಗಿದ್ದು ವೇದಗಳನ್ನೂ– ವೇದಾಂಗಗಳನ್ನೂ ಅಧ್ಯಯನಮಾಡಿದನಂತರ ಗುರುದಕ್ಷಿಣೆಯನ್ನು ಕೊಟ್ಟು ಸಮಾವರ್ತನಸಂಸ್ಕಾರವಾದನಂತರ ಅವರ ಅನುಮತಿಯನ್ನು ಪಡೆದು ಮನೆಗೆ ಹಿಂದಿರುಗಬೇಕು.

ಸಮಾವೃತ್ತಶ್ಚ ಗಾರ್ಹಸ್ಥ್ಯೇ ಸ್ವದಾರನಿರತೋ ವಸೇತ್ ।
ಅನಸೂಯುರ್ಯಥಾನ್ಯಾಯಮಾಹಿತಾಗ್ನಿಸ್ತಥೈವ ಚ ॥೧೭॥

ಮನೆಗೆ ಹಿಂದಿರುಗಿದನಂತರ ಸ್ನಾತಕನಾಗಿ ವಿವಾಹವನ್ನು ಮಾಡಿಕೊಂಡು ಗೃಹಸ್ಥಾಶ್ರಮವನ್ನು ಸ್ವೀಕರಿಸಬೇಕು. ಗೃಹಸ್ಥಾಶ್ರಮೋಕ್ತವಾದ ಧರ್ಮವನ್ನು ಪರಿಪಾಲಿಸುತ್ತಾ ತನ್ನ ಪತ್ನಿಯಲ್ಲಿ ಅನುರಾಗವುಳ್ಳವನಾಗಿರಬೇಕು. ಮತ್ತೊಬ್ಬರಲ್ಲಿ ದೋಷವನ್ನೆಣಿಸದೇ ಇತರರೊಡನೆ ಯಥೋಚಿತವಾಗಿ ವ್ಯವಹರಿಸಬೇಕು. ಆಧಾನಪೂರ್ವಕವಾಗಿ ಸಂಸ್ಕೃತವಾದ ಅಗ್ನಿಯುಳ್ಳವನಾಗಿರಬೇಕು.

ಉತ್ಪಾದ್ಯ ಪುತ್ರಪೌತ್ರಂ ತು ವನ್ಯಾಶ್ರಮಪದೇ ವಸೇತ್ ।
ತಾನೇವಾಗ್ನೀನ್ಯಥಾಶಾಸ್ತ್ರಮರ್ಚಯನ್ನತಿಥಿಪ್ರಿಯಃ ॥೧೮॥

ಪುತ್ರ-ಪೌತ್ರರನ್ನು ಪಡೆದು (ಉಚಿತವಾದ ಕಾಲದಲ್ಲಿ ಮಗನಿಗೆ ಗಾರ್ಹಸ್ಥ್ಯಧರ್ಮಪರಿಪಾಲನೆಯ ಭಾರವನ್ನು ವಹಿಸಿ ಅರಣ್ಯಕ್ಕೆ ಹೋಗಿ) ವಾನಪ್ರಸ್ಥಾಶ್ರಮಿಯಾಗಿರಬೇಕು. ಆ ಸಮಯದಲ್ಲಿಯೂ ಶಾಸ್ತ್ರವಿಧಿಗೆ ಅನುಸಾರವಾಗಿ ಗಾರ್ಹಪತ್ಯಾದಿ ಅದೇ ಅಗ್ನಿಗಳನ್ನೇ ಆರಾಧಿಸುತ್ತಾ ಅತಿಥಿಪ್ರಿಯನಾಗಿದ್ದು ಮನೆಗೆ ಬಂದ ಅತಿಥಿಗಳನ್ನು ಪ್ರೇಮಪೂರ್ವಕವಾಗಿ ಸತ್ಕರಿಸಬೇಕು.

ಸವನೇಽಗ್ನೀನ್ಯಥಾನ್ಯಾಯಮಾತ್ಮನ್ಯಾರೋಪ್ಯ ಧರ್ಮವಿತ್ ।
ನಿರ್ದ್ವನ್ದ್ವೋ ವೀತರಾಗಾತ್ಮಾ ಬ್ರಹ್ಮಾಶ್ರಮಪದೇ ವಸೇತ್ ॥೧೯॥

ಅನಂತರ ಧರ್ಮವಿದನಾದ ಬ್ರಾಹ್ಮಣನು ಶಾಸ್ತ್ರವಿಧಿಗೆ ಅನುಸಾರವಾಗಿ ಅಗ್ನಿಹೋತ್ರಾಗ್ನಿಗಳನ್ನು ಆತ್ಮಸಮಾರೋಪಣಮಾಡಿಕೊಂಡು ಶೀತೋಷ್ಣ, ಸುಖ-ದುಃಖಾದಿ ದ್ವಂದ್ವಗಳಿಂದ ಅತೀತನಾಗಿ ಪ್ರಾಪಂಚಿಕವಾದ ವ್ಯವಹಾರಗಳಲ್ಲಿ ಅನಾಸಕ್ತನಾಗಿ ಬ್ರಹ್ಮಚಿಂತನೆಗೆ ಸಂಬಂಧಿಸಿದ ಸಂನ್ಯಾಸಾಶ್ರಮದಲ್ಲಿರಬೇಕು."

ಶುಕನು ಪ್ರಶ್ನಿಸುತ್ತಾನೆ :

ಉತ್ಪನ್ನೇ ಜ್ಞಾನವಿಜ್ಞಾನೇ ನಿರ್ದ್ವನ್ದ್ವೇ ಹೃದಿ ಶಾಶ್ವತೇ ।
ಕಿಮವಶ್ಯಂ ನಿವಸ್ತವ್ಯಮಾಶ್ರಮೇಷು ಭವೇತ್ತ್ರಿಷು ॥೨೦॥

"ಮಹಾರಾಜ! ಬ್ರಹ್ಮಚರ್ಯಾಶ್ರಮದಲ್ಲಿದ್ದಾಗಲೇ ಯಾರಿಗಾದರೂ ಜ್ಞಾನ-ವಿಜ್ಞಾನಗಳ ರಹಸ್ಯವು ತಿಳಿದುಬಿಟ್ಟಿದ್ದರೆ –ರಾಗ-ದ್ವೇಷ, ಪ್ರಿಯ-ಅಪ್ರಿಯ ಇವೇ ಮೊದಲಾದ ದ್ವಂದ್ವಗಳು ಮನಸ್ಸಿನಿಂದ ದೂರವಾಗಿ ಬಿಟ್ಟಿದ್ದರೆ -ಉಳಿದ ಗೃಹಸ್ಥ-ವಾನಪ್ರಸ್ಥ-ಸಂನ್ಯಾಸಾಶ್ರಮಗಳಲ್ಲಿ ಇರಬೇಕಾದ ಆವಶ್ಯಕತೆಯೇನಿದೆ?

ಈ ಪ್ರಶ್ನೆಯನ್ನು ನಿನ್ನ ಮುಂದಿಟ್ಟಿದ್ದೇನೆ. ಇದಕ್ಕೆ ಯಥೋಚಿತವಾಗಿ ಉತ್ತರಿಸು. ವೇದಾರ್ಥತತ್ತ್ವದ ಹಿನ್ನೆಲೆಯಲ್ಲಿಯೇ ಇದಕ್ಕೆ ನೀನು ಉತ್ತರವನ್ನು ಹೇಳು."

ಜನಕನು ಹೇಳುತ್ತಾನೆ :

ನ ವಿನಾ ಜ್ಞಾನವಿಜ್ಞಾನೇ ಮೋಕ್ಷಸ್ಯಾಧಿಗಮೋ ಭವೇತ್ ।
ನ ವಿನಾ ಗುರುಸಮ್ಬನ್ಧಂ ಜ್ಞಾನಸ್ಯಾಧಿಗಮಃ ಸ್ಮೃತಃ ॥೨೨॥

"ಜ್ಞಾನ-ವಿಜ್ಞಾನಗಳ ರಹಸ್ಯವನ್ನು ತಿಳಿದುಕೊಳ್ಳದಿದ್ದರೆ ಮೋಕ್ಷ ಪ್ರಾಪ್ತಿಯಾಗುವುದಿಲ್ಲ. ಸದ್ಗುರುವಿನ ಸಂಬಂಧವಿಲ್ಲದೇ ಶಾಸ್ತ್ರಜ್ಞಾನದ ಪ್ರಾಪ್ತಿಯಾಗುವುದಿಲ್ಲ.

ಗುರುಃ ಪ್ಲಾವಯಿತಾ ತಸ್ಯ ಜ್ಞಾನಂ ಪ್ಲವ ಇಹೋಚ್ಯತೇ ।
ವಿಜ್ಞಾಯ ಕೃತಕೃತ್ಯಸ್ತು ತೀರ್ಣಸ್ತದುಭಯಂ ತ್ಯಜೇತ್ ॥೨೩॥

ಗುರುವು ಈ ಸಂಸಾರಸಾಗರವನ್ನು ದಾಟಿಸುವ ನಾವಿಕನಾಗಿದ್ದಾನೆ. ಗುರುವು ಉಪದೇಶಿಸುವ ಜ್ಞಾನವೇ ನೌಕೆಯ ರೂಪವಾಗಿದೆ. ಸಾಧಕನು ಈ ರಹಸ್ಯವನ್ನು ತಿಳಿದು ಗುರುವನ್ನು ನಾವಿಕನನ್ನಾಗಿಯೂ–ಜ್ಞಾನವನ್ನು ನಾವೆಯನ್ನಾಗಿಯೂ ಮಾಡಿಕೊಂಡು ಸಂಸಾರಸಾಗರವನ್ನು ದಾಟಿ ಕೃತಕೃತ್ಯನಾಗಬೇಕು. ನದಿಯನ್ನು ದಾಟಿದನಂತರ ನಾವಿಕನನ್ನೂ, ನಾವೆಯನ್ನೂ ಬಿಟ್ಟು ಹೊರಟುಹೋಗುವಂತೆ–ಸಂಸಾರಸಾಗರವನ್ನು ದಾಟಿದನಂತರ ಗುರುವನ್ನೂ–ಜ್ಞಾನವನ್ನೂ (ಶಾಸ್ತ್ರವನ್ನೂ) ತ್ಯಜಿಸಬೇಕು.

ಅನುಚ್ಛೇದಾಯ ಲೋಕಾನಾಮನುಚ್ಛೇದಾಯ ಕರ್ಮಣಾಮ್ ।
ಪೂರ್ವೈರಾಚರಿತೋ ಧರ್ಮಶ್ಚಾತುರಾಶ್ರಮ್ಯಸಂಕಟಃ ॥೨೪॥

ಲೋಕವು ವಿನಾಶವನ್ನು ಹೊಂದದೇ ಬೆಳೆಯುತ್ತಾ ಹೋಗಬೇಕೆಂಬ ಕಾರಣದಿಂದಲೂ, ಕರ್ಮಗಳು ವಿನಾಶಹೊಂದದೇ ಕರ್ಮಕಾಂಡದ ಪರಂಪರೆಯು ಮುಂದುವರಿಯಬೇಕೆಂಬ ಕಾರಣದಿಂದಲೂ -ಹಿಂದಿನ ವಿದ್ವಾಂಸರು ನಾಲ್ಕು ಆಶ್ರಮಧರ್ಮಗಳಿಂದ ಯುಕ್ತವಾದ ವರ್ಣಧರ್ಮಗಳನ್ನು ಆಚರಣೆಗೆ ತಂದರು.

ಅನೇನ ಕ್ರಮಯೋಗೇನ ಬಹುಜಾತಿಷು ಕರ್ಮಣಾಮ್ ।
ಹಿತ್ವಾ ಶುಭಾಶುಭಂ ಕರ್ಮ ಮೋಕ್ಷೋ ನಾಮೇವ ಲಭ್ಯತೇ ॥೨೫॥

(ನಾಲ್ಕು ಆಶ್ರಮಧರ್ಮಗಳ ಮೂಲಕವಾಗಿ ಮೋಕ್ಷವನ್ನು ಪಡೆಯು

ವುದಕ್ಕೆ ಕ್ರಮಯೋಗವೆಂದು ಹೆಸರು.) ಈ ಕ್ರಮಯೋಗದಿಂದ ಅನೇಕ ಜನ್ಮಗಳಲ್ಲಿ ಕ್ರಿಯಾರೂಪದಿಂದ ಶುಭಾಶುಭಕರ್ಮಗಳನ್ನು ಪರಿತ್ಯಾಗ ಮಾಡಿದನಂತರ ಮೋಕ್ಷವೆಂಬುದು ಇಲ್ಲಿ ಲಭ್ಯವಾಗುತ್ತದೆ.

(ಬಹುಜಾತಿಷು ಕರ್ಮಣಾಂ ಹಿತ್ವಾ ಎಂಬ ಪಾಠವೂ ಇದೆ. ಕರ್ಮಣಾಂ ಬಹುಜಾತಿಷು ಸತ್ಸು–ನಾನಾಪ್ರಕಾರವಾದ ಕರ್ಮಗಳು ಇರುತ್ತಿರಲಾಗಿ ಈ ಕ್ರಮಯೋಗದಿಂದ (ಬ್ರಹ್ಮಚರ್ಯಾದಿ ಆಶ್ರಮಧರ್ಮಗಳ ಮೂಲಕವಾಗಿ) ಪ್ರಾಪ್ತವಾಗುವ ಸಂನ್ಯಾಸಾಶ್ರಮದಲ್ಲಿ ಶುಭಾಶುಭ ಕರ್ಮಗಳನ್ನು ಪರಿತ್ಯಜಿಸಿದರೆ ಮೋಕ್ಷವೆಂಬುದು ಇಲ್ಲಿಯೇ ಸಿಕ್ಕುತ್ತದೆ.)

ಭಾವಿತೈಃ ಕರಣೈಶ್ಚಾಯಂ ಬಹುಸಂಸಾರಯೋನಿಷು ।
ಆಸಾದಯತಿ ಶುದ್ಧಾತ್ಮಾ ಮೋಕ್ಷಂ ವೈ ಪ್ರಥಮಾಶ್ರಮೇ ॥೨೬॥

ಅನೇಕಜನ್ಮಗಳನ್ನು ಪಡೆದು ಶುಭಕರ್ಮಗಳನ್ನೇ ಮಾಡುತ್ತಾ ಪವಿತ್ರೀಕೃತವಾದ ಇಂದ್ರಿಯಗಳನ್ನು ಹೊಂದುವ ಶುದ್ಧಾತ್ಮನಾದ ಪುರುಷನು ಮೊದಲನೆಯದಾದ ಬ್ರಹ್ಮಚರ್ಯಾಶ್ರಮದಲ್ಲಿಯೇ ಮೋಕ್ಷವನ್ನು ಹೊಂದುತ್ತಾನೆ.

ತಮಾಸಾದ್ಯ ತು ಮುಕ್ತಸ್ಯ ದೃಷ್ಟಾರ್ಥಸ್ಯ ವಿಪಶ್ಚಿತಃ ।
ತ್ರಿಷ್ವಾಶ್ರಮೇಷು ಕೋಽನ್ವರ್ಥೋ ಭವೇತ್ಪರಮಭೀಪ್ಸತಃ ॥೨೭॥

ಬ್ರಹ್ಮಚರ್ಯಾಶ್ರಮವನ್ನು ಹೊಂದಿದೊಡನೆಯೇ ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳುವ, ಪರಮಪದವನ್ನಿಚ್ಛಿಸುವ, ಜೀವನ್ಮುಕ್ತನಾದ ವಿದ್ವಾಂಸನಿಗೆ ಉಳಿದ ಮೂರು ಆಶ್ರಮಗಳನ್ನು ಸ್ವೀಕರಿಸುವುದರಲ್ಲಿ ಯಾವ ಪ್ರಯೋಜನವಿದೆ? (ಮೋಕ್ಷವೇ ಮಾನವನ ಪರಮಧ್ಯೇಯ. ಬ್ರಹ್ಮಚರ್ಯಾದಿ ಆಶ್ರಮಗಳು ಮೋಕ್ಷಕ್ಕೆ ಸೋಪಾನಗಳು. ನಾಲ್ಕನೆಯ ಸಂನ್ಯಾಸಾಶ್ರಮದಲ್ಲಿ ಲಭ್ಯವಾಗುವ ಮೋಕ್ಷವು ಬ್ರಹ್ಮಚರ್ಯಾಶ್ರಮದಲ್ಲಿಯೇ ಲಭಿಸಿದರೆ ಉಳಿದ ಮೂರು ಆಶ್ರಮಗಳನ್ನು ಆಶ್ರಯಿಸಬೇಕಾಗಿಯೇ ಇಲ್ಲ.)

ರಾಜಸಾಂಸ್ತಾಮಸಾಂಶ್ಚೈವ ನಿತ್ಯಂ ದೋಷಾನ್ವಿವರ್ಜಯೇತ್ ।
ಸಾತ್ತ್ವಿಕಂ ಮಾರ್ಗಮಾಸ್ಥಾಯ ಪಶ್ಯೇದಾತ್ಮಾನಮಾತ್ಮನಾ ॥೨೮॥

ವಿದ್ವಾಂಸನಾದವನು ರಾಜಸ-ತಾಮಸದೋಷಗಳನ್ನು ಸದಾಕಾಲ

ಪರಿತ್ಯಜಿಸಬೇಕು. ಸಾತ್ತ್ವಿಕಮಾರ್ಗವನ್ನಾಶ್ರಯಿಸಿ ಬುದ್ಧಿಯ ಮೂಲಕವಾಗಿ ಆತ್ಮನನ್ನು ಕಂಡುಕೊಳ್ಳಬೇಕು.

ಸರ್ವಭೂತೇಷು ಚಾತ್ಮಾನಂ ಸರ್ವಭೂತಾನಿ ಚಾತ್ಮನಿ ।
ಸಮ್ಪಶ್ಯನ್ನೋಪಲಿಪ್ಯೇತ ಜಲೇ ವಾರಿಚರೋ ಯಥಾ ॥೨೯॥

ಯಾವಾತನು ಸರ್ವಪ್ರಾಣಿಗಳಲ್ಲಿಯೂ ತನ್ನ ಆತ್ಮವನ್ನೂ ಮತ್ತು ತನ್ನ ಆತ್ಮದಲ್ಲಿಯೇ ಸರ್ವಪ್ರಾಣಿಗಳನ್ನೂ ಕಾಣುವನೋ–ಅವನು ನೀರಿನಲ್ಲಿ ಸಂಚರಿಸುವ ಪ್ರಾಣಿಯು ನೀರಿಗೆ ಅಂಟಿಕೊಂಡಿರದಂತೆ–ಸಂಸಾರ ದಲ್ಲಿದ್ದರೂ ಅದಕ್ಕೆ ಅಂಟಿಕೊಂಡಿರುವುದಿಲ್ಲ.

ಪಕ್ಷಿವತ್ಪ್ರವಣಾದೂರ್ಧ್ವಮಮುತ್ರಾನನ್ತ್ಯಮಶ್ನುತೇ ।
ವಿಹಾಯ ದೇಹಾನ್ನಿರ್ಮುಕ್ತೋ ನಿರ್ದ್ವನ್ದ್ವಃ ಪ್ರಶಮಂ ಗತಃ ॥೩೦॥

ಪಕ್ಷಿಯು ಯಾವ ರೀತಿಯಲ್ಲಿ ಗೂಡನ್ನು ಬಿಟ್ಟು ತಗ್ಗಿನ ಪ್ರದೇಶದಿಂದ ಮೇಲು-ಮೇಲಕ್ಕೆ ಹಾರಿಹೋಗುತ್ತದೆಯೋ–ಹಾಗೆಯೇ ದ್ವಂದ್ವರಹಿತನಾದ, ಸಂಪೂರ್ಣವಾದ ಶಾಂತಿಯನ್ನು ಹೊಂದಿರುವ ಜ್ಞಾನಿಯು ದೇಹದಿಂದ ವಿಮುಕ್ತನಾಗಿ ಮೋಕ್ಷಸುಖವನ್ನು ಅನುಭವಿಸುತ್ತಾನೆ.

ಈ ವಿಷಯದಲ್ಲಿ ಹಿಂದೆ ಯಯಾತಿರಾಜನು ಹಾಡಿರುವ ಶ್ಲೋಕಗಳನ್ನು ಕೇಳು. ಮೋಕ್ಷಶಾಸ್ತ್ರವಿಶಾರದರಾದ ಬ್ರಾಹ್ಮಣರು ಈಗಲೂ ಯಯಾತಿಯು ಹಾಡಿರುವ ಆ ಶ್ಲೋಕಗಳನ್ನು ಜ್ಞಾಪಕದಲ್ಲಿಟ್ಟುಕೊಂಡಿರುತ್ತಾರೆ (ಹೇಳುತ್ತಿರುತ್ತಾರೆ).

ಜ್ಯೋತಿರಾತ್ಮನಿ ನಾನ್ಯತ್ರ ಸರ್ವಜನ್ತುಷು ತತ್ಸಮಮ್ ।
ಸ್ವಯಂ ಚ ಶಕ್ಯತೇ ದ್ರಷ್ಟುಂ ಸುಸಮಾಹಿತಚೇತಸಾ ॥೩೧॥

'ಆತ್ಮಜ್ಯೋತಿಯು ತನ್ನ ಶರೀರದಲ್ಲಿಯೇ ಇದೆ. ಶರೀರವನ್ನು ಬಿಟ್ಟು ಬೇರೆಲ್ಲಿಯೂ ಇರುವುದಿಲ್ಲ. ಸರ್ವಪ್ರಾಣಿಗಳಲ್ಲಿಯೂ ಆ ಜ್ಯೋತಿಯು ಸಮಾನವಾಗಿಯೇ ಇರುತ್ತದೆ. ಏಕಾಗ್ರವಾದ ಮನಸ್ಸಿನಿಂದ ಯುಕ್ತನಾಗಿರು ವವನು ತನ್ನಲ್ಲಿರುವ ಜ್ಯೋತಿಯನ್ನು ಕಂಡುಕೊಳ್ಳಬಹುದು.

ನ ಬಿಭೇತಿ ಪರೋ ಯಸ್ಮಾನ್ನ ಬಿಭೇತಿ ಪರಾಚ್ಚ ಯಃ ।
ಯಶ್ಚ ನೇಚ್ಛತಿ ನ ದ್ವೇಷ್ಟಿ ಬ್ರಹ್ಮ ಸಮ್ಪದ್ಯತೇ ತದಾ ॥೩೩॥

ಯಾವನಿಂದ ಇತರ ಪ್ರಾಣಿಗಳು ಭಯಗೊಳ್ಳುವುದಿಲ್ಲವೋ, ಯಾವನು ಇತರ ಪ್ರಾಣಿಗಳಿಂದ ಭಯಭೀತನಾಗುವುದಿಲ್ಲವೋ, ಯಾವನು ಯಾವ ವಸ್ತುವನ್ನೂ ಇಚ್ಛಿಸುವುದಿಲ್ಲವೋ ಮತ್ತು ಯಾರನ್ನೂ ದ್ವೇಷಿಸುವುದಿಲ್ಲವೋ–ಅಂತಹವನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಯದಾ ಭಾವಂ ನ ಕುರುತೇ ಸರ್ವಭೂತೇಷು ಪಾಪಕಮ್ ।
ಕರ್ಮಣಾ ಮನಸಾ ವಾಚಾ ಬ್ರಹ್ಮ ಸಮ್ಪದ್ಯತೇ ತದಾ ॥೩೪॥

ಯಾವಾತನು ಕರ್ಮ, ಮನಸ್ಸು ಮತ್ತು ಮಾತುಗಳಿಂದ ಯಾವುದೇ ಪ್ರಾಣಿಯ ವಿಷಯದಲ್ಲಿಯೂ ಪಾಪಭಾವವನ್ನು ಹೊಂದಿರುವುದಿಲ್ಲವೋ, ಸಮಸ್ತಪ್ರಾಣಿಗಳಲ್ಲಿಯೂ ದಯಾಪೂರ್ಣನಾಗಿ ದ್ವೇಷರಹಿತನಾಗಿರುವನೋ–ಅಂತಹವನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಸಂಯೋಜ್ಯ ಮನಸಾತ್ಮಾನಮೀರ್ಷ್ಯಾಮುತ್ಸೃಜ್ಯ ಮೋಹನೀಮ್ ।
ತ್ಯಕ್ತ್ವಾ ಕಾಮಂ ಚ ಮೋಹಂ ಚ ತದಾ ಬ್ರಹ್ಮತ್ವಮಶ್ನುತೇ ॥೩೫॥

ಸಾಧಕನು ವಿಮೋಹಗೊಳಿಸುವ ಈರ್ಷ್ಯೆಯನ್ನು ಬಿಟ್ಟು, ಕಾಮ-ಮೋಹಗಳನ್ನು ಪರಿತ್ಯಜಿಸಿ ಮನಸ್ಸಿನಿಂದ ಆತ್ಮನನ್ನು ಯಾವಾಗ ಸಂಯೋಜಿಸುವನೋ (ಮನಸ್ಸನ್ನು ಆತ್ಮನಲ್ಲಿಯೇ ಸೇರಿಸುವನೋ) ಆಗ ಆ ಸಾಧಕನು ಬ್ರಹ್ಮಭಾವವನ್ನು ಹೊಂದುತ್ತಾನೆ.

ಯದಾ ಶ್ರಾವ್ಯೇ ಚ ದೃಶ್ಯೇ ಚ ಸರ್ವಭೂತೇಷು ಚಾಪ್ಯಯಮ್ ।
ಸಮೋ ಭವತಿ ನಿರ್ದ್ವನ್ದ್ವೋ ಬ್ರಹ್ಮ ಸಮ್ಪದ್ಯತೇ ತದಾ ॥೩೬॥

ಯಾವಾಗ ಸಾಧಕನು ಕಿವಿಗೆ ಕೇಳಿಸುವ ಶಬ್ದಗಳಲ್ಲಿಯೂ ಕಣ್ಣಿಗೆ ಕಾಣಿಸುವ ವಸ್ತುಗಳಲ್ಲಿಯೂ ಮತ್ತು ಎಲ್ಲ ಪ್ರಾಣಿಗಳಲ್ಲಿಯೂ ಸಮಭಾವದಿಂದಿರುವನೋ, ಶೀತೋಷ್ಣ-ಸುಖ-ದುಃಖಾದಿ ದ್ವಂದ್ವಗಳಿಂದ ರಹಿತನಾಗಿರುವನೋ –ಆಗ ಬ್ರಹ್ಮಭಾವವನ್ನು ಹೊಂದುತ್ತಾನೆ.

ಯದಾ ಸ್ತುತಿಂ ಚ ನಿನ್ದಾಂ ಚ ಸಮತ್ವೇನೈವ ಪಶ್ಯತಿ ।
ಕಾಞ್ಚನಂ ಚಾಯಸಂ ಚೈವ ಸುಖಂ ದುಃಖಂ ತಥೈವ ಚ ॥೩೭॥

ಶೀತಮುಷ್ಣಂ ತಥೈವಾರ್ಥಮನರ್ಥಂ ಪ್ರಿಯಮಪ್ರಿಯಮ್ ।
ಜೀವಿತಂ ಮರಣಂ ಚೈವ ಬ್ರಹ್ಮ ಸಮ್ಪದ್ಯತೇ ತದಾ ॥೩೮॥

ಯಾವಾಗ ಸಾಧಕನು ನಿಂದೆ ಮತ್ತು ಸ್ತುತಿಗಳನ್ನು ಸಮಾನವನ್ನಾಗಿ ಭಾವಿಸುವನೋ, ಸುವರ್ಣವನ್ನೂ –ಕಬ್ಬಿಣದ ತುಂಡನ್ನೂ, ಸುಖ-ದುಃಖ ಗಳನ್ನೂ, ಚಳಿ-ಸೆಕೆಗಳನ್ನೂ, ಅರ್ಥಾನರ್ಥಗಳನ್ನೂ, ಪ್ರಿಯಾಪ್ರಿಯಗಳನ್ನೂ, ಜೀವನ-ಮರಣಗಳನ್ನೂ ಸಮನಾಗಿ ಕಾಣುವನೋ –ಆಗ ಬ್ರಹ್ಮಭಾವವನ್ನು ಹೊಂದುತ್ತಾನೆ.

ಪ್ರಸಾರ್ಯೇಹ ಯಥಾಙ್ಗಾನಿ ಕೂರ್ಮಃ ಸಂಹರತೇ ಪುನಃ ।
ತಥೇನ್ದ್ರಿಯಾಣಿ ಮನಸಾ ಸಂಯನ್ತವ್ಯಾನಿ ಭಿಕ್ಷುಣಾ ॥೩೯॥

ಆಮೆಯು ಯಾವ ರೀತಿಯಲ್ಲಿ ತನ್ನ ಅಂಗಗಳೆಲ್ಲವನ್ನೂ ಪ್ರಸರಿಸಿಕೊಂಡಿದ್ದು ಪುನಃ ಒಳಕ್ಕೆ ಸೆಳೆದುಕೊಳ್ಳುವುದೋ –ಹಾಗೆಯೇ ಸಂನ್ಯಾಸಿಯು ಹೊರಕ್ಕೆ ಚಾಚಿಕೊಂಡಿರುವ ಇಂದ್ರಿಯಗಳನ್ನು ಮನಸ್ಸಿನ ಮೂಲಕವಾಗಿ ಒಳಕ್ಕೆ ಸೆಳೆದುಕೊಳ್ಳಬೇಕು (ಮನಸ್ಸಿನಿಂದ ಇಂದ್ರಿಯಗಳನ್ನು ನಿಯಂತ್ರಿಸಬೇಕು).

ತಮಃಪರಿಗತಂ ವೇಶ್ಮ ಯಥಾ ದೀಪೇನ ದೃಶ್ಯತೇ ।
ತಥಾ ಬುದ್ಧಿಪ್ರದೀಪೇನ ಶಕ್ಯ ಆತ್ಮಾ ನಿರೀಕ್ಷಿತುಮ್ ॥೪೦॥

ಕತ್ತಲಿನಿಂದ ಆವೃತವಾಗಿರುವ ಮನೆಯು ದೀಪದ ಬೆಳಕಿನಿಂದ ನೋಡಲು ಸಾಧ್ಯವಾಗುವಂತೆ–ಬುದ್ಧಿಯೆಂಬ ದೀಪದಿಂದ ಹೃದಯಕುಹರ ದಲ್ಲಿರುವ ಆತ್ಮನನ್ನು ಸಂದರ್ಶಿಸಲು ಸಾಧ್ಯವಾಗುತ್ತದೆ.

ಏತತ್ಸರ್ವಂ ಚ ಪಶ್ಯಾಮಿ ತ್ವಯಿ ಬುದ್ಧಿಮತಾಂ ವರ ।
ಯಚ್ಚಾನ್ಯದಪಿ ವೇತ್ತವ್ಯಂ ತತ್ತ್ವತೋ ವೇದ ತದ್ಭವಾನ್ ॥೪೧॥

ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ನಾನು ಹೇಳಿದ ಜ್ಞಾನಿಯ ಗುಣಗಳೆಲ್ಲವನ್ನೂ ನಿನ್ನಲ್ಲಿ ಕಾಣುತ್ತಿದ್ದೇನೆ. ಈ ವಿಷಯದಲ್ಲಿ ಇನ್ನೂ

ಏನಾದರೂ ತಿಳಿದುಕೊಳ್ಳುವುದಿದ್ದರೆ ಅದನ್ನೂ ಕೂಡ ನೀನು ಯಥಾವತ್ತಾಗಿ ತಿಳಿದು ಕೊಂಡಿರುವೆ.

ಬ್ರಹ್ಮರ್ಷೇ ವಿದಿತಶ್ಚಾಸಿ ವಿಷಯಾನ್ತಮುಪಾಗತಃ ।
ಗುರೋಸ್ತವ ಪ್ರಸಾದೇನ ತವ ಚೈವೋಪಶಿಕ್ಷಯಾ ॥೪೨॥

ಬ್ರಹ್ಮರ್ಷಿಯೇ! ನಿನ್ನ ತಂದೆಯವರ ಕೃಪೆಯಿಂದಲೂ, ಅವರಿಂದ ಪಡೆದಿರುವ ಶಿಕ್ಷಣದಿಂದಲೂ ನೀನು ವಿಷಯಸುಖಗಳಿಂದ ದೂರವಾಗಿರ ತಕ್ಕವನೆಂಬುದನ್ನು ನಾನು ತಿಳಿದಿರುತ್ತೇನೆ.

ತಸ್ಯೈವ ಚ ಪ್ರಸಾದೇನ ಪ್ರಾದುರ್ಭೂತಂ ಮಹಾಮುನೇ ।
ಜ್ಞಾನಂ ದಿವ್ಯಂ ಮಮಾಪೀದಂ ತೇನಾಸಿ ವಿದಿತೋ ಮಮ ॥೪೩॥

ಮಹಾಮುನಿಯೇ! ನಿನ್ನ ತಂದೆಯಾದ ವ್ಯಾಸಮಹರ್ಷಿಗಳ ಕೃಪೆ ಯಿಂದಲೇ ನನಗೂ ಈ ದಿವ್ಯಜ್ಞಾನವು ಲಭಿಸಿದೆ. ಆ ದಿವ್ಯಜ್ಞಾನದಿಂದಲೇ ನಾನು ನಿನ್ನ ನಿಜಸ್ವರೂಪವನ್ನು ಚೆನ್ನಾಗಿ ತಿಳಿದಿರುತ್ತೇನೆ.

ಅಧಿಕಂ ತವ ವಿಜ್ಞಾನಮಧಿಕಾ ಚ ಗತಿಸ್ತವ ।
ಅಧಿಕಂ ತವ ಚೈಶ್ವರ್ಯಂ ತಚ್ಚ ತ್ವಂ ನಾವಬುಧ್ಯಸೇ ॥೪೪॥

ವಿಜ್ಞಾನವೂ ನಿನ್ನಲ್ಲಿ ಅಧಿಕವಾಗಿದೆ. (ಕಾರ್ಯವನ್ನು ಸಾಧಿಸುವ ಯುಕ್ತಿಯೂ ನಿನ್ನಲ್ಲಿ ಅಧಿಕವಾಗಿದೆ.) ನಿನ್ನ ಗತಿಯೂ ಹೆಚ್ಚಿನದು. ಯೋಗೈಶ್ವರ್ಯವೂ ನಿನ್ನಲ್ಲಿ ಅಧಿಕವಾಗಿದೆ. ಆದರೆ ಈ ವಿಷಯವನ್ನು ನೀನು ತಿಳಿದವನಾಗಿಲ್ಲ.

ಬಾಲ್ಯಾದ್ವಾ ಸಂಶಯಾದ್ವಾಪಿ ಭಯಾದ್ವಾಪ್ಯವಿಮೋಕ್ಷಜಾತ್ ।
ಉತ್ಪನ್ನೇ ಚಾಪಿ ವಿಜ್ಞಾನೇ ನಾಧಿಗಚ್ಛತಿ ತಾಂ ಗತಿಮ್ ॥೪೫॥

ಮನುಷ್ಯನಿಗೆ ವಿಜ್ಞಾನವು ಪ್ರಾಪ್ತವಾಗಿದ್ದರೂ –ಬಾಲಭಾವದ ಕಾರಣ ದಿಂದಲೋ, ಸಂಶಯದಿಂದಲೋ, ಮೋಕ್ಷವು ಲಭಿಸುವುದಿಲ್ಲವೆಂಬ ಕಾಲ್ಪನಿಕವಾದ ಭಯದಿಂದಲೋ–ಮೋಕ್ಷಪ್ರಾಪ್ತಿಯಾಗುವುದಿಲ್ಲ.

ವ್ಯವಸಾಯೇನ ಶುದ್ಧೇನ ಮದ್ವಿಧೈಶ್ಛಿನ್ನಸಂಶಯಃ ।
ವಿಮುಚ್ಯ ಹೃದಯಗ್ರನ್ಥೀನಾಸಾದಯತಿ ತಾಂ ಗತಿಮ್ ॥೪೬॥

ನಮ್ಮಂತಹವರ ಮಾರ್ಗದರ್ಶನದಿಂದ ಯಾವ ಸಾಧಕನ ಸಂಶಯಗಳೆಲ್ಲವೂ ನಿವಾರಣೆಯನ್ನು ಹೊಂದಿವೆಯೋ –ಅಂತಹ ಸಾಧಕನು ಶುದ್ಧವಾದ ಪ್ರಯತ್ನದ ಮೂಲಕವಾಗಿ ಹೃದಯದಲ್ಲಿರುವ ಗಂಟುಗಳೆಲ್ಲವನ್ನೂ (ಅಜ್ಞಾನವೆಲ್ಲವನ್ನೂ) ತೆಗೆದುಹಾಕಿ ಮೋಕ್ಷದ ಮಾರ್ಗವನ್ನು ಹೊಂದುತ್ತಾನೆ.

ಭವಾಂಶ್ಚೋತ್ಪನ್ನವಿಜ್ಞಾನಃ ಸ್ಥಿರಬುದ್ಧಿರಲೋಲುಪಃ ।
ವ್ಯವಸಾಯಾದೃತೇ ಬ್ರಹ್ಮನ್ನಾಸಾದಯತಿ ತತ್ಪರಮ್ ॥೪೭॥

ಬ್ರಾಹ್ಮಣೋತ್ತಮನೇ! ನಿನ್ನಲ್ಲಿ ವಿಜ್ಞಾನದ ಉದಯವಾಗಿದೆ. ನಿನ್ನ ಬುದ್ಧಿಯು ಸ್ಥಿರವಾಗಿದೆ. ನಿನಗೆ ವಿಷಯಲೋಲುಪತೆಯು ಸ್ವಲ್ಪವಾದರೂ ಇರುವುದಿಲ್ಲ. ಆದರೆ ಪ್ರಯತ್ನವಿಲ್ಲದೇ ಬ್ರಹ್ಮಭಾವವನ್ನು ಹೊಂದಲು ಸಾಧ್ಯವಾಗುವುದಿಲ್ಲ.

ನಾಸ್ತಿ ತೇ ಸುಖದುಃಖೇಷು ವಿಶೇಷೋ ನಾಸಿ ಲೋಲುಪಃ ।
ನೌತ್ಸುಕ್ಯಂ ನೃತ್ಯಗೀತೇಷು ನ ರಾಗ ಉಪಜಾಯತೇ ॥೪೮॥

ಸುಖ-ದುಃಖಗಳಲ್ಲಿ ನೀನು ಯಾವ ವಿಧವಾದ ವಿಶೇಷವನ್ನೂ (ವ್ಯತ್ಯಾಸವನ್ನೂ) ಕಾಣುತ್ತಿಲ್ಲ. ನೀನು ವಿಷಯಸುಖಗಳಲ್ಲಿ ಆಸಕ್ತಿಯುಳ್ಳವನಾಗಿಲ್ಲ. ನೃತ್ಯಗಳನ್ನು ನೋಡುವ, ಗೀತಗಳನ್ನು ಕೇಳುವ ಕುತೂಹಲವೂ ನಿನಗಿರುವುದಿಲ್ಲ. ನಿನ್ನ ಮನಸ್ಸಿನಲ್ಲಿ ರಾಗವೆಂಬುದೇ ಹುಟ್ಟಿಲ್ಲ.

ನ ಬನ್ಧುಷ್ವನುಬನ್ಧಸ್ತೇ ನ ಭಯೇಷ್ವಸ್ತಿ ತೇ ಭಯಮ್ ।
ಪಶ್ಯಾಮಿ ತ್ವಾಂ ಮಹಾಭಾಗ ತುಲ್ಯಲೋಷ್ಟಾಶ್ಮಕಾಞ್ಚನಮ್ ॥೪೯॥

ಬಂಧುಗಳ ವಿಷಯದಲ್ಲಿ ನಿನಗೆ ಯಾವ ವಿಧವಾದ ಆಸಕ್ತಿಯೂ ಇಲ್ಲ. ಭಯವುಂಟಾಗಬೇಕಾದ ಸನ್ನಿವೇಶಗಳಲ್ಲಿಯೂ ನಿನಗೆ ಸ್ವಲ್ಪವಾದರೂ ಭಯವಾಗುವುದಿಲ್ಲ. ಮಹಾಭಾಗನೇ! ನೀನು ಕಲ್ಲು-ಮಣ್ಣುಹೆಂಟೆ ಮತ್ತು ಸುವರ್ಣಗಳನ್ನು ಸಮಾನವನ್ನಾಗಿ ಭಾವಿಸಿರುವುದನ್ನು ನಾನು ಕಾಣುತ್ತಿದ್ದೇನೆ.

ಅಹಂ ತ್ವಾಮನುಪಶ್ಯಾಮಿ ಯೇ ಚಾಪ್ಯನ್ಯೇ ಮನೀಷಿಣಃ ।
ಆಸ್ಥಿತಂ ಪರಮಂ ಮಾರ್ಗಮಕ್ಷಯಂ ತಮನಾಮಯಮ್ ॥೫೦॥

ನೀನು ಅಕ್ಷಯವಾದ, ಈತಿಬಾಧೆಗಳಿಂದ ರಹಿತವಾದ, ಶ್ರೇಷ್ಠವಾದ ಮೋಕ್ಷಮಾರ್ಗವನ್ನು ಆಶ್ರಯಿಸಿರತಕ್ಕವನೆಂಬುದನ್ನು ನಾನೂ ತಿಳಿದಿದ್ದೇನೆ. ಇತರ ವಿದ್ವಾಂಸರೂ ಹಾಗೆಯೇ ಭಾವಿಸಿದ್ದಾರೆ.

ಯತ್ಫಲಂ ಬ್ರಾಹ್ಮಣಸ್ಯೇಹ ಮೋಕ್ಷಾರ್ಥಶ್ಚ ಯದಾತ್ಮಕಃ ।
ತಸ್ಮಿನ್ವೈ ವರ್ತಸೇ ಬ್ರಹ್ಮನ್ಕಿಮನ್ಯತ್ಪರಿಪೃಚ್ಛಸಿ ॥೫೧॥

ಬ್ರಾಹ್ಮಣೋತ್ತಮನೇ! ಈ ಜಗತ್ತಿನಲ್ಲಿ ಬ್ರಾಹ್ಮಣನಾಗಿ ಹುಟ್ಟಿರುವುದಕ್ಕೆ ಯಾವ ಮಹಾಫಲವನ್ನು ಪಡೆಯಬೇಕಾಗಿರುವುದೋ –ಅಂತಹ ಮೋಕ್ಷವೆಂಬ ಮಹಾಫಲವನ್ನು ನೀನು ಪಡೆದುಕೊಂಡಿರುವೆ. ನೀನು ಆ ಮೋಕ್ಷಮಾರ್ಗದಲ್ಲಿಯೇ ಇರುವೆ. ಮೋಕ್ಷವು ಯಾವ ಸ್ವರೂಪದ್ದೆಂಬುದನ್ನೂ ನಾನು ನಿನಗೆ ಹೇಳಿದ್ದೇನೆ. ಬೇರೆ ಯಾವ ವಿಷಯವಾಗಿ ನನ್ನನ್ನು ಪ್ರಶ್ನಿಸಬೇಕೆಂದಿರುವೆ?"

೩೨೯ನೆಯ ಅಧ್ಯಾಯವು ಮುಗಿಯಿತು.

೩೩೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ತಂದೆಯ ಬಳಿಗೆ ಶುಕದೇವನ ಪ್ರತ್ಯಾಗಮನ: ವ್ಯಾಸರಿಂದ ಶಿಷ್ಯರಿಗೆ ಸ್ವಾಧ್ಯಾಯದ ವಿಧಿಯ ಉಪದೇಶ

ಮಹಾರಾಜ! ಭೀಷ್ಮನು ಹೇಳುತ್ತಾನೆ :

ಏತಚ್ಛ್ರುತ್ವಾ ತು ವಚನಂ ಕೃತಾತ್ಮಾ ಕೃತನಿಶ್ಚಯಃ ।
ಆತ್ಮನಾತ್ಮಾನಮಾಸ್ಥಾಯ ದೃಷ್ಟ್ವಾ ಚಾತ್ಮಾನಮಾತ್ಮನಾ ॥೧॥

"ಯುಧಿಷ್ಠಿರ! ಜನಕರಾಜನು ಹೇಳಿದ ಮಾತನ್ನು ಕೇಳಿ, ವಿಶುದ್ಧವಾದ ಅಂತಃಕರಣವುಳ್ಳ ಶುಕದೇವನು–ಆತ್ಮದರ್ಶನವನ್ನು ಮಾಡಬೇಕೆಂದು ನಿಶ್ಚಯವನ್ನು ಮಾಡಿ ಬುದ್ಧಿಯಿಂದ ಮನಸ್ಸನ್ನು ಸ್ಥಿರಗೊಳಿಸಿ, ಅದೇ ಬುದ್ಧಿಯ ಮೂಲಕವಾಗಿ ಆತ್ಮನನ್ನು ಸಂದರ್ಶಿಸಿ ಕೃತಾರ್ಥನಾದನು. ಆತ್ಮದರ್ಶನದಿಂದ ಸುಖವನ್ನೂ ಪರಮಶಾಂತಿಯನ್ನೂ ಪಡೆದು ವಾಯುವಿಗೆ ಸಮಾನವಾದ ವೇಗವುಳ್ಳವನಾಗಿದ್ದ ಶುಕನು ಹಿಮವತ್ಪರ್ವತಕ್ಕೆ ಹೋಗಲುದ್ದೇಶಿಸಿ ಉತ್ತರಾಭಿಮುಖವಾಗಿ ಪ್ರಯಾಣಮಾಡಿದನು. ಅದೇ ಸಮಯಕ್ಕೆ

ಸರಿಯಾಗಿ ದೇವರ್ಷಿಗಳಾದ ನಾರದರು ಸಿದ್ಧರಿಂದಲೂ ಚಾರಣರಿಂದಲೂ ಸಂಸೇವಿತವಾಗಿದ್ದ ಹಿಮವತ್ಪರ್ವತವನ್ನು ನೋಡುವ ಸಲುವಾಗಿ ಅಲ್ಲಿಗೆ ಆಗಮಿಸಿದ್ದರು. ಆ ಪರ್ವತವು ಅಪ್ಸರೆಯರ ಸಮೂಹಗಳಿಂದ ಸಮಾವೃತ ವಾಗಿದ್ದಿತು. ನಾಲ್ಕು ಕಡೆಗಳಿಂದಲೂ ಕೇಳಿಬರುತ್ತಿದ್ದ ಪ್ರಾಣಿಗಳ ಸೌಮ್ಯ ವಾದ ಧ್ವನಿಗಳಿಂದ ಅದು ನಿನಾದಿತವಾಗಿದ್ದಿತು. ಸಾವಿರಾರು ಕಿನ್ನರ ರಿಂದಲೂ, ದುಂಬಿಗಳಿಂದಲೂ, ಮದ್ಗು (ನೀರುಕಾಗೆ) ಗಳಿಂದಲೂ, ಗೀಜುಗಹಕ್ಕಿಗಳಿಂದಲೂ, ವಿಚಿತ್ರವಾದ ಚಕೋರಪಕ್ಷಿಗಳಿಂದಲೂ, ಸುಮಧುರವಾದ ನೂರಾರು ಕೇಕಾಶಬ್ದಗಳಿಂದ ವಿರಾಜಿಸುತ್ತಿದ್ದ ಚಿತ್ರ-ವಿಚಿತ್ರವಾದ ವರ್ಣಗಳುಳ್ಳ ನವಿಲುಗಳಿಂದಲೂ, ರಾಜಹಂಸಗಳ ಸಮುದಾಯದಿಂದಲೂ, ಕೃಷ್ಣವರ್ಣದ ಕೋಗಿಲೆಗಳಿಂದಲೂ ವ್ಯಾಪ್ತವಾಗಿದ್ದ ಹಿಮವತ್ಪರ್ವತವನ್ನು ಸಂದರ್ಶಿಸುವ ಸಲುವಾಗಿ ನಾರದರು ಆಗಮಿಸಿದರು. ಪಕ್ಷಿರಾಜನಾದ ಗರುತ್ಮಂತನು ಯಾವ ಪರ್ವತವನ್ನು ಆಶ್ರಯಿಸಿರುವನೋ –ಅಂತಹ ಹಿಮವತ್ಪರ್ವತವನ್ನು ಸಂದರ್ಶಿಸಲು ನಾರದರು ಆಗಮಿಸಿದರು. ಲೋಕಹಿತಾರ್ಥವಾಗಿ ಅನುದಿನವೂ ನಾಲ್ವರು ಲೋಕಪಾಲರೂ –ಋಷಿಗಳ ಸಮೂಹದಿಂದ ಕೂಡಿದ ದೇವತೆಗಳೂ ಹಿಮವತ್ಪರ್ವತಕ್ಕೆ ಬರುತ್ತಾರೆ. ಆ ಪರ್ವತದಲ್ಲಿಯೇ ಮಹಾತ್ಮನಾದ ವಿಷ್ಣುವು (ಶ್ರೀಕೃಷ್ಣನು) ಪುತ್ರಪ್ರಾಪ್ತಿಗಾಗಿ ತಪಸ್ಸುಮಾಡಿದನು. ಬಾಲ್ಯಾವಸ್ಥೆ ಯಲ್ಲಿದ್ದಾಗಲೇ ಹಿಮವತ್ಪರ್ವತದಲ್ಲಿದ್ದ ಕುಮಾರಸ್ವಾಮಿಯಿಂದ ದೇವತೆಗಳು ಪರಾಜಯವನ್ನು ಹೊಂದಿದರು. ಮೂರು ಲೋಕಗಳನ್ನೂ ನಿರ್ಲಕ್ಷಿಸಿ ಕುಮಾರಸ್ವಾಮಿಯು ಅಲ್ಲಿಂದಲೇ ಶಕ್ತ್ಯಾಯುಧವನ್ನು ಭೂಮಿಯ ಮೇಲೆ ಪ್ರಯೋಗಿಸಿದನು. ಮೂರು ಲೋಕಗಳನ್ನೂ ಅವಮಾನಗೊಳಿಸುತ್ತಾ ಸ್ಕಂದನು ತನ್ನ ಶಕ್ತ್ಯಾಯುಧವನ್ನು ಭೂಮಿಯಲ್ಲಿ ನೆಟ್ಟನು. ಹಾಗೆ ಶಕ್ತ್ಯಾಯುಧವನ್ನು ಭೂಮಿಯ ಮೇಲೆ ಎಸೆಯುತ್ತಿದ್ದಾಗ ಕುಮಾರನು ಮೂರು ಜಗತ್ತುಗಳನ್ನೂ ಉದ್ದೇಶಿಸಿ ಈ ಮಾತನ್ನು ಹೇಳಿದನು :

"ಯಾವನಿಗೆ ಬ್ರಾಹ್ಮಣರು ಅತ್ಯಂತಪ್ರಿಯರೋ–ಅಂತಹ ನನ ಗಿಂತಲೂ ಬಲದಲ್ಲಿ ಅಧಿಕನಾದವನು ಈ ಜಗತ್ತಿನಲ್ಲಿ ಯಾವನಿದ್ದಾನೆ? ಮೂರು ಲೋಕಗಳಲ್ಲಿಯೂ ಬ್ರಾಹ್ಮಣಪ್ರಿಯನಾದವನು ಮತ್ತು ಪರಾ

ಕ್ರಮಿಯಾದವನು ನನ್ನನ್ನು ಬಿಟ್ಟು ಎರಡನೆಯವನು ಯಾವನಿದ್ದಾನೆ? ಅಂತಹವನು ಯಾವನಾದರೂ ಇರುವುದಾದರೆ –ನಾನೀಗ ಭೂಮಿಯಲ್ಲಿ ನೆಟ್ಟಿರುವ ಶಕ್ತ್ಯಾಯುಧವನ್ನು ಕಿತ್ತುಹಾಕಲಿ ಅಥವಾ ಅಳ್ಳಾಡಿಸಲಿ."

ತಿರಸ್ಕಾರಪೂರ್ವಕವಾದ ಸ್ಕಂದನ ಆ ಘೋಷಣೆಯನ್ನು ಕೇಳಿ ಮೂರು ಲೋಕದವರೂ ವ್ಯಥಿತರಾದರು. 'ಈ ಶಕ್ತ್ಯಾಯುಧವನ್ನು ಯಾರು ಕಿತ್ತುಹಾಕಬಲ್ಲರು?'–ಎಂಬುದಾಗಿ ಎಲ್ಲರೂ ಚಿಂತಿಸತೊಡಗಿದರು. ಎಲ್ಲ ದೇವತೆಗಳೂ ವ್ಯಾಕುಲವಾದ ಮನಸ್ಸಿನಿಂದಲೂ ಶಿಥಿಲವಾದ ಇಂದ್ರಿಯ ಗಳಿಂದಲೂ ಕೂಡಿರುವುದನ್ನೂ, ಅಸುರ-ರಾಕ್ಷಸರೇ ಆದಿಯಾಗಿ ಎಲ್ಲರೂ ಸ್ಕಂದನಿಂದ ತಿರಸ್ಕರಿಸಲ್ಪಡುತ್ತಿರುವುದನ್ನೂ ಮಹಾವಿಷ್ಣುವು ನೋಡಿದನು. 'ಈಗ ಯಾವ ಕಾರ್ಯವನ್ನು ಮಾಡಿದರೆ ಎಲ್ಲರಿಗೂ ಒಳ್ಳೆಯ ದಾಗುತ್ತದೆ'–ಎಂಬುದಾಗಿ ವಿಷ್ಣುವು ಚಿಂತಿಸತೊಡಗಿದನು. ಸ್ಕಂದನು ದೇವತೆಗಳ ವಿಷಯದಲ್ಲಿ ಮಾಡಿದ ತಿರಸ್ಕಾರವನ್ನು ಸಹಿಸದ ಪುರುಷೋತ್ತಮನಾದ ಮಹಾವಿಷ್ಣುವು ಸ್ಕಂದನನ್ನೊಮ್ಮೆ ನೋಡಿದನು. ವಿಶುದ್ಧಾತ್ಮನಾದ ಮಹಾವಿಷ್ಣುವು ಪ್ರಜ್ವಲಿಸುತ್ತಿದ್ದ ಆ ಶಕ್ತ್ಯಾಯುಧವನ್ನು ಎಡಗೈಯಿಂದ ಬಲವಾಗಿ ಹಿಡಿದು ಅಳ್ಳಾಡಿಸಿದನು. ಮಹಾಬಲಿಷ್ಠನಾದ ವಿಷ್ಣುವು ಸ್ಕಂದನ ಆ ಶಕ್ತ್ಯಾಯುಧವನ್ನು ಎಡಗೈಯಿಂದ ಅಳ್ಳಾಡಿಸುತ್ತಿದ್ದಾಗ ಪರ್ವತ-ವನಾರಣ್ಯಗಳಿಂದ ಸಹಿತವಾದ ಭೂಮಂಡಲವೇ ನಡುಗಿತು. ಮಹಾವಿಷ್ಣುವು ಆ ಶಕ್ತ್ಯಾಯುಧವನ್ನು ಕಿತ್ತುಹಾಕಲು ಸಮರ್ಥನಾಗಿದ್ದರೂ ಅದನ್ನು ಕಿತ್ತುಹಾಕದೇ ಎಡಗೈಯಿಂದ ಅಳ್ಳಾಡಿಸಿದನು. ಹೀಗೆ ಪ್ರಭವಿಷ್ಣುವಾದ ವಿಷ್ಣುವು ಕುಮಾರಸ್ವಾಮಿಗೆ ಆಗಲಿದ್ದ ಮಾನಭಂಗವನ್ನು ತಪ್ಪಿಸಿ ಅವನ ಮಾನವನ್ನು ಕಾಪಾಡಿದನು. ಭೂಮಿಯಲ್ಲಿ ಕುಮಾರನು ನೆಟ್ಟಿದ್ದ ಶಕ್ತ್ಯಾಯುಧವನ್ನು ಅಳ್ಳಾಡಿಸಿದ ನಂತರ ಭಗವಂತನಾದ ಮಹಾವಿಷ್ಣುವು ದೈತ್ಯಪ್ರಮುಖನಾದ ಪ್ರಹ್ಲಾದನಿಗೆ ಹೇಳಿದನು :

ಪಶ್ಯ ವೀರ್ಯಂ ಕುಮಾರಸ್ಯ ನೈತದನ್ಯಃ ಕರಿಷ್ಯತಿ ॥೧೮॥

"ಪ್ರಹ್ಲಾದ! ಈ ಕುಮಾರನ ಬಲವನ್ನಾದರೂ ನೋಡು. ಬೇರೆ ಯಾವನೂ ಇಂತಹ ಕಾರ್ಯವನ್ನು ಮಾಡಲಾರನು."

ಮಹಾವಿಷ್ಣುವು ಹೇಳಿದ ಮಾತು ಪ್ರಹ್ಲಾದನಿಗೆ ಸಹ್ಯವಾಗಲಿಲ್ಲ. ಅವನು ಆ ಶಕ್ತ್ಯಾಯುಧವನ್ನು ಕಿತ್ತುಹಾಕಬೇಕೆಂದೇ ನಿಶ್ಚಯಿಸಿದನು. ಭೂಮಿಯಲ್ಲಿ ನೆಟ್ಟಿದ್ದ ಆ ಶಕ್ತ್ಯಾಯುಧವನ್ನು ಪ್ರಹ್ಲಾದನು ಬಲವಾಗಿ ಹಿಡಿದೆಳೆದನು. ಆದರೆ ಅವನಿಗೆ ಅದನ್ನು ಅಳ್ಳಾಡಿಸಲೂ ಸಾಧ್ಯವಾಗಲಿಲ್ಲ. ಬಳಿಕ ಹಿರಣ್ಯಕಶಿಪುವಿನ ಮಗನಾದ ಪ್ರಹ್ಲಾದನು ಸಂಪೂರ್ಣಬಲ ಪ್ರಯೋಗದಿಂದಲೂ ಶಕ್ತ್ಯಾಯುಧವನ್ನು ಅಳ್ಳಾಡಿಸಲೂ ಆಗದೇ ಆಯಾಸ ಗೊಂಡು ಗಟ್ಟಿಯಾಗಿ ಚೀತ್ಕಾರಮಾಡುತ್ತಾ ವ್ಯಾಕುಲಗೊಂಡು ಮೂರ್ಛಿತ ನಾಗಿ ಆ ಪರ್ವತಶಿಖರದ ಮೇಲಿನ ಭೂಭಾಗದಲ್ಲಿ ಬಿದ್ದುಬಿಟ್ಟನು. ಅದೇ ಸಮಯದಲ್ಲಿ ವೃಷಭಧ್ವಜನಾದ ಪರಶಿವನು ಹಿಮವತ್ಪರ್ವತದ ಮಗ್ಗುಲಿ ನಿಂದ ಉತ್ತರದಿಕ್ಕಿಗೆ ಪ್ರಯಾಣಮಾಡಿ ಆದಿತ್ಯಪರ್ವತಕ್ಕೆ ಹೋಗಿ ಅಲ್ಲಿ ನಿರಂತರವಾಗಿ ಕಷ್ಟಸಾಧ್ಯವಾದ ತಪಸ್ಸನ್ನು ಮಾಡಲು ಉಪಕ್ರಮಿಸಿದನು. ಶಿವನು ತಪಸ್ಸುಮಾಡುತ್ತಿದ್ದ ಆಶ್ರಮವು ನಾಲ್ಕು ಕಡೆಗಳಲ್ಲಿಯೂ ಅಗ್ನಿಯಿಂದ ಸುತ್ತುವರಿಯಲ್ಪಟ್ಟಿದ್ದಿತು. ಆ ಆಶ್ರಮವಿದ್ದ ಆದಿತ್ಯಪರ್ವತವನ್ನು ಜಿತೇಂದ್ರಿಯರಲ್ಲದವರಿಗೆ ಹತ್ತಲು ಸಾಧ್ಯವಾಗುತ್ತಿರಲಿಲ್ಲ. ಯಕ್ಷ-ರಾಕ್ಷಸ-ದಾನವರಿಗೂ ಅಲ್ಲಿಗೆ ಹೋಗಲು ಸಾಧ್ಯವಿರಲಿಲ್ಲ. ಹತ್ತು ಯೋಜನಗಳಷ್ಟು ವಿಸ್ತಾರವಾಗಿದ್ದ ಆ ಆಶ್ರಮಪ್ರದೇಶವು ಅಗ್ನಿಯ ಜ್ವಾಲೆಗಳಿಂದ ಸುತ್ತುವರಿಯಲ್ಪಟ್ಟಿದ್ದಿತು. ವೀರ್ಯವಂತನಾದ ಅಗ್ನಿದೇವನು–ದಿವ್ಯಸಹಸ್ರ ವರ್ಷಗಳ ಪರ್ಯಂತವಾಗಿ ಒಂದೇ ಕಾಲಿನಲ್ಲಿ ನಿಂತು ತಪಸ್ಸುಮಾಡುತ್ತಿದ್ದ, ಧೀಮಂತನಾದ ಮಹಾದೇವನ ತಪಸ್ಸಿಗೆ ಆಗಿಂದಾಗ್ಗೆ ಒದಗಿಬರುತ್ತಿದ್ದ ವಿಘ್ನಗಳೆಲ್ಲವನ್ನೂ ಉಪಶಮನಗೊಳಿಸುತ್ತಾ ಅಲ್ಲಿಯೇ ಸ್ವತಃ ನೆಲೆಸಿ ಬಿಟ್ಟಿದ್ದನು. ಮಹಾವ್ರತನಾದ ಮಹಾದೇವನು ತನ್ನ ಘೋರವಾದ ತಪಸ್ಸಿ ನಿಂದ ದೇವತೆಗಳನ್ನೂ ಸಂತಾಪಗೊಳಿಸುತ್ತಿದ್ದನು. ಅದೇ ಸಮಯದಲ್ಲಿ ಮಹಾತಪಸ್ವಿಗಳಾದ ಮಹಾಮತಿಗಳಾದ ವ್ಯಾಸರು ಧೀಮಂತನಾದ ಹಿಮರಾಜನ ಪೂರ್ವದಿಗ್ಭಾಗವನ್ನು ಆಶ್ರಯಿಸಿ ನಿರ್ಜನವಾಗಿದ್ದ ಆ ಪರ್ವತದ ತಟಪ್ರದೇಶದಲ್ಲಿ ತಮ್ಮ ಶಿಷ್ಯರಾದ ಸುಮಂತು, ಮಹಾಭಾಗ್ಯಶಾಲಿ ಯಾದ ವೈಶಂಪಾಯನ, ಮಹಾಪ್ರಾಜ್ಞನಾದ ಜೈಮಿನಿ, ತಪಸ್ವಿಯಾದ ಪೈಲ – ಇವರಿಗೆ ವೇದಗಳನ್ನು ಅಧ್ಯಯನ ಮಾಡಿಸುತ್ತಿದ್ದರು. ಯಾವ ಆಶ್ರಮದಲ್ಲಿ

ಮಹಾತಪಸ್ವಿಗಳಾದ ವ್ಯಾಸರು ಶಿಷ್ಯರಿಂದ ಪರಿವೃತರಾಗಿ ಕುಳಿತಿದ್ದರೋ ಅಂತಹ ತನ್ನ ತಂದೆಯ ದಿವ್ಯಾಶ್ರಮವನ್ನು ಶುಕನು ನೋಡಿದನು. ಆ ಸಮಯದಲ್ಲಿ ವಿಶುದ್ಧಾತ್ಮನಾದ ಶುಕನು ಆಕಾಶದಲ್ಲಿರುವ ಸೂರ್ಯ ನಂತೆಯೇ ಮಹಾತೇಜಸ್ಸಿನಿಂದ ಪ್ರಕಾಶಿಸುತ್ತಿದ್ದನು. ತೇಜಸ್ಸಿನಿಂದ ಸುತ್ತುವರಿಯಲ್ಪಟ್ಟಿದ್ದ ಅಗ್ನಿದೇವನಂತೆ ಪ್ರಜ್ವಲಿಸುತ್ತಿದ್ದ, ಸೂರ್ಯಪ್ರಭೆಗೆ ಸಮಾನವಾದ ಪ್ರಭೆಯಿಂದ ವಿರಾಜಮಾನನಾಗಿದ್ದ ಮಗನು ಆಶ್ರಮದ ಬಳಿಗೆ ಬರುತ್ತಿದ್ದುದನ್ನು ವ್ಯಾಸರು ನೋಡಿದರು. ನಯನಮನೋಹರವಾದ ವೃಕ್ಷಗಳ ಕಡೆಗಾಗಲೀ, ಸೊಬಗಿನಿಂದ ಕೂಡಿದ್ದ ಪರ್ವತಶಿಖರಗಳ ಕಡೆಗಾಗಲೀ, ಹಾದಿಯಲ್ಲಿ ಸಿಕ್ಕಿದ ದೇಶಗಳ ಕಡೆಗಾಗಲೀ ದೃಷ್ಟಿ-ಮನಸ್ಸುಗಳನ್ನು ಹಾಯಿಸದೆ–ಧನುಸ್ಸಿನ ಶಿಂಜಿನಿಯಿಂದ ಚ್ಯುತವಾದ ಬಾಣದಂತೆ–ತೀವ್ರವೇಗದಿಂದ ನೇರವಾಗಿ ಆಶ್ರಮದ ಕಡೆಗೇ ಬರುತ್ತಿದ್ದ ಶುಕನನ್ನು ವ್ಯಾಸರು ನೋಡಿದರು. ಆಶ್ರಮಕ್ಕೆ ಬಂದನಂತರ ಶುಕನು ತಂದೆಯ ಎರಡು ಪಾದಗಳನ್ನೂ ಹಿಡಿದುಕೊಂಡನು. ಅನಂತರ ಮಹಾಮುನಿಯಾದ ಶುಕನು ಮೌನವಾಗಿ ಇತರ ಶಿಷ್ಯರೊಡನೆ ಸೇರಿಕೊಂಡನು. ಸ್ವಲ್ಪಹೊತ್ತು ಕಳೆದನಂತರ ಪ್ರಸನ್ನಚಿತ್ತನಾಗಿದ್ದ ಶುಕನು ತಂದೆಯೊಡನೆ ತನಗೂ ಮತ್ತು ಜನಕರಾಜನಿಗೂ ನಡೆದ ಸಂವಾದವನ್ನು ಯಾವುದೊಂದು ವಿಷಯವನ್ನೂ ಬಿಡದೇ ನಿವೇದನೆಮಾಡಿಕೊಂಡನು.

ಮುಂದೆಯೂ ಮಹಾಮುನಿಗಳಾದ, ವೀರ್ಯವಂತರಾದ, ಪರಾಶರರ ಮಕ್ಕಳಾದ ವ್ಯಾಸರು ಸುಮಂತುವೇ ಮೊದಲಾದ ಶಿಷ್ಯರಿಗೂ ಮತ್ತು ಮಗ ನಾದ ಶುಕನಿಗೂ ವೇದಾಧ್ಯಯನವನ್ನು ಮಾಡಿಸುತ್ತಾ ಹಿಮವತ್ಪರ್ವತದ ತಟಪ್ರದೇಶದಲ್ಲಿಯೇ ಅನೇಕವರ್ಷಗಳವರೆಗೆ ವಾಸಮಾಡುತ್ತಿದ್ದರು.

ಒಂದು ಸಮಯದಲ್ಲಿ ಸುಮಂತುವೇ ಮೊದಲಾದ ಶಿಷ್ಯರೆಲ್ಲರೂ ವ್ಯಾಸರನ್ನು ಸುತ್ತುವರಿದು ಕುಳಿತಿದ್ದರು. ಆ ಶಿಷ್ಯರೆಲ್ಲರೂ ವೇದಾಧ್ಯಯನ ಸಂಪನ್ನರಾಗಿದ್ದರು. ಶಾಂತಚಿತ್ತರಾಗಿಯೂ ಜಿತೇಂದ್ರಿಯರಾಗಿಯೂ ಇದ್ದರು. ತಪಸ್ವಿಗಳಾಗಿದ್ದ ಅವರು ವೇದಗಳಲ್ಲಿಯೂ ವೇದಾಂಗಗಳಲ್ಲಿಯೂ ಪ್ರಾವೀಣ್ಯವನ್ನು ಪಡೆದಿದ್ದರು. ಆ ಶಿಷ್ಯರೆಲ್ಲರೂ ಕೈಮುಗಿದುಕೊಂಡು ಗುರುಗಳಾದ ವ್ಯಾಸರಿಗೆ ಹೇಳಿದರು :

ಮಹತಾ ತೇಜಸಾ ಯುಕ್ತಾ ಯಶಸಾ ಚಾಪಿ ವರ್ಧಿತಾಃ ।
ಏಕಂ ತ್ವಿದಾನೀಮಿಚ್ಛಾಮೋ ಗುರುಣಾನುಗ್ರಹಂ ಕೃತಮ್ ॥೩೭॥

"ಗುರುದೇವ! ನಾವು ತಮ್ಮ ಕೃಪೆಯಿಂದ ಮಹಾತೇಜಸ್ವಿಗಳಾಗಿದ್ದೇವೆ. ನಮ್ಮ ಯಶಸ್ಸೂ ಎಲ್ಲ ಕಡೆಗಳಲ್ಲಿಯೂ ಹರಡಿಹೋಗಿದೆ. ಈಗ ನಾವು ಗುರುಗಳಾದ ತಮ್ಮಿಂದ ಒಂದು ಅನುಗ್ರಹವಾಗಬೇಕೆಂದು ಇಚ್ಛಿಸುತ್ತೇವೆ."

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ಶಿಷ್ಯರ ಈ ಮಾತನ್ನು ಕೇಳಿ ಬ್ರಹ್ಮರ್ಷಿಗಳಾದ ವ್ಯಾಸರು ಹೇಳಿದರು :

ಉಚ್ಯತಾಮಿತಿ ತದ್ವತ್ಸಾ ಯದ್ವಃ ಕಾರ್ಯಂ ಪ್ರಿಯಂ ಮಯಾ ॥

"ಮಕ್ಕಳೇ! ನೀವು ಯಾವುದನ್ನು ಅಪೇಕ್ಷಿಸುವಿರೆಂಬುದನ್ನು ಹೇಳಿರಿ. ನಾನು ನಿಮಗೆ ಯಾವ ಪ್ರಿಯವಾದ ಕಾರ್ಯವನ್ನು ಮಾಡಿಕೊಡಬೇಕಾಗಿದೆ?"

ಗುರುಗಳ ಈ ಮಾತನ್ನು ಕೇಳಿ ಶಿಷ್ಯರೆಲ್ಲರೂ ಪರಮಹೃಷ್ಟರಾದರು. ಪುನಃ ಕೈಜೋಡಿಸಿಕೊಂಡು ಗುರುಗಳಿಗೆ ತಲೆಬಾಗಿ ನಮಸ್ಕರಿಸಿ ಶಿಷ್ಯರೆಲ್ಲರೂ ಒಟ್ಟಾಗಿ ಸೇರಿ ಉತ್ತಮೋತ್ತಮವಾದ ಈ ಮಾತನ್ನು ವ್ಯಾಸರೊಡನೆ ಹೇಳಿದರು :

ಯದಿ ಪ್ರೀತ ಉಪಾಧ್ಯಾಯೋ ಧನ್ಯಾಃ ಸ್ಮೋ ಮುನಿಸತ್ತಮ ॥೩೯॥

"ಮುನಿಶ್ರೇಷ್ಠರೇ! ಉಪಾಧ್ಯಾಯರು ನಮ್ಮ ವಿಷಯದಲ್ಲಿ ಪ್ರಸನ್ನರಾಗಿರುವುದಾದರೆ ನಾವು ನಿಶ್ಚಯವಾಗಿಯೂ ಧನ್ಯರೇ ಸರಿ.

ಕಾಂಕ್ಷಾಮಸ್ತು ವಯಂ ಸರ್ವೇ ವರಂ ದಾತುಂ ಮಹರ್ಷಿಣಾ ।
ಷಷ್ಠಃ ಶಿಷ್ಯೋ ನ ತೇ ಖ್ಯಾತಿಂ ಗಚ್ಛೇದತ್ರ ಪ್ರಸೀದ ನಃ ॥೪೦॥

ನಾವೆಲ್ಲರೂ ಮಹರ್ಷಿಗಳಾದ ತಮ್ಮಿಂದ ಒಂದು ವರವನ್ನು ಪಡೆದುಕೊಳ್ಳಲು ಇಷ್ಟಪಡುತ್ತೇವೆ. ನಿಮ್ಮ ಆರನೆಯ ಶಿಷ್ಯನು ವಿಖ್ಯಾತನಾಗಬಾರದು. ಇದೇ ನಾವು ಅಪೇಕ್ಷಿಸಿರುವ ವರವಾಗಿದೆ. ಈ ವರವನ್ನು ದಯಪಾಲಿಸಿ ನಮ್ಮ ವಿಷಯದಲ್ಲಿ ಪ್ರಸನ್ನರಾಗಿರಿ.

ಚತ್ವಾರಸ್ತೇ ವಯಂ ಶಿಷ್ಯಾ ಗುರುಪುತ್ರಶ್ಚ ಪಞ್ಚಮಃ ।
ಇಹ ವೇದಾಃ ಪ್ರತಿಷ್ಠೇರನ್ನೇಷ ನಃ ಕಾಂಕ್ಷಿತೋ ವರಃ ॥೪೧॥

ನಾವು ನಾಲ್ವರೂ ತಮ್ಮ ಶಿಷ್ಯರಾಗಿದ್ದೇವೆ. ಗುರುಪುತ್ರನಾದ ಶುಕನು ಐದನೆಯವನಾಗಿದ್ದಾನೆ. ಈ ಐವರಲ್ಲಿಯೇ ನೀವು ಅಧ್ಯಾಪನಮಾಡಿಸಿರುವ ಎಲ್ಲ ವೇದಗಳೂ ಪ್ರತಿಷ್ಠಿತವಾಗಿರಬೇಕು. ನಾವು ತಮ್ಮಿಂದ ಅಪೇಕ್ಷಿಸಿರುವ ವರವು ಇದೇ ಆಗಿದೆ."

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ಶಿಷ್ಯರು ಹೇಳಿದ ಮಾತನ್ನು ಕೇಳಿ ವೇದಾರ್ಥತತ್ತ್ವವಿದರಾದ, ಪರಾಶರರ ಮಕ್ಕಳಾದ, ಬುದ್ಧಿವಂತರಾದ, ಪಾರಲೌಕಿಕ ಪ್ರಯೋಜನವನ್ನೇ ಸದಾಕಾಲದಲ್ಲಿಯೂ ಚಿಂತಿಸುವ, ಧರ್ಮಾತ್ಮರಾದ ವ್ಯಾಸರು ಶಿಷ್ಯರನ್ನು ಕುರಿತು ಧರ್ಮಾನುಕೂಲವಾದ, ಮೋಕ್ಷಾನುಕೂಲವಾದ ಈ ಮಾತನ್ನು ಹೇಳಿದರು :

ಬ್ರಾಹ್ಮಣಾಯ ಸದಾ ದೇಯಂ ಬ್ರಹ್ಮ ಶುಶ್ರೂಷವೇ ತಥಾ ।
ಬ್ರಹ್ಮಲೋಕೇ ನಿವಾಸಂ ಯೋ ಧ್ರುವಂ ಸಮಭಿಕಾಂಕ್ಷತೇ ॥೪೩॥

"ಮಕ್ಕಳೇ! ಬ್ರಹ್ಮಲೋಕದಲ್ಲಿ ಶಾಶ್ವತವಾದ ನಿವಾಸವನ್ನು ಯಾವನು ಅಪೇಕ್ಷಿಸುವನೋ ಅವನು ವೇದವನ್ನು ಅಧ್ಯಯನಮಾಡುವ ಇಚ್ಛೆಯಿಂದ ಬರುವ ಶುಶ್ರೂಷಾಪರನಾದ ಬ್ರಾಹ್ಮಣನಿಗೆ ಸದಾಕಾಲದಲ್ಲಿಯೂ ವೇದಾಧ್ಯಯನವನ್ನು ಮಾಡಿಸಲೇಬೇಕು.

ಭವನ್ತೋ ಬಹುಲಾಃ ಸನ್ತು ವೇದೋ ವಿಸ್ತಾರ್ಯತಾಮಯಮ್ ।
ನಾಶಿಷ್ಯೇ ಸಮ್ಪ್ರದಾತವ್ಯೋ ನಾವ್ರತೇ ನಾಕೃತಾತ್ಮನಿ ॥೪೪॥

ನೀವು ಶಿಷ್ಯರ ವೃದ್ಧಿಯಿಂದ ಬಹಳವಾಗಿ ಬೆಳೆಯಿರಿ. ಈ ವೇದವನ್ನು ಎಲ್ಲೆಲ್ಲಿಯೂ ಹರಡಿರಿ. ಆದರೆ ಜಿತೇಂದ್ರಿಯನಲ್ಲದವನಿಗೆ, ಬ್ರಹ್ಮಚರ್ಯ ವ್ರತವನ್ನು ಪರಿಪಾಲಿಸದೇ ಇರುವವನಿಗೆ, ಶಿಷ್ಯಭಾವದಿಂದ ಅಧ್ಯಯನ ಮಾಡಲು ಬಾರದವನಿಗೆ –ವೇದಗಳನ್ನು ಅಧ್ಯಯನಮಾಡಿಸಬಾರದು.

ಏತೇ ಶಿಷ್ಯಗುಣಾಃ ಸರ್ವೇ ವಿಜ್ಞಾತವ್ಯಾ ಯಥಾರ್ಥತಃ ।
ನಾಪರೀಕ್ಷಿತಚಾರಿತ್ರೇ ವಿದ್ಯಾ ದೇಯಾ ಕಥಂಚನ ॥೪೫॥

ಇವುಗಳೆಲ್ಲವೂ ಶಿಷ್ಯನಲ್ಲಿರಬೇಕಾದ ಗುಣಗಳು. ಶಿಷ್ಯನನ್ನು ಸ್ವೀಕರಿಸುವ ಮೊದಲು ಅವನಲ್ಲಿ ಈ ಗುಣಗಳಿವೆಯೋ ಇಲ್ಲವೋ – ಎಂಬುದನ್ನು ಯಥಾವತ್ತಾಗಿ ತಿಳಿದುಕೊಳ್ಳಬೇಕು. ಒಬ್ಬನ ಸ್ವಭಾವ-ಶೀಲಗಳನ್ನು ಪರೀಕ್ಷಿಸದೇ ವಿದ್ಯಾದಾನಮಾಡಬಾರದು.

ಯಥಾ ಹಿ ಕನಕಂ ಶುದ್ಧಂ ತಾಪಚ್ಛೇದನಿಕರ್ಷಣೈಃ ।
ಪರೀಕ್ಷೇತ ತಥಾ ಶಿಷ್ಯಾನೀಕ್ಷೇತ್ಕುಲಗುಣಾದಿಭಿಃ ॥೪೬॥

ಯಾವ ರೀತಿಯಲ್ಲಿ ಬೆಂಕಿಯಲ್ಲಿ ಕಾಯಿಸುವಿಕೆಯಿಂದಲೂ, ಕತ್ತರಿಸುವಿಕೆಯಿಂದಲೂ ಮತ್ತು ಒರೆಗಲ್ಲಿನ ಮೇಲೆ ಉಜ್ಜುವಿಕೆಯಿಂದಲೂ ಚಿನ್ನವು ಶುದ್ಧವಾಗಿದೆಯೋ ಇಲ್ಲವೋ –ಎಂಬುದನ್ನು ಪರೀಕ್ಷಿಸುವರೋ– ಅದೇ ರೀತಿಯಲ್ಲಿ ಕುಲ-ಗುಣಾದಿಗಳಿಂದ ಶಿಷ್ಯನನ್ನು ಪರೀಕ್ಷಿಸಬೇಕು.

ನ ನಿಯೋಜ್ಯಾಶ್ಚ ವಃ ಶಿಷ್ಯಾ ಅನಿಯೋಗೇ ಮಹಾಭಯೇ ॥೪೭॥
ಯಥಾಮತಿ ಯಥಾಪಾಠಂ ತಥಾ ವಿದ್ಯಾ ಫಲಿಷ್ಯತಿ ।
ಸರ್ವಸ್ತರತು ದುರ್ಗಾಣಿ ಸರ್ವೋ ಭದ್ರಾಣಿ ಪಶ್ಯತು ॥೪೮॥

ನೇಮಿಸಬಾರದ ಕೆಲಸಕ್ಕೆ ನೀವು ನಿಮ್ಮ ಶಿಷ್ಯರನ್ನು ನೇಮಿಸಬಾರದು. ಮಹಾಭಯದ ಕಾರ್ಯದಲ್ಲಿಯೂ ಶಿಷ್ಯರನ್ನು ನೇಮಿಸಬಾರದು. ಯಾವ ರೀತಿಯಲ್ಲಿ ಶಿಷ್ಯನ ಬುದ್ಧಿಯಿರುವುದೋ –ಯಾವ ರೀತಿಯಲ್ಲಿ ನೀವು ಶಿಷ್ಯನಿಗೆ ಪಾಠವನ್ನು ಹೇಳುವಿರೋ –ಅದಕ್ಕೆ ಅನುಗುಣವಾಗಿಯೇ ಶಿಷ್ಯನಲ್ಲಿ ವಿದ್ಯೆಯು ಫಲಿಸುತ್ತದೆ. ಎಲ್ಲರೂ ಎಲ್ಲ ರೀತಿಯ ಸಂಕಟಗಳಿಂದಲೂ ಪಾರಾಗಲಿ ; ಎಲ್ಲರೂ ಕಲ್ಯಾಣವನ್ನು ಕಾಣಲಿ.

ಶ್ರಾವಯೇಚ್ಚತುರೋ ವರ್ಣಾನ್ಕೃತ್ವಾ ಬ್ರಾಹ್ಮಣಮಗ್ರತಃ ।
ವೇದಸ್ಯಾಧ್ಯಯನಂ ಹೀದಂ ತಚ್ಚ ಕಾರ್ಯಂ ಮಹತ್ಸ್ಮೃತಮ್ ॥೪೯॥

ಬ್ರಾಹ್ಮಣನನ್ನು ಮುಂದಿಟ್ಟುಕೊಂಡು ನಾಲ್ಕು ವರ್ಣದವರಿಗೂ ಧರ್ಮೋಪದೇಶವನ್ನು ಮಾಡಬೇಕು. ಈ ವೇದಾಧ್ಯಯನವೆಂಬುದು ಮಹಾಕಾರ್ಯವೆಂದು ಹೇಳಲ್ಪಟ್ಟಿದೆ. ಆದುದರಿಂದ ಈ ಮಹಾಕಾರ್ಯವನ್ನು ಅವಶ್ಯವಾಗಿ ಮಾಡಲೇಬೇಕು.

ಸ್ತುತ್ಯರ್ಥಮಿಹ ದೇವಾನಾಂ ವೇದಾಃ ಸೃಷ್ಟಾಃ ಸ್ವಯಮ್ಭುವಾ ।
ಯೋ ನಿರ್ವದೇತ ಸಮ್ಮೋಹಾದ್ಬ್ರಾಹ್ಮಣಂ ವೇದಪಾರಗಮ್ ।
ಸೋಽಭಿಧ್ಯಾನಾದ್ಬ್ರಾಹ್ಮಣಸ್ಯ ಪರಾಭೂಯಾದಸಂಶಯಮ್ ॥೫೦॥

ಸ್ವಯಂಭೂಬ್ರಹ್ಮನು ದೇವತೆಗಳನ್ನು ಸ್ತೋತ್ರಮಾಡುವ ಸಲುವಾಗಿ ದೇವಸ್ತುತ್ಯಾತ್ಮಕವಾದ ವೇದಗಳನ್ನು ಸೃಷ್ಟಿಸಿದನು. ವೇದಪಾರಂಗತನಾದ ಬ್ರಾಹ್ಮಣನನ್ನು ಯಾವನು ಮೋಹವಶನಾಗಿ ನಿಂದಿಸುವನೋ –ಅವನು ಬ್ರಾಹ್ಮಣನ ನಿಂದನೆಯ (ಅನಿಷ್ಟಚಿಂತನೆಯ) ಪರಿಣಾಮವಾಗಿ ಎಲ್ಲದರಲ್ಲಿಯೂ ಪರಾಭವವನ್ನು ಹೊಂದುತ್ತಾನೆಂಬುದರಲ್ಲಿ ಸಂಶಯವೇ ಇಲ್ಲ.

ಯಶ್ಚಾಧರ್ಮೇಣ ವಿಬ್ರೂಯಾದ್ಯಶ್ಚಾಧರ್ಮೇಣ ಪೃಚ್ಛತಿ ।
ತಯೋರನ್ಯತರಃ ಪ್ರೈತಿ ವಿದ್ವೇಷಂ ಚಾಧಿಗಚ್ಛತಿ ॥೫೧॥

ಯಾವನು ಅಧರ್ಮದಿಂದ (ಉಚಿತವಲ್ಲದ ರೀತಿಯಲ್ಲಿ) ಪ್ರಶ್ನಿಸುವನೋ ಮತ್ತು ಯಾವನು ಅಧರ್ಮದಿಂದಲೇ (ಉಚಿತವಲ್ಲದ ರೀತಿಯಲ್ಲಿಯೇ) ಉತ್ತರಿಸುವನೋ–ಆ ಇಬ್ಬರಲ್ಲಿ ಒಬ್ಬನು ಮರಣಹೊಂದುತ್ತಾನೆ (ಭ್ರಷ್ಟನಾಗುತ್ತಾನೆ). ಆ ಇಬ್ಬರಲ್ಲಿ ಪರಸ್ಪರವಾಗಿ ವೈಮನಸ್ಯವೂ ಉಂಟಾಗುತ್ತದೆ.

ಏತದ್ವಃ ಸರ್ವಮಾಖ್ಯಾತಂ ಸ್ವಾಧ್ಯಾಯಸ್ಯ ವಿಧಿಂ ಪ್ರತಿ ।
ಉಪಕುರ್ಯಾಚ್ಚ ಶಿಷ್ಯಾಣಾಮೇತಚ್ಚ ಹೃದಿ ವೋ ಭವೇತ್ ॥೫೨॥

ಸ್ವಾಧ್ಯಾಯದ ವಿಧಿಯನ್ನು ಕುರಿತು ನಿಮಗೆ ಎಲ್ಲ ವಿಷಯಗಳನ್ನೂ ಹೇಳಿದ್ದೇನೆ. ನೀವು ಶಿಷ್ಯರಿಗೆ ಉಪಕಾರವನ್ನು ಮಾಡಬೇಕು. ಈ ಎಲ್ಲವೂ ನಿಮ್ಮ ಮನಸ್ಸಿನಲ್ಲಿರಲಿ.”

ಾ
ಿ೩೨೭ನೆಯ ಅಧ್ಯಾಯವು ಮುಗಿಯಿತು.

ಶಿಷ್ಯರೆಲ್ಲರೂ ಹೊರಟುಹೋದನಂತರ ವ್ಯಾಸರ ಆಶ್ರಮಕ್ಕೆ ನಾರದರ ಆಗಮನ: ವೇದಪಾರಾಯಣಕ್ಕಾಗಿ ನಾರದರಿಂದ ಪ್ರಚೋದನೆ: ವ್ಯಾಸರಿಂದ ಶುಕನಿಗೆ ಪ್ರವಹವೇ ಮೊದಲಾದ ಏಳು ವಾಯುಗಳ ಪರಿಚಯ

ಜನಮೇಜಯ! ಭೀಷ್ಮನು ಹೇಳುತ್ತಾನೆ :

ಏತಚ್ಛ್ರುತ್ವಾ ಗುರೋರ್ವಾಕ್ಯಂ ವ್ಯಾಸಶಿಷ್ಯಾ ಮಹೌಜಸಃ ।
ಅನ್ಯೋನ್ಯಂ ಹೃಷ್ಟಮನಸಃ ಪರಿಷಸ್ವಜಿರೇ ತದಾ ॥೧॥

"ಜನಮೇಜಯ! ಗುರುಗಳು ಹೇಳಿದ ಈ ಮಾತನ್ನು ಕೇಳಿ ಮಹಾತೇಜಸ್ವಿಗಳಾಗಿದ್ದ ವ್ಯಾಸಶಿಷ್ಯರು ಪರಮಹೃಷ್ಟರಾಗಿ ಒಬ್ಬರನ್ನೊಬ್ಬರು ಆಲಿಂಗನೆ ಮಾಡಿಕೊಂಡರು. ಅನಂತರ ಗುರುಗಳಾದ ವ್ಯಾಸರನ್ನು ಕುರಿತು ಹೇಳಿದರು :

"ಗುರುದೇವ! ನೀವು ನಮ್ಮ ಮುಂದಿನ ಹಿತಕ್ಕೆ ಸಂಬಂಧಿಸಿದಂತೆ ಯಾವುದನ್ನು ಉಪದೇಶಿಸಿರುವಿರೋ –ಅದು ನಮ್ಮ ಮನಸ್ಸಿನಲ್ಲಿ ದೃಢವಾಗಿ ಬೇರೂರಿ ನಿಂತಿದೆ. ಆವಶ್ಯಕವಾಗಿ ತಮ್ಮ ಉಪದೇಶದಂತೆಯೇ ನಾವು ನಡೆದುಕೊಳ್ಳುತ್ತೇವೆ."

ಯುಧಿಷ್ಠಿರ! ಈ ಪರಿಯಾಗಿ ಸಂಭಾಷಣೆಮಾಡುತ್ತಾ ಗುರು-ಶಿಷ್ಯರು ಪ್ರಸನ್ನಮನಸ್ಕರಾಗಿದ್ದರು. ಸ್ವಲ್ಪ ಹೊತ್ತು ಕಳೆದನಂತರ ಪುನಃ ವಾಕ್ಯ ವಿಶಾರದರಾದ ಸುಮಂತುವೇ ಮೊದಲಾದ ಶಿಷ್ಯರು ಗುರುಗಳಲ್ಲಿ ಹೀಗೆ ವಿಜ್ಞಾಪನೆಮಾಡಿಕೊಂಡರು :

ಶೈಲಾದಸ್ಮಾನ್ಮಹೀಂ ಗನ್ತುಂ ಕಾಂಕ್ಷಿತಂ ನೋ ಮಹಾಮುನೇ ।
ವೇದಾನನೇಕಧಾ ಕರ್ತುಂ ಯದಿ ತೇ ರುಚಿತಂ ಪ್ರಭೋ ॥೪॥

"ಮಹಾಮುನಿಗಳೇ! ಈಗ ನಾವು ಈ ಪರ್ವತದಿಂದ ಭೂಪ್ರದೇಶಕ್ಕೆ ಹೋಗುವ ಇಚ್ಛೆಯುಳ್ಳವರಾಗಿದ್ದೇವೆ. ವೇದಗಳನ್ನು ಅನೇಕಪ್ರಕಾರವಾಗಿ ವಿಭಾಗಿಸಿ ಅವನ್ನು ಪ್ರಚುರಪಡಿಸುವುದೇ ನಮ್ಮ ಈ ಯಾತ್ರೆಯ ಉದ್ದೇಶ

ವಾಗಿದೆ. ಈ ನಮ್ಮ ಯೋಜನೆಯು ತಮಗೂ ರುಚಿಸುವುದಾಗಿದ್ದರೆ ಇದಕ್ಕಾಗಿ ದಯಮಾಡಿ ನಮಗೆ ಹೋಗಿಬರಲು ಅನುಜ್ಞೆಯನ್ನು ನೀಡಿರಿ."

ಯುಧಿಷ್ಠಿರ! ಶಿಷ್ಯರು ಹೇಳಿದ ಮಾತನ್ನು ಕೇಳಿ ಪರಾಶರರ ಮಕ್ಕಳಾದ ಭಗವಾನ್ ವ್ಯಾಸರು ಧರ್ಮಾರ್ಥಸಹಿತವೂ ಹಿತಕರವೂ ಆದ ಮಾತನ್ನು ಹೇಳಿದರು :

ಕ್ಷಿತಿಂ ವಾ ದೇವಲೋಕಂ ವಾ ಗಮ್ಯತಾಂ ಯದಿ ರೋಚತೇ ।
ಅಪ್ರಮಾದಶ್ಚ ವಃ ಕಾರ್ಯೋ ಬ್ರಹ್ಮ ಹಿ ಪ್ರಚುರಚ್ಛಲಮ್ ॥೬॥

"ಶಿಷ್ಯರೇ! ನಿಮಗೆ ರುಚಿಸುವುದಾಗಿದ್ದರೆ ನೀವು ಭೂಲೋಕಕ್ಕಾದರೂ ಹೋಗಿರಿ ; ದೇವಲೋಕಕ್ಕಾದರೂ ಹೋಗಿರಿ. ಆದರೆ ವೇದದ ಪ್ರಚಾರವನ್ನು ನೀವು ಜಾಗರೂಕತೆಯಿಂದ ಮಾಡಬೇಕಾಗಿದೆ. ಏಕೆಂದರೆ ಅದಕ್ಕೆ ಮೋಸಮಾಡುವವರು ಬಹುಮಂದಿ ಇರುತ್ತಾರೆ. (ಆದುದರಿಂದ ತುಂಬಾ ಎಚ್ಚರದಿಂದ ಅದನ್ನು ಪ್ರಸಾರಮಾಡಬೇಕು.)"– ಎಂಬುದಾಗಿ ಹೇಳಿ ಶಿಷ್ಯರಿಗೆ ಹೋಗಲು ಅನುಮತಿಯನ್ನಿತ್ತರು. ಸತ್ಯವಾದಿಗಳಾದ ಗುರುಗಳಿಂದ ಅನುಜ್ಞೆಯನ್ನು ಪಡೆದ ಶಿಷ್ಯರೆಲ್ಲರೂ ಗುರುಗಳಿಗೆ ಪ್ರದಕ್ಷಿಣೆಮಾಡಿ ತಲೆಬಾಗಿ–ಕಾಲುಗಳನ್ನು ಮುಟ್ಟಿ ನಮಸ್ಕರಿಸಿ ಅಲ್ಲಿಂದ ಹೊರಟು ಹೋದರು. ವ್ಯಾಸಶಿಷ್ಯರು ಪರ್ವತಪ್ರದೇಶದಿಂದ ಕೆಳಗಿಳಿದು ಭೂಮಿಯನ್ನು ಸೇರಿ ಅಗ್ನಿಹೋತ್ರ ಮೊದಲ್ಗೊಂಡು ಸೋಮಯಾಗದವರೆಗೆ ಇರುವ ಕರ್ಮಗಳೆಲ್ಲವನ್ನೂ ಪ್ರಚಾರಮಾಡಿದರು. ಸತ್ಕುಲಪ್ರಸೂತೆಯರಾದ ಕನ್ಯೆಯರನ್ನು ವಿಧಿಪೂರ್ವಕವಾಗಿ ವಿವಾಹಮಾಡಿಕೊಂಡು ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಬ್ರಾಹ್ಮಣರಿಗೂ, ಕ್ಷತ್ರಿಯರಿಗೂ, ವೈಶ್ಯರಿಗೂ ಯಜ್ಞಾದಿಗಳನ್ನು ಮಾಡಿಸುತ್ತಾ ದ್ವಿಜರಿಂದ (ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಂದ) ಅನುದಿನವೂ ಪೂಜಿಸಲ್ಪಡುತ್ತಾ ಆನಂದದಿಂದಿರುತ್ತಿದ್ದರು. ಯಜ್ಞಮಾಡಿಸುವುದರಲ್ಲಿಯೂ ಮತ್ತು ಅಧ್ಯಯನಮಾಡಿಸುವುದರಲ್ಲಿಯೂ ಸರ್ವದಾ ನಿರತರಾಗಿರುತ್ತಿದ್ದ ಶ್ರೀಮಂತರಾದ ಗೃಹಸ್ಥಧರ್ಮದಲ್ಲಿ ನಿರತರಾದ ವ್ಯಾಸಶಿಷ್ಯರು ಕಾಲಕ್ರಮದಲ್ಲಿ ಲೋಕವಿಖ್ಯಾತರಾದರು.

ಶಿಷ್ಯರೆಲ್ಲರೂ ಪರ್ವತದಿಂದಿಳಿದು ಭೂಪ್ರದೇಶಕ್ಕೆ ಹೊರಟುಹೋದ ನಂತರ ಪುತ್ರನೊಬ್ಬನನ್ನೇ ಸಹಾಯಕನನ್ನಾಗಿ ಹೊಂದಿದ್ದ ಧೀಮಂತರಾದ ವ್ಯಾಸರು ಏಕಾಂತದಲ್ಲಿ ಕೇವಲಧ್ಯಾನಪರರಾಗಿ ಕುಳಿತುಬಿಟ್ಟರು. ಆ ಸಮಯಕ್ಕೆ ಸರಿಯಾಗಿ ಮಹಾತಪಸ್ವಿಗಳಾದ ನಾರದರು ವ್ಯಾಸರ ಆಶ್ರಮಕ್ಕೆ ಬಂದು



ಆಶ್ರಮದ ಏಕಾಂತಸ್ಥಳದಲ್ಲಿ ವ್ಯಾಸರು ಧ್ಯಾನಮಗ್ನರಾಗಿರುವುದನ್ನು ನೋಡಿದರು. ಸ್ವಲ್ಪಕಾಲವು ಕಳೆದು ವ್ಯಾಸರು ಧ್ಯಾನದಿಂದ ವಿಮುಖರಾದ ನಂತರ ನಾರದರು ಮಧುರಾಕ್ಷರಯುಕ್ತವಾದ ಮಾತಿನಿಂದ ವ್ಯಾಸರಿಗೆ ಹೇಳಿದರು :

ಭೋ ಭೋ ಬ್ರಹ್ಮರ್ಷಿವಾಸಿಷ್ಠ ಬ್ರಹ್ಮಘೋಷೋ ನ ವರ್ತತೇ ।
ಏಕೋ ಧ್ಯಾನಪರಸ್ತೂಷ್ಣೀಂ ಕಿಮಾಸ್ಸೇ ಚಿನ್ತಯನ್ನಿವ ॥೧೨॥

"ಭೋ ಭೋ ವಸಿಷ್ಠಪೌತ್ರನಾದ ಬ್ರಹ್ಮರ್ಷಿಯೇ! ಈಗ ಈ ನಿನ್ನ ಆಶ್ರಮದಲ್ಲಿ ವೇದಘೋಷವೇ ಕೇಳಿಬರುತ್ತಿಲ್ಲ. ಏನನ್ನೋ ಚಿಂತಿಸುತ್ತಿರುವಂತೆ ಮೌನವನ್ನು ಧರಿಸಿ ಒಬ್ಬನೇ ಧ್ಯಾನಮಗ್ನನಾಗಿ ಏಕೆ ಕುಳಿತಿರುವೆ?

ಬ್ರಹ್ಮಘೋಷೈರ್ವಿರಹಿತಃ ಪರ್ವತೋಽಯಂ ನ ಶೋಭತೇ ।
ರಜಸಾ ತಮಸಾ ಚೈವ ಸೋಮಃ ಸೋಪಪ್ಲವೋ ಯಥಾ ॥೧೩॥

ನ ಭ್ರಾಜತೇ ಯಥಾಪೂರ್ವಂ ನಿಷಾದಾನಾಮಿವಾಲಯಃ ।
ದೇವರ್ಷಿಗಣಜುಷ್ಟೋಽಪಿ ವೇದಧ್ವನಿನಿರಾಕೃತಃ ॥೧೪॥

ವೇದಘೋಷಗಳಿಂದ ರಹಿತವಾಗಿರುವ ಈ ಪರ್ವತವು ಹಿಂದಿನಂತೆ ಪರಿಶೋಭಿಸುತ್ತಿಲ್ಲ. ಧೂಳಿನಿಂದಲೂ ಮತ್ತು ಕತ್ತಲಿನಿಂದಲೂ ಆಚ್ಛಾದಿತನಾದ ರಾಹುಗ್ರಸ್ತನಾದ ಚಂದ್ರನಂತೆಯೇ ಈ ಪರ್ವತವೀಗ ಕಾಣುತ್ತಿದೆ. ದೇವರ್ಷಿಗಳ ಸಮೂಹಗಳಿಂದ ಸೇವಿಸಲ್ಪಡುತ್ತಿದ್ದರೂ ವೇದಘೋಷಗಳಿಂದ ವಿಹೀನವಾಗಿರುವ ಈ ಪರ್ವತವು ಬೇಡರ ಮನೆಯಂತಿದೆ. ಹಿಂದಿನಂತೆ ಪ್ರಕಾಶಿಸುತ್ತಿಲ್ಲ.

ಋಷಯಶ್ಚ ಹಿ ದೇವಾಶ್ಚ ಗನ್ಧರ್ವಾಶ್ಚ ಮಹೌಜಸಃ ।
ವಿಯುಕ್ತಾ ಬ್ರಹ್ಮಘೋಷೇಣ ನ ಭ್ರಾಜನ್ತೇ ಯಥಾ ಪುರಾ ॥೧೫॥

ಪರ್ವತವು ಮಾತ್ರವೇ ಅಲ್ಲ ; ಇಲ್ಲಿರುವ ಋಷಿಗಳೂ, ದೇವತೆಗಳೂ, ಮಹಾತೇಜಸ್ವಿಗಳಾದ ಗಂಧರ್ವರೂ ವೇದಘೋಷದಿಂದ ವಿಯುಕ್ತರಾಗಿರುವುದರಿಂದ (ವೇದಘೋಷವನ್ನು ಕೇಳದೇ ಇರುವುದರಿಂದ) ಹಿಂದಿನಂತೆ ಪ್ರಕಾಶಮಾನರಾಗಿ ಕಾಣುತ್ತಿಲ್ಲ."

ಯುಧಿಷ್ಠಿರ! ನಾರದರು ಹೇಳಿದ ಮಾತನ್ನು ಕೇಳಿ ಕೃಷ್ಣದ್ವೈಪಾಯನರು ಹೇಳುತ್ತಾರೆ :

"ಪೂಜ್ಯನಾದ ಮಹರ್ಷಿಯೇ! ವೇದವಿದ್ಯಾವಿಚಕ್ಷಣನೇ! ನೀನು

ಹೇಳಿದ ಮಾತು ನನಗೂ ಒಪ್ಪಿಗೆಯಾಗಿದೆ. ನೀನು ಇಂತಹ ಮಾತು ಗಳನ್ನಾಡಲು ಯೋಗ್ಯನಾಗಿರುವೆ. ನೀನು ಸರ್ವಜ್ಞನೂ, ಸರ್ವದರ್ಶಿಯೂ ಮತ್ತು ಎಲ್ಲ ವಿಷಯಗಳನ್ನೂ ತಿಳಿದುಕೊಳ್ಳುವುದರಲ್ಲಿ ಕುತೂಹಲವುಳ್ಳವನೂ ಆಗಿರುವೆ. ಮೂರು ಲೋಕಗಳಲ್ಲಿಯೂ ಯಾವುದು ನಡೆದಿರುವುದೋ ಅವೆಲ್ಲವೂ ನಿನಗೆ ತಿಳಿದೇ ಇದೆ. ವಿಪ್ರರ್ಷಿಯೇ! ಆಜ್ಞಾಪಿಸು. ನಾನು ನಿನಗಾಗಿ ಯಾವ ಕಾರ್ಯವನ್ನು ಮಾಡಲಿ? ಈ ಸಮಯದಲ್ಲಿ ನನ್ನ ಕರ್ತವ್ಯವೇನೆಂಬುದನ್ನು ಹೇಳು. ನಾನು ಶಿಷ್ಯರಿಂದ ವಿಹೀನನಾಗಿರುವುದರಿಂದ ನನ್ನ ಮನಸ್ಸು ಅಷ್ಟು ಪ್ರಸನ್ನವಾಗಿಲ್ಲ."

ನಾರದರು ಹೇಳುತ್ತಾರೆ :

ಅನಾಮ್ನಾಯಮಲಾ ವೇದಾ ಬ್ರಾಹ್ಮಣಸ್ಯಾವ್ರತಂ ಮಲಮ್ ।
ಮಲಂ ಪೃಥಿವ್ಯಾ ವಾಹೀಕಾಃ ಸ್ತ್ರೀಣಾಂ ಕೌತೂಹಲಂ ಮಲಮ್ ॥

"ಋಷಿಸತ್ತಮನೇ! ವೇದವನ್ನು ಅಧ್ಯಯನಮಾಡಿ ಅಭ್ಯಾಸವನ್ನು ಅಥವಾ ಪುನರಾವೃತ್ತಿಯನ್ನು ಮಾಡದಿದ್ದರೆ ಅದು ವೇದಾಧ್ಯಯನದ ದೂಷಣವಾಗುತ್ತದೆ. ವ್ರತಾನುಷ್ಠಾನಗಳನ್ನು ಮಾಡದಿರುವುದರಿಂದ ಬ್ರಾಹ್ಮಣನು ದೂಷ್ಯನಾಗುತ್ತಾನೆ. ವಾಹೀಕದೇಶದ ಜನರು ಪೃಥಿವಿಗೆ ಕಳಂಕಪ್ರಾಯರಾಗಿರುತ್ತಾರೆ. ಸ್ತ್ರೀಯರಿಗೆ ಲಾಲಸತೆಯೆಂಬುದು ದೋಷವಾಗಿದೆ.

ಅಧೀಯತಾಂ ಭವಾನ್ವೇದಾನ್ಸಾರ್ಧಂ ಪುತ್ರೇಣ ಧೀಮತಾ ।
ವಿಧುನ್ವನ್ಬ್ರಹ್ಮಘೋಷೇಣ ರಕ್ಷೋಭಯಕೃತಂ ತಮಃ ॥೨೧॥

ರಾಕ್ಷಸರ ಭಯದಿಂದ ಉಂಟಾದ ಅಂಧಕಾರವನ್ನು ವೇದಘೋಷ ದಿಂದ ವಿನಾಶಗೊಳಿಸುತ್ತಾ, ಧೀಮಂತನಾದ ಪುತ್ರನೊಡನೆ ನೀನು ವೇದಾಧ್ಯಯನವನ್ನು ಮಾಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ನಾರದರು ಹೇಳಿದ ಮಾತನ್ನು ಕೇಳಿ ವೇದಾಭ್ಯಾಸ

ವೆಂಬ ದೃಢವಾದ ವ್ರತವನ್ನು ಪರಿಪಾಲಿಸುತ್ತಿದ್ದ ಪರಮಧರ್ಮಿಷ್ಠರಾದ ವ್ಯಾಸರು ಪರಮಹೃಷ್ಟರಾಗಿ ಹಾಗೆಯೇ ಆಗಲೆಂದು ನಾರದರಿಗೆ ಹೇಳಿದರು. ಅದರಂತೆಯೇ ವ್ಯಾಸರು ಮೂರು ಲೋಕಗಳನ್ನೂ ವೇದಘೋಷದಿಂದ ತುಂಬುತ್ತಿರುವರೋ ಎಂಬಂತೆ ತಮ್ಮ ಮಗನಾದ ಶುಕದೇವನೊಡನೆ ನಿಯಮಾನುಸಾರವಾಗಿ ಗಟ್ಟಿಯಾದ ಧ್ವನಿಯಿಂದ ವೇದಾಭ್ಯಾಸಮಾಡಲು ತೊಡಗಿದರು. ನಾನಾಧರ್ಮಗಳನ್ನು ಪ್ರತಿಪಾದಿಸುವವರಾಗಿದ್ದ ಆ ಇಬ್ಬರು ಪಿತಾ-ಪುತ್ರರು ಹೀಗೆ ವೇದಾಧ್ಯಯನಮಾಡುತ್ತಿರುವಾಗ ಸಮುದ್ರದ ಮೇಲಿನ ಗಾಳಿಯಿಂದ ಪ್ರಚೋದಿತವಾದ ಬಿರುಗಾಳಿಯು ಬಹಳ ಜೋರಾಗಿ ಬೀಸತೊಡಗಿತು. ಒಡನೆಯೇ ವ್ಯಾಸರು ಅನಧ್ಯಾಯವೆಂದು ಹೇಳಿ ವೇದಪಾಠವನ್ನು ನಿಲ್ಲಿಸುವಂತೆ ಮಗನಿಗೆ ಹೇಳಿದರು. ಹೀಗೆ ತಂದೆಯಿಂದ ತಡೆಯಲ್ಪಟ್ಟ ಶುಕನಿಗೆ ಅದರ ಕಾರಣವೇನೆಂಬುದನ್ನು ತಿಳಿಯುವ ಕುತೂಹಲವುಂಟಾಯಿತು. ಅಂತೆಯೇ ತಂದೆಯನ್ನು ಪ್ರಶ್ನಿಸಿದನು :

"ತಂದೆಯೇ! ಈ ಗಾಳಿಯು ಎಲ್ಲಿಂದ ಹುಟ್ಟಿಬಂದಿತು? ವಾಯುವಿನ ಸಕಲವಿಧವಾದ ಚೇಷ್ಟೆಗಳನ್ನೂ ದಯಮಾಡಿ ಹೇಳಿರಿ."

ಯುಧಿಷ್ಠಿರ! ಶುಕನ ಈ ಮಾತನ್ನು ಕೇಳಿ ವ್ಯಾಸರು ಆಶ್ಚರ್ಯ ಚಕಿತರಾದರು. ಅನಧ್ಯಯನದ ಕಾರಣವನ್ನು ವಿವರಿಸುತ್ತಾ ಹೇಳಿದರು :

ದಿವ್ಯಂ ತೇ ಚಕ್ಷುರುತ್ಪನ್ನಂ ಸ್ವಯಂ ತೇ ನಿರ್ಮಲಂ ಮನಃ ।
ತಮಸಾ ರಜಸಾ ಚಾಪಿ ತ್ಯಕ್ತಃ ಸತ್ತ್ವೇ ವ್ಯವಸ್ಥಿತಃ ॥೨೮॥

"ಮಗು! ನಿನಗೆ ಸ್ವತಃ ದಿವ್ಯದೃಷ್ಟಿಯು ಪ್ರಾಪ್ತವಾಗಿದೆ. ನಿನ್ನ ಮನಸ್ಸು ಅತ್ಯಂತನಿರ್ಮಲವಾಗಿದೆ. ತಮಸ್ಸಿನಿಂದಲೂ ರಜಸ್ಸಿನಿಂದಲೂ ರಹಿತ ನಾಗಿರುವ ನೀನು ಶುದ್ಧಸತ್ತ್ವದಲ್ಲಿ ಪ್ರತಿಷ್ಠಿತನಾಗಿರುವೆ.

ಆದರ್ಶೇ ಸ್ವಾಮಿವ ಚ್ಛಾಯಾಂ ಪಶ್ಯಸ್ಯಾತ್ಮಾನಮಾತ್ಮನಾ ।
ವ್ಯಸ್ಯಾತ್ಮನಿ ಸ್ವಯಂ ವೇದಾನ್ಬುದ್ಧ್ಯಾ ಸಮನುಚಿನ್ತಯ ॥೨೯॥

ಜನರು ಕನ್ನಡಿಯಲ್ಲಿ ತಮ್ಮ ಪ್ರತಿಬಿಂಬವನ್ನು ಯಾವ ರೀತಿಯಲ್ಲಿ

ನೋಡಿಕೊಳ್ಳುವರೋ–ಅದೇ ರೀತಿಯಲ್ಲಿ ಬುದ್ಧಿಯೆಂಬ ಕನ್ನಡಿಯಲ್ಲಿ ನಿನ್ನ ಆತ್ಮನನ್ನು ನೋಡುತ್ತಿರುವೆ. ಆದುದರಿಂದ ನಿನಗೆ ಅಸಾಧ್ಯವಾದುದು ಯಾವುದೂ ಇಲ್ಲ. ವೇದಗಳೆಲ್ಲವನ್ನೂ ಬುದ್ಧಿಯಲ್ಲಿ ಧಾರಣೆಮಾಡಿಕೊಂಡು ಅನಧ್ಯಾಯಕ್ಕೆ ಕಾರಣಭೂತವಾದ ವಾಯುವಿನ ವಿಷಯವಾಗಿ ನೀನೇ ಚಿಂತಿಸು.

ದೇವಯಾನಚರೋ ವಿಷ್ಣೋಃ ಪಿತೃಯಾಣಶ್ಚ ತಾಮಸಃ ।
ದ್ವಾವೇತೌ ಪ್ರೇತ್ಯ ಪನ್ಥಾನೌ ದಿವಂ ಚಾಧಶ್ಚ ಗಚ್ಛತಃ ॥೩೦॥

ಮರಣಾನಂತರ ಊರ್ಧ್ವಲೋಕಗಳಿಗೆ ಹೋಗುವವರಿಗೂ–ಅಧೋ ಲೋಕಗಳಿಗೆ ಹೋಗುವವರಿಗೂ ಎರಡು ವಿಧವಾದ ಮಾರ್ಗಗಳಿವೆ. ಊರ್ಧ್ವಲೋಕಗಳಿಗೆ ಹೋಗುವವರಿಗೆ ವಿಷ್ಣುವಿನ ಲೋಕಕ್ಕೊಯ್ಯುವ ದೇವಯಾನಮಾರ್ಗವಿದೆ. ಅಧೋಲೋಕಕ್ಕೆ ಹೋಗುವವರಿಗೆ ತಾಮಸ ವಾದ ಪಿತೃಯಾಣಮಾರ್ಗವಿದೆ.

ಪೃಥಿವ್ಯಾಮನ್ತರಿಕ್ಷೇ ಚ ಯತ್ರ ಸಂವಾನ್ತಿ ವಾಯವಃ ।
ಸಪ್ತೈತೇ ವಾಯುಮಾರ್ಗಾ ವೈ ತಾನ್ನಿಬೋಧಾನುಪೂರ್ವಶಃ ॥೩೧॥

ಪೃಥಿವಿಯಲ್ಲಿಯೂ ಮತ್ತು ಅಂತರಿಕ್ಷದಲ್ಲಿಯೂ ವಾಯುಗಳು ಎಲ್ಲೆಲ್ಲಿ ಸಂಚರಿಸುವುವೋ–ಅಲ್ಲಿ ಅವುಗಳಿಗೆ ಏಳು ಮಾರ್ಗಗಳಿವೆ. ಆನುಪೂರ್ವಿಯಾಗಿ ಆ ಮಾರ್ಗಗಳನ್ನು ಹೇಳುವೆನು, ಕೇಳು.

ತತ್ರ ದೇವಗಣಾಃ ಸಾಧ್ಯಾ ಮಹಾಭೂತಾ ಮಹಾಬಲಾಃ ।
ತೇಷಾಮಪ್ಯಭವತ್ಪುತ್ರಃ ಸಮಾನೋ ನಾಮ ದುರ್ಜಯಃ ॥೩೨॥

ಪೃಥಿವೀ ಮತ್ತು ಅಂತರಿಕ್ಷಗಳಲ್ಲಿ ಮಹಾಸ್ವರೂಪರಾದ, ಮಹಾಬಲ ರಾದ ಸಾಧ್ಯರೆಂಬ ದೇವತೆಗಳು ಅದೃಶ್ಯರಾಗಿ ವಾಸಮಾಡುತ್ತಿದ್ದಾರೆ. ಅವರಿಗೆ ದುರ್ಜಯನಾದ ಸಮಾನನೆಂಬ ಪುತ್ರನು ಹುಟ್ಟಿದನು.

ಉದಾನಸ್ತಸ್ಯ ಪುತ್ರೋಽಭೂದ್ವ್ಯಾನಸ್ತಸ್ಯಾಭವತ್ಸುತಃ ।
ಅಪಾನಶ್ಚ ತತೋ ಜ್ಞೇಯಃ ಪ್ರಾಣಶ್ಚಾಪಿ ತತೋಽಪರಃ ॥೩೩॥

ಸಮಾನನಿಗೆ ಉದಾನನೆಂಬ ಮಗನು ಹುಟ್ಟಿದನು. ಉದಾನನ

ಮಗನು ವ್ಯಾನನೆಂಬುವನು. ವ್ಯಾನನಿಗೆ ಅಪಾನನೆಂಬ ಮಗನೂ–ಅಪಾನನಿಗೆ ಪ್ರಾಣನೆಂಬ ಮಗನೂ ಹುಟ್ಟಿದರು.

ಅನಪತ್ಯೋಽಭವತ್ಪ್ರಾಣೋ ದುರ್ಧರ್ಷಃ ಶತ್ರುತಾಪನಃ ।
ಪೃಥಕ್ಕರ್ಮಾಣಿ ತೇಷಾಂ ತೇ ಪ್ರವಕ್ಷ್ಯಾಮಿ ಯಥಾತಥಮ್ ॥೩೪॥

ಎದುರಿಸಲು ಅಸಾಧ್ಯನಾದ, ಶತ್ರುಗಳಿಗೆ ಸಂತಾಪವನ್ನುಂಟು ಮಾಡುವ ಪ್ರಾಣನಿಗೆ ಸಂತಾನಪ್ರಾಪ್ತಿಯಾಗಲಿಲ್ಲ. ಸಮಾನಾದಿಗಳ ಪ್ರತ್ಯೇಕ-ಪ್ರತ್ಯೇಕವಾದ ಕ್ರಿಯೆಗಳನ್ನು ಯಥಾವತ್ತಾಗಿ ಹೇಳುತ್ತೇನೆ.

ಪ್ರಾಣಿನಾಂ ಸರ್ವತೋ ವಾಯುಶ್ಚೇಷ್ಟಾಂ ವರ್ತಯತೇ ಪೃಥಕ್ ।
ಪ್ರಾಣನಾಚ್ಚೈವ ಭೂತಾನಾಂ ಪ್ರಾಣ ಇತ್ಯಭಿಧೀಯತೇ ॥೩೫॥

ವಾಯುವು ಪ್ರಾಣಿಗಳಿಗೆ ಎಲ್ಲ ಕಡೆಗಳಿಂದಲೂ ಪ್ರತ್ಯೇಕ-ಪ್ರತ್ಯೇಕವಾಗಿ ಚೇಷ್ಟೆಯನ್ನು ಉಂಟುಮಾಡುತ್ತದೆ. ಪ್ರಾಣಿಗಳ ಚೇಷ್ಟೆಗೆ ವಾಯುವೇ ಮುಖ್ಯಕಾರಣವಾಗಿರುತ್ತದೆ. ಪ್ರಾಣಿಗಳನ್ನು ಜೀವಿಸುವಂತೆ ಮಾಡುವುದರಿಂದ 'ಪ್ರಾಣ' ಎಂಬ ಹೆಸರು ಅದಕ್ಕೆ ಬಂದಿದೆ.

ಪ್ರೇರಯತ್ಯಭ್ರಸಂಘಾತಾನ್ಧೂಮಜಾಂಶ್ಚೋಷ್ಮಜಾಂಶ್ಚ ಯಃ ।
ಪ್ರಥಮಃ ಪ್ರಥಮೇ ಮಾರ್ಗೇ ಪ್ರವಹೋ ನಾಮ ಯೋಽನಿಲಃ ॥

ಧೂಮದಿಂದಲೂ ಮತ್ತು ಉಷ್ಣದಿಂದಲೂ ಹುಟ್ಟಿದ ಮೇಘಗಳ ಸಮೂಹವು ಅಲ್ಲಿಂದಿಲ್ಲಿಗೂ ಇಲ್ಲಿಂದಲ್ಲಿಗೂ ಹೋಗುವಂತೆ ಯಾವುದು ಮಾಡುವುದೋ–ಅದು ಮೊದಲನೆಯ ಮಾರ್ಗದಲ್ಲಿ ಸಂಚರಿಸುವ 'ಪ್ರವಹ' ಎಂಬ ಹೆಸರಿನ ಮೊದಲನೆಯ ವಾಯುವಾಗಿದೆ.

ಅಮ್ಬರೇ ಸ್ನೇಹಮಭ್ಯೇತ್ಯ ವಿದ್ಯುದ್ಭ್ಯಶ್ಚ ಮಹಾದ್ಯುತಿಃ ।
ಆವಹೋ ನಾಮ ಸಂವಾತಿ ದ್ವಿತೀಯಃ ಶ್ವಸನೋ ನದನ್ ॥೩೭॥

ಮಹಾಕಾಂತಿಯುಕ್ತನಾದ ಯಾವ ವಾಯುವು ಗಟ್ಟಿಯಾಗಿ ಶಬ್ದ ಮಾಡುತ್ತಾ ವಿದ್ಯುತ್ತುಗಳೊಡನೆ ಸಂಬಂಧವನ್ನು ಹೊಂದಿ ಆಕಾಶದಲ್ಲಿ ಬೀಸುವುದೋ–ಆ ವಾಯುವಿಗೆ 'ಆವಹ'–ಎಂದು ಹೆಸರು.

ಉದಯಂ ಜ್ಯೋತಿಷಾಂ ಶಶ್ವತ್ಸೋಮಾದೀನಾಂ ಕರೋತಿ ಯಃ ।
ಅನ್ತರ್ದೇಹೇಷು ಚೋದಾನಂ ಯಂ ವದನ್ತಿ ಮನೀಷಿಣಃ ॥೩೮॥

ಯಶ್ಚತುರ್ಭ್ಯಃ ಸಮುದ್ರೇಭ್ಯೋ ವಾಯುರ್ಧಾರಯತೇ ಜಲಮ್ ।
ಉದ್ಧೃತ್ಯಾದದತೇ ಚಾಪೋ ಜೀಮೂತೇಭ್ಯೋಽಮ್ಬರೇಽನಿಲಃ ॥೩೯॥

ಯೋಽದ್ಭಿಃ ಸಂಯೋಜ್ಯ ಜೀಮೂತಾನ್ಪರ್ಜನ್ಯಾಯ ಪ್ರಯಚ್ಛತಿ ।
ಉದ್ವಹೋ ನಾಮ ಬಂಹಿಷ್ಠಸ್ತೃತೀಯಃ ಸ ಸದಾಗತಿಃ ॥೪೦॥

ಯಾವುದು ನಕ್ಷತ್ರಾದಿಗಳ ಮತ್ತು ಸೋಮ-ಸೂರ್ಯಾದಿಗಳ ಉದಯವನ್ನು ಉಂಟುಮಾಡುವುದೋ, ಪ್ರಾಣಿಗಳ ದೇಹಗಳಲ್ಲಿ ಕೆಲಸ ಮಾಡುತ್ತಿರುವ ಯಾವುದನ್ನು ವಿದ್ವಾಂಸರಾದವರು ಉದಾನವೆಂದು ಕರೆಯುವರೋ, ನಾಲ್ಕು ಸಮುದ್ರಗಳಿಂದಲೂ ನೀರನ್ನು ಧಾರಣೆಮಾಡಿ ಅನಂತರ ಆ ಜಲರಾಶಿಯನ್ನು ಮೇಲಕ್ಕೆ ಎತ್ತಿಕೊಂಡು ಹೋಗಿ ಯಾವುದು ಮೇಘಗಳಿಗೆ ಕೊಡುವುದೋ ಮತ್ತು ಮೇಘಗಳನ್ನು ನೀರಿನೊಡನೆ ಸಂಯೋಜಿಸಿ ಪರ್ಜನ್ಯನಿಗೆ ಒಪ್ಪಿಸುವುದೋ–ಅಂತಹ ಸದಾ ಚಲನವುಳ್ಳ ಮೂರನೆಯದಾದ ಮಹಾವಾಯುವಿಗೆ 'ಉದ್ವಹ'–ಎಂದು ಹೆಸರು.

ಸಮೂಹ್ಯಮಾನಾ ಬಹುಧಾ ಯೇನ ನೀತಾಃ ಪೃಥಗ್ಘನಾಃ ।
ವರ್ಷಮೋಕ್ಷಕೃತಾರಮ್ಭಾಸ್ತೇ ಭವನ್ತಿ ಘನಾಘನಾಃ ॥೪೧॥

ಸಂಹತಾ ಯೇನ ಚಾವಿದ್ಧಾ ಭವನ್ತಿ ನದತಾಂ ನದಾಃ ।
ರಕ್ಷಣಾರ್ಥಾಯ ಸಮ್ಭೂತಾ ಮೇಘತ್ವಮುಪಯಾನ್ತಿ ಚ ॥೪೨॥

ಯೋಽಸೌ ವಹತಿ ಭೂತಾನಾಂ ವಿಮಾನಾನಿ ವಿಹಾಯಸಾ ।
ಚತುರ್ಥಃ ಸಂವಹೋ ನಾಮ ವಾಯುಃ ಸ ಗಿರಿಮರ್ದನಃ ॥೪೩॥

ಪ್ರತ್ಯೇಕ-ಪ್ರತ್ಯೇಕವಾಗಿರುವ ಅನೇಕಮೇಘಗಳನ್ನು ಯಾವ ವಾಯುವು ಒಟ್ಟಾಗಿ ಸೇರಿಸುವುದೋ ಮತ್ತು ಯಾವ ವಾಯುವಿನ ಪ್ರಚೋದನೆಯಿಂದ ಒಟ್ಟಾಗಿ ಸೇರಿದ ಆ ಮೇಘಗಳು ಮಳೆಗರೆಯಲು ಪ್ರಾರಂಭಿಸುವುವೋ ಮತ್ತು ಯಾವ ಅದೇ ವಾಯುವಿನಿಂದಲೇ ಘನೀಭೂತ

ವಾಗಿದ್ದ ಮೇಘಗಳು ಚದುರಿಹೋಗುವುವೋ, ಯಾವ ವಾಯುವಿನ ಪ್ರೇರಣೆಯಿಂದ ಮೇಘಗಳೆಲ್ಲವೂ ಪುನಃ ನೀರಿನ ರೂಪದಲ್ಲಿ ಒಟ್ಟಾಗಿ ಸೇರಿ ಶಬ್ದಮಾಡುವ ವಸ್ತುಗಳಲ್ಲಿ ಬಹಳ ಗಟ್ಟಿಯಾಗಿ ಶಬ್ದಮಾಡುವ ಸಮುದ್ರ ಗಳಾಗುವುವೋ, ಯಾವ ವಾಯುವು ಪ್ರಾಣಿಗಳ ರಕ್ಷಣಾರ್ಥವಾಗಿ ಪುನಃ ಸಮುದ್ರದಲ್ಲಿರುವ ನೀರನ್ನು ಧರಿಸಿ ಆಕಾಶಕ್ಕೆ ಹೋಗಿ ಮೇಘತ್ವವನ್ನು ಹೊಂದುವುದೋ, ದೇವತೆಗಳ ವಿಮಾನಗಳನ್ನು ಆಕಾಶದ ಮೂಲಕವಾಗಿ ಒಯ್ಯುವುದೋ, ಪರ್ವತದ ಶಿಖರಗಳನ್ನೇ ಧ್ವಂಸಮಾಡುವುದೋ ಆ ವಾಯುವು 'ಸಂವಹ'–ಎಂಬ ಹೆಸರಿನ ನಾಲ್ಕನೆಯ ವಾಯುವಾಗಿದೆ.

ಯೇನ ವೇಗವತಾ ರುಗ್ಣಾ ರೂಕ್ಷೇಣ ರುವತಾ ನಗಾನ್ ।
ವಾಯುನಾ ಸಹಿತಾ ಮೇಘಾಸ್ತೇ ಭವನ್ತಿ ಬಲಾಹಕಾಃ ॥೪೪॥

ಭಯಂಕರವಾದ ವೇಗದಿಂದ ಬೀಸುವ, ಬೆಟ್ಟಗಳನ್ನು ಮರ್ದಿಸುವ ವಾಯುವಿನಿಂದ ಕೂಡಿದ ಮೇಘಗಳು ತಮ್ಮ ಪ್ರವಾಹದಿಂದ ಬೆಟ್ಟಗಳನ್ನು ಭೇದಿಸುವ 'ಬಲಾಹಕ' ಮೇಘಗಳಾಗುತ್ತವೆ.

ದಾರುಣೋತ್ಪಾತಸಂಚಾರೋ ನಭಸಃ ಸ್ತನಯಿತ್ನುಮಾನ್ ।
ಪಞ್ಚಮಃ ಸ ಮಹಾವೇಗೋ ವಿವಹೋ ನಾಮ ಮಾರುತಃ ॥೪೫॥

ಯಾವ ವಾಯುವಿನ ಸಂಚಾರವು ಭಯಂಕರವಾದ ಉತ್ಪಾತಗಳನ್ನು ಉಂಟುಮಾಡುವುದೋ ಮತ್ತು ಯಾವ ವಾಯುವು ಆಕಾಶದ ಮೇಘಗಳನ್ನು ಚಲಿಸುವಂತೆ ಮಾಡುವುದೋ–ಮಹಾವೇಗಯುಕ್ತವಾದ ಆ ಮಾರುತವು 'ವಿವಹ'–ಎಂಬ ಹೆಸರಿನ ಐದನೆಯ ವಾಯುವಾಗಿದೆ.

ಯಸ್ಮಿನ್ಪಾರಿಪ್ಲವಾ ದಿವ್ಯಾ ವಹನ್ತ್ಯಾಪೋ ವಿಹಾಯಸಾ ।
ಪುಣ್ಯಂ ಚಾಕಾಶಗಙ್ಗಾಯಾಸ್ತೋಯಂ ವಿಷ್ಟಭ್ಯ ತಿಷ್ಠತಿ ॥೪೬॥
ದೂರಾತ್ಪ್ರತಿಹತೋ ಯಸ್ಮಿನ್ನೇಕರಶ್ಮಿರ್ದಿವಾಕರಃ ।
ಯೋನಿರಂಶುಸಹಸ್ರಸ್ಯ ಯೇನ ಭಾತಿ ವಸುನ್ಧರಾ ॥೪೭॥
ಯಸ್ಮಾದಾಪ್ಯಾಯತೇ ಸೋಮೋ ನಿಧಿರ್ದಿವ್ಯೋಽಮೃತಸ್ಯ ಚ ।
ಷಷ್ಠಃ ಪರಿವಹೋ ನಾಮ ಸ ವಾಯುರ್ಜಯತಾಂ ವರಃ ॥೪೮॥

ಯಾವ (ವಾಯುವಿನ ಆಶ್ರಯದಲ್ಲಿ) ನೀರಿನ ಪ್ರವಾಹಗಳು ಆಕಾಶದ ಮೂಲಕವಾಗಿ ನೀರಿನ ಮೇಲೆ ಸಂಚರಿಸುವ ದಿವ್ಯವಾದ ಪಕ್ಷಿಗಳನ್ನು ಒಯ್ಯುತ್ತವೆಯೋ, ಯಾವ ವಾಯುವು ಪುಣ್ಯಕರವಾದ ಆಕಾಶಗಂಗೆಯ ನೀರನ್ನು ಧರಿಸಿ ನಿಂತಿರುವುದೋ, ಸಹಸ್ರಕಿರಣನಾದ –ಭೂಮಿಯನ್ನು ಬೆಳಗುವ ಸೂರ್ಯನು ಯಾವ ವಾಯುವಿನಿಂದ ಪ್ರತಿಹತನಾಗಿ ಏಕರಶ್ಮಿಯಾಗಿ ಕಾಣುವನೋ, ಯಾವ ವಾಯುವಿನಿಂದ ಈ ಭೂಮಿಯು ಪ್ರಕಾಶಮಾನವಾಗಿರುವುದೋ, ಅಮೃತಕ್ಕೆ ನಿಧಿಪ್ರಾಯನಾದ ದಿವ್ಯನಾದ ಸೋಮನು ಯಾವ ವಾಯುವಿನಿಂದ ಪೋಷಿಸಲ್ಪಡುತ್ತಿರುವನೋ– ವಿಜಯಿಗಳಲ್ಲಿ ಶ್ರೇಷ್ಠನಾದ ಅಂತಹ ಆರನೆಯವನಾದ ವಾಯುವು 'ಪರಿವಹ'–ಎಂಬ ಹೆಸರಿನಿಂದ ಕರೆಯಲ್ಪಡುತ್ತಾನೆ.

ಸರ್ವಪ್ರಾಣಭೃತಾಂ ಪ್ರಾಣಾನ್ಯೋಽನ್ತಕಾಲೇ ನಿರಸ್ಯತಿ ।
ಯಸ್ಯ ವರ್ತ್ಮಾನುವರ್ತೇತೇ ಮೃತ್ಯುವೈವಸ್ವತಾವುಭೌ ॥೪೯॥

ಸಮ್ಯಗನ್ವೀಕ್ಷತಾಂ ಬುದ್ಧ್ಯಾ ಶಾನ್ತಯಾಧ್ಯಾತ್ಮನಿತ್ಯಯಾ ।
ಧ್ಯಾನಾಭ್ಯಾಸಾಭಿರಾಮಾಣಾಂ ಯೋಽಮೃತತ್ವಾಯ ಕಲ್ಪತೇ ॥೫೦॥

ಯಂ ಸಮಾಸಾದ್ಯ ವೇಗೇನ ದಿಶೋಽನ್ತಂ ಪ್ರತಿಪೇದಿರೇ ।
ದಕ್ಷಸ್ಯ ದಶ ಪುತ್ರಾಣಾಂ ಸಹಸ್ರಾಣಿ ಪ್ರಜಾಪತೇಃ ॥೫೧॥

ಯೇನ ಸ್ಪೃಷ್ಟಃ ಪರಾಭೂತೋ ಯಾತ್ಯೇವ ನ ನಿವರ್ತತೇ ।
ಪರಾವಹೋ ನಾಮ ಪರೋ ವಾಯುಃ ಸ ದುರತಿಕ್ರಮಃ ॥೫೨॥

ಯಾವ ವಾಯುವು ಅಂತಕಾಲದಲ್ಲಿ ಎಲ್ಲ ಪ್ರಾಣಿಗಳ ಪ್ರಾಣಗಳನ್ನೂ ಶರೀರದಿಂದ ಹೊರತೆಗೆಯುವುದೋ, ಪ್ರಾಣಗಳನ್ನು ಹೊರತೆಗೆಯುವ ಮಾರ್ಗದಲ್ಲಿ ಮೃತ್ಯು-ವೈವಸ್ವತರಿಬ್ಬರೂ ಯಾವ ವಾಯುವಿನ ಅನುಯಾಯಿಗಳಾಗಿರುವರೋ, ಅಧ್ಯಾತ್ಮಚಿಂತನೆಯಲ್ಲಿಯೇ ನಿರತವಾದ ಮತ್ತು ಶಾಂತವಾದ ಬುದ್ಧಿಯ ಮೂಲಕವಾಗಿ ಧ್ಯಾನಾಭ್ಯಾಸದಲ್ಲಿಯೇ ಆನಂದಪಡುತ್ತಿರುವ ಮತ್ತು ಬ್ರಹ್ಮವಸ್ತುವನ್ನು ಬುದ್ಧಿಯ ಮೂಲಕವಾಗಿ ಚೆನ್ನಾಗಿ ನೋಡುತ್ತಿರುವ ಸಾಧಕರಿಗೆ ಯಾವ ವಾಯುವು ಅಮೃತತ್ತ್ವವನ್ನೀಯಲು ಸಮರ್ಥ

ವಾಗಿರುವುದೋ, ಯಾವ ವಾಯುವನ್ನು ಆಶ್ರಯಿಸಿ ದಕ್ಷಪ್ರಜಾಪತಿಯ ಹತ್ತುಸಾವಿರ ಪುತ್ರರು ಬಹಳ ವೇಗದಿಂದ ದಿಕ್ಕುಗಳ ಅಂತವನ್ನು ಸೇರಿದರೋ, ಯಾವ ವಾಯುವಿನಿಂದ ಮುಟ್ಟಲ್ಪಟ್ಟು ವಿಲೀನವಾಗಿ ಹೋಗುವ ಪ್ರಾಣಿಯು ಇಲ್ಲಿಂದ ಹೊರಟುಹೋಗುತ್ತದೆಯೇ ಹೊರತು ಪುನಃ ಹಿಂದಿರುಗುವುದಿಲ್ಲವೋ (ಯಾವ ವಾಯುವಿನ ಅನುಗ್ರಹದಿಂದ ಪ್ರಾಣಿಗಳು ಮೋಕ್ಷವನ್ನು ಪಡೆಯುವುವೋ)–ಅಂತಹ ಅತಿಕ್ರಮಿಸಲು ಅಸಾಧ್ಯವಾದ ಏಳನೆಯ ವಾಯುವು 'ಪರಾವಹ'–ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ಏವಮೇತೇ ದಿತೇಃ ಪುತ್ರಾ ಮಾರುತಾಃ ಪರಮಾದ್ಭುತಾಃ ।
ಅನಾರತಂ ತೇ ಸಂವಾನ್ತಿ ಸರ್ವಗಾಃ ಸರ್ವಧಾರಿಣಃ ॥೫೩॥

ಹೀಗೆ ಈ ಸಪ್ತಮಾರುತರೂ ದಿತಿಯ ಪರಮಾದ್ಭುತರಾದ ಪುತ್ರರು. ಎಲ್ಲ ಕಡೆಗಳಲ್ಲಿಯೂ ಸಂಚರಿಸುವ, ಎಲ್ಲವನ್ನೂ ಧಾರಣೆಮಾಡಿರುವ ಈ ವಾಯುಗಳು ನಿರಂತರವಾಗಿ ಬೀಸುತ್ತಿರುತ್ತವೆ.

ಏತತ್ತು ಮಹದಾಶ್ಚರ್ಯಂ ಯದಯಂ ಪರ್ವತೋತ್ತಮಃ ।
ಕಮ್ಪಿತಃ ಸಹಸಾ ತೇನ ವಾಯುನಾತಿಪ್ರವಾಯತಾ ॥೫೪॥

ಅತ್ಯಂತವೇಗವಾಗಿ ಬೀಸುತ್ತಿರುವ ಈ ವಾಯುವಿನ ಮೂಲಕವಾಗಿ ಪರ್ವತಗಳಲ್ಲಿಯೇ ಶ್ರೇಷ್ಠವಾದ ಈ ಹಿಮಾಲಯವೂ ಕಂಪಿಸುತ್ತಿರುವುದು ಮಹದಾಶ್ಚರ್ಯಕರವಾಗಿದೆ.

ವಿಷ್ಣೋರ್ನಿಃಶ್ವಾಸವಾತೋಽಯಂ ಯದಾ ವೇಗಸಮೀರಿತಃ ।
ಸಹಸೋದೀರ್ಯತೇ ತಾತ ಜಗತ್ಪ್ರವ್ಯಥತೇ ತದಾ ॥೫೫॥

ಮಗು! ಈ ವಾಯುವು ಮಹಾವಿಷ್ಣುವಿನ ನಿಃಶ್ವಾಸವಾಗಿದೆ. ಯಾವಾಗ ಆತನ ಈ ನಿಃಶ್ವಾಸವಾಯುವು ವೇಗಯುಕ್ತವಾಗಿ ಒಡನೆಯೇ ಘ್ರಾಣದಿಂದ ಹೊರಬರುವುದೋ –ಆಗ ಜಗತ್ತು ಬಹಳವಾಗಿ ವ್ಯಥೆಪಡುತ್ತದೆ.

ತಸ್ಮಾದ್ಬ್ರಹ್ಮವಿದೋ ವೇದಾನ್ನಾಧೀಯನ್ತೇಽತಿವಾಯತಿ ।
ವಾಯೋರ್ವಾಯುಭಯಂ ಹ್ಯುಕ್ತಂ ಬ್ರಹ್ಮತತ್ಪೀಡಿತಂ ಭವೇತ್ ॥೫೬॥

ಆದುದರಿಂದ ಬ್ರಹ್ಮವಿದರಾದ ಪುರುಷರು ಬಿರುಗಾಳಿಯು ಬೀಸುತ್ತಿರುವಾಗ ವೇದಾಧ್ಯಯನವನ್ನು ಮಾಡುವುದಿಲ್ಲ. ವೇದವೂ ಭಗವಂತನ ನಿಃಶ್ವಾಸವೇ ಆಗಿದೆ. ಬಿರುಗಾಳಿಯು ಬೀಸುತ್ತಿರುವಾಗ ವೇದಾಧ್ಯಯನವನ್ನು ಮಾಡಿದರೆ ವಾಯುವಿನಿಂದಲೇ ವಾಯುವಿಗೆ ಭಯವುಂಟಾಗುತ್ತದೆ. (ಎರಡು ನಿಃಶ್ವಾಸಗಳಿಗೂ ಘರ್ಷಣೆಯುಂಟಾಗುತ್ತದೆ.) ಅದರಿಂದ ವೇದಕ್ಕೂ ಪೀಡೆಯುಂಟಾಗುತ್ತದೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಪರಾಶರರ ಮಕ್ಕಳಾದ ಭಗವಾನ್ ವ್ಯಾಸರು ಅನಧ್ಯಯನದ ವಿಷಯವಾಗಿ ಮಗನಿಗೆ ಹೀಗೆ ಹೇಳಿ (ಆ ವೇಳೆಗೆ ಬಿರುಗಾಳಿಯು ಅಡಗಿದ್ದುದರಿಂದ) ಮಗನಿಗೆ ವೇದಾಧ್ಯಾಯನವನ್ನು ಮುಂದುವರಿಸುವಂತೆ ಆದೇಶವನ್ನಿತ್ತು ಆಕಾಶಗಂಗೆಯ ಕಡೆಗೆ ಹೋದರು.”

ಇಂಲನೆಯ ಅಧ್ಯಾಯವು ಮುಗಿಯಿತು.

ಇ೨೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾರದರಿಂದ ಶುಕನಿಗೆ ವೈರಾಗ್ಯದ ಮತ್ತು ಜ್ಞಾನದ ಉಪದೇಶ

ಮಹಾರಾಜ! ಭೀಷ್ಮನು ಮುಂದುವರಿಸಿ ಹೇಳುತ್ತಾನೆ :

“ಧರ್ಮಜ! ವ್ಯಾಸರು ಆಶ್ರಮದಲ್ಲಿ ಇರದಿದ್ದ ಸಮಯದಲ್ಲಿ ನಾರದರು ಸ್ವಾಧ್ಯಾಯನಿರತನಾಗಿದ್ದ ಶುಕನ ಬಳಿಗೆ ಆಗಮಿಸಿದರು. ದೇವರ್ಷಿಗಳಾದ ನಾರದರು ತನ್ನ ಸಮೀಪದಲ್ಲಿ ನಿಂತಿರುವುದನ್ನು ನೋಡಿ ವೇದಾರ್ಥಗಳ ರಹಸ್ಯವನ್ನು ಕೇಳುವ ಇಚ್ಛೆಯಿಂದ ಶುಕನು ವೇದೋಕ್ತ ವಿಧಿಗೆ ಅನುಸಾರವಾಗಿ ಅರ್ಘ್ಯಪೂರ್ವಕವಾಗಿ ನಾರದರನ್ನು ಸತ್ಕರಿಸಿದನು. ಅದರಿಂದ ಪರಮಪ್ರೀತರಾದ ಪರಮಹೃಷ್ಟರಾದ ನಾರದರು ಶುಕನಿಗೆ ಹೇಳಿದರು :

“ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ವತ್ಸ! ನಿನ್ನನ್ನು ಯಾವ

ಶ್ರೇಯಸ್ಸಿನಿಂದ ಪರಿಪೂರ್ಣನನ್ನಾಗಿ ಮಾಡಲಿ? (ಶ್ರೇಯಸ್ಕರವಾದ ಯಾವ ಜ್ಞಾನವನ್ನು ನಿನಗೆ ಬೋಧಿಸಲಿ?)"

ನಾರದರ ಮಾತನ್ನು ಕೇಳಿ ಶುಕನು ಪ್ರತ್ಯುತ್ತರಿಸಿದನು :



"ಪೂಜ್ಯರೇ! ಈ ಲೋಕದಲ್ಲಿ ಯಾವುದರಿಂದ ಹಿತವಾಗುವುದೋ ಅದನ್ನೇ ನನಗೆ ಉಪದೇಶಿಸಿರಿ."

ನಾರದರು ಹೇಳುತ್ತಾರೆ :

"ಶುಕದೇವ! ಹಿಂದೊಮ್ಮೆ ಪವಿತ್ರವಾದ ಅಂತಃಕರಣವುಳ್ಳವ

ರಾಗಿದ್ದ, ಪರತತ್ತ್ವದ ವಿಷಯವಾಗಿ ಜಿಜ್ಞಾಸೆಮಾಡುತ್ತಿದ್ದ ಋಷಿಗಳಿಗೆ ಭಗವಾನ್ ಸನತ್ಕುಮಾರನು ಈ ಮಾತನ್ನು ಹೇಳಿದನು :

ನಾಸ್ತಿ ವಿದ್ಯಾಸಮಂ ಚಕ್ಷುರ್ನಾಸ್ತಿ ಸತ್ಯಸಮಂ ತಪಃ ।
ನಾಸ್ತಿ ರಾಗಸಮಂ ದುಃಖಂ ನಾಸ್ತಿ ತ್ಯಾಗಸಮಂ ಸುಖಮ್ ॥೬॥

"ಋಷಿಗಳೇ! ವಿದ್ಯೆಗೆ ಸಮಾನವಾದ ನೇತ್ರವಿಲ್ಲ. ಸತ್ಯಕ್ಕೆ ಸಮಾನವಾದ ತಪಸ್ಸಿಲ್ಲ. ಅನುರಾಗಕ್ಕೆ ಅಥವಾ ಆಸಕ್ತಿಗೆ ಸಮಾನವಾದ ದುಃಖವಿಲ್ಲ. ತ್ಯಾಗಕ್ಕೆ ಸಮಾನವಾದ ಸುಖವಿಲ್ಲ.

ನಿವೃತ್ತಿಃ ಕರ್ಮಣಃ ಪಾಪಾತ್ಸತತಂ ಪುಣ್ಯಶೀಲತಾ ।
ಸದ್ವೃತ್ತಿಃ ಸಮುದಾಚಾರಃ ಶ್ರೇಯ ಏತದನುತ್ತಮಮ್ ॥೭॥

ಪಾಪಕರ್ಮಗಳಿಂದ ದೂರವಿರುವುದು, ಸತತವಾಗಿ ಪುಣ್ಯಕರ್ಮಗಳನ್ನೇ ಮಾಡುತ್ತಿರುವುದು, ಸತ್ಪುರುಷರ ವ್ಯವಹಾರ ಮತ್ತು ಸದಾಚಾರಗಳ ಪಾಲನೆ –ಇವುಗಳು ಶ್ರೇಯಸ್ಸಿನ ಸರ್ವೋತ್ತಮವಾದ ಸಾಧನಗಳಾಗಿವೆ.

ಮಾನುಷ್ಯಮಸುಖಂ ಪ್ರಾಪ್ಯ ಯಃ ಸಜ್ಜತಿ ಸ ಮುಹ್ಯತಿ ।
ನಾಲಂ ಸ ದುಃಖಮೋಕ್ಷಾಯ ಸಂಯೋಗೋ ದುಃಖಲಕ್ಷಣಮ್ ॥

ಸುಖದ ಲೇಶವೂ ಇಲ್ಲದ ಈ ಮನುಷ್ಯಶರೀರವನ್ನು ಹೊಂದಿ ಯಾವನು ವಿಷಯಸುಖಗಳಲ್ಲಿಯೇ ಆಸಕ್ತನಾಗುವನೋ–ಅವನು ವಿಮೋಹಗೊಳ್ಳುತ್ತಾನೆ. ವಿಷಯಗಳ ಸಂಬಂಧವೇ ದುಃಖದ ಲಕ್ಷಣವಾಗಿದೆ. ಆದುದರಿಂದ ವಿಷಯಗಳ ಸಂಬಂಧವು ದುಃಖವನ್ನು ನಿವಾರಿಸಲಾರದು.

ಸಕ್ತಸ್ಯ ಬುದ್ಧಿಶ್ಚಲತಿ ಮೋಹಜಾಲವಿವರ್ಧನೀ ।
ಮೋಹಜಾಲಾವೃತೋ ದುಃಖಮಿಹ ಚಾಮುತ್ರ ಸೋಽಶ್ನುತೇ ॥೯॥

ವಿಷಯಾಸಕ್ತನಾದ ಪುರುಷನ ಬುದ್ಧಿಯು ಚಂಚಲಗೊಳ್ಳುತ್ತದೆ. ಅಂತಹ ಚಂಚಲಬುದ್ಧಿಯು ಮೋಹಜಾಲಗಳನ್ನು ಹೆಚ್ಚಿಸುತ್ತಾ ಹೋಗುತ್ತದೆ. ವ್ಯಾಮೋಹವೆಂಬ ಬಲೆಯಿಂದ ಆವೃತನಾಗಿರುವ ಮನುಷ್ಯನು ಇಹ-ಪರಗಳೆರಡರಲ್ಲಿಯೂ ದುಃಖವನ್ನೇ ಅನುಭವಿಸುತ್ತಾನೆ.

ಸರ್ವೋಪಾಯಾತ್ತು ಕಾಮಸ್ಯ ಕ್ರೋಧಸ್ಯ ಚ ವಿನಿಗ್ರಹಃ ।
ಕಾರ್ಯಃ ಶ್ರೇಯೋಽರ್ಥಿನಾ ತೌ ಹಿ ಶ್ರೇಯೋಘಾತಾರ್ಥ-
ಮುದ್ಯತೌ ॥೧೦॥

ಶ್ರೇಯಸ್ಸನ್ನು ಅಪೇಕ್ಷಿಸುವವನು ಸರ್ವೋಪಾಯಗಳಿಂದಲೂ ಕಾಮ-ಕ್ರೋಧಗಳನ್ನು ನಿಗ್ರಹಿಸಲೇಬೇಕು. ಏಕೆಂದರೆ : ಕಾಮ-ಕ್ರೋಧಗಳು ಮನುಷ್ಯನ ಶ್ರೇಯಸ್ಸನ್ನು ಹಾಳುಮಾಡುವ ಸಲುವಾಗಿಯೇ ಯಾವಾಗಲೂ ಪ್ರಯತ್ನಿಸುತ್ತಿರುತ್ತವೆ.

ನಿತ್ಯಂ ಕ್ರೋಧಾತ್ತಪೋ ರಕ್ಷೇಚ್ಛ್ರಿಯಂ ರಕ್ಷೇಚ್ಚ ಮತ್ಸರಾತ್ ।
ವಿದ್ಯಾಂ ಮಾನಾವಮಾನಾಭ್ಯಾಮಾತ್ಮಾನಂ ತು ಪ್ರಮಾದತಃ ॥೧೧॥

ಮನುಷ್ಯನು ಯಾವಾಗಲೂ ತಪಸ್ಸನ್ನು ಕೋಪದಿಂದ ರಕ್ಷಿಸಬೇಕು. (ತಪಸ್ಸುಮಾಡುತ್ತಿರುವಾಗ ಮಧ್ಯದಲ್ಲಿ ಕೋಪಗೊಂಡರೆ ಮಾಡಿದ ತಪಸ್ಸು ಹಾಳಾಗುತ್ತದೆ.) ಐಶ್ವರ್ಯವನ್ನು ಮಾತ್ಸರ್ಯದಿಂದ ರಕ್ಷಿಸಬೇಕು. (ಇನ್ನೊಬ್ಬನಲ್ಲಿರುವ ಐಶ್ವರ್ಯದಲ್ಲಿ ಮಾತ್ಸರ್ಯವುಂಟಾದರೆ ಅವನನ್ನು ಹಾಳುಮಾಡಲು ಪ್ರಯತ್ನಿಸಿ ತನ್ನಲ್ಲಿರುವ ಐಶ್ವರ್ಯವೆಲ್ಲವನ್ನೂ ವ್ಯಯ ಮಾಡಬೇಕಾಗುತ್ತದೆ. ಇಂತಹ ಮಾತ್ಸರ್ಯವನ್ನು ತಾಳದೇ ಐಶ್ವರ್ಯವನ್ನು ರಕ್ಷಿಸಿಕೊಳ್ಳಬೇಕು.) ವಿದ್ಯೆಯನ್ನು ಮಾನಾಪಮಾನಗಳಿಂದ ರಕ್ಷಿಸಿಕೊಳ್ಳ ಬೇಕು. (ವಿದ್ಯಾರ್ಥಿಗೆ ಮಾನಾಪಮಾನಗಳ ಪರಿವೆಯಿದ್ದರೆ ವಿದ್ಯೆಯು ಬರುವುದಿಲ್ಲ. ಸುಖ ಮತ್ತು ನಿದ್ರೆಗಳನ್ನು ತೊರೆದು ಗುರುಗಳು ಹೇಳಿದ ಕೆಲಸವನ್ನು ಮಾಡಿಕೊಂಡು ಹಾಗೆ ಕೆಲಸಮಾಡುವಾಗ–ಈ ಕಾರ್ಯವನ್ನು ಮಾಡಿದರೆ ಅವಮಾನ, ಈ ಕಾರ್ಯವನ್ನು ಮಾಡಲಾಗದು–ಎಂದು ಭಾವಿಸದೇ ವಿಧೇಯತೆಯಿಂದ ಹೇಳಿದ ಕೆಲಸವನ್ನು ಮಾಡುತ್ತಿದ್ದರೆ ವಿದ್ಯೆಯು ಚೆನ್ನಾಗಿ ಹತ್ತುತ್ತದೆ. ಮಾನ ಎಂದರೆ ಅಹಂಕಾರಪಡುವುದು. ವಿದ್ಯಾವಂತನೆಂದು ಅಹಂಕಾರಪಡುವುದರಿಂದಲೂ ವಿದ್ಯೆಯು ಹಾಳಾಗು ತ್ತದೆ. ಆದುದರಿಂದ ಮಾನಾಪಮಾನಗಳೆರಡನ್ನೂ ಬದಿಗೊತ್ತಿ ವಿಧೇಯತೆ ಯಿಂದ ವಿದ್ಯೆಯನ್ನು ಸಂಪಾದಿಸಿ ರಕ್ಷಿಸಬೇಕು.) ತನ್ನನ್ನು ಅಜಾಗರೂಕತೆ ಯಿಂದ ರಕ್ಷಿಸಿಕೊಳ್ಳಬೇಕು. (ಮನುಷ್ಯನಲ್ಲಿ ಅಜಾಗರೂಕತೆಯೆಂಬುದೇ ಅಧಃ

ಪತನಕ್ಕೆ ಕಾರಣವಾಗುತ್ತದೆ. ಆದುದರಿಂದ ಮನುಷ್ಯನು ಯಾವಾಗಲೂ ಜಾಗರೂಕನಾಗಿರಬೇಕು.)

ಆನೃಶಂಸ್ಯಂ ಪರೋ ಧರ್ಮಃ ಕ್ಷಮಾ ಚ ಪರಮಂ ಬಲಮ್ ।
ಆತ್ಮಜ್ಞಾನಂ ಪರಂ ಜ್ಞಾನಂ ನ ಸತ್ಯಾದ್ವಿದ್ಯತೇ ಪರಮ್ ॥೧೨॥

ಕ್ರೌರ್ಯದ ಪರಿತ್ಯಾಗವೇ (ದಯೆಯೇ) ಶ್ರೇಷ್ಠವಾದ ಧರ್ಮ. ಸಹನೆಯೇ ಶ್ರೇಷ್ಠವಾದ ಬಲ. ಆತ್ಮಜ್ಞಾನವೇ ಶ್ರೇಷ್ಠವಾದ ಜ್ಞಾನ. ಸತ್ಯಕ್ಕಿಂತಲೂ ಶ್ರೇಷ್ಠವಾದುದು ಬೇರೆ ಯಾವುದೂ ಇಲ್ಲ.

ಸತ್ಯಸ್ಯ ವಚನಂ ಶ್ರೇಯಃ ಸತ್ಯಾದಪಿ ಹಿತಂ ವದೇತ್ ।
ಯದ್ಭೂತಹಿತಮತ್ಯನ್ತಮೇತತ್ಸತ್ಯಂ ಮತಂ ಮಮ ॥೧೩॥

ಸತ್ಯವಚನವು (ನಿಜವನ್ನೇ ಹೇಳುವುದು) ಶ್ರೇಯಸ್ಕರವಾದುದು. ಹಿತವಾದ ಮಾತನ್ನು ಹೇಳುವುದು ಸತ್ಯಕ್ಕಿಂತಲೂ ಶ್ರೇಯಸ್ಕರವಾದುದು. ಯಾವುದರಿಂದ ಪ್ರಾಣಿಗಳಿಗೆ ಅತ್ಯಂತಹಿತವಾಗುವುದೋ–ಅದೇ ಸತ್ಯ ವೆಂಬುದು ನನ್ನ ಅಭಿಮತವಾಗಿದೆ.

ಸರ್ವಾರಮ್ಭಪರಿತ್ಯಾಗೀ ನಿರಾಶೀರ್ನಿಷ್ಪರಿಗ್ರಹಃ ।
ಯೇನ ಸರ್ವಂ ಪರಿತ್ಯಕ್ತಂ ಸ ವಿದ್ವಾನ್ಸ ಚ ಪಣ್ಡಿತಃ ॥೧೪॥

ಕಾರ್ಯಗಳನ್ನು ಆರಂಭಿಸಲು ಸಕಲವಿಧವಾದ ಸಂಕಲ್ಪಗಳನ್ನೂ ಯಾವನು ಪರಿತ್ಯಜಿಸಿರುವನೋ, ಸಕಲವಿಧವಾದ ಕಾಮನೆಗಳಿಂದಲೂ ರಹಿತನಾಗಿರುವನೋ, ಯಾವ ವಸ್ತುವನ್ನೂ ಪರಿಗ್ರಹಿಸುವುದಿಲ್ಲವೋ, ಎಲ್ಲವನ್ನೂ ಸಂಪೂರ್ಣವಾಗಿ (ಭಗವದರ್ಪಣಪೂರ್ವಕವಾಗಿ) ಪರಿತ್ಯಾಗ ಮಾಡಿರುವನೋ –ಅವನೇ ವಿದ್ವಾಂಸನು ಮತ್ತು ಅವನೇ ಪಂಡಿತನು.

ಇನ್ದ್ರಿಯೈರಿನ್ದ್ರಿಯಾರ್ಥಾನ್ಯಶ್ಚರತ್ಯಾತ್ಮವಶೈರಿಹ ।
ಅಸಜ್ಜಮಾನಃ ಶಾನ್ತಾತ್ಮಾ ನಿರ್ವಿಕಾರಃ ಸಮಾಹಿತಃ ॥೧೫॥

ಆತ್ಮಭೂತೈರತದ್ಭೂತಃ ಸಹ ಚೈವ ವಿನೈವ ಚ ।
ಸ ವಿಮುಕ್ತಃ ಪರಂ ಶ್ರೇಯೋ ನಚಿರೇಣಾಧಿತಿಷ್ಠತಿ ॥೧೬॥

ತನ್ನ ವಶವರ್ತಿಗಳಾಗಿರುವ ಇಂದ್ರಿಯಗಳಿಂದ ಇಂದ್ರಿಯವಿಷಯಗಳನ್ನು ಅನಾಸಕ್ತನಾಗಿ ಯಾವನು ಸೇವಿಸುವನೋ–ಯಾವನು ಶಾಂತವಾದ ಮನಸ್ಸುಳ್ಳವನೋ–ವಿಕಾರರಹಿತನೋ–ಏಕಾಗ್ರವಾದ ಬುದ್ಧಿಯಿಂದ ಕೂಡಿರುವನೋ, ಆತ್ಮದಂತೆ ಕಾಣುವ ಶರೀರದಿಂದಲೂ ಮತ್ತು ಇಂದ್ರಿಯಗಳಿಂದಲೂ ಕೂಡಿದವನಾಗಿದ್ದರೂ 'ತಾನು ದೇಹರೂಪನೂ ಅಲ್ಲ ; ಇಂದ್ರಿಯರೂಪನೂ ಅಲ್ಲ ; ಇವುಗಳಿಂದ ಪ್ರತ್ಯೇಕನಾದವನು'– ಎಂದುಕೊಂಡಿರುವನೋ–ಅವನೇ ಮುಕ್ತನು. ಅಂತಹವನು ಬಹಳ ಶೀಘ್ರವಾಗಿಯೇ ಪರಮಶ್ರೇಯಸ್ಸನ್ನು ಹೊಂದುತ್ತಾನೆ.

ಅದರ್ಶನಮಸಂಸ್ಪರ್ಶಸ್ತಥಾಸಮ್ಭಾಷಣಂ ಸದಾ ।
ಯಸ್ಯ ಭೂತೈಃ ಸಹ ಮುನೇ ಸ ಶ್ರೇಯೋ ವಿನ್ದತೇ ಪರಮ್ ॥೧೭॥

ಶುಕಮುನಿಯೇ! ಯಾವನು ಯಾವ ಪ್ರಾಣಿಗಳನ್ನೂ ನೋಡುವುದೇ ಇಲ್ಲವೋ, ಮುಟ್ಟುವುದೇ ಇಲ್ಲವೋ ಮತ್ತು ಯಾವ ಪ್ರಾಣಿಗಳೊಡನೆಯೂ ಮಾತನಾಡುವುದೂ ಇಲ್ಲವೋ–ಅಂತಹವನು ಶ್ರೇಷ್ಠವಾದ ಶ್ರೇಯಸ್ಸನ್ನು ಹೊಂದುತ್ತಾನೆ.

ನ ಹಿಂಸ್ಯಾತ್ಸರ್ವಭೂತಾನಿ ಮೈತ್ರಾಯಣಗತಶ್ಚರೇತ್ ।
ನೇದಂ ಜನ್ಮ ಸಮಾಸಾದ್ಯ ವೈರಂ ಕುರ್ವೀತ ಕೇನಚಿತ್ ॥೧೮॥

ಯಾವ ಪ್ರಾಣಿಯನ್ನೂ ಹಿಂಸಿಸಬಾರದು. ಎಲ್ಲರೊಡನೆಯೂ ಮಿತ್ರಭಾವದಿಂದಲೇ ವ್ಯವಹರಿಸಬೇಕು. ಮನುಷ್ಯಜನ್ಮವನ್ನು ಪಡೆದು ಯಾರೊಡನೆಯೂ ದ್ವೇಷವನ್ನು ಕಟ್ಟಿಕೊಳ್ಳಬಾರದು.

ಆಕಿಞ್ಚನ್ಯಂ ಸುಸಂತೋಷೋ ನಿರಾಶೀಸ್ತ್ವಮಚಾಪಲಮ್ ।
ಏತದಾಹುಃ ಪರಂ ಶ್ರೇಯ ಆತ್ಮಜ್ಞಸ್ಯ ಜಿತಾತ್ಮನಃ ॥೧೯॥

ಜಿತೇಂದ್ರಿಯನಾದವನಿಗೆ ಮತ್ತು ಆತ್ಮತತ್ತ್ವವನ್ನು ತಿಳಿದವನಿಗೆ–ನಾಳೆಗೆಂದು ಯಾವುದೇ ವಸ್ತುವನ್ನಾದರೂ ಸಂಗ್ರಹಿಸದೇ ಇರುವುದು, ಯಾವಾಗಲೂ ತೃಪ್ತನಾಗಿರುವುದು, ಯಾವುದರಲ್ಲಿಯೂ ಅಪೇಕ್ಷೆಯಿಲ್ಲದೇ ಇರುವುದು, ಚಾಂಚಲ್ಯವಿಲ್ಲದಿರುವುದು –ಇವು ಪರಮಶ್ರೇಯಸ್ಸಿಗೆ ಸಾಧನಭೂತಗಳಾಗುವುವೆಂದು ವಿದ್ವಾಂಸರು ಹೇಳುತ್ತಾರೆ.

ಪರಿಗ್ರಹಂ ಪರಿತ್ಯಜ್ಯ ಭವ ತಾತ ಜಿತೇನ್ದ್ರಿಯಃ ।
ಅಶೋಕಂ ಸ್ಥಾನಮಾತಿಷ್ಠ ಇಹ ಚಾಮುತ್ರ ಚಾಭಯಮ್ ॥೨೦॥

ಶುಕದೇವ! *ಪರಿಗ್ರಹವನ್ನು ಪರಿತ್ಯಜಿಸಿ ಯಾವ ವಸ್ತುವನ್ನೂ ಶೇಖರಣೆಮಾಡದೇ ಜಿತೇಂದ್ರಿಯನಾಗಿರು. ಇಹ-ಪರಗಳೆರಡರಲ್ಲಿಯೂ ಭಯರಹಿತವಾಗಿರುವ ಮತ್ತು ಶೋಕರಹಿತವಾಗಿರುವ ಸ್ಥಾನವನ್ನು ಆಶ್ರಯಿಸು. (ಅಧ್ಯಾತ್ಮವನ್ನೇ ಸರ್ವದಾ ಚಿಂತಿಸುತ್ತಿರು.)

ನಿರಾಮಿಷಾ ನ ಶೋಚನ್ತಿ ತ್ಯಜೇದಾಮಿಷಮಾತ್ಮನಃ ।
ಪರಿತ್ಯಜ್ಯಾಮಿಷಂ ಸೌಮ್ಯ ದುಃಖತಾಪಾದ್ವಿಮೋಕ್ಷ್ಯಸೇ ॥೨೧॥

ಸೌಮ್ಯನೇ! ಕಾಮೋಪಭೋಗಗಳಲ್ಲಿ ಲಾಲಸೆಯಿಲ್ಲದವರು ಖಂಡಿತ ವಾಗಿಯೂ ಶೋಕಪಡುವುದಿಲ್ಲ. ಆದುದರಿಂದ ಮನುಷ್ಯನು ಭೋಗಾ ಸಕ್ತಿಯನ್ನು ಪರಿತ್ಯಾಗಮಾಡಬೇಕು. ಭೋಗವಸ್ತುಗಳ ಮೇಲಿನ ಆಶೆಯನ್ನು ಸಂಪೂರ್ಣವಾಗಿ ಪರಿತ್ಯಜಿಸುವುದರಿಂದ ದುಃಖದಿಂದಾಗುವ ಸಂತಾಪದಿಂದ ವಿಮುಕ್ತನಾಗುವೆ.

ತಪೋನಿತ್ಯೇನ ದಾನ್ತೇನ ಮುನಿನಾ ಸಂಯತಾತ್ಮನಾ ।
ಅಜಿತಂ ಜೇತುಕಾಮೇನ ಭಾವ್ಯಂ ಸಙ್ಗೇಷ್ವಸಙ್ಗಿನಾ ॥೨೨॥

ಜಯಿಸಲು ಅಸಾಧ್ಯನಾದ, ತಾನು ಇದುವರೆಗೆ ಗೆಲ್ಲಲಾಗದಿರುವ ಮೋಕ್ಷವನ್ನು ಯಾರು ಜಯಿಸಲು ಇಚ್ಛಿಸುವನೋ–ಅವನು ನಿತ್ಯವೂ ತಪಸ್ಸಿನಲ್ಲಿಯೇ ನಿರತನಾಗಿರಬೇಕು. ಜಿತೇಂದ್ರಿಯನಾಗಿರಬೇಕು. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕು. ವಿಷಯಗಳಲ್ಲಿ ಅನಾಸಕ್ತನಾಗಿರಬೇಕು.

ಗುಣಸಙ್ಗೇಷ್ವನಾಸಕ್ತ ಏಕಚರ್ಯಾರತಃ ಸದಾ ।
ಬ್ರಾಹ್ಮಣೋ ನಚಿರಾದೇವ ಸುಖಮಾಯಾತ್ಯನುತ್ತಮಮ್ ॥೨೩॥

---

* ೫ನೆಯ ಶ್ಲೋಕದಲ್ಲಿ ನಾರದರು ಭಗವಂತನಾದ ಸನತ್ಕುಮಾರನು ಋಷಿಗಳಿಗೆ ಹೇಳಿದ ಮಾತುಗಳನ್ನು ಹೇಳಲು ಉಪಕ್ರಮಿಸಿದ್ದಾರೆ. ಆದರೆ ೧೭ನೆಯ ಶ್ಲೋಕದಿಂದ ಮುಂದಕ್ಕೆ ನಾರದರೇ ಶುಕನಿಗೆ ನೇರವಾಗಿ ಹೇಳಿದಂತಿದೆ.

ಯಾವ ಬ್ರಾಹ್ಮಣನು ತ್ರಿಗುಣಾತ್ಮಕವಾದ ವಿಷಯಗಳಲ್ಲಿ ಅನಾಸಕ್ತನಾಗಿರುವನೋ, ಏಕಾಂತದಲ್ಲಿಯೇ ಇರುತ್ತಾ ಸದಾಕಾಲದಲ್ಲಿಯೂ ಅಧ್ಯಾತ್ಮವನ್ನೇ ಚಿಂತಿಸುತ್ತಿರುವನೋ –ಅಂತಹ ಬ್ರಾಹ್ಮಣನು ಬಹಳ ಬೇಗ ಮೋಕ್ಷರೂಪವಾದ ಮಹಾಸುಖವನ್ನು ಹೊಂದುತ್ತಾನೆ.

ದ್ವನ್ದ್ವಾರಾಮೇಷು ಭೂತೇಷು ಯ ಏಕೋ ರಮತೇ ಮುನಿಃ ।
ವಿದ್ಧಿ ಪ್ರಜ್ಞಾನತೃಪ್ತಂ ತಂ ಜ್ಞಾನತೃಪ್ತೋ ನ ಶೋಚತಿ ॥೨೪॥

ಮೈಥುನಸುಖವನ್ನೇ ಪರಮಸುಖವೆಂದು ಭಾವಿಸುವ ಪ್ರಾಣಿಗಳ ಮಧ್ಯದಲ್ಲಿದ್ದರೂ ಏಕಾಕಿಯಾಗಿದ್ದುಕೊಂಡು ಯಾವ ಮುನಿಯು ಆನಂದ ಪಡುವನೋ–ಅಂತಹ ಮುನಿಯನ್ನು ವಿಶೇಷವಾದ ಆತ್ಮಜ್ಞಾನದಿಂದ ತೃಪ್ತನಾಗಿರತಕ್ಕವನೆಂದು ತಿಳಿ. ಜ್ಞಾನತೃಪ್ತನಾದವನು ಯಾವಾಗಲೂ ಶೋಕ ಪಡುವುದಿಲ್ಲ.

ಶುಭೈರ್ಲಭತಿ ದೇವತ್ವಂ ವ್ಯಾಮಿಶ್ರೈರ್ಜನ್ಮಮಾನುಷಮ್ ।
ಅಶುಭೈಶ್ಚಾಪ್ಯಧೋ ಜನ್ಮ ಕರ್ಮಭಿರ್ಲಭತೇಽವಶಃ ॥೨೫॥

ಅಸ್ವತಂತ್ರನಾದ ಜೀವನು ತಾನು ಮಾಡುವ ಶುಭಕರ್ಮಗಳಿಂದ ದೇವತ್ವವನ್ನೂ, ಶುಭಾಶುಭಮಿಶ್ರಕರ್ಮಗಳಿಂದ ಮನುಷ್ಯತ್ವವನ್ನೂ, ಕೇವಲ ಅಶುಭಕರ್ಮಗಳ ಆಚರಣೆಯಿಂದ ನೀಚಯೋನಿಗಳಾದ ಪಶು-ಪಕ್ಷಿಗಳ ಜನ್ಮವನ್ನೂ ಪಡೆಯುತ್ತಾನೆ.

ತತ್ರ ಮೃತ್ಯುಜರಾದುಃಖೈಃ ಸತತಂ ಸಮಭಿದ್ರುತಃ ।
ಸಂಸಾರೇ ಪಚ್ಯತೇ ಜನ್ತುಸ್ತತ್ಕಥಂ ನಾವಬುಧ್ಯಸೇ ॥೨೬॥

ದೇವ-ಮನುಷ್ಯ-ತಿರ್ಯಗ್ಯೋನಿಗಳಲ್ಲಿ ಮುಪ್ಪು-ಸಾವುಗಳೇ ಮೊದಲಾದ ನಾನಾವಿಧವಾದ ದುಃಖಗಳಿಂದ ಹಿಂಬಾಲಿಸಲ್ಪಡುವ ಜೀವನು ಸಂಸಾರವೆಂಬ ಬಾಣಲೆಯಲ್ಲಿ ಬೇಯಿಸಲ್ಪಡುತ್ತಾನೆ. ಈ ವಿಷಯವನ್ನು ನೀನೇಕೆ ಇದುವರೆಗೂ ತಿಳಿದುಕೊಂಡಿರುವುದಿಲ್ಲ?

ಅಹಿತೇ ಹಿತಸಂಜ್ಞಸ್ತ್ವಮಧ್ರುವೇ ಧ್ರುವಸಂಜ್ಞಕಃ ।
ಅನರ್ಥೇ ಚಾರ್ಥಸಂಜ್ಞಸ್ತ್ವಂ ಕಿಮರ್ಥಂ ನಾವಬುಧ್ಯಸೇ ॥೨೭॥

ಅಹಿತಕರ್ಮಗಳಲ್ಲಿಯೇ ಹಿತವಾಗುವುದೆಂಬ ಬುದ್ಧಿಯು ನಿನಗೆ ಉಂಟಾಗುತ್ತದೆ. ಅಶಾಶ್ವತವಾದ ವಸ್ತುವನ್ನೇ ನೀನು ಶಾಶ್ವತವಾದುದೆಂದು ಭಾವಿಸುವೆ. ಅನರ್ಥವಾದುದನ್ನು ನೀನು ಪ್ರಯೋಜನಕಾರಿಯೆಂದು ಭಾವಿಸುವೆ. ನಿನ್ನಲ್ಲಿ ಈ ವಿಧವಾದ ವಿಪರೀತಬುದ್ಧಿಯಿರುವುದೆಂಬುದನ್ನು ನೀನು ಯಾವ ಕಾರಣದಿಂದ ತಿಳಿದುಕೊಂಡಿರುವುದಿಲ್ಲ?

ಸಂವೇಷ್ಟ್ಯಮಾನಂ ಬಹುಭಿರ್ಮೋಹಾತ್ತನ್ತುಭಿರಾತ್ಮಜೈಃ ।
ಕೋಶಕಾರ ಇವಾತ್ಮಾನಂ ವೇಷ್ಟಯನ್ನಾವಬುಧ್ಯಸೇ ॥೨೮॥

ರೇಷ್ಮೆಯ ಹುಳುವು ತನ್ನ ಶರೀರದಿಂದಲೇ ಹುಟ್ಟಿದ ತಂತುಗಳಿಂದ ಗೂಡನ್ನು ಕಟ್ಟಿ ಅದರಲ್ಲಿಯೇ ತಾನು ಬಂಧಿಸಲ್ಪಡುವಂತೆ –ನೀನಾದರೂ ಮೋಹಪರವಶನಾಗಿ ನಿನ್ನ ಶರೀರಸಂಬಂಧದಿಂದ ಹುಟ್ಟಿದ ಮಕ್ಕಳಿಂದಲೂ ಮತ್ತು ಪತ್ನಿಯೇ ಮೊದಲಾದ ಬಂಧುವರ್ಗದವರಿಂದಲೂ ಬಂಧಿಸಲ್ಪಟ್ಟಿ ರುವುದನ್ನು ನೀನು ತಿಳಿದವನಾಗಿಲ್ಲ.

ಅಲಂ ಪರಿಗ್ರಹೇಣೇಹ ದೋಷವಾನ್ಹಿ ಪರಿಗ್ರಹಃ ।
ಕೃಮಿರ್ಹಿ ಕೋಶಕಾರಸ್ತು ಬಧ್ಯತೇ ಸ ಪರಿಗ್ರಹಾತ್ ॥೨೯॥

ಸಂಗ್ರಹಿಸುವುದನ್ನು ನಿಲ್ಲಿಸು. ಸಂಗ್ರಹಿಸುವಿಕೆಯೇ ದೋಷಯುಕ್ತ ವಾದುದು. ರೇಷ್ಮೆಯ ಹುಳುವು ಇತರ ಹುಳುಗಳನ್ನು ಸಂಗ್ರಹಿಸುವ ಉದ್ದೇಶದಿಂದಲೇ ಗೂಡುಕಟ್ಟುತ್ತದೆ. ಆ ದೋಷದಿಂದಲೇ ಅದು ತಾನು ಕಟ್ಟಿದ ಗೂಡಿನಲ್ಲಿಯೇ ಬಂದಿಯಾಗುತ್ತದೆ.

ಪುತ್ರದಾರಕುಟುಮ್ಬೇಷು ಸಕ್ತಾಃ ಸೀದನ್ತಿ ಜನ್ತವಃ ।
ಸರಃಪಙ್ಕಾರ್ಣವೇ ಮಗ್ನಾ ಜೀರ್ಣಾ ವನಗಜಾ ಇವ ॥೩೦॥

ಸರೋವರದ ಕೆಸರಿನಲ್ಲಿ ಸಿಕ್ಕಿಹಾಕಿಕೊಂಡು ದುಃಖಪಡುವ ಮುದಿ ಕಾಡಾನೆಗಳಂತೆ–ಪತ್ನೀ-ಪುತ್ರ-ಕುಟುಂಬಗಳಲ್ಲಿಯೇ ಆಸಕ್ತರಾದ (ಸಂಸಾರ ವೆಂಬ ಕೆಸರಿನಲ್ಲಿ ಸಿಕ್ಕಿಕೊಂಡಿರುವ) ಜನರು ವಿನಾಶಹೊಂದುತ್ತಾರೆ.

ಮಹಾಜಾಲಸಮಾಕೃಷ್ಟಾನ್ಸ್ಥಲೇ ಮತ್ಸ್ಯಾನಿವೋದ್ಧೃತಾನ್ ।
ಸ್ನೇಹಜಾಲಸಮಾಕೃಷ್ಟಾನ್ಪಶ್ಯ ಜನ್ತೂನ್ಸುದುಃಖಿತಾನ್ ॥೩೧॥

ದೊಡ್ಡದಾದ ಬಲೆಯಿಂದ ಸೆಳೆಯಲ್ಪಟ್ಟು ನೀರಿನಿಂದ ಮೇಲಕ್ಕೆತ್ತಲ್ಪಟ್ಟ ಮೀನುಗಳು ವಿಲಿ-ವಿಲಿಗುಟ್ಟುವಂತೆ –ಸ್ನೇಹವೆಂಬ ಬಲೆಯಿಂದ ಸೆಳೆಯಲ್ಪಟ್ಟು ಅತ್ಯಂತದುಃಖದಲ್ಲಿ ತೊಳಲುತ್ತಿರುವ ಈ ಪ್ರಾಣಿಗಳನ್ನಾದರೂ ನೋಡು.

ಕುಟುಮ್ಬಂ ಪುತ್ರದಾರಾಂಶ್ಚ ಶರೀರಂ ಸಂಚಯಾಶ್ಚ ಯೇ ।
ಪಾರಕ್ಯಮಧ್ರುವಂ ಸರ್ವಂ ಕಿಂ ಸ್ವಂ ಸುಕೃತದುಷ್ಕೃತಮ್ ॥೩೨॥

ಸಂಸಾರದಲ್ಲಿ ಕುಟುಂಬ (ಬಂಧುಗಳು), ಮಕ್ಕಳು, ಪತ್ನಿಯರು, ಶರೀರ ಮತ್ತು ಸಂಗ್ರಹ –ಇವುಗಳೆಲ್ಲವೂ ಇತರರಿಗೆ ಸಂಬಂಧಿಸಿದುವುಗಳು. ಅಶಾಶ್ವತವಾದುವುಗಳು. ಇವುಗಳಲ್ಲಿ ನಿನ್ನದೆಂಬುದೇನಿದೆ? ಪುಣ್ಯ-ಪಾಪಗಳು ಮಾತ್ರವೇ ತನ್ನವುಗಳಾಗಿರುತ್ತವೆ.

ಯದಾ ಸರ್ವಂ ಪರಿತ್ಯಜ್ಯ ಗನ್ತವ್ಯಮವಶೇನ ತೇ ।
ಅನರ್ಥೇ ಕಿಂ ಪ್ರಸಕ್ತಸ್ತ್ವಂ ಸ್ವಮರ್ಥಂ ನಾನುತಿಷ್ಠಸಿ ॥೩೩॥

ಅಸ್ವತಂತ್ರನಾದ ನೀನು ಇಲ್ಲಿರುವ ಸಕಲಸರ್ವಸ್ವವನ್ನೂ ಪರಿತ್ಯಜಿಸಿ ಒಂದು ದಿನ ಹೋಗಲೇಬೇಕಾಗುತ್ತದೆ. ಹೀಗಿರುವಾಗ ಅನರ್ಥಮಯವಾದ ಈ ಸಂಸಾರದಲ್ಲಿ ಆಸಕ್ತಿಯನ್ನೇಕೆ ಹೊಂದಿರುವೆ? ಸ್ವಪ್ರಯೋಜನಕ್ಕಾಗಿ (ಮೋಕ್ಷಸಾಧನೆಗಾಗಿ) ಏಕಿನ್ನೂ ಪ್ರಯತ್ನಪಡುತ್ತಿಲ್ಲ?

ಅವಿಶ್ರಾನ್ತಮನಾಲಮ್ಬಮಪಾಥೇಯಮದೈಶಿಕಮ್ ।
ತಮಃಕಾನ್ತಾರಮಧ್ವಾನಂ ಕಥಮೇಕೋ ಗಮಿಷ್ಯಸಿ ॥೩೪॥

ನೀನು ಹೋಗಬೇಕಾಗಿರುವ ಹಾದಿಯು ಕಗ್ಗತ್ತಲಿನಿಂದ ಕೂಡಿರುವ ಕಾಡಿನ ಪ್ರದೇಶದಲ್ಲಿದೆ. ಅಲ್ಲಿ ವಿಶ್ರಾಂತಿಯನ್ನು ಪಡೆಯಲು ಯಾವ ಸ್ಥಳವೂ ಇಲ್ಲ. ಆಶ್ರಯಿಸಲು ಯಾರೊಬ್ಬರೂ ಅಲ್ಲಿ ಸಿಗುವುದಿಲ್ಲ. ಪ್ರಯಾಣ ಕಾಲದಲ್ಲಿ ಬೇಕಾಗುವ ಅನ್ನದ ಬುತ್ತಿಯೂ ಅಲ್ಲಿ ಸಿಗುವುದಿಲ್ಲ. ಆ ದೇಶಕ್ಕೆ ಸಂಬಂಧಿಸಿದ ವಿಷಯಗಳನ್ನು ಹೇಳುವವರೂ (ದಾರಿತೋರಿಸುವವರೂ) ಅಲ್ಲಿ ಯಾರೂ ಇರುವುದಿಲ್ಲ. ಅಂತಹ ಕಾಡಿನ ಕಗ್ಗತ್ತಲಿನ ಮಾರ್ಗದಲ್ಲಿ ಏಕಾಕಿಯಾಗಿ ನೀನು ಹೇಗೆ ಹೋಗುವೆ?

ನ ಹಿ ತ್ವಾಂ ಪ್ರಸ್ಥಿತಂ ಕಶ್ಚಿತ್ಪೃಷ್ಠತೋಽನುಗಮಿಷ್ಯತಿ ।
ಸುಕೃತಂ ದುಷ್ಕೃತಂ ಚ ತ್ವಾಂ ಯಾಸ್ಯನ್ತಮನುಯಾಸ್ಯತಿ ॥೩೫॥

ಮರಣಾನಂತರದಲ್ಲಿ ಪರಲೋಕಕ್ಕೆ ಹೋಗುವಾಗ ನಿನ್ನ ಹಿಂದೆ ಯಾವನೊಬ್ಬನೂ ಬರುವುದಿಲ್ಲ. ನೀನು ಮಾಡಿದ ಸುಕೃತ-ದುಷ್ಕೃತಗಳು ಮಾತ್ರವೇ ಪರಲೋಕಕ್ಕೆ ಹೋಗುತ್ತಿರುವ ನಿನ್ನನ್ನು ಅನುಸರಿಸಿ ಬರುತ್ತವೆ.

ವಿದ್ಯಾ ಕರ್ಮ ಚ ಶೌಚಂ ಚ ಜ್ಞಾನಂ ಚ ಬಹುವಿಸ್ತರಮ್ ।
ಅರ್ಥಾರ್ಥಮನುಸಾರ್ಯನ್ತೇ ಸಿದ್ಧಾರ್ಥಶ್ಚ ವಿಮುಚ್ಯತೇ ॥೩೬॥

ವಿದ್ಯೆ, ಕರ್ಮ, ಪವಿತ್ರತೆ, ಬಹುವಿಶಾಲವಾದ ಜ್ಞಾನ –ಇವೆಲ್ಲವೂ ಪರಮಾತ್ಮನ ಪ್ರಾಪ್ತಿಗಾಗಿ ಅನುಸರಿಸಲ್ಪಡುತ್ತವೆ. ಮನುಷ್ಯನು ಸಿದ್ಧಾರ್ಥನಾದೊಡನೆಯೇ (ಪರಮಾತ್ಮನನ್ನು ಪಡೆದುಕೊಂಡೊಡನೆಯೇ) ಅವುಗಳೂ ಬಿಟ್ಟುಹೋಗುತ್ತವೆ. ಮನುಷ್ಯನೂ ಮುಕ್ತನಾಗುತ್ತಾನೆ.

ನಿಬನ್ಧನೀ ರಜ್ಜುರೇಷಾ ಯಾ ಗ್ರಾಮೇ ವಸತೋ ರತಿಃ ।
ಛಿತ್ತ್ವೈತಾಂ ಸುಕೃತೋ ಯಾನ್ತಿ ನೈನಾಂ ಛಿನ್ದನ್ತಿ ದುಷ್ಕೃತಃ ॥೩೭॥

(ಇಂದ್ರಿಯ) ಗ್ರಾಮದಲ್ಲಿ ವಾಸಮಾಡುವ ಮನುಷ್ಯನಿಗೆ ಯಾವ ವಿಷಯಾಸಕ್ತಿಯಿರುವುದೋ –ಆ ವಿಷಯಾಸಕ್ತಿಯೇ ಅವನನ್ನು ಬಂಧಿಸುವ ಹಗ್ಗವಾಗಿರುತ್ತದೆ. ಪುಣ್ಯಾತ್ಮರು ಈ ಬಂಧನವನ್ನು ಕಡಿದುಹಾಕಿ ಪರಮಪದವನ್ನು ಸೇರುತ್ತಾರೆ. ಪಾಪಿಷ್ಠರಾದವರು ಈ ಹಗ್ಗವನ್ನು ಕತ್ತರಿಸಲಾರರು.

ರೂಪಕೂಲಾಂ ಮನಃಸ್ರೋತಾಂ ಸ್ಪರ್ಶದ್ವೀಪಾಂ ರಸಾವಹಾಮ್ ।
ಗನ್ಧಪಙ್ಕಾಂ ಶಬ್ದಜಲಾಂ ಸ್ವರ್ಗಮಾರ್ಗದುರಾವಹಾಮ್ ॥೩೮॥

ಕ್ಷಮಾರಿತ್ರಾಂ ಸತ್ಯಮಯೀಂ ಧರ್ಮಸ್ಥೈರ್ಯವಟಾರಕಾಮ್ ।
ತ್ಯಾಗವಾತಾಧ್ವಗಾಂ ಶೀಘ್ರಾಂ ನೌತಾರ್ಯಾಂ ತಾಂ ನದೀಂ ತರೇತ್ ॥೩೯॥

ರೂಪವೆಂಬ ತೀರಪ್ರದೇಶದಿಂದಲೂ, ಮನಸ್ಸೆಂಬ ಪ್ರವಾಹದಿಂದಲೂ, ಸ್ಪರ್ಶವೆಂಬ ದ್ವೀಪದಿಂದಲೂ, ಗಂಧವೆಂಬ ಕೆಸರಿನಿಂದಲೂ, ಶಬ್ದವೆಂಬ

ಜಲದಿಂದಲೂ ಕೂಡಿ ಸ್ವರ್ಗಮಾರ್ಗಕ್ಕೆ ಬಹಳ ಕಷ್ಟದಿಂದ ಒಯ್ಯುವ, ಶೀಘ್ರವಾಗಿ ಹರಿಯುತ್ತಿರುವ, ನೌಕೆಯಿಂದ ಮಾತ್ರ ದಾಟಲು ಸಾಧ್ಯವಾದ ಸಂಸಾರನದಿಯನ್ನು–ಕ್ಷಮೆಯೆಂಬ ಹುಟ್ಟಿನಿಂದ ಕೂಡಿರುವ, ಸತ್ಯಮಯಿಯಾದ, ಧರ್ಮವೆಂಬ ಸ್ಥಿರಗೊಳಿಸುವ ಹಗ್ಗದಿಂದ ಬಿಗಿಯಲ್ಪಟ್ಟಿರುವ, ತ್ಯಾಗವೆಂಬ ಅನುಕೂಲವಾದ ಗಾಳಿಯಿಂದ ಕೂಡಿರುವ ನೌಕೆಯಿಂದ ದಾಟಬೇಕು.

ತ್ಯಜ ಧರ್ಮಮಧರ್ಮಂ ಚ ತಥಾ ಸತ್ಯಾನೃತೇ ತ್ಯಜ ।
ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತಂ ತ್ಯಜ ॥೪೦॥

ಧರ್ಮವನ್ನೂ ಅಂತೆಯೇ ಅಧರ್ಮವನ್ನೂ ತೊರೆಯುವವನಾಗು. ಸತ್ಯ ಮತ್ತು ಅನೃತಗಳೆರಡನ್ನೂ ತೊರೆ. ಸತ್ಯ ಮತ್ತು ಅನೃತಗಳೆರಡನ್ನೂ ತೊರೆದ ಬಳಿಕ ಯಾವುದರಿಂದ ಅವುಗಳನ್ನು ತೊರೆದೆಯೋ –ಆ ಬುದ್ಧಿಯನ್ನೂ ಪರಿತ್ಯಜಿಸು.

ತ್ಯಜ ಧರ್ಮಮಸಂಕಲ್ಪಾದಧರ್ಮಂ ಚಾಪ್ಯಲಿಪ್ಸಯಾ ।
ಉಭೇ ಸತ್ಯಾನೃತೇ ಬುದ್ಧ್ಯಾ ಬುದ್ಧಿಂ ಪರಮನಿಶ್ಚಯಾತ್ ॥೪೧॥

ಸಂಕಲ್ಪವನ್ನು ತ್ಯಾಗಮಾಡುವುದರ ಮೂಲಕ ಧರ್ಮವನ್ನು ತ್ಯಜಿಸು. ಲಾಭದ ಆಶೆಯನ್ನು ತೊರೆಯುವುದರ ಮೂಲಕವಾಗಿ ಅಧರ್ಮವನ್ನು ತ್ಯಜಿಸು. ಸತ್ಯಾನೃತಗಳೆರಡನ್ನೂ ಬುದ್ಧಿಯಿಂದ ತ್ಯಜಿಸು. ಪರಮತತ್ತ್ವವನ್ನು ಸೇರುವ ನಿಶ್ಚಯದ ಮೂಲಕವಾಗಿ ಬುದ್ಧಿಯನ್ನೂ ತ್ಯಜಿಸು.

ಅಸ್ಥಿಸ್ಥೂಣಂ ಸ್ನಾಯುಯುತಂ ಮಾಂಸಶೋಣಿತಲೇಪನಮ್ ।
ಚರ್ಮಾವನದ್ಧಂ ದುರ್ಗನ್ಧಿಪೂರ್ಣಂ ಮೂತ್ರಪುರೀಷಯೋಃ ॥೪೨॥

ಜರಾಶೋಕಸಮಾವಿಷ್ಟಂ ರೋಗಾಯತನಮಾತುರಮ್ ।
ರಜಸ್ವಲಮನಿತ್ಯಂ ಚ ಭೂತಾವಾಸಮಿಮಂ ತ್ಯಜ ॥೪೩॥

ಮೂಳೆಗಳೆಂಬ ಸ್ತಂಭಗಳಿಂದ ಕೂಡಿರುವ, ನರ-ನಾಡಿಗಳಿಂದ ಯುಕ್ತವಾಗಿರುವ, ಮಾಂಸ-ರಕ್ತಗಳಿಂದ ಲಿಪ್ತವಾಗಿರುವ, ಚರ್ಮದಿಂದ ಹೊದಿಸಲ್ಪಟ್ಟಿರುವ, ದುರ್ಗಂಧಯುಕ್ತವಾದ, ಮೂತ್ರ-ಪುರೀಷಗಳಿಂದ ತುಂಬಿ

ಹೋಗಿರುವ, ಮುಪ್ಪು ಮತ್ತು ದುಃಖಗಳಿಂದ ಕೂಡಿರುವ, ರೋಗಗಳಿಗೆ ಮನೆಯಾಗಿರುವ, ರೋಗಪೀಡಿತವಾಗಿರುವ, ರಜೋಗುಣರೂಪವಾದ ಧೂಳಿನಿಂದ ಮುಚ್ಚಿಹೋಗಿರುವ, ಪಂಚಭೂತಗಳ ಆವಾಸಸ್ಥಾನವಾಗಿರುವ ಈ ಶರೀರವನ್ನು (ಶರೀರದ ಮೇಲಿನ ಅಭಿಮಾನವನ್ನು) ಪರಿತ್ಯಜಿಸು.

ಇದಂ ವಿಶ್ವಂ ಜಗತ್ಸರ್ವಮಜಗಚ್ಚಾಪಿ ಯದ್ಭವೇತ್ ।
ಮಹಾಭೂತಾತ್ಮಕಂ ಸರ್ವಂ ಮಹದ್ಯತ್ಪರಮಾಶ್ರಯಾತ್ ॥೪೪॥

ಇನ್ದ್ರಿಯಾಣಿ ಚ ಪಞ್ಚೈವ ತಮಃ ಸತ್ತ್ವಂ ರಜಸ್ತಥಾ ।
ಇತ್ಯೇಷ ಸಪ್ತದಶಕೋ ರಾಶಿರವ್ಯಕ್ತಸಂಜ್ಞಕಃ ॥೪೫॥

ಚರಾಚರಾತ್ಮಕವಾದ ಈ ಇಡೀ ವಿಶ್ವವೇ ಪಂಚಭೂತಾತ್ಮಕವಾಗಿದೆ. ಆ ಪಂಚಭೂತಗಳೊಡನೆ, ಪರಮಾತ್ಮನನ್ನು ಆಶ್ರಯಿಸುವುದರಿಂದ ಮಹತ್ತು ಎಂದು ಕರೆಯಲ್ಪಡುವ ತತ್ತ್ವ, ಅದರ ಪ್ರಕಾರಗಳಾದ ಮನಸ್ಸು-ಬುದ್ಧಿ-ಅಹಂಕಾರಗಳು, ಐದು ಜ್ಞಾನೇಂದ್ರಿಯಗಳು, ತಮಸ್ಸು-ಸತ್ತ್ವ-ರಜಸ್ಸು ಎಂಬ ಮೂರು ಗುಣಗಳು –ಈ ಹದಿನೇಳರ ಸಮೂಹಕ್ಕೆ ಅವ್ಯಕ್ತವೆಂದು ಹೆಸರು.

ಸರ್ವೈರಿಹೇನ್ದ್ರಿಯಾರ್ಥೈಶ್ಚ ವ್ಯಕ್ತಾವ್ಯಕ್ತೈರ್ಹಿ ಸಂಹಿತಃ ।
ಚತುರ್ವಿಂಶಕ ಇತ್ಯೇಷ ವ್ಯಕ್ತಾವ್ಯಕ್ತಮಯೋ ಗುಣಃ ॥೪೬॥

ಅವ್ಯಕ್ತಗುಣಕ್ಕೆ ಸೇರಿದ ಹದಿನೇಳರೊಡನೆ ವ್ಯಕ್ತಗುಣಕ್ಕೆ ಸೇರಿದ ಶಬ್ದ-ಸ್ಪರ್ಶ-ರೂಪ-ರಸ-ಗಂಧ-ಸಂಕಲ್ಪ-ವಿಕಲ್ಪ ಎಂಬ ಏಳೂ ಕೂಡಿ ವ್ಯಕ್ತಾವ್ಯಕ್ತಗಳಿಗೆ ಸೇರಿದ ಒಟ್ಟು ತತ್ತ್ವಗಳು ಇಪ್ಪತ್ತುನಾಲ್ಕು ಎಂಬ ಗುಣವಾಗುತ್ತದೆ.

ಏತೈಃ ಸರ್ವೈಃ ಸಮಾಯುಕ್ತಃ ಪುಮಾನಿತ್ಯಭಿಧೀಯತೇ ।
ತ್ರಿವರ್ಗಂ ತು ಸುಖಂ ದುಃಖಂ ಜೀವಿತಂ ಮರಣಂ ತಥಾ ।
ಯ ಇದಂ ವೇದ ತತ್ತ್ವೇನ ಸ ವೇದ ಪ್ರಭವಾಪ್ಯಯೌ ॥೪೭॥

ಈ ಇಪ್ಪತ್ತನಾಲ್ಕು ತತ್ತ್ವಗಳ ಗಣಗಳಿಂದ ಯುಕ್ತನಾದವನನ್ನು ಪುರುಷನೆಂದು ಕರೆಯುತ್ತಾರೆ. ಯಾವ ಪುರುಷನು ಧರ್ಮಾರ್ಥ-ಕಾಮ

ಗಳೆಂಬ ತ್ರಿವರ್ಗವನ್ನೂ, ಸುಖ-ದುಃಖಗಳನ್ನೂ ಹುಟ್ಟು-ಸಾವುಗಳ ರಹಸ್ಯವನ್ನೂ ಯಥಾವತ್ತಾಗಿ ತಿಳಿದಿರುವನೋ–ಅವನು ಉತ್ಪತ್ತಿ ಮತ್ತು ಪ್ರಳಯಗಳ ತತ್ತ್ವವನ್ನು ಯಥಾವತ್ತಾಗಿ ತಿಳಿಯುತ್ತಾನೆ.

ಪಾರಮ್ಪರ್ಯೇಣ ಬೋದ್ಧವ್ಯಂ ಜ್ಞಾನಾನಾಂ ಯಚ್ಚ ಕಿಞ್ಚನ ॥೪೮॥
ಇನ್ದ್ರಿಯೈರ್ಗೃಹ್ಯತೇ ಯದ್ಯತ್ತತ್ತದ್ವ್ಯಕ್ತಮಿತಿ ಸ್ಥಿತಿಃ ।
ಅವ್ಯಕ್ತಮಿತಿ ವಿಜ್ಞೇಯಂ ಲಿಙ್ಗಗ್ರಾಹ್ಯಮತೀನ್ದ್ರಿಯಮ್ ॥೪೯॥

ಜ್ಞಾನಗಳ ಸಂಬಂಧವಾಗಿ ಯಾವ ಯಾವ ವಿಷಯಗಳಿವೆಯೋ ಅವೆಲ್ಲವನ್ನೂ ಪರಂಪರೆಯಿಂದ ತಿಳಿದುಕೊಳ್ಳಬೇಕು. ಯಾವ ಯಾವ ಪದಾರ್ಥವನ್ನು ಇಂದ್ರಿಯಗಳಿಂದ ಗ್ರಹಿಸಲು ಸಾಧ್ಯವಾಗುವುದೋ–ಆ ಪದಾರ್ಥಕ್ಕೆ ವ್ಯಕ್ತವೆಂದು ಹೆಸರು. ಇಂದ್ರಿಯಗಳಿಗೆ ಅಗೋಚರವಾಗಿದ್ದು ಅನುಮಾನದ ಅಥವಾ ಶಬ್ದದ ಪ್ರಮಾಣದಿಂದ ಗ್ರಹಿಸಲ್ಪಡುವುದಕ್ಕೆ ಅವ್ಯಕ್ತವೆಂದು ಹೆಸರು.

ಇನ್ದ್ರಿಯೈರ್ನಿಯತೈರ್ದೇಹೀ ಧಾರಾಭಿರಿವ ತರ್ಪ್ಯತೇ ।
ಲೋಕೇ ವಿತತಮಾತ್ಮಾನಂ ಲೋಕಾಂಶ್ಚಾತ್ಮನಿ ಪಶ್ಯತಿ ॥೫೦॥

ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವ ಮನುಷ್ಯನು–ಬಾಯಾರಿದವನು ಜಲಧಾರೆಯಿಂದ ತೃಪ್ತಿಹೊಂದುವಂತೆ–ಸದಾ ತೃಪ್ತನಾಗಿರುತ್ತಾನೆ. ಆತ್ಮಜ್ಞಾನಿಯು ತನ್ನ ಆತ್ಮವೇ ಸಕಲಪ್ರಾಣಿಗಳಲ್ಲಿಯೂ ಇರುವುದನ್ನೂ ಮತ್ತು ಸಕಲಲೋಕಗಳೂ ತನ್ನ ಆತ್ಮದಲ್ಲಿಯೇ ಇರುವುದನ್ನೂ ಕಂಡುಕೊಳ್ಳುತ್ತಾನೆ.

ಪರಾವರದೃಶಃ ಶಕ್ತಿರ್ಜ್ಞಾನಮೂಲಾ ನ ನಶ್ಯತಿ ।
ಪಶ್ಯತಃ ಸರ್ವಭೂತಾನಿ ಸರ್ವಾವಸ್ಥಾಸು ಸರ್ವದಾ ।
ಸರ್ವಭೂತಸ್ಯ ಸಂಯೋಗೋ ನಾಶುಭೇನೋಪಪದ್ಯತೇ ॥೫೧॥

ಪರಮಶ್ರೇಷ್ಠವಾದ ಬ್ರಹ್ಮವಸ್ತುವನ್ನು ಕಂಡುಕೊಂಡಿರುವವನಿಗೆ ಜ್ಞಾನ ಮೂಲವಾದ ಶಕ್ತಿಯು ಎಂದಿಗೂ ನಶಿಸಿಹೋಗುವುದಿಲ್ಲ. ಸರ್ವಾವಸ್ಥೆ ಗಳಲ್ಲಿಯೂ ಯಾವಾಗಲೂ ಎಲ್ಲ ಪ್ರಾಣಿಗಳನ್ನೂ ತನ್ನ ಆತ್ಮನಲ್ಲಿಯೇ

ಕಾಣುತ್ತಿರುವವನಿಗೆ ಪ್ರಾಣಿಗಳ ಸಹವಾಸದಿಂದ ಯಾವ ವಿಧವಾದ ಅಶುಭವೂ ಉಂಟಾಗುವುದಿಲ್ಲ. (ಪಾಪವೂ ಸಂಘಟಿಸುವುದಿಲ್ಲ.)

ಜ್ಞಾನೇನ ವಿವಿಧಾನ್ಕ್ಲೇಶಾನತಿವೃತ್ತಸ್ಯ ಮೋಹಜಾನ್ ।
ಲೋಕೇ ಬುದ್ಧಿಪ್ರಕಾಶೇನ ಲೋಕಮಾರ್ಗೋ ನ ರಿಷ್ಯತೇ ॥೩೨॥

ಜ್ಞಾನಬಲದಿಂದ ಮೋಹಜನಿತವಾದ ವಿಧ-ವಿಧವಾದ ಕ್ಲೇಶಗಳನ್ನೂ ದಾಟಿರುವ ಜ್ಞಾನಿಗೆ ಜಗತ್ತಿನಲ್ಲಿ ಬುದ್ಧಿಪ್ರಕಾಶದಿಂದ (ಬುದ್ಧಿಚಾತುರ್ಯ ದಿಂದ) ಮಾಡಬೇಕಾದ ಲೋಕವ್ಯವಹಾರಕ್ಕೂ ತಡೆಯುಂಟಾಗುವುದಿಲ್ಲ. (ಜ್ಞಾನಿಯು ಲೋಕವ್ಯವಹಾರಗಳನ್ನು ಚೆನ್ನಾಗಿಯೇ ನಿರ್ವಹಿಸಬಲ್ಲನು.)

ಅನಾದಿನಿಧನಂ ಜನ್ತುಮಾತ್ಮನಿ ಸ್ಥಿತಮವ್ಯಯಮ್ ।
ಅಕರ್ತಾರಮಮೂರ್ತಂ ಚ ಭಗವಾನಾಹ ತೀರ್ಥವಿತ್ ॥೩೩॥

ಪ್ರಾಣಿಗಳ ಶರೀರದಲ್ಲಿರುವ ಆತ್ಮನು ಆದಿ-ಮಧ್ಯಾಂತರಹಿತನೆಂದೂ, ಅವಿನಾಶಿಯೆಂದೂ, ಕರ್ತೃತ್ವವಿಲ್ಲದವನೆಂದೂ, ನಿರಾಕಾರನೆಂದೂ– ಮೋಕ್ಷೋಪಾಯವನ್ನು ತಿಳಿದಿರುವ ಭಗವಂತನು ಹೇಳಿದ್ದಾನೆ.

ಯೋ ಜನ್ತುಃ ಸ್ವಕೃತೈಸ್ತೈಸ್ತೈಃ ಕರ್ಮಭಿರ್ನಿತ್ಯದುಃಖಿತಃ ।
ಸ ದುಃಖಪ್ರತಿಘಾತಾರ್ಥಂ ಹನ್ತಿ ಜನ್ತೂನನೇಕಧಾ ॥೩೪॥

ಯಾವ ಪ್ರಾಣಿಯು (ಮನುಷ್ಯನು) ಜನ್ಮ-ಜನ್ಮಾಂತರಗಳಲ್ಲಿ ತಾನೇ ಮಾಡಿದ ಕರ್ಮಗಳಿಂದ ಸದಾ ದುಃಖಿತನಾಗಿರುವನೋ –ಆ ಮನುಷ್ಯನೇ ದುಃಖನಿವಾರಣೆಗಾಗಿ ಅನೇಕಪ್ರಕಾರವಾಗಿ ಪ್ರಾಣಿಗಳನ್ನು ಸಂಹಾರಮಾಡು ತ್ತಾನೆ. (ಅವುಗಳಿಗೆ ದುಃಖವನ್ನುಂಟುಮಾಡುತ್ತಾನೆ.)

ತತಃ ಕರ್ಮ ಸಮಾದತ್ತೇ ಪುನರನ್ಯಂ ನವಂ ಬಹು ।
ತಪ್ಯತೇಽಥ ಪುನಸ್ತೇನ ಭುಕ್ತ್ವಾಪಥ್ಯಮಿವಾತುರಃ ॥೩೫॥

ಅನಂತರ ಆ ಮನುಷ್ಯನು ಮತ್ತೆ ಹೊಸ-ಹೊಸ ಕರ್ಮಗಳನ್ನು ಹೆಚ್ಚು-ಹೆಚ್ಚಾಗಿ ಮಾಡುತ್ತಾ–ರೋಗಿಯಾದವನು ಅಪಥ್ಯಪದಾರ್ಥವನ್ನು ತಿಂದು ದುಃಖಪಡುವಂತೆ –ತಾನು ಮಾಡಿದ ಆ ಕರ್ಮಗಳಿಗಾಗಿ ಪುನಃ ಪರಿತಪಿಸುತ್ತಾನೆ.

ಅಜಸ್ರಮೇವ ಮೋಹಾನ್ಧೋ ದುಃಖೇಷು ಸುಖಸಂಜ್ಞಿತಃ ।
ಬಧ್ಯತೇ ಮಥ್ಯತೇ ಚೈವ ಕರ್ಮಭಿರ್ಮನ್ಥವತ್ಸದಾ ॥೫೬॥

ಮೋಹದಿಂದ ಅಂಧನಾಗಿರುವ (ವಿವೇಕಶೂನ್ಯನಾಗಿರುವ) ಮನುಷ್ಯನು ದುಃಖಕರವಾದ ಭೋಗಗಳಲ್ಲಿ ಸುಖವಾಗಿರುವೆನೆಂಬ ಪ್ರಜ್ಞೆಯನ್ನೇ ಹೊಂದಿರುತ್ತಾನೆ. ತಾನೇ ಮಾಡುವ ಕರ್ಮಗಳಿಂದ ಬಂಧಿಸಲ್ಪಡುತ್ತಾನೆ. ಮತ್ತು ಕಡೆಗೋಲಿನಂತೆ ಸದಾ ಮಥಿಸಲ್ಪಡುತ್ತಾನೆ.

ತತೋ ನಿಬದ್ಧಃ ಸ್ವಾಂ ಯೋನಿಂ ಕರ್ಮಣಾಮುದಯಾದಿಹ ।
ಪರಿಭ್ರಮತಿ ಸಂಸಾರೇ ಚಕ್ರವದ್ಬಹುವೇದನಃ ॥೫೭॥

ಪುನಃ ಪುನಃ ಪ್ರಾರಬ್ಧಕರ್ಮಗಳ ಉತ್ಪತ್ತಿಯಿಂದಾಗಿ ಅದರಿಂದ ಬಂಧಿಸಲ್ಪಟ್ಟ ಮನುಷ್ಯನು –ಕರ್ಮಾನುಸಾರವಾಗಿ ಈ ಪ್ರಪಂಚದಲ್ಲಿ ಯಾವುದೋ ಜನ್ಮವನ್ನು ಪಡೆದು ಸಂಸಾರದಲ್ಲಿ ಅನೇಕವಿಧವಾದ ವೇದನೆಗಳನ್ನು ಅನುಭವಿಸುತ್ತಾ ಚಕ್ರದಂತೆ ಸುತ್ತುತ್ತಿರುತ್ತಾನೆ.

ಸ ತ್ವಂ ನಿವೃತ್ತಬನ್ಧಸ್ತು ನಿವೃತ್ತಶ್ಚಾಪಿ ಕರ್ಮತಃ ।
ಸರ್ವವಿತ್ಸರ್ವಜಿತ್ಸಿದ್ಧೋ ಭವ ಭಾವವಿವರ್ಜಿತಃ ॥೫೮॥

ಆದುದರಿಂದ ನೀನು ಕರ್ಮಗಳಿಂದ ನಿವೃತ್ತನಾಗಿ, ಎಲ್ಲ ಪ್ರಕಾರದ ಬಂಧನಗಳಿಂದಲೂ ವಿಮುಕ್ತನಾಗಿ, ಸರ್ವಜ್ಞನಾಗಿ, ಸರ್ವವನ್ನೂ ಜಯಿಸಿದವನಾಗಿ, ಸಾಂಸಾರಿಕಭಾವನೆಯಿಂದ ರಹಿತನಾಗಿ ಸಿದ್ಧಿಯನ್ನು ಪಡೆಯುವವನಾಗು.

ಸಂಯಮೇನ ನವಂ ಬನ್ಧಂ ನಿವರ್ತ್ಯ ತಪಸೋ ಬಲಾತ್ ।
ಸಮ್ಪ್ರಾಪ್ತಾ ಬಹವಃ ಸಿದ್ಧಿಮಪ್ಯಬಾಧಾಂ ಸುಖೋದಯಾಮ್ ॥೫೯॥

ಅನೇಕಜ್ಞಾನಿಗಳು ಮನಸ್ಸಂಯಮದಿಂದಲೂ ತಪಸ್ಸಿನ ಬಲದಿಂದಲೂ ಹೊಸ-ಹೊಸ ಬಂಧನಗಳೆಲ್ಲವನ್ನೂ ಕತ್ತರಿಸಿ ನಿರಾತಂಕವಾದ ಸುಖವನ್ನು ಕೊಡುವ ಸಿದ್ಧಿಯನ್ನು ಪಡೆದುಕೊಂಡಿರುತ್ತಾರೆ.”

ಒ೨೯ನೆಯ ಅಧ್ಯಾಯವು ಮುಗಿಯಿತು.

೩೩೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾರದರಿಂದ ಶುಕನಿಗೆ ಸದಾಚಾರ–ಅಧ್ಯಾತ್ಮವಿಷಯಗಳು ಉಪದೇಶ

ಯುಧಿಷ್ಠಿರ! ನಾರದರು ಮುಂದುವರಿದು ಹೇಳುತ್ತಾರೆ :

ಅಶೋಕಂ ಶೋಕನಾಶಾರ್ಥಂ ಶಾಸ್ತ್ರಂ ಶಾನ್ತಿಕರಂ ಶಿವಮ್ ।
ನಿಶಮ್ಯ ಲಭತೇ ಬುದ್ಧಿಂ ತಾಂ ಲಬ್ಧ್ವಾ ಸುಖಮೇಧತೇ ॥೧॥

“ಶುಕದೇವ! ಶೋಕರಹಿತವೂ, ಶಾಂತಿಯನ್ನುಂಟುಮಾಡುವುದೂ, ಕಲ್ಯಾಣಕರವೂ ಆಗಿರುವ ಶಾಸ್ತ್ರವನ್ನು ಶೋಕದ ನಾಶಕ್ಕೋಸ್ಕರ ಯಾವನು ಏಕಾಗ್ರಚಿತ್ತನಾಗಿ ಕೇಳುವನೋ–ಅವನು ಉತ್ತಮವಾದ ಬುದ್ಧಿಯನ್ನು ಹೊಂದಿ ಸುಖಿಯಾಗುತ್ತಾನೆ.

ಶೋಕಸ್ಥಾನಸಹಸ್ರಾಣಿ ಭಯಸ್ಥಾನಶತಾನಿ ಚ ।
ದಿವಸೇ ದಿವಸೇ ಮೂಢಮಾವಿಶನ್ತಿ ನ ಪಣ್ಡಿತಮ್ ॥೨॥

ಸಾವಿರಾರು ಶೋಕಪ್ರಸಂಗಗಳೂ, ನೂರಾರು ಭಯಪ್ರಸಂಗಗಳೂ ಮೂಢನಾದವನನ್ನು ಅನುದಿನವೂ ಆಕ್ರಮಿಸುತ್ತಲೇ ಇರುತ್ತವೆ. ಆದರೆ ಪಂಡಿತನಾದವನನ್ನು ಹಾಗೆ ಆಕ್ರಮಿಸುವುದಿಲ್ಲ. (ಶೋಕಪ್ರಸಂಗಗಳೂ-ಭಯಪ್ರಸಂಗಗಳೂ ಪಂಡಿತ-ಪಾಮರರಿಗೆ ಸಮಾನವಾಗಿಯೇ ಎದುರಾದರೂ ಪಂಡಿತನಾದವನು ಅವುಗಳನ್ನು ವಿವೇಕದಿಂದ ನಿರ್ಲಕ್ಷಿಸುತ್ತಾನೆ. ಪಾಮರನಾದವನು ವಿಮೋಹಿತನಾಗುತ್ತಾನೆ.)

ತಸ್ಮಾದನಿಷ್ಟನಾಶಾರ್ಥಮಿತಿಹಾಸಂ ನಿಬೋಧ ಮೇ ।
ತಿಷ್ಠತೇ ಚೇದ್ವಶೇ ಬುದ್ಧಿರ್ಲಭತೇ ಶೋಕನಾಶನಮ್ ॥೩॥

ಆದುದರಿಂದ ಅನಿಷ್ಟವನ್ನು ನಿವಾರಿಸಿಕೊಳ್ಳಲು ನಾನು ಹೇಳಲಿರುವ ಉಪದೇಶವನ್ನು ಕೇಳು. ಬುದ್ಧಿಯು ವಶದಲ್ಲಿದ್ದುದೇ ಆದರೆ ಶೋಕವು ವಿನಾಶವಾಗುತ್ತದೆ.

ಅನಿಷ್ಟಸಮ್ಪ್ರಯೋಗಾಚ್ಚ ವಿಪ್ರಯೋಗಾತ್ಪ್ರಿಯಸ್ಯ ಚ ।
ಮನುಷ್ಯಾ ಮಾನಸೈರ್ದುಃಖೈರ್ಯುಜ್ಯನ್ತೇ ಸ್ವಲ್ಪಬುದ್ಧಯಃ ॥೪॥

ಅಲ್ಪಬುದ್ಧಿಯ ಮನುಷ್ಯರು ಅಪ್ರಿಯವಸ್ತುಗಳ ಪ್ರಾಪ್ತಿಯಿಂದಲೂ ಪ್ರಿಯವಸ್ತುಗಳ ವಿಯೋಗದಿಂದಲೂ ಮಾನಸಿಕವಾದ ದುಃಖಗಳನ್ನು ಹೊಂದುತ್ತಾರೆ.

ದ್ರವ್ಯೇಷು ಸಮತೀತೇಷು ಯೇ ಗುಣಾಸ್ತಾನ್ನ ಚಿನ್ತಯೇತ್ ।
ನ ತಾನಾದ್ರಿಯಮಾಣಸ್ಯ ಸ್ನೇಹಬನ್ಧಃ ಪ್ರಮುಚ್ಯತೇ ॥೫॥

ವಸ್ತುಗಳು ಕಳೆದುಹೋದನಂತರ ಅವುಗಳಲ್ಲಿದ್ದ ಗುಣಗಳನ್ನು ಕುರಿತು ಚಿಂತಿಸುತ್ತಲೇ ಇರಬಾರದು. ಆದರಪೂರ್ವಕವಾಗಿ ಅವುಗಳನ್ನೇ ಚಿಂತಿಸುತ್ತಿದ್ದರೆ ಸ್ನೇಹಬಂಧನವು ಬಿಟ್ಟುಹೋಗುವುದಿಲ್ಲ. (ವಸ್ತುಗಳಲ್ಲಿ ನಿರಾಸಕ್ತಿಯುಂಟಾಗುವುದಿಲ್ಲ.)

ದೋಷದರ್ಶೀ ಭವೇತ್ತತ್ರ ಯತ್ರ ರಾಗಃ ಪ್ರವರ್ತತೇ ।
ಅನಿಷ್ಟವರ್ಧಿತಂ ಪಶ್ಯೇತ್ತಥಾ ಕ್ಷಿಪ್ರಂ ವಿರಜ್ಯತೇ ॥೬॥

ಯಾವ ಪದಾರ್ಥದಲ್ಲಿ ಮನಸ್ಸು ಹೆಚ್ಚು ಆಕರ್ಷಿತವಾಗುವುದೋ ಆ ಪದಾರ್ಥದಲ್ಲಿ ಮನುಷ್ಯನು ದೋಷವಿರುವುದೆಂಬುದನ್ನು ಕಂಡುಕೊಳ್ಳಬೇಕು. ಮನಸ್ಸು ಹೋದಕಡೆಗೇ ತಾನೂ ಹೋಗುತ್ತಿದ್ದರೆ ಅನಿಷ್ಟವು ಹೆಚ್ಚುವುದೆಂಬುದನ್ನು ಮನಗಾಣಬೇಕು. ಹಾಗೆ ನೋಡುತ್ತಿದ್ದರೆ ಅನುರಾಗವಿರುವ ವಸ್ತುಗಳಲ್ಲಿ ಕ್ಷಿಪ್ರವಾಗಿ ವೈರಾಗ್ಯವುಂಟಾಗುತ್ತದೆ.

ನಾರ್ಥೋ ನ ಧರ್ಮೋ ನ ಯಶೋ ಯೋಽತೀತಮನುಶೋಚತಿ ।
ಅಪ್ಯಭಾವೇನ ಯುಜ್ಯೇತ ತಚ್ಚಾಸ್ಯ ನ ನಿವರ್ತತೇ ॥೭॥

ಯಾವನು ಕಳೆದುಹೋದುದನ್ನೇ ಕುರಿತು ಶೋಕಪಡುತ್ತಿರುವನೋ–ಅವನಿಗೆ ಅರ್ಥವೂ ಸಿಕ್ಕುವುದಿಲ್ಲ ; ಧರ್ಮವೂ ಲಭಿಸುವುದಿಲ್ಲ ; ಯಶಸ್ಸೂ ಲಭಿಸುವುದಿಲ್ಲ, ಕಳೆದುಹೋದ ವಸ್ತುವನ್ನೇ ನೆನೆದು ಶೋಕಪಡುತ್ತಿದ್ದರೆ ಆ ವಸ್ತುವಿನ ಅಭಾವದ ಅನುಭವವನ್ನು ಅವನು ಪಡೆದುಕೊಳ್ಳುವನೇ ಹೊರತು ಆ ವಸ್ತುವನ್ನು ಪುನಃ ಪಡೆದುಕೊಳ್ಳಲಾರನು. (ಎಷ್ಟೇ ಶೋಕಿಸಿದರೂ ಕಳೆದುಹೋದ ವಸ್ತುವು ಸಿಕ್ಕಲಾರದು.)

ಗುಣೈರ್ಭೂತಾನಿ ಯುಜ್ಯನ್ತೇ ವಿಯುಜ್ಯನ್ತೇ ತಥೈವ ಚ ।
ಸರ್ವಾಣಿ ನೈತದೇಕಸ್ಯ ಶೋಕಸ್ಥಾನಂ ಹಿ ವಿದ್ಯತೇ ॥೮॥

ಎಲ್ಲ ಪ್ರಾಣಿಗಳಿಗೂ ಉತ್ತಮವಸ್ತುಗಳ ಅಥವಾ ಪ್ರಿಯವಸ್ತುಗಳ ಸಂಯೋಗ-ವಿಯೋಗಗಳು ಆಗುತ್ತಲೇ ಇರುತ್ತವೆ. ಒಬ್ಬನಿಗೆ ಯಾವಾಗಲೂ ಶೋಕಪ್ರಸಂಗವಾಗಲೀ–ಮತ್ತೊಬ್ಬನಿಗೆ ಯಾವಾಗಲೂ ಸಂತೋಷ ಪ್ರಸಂಗವಾಗಲೀ ಇರುವುದಿಲ್ಲ. ಪ್ರತಿಯೊಬ್ಬನಿಗೂ ಸುಖ-ದುಃಖ-ಶೋಕ ಪ್ರಸಂಗಗಳು ಅನುಕ್ರಮವಾಗಿ ಬಂದು ಹೋಗುತ್ತಲೇ ಇರುತ್ತವೆ.

ಮೃತಂ ವಾ ಯದಿ ವಾ ನಷ್ಟಂ ಯೋಽತೀತಮನುಶೋಚತಿ ।
ದುಃಖೇನ ಲಭತೇ ದುಃಖಂ ದ್ವಾವನರ್ಥೌ ಪ್ರಪದ್ಯತೇ ॥೯॥

ಯಾವ ಮನುಷ್ಯನು, ಹಿಂದೆ ಮೃತನಾದ ಬಂಧುವನ್ನೋ ಅಥವಾ ಕಳೆದುಹೋದ ವಸ್ತುವನ್ನೋ ಕುರಿತು ದುಃಖಪಡುವನೋ–ಅವನಿಗೆ ಆ ದುಃಖದಿಂದ (ಕಾಲ-ಕಾಲಕ್ಕೆ ಮಾಡಬೇಕಾದ ಕರ್ತವ್ಯಗಳನ್ನು ಮಾಡಲು ಸಾಧ್ಯವಾಗದೇ) ಮತ್ತೊಂದು ದುಃಖವು ಪ್ರಾಪ್ತವಾಗಿ ಅವನು ಎರಡು ವಿಧವಾದ ಅನರ್ಥಗಳಿಗೆ ಗುರಿಯಾಗುತ್ತಾನೆ. ದುಃಖಪಡುತ್ತಿದ್ದರೆ ಮತ್ತಷ್ಟು ದುಃಖವಾಗುವುದೇ ಹೊರತು ಮೃತನಾದವನು ಹಿಂದಕ್ಕೆ ಬರದೇ ಇರುವುದರಿಂದ ಮತ್ತು ಕಳೆದುಹೋದ ಪದಾರ್ಥವು ಸಿಕ್ಕದೇ ಇರುವುದರಿಂದ ದುಃಖದ ಪರಿಹಾರವಾಗುವುದಿಲ್ಲ. ಮಾಡಬೇಕಾದ ಕರ್ತವ್ಯಗಳಲ್ಲಿಯೂ ಲೋಪವುಂಟಾಗುತ್ತದೆ.

ನಾಶ್ರು ಕುರ್ವನ್ತಿ ಯೇ ಬುದ್ಧ್ಯಾ ದೃಷ್ಟ್ವಾ ಲೋಕೇಷು ಸಂತತಿಮ್ ।
ಸಮ್ಯಕ್ಪ್ರಪಶ್ಯತಃ ಸರ್ವಂ ನಾಶ್ರುಕರ್ಮೋಪಪದ್ಯತೇ ॥೧೦॥

ಯಾರು ಬುದ್ಧಿಪೂರ್ವಕವಾಗಿ ಲೋಕಗಳಲ್ಲಿ ಜನಸಮೂಹವನ್ನು (ಜನಸಮೂಹದಲ್ಲಾಗುತ್ತಿರುವ ಮರಣ-ನಷ್ಟಗಳನ್ನು) ನೋಡುವರೋ ಅವರು ಅದೇ ರೀತಿಯಲ್ಲಿ ತಮಗೂ ಆಗುವ ಸಂತತಿಯ ಮರಣ-ನಷ್ಟಗಳಿಗಾಗಿ ಕಣ್ಣೀರು ಸುರಿಸುವುದಿಲ್ಲ. ಎಲ್ಲವನ್ನೂ ಚೆನ್ನಾಗಿ ವಿಮರ್ಶಿಸುವವನು ಬಂಧುಗಳ ಮರಣಕ್ಕಾಗಲೀ ಪದಾರ್ಥಗಳ ನಷ್ಟಕ್ಕಾಗಲೀ ಕಣ್ಣೀರು ಸುರಿಸಬೇಕಾಗುವುದಿಲ್ಲ.

ದುಃಖೋಪಘಾತೇ ಶಾರೀರೇ ಮಾನಸೇ ಚಾಪ್ಯುಪಸ್ಥಿತೇ ।
ಯಸ್ಮಿನ್ನ ಶಕ್ಯತೇ ಕರ್ತುಂ ಯತ್ನಸ್ತನ್ನಾನುಚಿನ್ತಯೇತ್ ॥೧೧॥

ಯಾವುದಾದರೂ ಶಾರೀರಕವಾದ ಅಥವಾ ಮಾನಸಿಕವಾದ ದುಃಖವು ಪ್ರಾಪ್ತವಾದಾಗ –ಆ ದುಃಖವನ್ನು ಯಾವುದೇ ಪ್ರಯತ್ನದಿಂದಲೂ ದೂರೀ ಕರಿಸಲು ಸಾಧ್ಯವೇ ಇಲ್ಲದಿದ್ದಾಗ –ಪ್ರಯತ್ನಗಳೆಲ್ಲವೂ ನಿಷ್ಫಲವಾದಾಗ ಅದರ ವಿಷಯವಾಗಿ ಚಿಂತಿಸಬಾರದು.

ಭೈಷಜ್ಯಮೇತದ್ದುಃಖಸ್ಯ ಯದೇತನ್ನಾನುಚಿನ್ತಯೇತ್ ।
ಚಿನ್ತ್ಯಮಾನಂ ಹಿ ನ ವ್ಯೇತಿ ಭೂಯಶ್ಚಾಪಿ ಪ್ರವರ್ಧತೇ ॥೧೨॥

ದುಃಖವು ಸಂಭವಿಸಿದಾಗ ಅದರ ವಿಷಯವಾಗಿ ಚಿಂತಿಸದೆಯೇ ಇರುವುದೇ ದುಃಖನಿವಾರಣೆಗೆ ದಿವ್ಯೌಷಧವಾಗಿದೆ. ದುಃಖವು ಸಂಭವಿಸಿ ದಾಗ ಅದರ ವಿಷಯವಾಗಿಯೇ ಚಿಂತಿಸುತ್ತಿದ್ದರೆ ಅಂತಹವನನ್ನು ದುಃಖವು ಬಿಟ್ಟುಹೋಗುವುದಿಲ್ಲ. ಚಿಂತಿಸುತ್ತಿದ್ದಂತೆಲ್ಲಾ ದುಃಖವು ಹೆಚ್ಚುತ್ತಲೇ ಇರುತ್ತದೆ.

ಪ್ರಜ್ಞಯಾ ಮಾನಸಂ ದುಃಖಂ ಹನ್ಯಾಚ್ಛಾರೀರಮೌಷಧೈಃ ।
ಏತದ್ವಿಜ್ಞಾನಸಾಮರ್ಥ್ಯಂ ನ ಬಾಲೈಃ ಸಮತಾಮಿಯಾತ್ ॥೧೩॥

ಮಾನಸಿಕವಾದ ದುಃಖವನ್ನು ಪ್ರಜ್ಞೆಯಿಂದ ವಿಚಾರಮಾಡಿ ನಿವಾರಿಸಿ ಕೊಳ್ಳಬೇಕು. ಶಾರೀರಕವಾದ ದುಃಖವನ್ನು ಔಷಧಗಳಿಂದ ನಿವಾರಣೆ ಮಾಡಿಕೊಳ್ಳಬೇಕು. ಜ್ಞಾನದ ಸಾಮರ್ಥ್ಯದಿಂದ ಇದು ಸಾಧ್ಯವಾಗುತ್ತದೆ. ಆದುದರಿಂದ ದುಃಖವು ಸಂಭವಿಸಿದಾಗ ಮಗುವಿನಂತೆ ರೋದನ ಮಾಡಬಾರದು.

ಅನಿತ್ಯಂ ಯೌವನಂ ರೂಪಂ ಜೀವಿತಂ ದ್ರವ್ಯಸಂಚಯಃ ।
ಆರೋಗ್ಯಂ ಪ್ರಿಯಸಂವಾಸೋ ಗೃಧ್ಯೇತ್ತತ್ರ ನ ಪಣ್ಡಿತಃ ॥೧೪॥

ರೂಪ, ಯೌವನ, ಜೀವನ, ಧನಸಂಗ್ರಹ, ಆರೋಗ್ಯ, ಪ್ರಿಯಜನರ ಸಹವಾಸ–ಇವೆಲ್ಲವೂ ಅನಿತ್ಯವಾದುವುಗಳು. ಆದುದರಿಂದ ವಿದ್ವಾಂಸ ನಾದವನು ಅವುಗಳಲ್ಲಿ ಆಸಕ್ತನಾಗಬಾರದು.

ನ ಜಾನಪದಿಕಂ ದುಃಖಮೇಕಃ ಶೋಚಿತುಮರ್ಹತಿ ।
ಅಶೋಚನ್ಪ್ರತಿಕುರ್ವೀತ ಯದಿ ಪಶ್ಯೇದುಪಕ್ರಮಮ್ ॥೧೫॥

ದೇಶಕ್ಕೆ ಸಂಬಂಧಿಸಿದಂತೆ ದುಃಖವು ಪ್ರಾಪ್ತವಾದಾಗ (ಶತ್ರುಗಳು

ಸ್ವದೇಶದ ಮೇಲೆ ದಾಳಿ ಮಾಡಲು ಬಂದಾಗ, ಕ್ಷಾಮ-ಡಾಮರಾದಿಗಳು ಪ್ರಾಪ್ತವಾದಾಗ) ಒಬ್ಬನೇ ಕುಳಿತು ಶೋಕಿಸುವುದು ಉಚಿತವಲ್ಲ. ದೇಶಕ್ಕೊದಗಿದ ವಿಪತ್ತಿನಿಂದ ಪಾರಾಗಲು ಯಾವುದಾದರೂ ಉಪಾಯವು ಕಂಡುಬಂದರೆ ಅಥವಾ ಯಾರಾದರೂ ಸಾಮೂಹಿಕವಾಗಿ ಪ್ರಯತ್ನಿಸು ತ್ತಿದ್ದರೆ –ತಾನು ಕೂಡ ಶೋಕವನ್ನು ಬದಿಗೊತ್ತಿ ದೇಶಕ್ಕೊದಗಿರುವ ಸಂಕಟವನ್ನು ಪರಿಹರಿಸಲು ಮುನ್ನುಗ್ಗಿ ಹೋಗಬೇಕು.

ಸುಖಾದ್ಬಹುತರಂ ದುಃಖಂ ಜೀವಿತೇ ನಾತ್ರ ಸಂಶಯಃ ।
ಸ್ನಿಗ್ಧತ್ವಂ ಚೇನ್ದ್ರಿಯಾರ್ಥೇಷು ಮೋಹಾನ್ಮರಣಮಪ್ರಿಯಮ್ ॥೧೬॥

ಜೀವನದಲ್ಲಿ ಸುಖಕ್ಕಿಂತಲೂ ದುಃಖವೇ ಅಧಿಕವಾಗಿರುವುದೆಂಬು ದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಸಾಮಾನ್ಯವಾಗಿ ಎಲ್ಲರಿಗೂ ಮೋಹಪರವಶತೆಯಿಂದ ಇಂದ್ರಿಯವಿಷಯಗಳಲ್ಲಿ ಅನುರಾಗವುಂಟಾಗು ತ್ತದೆ. ಮರಣವು ಅಪ್ರಿಯವಾಗುತ್ತದೆ.

ಪರಿತ್ಯಜತಿ ಯೋ ದುಃಖಂ ಸುಖಂ ವಾಪ್ಯುಭಯಂ ನರಃ ।
ಅಭ್ಯೇತಿ ಬ್ರಹ್ಮ ಸೋಽತ್ಯನ್ತಂ ನ ತಂ ಶೋಚನ್ತಿ ಪಣ್ಡಿತಾಃ ॥೧೭॥

ಯಾವ ಮನುಷ್ಯನು ದುಃಖವನ್ನು ತ್ಯಜಿಸುವನೋ (ದುಃಖಬಂದಾಗ ಚಿಂತಾಪರನಾಗುವುದಿಲ್ಲವೋ), ಸುಖವನ್ನು ತ್ಯಜಿಸುವನೋ (ವಿಷಯಾನು ಭವಗಳಲ್ಲಿ ಅನುರಾಗಿಯಾಗಿರುವುದಿಲ್ಲವೋ) ಅಥವಾ ಸುಖ-ದುಃಖಗಳೆರ ಡನ್ನೂ ತ್ಯಜಿಸುವನೋ –ಅಂತಹವನು ಅಕ್ಷಯವಾದ ಬ್ರಹ್ಮಪದಕ್ಕೆ ಹೋಗುತ್ತಾನೆ. ಪಂಡಿತರು ಅವನಿಗಾಗಿ ಶೋಕಪಡುವುದಿಲ್ಲ.

ತ್ಯಜ್ಯನ್ತೇ ದುಃಖಮರ್ಥಾ ಹಿ ಪಾಲನೇ ನ ಚ ತೇ ಸುಖಾಃ ।
ದುಃಖೇನ ಚಾಧಿಗಮ್ಯನ್ತೇ ನಾಶಮೇಷಾಂ ನ ಚಿನ್ತಯೇತ್ ॥೧೮॥

ಸಂಪಾದಿಸಿದ ಹಣವನ್ನು ವೆಚ್ಚಮಾಡುವಾಗ ಬಹಳ ದುಃಖವಾಗುತ್ತದೆ. ಸಂಗ್ರಹಿಸಿದ ಧನವನ್ನು ಕಾಪಾಡುವುದೂ ಕಷ್ಟವೇ. ಧನವನ್ನು ಸಂಗ್ರಹಿಸಬೇಕಾದರೂ ಬಹಳ ಕಷ್ಟವೇ ಆಗುತ್ತದೆ. ಎಲ್ಲ ಅವಸ್ಥೆಗಳಲ್ಲಿಯೂ ದುಃಖದಾಯಕಗಳಾದ ಅಂತಹ ಐಶ್ವರ್ಯಗಳು ನಷ್ಟವಾಗಿಹೋದಾಗ ಚಿಂತಿಸಬಾರದು.

ಅನ್ಯಾಮನ್ಯಾಂ ಧನಾವಸ್ಥಾಂ ಪ್ರಾಪ್ಯ ವೈಶೇಷಿಕೀಂ ನರಾಃ ।
ಅತೃಪ್ತಾ ಯಾನ್ತಿ ವಿಧ್ವಂಸಂ ಸನ್ತೋಷಂ ಯಾನ್ತಿ ಪಣ್ಡಿತಾಃ ॥೧೯॥

ಮನುಷ್ಯರು ಯಾವಾಗಲೂ ಧನಸಂಚಯವನ್ನು ಮಾಡುತ್ತಾ ಮೊದಲಿಗಿಂತಲೂ ಹೆಚ್ಚಿನ ಧನಾಢ್ಯತೆಯನ್ನು ಗಳಿಸಿಕೊಳ್ಳುತ್ತಿದ್ದರೂ (ಅನುಕ್ರಮವಾಗಿ ಶತಪತಿ, ಸಹಸ್ರಪತಿ, ಲಕ್ಷಪತಿ, ಕೋಟಿಪತಿಗಳಾಗು ತ್ತಿದ್ದರೂ) ತೃಪ್ತರಾಗುವುದೇ ಇಲ್ಲ. ಅಸಂತುಷ್ಟರಾಗಿಯೇ ಅವರು ಸತ್ತು ಹೋಗುತ್ತಾರೆ. ಆದರೆ ಪಂಡಿತರಾದವರು ಯಾವಾಗಲೂ ಸಂತುಷ್ಟ ರಾಗಿಯೇ ಇರುತ್ತಾರೆ.

ಸರ್ವೇ ಕ್ಷಯಾನ್ತಾ ನಿಚಯಾಃ ಪತನಾನ್ತಾಃ ಸಮುಚ್ಛ್ರಯಾಃ ।
ಸಂಯೋಗಾ ವಿಪ್ರಯೋಗಾನ್ತಾ ಮರಣಾನ್ತಂ ಹಿ ಜೀವಿತಮ್ ॥೨೦॥

ಸಂಪಾದಿಸಿದ ಐಶ್ವರ್ಯಗಳು ಕ್ಷಯದಲ್ಲಿಯೇ ಪರ್ಯವಸಾನವನ್ನು ಹೊಂದುತ್ತವೆ. (ಸಂಗ್ರಹಿಸಿದ ಐಶ್ವರ್ಯವು ಯಾರಲ್ಲಿಯೂ ಶಾಶ್ವತವಾಗಿ ಉಳಿಯುವುದಿಲ್ಲ. ಸಂಗ್ರಹ ಎಂಬುದರ ಜೊತೆಯಲ್ಲಿಯೇ ವ್ಯಯವೆಂಬುದು ಇದ್ದೇ ಇರುತ್ತದೆ. ಸಂಗ್ರಹವು ಒಂದು ಕಾಲದಲ್ಲಾದರೆ ವ್ಯಯವು ಮತ್ತೊಂದು ಕಾಲದಲ್ಲಾಗುತ್ತದೆ.) ಉಚ್ಛ್ರಾಯಸ್ಥಿತಿಗೆ ಪತನವೇ ಅಂತಿಮ ಸ್ಥಾನ. (ಮನುಷ್ಯನಿಗೆ ಉಚ್ಛ್ರಾಯಸ್ಥಿತಿಯಲ್ಲಿಯೇ ಶಾಶ್ವತವಾಗಿ ಮೆರೆಯಲು ಸಾಧ್ಯವಾಗುವುದಿಲ್ಲ. ಮೇಲಕ್ಕೇರಿದವನು ಕೆಳಕ್ಕೆ ಇಳಿಯಲೇ ಬೇಕು. ಇದು ಪ್ರಕೃತಿಯ ನಿಯಮ. ಇಂದು ದೊಡ್ಡ ಅಧಿಕಾರದಲ್ಲಿದ್ದವನು ವಿಶ್ರಾಂತನಾಗುತ್ತಲೇ ಅಧಿಕಾರದಿಂದ ಕೆಳಕ್ಕೆ ಇಳಿಯಲೇಬೇಕಾಗುತ್ತದೆ. ಇದನ್ನು ಅನೇಕರು ಮನಗಂಡಿರುವುದಿಲ್ಲ. ಅಧಿಕಾರವು ಶಾಶ್ವತವೆಂದು ಭ್ರಮಿಸಿ ಕೆಲಸಮಾಡುತ್ತಿರುತ್ತಾರೆ. ಕಡೆಯಲ್ಲಿ ನಿಷ್ಪ್ರಯೋಜಕರಾಗುತ್ತಾರೆ.) ಪರಸ್ಪರವಾಗಿ ಸೇರುವಿಕೆಯು ವಿಯೋಗದಲ್ಲಿಯೇ ಪರ್ಯವಸಾನವಾಗು ತ್ತದೆ. (ಗಂಡ-ಹೆಂಡತಿ-ಮಕ್ಕಳು-ಸೇವಕರು ಎಲ್ಲರೂ ಒಂದು ಮನೆಯಲ್ಲಿ ಕೆಲಕಾಲ ಒಂದಾಗಿರುತ್ತಾರೆ. ಕಾಲಕ್ರಮದಿಂದ ಒಬ್ಬೊಬ್ಬರೇ ಬಿಟ್ಟು ಹೋಗುತ್ತಾರೆ. ಅವರಲ್ಲಿ ಯಾರೂ ಶಾಶ್ವತವಾಗಿ ಉಳಿಯುವುದಿಲ್ಲ. ಒಬ್ಬನಾದ ಮೇಲೆ ಮತ್ತೊಬ್ಬರಂತೆ ಒಬ್ಬರನ್ನೊಬ್ಬರು ಅಗಲುತ್ತಾರೆ.)

ಆದುದರಿಂದ ಸೇರುವಿಕೆಯು ಅಗಲುವಿಕೆಯಲ್ಲಿಯೇ ಪರ್ಯವಸಾನ ಹೊಂದುತ್ತದೆ.) ಜೀವಿತಕ್ಕೆ ಮರಣವೇ ಕೊನೆಯ ಅವಸ್ಥೆ. (ಹುಟ್ಟಿದೊಡನೆಯೇ ಮರಣವೆಂಬುದು ಬೆನ್ನ ಹಿಂದೆಯೇ ಇರುತ್ತದೆ. ಯಾವ ಜೀವಿಯೂ ಶಾಶ್ವತವಾಗಿ ಉಳಿದಿರಲಾರದು. ಜಾತಸ್ಯ ಮರಣಂ ಧ್ರುವಮ್ –ಎಂಬುದನ್ನು ಇಲ್ಲಿ ಪರ್ಯಾಯವಾಗಿ ಹೇಳಿದ್ದಾರೆ.)

ಅನ್ತೋ ನಾಸ್ತಿ ಪಿಪಾಸಾಯಾಸ್ತುಷ್ಟಿಸ್ತು ಪರಮಂ ಸುಖಮ್ ।
ತಸ್ಮಾತ್ಸಂತೋಷಮೇವೇಹ ಧನಂ ಪಶ್ಯನ್ತಿ ಪಣ್ಡಿತಾಃ ॥೨೧॥

ಆಶೆಗೆ ಕೊನೆಯೆಂಬುದೇ ಇಲ್ಲ. ಆದುದರಿಂದ ತೃಪ್ತಿಯೇ ಪರಮ ಸುಖದಾಯಕವಾದುದು. ಈ ಕಾರಣದಿಂದಲೇ ಪಂಡಿತರಾದವರು ಸಂತೋಷವನ್ನೇ ಐಶ್ವರ್ಯವೆಂದು ತಿಳಿಯುತ್ತಾರೆ.

ನಿಮೇಷಮಾತ್ರಮಪಿ ಹಿ ವಯೋ ಗಚ್ಛನ್ನ ತಿಷ್ಠತಿ ।
ಸ್ವಶರೀರೇಷ್ವನಿತ್ಯೇಷು ನಿತ್ಯಂ ಕಿಮನುಚಿನ್ತಯೇತ್ ॥೨೨॥

ಕಳೆದುಹೋಗುತ್ತಿರುವ ಆಯುಷ್ಯವು ರೆಪ್ಪೆಗಳನ್ನು ಮುಚ್ಚಿ ತೆಗೆಯುವಷ್ಟು ಕಾಲವೂ ನಿಂತಿರುವುದಿಲ್ಲ. ತಮ್ಮ ಶರೀರಗಳೇ ಅನಿತ್ಯಗಳಾಗಿರುವಾಗ ಯಾವುದನ್ನು ಶಾಶ್ವತವಸ್ತುವೆಂದು ಚಿಂತಿಸಬೇಕಾಗಿದೆ?

ಭೂತೇಷು ಭಾವಂ ಸಂಚಿನ್ತ್ಯ ಯೇ ಬುದ್ಧ್ವಾ ಮನಸಃ ಪರಮ್ ।
ನ ಶೋಚನ್ತಿ ಗತಾಧ್ವಾನಃ ಪಶ್ಯನ್ತಃ ಪರಮಾಂ ಗತಿಮ್ ॥೨೩॥

ಎಲ್ಲ ಪ್ರಾಣಿಗಳಲ್ಲಿಯೂ ಇರುವ, ಮನಸ್ಸಿಗಿಂತಲೂ ಅತೀತನಾದ ಪರಮಾತ್ಮನನ್ನು ಯಾರು ಬುದ್ಧಿಯ ಮೂಲಕವಾಗಿ ತಿಳಿದುಕೊಂಡು ಧ್ಯಾನಾಸಕ್ತರಾಗುವರೋ–ಅವರು ಸಂಸಾರಮಾರ್ಗವನ್ನು ಮುಗಿಸಿ (ದಾಟಿ) ಶ್ರೇಷ್ಠವಾದ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಮುಂದೆ ಅವರು ಯಾವ ಕಾರಣದಿಂದಲೂ ಶೋಕಪಡುವುದಿಲ್ಲ.

ಸಂಚಿನ್ವಾನಕಮೇವೈನಂ ಕಾಮಾನಾಮವಿತೃಪ್ತಕಮ್ ।
ವ್ಯಾಘ್ರಃ ಪಶುಮಿವಾಸಾದ್ಯ ಮೃತ್ಯುರಾದಾಯ ಗಚ್ಛತಿ ॥೨೪॥

ಯಾವಾಗಲೂ ಧನಾದಿಗಳ ಸಂಗ್ರಹದಲ್ಲಿಯೇ ಆಸಕ್ತನಾಗಿರುವ, ಕಾಮೋಪಭೋಗಗಳಲ್ಲಿ ತೃಪ್ತನಾಗದಿರುವ ಮನುಷ್ಯನನ್ನು–ವ್ಯಾಘ್ರವು ಹುಲ್ಲು ಮೇಯುತ್ತಿರುವ ಹಸುವನ್ನು ಅಪಹರಿಸಿಕೊಂಡು ಹೋಗುವಂತೆ– ಮೃತ್ಯುವು ಅಪಹರಿಸಿಕೊಂಡು ಹೋಗುತ್ತದೆ.

ತಥಾಪ್ಯುಪಾಯಂ ಸಮ್ಪಶ್ಯೇದ್ದುಃಖಸ್ಯ ಪರಿಮೋಕ್ಷಣಮ್ ।
ಅಶೋಚನ್ನಾರಭೇಚ್ಚೈವ ಮುಕ್ತಶ್ಚಾವ್ಯಸನೀ ಭವೇತ್ ॥೨೫॥

ಹೀಗಿದ್ದರೂ ಸಂಸಾರದುಃಖದಿಂದ ಪಾರಾಗಲು ಯಾವುದಾದರೂ ಉಪಾಯವನ್ನು ಹುಡುಕಲೇಬೇಕು. ಯಾವನು ಶೋಕವನ್ನು ದೂರಮಾಡಿ ಅಧ್ಯಾತ್ಮಸಾಧನೆಯನ್ನು ಪ್ರಾರಂಭಿಸುವನೋ – ಅವನು ಯಾವ ವಿಧವಾದ ವ್ಯಸನವೂ ಇಲ್ಲದೇ ಮುಕ್ತನಾಗುತ್ತಾನೆ.

ಶಬ್ದೇ ಸ್ಪರ್ಶೇ ಚ ರೂಪೇ ಚ ಗನ್ಧೇಷು ಚ ರಸೇಷು ಚ ।
ನೋಪಭೋಗಾತ್ಪರಂ ಕಿಂಚಿದ್ಧನಿನೋ ವಾಧನಸ್ಯ ಚ ॥೨೬॥

ಧನಿಕನಿಗೇ ಆಗಲೀ, ದರಿದ್ರನಿಗೇ ಆಗಲೀ–ಶಬ್ದ-ಸ್ಪರ್ಶ-ರೂಪ-ರಸ-ಗಂಧಾದಿಗಳು ಉಪಭೋಗಕಾಲದಲ್ಲಿ ಸುಖವಾಗಿ ಕಾಣುತ್ತವೆ. ಉಪ ಭೋಗಿಸಿದನಂತರ ಅವು ಸುಖಕರಗಳಾಗುವುದಿಲ್ಲ.

ಪ್ರಾಕ್ಸಮ್ಪ್ರಯೋಗಾದ್ಭೂತಾನಾಂ ನಾಸ್ತಿ ದುಃಖಂ ಪರಾಯಣಮ್ ।
ವಿಪ್ರಯೋಗಾತ್ತು ಸರ್ವಸ್ಯ ನ ಶೋಚೇತ್ಪ್ರಕೃತಿಸ್ಥಿತಃ ॥೨೭॥

ಪ್ರಾಣಿಗಳು ಪರಸ್ಪರವಾಗಿ ಸೇರುವ ಮೊದಲು ಯಾವ ವಿಧವಾದ ದುಃಖವೂ ಇರುವುದಿಲ್ಲ. ಸೇರಿದನಂತರ ವಿಯೋಗವಾಗಿಬಿಟ್ಟರೆ ದುಃಖ ವುಂಟಾಗುತ್ತದೆ. ಆದುದರಿಂದ ತನ್ನ ಸ್ವರೂಪವನ್ನು ತಿಳಿದುಕೊಂಡಿರುವ ವಿವೇಕಿಯಾದ ಮನುಷ್ಯನು ವಿಯೋಗವಾದಾಗಲೂ ದುಃಖಪಡಬಾರದು.

ಧೃತ್ಯಾ ಶಿಶ್ನೋದರಂ ರಕ್ಷೇತ್ಪಾಣಿಪಾದಂ ಚ ಚಕ್ಷುಷಾ ।
ಚಕ್ಷುಃಶ್ರೋತ್ರೇ ಚ ಮನಸಾ ಮನೋ ವಾಚಂ ಚ ವಿದ್ಯಯಾ ॥೨೮॥

ಮನುಷ್ಯನು ಧೈರ್ಯದಿಂದ ಶಿಶ್ನೋದರಗಳನ್ನು (ಜನನೇಂದ್ರಿಯ ವನ್ನೂ–ಹೊಟ್ಟೆಯನ್ನೂ) ಕಾಪಾಡಿಕೊಳ್ಳಬೇಕು. (ಹಸಿವನ್ನೂ, ಕಾಮ

ವನ್ನೂ ತಡೆಯುವುದು ಬಹಳ ಕಷ್ಟವೇ ಸರಿ. ಅವುಗಳನ್ನು ತಡೆದುಕೊಳ್ಳಲು ಧೈರ್ಯ ಅಥವಾ ದೃಢವಾದ ಬುದ್ಧಿಯಿರಬೇಕು.) ಕೈ-ಕಾಲುಗಳನ್ನು ಕಣ್ಣಿನಿಂದ ರಕ್ಷಿಸಬೇಕು. (ಕಣ್ಣಿಲ್ಲದಿದ್ದರೆ ಕಾಲುಗಳು ಹಳ್ಳಕ್ಕೆ ಬೀಳಬಹುದು. ಕೈಗಳು ಬೆಂಕಿಯನ್ನು ಮುಟ್ಟಬಹುದು.) ಕಣ್ಣುಗಳನ್ನೂ ಮತ್ತು ಕಿವಿಗಳನ್ನೂ ಮನಸ್ಸಿನಿಂದ ರಕ್ಷಿಸಬೇಕು. (ಮನಸ್ಸಿನ ಆಶ್ರಯವಿಲ್ಲದಿದ್ದರೆ ಕಣ್ಣುಗಳೂ ಕಾಣಿಸುವುದಿಲ್ಲ ; ಕಿವಿಗಳೂ ಕೇಳಿಸುವುದಿಲ್ಲ.) ಮನಸ್ಸನ್ನೂ ಮತ್ತು ಮಾತನ್ನೂ ವಿದ್ಯೆಯಿಂದ ರಕ್ಷಿಸಬೇಕು. (ವಿದ್ಯೆಯಿಲ್ಲದಿದ್ದರೆ ಮನಸ್ಸು ಸ್ವೇಚ್ಛೆಯಿಂದ ವರ್ತಿಸುತ್ತದೆ. ಮಾತಿನಲ್ಲಿ ಸಂಯಮವಿರುವುದಿಲ್ಲ.)

ಪ್ರಣಯಂ ಪ್ರತಿಸಂಹೃತ್ಯ ಸಂಸ್ತುತೇಷ್ವಿತರೇಷು ಚ ।
ವಿಚರೇದಸಮುನ್ನದ್ಧಃ ಸ ಸುಖೀ ಸ ಚ ಪಣ್ಡಿತಃ ॥೨೯॥

ಹತ್ತಿರದ ಪರಿಚಯವಿರುವವರಲ್ಲಿಯೂ ಮತ್ತು ಇತರರಲ್ಲಿಯೂ ಪ್ರೀತಿಯನ್ನು ತೋರೆದು ವಿನೀತನಾಗಿ ಯಾವನು ವ್ಯವಹರಿಸುವನೋ–ಅವನೇ ಸುಖಿಯು ಮತ್ತು ಅವನೇ ಪಂಡಿತನು.

ಅಧ್ಯಾತ್ಮರತಿರಾಸೀನೋ ನಿರಪೇಕ್ಷೋ ನಿರಾಮಿಷಃ ।
ಆತ್ಮನೈವ ಸಹಾಯೇನ ಯಶ್ಚರೇತ್ಸ ಸುಖೀ ಭವೇತ್ ॥೩೦॥

ಯಾವನು ಅಧ್ಯಾತ್ಮವಿದ್ಯೆಯಲ್ಲಿ ಅನುರಕ್ತನಾಗಿರುತ್ತಾ ಅಪೇಕ್ಷಾರಹಿತ ನಾಗಿ, ಯಾವ ವಿಧವಾದ ಭೋಗಾಸಕ್ತಿಯೂ ಇಲ್ಲದವನಾಗಿ, ಸ್ವಾವಲಂಬಿ ಯಾಗಿ ನಡೆದುಕೊಳ್ಳುವನೋ–ಅವನೇ ಪರಮಸುಖಿಯಾಗುತ್ತಾನೆ.”

೩೩೦ನೆಯ ಅಧ್ಯಾಯವು ಮುಗಿಯಿತು.

ನಾರದರಿಂದ ಶುಕನಿಗೆ ಕರ್ಮಫಲಪ್ರಾಪ್ತಿಯಲ್ಲಿ ಅಸ್ವಾತಂತ್ರ್ಯದ ನಿರೂಪಣೆ : ಸೂರ್ಯಮಂಡಲದ ಮಾರ್ಗವಾಗಿ ಪರಮಪದಕ್ಕೆ ಹೋಗಲು ಶುಕನ ನಿರ್ಧಾರ

ಯುಧಿಷ್ಠಿರ! ನಾರದರು ಹೇಳುತ್ತಾರೆ :

ಸುಖದುಃಖವಿಪರ್ಯಾಸೋ ಯದಾ ಸಮುಪಪದ್ಯತೇ ।
ನೈನಂ ಪ್ರಜ್ಞಾ ಸುನೀತಂ ವಾ ತ್ರಾಯತೇ ನಾಪಿ ಪೌರುಷಮ್ ॥೧॥

“ಶುಕ! ಯಾವಾಗ ಮನುಷ್ಯನು ಸುಖವನ್ನೇ ದುಃಖವೆಂಬುದಾಗಿಯೂ, ದುಃಖವನ್ನೇ ಸುಖವೆಂಬುದಾಗಿಯೂ ಭಾವಿಸುವನೋ–ಆಗ ಪ್ರಜ್ಞೆಯಾಗಲೀ, ಉತ್ತಮನೀತಿಯಾಗಲೀ, ಪೌರುಷವಾಗಲೀ–ಅವನನ್ನು ರಕ್ಷಿಸುವುದಿಲ್ಲ.

ಸ್ವಭಾವಾದ್ಯತ್ನಮಾತಿಷ್ಠೇದ್ಯತ್ನವಾನ್ನಾವಸೀದತಿ ।
ಜರಾಮರಣರೋಗೇಭ್ಯಃ ಪ್ರಿಯಮಾತ್ಮಾನಮುದ್ಧರೇತ್ ॥೨॥

ಆದುದರಿಂದ ಮನುಷ್ಯನು ಸ್ವಾಭಾವಿಕವಾಗಿಯೇ ಜ್ಞಾನಪ್ರಾಪ್ತಿಗಾಗಿ ಪ್ರಯತ್ನಿಸಬೇಕು. ಆತ್ಮಜ್ಞಾನಪ್ರಾಪ್ತಿಗಾಗಿ ಪ್ರಯತ್ನಿಸುವವನು ಯಾವ ಕಾರಣದಿಂದಲೂ ವಿನಾಶಹೊಂದುವುದಿಲ್ಲ. ಆತ್ಮವು ಎಲ್ಲಕ್ಕಿಂತಲೂ ಪ್ರಿಯವಾದುದು. ಆದುದರಿಂದ ಅದನ್ನು ಮುಪ್ಪು-ಸಾವು ಮತ್ತು ರೋಗಗಳಿಂದ ಉದ್ಧರಿಸಬೇಕು.

ರುಜನ್ತಿ ಹಿ ಶರೀರಾಣಿ ರೋಗಾಃ ಶಾರೀರಮಾನಸಾಃ ।
ಸಾಯಕಾ ಇವ ತೀಕ್ಷ್ಣಾಗ್ರಾಃ ಪ್ರಯುಕ್ತಾ ದೃಢಧನ್ವಿಭಿಃ ॥೩॥

ಶಾರೀರಕವಾದ ಮತ್ತು ಮಾನಸಿಕವಾದ ರೋಗಗಳು–ದೃಢವಾಗಿ ಧನುಸ್ಸನ್ನು ಹಿಡಿದಿರುವ ಯೋಧರಿಂದ ಬಿಡಲ್ಪಟ್ಟ ತೀಕ್ಷ್ಣಾಗ್ರವಾದ ಬಾಣಗಳಂತೆ–ಮನುಷ್ಯರ ಶರೀರಗಳನ್ನು ಬಾಧೆಪಡಿಸುತ್ತವೆ.

ವ್ಯಥಿತಸ್ಯ ವಿಧಿತ್ಸಾಭಿಸ್ತಾಮ್ಯತೋ ಜೀವಿತೈಷಿಣಃ ।
ಅವಶಸ್ಯ ವಿನಾಶಾಯ ಶರೀರಮುಪಕೃಷ್ಯತೇ ॥೪॥

ಅನೇಕವಿಧವಾದ ಕೆಲಸಗಳ ಆಶೆಗಳಿಂದ ವ್ಯಾಕುಲಗೊಂಡಿರುವ, ಬಹಳ ಸಂತಾಪ (ಕಷ್ಟ) ಪಡುತ್ತಿರುವ, ಜೀವಿಸಲು ಇಚ್ಛಿಸಿರುವ, ಇಂದ್ರಿಯಗಳಿಗೆ ಅಧೀನನಾದ ಮನುಷ್ಯನ ಶರೀರವು ವಿನಾಶದೆಡೆಗೆ ಸೆಳೆಯಲ್ಪಡುತ್ತದೆ.

ಸ್ರವನ್ತಿ ನ ನಿವರ್ತನ್ತೇ ಸ್ರೋತಾಂಸಿ ಸರಿತಾಮಿವ ।
ಆಯುರಾದಾಯ ಮರ್ತ್ಯಾನಾಂ ರಾತ್ರ್ಯಹಾನಿ ಪುನಃ ಪುನಃ ॥೫॥

ನದಿಗಳ ಪ್ರವಾಹಗಳು ಹಿಂದಕ್ಕೆ ಬರದೇ ಮುಂದು-ಮುಂದಕ್ಕೇ ಹರಿದುಕೊಂಡು ಹೋಗುತ್ತಿರುವಂತೆ–ರಾತ್ರಿ ಮತ್ತು ಹಗಲುಗಳು ಪುನಃ ಪುನಃ ಬಂದು ಮುಂದೆ-ಮುಂದೆ ಹೋಗುತ್ತಾ ಮನುಷ್ಯರ ಆಯುಷ್ಯವನ್ನು ಅಪಹರಿಸುತ್ತಿರುತ್ತವೆ.

ವ್ಯತ್ಯಯೋ ಹ್ಯಯಮತ್ಯನ್ತಂ ಪಕ್ಷಯೋಃ ಶುಕ್ಲಕೃಷ್ಣಯೋಃ ।
ಜಾತಾನ್ಮರ್ತ್ಯಾಞ್ಜರಯತಿ ನಿಮೇಷಾನ್ನಾವತಿಷ್ಠತೇ ॥೬॥

ಶುಕ್ಲ-ಕೃಷ್ಣಪಕ್ಷಗಳ ಸತತವಾದ ಪರಿವರ್ತನೆಯು ಹುಟ್ಟಿದ ಮನುಷ್ಯರನ್ನು ಮುಪ್ಪಿನಿಂದ ಜೀರ್ಣರನ್ನಾಗಿ ಮಾಡುತ್ತದೆ. (ಶುಕ್ಲ-ಕೃಷ್ಣಪಕ್ಷಗಳು ಪರಿವರ್ತನೆಯನ್ನು ಹೊಂದಿದಂತೆಲ್ಲಾ ಜನರು ಆಯುಷ್ಯವನ್ನು ಕಳೆದುಕೊಳ್ಳುತ್ತಲೇ ಇರುತ್ತಾರೆ.) ಶುಕ್ಲ-ಕೃಷ್ಣಪಕ್ಷಗಳ ಪರಿವರ್ತನೆಯು ರೆಪ್ಪೆ ಬಡಿಯುವಷ್ಟು ಕಾಲವೂ ಸ್ತಬ್ಧವಾಗಿ ನಿಂತಿರುವುದಿಲ್ಲ.

ಸುಖದುಃಖಾನಿ ಭೂತಾನಾಮಜರೋ ಜರಯತ್ಯಸೌ ।
ಆದಿತ್ಯೋ ಹ್ಯಸ್ತಮಭ್ಯೇತಿ ಪುನಃ ಪುನರುದೇತಿ ಚ ॥೭॥

ಸೂರ್ಯನು ಪ್ರತಿನಿತ್ಯವೂ ಅಸ್ತಮಿಸುತ್ತಿರುತ್ತಾನೆ. ಪುನಃ ಹುಟ್ಟುತ್ತಲೇ ಇರುತ್ತಾನೆ. ಆದಿತ್ಯನು ತಾನು ಅಜರನಾಗಿದ್ದರೂ (ಮುಪ್ಪಿನಿಂದ ರಹಿತನಾಗಿದ್ದರೂ) ಪ್ರಾಣಿಗಳ ಸುಖ-ದುಃಖಗಳನ್ನು ಜೀರ್ಣಗೊಳಿಸುತ್ತಿರುತ್ತಾನೆ.

ಅದೃಷ್ಟಪೂರ್ವಾನಾದಾಯ ಭಾವಾನಪರಿಶಙ್ಕಿತಾನ್ ।
ಇಷ್ಟಾನಿಷ್ಟಾನ್ಮನುಷ್ಯಾಣಾಮಸ್ತಂ ಗಚ್ಛನ್ತಿ ರಾತ್ರಯಃ ॥೮॥

ರಾತ್ರಿಗಳು (ಸ್ವಪ್ನದಲ್ಲಿ) ಮನುಷ್ಯರಿಗೆ ಅಪೂರ್ವವಾದ ಮತ್ತು

ಅಸಂಭಾವಿತವಾದ ಹಲವಾರು ಇಷ್ಟಾನಿಷ್ಟಘಟನೆಗಳನ್ನು ಒದಗಿಸುತ್ತಾ ಅಸ್ತವನ್ನು ಹೊಂದುತ್ತಿರುತ್ತವೆ (ಕಳೆದುಹೋಗುತ್ತಿರುತ್ತವೆ).

ಯೋಽಯಮಿಚ್ಛೇದ್ಯಥಾಕಾಮಂ ಕಾಮಾನಾಂ ತದವಾಪ್ನುಯಾತ್ ।
ಯದಿ ಸ್ಯಾನ್ನ ಪರಾಧೀನಂ ಪುರುಷಸ್ಯ ಕ್ರಿಯಾಫಲಮ್ ॥೯॥

ಪುರುಷನು ಮಾಡುವ ಕರ್ಮಗಳ ಫಲವು ಯಾವಾಗಲೂ ಪರಾಧೀನ ವಾಗಿರುತ್ತದೆ (ಪರಮಾತ್ಮನ ಅಧೀನವಾಗಿರುತ್ತದೆ). ಹಾಗಲ್ಲದಿದ್ದರೆ ಯಾವನು ಯಾವ ಕಾಮನೆಯಿಂದ ಕಾರ್ಯಮಾಡುವನೋ –ಅವನಿಗೆ ಆ ಕಾಮನಾವಸ್ತುವು ಲಭಿಸಲೇಬೇಕಾಗಿದ್ದಿತು.

ಸಂಯತಾಶ್ಚ ಹಿ ದಕ್ಷಾಶ್ಚ ಮತಿಮನ್ತಶ್ಚ ಮಾನವಾಃ ।
ದೃಶ್ಯನ್ತೇ ನಿಷ್ಫಲಾಃ ಸನ್ತಃ ಪ್ರಹೀಣಾಃ ಸರ್ವಕರ್ಮಭಿಃ ॥೧೦॥

ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವವರೂ, ದಕ್ಷರೂ, ಬುದ್ಧಿ ವಂತರೂ ಆದ ಮನುಷ್ಯರು ಎಲ್ಲ ಕರ್ಮಗಳಿಂದಲೂ ಪರಿತ್ಯಜಿಸಲ್ಪಟ್ಟವ ರಾಗಿ ನಿಷ್ಫಲರಾಗಿರುವುದು ಕಂಡುಬರುತ್ತದೆ. (ಯಾವ ಕಾರ್ಯವೂ ಕೈಗೂಡದೇ ನಿಷ್ಫಲರಾಗಿರುವುದನ್ನು ನಾವು ಕಾಣುತ್ತಿದ್ದೇವೆ.)

ಅಪರೇ ಬಾಲಿಶಾಃ ಸನ್ತೋ ನಿರ್ಗುಣಾಃ ಪುರುಷಾಧಮಾಃ ।
ಆಶೀರ್ಭಿರಪ್ಯಸಂಯುಕ್ತಾ ದೃಶ್ಯನ್ತೇ ಸರ್ವಕಾಮಿನಃ ॥೧೧॥

ಕೆಲವರು ಮೂರ್ಖರಾಗಿರುತ್ತಾರೆ. ಒಳ್ಳೆಯ ಗುಣಗಳಿಂದ ಹೀನ ರಾಗಿರುತ್ತಾರೆ. ಪುರುಷರಲ್ಲಿ ಅಧಮರಾಗಿರುತ್ತಾರೆ. ಹಿರಿಯರ ಆಶೀರ್ವಾದ ಗಳೂ ಇಲ್ಲದವರಾಗಿರುತ್ತಾರೆ. ಅಂತಹವರು ಮಾಡುವ ಕೆಲಸಗಳೆಲ್ಲವೂ ಕೈಗೂಡುತ್ತಿರುತ್ತವೆ. ಅವರು ಸಕಲವಿಧವಾದ ಕಾಮನೆಗಳಿಂದಲೂ ಸಂಪನ್ನ ರಾಗಿರುವುದನ್ನೂ ನಾವು ಕಾಣುತ್ತಿದ್ದೇವೆ.

ಭೂತಾನಾಮಪರಃ ಕಶ್ಚಿದ್ಧಿಂಸಾಯಾಂ ಸತತೋತ್ಥಿತಃ ।
ವಞ್ಚನಾಯಾಂ ಚ ಲೋಕಸ್ಯ ಸ ಸುಖೇಷ್ವೇವ ಜೀರ್ಯತೇ ॥೧೨॥

ಮನುಷ್ಯರಲ್ಲಿ ಮತ್ತೊಬ್ಬನು ಯಾವಾಗಲೂ ಪ್ರಾಣಿಗಳ ಅಥವಾ ಮನುಷ್ಯರ ಹಿಂಸೆಯಲ್ಲಿಯೇ ನಿರತನಾಗಿರುತ್ತಾನೆ. ಜನರನ್ನು ವಂಚಿಸುವು

ದರಲ್ಲಿಯೇ ಆಸಕ್ತನಾಗಿರುತ್ತಾನೆ. ಆದರೆ ಅವನು ಯಾವಾಗಲೂ ಸುಖೋಪಭೋಗಗಳಲ್ಲಿಯೇ ಮುದಿಯಾಗುತ್ತಾನೆ (ಆಯುಷ್ಯವನ್ನೆಲ್ಲಾ ಕಳೆಯುತ್ತಿರುತ್ತಾನೆ).

ಅಚೇಷ್ಟಮಾನಮಾಸೀನಂ ಶ್ರೀಃ ಕಞ್ಚಿದುಪತಿಷ್ಠತೇ ।
ಕಶ್ಚಿತ್ಕರ್ಮಾನುಸೃತ್ಯಾನ್ಯೋ ನ ಪ್ರಾಪ್ಯಮಧಿಗಚ್ಛತಿ ॥೧೩॥

ಕೆಲವು ವೇಳೆ ಯಾವ ಕೆಲಸವನ್ನೂ ಮಾಡದೇ ಸೋಮಾರಿಯಾಗಿ ಕುಳಿತಿರುವವನ ಬಳಿಗೆ ಸಂಪತ್ತು ತಾನೇ ತಾನಾಗಿ ಹೋಗಿ ಸೇರುತ್ತದೆ. ಮತ್ತೊಬ್ಬನು ಕಷ್ಟಪಟ್ಟು ದುಡಿದರೂ ತಾನು ಹೊಂದಬೇಕಾದ ವಸ್ತುವನ್ನು ಹೊಂದುವುದಿಲ್ಲ.

ಅಪರಾಧಂ ಸಮಾಚಕ್ಷ್ವ ಪುರುಷಸ್ಯ ಸ್ವಭಾವತಃ ।
ಶುಕ್ರಮನ್ಯತ್ರ ಸಮ್ಭೂತಂ ಪುನರನ್ಯತ್ರ ಗಚ್ಛತಿ ॥೧೪॥

ಇದರಲ್ಲಿ ಸ್ವಾಭಾವಿಕವಾಗಿ ಪುರುಷನಲ್ಲಿಯೇ ಅಪರಾಧವಿರುವುದೆಂಬುದನ್ನು ತಿಳಿದುಕೊ. ವೀರ್ಯವು ಎಲ್ಲಿಯೋ ಹುಟ್ಟಿ ಎಲ್ಲಿಗೋ ಹೋಗಿ ಸೇರುತ್ತದೆ.

ತಸ್ಯ ಯೋನೌ ಪ್ರಯುಕ್ತಸ್ಯ ಗರ್ಭೋ ಭವತಿ ವಾ ನ ವಾ ।
ಆಮ್ರಪುಷ್ಪೋಪಮಾ ಯಸ್ಯ ನಿವೃತ್ತಿರುಪಲಭ್ಯತೇ ॥೧೫॥

ಸ್ತ್ರೀಯೋನಿಯಲ್ಲಿ ಪ್ರವೇಶಿಸಿದ ಆ ವೀರ್ಯವು ಕೆಲವು ಸಮಯದಲ್ಲಿ ಗರ್ಭವಾಗಬಹುದು ; ಆಗದೆಯೂ ಇರಬಹುದು. ಮಾವಿನ ಹೂವಿನಂತೆ ಕೆಲವು ವೇಳೆ ಅದು ವ್ಯರ್ಥವಾಗುವುದೂ ಕಂಡುಬಂದಿದೆ.

ಕೇಷಾಞ್ಚಿತ್ಪುತ್ರಕಾಮಾನಾಮನುಸಂತಾನಮಿಚ್ಛತಾಮ್ ।
ಸಿದ್ಧೌ ಪ್ರಯತಮಾನಾನಾಂ ನ ಚಾಣ್ಡಮುಪಜಾಯತೇ ॥೧೬॥

ಕೆಲವರು ಪುತ್ರಾಪೇಕ್ಷಿಗಳಾಗಿರುತ್ತಾರೆ. ಮಕ್ಕಳಿಗೂ ಮಕ್ಕಳಾಗ ಬೇಕೆಂಬ ಆಶಯವೂ ಅವರಿಗಿರುತ್ತದೆ. ಮಕ್ಕಳನ್ನು ಪಡೆದುಕೊಳ್ಳುವುದಕ್ಕಾಗಿ ಅವರು ಅನೇಕವಿಧವಾದ ಪ್ರಯತ್ನಗಳನ್ನೇ ಮಾಡುತ್ತಿರುತ್ತಾರೆ. ಆದರೂ ಒಂದು ಮೊಟ್ಟೆಯೂ (ಸಂತತಿಯೂ) ಅವರಿಗೆ ಹುಟ್ಟುವುದಿಲ್ಲ.

ಗರ್ಭಾಚ್ಚೋದ್ವಿಜಮಾನಾನಾಂ ಕ್ರುದ್ಧಾದಾಶೀವಿಷಾದಿವ ।
ಆಯುಷ್ಮಾಂಜ್ಜಾಯತೇ ಪುತ್ರಃ ಕಥಂ ಪ್ರೇತ ಇವಾಭವತ್ ॥೧೭॥

ಕೆಲವರು, ಪತ್ನಿಯು ಗರ್ಭವತಿಯಾದಳೆಂದರೆ–ಕೋಪಗೊಂಡ ಸರ್ಪಕ್ಕೆ ಹೆದರುವಂತೆ–ಭಯಪಡುತ್ತಾರೆ. ಆದರೂ ಅಂತಹವರಿಗೆ ಆಯುಷ್ಮಂತನಾದ ಪುತ್ರನೇ ಹುಟ್ಟುತ್ತಾನೆ. ಸಾಯುವುದೇ ಇಲ್ಲವೇನೋ ಎಂಬಂತೆ ಬದುಕಿರುತ್ತಾನೆ.

ದೇವಾನಿಷ್ಟ್ವಾ ತಪಸ್ತಪ್ತ್ವಾ ಕೃಪಣೈಃ ಪುತ್ರಗೃದ್ಧಿಭಿಃ ।
ದಶ ಮಾಸಾನ್ಪರಿಧೃತಾ ಜಾಯನ್ತೇ ಕುಲಪಾಂಸನಾಃ ॥೧೮॥

ಪುತ್ರಾಭಿಲಾಷಿಗಳಾದ, ದಯನೀಯರಾದ ಸ್ತ್ರೀ-ಪುರುಷರು ಮಕ್ಕಳನ್ನು ಪಡೆಯುವ ಸಲುವಾಗಿ ದೇವತೆಗಳನ್ನು ಆರಾಧಿಸುತ್ತಾರೆ. ನಾನಾವಿಧವಾದ ತಪಸ್ಸುಗಳನ್ನು ಮಾಡುತ್ತಾರೆ. ಸ್ತ್ರೀಯಾದವಳು ಹತ್ತು ತಿಂಗಳವರೆಗೂ ಗರ್ಭದಲ್ಲಿ ಪುತ್ರನನ್ನು ಧರಿಸಿರುತ್ತಾಳೆ. ಇಷ್ಟು ಮಾಡಿದರೂ ಕುಲಘಾತುಕರಾದ ಮಕ್ಕಳೇ ಹುಟ್ಟುತ್ತಾರೆ.

ಅಪರೇ ಧನಧಾನ್ಯಾನಿ ಭೋಗಾಂಶ್ಚ ಪಿತೃಸಂಚಿತಾನ್ ।
ವಿಪುಲಾನಭಿಜಾಯನ್ತೇ ಲಬ್ಧ್ವಾಸ್ತೈರೇವ ಮಙ್ಗಲೈಃ ॥೧೯॥

ಆದರೆ ಅಂತಹ ಮಂಗಳಕಾರ್ಯಗಳಿಂದ ಹುಟ್ಟಿದ ಕೆಲವರು ಪುತ್ರರು ಧನ-ಧಾನ್ಯಾದಿಗಳನ್ನೂ, ಪಿತ್ರಾರ್ಜಿತವಾದ ವಿಪುಲವಾದ ಭೋಗಗಳನ್ನೂ ಪಡೆದು ಅನುಭವಿಸುತ್ತಲೇ ಇರುತ್ತಾರೆ.

ಅನ್ಯೋನ್ಯಂ ಸಮಭಿಪ್ರೇತ್ಯ ಮೈಥುನಸ್ಯ ಸಮಾಗಮೇ ।
ಉಪದ್ರುವ ಇವಾವಿಷ್ಟೋ ಯೋನಿಂ ಗರ್ಭಃ ಪ್ರಪದ್ಯತೇ ॥೨೦॥

ಪತಿ-ಪತ್ನಿಯರು ಪರಸ್ಪರವಾಗಿ ಕಲೆತು ಮೈಥುನಕ್ಕಾಗಿ ಸಮಾಗಮವಾದಾಗ ಉಪದ್ರವವು ಪ್ರವೇಶಿಸಿದಂತೆ ಗರ್ಭವು (ರೇತಸ್ಸು) ಯೋನಿಯನ್ನು ಪ್ರವೇಶಿಸುತ್ತದೆ.

ಶೀಘ್ರಂ ಪರಶರೀರಾಣಿ ಚ್ಛಿನ್ನಬೀಜಂ ಶರೀರಿಣಮ್ ।
ಪ್ರಾಣಿನಂ ಪ್ರಾಣಸಂರೋಧೇ ಮಾಂಸಶ್ಲೇಷ್ಮವಿವೇಷ್ಟಿತಮ್ ॥೨೧॥

ಜನನಶಕ್ತಿಯನ್ನು ಕಳೆದುಕೊಂಡ ಸ್ಥೂಲಶರೀರವುಳ್ಳ ಮಾಂಸದಿಂದಲೂ ಶ್ಲೇಷ್ಮ(ಕಫ)ದಿಂದಲೂ ಯುಕ್ತವಾದ ಪ್ರಾಣಿಗೆ ಮರಣವು ಸಂಭವಿಸಿದೊಡನೆಯೇ ಬೇರೆಯ ಶರೀರವು ಪ್ರಾಪ್ತವಾಗುತ್ತದೆ. (ಯಾವಾಗಲೂ ದೇಹಬಂಧನದಿಂದ ವಿಚ್ಛೇದವೇ ಆಗುವುದಿಲ್ಲ.)

ನಿರ್ದಗ್ಧಂ ಪರದೇಹೇಽಪಿ ಪರದೇಹಂ ಚಲಾಚಲಮ್ ।
ವಿನಶ್ಯನ್ತಂ ವಿನಾಶಾನ್ತೇ ನಾವಿ ನಾವಮಿವಾಹಿತಮ್ ॥೨೨॥

ಯಾವ ರೀತಿಯಲ್ಲಿ ಒಂದು ನೌಕೆಯು ಭಗ್ನವಾದಾಗ ಅದರಲ್ಲಿರುವ ಜನರನ್ನು ತುಂಬಿಕೊಳ್ಳಲು ಮತ್ತೊಂದು ನೌಕೆಯು ಸಿದ್ಧವಾಗಿರುವುದೋ–ಅದೇ ರೀತಿಯಲ್ಲಿ ಶರೀರವು ಭಗ್ನವಾಗಿ ಆ ಶರೀರದಿಂದ ಜೀವನು ಹೊರಬಂದನಂತರ ಆ ಜೀವನ ಕರ್ಮಫಲಾನುಸಾರವಾಗಿ ಅಸ್ಥಿರವಾದ ಮತ್ತೊಂದು ಶರೀರವು ಸಿದ್ಧವಾಗಿಯೇ ಇರುತ್ತದೆ.

ಸಙ್ಗತ್ಯಾ ಜಠರೇ ನ್ಯಸ್ತಂ ರೇತೋಬಿನ್ದುಮಚೇತನಮ್ ।
ಕೇನ ಯತ್ನೇನ ಜೀವನ್ತಂ ಗರ್ಭಂ ತ್ವಮಿಹ ಪಶ್ಯಸಿ ॥೨೩॥

ಸ್ತ್ರೀ-ಪುರುಷರ ಅನ್ಯೋನ್ಯಸಮಾಗಮದಿಂದ ಇಡಲ್ಪಟ್ಟ ಚೇತನಾರಹಿತವಾದ ರೇತಸ್ಸು ಗರ್ಭರೂಪವಾಗಿ ಮುಂದೆ ಯಾವ ಪ್ರಯತ್ನದಿಂದ ಜೀವಂತವಾಗುವುದೆಂಬುದನ್ನು ನೀನು ಕಂಡುಕೊಂಡಿರುವೆಯಾ?

ಅನ್ನಪಾನಾನಿ ಜೀರ್ಯನ್ತೇ ಯತ್ರ ಭಕ್ಷ್ಯಾಶ್ಚ ಭಕ್ಷಿತಾಃ ।
ತಸ್ಮಿನ್ನೇವೋದರೇ ಗರ್ಭಃ ಕಿಂ ನಾನ್ನಮಿವ ಜೀರ್ಯತೇ ॥೨೪॥

ಯಾವ ಹೊಟ್ಟೆಯಲ್ಲಿ ತಿಂದ ಮತ್ತು ಕುಡಿದ ಅನ್ನ-ನೀರುಗಳು ಜೀರ್ಣವಾಗಿ ಹೋಗುವುವೋ ಮತ್ತು ಭಕ್ಷಿಸಲ್ಪಟ್ಟ ಸಕಲವಿಧವಾದ ಭಕ್ಷ್ಯಗಳೂ ಜೀರ್ಣವಾಗಿ ಹೋಗುವುವೋ–ಅದೇ ಹೊಟ್ಟೆಯಲ್ಲಿಯೇ ಇರುವ ಗರ್ಭವು ಅನ್ನದಂತೆಯೇ ಏಕೆ ಜೀರ್ಣವಾಗಿ ಹೋಗುವುದಿಲ್ಲ?

ಗರ್ಭೇ ಮೂತ್ರಪುರೀಷಾಣಾಂ ಸ್ವಭಾವನಿಯತಾ ಗತಿಃ ।
ಧಾರಣೇ ವಾ ವಿಸರ್ಗೇ ವಾ ನ ಕರ್ತಾ ವಿದ್ಯತೇ ವಶಃ ॥೨೫॥

ಸ್ರವನ್ತಿ ಹ್ಯುದರಾದ್ಗರ್ಭಾ ಜಾಯಮಾನಾಸ್ತಥಾ ಪರೇ ।
ಆಗಮೇನ ತಥಾನ್ಯೇಷಾಂ ವಿನಾಶ ಉಪಪದ್ಯತೇ ॥೨೬॥

ಗರ್ಭದಲ್ಲಿ ಮೂತ್ರ-ಪುರೀಷಗಳಿಗೆ ಸ್ವಭಾವದಿಂದಲೇ ನಿಯತವಾದ ಮಾರ್ಗವಿರುತ್ತದೆ. ಗರ್ಭದ ಧಾರಣೆಯಲ್ಲಾಗಲೀ ವಿಸರ್ಜನೆಯಲ್ಲಾಗಲೀ ಯಾವನಿಗೂ ಸ್ವತಂತ್ರ ಕರ್ತೃತ್ವವಿರುವುದಿಲ್ಲ. ಅನೇಕವೇಳೆ ಹೊಟ್ಟೆಯಿಂದ ಗರ್ಭಗಳು ಸ್ರವಿಸಿಯೇ ಹೋಗಿಬಿಡುತ್ತವೆ (ಗರ್ಭಪಾತವಾಗುತ್ತದೆ). ಮತ್ತೆ ಕೆಲವು ಹುಟ್ಟುತ್ತಿರುವಾಗಲೇ ಸತ್ತುಹೋಗಿರುತ್ತವೆ. ಇತರ ಕೆಲವು ಜೀವಗಳು ಹುಟ್ಟಿದನಂತರ ವಿನಾಶಹೊಂದುತ್ತವೆ.

ಏತಸ್ಮಾದ್ಯೋನಿಸಮ್ಬನ್ಧಾದ್ಯೋ ಜೀವನ್ಪರಿಮುಚ್ಯತೇ ।
ಪ್ರಜಾಂ ಚ ಲಭತೇ ಕಾಞ್ಚಿತ್ಪುನರ್ದ್ವನ್ದ್ವೇಷು ಸಜ್ಜತಿ ॥೨೭॥

ಯೋನಿಯ ಸಂಬಂಧದಿಂದ ಯಾವುದು ಜೀವಂತವಾಗಿ ಕುಶಲಿಯಾಗಿ ಹೊರಬರುತ್ತದೆಯೋ–ಅದು ಸಂತಾನವಾಗುತ್ತದೆ. ಸಂತಾನವಾದೊಡನೆಯೇ ಸ್ತ್ರೀ-ಪುರುಷರು ಪರಸ್ಪರಸಮಾಗಮಕ್ಕೆ ಪುನಃ ಸಿದ್ಧರಾಗುತ್ತಾರೆ.

ಸ ತಸ್ಯ ಸಹಜಾತಸ್ಯ ಸಪ್ತಮೀಂ ನವಮೀಂ ದಶಾಮ್ ।
ಪ್ರಾಪ್ನುವನ್ತಿ ತತಃ ಪಞ್ಚ ನ ಭವನ್ತಿ ಗತಾಯುಷಃ ॥೨೮॥

ಪಂಚಭೂತಗಳೇ ಅನಾದಿಕಾಲದಿಂದ ಜೊತೆಯಲ್ಲಿ ಸೇರಿಕೊಂಡಿರುವ ಶರೀರವು ಗರ್ಭವಾಸ, ಜನನ, ಬಾಲ್ಯ, ಕೌಮಾರ, ಪೌಗಂಡ (ಐದರಿಂದ ಹತ್ತರವರೆಗಿನ ಸ್ಥಿತಿ) ಮತ್ತು ಯೌವನದ ಅವಸ್ಥೆಗಳ ನಂತರ ಏಳನೆಯದಾದ ಸ್ಥಾವಿರ್ಯವನ್ನೂ (ಮುಪ್ಪನ್ನೂ), ಎಂಟನೆಯದಾದ ಜರಾವಸ್ಥೆಯನ್ನೂ (ಕಡುಮುಪ್ಪಿನ ಸ್ಥಿತಿಯನ್ನೂ), ಒಂಬತ್ತನೆಯದಾದ ಪ್ರಾಣನಿಂತುಹೋಗುವಿಕೆ–ಎಂಬ ಸ್ಥಿತಿಯನ್ನೂ ಹೊಂದುತ್ತದೆ. ಆಯುಸ್ಸು ಮುಗಿದು ಹೋದವನಿಗೆ ಹತ್ತನೆಯದಾಗಿ ಆ ಪಂಚಭೂತಗಳ ಅಭಾವದಶೆಯೂ ಉಂಟಾಗುತ್ತದೆ. (ಏಕೆಂದರೆ : ಆಗ ಶರೀರದ ಪಂಚಭೂತಗಳು ಪ್ರಕೃತಿಯ ಪಂಚಭೂತಗಳಲ್ಲಿ ಹೋಗಿ ಸೇರಿಕೊಂಡುಬಿಟ್ಟಿರುತ್ತವೆ.)

ನಾಭ್ಯುತ್ಥಾನೇ ಮನುಷ್ಯಾಣಾಂ ಯೋಗಾಃ ಸ್ಯುರ್ನಾತ್ರ ಸಂಶಯಃ ।
ವ್ಯಾಧಿಭಿಶ್ಚ ವಿಮಥ್ಯನ್ತೇ ವ್ಯಾಧೈಃ ಕ್ಷುದ್ರಮೃಗಾ ಇವ ॥೨೯॥

ವ್ಯಾಧರು ಸಣ್ಣ-ಸಣ್ಣ ಮೃಗಗಳನ್ನು ಹಿಂಸಿಸುವಂತೆ–ನಾನಾವಿಧವಾದ

ರೋಗಗಳು ಮನುಷ್ಯನನ್ನು ತಿಕ್ಕಿ-ತೀಡಿಬಿಡುತ್ತವೆ. ಆ ಸಮಯದಲ್ಲಿ ಮನುಷ್ಯರಿಗೆ ಮೇಲೇಳಲು ಮತ್ತು ಕುಳಿತುಕೊಳ್ಳಲು ಕೂಡ ಶಕ್ತಿಯಿರುವುದಿಲ್ಲವೆಂಬುದರಲ್ಲಿ ಸಂಶಯವೇ ಇಲ್ಲ.

ವ್ಯಾಧಿಭಿರ್ಮಥ್ಯಮಾನಾನಾಂ ತ್ಯಜತಾಂ ವಿಪುಲಂ ಧನಮ್ ।
ವೇದನಾಂ ನಾಪಕರ್ಷನ್ತಿ ಯತಮಾನಾಶ್ಚಿಕಿತ್ಸಕಾಃ ॥೩೦॥

ರೋಗಗಳಿಂದ ಪೀಡಿತರಾಗುವ ಮನುಷ್ಯರು ರೋಗಪರಿಹಾರಕ್ಕಾಗಿ ಅಪಾರವಾದ ಧನವನ್ನೇ ವ್ಯಯಮಾಡುತ್ತಾರೆ. ವೈದ್ಯರೂ ರೋಗನಿವಾರಣೆಗಾಗಿ ಬಹಳವಾಗಿ ಪ್ರಯತ್ನಿಸುತ್ತಲೇ ಇರುತ್ತಾರೆ. ಆದರೂ ರೋಗಿಗಳ ವೇದನೆಯನ್ನು ಪರಿಹರಿಸಲು ಆ ವೈದ್ಯರೂ ಸಮರ್ಥರಾಗುವುದಿಲ್ಲ.

ತೇ ಚಾತಿನಿಪುಣಾ ವೈದ್ಯಾಃ ಕುಶಲಾಃ ಸಮ್ಭೃತೌಷಧಾಃ ।
ವ್ಯಾಧಿಭಿಃ ಪರಿಕೃಷ್ಯನ್ತೇ ಮೃಗಾ ವ್ಯಾಧೈರಿವಾರ್ದಿತಾಃ ॥೩೧॥

ಇಲ್ಲಿ ಇನ್ನೂ ಒಂದು ವೈಚಿತ್ರ್ಯವಿದೆ. ಅನೇಕವಿಧವಾದ ಔಷಧಗಳನ್ನು ಸಂಗ್ರಹಿಸಿರುವ, ಚಿಕಿತ್ಸೆಯಲ್ಲಿ ಅತ್ಯಂತಕುಶಲರಾದ ವೈದ್ಯರೂ ಕೂಡ – ವ್ಯಾಧರಿಂದ ಪ್ರಾಣಿಗಳು ಮರ್ದಿಸಲ್ಪಡುವಂತೆ – ರೋಗಗಳಿಂದ ಪೀಡಿಸಲ್ಪಡುತ್ತಿರುತ್ತಾರೆ.

ತೇ ಪಿಬನ್ತಃ ಕಷಾಯಾಂಶ್ಚ ಸರ್ಪೀಂಷಿ ವಿವಿಧಾನಿ ಚ ।
ದೃಶ್ಯನ್ತೇ ಜರಯಾ ಭಗ್ನಾ ನಗಾ ನಾಗೈರಿವೋತ್ತಮೈಃ ॥೩೨॥

ಆ ವೈದ್ಯರು ಅನೇಕವಿಧವಾದ ಕಷಾಯಗಳನ್ನೂ, ವಿಧ-ವಿಧವಾದ ಘೃತಗಳನ್ನೂ ಕುಡಿಯುತ್ತಿದ್ದರೂ –ದೊಡ್ಡ-ದೊಡ್ಡ ಆನೆಗಳಿಂದ ವೃಕ್ಷಗಳು ಕೆಡವಲ್ಪಡುವಂತೆ–ಮುಪ್ಪಿನಿಂದ ಭಗ್ನರಾಗುತ್ತಿರುವುದನ್ನೂ ನಾವು ಕಾಣುತ್ತೇವೆ.

ಕೇ ವಾ ಭುವಿ ಚಿಕಿತ್ಸನ್ತೇ ರೋಗಾರ್ತಾನ್ಮೃಗಪಕ್ಷಿಣಃ ।
ಶ್ವಾಪದಾನಿ ದರಿದ್ರಾಂಶ್ಚ ಪ್ರಾಯೋನಾರ್ತಾ ಭವನ್ತಿ ತೇ ॥೩೩॥

ಈ ಪ್ರಪಂಚದಲ್ಲಿ ರೋಗಪೀಡಿತವಾದ ಮೃಗ-ಪಕ್ಷಿಗಳಿಗೂ, ಕ್ರೂರ ಪ್ರಾಣಿಗಳಿಗೂ, ದರಿದ್ರರಿಗೂ ಯಾರು ತಾನೇ ಚಿಕಿತ್ಸೆಯನ್ನು ಮಾಡುತ್ತಾರೆ?

ಸಾಮಾನ್ಯವಾಗಿ ಮೃಗ-ಪಕ್ಷಿ-ಕ್ರೂರಪ್ರಾಣಿಗಳಾಗಲೀ, ದರಿದ್ರರಾಗಲೀ ರೋಗಪೀಡಿತರಾಗುವುದೇ ಇಲ್ಲ.

ಘೋರಾನಪಿ ದುರಾಧರ್ಷಾನ್ನೃಪತೀನುಗ್ರತೇಜಸಃ ।
ಆಕ್ರಮ್ಯಾದದತೇ ರೋಗಾಃ ಪಶೂನ್ಪಶುಗಣಾ ಯಥಾ ॥೩೪॥

ಪಶುಭಕ್ಷಗಳಾದ ಕ್ರೂರಮೃಗಗಳು ಪಶುಗಳನ್ನು ಆಕ್ರಮಿಸಿ ಅಪಹರಿಸಿ ಕೊಂಡು ಹೋಗುವಂತೆ–ಪ್ರಚಂಡವಾದ ತೇಜಸ್ಸನ್ನು ಹೊಂದಿರುವ, ಘೋರಪರಾಕ್ರಮಿಗಳಾದ, ಎದುರಿಸಲು ದುಸ್ಸಾಧ್ಯರಾದ ರಾಜರನ್ನು ರೋಗಗಳು ಆಕ್ರಮಿಸಿ ವಶಪಡಿಸಿಕೊಂಡುಬಿಡುತ್ತವೆ.

ಇತಿ ಲೋಕಮನಾಕ್ರಂದಂ ಮೋಹಶೋಕಪರಿಪ್ಲುತಮ್ ।
ಸ್ರೋತಸಾ ಸಹಸಾಕ್ಷಿಪ್ತಂ ಹ್ರಿಯಮಾಣಂ ಬಲೀಯಸಾ ॥೩೫॥

ಹೀಗೆ ಮೋಹ-ಶೋಕಗಳಲ್ಲಿಯೇ ಮುಳುಗಿಹೋಗಿ, ಸಂಸಾರವೆಂಬ ನದಿಯಲ್ಲಿ ಎಸೆಯಲ್ಪಟ್ಟು ಬಲಿಷ್ಠವಾದ ಪ್ರವಾಹದಿಂದ ಬಹಳ ಬೇಗ ಸೆಳೆಯಲ್ಪಡುತ್ತಿರುವ ಈ ಲೋಕವು ಯಾವ ಕೂಗಾಟವೂ ಇಲ್ಲದೇ ಮುಂದುವರಿಯುತ್ತಲೇ ಇದೆ.

ನ ಧನೇನ ನ ರಾಜ್ಯೇನ ನೋಗ್ರೇಣ ತಪಸಾ ತಥಾ ।
ಸ್ವಭಾವಮತಿವರ್ತಂತೇ ಯೇ ನಿಯುಕ್ತಾಃ ಶರೀರಿಣಃ ॥೩೬॥

ಕರ್ಮಫಲಗಳನ್ನು ಉಪಭೋಗಿಸಲು ವಿಧಿಯಿಂದ ನಿಯುಕ್ತರಾದ ಮನುಷ್ಯರಿಗೆ ಧನದಿಂದಾಗಲೀ, ರಾಜ್ಯದಿಂದಾಗಲೀ, ಉಗ್ರವಾದ ತಪಸ್ಸಿನಿಂದಾಗಲೀ–ಪ್ರಕೃತಿಯನ್ನು (ಸ್ವಭಾವವನ್ನು) ಅತಿಕ್ರಮಿಸಿ ನಡೆಯಲು ಸಾಧ್ಯವಾಗುವುದಿಲ್ಲ.

ನ ಮ್ರಿಯೇರನ್ನ ಜೀರ್ಯೇರನ್ಸರ್ವೇ ಸ್ಯುಃ ಸರ್ವಕಾಮಿನಃ ।
ನಾಪ್ರಿಯಂ ಪ್ರತಿ ಪಶ್ಯೇಯುರುತ್ಥಾನಸ್ಯ ಫಲೇ ಸತಿ ॥೩೭॥

ಪ್ರಯತ್ನಕ್ಕೆ ತಕ್ಕ ಫಲವು ತಮ್ಮ ಹಸ್ತಗತವಾಗುವುದಾಗಿದ್ದರೆ ಮನುಷ್ಯರು ಮುದುಕರಾಗುತ್ತಲೂ ಇರಲಿಲ್ಲ; ಸಾಯುತ್ತಲೂ ಇರಲಿಲ್ಲ. ಅಪ್ರಿಯ ಘಟನೆಗಳನ್ನು ಕಾಣುತ್ತಲೂ ಇರಲಿಲ್ಲ. ಎಲ್ಲರೂ ತಮ್ಮ ಎಲ್ಲ ಕಾಮನೆಗಳನ್ನೂ ಪಡೆದುಕೊಳ್ಳುತ್ತಿದ್ದರು.

ಉಪರ್ಯುಪರಿ ಲೋಕಸ್ಯ ಸರ್ವೋ ಗನ್ತುಂ ಸಮೀಹತೇ ।
ಯತತೇ ಚ ಯಥಾಶಕ್ತಿ ನ ಚ ತದ್ವರ್ತತೇ ತಥಾ ॥೩೮॥

ಎಲ್ಲರೂ ಮೇಲು-ಮೇಲಿನ ಲೋಕಗಳಿಗೇ ಹೋಗಲು ಇಚ್ಛಿಸುತ್ತಾರೆ. ತಮ್ಮ ಶಕ್ತ್ಯನುಸಾರವಾಗಿ ಪ್ರಯತ್ನವನ್ನೂ ಮಾಡುತ್ತಾರೆ. ಆದರೆ ಅದು ಸಾಧ್ಯವಾಗುವುದಿಲ್ಲ. ಮಾಡಿದ ಪ್ರಯತ್ನಗಳೆಲ್ಲವೂ ಫಲಿತವಾಗುವುದಿಲ್ಲ.

ಐಶ್ವರ್ಯಮದಮತ್ತಾಂಶ್ಚ ಮತ್ತಾನ್ಮದ್ಯಮದೇನ ಚ ।
ಅಪ್ರಮತ್ತಾಃ ಶಠಾಶ್ಶೂರಾ ವಿಕ್ರಾನ್ತಾಃ ಪರ್ಯುಪಾಸತೇ ॥೩೯॥

ಜಾಗರೂಕತೆಯಿಂದ ಇರತಕ್ಕವರೂ, ಶೂರರೂ, ಮಹಾಪರಾಕ್ರಮಿಗಳೂ ಆಗಿರತಕ್ಕವರೂ ಕೂಡ ಐಶ್ವರ್ಯಮದದಿಂದ ಮತ್ತರಾಗಿರುವವರನ್ನೂ –ಮದ್ಯಪಾನದ ಮದದಿಂದ ಮತ್ತರಾಗಿರುವವರನ್ನೂ ನಾನಾಕಾರಣಗಳಿಂದ ಸೇವಿಸುತ್ತಾರೆ.

ಕ್ಲೇಶಾಃ ಪರಿನಿವರ್ತನ್ತೇ ಕೇಷಾಞ್ಚಿದಸಮೀಕ್ಷಿತಾಃ ।
ಸ್ವಂ ಸ್ವಂ ಚ ಪುನರನ್ಯೇಷಾಂ ನ ಕಿಂಚಿದಧಿಗಮ್ಯತೇ ॥೪೦॥

ಕೆಲವರಿಗೆ ಪ್ರಾಪ್ತವಾಗುವ ಕ್ಲೇಶಗಳು ಯಾವ ಯೋಚನೆಯೂ ಅಥವಾ ಪ್ರಯತ್ನವೂ ಇಲ್ಲದೆ ಕಳೆದುಹೋಗುತ್ತವೆ. ಮತ್ತೆ ಕೆಲವರಿಗೆ ತಮ್ಮ ಐಶ್ವರ್ಯವೂ ಸಮಯಗಳಲ್ಲಿ ಉಪಯೋಗಕ್ಕೆ ಬರುವುದಿಲ್ಲ.

ಮಹಚ್ಚ ಫಲವೈಷಮ್ಯಂ ದೃಶ್ಯತೇ ಕರ್ಮಸಂಧಿಷು ।
ವಹನ್ತಿ ಶಿಬಿಕಾಮನ್ಯೇ ಯಾನ್ತ್ಯನ್ಯೇ ಶಿಬಿಕಾಗತಾಃ ॥೪೧॥

ಕರ್ಮಗಳಿಗೆ ಸಂಬಂಧಿಸಿದ ಫಲಗಳಲ್ಲಿಯೂ ವಿಶೇಷವಾದ ವೈಪರೀತ್ಯವು ಕಂಡುಬರುತ್ತದೆ. ಕರ್ಮಫಲದ ಪರಿಣಾಮವಾಗಿ ಕೆಲವರು ಪಲ್ಲಕ್ಕಿಗಳನ್ನು ಹೊತ್ತು ತಿರುಗುತ್ತಾರೆ. ಮತ್ತೆ ಕೆಲವರು ಅದೇ ಪಲ್ಲಕ್ಕಿಗಳಲ್ಲಿ ಕುಳಿತು ಸಂಚರಿಸುತ್ತಾರೆ.

ಸರ್ವೇಷಾಮೃದ್ಧಿಕಾಮಾನಾಮನ್ಯೇ ರಥಪುರಃಸರಾಃ ।
ಮನುಷ್ಯಾಶ್ಚ ಗತಸ್ತ್ರೀಕಾಃ ಶತಶೋ ವಿವಿಧಸ್ತ್ರಿಯಃ ॥೪೨॥

ಎಲ್ಲ ಮನುಷ್ಯರೂ ಐಶ್ವರ್ಯಸಮೃದ್ಧಿಯನ್ನು ಸ್ವಾಭಾವಿಕವಾಗಿಯೇ

ಅಭಿಲಾಷಿಸುತ್ತಾರೆ. ಆದರೆ ಹಾಗೆ ಆಶಿಸುವವರಲ್ಲಿ ಕೆಲವರು ಮಾತ್ರವೇ ರಥದಲ್ಲಿ ಕುಳಿತು ಹೋಗುತ್ತಾರೆ. ಕೆಲವರಿಗೆ ಸ್ತ್ರೀಸೌಖ್ಯವೇ ಇರುವುದಿಲ್ಲ. ನೂರಾರು ಮನುಷ್ಯರು ವಿಧ-ವಿಧವಾದ ಸ್ತ್ರೀಯರನ್ನು ಪಡೆದು ಕೊಂಡಿರುತ್ತಾರೆ.

ದ್ವನ್ದ್ವಾರಾಮೇಷು ಭೂತೇಷು ಗಚ್ಛನ್ತ್ಯೇಕೈಕಶೋ ನರಾಃ ।
ಇದಮನ್ಯತ್ಪದಂ ಪಶ್ಯ ಮಾತ್ರ ಮೋಹಂ ಕರಿಷ್ಯಸಿ ॥೪೩॥

ಪ್ರಾಣಿಗಳೆಲ್ಲವೂ (ಮನುಷ್ಯರೆಲ್ಲರೂ) ಸುಖ-ದುಃಖಾದಿ ದ್ವಂದ್ವ ಗಳಲ್ಲಿಯೇ ರಮಿಸುತ್ತಿರುತ್ತಾರೆ. ಒಬ್ಬನು ದುಃಖವನ್ನು ಅನುಭವಿಸುತ್ತಿದ್ದರೆ ಮತ್ತೊಬ್ಬನು ಸುಖವನ್ನು ಅನುಭವಿಸುತ್ತಿರುತ್ತಾನೆ. ಆದರೆ ಬ್ರಹ್ಮಪದ ವೆಂಬುದು ಯಾವುದಿರುವುದೋ–ಅದು ಈ ದ್ವಂದ್ವಗಳಿಗಿಂತಲೂ ಭಿನ್ನ ವಾದುದು ಮತ್ತು ವಿಲಕ್ಷಣವಾದುದು. ಈ ವಿಷಯದಲ್ಲಿ ನೀನು ವಿಮೋಹಗೊಳ್ಳಬೇಡ.

ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ ।
ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತತ್ತ್ಯಜ ॥೪೪॥

ಧರ್ಮಾಧರ್ಮಗಳನ್ನು ತ್ಯಜಿಸು. ಸತ್ಯಾನೃತಗಳನ್ನೂ ತ್ಯಜಿಸು. ಸತ್ಯಾನೃತಗಳನ್ನು ತ್ಯಜಿಸಿ ಯಾವ ಮನಸ್ಸಿನಿಂದ ಇವುಗಳನ್ನು ತ್ಯಜಿ ಸಿದೆಯೋ –ಆ ಮನಸ್ಸನ್ನೂ ತ್ಯಜಿಸು.

ಏತತ್ತೇ ಪರಮಂ ಗುಹ್ಯಮಾಖ್ಯಾತಮೃಷಿಸತ್ತಮ ।
ಯೇನ ದೇವಾಃ ಪರಿತ್ಯಜ್ಯ ಮರ್ತ್ಯಲೋಕಂ ದಿವಂ ಗತಾಃ ॥೪೫॥

ಋಷಿಶ್ರೇಷ್ಠನೇ! ಯಾವ ಆಖ್ಯಾನವನ್ನು ಕೇಳಿ ದೇವತೆಗಳು ಮನುಷ್ಯ ಲೋಕವನ್ನು ತ್ಯಜಿಸಿ ಸ್ವರ್ಗಕ್ಕೆ ಹೋದರೋ–ಅಂತಹ ಅತ್ಯಂತ ರಹಸ್ಯವಾದ ಈ ಆಖ್ಯಾನವನ್ನು ನಿನಗೆ ಹೇಳಿದ್ದೇನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ನಾರದರ ಮಾತನ್ನು ಕೇಳಿ ಮಹಾಬುದ್ಧಿಶಾಲಿಯಾದ,

ಧೀರನಾದ ಶುಕನು ಮನಸ್ಸಿನಲ್ಲಿಯೇ ಬಹಳವಾಗಿ ಯೋಚಿಸಿದನು. ಆದರೆ ಅವನು ಯಾವ ನಿರ್ಧಾರಕ್ಕೂ ಬರಲು ಸಮರ್ಥನಾಗಲಿಲ್ಲ.

ಪುತ್ರದಾರೈರ್ಮಹಾನ್ಕ್ಲೇಶೋ ವಿದ್ಯಾಮ್ನಾಯೇ ಮಹಾಞ್ಛ್ರಮಃ ।
ಕಿಂ ನು ಸ್ಯಾಚ್ಛಾಶ್ವತಂ ಸ್ಥಾನಮಲ್ಪಕ್ಲೇಶಂ ಮಹೋದಯಮ್ ॥೪೭॥

ಶುಕನು ತನ್ನಲ್ಲಿಯೇ ಹೀಗೆ ಯೋಚಿಸಿದನು– 'ಹೆಂಡತಿ-ಮಕ್ಕಳಿಂದ ಮಹಾಕ್ಲೇಶವೇ ಪ್ರಾಪ್ತವಾಗುತ್ತದೆ. ವೇದಾದಿವಿದ್ಯಾಲಾಭವೂ ಶ್ರಮಸಾಧ್ಯ ವಾದುದು. ಅಲ್ಪಕ್ಲೇಶದಿಂದ ಮಹತ್ತರವಾದ ಅಭ್ಯುದಯವಾಗುವಂತಹ ಶಾಶ್ವತವಾದ ಪರಮಪದವನ್ನು ಪಡೆಯಬಹುದಾದ ಉಪಾಯವು ಯಾವುದು?'

ತತೋ ಮುಹೂರ್ತಂ ಸಂಚಿನ್ತ್ಯ ನಿಶ್ಚಿತಾಂ ಗತಿಮಾತ್ಮನಃ ।
ಪರಾವರಜ್ಞೋ ಧರ್ಮಸ್ಯ ಪರಾಂ ನೈಃಶ್ರೇಯಸೀಂ ಗತಿಮ್ ॥೪೮॥

ಬಳಿಕ ಮುಹೂರ್ತಕಾಲ ತಾನು ನಿಶ್ಚಿತವಾಗಿ ಹೊಂದಬೇಕಾದ ಪರಮಗತಿಯು ಯಾವುದೆಂಬುದನ್ನು ಯೋಚಿಸಿ, ಧರ್ಮದ ಉತ್ಕೃಷ್ಟತೆ ಯನ್ನು ತಿಳಿದಿದ್ದ ಶುಕನು ಶ್ರೇಷ್ಠವಾದ ನಿಃಶ್ರೇಯಸದ (ಮುಕ್ತಿಯ) ಮಾರ್ಗವು ಯಾವುದೆಂಬುದನ್ನು ತಿಳಿದುಕೊಂಡನು.

ಕಥಂ ತ್ವಹಮಸಂಶ್ಲಿಷ್ಟೋ ಗಚ್ಛೇಯಂ ಗತಿಮುತ್ತಮಾಮ್ ।
ನಾವರ್ತೇಯಂ ಯಥಾ ಭೂಯೋ ಯೋನಿಸಂಕರಸಾಗರೇ ॥೪೯॥

ಯಾವುದರಲ್ಲಿಯೂ ಸಂಸಕ್ತನಾಗದೇ ಯಾವ ರೀತಿಯಲ್ಲಿಯೂ ಈ ಸಂಸಾರಸಾಗರಕ್ಕೆ ಪುನಃ ಹಿಂದಿರುಗಿ ಬರದಂತಹ ಪರಮಗತಿಯನ್ನು ನಾನು ಹೇಗೆ ಹೊಂದಲಿ?

ಪರಂ ಭಾವಂ ಹಿ ಕಾಂಕ್ಷಾಮಿ ಯತ್ರ ನಾವರ್ತತೇ ಪುನಃ ।
ಸರ್ವಸಙ್ಗಾನ್ಪರಿತ್ಯಜ್ಯ ನಿಶ್ಚಿತೋ ಮನಸಾ ಗತಿಮ್ ॥೫೦॥

ಎಲ್ಲಿಗೆ ಹೋಗುವುದರಿಂದ ಜೀವನು ಪುನಃ ಈ ಸಂಸಾರಸಾಗರಕ್ಕೆ ಹಿಂದಿರುಗಬೇಕಾಗುವುದಿಲ್ಲವೋ–ಅಂತಹ ಪರಮಭಾವವನ್ನು ಹೊಂದಲು

ಅಪೇಕ್ಷಿಸುತ್ತೇನೆ. ಎಲ್ಲ ಪ್ರಕಾರವಾದ ಆಸಕ್ತಿಗಳನ್ನೂ ಪರಿತ್ಯಜಿಸಿ ಮನಸ್ಸಿನ ಮೂಲಕವಾಗಿ ಉತ್ತಮವಾದ ಗತಿಯನ್ನು ಪಡೆಯಲು ನಿಶ್ಚಯಿಸಿದ್ದೇನೆ.

ತತ್ರ ಯಾಸ್ಯಾಮಿ ಯತ್ರಾತ್ಮಾ ಶಮಂ ಮೇಽಧಿಗಮಿಷ್ಯತಿ ।
ಅಕ್ಷಯಶ್ಚಾವ್ಯಯಶ್ಚೈವ ಯತ್ರ ಸ್ಥಾಸ್ಯಾಮಿ ಶಾಶ್ವತಃ ॥೫೧॥

ನನ್ನ ಆತ್ಮವು ಪರಮಶಾಂತಿಯನ್ನು ಎಲ್ಲಿ ಪಡೆದುಕೊಳ್ಳುವುದೋ ಅಲ್ಲಿಗೇ ನಾನು ಹೋಗುತ್ತೇನೆ. ಅಲ್ಲಿ ನಾನು ಅಕ್ಷಯನೂ, ಅವ್ಯಯನೂ ಮತ್ತು ಶಾಶ್ವತನೂ ಆಗಿರುತ್ತೇನೆ.

ನ ತು ಯೋಗಮೃತೇ ಶಕ್ಯಾ ಪ್ರಾಪ್ತುಂ ಸಾ ಪರಮಾ ಗತಿಃ ।
ಅವಬನ್ಧೋ ಹಿ ಬುದ್ಧಸ್ಯ ಕರ್ಮಭಿರ್ನೋಪಪದ್ಯತೇ ॥೫೨॥

ಯೋಗಮಾರ್ಗದ ಹೊರತಾಗಿ ಆ ಪರಮಗತಿಯನ್ನು ಹೊಂದಲು ಸಾಧ್ಯವಾಗುವುದಿಲ್ಲ. ಬುದ್ಧಿವಂತನಾದವನು ಕರ್ಮಪಾಶಗಳಿಂದ ಬಂಧಿತನಾಗುವುದು ಉಚಿತವಲ್ಲ.

ತಸ್ಮಾದ್ಯೋಗಂ ಸಮಾಸ್ಥಾಯ ತ್ಯಕ್ತ್ವಾ ಗೃಹಕಲೇವರಮ್ ।
ವಾಯುಭೂತಃ ಪ್ರವೇಕ್ಷ್ಯಾಮಿ ತೇಜೋರಾಶಿಂ ದಿವಾಕರಮ್ ॥೫೩॥

ಆದುದರಿಂದ ಯೋಗವನ್ನೇ ಆಶ್ರಯಿಸಿ, ಗೃಹರೂಪವಾಗಿರುವ ಈ ದೇಹವನ್ನು ಪರಿತ್ಯಜಿಸಿ, ವಾಯುರೂಪನಾಗಿ ತೇಜೋರಾಶಿಯಾದ ಸೂರ್ಯಮಂಡಲವನ್ನು ಪ್ರವೇಶಿಸುತ್ತೇನೆ.

ನ ಹ್ಯೇಷ ಕ್ಷಯತಾಂ ಯಾತಿ ಸೋಮಃ ಸುರಗಣೈರ್ಯಥಾ ।
ಕಮ್ಪಿತಃ ಪತತೇ ಭೂಮಿಂ ಪುನಶ್ಚೈವಾಧಿರೋಹತಿ ॥೫೪॥

ದೇವತೆಗಳು ಚಂದ್ರನ ಅಮೃತವನ್ನು ಹೀರಿಕೊಂಡನಂತರ ಚಂದ್ರನು ಕ್ಷೀಣಿಸುವಂತೆ ಸೂರ್ಯನು ಕ್ಷಯವನ್ನು ಹೊಂದುವುದಿಲ್ಲ. ಧೂಮ ಮಾರ್ಗದಲ್ಲಿ ಅಥವಾ ದಕ್ಷಿಣಾಯನಮಾರ್ಗದಲ್ಲಿ ಚಂದ್ರಮಂಡಲಕ್ಕೆ ಹೋದ ಜೀವನ ಕರ್ಮಫಲವು ಮುಗಿದೊಡನೆಯೇ ನಡುಗುತ್ತಾ ಭೂಮಿಯ ಮೇಲೆ ಬೀಳುತ್ತಾನೆ. (ಪುನರ್ಜನ್ಮವನ್ನು ಪಡೆಯುತ್ತಾನೆ.) ಭೂಮಿಯಲ್ಲಿ ಪುನಃ ಕರ್ಮಗಳನ್ನು ಮಾಡಿ ಚಂದ್ರಲೋಕಕ್ಕೆ ಹೋಗುತ್ತಾನೆ. ಸೂರ್ಯಮಂಡ

ಲಕ್ಕೆ ಹೋಗುವವನಿಗೆ ಪುನರಾಗಮನವಿಲ್ಲವೇ ಹೊರತು ಚಂದ್ರಮಂಡಲಕ್ಕೆ ಹೋಗುವವನಿಗೆ ಪುನರಾಗಮನ-ನಿರ್ಗಮನಗಳು ಇದ್ದೇ ಇರುತ್ತವೆ.)

ಕ್ಷೀಯತೇ ಹಿ ಸದಾ ಸೋಮಃ ಪುನಶ್ಚೈವಾಭಿಪೂರ್ಯತೇ ।
ನೇಚ್ಛಾಮ್ಯೇವಂ ವಿದಿತ್ವೈತೇ ಹ್ರಾಸವೃದ್ಧೀ ಪುನಃ ಪುನಃ ॥೫೫॥

ಚಂದ್ರನು ಯಾವಾಗಲೂ ಕ್ಷೀಣಿಸುತ್ತಿರುತ್ತಾನೆ. ಪುನಃ ವೃದ್ಧಿಯನ್ನೂ ಹೊಂದುತ್ತಿರುತ್ತಾನೆ. ಚಂದ್ರನಿಗೆ ಪುನಃ-ಪುನಃ ಕ್ಷಯ-ವೃದ್ಧಿಗಳಾಗುತ್ತಿರುವುದನ್ನು ತಿಳಿದಿರುವ ನಾನು ಚಂದ್ರಲೋಕಕ್ಕೆ ಹೋಗಲು ಇಚ್ಛಿಪಡುವುದಿಲ್ಲ. (ಚಂದ್ರನ ಸ್ವಭಾವಾನುಗುಣವಾಗಿ ಅಲ್ಲಿಗೆ ಹೋಗುವವರಿಗೂ ಕ್ಷಯ-ವೃದ್ಧಿಗಳು ನಿರಂತರವಾಗಿ ಆಗುತ್ತಲೇ ಇರುತ್ತವೆ. ಸಂಸಾರಚಕ್ರದಲ್ಲಿ ಬಿದ್ದು ಏಳುತ್ತಿರುತ್ತಾರೆ.)

ರವಿಸ್ತು ಸಂತಾಪಯತೇ ಲೋಕಾನ್ರಶ್ಮಿಭಿರುಲ್ಬಣೈಃ ।
ಸರ್ವತಸ್ತೇಜ ಆದತ್ತೇ ನಿತ್ಯಮಕ್ಷಯಮಣ್ಡಲಃ ॥೫೬॥

ಸೂರ್ಯನಾದರೋ ತನ್ನ ಪ್ರಖರವಾದ ಕಿರಣಗಳಿಂದ ಸಮಸ್ತ ಲೋಕಗಳನ್ನೂ ಸಂತಾಪಗೊಳಿಸುತ್ತಾನೆ. ಅವನು ಜಗತ್ತಿನ ಎಲ್ಲ ಕಡೆಗಳಿಂದಲೂ ತೇಜಸ್ಸನ್ನು ಸಂಗ್ರಹಿಸುತ್ತಾನೆ. (ಅವನ ತೇಜಸ್ಸು ಎಂದಿಗೂ ಕ್ಷೀಣಿಸುವುದಿಲ್ಲ.) ಆದುದರಿಂದ ಅವನ ಮಂಡಲವು ಎಂದಿಗೂ ಅಕ್ಷಯವಾಗಿಯೇ ಇರುತ್ತದೆ.

ಅತೋ ಮೇ ರೋಚತೇ ಗನ್ತುಮಾದಿತ್ಯಂ ದೀಪ್ತತೇಜಸಮ್ ।
ಅತ್ರ ವತ್ಸ್ಯಾಮಿ ದುರ್ಧರ್ಷೋ ನಿಃಶಙ್ಕೇನಾನ್ತರಾತ್ಮನಾ ॥೫೭॥

ಆದುದರಿಂದ ಪ್ರದೀಪ್ತವಾದ ತೇಜಸ್ಸಿನಿಂದ ಕೂಡಿರುವ ಆದಿತ್ಯಮಂಡಲಕ್ಕೆ ಹೋಗುವುದೇ ನನಗೆ ಸಮೀಚೀನವಾಗಿ ಕಾಣುತ್ತದೆ. ಶಂಕಾರಹಿತವಾದ ಮನಸ್ಸಿನಿಂದ ಕೂಡಿರುವ ನಾನು ಯಾರಿಂದಲೂ ಎದುರಿಸಲು ಅಸಾಧ್ಯನಾಗಿ ಅಲ್ಲಿ ವಾಸಮಾಡುತ್ತೇನೆ.

ಸೂರ್ಯಸ್ಯ ಸದನೇ ಚಾಹಂ ನಿಕ್ಷಿಪ್ಯೇದಂ ಕಲೇವರಮ್ ।
ಋಷಿಭಿಃ ಸಹ ಯಾಸ್ಯಾಮಿ ಸೌರಂ ತೇಜೋಽತಿದುಃಸಹಮ್ ॥೫೮॥

ನಾನು ಈ ನನ್ನ ಶರೀರವನ್ನು ಸೂರ್ಯಲೋಕದಲ್ಲಿಟ್ಟು ಅಲ್ಲಿರುವ ಋಷಿಗಳೊಡನೆ ಅತಿದುಸ್ಸಹವಾದ ಸೂರ್ಯನ ತೇಜೋರಾಶಿಯನ್ನು ಪ್ರವೇಶಿಸುತ್ತೇನೆ.

ಆಪೃಚ್ಛಾಮಿ ನಗಾನ್ನಾಗಾನ್ಗಿರಿಮುರ್ವೀಂ ದಿಶೋ ದಿವಮ್ ।
ದೇವದಾನವಗನ್ಧರ್ವಾನ್ಪಿಶಾಚೋರಗರಾಕ್ಷಸಾನ್ ॥೫೯॥

ಸೂರ್ಯಲೋಕಕ್ಕೆ ಹೋಗುವ ಸಲುವಾಗಿ ನಾನು ವೃಕ್ಷಗಳು, ಪರ್ವತಗಳು, ಬೆಟ್ಟಗಳು, ಭೂಮಿ, ದಶದಿಕ್ಕುಗಳು, ಸ್ವರ್ಗ, ದೇವ-ದಾನವ ಗಂಧರ್ವ-ಪಿಶಾಚೋರಗ-ರಾಕ್ಷಸರು –ಇವರೆಲ್ಲರ ಅನುಜ್ಞೆಯನ್ನೂ ಕೇಳುತ್ತೇನೆ.

ಲೋಕೇಷು ಸರ್ವಭೂತಾನಿ ಪ್ರವೇಕ್ಷ್ಯಾಮಿ ನ ಸಂಶಯಃ ।
ಪಶ್ಯನ್ತು ಯೋಗವೀರ್ಯಂ ಮೇ ಸರ್ವೇ ದೇವಾಃ ಸಹರ್ಷಿಭಿಃ ॥

ಈಗ ನಾನು ಪ್ರಪಂಚದಲ್ಲಿರುವ ಸಕಲಪ್ರಾಣಿಗಳಲ್ಲಿಯೂ ಪ್ರವೇಶಿಸುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ. ಋಷಿಗಳಿಂದ ಯುಕ್ತರಾದ ಸರ್ವ ದೇವತೆಗಳೂ ನನ್ನ ಯೋಗಶಕ್ತಿಯನ್ನು ನೋಡಲಿ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಶುಕನು ಹೀಗೆ ನಿಶ್ಚಯಿಸಿ ಸೂರ್ಯಲೋಕಕ್ಕೆ ಹೋಗಲು ಲೋಕವಿಖ್ಯಾತರಾದ ದೇವರ್ಷಿಗಳಾದ ನಾರದರ ಅನುಜ್ಞೆಯನ್ನು ಪ್ರಾರ್ಥಿಸಿದನು. ಅವರಿಂದ ಅನುಜ್ಞೆಯನ್ನು ಪಡೆದು ತಂದೆಯವರ ಬಳಿಗೆ ಹೋದನು. ಶುಕನು ಮಹಾತ್ಮರಾದ, ಮುನಿಗಳಾದ ಕೃಷ್ಣದ್ವೈಪಾಯನರನ್ನು ಪ್ರದಕ್ಷಿಣೆಮಾಡಿ ಅವರಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ, ಸೂರ್ಯಲೋಕಕ್ಕೆ ಹೋಗಲು ಅವರಿಂದಲೂ ಅನುಜ್ಞೆಯನ್ನು ಕೇಳಿದನು. ಮಹಾತ್ಮರಾದ ವ್ಯಾಸಮಹರ್ಷಿಗಳು ಶುಕನು ಹೇಳಿದ ಮಾತನ್ನು ಕೇಳಿ ಪರಮಪ್ರೀತರಾಗಿ ಹೇಳಿದರು :

ಭೋ ಭೋ ಪುತ್ರ ಸ್ಥೀಯತಾಂ ತಾವದದ್ಯ
ಯಾವಚ್ಚಕ್ಷುಃ ಪ್ರೀಣಯಾಮಿ ತ್ವದರ್ಥೇ ॥೬೩॥

"ಮಗು! ಶುಕ! ನಿಲ್ಲು, ನಿನ್ನನ್ನು ನೋಡುತ್ತಾ ನನ್ನ ಕಣ್ಣುಗಳಿಗೆ ಹಬ್ಬವನ್ನು ಮಾಡಿಕೊಳ್ಳುತ್ತೇನೆ. ಅಲ್ಲಿಯವರೆಗೂ ನೀನು ಇಲ್ಲಿಯೇ ಇರು."

ಆದರೆ ಶುಕನಿಗೆ ಯಾವ ವಿಧವಾದ ಅಪೇಕ್ಷೆಯೂ ಇರಲಿಲ್ಲ. ಅವನಿಗೆ ಸ್ನೇಹಬಂಧನವೇ ಇರಲಿಲ್ಲ. ಎಲ್ಲದರಲ್ಲಿಯೂ ನಿರಾಸಕ್ತನಾಗಿದ್ದನು. ತತ್ತ್ವದ ವಿಷಯದಲ್ಲಂತೂ ಅವನಿಗೆ ಯಾವ ವಿಧವಾದ ಸಂದೇಹವೂ ಇರಲಿಲ್ಲ. ಮೋಕ್ಷವನ್ನೇ ಚಿಂತಿಸುತ್ತಾ ಅಲ್ಲಿಂದ ಹೊರಟುಹೋಗಲು ನಿಶ್ಚಯಿಸಿದನು. ಮುನಿಶ್ರೇಷ್ಠನಾದ ಶುಕನು ತಂದೆಯನ್ನು ಪರಿತ್ಯಜಿಸಿ ಸಿದ್ಧರ ಸಮೂಹದಿಂದ ಸಂಸೇವಿತವಾಗಿದ್ದ, ವಿಶಾಲವಾದ ಕೈಲಾಸಪರ್ವತದ ಕಡೆಗೆ ಹೊರಟೇ ಹೋದನು."

ಅ೩೧ನೆಯ ಅಧ್ಯಾಯವು ಮುಗಿಯಿತು.

೩೩೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶುಕದೇವನ ಊರ್ಧ್ವಗತಿಯ ವರ್ಣನೆ

ಭೀಷ್ಮನು ಹೇಳುತ್ತಾನೆ :

ಗಿರಿಶೃಙ್ಗಂ ಸಮಾರುಹ್ಯ ಸುತೋ ವ್ಯಾಸಸ್ಯ ಭಾರತ ।
ಸಮೇ ದೇಶೇ ವಿವಿಕ್ತೇ ಸ ನಿಃಶಲಾಕ ಉಪಾವಿಶತ್ ॥೧॥

"ಯುಧಿಷ್ಠಿರ! ವ್ಯಾಸರ ಮಗನಾದ ಶುಕನು ಕೈಲಾಸಶಿಖರವನ್ನು ಹತ್ತಿ, ಅಲ್ಲಿ ಸಮತಟ್ಟಾಗಿದ್ದ, ನಿರ್ಜನವಾಗಿದ್ದ, ತೃಣರಹಿತವಾಗಿದ್ದ, ಮತ್ತು ಪರಿಶುದ್ಧವಾಗಿದ್ದ ಸ್ಥಳದಲ್ಲಿ ಕುಳಿತುಕೊಂಡನು. ಅನಂತರ ಕ್ರಮಯೋಗವನ್ನು ತಿಳಿದಿದ್ದ ಶುಕನು ವಿಧಿಗೆ ಅನುಸಾರವಾಗಿ ಪಾದಗಳಿಂದ ಹಿಡಿದು ಸರ್ವಾವಯವಗಳಲ್ಲಿಯೂ ಕ್ರಮವಾಗಿ ಆತ್ಮವನ್ನು ಧಾರಣೆಮಾಡಿಕೊಂಡನು. ಸ್ವಲ್ಪ ಹೊತ್ತಿನಲ್ಲಿಯೇ ಸೂರ್ಯೋದಯವಾಯಿತು. ಜ್ಞಾನಿಯಾದ ಶುಕದೇವನು ಕೈ-ಕಾಲುಗಳನ್ನು ಸರಿಯಾಗಿಟ್ಟುಕೊಂಡು ವಿನೀತನಂತೆ ಪೂರ್ವಾಭಿ

ಮುಖವಾಗಿ ಕುಳಿತುಕೊಂಡನು. ಶುಕನು ಯೋಗಯುಕ್ತನಾಗಿ ಆತ್ಮಾನು ಸಂಧಾನವನ್ನು ಪ್ರಾರಂಭಿಸಿದ ಸ್ಥಳದಲ್ಲಿ ಪಕ್ಷಿಗಳ ಸಮುದಾಯವಾಗಲೀ, ಯಾವುದೇ ಶಬ್ದವಾಗಲೀ, ಮನಸ್ಸನ್ನು ಆಕರ್ಷಿಸುವ ಯಾವುದೇ ದೃಶ್ಯವಾಗಲೀ ಇರಲಿಲ್ಲ. ಆ ಸಮಯದಲ್ಲಿ ಶುಕದೇವನು ಸರ್ವಪ್ರಕಾರವಾದ ಸಂಗಗಳಿಂದಲೂ ರಹಿತನಾದ ಶುದ್ಧಾತ್ಮನನ್ನು ತನ್ನ ಹೃದಯಗಹ್ವರದಲ್ಲಿ ಕಂಡುಕೊಂಡನು. ಹೀಗೆ ಪರತತ್ತ್ವವನ್ನು ಸಾಕ್ಷಾತ್ಕಾರಮಾಡಿಕೊಂಡನಂತರ ಶುಕನು ಗಟ್ಟಿಯಾಗಿ ನಗತೊಡಗಿದನು. ಮೋಕ್ಷಮಾರ್ಗವನ್ನು ಪಡೆದು ಕೊಳ್ಳಲು ಪುನಃ ಯೋಗವನ್ನೇ ಆಶ್ರಯಿಸಿ ಮಹಾಯೋಗೇಶ್ವರನಾಗಿ ಆಕಾಶವನ್ನೇ ಅತಿಕ್ರಮಿಸಿ ಹೋಗಲು ಸಿದ್ಧನಾದನು. ಆ ವೇಳೆಗೆ ಸರಿಯಾಗಿ ಆಗಮಿಸಿದ ದೇವರ್ಷಿಗಳಾದ ನಾರದರಿಗೆ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ಅವರಿಗೆ ತನ್ನ ಯೋಗಸಿದ್ಧಿಯ ವಿಷಯವನ್ನು ಹೇಳಿದನು :

ದೃಷ್ಟೋ ಮಾರ್ಗಃ ಪ್ರವೃತ್ತೋಽಸ್ಮಿ ಸ್ವಸ್ತಿ ತೇಽಸ್ತು ತಪೋಧನ ।
ತ್ವತ್ಪ್ರಸಾದಾದ್ಗಮಿಷ್ಯಾಮಿ ಗತಿಮಿಷ್ಟಾಂ ಮಹಾದ್ಯುತೇ ॥೮॥

"ತಪೋಧನರೇ! ಮಹಾದ್ಯುತಿಮಂತರೇ! ನಿಮಗೆ ಮಂಗಳವಾಗಲಿ. ತಮ್ಮ ಅನುಗ್ರಹದಿಂದಾಗಿ ಮೋಕ್ಷಮಾರ್ಗವು ಗೋಚರಿಸಿತು. ಈಗ ನಾನು ಅಲ್ಲಿಗೇ ಹೊರಡುವವನಿದ್ದೇನೆ. ಅಭೀಷ್ಟವಾದ ಮೋಕ್ಷಮಾರ್ಗವನ್ನು ಹಿಡಿದು ಹೋಗುತ್ತೇನೆ."

ಯುಧಿಷ್ಠಿರ! ವ್ಯಾಸರ ಮಗನಾದ ಶುಕನು ನಾರದರೊಡನೆ ಹೀಗೆ ಹೇಳಿ ಅವರ ಅನುಜ್ಞೆಯನ್ನು ಪಡೆದು ಪುನಃ ಅವರಿಗೆ ಅಭಿವಾದನಪೂರ್ವಕ ವಾಗಿ ನಮಸ್ಕಾರವನ್ನು ಮಾಡಿ ಯೋಗವನ್ನಾಶ್ರಯಿಸಿ ಅಂತರಿಕ್ಷವನ್ನು ಪ್ರವೇಶಿಸಿದನು. ಕೈಲಾಸಶಿಖರದಿಂದ ಮೇಲೆ ಹೋಗಿ ಆಕಾಶವನ್ನು ಸೇರಿದನು. ಸುನಿಶ್ಚಿತವಾದ ಜ್ಞಾನವನ್ನು ಪಡೆದಿದ್ದ, ಶ್ರೀಮಂತನಾದ ಶುಕನು ವಾಯುಸ್ವರೂಪನಾಗಿ ಆಕಾಶದಲ್ಲಿಯೇ ಸಂಚರಿಸತೊಡಗಿದನು. ಗರುಡನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ, ಮನೋವೇಗ-ವಾಯು ವೇಗಗಳಿಗೆ ಸಮಾನವಾದ ವೇಗದಿಂದ ಕೂಡಿದ್ದ, ದ್ವಿಜಶ್ರೇಷ್ಠನಾದ ಶುಕನು ಮೇಲೆ ಹೋಗುತ್ತಿರುವುದನ್ನು ಸಕಲಪ್ರಾಣಿಗಳೂ ನೋಡಿದುವು.

ಸೂರ್ಯಾಗ್ನಿಗಳ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ಶುಕದೇವನು ನಿಶ್ಚಯಾತ್ಮಕವಾದ ಬುದ್ಧಿಯ ಮೂಲಕವಾಗಿ ಮೂರು ಲೋಕಗಳನ್ನೂ ಆತ್ಮಭಾವದಿಂದ ನೋಡುತ್ತಾ ಬಹಳ ದೂರದವರೆಗೆ ಪ್ರಯಾಣಮಾಡಿದನು. ಮೋಕ್ಷಮಾರ್ಗಗಮನದಲ್ಲಿಯೇ ಏಕಮನಸ್ಕ ನಾಗಿದ್ದ, ಅವ್ಯಗ್ರನಾಗಿದ್ದ, ಭಯರಹಿತನಾಗಿದ್ದ ಶುಕನು ಮುಂದು-ಮುಂದಕ್ಕೆ ಹೋಗುತ್ತಿರುವುದನ್ನು ಸ್ಥಾವರ-ಜಂಗಮಾದಿ ಸರ್ವಪ್ರಾಣಿಗಳೂ ನೋಡಿದುವು. ಎಲ್ಲ ಪ್ರಾಣಿಗಳೂ ಶಕ್ತಿಯಿದ್ದಷ್ಟು ನ್ಯಾಯೋಚಿತವಾಗಿ ಅವನ ಪೂಜೆಯನ್ನು ಮಾಡಿದುವು. ದೇವತೆಗಳು ದಿವ್ಯವಾದ ಪುಷ್ಪವೃಷ್ಟಿಯನ್ನು ಶುಕನ ಮೇಲೆ ಸುರಿಸಿದರು. ಶುಕದೇವನು ಏಕಮನಸ್ಕನಾಗಿ ಹೋಗುತ್ತಿರುವುದನ್ನು ನೋಡಿ ಎಲ್ಲ ಗಂಧರ್ವರೂ ಅಪ್ಸರೆಯರೂ ವಿಸ್ಮಿತರಾದರು. ಸಿದ್ಧಿಯನ್ನು ಪಡೆದಿದ್ದ ಋಷಿಗಳೂ ಆಶ್ಚರ್ಯಚಕಿತರಾದ ರಲ್ಲದೇ–"ಅಂತರಿಕ್ಷಮಾರ್ಗದಲ್ಲಿ ಹೋಗುತ್ತಿರುವ, ತಪಸ್ಸಿನಿಂದ ಸಿದ್ಧಿಯನ್ನು ಪಡೆದಿರುವ ಇವನಾರು? ಇವನ ಶರೀರವು ಕೆಳಗಿದೆ. ಮುಖವು ಮೇಲ್ಮುಖವಾಗಿದೆ. ನಮ್ಮ ಕಣ್ಣುಗಳು ಬಲಾತ್ಕಾರವಾಗಿ ಇವನ ಕಡೆಗೇ ಸೆಳೆಯಲ್ಪಡುತ್ತಿವೆ"–ಎಂದು ಪರಸ್ಪರವಾಗಿ ಹೇಳಿಕೊಂಡರು. ಹೀಗೆ ಮೂರು ಲೋಕಗಳಲ್ಲಿಯೂ ವಿಖ್ಯಾತಿಯನ್ನು ಪಡೆದ ಪರಮಧರ್ಮಾತ್ಮನಾದ ಶುಕದೇವನು ಪೂರ್ವದಿಕ್ಕಿಗೆ ಮುಖವನ್ನು ಮಾಡಿಕೊಂಡು ಮೌನವಾಗಿ ಮುಂದೆಹೋದನು. ವಾಯುವೇಗ-ಮನೋವೇಗಗಳ ಗತಿಯಿಂದುಂಟಾದ ಶಬ್ದದಿಂದ ಆಕಾಶವನ್ನೇ ತುಂಬಿಬಿಟ್ಟಿರುವನೋ–ಎಂಬಂತೆ ಕಾಣುತ್ತಿದ್ದ, ತಮ್ಮ ಕಡೆಗೆ ರಭಸದಿಂದ ಬರುತ್ತಿದ್ದ ಶುಕನನ್ನು ಎಲ್ಲ ಅಪ್ಸರಸ್ತ್ರೀಯರೂ ನೋಡಿ ಗಾಬರಿಗೊಂಡ ಮನಸ್ಸಿನಿಂದ ಕೂಡಿದವರೂ ಮತ್ತು ಆಶ್ಚರ್ಯಚಕಿತರೂ ಆದರು. ಪಂಚಚೂಡಳೇ ಮೊದಲಾದ ಅಪ್ಸರೆಯರು ವಿಕಸಿತವಾದ ಕಣ್ಣುಗಳಿಂದ ಶುಕನನ್ನು ನೋಡುತ್ತಾ ಪರಸ್ಪರವಾಗಿ ಈ ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು :

"ಉತ್ತಮವಾದ ಗತಿಯನ್ನು ಆಶ್ರಯಿಸಿ ಯಾವ ದೇವತೆಯು ಇತ್ತ ಕಡೆಗೆ ಬರುತ್ತಿದೆ? ಇದು ಸುನಿಶ್ಚಿತವಾದ ಜ್ಞಾನದಿಂದ ಕೂಡಿ ಸಕಲವಿಧವಾದ

ಬಂಧನಗಳಿಂದಲೂ ಮತ್ತು ಸಂಶಯಗಳಿಂದಲೂ ಮುಕ್ತವಾಗಿರುವಂತೆ ಕಾಣುತ್ತಿದೆ. ಇದರ ಮನಸ್ಸಿನಲ್ಲಿ ಆಶೆಯೆಂಬುದೇ ಇಲ್ಲವೆಂದು ತೋರುತ್ತದೆ.”

ಅನಂತರ ಶುಕನು ಸ್ವಲ್ಪಹೊತ್ತಿನಲ್ಲಿಯೇ ಆಕಾಶಮಾರ್ಗವಾಗಿ ಊರ್ವಶೀ, ಪೂರ್ವಚಿತ್ತಿಯರೆಂಬ ಅಪ್ಸರೆಯರಿಂದ ನಿತ್ಯವೂ ಆಶ್ರಯಿಸಲ್ಪಡುತ್ತಿದ್ದ 'ಮಲಯ' ಎಂಬ ಹೆಸರಿನ ಪರ್ವತದ ಕಡೆಗೆ ಹೋದನು. ಬ್ರಹ್ಮರ್ಷಿಯ ಪುತ್ರನಾದ ಶುಕನ ಆಗಮನವನ್ನು ನೋಡಿ ಊರ್ವಶೀ-ಪೂರ್ವಚಿತ್ತಿಯರು ಬಹಳವಾಗಿ ವಿಸ್ಮಯಗೊಂಡು ತಮ್ಮ-ತಮ್ಮಲ್ಲಿಯೇ ಹೀಗೆ ಮಾತನಾಡಿಕೊಂಡರು.

“ಎಂತಹ ಅಚ್ಚರಿಯಿದು! ವೇದಾಭ್ಯಾಸನಿರತನಾದ ಈ ಬ್ರಾಹ್ಮಣನಲ್ಲಿ ಎಂತಹ ಏಕಾಗ್ರವಾದ ಬುದ್ಧಿಯಿದೆ! ಪಿತೃಶುಶ್ರೂಷೆಯಿಂದ ಅತ್ಯಲ್ಪ ಕಾಲದಲ್ಲಿಯೇ ಇವನು ಉತ್ತಮೋತ್ತಮವಾದ ಬುದ್ಧಿಯನ್ನು ಪಡೆದುಕೊಂಡು ಚಂದ್ರನಂತೆ ನಭೋಮಂಡಲದಲ್ಲಿ ಸಂಚರಿಸುತ್ತಿದ್ದಾನೆ. ಇವನು ತಂದೆಯಲ್ಲಿ ವಿಶೇಷವಾದ ಭಕ್ತಿಯುಳ್ಳವನಾಗಿದ್ದನು. ದೃಢತಪಸ್ವಿಯು. ತಂದೆಗೆ ಅತ್ಯಂತಪ್ರೀತಿಪಾತ್ರನಾದ ಮಗನು. ವ್ಯಾಸರಿಗೆ ಯಾವಾಗಲೂ ಇವನ ಮೇಲೆಯೇ ಮನಸ್ಸಿದ್ದಿತು. ಅಂತಹ ವ್ಯಾಸರು ಇವನನ್ನು ಹೇಗೆ ಕಳುಹಿಸಿಕೊಟ್ಟರು?”

ಯುಧಿಷ್ಠಿರ! ಪರಮಧಾರ್ಮಿಕನಾದ ಶುಕನು ಊರ್ವಶಿಯು ಹೇಳಿದ ಮಾತನ್ನು ಕೇಳಿ ಎಲ್ಲ ದಿಕ್ಕುಗಳನ್ನೂ ನೋಡಿದನು. ಊರ್ವಶಿಯು ಹೇಳಿದ ಮಾತಿನಲ್ಲಿಯೇ ಶುಕನ ಮನಸ್ಸು ಲೀನವಾಗಿದ್ದಿತು. ಆಕಾಶ, ಪರ್ವತ-ಶೈಲ-ವನ-ಕಾನನಗಳಿಂದ ಯುಕ್ತವಾಗಿದ್ದ ಭೂಮಂಡಲ, ಸರೋವರಗಳು ಮತ್ತು ನದಿಗಳು–ಇವುಗಳೆಲ್ಲದರ ಕಡೆಗೂ ತನ್ನ ದೃಷ್ಟಿಯನ್ನು ಹರಿಸಿದನು. ಕೃಷ್ಣದ್ವೈಪಾಯನರ ಮಗನಾದ ಶುಕನು ಹಾಗೆ ನೋಡುತ್ತಿದ್ದಾಗಲೇ ಪರ್ವತ-ವನ-ಕಾನನಗಳ ಅಧಿದೇವತೆಗಳು ಬದ್ಧಾಂಜಲಿಗಳಾಗಿ ಎಲ್ಲ ಕಡೆಗಳಿಂದಲೂ ಆದರಪೂರ್ವಕವಾಗಿ ಶುಕನನ್ನು ನೋಡುತ್ತಿದ್ದರು. ಪರಮಧಾರ್ಮಿಕನಾದ ಶುಕನು ತನ್ನನ್ನೇ ಪ್ರೀತ್ಯಾದರಗಳಿಂದಲೂ ಬಹುಮಾನದಿಂದಲೂ ನೋಡುತ್ತಿದ್ದ ಗಿರಿ-ಪರ್ವತ-ಸರೋವರ-ಸರಿತ್ತುಗಳ ಅಧಿದೇವತೆಗಳನ್ನು ಕುರಿತು ಹೇಳಿದನು :

“ದೇವತೆಗಳೇ! ನಮ್ಮ ತಂದೆಯವರೇನಾದರೂ ‘ಶುಕ!’ ‘ಶುಕ!’ ಎಂದು ಕೂಗಿಕೊಂಡು ಇಲ್ಲಿಗೇ ಬಂದುದೇ ಆದರೆ–ನೀವೆಲ್ಲರೂ ಒಟ್ಟುಗೂಡಿ ಸಮಾಧಾನಕರವಾದ ಮಾತನ್ನು ನನ್ನ ತಂದೆಯೊಡನೆ ಹೇಳಬೇಕು. ಈ ನನ್ನ ಮಾತನ್ನು ಸ್ನೇಹದ ಕಾರಣದಿಂದ ನೀವೆಲ್ಲರೂ ನಡೆಸಿಕೊಡಬೇಕು.”

ಶುಕನ ಆ ಮಾತನ್ನು ಕೇಳಿ ದಿಕ್ಕುಗಳ, ಕಾನನಗಳ, ಸಮುದ್ರಗಳ, ನದಿಗಳ, ಪರ್ವತಗಳ ಎಲ್ಲ ಅಧಿದೇವತೆಗಳೂ ಸುತ್ತಲೂ ನಿಂತು ಉತ್ತರಿಸಿದರು :

ಯಥಾಜ್ಞಾಪಯಸೇ ವಿಪ್ರ ಬಾಢಮೇವಂ ಭವಿಷ್ಯತಿ ।
ಋಷೇರ್ವ್ಯಾಹರತೋ ವಾಕ್ಯಂ ಪ್ರತಿವಕ್ಷ್ಯಾಮಹೇ ವಯಮ್ ॥

“ವಿಪ್ರನೇ! ನೀನು ಯಾವ ರೀತಿಯಲ್ಲಿ ಆಜ್ಞಾಪಿಸುವೆಯೋ–ಅದು ಹಾಗೆಯೇ ನಡೆಯುತ್ತದೆ. ನಾವು ನೀನು ಹೇಳಿದಂತೆಯೇ ಮಾಡುತ್ತೇವೆ. ವ್ಯಾಸಮುನಿಗಳು ಇಲ್ಲಿಗೆ ಬಂದು ನಮ್ಮನ್ನು ಕೇಳಿದಾಗ–ನೀನು ಹೇಳಿದಂತೆಯೇ ಹಿತವೂ ಪ್ರಿಯಕರವೂ ಆದ ಮಾತನ್ನೇ ನಾವು ಅವರೊಡನೆ ಹೇಳುತ್ತೇವೆ.”

೩೩೨ನೆಯ ಅಧ್ಯಾಯವು ಮುಗಿಯಿತು.

೩೩೩ನೆಯ ಅಧ್ಯಾಯ — ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶುಕನಿಗೆ ಪರಮಪದಪ್ರಾಪ್ತಿ: ಪುತ್ರಶೋಕದಿಂದ ವ್ಯಾಕುಲರಾಗಿದ್ದ ವ್ಯಾಸರಿಗೆ ಮಹಾದೇವನಿಂದ ಆಶ್ವಾಸನೆ

ಜನಮೇಜಯ! ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಏಕಾಗ್ರಚಿತ್ತನಾಗಿದ್ದ, ಬ್ರಹ್ಮರ್ಷಿಯಾದ ಶುಕನು ಗಿರಿ-ಪರ್ವತ-ಸರಿತ್ಸಾಗರಗಳ ಅಧಿದೇವತೆಗಳೊಡನೆ ಹೀಗೆ ಹೇಳಿ ಸಿದ್ಧಿಯನ್ನು ಪಡೆಯುವ ಸಲುವಾಗಿ ಮುಂದೆ ಹೋದನು. ಧೀಮಂತನಾದ ಶುಕನು ನಾಲ್ಕು ವಿಧವಾದ ದೋಷಗಳನ್ನೂ, ಎಂಟು ವಿಧವಾದ ತಮೋಗುಣಗಳನ್ನೂ, ಐದು ವಿಧವಾದ ರಜೋಗುಣಗಳನ್ನೂ ತ್ಯಜಿಸಿ ಅನಂತರ ಸತ್ತ್ವಗುಣವನ್ನೂ

ತ್ಯಜಿಸಿದನು. ಅದು ಪರಮಾದ್ಭುತವಾಗಿ ಕಂಡಿತು. ಅನಂತರ ಶುಕನು ನಿತ್ಯವಾದ, ಗುಣರಹಿತವಾದ, ಲಿಂಗರಹಿತವಾದ ಪರಬ್ರಹ್ಮವಸ್ತುವಿನಲ್ಲಿ ಹೊಗೆಯಿಲ್ಲದ ಯಜ್ಞೇಶ್ವರನಂತೆ ದೇದೀಪ್ಯಮಾನನಾಗಿ ಬೆಳಗುತ್ತಾ ಆಶ್ರಯವನ್ನು ಪಡೆದನು.

ಆಗ ಎಲ್ಲ ಕಡೆಗಳಲ್ಲಿಯೂ ಉಲ್ಕೆಗಳು ಬೀಳತೊಡಗಿದುವು. ದಿಕ್ಕುಗಳಲ್ಲಿ ಅಗ್ನಿಯು ಕಾಣಿಸಿಕೊಂಡಿತು. ಭೂಮಂಡಲವೇ ನಡುಗ ತೊಡಗಿತು. ಶುಕನು ಬ್ರಹ್ಮಭೂತನಾದೊಡನೆಯೇ ನಡೆದ ಈ ಪ್ರತಿ ಕ್ರಿಯೆಯು ಪರಮಾದ್ಭುತವಾಗಿ ಕಂಡಿತು. ವೃಕ್ಷಗಳು ಅವುಗಳಲ್ಲಿದ್ದ ರೆಂಬೆಗಳನ್ನೂ ಕಳಚಿ ಕೆಳಕ್ಕೆ ಕೆಡಹಿದುವು. ಪರ್ವತಗಳು ಶಿಖರಗಳನ್ನು ಕಳೆದುಕೊಂಡುವು. ಅಪ್ಪಳಿಸುವ ಶಬ್ದಗಳಿಂದ ಹಿಮವತ್ಪರ್ವತವು ಸೀಳಿಯೇ ಹೋಗುವುದೋ – ಎಂಬಂತೆ ಕಾಣುತ್ತಿದ್ದಿತು. ಸಹಸ್ರಾಂಶುವಾದ ಸೂರ್ಯನು ಪ್ರಕಾಶಿಸುತ್ತಿರಲಿಲ್ಲ. ಅಗ್ನಿಯು ಪ್ರಜ್ವಲಿಸುತ್ತಿರಲಿಲ್ಲ. ನದಿಗಳೂ, ಸರೋವರಗಳೂ ಮತ್ತು ಸಮುದ್ರಗಳೂ ಅಲ್ಲೋಲ-ಕಲ್ಲೋಲವಾದುವು. ಇಂದ್ರನು ರಸವತ್ತಾಗಿಯೂ ಮತ್ತು ಸುಗಂಧಯುಕ್ತವಾಗಿಯೂ ಇದ್ದ ಮಳೆಯನ್ನು ಸುರಿಸಿದನು. ದಿವ್ಯವಾದ ಗಂಧವನ್ನು ಹೊತ್ತಿದ್ದ, ಶುಚಿಯಾದ ವಾಯುವು ಬೀಸತೊಡಗಿತು.

ಸ ಶೃಙ್ಗೇ ಪ್ರಥಮೇ ದಿವ್ಯೇ ಹಿಮವನ್ಮೇರುಸಮ್ಭವೇ ।
ಸಂಶ್ಲಿಷ್ಟೇ ಶ್ವೇತಪೀತೇ ದ್ವೇ ರುಕ್ಮರೂಪ್ಯಮಯೇ ಶುಭೇ ॥೮॥

ಶತಯೋಜನವಿಸ್ತಾರೇ ತಿರ್ಯಗೂರ್ಧ್ವಂ ಚ ಭಾರತ ।
ಉದೀಚೀಂ ದಿಶಮಾಸ್ಥಾಯ ರುಚಿರೇ ಸಂದದರ್ಶ ಹ ॥೯॥

ಶುಕನು ಬ್ರಹ್ಮಮಾರ್ಗವನ್ನು ಹಿಡಿದು ಮುನ್ನಡೆಯುತ್ತಿದ್ದಾಗ ಪರ್ವತದ ಎರಡು ಸುಂದರವಾದ ಶಿಖರಗಳನ್ನು ನೋಡಿದನು. ಆ ಶಿಖರಗಳು ಒಂದಕ್ಕೊಂದು ಅಂಟಿಕೊಂಡಿದ್ದುವು. ಅದರಲ್ಲಿ ಒಂದು ಹಿಮವತ್ಪರ್ವತದ ಶಿಖರವಾಗಿದ್ದಿತು. ಮತ್ತೊಂದು ಮೇರುಪರ್ವತದ ಶಿಖರವಾಗಿದ್ದಿತು. ಹಿಮವತ್ಪರ್ವತದ ಶಿಖರವು ರಜತಮಯವಾದುದರಿಂದ ಬೆಳ್ಳಗೂ, ಮೇರುಪರ್ವತದ ಶಿಖರವು ಸ್ವರ್ಣಮಯವಾದುದರಿಂದ ಹಳದಿ

ಯಾಗಿಯೂ ಕಾಣುತ್ತಿದ್ದಿತು. ಆ ಎರಡು ಶಿಖರಗಳ ಎತ್ತರ, ಅಗಲ ಮತ್ತು ಉದ್ದಗಳು ನೂರು-ನೂರು ಯೋಜನಗಳಷ್ಟಿದ್ದುವು. ಉತ್ತರಕ್ಕೆ ಹೋಗುತ್ತಿದ್ದ ಶುಕದೇವನು ಆ ಎರಡು ದಿವ್ಯಶಿಖರಗಳನ್ನೂ ಸಂದರ್ಶಿಸಿದನು. ಯಾವ ವಿಧವಾದ ಶಂಕೆಯೂ ಇಲ್ಲದೇ ಆ ಶಿಖರಗಳನ್ನು ಹತ್ತತೊಡಗಿದನು. ಒಂದಕ್ಕೊಂದು ಸೇರಿಕೊಂಡಿದ್ದ ಆ ಪರ್ವತಶಿಖರಗಳು ಒಡನೆಯೇ ಎರಡು ಭಾಗಗಳಾಗಿ ಸೀಳಿಹೋದುವು. ಅದು ಪರಮಾದ್ಭುತವಾಗಿ ಕಂಡಿತು. ಅನಂತರ ಶುಕನು ಆ ಪರ್ವತಶಿಖರಗಳೆರಡರ ಮಧ್ಯದಿಂದ ಹೊರಬಂದನು. ಮುಂದೆ ಹೋಗುತ್ತಿದ್ದ ಶುಕನ ಮಾರ್ಗವನ್ನು ಶ್ರೇಷ್ಠವಾದ ಆ ಪರ್ವತವು (ಹಿಮಪರ್ವತವು) ಪುನಃ ತಡೆಯಲಿಲ್ಲ. ಅದನ್ನು ನೋಡಿ ಎಲ್ಲ ದೇವತೆಗಳೂ, ಗಂಧರ್ವರೂ, ಋಷಿಗಳೂ, ಆ ಪರ್ವತದ ಮೇಲೆ ವಾಸಮಾಡುತ್ತಿದ್ದ ಎಲ್ಲರೂ ಏಕಕಾಲದಲ್ಲಿ ಹರ್ಷನಾದಮಾಡಿದರು. ಅವರ ಹರ್ಷನಿನಾದವು ಆಕಾಶದಲ್ಲಿ ಒಂದು ಮಹಾಶಬ್ದವಾಗಿ ಪರಿಣಮಿಸಿತು. ಶುಕನು ಪರ್ವತವನ್ನೂ ಅತಿಕ್ರಮಿಸಿ ಮುಂದೆ ಹೋದುದನ್ನೂ –ಪರಸ್ಪರವಾಗಿ ಸೇರಿಕೊಂಡಿದ್ದ ಪರ್ವತಶಿಖರಗಳು ಎರಡು ಭಾಗಗಳಾಗಿ ಸೀಳಿ ಹೋದುದನ್ನೂ ನೋಡಿ ಎಲ್ಲ ಕಡೆಗಳಿಂದಲೂ “ಸಾಧು! ಶುಕ! ಸಾಧು!” ಎಂಬ ಶಬ್ದವು ಕೇಳಿಬರುತ್ತಿದ್ದಿತು. ದೇವತೆಗಳು, ಗಂಧರ್ವರು, ಋಷಿಗಳು, ಯಕ್ಷ-ರಾಕ್ಷಸರು, ವಿದ್ಯಾಧರರು –ಇವರೆಲ್ಲರೂ ಶುಕನನ್ನು ಸಂಪೂಜಿಸಿದರು. ಶುಕನು ಮೇಲೆ ಹೋಗುತ್ತಿದ್ದಾಗ ದೇವತೆಗಳು ಅವನ ಮೇಲೆ ಸುರಿಸಿದ ದಿವ್ಯಪುಷ್ಪಗಳು ಅಂತರಿಕ್ಷದ ಸುತ್ತಲೂ ಪ್ರಸರಿಸಿದ್ದುವು.

ಧರ್ಮಾತ್ಮನಾದ ಶುಕನು ಮೇಲು-ಮೇಲಕ್ಕೆ ಹೋಗುತ್ತಿದ್ದಾಗ ಸುಪುಷ್ಪಿತವಾಗಿದ್ದ ವೃಕ್ಷಗಳಿಂದ ಕೂಡಿದ ಅರಣ್ಯಗಳಿಂದ ಸುಶೋಭಿತವಾಗಿದ್ದ ಮಂದಾಕಿನೀನದಿಯನ್ನು (ದೇವಗಂಗೆಯನ್ನು) ನೋಡಿದನು.

ತಸ್ಯಾಂ ಕ್ರೀಡನ್ತ್ಯಭಿರತಾಸ್ತ್ವೇ ಚೈವಾಪ್ಸರಸಾಂ ಗಣಾಃ ।
ಶೂನ್ಯಾಕಾರಂ ನಿರಾಕಾರಾಃ ಶುಕಂ ದೃಷ್ಟ್ವಾ ವಿವಾಸಸಃ ॥೧೭॥

ಆ ಮಂದಾಕಿನೀನದಿಯಲ್ಲಿ ಅಪ್ಸರೆಯರ ಗುಂಪುಗಳು ಜಲಕ್ರೀಡೆ ಯಾಡುವುದರಲ್ಲಿ ನಿರತವಾಗಿದ್ದುವು. ವಿಕಾರಶೂನ್ಯನಾಗಿದ್ದ (ಆತ್ಮನಿಷ್ಠ

ನಾಗಿದ್ದ) ಶುಕನನ್ನು ನೋಡಿ ವಸ್ತ್ರಗಳಿಂದ ಹೀನರಾಗಿದ್ದ ಅಪ್ಸರೆಯರು ಯಾವ ವಿಧವಾದ ವಿಕಾರವನ್ನೂ ಹೊಂದಲಿಲ್ಲ. (ಲಜ್ಜಿತರಾಗಲಿಲ್ಲ.)

ಶುಕನು ಹೀಗೆ ಸಿದ್ಧಿಯನ್ನು ಪಡೆಯುವ ಸಲುವಾಗಿ ಸೂರ್ಯಮಂಡಲದ ಕಡೆಗೆ ಹೋದುದನ್ನು ತಿಳಿದು ಪುತ್ರವಾತ್ಸಲ್ಯದಿಂದ ಯುಕ್ತರಾಗಿದ್ದ ವ್ಯಾಸರು ಉತ್ತಮವಾದ ಮಾರ್ಗವನ್ನು ಹಿಡಿದು ಅವನನ್ನೇ ಅನುಸರಿಸಿ ಹೋದರು.

ಇತ್ತಲಾಗಿ ಶುಕನು ವಾಯುಮಂಡಲದಿಂದಲೂ ಮೇಲಿನ ಅಂತರಿಕ್ಷಗಾಮಿಯಾದ ಮಾರ್ಗವನ್ನು ಆಶ್ರಯಿಸಿ ತನ್ನ ಪ್ರಭಾವವನ್ನು ತೋರ್ಪಡಿಸಿ ಬ್ರಹ್ಮಭೂತನಾದನು.*

ಮಹಾತಪಸ್ವಿಗಳಾದ ವ್ಯಾಸರು ಮತ್ತೊಂದು ಮಹಾಯೋಗಸಂಬಂಧವಾದ ಮಾರ್ಗವನ್ನು ಆಶ್ರಯಿಸಿ ನಿಮಿಷಮಾತ್ರದಲ್ಲಿ 'ಶುಕಾಭಿಪತನ'ವೆಂಬ ಸ್ಥಳಕ್ಕೆ ಹೋದರು. ಕೂಡಿಕೊಂಡಿದ್ದ ಎರಡು ಪರ್ವತಶಿಖರಗಳನ್ನು ಇಬ್ಭಾಗಮಾಡಿ ಶುಕನು ಹೊರಬಂದ ಸ್ಥಳವು ಶುಕಾಭಿಪತನವೆಂಬ ಹೆಸರಿನಿಂದ ಪ್ರಸಿದ್ಧವಾಗಿದ್ದಿತು. ಆ ಸ್ಥಳವನ್ನೇ ವ್ಯಾಸರು ನೋಡಿದರು. ಅಲ್ಲಿಯೇ ವಾಸಿಸುತ್ತಿದ್ದ ಋಷಿಗಳು ವ್ಯಾಸರ ಬಳಿಗೆ ಬಂದು ಅವರ ಮಗನು ಮಾಡಿದ ಅಲೌಕಿಕವಾದ ಕರ್ಮಗಳನ್ನು ವಿವರಿಸಿ ಹೇಳಿದರು. ಅನಂತರ ವ್ಯಾಸರು 'ಶುಕ!' 'ಶುಕ!' ಎಂದು ದೀರ್ಘಸ್ವರದಿಂದ ಕೂಗಿಕೊಂಡರು. ಯಾವಾಗ ತಂದೆಯವರಾದ ವ್ಯಾಸರು ಮೂರು ಲೋಕಗಳನ್ನೂ ಶಬ್ದಾಯಮಾನವನ್ನಾಗಿ ಮಾಡುತ್ತಾ 'ಶುಕ!' ಎಂದು ದೀರ್ಘಸ್ವರದಿಂದ ಗಟ್ಟಿಯಾಗಿ ಕೂಗಿದರೋ –ಆಗ ಸರ್ವಾತ್ಮನಾದ, ಸರ್ವತೋಮುಖನಾದ, ಧರ್ಮಾತ್ಮನಾದ ಶುಕನು ವಿಶ್ವದ ಎಲ್ಲ ವಸ್ತುಗಳಲ್ಲಿಯೂ ಸೇರಿಕೊಂಡು 'ಭೋಃ!' ಎಂಬ ಶಬ್ದದಿಂದ ಸರ್ವತ್ರ ಪ್ರತಿಧ್ವನಿಯುಂಟಾಗುವಂತೆ ಮಾಡುತ್ತಾ ಪ್ರತ್ಯುತ್ತರಿಸಿದನು. ಶುಕನು ಹೇಳಿದ ಆ 'ಭೋಃ!' ಎಂಬ ಶಬ್ದದ ಜೊತೆಯಲ್ಲಿಯೇ ಜಗತ್ತಿನ ಚರಾಚರವಸ್ತುಗಳೂ ಶುಕನು ಉಚ್ಚರಿ

---

* ಮಾರುತಾತ್ ಊರ್ಧ್ವಂ = ಸೂತ್ರಾತ್ಮನಿಗಿಂತಲೂ ಮೇಲೆ ಹೋಗಿ ಬ್ರಹ್ಮಭೂತನಾದನು. ವಾಯುರ್ವೈಗೌತಮ ತತ್ಸೂತ್ರಂ ಎಂದು ವ್ಯಾಖ್ಯಾನಕಾರರು ವ್ಯಾಖ್ಯಾನಿಸಿದ್ದಾರೆ.

ಸಿದ ಏಕಾಕ್ಷರನಾದವನ್ನೇ ಉಚ್ಚರಿಸುತ್ತಾ ವ್ಯಾಸರಿಗೆ ಪ್ರತ್ಯುತ್ತರಿಸಿದುವು. ಅಂದಿನಿಂದ ಮೊದಲ್ಗೊಂಡು ಇಂದಿನವರೆಗೂ ಪರ್ವತಶಿಖರಗಳಲ್ಲಿ ಮತ್ತು ಗುಹೆಗಳಲ್ಲಿ ಇರುವವರು ವ್ಯಾಸರು ಶುಕನನ್ನು ಕುರಿತು ಹೇಳಿದ ಶಬ್ದಗಳನ್ನೂ, ಶುಕನು ಪ್ರತ್ಯುತ್ತರಿಸಿದುದನ್ನೂ ಮತ್ತು ಚರಾಚರ ಪ್ರಾಣಿಗಳೂ ಶುಕನ ಶಬ್ದವನ್ನೇ ಅನುಕರಿಸಿ ಹೇಳಿದುದನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಹೇಳುತ್ತಿರುತ್ತಾರೆ.

ಹೀಗೆ ಶುಕನು ತನ್ನ ಪ್ರಭಾವವನ್ನು ತೋರಿಸುತ್ತಾ ಅಂತರ್ಹಿತನಾದನು. ಶಬ್ದಾದಿಗಳನ್ನು ಪರಿತ್ಯಜಿಸಿ ಪರಮಪದವನ್ನು ಹೊಂದಿದನು. ಮಹಾತೇಜಸ್ವಿಯಾದ ತಮ್ಮ ಮಗನ ಮಹಿಮೆಯನ್ನು ಕಂಡು ವ್ಯಾಸರು ಮಗನನ್ನೇ ಚಿಂತಿಸುತ್ತಾ ಹಿಮವತ್ಪರ್ವತದ ಶಿಖರದಲ್ಲಿ ಕುಳಿತರು.

ಮಂದಾಕಿನೀನದಿಯ ತೀರದಲ್ಲಿ ವಿವಸ್ತ್ರರಾಗಿ ಜಲಕ್ರೀಡೆಯನ್ನಾಡುತ್ತಿದ್ದ ಅಪ್ಸರಸ್ತ್ರೀಯರು, ವ್ಯಾಸರು ಸಮೀಪದ ಪರ್ವತಶಿಖರದಲ್ಲಿ ಕುಳಿತಿರುವುದನ್ನು ನೋಡಿ ಬಹಳ ಭ್ರಾಂತರಾದರು. ಕೆಲವರು ಏನು ಮಾಡಲೂ ತೋಚದೇ ಬುದ್ಧಿಗೆಟ್ಟರು. ಕೆಲವರು ನೀರಿನಲ್ಲಿಯೇ ಅಡಗಿದರು. ಮತ್ತೆ ಕೆಲವರು ಸಮೀಪದಲ್ಲಿದ್ದ ಪೊದೆಗಳಲ್ಲಿ ಅವಿತುಕೊಂಡರು. ಇನ್ನೂ ಕೆಲವರು ವ್ಯಾಸರನ್ನು ನೋಡುತ್ತಲೇ ವಸ್ತ್ರಗಳನ್ನುಡತೊಡಗಿದರು. ಹಿಂದೆ ಶುಕನು ಅದೇ ಸ್ಥಳಕ್ಕೆ ಬಂದಿದ್ದಾಗ ಅಪ್ಸರೆಯರು ಅವನ ವಿಷಯದಲ್ಲಿ ನಿರ್ಲಕ್ಷ್ಯದಿಂದಿದ್ದುದಕ್ಕೂ ತನ್ನನ್ನು ನೋಡಿದ ಕೂಡಲೇ ಅದೇ ಅಪ್ಸರೆಯರು ಪರದಾಡುತ್ತಿರುವುದಕ್ಕೂ ಕಾರಣವನ್ನು ವ್ಯಾಸರು ತಿಳಿದುಕೊಂಡರು. ಶುಕನು ಯಾವ ವಿಧವಾದ ಆಸಕ್ತಿಯೂ ಇಲ್ಲದೇ ಮುಕ್ತನಾಗಿರುವುದನ್ನು ತಿಳಿದು ಸಂತೋಷಗೊಂಡರು. ಅಂತೆಯೇ ತಮ್ಮಲ್ಲಿರುವ ಆಸಕ್ತಿಯನ್ನು ಮನಗಂಡು ನಾಚಿದರು.

ಅದೇ ಸಮಯಕ್ಕೆ ಸರಿಯಾಗಿ ದೇವ-ಗಂಧರ್ವರಿಂದ ಸಮಾವೃತನಾಗಿದ್ದ, ಮಹರ್ಷಿಗಳಿಂದ ಪೂಜಿಸಲ್ಪಡುತ್ತಿದ್ದ, ಪಿನಾಕಪಾಣಿಯಾದ ಭಗವಾನ್ ಶಂಕರನು ಅಲ್ಲಿಗೆ ಆಗಮಿಸಿದನು. ಪುತ್ರವಿರಹಶೋಕದಿಂದ ಸಂತಪ್ತರಾಗಿದ್ದ ಕೃಷ್ಣದ್ವೈಪಾಯನರನ್ನು ಸಂತೈಸುತ್ತಾ ಮಹಾದೇವನು ಹೇಳಿದನು :

ಅಗ್ನೇರ್ಭೂಮೇರಪಾಂ ವಾಯೋರನ್ತರಿಕ್ಷಸ್ಯ ಚೈವ ಹ ।
ವೀರ್ಯೇಣ ಸದೃಶಃ ಪುತ್ರಃ ಪುರಾ ಮತ್ತಸ್ತ್ವಯಾ ವೃತಃ ॥೩೪॥

ಸ ತಥಾಲಕ್ಷಣೋ ಜಾತಸ್ತಪಸಾ ತವ ಸಮ್ಭೃತಃ ।
ಮಮ ಚೈವ ಪ್ರಸಾದೇನ ಬ್ರಹ್ಮತೇಜೋಮಯಃ ಶುಚಿಃ ॥೩೫॥

"ಮಹರ್ಷಿಯೇ! ಹಿಂದೆ ನೀನು ನನ್ನನ್ನು ಕುರಿತು ತಪಸ್ಸುಮಾಡಿ ಅಗ್ನಿ, ಭೂಮಿ, ನೀರು, ವಾಯು, ಅಂತರಿಕ್ಷ –ಈ ಪಂಚಮಹಾಭೂತಗಳ ಶಕ್ತಿಗೆ ಸಮಾನವಾದ ಶಕ್ತಿಯಿರುವ ಪುತ್ರನನ್ನು ದಯಪಾಲಿಸುವಂತೆ ವರವನ್ನು ಕೇಳಿಕೊಂಡೆ. ನಿನ್ನ ತಪಸ್ಸಿನ ಪ್ರಭಾವದಿಂದಲೂ ಮತ್ತು ನನ್ನ ಅನುಗ್ರಹದಿಂದಲೂ ನಿನಗೆ ಬ್ರಹ್ಮತೇಜೋಮಯನಾದ, ಪರಮಪವಿತ್ರನಾದ ಅಂತಹ ಮಗನೇ ಹುಟ್ಟಿರುವನು.

ಸ ಗತಿಂ ಪರಮಾಂ ಪ್ರಾಪ್ತೋ ದುಷ್ಪ್ರಾಪಾಮಜಿತೇನ್ದ್ರಿಯೈಃ ।
ದೈವತೈರಪಿ ವಿಪ್ರರ್ಷೇ ತಂ ತ್ವಂ ಕಿಮನುಶೋಚಸಿ ॥೩೬॥

ವಿಪ್ರರ್ಷಿಯೇ! ಜಿತೇಂದ್ರಿಯರಲ್ಲದ ಮನುಷ್ಯರಿಂದಲೂ, ದೇವತೆಗಳಿಂದಲೂ ಪಡೆಯಲು ಅಸಾಧ್ಯವಾದ ಪರಮಗತಿಯನ್ನು ಶುಕನು ಪಡೆದುಕೊಂಡಿರುತ್ತಾನೆ. ಅವನ ವಿಷಯವಾಗಿ ನೀನೇಕೆ ಶೋಕಪಡುವೆ?

ಯಾವತ್ಸ್ಥಾಸ್ಯನ್ತಿ ಗಿರಯೋ ಯಾವತ್ಸ್ಥಾಸ್ಯನ್ತಿ ಸಾಗರಾಃ ।
ತಾವತ್ತವಾಕ್ಷಯಾ ಕೀರ್ತಿಃ ಸಪುತ್ರಸ್ಯ ಭವಿಷ್ಯತಿ ॥೩೭॥

ಎಲ್ಲಿಯವರೆಗೆ ಪರ್ವತಗಳಿರುತ್ತವೆಯೋ, ಎಲ್ಲಿಯವರೆಗೆ ಸಮುದ್ರಗಳಿರುತ್ತವೆಯೋ –ಅಲ್ಲಿಯವರೆಗೆ ನಿನ್ನ ಮತ್ತು ನಿನ್ನ ಪುತ್ರನ ಕೀರ್ತಿಯು ಅಚ್ಚಳಿಯದೇ ಉಳಿದಿರುತ್ತದೆ.

ಛಾಯಾಂ ಸ್ವಪುತ್ರಸದೃಶೀಂ ಸರ್ವತೋಽನಪಗಾಂ ಸದಾ ।
ದ್ರಕ್ಷ್ಯಸೇ ತ್ವಂ ಚ ಲೋಕೇಽಸ್ಮಿನ್ಮತ್ಪ್ರಸಾದಾನ್ಮಹಾಮುನೇ ॥೩೮॥

ಮಹಾಮುನಿಯೇ! ನೀನು ನನ್ನ ಅನುಗ್ರಹದಿಂದ ಈ ಲೋಕದಲ್ಲಿ ನಿನ್ನ ಪುತ್ರಸದೃಶವಾದ ಛಾಯೆಯನ್ನು ಸರ್ವದಾ ಸರ್ವತ್ರ ಕಾಣುವೆ. ಆ ಛಾಯೆಯು ಎಂದಿಗೂ ನಿನ್ನ ದೃಷ್ಟಿಪಥವನ್ನು ಬಿಟ್ಟು ಹೋಗುವುದಿಲ್ಲ."

ಯುಧಿಷ್ಠಿರ! ಸಾಕ್ಷಾತ್ ರುದ್ರನಿಂದಲೇ ಸಂತೈಸಲ್ಪಟ್ಟ ವ್ಯಾಸರು ಪರಮೇಶ್ವರನ ಅನುಗ್ರಹದಿಂದ ಎಲ್ಲೆಲ್ಲಿಯೂ ತಮ್ಮ ಮಗನ ಛಾಯೆಯನ್ನೇ ನೋಡುತ್ತಾ ಪರಮಹೃಷ್ಟರಾಗಿ ತಮ್ಮ ಆಶ್ರಮಕ್ಕೆ ಹಿಂದಿರುಗಿದರು.

ಕೌಂತೇಯ! ನಿನ್ನ ಪ್ರಶ್ನೆಗೆ ಅನುಸಾರವಾಗಿ ಶುಕನ ಜನ್ಮ, ವಿದ್ಯಾಭ್ಯಾಸ, ಪರಮಪದಪ್ರಾಪ್ತಿ –ಈ ಎಲ್ಲವನ್ನೂ ವಿಸ್ತಾರವಾಗಿಯೇ ನಿನಗೆ ಹೇಳಿದ್ದೇನೆ. ಈ ಆಖ್ಯಾನವನ್ನು ಹಿಂದೆ ನಾರದರು ನನಗೆ ಹೇಳಿದ್ದರು. ಮಹಾಯೋಗಿಗಳಾದ ವ್ಯಾಸರೂ ಮಾತುಕತೆಗಳ ಮಧ್ಯದಲ್ಲಿ ಈ ಪ್ರಸಂಗವನ್ನು ಹೇಳಿದ್ದರು.

ಇತಿಹಾಸಮಿಮಂ ಪುಣ್ಯಂ ಮೋಕ್ಷಧರ್ಮೋಪಸಂಹಿತಮ್ ।
ಧಾರಯೇದ್ಯಃ ಶಮಪರಃ ಸ ಗಚ್ಛೇತ್ಪರಮಾಂ ಗತಿಮ್ ॥೪೨॥

ಶಾಂತಿಪರಾಯಣನಾದ ಯಾವ ಪುರುಷನು ಮೋಕ್ಷಧರ್ಮಯುಕ್ತವಾದ, ಪರಮಪವಿತ್ರವಾದ ಈ ಇತಿಹಾಸವನ್ನು ಓದಿ ತನ್ನ ಮನಸ್ಸಿನಲ್ಲಿ ಧಾರಣೆಮಾಡಿಕೊಳ್ಳುವನೋ–ಅವನು ಪರಮಗತಿಯನ್ನು ಹೊಂದುತ್ತಾನೆ."

ಮೂರುನೂರಮೂವತ್ತಮೂರನೆಯ ಅಧ್ಯಾಯವು ಮುಗಿಯಿತು.

೩೩೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬದರಿಕಾಶ್ರಮದಲ್ಲಿ ನಾರದರ ಪ್ರಶ್ನೆಗೆ ಭಗವಂತನಿಂದ ಶ್ರೀಮನ್ನಾರಾಯಣನ ಸರ್ವಶ್ರೇಷ್ಠತ್ವಪ್ರತಿಪಾದನೆ

ಜನಮೇಜಯಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಗೃಹಸ್ಥೋ ಬ್ರಹ್ಮಚಾರೀ ವಾ ವಾನಪ್ರಸ್ಥೋಽಥ ಭಿಕ್ಷುಕಃ ।
ಯ ಇಚ್ಛೇತ್ಸಿದ್ಧಿಮಾಸ್ಥಾತುಂ ದೇವತಾಂ ಕಾಂ ಯಜೇತ ಸಃ ॥೧॥

"ಪಿತಾಮಹ! ಸಿದ್ಧಿಯನ್ನು ಇಚ್ಛಿಸುವ ಬ್ರಹ್ಮಚಾರಿಯಾಗಲೀ, ಗೃಹಸ್ಥನಾಗಲೀ, ವಾನಪ್ರಸ್ಥನಾಗಲೀ ಅಥವಾ ಸಂನ್ಯಾಸಿಯಾಗಲೀ –ಯಾವ ದೇವತೆಯನ್ನು ಪೂಜಿಸಬೇಕು?

ಕುತೋ ಹ್ಯಸ್ಯ ಧ್ರುವಃ ಸ್ವರ್ಗಃ ಕುತೋ ನೈಃಶ್ರೇಯಸಂ ಪರಮ್ ।
ವಿಧಿನಾ ಕೇನ ಜುಹುಯಾದ್ದೈವಂ ಪಿತ್ರ್ಯಂ ತಥೈವ ಚ ॥೨॥

ಮನುಷ್ಯನಿಗೆ ಶಾಶ್ವತವಾದ ಸ್ವರ್ಗಲೋಕವು ಯಾವುದರಿಂದ ಪ್ರಾಪ್ತವಾಗುತ್ತದೆ? ಶ್ರೇಷ್ಠವಾದ ಮೋಕ್ಷವು ಯಾವುದರಿಂದ ಲಭಿಸುತ್ತದೆ? ಯಾವ ವಿಧಿಯಿಂದ ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ಹೋಮ ಮಾಡಬೇಕು?

ಮುಕ್ತಶ್ಚ ಕಾಂ ಗತಿಂ ಗಚ್ಛೇನ್ಮೋಕ್ಷಶ್ಚೈವ ಕಿಮಾತ್ಮಕಃ ।
ಸ್ವರ್ಗತಶ್ಚೈವ ಕಿಂ ಕುರ್ಯಾದ್ಯೇನ ನ ಚ್ಯವತೇ ದಿವಃ ॥೩॥

ಮುಕ್ತನಾದವನು ಯಾವ ಗತಿಯನ್ನು ಹೊಂದುತ್ತಾನೆ? ಮೋಕ್ಷದ ಸ್ವರೂಪವೇನು? ಸ್ವರ್ಗಕ್ಕೆ ಹೋದ ಮನುಷ್ಯನು ಏನು ಮಾಡಬೇಕು? ಸ್ವರ್ಗಕ್ಕೆ ಹೋದ ಮನುಷ್ಯನು ಯಾವ ಕಾರ್ಯವನ್ನು ಮಾಡುವುದರಿಂದ ಪುನಃ ಅಲ್ಲಿಂದ ಚ್ಯುತನಾಗುವುದಿಲ್ಲ?

ದೇವತಾನಾಂ ಚ ಕೋ ದೇವಃ ಪಿತೄಣಾಂ ಚ ಪಿತಾ ತಥಾ ।
ತಸ್ಮಾತ್ಪರತರಂ ಯಚ್ಚ ತನ್ಮೇ ಬ್ರೂಹಿ ಪಿತಾಮಹ ॥೪॥

ಪಿತಾಮಹನೇ! ದೇವತೆಗಳಿಗೂ ದೇವನು ಯಾರು? ಪಿತೃಗಳಿಗೂ ತಂದೆಯು ಯಾರು? ಅದಕ್ಕಿಂತಲೂ ಶ್ರೇಷ್ಠವಾದ ಪರತತ್ತ್ವವು ಯಾವುದು? ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

"ಎಂತಹ ಪ್ರಶ್ನೆಗಳನ್ನು ಕೇಳಬೇಕೆಂಬ ಸಮೀಚೀನವಾದ ಜ್ಞಾನವುಳ್ಳ ಯುಧಿಷ್ಠಿರನೇ! ಈಗ ನೀನು ಅತ್ಯಂತನಿಗೂಢವಾದ ಪ್ರಶ್ನೆಯನ್ನೇ ಕೇಳಿರುವೆ. ದೈವಕೃಪೆ ಅಥವಾ ಜ್ಞಾನಪ್ರಧಾನವಾದ ಶಾಸ್ತ್ರಗಳ ಅಧ್ಯಯನ–ಇವುಗಳ ಹೊರತಾಗಿ ಕೇವಲತರ್ಕದಿಂದ ನೂರುವರ್ಷಗಳ ಅವಧಿಯನ್ನು ತೆಗೆದುಕೊಂಡರೂ ಈ ನಿನ್ನ ಪ್ರಶ್ನೆಗಳಿಗೆ ಉತ್ತರಿಸಲು ಸಾಧ್ಯವಾಗುವುದಿಲ್ಲ. ಶತ್ರುನಿಷೂದನನೇ! ಈ ವಿಷಯವು ಅತ್ಯಂತಗಹನವಾಗಿದ್ದರೂ ನಿನಗಾಗಿ ಹೇಳಲೇಬೇಕಾಗಿದೆ. ಈ ವಿಷಯದಲ್ಲಿ ಹಿಂದೆ ನಾರದರಿಗೂ ಮತ್ತು ಮಹರ್ಷಿಯಾದ ನಾರಾಯಣನಿಗೂ ನಡೆದ ಇತಿಹಾಸರೂಪವಾದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಭಗವಾನ್ ನಾರಾಯಣನು ಸಂಪೂರ್ಣಜಗತ್ತಿಗೂ ಆತ್ಮನೆಂದೂ, ಚತುರ್ಮೂರ್ತಿಯೆಂದೂ, ಸನಾತನನೆಂದೂ, ಆ ನಾರಾಯಣನೇ ಒಮ್ಮೆ ಧರ್ಮನ ಮಗನಾಗಿ ಅವತರಿಸಿದನೆಂದೂ–ನನ್ನ ತಂದೆ ಶಾಂತನುವೇ ನನಗೊಮ್ಮೆ ಹೇಳಿದ್ದನು.

ಸ್ವಾಯಂಭುವಮನ್ವಂತರದ ಕೃತಯುಗದಲ್ಲಿ ಸ್ವಯಂಭೂಬ್ರಹ್ಮನಿಗೆ ನರ, ನಾರಾಯಣ, ಹರಿ ಮತ್ತು ಕೃಷ್ಣ ಎಂಬ ನಾಲ್ವರು ಮಕ್ಕಳು ಹುಟ್ಟಿದರು. ಅವರಲ್ಲಿ ಅವಿನಾಶಿಗಳಾದ ನರ-ನಾರಾಯಣರು ಬದರಿಕಾಶ್ರಮಕ್ಕೆ ಬಂದು ಅಲ್ಲಿ ಸುವರ್ಣಮಯವಾದ ರಥದಲ್ಲಿ ಕುಳಿತು ತಪಸ್ಸನ್ನು ಮಾಡಲು ಉಪಕ್ರಮಿಸಿದರು.

*ಅಷ್ಟಚಕ್ರಂ ಹಿ ತದ್ಯಾನಂ ಭೂತಯುಕ್ತಂ ಮನೋರಮಮ್ ।
ತತ್ರಾದ್ಯೌ ಲೋಕನಾಥೌ ತೌ ಕೃಶೌ ಧಮನಿಸಂತತೌ ॥೧೧॥

ತಪಸಾ ತೇಜಸಾ ಚೈವ ದುರ್ನಿರೀಕ್ಷ್ಯೌ ಸುರೈರಪಿ ।
ಯಸ್ಯ ಪ್ರಸಾದಂ ಕುರ್ವಾತೇ ಸ ದೇವೌ ದ್ರಷ್ಟುಮರ್ಹತಿ ॥೧೨॥

ಸುವರ್ಣಮಯವಾದ ಆ ರಥಕ್ಕೆ ಎಂಟು ಚಕ್ರಗಳಿದ್ದುವು. ಅದು ಎಲ್ಲ ಭೂತಗಳಿಂದಲೂ ಕೂಡಿದ್ದಿತು. ಅತ್ಯಂತಮನೋಹರವಾಗಿದ್ದಿತು. ಆದಿ ಪುರುಷರಾದ, ಲೋಕನಾಥರಾದ ಆ ನರ-ನಾರಾಯಣರು ತಪಸ್ಸನ್ನು ಮಾಡುತ್ತಿದ್ದಾಗ ಅವರ ಶರೀರಗಳಲ್ಲಿ ಕೇವಲ ನರಗಳು ಮಾತ್ರವೇ ಕಾಣುತ್ತಿದ್ದು ಅವರು ಅತ್ಯಂತಕೃಶರಾಗಿದ್ದರು. ತಪಸ್ಸಿನಿಂದಲೂ ಮತ್ತು ತೇಜಸ್ಸಿನಿಂದಲೂ ಅವರು ದೇವತೆಗಳಿಂದಲೂ ನೋಡಲು ಅಸಾಧ್ಯರಾಗಿದ್ದರು.

---

*ಅಷ್ಟಚಕ್ರಯುಕ್ತವಾದ ರಥವು ಶ್ರೀಮದಷ್ಟಾಕ್ಷರಮಹಾಮಂತ್ರದ ಪ್ರತೀಕವೆಂದು ಹೇಳುವುದುಂಟು.

ಕಲ್ಯಾಣಮಾವಹತು ಕಾರ್ತಯುಗಂ ಸ್ವಧರ್ಮಂ
ಪ್ರಖ್ಯಾಪಯನ್ ಪ್ರಣಿಹಿತೇಷು ನರಾಧಿಕೇಷು ।

ಆದ್ಯಂ ಕಮಪ್ಯಧಿಗತೋ ರಥಮಷ್ಟಚಕ್ರಂ
ಬಂಧುಸ್ಸತಾಂ ಬದರಿಕಾಶ್ರಮತಾಪಸೋ ನಃ ॥

–ನಿಗಮಾನ್ತಮಹಾದೇಶಿಕರ ರಹಸ್ಯತ್ರಯಸಾರ.

ಯಾವನಿಗೆ ಅವರು ಅನುಗ್ರಹಿಸಲು ಇಚ್ಛಿಸುತ್ತಿದ್ದರೋ ಅಂತಹವರು ಮಾತ್ರವೇ ಅವರಿಬ್ಬರನ್ನೂ ನೋಡಬಹುದಾಗಿದ್ದಿತು.

ನಿಶ್ಚಯವಾಗಿಯೂ ಆ ನರ-ನಾರಾಯಣರ ಇಚ್ಛಾನುಸಾರವಾಗಿಯೇ ಹೃಚ್ಛಯನಾದ ಪರಮಾತ್ಮನಿಂದ ಪ್ರೇರಿತರಾದ, ದೇವರ್ಷಿಗಳಾದ ನಾರದರು ಮಹಾಮೇರುವಿನ ಶಿಖರದಿಂದ ಗಂಧಮಾದನಪರ್ವತಕ್ಕೆ ಆಗಮಿಸಿದರು. ಅನಂತರ ನಾರದರು ವೇಗವಾದ ನಡಿಗೆಯುಳ್ಳವರಾಗಿ ಸರ್ವಲೋಕಗಳನ್ನೂ ಸಂಚರಿಸುತ್ತಾ ಮಹಾಭೂತಗಳಿಂದ ಯುಕ್ತವಾಗಿದ್ದ (ಮಹಾವಿಷ್ಣುವಿನ ಅಧಿಷ್ಠಾನವಾಗಿದ್ದ) ವಿಶಾಲವಾದ ಬದರಿಕಾಶ್ರಮಪ್ರದೇಶಕ್ಕೆ ಆಗಮಿಸಿದರು.

ನರ-ನಾರಾಯಣರು ನಿತ್ಯಕರ್ಮಗಳನ್ನು ಮಾಡುವ ವೇಳೆಯಲ್ಲಿ ನಾರದರಿಗೆ ಅವರನ್ನು ನೋಡಬೇಕೆಂಬ ಕೌತೂಹಲವುಂಟಾಯಿತು. ಆ ಸಮಯದಲ್ಲಿ ಅವರು ಹೀಗೆ ಯೋಚಿಸಿದರು :

ಇದಂ ತದಾಸ್ಪದಂ ಕೃತ್ಸ್ನಂ ಯಸ್ಮಿಂಲ್ಲೋಕಾಃ ಪ್ರತಿಷ್ಠಿತಾಃ ।
ಸದೇವಾಸುರಗನ್ಧರ್ವಾಃ ಸಕಿನ್ನರಮಹೋರಗಾಃ ॥೧೫॥

“ನಿಶ್ಚಯವಾಗಿಯೂ ಇದು ಭಗವಂತನ ಸ್ಥಾನವೇ ಆಗಿದೆ. ದೇವಾಸುರ-ಗಂಧರ್ವ-ಕಿನ್ನರ-ಮಹಾಸರ್ಪಗಳಿಂದ ಯುಕ್ತವಾದ ಸಕಲಲೋಕಗಳೂ ಈ ಪರಮಾತ್ಮನಲ್ಲಿಯೇ ಪ್ರತಿಷ್ಠಿತವಾಗಿವೆ.

ಏಕಾ ಮೂರ್ತಿರಿಯಂ ಪೂರ್ವಂ ಜಾತಾ ಭೂಯಶ್ಚತುರ್ವಿಧಾ ।
ಧರ್ಮಸ್ಯ ಕುಲಸಂತಾನೇ ಧರ್ಮಾದೇಭಿರ್ವಿವರ್ಧಿತಃ ॥೧೬॥

ಅಹೋ ಹ್ಯನುಗೃಹೀತೋಽದ್ಯ ಧರ್ಮ ಏಭಿಃ ಸುರೈರಿಹ ।
ನರನಾರಾಯಣಾಭ್ಯಾಂ ಚ ಕೃಷ್ಣೇನ ಹರಿಣಾ ತಥಾ ॥೧೭॥

ಮೊದಲು ಭಗವಂತನು ಒಂದೇ ರೂಪದಲ್ಲಿದ್ದನು. ಧರ್ಮದ ವಂಶ ಪರಂಪರೆಯನ್ನು ವಿಸ್ತರಿಸಲು ಆ ಭಗವಂತನೇ ನಾಲ್ಕು ರೂಪಗಳನ್ನು ತಾಳಿದನು. ಹೀಗೆ ಇವರು ಧರ್ಮವನ್ನು ಬೆಳೆಸಿದರು. ನಿಶ್ಚಯವಾಗಿಯೂ ಧರ್ಮವು ದೇವತಾಸ್ವರೂಪರಾದ ನರ-ನಾರಾಯಣರಿಂದಲೂ ಕೃಷ್ಣನಿಂದಲೂ ಮತ್ತು ಹರಿಯಿಂದಲೂ ವಿಶೇಷರೀತಿಯಲ್ಲಿ ಅನುಗ್ರಹಿಸಲ್ಪಟ್ಟಿದೆ.

ಅತ್ರ ಕೃಷ್ಣೋ ಹರಿಶ್ಚೈವ ಕಸ್ಮಿಂಶ್ಚಿತ್ಕಾರಣಾನ್ತರೇ ।
ಸ್ಥಿತೌ ಧರ್ಮೋತ್ತರೌ ಹ್ಯೇತೌ ತಥಾ ತಪಸಿ ಧಿಷ್ಠಿತೌ ॥೧೮॥

ಇವರಲ್ಲಿ ಹರಿ ಮತ್ತು ಕೃಷ್ಣರು ಧರ್ಮಪ್ರಧಾನರಾಗಿ ಬೇರೊಂದು ಕಾರ್ಯದಲ್ಲಿ ಆಸಕ್ತರಾಗಿದ್ದಾರೆ. ಆದರೆ ಈ ನರ-ನಾರಾಯಣರು ಧರ್ಮವೇ ಪ್ರಧಾನಭೂತವಾದುದೆಂದು ಭಾವಿಸಿರುವುದಲ್ಲದೇ ಧರ್ಮದ ರಕ್ಷಣೆಗಾಗಿ ತಪಸ್ಸಿನಲ್ಲಿಯೂ ನಿರತರಾಗಿದ್ದಾರೆ.

ಏತೌ ಹಿ ಪರಮಂ ಧಾಮ ಕಾನಯೋರಾಹ್ನಿಕಕ್ರಿಯಾ ।
ಪಿತರೌ ಸರ್ವಭೂತಾನಾಂ ದೈವತಂ ಚ ಯಶಸ್ವಿನೌ ॥೧೯॥
ಕಾಂ ದೇವತಾಂ ತು ಯಜತಃ ಪಿತೄನ್ವಾ ಕಾನ್ಮಹಾಮತೀ ॥೨೦॥

ಇವರಿಬ್ಬರೂ ಪರಮಾಶ್ರಯಸ್ವರೂಪರಾಗಿದ್ದಾರೆ. ಇವರು ಮಾಡುವ ನಿತ್ಯಕರ್ಮಗಳಾದರೂ ಎಂತಹುದು? ಯಶೋವಂತರಾದ ಈ ನರ-ನಾರಾಯಣರು ಸರ್ವಪ್ರಾಣಿಗಳಿಗೂ ಪಿತೃಗಳೂ-ಪರಮದೇವತೆಗಳೂ ಆಗಿದ್ದಾರೆ. ಇಂತಹ ಮಹಾಮತಿಗಳಾದ ಇವರು ಯಾವ ದೇವತೆಯನ್ನು ಪೂಜಿಸುತ್ತಾರೆ? ಯಾವ ಪಿತೃಗಳನ್ನು ಆರಾಧಿಸುತ್ತಾರೆ?”

ಯುಧಿಷ್ಠಿರ! ನಾರದರು ಹೀಗೆ ಮನಸ್ಸಿನಲ್ಲಿ ಯೋಚಿಸುತ್ತಾ ಶ್ರೀಮನ್ನಾರಾಯಣನ ಮೇಲಿನ ಭಕ್ತಿಯ ಪ್ರಭಾವದಿಂದಾಗಿ ಒಡನೆಯೇ ನರ-ನಾರಾಯಣದೇವತೆಗಳ ಸಮೀಪದಲ್ಲಿ ಕಾಣಿಸಿಕೊಂಡರು.

ನರ-ನಾರಾಯಣರ್ಷಿಗಳು ದೇವಸಂಬಂಧವಾದ ಮತ್ತು ಪಿತೃ ಸಂಬಂಧವಾದ ಪೂಜೆಯನ್ನು ಮುಗಿಸಿದನಂತರ ತಮ್ಮ ಸಮೀಪಕ್ಕೆ ಬಂದಿದ್ದ ನಾರದರನ್ನು ನೋಡಿದರು. ಒಡನೆಯೇ ಅವರು ಶಾಸ್ತ್ರವಿಧಿಗೆ ಅನುಸಾರವಾಗಿ ನಾರದರನ್ನು ಸತ್ಕರಿಸಿದರು. ಮಹಾನುಭಾವರಾದ, ದೇವೋತ್ತಮರಾದ ನರ-ನಾರಾಯಣರು ಮಹದಾಶ್ಚರ್ಯಕರವಾದ ರೀತಿಯಲ್ಲಿ, ಹಿಂದೆಂದೂ ಕಾಣದ ರೀತಿಯಲ್ಲಿ ವಿಸ್ತಾರವಾದ ಶಾಸ್ತ್ರವಿಧಿಪೂರ್ವಕವಾಗಿ ವ್ಯವಹರಿಸಿದುದನ್ನು ಕಂಡು ದೇವರ್ಷಿಗಳಾದ ಭಗವಾನ್ ನಾರದರು ಸುಪ್ರೀತರಾಗಿ ಅವರ ಸಮೀಪದಲ್ಲಿಯೇ ಕುಳಿತುಕೊಂಡರು.

ನಾರದರು ಪ್ರಸನ್ನವಾದ ಮನಸ್ಸಿನಿಂದ ಮಹಾದೇವನಾದ ಭಗವಾನ್ ನಾರಾಯಣನನ್ನು ನಮಸ್ಕರಿಸಿ ಅವನನ್ನೇ ದಿಟ್ಟಿಸಿ ನೋಡುತ್ತಾ ಹೀಗೆ ಹೇಳಿದರು :

ವೇದೇಷು ಸಪುರಾಣೇಷು ಸಾಙ್ಗೋಪಾಙ್ಗೇಷು ಗೀಯಸೇ ।
ತ್ವಮಜಃ ಶಾಶ್ವತೋ ಧಾತಾ ಮಾತಾಮೃತಮನುತ್ತಮಮ್ ॥೨೫॥

"ಭಗವನ್! ಸಾಂಗೋಪಾಂಗವಾದ ವೇದಗಳೂ ಮತ್ತು ಪುರಾಣಗಳೂ ನಿನ್ನ ಮಹಿಮೆಯನ್ನು ಗಾನಮಾಡುತ್ತವೆ. ನೀನು ಹುಟ್ಟಿಲ್ಲದವನು. ಶಾಶ್ವತನು. ಎಲ್ಲರನ್ನೂ ಧರಿಸಿ ಪೋಷಿಸುವವನೂ, ಎಲ್ಲರಿಗೂ ಮಾತಾ ಪಿತೃವೂ, ಸರ್ವೋತ್ತಮವಾದ ಅಮೃತಸ್ವರೂಪನೂ ನೀನೇ ಆಗಿರುವೆ.

ಪ್ರತಿಷ್ಠಿತಂ ಭೂತಭವ್ಯಂ ತ್ವಯಿ ಸರ್ವಮಿದಂ ಜಗತ್ ।
ಚತ್ವಾರೋ ಹ್ಯಾಶ್ರಮಾ ದೇವ ಸರ್ವೇ ಗಾರ್ಹಸ್ಥ್ಯಮೂಲಕಾಃ ।
ಯಜನ್ತೇ ತ್ವಾಮಹರಹರ್ನಾನಾಮೂರ್ತಿಸಮಾಸ್ಥಿತಮ್ ॥೨೬॥

ದೇವ! ಹಿಂದಿನ, ಇಂದಿನ ಮತ್ತು ಮುಂದಿನ ಎಲ್ಲ ಜಗತ್ತುಗಳೂ ನಿನ್ನಲ್ಲಿಯೇ ಪ್ರತಿಷ್ಠಿತವಾಗಿವೆ. ಗೃಹಸ್ಥಾಶ್ರಮವೇ ಮೂಲವಾಗಿರುವ ನಾಲ್ಕು ಆಶ್ರಮಗಳವರೂ ನಾನಾರೂಪಗಳಲ್ಲಿರುವ ನಿನ್ನನ್ನೇ ಪೂಜಿಸುತ್ತಾರೆ.

ಪಿತಾ ಮಾತಾ ಚ ಸರ್ವಸ್ಯ ಜಗತಃ ಶಾಶ್ವತೋ ಗುರುಃ ।
ಕಂ ತ್ವದ್ಯ ಯಜಸೇ ದೇವಂ ಪಿತರಂ ಕಂ ನ ವಿದ್ಮಹೇ ॥೨೭॥

ನೀನು ಈ ಸಂಪೂರ್ಣಜಗತ್ತಿಗೂ ತಾಯಿಯೂ ಆಗಿರುವೆ ; ತಂದೆಯೂ ಆಗಿರುವೆ. ಶಾಶ್ವತನಾದ ಗುರುವೂ ಆಗಿರುವೆ. ಅಂತಹ ನೀನು ಈಗ ಯಾವ ದೇವತೆಯನ್ನು ಮತ್ತು ಪಿತೃದೇವತೆಯನ್ನು ಉದ್ದೇಶಿಸಿ ಪೂಜಿಸುತ್ತಿರುವೆ? ಇದನ್ನು ನಾವು ತಿಳಿದವರಾಗಿಲ್ಲ.”

ನಾರಾಯಣನು ಹೇಳುತ್ತಾನೆ :

ಅವಾಚ್ಯಮೇತದ್ವಕ್ತವ್ಯಮಾತ್ಮಗುಹ್ಯಂ ಸನಾತನಮ್ ।
ತವ ಭಕ್ತಿಮತೋ ಬ್ರಹ್ಮನ್ವಕ್ಷ್ಯಾಮಿ ತು ಯಥಾತಥಮ್ ॥೨೮॥

“ನಾರದ! ನಿಜವಾಗಿ ಹೇಳುವುದಾದರೆ ಈ ವಿಷಯವನ್ನು ಯಾರಿಗೂ ಹೇಳಲೇಬಾರದು. ಈ ವಿಷಯವು ಸನಾತನವಾದ ಆತ್ಮರಹಸ್ಯವಾಗಿದೆ. ಆತ್ಮರಹಸ್ಯವನ್ನು ಯಾರೊಡನೆಯೂ ಹೇಳಬಾರದಾಗಿದ್ದರೂ ಭಕ್ತಿಯಿಂದ ಯುಕ್ತನಾಗಿರುವ ನಿನಗೆ ಈ ವಿಷಯವನ್ನು ಯಥಾವತ್ತಾಗಿಯೇ ಹೇಳುತ್ತೇನೆ.

ಯತ್ತತ್ಸೂಕ್ಷ್ಮಮವಿಜ್ಞೇಯಮವ್ಯಕ್ತಮಚಲಂ ಧ್ರುವಮ್ ।
ಇನ್ದ್ರಿಯೈರಿನ್ದ್ರಿಯಾರ್ಥೈಶ್ಚ ಸರ್ವಭೂತೈಶ್ಚ ವರ್ಜಿತಮ್ ॥೨೯॥

ಸ ಹ್ಯನ್ತರಾತ್ಮಾ ಭೂತಾನಾಂ ಕ್ಷೇತ್ರಜ್ಞಶ್ಚೇತಿ ಕಥ್ಯತೇ ।
ತ್ರಿಗುಣವ್ಯತಿರಿಕ್ತೋ ವೈ ಪುರುಷಶ್ಚೇತಿ ಕಲ್ಪಿತಃ ॥೩೦॥

ತಸ್ಮಾದವ್ಯಕ್ತಮುತ್ಪನ್ನಂ ತ್ರಿಗುಣಂ ದ್ವಿಜಸತ್ತಮ ।
ಅವ್ಯಕ್ತಾ ವ್ಯಕ್ತಭಾವಸ್ಥಾ ಯಾ ಸಾ ಪ್ರಕೃತಿರವ್ಯಯಾ ॥೩೧॥

ನಾರದ! ಯಾವುದು ಅತಿಸೂಕ್ಷ್ಮವಾಗಿರುವುದೋ, ಸಾಧಾರಣ ಮನುಷ್ಯರಿಂದ ತಿಳಿಯಲ್ಪಡದೇ ಇರುವುದೋ, ಅವ್ಯಕ್ತವೂ-ಶಾಶ್ವತವೂ ಆಗಿರುವುದೋ, ಇಂದ್ರಿಯಗಳಿಂದಲೂ – ಇಂದ್ರಿಯಾರ್ಥಗಳಿಂದಲೂ ಸರ್ವಪ್ರಾಣಿಗಳಿಂದಲೂ ಪರಿತ್ಯಕ್ತವಾಗಿದೆಯೋ (ಬೇರೆಯಾಗಿದೆಯೋ)– ಅದೇ ಎಲ್ಲ ಪ್ರಾಣಿಗಳ ಅಂತರಾತ್ಮವೂ ಆಗಿದೆ. ಆ ಆತ್ಮವಸ್ತುವನ್ನೇ ಕ್ಷೇತ್ರಜ್ಞ ನೆಂದೂ ತ್ರಿಗುಣಾತೀತನಾದ ಪುರುಷನೆಂದೂ ಕರೆಯುತ್ತಾರೆ. ಆ ಪರಮಾತ್ಮ ನಿಂದಲೇ ತ್ರಿಗುಣಾತ್ಮಕವಾದ ಅವ್ಯಕ್ತವು ಹುಟ್ಟಿದೆ. ತ್ರಿಗುಣಾತ್ಮಕವಾದ ಅವ್ಯಕ್ತವೇ ವ್ಯಕ್ತಭಾವವನ್ನು ಹೊಂದಿದಾಗ ಅವಿನಾಶಿಯಾದ ಪ್ರಕೃತಿಯೆಂದು ಕರೆಯಲ್ಪಡುತ್ತದೆ.

ತಾಂ ಯೋನಿಮಾವಯೋರ್ವಿದ್ಧಿ ಯೋಽಸೌ ಸದಸದಾತ್ಮಕಃ ।
ಆವಾಭ್ಯಾಂ ಪೂಜ್ಯತೇಽಸೌ ಹಿ ದೈವೇ ಪಿತ್ರ್ಯೇ ಚ ಕಲ್ಪ್ಯತೇ ॥೩೨॥

ಸತ್ತು ಮತ್ತು ಅಸತ್ತು ಎಂದರೆ ಕಾರಣ ಮತ್ತು ಕಾರ್ಯ. ಉಭಯಸ್ವರೂಪಿಯಾದ ಆ ಪರಮಾತ್ಮನೇ ನಮ್ಮಿಬ್ಬರಿಗೂ ಉತ್ಪತ್ತಿಸ್ಥಾನ ನಾಗಿದ್ದಾನೆ–ಎಂಬುದನ್ನು ನೀನು ತಿಳಿ. ನಾವಿಬ್ಬರೂ ಅವನನ್ನೇ ಪೂಜಿಸು ತ್ತೇವೆ. ಅವನನ್ನೇ ನಾವು ದೇವತೆಯೆಂದೂ ಪಿತೃದೇವತೆಯೆಂದೂ ಭಾವಿಸು ತ್ತೇವೆ.

ನಾಸ್ತಿ ತಸ್ಮಾತ್ಪರೋಽನ್ಯೋ ಹಿ ಪಿತಾ ದೇವೋಽಥ ವಾ ದ್ವಿಜ ।
ಆತ್ಮಾ ಹಿ ನಃ ಸ ವಿಜ್ಞೇಯಸ್ತತಸ್ತಂ ಪೂಜಯಾವಹೇ ॥೩೩॥

ಬ್ರಾಹ್ಮಣೋತ್ತಮನೇ! ಅವನಿಗಿಂತಲೂ ಶ್ರೇಷ್ಠನಾದ ಪಿತೃದೇವತೆ ಯಾಗಲೀ ದೇವತೆಯಾಗಲೀ ಬೇರೆ ಯಾರೂ ಇರುವುದಿಲ್ಲ. ಅವನೇ ನಮ್ಮೆಲ್ಲರಿಗೂ ಆತ್ಮಸ್ವರೂಪನಾಗಿದ್ದಾನೆ–ಎಂಬುದನ್ನು ಎಲ್ಲರೂ ತಿಳಿದು ಕೊಳ್ಳಬೇಕು. ಆದುದರಿಂದಲೇ ನಾವು ಯಾವಾಗಲೂ ಅಂತರ್ಯಾಮಿ ಯಾದ ಆ ಪರಮಾತ್ಮನನ್ನು ಪೂಜಿಸುತ್ತಿರುತ್ತೇವೆ.

ತೇನೈಷಾ ಪ್ರಥಿತಾ ಬ್ರಹ್ಮನ್ಮರ್ಯಾದಾ ಲೋಕಭಾವಿನೀ ।
ದೈವಂ ಪಿತ್ರ್ಯಂ ಚ ಕರ್ತವ್ಯಮಿತಿ ತಸ್ಯಾನುಶಾಸನಮ್ ॥೩೪॥

ಲೋಕವನ್ನು ಉನ್ನತಸ್ಥಿತಿಗೆ ಒಯ್ಯುವ ಧರ್ಮಮರ್ಯಾದೆಯನ್ನು ಅವನೇ ಸ್ಥಾಪಿಸಿದ್ದಾನೆ. ದೈವಿಕವಾದ ಮತ್ತು ಪೈತೃಕವಾದ ಕರ್ಮಗಳನ್ನು ಮಾಡಿಯೇ ತೀರಬೇಕೆಂಬುದು ಅವನ ಆಜ್ಞೆಯೇ ಆಗಿದೆ.

ಬ್ರಹ್ಮಾ ಸ್ಥಾಣುರ್ಮನುರ್ದಕ್ಷೋ ಭೃಗುರ್ಧರ್ಮಸ್ತಪೋ ಯಮಃ ।
ಮರೀಚಿರಙ್ಗಿರಾತ್ರಿಶ್ಚ ಪುಲಸ್ತ್ಯಃ ಪುಲಹಃ ಕ್ರತುಃ ॥೩೫॥

ವಸಿಷ್ಠಃ ಪರಮೇಷ್ಠೀ ಚ ವಿವಸ್ವಾನ್ಸೋಮ ಏವ ಚ ।
ಕರ್ದಮಶ್ಚಾಪಿ ಯಃ ಪ್ರೋಕ್ತಃ ಕ್ರೋಧೋ ವಿಕ್ರೀತ ಏವ ಚ ॥೩೬॥

ಏಕವಿಂಶತಿರುತ್ಪನ್ನಾಸ್ತೇ ಪ್ರಜಾಪತಯಃ ಸ್ಮೃತಾಃ ।
ತಸ್ಯ ದೇವಸ್ಯ ಮರ್ಯಾದಾಂ ಪೂಜಯನ್ತಃ ಸನಾತನೀಮ್ ॥೩೭॥

ಬ್ರಹ್ಮಾ, ರುದ್ರ, ಮನು, ದಕ್ಷ, ಭೃಗು, ಧರ್ಮ, ತಪಸ್ಸು, ಯಮ, ಮರೀಚಿ, ಅಂಗಿರಸ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಪರಮೇಷ್ಠೀ, ಸೂರ್ಯ, ಸೋಮ, ಕರ್ದಮ, ಕ್ರೋಧ ಮತ್ತು ವಿಕ್ರೀತ–ಈ ಇಪ್ಪತ್ತೊಂದು ಮಂದಿ ಪ್ರಜಾಪತಿಗಳು ಆ ಪರಬ್ರಹ್ಮಪರಮಾತ್ಮನಿಂದ ಹುಟ್ಟಿದವರೆಂದು ಹೇಳಲ್ಪಟ್ಟಿದ್ದಾರೆ. ಇವರು ಯಾವಾಗಲೂ ಆ ಪರಮಾತ್ಮನ ಸನಾತನವಾದ ಧರ್ಮಮರ್ಯಾದೆಯನ್ನು ಗೌರವಿಸುತ್ತಾರೆ ಹಾಗೂ ಪಾಲಿಸುತ್ತಾರೆ.

ದೈವಂ ಪಿತ್ರ್ಯಂ ಚ ಸತತಂ ತಸ್ಯ ವಿಜ್ಞಾಯ ತತ್ತ್ವತಃ ।
ಆತ್ಮಪ್ರಾಪ್ತಾನಿ ಚ ತತಃ ಪ್ರಾಪ್ನುವನ್ತಿ ದ್ವಿಜೋತ್ತಮಾಃ ॥೩೮॥

ದ್ವಿಜಶ್ರೇಷ್ಠರು ಪರಮಾತ್ಮನಿಗೆ ಪ್ರೀತಿಯಾಗಲೆಂದೇ ವಿಹಿತವಾಗಿರುವ ದೇವಸಂಬಂಧವಾದ ಮತ್ತು ಪಿತೃಸಂಬಂಧವಾದ ಕರ್ಮಗಳನ್ನು ಯಥಾವತ್ತಾಗಿ ತಿಳಿದುಕೊಂಡು ಅದರಂತೆ ಆಚರಿಸುತ್ತಾ ತಮ್ಮ ಅಭೀಷ್ಟಗಳನ್ನು ಪಡೆದುಕೊಳ್ಳುತ್ತಾರೆ.

ಸ್ವರ್ಗಸ್ಥಾ ಅಪಿ ಯೇ ಕೇಚಿತ್ತಾನ್ನಮಸ್ಯನ್ತಿ ದೇಹಿನಃ ।
ತೇ ತತ್ಪ್ರಸಾದಾದ್ಗಚ್ಛನ್ತಿ ತೇನಾದಿಷ್ಟಫಲಾಂ ಗತಿಮ್ ॥೩೯॥

ಸ್ವರ್ಗದಲ್ಲಿರುವ ದಿವ್ಯಶರೀರಿಗಳಲ್ಲಿಯೂ ಯಾವ ಕೆಲವರು ಆ ಪರ

ಮಾತ್ಮನನ್ನು ನಮಸ್ಕರಿಸುವರೋ.–ಅವರು ಅವನ ಅನುಗ್ರಹದಿಂದಾಗಿ ಅವನ ಆಜ್ಞಾನುಸಾರವಾಗಿ ಫಲವು ದೊರೆಯುವ ಉತ್ತಮಗತಿಯನ್ನು ಹೊಂದುತ್ತಾರೆ.

ಯೇ ಹೀನಾಃ ಸಪ್ತದಶಭಿರ್ಗುಣೈಃ ಕರ್ಮಭಿರೇವ ಚ ।
ಕಲಾಃ ಪಞ್ಚದಶ ತ್ಯಕ್ತ್ವಾ ತೇ ಮುಕ್ತಾ ಇತಿ ನಿಶ್ಚಯಃ ॥೪೦॥

ಯಾರು ಹದಿನೈದು ಕಲೆಗಳನ್ನೂ ಪರಿತ್ಯಜಿಸಿ ಹದಿನೇಳು ಗುಣಗಳಿಂದಲೂ ಮತ್ತು ಸತ್ವಾದಿಕರ್ಮಗಳಿಂದಲೂ ಹೀನರಾಗಿರುವರೋ ಅಂತಹವರು ಮುಕ್ತರೇ ಸರಿ. ಇದು ನಿಶ್ಚಯ.*

ಮುಕ್ತಾನಾಂ ತು ಗತಿರ್ಬ್ರಹ್ಮನ್ಕ್ಷೇತ್ರಜ್ಞ ಇತಿ ಕಲ್ಪಿತಾ ।
ಸ ಹಿ ಸರ್ವಗುಣಶ್ಚೈವ ನಿರ್ಗುಣಶ್ಚೈವ ಕಥ್ಯತೇ ॥೪೧॥

ಮುಕ್ತರಾದವರಿಗೆ ಕ್ಷೇತ್ರಜ್ಞನ ಗತಿಯೆಂದು ಭಾವಿತವಾಗಿದೆ. ಕ್ಷೇತ್ರಜ್ಞನು ಸಕಲಗುಣಸಂಪನ್ನನೆಂದೂ ನಿರ್ಗುಣನೆಂದೂ ಹೇಳುತ್ತಾರೆ.

ದೃಶ್ಯತೇ ಜ್ಞಾನಯೋಗೇನ ಆವಾಂ ಚ ಪ್ರಸೃತೌ ತತಃ ।
ಏವಂ ಜ್ಞಾತ್ವಾ ತಮಾತ್ಮಾನಂ ಪೂಜಯಾವಃ ಸನಾತನಮ್ ॥೪೨॥

ಜ್ಞಾನಯೋಗದ ಮೂಲಕವಾಗಿ ಕ್ಷೇತ್ರಜ್ಞನ ಸಾಕ್ಷಾತ್ಕಾರವಾಗುತ್ತದೆ. ನಾವಿಬ್ಬರೂ ಅವನಿಂದ ವಿಕಾಸಗೊಂಡಿದ್ದೇವೆ. (ಹೊರಬಂದಿದ್ದೇವೆ.) ಹೀಗೆ ಭಾವಿಸಿ ನಾವಿಬ್ಬರೂ ಸನಾತನನಾದ ಪರಮಾತ್ಮನನ್ನು ಆರಾಧಿಸುತ್ತೇವೆ.

ತಂ ವೇದಾಶ್ಚಾಶ್ರಮಾಶ್ಚೈವ ನಾನಾಮತಸಮಾಸ್ಥಿತಾಃ ।
ಭಕ್ತ್ಯಾ ಸಂಪೂಜಯನ್ತ್ಯಾಶು ಗತಿಂ ಚೈಷಾಂ ದದಾತಿ ಸಃ ॥೪೩॥

ಕ್ಷೇತ್ರಜ್ಞನಾದ ಆ ಪರಬ್ರಹ್ಮಪರಮಾತ್ಮನನ್ನು ನಾಲ್ಕು ವೇದಗಳೂ, ನಾಲ್ಕು ಆಶ್ರಮಗಳೂ, ನಾನಾವಿಧವಾದ ಮತಗಳನ್ನು ಆಶ್ರಯಿಸಿರತಕ್ಕವರೂ ಭಕ್ತಿಪೂರ್ವಕವಾಗಿ ಆರಾಧಿಸುತ್ತಾರೆ. ಅವರೆಲ್ಲರಿಗೂ ಆ ಪರಮಾತ್ಮನು ಶೀಘ್ರವಾಗಿಯೇ ಶ್ರೇಷ್ಠವಾದ ಗತಿಯನ್ನು ದಯಪಾಲಿಸುತ್ತಾನೆ.

---

* ಗುಣಗಳ ಮತ್ತು ಕಲೆಗಳ ವಿವರವು ೩೨೦ನೆಯ ಅಧ್ಯಾಯದಲ್ಲಿ ಜನಕ–ಸುಲಭಾ ಸಂವಾದದಲ್ಲಿ ಬಂದಿದೆ.

ಯೇ ತು ತದ್ಭಾವಿತಾ ಲೋಕೇ ಹ್ಯೇಕಾನ್ತಿತ್ವಂ ಸಮಾಸ್ಥಿತಾಃ ।
ಏತದಭ್ಯಧಿಕಂ ತೇಷಾಂ ಯತ್ತೇ ತಂ ಪ್ರವಿಶನ್ತ್ಯುತ ॥೪೪॥

ಯಾರು ಆ ಪರಮಾತ್ಮನ ಸ್ಮರಣೆಯನ್ನು ಅನವರತವಾಗಿ ಮಾಡುವರೋ ಮತ್ತು ಅನನ್ಯಭಾವದಿಂದ ಅವನನ್ನು ಆಶ್ರಯಿಸುವರೋ–ಅಂತಹವರು ಪರಮಾತ್ಮನ ಸ್ವರೂಪದಲ್ಲಿಯೇ ಪ್ರವೇಶಿಸಿ ಇತರರಿಗಿಂತಲೂ ಅಧಿಕವಾದ ಲಾಭವನ್ನು ಪಡೆದುಕೊಳ್ಳುತ್ತಾರೆ.

ಇತಿ ಗುಹ್ಯಸಮುದ್ದೇಶಸ್ತವ ನಾರದ ಕೀರ್ತಿತಃ ।
ಭಕ್ತ್ಯಾ ಪ್ರೇಮ್ಣಾ ಚ ವಿಪ್ರರ್ಷೇ ಅಸ್ಮದ್ಭಕ್ತ್ಯಾ ಚ ತೇ ಶ್ರುತಃ ॥೪೫॥

ಬ್ರಹ್ಮರ್ಷಿಯೇ! ನಾರದ! ನಿನಗೆ ಆ ಪರಮಾತ್ಮನಲ್ಲಿ ಅಪಾರವಾದ ಭಕ್ತಿಯಿದೆ. ನಮ್ಮನ್ನೂ ಭಕ್ತಿಭಾವದಿಂದ ಕೇಳಿದ್ದೀಯೆ. ಆದುದರಿಂದ ನಿನಗೆ ಅತ್ಯಂತರಹಸ್ಯವಾದ ಈ ವಿಷಯವನ್ನು ಹೇಳಿದ್ದೇನೆ.”

ಇಇ೪ನೆಯ ಅಧ್ಯಾಯವು ಮುಗಿಯಿತು.

೩೩೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾರದರಿಂದ ಶ್ವೇತದ್ವೀಪದ ದರ್ಶನ: ಅಲ್ಲಿಯ ನಿವಾಸಿಗಳ ಸ್ವರೂಪವರ್ಣನೆ: ಉಪರಿಚರವಸುವಿನ ಚರಿತ್ರೆ: ಪಾಂಚರಾತ್ರದ ಉತ್ಪತ್ತಿಯ ಪ್ರಸಂಗ

ಜನಮೇಜಯ! ಭೀಷ್ಮನು ಹೇಳುತ್ತಾನೆ :

ಸ ಏವಮುಕ್ತೋ ದ್ವಿಪದಾಂ ವರಿಷ್ಠೋ
ನಾರಾಯಣೇನೋತ್ತಮಪೂರುಷೇಣ ।
ಜಗಾದ ವಾಕ್ಯಂ ದ್ವಿಪದಾಂ ವರಿಷ್ಠಂ
ನಾರಾಯಣಂ ಲೋಕಹಿತಾಧಿವಾಸಮ್ ॥೧॥

“ಯುಧಿಷ್ಠಿರ! ಪುರುಷೋತ್ತಮನಾದ ಭಗವಾನ್ ನಾರಾಯಣನು ಪುರುಷಶ್ರೇಷ್ಠರಾದ ನಾರದರೊಡನೆ ಹೀಗೆ ಹೇಳಿದನಂತರ ನಾರದರು ಲೋಕ

ಹಿತಕ್ಕೆ ಆಶ್ರಯಭೂತನಾದ ಪುರುಷಾಗ್ರಗಣ್ಯನಾದ ಶ್ರೀಮನ್ನಾರಾಯಣನಿಗೆ ಹೇಳಿದರು :

ಯದರ್ಥಮಾತ್ರಪ್ರಭವೇಣ ಜನ್ಮ
ಕೃತಂ ತ್ವಯಾ ಧರ್ಮಗೃಹೇ ಚತುರ್ಧಾ ।
ತತ್ಸಾಧ್ಯತಾಂ ಲೋಕಹಿತಾರ್ಥಮದ್ಯ
ಗಚ್ಛಾಮಿ ದ್ರಷ್ಟುಂ ಪ್ರಕೃತಿಂ ತವಾದ್ಯಾಮ್ ॥೨॥

"ಭಗವನ್! ನೀನು ಸ್ವಯಂಭುವಾಗಿದ್ದರೂ (ಆತ್ಮಯೋನಿಯಾಗಿದ್ದರೂ) ಯಾವುದೋ ಲೋಕಹಿತಕಾರ್ಯಕ್ಕಾಗಿ ಧರ್ಮನ ಮನೆಯಲ್ಲಿ ನಾಲ್ಕು ರೂಪಗಳಿಂದ ಅವತರಿಸಿರುವೆ. ಆ ಉದ್ದೇಶವನ್ನು ಸಾಧಿಸಿಕೋ. ನಾನೀಗ ಶ್ವೇತದ್ವೀಪದಲ್ಲಿರುವ ನಿನ್ನ ಆದಿಸ್ವರೂಪವನ್ನು ನೋಡಲು ಹೋಗುತ್ತೇನೆ.

ಪೂಜಾಂ ಗುರೂಣಾಂ ಸತತಂ ಕರೋಮಿ
ಪರಸ್ಯ ಗುಹ್ಯಂ ನ ತು ಭಿನ್ನಪೂರ್ವಮ್ ।
ವೇದಾಃ ಸ್ವಧೀತಾ ಮಮ ಲೋಕನಾಥ
ತಪ್ತಂ ತಪೋ ನಾನೃತಮುಕ್ತಪೂರ್ವಮ್ ॥೩॥

ಲೋಕನಾಥನೇ! ನಾನು ಗುರುಜನರ ಸತ್ಕಾರವನ್ನು ಸದಾ ಮಾಡುತ್ತಿರುತ್ತೇನೆ. ಇತರರ ರಹಸ್ಯವಿಷಯಗಳನ್ನು ನಾನು ಈ ಹಿಂದೆ ಯಾವಾಗಲೂ ಬೇರೆಯವರ ಎದುರಿನಲ್ಲಿ ಬಹಿರಂಗಪಡಿಸಿರುವುದಿಲ್ಲ. ನಾನು ವೇದಗಳನ್ನು ಅಧ್ಯಯನಮಾಡಿದ್ದೇನೆ. ತಪಸ್ಸನ್ನು ಮಾಡಿದ್ದೇನೆ. ಯಾವ ಸಮಯದಲ್ಲಿಯೂ ಸುಳ್ಳನ್ನಾಡಿರುವುದಿಲ್ಲ.

ಗುಪ್ತಾನಿ ಚತ್ವಾರಿ ಯಥಾಗಮಂ ಮೇ
ಶತ್ರೌ ಚ ಮಿತ್ರೇ ಚ ಸಮೋಽಸ್ಮಿ ನಿತ್ಯಮ್ ।
ತಂ ಚಾದಿದೇವಂ ಸತತಂ ಪ್ರಪನ್ನ
ಏಕಾನ್ತಭಾವೇನ ವೃಣೋಮ್ಯಜಸ್ರಮ್ ।
ಏಭಿರ್ವಿಶೇಷೈಃ ಪರಿಶುದ್ಧಸತ್ತ್ವಃ
ಕಸ್ಮಾನ್ನ ಪಶ್ಯೇಯಮನನ್ತಮೀಶಮ್ ॥೪॥

ಶಾಸ್ತ್ರದ ಆಜ್ಞೆಗೆ ಅನುಸಾರವಾಗಿ ನಾನು ಕೈಗಳನ್ನೂ, ಕಾಲು

ಗಳನ್ನೂ, ಉದರವನ್ನೂ ಮತ್ತು ಉಪಸ್ಥವನ್ನೂ ರಕ್ಷಿಸಿಕೊಂಡಿರುತ್ತೇನೆ. ಶತ್ರುವಿನಲ್ಲಿಯೂ ಮಿತ್ರನಲ್ಲಿಯೂ ಸಮಭಾವವನ್ನು ಹೊಂದಿದ್ದೇನೆ. ಆದಿದೇವನಾದ ಶ್ರೀಮನ್ನಾರಾಯಣನನ್ನೇ ಸತತವಾಗಿ ಆಶ್ರಯಿಸಿ ಅನನ್ಯಭಾವದಿಂದ ಯಾವಾಗಲೂ ಅವನನ್ನು ಭಜನ-ಕೀರ್ತನಾದಿಗಳ ಮೂಲಕವಾಗಿ ವರಿಸಿಯೇ ಇದ್ದೇನೆ. ಇಂತಹ ವಿಶೇಷಗುಣಗಳನ್ನು ಹೊಂದಿರುವ ಕಾರಣದಿಂದ ಶುದ್ಧಸತ್ತ್ವನಾಗಿರುವ ನಾನು ಏಕೆ ಅನಂತನಾದ ಪರಮೇಶ್ವರನನ್ನು ಕಾಣಲಾರೆನು?"

ಯುಧಿಷ್ಠಿರ! ಬ್ರಹ್ಮನ ಮಾನಸಪುತ್ರರಾದ ನಾರದರು ಹೇಳಿದ ಮಾತನ್ನು ಕೇಳಿ, ಸನಾತನಧರ್ಮದ ರಕ್ಷಕನಾದ ಶ್ರೀಮನ್ನಾರಾಯಣನು ನಾರದರನ್ನು ವಿಧಿಪೂರ್ವಕವಾಗಿ ಸಂಪೂಜಿಸಿ ಶ್ವೇತದ್ವೀಪಕ್ಕೆ ಹೋಗಲು ಅವರಿಗೆ ಅನುಮತಿಯನ್ನಿತ್ತನು. ಬ್ರಹ್ಮಪುತ್ರರಾದ ನಾರದರು ಪುರಾಣರ್ಷಿಯಾದ ಆ ನಾರಾಯಣನನ್ನು ಪ್ರತಿಪೂಜಿಸಿ, ಅವನಿಂದ ಬೀಳ್ಕೊಟ್ಟವರಾಗಿ, ಉತ್ತಮಯೋಗವನ್ನು ಆಶ್ರಯಿಸಿ ಆಕಾಶದ ಕಡೆಗೆ ಹಾರಿ ಅಲ್ಲಿಂದ ಮುಂದೆ ಮೇರುಪರ್ವತಕ್ಕೆ ಹೋಗಿ ಅಲ್ಲಿಯೇ ಅದೃಶ್ಯರಾದರು. ಅನಂತರ ಅವರು ಮೇರುಪರ್ವತದ ಶಿಖರದಲ್ಲಿ ಏಕಾಂತವಾಗಿದ್ದ ಸ್ಥಳಕ್ಕೆ ಹೋಗಿ ಅಲ್ಲಿ ಒಂದು ಮುಹೂರ್ತದ ಕಾಲ ವಿಶ್ರಾಂತಿಯನ್ನು ಹೊಂದಿದರು. ಬಳಿಕ ಅವರು ವಾಯವ್ಯದಿಕ್ಕಿನೆಡೆಗೆ ನೋಡುತ್ತಿದ್ದಾಗ ಹಿಂದೆ ನಾರಾಯಣಮುನಿಯು ಹೇಳಿದ್ದ ಪರಮಾದ್ಭುತವಾದ ದೃಶ್ಯವನ್ನು ಕಂಡರು.

ಕ್ಷೀರೋದಧೇರ್ಯೋತ್ತರತೋ ಹಿ ದ್ವೀಪಃ
ಶ್ವೇತಃ ಸ ನಾಮ್ನಾ ಪ್ರಥಿತೋ ವಿಶಾಲಃ ।
ಮೇರೋಃ ಸಹಸ್ರೈಃ ಸ ಹಿ ಯೋಜನಾನಾಂ
ದ್ವಾತ್ರಿಂಶತೋರ್ಧ್ವಂ ಕವಿಭಿರ್ನಿರುಕ್ತಃ ।
ಅನಿನ್ದ್ರಿಯಾಶ್ಚಾನಶನಾಶ್ಚ ತತ್ರ
ನಿಷ್ಪನ್ದಹೀನಾಃ ಸುಸುಗನ್ಧಿನಸ್ತೇ ॥೯॥

ಕ್ಷೀರಸಾಗರದ ಉತ್ತರಭಾಗದಲ್ಲಿದ್ದ ಶ್ವೇತದ್ವೀಪವೆಂದು ಪ್ರಸಿದ್ಧವಾಗಿದ್ದ ವಿಶಾಲವಾದ ಪ್ರದೇಶವು ನಾರದರಿಗೆ ಗೋಚರಿಸಿತು. ವಿದ್ವಾಂಸರು

ಆ ದ್ವೀಪವನ್ನು ಮೇರುಪರ್ವತಕ್ಕಿಂತಲೂ ಮೂವತ್ತೆರಡು ಸಾವಿರ ಯೋಜನಗಳಷ್ಟು ಎತ್ತರದಲ್ಲಿರುವುದೆಂದು ಹೇಳುತ್ತಾರೆ. ಅಲ್ಲಿಯ ನಿವಾಸಿಗಳು ಇಂದ್ರಿಯಗಳಿಂದ ರಹಿತರಾಗಿರತಕ್ಕವರೂ, ನಿರಾಹಾರಿಗಳೂ, ಚಲನೆಯೇ ಇಲ್ಲದವರೂ, ಜ್ಞಾನಸಂಪನ್ನರೂ, ಸುವಾಸನೆಯುಳ್ಳವರೂ ಆಗಿದ್ದರು.

(ಶುದ್ಧಸತ್ತ್ವವೆಂಬ ಅಪ್ರಾಕೃತದ್ರವ್ಯದಿಂದಲೇ ಶ್ವೇತದ್ವೀಪವು ನಿರ್ಮಿತವಾಗಿದೆ. ಅಲ್ಲಿಯ ನಿವಾಸಿಗಳ ದಿವ್ಯಶರೀರಗಳೂ ಆ ದ್ರವ್ಯದಿಂದಲೇ ರಚಿತವಾಗಿರುವುದರಿಂದ ಪ್ರಾಕೃತೇಂದ್ರಿಯಗಳಿಂದ ರಹಿತವಾದುವು ಎಂದು ತಿಳಿಯಬೇಕು. ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನಗಳೆಂಬ ನವವಿಧಭಕ್ತಿಗಳಿಂದ ಭಗವಂತನನ್ನು ಸೇವಿಸುತ್ತಾ ಸದಾ ಅವನ ಕೈಂಕರ್ಯಪರರಾಗಿಯೇ ಇರುವುದರಿಂದ ಚಲನೆಯಿಲ್ಲದವರು.)

ಶ್ವೇತಾಃ ಪುಮಾಂಸೋ ಗತಸರ್ವಪಾಪಾ-
ಶ್ಚಕ್ಷುರ್ಮುಷಃ ಪಾಪಕೃತಾಂ ನರಾಣಾಮ್ ।
ವಜ್ರಾಸ್ಥಿಕಾಯಾಃ ಸಮಮಾನೋನ್ಮಾನಾ
ದಿವ್ಯಾವಯವರೂಪಾಃ ಶುಭಸಾರೋಪೇತಾಃ ॥೧೦॥
ಛತ್ರಾಕೃತಿಶೀರ್ಷಾ ಮೇಘೌಘನಿನಾದಾಃ
ಸಮಮುಷ್ಕಚತುಷ್ಕಾ ರಾಜೀವಚ್ಛದಪಾದಾಃ ।

ಷಷ್ಟ್ಯಾ ದನ್ತೈರ್ಯುಕ್ತಾಃ ಶುಕ್ಲೈರಷ್ಟಾಭಿರ್ದಂಷ್ಟ್ರಾಭಿರ್ಯೇ ।
ಜಿಹ್ವಾಭಿರ್ಯೇ ವಿಶ್ವವಕ್ತ್ರಂ ಲೇಲಿಹ್ಯನ್ತೇ ಸೂರ್ಯಪ್ರಖ್ಯಮ್ ॥೧೧॥

ಆ ಶ್ವೇತದ್ವೀಪದಲ್ಲಿರುವ ಪುರುಷರು ಬಿಳಿಯ ಬಣ್ಣದವರು. ಸರ್ವಪಾಪಗಳಿಂದಲೂ ರಹಿತರಾಗಿರತಕ್ಕವರು. ಪಾಪಮಾಡಿದ ಜನರ ಕಣ್ಣುಗಳನ್ನು ಅಪಹರಿಸತಕ್ಕವರು. (ಎಂದರೆ ಪಾಪಿಗಳು ಅವರನ್ನು ನೋಡಿದರೆ ಕುರುಡರಾಗುತ್ತಾರೆ) ವಜ್ರದಂತಹ ಅಸ್ಥಿ-ಶರೀರಗಳನ್ನು ಹೊಂದಿರತಕ್ಕವರು. ಮಾನಾಪಮಾನಗಳನ್ನು ಸಮಾನವನ್ನಾಗಿ ಭಾವಿಸತಕ್ಕವರು– (ದ್ವಂದ್ವರಹಿತರು). ದಿವ್ಯವಾದ ಅವಯವ ಮತ್ತು ರೂಪಗಳುಳ್ಳವರು.

ಶುಭಬಲಸಂಪನ್ನರು. ಛತ್ರಾಕೃತಿಯ ಶಿರಸ್ಸುಳ್ಳವರು. ಮೇಘಗಳ ಸಮೂಹದಲ್ಲಿ ಉಂಟಾಗುವ ಶಬ್ದದಂತೆ ಗಂಭೀರವಾದ ಶಬ್ದಗಳುಳ್ಳವರು. ಒಂದೇ ಸಮನಾದ ನಾಲ್ಕು ವೃಷಣಗಳುಳ್ಳವರು. ಕಮಲಗಳ ದಳಗಳನ್ನು ಹೋಲುವ ಪಾದಗಳುಳ್ಳವರು. ಅರುವತ್ತು ಹಲ್ಲುಗಳನ್ನೂ ಬಿಳಿಯದಾದ ಎಂಟು ಕೋರೆದಾಡೆಗಳನ್ನೂ ಹೊಂದಿರತಕ್ಕವರು. ಸೂರ್ಯನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರತಕ್ಕವರು. ವಿಶ್ವಕ್ಕೇ ಮುಖನಾಗಿರುವ ಮಹಾಕಾಲನನ್ನು ನಮ್ಮ ನಾಲಿಗೆಗಳಿಂದ ನೆಕ್ಕುತ್ತಿರುವವರು. (ಕಾಲನನ್ನೂ ಅತಿಕ್ರಮಿಸಿರತಕ್ಕವರು). ಇವೆಲ್ಲವೂ ಶ್ವೇತದ್ವೀಪನಿವಾಸಿಗಳ ಅಸಾಧಾರಣ ವಾದ ದಿವ್ಯರೂಪಗಳು.

ದೇವಂ ಭಕ್ತ್ಯಾ ವಿಶ್ವೋತ್ಪನ್ನಂ
ಯಸ್ಮಾತ್ಸರ್ವೇ ಲೋಕಾಃ ಸಮ್ಪ್ರಸೂತಾಃ ।
ವೇದಾ ಧರ್ಮಾ ಮುನಯಃ ಶಾನ್ತಾ
ದೇವಾಃ ಸರ್ವೇ ತಸ್ಯ ನಿಸರ್ಗಃ ॥೧೨॥

ಯಾವನಿಂದ ಸರ್ವಲೋಕಗಳೂ ಹುಟ್ಟಿವೆಯೋ ಮತ್ತು ಪ್ರಕಟವಾಗಿ ವೆಯೋ-ವೇದಗಳೂ, ಧರ್ಮಗಳೂ, ಶಾಂತರಾದ ಮುನಿಗಳೂ, ಎಲ್ಲ ದೇವತೆಗಳೂ ಯಾವನ ಸೃಷ್ಟಿಯಲ್ಲಿ ಸೇರಿರುವರೋ-ಅಂತಹ ಅನಂತಶಕ್ತಿ ಸಂಪನ್ನನಾದ ಪರಮೇಶ್ವರನನ್ನು ಶ್ವೇತದ್ವೀಪದ ನಿವಾಸಿಗಳು ಭಕ್ತಿಭಾವದಿಂದ ತಮ್ಮ ಹೃದಯದಲ್ಲಿ ಧಾರಣೆಮಾಡಿಕೊಂಡಿರುತ್ತಾರೆ. ಅಂತಹ ಶ್ವೇತದ್ವೀಪ ವನ್ನು ನಾರದರು ಮೇರುಪರ್ವತದ ಶಿಖರದಲ್ಲಿ ನಿಂತು ನೋಡಿದರು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಅನಿನ್ದ್ರಿಯಾ ನಿರಾಹಾರಾ ಅನಿಷ್ಪನ್ದಾಃ ಸುಗನ್ಧಿನಃ ।
ಕಥಂ ತೇ ಪುರುಷಾ ಜಾತಾಃ ಕಾ ತೇಷಾಂ ಗತಿರುತ್ತಮಾ ॥೧೩॥

"ಪಿತಾಮಹನೇ! ಶ್ವೇತದ್ವೀಪದಲ್ಲಿರತಕ್ಕವರು ಇಂದ್ರಿಯರಹಿತರೆಂದೂ ನಿರಾಹಾರಿಗಳೆಂದೂ, ಚಲನೆಯೇ ಇಲ್ಲದವರೆಂದೂ, ಸುಗಂಧ ಯುಕ್ತರಾಗಿರುವವರೆಂದೂ ನೀನು ಹೇಳಿದೆ. ಅಂತಹ ಪುರುಷರು ಹೇಗೆ ಹುಟ್ಟಿದರು? ಅವರ ಉತ್ತಮವಾದ ಗತಿಯು ಯಾವುದು?

ಯೇ ಚ ಮುಕ್ತಾ ಭವನ್ತೀಹ ನರಾ ಭರತಸತ್ತಮ ।
ತೇಷಾಂ ಲಕ್ಷಣಮೇತದ್ಧಿ ತಚ್ಛ್ವೇತದ್ವೀಪವಾಸಿನಾಮ್ ॥೧೪॥

ತಸ್ಮಾನ್ಮೇ ಸಂಶಯಂ ಛಿನ್ಧಿ ಪರಂ ಕೌತೂಹಲಂ ಹಿ ಮೇ ।
ತ್ವಂ ಹಿ ಸರ್ವಕಥಾರಾಮಸ್ತ್ವಾಂ ಚೈವೋಪಾಶ್ರಿತಾ ವಯಮ್ ॥೧೫॥

ಭರತಶ್ರೇಷ್ಠನೇ! ಈ ಲೋಕದಲ್ಲಿ ಮುಕ್ತರಾದ ಜನರಿಗೆ ಯಾವ ಲಕ್ಷಣಗಳಿರುತ್ತವೆಯೆಂದು ಶಾಸ್ತ್ರದಲ್ಲಿ ಹೇಳಿದೆಯೋ –ಅದೇ ಲಕ್ಷಣಗಳೇ ಶ್ವೇತದ್ವೀಪದಲ್ಲಿ ವಾಸಿಸುತ್ತಿರುವವರಿಗೂ ಇವೆ. ಇದು ಹೇಗೆ ಸಾಧ್ಯವೆಂಬುದರ ಬಗೆಗೆ ನನಗೆ ಸಂದೇಹವೂ–ಕುತೂಹಲವೂ ಉಂಟಾಗಿದೆ. ಈ ನನ್ನ ಸಂಶಯವನ್ನು ನಿವಾರಿಸು. ನೀನು ಸರ್ವಕಥೆಗಳಿಗೂ ಉದ್ಯಾನವನದಂತಿರುವೆ. ಕಥೆಗಳನ್ನು ಹೇಳುವುದರಲ್ಲಿ ನಿನಗೂ ಆನಂದವಿದೆ. ನಾವು ನಿನ್ನನ್ನೇ ಆಶ್ರಯಿಸಿದ್ದೇವೆ. ಆದುದರಿಂದ ಈ ಎಲ್ಲ ವಿಷಯಗಳನ್ನೂ ತಿಳಿಸು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ಕಥೆಯು ಬಹಳ ದೊಡ್ಡದು. ಈ ಕಥೆಯನ್ನು ನಾನು ನಮ್ಮ ತಂದೆಯವರ ಬಳಿಯಲ್ಲಿದ್ದಾಗ ಕೇಳಿದ್ದೆನು. ನಿನಗೆ ಈಗ ಹೇಳಲಿರುವ ಈ ಕಥೆಯು ಕಥೆಗಳಲ್ಲಿಯೇ ಸಾರಭೂತವಾದುದೆಂದು ನಿಶ್ಚಯಿಸಲ್ಪಟ್ಟಿದೆ.

ಹಿಂದೆ ಉಪರಿಚರನೆಂಬ ರಾಜನು ಇಡೀ ಭೂಮಂಡಲಕ್ಕೇ ಅಧಿಪತಿಯಾಗಿದ್ದನು. ಅವನು ಇಂದ್ರನ ಮಿತ್ರನಾಗಿದ್ದನು ಮತ್ತು ಪಾಪಹರನಾದ ಶ್ರೀಮನ್ನಾರಾಯಣನ ವಿಖ್ಯಾತನಾದ ಭಕ್ತನೂ ಆಗಿದ್ದನು. ಧರ್ಮಾತ್ಮನಾದ ಉಪರಿಚರನು ಪಿತೃಭಕ್ತನೂ ಆಗಿದ್ದನು. ಆಲಸ್ಯವೇ ಇಲ್ಲದೆ ಪಿತೃಸೇವೆಯನ್ನು ಮಾಡುತ್ತಿದ್ದನು. ಹಿಂದೆ ಇವನಿಗೆ ಭಗವಾನ್ ನಾರಾಯಣನ ವರಪ್ರಸಾದದಿಂದಲೇ ಸಾಮ್ರಾಜ್ಯವು ಪ್ರಾಪ್ತವಾಯಿತು ಮತ್ತು ಅವನು ಇಡೀ ಭೂಮಂಡಲಕ್ಕೆ ಒಡೆಯನಾದನು. ಮೊದಲು ಸೂರ್ಯನ ಮುಖದಿಂದ ಪ್ರಕಟವಾದ ಸಾತ್ವತ (ಪಾಂಚರಾತ್ರ) ವಿಧಿಯನ್ನು ಆಶ್ರಯಿಸಿ ಅವನು ದೇವೇಶನಾದ ಶ್ರೀಮನ್ನಾರಾಯಣನ ಅರ್ಚನೆಯನ್ನು ಮಾಡು

ತ್ತಿದ್ದನು. ಅನಂತರ ಉಳಿದ ಪೂಜಾಸಾಮಗ್ರಿಗಳ ಶೇಷದಿಂದ ಪಿತೃಗಳನ್ನು ಪೂಜಿಸುತ್ತಿದ್ದನು. ಪಿತೃಗಳ ಆರಾಧನೆಯಾದನಂತರ ಉಳಿದ ಪದಾರ್ಥ ಗಳನ್ನು ಬ್ರಾಹ್ಮಣರಿಗೂ ಆಶ್ರಿತರಿಗೂ ಹಂಚಿಕೊಟ್ಟು ಉಳಿದ ಅನ್ನವನ್ನು ತಾನು ಭುಂಜಿಸುತ್ತಿದ್ದನು. ಉಪರಿಚರನು ಸತ್ಯನಿಷ್ಠನಾಗಿದ್ದನು. ಯಾವ ಪ್ರಾಣಿಯನ್ನೂ ಯಾವುದೇ ಕಾರಣದಿಂದಲೂ ಹಿಂಸಿಸುತ್ತಿರಲಿಲ್ಲ.

ಆ ರಾಜನು ಆದಿ-ಮಧ್ಯಾಂತರಹಿತನಾದ, ಅವಿನಾಶಿಯಾದ, ಲೋಕಕರ್ತೃವಾದ, ದೇವದೇವನಾದ ಜನಾರ್ದನನನ್ನು ಸರ್ವಭಾವ ದಿಂದಲೂ ಸೇವಿಸುತ್ತಿದ್ದನು. ಹೀಗೆ ಭಗವಾನ್ ನಾರಾಯಣನಲ್ಲಿ ಅಪಾರವಾದ ಭಕ್ತಿಯನ್ನಿಟ್ಟಿದ್ದ ಶತ್ರುಸೂದನನಾದ ಉಪರಿಚರರಾಜನ ವಿಷಯದಲ್ಲಿ ದೇವರಾಜನಾದ ಇಂದ್ರನು ಪ್ರಸನ್ನನಾಗಿ, ರಾಜನಿಗೆ ತಾನೇ ತನ್ನ ಹಾಸಿಗೆಯಲ್ಲಿಯೂ ಸಿಂಹಾಸನದಲ್ಲಿಯೂ ಸ್ಥಾನವನ್ನು ಕೊಟ್ಟನು.

ಆತ್ಮರಾಜ್ಯಂ ಧನಂ ಚೈವ ಕಲತ್ರಂ ವಾಹನಂ ತಥಾ ।
ಯತ್ತದ್ಭಾಗವತಂ ಸರ್ವಮಿತಿ ತತ್ಪ್ರೋಕ್ಷಿತಂ ಸದಾ ॥೨೩॥

ಉಪರಿಚರನು ತನ್ನ ರಾಜ್ಯ, ಐಶ್ವರ್ಯ, ಭಾರ್ಯೆ, ವಸ್ತು-ವಾಹನ ಗಳು ಇವೇ ಮೊದಲಾದ ಎಲ್ಲವನ್ನೂ ಭಗವಂತನದೆಂದೇ ಭಾವಿಸಿ ಎಲ್ಲ ವನ್ನೂ ಭಗವಂತನಿಗೇ ಸಮರ್ಪಿಸುತ್ತಿದ್ದನು. (ತನ್ನನ್ನೂ ಮತ್ತು ತನ್ನ ದೆಂಬುದೆಲ್ಲವನ್ನೂ ಭಗವತ್ಕೈಂಕರ್ಯೋಪಕರಣಗಳೆಂದೇ ಭಾವಿಸಿದ್ದನು.)

ಕಾಮ್ಯನೈಮಿತ್ತಿಕಾ ರಾಜನ್ಯಜ್ಞಿಯಾಃ ಪರಮಕ್ರಿಯಾಃ ।
ಸರ್ವಾಃ ಸಾತ್ವತಮಾಸ್ಥಾಯ ವಿಧಿಂ ಚಕ್ರೇ ಸಮಾಹಿತಃ ॥೨೪॥

ಉಪರಿಚರನು ಯಾವಾಗಲೂ ಭಗವಂತನಲ್ಲಿಯೇ ಏಕಾಗ್ರಬುದ್ಧಿ ಯುಳ್ಳವನಾಗಿರುತ್ತಾ ಸಕಾಮಕರ್ಮಗಳನ್ನೂ, ನೈಮಿತ್ತಿಕಕರ್ಮಗಳನ್ನೂ, ಯಜ್ಞವೇ ಮೊದಲಾದ ಶ್ರೇಷ್ಠಕರ್ಮಗಳನ್ನೂ ಸಾತ್ವತ (ಪಾಂಚರಾತ್ರಾ ಗಮದ) ವಿಧಿಯನ್ನೇ ಆಶ್ರಯಿಸಿ ಮಾಡುತ್ತಿದ್ದನು.

ಪಾಞ್ಚರಾತ್ರವಿದೋ ಮುಖ್ಯಾಸ್ತಸ್ಯ ಗೇಹೇ ಮಹಾತ್ಮನಃ ।
ಪ್ರಾಯಣಂ ಭಗವತ್ಪ್ರೋಕ್ತಂ ಭುಞ್ಜತೇ ವಾಗ್ರಭೋಜನಮ್ ॥೨೫॥

ಮಹಾತ್ಮನಾದ ಆ ರಾಜನ ಅರಮನೆಯಲ್ಲಿ ಭಗವಂತನಿಗೆ ನಿವೇದಿತವಾದ ಪ್ರಸಾದವನ್ನು ಪಾಂಚರಾತ್ರಾಗಮದಲ್ಲಿ ನಿಷ್ಣಾತರಾದ ವಿಪ್ರಶ್ರೇಷ್ಠರು ಮೊದಲು ಊಟಮಾಡುತ್ತಿದ್ದರು. (ಉಪರಿಚರನು ಅವರ ಶೇಷ ಪ್ರಸಾದವನ್ನು ಭುಂಜಿಸುತ್ತಿದ್ದನು.)

ತಸ್ಯ ಪ್ರಶಾಸತೋ ರಾಜ್ಯಂ ಧರ್ಮೇಣಾಮಿತ್ರಘಾತಿನಃ ।
ನಾನೃತಾ ವಾಕ್ಸಮಭವನ್ಮನೋ ದುಷ್ಟಂ ನ ಚಾಭವತ್ ।
ನ ಚ ಕಾಯೇನ ಕೃತವಾನ್ಸ ಪಾಪಂ ಪರಮಣ್ವಪಿ ॥೨೬॥

ಧರ್ಮದಿಂದ ರಾಜ್ಯವನ್ನಾಳುತ್ತಿದ್ದ ಶತ್ರುನಿಷೂದನನಾದ ಉಪರಿಚರ ರಾಜನ ಬಾಯಿಂದ ಅಸತ್ಯವಾದ ಮಾತು ಹೊರಡುತ್ತಿರಲಿಲ್ಲ. ಅವನ ಮನಸ್ಸು ದುಷ್ಟವಾದ ವಿಷಯಗಳಿಂದ ದೂಷಿತವಾಗುತ್ತಿರಲಿಲ್ಲ. ತನ್ನ ಶರೀರದ ಮೂಲಕವಾಗಿ ಅವನು ಒಂದು ಅಣುಮಾತ್ರವಾದರೂ ಪಾಪವನ್ನು ಮಾಡಲಿಲ್ಲ. (ರಾಜನ ಮಾತು-ಮನಸ್ಸು ಮತ್ತು ಶರೀರಗಳು ಪರಿಶುದ್ಧವಾಗಿದ್ದುವು. ಅವನು ತ್ರಿಕರಣಶುದ್ಧನಾಗಿದ್ದನು.)

ಯೇ ಹಿ ತೇ ಋಷಯಃ ಖ್ಯಾತಾಃ ಸಪ್ತ ಚಿತ್ರಶಿಖಣ್ಡಿನಃ ।
ತೈರೇಕಮತಿಭಿರ್ಭೂತ್ವಾ ಯತ್ಪ್ರೋಕ್ತಂ ಶಾಸ್ತ್ರಮುತ್ತಮಮ್ ॥೨೭॥
ವೇದೈಶ್ಚತುರ್ಭಿಃ ಸಮಿತಂ ಕೃತಂ ಮೇರೌ ಮಹಾಗಿರೌ ।
ಆಸ್ಯೈಃ ಸಪ್ತಭಿರುದ್ಗೀರ್ಣಂ ಲೋಕಧರ್ಮಮನುತ್ತಮಮ್ ॥೨೮॥
ಮರೀಚಿರತ್ರ್ಯಙ್ಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚ ಮಹಾತೇಜಾಸ್ತೇ ಹಿ ಚಿತ್ರಶಿಖಣ್ಡಿನಃ ॥೨೯॥

ಈಗ ನಾನು ನಿನಗೆ ಮಂತ್ರ, ಸ್ಮೃತಿ ಮತ್ತು ಆಗಮಗಳು ಯಾವ ರೀತಿಯಲ್ಲಿ ಉತ್ಪತ್ತಿಯಾದುವೆಂಬುದನ್ನು ಹೇಳುತ್ತೇನೆ, ಕೇಳುವವನಾಗು. ಮರೀಚಿ, ಅತ್ರಿ, ಅಂಗಿರಸ, ಪುಲಸ್ತ್ಯ, ಪುಲಹ, ಕ್ರತು ಮತ್ತು ಮಹಾತೇಜಸ್ವಿಯಾದ ವಸಿಷ್ಠ –ಇವರಿಗೆ ಚಿತ್ರಶಿಖಂಡಿಗಳೆಂದು ಹೆಸರು. ಚಿತ್ರಶಿಖಂಡಿಗಳೆಂದು ಖ್ಯಾತರಾಗಿರುವ ಈ ಸಪ್ತರ್ಷಿಗಳೂ ಮಹಾಗಿರಿಯಾದ ಮೇರುಪರ್ವತದಲ್ಲಿ ಸೇರಿ ಐಕಮತ್ಯದಿಂದ ನಾಲ್ಕು ವೇದಗಳಿಗೂ ಸಮಾನ

ವಾದ ಮತ್ತು ಆದರಣೀಯವಾದ ಶ್ರೇಷ್ಠವಾದ ಶಾಸ್ತ್ರವನ್ನು ರಚಿಸಿದರು. ಆ ಶಾಸ್ತ್ರದಲ್ಲಿ ಆ ಸಪ್ತರ್ಷಿಗಳ ಏಳು ಮುಖಗಳಿಂದ ಪ್ರಕಟವಾದ ಪರಮ ಶ್ರೇಷ್ಠವಾದ ಲೋಕಧರ್ಮವು ಹೇಳಲ್ಪಟ್ಟಿದೆ.

ಸಪ್ತ ಪ್ರಕೃತಯೋ ಹ್ಯೇತಾಸ್ತಥಾ ಸ್ವಾಯಮ್ಭುವೋಽಷ್ಟಮಃ ।
ಏತಾಭಿರ್ಧಾರ್ಯತೇ ಲೋಕಸ್ತಾಭ್ಯಃ ಶಾಸ್ತ್ರಂ ವಿನಿಃಸೃತಮ್ ॥೩೦॥

ಈ ಏಳು ಮಂದಿ ಋಷಿಗಳೂ ಮತ್ತು ಎಂಟನೆಯವನಾದ ಸ್ವಾಯಂಭುವ ಮನುವೂ ಲೋಕಕ್ಕೆ ಪ್ರಕೃತಿ (ಕಾರಣ) ಸ್ವರೂಪರು. ಲೋಕಗಳನ್ನು ಧರಿಸಿರುವವರು. ಪಾಂಚರಾತ್ರಾಗಮವು ಇವರಿಂದ ಹೊರ ಹೊಮ್ಮಿತು.

ಏಕಾಗ್ರಮನಸೋ ದಾನ್ತಾ ಮುನಯಃ ಸಂಯಮೇ ರತಾಃ ।
ಭೂತಭವ್ಯಭವಿಷ್ಯಜ್ಞಾಃ ಸತ್ಯಧರ್ಮಪರಾಯಣಾಃ ॥೩೧॥

ಇವರೆಲ್ಲರೂ ಪರಬ್ರಹ್ಮದಲ್ಲಿಯೇ ಏಕಾಗ್ರವಾದ ಮನಸ್ಸುಳ್ಳವರು. ಜಿತೇಂದ್ರಿಯರು. ಮನಸ್ಸನ್ನು ಸಂಯಮಮಾಡಿರತಕ್ಕವರು. ಹಿಂದಿನದು, ಇಂದಿನದು ಮತ್ತು ಮುಂದಿನದನ್ನು ತಿಳಿದಿರತಕ್ಕವರು. ಸತ್ಯಧರ್ಮ ಪರಾಯಣರು.

ಇದಂ ಶ್ರೇಯ ಇದಂ ಬ್ರಹ್ಮ ಇದಂ ಹಿತಮನುತ್ತಮಮ್ ।
ಲೋಕಾನ್ಸಂಚಿನ್ತ್ಯ ಮನಸಾ ತತಃ ಶಾಸ್ತ್ರಂ ಪ್ರಚಕ್ರಿರೇ ॥೩೨॥

ಇವರು ತಮ್ಮಲ್ಲಿಯೇ ಸತತವಾಗಿ ಚಿಂತಿಸಿ–'ಹೀಗೆ ಮಾಡುವುದರಿಂದ ಪ್ರಾಣಿಗಳಿಗೆ ಶ್ರೇಯಸ್ಸುಂಟಾಗುತ್ತದೆ. ಇಂತಹ ವಿಧಾನದಿಂದ ಪರಬ್ರಹ್ಮದ ಪ್ರಾಪ್ತಿಯಾಗುತ್ತದೆ. ಇಂತಹ ಕರ್ಮಗಳನ್ನು ಮಾಡುವುದರಿಂದ ಎಲ್ಲರಿಗೂ ಉತ್ತಮೋತ್ತಮವಾದ ಹಿತವುಂಟಾಗುತ್ತದೆ'–ಎಂಬುದನ್ನು ನಿರ್ಧರಿಸಿ ಅಂತಹ ವಿಧಾನಗಳನ್ನೇ ಶಾಸ್ತ್ರರೂಪದಲ್ಲಿ ಪ್ರಕಟಪಡಿಸಿದರು.

ತತ್ರ ಧರ್ಮಾರ್ಥಕಾಮಾ ಹಿ ಮೋಕ್ಷಃ ಪಶ್ಚಾಚ್ಚ ಕೀರ್ತಿತಃ ।
ಮರ್ಯಾದಾ ವಿವಿಧಾಶ್ಚೈವ ದಿವಿ ಭೂಮೌ ಚ ಸಂಸ್ಥಿತಾಃ ॥೩೩॥

ಅವರು ರಚಿಸಿರುವ ಆ ಶಾಸ್ತ್ರದಲ್ಲಿ ಮೊದಲು ಧರ್ಮಾರ್ಥ-ಕಾಮಗಳ

ವಿಷಯಗಳಿವೆ. ಅನಂತರ ಮೋಕ್ಷದ ವಿಷಯವನ್ನು ವಿವರಿಸಿದ್ದಾರೆ. ಸ್ವರ್ಗದಲ್ಲಿಯೂ ಮತ್ತು ಭೂಮಿಯಲ್ಲಿಯೂ ಪ್ರಚಲಿತವಾಗಿರುವ ನಾನಾವಿಧವಾದ ಮರ್ಯಾದೆಗಳೂ ಅವರು ರಚಿಸಿರುವ ಶಾಸ್ತ್ರದಲ್ಲಿ ಪ್ರತಿಪಾದಿತವಾಗಿವೆ.

ಆರಾಧ್ಯ ತಪಸಾ ದೇವಂ ಹರಿಂ ನಾರಾಯಣಂ ಪ್ರಭುಮ್ ।
ದಿವ್ಯಂ ವರ್ಷಸಹಸ್ರಂ ವೈ ಸರ್ವೇ ತೇ ಋಷಿಭಿಃ ಸಹ ॥೩೪॥

ನಾರಾಯಣಾನುಶಾಸ್ತಾ ಹಿ ತದಾ ದೇವೀ ಸರಸ್ವತೀ ।
ವಿವೇಶ ತಾನೃಷೀನ್ಸರ್ವಾಲ್ಲೋಕಾನಾಂ ಹಿತಕಾಮ್ಯಯಾ ॥೩೫॥

ಚಿತ್ರಶಿಖಂಡಿಗಳೆಂದು ವಿಖ್ಯಾತರಾದ ಸಪ್ತರ್ಷಿಗಳು ಇತರ ಋಷಿಗಳೊಡನೆಯೂ ಸೇರಿ ಒಂದು ಸಾವಿರ ದಿವ್ಯವರ್ಷಪರ್ಯಂತವಾಗಿ ಪ್ರಭುವಾದ, ಪಾಪಹರನಾದ ನಾರಾಯಣನನ್ನು ತಪಸ್ಸಿನ ಮೂಲಕವಾಗಿ ಆರಾಧಿಸಿದರು. ಸುಪ್ರೀತನಾದ ಶ್ರೀಹರಿಯು ಋಷಿಗಳ ಆಶಯವನ್ನು ತಿಳಿದು ಸರಸ್ವತೀದೇವಿಯನ್ನು ಅವರ ಬಳಿಗೆ ಕಳುಹಿಸಿಕೊಟ್ಟನು. ನಾರಾಯಣನ ಆಜ್ಞಾನುಸಾರವಾಗಿ ಮತ್ತು ಎಲ್ಲ ಲೋಕಗಳಿಗೂ ಹಿತವನ್ನುಂಟುಮಾಡುವ ಇಚ್ಛೆಯಿಂದ ಸರಸ್ವತೀದೇವಿಯು ಆ ಎಲ್ಲ ಋಷಿಗಳನ್ನೂ ಪ್ರವೇಶಿಸಿದಳು.

ತತಃ ಪ್ರವರ್ತಿತಾ ಸಮ್ಯಕ್ತಪೋವಿದ್ಭಿರ್ದ್ವಿಜಾತಿಭಿಃ ।
ಶಬ್ದೇ ಚಾರ್ಥೇ ಚ ಹೇತೌ ಚ ಏಷಾ ಪ್ರಥಮಸರ್ಗಜಾ ॥೩೬॥

ಅನಂತರ ತಪಸ್ವಿಗಳಾದ ಆ ಬ್ರಾಹ್ಮಣರು ಶಬ್ದ, ಅರ್ಥ ಮತ್ತು ಕಾರಣಗಳಿಂದ ಯುಕ್ತವಾದ ಆ ಶಾಸ್ತ್ರವನ್ನು ಲೋಕದಲ್ಲಿ ಪ್ರವರ್ತನೆ ಮಾಡಿದರು. ಅದು ಪ್ರಥಮಸೃಷ್ಟಿಯಲ್ಲಿ ರಚಿತವಾದುದು.

ಆದಾವೇವ ಹಿ ತಚ್ಛಾಸ್ತ್ರಮೋಂಕಾರಸ್ವರಪೂಜಿತಮ್ ।
ಋಷಿಭಿಃ ಶ್ರಾವಿತಂ ಯತ್ರ ತತ್ರ ಕಾರುಣಿಕೋ ಹ್ಯಸೌ ॥೩೭॥

ಆರಂಭದಲ್ಲಿಯೇ ಆ ಶಾಸ್ತ್ರವು, ಓಂಕಾರಸ್ವರದಿಂದ ಗೌರವಿಸಲ್ಪಟ್ಟಿದೆ. ಋಷಿಗಳೆಲ್ಲರೂ ಸೇರಿ ಆ ಶಾಸ್ತ್ರವನ್ನು ಎಲ್ಲಿ ಪ್ರಕಟಪಡಿಸಿದರೋ–ಅಲ್ಲಿ ಪರಮಕಾರುಣಿಕನಾದ ಭಗವಂತನೇ ವಿರಾಜಮಾನನಾಗಿದ್ದನು.

ತತಃ ಪ್ರಸನ್ನೋ ಭಗವಾನನಿರ್ದಿಷ್ಟಶರೀರಗಃ ।
ಋಷೀನುವಾಚ ತಾನ್ಸರ್ವಾನದೃಶ್ಯಃ ಪುರುಷೋತ್ತಮಃ ॥೩೮॥

ಬಳಿಕ ಅನಿರ್ವಚನೀಯವಾದ ಶರೀರವನ್ನು ಹೊಂದಿದ್ದ ಭಗವಾನ್ ಪುರುಷೋತ್ತಮನು ಪ್ರಸನ್ನನಾಗಿ ಅದೃಶ್ಯನಾಗಿಯೇ ಇದ್ದುಕೊಂಡು ಆ ಋಷಿಗಳಿಗೆ ಹೇಳಿದನು :

ಕೃತಂ ಶತಸಹಸ್ರಂ ಹಿ ಶ್ಲೋಕಾನಾಮಿದಮುತ್ತಮಮ್ ।
ಲೋಕತನ್ತ್ರಸ್ಯ ಕೃತ್ಸ್ನಸ್ಯ ಯಸ್ಮಾದ್ಧರ್ಮಃ ಪ್ರವರ್ತತೇ ॥೩೯॥

“ಮುನಿಶ್ರೇಷ್ಠರೇ! ನೀವು ಒಂದು ಲಕ್ಷ ಶ್ಲೋಕಗಳಲ್ಲಿ ಇಡೀ ಲೋಕ ತಂತ್ರವನ್ನು ಪ್ರತಿಪಾದಿಸುವ ಉತ್ತಮವಾದ ಗ್ರಂಥವನ್ನು ರಚಿಸಿರುವಿರಿ. ಇದರಿಂದ ಸಮಗ್ರವಾದ ಲೋಕತಂತ್ರಧರ್ಮವು ಪ್ರಚಲಿತವಾಗುತ್ತದೆ.

ಪ್ರವೃತ್ತೌ ಚ ನಿವೃತ್ತೌ ಚ ಯಸ್ಮಾದೇತದ್ಭವಿಷ್ಯತಿ ।
ಯಜುರ್‌ಋಕ್ಸಾಮಭಿರ್ಜುಷ್ಟಮಥರ್ವಾಂಗಿರಸೈಸ್ತಥಾ ॥೪೦॥

ನೀವು ರಚಿಸಿರುವ ಈ ಶಾಸ್ತ್ರವು ಪ್ರವೃತ್ತಿಮಾರ್ಗದ ವಿಷಯದಲ್ಲಿಯೂ ಮತ್ತು ನಿವೃತ್ತಿಮಾರ್ಗದ ವಿಷಯದಲ್ಲಿಯೂ ಋಗ್ಯಜುಸ್ಸಾಮಾಥರ್ವಣ ವೇದಗಳ ಆಶಯದಿಂದ ಸೇವಿತವಾಗಿದೆ.

ಯಥಾ ಪ್ರಮಾಣಂ ಹಿ ಮಯಾ ಕೃತೋ ಬ್ರಹ್ಮಾ ಪ್ರಸಾದತಃ ।
ರುದ್ರಶ್ಚ ಕ್ರೋಧಜೋ ವಿಪ್ರಾ ಯೂಯಂ ಪ್ರಕೃತಯಸ್ತಥಾ ॥೪೧॥
ಸೂರ್ಯಾಚನ್ದ್ರಮಸೌ ವಾಯುರ್ಭೂಮಿರಾಪೋಽಗ್ನಿರೇವ ಚ ।
ಸರ್ವೇ ಚ ನಕ್ಷತ್ರಗಣಾ ಯಚ್ಚ ಭೂತಾಭಿಶಬ್ದಿತಮ್ ॥೪೨॥
ಅಧಿಕಾರೇಷು ವರ್ತನ್ತೇ ಯಥಾಸ್ವಂ ಬ್ರಹ್ಮವಾದಿನಃ ।
ಸರ್ವೇ ಪ್ರಮಾಣಂ ಹಿ ಯಥಾ ತಥಾ ತಚ್ಛಾಸ್ತ್ರಮುತ್ತಮಮ್ ।
ಭವಿಷ್ಯತಿ ಪ್ರಮಾಣಂ ವೈ ಏತನ್ಮದನುಶಾಸನಮ್ ॥೪೩॥

ಬ್ರಾಹ್ಮಣೋತ್ತಮರೇ! ಯಾವ ರೀತಿಯಲ್ಲಿ ನನ್ನ ಪ್ರಸನ್ನತೆಯಿಂದ ಬ್ರಹ್ಮನು ಪ್ರಮಾಣವಾಗಿ ಮಾಡಲ್ಪಟ್ಟಿರುವನೋ, ಕೋಪದಿಂದ ಹುಟ್ಟಿದ

ರುದ್ರನೂ, ಪ್ರಕೃತಿರೂಪರಾಗಿರುವ ನೀವುಗಳೂ, ಸೂರ್ಯ-ಚಂದ್ರರೂ, ಭೂತಗಳೆಂದು ಕರೆಯಲ್ಪಡುವ ವಾಯು, ಭೂಮಿ, ಜಲ, ಅಗ್ನಿ ಮತ್ತು ನಕ್ಷತ್ರಗಳೂ, ಬ್ರಹ್ಮವಾದಿಗಳೂ –ತಮ್ಮ-ತಮ್ಮ ಅಧಿಕಾರದಲ್ಲಿದ್ದು ಪ್ರಮಾಣ ಗಳಾಗಿರುವಂತೆ–ನೀವು ರಚಿಸಿರುವ ಈ ಶಾಸ್ತ್ರವೂ ಲೋಕದಲ್ಲಿ ಪ್ರಮಾಣ ಭೂತವಾಗಿರಲಿ. ಇದು ನನ್ನ ಆಜ್ಞೆ.

ತಸ್ಮಾತ್ಪ್ರವಕ್ಷ್ಯತೇ ಧರ್ಮಾನ್ಮನುಃ ಸ್ವಾಯಮ್ಭುವಃ ಸ್ವಯಮ್ ॥೪೪॥
ಉಶನಾ ಬೃಹಸ್ಪತಿಶ್ಚೈವ ಯದೋತ್ಪನ್ನೌ ಭವಿಷ್ಯತಃ ।
ತದಾ ಪ್ರವಕ್ಷ್ಯತಃ ಶಾಸ್ತ್ರಂ ಯುಷ್ಮನ್ಮತಿಭಿರುದ್ಧೃತಮ್ ॥೪೫॥

ನೀವು ರಚಿಸಿರುವ ಈ ಶಾಸ್ತ್ರವನ್ನು ಸ್ವಾಯಂಭುವಮನುವೇ ಸ್ವತಃ ಉದ್ಧರಿಸಿ ಧರ್ಮವನ್ನು ಉಪದೇಶಿಸುತ್ತಾನೆ. ಶುಕ್ರ-ಬೃಹಸ್ಪತಿಗಳೂ ಹುಟ್ಟಿದನಂತರ ಅವರೂ ನಿಮ್ಮ ಬುದ್ಧಿಯಿಂದ ಪ್ರಕಟವಾಗಿರುವ ಈ ಶಾಸ್ತ್ರವನ್ನು ಪ್ರವಚನಮಾಡುತ್ತಾರೆ.

ಸ್ವಾಯಮ್ಭುವೇಷು ಧರ್ಮೇಷು ಶಾಸ್ತ್ರೇ ಚೌಶನಸೇ ಕೃತೇ ।
ಬೃಹಸ್ಪತಿಮತೇ ಚೈವ ಲೋಕೇಷು ಪ್ರವಿಚಾರಿತೇ ॥೪೬॥

ಯುಷ್ಮತ್ಕೃತಮಿದಂ ಶಾಸ್ತ್ರಂ ಪ್ರಜಾಪಾಲೋ ವಸುಸ್ತತಃ ।
ಬೃಹಸ್ಪತಿಸಕಾಶಾದ್ವೈ ಪ್ರಾಪ್ಸ್ಯತೇ ದ್ವಿಜಸತ್ತಮಾಃ ॥೪೭॥

ಬ್ರಾಹ್ಮಣಶ್ರೇಷ್ಠರೇ! ಸ್ವಾಯಂಭುವಮನುವಿನಿಂದ ರಚಿತವಾದ ಧರ್ಮಶಾಸ್ತ್ರಗಳೂ, ಶುಕ್ರನಿಂದ ರಚಿತವಾದ ಧರ್ಮಶಾಸ್ತ್ರಗಳೂ ಮತ್ತು ಬೃಹಸ್ಪತಿಯ ಅಭಿಪ್ರಾಯಾನುಸಾರವಾಗಿ ರಚಿತವಾದ ಶಾಸ್ತ್ರಗಳೂ ಲೋಕ ದಲ್ಲಿ ಪ್ರಚುರವಾಗಿರಲಾಗಿ ಪ್ರಜಾಪಾಲಕನಾದ ಉಪರಿಚರವಸುವು ನೀವು ರಚಿಸಿರುವ ಈ ಶಾಸ್ತ್ರವನ್ನೇ ಬೃಹಸ್ಪತಿಯಿಂದ ಪಡೆಯುವನು.

ಸ ಹಿ ಸದ್ಭಾವಿತೋ ರಾಜಾ ಮದ್ಭಕ್ತಶ್ಚ ಭವಿಷ್ಯತಿ ।
ತೇನ ಶಾಸ್ತ್ರೇಣ ಲೋಕೇಷು ಕ್ರಿಯಾಃ ಸರ್ವಾಃ ಕರಿಷ್ಯತಿ ॥೪೮॥

ಸತ್ಪುರುಷರಿಂದ ಸಮ್ಮಾನಿತನಾಗುವ ಆ ರಾಜನು ನನ್ನ ಪರಮ ಭಕ್ತನಾಗುತ್ತಾನೆ ಮತ್ತು ಲೋಕದಲ್ಲಿ ಆ ಶಾಸ್ತ್ರಾನುಸಾರವಾಗಿಯೇ ಸಕಲ ಕರ್ಮಗಳನ್ನೂ ಮಾಡುತ್ತಾನೆ.

ಏತದ್ಧಿ ಯುಷ್ಮಚ್ಛಾಸ್ತ್ರಾಣಾಂ ಶಾಸ್ತ್ರಮುತ್ತಮಸಂಜ್ಞಿತಮ್ ।
ಏತದರ್ಥ್ಯಂ ಚ ಧರ್ಮ್ಯಂ ಚ ರಹಸ್ಯಂ ಚೈತದುತ್ತಮಮ್ ॥೪೯॥

ನಿಮ್ಮಿಂದ ರಚಿಸಲ್ಪಟ್ಟಿರುವ ಈ ಶಾಸ್ತ್ರವು ಇತರ ಎಲ್ಲ ಶಾಸ್ತ್ರಗಳಿಗಿಂತಲೂ ಶ್ರೇಷ್ಠವೆಂದು ಪರಿಗಣಿಸಲ್ಪಡುತ್ತದೆ. ನೀವು ರಚಿಸಿರುವ ಈ ಶಾಸ್ತ್ರವು ಧರ್ಮಶಾಸ್ತ್ರವೂ ಆಗಿದೆ ; ಅರ್ಥಶಾಸ್ತ್ರವೂ ಆಗಿದೆ. ರಹಸ್ಯ ವಿಷಯಗಳಿಂದ ಕೂಡಿರುವ ಶ್ರೇಷ್ಠವಾದ ಗ್ರಂಥವೂ ಆಗಿದೆ.

ಅಸ್ಯ ಪ್ರವರ್ತನಾಚ್ಚೈವ ಪ್ರಜಾವನ್ತೋ ಭವಿಷ್ಯಥ ।
ಸ ಚ ರಾಜಶ್ರಿಯಾ ಯುಕ್ತೋ ಭವಿಷ್ಯತಿ ಮಹಾನ್ವಸುಃ ॥೫೦॥

ಇದನ್ನು ಪ್ರಚುರಪಡಿಸುವುದರಿಂದ ನೀವು ಸುಪ್ರಜಾಸಂಪನ್ನರಾಗುವಿರಿ. ಉಪರಿಚರವಸುರಾಜನೂ ಈ ಶಾಸ್ತ್ರವನ್ನೇ ಅನುಸರಿಸಿ ಕರ್ಮಗಳನ್ನು ಮಾಡುವುದರಿಂದ ರಾಜ್ಯಲಕ್ಷ್ಮಿಯಿಂದ ಸಂಪನ್ನನಾಗಿ ಮಹಾಪುರುಷನಾಗುತ್ತಾನೆ.

ಸಂಸ್ಥಿತೇ ತು ನೃಪೇ ತಸ್ಮಿಞ್ಛಾಸ್ತ್ರಮೇತತ್ಸನಾತನಮ್ ।
ಅನ್ತರ್ಧಾಸ್ಯತಿ ತತ್ಸರ್ವಮೇತದ್ವಃ ಕಥಿತಂ ಮಯಾ ॥೫೧॥

ಉಪರಿಚರರಾಜನು ದಿವಂಗತನಾದ ಬಳಿಕ ಈ ಸನಾತನಶಾಸ್ತ್ರವೂ ಲುಪ್ತವಾಗಿ ಹೋಗುತ್ತದೆ. ನೀವು ರಚಿಸಿರುವ ಈ ಶಾಸ್ತ್ರದ ಸಂಬಂಧವಾಗಿ ಎಲ್ಲ ವಿಷಯಗಳನ್ನೂ ನಿಮಗೆ ಹೇಳಿದ್ದೇನೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಪುರುಷೋತ್ತಮನಾದ ಶ್ರೀಮನ್ನಾರಾಯಣನು ಅದೃಶ್ಯನಾಗಿಯೇ ಋಷಿಗಳೊಡನೆ ಇಷ್ಟು ಹೇಳಿ ಋಷಿಗಳೆಲ್ಲರನ್ನೂ ಅಲ್ಲಿಯೇ ಬಿಟ್ಟು ಅಜ್ಞಾತವಾದ ದಿಕ್ಕಿನೆಡೆಗೆ ಹೊರಟುಹೋದನು. ಬಳಿಕ ಸಕಲಲೋಕಗಳ ಪ್ರಯೋಜನವನ್ನೂ ಹಿತವನ್ನೂ ಸತತವಾಗಿ ಚಿಂತಿಸುವ ಸ್ವಭಾವವುಳ್ಳ ಲೋಕಪಿತೃಗಳಾದ ಆ ಸಪ್ತರ್ಷಿಗಳು ಧರ್ಮಕ್ಕೆ ಮೂಲಭೂತವಾಗಿದ್ದ ಸನಾತನವಾದ ಆ ಶಾಸ್ತ್ರವನ್ನು ಸರ್ವತ್ರ ಪ್ರಚಾರಮಾಡಿದರು.

ಪ್ರಥಮಕಲ್ಪದ ಪ್ರಥಮಯುಗದಲ್ಲಿ ಸಪ್ತರ್ಷಿಗಳಲ್ಲೊಬ್ಬರಾದ

ಅಂಗಿರಸರಿಗೆ ಬೃಹಸ್ಪತಿಯು ಹುಟ್ಟಿದನು. ಸರ್ವಧರ್ಮಪ್ರವರ್ತಕರಾದ ಸರ್ವಲೋಕಗಳನ್ನೂ ಧಾರಣೆಮಾಡಿರುವ ಸಪ್ತರ್ಷಿಗಳು ತಪಸ್ಸುಮಾಡಲು ನಿಶ್ಚಯಿಸಿ ಸಾಂಗೋಪಾಂಗವಾದ ವೇದಗಳಿಂದಲೂ ಉಪ ನಿಷತ್ತುಗಳಿಂದಲೂ ಯುಕ್ತವಾಗಿದ್ದ ಆ ಪಾಂಚರಾತ್ರಶಾಸ್ತ್ರವನ್ನು ಬೃಹಸ್ಪತಿಗೆ ಉಪದೇಶಿಸಿ ತಮಗೆ ಇಷ್ಟವಾದ ಸ್ಥಳಕ್ಕೆ ಹೊರಟುಹೋದರು."

೩೩೫ನೆಯ ಅಧ್ಯಾಯವು ಮುಗಿಯಿತು.

೩೩೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಉಪರಿಚರನ ಯಜ್ಞದಲ್ಲಿ ಭಗವಂತನ ವಿಷಯದಲ್ಲಿ ಬೃಹಸ್ಪತಿಯ ಕೋಪ: ಏಕತನೇ ಮೊದಲಾದ ಋಷಿಗಳು ಶ್ವೇತದ್ವೀಪದ ಮತ್ತು ಭಗವಂತನ ಮಹಿಮೆಯನ್ನು ಹೇಳಿ ಬೃಹಸ್ಪತಿಯನ್ನು ಸಮಾಧಾನಗೊಳಿಸಿದುದು

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

ತತೋಽತೀತೇ ಮಹಾಕಲ್ಪೇ ಉತ್ಪನ್ನೇಽಙ್ಗಿರಸಃ ಸುತೇ ।
ಬಭೂವುರ್ನಿರ್ವೃತಾ ದೇವಾ ಜಾತೇ ದೇವಪುರೋಹಿತೇ ॥೧॥

"ಯುಧಿಷ್ಠಿರ! ಹಿಂದಿನ ಮಹಾಕಲ್ಪದ ಪ್ರಾರಂಭದಲ್ಲಿ ಬ್ರಹ್ಮರ್ಷಿಗಳಾದ ಅಂಗಿರಸರಿಗೆ ಬೃಹಸ್ಪತಿಯೆಂಬ ಮಗನು ಹುಟ್ಟಿದನು. ಅವನೇ ಮುಂದೆ ದೇವತೆಗಳಿಗೆ ಪುರೋಹಿತನಾದನು. ಅದರಿಂದ ದೇವತೆಗಳು ಪರಮಪ್ರೀತರಾದರು.

ಬೃಹದ್ಬ್ರಹ್ಮ ಮಹಚ್ಚೇತಿ ಶಬ್ದಾಃ ಪರ್ಯಾಯವಾಚಕಾಃ ।
ಏಭಿಃ ಸಮನ್ವಿತೋ ರಾಜನ್ಗುಣೈರ್ವಿದ್ವಾನ್ಬೃಹಸ್ಪತಿಃ ॥೨॥

ಬೃಹತ್, ಬ್ರಹ್ಮ ಮತ್ತು ಮಹತ್ ಎಂಬ ಈ ಶಬ್ದಗಳು ಒಂದೇ ಅರ್ಥವನ್ನು ಕೊಡುವ (ಪರ್ಯಾಯವಾಚಕ) ಪದಗಳು. ವಿದ್ವಾಂಸನಾದ ಬೃಹಸ್ಪತಿಯು ಈ ಮೂರು ಶಬ್ದಗಳ ಗುಣಗಳಿಂದಲೂ ಕೂಡಿದವನಾಗಿದ್ದನು. (ಅದರಿಂದಲೇ 'ಬೃಹಸ್ಪತಿ' ಎಂಬ ಅನ್ವರ್ಥನಾಮವೇ ಆಯಿತು.)

ರಾಜನಾದ ಉಪರಿಚರವಸುವು ಬೃಹಸ್ಪತಿಯ ಪ್ರಧಾನಶಿಷ್ಯನಾದನು. ಉಪರಿಚರವಸುವು ಚಿತ್ರಶಿಖಂಡಿಗಳಿಂದ (ಸಪ್ತರ್ಷಿಗಳಿಂದ) ಪ್ರಣೀತವಾಗಿದ್ದ ತಂತ್ರಶಾಸ್ತ್ರವನ್ನು ಚೆನ್ನಾಗಿ ಅಧ್ಯಯನಮಾಡಿದ್ದನು. ಮೊದಲು ಅವನು ದೈವವಿಧಿಯಿಂದ ಪ್ರಭಾವಿತನಾಗಿದ್ದು ಇಂದ್ರನು ಸ್ವರ್ಗವನ್ನು ಪರಿಪಾಲಿಸುವಂತೆ – ಭೂಮಂಡಲವನ್ನು ಪರಿಪಾಲಿಸುತ್ತಿದ್ದನು. ಒಮ್ಮೆ ಮಹಾತ್ಮನಾದ ಉಪರಿಚರವಸುವು ಅಶ್ವಮೇಧಮಹಾಯಾಗವನ್ನು ಪ್ರಾರಂಭಿಸಿದನು. ಆ ಯಜ್ಞದಲ್ಲಿ ಉಪರಿಚರನ ಉಪಾಧ್ಯಾಯನಾದ ಬೃಹಸ್ಪತಿಯೇ ಹೋತೃವಾಗಿದ್ದನು. ಪ್ರಜಾಪತಿಯ ಮೂವರು ಮಕ್ಕಳಾದ ಏಕತ, ದ್ವಿತ ಮತ್ತು ತ್ರಿತರೆಂಬ ಮಹರ್ಷಿಗಳು ಆ ಯಜ್ಞದಲ್ಲಿ ಸದಸ್ಯರಾಗಿದ್ದರು. ಇವರಲ್ಲದೇ ಧನುಷ, ರೈಭ್ಯ, ಅರ್ವಾವಸು, ಪರಾವಸು, ಮುನಿಶ್ರೇಷ್ಠನಾದ ಮೇಧಾತಿಥಿ, ಮಹರ್ಷೀ ತಾಂಡ್ಯ, ಮಹಾಭಾಗನಾದ ಶಾಂತಿಮುನಿ, ವೇದಶಿರಸ, ಶಾಲಿಹೋತ್ರನ ತಂದೆಯಾದ ಋಷಿಶ್ರೇಷ್ಠನಾದ ಕಪಿಲ, ಆದ್ಯಕಠ, ವೈಶಂಪಾಯನನ ಹಿರಿಯಣ್ಣ ತೈತ್ತಿರಿ, ಕಣ್ವ, ದೇವಹೋತ್ರ –ಈ ಹದಿಮೂರು ಮಂದಿಯೂ ಸೇರಿ ಒಟ್ಟು ಹದಿನಾರು ಮಂದಿ ಸದಸ್ಯರು ಉಪರಿಚರನ ಯಜ್ಞದಲ್ಲಿ ಋತ್ವಿಜರಾಗಿದ್ದರು. ಆ ಮಹಾಯಜ್ಞಕ್ಕಾಗಿ ಸಕಲಸಂಭಾರಗಳೂ ಸಂಗ್ರಹಿಸಲ್ಪಟ್ಟಿದ್ದುವು. ಆದರೆ ಆ ಯಜ್ಞದಲ್ಲಿ ಯಜ್ಞಪಶುವಿರಲಿಲ್ಲ. ಪಶುಘಾತವಾಗಕೂಡದೆಂಬುದೇ ರಾಜನ ಖಚಿತವಾದ ಅಭಿಪ್ರಾಯವಾಗಿದ್ದಿತು.

ಅಹಿಂಸ್ರಃ ಶುಚಿರಕ್ಷುದ್ರೋ ನಿರಾಶೀಃ ಕರ್ಮಸಂಸ್ತುತಃ ।
ಆರಣ್ಯಕಪದೋದ್ಭೂತಾ ಭಾಗಾಸ್ತತ್ರೋಪಕಲ್ಪಿತಾಃ ॥೧೧॥

ಆ ಯಜ್ಞವು ಹಿಂಸೆಯಿಂದ ರಹಿತವಾಗಿದ್ದಿತು. ಪವಿತ್ರವಾಗಿದ್ದಿತು. ಉದಾರವಾಗಿದ್ದಿತು. ಫಲಸಂಕಲ್ಪರಹಿತವಾಗಿದ್ದಿತು. ಯಜ್ಞಕರ್ಮಗಳಿಂದ ಶ್ಲಾಘ್ಯವಾಗಿದ್ದಿತು. ಕಾಡಿನಲ್ಲಿ ಸಿಕ್ಕುವ ಕಂದ-ಮೂಲ-ಫಲ ಇತ್ಯಾದಿಗಳೇ ದೇವತೆಗಳ ಹವಿರ್ಭಾಗಗಳಾಗಿ ಸಿದ್ಧಗೊಳಿಸಲ್ಪಟ್ಟಿದ್ದುವು.

ಪ್ರೀತಸ್ತತೋಽಸ್ಯ ಭಗವಾನ್ದೇವದೇವಃ ಪುರಾತನಃ ।
ಸಾಕ್ಷಾತ್ತಂ ದರ್ಶಯಾಮಾಸ ಸೋಽದೃಶ್ಯೋಽನ್ಯೇನ ಕೇನಚಿತ್ ॥೧೨॥

ಉಪರಿಚರನ ಯಜ್ಞದಿಂದ ಸುಪ್ರೀತನಾದ, ದೇವದೇವನಾದ ಭಗವಾನ್ ಶ್ರೀಮನ್ನಾರಾಯಣನು ಉಪರಿಚರರಾಜನಿಗೆ ಪ್ರತ್ಯಕ್ಷವಾಗಿಯೇ ದರ್ಶನವನ್ನಿತ್ತನು. ಆದರೆ ಬೇರೆಯವರಿಗೆ ಅವನು ಕಾಣಿಸುತ್ತಿರಲಿಲ್ಲ.

ಸ್ವಯಂ ಭಾಗಮುಪಾಘ್ರಾಯ ಪುರೋಡಾಶಂ ಗೃಹೀತವಾನ್ ।
ಅದೃಶ್ಯೇನ ಹೃತೋ ಭಾಗೋ ದೇವೇನ ಹರಿಮೇಧಸಾ ॥೧೩॥

ಭಗವಂತನೇ ಸ್ವತಃ ಆಘ್ರಾಣಿಸುವುದರ ಮೂಲಕವಾಗಿ ಪುರೋಡಾಶವನ್ನು ಪ್ರತಿಗ್ರಹಿಸಿದನು. ಹೀಗೆ ಅದೃಶ್ಯನಾಗಿದ್ದ ಹಯಗ್ರೀವಸ್ವರೂಪನಾಗಿದ್ದ ಭಗವಂತನಿಂದ ಯಜ್ಞಭಾಗವು ಅಪಹೃತವಾಯಿತು.

ಬೃಹಸ್ಪತಿಸ್ತತಃ ಕ್ರುದ್ಧಃ ಸ್ರುಚಮುದ್ಯಮ್ಯ ವೇಗಿತಃ ।
ಆಕಾಶಂ ಘ್ನನ್ ಸ್ರುಚಃ ಪಾತೈ ರೋಷಾದಶ್ರೂಣ್ಯವರ್ತಯತ್ ॥೧೪॥

ಇದ್ದಕ್ಕಿದ್ದಂತೆಯೇ ಪುರೋಡಾಶವು ಮಾಯವಾದುದನ್ನು ನೋಡಿ ಬೃಹಸ್ಪತಿಯು ಕ್ರುದ್ಧನಾದನು. ಸ್ರುಚವನ್ನೆತ್ತಿ ಅದರಿಂದ ವೇಗವಾಗಿ ಆಕಾಶದಲ್ಲಿ ಪ್ರಹರಿಸಿದನು. ಕ್ರೋಧಾವಿಷ್ಠನಾಗಿದ್ದ ಅವನ ಕಣ್ಣುಗಳಿಂದ ಕಾದ ಕಂಬನಿಗಳು ತೊಟ್ಟಿಕ್ಕುತ್ತಿದ್ದುವು.

ಉವಾಚ ಚೋಪರಿಚರಂ ಮಯಾ ಭಾಗೋಽಯಮುದ್ಯತಃ ।
ಗ್ರಾಹ್ಯಃ ಸ್ವಯಂ ಹಿ ದೇವೇನ ಮತ್ಪ್ರತ್ಯಕ್ಷಂ ನ ಸಂಶಯಃ ॥೧೫॥

ಬಳಿಕ ಬೃಹಸ್ಪತಿಯು ಉಪರಿಚರನೊಡನೆ ಹೇಳಿದನು : "ಮಹಾರಾಜ! ನಾರಾಯಣನಿಗೆ ಅರ್ಪಿಸಬೇಕಾಗಿರುವ ಈ ಹವಿರ್ಭಾಗವನ್ನು ನಾನು ಎತ್ತಿ ಹಿಡಿದುಕೊಂಡಿದ್ದೇನೆ. ಪ್ರತ್ಯಕ್ಷವಾಗಿಯೇ ಬಂದು ಭಗವಂತನು ಈ ಹವಿರ್ಭಾಗವನ್ನು ಸ್ವೀಕರಿಸಲೇಬೇಕು. ನನ್ನ ಕಣ್ಣೆದುರಿನಲ್ಲಿಯೇ ಭಗವಂತನು ಪರಿಗ್ರಹಿಸುವನೆಂಬುದರಲ್ಲಿ ನನಗೆ ಸಂದೇಹವೇ ಇಲ್ಲ."

ಯುಧಿಷ್ಠಿರನು ಹೇಳುತ್ತಾನೆ :

ಉದ್ಯತಾ ಯಜ್ಞಭಾಗಾ ಹಿ ಸಾಕ್ಷಾತ್ಪ್ರಾಪ್ತಾಃ ಸುರೈರಿಹ ।
ಕಿಮರ್ಥಮಿಹ ನ ಪ್ರಾಪ್ತೋ ದರ್ಶನಂ ಸ ಹರಿರ್ವಿಭುಃ ॥೧೬॥

"ಭೀಷ್ಮಪಿತಾಮಹನೇ! ಎಲ್ಲ ದೇವತೆಗಳೂ ಪ್ರತ್ಯಕ್ಷವಾಗಿಯೇ ಬಂದು ತಮ್ಮ-ತಮ್ಮ ಹವಿರ್ಭಾಗಗಳನ್ನು ಸ್ವೀಕರಿಸುತ್ತಿದ್ದಾಗ-ವಿಭುವಾದ ಶ್ರೀಹರಿಯು ಹವಿಸ್ಸಿನ ಪರಿಗ್ರಹಕ್ಕಾಗಿ ಯಜ್ಞಶಾಲೆಗೆ ಬಂದಿದ್ದರೂ ಎಲ್ಲರಿಗೂ ದರ್ಶನವನ್ನೇಕೆ ಕೊಡಲಿಲ್ಲ?"

ಭೀಷ್ಮನು ಹೇಳುತ್ತಾನೆ :

ತತಃ ಸ ತಂ ಸಮುದ್ಧೂತಂ ಭೂಮಿಪಾಲೋ ಮಹಾನ್ವಸುಃ ।
ಪ್ರಸಾದಯಾಮಾಸ ಮುನಿಂ ಸದಸ್ಯಾಸ್ತೇ ಚ ಸರ್ವಶಃ ॥೧೭॥

"ಯುಧಿಷ್ಠಿರ! ಅದಕ್ಕೆ ಕಾರಣವನ್ನು ಹೇಳುವೆನು, ಕೇಳು. ಮಹಾ ಭೂಪಾಲನಾದ ಉಪರಿಚರವಸುವೂ ಮತ್ತು ಅಲ್ಲಿ ಸೇರಿದ್ದ ಎಲ್ಲ ಸದಸ್ಯರೂ–ಮಹಾಕೋಪದಿಂದ ನಡುಗುತ್ತಿದ್ದ ಬೃಹಸ್ಪತಿಮುನಿಯನ್ನು ಸರ್ವಪ್ರಕಾರದಿಂದಲೂ ಸಮಾಧಾನಗೊಳಿಸಲು ಪ್ರಾರಂಭಿಸಿದರು. ಉಪರಿ ಚರವಸುಪ್ರಮುಖರಾದ ಎಲ್ಲರೂ ಶಾಂತಚಿತ್ತರಾಗಿ ಬೃಹಸ್ಪತಿಯೊಡನೆ ಹೇಳಿದರು :

ಊಚುಶ್ಚೈನಮಸಮ್ಭ್ರಾನ್ತಾ ನ ರೋಷಂ ಕರ್ತುಮರ್ಹಸಿ ।
ನೈಷ ಧರ್ಮಃ ಕೃತಯುಗೇ ಯಸ್ತ್ವಂ ರೋಷಮಚೀಕೃಥಾಃ ॥೧೮॥

"ದೇವಗುರುವೇ! ನೀನು ಕೋಪಗೊಳ್ಳುವುದು ಉಚಿತವಲ್ಲ. ನೀನು ಕೋಪಿಸಿಕೊಂಡಿರುವುದು ಸತ್ಯಯುಗದ ಧರ್ಮಕ್ಕೆ ಅನುಗುಣವಾಗಿಲ್ಲ.

ಅರೋಷಣೋ ಹ್ಯಸೌ ದೇವೋ ಯಸ್ಯ ಭಾಗೋಽಯಮುದ್ಯತಃ ।
ನ ಶಕ್ಯಃ ಸ ತ್ವಯಾ ದ್ರಷ್ಟುಮಸ್ಮಾಭಿರ್ವಾ ಬೃಹಸ್ಪತೇ ।
ಯಸ್ಯ ಪ್ರಸಾದಂ ಕುರುತೇ ಸ ವೈ ತಂ ದ್ರಷ್ಟುಮರ್ಹತಿ ॥೧೯॥

ಯಾವ ಮಹಾವಿಷ್ಣುವಿಗೆ ಈ ಹವಿರ್ಭಾಗವನ್ನು ಅರ್ಪಿಸಲು ನೀನು ಉದ್ಯುಕ್ತನಾಗಿರುವೆಯೋ –ಆ ಮಹಾವಿಷ್ಣುವು ಕ್ರೋಧವಿಲ್ಲದವನು. ನಿನ್ನಿಂದಾಗಲೀ ನಮ್ಮಿಂದಾಗಲೀ ಅವನನ್ನು ನೋಡಲು ಶಕ್ಯವಿಲ್ಲ. ಆ ಶ್ರೀಹರಿಯು ಯಾವನ ಮೇಲೆ ಕೃಪೆದೋರುವನೋ–ಅಂತಹವನು ಮಾತ್ರವೇ ಅವನನ್ನು ಸಂದರ್ಶಿಸಬಲ್ಲನು. (ಯಮೇವೈಷ ವೃಣುತೇ ತೇನ ಲಭ್ಯಃ -ಕಠೋಪನಿಷತ್.)

ಬಳಿಕ ಏಕತ-ದ್ವಿತ-ತ್ರಿತರೂ ಮತ್ತು ಚಿತ್ರಶಿಖಂಡಿಗಳೆಂದು ಖ್ಯಾತರಾದ ಸಪ್ತರ್ಷಿಗಳೂ ಬೃಹಸ್ಪತಿಗೆ ಹೇಳಿದರು :

ವಯಂ ಹಿ ಬ್ರಹ್ಮಣಃ ಪುತ್ರಾ ಮಾನಸಾಃ ಪರಿಕೀರ್ತಿತಾಃ ।
ಗತಾ ನಿಃಶ್ರೇಯಸಾರ್ಥಂ ಹಿ ಕದಾಚಿದ್ದಿಶಮುತ್ತರಾಮ್ ॥೨೧॥

“ಬೃಹಸ್ಪತೇ! ನಾವು ಬ್ರಹ್ಮನ ಮಾನಸಪುತ್ರರೆಂದು ವಿಖ್ಯಾತರಾಗಿದ್ದೇವೆ. ಒಮ್ಮೆ ನಾವೆಲ್ಲರೂ ನಮ್ಮ ಶ್ರೇಯಃಪ್ರಾಪ್ತಿಗಾಗಿ ಉತ್ತರ ದಿಕ್ಕಿಗೆ ಹೋದೆವು.

ತಪ್ತ್ವಾ ವರ್ಷಸಹಸ್ರಾಣಿ ಚರಿತ್ವಾ ತಪ ಉತ್ತಮಮ್ ।
ಏಕಪಾದಾಃ ಸ್ಥಿತಾಃ ಸಮ್ಯಕ್ಕಾಷ್ಠಭೂತಾಃ ಸಮಾಹಿತಾಃ ॥೨೨॥

ಮೇರೋರುತ್ತರಭಾಗೇ ತು ಕ್ಷೀರೋದಸ್ಯಾನುಕೂಲತಃ ।
ಸ ದೇಶೋ ಯತ್ರ ನಸ್ತಪ್ತಂ ತಪಃ ಪರಮದಾರುಣಮ್ ॥೨೩॥

ಕಥಂ ಪಶ್ಯೇಮ ಹಿ ವಯಂ ದೇವಂ ನಾರಾಯಣಾತ್ಮಕಮ್ ।
ವರೇಣ್ಯಂ ವರದಂ ತಂ ವೈ ದೇವದೇವಂ ಸನಾತನಮ್ ॥೨೪॥

ಮೇರುಪರ್ವತಕ್ಕೆ ಉತ್ತರದಲ್ಲಿಯೂ–ಕ್ಷೀರಸಮುದ್ರದ ತೀರದಲ್ಲಿಯೂ ಇರುವ ಪವಿತ್ರವಾದ ಸ್ಥಳದಲ್ಲಿ ನಾವು ಅತಿದಾರುಣವಾದ ತಪಸ್ಸನ್ನು ಮಾಡಿದೆವು. ಏಕಾಗ್ರಚಿತ್ತರಾಗಿ ಒಂದೇ ಕಾಲಿನಲ್ಲಿ ನಿಂತು, ಕಟ್ಟಿಗೆಯಂತೆ ಚಲನ-ವಲನಗಳೇ ಇಲ್ಲದೇ ಒಂದು ಸಾವಿರ ವರ್ಷಗಳ ಪರ್ಯಂತವಾಗಿ ಉತ್ತಮೋತ್ತಮವಾದ ತಪಸ್ಸನ್ನು ಆಚರಿಸಿದೆವು. ಆದರೂ ನಮಗೆ ನಾರಾಯಣನ ದರ್ಶನವಾಗಲಿಲ್ಲ. ‘ನಾರಾಯಣಾತ್ಮಕನಾದ, ದೇವದೇವನಾದ, ಶಾಶ್ವತನಾದ, ಶ್ರೇಷ್ಠನಾದ, ವರದನಾದ ಮಹಾವಿಷ್ಣುವನ್ನು ಹೇಗೆ ನೋಡುವೆವು?’–ಎಂಬುದೇ ನಮ್ಮ ಮನಸ್ಸಿನ ಚಿಂತೆಯಾಗಿದ್ದಿತು.

‘ದೇವದೇವನಾದ ಆ ನಾರಾಯಣನನ್ನು ಹೇಗೆ ನೋಡಬಲ್ಲೆವು?’–ಎಂದು ನಾವು ಯೋಚಿಸುತ್ತಲೇ ಇದ್ದೆವು. ನಾವು ಕೈಗೊಂಡಿದ್ದ ವ್ರತದ ಅವಭೃಥವಾದ ನಂತರ ಸ್ನೇಹಮಯವೂ, ಗಂಭೀರವೂ, ಹರ್ಷಕರವೂ ಆಗಿದ್ದ ಅಶರೀರವಾಣಿಯೊಂದು ಕೇಳಿಸಿತು.

ಸುತಪ್ತಂ ವಸ್ತಪೋ ವಿಪ್ರಾಃ ಪ್ರಸನ್ನೇನಾನ್ತರಾತ್ಮನಾ ।
ಯೂಯಂ ಜಿಜ್ಞಾಸವೋ ಭಕ್ತಾಃ ಕಥಂ ದ್ರಕ್ಷ್ಯಥ ತಂ ವಿಭುಮ್ ॥೨೬॥

"ವಿಪ್ರಶ್ರೇಷ್ಠರೇ! ನೀವು ಪ್ರಸನ್ನವಾದ ಅಂತಃಕರಣದಿಂದ ಪರಮ ದಾರುಣವಾದ ತಪಸ್ಸನ್ನೇ ಮಾಡಿರುವಿರಿ. ನೀವು ಭಗವಂತನ ಭಕ್ತರಾಗಿರುವಿರಿ ಮತ್ತು ಸರ್ವವ್ಯಾಪಿಯಾದ ಅವನ ನಿಜರೂಪವನ್ನು ತಿಳಿದುಕೊಳ್ಳಬೇಕೆಂಬ ಆಶಯವುಳ್ಳವರಾಗಿರುವಿರಿ. ಅವನನ್ನು ನೀವು ಹೇಗೆ ನೋಡುವಿರಿ?–ಎಂಬುದನ್ನು ಹೇಳುತ್ತೇನೆ.

ಕ್ಷೀರೋದಧೇರುತ್ತರತಃ ಶ್ವೇತದ್ವೀಪೋ ಮಹಾಪ್ರಭಃ ।
ತತ್ರ ನಾರಾಯಣಪರಾ ಮಾನವಾಶ್ಚನ್ದ್ರವರ್ಚಸಃ ॥೨೭॥

ಪ್ರಭುವಾದ ಶ್ರೀಮನ್ನಾರಾಯಣನನ್ನು ಸಂದರ್ಶಿಸುವ ಉಪಾಯವನ್ನು ಕೇಳಿರಿ. ಕ್ಷೀರಸಾಗರದ ಉತ್ತರಭಾಗದಲ್ಲಿ ಮಹಾಪ್ರಭೆಯಿಂದ ಕೂಡಿರುವ ಶ್ವೇತದ್ವೀಪವಿದೆ. ಅಲ್ಲಿ ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ, ನಾರಾಯಣನನ್ನೇ ಅನವರತವೂ ಧ್ಯಾನಮಾಡುವ ಮನುಷ್ಯರಿದ್ದಾರೆ.

ಏಕಾನ್ತಭಾವೋಪಗತಾಸ್ತೇ ಭಕ್ತಾಃ ಪುರುಷೋತ್ತಮಮ್ ।
ತೇ ಸಹಸ್ರಾರ್ಚಿಷಂ ದೇವಂ ಪ್ರವಿಶನ್ತಿ ಸನಾತನಮ್ ॥೨೮॥

ಅನಿನ್ದ್ರಿಯಾ ನಿರಾಹಾರಾ ಅನಿಷ್ಪನ್ದಾಃ ಸುಗನ್ಧಿನಃ ॥೨೯॥

ಇಂದ್ರಿಯಗಳಿಂದ ರಹಿತರಾದ, ನಿರಾಹಾರಿಗಳಾದ, ನಿಶ್ಚೇಷ್ಟರಾದ, ಸುಗಂಧಯುಕ್ತರಾದ, ನಾರಾಯಣನಲ್ಲಿಯೇ ಅನನ್ಯವಾದ ಭಕ್ತಿಯನ್ನಿಟ್ಟಿರುವ, ಪರಮಭಕ್ತರಾದ ಆ ಶ್ವೇತದ್ವೀಪವಾಸಿಗಳು ಸಹಸ್ರಕಿರಣನಾದ, ಶಾಶ್ವತನಾದ ಪುರುಷೋತ್ತಮನನ್ನು ಪ್ರವೇಶಿಸುತ್ತಾರೆ.

ಏಕಾನ್ತಿನಸ್ತೇ ಪುರುಷಾಃ ಶ್ವೇತದ್ವೀಪನಿವಾಸಿನಃ ।
ಗಚ್ಛಧ್ವಂ ತತ್ರ ಮುನಯಸ್ತತ್ರಾತ್ಮಾ ಮೇ ಪ್ರಕಾಶಿತಃ ॥೩೦॥

ಶ್ವೇತದ್ವೀಪವಾಸಿಗಳಾದ ಆ ಪುರುಷರು ನನ್ನಲ್ಲಿಯೇ ಅನನ್ಯವಾದ

ಭಕ್ತಿಯುಳ್ಳವರು. ನೀವೆಲ್ಲರೂ ಅಲ್ಲಿಗೆ ಹೋಗಿರಿ. ಅಲ್ಲಿ ನನ್ನ ದಿವ್ಯಸ್ವರೂಪವು ಪ್ರಕಾಶನಗೊಂಡಿದೆ.”

ದೇವಗುರುವೇ! ಈ ಪ್ರಕಾರವಾದ ಅಶರೀರವಾಣಿಯನ್ನು ಕೇಳಿ ಅದು ಹೇಳಿದ ಮಾರ್ಗದಿಂದಲೇ ನಾವು ಶ್ವೇತದ್ವೀಪಕ್ಕೆ ಹೋದೆವು. ಶ್ವೇತ ದ್ವೀಪವನ್ನು ತಲುಪಿದ ನಾವು ಆ ಭಗವಂತನಲ್ಲಿಯೇ ನೆಟ್ಟಮನಸ್ಸುಳ್ಳವ ರಾದೆವು. ಅವನನ್ನು ಸಂದರ್ಶಿಸಬೇಕೆಂಬ ಉತ್ಕಟವಾದ ಇಚ್ಛೆಯುಳ್ಳವ ರಾಗಿದ್ದೆವು. ಆದರೆ ನಾವು ಅಲ್ಲಿಗೆ ಹೋಗುತ್ತಲೇ ನಮ್ಮ ದೃಷ್ಟಿಯ ಶಕ್ತಿಯು ಕುಂದಿತು. ಅಲ್ಲಿಯ ನಿವಾಸಿಗಳ ದಿವ್ಯತೇಜಸ್ಸಿನ ಪ್ರಭಾವದಿಂದ ನಷ್ಟವಾಗಿ ಹೋದ ದೃಷ್ಟಿಯುಳ್ಳವರಾಗಿ ನಾವು ಪರಮಪುರುಷನನ್ನು ಕಾಣಲೇ ಇಲ್ಲ. ಅನಂತರ ದೈವಯೋಗದಿಂದಾಗಿ ನಮ್ಮ ಮನಸ್ಸಿನಲ್ಲಿ ‘ತಪಸ್ಸನ್ನು ಮಾಡದೇ ಇರುವವನು ಭಗವಂತನನ್ನು ಶೀಘ್ರವಾಗಿ ಸಂದರ್ಶಿಸಲಾರನು’–ಎಂಬ ಜ್ಞಾನವು ಮೂಡಿಬಂದಿತು. ಆಗಲೇ ಮತ್ತು ಅಲ್ಲಿಯೇ ನಾವು ಪುನಃ ತಪಸ್ಸಿಗೆ ಕುಳಿತು ನೂರು ವರ್ಷಗಳ ಪರ್ಯಂತವಾಗಿ ಮಹಾತಪಸ್ಸನ್ನು ಮಾಡಿದೆವು. ನಮ್ಮ ತಪಸ್ಸು ಮುಗಿಯುವ ವೇಳೆಗೆ ನಾವು ಶ್ವೇತವರ್ಣದವರಾಗಿದ್ದ, ಚಂದ್ರಸದೃಶರಾಗಿದ್ದ, ಸರ್ವಲಕ್ಷಣಗಳಿಂದಲೂ ಸಂಪನ್ನರಾಗಿದ್ದ ಶುಭಸ್ವರೂಪರಾದ ಪುರುಷರನ್ನು ಸಂದರ್ಶಿಸಿದೆವು.

ನಿತ್ಯಾಞ್ಜಲಿಕೃತಾನ್ಬ್ರಹ್ಮ ಜಪತಃ ಪ್ರಾಗುದಙ್ಮುಖಾನ್ ।
ಮಾನಸೋ ನಾಮ ಸಾ ಜಪೋ ಜಪ್ಯತೇ ತೈರ್ಮಹಾತ್ಮಭಿಃ ॥೩೬॥

ಪ್ರತಿನಿತ್ಯವೂ ಈಶಾನ್ಯದಿಕ್ಕಿನ ಕಡೆಗೆ ಮುಖಮಾಡಿಕೊಂಡು ಕೈಜೋಡಿಸಿಕೊಂಡು ಬ್ರಹ್ಮಜಪವನ್ನು ಮಾಡುತ್ತಿದ್ದ ಆ ಮಹಾಪುರುಷರನ್ನು ನಾವು ನೋಡಿದೆವು. ಆ ಮಹಾತ್ಮರು ಮಾನಸವೆಂಬ ಹೆಸರಿನ ಜಪವನ್ನು ಮಾಡುತ್ತಿದ್ದರು,

ತೇನೈಕಾಗ್ರಮನಸ್ತ್ವೇನ ಪ್ರೀತೋ ಭವತಿ ವೈ ಹರಿಃ ।
ಯಾಭವನ್ಮುನಿಶಾರ್ದೂಲ ಭಾಃ ಸೂರ್ಯಸ್ಯ ಯುಗಕ್ಷಯೇ ।
ಏಕೈಕಸ್ಯ ಪ್ರಭಾ ತಾದೃಕ್ಸಾಭವನ್ಮಾನವಸ್ಯ ಹ ॥೩೭॥

ಮುನಿಶ್ರೇಷ್ಠನೇ! ಏಕಾಗ್ರವಾದ ಮನಸ್ಸಿನಿಂದ ಮಾಡುತ್ತಿದ್ದ ಅವರ

ಜಪದಿಂದ ಶ್ರೀಹರಿಯು ಸುಪ್ರೀತನಾಗುತ್ತಿದ್ದನು. ಯುಗಾಂತ್ಯದಲ್ಲಿ ಸೂರ್ಯನಿಗೆ ಯಾವ ಪ್ರಭೆಯಿರುತ್ತದೆಯೋ ಅಂತಹುದೇ ದಿವ್ಯಪ್ರಭೆಯು ಶ್ವೇತದ್ವೀಪನಿವಾಸಿಯಾದ ಪ್ರತಿಯೊಬ್ಬ ಮಾನವನಲ್ಲಿಯೂ ಇದ್ದಿತು.

ತೇಜೋನಿವಾಸಃ ಸ ದ್ವೀಪ ಇತಿ ವೈ ಮೇನಿರೇ ವಯಮ್ ।
ನ ತತ್ರಾಭ್ಯಧಿಕಃ ಕಶ್ಚಿತ್ಸರ್ವೇ ತೇ ಸಮತೇಜಸಃ ॥೩೮॥

ಆ ದ್ವೀಪವು ತೇಜಸ್ಸಿಗೇ ನಿವಾಸಸ್ಥಾನವಾಗಿರುವುದೆಂದೇ ನಾವೆಲ್ಲರೂ ಭಾವಿಸಿದೆವು. ಅಲ್ಲಿ ಒಬ್ಬನಿಗೆ ಅಧಿಕವಾದ ತೇಜಸ್ಸಾಗಲೀ ಮತ್ತೊಬ್ಬನಿಗೆ ಕಡಿಮೆಯಾದ ತೇಜಸ್ಸಾಗಲೀ ಇರಲಿಲ್ಲ. ಎಲ್ಲರೂ ಸಮಾನತೇಜಸ್ಕರೇ ಆಗಿದ್ದರು.

ಅಥ ಸೂರ್ಯಸಹಸ್ರಸ್ಯ ಪ್ರಭಾಂ ಯುಗಪದುತ್ಥಿತಾಮ್ ।
ಸಹಸಾ ದೃಷ್ಟವನ್ತಃ ಸ್ಮ ಪುನರೇವ ಬೃಹಸ್ಪತೇ ॥೩೯॥

ಬೃಹಸ್ಪತಿಯೇ! ಅನಂತರ ನಾವು ಒಂದೇ ಕಾಲದಲ್ಲಿ ಹುಟ್ಟಿದ ಸಹಸ್ರಸೂರ್ಯರ ಪ್ರಭೆಯನ್ನು ಒಡನೆಯೇ ಅಲ್ಲಿ ನೋಡಿದೆವು.

ಸಹಿತಾಶ್ಚಾಭ್ಯಧಾವನ್ತ ತತಸ್ತೇ ಮಾನವಾ ದ್ರುತಮ್ ।
ಕೃತಾಞ್ಜಲಿಪುಟಾ ಹೃಷ್ಟಾ ನಮ ಇತ್ಯೇವ ವಾದಿನಃ ॥೪೦॥

ಶ್ವೇತದ್ವೀಪದ ನಿವಾಸಿಗಳಾದ ಆ ಮಾನವರೆಲ್ಲರೂ ಒಟ್ಟಾಗಿ ಸೇರಿ ಬಹಳ ವೇಗವಾಗಿ ಆ ಪ್ರಭೆಯ ಕಡೆಗೆ ಓಡಿದರು. ಆಗ ಅವರೆಲ್ಲರೂ ಪರಮಹೃಷ್ಟರಾಗಿದ್ದರು. ಬದ್ಧಾಂಜಲಿಗಳಾಗಿದ್ದರು. ‘ನಮೋ ನಮಃ!’ ಎಂದು ಮಾತ್ರವೇ ಅವರೆಲ್ಲರೂ ಸತತವಾಗಿ ಹೇಳುತ್ತಿದ್ದರು.

ತತೋ ಹಿ ವದತಾಂ ತೇಷಾಮಶ್ರೌಷ್ಮ ವಿಪುಲಂ ಧ್ವನಿಮ್ ।
ಬಲಿಃ ಕಿಲೋಪಹ್ರಿಯತೇ ತಸ್ಯ ದೇವಸ್ಯ ತೈರ್ನರೈಃ ॥೪೧॥

ಅವರೆಲ್ಲರೂ ಭಗವಂತನ ನಾಮಸಂಕೀರ್ತನವನ್ನು ಮಾಡುತ್ತಿದ್ದಾಗ ಉಂಟಾದ ವಿಪುಲವಾದ ಆ ಧ್ವನಿಯನ್ನು ಕೇಳಿದೆವು. ಅನಂತರ ಅವರೆಲ್ಲರೂ ತೇಜೋಮಯನಾದ ದೇವನಿಗೆ ಬಲಿ-ಪೂಜಾದಿಗಳನ್ನು ಅರ್ಪಿಸುತ್ತಿದ್ದರು.

ವಯಂ ತು ತೇಜಸಾ ತಸ್ಯ ಸಹಸಾ ಹೃತಚೇತಸಃ ।
ನ ಕಿಂಚಿದಪಿ ಪಶ್ಯಾಮೋ ಹತಚಕ್ಷುರ್ಬಲೇನ್ದ್ರಿಯಾಃ ॥೪೨॥

ಭಗವಂತನ ಆ ಮಹಾತೇಜಸ್ಸಿನಿಂದ ನಮ್ಮ ಬುದ್ಧಿಯು ಅಪಹೃತವಾಯಿತು. (ನಮ್ಮ ಮನಸ್ಸು ಆ ತೇಜಸ್ಸಿನಲ್ಲಿಯೇ ಲೀನವಾಗಿಹೋಯಿತು.) ನಷ್ಟವಾದ ಕಣ್ಣುಗಳಿಂದಲೂ, ಬಲದಿಂದಲೂ, ಇಂದ್ರಿಯಗಳಿಂದಲೂ ಕೂಡಿದ್ದ ನಾವು ಯಾವುದನ್ನೂ ನೋಡಲೂ ಸಮರ್ಥರಾಗಲಿಲ್ಲ.

ಆದರೆ ಒಂದು ಶಬ್ದವು ಮಾತ್ರ ಗಟ್ಟಿಯಾಗಿ ಉಚ್ಚರಿಸಲ್ಪಡುತ್ತಿದ್ದು ಸರ್ವತ್ರ ವ್ಯಾಪಿಸಿದ್ದುದರಿಂದ ನಮಗೂ ಅದು ಸ್ಪಷ್ಟವಾಗಿ ಕೇಳಿಸಿತು.

ಜಿತಂ ತೇ ಪುಣ್ಡರೀಕಾಕ್ಷ ನಮಸ್ತೇ ವಿಶ್ವಭಾವನ ।
ನಮಸ್ತೇऽಸ್ತು ಹೃಷೀಕೇಶ ಮಹಾಪುರುಷಪೂರ್ವಜ ॥೪೪॥

'ಪುಂಡರೀಕಾಕ್ಷನೇ! ನಿನಗೆ ಜಯವಾಗಲಿ. ವಿಶ್ವಭಾವನನೇ! ನಿನಗೆ ನಮಸ್ಕಾರಮಾಡುತ್ತೇವೆ. ಮಹಾಪುರುಷರಿಗೂ ಹಿಂದೆ ಹುಟ್ಟಿದವನೇ! ಹೃಷಿಕೇಶನೇ! ನಿನಗೆ ನಮಸ್ಕಾರವಿರಲಿ.'

ಇತಿ ಶಬ್ದಃ ಶ್ರುತೋऽಸ್ಮಾಭಿಃ ಶಿಕ್ಷಾಕ್ಷರಸಮನ್ವಿತಃ ।
ಏತಸ್ಮಿನ್ನನ್ತರೇ ವಾಯುಃ ಸರ್ವಗನ್ಧವಹಃ ಶುಚಿಃ ॥೪೫॥

ದಿವ್ಯಾನ್ಯುವಾಹ ಪುಷ್ಪಾಣಿ ಕರ್ಮಣ್ಯಾಶ್ಚೌಷಧೀಸ್ತಥಾ ।
ತೈರಿಷ್ಟಃ ಪಞ್ಚಕಾಲಜ್ಞೈರ್ಹರಿರೇಕಾನ್ತಿಭಿರ್ನರೈಃ ।
ಭಕ್ತ್ಯಾ ಪರಮಯಾ ಯುಕ್ತೈರ್ಮನೋವಾಕ್ಕರ್ಮಭಿಸ್ತದಾ ॥೪೬॥

ಶಿಕ್ಷಾ ಮತ್ತು ಅಕ್ಷರಗಳಿಂದ ಯುಕ್ತವಾದ ಆ ವಾಕ್ಯವನ್ನು ನಾವು ಸತತವಾಗಿ ಕೇಳುತ್ತಲೇ ಇದ್ದೆವು. ಈ ಮಧ್ಯದಲ್ಲಿ ಸಕಲವಿಧವಾದ ವಾಸನೆಗಳನ್ನೂ ಹೊತ್ತು ತರುವ ಪವಿತ್ರನಾದ ವಾಯುದೇವನು ದಿವ್ಯವಾದ ಪುಷ್ಪಗಳನ್ನೂ ಕಾರ್ಯೋಪಯೋಗಿಗಳಾದ ಓಷಧಿಗಳನ್ನೂ ಹೊತ್ತು ತಂದನು. ಪಂಚಕಾಲಜ್ಞರಾದ,* ಅನನ್ಯಶರಣರಾದ, ಪರಾಭಕ್ತಿಯಿಂದ ಯುಕ್ತರಾದ ಶ್ವೇತ

---

* ಪಂಚಕಾಲಗಳು : ಅಭಿಗಮನ, ಉಪಾದಾನ, ಇಜ್ಯಾ, ಅಧ್ಯಯನ ಮತ್ತು ಯೋಗ– ಇವು ಐದು ಪೂಜಾಕಾಲಗಳು.

ದ್ವೀಪದ ಪುರುಷರು ವಾಯುವು ತಂದ ಆ ಪದಾರ್ಥಗಳಿಂದ ಶ್ರೀಹರಿಯನ್ನು ಮನಸ್ಸು, ಮಾತು ಮತ್ತು ಕ್ರಿಯೆಗಳ ಮೂಲಕವಾಗಿ ಆರಾಧಿಸಿದರು.

ನೂನಂ ತತ್ರಾಗತೋ ದೇವೋ ಯಥಾ ತೈರ್ವಾಗುದೀರಿತಾ ।
ವಯಂ ತ್ವೇನಂ ನ ಪಶ್ಯಾಮೋ ಮೋಹಿತಾಸ್ತಸ್ಯ ಮಾಯಯಾ ॥೪೭॥

ಶ್ವೇತದ್ವೀಪನಿವಾಸಿಗಳು ಹೇಳಿದ ಮಾತಿನ ಅರ್ಥದಂತೆ ನಿಶ್ಚಯವಾಗಿಯೂ ದೇವದೇವನಾದ ಶ್ರೀಹರಿಯು ಅಲ್ಲಿಗೆ ಬಂದೇ ಇದ್ದನು. ಆದರೆ ಅವನ ಮಾಯೆಯಿಂದ ವಿಮೋಹಿತರಾಗಿದ್ದ ನಾವು ಮಾತ್ರ ಅವನನ್ನು ಕಾಣಲೇ ಇಲ್ಲ.

ಮಾರುತೇ ಸಂನಿವೃತ್ತೇ ಚ ಬಲೌ ಚ ಪ್ರತಿಪಾದಿತೇ ।
ಚಿನ್ತಾವ್ಯಾಕುಲಿತಾತ್ಮಾನೋ ಜಾತಾಃ ಸ್ಮೋಽಙ್ಗಿರಸಾಂ ವರ ॥೪೮॥

ಅಂಗಿರಸಶ್ರೇಷ್ಠನೇ! ಸುಗಂಧಯುಕ್ತವಾದ ವಾಯುವಿನ ಚಲನೆಯು ನಿಂತುಹೋಗಿ ಶ್ವೇತದ್ವೀಪನಿವಾಸಿಗಳಿಂದ ಪರಮಾತ್ಮನಿಗೆ ಬಲಿಯು ಕೊಡಲ್ಪಟ್ಟನಂತರ ನಾವೆಲ್ಲರೂ ಚಿಂತೆಯಿಂದ ವ್ಯಾಕುಲಿತವಾದ ಮನಸ್ಸುಳ್ಳವರಾದೆವು.

ಮಾನವಾನಾಂ ಸಹಸ್ರೇಷು ತೇಷು ವೈ ಶುದ್ಧಯೋನಿಷು ।
ಅಸ್ಮಾನ್ನ ಕಶ್ಚಿನ್ಮನಸಾ ಚಕ್ಷುಷಾ ವಾಪ್ಯಪೂಜಯತ್ ॥೪೯॥

ಅಲ್ಲಿದ್ದ ಶುದ್ಧಯೋನಿಗಳಾದ ಸಾವಿರಾರು ಮಾನವರಲ್ಲಿ ಒಬ್ಬನಾದರೂ ನಮ್ಮನ್ನು ಮನಸ್ಸಿನಿಂದಲೂ ಸ್ಮರಿಸಲಿಲ್ಲ. ಕಣ್ಣೆತ್ತಿಯೂ ನೋಡಲಿಲ್ಲ.

ತೇಽಪಿ ಸ್ವಸ್ಥಾ ಮುನಿಗಣಾ ಏಕಭಾವಮನುವ್ರತಾಃ ।
ನಾಸ್ಮಾಸು ದಧಿರೇ ಭಾವಂ ಬ್ರಹ್ಮಭಾವಮನುಷ್ಠಿತಾಃ ॥೫೦॥

ಶಾಂತರಾದ, ಒಂದೇ ಭಾವನೆಯನ್ನು ಹೊಂದಿದ್ದ, ಬ್ರಹ್ಮಭಾವವನ್ನೇ ಆಶ್ರಯಿಸಿದ್ದ ಆ ಮುನಿಗಳು ನಮ್ಮ ವಿಷಯದಲ್ಲಿ ಯಾವ ವಿಧವಾದ ಭಾವನೆಯನ್ನೂ ತೋರಲಿಲ್ಲ. (ಅವರು ನಮ್ಮನ್ನು ಗಮನಿಸಲೇ ಇಲ್ಲ.)

ತತೋಽಸ್ಮಾನ್ಸುಪರಿಶ್ರಾನ್ತಾಂಸ್ತಪಸಾ ಚಾತಿಕರ್ಶಿತಾನ್ ।
ಉವಾಚ ಸ್ವಸ್ಥಂ ಕಿಮಪಿ ಭೂತಂ ತತ್ರಾಶರೀರಕಮ್ ॥೫೧॥

ಅನಂತರ ತಪಸ್ಸನ್ನು ಮಾಡಿ ಮಾಡಿ ಬಹಳವಾಗಿ ಬಳಲಿದ್ದ ಮತ್ತು ಅತ್ಯಂತ ಕೃಶರಾಗಿದ್ದ ನಮ್ಮನ್ನು ಕುರಿತು ಶರೀರರಹಿತವಾಗಿದ್ದ, ಶಾಂತವಾಗಿದ್ದ ಮಹಾಭೂತವೊಂದು ಹೀಗೆ ಹೇಳಿತು :

ದೃಷ್ಟಾ ವಃ ಪುರುಷಾಃ ಶ್ವೇತಾಃ ಸರ್ವೇನ್ದ್ರಿಯವಿವರ್ಜಿತಾಃ ।
ದೃಷ್ಟೋ ಭವತಿ ದೇವೇಶ ಏಭಿರ್ದೃಷ್ಟೈರ್ದ್ವಿಜೋತ್ತಮೈಃ ॥೫೨॥

"ದ್ವಿಜಶ್ರೇಷ್ಠರೇ! ನೀವು ಸರ್ವೇಂದ್ರಿಯಗಳಿಂದಲೂ ವಿಹೀನರಾದ ಶ್ವೇತದ್ವೀಪನಿವಾಸಿಗಳಾದ, ಶ್ವೇತಪುರುಷರನ್ನು ನೋಡಿದಿರಿ. ಇವರನ್ನು ನೋಡಿರುವುದರಿಂದ–ಸಾಕ್ಷಾತ್ ಭಗವಂತನನ್ನು ನೋಡಿದಂತೆಯೇ ಸರಿ.

ಗಚ್ಛಧ್ವಂ ಮುನಯಃ ಸರ್ವೇ ಯಥಾಗತಮಿತೋಽಚಿರಾತ್ ।
ನ ಸ ಶಕ್ಯಸ್ತ್ವಭಕ್ತೇನ ದ್ರಷ್ಟುಂ ದೇವಃ ಕಥಂಚನ ॥೫೩॥

ನೀವೆಲ್ಲರೂ ಈಗಲೇ ನೀವು ಎಲ್ಲಿಂದ ಬಂದಿರುವಿರೋ–ಆ ಸ್ಥಳಕ್ಕೇ ಹೊರಟುಹೋಗಿರಿ. ಅನನ್ಯಭಕ್ತನಲ್ಲದವನು ಯಾವುದೇ ಕಾರಣದಿಂದಲೂ ಶ್ರೀಮನ್ನಾರಾಯಣನನ್ನು ಸಾಕ್ಷಾತ್ತಾಗಿ ನೋಡಲು ಸಮರ್ಥನಾಗುವುದಿಲ್ಲ.

ಕಾಮಂ ಕಾಲೇನ ಮಹತಾ ಏಕಾನ್ತಿತ್ವಮುಪಾಗತೈಃ ।
ಶಕ್ಯೋ ದ್ರಷ್ಟುಂ ಸ ಭಗವಾನ್ಪ್ರಭಾಮಣ್ಡಲದುರ್ದೃಶಃ ॥೫೪॥

ಬಹಳ ಕಾಲದವರೆಗೂ ಅನನ್ಯಭಕ್ತಿಯಿಂದ ನಾರಾಯಣನ ಉಪಾಸನೆಯನ್ನು ಮಾಡುತ್ತಾ ಏಕಾಂತಿತ್ವವನ್ನು (ಪರಮಭಕ್ತತ್ವವನ್ನು) ಹೊಂದಿದವರಿಗೆ–ಪ್ರಭಾಮಂಡಲವನ್ನು ಹೊಂದಿರುವುದರಿಂದ ಬಹಳ ಕಷ್ಟಪಟ್ಟು ನೋಡಬೇಕಾಗಿರುವ–ಅವನನ್ನು ನೋಡಲು ಸಾಧ್ಯವಾಗುತ್ತದೆ.

ಮಹತ್ಕಾರ್ಯಂ ಚ ಕರ್ತವ್ಯಂ ಯುಷ್ಮಾಭಿರ್ದ್ವಿಜಸತ್ತಮಾಃ ।
ಇತಃ ಕೃತಯುಗೇಽತೀತೇ ವಿಪರ್ಯಾಸಂ ಗತೇಽಪಿ ಚ ॥೫೫॥

ವೈವಸ್ವತೇಽನ್ತರೇ ವಿಪ್ರಾಃ ಪ್ರಾಪ್ತೇ ತ್ರೇತಾಯುಗೇ ಪುನಃ ।
ಸುರಾಣಾಂ ಕಾರ್ಯಸಿದ್ಧ್ಯರ್ಥಂ ಸಹಾಯಾ ವೈ ಭವಿಷ್ಯಥ ॥೫೬॥

ದ್ವಿಜಶ್ರೇಷ್ಠರೇ! ಈಗ ನೀವು ಒಂದು ಮಹಾಕಾರ್ಯವನ್ನು ಮಾಡ

ಬೇಕಾಗಿದೆ. ಈ ಸತ್ಯಯುಗವು ಕಳೆದೊಡನೆಯೇ ಸ್ವಲ್ಪಮಟ್ಟಿಗೆ ಧರ್ಮದ ವ್ಯತಿಕ್ರಮವಾಗುತ್ತದೆ. ವೈವಸ್ವತಮನ್ವಂತರದಲ್ಲಿ ತ್ರೇತಾಯುಗವು ಪ್ರಾರಂಭ ವಾದನಂತರ ದೇವತೆಗಳ ಕಾರ್ಯಸಿದ್ಧಿಗಾಗಿ ನೀವು ಸಹಾಯಕರಾಗಬೇಕು."

ಆಂಗಿರಸನೇ! ಅಮೃತೋಪಮವಾದ ಮತ್ತು ಅದ್ಭುತವಾದ ಆ ಅಶರೀರವಾಣಿಯನ್ನು ಕೇಳುತ್ತಲೇ ನಾವೆಲ್ಲರೂ ಭಗವಂತನ ಕೃಪೆಯಿಂದ ಸ್ವಲ್ಪವೂ ಆಯಾಸವಿಲ್ಲದೆಯೇ ನಮಗೆ ಅಭೀಷ್ಟವಾದ ಸ್ಥಳವನ್ನು ಒಡನೆಯೇ ಸೇರಿದೆವು.

ಹೀಗೆ ಅನೇಕಸಹಸ್ರವರ್ಷಗಳ ಕಾಲ ಮಹಾತಪಸ್ಸನ್ನು ಮಾಡಿಯೂ ಹವ್ಯ-ಕವ್ಯಾದಿಗಳಿಂದ ಪೂಜಿಸಿಯೂ ಭಗವಂತನಾದ ಶ್ರೀಮನ್ನಾರಾಯಣ ನನ್ನು ನೋಡಲು ನಮ್ಮಿಂದ ಸಾಧ್ಯವಾಗಲೇ ಇಲ್ಲ. ಹೀಗಿರುವಾಗ ಅಂತಹ ಭಗವಂತನನ್ನು ನೀನು ಹೇಗೆ ನೋಡುವೆ.?

ನಾರಾಯಣೋ ಮಹದ್ಭೂತಂ ವಿಶ್ವಸೃಗ್ಘವ್ಯಕವ್ಯಭುಕ್ ।
ಅನಾದಿನಿಧನೋಽವ್ಯಕ್ತೋ ದೇವದಾನವಪೂಜಿತಃ ॥೫೯॥

ಶ್ರೀಮನ್ನಾರಾಯಣನು ಮಹಾಪುರುಷನು. ವಿಶ್ವವನ್ನೇ ಸೃಷ್ಟಿಸಿರುವ ವನು. ಹವ್ಯ-ಕವ್ಯಗಳ ಭೋಕ್ತೃವೂ ಅವನೇ ಆಗಿದ್ದಾನೆ. ಅವನು ಆದ್ಯಂತ ರಹಿತನು. ಅವ್ಯಕ್ತನು. ದೇವತೆಗಳಿಂದಲೂ ದಾನವರಿಂದಲೂ ಪೂಜಿಸಲ್ಪಡ ತಕ್ಕವನು."

ಹೀಗೆ ಏಕತನು ಹೇಳಲು, ದ್ವಿತ-ತ್ರಿತರ ಅಭಿಪ್ರಾಯವನ್ನೂ ತಿಳಿದು ಸದಸ್ಯರಿಂದಲೂ ಸಂತೈಸಲ್ಪಟ್ಟ ಉದಾರಬುದ್ಧಿಯವನಾದ ಬೃಹಸ್ಪತಿಯು ಯಜ್ಞವನ್ನು ಪರಿಸಮಾಪ್ತಿಗೊಳಿಸಿದನು. ಅವರ ಸಲಹೆಯಂತೆ ಶ್ರೀಮನ್ನಾ ರಾಯಣನನ್ನು ಭಕ್ತಿಭಾವದಿಂದ ಪೂಜಿಸಿದನು.

ಯಜ್ಞವನ್ನು ಸಮಾಪನಗೊಳಿಸಿ ಉಪರಿಚರವಸುವು ಅನೇಕವರ್ಷಗಳ ವರೆಗೆ ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುತ್ತಿದ್ದು ಮರಣಾನಂತರದಲ್ಲಿ ತಾನು ಮಾಡಿದ ಪುಣ್ಯಕರ್ಮಗಳ ಫಲದಿಂದ ಸ್ವರ್ಗಕ್ಕೆ ಹೋದನು. ಆದರೆ ಬ್ರಹ್ಮಶಾಪದಿಂದ ಸ್ವರ್ಗದಿಂದ ಚ್ಯುತನಾಗಿ ಭೂಮಿಯೊಳಗೆ ಪ್ರವೇಶಿಸಿ ರಸಾ

ತಲವನ್ನು ಸೇರಿದನು. ರಾಜಶ್ರೇಷ್ಠನೇ! ಸತ್ಯಧರ್ಮಪರಾಯಣನಾದ ಧರ್ಮವತ್ಸಲನಾದ ಉಪರಿಚರವಸುವು ಭೂಮಿಯ ತಳಭಾಗದಲ್ಲಿದ್ದರೂ ಸತತವಾಗಿ ನಾರಾಯಣಮಂತ್ರವನ್ನೇ ಜಪಿಸುತ್ತಾ ಶ್ರೀಮನ್ನಾರಾಯಣನ ಆರಾಧನೆಯಲ್ಲಿಯೇ ತತ್ಪರನಾಗಿದ್ದನು. ಮುಂದೆ ಅವನು ನಾರಾಯಣನ ಕೃಪೆಯಿಂದಲೇ ಭೂಮಿಯ ತಳಭಾಗದಿಂದ ಮೇಲೆ ಬಂದು ಬ್ರಹ್ಮಲೋಕಕ್ಕೆ ಹೋಗಿ ಪರಮಗತಿಯನ್ನು ಹೊಂದಿದನು. ನಾರಾಯಣನ ಪರಮಭಕ್ತನಾಗಿದ್ದುದರಿಂದ ಉಪರಿಚರವಸುವು ಶೀಘ್ರವಾಗಿಯೇ ನಿಷ್ಠಾವಂತರು ಪಡೆಯುವ ಉತ್ತಮಗತಿಯನ್ನು ಹೊಂದಿದನು."

೩೩೬ನೆಯ ಅಧ್ಯಾಯವು ಮುಗಿಯಿತು.

೩೩೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಯಜ್ಞದಲ್ಲಿ ಹೋಮಕ್ಕಾಗಿ ಉಪಯೋಗಿಸಬೇಕಾದ 'ಅಜ' ಶಬ್ದದ ಅರ್ಥ 'ಧಾನ್ಯಬೀಜ' ಎಂದೇ ಹೊರತು ಆಡಲ್ಲ-ಎಂಬ ವಿಷಯವು ತಿಳಿದಿದ್ದರೂ ಉಪರಿಚರವಸುವು ಪಕ್ಷಪಾತವನ್ನು ತೋರಿದನಾದ ಕಾರಣ ಸ್ವರ್ಗದಿಂದ ಭ್ರಷ್ಟನಾದುದು: ಭಗವಂತನ ಕೃಪೆಯಿಂದ ಪುನಃ ಸ್ವಸ್ಥಾನವನ್ನು ಸೇರಿದುದು

ಮಹಾರಾಜ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಾ ಭಾಗವತೋಽತ್ಯರ್ಥಮಾಸೀದ್ರಾಜಾ ಮಹಾನ್ವಸುಃ ।
ಕಿಮರ್ಥಂ ಸ ಪರಿಭ್ರಷ್ಟೋ ವಿವೇಶ ವಿವರಂ ಭುವಃ ॥೧॥

"ಪಿತಾಮಹನೇ! ಉಪರಿಚರರಾಜನು ಭಗವಂತನ ಪರಮಭಕ್ತನೂ ಮಹಾಪುರುಷನೂ ಆಗಿದ್ದನು. ಅಂತಹವನು ಯಾವ ಕಾರಣದಿಂದ ಸ್ವರ್ಗದಿಂದ ಚ್ಯುತನಾಗಿ ಪಾತಾಲವನ್ನು ಪ್ರವೇಶಿಸಿದನು?"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಋಷಿಗಳಿಗೂ ಮತ್ತು ದೇವತೆಗಳಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಅಜೇನ ಯಷ್ಟವ್ಯಮಿತಿ ಪ್ರಾಹುರ್ದೇವಾ ದ್ವಿಜೋತ್ತಮಾನ್ ।
ಸ ಚ ಚ್ಛಾಗೋಽಪ್ಯಜೋ ಜ್ಞೇಯೋ ನಾನ್ಯಃ ಪಶುರಿತಿ ಸ್ಥಿತಿಃ ॥೩॥

ಹಿಂದೊಮ್ಮೆ ಯಜ್ಞದ ಸಮಯದಲ್ಲಿ ದೇವತೆಗಳು ಅಜದಿಂದಲೇ ಯಜ್ಞವನ್ನು ಮಾಡಬೇಕೆಂದು ಬ್ರಾಹ್ಮಣರಿಗೆ ಹೇಳಿದರು ಮತ್ತು ಅಜ ಎಂದರೆ ಛಾಗವೇ (ಹೋತವೆ) ಹೊರತು ಬೇರೆ ಯಾವುದೂ ಅಲ್ಲವೆಂಬುದನ್ನೂ ಸ್ಪಷ್ಟಪಡಿಸಿದರು.

ಅದಕ್ಕುತ್ತರವಾಗಿ ಋಷಿಗಳು ಹೇಳಿದರು :

ಬೀಜೈರ್ಯಜ್ಞೇಷು ಯಷ್ಟವ್ಯಮಿತಿ ವೈ ವೈದಿಕೀ ಶ್ರುತಿಃ ।
ಅಜಸಂಜ್ಞಾನಿ ಬೀಜಾನಿ ಚ್ಛಾಗಂ ನೋ ಹನ್ತುಮರ್ಹಥ ॥೪॥

"ಯಜ್ಞಗಳಲ್ಲಿ ಬೀಜಗಳ ಮೂಲಕವಾಗಿಯೇ ಪುರೋಡಾಶವನ್ನು ಸಿದ್ಧಗೊಳಿಸಿ ಯಾಗಮಾಡಬೇಕೆಂದು ವೇದಮಂತ್ರಗಳು ಹೇಳುತ್ತವೆ.* ಬೀಜಗಳೇ 'ಅಜ' ಎಂಬ ಸಂಜ್ಞೆಯನ್ನು ಹೊಂದಿವೆ. ಆದುದರಿಂದ 'ಅಜ' ಎಂಬುದಕ್ಕೆ ಹೋತ ಎಂದು ಅರ್ಥಮಾಡಿ ಅದನ್ನು ವಧಿಸುವುದು ಉಚಿತವಲ್ಲ.

ನೈಷ ಧರ್ಮಃ ಸತಾಂ ದೇವಾ ಯತ್ರ ವಧ್ಯೇತ ವೈ ಪಶುಃ ।
ಇದಂ ಕೃತಯುಗಂ ಶ್ರೇಷ್ಠಂ ಕಥಂ ವಧ್ಯೇತ ವೈ ಪಶುಃ ॥೫॥

ದೇವತೆಗಳೇ! ಯಜ್ಞದಲ್ಲಿ ಪಶುವನ್ನು ಹವಿಸ್ಸಿಗಾಗಿ ವಧಿಸುವುದು ಸತ್ಪುರುಷರ ಧರ್ಮವಲ್ಲ. ಇದು ಶ್ರೇಷ್ಠವಾದ ಸತ್ಯಯುಗವಾಗಿದೆ. ಈ ಸತ್ಯಯುಗದಲ್ಲಿ ಪಶುವನ್ನು ವಧಿಸುವುದೆಂತು? ಪ್ರಾಣಿಹಿಂಸೆಯು ಹೇಗೆ ಉಚಿತವಾಗುತ್ತದೆ?"

ಯುಧಿಷ್ಠಿರ! ಋಷಿಗಳೂ ಮತ್ತು ದೇವತೆಗಳೂ ಅಜಶಬ್ದಾರ್ಥದ

---

* ತಸ್ಮಾದೇಷ ಏತೇಷಾಂ ಪಶೂನಾಂ ಪ್ರಯುಕ್ತತಮೋ ಯದಜಸ್ತೇಜಮಾಲಭನ್ತ ಸೋಽಜಾದಾಲಬ್ಧಾದುದಕ್ರಾಮತ್ಸ ಇಮಾಂ ಪ್ರಾವಿಶತ್ತಸ್ಮಾದಿಯಂ ಮೇಧ್ಯಾಽಭವ ತ್ತಮಸ್ಯಾಮನ್ವವಾಯನ್ಸೋಽನುಗತೋ ವ್ರೀಹಿರಭವತ್ [ಬಹ್ವೃಚಬ್ರಾಹ್ಮಣ]

ವಿಷಯವಾಗಿ ಹೀಗೆ ಚರ್ಚಿಸುತ್ತಿದ್ದಾಗ–ಅದೇ ಮಾರ್ಗದಲ್ಲಿಯೇ ಬರುತ್ತಿದ್ದ ಶ್ರೇಷ್ಠನಾದ ಉಪರಿಚರವಸುವು ಸಂವಾದ ನಡೆಯುತ್ತಿದ್ದ ಸ್ಥಳಕ್ಕೆ ಆಗಮಿಸುತ್ತಿದ್ದನು. ಶ್ರೀಮಂತನಾದ ಉಪರಿಚರರಾಜನು ಸೈನ್ಯ ಮತ್ತು ವಾಹನಗಳೊಡನೆ ಆಕಾಶಮಾರ್ಗದಲ್ಲಿ ಸಂಚರಿಸುತ್ತಿದ್ದನು. ಅಂತರಿಕ್ಷಚರನಾದ ವಸುವು ಆಕಸ್ಮಿಕವಾಗಿ ಅಲ್ಲಿಗೆ ಬರುತ್ತಿರುವುದನ್ನು ನೋಡಿ ಬ್ರಹ್ಮರ್ಷಿಗಳು ದೇವತೆಗಳೊಡನೆ ಹೇಳಿದರು :

"ದೇವತೆಗಳೇ! ಈ ರಾಜನು ನಮ್ಮ ಸಂದೇಹವನ್ನು ನಿವಾರಿಸುತ್ತಾನೆ. ಏಕೆಂದರೆ : ಇವನು ಸ್ವತಃ ಯಾಜ್ಞಿಕನು. ದಾನಕೊಡುವವರಲ್ಲಿಯೇ ಶ್ರೇಷ್ಠನಾದವನು. ಸಮಸ್ತಪ್ರಾಣಿಗಳಿಗೂ ಹಿತೈಷಿಯೂ ಮತ್ತು ಪ್ರಿಯನೂ ಆಗಿರುವನು. ಆದುದರಿಂದ ಇವನು ನಿಷ್ಪಕ್ಷಪಾತವಾಗಿ ನಮ್ಮ ಸಂಶಯವನ್ನು ನಿವಾರಣೆಮಾಡುತ್ತಾನೆ. ಮಹಾಪುರುಷನಾದ ಈ ವಸುವು ಶಾಸ್ತ್ರಕ್ಕೆ ವಿರೋಧವಾದ ಮಾತನ್ನು ಹೇಗೆ ತಾನೇ ಹೇಳಬಲ್ಲನು?"

ಹೀಗೆ ದೇವತೆಗಳೂ ಮತ್ತು ಋಷಿಗಳೂ ಪರಸ್ಪರವಾಗಿ ಒಪ್ಪಂದವನ್ನು ಮಾಡಿಕೊಂಡು ಎಲ್ಲರೂ ಒಟ್ಟಾಗಿ ಸೇರಿ ವಸುವಿನ ಬಳಿಗೆ ಹೋಗಿ ಅವನನ್ನು ಪ್ರಶ್ನಿಸಿದರು :

ಭೋ ರಾಜನ್ಕೇನ ಯಷ್ಟವ್ಯಮಜೇನಾಹೋಸ್ವಿದೌಷಧೈಃ ।
ಏತನ್ನಃ ಸಂಶಯಂ ಛಿನ್ಧಿ ಪ್ರಮಾಣಂ ನೋ ಭವಾನ್ಮತಃ ॥೧೦॥

"ಮಹಾರಾಜ! ಹೋತವನ್ನು ಹವಿಸ್ಸನ್ನಾಗಿ ಮಾಡಿಕೊಂಡು ಯಜ್ಞ ಮಾಡಬೇಕೇ? ಅಥವಾ ಧಾನ್ಯಗಳನ್ನೇ ಹವಿಸ್ಸನ್ನಾಗಿ ಮಾಡಿಕೊಂಡು ಯಜ್ಞ ಮಾಡಬೇಕೇ? ಈ ಎರಡರಲ್ಲಿ ಯಾವುದು ವೇದಪ್ರತಿಪಾದ್ಯವಾದುದು? ಈ ವಿಷಯದಲ್ಲಿ ನಮಗುಂಟಾಗಿರುವ ಸಂಶಯವನ್ನು ಹೋಗಲಾಡಿಸು. ನೀನು ಈ ವಿಷಯದಲ್ಲಿ ಪ್ರಮಾಣಭೂತನೆಂಬುದು ನಮ್ಮೆಲ್ಲರ ಅಭಿಪ್ರಾಯವೂ ಆಗಿದೆ."

ಈ ಮಾತನ್ನು ಕೇಳಿ ಉಪರಿಚರವಸುವು ಬದ್ಧಾಂಜಲಿಯಾಗಿ ದೇವರ್ಷಿಗಳೆಲ್ಲರನ್ನೂ ಪ್ರಶ್ನಿಸಿದನು :

ಕಸ್ಯ ವೈ ಕೋ ಮತಃ ಕಾಮೋ ಬ್ರೂತ ಸತ್ಯಂ ದ್ವಿಜೋತ್ತಮಾಃ ॥

"ಬ್ರಾಹ್ಮಣೋತ್ತಮರೇ! ನಿಮ್ಮಿಬ್ಬರಲ್ಲಿ ಯಾರಿಗೆ ಯಾವ ಅಭಿಪ್ರಾಯವು ಅಪೇಕ್ಷಿತವಾಗಿದೆ? ಎಂಬುದನ್ನು ಸತ್ಯವಾಗಿ ಹೇಳಿರಿ. (ಅಜ ಎಂಬುದಕ್ಕೆ ಹೋತ ಎಂಬ ಅರ್ಥವನ್ನು ಯಾರು ಅಪೇಕ್ಷಿಸುತ್ತಾರೆ? ಬೀಜ ಎಂಬ ಅರ್ಥವನ್ನು ಯಾರು ಅಪೇಕ್ಷಿಸುತ್ತಾರೆ?)"

ಬ್ರಹ್ಮರ್ಷಿಗಳು ಹೇಳುತ್ತಾರೆ :

ಧಾನ್ಯೈರ್ಯಷ್ಟವ್ಯಮಿತ್ಯೇವ ಪಕ್ಷೋಽಸ್ಮಾಕಂ ನರಾಧಿಪ ।
ದೇವಾನಾಂ ತು ಪಶುಃ ಪಕ್ಷೋ ಮತೋ ರಾಜನ್ವದಸ್ವ ನಃ ॥೧೨॥

"ನರಶ್ರೇಷ್ಠನೇ! 'ಅಜ' ಎಂಬುದಕ್ಕೆ 'ಬೀಜ'–ಎಂಬುದೇ ವೇದಪ್ರತಿಪಾದ್ಯವಾದ ಅರ್ಥವಾಗಿದೆ. ಆದುದರಿಂದ "ಧಾನ್ಯಗಳಿಂದಲೇ ಯಾಗವನ್ನು ಮಾಡಬೇಕು'–ಎಂಬುದು ನಮ್ಮ ಪಕ್ಷವಾಗಿದೆ. 'ಅಜ ಎಂಬುದಕ್ಕೆ ಮೇಕೆ ಎಂದೇ ಅರ್ಥ. ಆದುದರಿಂದ ಪಶುವಿನ ಮೂಲಕವಾಗಿಯೇ ಯಜ್ಞಮಾಡಬೇಕು' ಎಂಬುದೇ ದೇವತೆಗಳ ಪಕ್ಷವಾಗಿದೆ. ಈ ವಿಷಯದಲ್ಲಿ ನಿನ್ನ ಖಚಿತವಾದ ಅಭಿಮತವೇನೆಂಬುದನ್ನು ತಿಳಿಸು."

ಯುಧಿಷ್ಠಿರ! ಉಪರಿಚರವಸುವು ಯದ್ಯಪಿ ತಾನೇ ಧಾನ್ಯಗಳಿಂದ ಯಜ್ಞಮಾಡುತ್ತಿದ್ದರೂ ದೇವತೆಗಳ ಅಭಿಪ್ರಾಯವೇನೆಂಬುದನ್ನು ತಿಳಿದುಕೊಂಡು ಪಕ್ಷಪಾತದಿಂದ–'ಅಜ' ಎಂಬುದಕ್ಕೆ 'ಹೋತ' ಎಂದೇ ಅರ್ಥ. ಆದುದರಿಂದ ಹೋತವನ್ನೇ ಇಟ್ಟುಕೊಂಡು ಯಜ್ಞವನ್ನು ಮಾಡಬೇಕು'–ಎಂದು ಹೇಳಿಬಿಟ್ಟನು. ಸೂರ್ಯಸಮಾನತೇಜಸ್ಕರಾದ ಋಷಿಗಳು ವಸುವಿನ ನಿರ್ಣಯವನ್ನು ಕೇಳಿದೊಡನೆಯೇ ಕುಪಿತರಾಗಿ ವಿಮಾನದಲ್ಲಿ ಕುಳಿತಿದ್ದ ದೇವತೆಗಳ ಪಕ್ಷವನ್ನು ವಹಿಸಿ ಮಾತನಾಡಿದ ವಸುವನ್ನು ಕುರಿತು ಹೇಳಿದರು :

ಸುರಪಕ್ಷೋ ಗೃಹೀತಸ್ತೇ ಯಸ್ಮಾತ್ತಸ್ಮಾದ್ದಿವಃ ಪತ ।
ಅದ್ಯಪ್ರಭೃತಿ ತೇ ರಾಜನ್ನಾಕಾಶೇ ವಿಹತಾ ಗತಿಃ ।
ಅಸ್ಮಚ್ಛಾಪಾಭಿಘಾತೇನ ಮಹೀಂ ಭಿತ್ತ್ವಾ ಪ್ರವೇಕ್ಷ್ಯಸಿ ॥೧೬॥

"ರಾಜನೇ! ಅಜ ಎಂಬುದಕ್ಕೆ ಬೀಜವೆಂಬ ಅರ್ಥವು ನಿನಗೆ ತಿಳಿದಿ

ದ್ದರೂ–ನೀನೂ ಅದರಂತೆಯೇ ಧಾನ್ಯಗಳ ಮೂಲಕವಾಗಿಯೇ ಯಜ್ಞ ಮಾಡುತ್ತಿದ್ದರೂ–ದೇವತೆಗಳ ಪಕ್ಷವನ್ನು ವಹಿಸಿದೆ. ಆದುದರಿಂದ ನೀನೀಗಲೇ ಸ್ವರ್ಗದಿಂದ ಚ್ಯುತನಾಗು. ಇಂದಿನಿಂದ ನಿನಗೆ ಆಕಾಶದಲ್ಲಿ ಸಂಚರಿಸುವ ಶಕ್ತಿಯೂ ನಷ್ಟವಾಗಿ ಹೋಗುತ್ತದೆ. ನಮ್ಮ ಶಾಪದ ಆಘಾತದಿಂದ ನೀನು ಪೃಥ್ವಿಯನ್ನು ಭೇದಿಸಿಕೊಂಡು ಪಾತಾಳವನ್ನು ಪ್ರವೇಶಿಸುವೆ.”

ಭೀಷ್ಮನು ಹೇಳುತ್ತಾನೆ :

ತತಸ್ತಸ್ಮಿನ್ಮುಹೂರ್ತೇಽಥ ರಾಜೋಪರಿಚರಸ್ತದಾ ।
ಅಧೋ ವೈ ಸಮ್ಬಭೂವಾಶು ಭೂಮೇರ್ವಿವರಗೋ ನೃಪ ॥೧೭॥

“ಯುಧಿಷ್ಠಿರ! ಋಷಿಗಳು ಹೀಗೆ ಹೇಳಿದ ಕ್ಷಣದಲ್ಲಿಯೇ ಉಪರಿಚರ ರಾಜನು ಕೆಳಕ್ಕೆ ಬಿದ್ದು ಭೂಮಿಯಲ್ಲಿದ್ದ ಬಿಲವನ್ನು ಪ್ರವೇಶಿಸಿ ಪಾತಾಳಕ್ಕೆ ಹೊರಟುಹೋದನು.

ಸ್ಮೃತಿಸ್ತ್ವೇನಂ ನ ಹಿ ಜಹೌ ತದಾ ನಾರಾಯಣಾಜ್ಞಯಾ ।
ದೇವಾಸ್ತು ಸಹಿತಾಃ ಸರ್ವೇ ವಸೋಃ ಶಾಪವಿಮೋಕ್ಷಣಮ್ ॥೧೮॥

ಚಿನ್ತಯಾಮಾಸುರವ್ಯಗ್ರಾಃ ಸುಕೃತಂ ಹಿ ನೃಪಸ್ಯ ತತ್ ।
ಅನೇನಾಸ್ಮತ್ಕೃತೇ ರಾಜ್ಞಾ ಶಾಪಃ ಪ್ರಾಪ್ತೋ ಮಹಾತ್ಮನಾ ।
ಅಸ್ಯ ಪ್ರತಿಪ್ರಿಯಂ ಕಾರ್ಯಂ ಸಹಿತೈರ್ನೋ ದಿವೌಕಸಃ ॥೧೯॥

ಶ್ರೀಮನ್ನಾರಾಯಣನ ಆಜ್ಞೆಯಿಂದಾಗಿ ಆ ಸಮಯದಲ್ಲಿಯೂ ಅವನಿಗೆ ಸ್ಮರಣಶಕ್ತಿಯು ಕುಂಠಿತವಾಗಲಿಲ್ಲ. ಇತ್ತಲಾಗಿ ದೇವತೆಗಳೆಲ್ಲರೂ ಒಟ್ಟಾಗಿ ಸೇರಿ ಉಪರಿಚರನು ಋಷಿಗಳ ಶಾಪದಿಂದ ಬಿಡುಗಡೆಯನ್ನು ಹೊಂದುವ ಉಪಾಯವನ್ನು ಶಾಂತಭಾವದಿಂದ ಯೋಚಿಸತೊಡಗಿದರು. ಅವರು ಪರಸ್ಪರವಾಗಿ ಹೀಗೆ ಮಾತನಾಡಿಕೊಂಡರು :

“ಮಹಾತ್ಮನಾದ ಉಪರಿಚರರಾಜನು ನಮ್ಮ ಸಲುವಾಗಿ ಶಾಪವನ್ನು ಹೊಂದಿದನು. ನಾವೆಲ್ಲರೂ ಒಟ್ಟಾಗಿ ಸೇರಿ ಇವನಿಗೆ ಪ್ರಿಯವಾದ ಕಾರ್ಯವನ್ನು ಮಾಡಬೇಕು. ಋಷಿಗಳ ಪಾಪದಿಂದ ವಿಮುಕ್ತನನ್ನಾಗಿ ಮಾಡಬೇಕು.”

ಹೀಗೆ ಬುದ್ಧಿಯಲ್ಲಿ ನಿಶ್ಚಯಿಸಿಕೊಂಡ ಆ ಎಲ್ಲ ದೇವತೆಗಳೂ ಉಪರಿ ಚರವಸುವಿನ ಬಳಿಗೆ ಹೋಗಿ ಪ್ರಸನ್ನಚಿತ್ತರಾಗಿ ಅವನೊಡನೆ ಹೇಳಿದರು :

ಬ್ರಹ್ಮಣ್ಯದೇವಭಕ್ತಸ್ತ್ವಂ ಸುರಾಸುರಗುರುರ್ಹರಿಃ ।
ಕಾಮಂ ಸ ತವ ತುಷ್ಟಾತ್ಮಾ ಕುರ್ಯಾಚ್ಛಾಪವಿಮೋಕ್ಷಣಮ್ ॥೨೨॥

"ಮಹಾರಾಜ! ನೀನು ಬ್ರಹ್ಮಣ್ಯದೇವನಾದ ಶ್ರೀಮನ್ನಾರಾಯಣನಿಗೆ ಪರಮಭಕ್ತನಾಗಿರುವೆ. ಶ್ರೀಹರಿಯು ದೇವತೆಗಳಿಗೂ ಮತ್ತು ಅಸುರರಿಗೂ ಗುರುವಾಗಿರುತ್ತಾನೆ. ಅವನು ನಿನ್ನ ವಿಷಯದಲ್ಲಿ ಸಂತುಷ್ಟಹೃದಯ ನಾಗಿರುತ್ತಾನೆ. ಆದುದರಿಂದ ಅವನು ನಿನ್ನ ಶಾಪವಿಮೋಕ್ಷಣೆಯನ್ನು ಮಾಡಬಹುದು.

ಮಾನನಾ ತು ದ್ವಿಜಾತೀನಾಂ ಕರ್ತವ್ಯಾ ವೈ ಮಹಾತ್ಮನಾಮ್ ।
ಅವಶ್ಯಂ ತಪಸಾ ತೇಷಾಂ ಫಲಿತವ್ಯಂ ನೃಪೋತ್ತಮ ।
ಯತಸ್ತ್ವಂ ಸಹಸಾ ಭ್ರಷ್ಟ ಆಕಾಶಾನ್ಮೇದಿನೀತಲಮ್ ॥೨೩॥

ನೃಪಶ್ರೇಷ್ಠನೇ! ಮಹಾತ್ಮರಾದ ಬ್ರಾಹ್ಮಣರನ್ನು ಯಾವಾಗಲೂ ಗೌರವಿಸಬೇಕು. ಅವರು ಮಾಡಿದ ತಪಸ್ಸಿನಿಂದಾಗಿ ಅವರು ಹೇಳುವುದು ಅವಶ್ಯವಾಗಿ ಫಲಿಸಿಯೇ ತೀರುತ್ತದೆ. ಈ ಕಾರಣದಿಂದಲೇ ನೀನು ಅವರು ಶಾಪವಿತ್ತೊಡನೆಯೇ ಆಕಾಶದಿಂದ ಭ್ರಷ್ಟನಾಗಿ ಪಾತಾಳವನ್ನು ಸೇರಿದೆ.

ಏಕಂ ತ್ವನುಗ್ರಹಂ ತುಭ್ಯಂ ದದ್ಮೋ ವೈ ನೃಪಸತ್ತಮ ।
ಯಾವತ್ತ್ವಂ ಶಾಪದೋಷೇಣ ಕಾಲಮಾಸಿಷ್ಯಸೇಽನಘ ॥೨೪॥

ಭೂಮೇರ್ವಿವರಗೋ ಭೂತ್ವಾ ತಾವತ್ತ್ವಂ ಕಾಲಮಾಪ್ಸ್ಯಸಿ ।
ಯಜ್ಞೇಷು ಸುಹುತಾಂ ವಿಪ್ರೈರ್ವಸೋರ್ಧಾರಾಂ ಸಮಾಹಿತೈಃ ॥೨೫॥

ನಿಷ್ಪಾಪನೇ! ನಾವು ನಿನಗೆ ಒಂದು ಅನುಗ್ರಹವನ್ನು ಮಾಡುತ್ತೇವೆ. ಶಾಪದೋಷದಿಂದ ನೀನು ಎಷ್ಟು ಕಾಲದವರೆಗೆ ಭೂಮಿಯ ಬಿಲದಲ್ಲಿರು ವೆಯೋ –ಅಷ್ಟುಕಾಲದವರೆಗೂ ಏಕಾಗ್ರಚಿತ್ತರಾದ ಬ್ರಾಹ್ಮಣರು ಯಜ್ಞ ಗಳಲ್ಲಿ ಯಜ್ಞೇಶ್ವರನಿಗೆ ಅರ್ಪಿಸುವ ವಸೋರ್ಧಾರೆಯೆಂಬ ಆಜ್ಯಧಾರೆಯು ನಿನಗೆ ದೊರಕುತ್ತದೆ.

ಪ್ರಾಪ್ಸ್ಯಸೇಽಸ್ಮಾದನುಧ್ಯಾನಾನ್ಮಾ ಚ ತ್ವಾಂ ಗ್ಲಾನಿರಸ್ಪೃಶತ್ ।
ನ ಕ್ಷುತ್ಪಿಪಾಸೇ ರಾಜೇನ್ದ್ರ ಭೂಮೇಶ್ಛಿದ್ರೇ ಭವಿಷ್ಯತಃ ॥೨೬॥

ವಸೋರ್ಧಾರಾಭಿಪೀತತ್ವಾತ್ತೇಜಸಾಪ್ಯಾಯಿತೇನ ಚ ।
ಸ ದೇವೋಽಸ್ಮದ್ವರಾತ್ಪ್ರೀತೋ ಬ್ರಹ್ಮಲೋಕಂ ಹಿ ನೇಷ್ಯತಿ ॥೨೭॥

ನಮ್ಮನ್ನು ಧ್ಯಾನಮಾಡುವುದರಿಂದ ನೀನು ವಸೋರ್ಧಾರೆಯನ್ನು ಪಡೆಯುವೆ. ವಸೋರ್ಧಾರೆಯ ಪಾನದಿಂದ ಭೂಮಿಯ ಬಿಲದಲ್ಲಿರುವ ನಿನಗೆ ದಣಿವೇ ಆಗುವುದಿಲ್ಲ. ಹಸಿವು-ಬಾಯಾರಿಕೆಗಳೂ ಆಗುವುದಿಲ್ಲ. ತೇಜಸ್ಸಿನ ವೃದ್ಧಿಯಾಗುತ್ತದೆ. ನಾವು ನಿನಗೆ ಕೊಟ್ಟಿರುವ ವರದಿಂದ ಸುಪ್ರೀತನಾದ ಹರಿಯು ನಿನ್ನನ್ನು ಶಾಪದಿಂದ ಮುಕ್ತನನ್ನಾಗಿ ಮಾಡಿ ಬ್ರಹ್ಮಲೋಕಕ್ಕೆ ಒಯ್ಯುತ್ತಾನೆ.”

ಯುಧಿಷ್ಠಿರ! ಎಲ್ಲ ದೇವತೆಗಳೂ ಉಪರಿಚರವಸುವಿಗೆ ಹೀಗೆ ವರ ಪ್ರದಾನಮಾಡಿ ತಮ್ಮ-ತಮ್ಮ ಸ್ಥಾನಗಳಿಗೆ ಹೊರಟುಹೋದರು. ತಪೋಧನ ರಾದ ಋಷಿಗಳೂ ತಮ್ಮ-ತಮ್ಮ ಆಶ್ರಮಗಳಿಗೆ ತೆರಳಿದರು.

ಚಕ್ರೇ ವಸುಸ್ತತಃ ಪೂಜಾಂ ವಿಷ್ವಕ್ಸೇನಾಯ ಭಾರತ ।
ಜಪ್ಯಂ ಜಗೌ ಚ ಸತತಂ ನಾರಾಯಣಮುಖೋದ್ಗತಮ್ ॥೨೮॥

ಯುಧಿಷ್ಠಿರ! ದೇವತೆಗಳೆಲ್ಲರೂ ಹೊರಟುಹೋದನಂತರ ಉಪರಿ ಚರವಸುವು ವಿಘ್ನಹರನಾದ ವಿಷ್ವಕ್ಸೇನನಿಗೆ ಪೂಜೆಯನ್ನು ಮಾಡಿದನು. ಶ್ರೀಮನ್ನಾರಾಯಣನ ಮುಖಾರವಿಂದದಿಂದ ಪ್ರಕಟವಾದ, ಅವಶ್ಯವಾಗಿ ಜಪಿಸಬೇಕಾದ (ಓಂ ನಮೋ ನಾರಾಯಣಾಯ) ನಾರಾಯಣಾಷ್ಟಾಕ್ಷರೀ ಮಂತ್ರವನ್ನು ನಿರಂತರವಾಗಿ ಜಪಿಸುತ್ತಿದ್ದನು.

ವಸುವು ಭೂಮಿಯ ಬಿಲದಲ್ಲಿಯೇ ವಾಸವಾಗಿದ್ದರೂ ಐದು ಕಾಲ ಗಳಲ್ಲಿ ಪಂಚಮಹಾಯಜ್ಞಗಳ* ಮೂಲಕವಾಗಿ ಸುರಪತಿಯಾದ ಶ್ರೀಹರಿ ಯನ್ನು ಆರಾಧಿಸುತ್ತಿದ್ದನು. ಜಿತೇಂದ್ರಿಯನಾದ, ಅಷ್ಟಾಕ್ಷರೀಮಂತ್ರಜಪ

---

* ಅಭಿಗಮನ, ಉಪಾದಾನ, ಇಜ್ಯಾ, ಸ್ವಾಧ್ಯಾಯ ಮತ್ತು ಯೋಗ–ಇವು ಪಾಂಚ ರಾತ್ರದಲ್ಲಿ ಪ್ರಸಿದ್ಧವಾದ ಪಂಚಕಾಲಿಕಕರ್ಮಗಳು (೧) ಅಭಿಗಮನ : ಪ್ರಾತಃಕಾಲದಲ್ಲಿ ಶುಚಿಯಾಗಿ ಭಗವಂತನ ಬಳಿಗೆ ಹೋಗಿ ಅವನಿಗೆ ಸುಪ್ರಭಾತವನ್ನು ಹೇಳಿ

ದಲ್ಲಿಯೇ ತತ್ಪರನಾಗಿದ್ದ, ಅನನ್ಯಭಕ್ತನಾಗಿದ್ದ ಉಪರಿಚರವಸುವು ಭಕ್ತಿಪೂರ್ವಕವಾಗಿ ಮಾಡುತ್ತಿದ್ದ ಆರಾಧನೆಯಿಂದ ಭಗವಾನ್ ಹರಿ ನಾರಾಯಣನು ಸಂತುಷ್ಟನಾದನು. ವರದನಾದ ಭಗವಾನ್ ವಿಷ್ಣುವು ತನ್ನ ಸಮೀಪದಲ್ಲಿಯೇ ಇದ್ದ ಮಹಾವೇಗಶಾಲಿಯಾದ, ಪಕ್ಷಿಶ್ರೇಷ್ಠನಾದ ಗರುಡನಿಗೆ ತನ್ನ ಅಭೀಷ್ಟವನ್ನು ಹೇಳಿದನು :

ದ್ವಿಜೋತ್ತಮ ಮಹಾಭಾಗ ಪಶ್ಯತಾಂ ವಚನಾನ್ಮಮ ।
ಸಮ್ರಾಡ್ರಾಜಾ ವಸುರ್ನಾಮ ಧರ್ಮಾತ್ಮಾ ಸಂಶಿತವ್ರತಃ ॥೩೩॥

ಬ್ರಾಹ್ಮಣಾನಾಂ ಪ್ರಕೋಪೇನ ಪ್ರವಿಷ್ಟೋ ವಸುಧಾತಲಮ್ ।
ಮಾನಿತಾಸ್ತೇ ತು ವಿಪ್ರೇನ್ದ್ರಾಸ್ತ್ವಂ ತು ಗಚ್ಛ ದ್ವಿಜೋತ್ತಮ ॥೩೪॥

"ಪಕ್ಷಿಶ್ರೇಷ್ಠನೇ! ಮಹಾಭಾಗನೇ! ವಸು ಎಂಬ ಹೆಸರಿನ ಚಕ್ರವರ್ತಿಯು ಧರ್ಮಾತ್ಮನು. ಕಠೋರವ್ರತನಿಷ್ಠನು. ಬ್ರಾಹ್ಮಣರ ಕೋಪದಿಂದಾಗಿ (ಶಾಪದಿಂದಾಗಿ) ಅವನು ಭೂಮಿಯಲ್ಲಿರುವ ಬಿಲವನ್ನು ಪ್ರವೇಶಿಸಿದ್ದಾನೆ. ಋಷಿಗಳ ಶಾಪವನ್ನು ಪ್ರತಿಗ್ರಹಿಸಿದುದರಿಂದ ಅವನು ಬ್ರಾಹ್ಮಣಶ್ರೇಷ್ಠರನ್ನು ಗೌರವಿಸಿದಂತೆಯೇ ಆಯಿತು. ನನ್ನ ಆಜ್ಞೆಯಂತೆ ನೀನು ಉಪರಿಚರವಸುವಿನ ಬಳಿಗೆ ಹೋಗು.

ಭೂಮೇರ್ವಿವರಸಂಗುಪ್ತಂ ಗರುಡೇಹ ಮಮಾಜ್ಞಯಾ ।
ಅಧಶ್ಚರಂ ನೃಪಶ್ರೇಷ್ಠಂ ಖೇಚರಂ ಕುರು ಮಾ ಚಿರಮ್ ॥೩೫॥

ಗರುಡನೇ! ಭೂಮಿಯ ಬಿಲದಲ್ಲಿ ಅಡಗಿರುವ, ಪಾತಾಳದಲ್ಲಿ ಸಂಚರಿಸುತ್ತಿರುವ, ನೃಪಶ್ರೇಷ್ಠನಾದ ಉಪರಿಚರವಸುವನ್ನು ನನ್ನ ಆಜ್ಞೆಯಂತೆ ಶೀಘ್ರವಾಗಿ ಆಕಾಶಚರನನ್ನಾಗಿ ಮಾಡು."

ಪೂಜಿಸುವುದು. (೨) ಉಪಾದಾನ : ಆರಾಧನೆಗೆ ಬೇಕಾದ ಪದಾರ್ಥಗಳನ್ನು ಶಾಸ್ತ್ರೋಕ್ತವಾದ ಮಾರ್ಗಗಳಿಂದ ಸಂಗ್ರಹಿಸುವುದು. (೩) ಇಜ್ಯಾ: ಮಧ್ಯಾಹ್ನದ ಭಗವದಾರಾಧನ ಯಜ್ಞ, (೪) ಸ್ವಾಧ್ಯಾಯ : ವೇದ-ಶಾಸ್ತ್ರಾದಿಗಳ ವಿಧಿಪೂರ್ವಕವಾದ ಅಧ್ಯಯನ. (೫) ಯೋಗ : ಭಗವಧ್ಯಾನಪೂರ್ವಕವಾಗಿ ರಾತ್ರಿ ನಿದ್ರಿಸುವುದು. ಗೃಹಸ್ಥರು ಇವುಗಳನ್ನೇ ಅಲ್ಲದೆ ದೇವಯಜ್ಞ, ಬ್ರಹ್ಮಯಜ್ಞ, ಪಿತೃಯಜ್ಞ, ಅತಿಥಿಯಜ್ಞ, ಭೂತಯಜ್ಞಗಳೆಂಬ ಪಂಚ ಮಹಾಯಜ್ಞಗಳನ್ನೂ ಮಾಡಬೇಕು.

ಶ್ರೀಮನ್ನಾರಾಯಣನು ಗರುಡನಿಗೆ ಹೀಗೆ ಆಜ್ಞಾಪಿಸಿದೊಡನೆಯೇ ವಾಯುವೇಗನಾದ ಗರುತ್ಮಂತನು ತನ್ನೆರಡು ರೆಕ್ಕೆಗಳನ್ನೂ ಅಗಲಿಸಿಕೊಂಡು ಉಪರಿಚರವಸುವಿದ್ದ ಭೂಮಿಯ ಬಿಲವನ್ನು ಪ್ರವೇಶಿಸಿದನು. ವಿನತೆಯ ಮಗನಾದ ಗರುಡನು ಅಲ್ಲಿದ್ದ ರಾಜನನ್ನು ಮೇಲಕ್ಕೆತ್ತಿಕೊಂಡು ಒಡನೆಯೇ ಆಕಾಶದ ಕಡೆಗೆ ಹಾರಿದನು ಮತ್ತು ರಾಜನನ್ನು ಆಕಾಶದಲ್ಲಿ ಬಿಟ್ಟನು. ಆ ಮುಹೂರ್ತದಲ್ಲಿಯೇ ವಸುವು ಪುನಃ ಉಪರಿಚರನಾದನು. ಬಳಿಕ ನೃಪ ಶ್ರೇಷ್ಠನಾದ ವಸುವು ಸಶರೀರನಾಗಿಯೇ ಬ್ರಹ್ಮಲೋಕಕ್ಕೆ ಹೋದನು.

ಯುಧಿಷ್ಠಿರ! ಹೀಗೆ ಮಹಾತ್ಮನಾದ ಉಪರಿಚರವಸುವು ದೇವತೆಗಳ ಅಭಿಮತವನ್ನು ಬೆಂಬಲಿಸಲು ಹೋಗಿ ಅದರಿಂದುಂಟಾದ ವಾಗ್ದೋಷದಿಂದ ಬ್ರಾಹ್ಮಣರ ಶಾಪಕ್ಕೆ ಗುರಿಯಾಗಿ ಅಧೋಗತಿಯನ್ನು ಹೊಂದಿದನು. ಆ ಸಮಯದಲ್ಲವನು ಪುರುಷೋತ್ತಮನಾದ ಶ್ರೀಹರಿಯನ್ನು ಮಾತ್ರವೇ ಸತತವಾಗಿ ಆರಾಧಿಸುತ್ತಿದ್ದನು. ಅದರ ಫಲವಾಗಿ ಆ ರಾಜನು ಬಹಳ ಬೇಗ ಶಾಪದಿಂದ ವಿಮುಕ್ತನಾಗಿ ಬ್ರಹ್ಮಲೋಕವನ್ನು ಹೊಂದಿದನು.

ಯುಧಿಷ್ಠಿರ! ಈಗ ನಾನು ನಿನಗೆ ಮನುಷ್ಯರು ಶ್ವೇತದ್ವೀಪದ ನಿವಾಸಿ ಗಳಾಗಿ ಹೇಗೆ ಹುಟ್ಟಿದರು? ಹೇಗಿದ್ದಾರೆ? –ಇತ್ಯಾದಿ ಎಲ್ಲ ವಿಷಯಗಳನ್ನೂ ಹೇಳಿದೆನು. ಈಗ ನಾರದರು ಯಾವ ರೀತಿಯಲ್ಲಿ ಶ್ವೇತದ್ವೀಪಕ್ಕೆ ಹೋದರೆಂಬ ವಿಷಯವನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು."

೩೩೦ನೆಯ ಅಧ್ಯಾಯವು ಮುಗಿಯಿತು.

೩೩೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾರದಕೃತ ಭಗವನ್ನಾಮಸ್ತೋತ್ರ

ಪಾರಿಕ್ಷಿತ! ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಪೂಜ್ಯರಾದ ನಾರದರು ಶ್ವೇತದ್ವೀಪಕ್ಕೆ ಹೋಗಿ ಅಲ್ಲಿ ಆ ಹಿಂದೆ ಋಷಿಗಳು ನೋಡಿದ್ದ ಚಂದ್ರನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ ಆ ಶ್ವೇತವರ್ಣದ ಪುರುಷರನ್ನೇ ನೋಡಿದರು. ಬಳಿಕ ಅವರು ಶ್ವೇತದ್ವೀಪನಿವಾಸಿಗಳನ್ನು ಮನಸ್ಸಿನಿಂದಲೇ ಪೂಜಿಸಿ ಗೌರವಿಸಿದರು. ಅಂತೆಯೇ ಅವರೂ ಕೂಡ ನಾರದರನ್ನು ಮನಸ್ಸಿನಿಂದಲೇ ಪೂಜಿಸಿ ಗೌರವಿ

ಸಿದರು. ಅನಂತರ ನಾರದರು ಭಗವಂತನನ್ನು ಸಂದರ್ಶಿಸುವ ಇಚ್ಛೆಯಿಂದ ಕಠೋರವಾದ ವ್ರತನಿಯಮಗಳನ್ನು ಪರಿಪಾಲಿಸುತ್ತಾ ಶ್ರೀಹರಿಯ ನಾಮ ಜಪದಲ್ಲಿಯೇ ನಿರತರಾಗಿದ್ದರು. ನಾರದರು ತಮ್ಮೆರಡು ತೋಳುಗಳನ್ನೂ ಮೇಲಕ್ಕೆತ್ತಿಕೊಂಡು ಏಕಾಗ್ರಚಿತ್ತರಾಗಿ ನಿರ್ಗುಣನಾದ, ಅನಂತಕಲ್ಯಾಣ ಗುಣಸಂಪನ್ನನಾದ, ವಿಶ್ವಾತ್ಮನಾದ ಶ್ರೀಮನ್ನಾರಾಯಣನ ಪ್ರೀತ್ಯರ್ಥವಾಗಿ ಈ ಸ್ತೋತ್ರವನ್ನು ಹಾಡಿದರು.

ನಮಸ್ತೇ ದೇವದೇವೇಶ। ನಿಷ್ಕ್ರಿಯ। ನಿರ್ಗುಣ। ಲೋಕ ಸಾಕ್ಷಿನ್। ಕ್ಷೇತ್ರಜ್ಞ। ಪುರುಷೋತ್ತಮ। ಅನನ್ತ। ಪುರುಷ। ಮಹಾಪುರುಷ। ಪುರುಷೋತ್ತಮ। ತ್ರಿಗುಣ। ಪ್ರಧಾನ। ಅಮೃತ। ಅಮೃತಾಖ್ಯ। ಅನನ್ತಾಖ್ಯ। ವ್ಯೋಮ। ಸನಾತನ। ಸದಸದ್ವ್ಯಕ್ತಾವ್ಯಕ್ತ। ಋತಧಾಮನ್। ಆದಿದೇವ। ವಸುಪ್ರದ। ಪ್ರಜಾಪತೇ। ಸುಪ್ರಜಾಪತೇ। ವನಸ್ಪತೇ। ಮಹಾಪ್ರಜಾಪತೇ। ಊರ್ಜಸ್ಪತೇ। ವಾಚಸ್ಪತೇ। ಜಗತ್ಪತೇ। ಮನಸ್ಪತೇ। ದಿವಸ್ಪತೇ। ಮರುತ್ಪತೇ। ಸಲಿಲಪತೇ। ಪೃಥಿವೀಪತೇ। ದಿಕ್ಪತೇ । ಪೂರ್ವನಿವಾಸ । ಗುಹ್ಯ । ಬ್ರಹ್ಮಪುರೋಹಿತ । ಬ್ರಹ್ಮಕಾಯಿಕ। ಮಹಾರಾಜಿಕ। ಚಾತುರ್ಮಹಾರಾಜಿಕ। ಭಾಸುರ। ಮಹಾಭಾಸುರ। ಸಪ್ತಮಹಾಭಾಗ। ಯಾಮ್ಯ। ಮಹಾಯಾಮ್ಯ। ಸಂಜ್ಞಾಸಂಜ್ಞ। ತುಷಿತ। ಮಹಾತುಷಿತ। ಪ್ರಮರ್ದನ। ಪರಿನಿರ್ಮಿತ। ಅಪರಿನಿರ್ಮಿತ। ವಶವರ್ತಿನ್। ಅಪರಿನಿನ್ದಿತ। ಅಪರಿಮಿತ। ವಶವರ್ತಿನ್। ಅವಶ ವರ್ತಿನ್। ಯಜ್ಞ। ಮಹಾಯಜ್ಞ। ಯಜ್ಞಸಮ್ಭವ। ಯಜ್ಞಯೋನೇ। ಯಜ್ಞಗರ್ಭ। ಯಜ್ಞಹೃದಯ । ಯಜ್ಞಸ್ತುತ । ಯಜ್ಞಭಾಗಹರ । ಪಞ್ಚ ಯಜ್ಞ। ಪಞ್ಚಕಾಲಕರ್ತೃಪತೇ। ಪಾಞ್ಚರಾತ್ರಿಕ। ವೈಕುಣ್ಠ। ಅಪರಾಜಿತ ಮಾನಸಿಕ। ನಾಮನಾಮಿಕ। ಪರಸ್ವಾಮಿನ್। ಸುಸ್ನಾತ। ಹಂಸ। ಪರಮಹಂಸ। ಮಹಾಹಂಸ। ಪರಮಯಾಜ್ಞಿಕ। ಸಾಂಖ್ಯಯೋಗ ಸಾಂಖ್ಯಮೂರ್ತೇ। ಅಮೃತೇಶಯ। ಹಿರಣ್ಯೇಶಯ। ದೇವೇಶಯ। ಕುಶೇಶಯ। ಬ್ರಹ್ಮೇಶಯ । ಪದ್ಮೇಶಯ । ವಿಶ್ವೇಶ್ವರ।

ವಿಷ್ವಕ್ಸೇನ । ತ್ವಂ ಜಗದನ್ವಯಃ । ತ್ವಂ ಜಗತ್ಪ್ರಕೃತಿಃ । ತವಾಗ್ನಿರಾಸ್ಯಂ । ವಡವಾಮುಖೋಽಗ್ನಿಃ। ತ್ವಮಾಹುತಿ । ಸಾರಥಿಃ । ತ್ವಂ ವಷಟ್ಕಾರ। ತ್ವಮೋಙ್ಕಾರಃ।ತ್ವಂ ತಪಃ।ತ್ವಂ ಮನ ।ತ್ವಂ ಚನ್ದ್ರಮಾ ।ತ್ವಂ ಚಕ್ಷುರಾಜ್ಯಂ। ತ್ವ ಸೂರ್ಯಃ ।ತ್ವಂ ದಿಶಾಂ ಗಜ। ತ್ವಂ ದಿಗ್ಭಾನೋ । ವಿದಿಗ್ಭಾನೊ। ಹಯಶಿರಃ।ಪ್ರಥಮತ್ರಿಸೌಪರ್ಣ ।ವರ್ಣಧರಃ ।ಪಞ್ಚಾಗ್ನೇ।ತ್ರಿಣಾಚಿಕೇತ। ಷಡಙ್ಗನಿಧಾನ। ಪ್ರಾಗ್ಜ್ಯೋತಿಷ । ಜ್ಯೇಷ್ಠಸಾಮಗ । ಸಾಮಿಕವ್ರತಧರ। ಅಥರ್ವಶಿರಾಃ। ಪಞ್ಚಮಹಾಕಲ್ಪ । ಫೇನಪಾಚಾರ್ಯ । ವಾಲಖಿಲ್ಯ । ವೈಖಾನಸ । ಅಭಗ್ನಯೋಗ । ಅಭಗ್ನಪರಿಸಂಖ್ಯಾನ । ಯುಗಾದೇ । ಯುಗಮಧ್ಯ। ಯುಗನಿಧನ । ಅಖಣ್ಡಲ । ಪ್ರಾಚೀನಗರ್ಭ। ಕೌಶಿಕ । ಪುರುಹೂತ । ಪುರುಷ್ಟುತ । ವಿಶ್ವಕೃತ್ ವಿಶ್ವರೂಪ । ಅನನ್ತಗತೇ । ಅನನ್ತಭೋಗ।ಅನನ್ತ ।ಅನಾದೇ।ಅಮಧ್ಯ । ಅವ್ಯಕ್ತಮಧ್ಯ।ಅವ್ಯಕ್ತನಿಧನ। ವ್ರತಾವಾಸ।ಸಮುದ್ರಾಧಿವಾಸ।ಯಶೋವಾಸ।ತಪೋವಾಸ।ದಮಾವಾಸ। ಲಕ್ಷ್ಮ್ಯಾವಾಸ। ವಿದ್ಯಾವಾಸ । ಕೀರ್ತ್ಯಾವಾಸ । ಶ್ರೀವಾಸ । ಸರ್ವಾವಾಸ ವಾಸುದೇವ । ಸರ್ವಚ್ಛನ್ದಕ । ಹರಿಹಯ । ಹರಿಮೇಧ । ಮಹಾಯಜ್ಞ-ಭಾಗಹರ।ವರಪ್ರದ । ಸುಖಪ್ರದ। ಧನಪ್ರದ । ಹರಿಮೇಧ। ಯಮ। ನಿಯಮ ।ಮಹಾನಿಯಮ । ಕೃಚ್ಛ್ರ ।ಅತಿಕೃಚ್ಛ್ರ । ಮಹಾಕೃಚ್ಛ್ರ । ಸರ್ವಕೃಚ್ಛ್ರ ।ನಿಯಮಧರ।ನಿವೃತ್ತಭ್ರಮ।ಪ್ರವಚನಗತ।ಪೃಶ್ನಿಗರ್ಭ ಪ್ರವೃತ್ತ।ಪ್ರವೃತ್ತವೇದಕ್ರಿಯ । ಅಜ ।ಸರ್ವಗತೇ ।ಸರ್ವದರ್ಶಿನ್ । ಅಗ್ರಾಹ್ಯ । ಅಚಲ।ಮಹಾವಿಭೂತೇ ।ಮಾಹಾತ್ಮ್ಯಶರೀರ।ಪವಿತ್ರ। ಮಹಾಪವಿತ್ರ। ಹಿರಣ್ಮಯ।ಬೃಹತ್ । ಅಪ್ರತರ್ಕ್ಯ।ಅವಿಜ್ಞೇಯ । ಬ್ರಹ್ಮಾಗ್ರ್ಯ। ಪ್ರಜಾಸರ್ಗಕರ।ಪ್ರಜಾನಿಧನಕರ।ಮಹಾಮಾಯಾಧರ। ಚಿತ್ರಶಿಖಣ್ಡಿನ್ । ವರಪ್ರದ।ಪುರೋಡಾಶ ಭಾಗಹರ।ಗತಾಧ್ವರ। ಛಿನ್ನತೃಷ್ಣ। ಛಿನ್ನಸಂಶಯ ।ಸರ್ವತೋವೃತ್ತ।ನಿವೃತ್ತಿರೂಪ। ಬ್ರಾಹ್ಮಣ ರೂಪ।ಬ್ರಾಹ್ಮಣಪ್ರಿಯ। ವಿಶ್ವಮೂರ್ತೇ। ಮಹಾಮೂರ್ತೇ।ಬಾನ್ಧವ

ಭಕ್ತವತ್ಸಲ। ಬ್ರಹ್ಮಣ್ಯದೇವ। ಭಕ್ತೋಽಹಂ ತ್ವಾಂ ದಿದೃಕ್ಷು ರೇಕಾನ್ತದರ್ಶನಾಯ ನಮೋ ನಮಃ ॥

ದೇವದೇವೇಶ! ನಿನಗೆ ನಮಸ್ಕಾರ! ನೀನು ಕರ್ಮರಹಿತನು, ನಿರ್ಗುಣನು* (ಅಥವಾ ಅಖಿಲಹೇಯಗುಣವರ್ಜಿತನು.) ಸಮಸ್ತ ಜಗತ್ತಿಗೂ ಸಾಕ್ಷಿಯಾಗಿರುವೆ. ಕ್ಷೇತ್ರವನ್ನು ತಿಳಿದವನು (ಜೀವಾತ್ಮನಿಗೂ ಆತ್ಮನಾದವನು), ಪುರುಷೋತ್ತಮನು (ಕ್ಷರ ಮತ್ತು ಅಕ್ಷರಪುರುಷರಿಗಿಂತಲೂ ಉತ್ತಮ ನಾದವನು), ಅಂತವಿಲ್ಲದವನು, ಶರೀರವೆಂಬ ಪುರದಲ್ಲಿರತಕ್ಕವನು, ಮಹಾ ಪುರುಷನು, ಸತ್ತ್ವ-ರಜಸ್ತಮಸ್ಸುಗಳೆಂಬ ತ್ರಿಗುಣಾತ್ಮಕನಾದವನು, ಪ್ರಧಾನನು (ಮೂಲಪ್ರಕೃತಿಸ್ವರೂಪನು), ಅಮೃತಸ್ವರೂಪನು-ಅಮೃತನೆಂಬ ಹೆಸರಿ ನಿಂದ ಖ್ಯಾತನಾದವನು, ಶೇಷನಾಗರೂಪನು, ಮಹಾಕಾಶರೂಪನು, ಅನಾದಿಯು, ಕಾರ್ಯ-ಕಾರಣರೂಪದಿಂದ ವ್ಯಕ್ತನೂ-ಅವ್ಯಕ್ತನೂ ಗ್ರಾಹ್ಯನೂ-ಅಗ್ರಾಹ್ಯನೂ ಆಗಿರುವೆ. ಸತ್ಯಾಶ್ರಯನು, ಆದಿದೇವನು, ಕರ್ಮಫಲಗಳನ್ನು ಕೊಡುವ ವಸುಪ್ರದನು, ದಕ್ಷಾದಿ ಪ್ರಜಾಪತಿಗಳ ಸ್ವರೂಪನು, ಸನಕಾದಿಗಳ ಸ್ವರೂಪನು, ಅಶ್ವತ್ಥಾದಿ ವೃಕ್ಷಗಳ ಸ್ವರೂಪನು, ಚತುರ್ಮುಖಬ್ರಹ್ಮಸ್ವರೂಪನು, ಬಲಶಾಲಿಗಳಲ್ಲಿ ಶ್ರೇಷ್ಠನಾದವನು, ಬೃಹ ಸ್ಪತಿಸ್ವರೂಪನು, ಜಗತ್ಪತಿಯಾದ ಇಂದ್ರಸ್ವರೂಪನು, ಸೂತ್ರಾತ್ಮನು, ಸೂರ್ಯಸ್ವರೂಪನು, ಮರುತ್ತುಗಳಿಗೆ ಒಡೆಯನು, ವರುಣಸ್ವರೂಪನು, ಚಕ್ರವರ್ತಿಸ್ವರೂಪನು, ಇಂದ್ರಾಗ್ನಿಸ್ವರೂಪನು, ಮಹಾಪ್ರಳಯದ ಸಮಯ ದಲ್ಲಿ ಜಗತ್ತಿಗೆ ಆಧಾರಭೂತನಾಗಿರತಕ್ಕವನು, ಅಪ್ರಕಾಶ್ಯನಾಗಿರತಕ್ಕವನು, ಬ್ರಹ್ಮನಿಗೆ ವೇದವನ್ನು ದಯಪಾಲಿಸಿದವನು⌒, ಬ್ರಾಹ್ಮಣನ ಶರೀರದಲ್ಲಿ ಯಜ್ಞಾಧ್ಯಯನಾದಿರೂಪದಲ್ಲಿರತಕ್ಕವನು. ಮಹಾರಾಜಿಕರೆಂಬ ದೇವಗಣ ಸ್ವರೂಪನು. ನಾಲ್ಕು ಮಂದಿ ಮಹಾರಾಜಿಕಸ್ವರೂಪನು, ಪ್ರಕಾಶಮಾನನು, ಮಹಾಪ್ರಕಾಶದಿಂದ ಕೂಡಿರತಕ್ಕವನು, ಯಜ್ಞದಲ್ಲಿ ಏಳು ಮಹಾಯಜ್ಞ ಭಾಗಗಳನ್ನು ಹೊಂದುವವನು, ಯಮಗುಣಸ್ವರೂಪನು, ಚಿತ್ರಗುಪ್ತ

---

*ನಿರ್ಗುಣ = ಸರ್ವಗುಣರಹಿತ (ಅದ್ವೈತ)
ಹೇಯಗುಣವಿವರ್ಜಿತ (ವಿಶಿಷ್ಟಾದ್ವೈತ ಮತ್ತು ದ್ವೈತ)

⌒ ಬ್ರಹ್ಮಪುರೋಹಿತಃ : ಬ್ರಹ್ಮನಿಗೆ ವೇದವನ್ನು ದಯಪಾಲಿಸಿದವನು. ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ।ತಂ

ಸ್ವರೂಪನು, ಯಮಪತ್ನೀಸ್ವರೂಪನು, ತುಷಿತ-ಮಹಾತುಷಿತರೆಂಬ ದೇವಗಣಸ್ವರೂಪನು, ಮೃತ್ಯುರೂಪನು, ಮೃತ್ಯುವಿನ ಸಹಾಯಾರ್ಥವಾಗಿ ಕಲ್ಪಿತವಾದ ಕಾಮ-ರೋಗಸ್ವರೂಪನು. ಶಮಾರೋಗ್ಯಾದಿಸ್ವರೂಪನು, ಕಾಮಾದಿಗಳನ್ನು ವಶದಲ್ಲಿ ಹೊಂದುವವನು, ಶಮ-ದಮಾದಿ ಗುಣ ಸಂಪನ್ನನು, ಅನಂತನು, ಶಾಸ್ಯನು, ಶಾಸಕನು, ಅಗ್ನಿಹೋತ್ರಾದಿ ಯಜ್ಞಗಳ ಸ್ವರೂಪನು, ಬ್ರಹ್ಮಯಜ್ಞಸ್ವರೂಪನು, ಋತ್ವಿಕ್ಸ್ವರೂಪನು, ವೇದ ಸ್ವರೂಪನು, ಅಗ್ನಿಸ್ವರೂಪನು, ಯಜ್ಞಾಂಗವಾದ ಯಜ್ಞಭಾಗವನ್ನು ಅಪಹರಿಸತಕ್ಕವನು, ಪಂಚಯಜ್ಞಸ್ವರೂಪನು, ಅಹೋರಾತ್ರಿಗಳು, ಮಾಸ, ಋತು, ಅಯನ ಮತ್ತು ಸಂವತ್ಸರರೂಪವಾದ ಕಾಲಗಳಿಗೆ ಸ್ವಾಮಿಯು, ಪಾಂಚರಾತ್ರಗಮ್ಯನು, ವಿಕುಂಠೆಯ ಮಗನು, ಪರಾಜಿತನಾಗದೇ ಇರತಕ್ಕವನು, ಮನಸ್ಸೇ ಉಪಾಧಿಯಾಗಿರತಕ್ಕವನು, ಎಲ್ಲ ನಾಮಗಳ ಸಮಾವೇಶವೂ ಇರತಕ್ಕವನು[2], ಬ್ರಹ್ಮನಿಗೂ ಒಡೆಯನು, ಸಮಾಪ್ತವಾದ ವೇದವ್ರತವುಳ್ಳವನು, ತ್ರಿದಂಡಿಯು, ಏಕದಂಡಿಯು, ದಂಡಾದಿಗಳಿಂದ ಹೀನನಾದವನು, ಶ್ರೇಷ್ಠನಾದ ಯಾಜ್ಞಿಕನು, ಸಾಂಖ್ಯಯೋಗಸ್ವರೂಪನು, ಜ್ಞಾನಮೂರ್ತಿಯು, ಜೀವದಲ್ಲಿ ಪವಡಿಸಿರತಕ್ಕವನು, ಹೃದಯದಲ್ಲಿ ಪವಡಿಸಿರತಕ್ಕವನು, ಇಂದ್ರಿಯಗಳಲ್ಲಿ ಪವಡಿಸಿರತಕ್ಕವನು, ಜಲರಾಶಿಯಲ್ಲಿ ಪವಡಿಸಿರತಕ್ಕವನು, ವೇದಗಳಲ್ಲಿ ಪವಡಿಸಿರತಕ್ಕವನು, ಬ್ರಹ್ಮಾಂಡದಲ್ಲಿ ಪವಡಿಸಿರತಕ್ಕವನು (ಮಹಾವಿಷ್ಣುವು), ವಿಶ್ವೇಶ್ವರನು, ಭಕ್ತರ ಪಾಲನಾರ್ಥ ವಾಗಿ ಸರ್ವತ್ರ ಗಮನವುಳ್ಳ ಸೈನ್ಯವಿರತಕ್ಕ ವಿಷ್ವಕ್ಸೇನನು, ಜಗತ್ತಿನಲ್ಲಿ ಓತ-ಪ್ರೋತನಾಗಿರತಕ್ಕವನು, ಜಗತ್ತಿಗೆ ಕಾರಣಸ್ವರೂಪನಾಗಿರತಕ್ಕವನು. ಅಗ್ನಿಯೇ ನಿನಗೆ ಮುಖರೂಪನಾಗಿದ್ದಾನೆ. ವಡವಾಮುಖನಾದ ಅಗ್ನಿಯೂ ನೀನೇ ಆಗಿರುವೆ. ನೀನು ಆಹುತಿಸ್ವರೂಪನು, ಸಾರಥಿಯು, ವಷಟ್ಕಾರ ಸ್ವರೂಪನು, ಓಂಕಾರಸ್ವರೂಪನು, ತಪಃಸ್ವರೂಪನು, ಮನಃಸ್ವರೂಪನು,

---

ಹಿ ದೇವಮಾತ್ಮಬುದ್ಧಿಪ್ರಕಾಶಂ ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥ ಎಂಬ ಶ್ರುತಿವಚನವೂ ಇದನ್ನೇ ಹೇಳುತ್ತದೆ.

[2] ನಾಮನಾಮಿಕನು : ಸಕಲನಾಮಗಳ ಸಮಾವೇಶವಿರತಕ್ಕವನು. ನಾಮಾನಿ ಸರ್ವಾಣಿ ಯಾಮಾವಿಶನ್ತಿ ಎಂಬ ಶ್ರುತಿವಚನವೂ ಇದನ್ನೇ ಹೇಳುತ್ತದೆ.

ಚಂದ್ರಮಸಸ್ವರೂಪನು, ಕಣ್ಣುಗಳಿಗೆ ದೇವತೆಯಾದ ಸೂರ್ಯನೂ ನೀನೇ ಆಗಿರುವೆ. ಸೂರ್ಯಸ್ವರೂಪನು, ದಿಗ್ಗಜಸ್ವರೂಪನು, ಎಲ್ಲ ದಿಕ್ಕುಗಳನ್ನು ಬೆಳಗುವ ದಿಗ್ಭಾನುಸ್ವರೂಪನು, ಉಪದಿಕ್ಕುಗಳನ್ನು ಬೆಳಗುವ ವಿಧಿಗ್ಭಾನು ಸ್ವರೂಪನು, ಹಯಗ್ರೀವಸ್ವರೂಪನು, ಪ್ರಥಮತ್ರಿಸೌಪರ್ಣಮಂತ್ರ ಸ್ವರೂಪನು. ಬ್ರಾಹ್ಮಣಾದಿವರ್ಣಗಳನ್ನು ಧಾರಣೆಮಾಡುವವನು ನೀನೇ ಆಗಿರುವೆ. ಗಾರ್ಹಪತ್ಯ-ದಕ್ಷಿಣಾಗ್ನಿ-ಆಹವನೀಯ-ಸಭ್ಯ, ಆವಸಥ್ಯಗಳೆಂಬ ಪಂಚಾಗ್ನಿಗಳ ಸ್ವರೂಪನು, ತ್ರಿನಾಚಿಕೇತ ಎಂಬ ಹೆಸರಿನಿಂದ ಪ್ರಸಿದ್ಧವಾದ ಅಗ್ನಿತ್ರಯವೂ ನೀನೆ ಆಗಿರುವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ –ಎಂಬ ಆರು ಅಂಗಗಳಿಗೆ ನಿಧಿಪ್ರಾಯವಾದ ವೇದಸ್ವರೂಪನು, ಪ್ರಾಗ್ಜ್ಯೋತಿಷವೆಂಬ ಸಾಮದಿಂದಲೂ ಜ್ಯೇಷ್ಠಸಾಮ ದಿಂದಲೂ ಗಾನಮಾಡಲ್ಪಡತಕ್ಕವನು,* ಸಾಮಗಾನಮಾಡುವವರ ವೇದ ವ್ರತವನ್ನು ಧಾರಣೆಮಾಡಿರುವವನು, ಅಥರ್ವಶಿರಸ್ಸೆಂಬ ಉಪ ನಿಷತ್ಪ್ರತಿಪಾದ್ಯನು, ಸೌರ-ಶಾಕ್ತ-ಗಾಣಾಪತ್ಯ, ಶೈವ ವೈಷ್ಣವಾಗಮಗಳಿಂದ ಪ್ರತಿಪಾದ್ಯನಾಗಿರತಕ್ಕವನು, ಹಾಲಿನ ನೊರೆಯನ್ನೇ ತಿಂದು ಜೀವಿಸುವ ಋಷಿಗಳಿಗೆ ಆಚಾರ್ಯನು, ವಾಲಖಿಲ್ಯಸ್ವರೂಪನು, ವೈಖಾನಸಮುನಿ ಸ್ವರೂಪನು, ಅಖಂಡಯೋಗಸ್ವರೂಪನು, ಅಭಿನ್ನವಾದ ಪೂರ್ಣ ಸಂಖ್ಯಾಸ್ವರೂಪನು, ಯುಗದ ಆದಿಸ್ವರೂಪನು, ಯುಗಮಧ್ಯಸ್ವರೂಪನು, ಪ್ರಳಯಸ್ವರೂಪನು, ಇಂದ್ರಸ್ವರೂಪನು, ಪ್ರಾಚೀನಗರ್ಭನು, ಕೌಶಿಕ ಮುನಿಯು, ಪುರುಷ್ಟುತನು, ಪುರುಹೂತನು, ವಿಶ್ವಕರ್ಮಸ್ವರೂಪನು, ವಿಶ್ವರೂಪನು, ಅನಂತಗತಿಯು, ಅನಂತಭೋಗನು, ಅಂತವಿಲ್ಲದವನು, ಅನಾದಿಯು, ಮಧ್ಯರಹಿತನು, ಅವ್ಯಕ್ತವಾದ ಮಧ್ಯಾವಸ್ಥೆಯುಳ್ಳವನು, ಅವ್ಯಕ್ತವಾದ ನಿಧನವುಳ್ಳವನು, ವ್ರತಗಳಿಗೆ ಆಶ್ರಯನು, ಕ್ಷೀರ ಸಾಗರಶಾಯಿಯು, ಯಶಸ್ಸಿಗೆ ನಿವಾಸಸ್ಥಾನನು, ತಪಸ್ಸಿಗೆ ವಾಸ

---

* ಜೋತೋವಾಹಾಯೀತಿ ಸಾಮ ಪ್ರಾಗ್ಜ್ಯೋತಿಃ ಮೂರ್ಧಾನಂ ದಿವ ಇತ್ಯಸ್ಯಾಮೃಚಿ ಗೀಯಮಾನಂ ಸಾಮ ಜ್ಯೇಷ್ಠಸಾಮ = 'ಜೋತೋ ವಾ ಹಾಯಿ'– ಎಂಬುದು ಪ್ರಾಗ್ಜ್ಯೋತಿಷಸಾಮ. ಮೂರ್ಧಾನಂ ದಿವೋ ಅರತಿಂ–ಎಂಬ ಋಕ್ಕಿನಲ್ಲಿ ಗಾನಮಾಡುವ ಸಾಮಕ್ಕೆ ಜ್ಯೇಷ್ಠಸಾಮವೆಂದು ಹೆಸರು.

ಸ್ಥಾನನಾಗಿರತಕ್ಕವನು, ಸಂಯಮಕ್ಕೆ ಆಶ್ರಯನಾಗಿರತಕ್ಕವನು, ಲಕ್ಷ್ಮಿಗೆ ವಾಸ ಸ್ಥಾನನಾಗಿರತಕ್ಕವನು, ವಿದ್ಯೆಗಳಿಗೆ ಆವಾಸಸ್ಥಾನನು ; ಕೀರ್ತಿಗೆ ಆಧಾರ ಭೂತನಾಗಿರತಕ್ಕವನು, ಸಂಪತ್ತಿಗೆ ಆಶ್ರಯಭೂತನಾಗಿರತಕ್ಕವನು, ಸಕಲ ಚರಾಚರಪ್ರಾಣಿಗಳಿಗೂ ಆಶ್ರಯಸ್ಥಾನನಾಗಿರತಕ್ಕವನು, ವಾಸುದೇವನು, ಸರ್ವರ ಇಚ್ಛೆಯನ್ನೂ ಪೂರ್ಣಮಾಡಿಕೊಡತಕ್ಕವನು, ಹರಿಹಯನು, ಅಶ್ವಮೇಧಯಜ್ಞಸ್ವರೂಪನು, ಮಹಾಯಜ್ಞಭಾಗಹರನು, ಭಕ್ತರಿಗೆ ವರಪ್ರದಾನಮಾಡತಕ್ಕವನು, ಭಕ್ತರಿಗೆ ಧನವನ್ನು ದಯಪಾಲಿಸತಕ್ಕವನು. ಹರಿಭಕ್ತನು* ಯಮನು, ನಿಯಮನು, ಮಹಾನಿಯಮವುಳ್ಳವನು, ಕೃಚ್ಛ್ರನು, ಅತಿಕೃಚ್ಛ್ರನು, ಮಹಾಕೃಚ್ಛ್ರನೂ (ಪ್ರಾಜಾಪತ್ಯ-ಚಾಂದ್ರಾಯಣಾದಿ ವ್ರತಸ್ವರೂಪನು), ನೀನೇ ಆಗಿರುವೆ. ಸರ್ವಕೃಚ್ಛ್ರನು, ನಿಯಮಧರನು, ಭ್ರಮರಹಿತನು, ವೇದವಾಕ್ಯಗಳಿಗೆ ವಿಷಯನಾಗಿರುವವನು, ಶ್ರೀಕೃಷ್ಣ ಸ್ವರೂಪನು, ವೈದಿಕಕರ್ಮಗಳ ಪ್ರವರ್ತಕನು, ಜನ್ಮರಹಿತನು, ಸರ್ವ ವ್ಯಾಪಿಯು, ಸರ್ವದರ್ಶಿಯು, ಅಗ್ರಾಹ್ಯನು, ಅಚಲನು, ಮಹಾ ವಿಭೂತಿಯು, ಮಾಹಾತ್ಮ್ಯಶರೀರನು (ಪವಿತ್ರರಾದವರನ್ನು ಪವಿತ್ರರನ್ನಾಗಿ ಮಾಡುವವನು), ಹಿರಣ್ಮಯನು, ಬೃಹತ್ಸ್ವರೂಪನು, ತರ್ಕಕ್ಕೆ ಸಿಕ್ಕದವನು, ಯಾರಿಂದಲೂ ತಿಳಿಯಲ್ಪಡದೇ ಇರತಕ್ಕವನು, ಮಹಾ ಕಾರಣನು, ಪ್ರಜೆಗಳನ್ನು ಸೃಷ್ಟಿಸುವವನು, ಪ್ರಜೆಗಳನ್ನು ವಿನಾಶಮಾಡು ವವನು, ಮಹಾಮಾಯೆಯನ್ನು ಧರಿಸಿರತಕ್ಕವನು, ಸಪ್ತರ್ಷಿಸ್ವರೂಪನು, ವರಪ್ರದನು, ಪುರೋಡಾಶದ ಭಾಗವನ್ನು ಪರಿಗ್ರಹಿಸುವವನು, ಪ್ರಾಪ್ತ ಯಜ್ಞನು, ತೃಷ್ಣಾರಹಿತನು, ಸಂಶಯರಹಿತನು, ಸರ್ವವ್ಯಾಪಕನು, ನಿವೃತ್ತಿ ರೂಪನು, ಬ್ರಾಹ್ಮಣರೂಪನು, ಬ್ರಾಹ್ಮಣಪ್ರಿಯನು, ವಿಶ್ವಮೂರ್ತಿಯು, ಮಹಾಮೂರ್ತಿಯು, ಜಗದ್ಬಂಧುವು, ಭಕ್ತವತ್ಸಲನು, ಬ್ರಹ್ಮಣ್ಯದೇವನು. ಇಂತಹ ನಿನಗೆ ನಾನು ಭಕ್ತನಾಗಿದ್ದೇನೆ. ನಿನ್ನನ್ನು ಏಕಾಂತದಲ್ಲಿ ದರ್ಶನ

---

* ಭಗವಂತ ಮತ್ತು ಭಕ್ತರಲ್ಲಿ ವ್ಯತ್ಯಾಸವಿಲ್ಲ. 'ಯತಸ್ತದೀಯಾಃ' ಎಂಬ ನಾರದಭಕ್ತಿಸೂತ್ರದಲ್ಲಿನ ಸೂತ್ರವೂ ಇದನ್ನೇ ಹೇಳುತ್ತದೆ. ಅವನವರೇ ಆದುದರಿಂದ ಅವರಿಬ್ಬರಲ್ಲಿ ವ್ಯತ್ಯಾಸವಿಲ್ಲ.

ಮಾಡಬೇಕೆಂಬ ಆಕಾಂಕ್ಷೆಯಿಂದ ಇಲ್ಲಿ ಉಪಸ್ಥಿತನಾಗಿದ್ದೇನೆ. ನಿನಗೆ ನಮಸ್ಕಾರವಿರಲಿ! ನಿನಗೆ ನಮಸ್ಕಾರವಿರಲಿ!”

ಇತಿ ಶ್ರೀಮಹಾಭಾರತೇ ಶಾಂತಿಪರ್ವಣಿ ಮೋಕ್ಷಧರ್ಮಪರ್ವಣಿ ...

ಇದು ಶ್ರೀಮಹಾಭಾರತದಲ್ಲಿ ...

೩೩೮ನೆಯ ಅಧ್ಯಾಯವು ಮುಗಿಯಿತು.

೩೩೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶ್ವೇತದ್ವೀಪದಲ್ಲಿ ನಾರದರಿಗೆ ಭಗವಂತನ ದರ್ಶನ: ಭಗವಂತನಿಂದ ವಾಸುದೇವ-ಸಂಕರ್ಷಣಾದಿ ವ್ಯೂಹರೂಪಗಳ ಪರಿಚಯ : ಭವಿಷ್ಯದಲ್ಲಿ ಆಗುವ ಅವತಾರಗಳ ಸೂಚನೆ: ಕಥಾಶ್ರವಣದ ಮಹಿಮೆ

ಮಹಾರಾಜ! ಭೀಷ್ಮನು ಹೇಳುತ್ತಾನೆ :

ಏವಂ ಸ್ತುತಃ ಸ ಭಗವಾನ್ಗುಹ್ಯೈಸ್ತಥ್ಯೈಶ್ಚ ನಾಮಭಿಃ ।
ತಂ ಮುನಿಂ ದರ್ಶಯಾಮಾಸ ನಾರದಂ ವಿಶ್ವರೂಪಧೃಕ್ ॥೧॥

“ಯುಧಿಷ್ಠಿರ! ಹೀಗೆ ನಾರದರು ಗಹನವಾದ ಮತ್ತು ಯಥಾರ್ಥವಾದ ದಿವ್ಯನಾಮಗಳಿಂದ ಭಗವಂತನನ್ನು ಸ್ತುತಿಸಿದನಂತರ ಭಗವಂತನು ವಿಶ್ವರೂಪವನ್ನು ಧರಿಸಿ ನಾರದರಿಗೆ ದರ್ಶನವನ್ನಿತ್ತನು.

ಕಿಂಚಿಚ್ಚನ್ದ್ರಾದ್ವಿಶುದ್ಧಾತ್ಮಾ ಕಿಂಚಿಚ್ಚನ್ದ್ರಾದ್ವಿಶೇಷವಾನ್ ।
ಕೃತಾನುವರ್ಣಃ ಕಿಂಚಿಚ್ಚ ಕಿಂಚಿದ್ಧಿಷ್ಣ್ಯಾಕೃತಿಃ ಪ್ರಭುಃ ॥೨॥

ಭಗವಂತನ ಆ ದಿವ್ಯವಿಶ್ವರೂಪವು ಚಂದ್ರನಿಗಿಂತಲೂ ಹೆಚ್ಚು ನಿರ್ಮಲವಾಗಿದ್ದಿತು. ಪೂರ್ಣಚಂದ್ರನಿಗಿಂತಲೂ ಆ ದಿವ್ಯರೂಪವು ಸ್ವಲ್ಪ ವಿಶೇಷವಾಗಿಯೇ ಕಾಣುತ್ತಿದ್ದಿತು. ವಿಶ್ವರೂಪವನ್ನು ಧರಿಸಿದ್ದ ಪರಮಾತ್ಮನ ಸಾವಿರಾರು ಶರೀರಗಳಲ್ಲಿ ಕೆಲವಕ್ಕೆ ಅಗ್ನಿಯ ಬಣ್ಣವೂ ಇದ್ದಿತು. ಕೆಲವಕ್ಕೆ ನಕ್ಷತ್ರದ ಛಾಯೆಯೂ ಇದ್ದಿತು.

ಶುಕಪತ್ರನಿಭಃ ಕಿಂಚಿತ್ಕಿಂಚಿತ್ಸ್ಫಟಿಕಸಂನಿಭಃ ।
ನೀಲಾಞ್ಜನಚಯಪ್ರಖ್ಯೋ ಜಾತರೂಪಪ್ರಭಃ ಕ್ವಚಿತ್ ॥೩॥

ವಿಶ್ವರೂಪವನ್ನು ಧರಿಸಿದ ಪರಮಾತ್ಮನ ಕೆಲವು ಶರೀರಗಳು ಗಿಳಿಯ

ರೆಕ್ಕೆಯಂತೆ ಪ್ರಕಾಶಿಸುತ್ತಿದ್ದುವು. ಕೆಲವು ಸ್ಫಟಿಕಮಣಿಯಂತೆ ಉಜ್ಜ್ವಲವಾದ ಪ್ರಕಾಶದಿಂದ ಕೂಡಿದ್ದುವು. ಕೆಲವು ಕಾಡಿಗೆಯ ರಾಶಿಗೆ ಸಮಾನವಾಗಿ ಕಾಣುತ್ತಿದ್ದುವು. ಕೆಲವು ಸುವರ್ಣದ ಕಾಂತಿಗೆ ಸಮಾನವಾದ ಕಾಂತಿಯಿಂದ ಪ್ರಕಾಶಿಸುತ್ತಿದ್ದುವು.

ಪ್ರವಾಲಾಙ್ಕುಲರವರ್ಣಶ್ಚ ಶ್ವೇತವರ್ಣಸ್ತಥಾ ಕ್ವಚಿತ್ ।
ಕ್ವಚಿತ್ಸುವರ್ಣವರ್ಣಾಭೋ ವೈದೂರ್ಯಸದೃಶಃ ಕ್ವಚಿತ್ ॥೪॥

ಸಾವಿರಾರು ಶರೀರಗಳನ್ನು ಧರಿಸಿದ್ದ ಪರಮಾತ್ಮನ ಕೆಲವು ಶರೀರಗಳು ನೂತನವಾಗಿ ಅಂಕುರಿಸಿದ ಚಿಗುರಿನ ಬಣ್ಣವನ್ನು ಹೊಂದಿದ್ದುವು. ಕೆಲವು ಶ್ವೇತವರ್ಣದಿಂದಲೂ, ಕೆಲವು ಸುವರ್ಣವರ್ಣದಿಂದಲೂ ಪ್ರಕಾಶಿಸುತ್ತಿದ್ದುವು. ಕೆಲವು ವೈದೂರ್ಯಸದೃಶವಾಗಿಯೂ ಕಾಣುತ್ತಿದ್ದುವು.

ನೀಲವೈದೂರ್ಯಸದೃಶ ಇನ್ದ್ರನೀಲನಿಭಃ ಕ್ವಚಿತ್ ।
ಮಯೂರಗ್ರೀವವರ್ಣಾಭೋ ಮುಕ್ತಾಹಾರನಿಭಃ ಕ್ವಚಿತ್ ॥೫॥

ವಿಶ್ವರೂಪನ ಶರೀರಗಳಲ್ಲಿ ಕೆಲವು ನೀಲವೈದೂರ್ಯಸದೃಶವಾಗಿಯೂ, ಕೆಲವು ಇಂದ್ರನೀಲಸದೃಶವಾಗಿಯೂ, ಕೆಲವು ನವಿಲಿನ ಕುತ್ತಿಗೆಯ ಬಣ್ಣವುಳ್ಳವುಗಳಾಗಿಯೂ, ಕೆಲವು ಮುತ್ತಿನ ಮಾಲೆಯಂತೆ ಕಾಂತಿಯುಕ್ತವಾಗಿಯೂ ಇದ್ದುವು.

ಏತಾನ್ಬಹುವಿಧಾನ್ವರ್ಣಾನ್ರೂಪೈರ್ಬಿಭ್ರತ್ಸನಾತನಃ ।
ಸಹಸ್ರನಯನಃ ಶ್ರೀಮಾಞ್ಛತಶೀರ್ಷಃ ಸಹಸ್ರಪಾತ್ ।
ಸಹಸ್ರೋದರಬಾಹುಶ್ಚ ಅವ್ಯಕ್ತ ಇತಿ ಚ ಕ್ವಚಿತ್ ॥೬॥

ಹೀಗೆ ಸನಾತನನಾದ ಶ್ರೀಹರಿಯು ಬಹುವಿಧವಾದ ವರ್ಣಗಳುಳ್ಳ ರೂಪಗಳನ್ನು ಧರಿಸಿದ್ದನು. ಅವನಿಗೆ ಸಾವಿರ ಕಣ್ಣುಗಳೂ, ಸಾವಿರ ತಲೆಗಳೂ, ಸಾವಿರ ಪಾದಗಳೂ, ಸಾವಿರ ಉದರಗಳೂ ಸಾವಿರ ತೋಳುಗಳೂ ಇದ್ದುವು. ಅಪೂರ್ವವಾದ ಕಾಂತಿಯಿಂದ ಸಂಪನ್ನನಾಗಿದ್ದ ಶ್ರೀಹರಿಯ ಕೆಲವು ಆಕೃತಿಗಳು ಅವ್ಯಕ್ತವೂ ಆಗಿದ್ದುವು.

ಓಙ್ಕಾರಮುದ್ಗಿರನ್ವಕ್ತ್ರಾತ್ಸಾವಿತ್ರೀಂ ಚ ತದನ್ವಯಾಮ್ ।

ಶೇಷೇಭ್ಯಶ್ಚೈವ ವಕ್ತ್ರೇಭ್ಯಶ್ಚತುರ್ವೇದಾನ್ಗಿರನ್ಬಹೂನ್ ।
ಆರಣ್ಯಕಂ ಜಗೌ ದೇವೋ ಹರಿರ್ನಾರಾಯಣೋ ವಶೀ ॥೮॥



ಸಮಸ್ತವನ್ನೂ ತನ್ನ ವಶದಲ್ಲಿಟ್ಟುಕೊಂಡಿರುವ ಹರಿಯಾದ ಶ್ರೀಮನ್ನಾರಾಯಣನು ಒಂದು ಮುಖದಿಂದ ಓಂಕಾರವನ್ನೂ, ಪ್ರಣವವನ್ನನುಸರಿಸಿ ಗಾಯತ್ರೀಮಂತ್ರವನ್ನೂ ಪಠಿಸುತ್ತಿದ್ದನು. ಉಳಿದ ಮುಖಗಳಿಂದ ಸಾವಿರಾರು ಶಾಖೆಗಳಿಂದ ಯುಕ್ತವಾದ ನಾಲ್ಕು ವೇದಗಳನ್ನೂ –ವೇದಗಳ ಆರಣ್ಯಕಭಾಗಗಳನ್ನೂ ಪಠಿಸುತ್ತಿದ್ದನು.

ವೇದಿಂ ಕಮಣ್ಡಲುಂ ಶುಭ್ರಾನ್ಮಣೀನುಪಾನಹೌ ಕುಶಾನ್ ।
ಅಜಿನಂ ದಣ್ಡಕಾಷ್ಠಂ ಚ ಜ್ವಲಿತಂ ಚ ಹುತಾಶನಮ್ ।
ಧಾರಯಾಮಾಸ ದೇವೇಶೋ ಹಸ್ತೈರ್ಯಜ್ಞಪತಿಸ್ತದಾ ॥೯॥

ಯಜ್ಞಪತಿಯಾದ, ದೇವೇಶ್ವರನಾದ ಮಹಾವಿಷ್ಣುವು ತನ್ನ ಕೈಗಳಲ್ಲಿ ಯಜ್ಞವೇದಿಯನ್ನೂ, ಕಮಂಡಲುವನ್ನೂ, ಶುಭ್ರವಾದ ಮಣಿರತ್ನಗಳನ್ನೂ, ದರ್ಭೆಗಳನ್ನೂ, ಮೃಗಚರ್ಮವನ್ನೂ, ಕಾಷ್ಠದಂಡವನ್ನೂ, ಪ್ರಜ್ವಲಿಸುತ್ತಿದ್ದ ಯಜ್ಞೇಶ್ವರನನ್ನೂ ಹಿಡಿದಿದ್ದನು. ಮರದ ಹಾವುಗೆಗಳನ್ನು ಧರಿಸಿದ್ದನು.

ತಂ ಪ್ರಸನ್ನಂ ಪ್ರಸನ್ನಾತ್ಮಾ ನಾರದೋ ದ್ವಿಜಸತ್ತಮಃ ।
ವಾಗ್ಯತಃ ಪ್ರಣತೋ ಭೂತ್ವಾ ವವನ್ದೇ ಪರಮೇಶ್ವರಮ್ ॥೧೦॥

ದ್ವಿಜಶ್ರೇಷ್ಠರಾದ, ಪ್ರಸನ್ನಾತ್ಮರಾದ ನಾರದರು ವಿಶ್ವರೂಪವನ್ನು ಧರಿಸಿದ್ದ, ಪ್ರಸನ್ನಭಾವದಿಂದಿದ್ದ ಆ ಶ್ರೀಹರಿಯನ್ನು ಮೌನಭಾವದಿಂದ ತಲೆಬಾಗಿ ನಮಸ್ಕರಿಸಿದರು.

ತಮುವಾಚ ನತಂ ಮೂರ್ಧ್ನಾ ದೇವಾನಾಮಾದಿರವ್ಯಯಃ ॥೧೧॥

ಆದಿದೇವನಾದ ಅವಿನಾಶಿಯಾದ ಶ್ರೀಹರಿಯು ತಲೆಬಾಗಿ ನಮಸ್ಕರಿಸಿದ ನಾರದರಿಗೆ ಹೇಳಿದನು :

ಏಕತಶ್ಚ ದ್ವಿತಶ್ಚೈವ ತ್ರಿತಶ್ಚೈವ ಮಹರ್ಷಯಃ ।
ಇಮಂ ದೇಶಮನುಪ್ರಾಪ್ತಾ ಮಮ ದರ್ಶನಲಾಲಸಾಃ ॥೧೨॥

“ನಾರದ! ಏಕತ-ದ್ವಿತ-ತ್ರಿತರೂ ಮತ್ತು ಇನ್ನೂ ಅನೇಕಮಹರ್ಷಿಗಳೂ ನನ್ನ ದರ್ಶನಾಕಾಂಕ್ಷಿಗಳಾಗಿ ಈ ಶ್ವೇತದ್ವೀಪಕ್ಕೆ ಆಗಮಿಸಿದ್ದರು.

ನ ಚ ಮಾಂ ತೇ ದದೃಶಿರೇ ನ ಚ ದ್ರಕ್ಷ್ಯತಿ ಕಶ್ಚನ ।
ಋತೇ ಹ್ಯೈಕಾನ್ತಿಕಶ್ರೇಷ್ಠಾತ್ತ್ವಂ ಚೈವೈಕಾನ್ತಿಕೋತ್ತಮಃ ॥೧೩॥

ಆದರೆ ಅವರಿಗೆ ನನ್ನ ದರ್ಶನವಾಗಲಿಲ್ಲ. ವಾಸ್ತವವಾಗಿ ಶ್ರೇಷ್ಠರಾದ ನನ್ನ ಅನನ್ಯಭಕ್ತರಿಗೆ ಹೊರತಾಗಿ ಬೇರೆ ಯಾರಿಗೂ ನನ್ನ ದರ್ಶನವಾಗುವುದೂ ಇಲ್ಲ. ನೀನು ಅಂತಹ ಭಕ್ತರಲ್ಲಿ ಶ್ರೇಷ್ಠನಾಗಿರುವೆ. ಆದುದರಿಂದ ನಿನಗೆ ನನ್ನನ್ನು ಸಂದರ್ಶಿಸಲು ಸಾಧ್ಯವಾಯಿತು.

ಮಮೈತಾಸ್ತನವಃ ಶ್ರೇಷ್ಠಾ ಜಾತಾ ಧರ್ಮಗೃಹೇ ದ್ವಿಜ ।
ತಾಸ್ತ್ವಂ ಭಜಸ್ವ ಸತತಂ ಸಾಧಯಸ್ವ ಯಥಾಗತಮ್ ॥೧೪॥

ವಿಪ್ರಶ್ರೇಷ್ಠನೇ! ಧರ್ಮನ ಮನೆಯಲ್ಲಿ ಅವತರಿಸಿರುವ ನರ-ನಾರಾಯಣರೇ ಮೊದಲಾದ ನಾಲ್ವರೂ ನನ್ನ ಶರೀರಗಳೇ ಆಗಿದ್ದಾರೆ (ನನ್ನ ಅವತಾರಗಳೇ ಆಗಿದ್ದಾರೆ). ನೀನು ಸತತವಾಗಿ ಅವರ ಸೇವೆಯನ್ನು ಮಾಡುತ್ತಿರು. ಬಂದ ಹಾಗೆಯೇ ಹಿಂದಿರುಗಿ ಸಾಧಿಸಿಕೊಳ್ಳಬೇಕಾಗಿರುವ ಕಾರ್ಯವನ್ನು ಸಾಧಿಸು.

ವೃಣೀಷ್ವ ಚ ವರಂ ವಿಪ್ರ ಮತ್ತಸ್ತ್ವಂ ಯದಿಹೇಚ್ಛಸಿ ।
ಪ್ರಸನ್ನೋಽಹಂ ತವಾದ್ಯೇಹ ವಿಶ್ವಮೂರ್ತಿರಿಹಾವ್ಯಯಃ ॥೧೫॥

ವಿಶ್ವಮೂರ್ತಿಯಾದ, ಅವಿನಾಶಿಯಾದ ನಾನೀಗ ನಿನಗೆ ಪ್ರಸನ್ನನಾಗಿದ್ದೇನೆ. ನೀನು ನನ್ನಿಂದ ಯಾವ ವರವನ್ನು ಇಚ್ಛಿಸುವೆಯೋ ಅದನ್ನು ಕೇಳು."

ನಾರದರು ಹೇಳುತ್ತಾರೆ :

ಅದ್ಯ ಮೇ ತಪಸೋ ದೇವ ಯಮಸ್ಯ ನಿಯಮಸ್ಯ ಚ ।
ಸದ್ಯಃ ಫಲಮವಾಪ್ತಂ ವೈ ದೃಷ್ಟೋ ಯದ್ಭಗವಾನ್ಮಯಾ ॥೧೬॥

"ದೇವದೇವನೇ! ನಿನ್ನ ದರ್ಶನಮಾತ್ರದಿಂದಲೇ ನಾನು ಮಾಡಿದ ತಪಸ್ಸು, ಯಮ-ನಿಯಮಾದಿಗಳ ಅನುಷ್ಠಾನ –ಇವೆಲ್ಲಕ್ಕೂ ಈಗಲೇ ಫಲವು ಸಿಕ್ಕಿದಂತಾಗಿದೆ.

ವರ ಏಷ ಮಮಾತ್ಯನ್ತಂ ದೃಷ್ಟಸ್ತ್ವಂ ಯತ್ಸನಾತನಃ ।
ಭಗವನ್ವಿಶ್ವದೃಕ್ಸಿಂಹಃ ಸರ್ವಮೂರ್ತಿರ್ಮಹಾನ್ಪ್ರಭುಃ ॥೧೭॥

ಭಗವಂತನೇ! ನೀನು ಸಂಪೂರ್ಣಜಗತ್ತಿಗೂ ಕಣ್ಣಿನ ರೂಪದಲ್ಲಿರುವೆ. ಸಕಲವಿಶ್ವವನ್ನೂ ನೋಡುತ್ತಿರುವೆ. ನೃಸಿಂಹಸ್ವರೂಪನಾಗಿರುವೆ. ಸರ್ವಸ್ವರೂಪನಾಗಿರುವೆ. ಮಹಾಪ್ರಭುವಾಗಿರುವೆ. ಸನಾತನನಾದ ನೀನು ದರ್ಶನವನ್ನಿತ್ತುದೇ ನನಗೊಂದು ಮಹಾವರವಾಗಿದೆ."

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ಹೀಗೆ ಭಗವಂತನು ಬ್ರಹ್ಮಮಾನಸಪುತ್ರರಾದ ನಾರದರಿಗೆ ದರ್ಶನವನ್ನಿತ್ತು ಪುನಃ ಈ ಮಾತುಗಳನ್ನು ಹೇಳಿದನು :

“ನಾರದ! ಬೇಗ ಹೊರಡು. ವಿಳಂಬಮಾಡಬೇಡ.

ಇಮೇ ಹ್ಯನಿನ್ದ್ರಿಯಾಹಾರಾ ಮದ್ಭಕ್ತಾಶ್ಚನ್ದ್ರವರ್ಚಸಃ ।
ಏಕಾಗ್ರಾಶ್ಚಿನ್ತಯೇಯುರ್ಮಾಂ ನೈಷಾಂ ವಿಘ್ನೋ ಭವೇದಿತಿ ॥೧೯॥

“ಮಗು! ಇಲ್ಲಿ ಕಾಣುತ್ತಿರುವ ಶ್ವೇತದ್ವೀಪವಾಸಿಗಳೆಲ್ಲರೂ ಇಂದ್ರಿಯಗಳಿಂದ ರಹಿತರಾಗಿರತಕ್ಕವರು. ನಿರಾಹಾರಿಗಳು. ಚಂದ್ರನ ತೇಜಸ್ಸಿಗೆ ಸಮಾನವಾದ ಕಾಂತಿಯನ್ನು ಹೊಂದಿರುವ ಇವರು ನನ್ನ ಪರಮಭಕ್ತರು. ಇವರೆಲ್ಲರೂ ಏಕಾಗ್ರವಾದ ಬುದ್ಧಿಯಿಂದ ನನ್ನನ್ನೇ ಧ್ಯಾನಮಾಡುತ್ತಿದ್ದಾರೆ. ಯಾವುದೇ ಕಾರಣದಿಂದಲೂ ಇವರ ಧ್ಯಾನಕ್ಕೆ ಅಡ್ಡಿಯುಂಟಾಗಬಾರದು. ಆದುದರಿಂದ ನೀನು ಈಗಲೇ ಇಲ್ಲಿಂದ ಪ್ರಯಾಣಮಾಡು.

ಸಿದ್ಧಾ ಹ್ಯೇತೇ ಮಹಾಭಾಗಾಃ ಪುರಾ ಹ್ಯೇಕಾನ್ತಿನೋಽಭವನ್ ।
ತಮೋರಜೋಭಿರ್ನಿಮುಕ್ತಾ ಮಾಂ ಪ್ರವೇಕ್ಷ್ಯನ್ತ್ಯಸಂಶಯಮ್ ॥೨೦॥

ಹಿಂದೆ ಇವರೆಲ್ಲರೂ ನನ್ನ ಏಕಾಂತಭಕ್ತರಾಗಿದ್ದರು. ತಮೋಗುಣ-ರಜೋಗುಣಗಳಿಂದ ರಹಿತರಾಗಿರುವ ಈ ಮಹಾಭಾಗರು ಸಿದ್ಧಿಯನ್ನು ಪಡೆದಿರುತ್ತಾರೆ. ಇವರು ನಿಸ್ಸಂದೇಹವಾಗಿ ನನ್ನನ್ನು ಪ್ರವೇಶಿಸುತ್ತಾರೆ.

ನ ದೃಶ್ಯಶ್ಚಕ್ಷುಷಾ ಯೋಽಸೌ ನ ಸ್ಪೃಶ್ಯಃ ಸ್ಪರ್ಶನೇ ನ ಚ ।
ನ ಘ್ರೇಯಶ್ಚೈವ ಗನ್ಧೇನ ರಸೇನ ಚ ವಿವರ್ಜಿತಃ ॥೨೧॥

ಸತ್ತ್ವಂ ರಜಸ್ತಮಶ್ಚೈವ ನ ಗುಣಾಸ್ತಂ ಭಜನ್ತಿ ವೈ ।
ಯಶ್ಚ ಸರ್ವಗತಃ ಸಾಕ್ಷೀ ಲೋಕಸ್ಯಾತ್ಮೇತಿ ಕಥ್ಯತೇ ॥೨೨॥

ಭೂತಗ್ರಾಮಶರೀರೇಷು ನಶ್ಯತ್ಸು ನ ವಿನಶ್ಯತಿ ।
ಅಜೋ ನಿತ್ಯಃ ಶಾಶ್ವತಶ್ಚ ನಿರ್ಗುಣೋ ನಿಷ್ಕಲಸ್ತಥಾ ॥೨೩॥

ದ್ವಿರ್ದ್ವಾದಶೇಭ್ಯಸ್ತತ್ತ್ವೇಭ್ಯಃ ಖ್ಯಾತೋ ಯಃ ಪಞ್ಚವಿಂಶಕಃ ।
ಪುರುಷೋ ನಿಷ್ಕ್ರಿಯಶ್ಚೈವ ಜ್ಞಾನದೃಶ್ಯಶ್ಚ ಕಥ್ಯತೇ ॥೨೪॥

ಯಂ ಪ್ರವಿಶ್ಯ ಭವನ್ತೀಹ ಮುಕ್ತಾ ವೈ ದ್ವಿಜಸತ್ತಮಾಃ ।
ಸ ವಾಸುದೇವೋ ವಿಜ್ಞೇಯಃ ಪರಮಾತ್ಮಾ ಸನಾತನಃ ॥೨೫॥

ನಾರದ! ಯಾವನನ್ನು ಕಣ್ಣಿನಿಂದ ನೋಡಲು ಸಾಧ್ಯವಾಗುವುದಿಲ್ಲವೋ, ತ್ವಚೆಯಿಂದ ಮುಟ್ಟಲು ಸಾಧ್ಯವಾಗುವುದಿಲ್ಲವೋ, ಘ್ರಾಣೇಂದ್ರಿಯದಿಂದ ಆಘ್ರಾಣಿಸಲು ಸಾಧ್ಯವಿಲ್ಲವೋ, ಯಾವನು ರಸನೇಂದ್ರಿಯದಿಂದ ಅತೀತನಾಗಿರುವನೋ–ಅವನೇ ವಾಸುದೇವನು. ಸತ್ತ್ವ-ರಜಸ್ತಮೋಗುಣಗಳು ಅವನನ್ನು ಸೇವಿಸಲಾರವು (ಅವನ ಸಮೀಪಕ್ಕೂ ಹೋಗಲಾರವು). ಅವನು ಗುಣಾತೀತನು. ಸರ್ವವ್ಯಾಪಿಯು. ಎಲ್ಲ ಚರಾಚರಪ್ರಾಣಿಗಳಲ್ಲಿಯೂ ಸಾಕ್ಷಿಯಾಗಿದ್ದಾನೆ. ಆದುದರಿಂದಲೇ ಅವನನ್ನು ಲೋಕದ ಆತ್ಮನೆನ್ನುತ್ತಾರೆ. ಪ್ರಾಣಿಸಮುದಾಯದ ಎಲ್ಲ ಶರೀರಗಳಲ್ಲಿಯೂ ಅವನಿದ್ದಾನೆ. ಆದರೆ ಶರೀರಗಳು ನಾಶಹೊಂದಿದರೂ ಅವನು ಮಾತ್ರ ನಾಶಹೊಂದುವುದಿಲ್ಲ. ಅವನು ಹುಟ್ಟಿಲ್ಲದವನೂ, ನಿತ್ಯನೂ, ಶಾಶ್ವತನೂ, ನಿರ್ಗುಣನೂ, ನಿಷ್ಕಲನೂ, ಇಪ್ಪತ್ತುನಾಲ್ಕು ತತ್ತ್ವಗಳಿಗಿಂತಲೂ ಅತೀತನಾದ ಇಪ್ಪತ್ತೈದನೆಯವನೆಂದು ಅವನು ವಿಖ್ಯಾತನೂ ಆಗಿದ್ದಾನೆ. ಆ ಪುರುಷನು ನಿಷ್ಕ್ರಿಯನೆಂದೂ ಜ್ಞಾನನೇತ್ರದಿಂದಲೇ ನೋಡಲ್ಪಡತಕ್ಕವನೆಂದೂ ಹೇಳುತ್ತಾರೆ. ಸನಾತನನಾದ ಯಾವ ಪರಮಾತ್ಮನನ್ನು ಪ್ರವೇಶಿಸಿ ಭಕ್ತರಾದ ದ್ವಿಜಶ್ರೇಷ್ಠರು ಮುಕ್ತರಾಗುವರೋ –ಅವನನ್ನೇ ವಾಸುದೇವನೆಂಬುದಾಗಿ ತಿಳಿಯಬೇಕು.

ಪಶ್ಯ ದೇವಸ್ಯ ಮಾಹಾತ್ಮ್ಯಂ ಮಹಿಮಾನಂ ಚ ನಾರದ ।
ಶುಭಾಶುಭೈಃ ಕರ್ಮಭಿರ್ಯೋ ನ ಲಿಪ್ಯತಿ ಕದಾಚನ ॥೨೬॥

ನಾರದ! ಯಾವಾಗಲೂ ಯಾವುದೇ ಕಾರಣದಿಂದಲೂ ಶುಭಾಶುಭ ಕರ್ಮಫಲಗಳಿಂದ ಲಿಪ್ತನಾಗದಿರುವ ದೇವದೇವನಾದ ಪರಮಾತ್ಮನ ಮಾಹಾತ್ಮ್ಯವನ್ನೂ–ಮಹಿಮೆಯನ್ನೂ ನೋಡು.

ಸತ್ತ್ವಂ ರಜಸ್ತಮಶ್ಚೇತಿ ಗುಣಾನೇತಾನ್ಪ್ರಚಕ್ಷತೇ ।
ಯತ್ತೇ ಸರ್ವಶರೀರೇಷು ತಿಷ್ಠನ್ತಿ ವಿಚರನ್ತಿ ಚ ॥೨೭॥

ಸತ್ತ್ವ, ರಜಸ್ಸು ಮತ್ತು ತಮಸ್ಸು –ಎಂಬ ಈ ಮೂರನ್ನು ಗುಣಗಳೆಂದು ಹೇಳುತ್ತಾರೆ. ಏಕೆಂದರೆ : ಈ ಮೂರೂ ಎಲ್ಲ ಪ್ರಾಣಿಗಳ ಶರೀರಗಳಲ್ಲಿಯೂ ಇದ್ದು ಸಂಚರಿಸುತ್ತಲೂ ಇರುತ್ತವೆ.

ಏತಾನ್ಗುಣಾಂಸ್ತು ಕ್ಷೇತ್ರಜ್ಞೋ ಭುಙ್ಕ್ತೇನೈಭಿಃ ಸ ಭುಜ್ಯತೇ ।
ನಿರ್ಗುಣೋ ಗುಣಭುಕ್ಚೈವ ಗುಣಸ್ರಷ್ಟಾ ಗುಣಾಧಿಕಃ ॥೨೮॥

ಕ್ಷೇತ್ರಜ್ಞನು ಈ ಮೂರು ಗುಣಗಳನ್ನೂ ಉಪಭೋಗಿಸುತ್ತಾನೆ. ಆದರೆ ಅವನು ಈ ಗುಣಗಳಿಂದ ಭೋಜ್ಯನಾಗುವುದಿಲ್ಲ. (ಈ ಗುಣಗಳ ಹಿಡಿತಕ್ಕೆ ಸಿಕ್ಕಿಕೊಳ್ಳುವುದಿಲ್ಲ.) ಏಕೆಂದರೆ : ಅವನು ಸ್ವತಃ ನಿರ್ಗುಣನು. ಗುಣಗಳನ್ನು ಉಪಭೋಗಿಸುವವನು. ಗುಣಗಳನ್ನು ಸೃಷ್ಟಿಸಿರುವವನೂ ಅವನೇ. ಆದುದರಿಂದ ಗುಣಗಳಿಂದ ಅತೀತನಾದವನು ಮತ್ತು ಶ್ರೇಷ್ಠನು.

ಜಗತ್ಪ್ರತಿಷ್ಠಾ ದೇವರ್ಷೇ ಪೃಥಿವ್ಯಪ್ಸು ಪ್ರಲೀಯತೇ ।
ಜ್ಯೋತಿಷ್ಯಾಪಃ ಪ್ರಲೀಯನ್ತೇ ಜ್ಯೋತಿರ್ವಾಯೌ ಪ್ರಲೀಯತೇ ॥೨೯॥

ದೇವರ್ಷಿಯೇ! ಈ ಸಂಪೂರ್ಣಜಗತ್ತೂ ಯಾವುದರ ಮೇಲೆ ಪ್ರತಿಷ್ಠಿತವಾಗಿರುವುದೋ –ಆ ಪೃಥಿವೀತತ್ತ್ವವು ಜಲತತ್ತ್ವದಲ್ಲಿ ಲೀನವಾಗುತ್ತದೆ. ಅನಂತರ ಜಲತತ್ತ್ವವು ತೇಜಸ್ತತ್ತ್ವದಲ್ಲಿ ಲೀನವಾಗುತ್ತದೆ. ತೇಜಸ್ತತ್ತ್ವವು ವಾಯುತತ್ತ್ವದಲ್ಲಿ ಲೀನವಾಗುತ್ತದೆ.

ಖೇ ವಾಯುಃ ಪ್ರಲಯಂ ಯಾತಿ ಮನಸ್ಯಾಕಾಶಮೇವ ಚ ।
ಮನೋ ಹಿ ಪರಮಂ ಭೂತಂ ತದವ್ಯಕ್ತೇ ಪ್ರಲೀಯತೇ ॥೩೦॥

ವಾಯುವು ಆಕಾಶದಲ್ಲಿ ಲೀನವಾಗುತ್ತದೆ. ಆಕಾಶವು ಮನಸ್ಸಿನಲ್ಲಿ ಲೀನವಾಗುತ್ತದೆ. ಮನಸ್ಸೇ ಮಹಾಭೂತವಾಗಿದೆ. ಅಂತಹ ಮನಸ್ಸೂ ಅವ್ಯಕ್ತಪ್ರಕೃತಿಯಲ್ಲಿ ಲೀನವಾಗುತ್ತದೆ.

ಅವ್ಯಕ್ತಂ ಪುರುಷೇ ಬ್ರಹ್ಮನ್ನಿಷ್ಕ್ರಿಯೇ ಸಮ್ಪ್ರಲೀಯತೇ ।
ನಾಸ್ತಿ ತಸ್ಮಾತ್ಪರತರಃ ಪುರುಷಾದ್ವೈ ಸನಾತನಾತ್ ॥೩೧॥

ಅವ್ಯಕ್ತಪ್ರಕೃತಿಯು ನಿಷ್ಕ್ರಿಯನಾದ ಪುರುಷನಲ್ಲಿ ಲೀನವಾಗುತ್ತದೆ. ಸನಾತನನಾದ ಆ ಪುರುಷನಿಗಿಂತಲೂ ಉತ್ಕೃಷ್ಟವಾದುದು ಬೇರೆ ಯಾವುದೂ ಇರುವುದಿಲ್ಲ.

ನಿತ್ಯಂ ಹಿ ನಾಸ್ತಿ ಜಗತಿ ಭೂತಂ ಸ್ಥಾವರಜಙ್ಗಮಮ್ ।
ಋತೇ ತಮೇಕಂ ಪುರುಷಂ ವಾಸುದೇವಂ ಸನಾತನಮ್ ॥೩೨॥

ಈ ಜಗತ್ತಿನಲ್ಲಿ ಶಾಶ್ವತನಾದ, ಪುರುಷೋತ್ತಮನಾದ ವಾಸುದೇವನನ್ನು ಬಿಟ್ಟರೆ ಚರಾಚರಾತ್ಮಕವಾದ ಯಾವುದೇ ವಸ್ತುವೂ ನಿತ್ಯವಾಗಿರುವುದಿಲ್ಲ.

ಸರ್ವಭೂತಾತ್ಮಭೂತೋ ಹಿ ವಾಸುದೇವೋ ಮಹಾಬಲಃ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ॥೩೩॥

ತೇ ಸಮೇತಾ ಮಹಾತ್ಮಾನಃ ಶರೀರಮಿತಿ ಸಂಜ್ಞಿತಮ್ ।
ತದಾ ವಿಶತಿ ಯೋ ಬ್ರಹ್ಮನ್ನದೃಶ್ಯೋ ಲಘುವಿಕ್ರಮಃ ॥೩೪॥

ಮಹಾಬಲನಾದ ವಾಸುದೇವನು ಸರ್ವಪ್ರಾಣಿಗಳಿಗೂ ಆತ್ಮಭೂತನಾಗಿದ್ದಾನೆ. ಪೃಥ್ವೀ, ವಾಯು, ಆಕಾಶ, ಜಲ ಮತ್ತು ತೇಜಸ್ಸು –ಇವುಗಳೇ ಪಂಚಮಹಾಭೂತಗಳು. ಈ ಐದು ಮಹಾಭೂತಗಳೂ ಯುಕ್ತವಾದ ಪ್ರಮಾಣದಲ್ಲಿ ಒಂದೆಡೆಯಲ್ಲಿ ಸೇರಿಕೊಂಡಾಗ ಶರೀರವೆಂಬ ಚಿಹ್ನೆಯನ್ನು ಹೊಂದುತ್ತವೆ. ಹಾಗೆ ಪಂಚಭೂತಾತ್ಮಕವಾದ ಶರೀರವು (ಗರ್ಭದಲ್ಲಿ) ಸಿದ್ಧವಾದೊಡನೆಯೇ ಅದೃಶ್ಯನಾದ, ಶೀಘ್ರಗಾಮಿಯಾದ ಚೇತನನು ಅದರಲ್ಲಿ ಸೇರಿಕೊಳ್ಳುತ್ತಾನೆ.

ಉತ್ಪನ್ನ ಏವ ಭವತಿ ಶರೀರಂ ಚೇಷ್ಟಯನ್ಪ್ರಭುಃ ।
ನ ವಿನಾ ಧಾತುಸಂಘಾತಂ ಶರೀರಂ ಭವತಿ ಕ್ವಚಿತ್ ॥೩೫॥

ಪ್ರಭುವಾದ ಚೇತನನು ಶರೀರದೊಳಗೆ ಪ್ರವೇಶಿಸಿದೊಡನೆಯೇ ಅದನ್ನು ಕ್ರಿಯಾಶೀಲವನ್ನಾಗಿ ಮಾಡುತ್ತಾನೆ. (ಗರ್ಭಸ್ಥಶರೀರದಲ್ಲಿ ಪ್ರಾಣವು

ಸೇರಿಕೊಂಡೊಡನೆಯೇ ಅಂಗಗಳು ಅಳ್ಳಾಡಲು ಪ್ರಾರಂಭವಾಗುತ್ತದೆ.) ಪಂಚಭೂತಗಳ ಸಮಾವೇಶವಿಲ್ಲದೇ ಎಲ್ಲಿಯೂ ಶರೀರದ ರಚನೆ ಯಾಗುವುದಿಲ್ಲ.

ನ ಚ ಜೀವಂ ವಿನಾ ಬ್ರಹ್ಮನ್ವಾಯವಶ್ಚೇಷ್ಟಯನ್ತ್ಯುತ ।
ಸ ಜೀವಃ ಪರಿಸಂಖ್ಯಾತಃ ಶೇಷಃ ಸಂಕರ್ಷಣಃ ಪ್ರಭುಃ ॥೩೬॥

ಪ್ರಾಣಿಯ ಶರೀರವ್ಯಾಪಾರಕ್ಕೆ ಪಂಚಭೂತಗಳಲ್ಲೊಂದಾದ ವಾಯುವೇ ಮುಖ್ಯಕಾರಣವಾಗಿದ್ದರೂ–ಜೀವವು ಶರೀರದೊಳಗೆ ಪ್ರವೇಶಿಸದಿದ್ದರೆ ವಾಯುಗಳು ಶರೀರವನ್ನು ಚೇಷ್ಠೆಯಲ್ಲಿ ತೊಡಗಿಸುವುದಿಲ್ಲ. ಶರೀರಕ್ಕೆ ಪ್ರಭುವಾದ ಆ ಜೀವನನ್ನೇ ಶೇಷನೆಂದೂ ಅಥವಾ ಸಂಕರ್ಷಣನೆಂದೂ ಕರೆಯುತ್ತಾರೆ.

ತಸ್ಮಾತ್ಸನತ್ಕುಮಾರತ್ವಂ ಯೋಽಲಭತ್ಸ್ವೇನ ಕರ್ಮಣಾ ।
ಯಸ್ಮಿಂಶ್ಚ ಸರ್ವಭೂತಾನಿ ಪ್ರಲಯಂ ಯಾನ್ತಿ ಸಂಕ್ಷಯಮ್ ।
ಸ ಮನಃ ಸರ್ವಭೂತಾನಾಂ ಪ್ರದ್ಯುಮ್ನಃ ಪರಿಪಠ್ಯತೇ ॥೩೭॥

ಸಂಕರ್ಷಣನಾಮಕನಾದ ಆ ಜೀವನೇ ತನ್ನ ಧ್ಯಾನೋಪಾಸನಾದಿ ಕರ್ಮಗಳಿಂದ ಸನತ್ಕುಮಾರ ಎಂಬ ಪದವಿಯನ್ನು ಪಡೆಯುತ್ತಾನೆ. ಯಾವುದರಲ್ಲಿ ಸಕಲಪ್ರಾಣಿಗಳೂ ಲಯಹೊಂದುವುವೋ ಮತ್ತು ವಿನಾಶ ಹೊಂದುವುವೋ –ಅಂತಹ ಸರ್ವಪ್ರಾಣಿಗಳಲ್ಲಿಯೂ ಇರುವ (ಪ್ರಭುವಾದ ಸಂಕರ್ಷಣನಿಂದಲೇ ಹುಟ್ಟಿದ) ಆ ಮನಸ್ಸು ಪ್ರದ್ಯುಮ್ನ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ.

ತಸ್ಮಾತ್ಪ್ರಸೂತೋ ಯಃ ಕರ್ತಾ ಕಾರಣಂ ಕಾರ್ಯಮೇವ ಚ ॥೩೮॥
ತಸ್ಮಾತ್ಸರ್ವಂ ಸಮ್ಭವತಿ ಜಗತ್ಸ್ಥಾವರಜಙ್ಗಮಮ್ ।
ಸೋಽನಿರುದ್ಧಃ ಸ ಈಶಾನೋ ವ್ಯಕ್ತಿಃ ಸ ಸರ್ವಕರ್ಮಸು ॥೩೯॥

ಮುಂದೆ ಆ ಪ್ರದ್ಯುಮ್ನನಿಂದ (ಮನಸ್ಸಿನಿಂದ) ಯಾವುದು ಹುಟ್ಟಿರುವುದೋ –ಆ ಅಹಂಕಾರವೇ ಕರ್ತೃವೂ, ಕಾರಣವೂ ಮತ್ತು ಕಾರ್ಯವೂ ಆಗಿದೆ. ಆ ಅಹಂಕಾರದಿಂದಲೇ ಸಮಸ್ತಸ್ಥಾವರ–ಜಂಗಮ

ಪ್ರಾಣಿಗಳೂ ಹುಟ್ಟಿವೆ. ಕರ್ತೃತ್ವದ ಅಭಿಮಾನರೂಪದಲ್ಲಿ ಸರ್ವಕರ್ಮಗಳಲ್ಲಿಯೂ ವ್ಯಕ್ತನಾಗುವವನೇ ಅಹಂಕಾರರೂಪನಾದ ಅನಿರುದ್ಧನು ಅಥವಾ ಈಶಾನನು.

ಯೋ ವಾಸುದೇವೋ ಭಗವಾನ್ಕ್ಷೇತ್ರಜ್ಞೋ ನಿರ್ಗುಣಾತ್ಮಕಃ ।
ಜ್ಞೇಯಃ ಸ ಏವ ರಾಜೇನ್ದ್ರ ಜೀವಃ ಸಂಕರ್ಷಣಃ ಪ್ರಭುಃ ॥೪೦॥

ಸಂಕರ್ಷಣಾಚ್ಚ ಪ್ರದ್ಯುಮ್ನೋ ಮನೋಭೂತಃ ಸ ಉಚ್ಯತೇ ।
ಪ್ರದ್ಯುಮ್ನಾದ್ಯೋಽನಿರುದ್ಧಸ್ತು ಸೋಽಹಂಕಾರಃ ಸ ಈಶ್ವರಃ ॥೪೧॥

ಯಾವ ಭಗವಾನ್ ವಾಸುದೇವನು ಕ್ಷೇತ್ರಜ್ಞನೋ, ನಿರ್ಗುಣಾತ್ಮನೋ ಮತ್ತು ಜ್ಞೇಯನೋ –ಅವನೇ ಪ್ರಭಾವಶಾಲಿಯಾದ, ಸಂಕರ್ಷಣರೂಪನಾದ ಜೀವಾತ್ಮನೂ ಆಗಿದ್ದಾನೆ. ಸಂಕರ್ಷಣನಿಂದ ಪ್ರದ್ಯುಮ್ನನು ಹುಟ್ಟಿದನು. ಅವನನ್ನು ಮನೋಮಯನೆಂದು ಹೇಳುತ್ತಾರೆ. ಪ್ರದ್ಯುಮ್ನನಿಂದ ಪ್ರಕಟಗೊಂಡ ಅನಿರುದ್ಧನು ಅಹಂಕಾರಸ್ವರೂಪನು ; ಅವನೇ ಈಶ್ವರನು.

ಮತ್ತಃ ಸರ್ವಂ ಸಮ್ಭವತಿ ಜಗತ್ಸ್ಥಾವರಜಙ್ಗಮಮ್ ।
ಅಕ್ಷರಂ ಚ ಕ್ಷರಂ ಚೈವ ಸಚ್ಚಾಸಚ್ಚೈವ ನಾರದ ॥೪೨॥

ನಾರದ! ಸಕಲಸ್ಥಾವರ-ಜಂಗಮಪ್ರಾಣಿಗಳೂ, ಜೀವ-ಪ್ರಕೃತಿ, ಸತ್-ಅಸತ್ –ಈ ಎಲ್ಲವೂ ನನ್ನಿಂದಲೇ ಹುಟ್ಟುತ್ತವೆ.

ಮಾಂ ಪ್ರವಿಶ್ಯ ಭವನ್ತೀಹಂ ಮುಕ್ತಾ ಭಕ್ತಾಸ್ತು ಯೇ ಮಮ ।
ಅಹಂ ಹಿ ಪುರುಷೋ ಜ್ಞೇಯೋ ನಿಷ್ಕ್ರಿಯಃ ಪಞ್ಚವಿಂಶಕಃ ॥೪೩॥

ಯಾರು ನನಗೆ ಭಕ್ತರೋ ಅವರೆಲ್ಲರೂ ನನ್ನನ್ನು ಪ್ರವೇಶಿಸಿ ಮುಕ್ತರಾಗುತ್ತಾರೆ. ನನ್ನನ್ನು ನಿಷ್ಕ್ರಿಯನಾದ (ಯಾವ ಕಾರ್ಯವನ್ನೂ ಮಾಡದ) ಇಪ್ಪತ್ತೈದನೆಯವನಾದ ಪುರುಷನೆಂದು ತಿಳಿಯಬೇಕು.

ನಿರ್ಗುಣೋ ನಿಷ್ಕಲಶ್ಚೈವ ನಿರ್ದ್ವನ್ದ್ವೋ ನಿಷ್ಪರಿಗ್ರಹಃ ।
ಏತತ್ತ್ವಯಾ ನ ವಿಜ್ಞೇಯಂ ರೂಪವಾನಿತಿ ದೃಶ್ಯತೇ ।
ಇಚ್ಛನ್ಮುಹೂರ್ತಾನ್ನಶ್ಯೇಯಮೀಶೋಽಹಂ ಜಗತೋ ಗುರುಃ ॥೪೪॥

ನಾನು ನಿರ್ಗುಣನೂ, ನಿಷ್ಕಲನೂ, ದ್ವಂದ್ವಗಳಿಂದ ರಹಿತನೂ, ಅಪರಿಗ್ರಹನೂ ಆಗಿದ್ದೇನೆ. ಈಗ ನಾನು ನಿನಗೆ ವಿಶ್ವರೂಪವನ್ನು ಧರಿಸಿ ಕಾಣಿಸಿಕೊಳ್ಳುತ್ತಿರುವುದರಿಂದ ನೀನು ನನ್ನನ್ನು ರೂಪವಂತನೆಂದು ಭಾವಿಸಬಾರದು. ನಾನು ಇಚ್ಛಿಸಿದ್ದೇ ಆದರೆ ಕ್ಷಣಮಾತ್ರದಲ್ಲಿ ಅದೃಶ್ಯನಾಗುತ್ತೇನೆ. ನಾನು ಸಕಲಜಗತ್ತುಗಳಿಗೂ ಈಶ್ವರನೂ ಗುರುವೂ ಆಗಿದ್ದೇನೆ.

ಮಾಯಾ ಹ್ಯೇಷಾ ಮಯಾ ಸೃಷ್ಟಾ ಯನ್ಮಾಂ ಪಶ್ಯಸಿ ನಾರದ ।
ಸರ್ವಭೂತಗುಣೈರ್ಯುಕ್ತಂ ನೈವಂ ತ್ವಂ ಜ್ಞಾತುಮರ್ಹಸಿ ॥೪೫॥

ನೀನು ನನ್ನ ಯಾವ ರೂಪವನ್ನು ನೋಡುತ್ತಿರುವೆಯೋ–ಆ ರೂಪವು ನನ್ನ ಮಾಯಾಕಲ್ಪಿತವಾದುದು. ಆ ಮಾಯೆಯನ್ನು ನಾನೇ ಸೃಷ್ಟಿಸಿದ್ದೇನೆ. ನೀನು ನನ್ನನ್ನು ಸಕಲಪ್ರಾಣಿಗಳ ಗುಣಗಳಿಂದಲೂ ಯುಕ್ತನಾಗಿರುವವನೆಂದು ತಿಳಿಯಬೇಡ.

ಮಯೈತತ್ಕಥಿತಂ ಸಮ್ಯಕ್ತವ ಮೂರ್ತಿಚತುಷ್ಟಯಮ್ ॥೪೬॥
ಅಹಂ ಹಿ ಜೀವಸಂಜ್ಞಾತೋ ಮಯಿ ಜೀವಃ ಸಮಾಹಿತಃ ।
ನೈವಂ ತೇ ಬುದ್ಧಿರತ್ರಾಭೂದ್ದೃಷ್ಟೋ ಜೀವೋ ಮಯೇತಿ ವೈ ॥

ನಾರದ! ನಾನು ನಿನಗೆ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ ನಾಲ್ಕು ಮೂರ್ತಿಗಳ ವಿಷಯವನ್ನು ಚೆನ್ನಾಗಿ ಹೇಳಿದ್ದೇನೆ. ನಾನು 'ಜೀವ' ಎಂಬ ಹೆಸರಿನಿಂದಲೂ ಪ್ರಸಿದ್ಧನಾಗಿದ್ದೇನೆ. ನನ್ನಲ್ಲಿಯೇ ಜೀವವು ನೆಲೆಸಿದೆ. ಆದರೆ ಜೀವವನ್ನು ನೋಡಿಬಿಟ್ಟೆನೆಂಬ ಬುದ್ಧಿಯು ಮಾತ್ರ ನಿನಗೆ ಉಂಟಾಗದಿರಲಿ.

ಅಹಂ ಸರ್ವತ್ರಗೋ ಬ್ರಹ್ಮನ್ಭೂತಗ್ರಾಮಾನ್ತರಾತ್ಮಕಃ ।
ಭೂತಗ್ರಾಮಶರೀರೇಷು ನಶ್ಯತ್ಸು ನ ನಶಾಮ್ಯಹಮ್ ॥೪೭॥

ಬ್ರಾಹ್ಮಣಶ್ರೇಷ್ಠನೇ! ನಾನು ಸರ್ವವ್ಯಾಪಿಯೂ, ಸಕಲಪ್ರಾಣಿಸಮುದಾಯದ ಅಂತರಾತ್ಮನೂ ಆಗಿದ್ದೇನೆ. ಆದರೆ ಸಕಲಪ್ರಾಣಿಸಮುದಾಯದ ಶರೀರಗಳು ನಷ್ಟವಾಗಿ ಹೋದರೂ ನಾನು ನಾಶವಾಗುವುದಿಲ್ಲ.

ಸಿದ್ಧಾ ಹಿ ತೇ ಮಹಾಭಾಗಾ ನರಾ ಹ್ಯೇಕಾನ್ತಿನೋಽಭವನ್ ।
ತಮೋರಜೋಭ್ಯಾಂ ನಿರ್ಮುಕ್ತಾಃ ಪ್ರವೇಕ್ಷ್ಯನ್ತಿ ಚ
ಮಾಂ ಮುನೇ ॥೪೯॥

ಮಹಾಭಾಗ್ಯಶಾಲಿಗಳಾದ ಈ ಶ್ವೇತದ್ವೀಪನಿವಾಸಿಗಳೆಲ್ಲರೂ ಸಿದ್ಧರೇ ಆಗಿದ್ದಾರೆ. ಇವರೆಲ್ಲರೂ ಹಿಂದೆ ನನ್ನ ಅನನ್ಯಭಕ್ತರಾಗಿದ್ದರು. ತಮೋಗುಣ ದಿಂದಲೂ–ರಜೋಗುಣದಿಂದಲೂ ಮುಕ್ತರಾಗಿರುವ ಇವರೆಲ್ಲರೂ ನನ್ನನ್ನೇ ಪ್ರವೇಶಿಸುತ್ತಾರೆ.

ಹಿರಣ್ಯಗರ್ಭೋ ಲೋಕಾದಿಶ್ಚತುರ್ವಕ್ತ್ರೋಽನಿರುಕ್ತಗಃ ।
ಬ್ರಹ್ಮಾ ಸನಾತನೋ ದೇವೋ ಮಮ ಬಹ್ವರ್ಥಚಿನ್ತಕಃ ॥೫೦॥

ಯಾವನು ಸಕಲಜಗತ್ತಿಗೂ ಆದಿಯಾಗಿರುವನೋ, ನಾಲ್ಕು ಮುಖ ಗಳುಳ್ಳವನೋ, ಅನಿರ್ವಚನೀಯಸ್ವರೂಪನೋ –ಅವನೇ ಸನಾತನನಾದ ಹಿರಣ್ಯಗರ್ಭನು. ಸನಾತನನಾದ ಆ ಬ್ರಹ್ಮದೇವನು ನನ್ನ ಅನೇಕಕಾರ್ಯ ಗಳನ್ನು ಚಿಂತಿಸುತ್ತಿರುತ್ತಾನೆ.

ಲಲಾಟಾಚ್ಚೈವ ಮೇ ರುದ್ರೋ ದೇವಃ ಕ್ರೋಧಾದ್ವಿನಿಃಸೃತಃ ।
ಪಶ್ಯೈಕಾದಶ ಮೇ ರುದ್ರಾನ್ದಕ್ಷಿಣಂ ಪಾರ್ಶ್ವಮಾಸ್ಥಿತಾನ್ ॥೫೧॥

ನನ್ನ ಕ್ರೋಧದಿಂದ ರೂಪುಗೊಂಡ ರುದ್ರನು ನನ್ನ ಹಣೆಯಿಂದ ಪ್ರಾದುರ್ಭವಿಸಿದನು. ನನ್ನ ಬಲಭಾಗದ ಪಾರ್ಶ್ವದಲ್ಲಿ ಉಪಸ್ಥಿತರಾಗಿರುವ ಹನ್ನೊಂದು ಮಂದಿ ರುದ್ರರನ್ನು ನೋಡು.

ದ್ವಾದಶೈವ ತಥಾದಿತ್ಯಾನ್ವಾಮಪಾರ್ಶ್ವೇ ಸಮಾಸ್ಥಿತಾನ್ ।
ಅಗ್ರತಶ್ಚೈವ ಮೇ ಪಶ್ಯ ವಸೂನಷ್ಟೌ ಸುರೋತ್ತಮಾನ್ ॥೫೨॥

ಹಾಗೆಯೇ ನನ್ನ ಎಡಭಾಗದ ಪಾರ್ಶ್ವದಲ್ಲಿ ಉಪಸ್ಥಿತರಾಗಿರುವ ಹನ್ನೆರಡು ಮಂದಿ ಆದಿತ್ಯರನ್ನು ನೋಡು. ಸುರೋತ್ತಮರಾದ ಎಂಟು ಮಂದಿ ವಸುಗಳು ನನ್ನ ಮುಂಭಾಗದಲ್ಲಿರುವುದನ್ನು ನೋಡು.

ನಾಸತ್ಯಂ ಚೈವ ದಸ್ರಂ ಚ ಭಿಷಜೌ ಪಶ್ಯ ಪೃಷ್ಠತಃ ।
ಸರ್ವಾನ್ಪ್ರಜಾಪತೀನ್ಪಶ್ಯ ಪಶ್ಯ ಸಪ್ತ ಋಷೀಂಸ್ತಥಾ ॥೫೩॥

ವೇದಾನ್ಯಜ್ಞಾಂಶ್ಚ ಶತಶಃ ಪಶ್ಯಾಮೃತಮಥೌಷಧೀಃ ।
ತಪಾಂಸಿ ನಿಯಮಾಂಶ್ಚೈವ ಯಮಾನಪಿ ಪೃಥಗ್ವಿಧಾನ್ ॥೫೪॥

ನಾರದ! ನನ್ನ ಹಿಂಭಾಗದಲ್ಲಿ ನಾಸತ್ಯ ಮತ್ತು ದಸ್ರರೆಂಬ ದೇವ ವೈದ್ಯರಿರುವುದನ್ನು (ಅಶ್ವಿನೀ ದೇವತೆಗಳನ್ನು) ನೋಡು. ಹಾಗೆಯೇ ನನ್ನ ಅವಯವಗಳಲ್ಲಿರುವ ಎಲ್ಲ ಪ್ರಜಾಪತಿಗಳನ್ನೂ, ಸಪ್ತರ್ಷಿಗಳನ್ನೂ, ವೇದ ಗಳನ್ನೂ, ಯಜ್ಞಗಳನ್ನೂ, ಓಷಧಿಗಳನ್ನೂ, ಅಮೃತವನ್ನೂ, ತಪಸ್ಸುಗಳನ್ನೂ, ನಾನಾಪ್ರಕಾರವಾದ ಯಮ-ನಿಯಮಗಳನ್ನೂ (ಇವುಗಳ ಅಧಿ ದೇವತೆಗಳನ್ನೂ) ನೋಡು.

ತಥಾಷ್ಟಗುಣಮೈಶ್ವರ್ಯಮೇಕಸ್ಥಂ ಪಶ್ಯ ಮೂರ್ತಿಮತ್ ।
ಶ್ರಿಯಂ ಲಕ್ಷ್ಮೀಂ ಚ ಕೀರ್ತಿಂ ಚ ಪೃಥಿವೀಂ ಚ ಕಕುದ್ಮಿನೀಮ್ ॥

ವೇದಾನಾಂ ಮಾತರಂ ಪಶ್ಯ ಮತ್ಸ್ಥಾಂ ದೇವೀಂ ಸರಸ್ವತೀಮ್ ।
ಧ್ರುವಂ ಚ ಜ್ಯೋತಿಷಾಂ ಶ್ರೇಷ್ಠಂ ಪಶ್ಯ ನಾರದ ಖೇಚರಮ್ ॥೫೬॥

ನಾರದ! ಅಣಿಮಾದಿ ಅಷ್ಟೈಶ್ವರ್ಯಗಳೂ ಮೂರ್ತಿಮತ್ತಾಗಿ ಒಂದೇ ಕಡೆಯಲ್ಲಿ ಸೇರಿ ನನ್ನಲ್ಲಿ ಉಪಸ್ಥಿತವಾಗಿರುವುದನ್ನು ನೋಡು. ಶ್ರೀ, ಲಕ್ಷ್ಮೀ, ಕೀರ್ತಿ, ಪರ್ವತಗಳಿಂದ ಕೂಡಿರುವ ಪೃಥಿವೀ, ವೇದಮಾತೆಯಾದ ಸರಸ್ವತೀದೇವಿ –ಇವರೆಲ್ಲರೂ ನನ್ನ ಶರೀರದಲ್ಲಿ ವಿರಾಜಮಾನರಾಗಿರು ವುದನ್ನು ನೋಡು. ನಕ್ಷತ್ರಗಳಲ್ಲಿ ಶ್ರೇಷ್ಠವಾದ, ಆಕಾಶಚಾರಿಯಾದ ಧ್ರುವ ನಕ್ಷತ್ರವೂ ನನ್ನ ಶರೀರದಲ್ಲಿರುವುದನ್ನು ನೋಡು.

ಅಮ್ಭೋಧರಾನ್ಸಮುದ್ರಾಂಶ್ಚ ಸರಾಂಸಿ ಸರಿತಸ್ತಥಾ ।
ಮೂರ್ತಿಮನ್ತಃ ಪಿತೃಗಣಾಂಶ್ಚತುರಃ ಪಶ್ಯ ಸತ್ತಮ ॥೫೭॥

ಬ್ರಾಹ್ಮಣಶ್ರೇಷ್ಠನೇ! ಮೇಘಗಳೂ, ಸಮುದ್ರಗಳೂ, ಸರೋವರಗಳೂ ಮತ್ತು ನದಿಗಳೂ ಮೂರ್ತಿಮತ್ತಾಗಿ ನನ್ನಲ್ಲಿ ನೆಲೆಸಿರುವುದನ್ನು ನೋಡು. ಅಂತೆಯೇ ನಾಲ್ಕು ವಿಧವಾದ ಪಿತೃವರ್ಗದವರೂ ಮೂರ್ತಿಮಂತರಾಗಿ ನನ್ನಲ್ಲಿ ಉಪಸ್ಥಿತರಾಗಿರುವುದನ್ನು ನೋಡು.

ತ್ರೀಂಶ್ಚೈವೇಮಾನ್ಗುಣಾನ್ಪಶ್ಯ ಮತ್ಸ್ಥಾನ್ಮೂರ್ತಿವಿವರ್ಜಿತಾನ್ ।
ದೇವಕಾರ್ಯಾದಪಿ ಮುನೇ ಪಿತೃಕಾರ್ಯಂ ವಿಶಿಷ್ಯತೇ ॥೫೮॥

ಶರೀರಗಳಿಲ್ಲದಿರುವ ಸತ್ತ್ವ-ರಜಸ್ತಮೋಗುಣಗಳು ಶರೀರಗಳನ್ನು ಧರಿಸಿ ನನ್ನಲ್ಲಿರುವುದನ್ನು ನೋಡು. ಪಿತೃಕಾರ್ಯವು ದೇವಕಾರ್ಯಕ್ಕಿಂತಲೂ ಅತಿಶಯವಾದುದು.

ದೇವಾನಾಂ ಚ ಪಿತೄಣಾಂ ಚ ಪಿತಾ ಹ್ಯೇಕೋಽಹಮಾದಿತಃ ।
ಅಹಂ ಹಯಶಿರಾ ಭೂತ್ವಾ ಸಮುದ್ರೇ ಪಶ್ಚಿಮೋತ್ತರೇ ।
ಪಿಬಾಮಿ ಸುಹುತಂ ಹವ್ಯಂ ಕವ್ಯಂ ಚ ಶ್ರದ್ಧಯಾನ್ವಿತಮ್ ॥೫೯॥

ದೇವತೆಗಳಿಗೂ ಮತ್ತು ಪಿತೃಗಳಿಗೂ ನಾನೊಬ್ಬನೇ ಏಕಮಾತ್ರ ಪಿತೃವಾಗಿದ್ದೇನೆ. ನಾನು ಹಯಗ್ರೀವರೂಪವನ್ನು ಧರಿಸಿ ಸಮುದ್ರದ ವಾಯವ್ಯದಿಕ್ಕಿನಲ್ಲಿ ವಾಸಮಾಡುತ್ತಾ, ಶ್ರದ್ಧಾಪೂರ್ವಕವಾಗಿಯೂ ಮತ್ತು ವಿಧಿಪೂರ್ವಕವಾಗಿಯೂ ಅರ್ಪಿಸಿದ ಹವ್ಯವನ್ನೂ ಮತ್ತು ಕವ್ಯವನ್ನೂ ಪಾನಮಾಡುತ್ತೇನೆ.

ಮಯಾ ಸೃಷ್ಟಃ ಪುರಾ ಬ್ರಹ್ಮಾ ಮಾಂ ಯಜ್ಞಮಯಜತ್ಸ್ವಯಮ್ ।
ತತಸ್ತಸ್ಮಿನ್ವರಾನ್ಪ್ರೀತೋ ದತ್ತವಾನಸ್ಮ್ಯನುತ್ತಮಾನ್ ॥೬೦॥

ಹಿಂದೆ ನನ್ನಿಂದ ಸೃಷ್ಟಿಸಲ್ಪಟ್ಟ ಬ್ರಹ್ಮನು ಯಜ್ಞಪುರುಷನಾದ ನನ್ನ ಪ್ರೀತ್ಯರ್ಥವಾಗಿ ತಾನೇ ಯಜ್ಞಮಾಡಿದನು. ಅದರಿಂದ ಸುಪ್ರೀತನಾದ ನಾನು ಅವನಿಗೆ ಉತ್ತಮವಾದ ವರಗಳನ್ನು ದಯಪಾಲಿಸಿದೆನು.

ಮತ್ಪುತ್ರತ್ವಂ ಚ ಕಲ್ಪಾದೌ ಲೋಕಾಧ್ಯಕ್ಷತ್ವಮೇವ ಚ ।
ಅಹಂಕಾರಕೃತಂ ಚೈವ ನಾಮ ಪರ್ಯಾಯವಾಚಕಮ್ ।
ತ್ವಯಾ ಕೃತಾಂ ಚ ಮರ್ಯಾದಾಂ ನಾತಿಕ್ರಂಸ್ಯತಿ ಕಶ್ಚನ ॥೬೧॥

ವರಪ್ರದಾನಮಾಡಿದನಂತರ ಬ್ರಹ್ಮನೊಡನೆ ನಾನು ಹೀಗೆ ಹೇಳಿದೆನು.: “ಬ್ರಹ್ಮದೇವ! ಪ್ರತಿಯೊಂದು ಕಲ್ಪದ ಆದಿಯಲ್ಲಿಯೂ ನೀನು ನನ್ನ ಪುತ್ರನಾಗಿಯೇ ಜನ್ಮವನ್ನು ತಾಳುವೆ. ಪ್ರತಿಯೊಂದು ಕಲ್ಪದಲ್ಲಿಯೂ ನಿನಗೆ ಲೋಕಾಧ್ಯಕ್ಷಪದವಿಯೇ ಪ್ರಾಪ್ತವಾಗುತ್ತದೆ. ‘ಅಹಂಕಾರಕರ್ತಾ’ ಎಂಬ ಪರ್ಯಾಯನಾಮವೂ ನಿನಗಿರುತ್ತದೆ. ನೀನು ಹಾಕುವ ಕಟ್ಟುಪಾಡುಗಳನ್ನು ಲೋಕದಲ್ಲಿ ಯಾರೂ ಅತಿಕ್ರಮಿಸುವುದಿಲ್ಲ.

ತ್ವಂ ಚೈವ ವರದೋ ಬ್ರಹ್ಮನ್ವರೇಪ್ಸೂನಾಂ ಭವಿಷ್ಯಸಿ ।
ಸುರಾಸುರಗಣಾನಾಂ ಚ ಋಷೀಣಾಂ ಚ ತಪೋಧನ ॥೬೩॥

ಪಿತೃಣಾಂ ಚ ಮಹಾಭಾಗ ಸತತಂ ಸಂಶಿತವ್ರತ ।
ವಿವಿಧಾನಾಂ ಚ ಭೂತಾನಾಂ ತ್ವಮುಪಾಸ್ಯೋ ಭವಿಷ್ಯಸಿ ॥೬೪॥

ಮಹಾಭಾಗನೇ! ಕಠೋರವ್ರತನಿಷ್ಠನೇ! ತಪೋಧನನೇ! ಬ್ರಹ್ಮದೇವ! ತಪಸ್ಸುಗಳ ಮೂಲಕವಾಗಿ ವರವನ್ನು ಬೇಡುವವರಿಗೆ ವರಪ್ರದಾನಮಾಡಲೂ ನೀನು ಸಮರ್ಥನಾಗುವೆ. ದೇವತೆಗಳಿಗೂ, ಅಸುರರಿಗೂ, ಋಷಿಗಳಿಗೂ, ಪಿತೃಗಳಿಗೂ, ನಾನಾಪ್ರಕಾರವಾದ ಪ್ರಾಣಿಗಳಿಗೂ ಸದಾ ಉಪಾಸ್ಯದೇವನಾಗುವೆ.

ಪ್ರಾದುರ್ಭಾವಗತಶ್ಚಾಹಂ ಸುರಕಾರ್ಯೇಷು ನಿತ್ಯದಾ ।
ಅನುಶಾಸ್ಯಸ್ತ್ವಯಾ ಬ್ರಹ್ಮನ್ನಿಯೋಜ್ಯಶ್ಚ ಸುತೋ ಯಥಾ ॥೬೫॥

ದೇವತೆಗಳ ಕಾರ್ಯಸಿದ್ಧಿಗಾಗಿ ನಾನು ನಾನಾವಿಧವಾದ ಅವತಾರಗಳನ್ನು ಎತ್ತುತ್ತಲೇ ಇರುತ್ತೇನೆ. ಅಂತಹ ಸಮಯಗಳಲ್ಲಿ ನಾನು ನಿನ್ನ ಅನುಶಾಸನಕ್ಕೆ ಒಳಪಟ್ಟಿರುತ್ತೇನೆ. ಸೂಕ್ತವಾದ ರೀತಿಯಲ್ಲಿ ನೀನು ನನಗೆ ಆಜ್ಞೆಯನ್ನು ನೀಡುತ್ತಿರಬೇಕು. ತಂದೆಯು ಮಗನನ್ನು ಕಾರ್ಯದಲ್ಲಿ ನಿಯೋಜಿಸುವಂತೆ ನೀನು ನನ್ನನ್ನು ಕಾರ್ಯಗಳಲ್ಲಿ ನಿಯೋಜಿಸುತ್ತಿರಬೇಕು."

ಏತಾಂಶ್ಚಾನ್ಯಾಂಶ್ಚ ರುಚಿರಾನ್ಬ್ರಹ್ಮಣೇಽಮಿತತೇಜಸೇ ।
ಅಹಂ ದತ್ತ್ವಾ ವರಾನ್ಪ್ರೀತೋ ನಿವೃತ್ತಿಪರಮೋಽಭವಮ್ ॥೬೬॥

ನಾರದ! ನಾನು ಮಹಾತೇಜಸ್ವಿಯಾದ ಬ್ರಹ್ಮನಿಗೆ ಇವೇ ಮೊದಲಾದ ಮನೋಜ್ಞವಾದ ಅನೇಕ ವರಗಳನ್ನು ದಯಪಾಲಿಸಿ ಪರಮಪ್ರೀತನಾಗಿ ಪರಮವಿರಕ್ತಿಯನ್ನು ಹೊಂದಿದೆನು.

ನಿರ್ವಾಣಂ ಸರ್ವಧರ್ಮಾಣಾಂ ನಿವೃತ್ತಿಃ ಪರಮಾ ಸ್ಮೃತಾ ।
ತಸ್ಮಾನ್ನಿವೃತ್ತಿಮಾಪನ್ನಶ್ಚರೇತ್ಸರ್ವಾಙ್ಗನಿರ್ವೃತಃ ॥೬೭॥

ಸಮಸ್ತಕರ್ಮಗಳಿಂದಲೂ ವಿರತನಾಗುವುದೇ ಪರಮಶಾಂತಿದಾಯಕ ವೆಂದು ಹೇಳಲ್ಪಟ್ಟಿದೆ. ಆದುದರಿಂದ ಸಾಧಕನು ಸಕಲಕರ್ಮಗಳಿಂದಲೂ

ನಿವೃತ್ತಿಯನ್ನು ಹೊಂದಿ ಸಕಲವಿಧವಾದ ಬಂಧನಗಳಿಂದಲೂ ಮುಕ್ತನಾಗಿ ಪೃಥ್ವಿಯಲ್ಲಿ ಸಂಚರಿಸುತ್ತಿರಬೇಕು.

ವಿದ್ಯಾಸಹಾಯವನ್ತಂ ಚ ಆದಿತ್ಯಸ್ಥಂ ಸಮಾಹಿತಮ್ ।
ಕಪಿಲಂ ಪ್ರಾಹುರಾಚಾರ್ಯಾಃ ಸಾಂಖ್ಯನಿಶ್ಚಿತನಿಶ್ಚಯಾಃ ॥೬೮॥

ಸಾಂಖ್ಯಶಾಸ್ತ್ರದ ಸಿದ್ಧಾಂತವನ್ನು ಪ್ರತಿಪಾದಿಸುವ ಆಚಾರ್ಯರು ನನ್ನನ್ನು –ವಿದ್ಯಾಸಹಾಯದಿಂದ ಯುಕ್ತನಾಗಿರುವ (ಮಹಾವಿದ್ವಾಂಸನಾದ) ಸೂರ್ಯಮಂಡಲದಲ್ಲಿರುವ, ಏಕಾಗ್ರಚಿತ್ತನಾದ ಕಪಿಲನೆಂದು ಹೇಳುತ್ತಾರೆ.

ಹಿರಣ್ಯಗರ್ಭೋ ಭಗವಾನೇಷ ಚ್ಛನ್ದಸಿ ಸುಷ್ಟುತಃ ।
ಸೋಽಹಂ ಯೋಗರತಿರ್ಬ್ರಹ್ಮನ್ಯೋಗಶಾಸ್ತ್ರೇಷು ಶಬ್ದಿತಃ ॥೬೯॥

ವೇದಗಳಲ್ಲಿ ಸಂಸ್ತುತನಾಗಿರುವ ಭಗವಂತನಾದ ಹಿರಣ್ಯಗರ್ಭನೂ ನಾನೇ ಆಗಿದ್ದೇನೆ. ಯೋಗಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ಯೋಗರತಿಯಾದ (ಯೋಗದಲ್ಲಿಯೇ ರಮಿಸುವ ಸ್ವಭಾವವುಳ್ಳ) ಈಶ್ವರನೂ ನಾನೇ ಆಗಿದ್ದೇನೆ.

ಏಷೋಽಹಂ ವ್ಯಕ್ತಿಮಾಗತ್ಯ ತಿಷ್ಠಾಮಿ ದಿವಿ ಶಾಶ್ವತಃ ।
ತತೋ ಯುಗಸಹಸ್ರಾನ್ತೇ ಸಂಹರಿಷ್ಯೇ ಜಗತ್ಪುನಃ ॥೭೦॥

ಶಾಶ್ವತನಾದ ನಾನು ಈ ಸಮಯದಲ್ಲಿ ವ್ಯಕ್ತರೂಪವನ್ನು ಧರಿಸಿ ಆಕಾಶದಲ್ಲಿ ನಿಂತಿದ್ದೇನೆ. ಒಂದು ಸಾವಿರ ಚತುರ್ಯುಗಗಳು ಕಳೆದನಂತರ ಈ ಜಗತ್ತನ್ನು ಪುನಃ ವಿನಾಶಗೊಳಿಸುತ್ತೇನೆ.

ಕೃತ್ವಾತ್ಮಸ್ಥಾನಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಏಕಾಕೀ ವಿದ್ಯಯಾ ಸಾರ್ಧಂ ವಿಹರಿಷ್ಯೇ ಜಗತ್ಪುನಃ ॥೭೧॥

ಆ ಸಮಯದಲ್ಲಿ ನಾನು ಸಕಲಚರಾಚರಪ್ರಾಣಿಗಳನ್ನೂ ನನ್ನಲ್ಲಿಯೇ ಲೀನಗೊಳಿಸಿಕೊಂಡು ಶೂನ್ಯವಾಗಿರುವ ಈ ಜಗತ್ತಿನಲ್ಲಿ ಏಕಾಕಿಯಾಗಿ ವಿದ್ಯೆಯೊಡನೆ (ಮಾಯೆಯೊಡನೆ) ವಿಹರಿಸುತ್ತೇನೆ.

ತತೋ ಭೂಯೋ ಜಗತ್ಸರ್ವಂ ಕರಿಷ್ಯಾಮೀಹ ವಿದ್ಯಯಾ ।
ಅಸ್ಮಿನ್ಮೂರ್ತಿಶ್ಚತುರ್ಥೀ ಯಾ ಸಾಸೃಜಚ್ಛೇಷಮವ್ಯಯಮ್ ॥೭೨॥

ಪುನಃ ನಾನು ನನ್ನ ವಿದ್ಯೆಯಿಂದ (ಮಾಯೆಯಿಂದ) ಚರಾಚರ ಯುಕ್ತವಾದ ಈ ಜಗತ್ತನ್ನು ಸೃಷ್ಟಿಸುತ್ತೇನೆ. ಹೀಗೆ ಸೃಷ್ಟಿಸಿದ ಮೂರ್ತಿಗಳಲ್ಲಿ ನಾಲ್ಕನೆಯವನಾದ ವಾಸುದೇವನು ಅವಿನಾಶಿಯಾದ ಶೇಷನನ್ನು ಸೃಷ್ಟಿಸುತ್ತಾನೆ.

ಸ ಹಿ ಸಂಕರ್ಷಣಃ ಪ್ರೋಕ್ತಃ ಪ್ರದ್ಯುಮ್ನಂ ಸೋಽಪ್ಯಜೀಜನತ್ ।
ಪ್ರದ್ಯುಮ್ನಾದನಿರುದ್ಧೋಽಹಂ ಸರ್ಗೋ ಮಮ ಪುನಃ ಪುನಃ ॥೭೩॥

ಆ ಶೇಷನನ್ನೇ ಸಂಕರ್ಷಣನೆಂದೂ ಕರೆಯುತ್ತಾರೆ. ಸಂಕರ್ಷಣನು ಪ್ರದ್ಯುಮ್ನನನ್ನು ಸೃಷ್ಟಿಸುತ್ತಾನೆ. ಪ್ರದ್ಯುಮ್ನನಿಂದ ಪುನಃ ನಾನೇ ಅನಿರುದ್ಧನೆಂಬ ಹೆಸರನ್ನು ಪಡೆದುಕೊಂಡು ಹುಟ್ಟುತ್ತೇನೆ. ಪುನಃ ಪುನಃ ಹುಟ್ಟುವ ಈ ಸೃಷ್ಟಿಯ ವಿಸ್ತಾರವು ನನ್ನದೇ ಆಗಿದೆ.

ಅನಿರುದ್ಧಾತ್ತಥಾ ಬ್ರಹ್ಮಾ ತನ್ನಾಭಿಕಮಲೋದ್ಭವಃ ।
ಬ್ರಹ್ಮಣಃ ಸರ್ವಭೂತಾನಿ ಚರಾಣಿ ಸ್ಥಾವರಾಣಿ ಚ ॥೭೪॥

ಅನಿರುದ್ಧನ ನಾಭಿಕಮಲದಿಂದ ಬ್ರಹ್ಮನು ಹುಟ್ಟುತ್ತಾನೆ. ಬ್ರಹ್ಮನಿಂದ ಸಕಲಚರಾಚರಪ್ರಾಣಿಗಳೂ ಹುಟ್ಟುತ್ತವೆ.

ಏತಾಂ ಸೃಷ್ಟಿಂ ವಿಜಾನೀಹಿ ಕಲ್ಪಾದಿಷು ಪುನಃ ಪುನಃ ।
ಯಥಾ ಸೂರ್ಯಸ್ಯ ಗಗನಾದುದಯಾಸ್ತಮನೇ ಇಹ ॥೭೫॥

ಕಲ್ಪಾದಿಗಳಲ್ಲಿ ಇಂತಹ ಸೃಷ್ಟಿಗಳು ಪುನಃ ಪುನಃ ಆಗುತ್ತಲೇ ಇರುತ್ತವೆ. ಯಾವ ರೀತಿಯಲ್ಲಿ ಆಕಾಶದಿಂದ ಸೂರ್ಯನ ಉದಯವಾಗುತ್ತದೆಯೋ ಮತ್ತು ಆಕಾಶದಿಂದಲೇ ಅಸ್ತವೂ ಆಗುತ್ತದೆಯೋ–ಈ ಉದಯಾಸ್ತಗಳ ಕ್ರಮವು ಯಾವಾಗಲೂ ನಡೆಯುತ್ತಲೇ ಇರುತ್ತದೆಯೋ–ಅದೇ ರೀತಿಯಲ್ಲಿ ನನ್ನಿಂದಲೇ ಈ ಜಗತ್ತಿನ ಸೃಷ್ಟಿಯೂ ಆಗುತ್ತದೆ ; ನಾಶವೂ ಆಗುತ್ತದೆ. ಹೀಗೆ ಈ ಸೃಷ್ಟಿ-ಸ್ಥಿತಿ-ಲಯಗಳ ಕ್ರಮವು ಅನಂತವಾಗಿ ನಡೆಯುತ್ತಲೇ ಇರುತ್ತದೆ.

ನಷ್ಟೇ ಪುನರ್ಬಲಾತ್ಕಾಲ ಆನಯತ್ಯಮಿತದ್ಯುತಿಃ ।
ತಥಾ ಬಲಾದಹಂ ಪೃಥ್ವೀಂ ಸರ್ವಭೂತಹಿತಾಯ ವೈ ॥೭೬॥

ಸಾಯಂಕಾಲವಾಗುತ್ತಲೇ ಸೂರ್ಯನು ಅದೃಶ್ಯನಾಗಿ ಹೋದರೂ ಮಹಾತೇಜಸ್ವಿಯಾದ ಕಾಲನು ಯಾವ ರೀತಿಯಲ್ಲಿ ಅವನನ್ನು ಬಲಾತ್ಕಾರ ವಾಗಿ ಸೆಳೆದುತರುತ್ತಾನೆಯೋ –ಅದೇ ರೀತಿಯಲ್ಲಿ ನಾನು ಸರ್ವಪ್ರಾಣಿಗಳ ಹಿತಾರ್ಥವಾಗಿ ಸಮುದ್ರದಲ್ಲಿ ಹುದುಗಿಕೊಂಡಿದ್ದ ಪೃಥ್ವಿಯನ್ನು ಪುನಃ ಉದ್ಧರಿಸುತ್ತೇನೆ.

ಸತ್ತ್ವೈರಾಕ್ರಾನ್ತಸರ್ವಾಙ್ಗಾಂ ನಷ್ಟಾಂ ಸಾಗರಮೇಖಲಾಮ್ ।
ಆನಯಿಷ್ಯಾಮಿ ಸ್ವಸ್ಥಾನಂ ವಾರಾಹಂ ರೂಪಮಾಸ್ಥಿತಃ ।
ಹಿರಣ್ಯಾಕ್ಷಂ ವಧಿಷ್ಯಾಮಿ ದೈತೇಯಂ ಬಲಗರ್ವಿತಮ್ ॥೭೭॥

ಸ್ಥಾವರ-ಜಂಗಮಪ್ರಾಣಿಗಳಿಂದ ನಿಬಿಡವಾಗಿ ಸಾಗರವನ್ನೇ ಒಡ್ಯಾಣವ ನ್ನಾಗಿ ಹೊಂದಿರುವ ಭೂಮಿಯು ನಷ್ಟವಾಗಿ ಹೋದಾಗ –ನಾನು ವರಾಹ ರೂಪವನ್ನು ತಾಳಿ ಅದನ್ನು ಅದರ ಸ್ವಸ್ಥಾನಕ್ಕೆ ತಂದು ಸೇರಿಸುತ್ತೇನೆ ಮತ್ತು ಬಲದಿಂದ ಗರ್ವಗೊಂಡ ದೈತ್ಯನಾದ ಹಿರಣ್ಯಾಕ್ಷನನ್ನೂ ಸಂಹರಿಸುತ್ತೇನೆ.

ನಾರಸಿಂಹಂ ವಪುಃ ಕೃತ್ವಾ ಹಿರಣ್ಯಕಶಿಪುಂ ಪುನಃ ।
ಸುರಕಾರ್ಯೇ ಹನಿಷ್ಯಾಮಿ ಯಜ್ಞಘ್ನಂ ದಿತಿನನ್ದನಮ್ ॥೭೮॥

ದೇವತೆಗಳ ಕಾರ್ಯಸಿದ್ಧಿಗಾಗಿ ನರಸಿಂಹರೂಪವನ್ನು ಧರಿಸಿ ಯಜ್ಞ ನಾಶಕನಾದ, ದಿತಿಯ ಮಗನಾದ ಹಿರಣ್ಯಕಶಿಪುವನ್ನು ಸಂಹಾರ ಮಾಡುತ್ತೇನೆ.

ವಿರೋಚನಸ್ಯ ಬಲವಾನ್ಬಲಿಃ ಪುತ್ರೋ ಮಹಾಸುರಃ ।
ಅವಧ್ಯಃ ಸರ್ವಲೋಕಾನಾಂ ಸದೇವಾಸುರರಕ್ಷಸಾಮ್ ॥೭೯॥

ಭವಿಷ್ಯತಿ ಸ ಶಕ್ರಂ ವಾ ಸ್ವರಾಜ್ಯಾಚ್ಚ್ಯಾವಯಿಷ್ಯತಿ ॥೮೦॥

ವಿರೋಚನನಿಗೆ ಮಹಾಬಲಿಷ್ಠನಾದ ಮಗನೊಬ್ಬನು ಹುಟ್ಟುತ್ತಾನೆ. ಆ ಮಹಾಸುರನು ಬಲಿ ಎಂಬ ಹೆಸರಿನಿಂದ ವಿಖ್ಯಾತನಾಗುತ್ತಾನೆ. ಅವನು

ದೇವಾಸುರ-ರಾಕ್ಷಸರಿಂದ ಸಹಿತವಾದ ಸರ್ವಲೋಕಗಳಿಗೂ ಅವಧ್ಯನಾಗುತ್ತಾನೆ. ಮೂರು ಲೋಕಗಳಲ್ಲಿ ಯಾರೂ ಅವನನ್ನು ವಧಿಸಲಾರರು. ಅವನು ಇಂದ್ರನನ್ನು ಸ್ವರ್ಗರಾಜ್ಯದಿಂದ ಭ್ರಷ್ಟನನ್ನಾಗಿ ಮಾಡುತ್ತಾನೆ.

ತ್ರೈಲೋಕ್ಯೇಽಪಹೃತೇ ತೇನ ವಿಮುಖೇ ಚ ಶಚೀಪತೌ ।
ಅದಿತ್ಯಾಂ ದ್ವಾದಶಾದಿತ್ಯಃ ಸಮ್ಭವಿಷ್ಯಾಮಿ ಕಶ್ಯಪಾತ್ ॥೬೧॥

ಮೂರು ಲೋಕಗಳೂ ಬಲಿಯಿಂದ ಜಯಿಸಲ್ಪಟ್ಟು ಶಚೀಪತಿಯಾದ ಇಂದ್ರನು ಯುದ್ಧದಿಂದ ಪರಾಙ್ಮುಖನಾಗುತ್ತಾನೆ. ಆಗ ನಾನು ಅದಿತಿಯಲ್ಲಿ ಕಶ್ಯಪನಿಂದ ದ್ವಾದಶಾದಿತ್ಯರಲ್ಲಿ ಹನ್ನೆರಡನೆಯವನಾದ ವಿಷ್ಣುವಾಗಿ ಹುಟ್ಟುತ್ತೇನೆ.

ತತೋ ರಾಜ್ಯಂ ಪ್ರದಾಸ್ಯಾಮಿ ಶಕ್ರಾಯಾಮಿತತೇಜಸೇ ।
ದೇವತಾಃ ಸ್ಥಾಪಯಿಷ್ಯಾಮಿ ಸ್ವಸ್ವಸ್ಥಾನೇಷು ನಾರದ ॥೬೨॥

ನಾರದ! (ನಾನು ವಾಮನನಾಗಿ ಬಲಿಯ ಬಳಿಗೆ ಹೋಗಿ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಪಡೆದು ತ್ರಿವಿಕ್ರಮನಾಗಿ ಒಂದು ಹೆಜ್ಜೆಯನ್ನು ಭೂಮಿಯಲ್ಲಿಯೂ ಮತ್ತೊಂದು ಹೆಜ್ಜೆಯನ್ನು ಆಕಾಶದಲ್ಲಿಯೂ ಇಟ್ಟು ಮೂರನೆಯ ಹೆಜ್ಜೆಯನ್ನು ಬಲಿಯ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ಮೆಟ್ಟುತ್ತೇನೆ.) ಅನಂತರ ಬಲಿಯಿಂದ ದಾನವಾಗಿ ಪಡೆದ ರಾಜ್ಯವನ್ನು ಮಹಾತೇಜಸ್ವಿಯಾದ ಇಂದ್ರನಿಗೆ ಕೊಡುತ್ತೇನೆ. ಎಲ್ಲ ದೇವತೆಗಳನ್ನೂ ಅವರವರ ಅಧಿಕಾರಸ್ಥಾನಗಳಲ್ಲಿ ಪುನಃ ನೆಲೆಗೊಳಿಸುತ್ತೇನೆ.

ಬಲಿಂ ಚೈವ ಕರಿಷ್ಯಾಮಿ ಪಾತಾಲತಲವಾಸಿನಮ್ ।
ದಾನವಂ ಚ ಬಲಿಂ ಶ್ರೇಷ್ಠಮವಧ್ಯಂ ಸರ್ವದೇವತೈಃ ॥೬೩॥

ಸಕಲದೇವತೆಗಳಿಂದಲೂ ಅವಧ್ಯನಾದ, ದಾನವಶ್ರೇಷ್ಠನಾದ, ಮಹಾಬಲಿಷ್ಠನಾದ ಬಲಿಚಕ್ರವರ್ತಿಯನ್ನು ಪಾತಾಳವಾಸಿಯನ್ನಾಗಿ ಮಾಡುತ್ತೇನೆ.

ತ್ರೇತಾಯುಗೇ ಭವಿಷ್ಯಾಮಿ ರಾಮೋ ಭೃಗುಕುಲೋದ್ವಹಃ ।
ಕ್ಷತ್ರಂ ಚೋತ್ಸಾದಯಿಷ್ಯಾಮಿ ಸಮೃದ್ಧಬಲವಾಹನಮ್ ॥೬೪॥

ತ್ರೇತಾಯುಗದಲ್ಲಿ ಭೃಗುಕುಲಾವತಂಸನಾದ ಪರಶುರಾಮನಾಗಿ ಹುಟ್ಟುತ್ತೇನೆ. ಸೈನಿಕರಿಂದಲೂ ವಾಹನಗಳಿಂದಲೂ ಸಮೃದ್ಧವಾಗಿರುವ ಕ್ಷತ್ರಿಯರ ಕುಲವನ್ನೇ ಧ್ವಂಸಮಾಡುತ್ತೇನೆ.

ಸಂಧ್ಯಾಂಶೇ ಸಮನುಪ್ರಾಪ್ತೇ ತ್ರೇತಾಯಾ ದ್ವಾಪರಸ್ಯ ಚ ।
ಅಹಂ ದಾಶರಥೀ ರಾಮೋ ಭವಿಷ್ಯಾಮಿ ಜಗತ್ಪತಿಃ ॥೮೫॥

ತ್ರೇತಾಯುಗ ಮತ್ತು ದ್ವಾಪರಯುಗಗಳ ಸಂಧಿಕಾಲವು ಒದಗಿದಾಗ (ತ್ರೇತಾಯುಗದ ಕೊನೆಯಲ್ಲಿ) ನಾನು ಜಗತ್ಪತಿಯಾದ ದಾಶರಥಿರಾಮನಾಗಿ ಅವತರಿಸುತ್ತೇನೆ.

ತ್ರಿತೋಪಘಾತಾದ್ವೈರೂಪ್ಯಮೇಕತೋಽಥ ದ್ವಿತಸ್ತಥಾ ।
ಪ್ರಾಪ್ಸ್ಯೇತೇ ವಾನರತ್ವಂ ಹಿ ಪ್ರಜಾಪತಿಸುತಾವೃಷೀ ॥೮೬॥

ಪ್ರಜಾಪತಿಯ ಮಕ್ಕಳಾದ ದ್ವಿತ ಮತ್ತು ಏಕತ ಎಂಬ ಋಷಿಗಳು ತ್ರಿತ ಎಂಬ ಹೆಸರಿನ ಋಷಿಗೆ ದ್ರೋಹವನ್ನೆಸಗುವುದರಿಂದ ವೈರೂಪ್ಯವನ್ನು ಪಡೆದು ವಾನರತ್ವವನ್ನು ಹೊಂದುತ್ತಾರೆ.

ತಯೋರ್ಯೇ ತ್ವನ್ವಯೇ ಜಾತಾ ಭವಿಷ್ಯನ್ತಿ ವನೌಕಸಃ ।
ಮಹಾಬಲಾ ಮಹಾವೀರ್ಯಾಃ ಶಕ್ರತುಲ್ಯಪರಾಕ್ರಮಾಃ ॥೮೭॥

ದ್ವಿತ ಮತ್ತು ಏಕತರ ವಂಶದಲ್ಲಿ ಹುಟ್ಟುವ ವಾನರರೆಲ್ಲರೂ ಮಹಾಬಲರೂ, ಮಹಾವೀರ್ಯರೂ, ಇಂದ್ರಸದೃಶಪರಾಕ್ರಮರೂ ಆಗುತ್ತಾರೆ.

ತೇ ಸಹಾಯಾ ಭವಿಷ್ಯನ್ತಿ ಸುರಕಾರ್ಯೇ ಮಮ ದ್ವಿಜ ।
ತತೋ ರಕ್ಷಃಪತಿಂ ಘೋರಂ ಪುಲಸ್ತ್ಯಕುಲಪಾಂಸನಮ್ ।
ಹರಿಷ್ಯೇ ರಾವಣಂ ರೌದ್ರಂ ಸಗಣಂ ಲೋಕಕಣ್ಟಕಮ್ ॥೮೮॥

ದೇವತೆಗಳ ಹಿತಾರ್ಥವಾಗಿ ಮಾಡುವ ರಾವಣವಧಕಾರ್ಯದಲ್ಲಿ ಕಪಿಶ್ರೇಷ್ಠರೆಲ್ಲರೂ ನನಗೆ ಸಹಾಯಕರಾಗುತ್ತಾರೆ. ಅವರ ಸಹಾಯವನ್ನು ಪಡೆಯುವ ನಾನು ಪುಲಸ್ತ್ಯಕುಲಕಳಂಕನಾದ, ಘೋರನಾದ, ರಾಕ್ಷಸರ ರಾಜನಾದ ಲೋಕಕಂಟಕನಾದ, ಮಹಾಭಯಂಕರನಾದ ರಾವಣನನ್ನು ಪರಿವಾರಸಮೇತವಾಗಿ ಸಂಹರಿಸುತ್ತೇನೆ.

ದ್ವಾಪರಸ್ಯ ಕಲೇಶ್ಚೈವ ಸಂಧೌ ಪಾರ್ಯವಸಾನಿಕೇ ।
ಪ್ರಾದುರ್ಭಾವಃ ಕಂಸಹೇತೋರ್ಮಥುರಾಯಾಂ ಭವಿಷ್ಯತಿ ॥೮೯॥

ದ್ವಾಪರಯುಗ-ಕಲಿಯುಗಗಳ ಸಂಧಿಕಾಲದಲ್ಲಿ (ದ್ವಾಪರಯುಗದ ಕೊನೆಯಲ್ಲಿ) ಕಂಸವಧಾರ್ಥವಾಗಿ ನಾನು ಮಥುರಾಪಟ್ಟಣದಲ್ಲಿ ಜನ್ಮ ತಾಳುತ್ತೇನೆ.

ತತ್ರಾಹಂ ದಾನವಾನ್ಹತ್ವಾ ಸುಬಹೂನ್ದೇವಕಣ್ಟಕಾನ್ ।
ಕುಶಸ್ಥಲೀಂ ಕರಿಷ್ಯಾಮಿ ನಿವೇಶಂ ದ್ವಾರಕಾಂ ಪುರೀಮ್ ॥೯೦॥

ಆಗ ನಾನು ದೇವತೆಗಳಿಗೆ ಉಪದ್ರವವನ್ನು ಕೊಡುವ ಬಹುಸಂಖ್ಯಾತ ರಾದ ದಾನವರನ್ನು ಸಂಹರಿಸಿ 'ಕುಶಸ್ಥಲೀ' ಎಂಬ ಹೆಸರಿನ ಪಟ್ಟಣವನ್ನು ದ್ವಾರಕಾಪುರಿಯನ್ನಾಗಿ ಪರಿವರ್ತಿಸಿ ಅಲ್ಲಿ ವಾಸಮಾಡಿಕೊಂಡಿರುತ್ತೇನೆ.

ವಸಾನಸ್ತತ್ರ ವೈ ಪುರ್ಯಾಮದಿತೇರ್ವಿಪ್ರಿಯಂಕರಮ್ ।
ಹನಿಷ್ಯೇ ನರಕಂ ಭೌಮಂ ಮುರಂ ಪೀಠಂ ಚ ದಾನವಮ್ ॥೯೧॥

ಪ್ರಾಗ್ಜ್ಯೋತಿಷಂ ಪುರಂ ರಮ್ಯಂ ನಾನಾಧನಸಮನ್ವಿತಮ್ ।
ಕುಶಸ್ಥಲೀಂ ನಯಿಷ್ಯಾಮಿ ಹತ್ವಾ ವೈ ದಾನವೋತ್ತಮಮ್ ॥೯೨॥

ದ್ವಾರಕೆಯಲ್ಲಿಯೇ ವಾಸವಾಗಿರುತ್ತಾ ನಾನು, ಅದಿತಿಗೆ ಅಪ್ರಿಯವಾದ ಕಾರ್ಯವನ್ನೇ ಪುನಃ ಪುನಃ ಮಾಡುವ (ಅದಿತಿಯ ಕರ್ಣಕುಂಡಲಗಳನ್ನು ಅಪಹರಿಸುವ) ಭೂದೇವಿಯ ಪುತ್ರನಾದ ನರಕಾಸುರನನ್ನೂ, ಮುರಾಸುರ ನನ್ನೂ, ಪೀಠನೆಂಬ ದಾನವನನ್ನೂ ಸಂಹರಿಸುತ್ತೇನೆ. ನರಕಾಸುರನನ್ನು ಸಂಹರಿಸಿ ಅವನ ಪಟ್ಟಣವಾದ, ನಾನಾಪ್ರಕಾರವಾದ ಧನ-ಕನಕ-ವಸ್ತು-ವೈಡೂರ್ಯಗಳಿಂದ ಸಮೃದ್ಧವಾದ, ಬಹುರಮ್ಯವಾದ ಪ್ರಾಗ್ಜ್ಯೋತಿಷ ಪಟ್ಟಣವನ್ನೇ ಕುಶಸ್ಥಲಿಗೆ (ದ್ವಾರಕೆಗೆ) ತಂದುಬಿಡುತ್ತೇನೆ.

ಮಹೇಶ್ವರಮಹಾಸೇನೌ ಬಾಣಪ್ರಿಯಹಿತೈಷಿಣೌ ।
ಪರಾಜೇಷ್ಯಾಮ್ಯಥೋದ್ಯುಕ್ತೌ ದೇವೌ ಲೋಕನಮಸ್ಕೃತೌ ॥೯೩॥

ಬಾಣಾಸುರನ ಪ್ರಿಯೈಷಿಗಳೂ, ಹಿತೈಷಿಗಳೂ ಮತ್ತು ವಿಶ್ವವಂದ್ಯರೂ ಆದ ಮಹೇಶ್ವರ-ಮಹಾಸೇನರು ಬಾಣನ ಸಲುವಾಗಿ ನನ್ನೊಡನೆ ಯುದ್ಧಕ್ಕೆ ಬರುತ್ತಾರೆ. ಆಗ ಅವರಿಬ್ಬರನ್ನೂ ನಾನು ಪರಾಜಯಗೊಳಿಸುತ್ತೇನೆ.

ತತಃ ಸುತಂ ಬಲೇರ್ಜಿತ್ವಾ ಬಾಣಂ ಬಾಹುಸಹಸ್ರಿಣಮ್ ।
ವಿನಾಶಯಿಷ್ಯಾಮಿ ತತಃ ಸರ್ವಾನ್ಸೌಭನಿವಾಸಿನಃ ॥೯೪॥

ಬಳಿಕ ನಾನು ಬಲಿಯ ಮಗನಾದ, ಸಾವಿರ ತೋಳುಗಳುಳ್ಳ ಬಾಣಾಸುರನನ್ನು ಪರಾಜಯಗೊಳಿಸಿ ಶಾಲ್ವನ ಸೌಭವಿಮಾನದಲ್ಲಿರುವ ಸಕಲರನ್ನೂ ಧ್ವಂಸಮಾಡುತ್ತೇನೆ.

ಯಃ ಕಾಲಯವನಃ ಖ್ಯಾತೋ ಗರ್ಗತೇಜೋಽಭಿಸಂವೃತಃ ।
ಭವಿಷ್ಯತಿ ವಧಸ್ತಸ್ಯ ಮತ್ತ ಏವ ದ್ವಿಜೋತ್ತಮ ॥೯೫॥

ದ್ವಿಜೋತ್ತಮನೇ! ಶಕ್ತಿಶಾಲಿಯಾದ ಕಾಲಯವನನೆಂಬ ಹೆಸರಿನಿಂದ ಪ್ರಸಿದ್ಧನಾಗುವ ಅಸುರನು ಗರ್ಗಾಚಾರ್ಯನ ತೇಜಸ್ಸಿನಿಂದ ಹುಟ್ಟುತ್ತಾನೆ. ಅವನ ಸಂಹಾರವೂ ನನ್ನಿಂದಲೇ ಆಗುತ್ತದೆ.

ಜರಾಸಂಧಶ್ಚ ಬಲವಾನ್ಸರ್ವರಾಜವಿರೋಧನಃ ।
ಭವಿಷ್ಯತ್ಯಸುರಃ ಸ್ಫೀತೋ ಭೂಮಿಪಾಲೋ ಗಿರಿವ್ರಜೇ ॥೯೬॥
ಮಮ ಬುದ್ಧಿಪರಿಸ್ಪನ್ದಾದ್ವಧಸ್ತಸ್ಯ ಭವಿಷ್ಯತಿ ॥೯೭॥

ಗಿರಿವ್ರಜದಲ್ಲಿ ಸಂಪತ್ತಿನಿಂದ ಸಮೃದ್ಧನಾದ, ಮಹಾಬಲಶಾಲಿಯಾದ, ಸಕಲರಾಜರಿಗೂ ವಿರೋಧಿಯಾದ ಜರಾಸಂಧನೆಂಬ ಹೆಸರಿನ ಅಸುರ ರಾಜನಿರುತ್ತಾನೆ. ನನ್ನ ಬುದ್ಧಿಕೌಶಲದಿಂದಲೇ ಅವನ ವಧೆಯೂ ಆಗುತ್ತದೆ.

ಶಿಶುಪಾಲಂ ವಧಿಷ್ಯಾಮಿ ಯಜ್ಞೇ ಧರ್ಮಸುತಸ್ಯ ವೈ ।
ಸಮಾಗತೇಷು ಬಲಿಷು ಪೃಥಿವ್ಯಾಂ ಸರ್ವರಾಜಸು ॥೯೮॥

ಭೂಮಂಡಲದ ಬಲಿಷ್ಠರಾದ ಸಕಲರಾಜರೂ ಧರ್ಮರಾಜನ ಯಜ್ಞಕ್ಕೆ ಬಂದಿರುವಾಗ ಶಿಶುಪಾಲನೆಂಬ ರಾಕ್ಷಸನನ್ನು ಸಂಹರಿಸುವೆನು.

ವಾಸವಿಃ ಸುಸಹಾಯೋ ವೈ ಮಮ ತ್ವೇಕೋ ಭವಿಷ್ಯತಿ ।
ಯುಧಿಷ್ಠಿರಂ ಸ್ಥಾಪಯಿಷ್ಯೇ ಸ್ವರಾಜ್ಯೇ ಭ್ರಾತೃಭಿಃ ಸಹ ॥೯೯॥

ಇಂದ್ರನ ಮಗನಾದ ಅರ್ಜುನನೊಬ್ಬನೇ ನನಗೆ ಒಳ್ಳೆಯ ಸಹಾಯಕನಾಗುತ್ತಾನೆ. ಯುಧಿಷ್ಠಿರನನ್ನು ಅನುಜರ ಸಹಿತವಾಗಿ ಕುರುರಾಜ್ಯದಲ್ಲಿ ಸ್ಥಾಪನೆಮಾಡುವೆನು.

ಏವಂ ಲೋಕಾ ವದಿಷ್ಯನ್ತಿ ನರನಾರಾಯಣಾವೃಷೀ ।
ಉದ್ಯುಕ್ತೌ ದಹತಃ ಕ್ಷತ್ರಂ ಲೋಕಕಾರ್ಯಾರ್ಥಮೀಶ್ವರೌ ॥೧೦೦॥

ಆ ಸಮಯದಲ್ಲಿ ಜನರೆಲ್ಲರೂ–'ಲೋಕಹಿತಾರ್ಥವಾಗಿ ಮಹರ್ಷಿಗಳಾದ ನರ-ನಾರಾಯಣದೇವರು ಏಕತ್ರ ಸೇರಿ ಕ್ಷತ್ರಿಯರನ್ನು ಸಂಹಾರಮಾಡುವ ಕಾರ್ಯದಲ್ಲಿ ತೊಡಗಿರುವರು'–ಎಂದು ಹೇಳುತ್ತಾರೆ.

ಕೃತ್ವಾ ಭಾರಾವತರಣಂ ವಸುಧಾಯಾ ಯಥೇಪ್ಸಿತಮ್ ।
ಸರ್ವಸಾತ್ವತಮುಖ್ಯಾನಾಂ ದ್ವಾರಕಾಯಾಶ್ಚ ಸತ್ತಮ ।
ಕರಿಷ್ಯೇ ಪ್ರಲಯಂ ಘೋರಮಾತ್ಮಜ್ಞಾತಿವಿನಾಶನಮ್ ॥೧೦೧॥

ಭೂದೇವಿಯ ಇಚ್ಛೆಗೆ ಅನುಗುಣವಾಗಿ ಕ್ಷತ್ರಿಯರೆಲ್ಲರನ್ನೂ ಸಂಹಾರಮಾಡುವುದರ ಮೂಲಕ ಭೂಮಿಯ ಭಾರವನ್ನು ಇಳಿಸುವೆನು. ಸರ್ವಯಾದವಮುಖ್ಯರ ಮತ್ತು ದ್ವಾರಕೆಯ ನಾಶವನ್ನೂ ಮಾಡಿ ಸ್ವಬಂಧುವಿನಾಶರೂಪವಾದ ಘೋರಕರ್ಮವನ್ನು ಮಾಡುವೆನು.

ಕರ್ಮಾಣ್ಯಪರಿಮೇಯಾಣಿ ಚತುರ್ಮೂರ್ತಿಧರೋ ಹ್ಯಹಮ್ ।
ಕೃತ್ವಾ ಲೋಕಾನ್ಗಮಿಷ್ಯಾಮಿ ಸ್ವಾನಹಂ ಬ್ರಹ್ಮಸತ್ಕೃತಾನ್ ॥೧೦೨॥

ಶ್ರೀಕೃಷ್ಣ, ಬಲರಾಮ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ನಾಲ್ಕು ರೂಪಗಳನ್ನು ಧರಿಸಿ ಅವತರಿಸುವ ನಾನು ಸತ್ಪುರುಷರ ಹಿತಕ್ಕಾಗಿ ಅಸಂಖ್ಯಾತವಾದ ಕಾರ್ಯಗಳನ್ನು ಮಾಡಿ ಬ್ರಹ್ಮನಿಂದ ಸಮ್ಮಾನಿತವಾದ ನನ್ನ ಲೋಕಗಳಿಗೆ ಹಿಂದಿರುಗುವೆನು.

ಹಂಸಃ ಕೂರ್ಮಶ್ಚ ಮತ್ಸ್ಯಶ್ಚ ಪ್ರಾದುರ್ಭಾವಾ ದ್ವಿಜೋತ್ತಮ ।
ವರಾಹೋ ನರಸಿಂಹಶ್ಚ ವಾಮನೋ ರಾಮ ಏವ ಚ ॥೧೦೩॥

ರಾಮೋ ದಾಶರಥಿಶ್ಚೈವ ಸಾತ್ವತಃ ಕಲ್ಕಿರೇವ ಚ ॥೧೦೪॥

ದ್ವಿಜಶ್ರೇಷ್ಠನೇ! ಹಂಸ, ಕೂರ್ಮ, ಮತ್ಸ್ಯ, ವರಾಹ, ನಾರಸಿಂಹ, ವಾಮನ, ಭಾರ್ಗವರಾಮ, ದಾಶರಥಿರಾಮ, ಯದುವಂಶೀಯನಾದ ಕೃಷ್ಣ, ಕಲ್ಕಿ –ಇವೆಲ್ಲವೂ ನನ್ನ ಅವತಾರಗಳೇ ಆಗಿವೆ.

ಯದಾ ವೇದಶ್ರುತಿರ್ನಷ್ಟಾ ಮಯಾ ಪ್ರತ್ಯಾಹೃತಾ ಪುನಃ ।
ಸವೇದಾಃ ಸಶ್ರುತೀಕಾಶ್ಚ ಕೃತಾಃ ಪೂರ್ವಂ ಕೃತೇ ಯುಗೇ ॥೧೦೫॥

ಯಾವಾಗ ವೇದಶ್ರುತಿಯು ಲುಪ್ತವಾಗಿ ಹೋಗುವುದೋ –ಆಗ ನಾನು ಅವತರಿಸಿ ವೇದಶ್ರುತಿಮಾರ್ಗವನ್ನು ಉದ್ಧರಿಸುತ್ತೇನೆ. ನಾನೇ ಹಿಂದೆ ಸತ್ಯಯುಗದಲ್ಲಿ ವೇದಸಹಿತವಾದ ಶ್ರುತಿಗಳನ್ನು ಪ್ರಕಟಪಡಿಸಿದ್ದೆನು.

ಅತಿಕ್ರಾನ್ತಾಃ ಪುರಾಣೇಷು ಶ್ರುತಾಸ್ತೇ ಯದಿ ವಾ ಕ್ವಚಿತ್ ।
ಅತಿಕ್ರಾನ್ತಾಶ್ಚ ಬಹವಃ ಪ್ರಾದುರ್ಭಾವಾ ಮಮೋತ್ತಮಾಃ ।
ಲೋಕಕಾರ್ಯಾಣಿ ಕೃತ್ವಾ ಚ ಪುನಃ ಸ್ವಾಂ ಪ್ರಕೃತಿಂ ಗತಾಃ ॥೧೦೬॥

ನೀನು ಒಂದು ವೇಳೆ ಪುರಾಣಗಳಲ್ಲಿ ಕಳೆದುಹೋದ ನನ್ನ ಕೆಲವು ಅವತಾರಗಳ ವಿಷಯವಾಗಿ ಕೇಳಿರಬಹುದು. ಆದರೆ ನನ್ನ ಅಸಂಖ್ಯಾತವಾದ ಮತ್ತು ಶ್ರೇಷ್ಠವಾದ ಎಷ್ಟೋ ಅವತಾರಗಳು ಈಗಾಗಲೇ ಮುಗಿದು ಹೋಗಿವೆ. ಆ ಅವತಾರಗಳೆಲ್ಲವೂ ಲೋಕಹಿತವಾದ ಕಾರ್ಯಗಳನ್ನು ಮಾಡಿ ಪುನಃ ಅವುಗಳ ಮೂಲಸ್ವರೂಪವನ್ನೇ (ನನ್ನನ್ನೇ) ಹೊಂದಿವೆ.

ನ ಹ್ಯೇತದ್ಬ್ರಹ್ಮಣಾ ಪ್ರಾಪ್ತಮೀದೃಶಂ ಮಮ ದರ್ಶನಮ್ ।
ಯತ್ತ್ವಯಾ ಪ್ರಾಪ್ತಮದ್ಯೇಹ ಏಕಾನ್ತಗತಬುದ್ಧಿನಾ ॥೧೦೭॥

ಅನನ್ಯಭಕ್ತಿಭಾವದ ಬುದ್ಧಿಯಿಂದ ಕೂಡಿರುವ ನಿನಗೆ ಇಂದು ನನ್ನ ಯಾವ ವಿಶ್ವರೂಪದರ್ಶನವಾಗಿರುವುದೋ–ಆ ದಿವ್ಯದರ್ಶನವು ಬ್ರಹ್ಮನಿಗೂ ಪ್ರಾಪ್ತವಾಗಿಲ್ಲ.

ಏತತ್ತೇ ಸರ್ವಮಾಖ್ಯಾತಂ ಬ್ರಹ್ಮನ್ಭಕ್ತಿಮತೋ ಮಯಾ ।
ಪುರಾಣಂ ಚ ಭವಿಷ್ಯಂ ಚ ಸರಹಸ್ಯಂ ಚ ಸತ್ತಮ ॥೧೦೮॥

ಬ್ರಾಹ್ಮಣಸತ್ತಮನೇ! ನನ್ನಲ್ಲಿ ಅನನ್ಯವಾದ ಭಕ್ತಿಯನ್ನಿಟ್ಟುಕೊಂಡಿರುವ ನಿನಗೆ ನಾನು ಹಿಂದೆ ಕಳೆದುಹೋದ ಮತ್ತು ಮುಂದಾಗುವ ಅವತಾರಗಳ ವಿಷಯಗಳನ್ನು ರಹಸ್ಯಗಳೊಡನೆ ಸಂಪೂರ್ಣವಾಗಿ ಹೇಳಿರುತ್ತೇನೆ."

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ವಿಶ್ವರೂಪವನ್ನು ಧರಿಸಿದ್ದ, ಅವಿನಾಶಿಯಾದ, ದೇವ ದೇವನಾದ ಭಗವಂತನು ನಾರದರೊಡನೆ ಹೀಗೆ ಹೇಳಿ ಅಲ್ಲಿಯೇ ಪುನಃ ಅದೃಶ್ಯನಾದನು. ಮಹಾತೇಜಸ್ವಿಗಳಾದ ನಾರದರು ಕೂಡ ಮನೋ ವಾಂಛಿತವಾದ ಅನುಗ್ರಹವನ್ನು ಭಗವಂತನಿಂದ ಪಡೆದು ನರ-ನಾರಾಯಣರನ್ನು ಸಂದರ್ಶಿಸುವ ಸಲುವಾಗಿ ಬದರಿಕಾಶ್ರಮಕ್ಕೆ ಹೋದರು. ನಾಲ್ಕು ವೇದಗಳಿಂದ ಯುಕ್ತವಾದ, ಸಾಂಖ್ಯಯೋಗಗಳ ಸಿದ್ಧಾಂತದಿಂದ ಕೂಡಿರುವ, ಪಾಂಚರಾತ್ರಾಗಮವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ, ಶ್ರೀಮನ್ನಾರಾಯಣನ ಮುಖಾರವಿಂದದಿಂದಲೇ ಗಾನಮಾಡಲ್ಪಟ್ಟಿರುವ ಈ ಮಹೋಪನಿಷತ್ತನ್ನು ನಾರದರು ಬ್ರಹ್ಮಭವನದಲ್ಲಿ (ಶ್ವೇತದ್ವೀಪದಲ್ಲಿ) ಹೇಗೆ ಭಗವಂತನನ್ನು ನೋಡಿದರೋ ಮತ್ತು ಭಗವಂತನ ವಾಣಿಯನ್ನು ಹೇಗೆ ಕೇಳಿದರೋ–ಹಾಗೆಯೇ ಪ್ರವಚನಮಾಡಿದರು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ.

ಏತದಾಶ್ಚರ್ಯಭೂತಂ ಹಿ ಮಾಹಾತ್ಮ್ಯಂ ತಸ್ಯ ಧೀಮತಃ ।
ಕಿಂ ವೈ ಬ್ರಹ್ಮಾ ನ ಜಾನೀತೇ ಯತಃ ಶುಶ್ರಾವ ನಾರದಾತ್ ॥೧೧೩॥

"ಪಿತಾಮಹನೇ! ಧೀಮಂತನಾದ ಶ್ರೀಮನ್ನಾರಾಯಣನ ಮಾಹಾತ್ಮ್ಯವು ಅತ್ಯಾಶ್ಚರ್ಯಮಯವಾದುದು. ಬ್ರಹ್ಮನು ನಾರದರಿಂದ ನಾರಾಯಣನ ಮಾಹಾತ್ಮ್ಯವನ್ನು ಕೇಳಬೇಕಾದರೆ ಅವನಿಗೆ ಅದಕ್ಕೂ ಮೊದಲು ಈ ವಿಷಯವು ತಿಳಿದೇ ಇರಲಿಲ್ಲವೇ?

ಪಿತಾಮಹೋಽಪಿ ಭಗವಾಂಸ್ತಸ್ಮಾದ್ದೇವಾದನನ್ತರಃ ।
ಕಥಂ ಸ ನ ವಿಜಾನೀಯಾತ್ಪ್ರಭಾವಮಮಿತೌಜಸಃ ॥೧೧೪॥

ಭಗವಂತನಾದ ಬ್ರಹ್ಮನಾದರೋ ಆ ನಾರಾಯಣನಿಂದಲೇ ಪ್ರಾದು

ರ್ಭವಿಸಿದವನು. ನಾರಾಯಣನಿಂದ ಎರಡನೆಯವನೇ ಅವನು. ಅಂತಹವನಿಗೆ ಮಹಾತೇಜಸ್ವಿಯಾದ ನಾರಾಯಣನ ಮಾಹಾತ್ಮ್ಯವು ಯಾವ ಕಾರಣದಿಂದ ತಿಳಿದಿರಲಿಲ್ಲ?”

ಭೀಷ್ಮನು ಹೇಳುತ್ತಾನೆ :

ಮಹಾಕಲ್ಪಸಹಸ್ರಾಣಿ ಮಹಾಕಲ್ಪಶತಾನಿ ಚ ।
ಸಮತೀತಾನಿ ರಾಜೇನ್ದ್ರ ಸರ್ಗಾಶ್ಚ ಪ್ರಲಯಾಶ್ಚ ಹ ॥೧೧೫॥

ಸರ್ಗಸ್ಯಾದೌ ಸ್ಮೃತೋ ಬ್ರಹ್ಮಾ ಪ್ರಜಾಸರ್ಗಕರಃ ಪ್ರಭುಃ ॥೧೧೬॥

“ಯುಧಿಷ್ಠಿರ! ಇದುವರೆಗೆ ನೂರಾರು ಸಾವಿರಾರು ಮಹಾಕಲ್ಪಗಳು ಕಳೆದುಹೋಗಿವೆ. ಅನೇಕ ಸಹಸ್ರಸೃಷ್ಟಿಗಳೂ-ಪ್ರಳಯಗಳೂ ಆಗಿಹೋಗಿವೆ. ಸೃಷ್ಟಿಯ ಆರಂಭದಲ್ಲಿ ಪ್ರಭುವಾದ ಬ್ರಹ್ಮನೇ ಚರಾಚರಪ್ರಾಣಿಗಳಿಗೂ ಸೃಷ್ಟಿಕರ್ತನೆಂದು ಹೇಳಲ್ಪಟ್ಟಿದೆ.

ಜಾನಾತಿ ದೇವಪ್ರವರಂ ಭೂಯಶ್ಚಾತೋಽಧಿಕಂ ನೃಪ ।
ಪರಮಾತ್ಮಾನಮೀಶಾನಮಾತ್ಮನಃ ಪ್ರಭವಂ ತಥಾ ॥೧೧೭॥

ಬ್ರಹ್ಮನು ತನ್ನ ಉತ್ಪತ್ತಿಗೆ ಕಾರಣಭೂತನಾದ, ದೇವಶ್ರೇಷ್ಠನಾದ, ಪರಮೇಶ್ವರನಾದ ಶ್ರೀಮನ್ನಾರಾಯಣನ ಮಾಹಾತ್ಮ್ಯವನ್ನು ಇದಕ್ಕಿಂತಲೂ ಅಧಿಕವಾಗಿಯೇ ತಿಳಿದಿರುತ್ತಾನೆ.

ಯೇ ತ್ವನ್ಯೇ ಬ್ರಹ್ಮಸದನೇ ಸಿದ್ಧಸಂಘಾಃ ಸಮಾಗತಾಃ ।
ತೇಭ್ಯಸ್ತಚ್ಛ್ರಾವಯಾಮಾಸ ಪುರಾಣಂ ವೇದಸಮ್ಮಿತಮ್ ॥೧೧೮॥

ನಾರದರು ಶ್ರೀಮನ್ನಾರಾಯಣನ ಆ ಮಾಹಾತ್ಮ್ಯವನ್ನು ಬ್ರಹ್ಮನಿಗಾಗಿ ಹೇಳಲಿಲ್ಲ. ಆ ಸಮಯದಲ್ಲಿ ಬ್ರಹ್ಮಭವನಕ್ಕೆ ಯಾವ ಸಿದ್ಧರ ಸಮುದಾಯವು ಆಗಮಿಸಿದ್ದಿತೋ-ಅವರ ಸಲುವಾಗಿ ವೇದಸದೃಶವಾದ, ಪುರಾತನವಾದ ಈ ಪಾಂಚರಾತ್ರಾಗಮವನ್ನು ಬ್ರಹ್ಮನು ನಾರದರಿಂದ ಹೇಳಿಸಿದನು.

ತೇಷಾಂ ಸಕಾಶಾತ್ಸೂರ್ಯಸ್ತು ಶ್ರುತ್ವಾ ವೈ ಭಾವಿತಾತ್ಮನಾಮ್ ।
ಆತ್ಮಾನುಗಾಮಿನಾಂ ರಾಜಞ್ಶ್ರಾವಯಾಮಾಸ ವೈ ತತಃ ॥೧೧೯॥

ಷಟ್ಷಷ್ಟಿರ್ಹಿ ಸಹಸ್ರಾಣಿ ಋಷೀಣಾಂ ಭಾವಿತಾತ್ಮನಾಮ್ ।

ಸೂರ್ಯಸ್ಯ ತಪತೋ ಲೋಕಾನ್ನಿರ್ಮಿತಾ ಯೇ ಪುರಃಸರಾಃ |
ತೇಷಾಮಕಥಯತ್ಸೂರ್ಯಃ ಸರ್ವೇಷಾಂ ಭಾವಿತಾತ್ಮನಾಮ್ ||೧೨೦||

ಸೂರ್ಯನು ಶುದ್ಧಾಂತಃಕರಣರಾದ ಆ ಸಿದ್ಧರ ಮೂಲಕವಾಗಿ ಶ್ರೀಮನ್ನಾರಾಯಣನ ಮಾಹಾತ್ಮ್ಯವನ್ನು ಕೇಳಿದನು. ಬಳಿಕ ಸೂರ್ಯನು ತನ್ನನ್ನೇ ಅನುಸರಿಸಿ ಬರುತ್ತಿದ್ದ ಅರವತ್ತಾರು ಸಾವಿರ ಶುದ್ಧಾಂತಃಕರಣರಾದ ಋಷಿಗಳಿಗೆ ನಾರಾಯಣನ ಮಹಿಮೆಯನ್ನು ಹೇಳಿದನು. ಲೋಕಗಳನ್ನು ಬೆಳಗುತ್ತಿದ್ದ ಸೂರ್ಯನ ಮುಂದೆ ಯಾರು ಹೋಗುತ್ತಿದ್ದರೋ ಅಂತಹ ಶುದ್ಧಾಂತಃಕರಣರಾದ ಎಲ್ಲರಿಗೂ ಸೂರ್ಯನು ಈ ದಿವ್ಯವಾದ ಮಾಹಾತ್ಮ್ಯವನ್ನು ಹೇಳಿದನು.

ಸೂರ್ಯಾನುಗಾಮಿಭಿಸ್ತಾತ ಋಷಿಭಿಸ್ತೈರ್ಮಹಾತ್ಮಭಿಃ |
ಮೇರೌ ಸಮಾಗತಾ ದೇವಾಃ ಶ್ರಾವಿತಾಶ್ಚೇದಮುತ್ತಮಮ್ ||೧೨೧||

ಸೂರ್ಯನನ್ನೇ ಅನುಸರಿಸಿ ಹೋಗಿ ನಾರಾಯಣಮಾಹಾತ್ಮ್ಯವನ್ನು ಕೇಳಿದ ಮಹಾತ್ಮರಾದ ಋಷಿಗಳು ಮೇರುಪರ್ವತಕ್ಕೆ ಆಗಮಿಸಿದ್ದ ದೇವತೆಗಳಿಗೆ ಉತ್ತಮೋತ್ತಮವಾದ ಈ ಚರಿತ್ರೆಯನ್ನು ಹೇಳಿದರು.

ದೇವಾನಾಂ ತು ಸಕಾಶಾದ್ವೈ ತತಃ ಶ್ರುತ್ವಾಸಿತೋ ದ್ವಿಜಃ |
ಶ್ರಾವಯಾಮಾಸ ರಾಜೇನ್ದ್ರ ಪಿತೄಣಾಂ ಮುನಿಸತ್ತಮಃ ||೧೨೨||

ಯುಧಿಷ್ಠಿರ! ಮುನಿಶ್ರೇಷ್ಠನಾದ, ದ್ವಿಜಶ್ರೇಷ್ಠನಾದ ಅಸಿತನು ದೇವತೆಗಳಿಂದ ನಾರಾಯಣನ ಮಾಹಾತ್ಮ್ಯವನ್ನು ಕೇಳಿ ಅನಂತರ ಅವನೇ ಇದನ್ನು ಪಿತೃದೇವತೆಗಳ ಸಮ್ಮುಖದಲ್ಲಿ ಹೇಳಿದನು.

ಮಮ ಚಾಪಿ ಪಿತಾ ತಾತ ಕಥಯಾಮಾಸ ಶಾನ್ತನುಃ |
ತತೋ ಮಯಾಪಿ ಶ್ರುತ್ವಾ ಚ ಕೀರ್ತಿತಂ ತವ ಭಾರತ ||೧೨೩||

ಪರಂಪರೆಯಾಗಿ ಈ ಮಾಹಾತ್ಮ್ಯವು ನನ್ನ ತಂದೆಯಾದ ಶಾಂತನುವಿಗೂ ತಿಳಿಯಿತು. ಅದನ್ನು ಅವನು ನನಗೂ ಉಪದೇಶಿಸಿದನು. ನಾನು ತಿಳಿದ ಶ್ರೀಮನ್ನಾರಾಯಣನ ದಿವ್ಯವಾದ ಈ ಮಾಹಾತ್ಮ್ಯವನ್ನು ಈಗ ನಿನಗೂ ಹೇಳಿದ್ದೇನೆ.

ಸುರೈರ್ವಾ ಮುನಿಭಿರ್ವಾಪಿ ಪುರಾಣಂ ಯೈರಿದಂ ಶ್ರುತಮ್ ।
ಸರ್ವೇ ತೇ ಪರಮಾತ್ಮಾನಂ ಪೂಜಯನ್ತೇ ಸಮನ್ತತಃ ॥೧೨೪॥

ದೇವತೆಗಳಲ್ಲಾಗಲೀ, ಮುನಿಗಳಲ್ಲಾಗಲೀ – ಯಾರು ಈ ಪುರಾಣವನ್ನು ಕೇಳಿರುವರೋ – ಅವರೆಲ್ಲರೂ ಭಕ್ತಿಪುರಃಸರವಾಗಿ ಪರಮಾತ್ಮನನ್ನು ಸರ್ವಪ್ರಕಾರದಿಂದಲೂ ಆರಾಧಿಸುತ್ತಾರೆ.

ಇದಮಾಖ್ಯಾನಮಾರ್ಷೇಯಂ ಪಾರಮ್ಪರ್ಯಾಗತಂ ನೃಪ ।
ನಾವಾಸುದೇವಭಕ್ತಾಯ ತ್ವಯಾ ದೇಯಂ ಕಥಂಚನ ॥೧೨೫॥

ನರೇಶ್ವರ! ಹೀಗೆ ಈ ಆರ್ಷೇಯವಾದ (ಋಷಿಸಂಬಂಧವಾದ) ಆಖ್ಯಾನವು ಪರಂಪರಾಗತವಾಗಿ ಬಂದಿದೆ. ವಾಸುದೇವನ ಭಕ್ತನಲ್ಲದವನಿಗೆ ಇದನ್ನು ಯಾವುದೇ ಕಾರಣದಿಂದಲೂ ನೀನು ಉಪದೇಶಿಸಬಾರದು.

ಮತ್ತೋಽನ್ಯಾನಿ ಚ ತೇ ರಾಜನ್ನುಪಾಖ್ಯಾನಶತಾನಿ ವೈ ।
ಯಾನಿ ಶ್ರುತಾನಿ ಸರ್ವಾಣಿ ತೇಷಾಂ ಸಾರೋಽಯಮುದ್ಧೃತಃ ॥

ಯುಧಿಷ್ಠಿರ! ನೀನು ಇದುವರೆಗೆ ನನ್ನಿಂದ ಯಾವ ನೂರಾರು ಉಪಾಖ್ಯಾನಗಳನ್ನು ಕೇಳಿರುವೆಯೋ–ಆ ಎಲ್ಲ ಉಪಾಖ್ಯಾನಗಳಿಂದ ಉದ್ಧೃತವಾದ ಸಾರವೇ ಈ ಪಾಂಚರಾತ್ರೋಪಾಖ್ಯಾನವಾಗಿದೆ.

ಸುರಾಸುರೈರ್ಯಥಾ ರಾಜನ್ನಿರ್ಮಥ್ಯಾಮೃತಮುದ್ಧೃತಮ್ ।
ಏವಮೇತತ್ಪುರಾ ವಿಪ್ರೈಃ ಕಥಾಮೃತಮಿಹೋದ್ಧೃತಮ್ ॥೧೨೬॥

ದೇವತೆಗಳೂ ಮತ್ತು ಅಸುರರೂ ಸಮುದ್ರವನ್ನು ಕಡೆದು ಯಾವ ರೀತಿಯಲ್ಲಿ ಅಮೃತವನ್ನು ತೆಗೆದರೋ –ಅದೇ ರೀತಿಯಲ್ಲಿ ಹಿಂದೆ ಬ್ರಾಹ್ಮಣರೆಲ್ಲರೂ ಸಮಸ್ತಶಾಸ್ತ್ರಗಳನ್ನೂ ಮಥಿಸಿ ಅಮೃತೋಪಮವಾದ ಈ ಕಥೆಯನ್ನು ಪ್ರಕಾಶಪಡಿಸಿದರು.

ಯಶ್ಚೇದಂ ಪಠತೇ ನಿತ್ಯಂ ಯಶ್ಚೇದಂ ಶೃಣುಯಾನ್ನರಃ ।
ಏಕಾನ್ತಭಾವೋಪಗತ ಏಕಾನ್ತೇಷು ಸಮಾಹಿತಃ ॥೧೨೭॥

ಪ್ರಾಪ್ಯ ಶ್ವೇತಂ ಮಹಾದ್ವೀಪಂ ಭೂತ್ವಾ ಚನ್ದ್ರಪ್ರಭೋ ನರಃ ।
ಸ ಸಹಸ್ರಾರ್ಚಿಷಂ ದೇವಂ ಪ್ರವಿಶೇನ್ನಾತ್ರ ಸಂಶಯಃ ॥೧೨೮॥

ಯಾವನು ಶ್ರೀಮನ್ನಾರಾಯಣನ ಈ ಮಾಹಾತ್ಮ್ಯವನ್ನು ನಿತ್ಯವೂ ಪಠಿಸುವನೋ ಮತ್ತು ಯಾವನು ಕೇಳುವನೋ–ಅವನು ಶ್ರೀಮನ್ನಾರಾಯಣನ ವಿಷಯದಲ್ಲಿ ಅನನ್ಯಭಾವವನ್ನು ಹೊಂದಿ, ಏಕಾಗ್ರಚಿತ್ತನಾಗಿ ಏಕಾಂತದಲ್ಲಿ ಪರಮಾತ್ಮನನ್ನೇ ಸತತವಾಗಿ ಧ್ಯಾನಮಾಡುತ್ತಾ, ಮಹಾ ಶ್ವೇತದೀಪಕ್ಕೆ ಹೋಗಿ, ಅಲ್ಲಿ ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದಿ ಸಹಸ್ರಕಿರಣನಾದ ಶ್ರೀಮನ್ನಾರಾಯಣನನ್ನು ಪ್ರವೇಶಿಸುತ್ತಾನೆ. ಈ ವಿಷಯದಲ್ಲಿ ಸಂದೇಹವೇ ಇಲ್ಲ.

ಮುಚ್ಯೇದಾರ್ತಸ್ತಥಾ ರೋಗಾಚ್ಛ್ರುತ್ವೇಮಾಮಾದಿತಃ ಕಥಾಮ್ ।
ಜಿಜ್ಞಾಸುರ್ಲಭತೇ ಕಾಮಾನ್ಭಕ್ತೋ ಭಕ್ತಗತಿಂ ವ್ರಜೇತ್ ॥೧೩೦॥

ಸಂಕಷ್ಟಕ್ಕೊಳಗಾಗಿರುವ ಮನುಷ್ಯನು ಈ ಕಥೆಯನ್ನು ಮೊದಲಿನಿಂದಲೂ ಕೇಳಿದರೆ ಎಲ್ಲ ಸಂಕಷ್ಟಗಳಿಂದಲೂ ಮುಕ್ತನಾಗುತ್ತಾನೆ. ರೋಗಿಯು ರೋಗದಿಂದ ಮುಕ್ತನಾಗುತ್ತಾನೆ. ಕಥಾಶ್ರವಣವನ್ನು ಮಾಡಿದ ಜಿಜ್ಞಾಸುವು ತನ್ನ ಅಪೇಕ್ಷೆಯಂತೆ ಜ್ಞಾನವನ್ನು ಪಡೆದುಕೊಳ್ಳುತ್ತಾನೆ. ಭಕ್ತನು ಭಕ್ತಜನೋಚಿತವಾದ ಪರಮಗತಿಯನ್ನು ಹೊಂದುತ್ತಾನೆ.

ತ್ವಯಾಪಿ ಸತತಂ ರಾಜನ್ನಭ್ಯರ್ಚ್ಯಃ ಪುರುಷೋತ್ತಮಃ ।
ಸ ಹಿ ಮಾತಾ ಪಿತಾ ಚೈವ ಕೃತ್ಸ್ನಸ್ಯ ಜಗತೋ ಗುರುಃ ॥೧೩೧॥

ಯುಧಿಷ್ಠಿರ! ನೀನು ಕೂಡ ಪುರುಷೋತ್ತಮನಾದ ಶ್ರೀಕೃಷ್ಣನನ್ನು ಸತತವಾಗಿ ಆರಾಧಿಸಬೇಕು. ಅವನೇ ಸಮಗ್ರವಾದ ಜಗತ್ತಿಗೆ ತಾಯಿಯೂ, ತಂದೆಯೂ, ಗುರುವೂ ಆಗಿದ್ದಾನೆ.

ಬ್ರಹ್ಮಣ್ಯದೇವೋ ಭಗವಾನ್ಪ್ರೀಯತಾಂ ತೇ ಸನಾತನಃ ।
ಯುಧಿಷ್ಠಿರ ಮಹಾಬಾಹೋ ಮಹಾಬುದ್ಧಿರ್ಜನಾರ್ದನಃ ॥೧೩೨॥

ಮಹಾಬಾಹುವೇ! ಯುಧಿಷ್ಠಿರ! ಬ್ರಾಹ್ಮಣಪ್ರಿಯನಾದ, ಮಹಾಬುದ್ಧಿಶಾಲಿಯಾದ, ಸನಾತನನಾದ, ಭಗವಾನ್ ಜನಾರ್ದನನು ನಿನ್ನ ವಿಷಯದಲ್ಲಿ ಸದಾ ಪ್ರಸನ್ನನಾಗಿರಲಿ.”

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ಶ್ರೇಷ್ಠವಾದ ಈ ಉಪಾಖ್ಯಾನವನ್ನು ಕೇಳಿ ಧರ್ಮರಾಜನೂ ಮತ್ತು ಅವನ ಎಲ್ಲ ಸಹೋದರರೂ ಶ್ರೀಮನ್ನಾರಾಯಣನ ಪರಮಭಕ್ತರಾದರು.

***ಜಿತಂ ಭಗವತಾ ತೇನ ಪುರುಷೇಣೇತಿ ಭಾರತ ।**
ನಿತ್ಯಂ ಜಪ್ಯಪರಾ ಭೂತ್ವಾ ಸರಸ್ವತೀಮುದೀರಯನ್ ॥೧೩೪॥

ಮುಂದೆ ಪಾಂಡವರು ನಿತ್ಯವೂ ಭಗವನ್ನಾಮಜಪದಲ್ಲಿಯೇ ತತ್ಪರರಾಗಿರುತ್ತಾ – ‘ಭಗವಂತನಾದ ಆ ಪುರುಷೋತ್ತಮನಿಂದ ಎಲ್ಲವೂ ಜಯಿಸಲ್ಪಟ್ಟಿತು. (ನಾವೆಲ್ಲರೂ ಅವನ ಅಧೀನರು.)’ – ಎಂಬ ಈ ಜಯವಾಣಿಯನ್ನು ಹೇಳುತ್ತಿದ್ದರು.

ಯೋ ಹ್ಯಸ್ಮಾಕಂ ಗುರುಶ್ರೇಷ್ಠಃ ಕೃಷ್ಣದ್ವೈಪಾಯನೋ ಮುನಿಃ ।
ಜಗೌ ಪರಮಕಂ ಜಪ್ಯಂ ನಾರಾಯಣಮುದೀರಯನ್ ॥೧೩೫॥

ನಮ್ಮ ಪರಮಗುರುಗಳಾದ, ಮುನಿಗಳಾದ ಭಗವಾನ್ ಕೃಷ್ಣದ್ವೈಪಾಯನವ್ಯಾಸರೂ ಪರಮೋತ್ಕೃಷ್ಟವಾದ ಮಂತ್ರವನ್ನು ಜಪಿಸುತ್ತಾ ನಿರಂತರವಾಗಿ ಶ್ರೀಮನ್ನಾರಾಯಣನ ಮಹಿಮೆಯನ್ನು ಗಾನಮಾಡುತ್ತಿದ್ದರು.

ಗತ್ವಾನ್ತರಿಕ್ಷಾತ್ಸತತಂ ಕ್ಷೀರೋದಮಮೃತಾಶಯಮ್ ।
ಪೂಜಯಿತ್ವಾ ಚ ದೇವೇಶಂ ಪುನರಾಯಾತ್ಸ್ವಮಾಶ್ರಮಮ್ ॥೧೩೬॥

ವ್ಯಾಸರು ಅನುದಿನವೂ ಆಕಾಶಮಾರ್ಗದ ಮೂಲಕವಾಗಿ ಅಮೃತಕ್ಕೆ ನಿಧಿಯಾದ ಕ್ಷೀರಸಾಗರಕ್ಕೆ ಹೋಗಿ ಅಲ್ಲಿ ದೇವೇಶನಾದ ಶ್ರೀಹರಿಯನ್ನು ಯಥಾವಿಧಿಯಾಗಿ ಪೂಜಿಸಿ ಅನಂತರ ತಮ್ಮ ಆಶ್ರಮಕ್ಕೆ ಹಿಂದಿರುಗುತ್ತಿದ್ದರು.

---

*‘ಜಿತಂ ತೇ ಪುಂಡರೀಕಾಕ್ಷ ನಮಸ್ತೇ ವಿಶ್ವಭಾವನ’ – ಎಂದು ಪ್ರಾರಂಭವಾಗುವ ಆರು ಭಾಗಗಳಲ್ಲಿರುವ ದಿವ್ಯಸ್ತೋತ್ರವು ಪಾಂಚರಾತ್ರಾಗಮದಲ್ಲಿ ಬರುತ್ತದೆ. ಇದನ್ನು ಋಗ್ವೇದದ ಖಿಲಭಾಗವೆಂದು ಪೂರ್ವಸೂರಿಗಳು ಹೇಳುತ್ತಾರೆ. ವೈಷ್ಣವಾಲಯಗಳಲ್ಲಿ ದಿನದ ಪೂಜೆಯ ಕಡೆಯಲ್ಲಿ ತೀರ್ಥಪ್ರಾಶನಸಮಯದಲ್ಲಿ ಇದನ್ನು ಪಾರಾಯಣಮಾಡುತ್ತಾರೆ. ಮಹಾಮಹಿಮೆಯುಳ್ಳ ಸ್ತೋತ್ರವಿದು.

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ನಾರದರು ಹೇಳಿದ ಸಮಗ್ರವಾದ ಉಪಾಖ್ಯಾನವನ್ನು ನಿನಗೆ ಹೇಳಿದ್ದೇನೆ. ಪರಂಪರಾಗತವಾಗಿ ಈ ಉಪಾಖ್ಯಾನವು ನಮ್ಮ ತಂದೆಗೆ ತಿಳಿದು ಅದನ್ನೇ ಅವರು ನನಗೂ ಉಪದೇಶಿಸಿದರು.”

ಜನಮೇಜಯ! ಸೌತಿಗಳು ಮುಂದುವರಿಸಿ ಹೇಳುತ್ತಾರೆ :

“ಶೌನಕರೇ! ವೈಶಂಪಾಯನರು ಜನಮೇಜಯನಿಗೆ ಹೇಳಿದ ಸಮಗ್ರವಾದ ಈ ಉಪಾಖ್ಯಾನವನ್ನು ನಿಮಗೂ ಹೇಳಿದ್ದೇನೆ. ಜನಮೇಜಯನು ಶ್ರೀಮನ್ನಾರಾಯಣನ ಈ ಮಾಹಾತ್ಮ್ಯವನ್ನು ಕೇಳಿ ಭಗವಂತನನ್ನು ಯಥಾವಿಧಿಯಾಗಿ ಪೂಜಿಸಿದನು. ನೀವೆಲ್ಲರೂ ತಪಸ್ವಿಗಳಾಗಿರುವಿರಿ. ಅನೇಕ ವ್ರತಾನುಷ್ಠಾನಗಳನ್ನು ಮಾಡಿರುವಿರಿ. ನೈಮಿಷಾರಣ್ಯವಾಸಿಗಳಾದ ದ್ವಿಜಶ್ರೇಷ್ಠರಾದ ನೀವೆಲ್ಲರೂ ವೇದವಿದರೂ ಶ್ರೇಷ್ಠರೂ ಆಗಿರುವಿರಿ. ನೀವೆಲ್ಲರೂ ಶೌನಕರ ಈ ಮಹಾಯಜ್ಞಕ್ಕೆ ಆಗಮಿಸಿರುವಿರಿ. ನೀವೆಲ್ಲರೂ ವಿಧಿವತ್ತಾಗಿ ಹೋಮಮಾಡಲ್ಪಟ್ಟ ಯಜ್ಞಗಳ ಮೂಲಕವಾಗಿ ಶಾಶ್ವತನಾದ ಪರಮೇಶ್ವರನಾದ ಶ್ರೀಮನ್ನಾರಾಯಣನನ್ನು ಆರಾಧಿಸಿರಿ. ಪರಂಪರಾಗತವಾದ ದಿವ್ಯವಾದ ಈ ಉಪಾಖ್ಯಾನವನ್ನು ನಮ್ಮ ತಂದೆಯು ಬಹಳ ಹಿಂದೆಯೇ ನನಗೆ ಉಪದೇಶಿಸಿದ್ದರು.”

ಅಪ್ರಸ್ತುತ

೩೩೯ನೆಯ ಅಧ್ಯಾಯವು ಮುಗಿಯಿತು.

೩೪೦ನೆಯ ಅಧ್ಯಾಯ — ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಭಗವಂತನು ಬ್ರಹ್ಮಾದಿಗಳಿಗೆ ಉಪದೇಶಿಸಿದ ಪ್ರವೃತ್ತಿ ಮತ್ತು ನಿವೃತ್ತಿಧರ್ಮಗಳ ರಹಸ್ಯವನ್ನು ವ್ಯಾಸರು ತಮ್ಮ ಶಿಷ್ಯರಿಗೆ ಹೇಳಿದುದು

ಶೌನಕರು ಪ್ರಶ್ನಿಸುತ್ತಾರೆ :

ಕಥಂ ಸ ಭಗವಾನ್ದೇವೋ ಯಜ್ಞೇಷ್ವಗ್ರಹರಃ ಪ್ರಭುಃ ।
ಯಜ್ಞಧಾರೀ ಚ ಸತತಂ ವೇದವೇದಾಙ್ಗವಿತ್ತಥಾ ॥೧॥

“ಸೌತಿಗಳೇ! ಪ್ರಭುವಾದ, ವೇದವೇದ್ಯನಾದ, ಭಗವಂತನಾದ ಶ್ರೀಮನ್ನಾರಾಯಣನು ಯಜ್ಞದಲ್ಲಿ ಪ್ರಥಮಭಾಗವನ್ನು ಸ್ವೀಕರಿಸುವವನೆಂದು ಹೇಳುತ್ತಾರೆ. ವೇದ-ವೇದಾಂಗಗಳನ್ನು ತಿಳಿದಿರುವ ಆ ಶ್ರೀಮನ್ನಾರಾಯಣನನ್ನೇ ನಿತ್ಯನಿರಂತರಯಜ್ಞಧರನೆಂದೂ (ಯಜ್ಞಕರ್ತೃವೆಂದೂ) ಹೇಳುತ್ತಾರೆ. (ಒಬ್ಬನೇ ಭಗವಂತನು ಯಜ್ಞಕರ್ತೃವೂ, ಯಜ್ಞಭೋಕ್ತೃವೂ ಹೇಗಾಗುತ್ತಾನೆ?)

ನಿವೃತ್ತಂ ಚಾಸ್ಥಿತೋ ಧರ್ಮಂ ಕ್ಷಮೀ ಭಾಗವತಃ ಪ್ರಭುಃ ।
ಪ್ರವೃತ್ತಿಧರ್ಮಾನ್ವಿದಧೇ ಸ ಏವ ಭಗವಾನ್ಪ್ರಭುಃ ॥೨॥

ಸರ್ವರಿಗೂ ಪ್ರಭುವಾದ, ಕ್ಷಮಾಶೀಲನಾದ, ಭಗವಂತನಾದ ಶ್ರೀಮನ್ನಾರಾಯಣನು ಸ್ವತಃ ನಿವೃತ್ತಿಧರ್ಮವನ್ನೇ ಆಶ್ರಯಿಸಿರತಕ್ಕವನು. ಆದರೆ ಸರ್ವಶಕ್ತನಾದ ಆ ಭಗವಂತನೇ ಪ್ರವೃತ್ತಿಧರ್ಮಗಳನ್ನೂ ವಿಧಾಯಕಮಾಡಿದ್ದಾನೆ. ಇದು ಹೇಗೆ?

ಕಥಂ ಪ್ರವೃತ್ತಿಧರ್ಮೇಷು ಭಾಗಾರ್ಹಾ ದೇವತಾಃ ಕೃತಾಃ ।
ಕಥಂ ನಿವೃತ್ತಿಧರ್ಮಾಶ್ಚ ಕೃತಾ ವ್ಯಾವೃತ್ತಬುದ್ಧಯಃ ॥೩॥

ಭಗವಂತನು ತಾನೇ ನಿವೃತ್ತಿಧರ್ಮಾವಲಂಬಿಯಾಗಿದ್ದರೂ ದೇವತೆಗಳನ್ನು ಪ್ರವೃತ್ತಿಧರ್ಮಗಳಾದ ಯಜ್ಞ-ಯಾಗಾದಿಗಳಲ್ಲಿ ಹವಿರ್ಭಾಗಕ್ಕೆ ಅಧಿಕಾರಿಗಳನ್ನಾಗಿ ಏಕೆ ಮಾಡಿದನು? ವಿಷಯಗಳಿಂದ ಅಪಕೃಷ್ಟವಾದ ಬುದ್ಧಿಯುಳ್ಳ ಋಷಿ-ಮುನಿಗಳನ್ನು ಯಾವ ಕಾರಣದಿಂದ ನಿವೃತ್ತಿಧರ್ಮಪರಾಯಣರನ್ನಾಗಿ ಮಾಡಿದನು?

ಏತಂ ನಃ ಸಂಶಯಃ ಸೌತೇ ಛಿನ್ಧಿ ಗುಹ್ಯಂ ಸನಾತನಮ್ ।
ತ್ವಯಾ ನಾರಾಯಣಕಥಾಃ ಶ್ರುತಾ ವೈ ಧರ್ಮಸಂಹಿತಾಃ ॥೪॥

ಸೌತಿಗಳೇ! ನಿಗೂಢವಾದ, ಬಹಳ ಕಾಲದಿಂದಿರುವ ಈ ನಮ್ಮ ಸಂಶಯವನ್ನು ಹೋಗಲಾಡಿಸು. ನೀನು ಧರ್ಮೋಪದೇಶಗಳಿಂದ ಯುಕ್ತವಾದ ನಾರಾಯಣನ ಅನೇಕಕಥೆಗಳನ್ನು ಕೇಳಿರುವೆ. ಆದುದರಿಂದ ನಮ್ಮ ಸಂದೇಹವನ್ನು ನಿವಾರಿಸಲು ನೀನೇ ಸಮರ್ಥನಾಗಿರುವೆ.”

ಸೌತಿಗಳು ಹೇಳುತ್ತಾರೆ :

"ಮುನಿಶ್ರೇಷ್ಠರಾದ ಶೌನಕರೇ! ಜನಮೇಜಯರಾಜನು ಧೀಮಂತರಾದ, ವ್ಯಾಸರ ಶಿಷ್ಯರಾದ ವೈಶಂಪಾಯನರನ್ನು ಕುರಿತು ಯಾವ ಪುರಾತನವಾದ ಪ್ರಶ್ನೆಯನ್ನು ಕೇಳಿದನೋ–ಅದನ್ನೇ ನಾನು ನಿಮಗೂ ಹೇಳುತ್ತೇನೆ. ಮಹಾಪ್ರಾಜ್ಞನಾದ ಜನಮೇಜಯನು ಸಮಸ್ತಪ್ರಾಣಿಗಳಿಗೂ ಆತ್ಮಸ್ವರೂಪನಾದ ಪರಮಾತ್ಮನ ಮಾಹಾತ್ಮ್ಯೆಯನ್ನು ಕೇಳಿ ವೈಶಂಪಾಯನರೊಡನೆ ಹೇಳಿದನು :

ಇಮೇ ಸಬ್ರಹ್ಮಕಾ ಲೋಕಾಃ ಸಸುರಾಸುರಮಾನವಾಃ ।
ಕ್ರಿಯಾಸ್ವಭ್ಯುದಯೋಕ್ತಾಸು ಸಕ್ತಾ ದೃಶ್ಯನ್ತಿ ಸರ್ವಶಃ ॥೭॥

"ವೈಶಂಪಾಯನರೇ! ಬ್ರಹ್ಮಲೋಕಪರ್ಯಂತವಾದ ಸಮಸ್ತಲೋಕಗಳೂ, ದೇವಾಸುರ-ಮಾನವರೂ ಲೌಕಿಕವಾದ ಅಭ್ಯುದಯಕರ್ಮಗಳಲ್ಲಿಯೇ ಆಸಕ್ತರಾಗಿರುವುದು ಸರ್ವತ್ರ ಕಂಡುಬರುತ್ತಿದೆ.

ಮೋಕ್ಷಶ್ಚೋಕ್ತಸ್ತ್ವಯಾ ಬ್ರಹ್ಮನ್ನಿರ್ವಾಣಂ ಪರಮಂ ಸುಖಮ್ ।
ಯೇ ತು ಮುಕ್ತಾ ಭವನ್ತೀಹ ಪುಣ್ಯಪಾಪವಿವರ್ಜಿತಾಃ ।
ತೇ ಸಹಸ್ರಾರ್ಚಿಷಂ ದೇವಂ ಪ್ರವಿಶನ್ತೀಹ ಶುಶ್ರುಮ ॥೮॥

ಆದರೆ ನೀವು ಮೋಕ್ಷವೇ ಪರಮಶಾಂತಿಸುಖಸ್ವರೂಪವೆಂದು ಹೇಳುತ್ತಿರುವಿರಿ. ಪುಣ್ಯ-ಪಾಪಗಳೆರಡರಿಂದಲೂ ರಹಿತರಾಗಿ ಯಾರು ಮುಕ್ತರಾಗುವರೋ–ಅವರು ಸಹಸ್ರರಶ್ಮಿಯಾದ ಪರಮಾತ್ಮನನ್ನು ಪ್ರವೇಶಿಸುವರೆಂಬುದನ್ನು ನಾವು ತಮ್ಮಿಂದಲೇ ಕೇಳಿದ್ದೇವೆ.

ಅಯಂ ಹಿ ದುರನುಷ್ಠೇಯೋ ಮೋಕ್ಷಧರ್ಮಃ ಸನಾತನಃ ।
ಯಂ ಹಿತ್ವಾ ದೇವತಾಃ ಸರ್ವಾ ಹವ್ಯಕವ್ಯಭುಜೋಽಭವನ್ ॥೯॥

ನಿಶ್ಚಯವಾಗಿ ಹೇಳುವುದಾದರೆ ಸನಾತನವಾದ ಈ ಮೋಕ್ಷಧರ್ಮಾನುಷ್ಠಾನವು ಅತ್ಯಂತದುಷ್ಕರವಾದುದು. ಈ ಕಾರಣದಿಂದಲೇ ಎಲ್ಲ ದೇವತೆಗಳೂ ಮೋಕ್ಷಮಾರ್ಗವನ್ನು ತ್ಯಜಿಸಿ ಹವ್ಯ-ಕವ್ಯಗಳ ಭೋಕ್ತೃಗಳಾಗಿದ್ದಾರೆ.

ಕಿಂ ಚ ಬ್ರಹ್ಮಾ ಚ ರುದ್ರಶ್ಚ ಶಕ್ರಶ್ಚ ಬಲಿಭಿತ್ಪ್ರಭುಃ ।
ಸೂರ್ಯಸ್ತಾರಾಧಿಪೋ ವಾಯುರಗ್ನಿರ್ವರುಣ ಏವ ಚ ॥೧೦॥

ಆಕಾಶಂ ಜಗತೀ ಚೈವ ಯೇ ಚ ಶೇಷಾ ದಿವೌಕಸಃ ।
ಪ್ರಲಯಂ ನ ವಿಜಾನನ್ತಿ ಆತ್ಮನಃ ಪರಿನಿರ್ಮಿತಮ್ ॥೧೧॥

ತತಸ್ತೇನಾಸ್ಥಿತಾ ಮಾರ್ಗಂ ಧ್ರುವಮಕ್ಷರಮವ್ಯಯಮ್ ॥೧೨॥

ವೈಶಂಪಾಯನರೇ! ಬ್ರಹ್ಮ-ರುದ್ರರಾಗಲೀ, ಬಲಾಸುರನನ್ನು ಸಂಹಾರ ಮಾಡಿದ ಪ್ರಭುವಾದ ಇಂದ್ರನಾಗಲೀ, ಸೂರ್ಯ-ಚಂದ್ರರಾಗಲೀ, ವಾಯ್ವಗ್ನಿ-ವರುಣರಾಗಲೀ, ಭೂಮ್ಯಾಕಾಶಗಳಾಗಲೀ, ಉಳಿದ ಯಾವ ದೇವತೆಗಳೇ ಆಗಲೀ–ಪರಮಾತ್ಮನಿಂದಲೇ ನಿರ್ಮಿತವಾದ ತಮ್ಮ ಪ್ರಲಯ (ನಾಶ)ವನ್ನು ತಿಳಿದಿಲ್ಲವೇನು? ಆದರಿಂದಲೇ ಅವರು ಶಾಶ್ವತವೂ, ಅವಿನಾಶಿಯೂ, ಅಕ್ಷಯವೂ ಆದ ಮೋಕ್ಷಮಾರ್ಗವನ್ನು ಆಶ್ರಯಿಸಿಲ್ಲವೇ?

ಸ್ಮೃತ್ವಾ ಕಾಲಪರೀಮಾಣಂ ಪ್ರವೃತ್ತಿಂ ಯೇ ಸಮಾಸ್ಥಿತಾಃ ।
ದೋಷಃ ಕಾಲಪರೀಮಾಣೇ ಮಹಾನೇಷ ಕ್ರಿಯಾವತಾಮ್ ॥೧೩॥

ಯಾರು ನಿಯತಕಾಲದವರೆಗೆ ಪ್ರಾಪ್ತವಾಗುವ ಸ್ವರ್ಗಾದಿಫಲಗಳಲ್ಲಿಯೇ ಲಕ್ಷ್ಯವನ್ನಿಟ್ಟು ಪ್ರವೃತ್ತಿಮಾರ್ಗವನ್ನು ಆಶ್ರಯಿಸಿರುವರೋ–ಅಂತಹ ಕರ್ಮಪರಾಯಣರಾದ ಮನುಷ್ಯರಲ್ಲಿ ಈ ಒಂದು ಮಹಾದೋಷವಿದೆ. ಅವರು ಕಾಲಪರಿಮಾಣದ ಹಿಡಿತಕ್ಕೆ ಸಿಕ್ಕಿ ಶುಭಾಶುಭ ಕರ್ಮಫಲಗಳನ್ನು ಸತತವಾಗಿ ಅನುಭವಿಸುತ್ತಿರುತ್ತಾರೆ.

ಏತನ್ಮೇ ಸಂಶಯಂ ವಿಪ್ರ ಹೃದಿ ಶಲ್ಯಮಿವಾರ್ಪಿತಮ್ ।
ಛಿನ್ಧೀತಿಹಾಸಕಥನಾತ್ಪರಂ ಕೌತೂಹಲಂ ಹಿ ಮೇ ॥೧೪॥

ವಿಪ್ರಶ್ರೇಷ್ಠರೇ! ಈ ಸಂಶಯವು ನನ್ನ ಹೃದಯದಲ್ಲಿ ಮುಳ್ಳಿನಂತೆ ನೆಟ್ಟುಬಿಟ್ಟಿದೆ. ಇತಿಹಾಸಕಥನದಿಂದ ಈ ನನ್ನ ಸಂಶಯವನ್ನು ನಿವಾರಣೆ ಮಾಡಿರಿ. ಪ್ರವೃತ್ತಿ-ನಿವೃತ್ತಿಮಾರ್ಗಗಳ ರಹಸ್ಯವನ್ನು ತಿಳಿಯಲು ನನಗೆ ಹೆಚ್ಚಿನ ಕುತೂಹಲವಿದೆ.

ಕಥಂ ಭಾಗಹರಾಃ ಪ್ರೋಕ್ತಾ ದೇವತಾಃ ಕ್ರತುಷು ದ್ವಿಜ ।
ಕಿಮರ್ಥಂ ಚಾಧ್ವರೇ ಬ್ರಹ್ಮನ್ನಿಜ್ಯನ್ತೇ ತ್ರಿದಿವೌಕಸಃ ॥೧೫॥

ಯಜ್ಞಗಳಲ್ಲಿ ದೇವತೆಗಳು ಹವಿರ್ಭಾಗವನ್ನು ಹೊಂದಲು ಅಧಿಕಾರಿಗಳೆಂದು ಏಕೆ ಹೇಳಿದೆ? ಯಾವ ಕಾರಣದಿಂದಾಗಿ ಯಜ್ಞಗಳಲ್ಲಿ ದೇವತೆಗಳನ್ನುದ್ದೇಶಿಸಿ ಹೋಮಮಾಡುತ್ತಾರೆ?

ಯೇ ಚ ಭಾಗಂ ಪ್ರಗೃಹ್ಣನ್ತಿ ಯಜ್ಞೇಷು ದ್ವಿಜಸತ್ತಮ ।
ತೇ ಯಜನ್ತೋ ಮಹಾಯಜ್ಞೈಃ ಕಸ್ಯ ಭಾಗಂ ದದನ್ತಿ ವೈ ॥೧೬॥

ಬ್ರಾಹ್ಮಣಶ್ರೇಷ್ಠರೇ! ಇತರರು ಮಾಡುವ ಯಜ್ಞಗಳಲ್ಲಿ ಯಜ್ಞಭಾಗವನ್ನು ಪ್ರತಿಗ್ರಹಿಸುವ ದೇವತೆಗಳು ತಾವೇ ಯಜ್ಞಮಾಡುವಾಗ ಯಾರಿಗೆ ಯಜ್ಞಭಾಗವನ್ನು ಕೊಡುತ್ತಾರೆ?”

ವೈಶಂಪಾಯನರು ಹೇಳುತ್ತಾರೆ :

ಅಹೋ ಗೂಢತಮಃ ಪ್ರಶ್ನಸ್ತ್ವಯಾ ಪೃಷ್ಟೋ ಜನೇಶ್ವರ ।
ನಾತಪ್ತತಪಸಾ ಹ್ಯೇಷ ನಾವೇದವಿದುಷಾ ತಥಾ ।
ನಾಪುರಾಣವಿದಾ ಚೈವ ಶಕ್ಯೋ ವ್ಯಾಹರ್ತುಮಞ್ಜಸಾ ॥೧೭॥

“ಮಹಾರಾಜ! ನಿಶ್ಚಯವಾಗಿಯೂ ನೀನು ಅತಿಗೂಢವಾದ ಪ್ರಶ್ನೆಯನ್ನೇ ಕೇಳಿರುವೆ. ತಪಸ್ವಿಯಲ್ಲದವನೂ, ವೇದಾಧ್ಯಯನ ಮಾಡದವನೂ, ಪುರಾಣಗಳನ್ನು ತಿಳಿಯದವನೂ–ಅನಾಯಾಸವಾಗಿ ಇಂತಹ ಪ್ರಶ್ನೆಗಳನ್ನು ಕೇಳಲಾರನು.

ನಾನೂ ಇಂತಹುದೇ ಪ್ರಶ್ನೆಯನ್ನೇ ಹಿಂದೆ ನನ್ನ ಗುರುಗಳ ಮುಂದಿಟ್ಟಿದ್ದೆನು. ಮಹರ್ಷಿಗಳಾದ ಕೃಷ್ಣದ್ವೈಪಾಯನವ್ಯಾಸರು ಆ ಸಮಯದಲ್ಲಿ ಹೇಳಿದುದನ್ನೇ ಈಗ ನಿನಗೂ ಸಂತೋಷದಿಂದ ಹೇಳುತ್ತೇನೆ.

ಸುಮಂತು, ಜೈಮಿನಿ, ದೃಢವ್ರತನಾದ ಪೈಲ, ನಾಲ್ಕನೆಯವನಾದ ನಾನು ಮತ್ತು ಐದನೆಯವನಾದ ಶುಕ –ಹೀಗೆ ನಾವೈವರೂ ವ್ಯಾಸರ ಬಳಿ ಶಿಷ್ಯರಾಗಿದ್ದೆವು. ಗುರುಗಳ ಸನ್ನಿಧಿಗೆ ಹೋದ, ಶಮ-ದಮಾದಿಗಳಿಂದ ಯುಕ್ತರಾಗಿದ್ದ, ಶೌಚ–ಸದಾಚಾರಸಂಪನ್ನರಾದ, ಜಿತಕ್ರೋಧರೂ–

ಜಿತೇಂದ್ರಿಯರೂ ಆಗಿದ್ದ ನಮ್ಮೈವರಿಗೂ ವ್ಯಾಸಮಹಾಮುನಿಗಳು ನಾಲ್ಕು ವೇದಗಳನ್ನೂ ಮತ್ತು ಐದನೆಯದಾದ ಮಹಾಭಾರತವನ್ನೂ ಹೇಳಿ ಕೊಡುತ್ತಿದ್ದರು. ಸಿದ್ಧ-ಚಾರಣರಿಂದ ಸೇವಿಸಲ್ಪಡುತ್ತಿದ್ದ, ರಮ್ಯವಾದ ಮತ್ತು ಶ್ರೇಷ್ಠವಾದ ಮೇರುಪರ್ವತದಲ್ಲಿ ಹೀಗೆ ವೇದಗಳನ್ನು ಅಭ್ಯಾಸ ಮಾಡುತ್ತಿದ್ದಾಗ –ಒಂದು ಸಮಯದಲ್ಲಿ ನಮ್ಮ ಮನಸ್ಸಿನಲ್ಲಿಯೂ ಇದೇ ವಿಧವಾದ ಸಂಶಯವು ಮೂಡಿತು. ನೀನು ಕೇಳಿದ ಪ್ರಶ್ನೆಯನ್ನೇ ನಾವೂ ಕೇಳಿದೆವು. ಆ ಸಮಯದಲ್ಲಿ ವ್ಯಾಸರು ಆ ನಮ್ಮ ಪ್ರಶ್ನೆಗೆ ಯಥೋಚಿತವಾದ ಉತ್ತರವನ್ನೇ ಕೊಟ್ಟರು. ಅವರಿತ್ತ ಉತ್ತರವನ್ನು ನಾನೂ ಏಕಾಗ್ರಚಿತ್ತನಾಗಿ ಕೇಳಿದ್ದೆನು. ಅವರು ಹೇಳಿದ ಉತ್ತರವನ್ನೇ ನಿನಗೂ ಹೇಳುತ್ತೇನೆ.

ಶಿಷ್ಯರು ಹೇಳಿದ ಮಾತನ್ನು ಕೇಳಿ ಎಲ್ಲರ ಅಜ್ಞಾನಾಂಧಕಾರವನ್ನೂ ಹೋಗಲಾಡಿಸಲು ಸಮರ್ಥರಾದ ಪರಾಶರರ ಮಕ್ಕಳಾದ ಶ್ರೀಮಂತರಾದ ವ್ಯಾಸರು ಈ ಮಾತನ್ನು ಹೇಳಿದರು :

“ಶಿಷ್ಯಶ್ರೇಷ್ಠರೇ! ನಾನು ಹಿಂದೆ ಭೂತ-ಭವಿಷ್ಯದ್ವರ್ತಮಾನಗಳನ್ನು ತಿಳಿದುಕೊಳ್ಳುವ ಸಲುವಾಗಿ ಅತ್ಯಂತಕಠಿನವಾದ ತಪಸ್ಸನ್ನು ಮಾಡಿದೆನು. ಇಂದ್ರಿಯಗಳನ್ನು ನಿಗ್ರಹಿಸಿ ದುಷ್ಕರವಾದ ತಪಸ್ಸನ್ನು ಮಾಡಿದ ನನಗೆ ಶ್ರೀಮನ್ನಾರಾಯಣನ ಪ್ರಸಾದದಿಂದ ಕ್ಷೀರಸಮುದ್ರದ ತೀರದಲ್ಲಿ ನಾನು ಅಪೇಕ್ಷಿಸಿದ್ದಂತೆಯೇ ತ್ರಿಕಾಲಜ್ಞಾನವು ಲಭಿಸಿತು. ಅದರ ಪ್ರಭಾವದಿಂದ ನಾನು ನಿಮ್ಮ ಸಂಶಯದ ನಿವಾರಣಾರ್ಥವಾಗಿ ಉತ್ತಮವಾದ ಮತ್ತು ನ್ಯಾಯೋಚಿತವಾದ ಮಾತನ್ನು ಹೇಳುತ್ತೇನೆ. ಏಕಾಗ್ರಚಿತ್ತರಾಗಿ ಕೇಳಿರಿ. ಕಲ್ಪದ ಆದಿಯಲ್ಲಿ ಯಾವ ರೀತಿ ನಡೆಯಿತೆಂಬುದನ್ನು ನಾನು ಜ್ಞಾನದೃಷ್ಟಿಯ ಮೂಲಕವಾಗಿ ನೋಡಿದ್ದೇನೆ.

ಪರಮಾತ್ಮೇತಿ ಯಂ ಪ್ರಾಹುಃ ಸಾಂಖ್ಯಯೋಗವಿದೋ ಜನಾಃ ।
ಮಹಾಪುರುಷಸಂಜ್ಞಾಂ ಸ ಲಭತೇ ಸ್ವೇನ ಕರ್ಮಣಾ ।
ತಸ್ಮಾತ್ಪ್ರಸೂತಮವ್ಯಕ್ತಂ ಪ್ರಧಾನಂ ತಂ ವಿದುರ್ಬುಧಾಃ ॥೨೯॥

ಸಾಂಖ್ಯ ಮತ್ತು ಯೋಗಶಾಸ್ತ್ರಗಳನ್ನು ತಿಳಿದವರು ಯಾವನನ್ನು ಪರ

ಮಾತ್ಮನೆಂದು ಕರೆಯುವರೋ–ಅವನೇ ತನ್ನ ಕರ್ಮದ ಪ್ರಭಾವದಿಂದ ಮಹಾಪುರುಷನೆಂಬ ಹೆಸರನ್ನು ಪಡೆಯುತ್ತಾನೆ. ಆ ಮಹಾಪುರುಷನಿಂದಲೇ ಅವ್ಯಕ್ತವು ಹುಟ್ಟಿರುವುದು. ಆ ಅವ್ಯಕ್ತವನ್ನೇ ವಿದ್ವಾಂಸರು ಪ್ರಧಾನವೆಂದೂ ಕರೆಯುತ್ತಾರೆ.

ಅವ್ಯಕ್ತಾದ್ವ್ಯಕ್ತಮುತ್ಪನ್ನಂ ಲೋಕಸೃಷ್ಟ್ಯರ್ಥಮೀಶ್ವರಾತ್ ।
ಅನಿರುದ್ಧೋ ಹಿ ಲೋಕೇಷು ಮಹಾನಾತ್ಮೇತಿ ಕಥ್ಯತೇ ॥೩೦॥

ಜಗತ್ತಿನ ಸೃಷ್ಟಿಯ ಸಲುವಾಗಿ ಆ ಮಹಾಪುರುಷನಿಂದಲೂ ಮತ್ತು ಅವ್ಯಕ್ತದಿಂದಲೂ ವ್ಯಕ್ತವು ಪ್ರಾದುರ್ಭವಿಸಿತು. ಆ ವ್ಯಕ್ತನೇ ಅನಿರುದ್ಧನು. ಎಲ್ಲ ಲೋಕಗಳಲ್ಲಿಯೂ ಅವನನ್ನು ಮಹತ್ತತ್ತ್ವವೆಂದೂ ಕರೆಯುತ್ತಾರೆ.

ಯೋಽಸೌ ವ್ಯಕ್ತತ್ವಮಾಪನ್ನೋ ನಿರ್ಮಮೇ ಚ ಪಿತಾಮಹಮ್ ।
ಸೋಽಹಙ್ಕಾರ ಇತಿ ಪ್ರೋಕ್ತಃ ಸರ್ವತೇಜೋಮಯೋ ಹಿ ಸಃ ॥

ವ್ಯಕ್ತಭಾವವನ್ನು ಹೊಂದಿದ ಆ ಅನಿರುದ್ಧನೇ ಪಿತಾಮಹನನ್ನು ಸೃಷ್ಟಿಸಿದನು. ಸರ್ವತೇಜಃಸ್ವರೂಪನಾದ ಆ ಪಿತಾಮಹನನ್ನು 'ಅಹಂಕಾರ' ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ।
ಅಹಙ್ಕಾರಪ್ರಸೂತಾನಿ ಮಹಾಭೂತಾನಿ ಪಞ್ಚಧಾ ॥೩೧॥

ಪೃಥಿವೀ, ವಾಯು, ಆಕಾಶ, ಜಲ ಮತ್ತು ಅಗ್ನಿಗಳೆಂಬ ಐದು ಸೂಕ್ಷ್ಮ ಮಹಾಭೂತಗಳು ಅಹಂಕಾರದಿಂದ ಹುಟ್ಟಿದುವುಗಳು.

ಮಹಾಭೂತಾನಿ ಸೃಷ್ಟ್ವೈವ ತಾನ್ಗುಣಾನ್ನಿರ್ಮಮೇ ಪುನಃ ।
ಭೂತೇಭ್ಯಶ್ಚೈವ ನಿಷ್ಪನ್ನಾ ಮೂರ್ತಿಮನ್ತಶ್ಚ ತಾಞ್ಶೃಣು ॥೩೨॥

ಅಹಂಕಾರಸ್ವರೂಪನಾದ ಬ್ರಹ್ಮನು ಪಂಚಮಹಾಭೂತಗಳನ್ನು ಸೃಷ್ಟಿಸಿದನಂತರ ಅವುಗಳ ಶಬ್ದ-ಸ್ಪರ್ಶಾದಿ ಗುಣಗಳನ್ನೂ ಸೃಷ್ಟಿಸಿದನು. ಆ ಪಂಚಭೂತಗಳಿಂದ ಎಂತಹ ಮೂರ್ತಸ್ವರೂಪರು ಉತ್ಪನ್ನರಾದರೆಂಬುದನ್ನು ಹೇಳುವೆನು ; ಕೇಳು.

ಮರೀಚಿರಙ್ಗಿರಾಶ್ಚಾತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠಶ್ಚ ಮಹಾತ್ಮಾ ವೈ ಮನುಃ ಸ್ವಾಯಂಭುವಸ್ತಥಾ ॥೩೪॥

ಮರೀಚಿ, ಅಂಗಿರಸ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು, ಮಹಾತ್ಮನಾದ ವಸಿಷ್ಠ ಮತ್ತು ಸ್ವಾಯಂಭುವಮನು–ಇವರೇ ಪಂಚಭೂತಗಳ ಮೂರ್ತ ಸ್ವರೂಪರು.

ಜ್ಞೇಯಾಃ ಪ್ರಕೃತಯೋಽಷ್ಟೌ ತಾ ಯಾಸು ಲೋಕಾಃ ಪ್ರತಿಷ್ಠಿತಾಃ ॥೩೫॥

ವೇದವೇದಾಙ್ಗಸಂಯುಕ್ತಾನ್ಯಜ್ಞಾನ್ಯಜ್ಞಾಙ್ಗಸಂಯುತಾನ್ ।
ನಿರ್ಮಮೇ ಲೋಕಸಿದ್ಧ್ಯರ್ಥಂ ಬ್ರಹ್ಮಾ ಲೋಕಪಿತಾಮಹಃ ।
ಅಷ್ಟಾಭ್ಯಃ ಪ್ರಕೃತಿಭ್ಯಶ್ಚ ಜಾತಂ ವಿಶ್ವಮಿದಂ ಜಗತ್ ॥೩೬॥

ಪಂಚಭೂತಗಳಿಂದ ಪ್ರಾದುರ್ಭೂತರಾದ ಈ ಅಷ್ಟಮೂರ್ತಿಗಳನ್ನು ಅಷ್ಟಪ್ರಕೃತಿಗಳೆಂದು ತಿಳಿಯಬೇಕು. ಈ ಅಷ್ಟಪ್ರಕೃತಿಗಳಲ್ಲಿಯೇ ಎಲ್ಲ ಲೋಕಗಳೂ ಪ್ರತಿಷ್ಠಿತವಾಗಿವೆ. ಲೋಕಪಿತಾಮಹನಾದ ಬ್ರಹ್ಮನು ಲೋಕ ಕಾರ್ಯಸಿದ್ಧಿಗಾಗಿಯೇ ವೇದ-ವೇದಾಂಗಗಳಿಂದಲೂ ಯಜ್ಞಾಂಗ ಗಳಿಂದಲೂ ಯುಕ್ತವಾದ ಯಜ್ಞಗಳನ್ನು ಸೃಷ್ಟಿಸಿದನು. ಹಿಂದೆ ಹೇಳಿದ ಅಷ್ಟಪ್ರಕೃತಿಗಳಿಂದಲೇ ಈ ಸಂಪೂರ್ಣವಾದ ಜಗತ್ತೂ ಹುಟ್ಟಿದೆ.

ರುದ್ರೋ ರೋಷಾತ್ಮಕೋ ಜಾತೋ ದಶಾನ್ಯಾನ್ಸೋಽಸೃಜತ್ಸ್ವಯಮ್ ।
ಏಕಾದಶೈತೇ ರುದ್ರಾಸ್ತು ವಿಕಾರಪುರುಷಾಃ ಸ್ಮೃತಾಃ ॥೩೭॥

ಬ್ರಹ್ಮನ ಕೋಪದಿಂದ ರುದ್ರನು ಹುಟ್ಟಿದನು. ಅನಂತರ ಆ ರುದ್ರನೇ ಬೇರೆಯ ದಶರುದ್ರರನ್ನು ಸೃಷ್ಟಿಸಿದನು. ಹೀಗೆ ಪ್ರಾದುರ್ಭೂತರಾದ ಏಕಾದಶರುದ್ರರು ವಿಕಾರಪುರುಷರೆಂದು ಕರೆಯಲ್ಪಡುತ್ತಾರೆ.

ತೇ ರುದ್ರಾಃ ಪ್ರಕೃತಿಶ್ಚೈವ ಸರ್ವೇ ಚೈವ ಸುರರ್ಷಯಃ ।
ಉತ್ಪನ್ನಾ ಲೋಕಸಿದ್ಧ್ಯರ್ಥಂ ಬ್ರಹ್ಮಾಣಂ ಸಮುಪಸ್ಥಿತಾಃ ॥೩೮॥

ಏಕಾದಶರುದ್ರರೂ, ಅಷ್ಟಪ್ರಕೃತಿಗಳೂ ಮತ್ತು ಸಮಸ್ತದೇವರ್ಷಿ ಗಣಗಳೂ ಲೋಕರಕ್ಷಣಾರ್ಥವಾಗಿಯೇ ಹುಟ್ಟಿದರು. ಅವರೆಲ್ಲರೂ ಬ್ರಹ್ಮನ ಬಳಿಗೆ ಹೋಗಿ ಹೇಳಿದರು :

ವಯಂ ಸೃಷ್ಟಾ ಹಿ ಭಗವಂಸ್ತ್ವಯಾ ಚ ಪ್ರಭವಿಷ್ಣುನಾ ।
ಯೇನ ಯಸ್ಮಿನ್ನಧೀಕಾರೇ ವರ್ತಿತವ್ಯಂ ಪಿತಾಮಹ ॥೬೯॥

ಯೋಽಸೌ ತ್ವಯಾಭಿನಿರ್ದಿಷ್ಟೋ ಹ್ಯಧಿಕಾರೋಽರ್ಥಚಿನ್ತಕಃ ।
ಪರಿಪಾಲ್ಯಃ ಕಥಂ ತೇನ ಸಾಹಂಕಾರೇಣ ಕರ್ತೃಣಾ ॥೭೦॥

"ಭಗವನ್! ಪಿತಾಮಹನೇ! ಮಹಾಪ್ರಭಾವಶಾಲಿಯಾದ ನಿನ್ನಿಂದ ನಾವೆಲ್ಲರೂ ಉತ್ಪನ್ನರಾಗಿದ್ದೇವೆ. ನಮ್ಮಲ್ಲಿ ಯಾರು ಯಾವ ಅಧಿಕಾರ ದಲ್ಲಿರಬೇಕು? ನಿನ್ನಿಂದ ನಿರ್ದೇಶಿಸಲ್ಪಡುವ ಅರ್ಥಸಾಧಕವಾದ ಯಾವ ಯಾವ ಅಧಿಕಾರವಿದೆಯೋ ಅದನ್ನು ಅಹಂಕಾರಯುಕ್ತನಾದ ಆ ಅಧಿಕಾರಿಯು ಹೇಗೆ ಪರಿಪಾಲಿಸಬೇಕು?

ಪ್ರದಿಶಸ್ವ ಬಲಂ ತಸ್ಯ ಯೋಽಧಿಕಾರಾರ್ಥಚಿನ್ತಕಃ ॥೭೧॥

ಯಾವನು ಅಧಿಕಾರದ ಪ್ರಯೋಜನವನ್ನು ಕುರಿತು ಚಿಂತಿಸುವನೋ ಅವನಿಗೆ ನೀನು ಅವನ ಕರ್ತವ್ಯಪರಿಪಾಲನೆಗೆ ಸಾಧ್ಯವಾಗುವಂತೆ ಶಕ್ತಿಯನ್ನು ಅನುಗ್ರಹಿಸು." ರುದ್ರಾದಿದೇವತೆಗಳೆಲ್ಲರೂ ಹೀಗೆ ಪ್ರಾರ್ಥಿಸಲಾಗಿ, ಮಹಾದೇವನಾದ ಬ್ರಹ್ಮನು ದೇವತೆಗಳಿಗೆ ಹೇಳಿದನು :

ಸಾಧ್ವಹಂ ಜ್ಞಾಪಿತೋ ದೇವಾ ಯುಷ್ಮಾಭಿರ್ಭದ್ರಮಸ್ತು ವಃ ।
ಮಮಾಪ್ಯೇಷಾ ಸಮುತ್ಪನ್ನಾ ಚಿನ್ತಾ ಯಾ ಭವತಾಂ ಮತಾ ॥೭೨॥

"ದೇವತೆಗಳೇ! ನೀವು ಒಳ್ಳೆಯ ವಿಷಯವನ್ನೇ ನನ್ನ ಗಮನಕ್ಕೆ ತಂದಿರುವಿರಿ. ನಿಮ್ಮೆಲ್ಲರಿಗೂ ಮಂಗಳವಾಗಲಿ. ನಿಮ್ಮ ಮನಸ್ಸಿನಲ್ಲಿ ಯಾವ ಚಿಂತೆಯುಂಟಾಗಿರುವುದೋ –ಅದೇ ಚಿಂತೆಯೇ ನನ್ನ ಮನಸ್ಸಿನಲ್ಲಿಯೂ ಉಂಟಾಗಿದೆ.

ಲೋಕತ್ರಯಸ್ಯ ಕೃತ್ಸ್ನಸ್ಯ ಕಥಂ ಕಾರ್ಯಃ ಪರಿಗ್ರಹಃ ।
ಕಥಂ ಬಲಕ್ಷಯೋ ನ ಸ್ಯಾದ್ಯುಷ್ಮಾಕಂ ಹ್ಯಾತ್ಮನಶ್ಚ ಮೇ ॥೭೩॥

ಸಮಗ್ರವಾದ ಮೂರು ಲೋಕಗಳ ಕಾರ್ಯವನ್ನು ಹೇಗೆ ನಿರ್ವಹಿಸ ಬೇಕು? ಹಾಗೆ ಕಾರ್ಯನಿರ್ವಹಣೆಮಾಡುವಾಗ ನಿಮ್ಮ ಬಲವಾಗಲೀ– ನನ್ನ

ಶಕ್ತಿಯಾಗಲೀ ಕುಂದದಂತೆ ಆ ಮಹಾಕಾರ್ಯವನ್ನು ಹೇಗೆ ನಿರ್ವಹಿಸಬೇಕು?–ಎಂಬ ಚಿಂತೆಯು ನನ್ನ ಮನಸ್ಸಿನಲ್ಲಿಯೂ ಉಂಟಾಗಿದೆ.

ಇತಃ ಸರ್ವೇಽಪಿ ಗಚ್ಛಾಮಃ ಶರಣಂ ಲೋಕಸಾಕ್ಷಿಣಮ್ ।
ಮಹಾಪುರುಷಮವ್ಯಕ್ತಂ ಸ ನೋ ವಕ್ಷ್ಯತಿ ಯದ್ಧಿತಮ್ ॥೪೪॥

ನಮ್ಮೆಲ್ಲರಿಗೂ ಶರಣ್ಯನಾದ, ಲೋಕಸಾಕ್ಷಿಯಾದ, ಮಹಾಪುರುಷನಾದ, ಅವ್ಯಕ್ತನಾದ ಶ್ರೀಮನ್ನಾರಾಯಣನ ಬಳಿಗೆ ಇಲ್ಲಿಂದಲೇ ನಾವೆಲ್ಲರೂ ಹೋಗೋಣ. ನಮಗೆ ಯಾವುದು ಹಿತವೋ ಅದನ್ನು ಅವನೇ ಹೇಳುತ್ತಾನೆ."

ವ್ಯಾಸರು ಹೇಳುತ್ತಾರೆ :

"ಶಿಷ್ಯಶ್ರೇಷ್ಠರೇ! ಅನಂತರ ಲೋಕಕ್ಕೆ ಹಿತವನ್ನು ಬಯಸುವ ರುದ್ರಾದಿ ದೇವತೆಗಳೆಲ್ಲರೂ ಬ್ರಹ್ಮನೊಡನೆ ಕ್ಷೀರಸಮುದ್ರದ ಉತ್ತರತೀರಪ್ರದೇಶಕ್ಕೆ ತೆರಳಿದರು. ಅಲ್ಲಿ ಅವರೆಲ್ಲರೂ ಬ್ರಹ್ಮನು ಹೇಳಿದಂತೆ ವೇದೋಕ್ತವಾದ ತಪಸ್ಸನ್ನು ಆರಂಭಿಸಿದರು. ಮಹಾನಿಯಮವೆಂಬ ಹೆಸರಿನ ಆ ತಪಸ್ಸು ತಪಶ್ಚರಣೆಗಳಲ್ಲಿಯೇ ಅತ್ಯಂತಕಠೋರವಾಗಿದ್ದಿತು.

ಊರ್ಧ್ವಾ ದೃಷ್ಟಿರ್ಬಾಹವಶ್ಚ ಏಕಾಗ್ರಂ ಚ ಮನೋಽಭವತ್ ।
ಏಕಪಾದಾಃ ಸ್ಥಿತಾಃ ಸರ್ವೇ ಕಾಷ್ಠಭೂತಾಃ ಸಮಾಹಿತಾಃ ॥೪೭॥

ಹಾಗೆ ತಪಸ್ಸುಮಾಡುತ್ತಿದ್ದ ದೇವತೆಗಳ ದೃಷ್ಟಿಗಳೆಲ್ಲವೂ ಊರ್ಧ್ವಮುಖವಾದುವು. ಎಲ್ಲರೂ ತೋಳುಗಳನ್ನು ಮೇಲಕ್ಕೆತ್ತಿದ್ದರು. ಅವರ ಮನಸ್ಸುಗಳೆಲ್ಲವೂ ಏಕಾಗ್ರವಾಗಿದ್ದವು. ಎಲ್ಲರೂ ಒಂದೇ ಕಾಲಿನ ಮೇಲೆ ನಿಂತು ತಪಸ್ಸುಮಾಡುತ್ತಿದ್ದರು. ಒಟ್ಟುಗೂಡಿ ತಪಸ್ಸುಮಾಡುತ್ತಿದ್ದ ಅವರೆಲ್ಲರೂ ಕಟ್ಟಿಗೆಗಳಂತೆಯೇ ನಿಶ್ಚೇಷ್ಟರಾಗಿದ್ದರು.

ದಿವ್ಯಂ ವರ್ಷಸಹಸ್ರಂ ತೇ ತಪಸ್ತಪ್ತ್ವಾ ಸುದಾರುಣಮ್ ।
ಶುಶ್ರುವುರ್ಮಧುರಾಂ ವಾಣೀಂ ವೇದವೇದಾಙ್ಗಭೂಷಿತಾಮ್ ॥೪೮॥

ಬ್ರಹ್ಮಾದಿದೇವತೆಗಳು ದೇವಕಾಲಮಾನದ ಒಂದು ಸಾವಿರ ವರ್ಷಗಳವರೆಗೆ ಅಂತಹ ಸುದಾರುಣವಾದ ತಪಸ್ಸನ್ನು ಮಾಡಿದನಂತರ ಅವರೆಲ್ಲರೂ

ವೇದ-ವೇದಾಂಗಗಳಿಂದ ಸಮಲಂಕೃತವಾದ ಸುಮಧುರವಾದ ವಾಣಿಯನ್ನು ಕೇಳಿದರು :

ಭೋ ಭೋಃ ಸಬ್ರಹ್ಮಕಾ ದೇವಾ ಋಷಯಶ್ಚ ತಪೋಧನಾಃ ।
ಸ್ವಾಗತೇನಾರ್ಚ್ಯ ವಃ ಸರ್ವಾಞ್ಶ್ರಾವಯೇ ವಾಕ್ಯಮುತ್ತಮಮ್ ॥೪೯॥

“ಭೋಃ! ಬ್ರಹ್ಮಾದಿದೇವತೆಗಳೇ! ತಪೋಧನರಾದ ಋಷಿಗಳೇ! ನಿಮ್ಮೆಲ್ಲರನ್ನೂ ಸ್ವಾಗತದ ಮೂಲಕವಾಗಿ ಸತ್ಕರಿಸಿ ಉತ್ತಮೋತ್ತಮವಾದ ಈ ಮಾತನ್ನು ನಿಮ್ಮೊಡನೆ ಹೇಳುತ್ತಿದ್ದೇನೆ.

ವಿಜ್ಞಾತಂ ವೋ ಮಯಾ ಕಾರ್ಯಂ ತಚ್ಚ ಲೋಕಹಿತಂ ಮಹತ್ ।
ಪ್ರವೃತ್ತಿಯುಕ್ತಂ ಕರ್ತವ್ಯಂ ಯುಷ್ಮತ್ಪ್ರಾಣೋಪಬೃಂಹಣಮ್ ॥೫೦॥

ನೀವು ಯಾವ ಕಾರ್ಯಾರ್ಥವಾಗಿ ಇಲ್ಲಿಗೆ ಬಂದಿರುವಿರೆಂಬುದು ನನಗೆ ತಿಳಿದಿದೆ. ನೀವು ಉದ್ದೇಶಿಸಿರುವ ಆ ಮಹಾಕಾರ್ಯವು ಎಲ್ಲ ಲೋಕಗಳಿಗೂ ಅತ್ಯಂತಹಿತಕರವಾದುದು. ನೀವೆಲ್ಲರೂ ಪ್ರವೃತ್ತಿಯುಕ್ತವಾದ ಧರ್ಮವನ್ನು ಪರಿಪಾಲಿಸಬೇಕು. ಪ್ರವೃತ್ತಿಕರ್ಮಗಳೇ ನಿಮ್ಮ ಪ್ರಾಣಗಳ ಪೋಷಣೆಗೂ–ಶಕ್ತಿ ಸಂವರ್ಧನೆಗೂ ಕಾರಣಗಳಾಗುತ್ತವೆ.

ಸುತಪ್ತಂ ಚ ತಪೋ ದೇವಾ ಮಮಾರಾಧನಕಾಮ್ಯಯಾ ।
ಭೋಕ್ಷ್ಯಥಾಸ್ಯ ಮಹಾಸತ್ತ್ವಾಸ್ತಪಸಃ ಫಲಮುತ್ತಮಮ್ ॥೫೧॥

ಮಹಾಸತ್ತ್ವರಾದ ದೇವತೆಗಳೇ! ನೀವು ನನ್ನನ್ನು ಆರಾಧಿಸಬೇಕೆನ್ನುವ ಇಚ್ಛೆಯಿಂದ ಅತ್ಯಂತದುಷ್ಕರವಾದ ತಪಸ್ಸನ್ನೇ ಮಾಡಿರುವಿರಿ. ಈ ತಪಸ್ಸಿಗೆ ಉತ್ತಮವಾದ ಫಲವನ್ನೇ ನೀವೆಲ್ಲರೂ ಉಪಭೋಗಿಸುವಿರಿ.

ಏಷ ಬ್ರಹ್ಮಾ ಲೋಕಗುರುರ್ಮಹಾನ್ ಲೋಕಪಿತಾಮಹಃ ।
ಯೂಯಂ ಚ ವಿಬುಧಶ್ರೇಷ್ಠಾ ಮಾಂ ಯಜಧ್ವಂ ಸಮಾಹಿತಾಃ ॥

ಸಂಪೂರ್ಣಜಗತ್ತಿಗೂ ಮಹಾಗುರುವಾದ, ಲೋಕಪಿತಾಮಹನಾದ ಬ್ರಹ್ಮನೂ ಮತ್ತು ದೇವಶ್ರೇಷ್ಠರಾದ ನೀವೆಲ್ಲರೂ ಏಕಾಗ್ರಚಿತ್ತರಾಗಿ ನನ್ನನ್ನುದ್ದೇಶಿಸಿ ಯಜ್ಞವನ್ನು ಮಾಡಿರಿ.

ಸರ್ವೇ ಭಾಗಾನ್ಕಲ್ಪಯಧ್ವಂ ಯಜ್ಞೇಷು ಮಮ ನಿತ್ಯಶಃ ।
ತಥಾ ಶ್ರೇಯೋಽಭಿಧಾಸ್ಯಾಮಿ ಯಥಾಧೀಕಾರಮೀಶ್ವರಾಃ ॥೫೩॥

ಲೋಕೇಶ್ವರರೇ! ನೀವೆಲ್ಲರೂ ಯಜ್ಞಗಳಲ್ಲಿ ಅನುದಿನವೂ ನನಗೆ ಭಾಗವನ್ನು ಕಲ್ಪಿಸಿ ಸಮರ್ಪಿಸಿರಿ. ನಿಮ್ಮ ನಿಮ್ಮ ಅಧಿಕಾರಗಳಿಗೆ ಅನುರೂಪವಾಗಿ ನಾನು ನಿಮಗೆ ಶ್ರೇಯಸ್ಸಿನ ಮಾರ್ಗವನ್ನು ಹೇಳುತ್ತೇನೆ.”

ವ್ಯಾಸರು ಹೇಳುತ್ತಾರೆ :

“ಶಿಷ್ಯೋತ್ತಮರೇ! ಭಗವಂತನ ಆ ಮಾತುಗಳನ್ನು ಕೇಳಿ ದೇವತೆಗಳು ರೋಮಾಂಚಿತರಾದರು. ಬಳಿಕ ಬ್ರಹ್ಮಪುರಸ್ಸರರಾದ ಎಲ್ಲ ದೇವತೆಗಳೂ ಮತ್ತು ಋಷಿಗಳೂ ವೇದವಿಹಿತವಾದ ವಿಧಾನದಿಂದ ವೈಷ್ಣವಯಾಗವನ್ನು ಮಾಡಿದರು. ಆ ಯಜ್ಞದಲ್ಲಿ ಬ್ರಹ್ಮನು ಸ್ವತಃ ಮಹಾವಿಷ್ಣುವಿಗೆ ಯಜ್ಞಭಾಗವನ್ನು ಸಮರ್ಪಿಸಿದನು. ದೇವತೆಗಳೂ ಮತ್ತು ದೇವರ್ಷಿಗಳೂ ಯಜ್ಞದಲ್ಲಿ ತಮ್ಮ ತಮ್ಮ ಭಾಗಗಳನ್ನು ಮಹಾವಿಷ್ಣುವಿಗೆ ಸಮರ್ಪಿಸಿದರು. ಕೃತಯುಗದ ಧರ್ಮಾನುಸಾರವಾಗಿ ಕಲ್ಪಿಸಿದ ಆ ಯಜ್ಞಭಾಗಗಳು ಎಲ್ಲರಿಂದಲೂ ಪುರಸ್ಕೃತವಾದುವು.

ಪ್ರಾಹುರಾದಿತ್ಯವರ್ಣಂ ತಂ ಪುರುಷಂ ತಮಸಃ ಪರಮ್ ।
ಬೃಹನ್ತಂ ಸರ್ವಗಂ ದೇವಮೀಶಾನಂ ವರದಂ ಪ್ರಭುಮ್ ॥೫೭॥

ಆ ಯಜ್ಞದಲ್ಲಿ ಭಾಗವಹಿಸಿದ್ದ ಬ್ರಹ್ಮಾದಿದೇವತೆಗಳೆಲ್ಲರೂ ಮಹಾವಿಷ್ಣುವನ್ನು–ಆದಿತ್ಯವರ್ಣನೆಂದೂ, ಅಂತರ್ಯಾಮಿಯಾದ ಪುರುಷನೆಂದೂ, ಅಜ್ಞಾನಾಂಧಕಾರದಿಂದ ಆಚೆ ಇರತಕ್ಕವನೆಂದೂ, ಬೃಹತ್ಸ್ವರೂಪನೆಂದೂ, ಸರ್ವವ್ಯಾಪಿಯೆಂದೂ, ಸರ್ವಗಾಮಿಯೆಂದೂ, ಈಶ್ವರನೆಂದೂ, ವರದನೆಂದೂ, ಸರ್ವಸಮರ್ಥನಾದ ಪ್ರಭುವೆಂದೂ ಕೊಂಡಾಡಿದರು.

ಬಳಿಕ ವರದನಾದ, ಮಹೇಶ್ವರನಾದ, ದೇವದೇವನಾದ ಶಾಂತಿಮಯನಾದ ಶ್ರೀಮನ್ನಾರಾಯಣನು ಅಶರೀರನಾಗಿಯೇ ಅಲ್ಲಿದ್ದ ಎಲ್ಲ ದೇವತೆಗಳನ್ನೂ ಕುರಿತು ಹೇಳಿದನು :

ಯೇನ ಯಃ ಕಲ್ಪಿತೋ ಭಾಗಃ ಸ ತಥಾ ಸಮುಪಾಗತಃ ।
ಪ್ರೀತೋಽಹಂ ಪ್ರದಿಶಾಮ್ಯದ್ಯ ಫಲಮಾವೃತ್ತಿಲಕ್ಷಣಮ್ ॥೫೮॥

"ಯಾರು ಯಾರಿಂದ (ಯಾವ ದೇವತೆಯಿಂದ ಅಥವಾ ಯಾವ ಋಷಿಯಿಂದ) ಯಾವ ಯಾವ ಯಜ್ಞಭಾಗವು ಸಮರ್ಪಿಸಲ್ಪಟ್ಟಿತೋ–ಆ ಯಜ್ಞಭಾಗಗಳು ಯಥಾವತ್ತಾಗಿಯೇ ನನಗೆ ಮುಟ್ಟಿವೆ. ನೀವು ಸಮರ್ಪಿಸಿದ ಹವಿರ್ಭಾಗದಿಂದ ನಾನು ಸುಪ್ರೀತನಾಗಿದ್ದೇನೆ. ಈಗ ನಾನು ನಿಮಗೆ ಪುನರಾವೃತ್ತಿರೂಪವಾದ ಫಲವನ್ನು ಅನುಗ್ರಹಿಸುತ್ತೇನೆ.

ಏತದ್ವೋ ಲಕ್ಷಣಂ ದೇವಾ ಮತ್ಪ್ರಸಾದಸಮುದ್ಭವಮ್ ।
ಸ್ವಯಂ ಯಜ್ಞೈರ್ಯಜಮಾನಾಃ ಸಮಾಪ್ತವರದಕ್ಷಿಣೈಃ ।
ಯುಗೇ ಯುಗೇ ಭವಿಷ್ಯಧ್ವಂ ಪ್ರವೃತ್ತಿಫಲಭಾಗಿನಃ ॥೬೦॥

ದೇವತೆಗಳೇ! ನನ್ನ ಅನುಗ್ರಹದಿಂದಾಗಿ ನಿಮಗೆ ಆವೃತ್ತಿಲಕ್ಷಣಫಲವು ಪ್ರಾಪ್ತವಾಗುತ್ತದೆ. ಪ್ರತಿಯೊಂದು ಯುಗದಲ್ಲಿಯೂ ನೀವೇ ಯಜ್ಞಗಳಲ್ಲಿ ಯಜಮಾನರಾಗಿ ಉತ್ತಮದಕ್ಷಿಣೆಗಳಿಂದ ಕೂಡಿದ ಯಾಗಗಳನ್ನು ಮಾಡಿರಿ. ಆದರಿಂದ ನೀವೆಲ್ಲರೂ ಪ್ರವೃತ್ತಿರೂಪಧರ್ಮದ ಫಲಕ್ಕೆ ಭಾಗಿಗಳಾಗುವಿರಿ.

ಯಜ್ಞೈರ್ಯೇ ಚಾಪಿ ಯಕ್ಷ್ಯನ್ತಿ ಸರ್ವಲೋಕೇಷು ವೈ ಸುರಾಃ ।
ಕಲ್ಪಯಿಷ್ಯನ್ತಿ ವೋ ಭಾಗಾಂಸ್ತೇ ನರಾ ವೇದಕಲ್ಪಿತಾನ್ ॥೬೧॥

ದೇವತೆಗಳೇ! ಎಲ್ಲ ಲೋಕಗಳಲ್ಲಿಯೂ ಯಜ್ಞಗಳ ಮೂಲಕವಾಗಿ ಯಾರು ಆರಾಧಿಸಲು ಇಚ್ಛಿಸುವರೋ–ಆ ಮನುಷ್ಯರು ವೇದಗಳಲ್ಲಿ ಉಲ್ಲೇಖಿಸಿರುವಂತೆ ನಿಮಗೆ ಯಜ್ಞಭಾಗಗಳನ್ನು ಕಲ್ಪಿಸುತ್ತಾರೆ.

ಯೋ ಮೇ ಯಥಾ ಕಲ್ಪಿತವಾನ್ಭಾಗಮಸ್ಮಿನ್ಮಹಾಕ್ರತೌ ।
ಸ ತಥಾ ಯಜ್ಞಭಾಗಾರ್ಹೋ ವೇದಸೂತ್ರೇ ಮಯಾ ಕೃತಃ ॥೬೨॥

ಈ ಮಹಾಯಜ್ಞದಲ್ಲಿ ಯಾವ ದೇವತೆಯು ನನಗೆ ಎಷ್ಟು ಯಜ್ಞಭಾಗವನ್ನು ಕಲ್ಪಿಸಿರುವನೋ ಅಷ್ಟೇ ಪರಿಮಾಣದ ಯಜ್ಞಭಾಗವನ್ನು ಪಡೆದುಕೊಳ್ಳಲು ಅವನು ಅರ್ಹನಾಗುತ್ತಾನೆ. ಈ ವಿಷಯವನ್ನು ವೈದಿಕಸೂತ್ರದಲ್ಲಿಯೇ ನಾನು ಇಂತಹ ದೇವತೆಯು ಇಷ್ಟು ಯಜ್ಞಭಾಗಕ್ಕೆ ಅಧಿಕಾರಿಯಾಗುವನೆಂಬ ವ್ಯವಸ್ಥೆಯನ್ನು ಮಾಡಿಬಿಟ್ಟಿದ್ದೇನೆ.

ಯೂಯಂ ಲೋಕಾನ್ಭಾವಯಧ್ವಂ ಯಜ್ಞಭಾಗಫಲೋಚಿತಾಃ ।
ಸರ್ವಾರ್ಥಚಿನ್ತಕಾ ಲೋಕೇ ಯಥಾಧೀಕಾರನಿರ್ಮಿತಾಃ ॥೬೩॥

ನೀವು ಯಜ್ಞಗಳಲ್ಲಿ ಯಜಮಾನನು ಕೊಡುವ ಭಾಗಗಳನ್ನು ಪಡೆದುಕೊಂಡು ಯಜಮಾನನ ಮನೋವಾಂಛಿತಫಲಗಳನ್ನು ಕೊಡಲು ಪ್ರವೃತ್ತರಾಗಿರಿ. ಜಗತ್ತಿನಲ್ಲಿ ನಿಮ್ಮ ಅಧಿಕಾರಕ್ಕೆ ಅನುಸಾರವಾಗಿ ಎಲ್ಲರ ಮನೋರಥಗಳ ವಿಷಯವಾಗಿಯೂ ಚಿಂತಿಸಿರಿ. ಹೀಗೆ ನೀವು ಎಲ್ಲ ಲೋಕಗಳಿಗೂ ಹಿತವನ್ನುಂಟುಮಾಡಿರಿ.

ಯಾಃ ಕ್ರಿಯಾಃ ಪ್ರಚರಿಷ್ಯನ್ತಿ ಪ್ರವೃತ್ತಿಫಲಸತ್ಕೃತಾಃ ।
ಆಭಿರಾಪ್ಯಾಯಿತಬಲಾ ಲೋಕಾನ್ವೈ ಧಾರಯಿಷ್ಯಥ ॥೬೪॥

ಯೂಯಂ ಹಿ ಭಾವಿತಾ ಯಜ್ಞೈಃ ಸರ್ವಯಜ್ಞೇಷು ಮಾನವೈಃ ।
ಮಾಂ ತತೋ ಭಾವಯಿಷ್ಯಧ್ವಮೇಷಾ ವೋ ಭಾವನಾ ಮಮ ॥

ಪ್ರವೃತ್ತಿಕರ್ಮಫಲಗಳಿಂದ ಕೂಡಿರುವ ಯಾವ ಯಜ್ಞಕರ್ಮಗಳು ಲೋಕದಲ್ಲಿ ಪ್ರಚುರಗೊಳ್ಳುವುವೋ–ಆ ಯಜ್ಞಕರ್ಮಗಳಿಂದ ಲಭ್ಯವಾಗುವ ಯಜ್ಞಭಾಗಗಳಿಂದ ನೀವು ಬಲದ ವೃದ್ಧಿಯನ್ನು ಪಡೆದು ಬಲದಿಂದಲೇ ಲೋಕಗಳನ್ನು ಧಾರಣೆಮಾಡುವಿರಿ. ಮಾನವರು ಮಾಡುವ ಸರ್ವಯಜ್ಞಗಳಲ್ಲಿಯೂ ನೀವು ಸಂಭಾವಿತರಾಗಿ ಯಜ್ಞಭಾಗವನ್ನು ಪಡೆದು ಸಂತುಷ್ಟರಾಗುವಿರಿ. ಅನಂತರ ನೀವು ನನ್ನನ್ನು ವೈಷ್ಣವಯಜ್ಞದ ಮೂಲಕವಾಗಿ ಪರಿತುಷ್ಟನನ್ನಾಗಿ ಮಾಡಿರಿ. ಇದು ನಾನು ನಿಮಗೆ ಮಾಡುವ ಉಪದೇಶವಾಗಿದೆ.

ಇತ್ಯರ್ಥಂ ನಿರ್ಮಿತಾ ವೇದಾ ಯಜ್ಞಾಶ್ಚೌಷಧಿಭಿಃ ಸಹ ।
ಏಭಿಃ ಸಮ್ಯಕ್ಪ್ರಯುಕ್ತೈರ್ಹಿ ಪ್ರೀಯನ್ತೇ ದೇವತಾಃ ಕ್ಷಿತೌ ॥೬೬॥

ನಿರ್ಮಾಣಮೇತದ್ಯುಷ್ಮಾಕಂ ಪ್ರವೃತ್ತಿಗುಣಕಲ್ಪಿತಮ್ ।
ಮಯಾ ಕೃತಂ ಸುರಶ್ರೇಷ್ಠಾ ಯಾವತ್ಕಲ್ಪಕ್ಷಯಾದಿಹ ॥೬೭॥

ಚಿನ್ತಯಧ್ವಂ ಲೋಕಹಿತಂ ಯಥಾಧೀಕಾರಮೀಶ್ವರಾಃ ॥೬೮॥

ಈ ಕಾರಣದಿಂದಲೇ ನಾನು ವೇದಗಳನ್ನೂ ಓಷಧಿಗಳಿಂದ ಯುಕ್ತ

ವಾದ ಯಜ್ಞಗಳನ್ನೂ ಸೃಷ್ಟಿಸಿದೆನು. ಈ ಯಜ್ಞಗಳನ್ನು ಭೂಮಿಯಲ್ಲಿ ಶ್ರದ್ಧೆಯಿಂದ ಅನುಷ್ಠಾನಮಾಡುವುದರಿಂದ ದೇವತೆಗಳೆಲ್ಲರೂ ಸುಪ್ರೀತ ರಾಗುತ್ತಾರೆ. ಲೋಕಾಧೀಶ್ವರರೇ! ಪ್ರವೃತ್ತಿಗುಣಗಳಿಂದ ಕಲ್ಪಿತವಾದ ಯಜ್ಞಾದಿಗಳು ನಿಮ್ಮ ಸಲುವಾಗಿಯೇ ನನ್ನಿಂದ ನಿರ್ಮಿಸಲ್ಪಟ್ಟಿವೆ. ಕಲ್ಪಾಂತ ದವರೆಗೂ ನೀವು ನಿಮ್ಮ-ನಿಮ್ಮ ಅಧಿಕಾರಗಳಿಗೆ ಅನುಸಾರವಾಗಿ ಲೋಕ ಹಿತವನ್ನೇ ಚಿಂತಿಸುತ್ತಿರಿ.

ಮರೀಚಿರಙ್ಗಿರಾಶ್ಚಾತ್ರಿಃ ಪುಲಸ್ತ್ಯಃ ಪುಲಹಃ ಕ್ರತುಃ ।
ವಸಿಷ್ಠ ಇತಿ ಸಪ್ತೈತೇ ಮಾನಸಾ ನಿರ್ಮಿತಾ ಹಿ ತೇ ॥೬೯॥

ಏತೇ ವೇದವಿದೋ ಮುಖ್ಯಾ ವೇದಾಚಾರ್ಯಾಶ್ಚ ಕಲ್ಪಿತಾಃ ।
ಪ್ರವೃತ್ತಿಧರ್ಮಿಣಶ್ಚೈವ ಪ್ರಾಜಾಪತ್ಯೇ ಚ ಕಲ್ಪಿತಾಃ ॥೭೦॥

ದೇವತೆಗಳೇ! ಮರೀಚಿ, ಅಂಗಿರಸ, ಅತ್ರಿ, ಪುಲಸ್ತ್ಯ, ಪುಲಹ, ಕ್ರತು ಮತ್ತು ವಸಿಷ್ಠ –ಈ ಏಳು ಋಷಿಗಳೂ ಬ್ರಹ್ಮನ ಮಾನಸಪುತ್ರರು. ಇವರೆಲ್ಲರೂ ಪ್ರಮುಖರಾದ ವೇದವಿದ್ವಾಂಸರೂ, ಪ್ರವೃತ್ತಿಧರ್ಮಾವಲಂಬಿ ಗಳೂ, ವೇದಾಚಾರ್ಯರಾಗಿ ಮಾಡಲ್ಪಟ್ಟವರೂ, ಪ್ರಜಾಪತಿಯ ಸ್ಥಾನದಲ್ಲಿ ಪ್ರತಿಷ್ಠಿತರಾಗಿರುವವರೂ ಆಗಿದ್ದಾರೆ.

ಅಯಂ ಕ್ರಿಯಾವತಾಂ ಪನ್ಥಾ ವ್ಯಕ್ತೀಭೂತಃ ಸನಾತನಃ ।
ಅನಿರುದ್ಧ ಇತಿ ಪ್ರೋಕ್ತೋ ಲೋಕಸರ್ಗಕರಃ ಪ್ರಭುಃ ॥೭೧॥

ಸನಾತನವಾದ ಈ ಕರ್ಮಮಾರ್ಗವು ಕ್ರಿಯಾವಂತರಿಗಾಗಿಯೇ ಪ್ರಕಟವಾಗಿದೆ. ಕರ್ಮಮಾರ್ಗದ ಈ ಪದ್ಧತಿಯ ಪ್ರಕಾರ ಲೋಕಗಳನ್ನು ಸೃಷ್ಟಿಮಾಡುವ ಪ್ರಭಾವಶಾಲಿಯಾದ ಪುರುಷನನ್ನು ಅನಿರುದ್ಧನೆಂದು ಹೇಳುತ್ತಾರೆ.

ಸನಃ ಸನತ್ಸುಜಾತಶ್ಚ ಸನಕಃ ಸಸನನ್ದನಃ ।
ಸನತ್ಕುಮಾರಃ ಕಪಿಲಃ ಸಪ್ತಮಶ್ಚ ಸನಾತನಃ ॥೭೨॥

ಸಪ್ತೈತೇ ಮಾನಸಾಃ ಪ್ರೋಕ್ತಾ ಋಷಯೋ ಬ್ರಹ್ಮಣಃ ಸುತಾಃ ।
ಸ್ವಯಮಾಗತವಿಜ್ಞಾನಾ ನಿವೃತ್ತಿಂ ಧರ್ಮಮಾಸ್ಥಿತಾಃ ॥೭೩॥

ಸನ, ಸನತ್ಸುಜಾತ, ಸನಕ, ಸನಂದನ, ಸನತ್ಕುಮಾರ, ಕಪಿಲ ಮತ್ತು ಏಳನೆಯವನಾದ ಸನಾತನ–ಈ ಏಳು ಋಷಿಗಳೂ ಬ್ರಹ್ಮನ ಮಾನಸಪುತ್ರರೆಂದು ಹೇಳಲ್ಪಟ್ಟಿದ್ದಾರೆ. ಇವರು ಹುಟ್ಟುತ್ತಲೇ ವಿಜ್ಞಾನಿಗಳಾಗಿದ್ದರು. (ಜ್ಞಾನ-ವಿಜ್ಞಾನಗಳೆರಡನ್ನೂ ತಿಳಿದವರಾಗಿದ್ದರು.) ಆದುದರಿಂದಲೇ ನಿವೃತ್ತಿ ಧರ್ಮವನ್ನು ಆಶ್ರಯಿಸಿದರು.

ಏತೇ ಯೋಗವಿದೋ ಮುಖ್ಯಾಃ ಸಾಂಖ್ಯಜ್ಞಾನವಿಶಾರದಾಃ ।
ಆಚಾರ್ಯಾ ಧರ್ಮಶಾಸ್ತ್ರೇಷು ಮೋಕ್ಷಧರ್ಮಪ್ರವರ್ತಕಾಃ ॥೭೪॥

ಇವರೆಲ್ಲರೂ ಪ್ರಮುಖರಾದ ಯೋಗವಿದರು. ಸಾಂಖ್ಯಜ್ಞಾನವಿಶಾರದರು. ಧರ್ಮಶಾಸ್ತ್ರಗಳಿಗೆ ಆಚಾರ್ಯರು. ಮೋಕ್ಷಧರ್ಮಪ್ರವರ್ತಕರು.

ಯತೋಽಹಂ ಪ್ರಸೃತಃ ಪೂರ್ವಮವ್ಯಕ್ತಾತ್ತ್ರಿಗುಣೋ ಮಹಾನ್ ।
ತಸ್ಮಾತ್ಪರತರೋ ಯೋಽಸೌ ಕ್ಷೇತ್ರಜ್ಞ ಇತಿ ಕಲ್ಪಿತಃ ॥೭೫॥

ಹಿಂದೆ ಅವ್ಯಕ್ತಪ್ರಕೃತಿಯಿಂದ ತ್ರಿಗುಣಗಳು, ಮಹತ್ತು ಮತ್ತು ಅಹಂಕಾರಗಳು ಹುಟ್ಟಿದುವು. ಅಂತಹ ಅವ್ಯಕ್ತಪ್ರಕೃತಿಗಿಂತಲೂ ಶ್ರೇಷ್ಠತರನಾದವನೇ ಈ ಕ್ಷೇತ್ರಜ್ಞನು.

ಸೋಽಹಂ ಕ್ರಿಯಾವತಾಂ ಪನ್ಥಾಃ ಪುನರಾವೃತ್ತಿದುರ್ಲಭಃ ।
ಯೋ ಯಥಾ ನಿರ್ಮಿತೋ ಜನ್ತುರ್ಯಸ್ಮಿನ್ಯಸ್ಮಿಂಶ್ಚ ಕರ್ಮಣಿ ।
ಪ್ರವೃತ್ತೌ ವಾ ನಿವೃತ್ತೌ ವಾ ತತ್ಫಲಂ ಸೋಽಶ್ನುತೇ ಮಹತ್ ॥೭೬॥

ಅಂತಹ ಕ್ಷೇತ್ರಜ್ಞನಾಗಿರುವ ನಾನು ನಿವೃತ್ತಿಮಾರ್ಗರೂಪನಾಗಿದ್ದೇನೆ. ಪುನರಾವೃತ್ತಿಯನ್ನು ಹೊಂದುವ ಕರ್ಮಮಾರ್ಗಿಗಳಿಗೆ ದುರ್ಲಭನಾಗಿದ್ದೇನೆ. ಯಾವ ಮನುಷ್ಯನು ಯಾವ ರೀತಿಯಲ್ಲಿ ಪ್ರವೃತ್ತಿಕರ್ಮದಲ್ಲಿ ಅಥವಾ ನಿವೃತ್ತಿಕರ್ಮದಲ್ಲಿ ತೊಡಗುವನೋ–ಅಂತಹ ಮನುಷ್ಯನು ಆಯಾ ಕರ್ಮಕ್ಕೆ ಅನುಗುಣವಾಗಿ ಮಹಾಫಲವನ್ನು ಪಡೆದುಕೊಳ್ಳುತ್ತಾನೆ.

ಏಷ ಲೋಕಗುರುರ್ಬ್ರಹ್ಮಾ ಜಗದಾದಿಕರಃ ಪ್ರಭುಃ ॥೭೭॥

ಏಷ ಮಾತಾ ಪಿತಾ ಚೈವ ಯುಷ್ಮಾಕಂ ಚ ಪಿತಾಮಹಃ ।
ಮಯಾನುಶಿಷ್ಟೋ ಭವಿತಾ ಸರ್ವಭೂತವರಪ್ರದಃ ॥೭೮॥

ಲೋಕಗುರುವಾದ, ಜಗತ್ತಿನ ಸೃಷ್ಟಿಗೆ ಆದಿಕಾರಣನಾದ, ಪ್ರಭುವಾದ ಈ ಬ್ರಹ್ಮನು–ನಿಮ್ಮೆಲ್ಲರಿಗೂ ತಂದೆಯೂ, ತಾಯಿಯೂ, ಪಿತಾಮಹನೂ ಆಗಿದ್ದಾನೆ. ನನ್ನ ಆಜ್ಞಾನುಸಾರವಾಗಿ ಇವನು ಸಕಲಪ್ರಾಣಿಗಳಿಗೂ ವರಪ್ರದನಾಗುತ್ತಾನೆ.

ಅಸ್ಯ ಚೈವಾತ್ಮಜೋ ರುದ್ರೋ ಲಲಾಟಾದ್ಯಃ ಸಮುತ್ಥಿತಃ ।
ಬ್ರಹ್ಮಾನುಶಿಷ್ಟೋ ಭವಿತಾ ಸರ್ವಭೂತಧರಃ ಪ್ರಭುಃ ॥೭೯॥

ಬ್ರಹ್ಮನ ಹಣೆಯಿಂದ ಯಾವನು ಹುಟ್ಟಿದನೋ–ಅವನೇ ಬ್ರಹ್ಮಪುತ್ರನಾದ ರುದ್ರನು. ಬ್ರಹ್ಮನ ಆಜ್ಞೆಯಂತೆ ಪ್ರಭುವಾದ ರುದ್ರನು ಸರ್ವಪ್ರಾಣಿಗಳನ್ನೂ ರಕ್ಷಿಸುತ್ತಾನೆ.

ಗಚ್ಛಧ್ವಂ ಸ್ವಾನಧೀಕಾರಾಂಶ್ಚಿನ್ತಯಧ್ವಂ ಯಥಾವಿಧಿ ।
ಪ್ರವರ್ತನ್ತಾಂ ಕ್ರಿಯಾಃ ಸರ್ವಾಃ ಸರ್ವಲೋಕೇಷು ಮಾ ಚಿರಮ್ ॥

ನೀವಿನ್ನು ನಿಮ್ಮ ನಿಮ್ಮ ಸ್ಥಾನಗಳಿಗೆ ತೆರಳಿರಿ. ಯಥಾವಿಧಿಯಾಗಿ ನಿಮ್ಮ ನಿಮ್ಮ ಅಧಿಕಾರಗಳನ್ನು ಕುರಿತು ಚಿಂತಿಸಿರಿ. ಎಲ್ಲ ಲೋಕಗಳಲ್ಲಿಯೂ ಬಹಳ ಶೀಘ್ರವಾಗಿಯೇ ಎಲ್ಲ ವೈದಿಕಕ್ರಿಯೆಗಳೂ ಪ್ರಾರಂಭವಾಗಲಿ.

ಪ್ರಾದಿಶ್ಯನ್ತಾಂ ಚ ಕರ್ಮಾಣಿ ಪ್ರಾಣಿನಾಂ ಗತಯಸ್ತಥಾ ।
ಪರಿನಿಷ್ಠಿತಕಾಲಾನಿ ಆಯೂಂಷೀಹ ಸುರೋತ್ತಮಾಃ ॥೮೧॥

ಸುರಶ್ರೇಷ್ಠರೇ! ನೀವು ಪ್ರಾಣಿಗಳಿಗೆ ಕರ್ಮಗಳನ್ನು ವಿಧಾಯಕ ಮಾಡಿರಿ. ಅವರು ಮಾಡಿದ ಕರ್ಮಗಳಿಗೆ ಅನುಸಾರವಾಗಿ ಅವರಿಗೆ ಗತಿಗಳನ್ನು ದಯಪಾಲಿಸಿರಿ. ಪೂರ್ಣಕಾಲದವರೆಗಿನ ಆಯುಷ್ಯವನ್ನು ಅವರಿಗೆ ದಯಪಾಲಿಸಿರಿ.

ಇದಂ ಕೃತಯುಗಂ ನಾಮ ಕಾಲಃ ಶ್ರೇಷ್ಠಃ ಪ್ರವರ್ತಿತಃ ।
ಅಹಿಂಸ್ಯಾ ಯಜ್ಞಪಶವೋ ಯುಗೇಽಸ್ಮಿನ್ನ ತದನ್ಯಥಾ ॥೮೨॥

ಈಗ ಕೃತಯುಗವೆಂಬ ಶ್ರೇಷ್ಠವಾದ ಕಾಲವು ನಡೆಯುತ್ತಿದೆ. ಈ ಯುಗದಲ್ಲಿ ಯಜ್ಞಗಳಲ್ಲಿ ಪಶುಗಳನ್ನು ಹಿಂಸೆಮಾಡುವಂತಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಆಗುವುದೇ ಇಲ್ಲ. (ಅಹಿಂಸಾಧರ್ಮಕ್ಕೆ ವಿಪರೀತವಾಗಿ ಯಾವುದೇ ಕಾರ್ಯವೂ ಈ ಯುಗದಲ್ಲಿ ನಡೆಯುವುದಿಲ್ಲ.)

ಚತುಷ್ಪಾತ್ಸಕಲೋ ಧರ್ಮೋ ಭವಿಷ್ಯತ್ಯತ್ರ ವೈ ಸುರಾಃ ।
ತತಸ್ತ್ರೇತಾಯುಗಂ ನಾಮ ತ್ರಯೀ ಯತ್ರ ಭವಿಷ್ಯತಿ ॥೮೩॥

ಈ ಕೃತಯುಗದಲ್ಲಿ ನಾಲ್ಕು ಪಾದಗಳಿಂದ ಕೂಡಿದ ಸಂಪೂರ್ಣ ಧರ್ಮವಿರುತ್ತದೆ. ಕೃತಯುಗವು ಕಳೆದನಂತರ ತ್ರೇತಾಯುಗವು ಬರುತ್ತದೆ. ಆ ಯುಗದಲ್ಲಿ ತ್ರಯೀಧರ್ಮ (ವೇದಧರ್ಮ) ವಿರುತ್ತದೆ. (ಧರ್ಮವು ಮೂರು ಪಾದಗಳಿಂದ ಕೂಡಿರುತ್ತದೆ.)

ಪ್ರೋಕ್ಷಿತಾ ಯತ್ರ ಪಶವೋ ವಧಂ ಪ್ರಾಪ್ಸ್ಯನ್ತಿ ವೈ ಮಖೇ ।
ಯತ್ರ ಪಾದಶ್ಚತುರ್ಥೋ ವೈ ಧರ್ಮಸ್ಯ ನ ಭವಿಷ್ಯತಿ ॥೮೪॥

ಆ ಯುಗದಲ್ಲಿ ಮಂತ್ರದಿಂದ ಸಂಪ್ರೋಕ್ಷಿತವಾದ (ಪವಿತ್ರೀಕೃತವಾದ) ಪಶುಗಳು ಯಜ್ಞಗಳಲ್ಲಿ ವಧಿಸಲ್ಪಡುತ್ತವೆ ಮತ್ತು ಧರ್ಮದ ನಾಲ್ಕನೆಯ ಒಂದು ಭಾಗವು ಲೋಪವಾಗುತ್ತದೆ.

ತತೋ ವೈ ದ್ವಾಪರಂ ನಾಮ ಮಿಶ್ರಃ ಕಾಲೋ ಭವಿಷ್ಯತಿ ।
ದ್ವಿಪಾದಹೀನೋ ಧರ್ಮಶ್ಚ ಯುಗೇ ತಸ್ಮಿನ್ಭವಿಷ್ಯತಿ ॥೮೫॥

ತ್ರೇತಾಯುಗದ ನಂತರ ದ್ವಾಪರಯುಗವು ಬರುತ್ತದೆ. ಆ ಯುಗವು ಧರ್ಮಾಧರ್ಮಗಳ ಸಮ್ಮಿಶ್ರದಿಂದ ಯುಕ್ತವಾಗಿರುತ್ತದೆ. ಆ ಯುಗದಲ್ಲಿ ಧರ್ಮವು ಎರಡು ಪಾದಗಳಿಂದ ನ್ಯೂನವಾಗಿರುತ್ತದೆ.

ತತಸ್ತಿಷ್ಯೇಽಥ ಸಮ್ಪ್ರಾಪ್ತೇ ಯುಗೇ ಕಲಿಪುರಸ್ಕೃತೇ ।
ಏಕಪಾದಸ್ಥಿತೋ ಧರ್ಮೋ ಯತ್ರ ತತ್ರ ಭವಿಷ್ಯತಿ ॥೮೬॥

ದ್ವಾಪರಯುಗವು ಕಳೆದನಂತರ ಪುಷ್ಯನಕ್ಷತ್ರದಲ್ಲಿ ಕಲಿಯುಗವು ಪ್ರಾರಂಭವಾಗುತ್ತದೆ. ಆ ಕಲಿಯುಗದಲ್ಲಿ ಧರ್ಮದ ಒಂದು ಪಾದಮಾತ್ರ ಅಲ್ಲಲ್ಲಿರುತ್ತದೆ.”

ಶ್ರೀಮನ್ನಾರಾಯಣನು ಹೇಳಿದ ಮಾತನ್ನು ಕೇಳಿ ದೇವತೆಗಳೂ ಮತ್ತು ದೇವರ್ಷಿಗಳೂ ಗುರುವಾದ ನಾರಾಯಣನನ್ನು ಪುನಃ ಪ್ರಶ್ನಿಸಿದರು :

ಏಕಪಾದಸ್ಥಿತೇ ಧರ್ಮೇ ಯತ್ರ ಕ್ವಚನ ಗಾಮಿನಿ ।
ಕಥಂ ಕರ್ತವ್ಯಮಸ್ಮಾಭಿರ್ಭಗವಂಸ್ತದ್ವದಸ್ವ ನಃ ॥೮೭॥

"ದೇವದೇವ! ಕಲಿಯುಗದಲ್ಲಿ ಧರ್ಮದ ಒಂದೇ ಪಾದವು ಎಲ್ಲಿಯೋ ಕೆಲವೆಡೆಗಳಲ್ಲಿ ಇರುತ್ತಿರಲಾಗಿ ಆ ಸಮಯದಲ್ಲಿ ನಾವೇನು ಮಾಡಬೇಕು?–ಎಂಬುದನ್ನು ಹೇಳು."

ಭಗವಂತನು ಹೇಳುತ್ತಾನೆ :

ಯತ್ರ ವೇದಾಶ್ಚ ಯಜ್ಞಾಶ್ಚ ತಪಃ ಸತ್ಯಂ ದಮಸ್ತಥಾ ।
ಅಹಿಂಸಾಧರ್ಮಸಂಯುಕ್ತಾಃ ಪ್ರಚರೇಯುಃ ಸುರೋತ್ತಮಾಃ ।
ಸ ವೋ ದೇಶಃ ಸೇವಿತವ್ಯೋ ಮಾ ವೋಽಧರ್ಮಃ ಪದಾ ಸ್ಪೃಶೇತ್ ॥

"ಸುರಶ್ರೇಷ್ಠರೇ! ಯಾವ ದೇಶದಲ್ಲಿ ವೇದ, ಯಜ್ಞ, ತಪಸ್ಸು, ಸತ್ಯ, ಇಂದ್ರಿಯಸಂಯಮ ಮತ್ತು ಅಹಿಂಸಾಧರ್ಮಗಳು ಪ್ರಚಲಿತವಾಗಿರುವುವೋ–ಆ ದೇಶವನ್ನೇ ನೀವು ಆಶ್ರಯಿಸಿರಿ. ನಿಮ್ಮನ್ನು ಅಧರ್ಮವು ಕಾಲಿನಿಂದಲೂ ಮುಟ್ಟದಿರಲಿ."

ವ್ಯಾಸರು ಹೇಳುತ್ತಾರೆ :

"ಶಿಷ್ಯಶ್ರೇಷ್ಠರೇ! ಭಗವಂತನಾದ ಶ್ರೀಮನ್ನಾರಾಯಣನಿಂದ ಹೀಗೆ ಉಪದಿಷ್ಟರಾದ ದೇವತೆಗಳು–ಋಷಿಗಳೊಡನೆ ಪರಮಾತ್ಮನಿಗೆ ನಮಸ್ಕರಿಸಿ ತಮಗೆ ಇಷ್ಟವಾದ ಸ್ಥಳಗಳಿಗೆ ಹೊರಟುಹೋದರು. ಸ್ವರ್ಗದ ದೇವತೆಗಳೆಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದನಂತರ ಬ್ರಹ್ಮನೊಬ್ಬನೇ ಅಲ್ಲುಳಿದನು. ಬ್ರಹ್ಮನಿಗೆ ಅನಿರುದ್ಧನ ರೂಪದಲ್ಲಿದ್ದ ಭಗವಂತನನ್ನು ಸಂದರ್ಶಿಸಬೇಕೆಂಬ ಇಚ್ಛೆಯಿದ್ದಿತು. ಆ ಸಮಯದಲ್ಲಿ ಭಗವಂತನು ಬೃಹತ್ತಾದ ಹಯಗ್ರೀವರೂಪವನ್ನು ಧರಿಸಿ ಬ್ರಹ್ಮನಿಗೆ ದರ್ಶನವನ್ನಿತ್ತನು. ಕಮಂಡಲು-ತ್ರಿದಂಡಗಳನ್ನು ಧರಿಸಿದ್ದ ದೇವದೇವನು ಷಡಂಗಗಳಿಂದ

ಯುಕ್ತವಾದ ಸಮಸ್ತವೇದಗಳನ್ನೂ ಆಲೋಡನೆಮಾಡುತ್ತಿದ್ದನು. ಲೋಕ ಕರ್ತೃವಾದ, ಪ್ರಭುವಾದ ಬ್ರಹ್ಮನು ಮಹಾತೇಜಸ್ವಿಯಾದ ಹಯಗ್ರೀವ ದೇವನನ್ನು ನೋಡಿ ಲೋಕಗಳಿಗೆ ಹಿತವನ್ನುಂಟುಮಾಡುವ ಇಚ್ಛೆಯಿಂದ ವರದನಾದ ಹಯಗ್ರೀವನಿಗೆ ತಲೆಬಾಗಿ ನಮಸ್ಕರಿಸಿ ಬದ್ಧಾಂಜಲಿಯಾಗಿ ಅವನ ಮುಂದೆ ನಿಂತುಕೊಂಡನು. ಹಯಗ್ರೀವಸ್ವಾಮಿಯು ಬ್ರಹ್ಮನನ್ನು ಆದರದಿಂದ ಆಲಿಂಗಿಸಿಕೊಂಡು ಸಂತೈಸುತ್ತಾ ಹೇಳಿದನು :

ಲೋಕಕಾರ್ಯಗತೀಃ ಸರ್ವಾಸ್ತ್ವಂ ಚಿನ್ತಯ ಯಥಾವಿಧಿ ।
ಧಾತಾ ತ್ವಂ ಸರ್ವಭೂತಾನಾಂ ತ್ವಂ ಪ್ರಭುರ್ಜಗತೋ ಗುರುಃ ॥೯೫॥

“ಬ್ರಹ್ಮದೇವ! ನೀನು ಎಲ್ಲ ಲೋಕಗಳ ಸಮಸ್ತಕರ್ಮಗಳನ್ನೂ ಮತ್ತು ಆ ಕರ್ಮಗಳ ಅನುಷ್ಠಾನದಿಂದ ಪ್ರಾಪ್ತವಾಗುವ ಗತಿಯನ್ನೂ ವಿಧಿ ಪೂರ್ವಕವಾಗಿ ಚಿಂತಿಸು. ನೀನು ಸಮಸ್ತಪ್ರಾಣಿಗಳಿಗೂ ಪಾಲಕನಾಗಿರುವೆ. ಪ್ರಭುವಾಗಿರುವೆ. ಜಗತ್ತಿಗೇ ಗುರುವಾಗಿರುವೆ.

ತ್ವಯ್ಯಾವೇಶಿತ ಭಾರೋಽಹಂ ಧೃತಿಂ ಪ್ರಾಪ್ಸ್ಯಾಮ್ಯಥಾಞ್ಜಸಾ ।
ಯದಾ ಚ ಸುರಕಾರ್ಯಂ ತೇ ಅವಿಷಹ್ಯಂ ಭವಿಷ್ಯತಿ ॥೯೬॥

ಪ್ರಾದುರ್ಭಾವಂ ಗಮಿಷ್ಯಾಮಿ ತದಾತ್ಮಜ್ಞಾನದೈಶಿಕಃ ।
ಏವಮುಕ್ತ್ವಾ ಹಯಶಿರಾಸ್ತತ್ರೈವಾನ್ತರಧೀಯತ ॥೯೭॥

ನಿನ್ನ ಮೇಲೆ ಈ ಪ್ರಪಂಚದ ರಕ್ಷಣಾಭಾರವನ್ನು ವಹಿಸಿ ನಾನು ಶೀಘ್ರವಾಗಿ ನಿಶ್ಚಿಂತನಾಗುತ್ತೇನೆ. ಯಾವಾಗ ನಿನಗೆ ದೇವತೆಗಳ ಕಾರ್ಯವು ಅಸಾಧ್ಯವಾಗಿ ಕಾಣುವುದೋ–ಆಗ ನಾನು ಆತ್ಮಜ್ಞಾನದ ಉಪದೇಶವನ್ನು ಮಾಡುವ ಸಲುವಾಗಿ ನಿನ್ನ ಮುಂದೆ ಪ್ರಾದುರ್ಭವಿಸುತ್ತೇನೆ.”

ಹಯಗ್ರೀವನು ಬ್ರಹ್ಮನಿಗೆ ಹೀಗೆ ಹೇಳಿ ಅಲ್ಲಿಯೇ ಅದೃಶ್ಯನಾದನು. ಪರಮಾತ್ಮನಿಂದ ಅನುಜ್ಞೆಯನ್ನು ಪಡೆದ ಬ್ರಹ್ಮನೂ ಒಡನೆಯೇ ತನ್ನ ಲೋಕಕ್ಕೆ ಹೊರಟುಹೋದನು.

ಏವಮೇಷ ಮಹಾಭಾಗಃ ಪದ್ಮನಾಭಃ ಸನಾತನಃ ।
ಯಜ್ಞೇಷ್ವಗ್ರಹರಃ ಪ್ರೋಕ್ತೋ ಯಜ್ಞಧಾರೀ ಚ ನಿತ್ಯದಾ ॥೯೮॥

ನಿವೃತ್ತಿಂ ಚಾಸ್ಥಿತೋ ಧರ್ಮಂ ಗತಿಮಕ್ಷಯಧರ್ಮಿಣಾಮ್ ।
ಪ್ರವೃತ್ತಿಧರ್ಮಾನ್ವಿದಧೇ ಕೃತ್ವಾ ಲೋಕಸ್ಯ ಚಿತ್ರತಾಮ್ ॥೯೯॥

ಹೀಗೆ ಮಹಾಭಾಗ್ಯಶಾಲಿಯಾದ, ಸನಾತನಪುರುಷನಾದ ಭಗವಾನ್ ಪದ್ಮನಾಭನು ಯಜ್ಞಗಳಲ್ಲಿ ಮೊದಲನೆಯ ಹವಿರ್ಭಾಗವನ್ನು ಪಡೆಯತಕ್ಕವ ನೆಂದೂ, ಸದಾ ಯಜ್ಞಪೋಷಕನೆಂದೂ ಪ್ರವರ್ತಕನೆಂದೂ ಹೇಳಲ್ಪಟ್ಟಿದ್ದಾನೆ. ಅವನು ನಿವೃತ್ತಿಧರ್ಮವನ್ನು ಆಶ್ರಯಿಸಿರತಕ್ಕವನು. ಅಕ್ಷಯಧರ್ಮಿಗಳಾದ (ಮೋಕ್ಷಧರ್ಮಿಗಳಾದ) ಮಹಾತ್ಮರಿಗೆ ಸದ್ಗತಿಯನ್ನು ಕೊಡತಕ್ಕವನು. ಲೋಕಕ್ಕೆ ವಿಚಿತ್ರವಾದ ಚಿತ್ತವೃತ್ತಿಯನ್ನುಂಟುಮಾಡಿ ಅದಕ್ಕೆ ಅನುಸಾರವಾಗಿ ಪ್ರವೃತ್ತಿಧರ್ಮಗಳನ್ನು ರೂಪಿಸಿರುವನು.

ಸ ಆದಿಃ ಸ ಮಧ್ಯಃ ಸ ಚಾನ್ತಃ ಪ್ರಜಾನಾಂ
ಸ ಧಾತಾ ಸ ಧೇಯಂ ಸ ಕರ್ತಾ ಸ ಕಾರ್ಯಮ್ ।
ಯುಗಾನ್ತೇ ಪ್ರಸುಪ್ತಃ ಸುಸಂಕ್ಷಿಪ್ಯ ಲೋಕಾ -
ನ್ಯುಗಾದೌ ಪ್ರಬುದ್ಧೋ ಜಗದ್ಧ್ಯುತ್ಸಸರ್ಜ ॥೧೦೦॥

ಭಗವಂತನಾದ ಆ ಶ್ರೀಮನ್ನಾರಾಯಣನು ಪ್ರಜೆಗಳ ಆದಿಯೂ (ಸೃಷ್ಟಿ ಕರ್ತನೂ), ಮಧ್ಯವೂ (ರಕ್ಷಕನೂ), ಅಂತವೂ (ಸಂಹಾರಕನೂ) ಆಗಿದ್ದಾನೆ. ಪ್ರಜೆಗಳನ್ನು ಧರಿಸುವವನೂ, ಪೋಷಿಸುವವನೂ, ಕರ್ತೃವೂ ಮತ್ತು ಕಾರ್ಯವೂ ಅವನೇ ಆಗಿದ್ದಾನೆ. ಯುಗದ ಕಡೆಯಲ್ಲಿ ಲೋಕಗಳೆಲ್ಲವನ್ನೂ ತನ್ನಲ್ಲಿಯೇ ಸಂಕ್ಷೇಪಿಸಿಕೊಂಡು ಮಲಗುತ್ತಾನೆ. ಯುಗದ ಆದಿಯಲ್ಲಿ ಎಚ್ಚರಗೊಂಡು ತನ್ನಲ್ಲಿರುವ ಸೂಕ್ಷ್ಮರೂಪದ ಜಗತ್ತನ್ನು ಪುನಃ ಹೊರ ಹೊಮ್ಮಿಸುತ್ತಾನೆ.

ತಸ್ಮೈ ನಮಧ್ವಂ ದೇವಾಯ ನಿರ್ಗುಣಾಯ ಮಹಾತ್ಮನೇ ।
ಅಜಾಯ ವಿಶ್ವರೂಪಾಯ ಧಾಮ್ನೇ ಸರ್ವದಿವೌಕಸಾಮ್ ॥೧೦೧॥

ಶಿಷ್ಯೋತ್ತಮರೇ! ನೀವೆಲ್ಲರೂ ಹುಟ್ಟಿಲ್ಲದ, ನಿರ್ಗುಣನಾದ, ವಿಶ್ವ ರೂಪನಾದ, ಸರ್ವದೇವತೆಗಳಿಗೂ ಆಶ್ರಯನಾದ, ಮಹಾತ್ಮನಾದ ಶ್ರೀಮನ್ನಾರಾಯಣನಿಗೆ ನಮಸ್ಕಾರಮಾಡಿರಿ.

ಮಹಾಭೂತಾಧಿಪತಯೇ ರುದ್ರಾಣಾಂ ಪತಯೇ ತಥಾ ।
ಆದಿತ್ಯಪತಯೇ ಚೈವ ವಸೂನಾಂ ಪತಯೇ ತಥಾ ॥೧೦೨॥

ಮಹಾಭೂತಗಳಿಗೂ ಅಧಿಪತಿಯಾದ, ಏಕಾದಶರುದ್ರರಿಗೂ ಒಡೆಯ ನಾದ, ದ್ವಾದಶಾದಿತ್ಯರಿಗೂ ಸ್ವಾಮಿಯಾದ, ಅಷ್ಟವಸುಗಳಿಗೂ ಈಶ್ವರನಾದ ಶ್ರೀಮನ್ನಾರಾಯಣನಿಗೆ ನಮಸ್ಕಾರಮಾಡಿರಿ.

ಅಶ್ವಿಭ್ಯಾಂ ಪತಯೇ ಚೈವ ಮರುತಾಂ ಪತಯೇ ತಥಾ ।
ವೇದಯಜ್ಞಾಧಿಪತಯೇ ವೇದಾಙ್ಗಪತಯೇಽಪಿ ಚ ॥೧೦೩॥

ಅಶ್ವಿನೀದೇವತೆಗಳ ಒಡೆಯನಾದ, ಮರುತ್ತುಗಳ ಸ್ವಾಮಿಯಾದ, ವೇದಗಳಿಗೂ–ಯಜ್ಞಗಳಿಗೂ ಅಧಿಪತಿಯಾದ, ವೇದಾಂಗಗಳಿಗೂ ಒಡೆಯ ನಾದ ಶ್ರೀಮನ್ನಾರಾಯಣನಿಗೆ ನಮಸ್ಕಾರಮಾಡಿರಿ.

ಸಮುದ್ರವಾಸಿನೇ ನಿತ್ಯಂ ಹರಯೇ ಮುಞ್ಜಕೇಶಿನೇ ।
ಶಾನ್ತಾಯ ಸರ್ವಭೂತಾನಾಂ ಮೋಕ್ಷಧರ್ಮಾನುಭಾಷಿಣೇ ॥೧೦೪॥

ಸದಾ ಸಮುದ್ರವಾಸಿಯಾದ, ಮುಂಜದ ಹುಲ್ಲಿಗೆ (ನೊಜೆಯ ಹುಲ್ಲಿಗೆ) ಸಮಾನವಾದ ತಲೆಗೂದಲನ್ನು ಹೊಂದಿರುವ, ಸಕಲಪ್ರಾಣಿಗಳಿಗೂ ಮೋಕ್ಷಧರ್ಮೋಪದೇಶಕನಾದ, ಶಾಂತಸ್ವರೂಪನಾದ ಶ್ರೀಹರಿಗೆ ನಮಸ್ಕರಿಸಿರಿ.

ತಪಸಾಂ ತೇಜಸಾಂ ಚೈವ ಪತಯೇ ಯಶಸಾಮಪಿ ।
ವಚಸಾಂ ಪತಯೇ ನಿತ್ಯಂ ಸರಿತಾಂ ಪತಯೇ ತಥಾ ॥೧೦೫॥

ತಪಸ್ಸುಗಳಿಗೆ ಒಡೆಯನಾದ, ಸೂರ್ಯ-ಚಂದ್ರಾದಿ ತೇಜಸ್ಸುಗಳಿಗೆ ಸ್ವಾಮಿಯಾದ, ಸಕಲವಿಧವಾದ ಯಶಸ್ಸುಗಳಿಗೂ ಪತಿಯಾದ, ವಾಕ್ಪತಿಯಾದ, ಸರಿತ್ಪತಿಯಾದ ಶ್ರೀಮನ್ನಾರಾಯಣನಿಗೆ ನಿತ್ಯವೂ ನಮಸ್ಕಾರ ಮಾಡಿರಿ.

ಕಪರ್ದಿನೇ ವರಾಹಾಯ ಏಕಶೃಙ್ಗಾಯ ಧೀಮತೇ ।
ವಿವಸ್ವತೇಽಶ್ವಶಿರಸೇ ಚತುರ್ಮೂರ್ತಿಧೃತೇ ಸದಾ ।
ಗುಹ್ಯಾಯ ಜ್ಞಾನದೃಶ್ಯಾಯ ಅಕ್ಷರಾಯ ಕ್ಷರಾಯ ಚ ॥೧೦೬॥

ಜಟಾಜೂಟಧಾರಿಯಾದ, ಏಕಶೃಂಗವರಾಹಸ್ವರೂಪನಾದ, ಧೀಮಂತನಾದ, ಸೂರ್ಯಸ್ವರೂಪನಾದ, ಹಯಗ್ರೀವಸ್ವರೂಪನಾದ, ಚತುರ್ಮೂರ್ತಿಗಳನ್ನು ಧರಿಸಿರುವ, ಗುಹ್ಯರೂಪನಾದ, ಜ್ಞಾನದೃಷ್ಟಿಯಿಂದ ಕಾಣಲ್ಪಡುವ, ಅವಿನಾಶಿಯೂ–ಕ್ಷರರೂಪನೂ ಆದ ಶ್ರೀಮನ್ನಾರಾಯಣನಿಗೆ ಸರ್ವಕಾಲದಲ್ಲಿಯೂ ನಮಸ್ಕಾರಮಾಡಿರಿ.

ಅವಿನಾಶಿಯಾದ ಶ್ರೀಮನ್ನಾರಾಯಣನು ಸರ್ವತ್ರ ಗತಿಯುಳ್ಳವನು. ಆದುದರಿಂದಲೇ ಎಲ್ಲೆಲ್ಲಿಯೂ ಸಂಚರಿಸುತ್ತಿರುತ್ತಾನೆ. ಜ್ಞಾನದೃಷ್ಟಿಯಿಂದ ತಿಳಿಯಲ್ಪಡತಕ್ಕ ಪರಬ್ರಹ್ಮನೂ ಅವನೇ ಆಗಿದ್ದಾನೆ. ಹಿಂದೆ ನಾನು ಜ್ಞಾನದೃಷ್ಟಿಯಿಂದಲೇ ಅವನನ್ನು ಸಾಕ್ಷಾತ್ಕರಿಸಿದೆನು.

ಶಿಷ್ಯೋತ್ತಮರೇ! ನೀವು ಕೇಳಿದ ಪ್ರಶ್ನೆಗೆ ಅನುಗುಣವಾಗಿ ಎಲ್ಲ ವಿಷಯಗಳನ್ನೂ ನಿಮಗೆ ಯಥಾವತ್ತಾಗಿ ಹೇಳಿದ್ದೇನೆ.

ಕ್ರಿಯತಾಂ ಮದ್ವಚಃ ಶಿಷ್ಯಾಃ ಸೇವ್ಯತಾಂ ಹರಿರೀಶ್ವರಃ ।
ಗೀಯತಾಂ ವೇದಶಬ್ದೈಶ್ಚ ಪೂಜ್ಯತಾಂ ಚ ಯಥಾವಿಧಿ ॥೧೧೯॥

ಶಿಷ್ಯರೇ! ನನ್ನ ಮಾತನ್ನು ಕೇಳಿರಿ. ಸರ್ವೇಶ್ವರನಾದ ಶ್ರೀಹರಿಯನ್ನು ಸೇವಿಸಿರಿ. ವೇದಮಂತ್ರಗಳ ಮೂಲಕವಾಗಿ ಅವನ ಮಹಿಮೆಯನ್ನು ಗಾನಮಾಡಿರಿ. ಅವನನ್ನು ಯಥಾವಿಧಿಯಾಗಿ ಸಂಪೂಜಿಸಿರಿ.”

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ಹೀಗೆ ಧೀಮಂತರಾದ ವೇದವ್ಯಾಸರು ತಮ್ಮ ನಾಲ್ವರು ಶಿಷ್ಯರಿಗೂ–ಪರಮಧಾರ್ಮಿಕನಾದ ತಮ್ಮ ಪುತ್ರ ಶುಕನಿಗೂ ಈ ದೇವರಹಸ್ಯವನ್ನು ಹೇಳಿದರು. ಅನಂತರ ನಮ್ಮ ಆಚಾರ್ಯರಾದ ವೇದವ್ಯಾಸರು ನಮ್ಮೊಡನೆ ಸೇರಿಕೊಂಡು ನಾಲ್ಕು ವೇದಗಳಲ್ಲಿಯೂ ಇರುವ ಋಕ್ಕುಗಳ ಮೂಲಕ ಶ್ರೀಮನ್ನಾರಾಯಣನನ್ನು ಸ್ತೋತ್ರಮಾಡಿದರು.

ಜನಮೇಜಯ! ನೀನು ಕೇಳಿದ ಪ್ರಶ್ನೆಗೆ ಅನುಗುಣವಾಗಿ ನಿನಗೆ ನಾನು ಎಲ್ಲ ವಿಷಯಗಳನ್ನೂ ಹೇಳಿದ್ದೇನೆ. ಗುರುಗಳಾದ ಕೃಷ್ಣದ್ವೈಪಾಯನವ್ಯಾಸರು ಹಿಂದೆ ನನಗೆ ಹೀಗೆ ಹೇಳಿದ್ದರು :

ಯಶ್ಚೇದಂ ಶೃಣುಯಾನ್ನಿತ್ಯಂ ಯಶ್ಚೈನಂ ಪರಿಕೀರ್ತಯೇತ್ ।
ನಮೋ ಭಗವತೇ ಕೃತ್ವಾ ಸಮಾಹಿತಮತಿರ್ನರಃ ॥೧೧೩॥

ಭವತ್ಯರೋಗೋ ಮತಿಮಾನ್ಬಲರೂಪಸಮನ್ವಿತಃ ।
ಆತುರೋ ಮುಚ್ಯತೇ ರೋಗಾದ್ಬದ್ಧೋ ಮುಚ್ಯೇತ ಬನ್ಧನಾತ್ ॥

ಯಾವನು ಪ್ರತಿನಿತ್ಯವೂ ಈ ಉಪಾಖ್ಯಾನವನ್ನು ಕೇಳುವನೋ, ಭಗವಂತನಿಗೆ ನಮಸ್ಕಾರಮಾಡಿ ಏಕಾಗ್ರಚಿತ್ತನಾಗಿ ಈ ಉಪಾಖ್ಯಾನವನ್ನು ಪಠಿಸುವನೋ–ಅಂತಹವನು ನೀರೋಗದೃಢಕಾಯನಾಗುತ್ತಾನೆ ; ಬಲ ರೂಪಸಂಪನ್ನನಾಗುತ್ತಾನೆ ; ಬುದ್ಧಿವಂತನಾಗುತ್ತಾನೆ. ರೋಗಿಯು ರೋಗ ರಹಿತನಾಗುತ್ತಾನೆ. ಬಂದಿಯಾಗಿರುವವನು ಬಂಧನದಿಂದ ಬಿಡುಗಡೆ ಹೊಂದುತ್ತಾನೆ.

ಕಾಮಾನ್ಕಾಮೀ ಲಭೇತ್ಕಾಮಂ ದೀರ್ಘಂ ಚಾಯುರವಾಪ್ನುಯಾತ್ ।
ಬ್ರಾಹ್ಮಣಃ ಸರ್ವವೇದೀ ಸ್ಯಾತ್ಕ್ಷತ್ರಿಯೋ ವಿಜಯೀ ಭವೇತ್ ॥

ಕಾಮನೆಗಳಿಂದ ಕೂಡಿರುವ ಪುರುಷನು ಮನೋವಾಂಛಿತವಾದ ಸಕಲಕಾಮನೆಗಳನ್ನೂ ಪಡೆದುಕೊಳ್ಳುತ್ತಾನೆ. ದೀರ್ಘಾಯುಷ್ಯವನ್ನೂ ಪಡೆಯುತ್ತಾನೆ. ಬ್ರಾಹ್ಮಣನು ಸರ್ವವೇದಗಳ ಜ್ಞಾನವನ್ನೂ ಪಡೆಯುತ್ತಾನೆ. ಕ್ಷತ್ರಿಯನು ವಿಜಯಿಯಾಗುತ್ತಾನೆ.

ವೈಶ್ಯೋ ವಿಪುಲಲಾಭಃ ಸ್ಯಾಚ್ಛೂದ್ರಃ ಸುಖಮವಾಪ್ನುಯಾತ್ ।
ಅಪುತ್ರೋ ಲಭತೇ ಪುತ್ರಂ ಕನ್ಯಾ ಚೈವೇಪ್ಸಿತಂ ಪತಿಮ್ ॥೧೧೬॥

ಈ ಉಪಾಖ್ಯಾನವನ್ನು ಕೇಳುವುದರಿಂದ ವೈಶ್ಯನು ವಿಪುಲವಾದ ಲಾಭವನ್ನು ಗಳಿಸುತ್ತಾನೆ. ಶೂದ್ರನು ಸುಖಿಯಾಗುತ್ತಾನೆ. ಮಕ್ಕಳಿಲ್ಲದವನು ಮಕ್ಕಳನ್ನು ಪಡೆಯುತ್ತಾನೆ. ಕನ್ಯೆಯು ತಾನು ಇಚ್ಛಿಸಿದ ಪತಿಯನ್ನು ಪಡೆದುಕೊಳ್ಳುತ್ತಾಳೆ.

ಲಗ್ನಗರ್ಭಾ ವಿಮುಚ್ಯೇತ ಗರ್ಭಿಣೀ ಜನಯೇತ್ಸುತಮ್ ।
ವನ್ಧ್ಯಾ ಪ್ರಸವಮಾಪ್ನೋತಿ ಪುತ್ರಪೌತ್ರಸಮೃದ್ಧಿಮತ್ ॥೧೧೭॥

ಗರ್ಭದಲ್ಲಿ ಮಗುವು ಅಡ್ಡಲಾಗಿ ಪ್ರಸವದಲ್ಲಿ ಯಾವಳಿಗೆ ತೊಂದರೆಯಾಗಿರುವುದೋ ಅವಳು ಈ ಉಪಾಖ್ಯಾನವನ್ನು ಕೇಳಿದರೆ ಪ್ರಸವವೇದನೆಯಿಂದ ಮುಕ್ತಳಾಗುತ್ತಾಳೆ. ಗರ್ಭಿಣಿಯಾದವಳು ಕೇಳಿದರೆ ಪುತ್ರನನ್ನೇ ಹಡೆಯುತ್ತಾಳೆ. ಬಂಜೆಯೂ ಕೂಡ ಗರ್ಭಿಣಿಯಾಗುತ್ತಾಳೆ. ಈ ಉಪಾಖ್ಯಾನ ಶ್ರವಣದಿಂದ ಆ ಗರ್ಭವು ಮುಂದೆ ಪುತ್ರ-ಪೌತ್ರಸಮೃದ್ಧಿಯಿಂದ ಸಂಪನ್ನವಾಗುತ್ತದೆ.

ಕ್ಷೇಮೇಣ ಗಚ್ಛೇದಧ್ವಾನಮಿದಂ ಯಃ ಪಠತೇ ಪಥಿ ।
ಯೋ ಯಂ ಕಾಮಂ ಕಾಮಯತೇ ಸ ತಮಾಪ್ನೋತಿ ಚ ಧ್ರುವಮ್ ॥೧೧೮॥

ಪ್ರವಾಸಸಮಯದಲ್ಲಿ ಮಾರ್ಗದಲ್ಲಿ ಈ ಉಪಾಖ್ಯಾನವನ್ನು ಪಾರಾಯಣಮಾಡುವವನು ಕ್ಷೇಮದಿಂದ ತನ್ನ ಯಾತ್ರೆಯನ್ನು ಮುಗಿಸುತ್ತಾನೆ.

ಯಾವನು ಯಾವ ವಸ್ತುವನ್ನು ಇಚ್ಛಿಸುವನೋ–ಅವನು ಅದೇ ವಸ್ತುವನ್ನು ನಿಶ್ಚಯವಾಗಿ ಹೊಂದುತ್ತಾನೆ.

ಇದಂ ಮಹರ್ಷೇರ್ವಚನಂ ವಿನಿಶ್ಚಿತಂ
ಮಹಾತ್ಮನಃ ಪುರುಷವರಸ್ಯ ಕೀರ್ತಿತಮ್ ।
ಸಮಾಗಮಂ ಚರ್ಷಿದಿವೌಕಸಾಮಿಮಂ
ನಿಶಮ್ಯ ಭಕ್ತಾಃ ಸುಸುಖಂ ಲಭನ್ತೇ ॥೧೧೯॥

ಪುರುಷಶ್ರೇಷ್ಠರಾದ, ಮಹಾತ್ಮರಾದ ವ್ಯಾಸಮಹರ್ಷಿಗಳಿಂದ ಹೇಳಲ್ಪಟ್ಟ ಸಿದ್ಧಾಂತಭೂತವಾದ ಈ ಪ್ರವಚನವನ್ನೂ ಹಾಗೂ ಋಷಿಗಳ ಮತ್ತು ದೇವತೆಗಳ ಸಮಾಗಮವೃತ್ತಾಂತವನ್ನೂ ಕೇಳುವ ಭಕ್ತರು ಉತ್ತಮಸುಖವನ್ನು ಹೊಂದುತ್ತಾರೆ."

*೩೪೦ನೆಯ ಅಧ್ಯಾಯವು ಮುಗಿಯಿತು.

೩೪೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನು ಅರ್ಜುನನೊಡನೆ ತನ್ನ ಪ್ರಭಾವವನ್ನು ತಿಳಿಸುತ್ತಾ ತನ್ನ ನಾಮಧೇಯಗಳ ವ್ಯುತ್ಪತ್ತಿಯನ್ನೂ ಮತ್ತು ಮಾಹಾತ್ಮ್ಯವನ್ನೂ ಹೇಳಿದುದು

ಜನಮೇಜಯನು ಹೇಳುತ್ತಾನೆ :

ಅಸ್ತೌಷೀದ್ಯೈರಿಮಂ ವ್ಯಾಸಃ ಸಶಿಷ್ಯೋ ಮಧುಸೂದನಮ್ ।
ನಾಮಭಿರ್ವಿವಿಧೈರೇಷಾಂ ನಿರುಕ್ತಂ ಭಗವನ್ಮಮ ॥೧॥
ವಕ್ತುಮರ್ಹಸಿ ಶುಶ್ರೂಷೋಃ ಪ್ರಜಾಪತಿಪತೇರ್ಹರೇಃ ।
ಶ್ರುತ್ವಾ ಭವೇಯಂ ಯತ್ಪೂತಃ ಶರಚ್ಚನ್ದ್ರ ಇವಾಮಲಃ ॥೨॥

"ವೈಶಂಪಾಯನರೇ! ಶಿಷ್ಯಸಹಿತರಾದ ವ್ಯಾಸಮಹರ್ಷಿಗಳು ಮಧುಸೂದನನನ್ನು ನಾನಾಪ್ರಕಾರವಾದ ದಿವ್ಯನಾಮಗಳಿಂದ ಸ್ತೋತ್ರಮಾಡಿದರು. ಆ ದಿವ್ಯನಾಮಗಳ ನಿರುಕ್ತವನ್ನು (ಪದಗಳ ಅವಯವಾರ್ಥವನ್ನು) ಕೇಳಲು

---

*ಈ ಅಧ್ಯಾಯದಲ್ಲಿ ಮತ್ತು ಮುಂದಿನ ಕೆಲವು ಅಧ್ಯಾಯಗಳಲ್ಲಿ ಯುಧಿಷ್ಠಿರ-ಭೀಷ್ಮರ ಸಂವಾದದ ಪ್ರಸ್ತಾಪವಿಲ್ಲ. ಸೌತಿಗಳು ಅಥವಾ ವೈಶಂಪಾಯನರು ಪ್ರತ್ಯೇಕವಾಗಿಯೇ ಉಪಾಖ್ಯಾನವನ್ನು ಹೇಳುತ್ತಿರುವಂತೆ ಕಾಣುತ್ತದೆ.

ಇಚ್ಛಿಸಿರುವ ನನಗೆ ಅದನ್ನು ಹೇಳುವ ಕೃಪೆಮಾಡಿರಿ. ಪ್ರಜಾಪತಿಬ್ರಹ್ಮನ ಒಡೆಯನಾದ ಶ್ರೀಹರಿಯ ನಾಮಗಳ ವ್ಯುತ್ಪತ್ತಿಯನ್ನು ಕೇಳಿ ಶರತ್ಕಾಲದ ಚಂದ್ರನಂತೆ ನಿರ್ಮಲನಾಗುತ್ತೇನೆ."

ವೈಶಂಪಾಯನರು ಹೇಳುತ್ತಾರೆ :

"ಜನಮೇಜಯ! ಭಗವಾನ್ ಶ್ರೀಹರಿಯು ಅರ್ಜುನನ ವಿಷಯದಲ್ಲಿ ಪ್ರಸನ್ನನಾಗಿ ತನ್ನ ಗುಣಗಳಿಂದಲೂ ಮತ್ತು ಕರ್ಮಗಳಿಂದಲೂ ಪಡೆದುಕೊಂಡ ದಿವ್ಯನಾಮಗಳ ನಿರುಕ್ತವನ್ನು ಅರ್ಜುನನಿಗೆ ಹೇಳಿರುವನು. ಅದನ್ನೇ ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಮಹಾತ್ಮನಾದ ಶ್ರೀಕೃಷ್ಣನು ಯಾವ ದಿವ್ಯನಾಮಗಳಿಂದ ಕೀರ್ತನ ಮಾಡಲ್ಪಡುತ್ತಿದ್ದನೋ–ಆ ದಿವ್ಯನಾಮಗಳ ವಿಷಯವಾಗಿ ಶತ್ರುವೀರ ಸಂಹಾರಕನಾದ ಅರ್ಜುನನು ಶ್ರೀಕೃಷ್ಣನನ್ನು ಪ್ರಶ್ನಿಸಿದನು :

ಭಗವನ್ಭೂತಭವ್ಯೇಶ ಸರ್ವಭೂತಸೃಗವ್ಯಯ ।
ಲೋಕಧಾಮ ಜಗನ್ನಾಥ ಲೋಕಾನಾಮಭಯಪ್ರದ ॥೫॥

ಯಾನಿ ನಾಮಾನಿ ತೇ ದೇವ ಕೀರ್ತಿತಾನಿ ಮಹರ್ಷಿಭಿಃ ।
ವೇದೇಷು ಸಪುರಾಣೇಷು ಯಾನಿ ಗುಹ್ಯಾನಿ ಕರ್ಮಭಿಃ ॥೬॥

ತೇಷಾಂ ನಿರುಕ್ತಂ ತ್ವತ್ತೋಽಹಂ ಶ್ರೋತುಮಿಚ್ಛಾಮಿ ಕೇಶವ ।
ನ ಹ್ಯನ್ಯೋ ವರ್ಣಯೇನ್ನಾಮ್ನಾಂ ನಿರುಕ್ತಂ ತ್ವಾಮೃತೇ ಪ್ರಭೋ ॥೭॥

"ಭೂತ, ವರ್ತಮಾನ ಮತ್ತು ಭವಿಷ್ಯ –ಈ ಮೂರು ಕಾಲಗಳಿಗೂ ಸ್ವಾಮಿಯೇ! ಸಕಲಪ್ರಾಣಿಗಳ ಸೃಷ್ಟಿಕರ್ತನೇ! ಅವ್ಯಯನೇ! ಸಕಲ ಜಗದಾಶ್ರಯನೇ! ಸಕಲಲೋಕಗಳಿಗೂ ಅಭಯಪ್ರದನೇ! ಭಗವನ್ ! ಮಹರ್ಷಿಗಳು ನಿನ್ನ ಯಾವ ಯಾವ ನಾಮಗಳನ್ನು ಸಂಕೀರ್ತನಮಾಡಿರುವರೋ, ವೇದಗಳಲ್ಲಿಯೂ ಮತ್ತು ಪುರಾಣಗಳಲ್ಲಿಯೂ ನೀನು ಮಾಡಿದ ಭಕ್ತಾನುಗ್ರಹರೂಪವಾದ ಕರ್ಮಾನುಸಾರವಾಗಿ ಯಾವ ಯಾವ ರಹಸ್ಯ ನಾಮಗಳಿವೆಯೋ–ಆ ಎಲ್ಲ ದಿವ್ಯನಾಮಗಳಿಗೂ ಅವಯವಾರ್ಥಗಳನ್ನು ನಿನ್ನ ಮುಖಾರವಿಂದದಿಂದಲೇ ಕೇಳಲಿಚ್ಛಿಸಿದ್ದೇನೆ. ಪ್ರಭುವೇ! ನಿನ್ನನ್ನು

ಬಿಟ್ಟರೆ ನಿನ್ನ ದಿವ್ಯನಾಮಗಳ ವ್ಯಾಖ್ಯಾನವನ್ನು ಬೇರೆ ಯಾರೂ ಮಾಡಲಾರರು.”

ಭಗವಂತನು ಹೇಳುತ್ತಾನೆ :

ಋಗ್ವೇದೇ ಸಯಜುರ್ವೇದೇ ತಥೈವಾಥರ್ವಸಾಮಸು ।
ಪುರಾಣೇ ಸೋಪನಿಷದೇ ತಥೈವ ಜ್ಯೋತಿಷೇಽರ್ಜುನ ॥೮॥

ಸಾಂಖ್ಯೇ ಚ ಯೋಗಶಾಸ್ತ್ರೇ ಚ ಆಯುರ್ವೇದೇ ತಥೈವ ಚ ।
ಬಹೂನಿ ಮಮ ನಾಮಾನಿ ಕೀರ್ತಿತಾನಿ ಮಹರ್ಷಿಭಿಃ ॥೯॥

“ಅರ್ಜುನ! ಋಗ್ಯಜುಸ್ಸಾಮಾಥರ್ವಣವೇದಗಳಲ್ಲಿಯೂ, ಪುರಾಣಗಳಲ್ಲಿಯೂ, ಉಪನಿಷತ್ತುಗಳಲ್ಲಿಯೂ, ಜ್ಯೋತಿಃಶಾಸ್ತ್ರದಲ್ಲಿಯೂ, ಸಾಂಖ್ಯ-ಯೋಗಶಾಸ್ತ್ರಗಳಲ್ಲಿಯೂ, ಆಯುರ್ವೇದದಲ್ಲಿಯೂ ನನ್ನ ಅನಂತವಾದ ನಾಮಗಳು ಮಹರ್ಷಿಗಳಿಂದ ಕೀರ್ತಿತವಾಗಿವೆ.

ಗೌಣಾನಿ ತತ್ರ ನಾಮಾನಿ ಕರ್ಮಜಾನಿ ಚ ಕಾನಿಚಿತ್ ।
ನಿರುಕ್ತಂ ಕರ್ಮಜಾನಾಂ ತ್ವಂ ಶೃಣುಷ್ವ ಪ್ರಯತೋಽನಘ ॥೧೦॥

ನಿಷ್ಪಾಪನೇ! ಹಾಗೆ ಕೀರ್ತಿತವಾಗಿರುವ ನಾಮಗಳಲ್ಲಿ ಕೆಲವು ನನ್ನ ಗುಣಗಳನ್ನೇ ಆಶ್ರಯಿಸಿ ಹೇಳಲ್ಪಟ್ಟಿವೆ. ಕೆಲವು ನಾಮಗಳು ನಾನು ಮಾಡಿದ ಕರ್ಮಾನುಸಾರವಾಗಿ ಹೇಳಲ್ಪಟ್ಟಿವೆ. ನೀನು ಮೊದಲು ನಾನು ಮಾಡಿರುವ ಕಾರ್ಯಗಳಿಂದ ಪ್ರಾಪ್ತವಾಗಿರುವ ಹೆಸರುಗಳ ವ್ಯಾಖ್ಯೆಯನ್ನು ಏಕಾಗ್ರಚಿತ್ತನಾಗಿ ಕೇಳು.

ಕಥ್ಯಮಾನಂ ಮಯಾ ತಾತ ತ್ವಂ ಹಿ ಮೇಽರ್ಧಂ ಸ್ಮೃತಃ ಪುರಾ ।
ನಮೋಽತಿಯಶಸೇ ತಸ್ಮೈ ದೇಹಿನಾಂ ಪರಮಾತ್ಮನೇ ।
ನಾರಾಯಣಾಯ ವಿಶ್ವಾಯ ನಿರ್ಗುಣಾಯ ಗುಣಾತ್ಮನೇ ॥೧೧॥

ನಾನು ಹೇಳಲಿರುವ ನನ್ನ ಆ ನಾಮಗಳ ವ್ಯುತ್ಪತ್ತಿಯನ್ನು ಕೇಳು. ಹಿಂದಿನಿಂದಲೂ ನೀನು ನನ್ನ ಅರ್ಧಶರೀರವೆಂದೇ ಪ್ರಸಿದ್ಧನಾಗಿರುವೆ. ಈ ಕಾರಣದಿಂದಲೂ ನಾನು ನಿನಗೆ ದಿವ್ಯನಾಮಗಳ ಅಂತರಾರ್ಥವನ್ನು ಹೇಳುತ್ತೇನೆ. ಸಕಲದೇಹಿಗಳಿಗೂ ಯಾರು ಉತ್ಕೃಷ್ಟವಾದ ಆತ್ಮಸ್ವರೂಪನೋ,

ಮಹಾಯಶೋವಂತನೋ, ನಿರ್ಗುಣನೋ, ಸಗುಣಸ್ವರೂಪನೋ, ವಿಶ್ವಾತ್ಮನೋ–ಅಂತಹ ನಾರಾಯಣನಿಗೆ ನಮಸ್ಕಾರಮಾಡು.

ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಶ್ಚ ಕ್ರೋಧಸಮ್ಭವಃ ।
ಯೋಽಸೌ ಯೋನಿರ್ಹಿ ಸರ್ವಸ್ಯ ಸ್ಥಾವರಸ್ಯ ಚರಸ್ಯ ಚ ॥೧೨॥

ಯಾವನ ಪ್ರಸನ್ನತೆಯಿಂದ ಬ್ರಹ್ಮನು ಹುಟ್ಟಿದನೋ, ಯಾವನ ಕ್ರೋಧದಿಂದ ರುದ್ರನು ಹುಟ್ಟಿದನೋ, ಸಂಪೂರ್ಣವಾದ ಚರಾಚರಜಗತ್ತಿನ ಉತ್ಪತ್ತಿಗೂ ಯಾವನು ಕಾರಣನಾಗಿರುವನೋ–ಅಂತಹ ಶ್ರೀಮನ್ನಾರಾಯಣನಿಗೆ ನಮಸ್ಕಾರಮಾಡುತ್ತೇನೆ.

ಅಷ್ಟಾದಶಗುಣಂ ಯತ್ತತ್ಸತ್ತ್ವಂ ಸತ್ತ್ವವತಾಂ ವರ ॥೧೩॥
ಪ್ರಕೃತಿಃ ಸಾ ಪರಾ ಮಹ್ಯಂ ರೋದಸೀ ಯೋಗಧಾರಿಣೀ ।
ಋತಾ ಸತ್ಯಾಮರಾಜಯ್ಯಾ ಲೋಕಾನಾಮಾತ್ಮಸಂಜ್ಞಿತಾ ॥೧೪॥

ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ಅರ್ಜುನ! ಯಾವನು ಹದಿನೆಂಟು ಗುಣಗಳಿಂದ* ಪರಿಪೂರ್ಣನಾಗಿರುವನೋ, ಸತ್ತ್ವಸ್ವರೂಪನೋ, ಅಂತಹ ಆದಿಪುರುಷನು ನನ್ನ ಪರಾಪ್ರಕೃತಿಯಾಗಿದ್ದಾನೆ. ಅವನು ದ್ಯಾವಾಪೃಥಿವೀರೂಪನಾಗಿ ಯೋಗಬಲದಿಂದ ಸಮಸ್ತಲೋಕಗಳನ್ನೂ ಧರಿಸಿದ್ದಾನೆ. ಋತ-ಸತ್ಯಸ್ವರೂಪಿಯೂ, ಅಮರನೂ, ಜಯಿಸಲು ಅಶಕ್ಯನೂ ಆಗಿದ್ದಾನೆ ಮತ್ತು ಎಲ್ಲ ಲೋಕಗಳಿಗೂ ಆತ್ಮನೆನಿಸಿದ್ದಾನೆ.

ತಸ್ಮಾತ್ಸರ್ವಾಃ ಪ್ರವರ್ತನ್ತೇ ಸರ್ಗಪ್ರಲಯವಿಕ್ರಿಯಾಃ ।
ತಪೋ ಯಜ್ಞಶ್ಚ ಯಷ್ಟಾ ಚ ಪುರಾಣಃ ಪುರುಷೋ ವಿರಾಟ್ ।
ಅನಿರುದ್ಧ ಇತಿ ಪ್ರೋಕ್ತೋ ಲೋಕಾನಾಂ ಪ್ರಭವಾಪ್ಯಯಃ ॥೧೫॥

ಸೃಷ್ಟಿ-ಸ್ಥಿತಿ-ವಿಕಾರಗಳೆಲ್ಲವೂ ಅವನಿಂದಲೇ ಉಂಟಾಗುತ್ತವೆ. ಅವನೇ ತಪಸ್ಸು, ಯಜ್ಞವು, ಯಜ್ಞಮಾಡುವವನು ಮತ್ತು ಪುರಾಣಪುರುಷನು.

---

*ಪರಮಾತ್ಮನ ಹದಿನೆಂಟು ಗುಣಗಳು : ಪ್ರೀತಿ, ಪ್ರಕಾಶ, ಉತ್ಕರ್ಷ, ಲಘುತ್ವ, ಸುಖ, ಅಕಾರ್ಪಣ್ಯ, ಅಸಂಭ್ರಮ, ಸಂತೋಷ, ಶ್ರದ್ಧೆ, ಕ್ಷಮೆ, ಧೃತಿ, ಅಹಿಂಸೆ, ಶೌಚ, ಅಕ್ರೋಧ, ಸರಳತೆ, ಸಮತೆ, ಸತ್ಯನಿಷ್ಠೆ, ಅನಸೂಯತೆ.

ಅವನೇ ವಿರಾಟ್ಪುರುಷನು. ಲೋಕಗಳ ಉತ್ಪತ್ತಿ-ಲಯಗಳಿಗೆ ಕಾರಣನಾಗಿ ಅನಿರುದ್ಧ ಎಂಬ ಹೆಸರಿನಿಂದ ಕರೆಯಲ್ಪಡುವವನು.

ಬ್ರಾಹ್ಮೇ ರಾತ್ರಿಕ್ಷಯೇ ಪ್ರಾಪ್ತೇ ತಸ್ಯ ಹ್ಯಮಿತತೇಜಸಃ ।
ಪ್ರಸಾದಾತ್ಪ್ರಾದುರಭವತ್ಪದ್ಮಂ ಪದ್ಮನಿಭೇಕ್ಷಣ ।
ತತೋ ಬ್ರಹ್ಮಾ ಸಮಭವತ್ಸ ತಸ್ಯೈವ ಪ್ರಸಾದಜಃ ॥೧೭॥

ಪದ್ಮನೇತ್ರನೇ! ಅರ್ಜುನ! ಪ್ರಳಯದ (ಬ್ರಹ್ಮನಿಗೆ ಸಂಬಂಧಿಸಿದ) ರಾತ್ರಿಯು ಕಳೆದೊಡನೆಯೇ ಅಮಿತತೇಜಸ್ವಿಯಾದ ಆ ಅನಿರುದ್ಧನ ಕೃಪೆಯಿಂದಾಗಿ ಕಮಲವೊಂದು ಪ್ರಕಟವಾಯಿತು. ಅನಿರುದ್ಧನ ಪ್ರಸಾದ ದಿಂದಲೇ ಆ ಕಮಲದಿಂದ ಬ್ರಹ್ಮನು ಹುಟ್ಟಿದನು.

ಅಹ್ನಃ ಕ್ಷಯೇ ಲಲಾಟಾಚ್ಚ ಸುತೋ ದೇವಸ್ಯ ವೈ ತಥಾ ।
ಕ್ರೋಧಾವಿಷ್ಟಸ್ಯ ಸಂಜಜ್ಞೇ ರುದ್ರಃ ಸಂಹಾರಕಾರಕಃ ॥೧೮॥

ಹಗಲು ಕಳೆದೊಡನೆಯೇ ಕ್ರೋಧಾವಿಷ್ಟನಾಗಿದ್ದ ಬ್ರಹ್ಮನ ಹಣೆಯಿಂದ ಲೋಕಸಂಹಾರಕನಾದ ರುದ್ರನು ಪುತ್ರರೂಪನಾಗಿ ಹುಟ್ಟಿದನು.

ಏತೌ ದ್ವೌ ವಿಬುಧಶ್ರೇಷ್ಠೌ ಪ್ರಸಾದಕ್ರೋಧಜಾವುಭೌ ।
ತದಾದೇಶಿತಪನ್ಥಾನೌ ಸೃಷ್ಟಿಸಂಹಾರಕಾರಕೌ ॥೧೯॥

ಬ್ರಹ್ಮ-ರುದ್ರರಿಬ್ಬರೂ ದೇವತೆಗಳಲ್ಲಿ ಶ್ರೇಷ್ಠರಾದವರು. ಬ್ರಹ್ಮನು ನಾರಾಯಣನ ಪ್ರಸನ್ನತೆಯಿಂದಲೂ, ರುದ್ರನು ಬ್ರಹ್ಮನ ಕೋಪದಿಂದಲೂ ಹುಟ್ಟಿದರು. ನಾರಾಯಣನ ನಿರ್ದೇಶಾನುಸಾರವಾಗಿಯೇ ಅವರಿಬ್ಬರೂ ಸೃಷ್ಟಿ-ಸಂಹಾರಕಾರ್ಯಗಳಲ್ಲಿ ನಿರತರಾಗಿದ್ದಾರೆ.

ನಿಮಿತ್ತಮಾತ್ರಂ ತಾವತ್ರ ಸರ್ವಪ್ರಾಣಿವರಪ್ರದೌ ।
ಕಪರ್ದೀ ಜಟಿಲೋ ಮುಣ್ಡಃ ಶ್ಮಶಾನಗೃಹಸೇವಕಃ ॥೨೦॥

ಉಗ್ರವ್ರತಚರೋ ರುದ್ರೋ ಯೋಗೀ ಪರಮದಾರುಣಃ ।
ದಕ್ಷಕ್ರತುಹರಶ್ಚೈವ ಭಗನೇತ್ರಹರಸ್ತಥಾ ॥೨೧॥

ಸಮಸ್ತಪ್ರಾಣಿಗಳಿಗೂ ವರಪ್ರದರಾದ ಆ ಇಬ್ಬರು ದೇವತೆಗಳೂ ಸೃಷ್ಟಿ-ಲಯಗಳಿಗೆ ನಿಮಿತ್ತಮಾತ್ರಕ್ಕೆ ಕಾರಣರಾಗಿದ್ದಾರೆ. (ವಸ್ತುತಃ

ಸೃಷ್ಟಿ-ಲಯಗಳು ಶ್ರೀಮನ್ನಾರಾಯಣನ ಇಚ್ಛಾಮಾತ್ರದಿಂದಲೇ ನಡೆಯುತ್ತವೆ.) ಆ ಇಬ್ಬರಲ್ಲಿ ಸಂಹಾರಕನಾದ ರುದ್ರನಿಗೆ ಕಪರ್ದೀ, ಜಟಿಲ, ಮುಂಡ, ಶ್ಮಶಾನಗೃಹಸೇವಕ, ಉಗ್ರವ್ರತಚರ, ರುದ್ರ, ಯೋಗೀ, ಪರಮ ದಾರುಣ, ದಕ್ಷಕ್ರತುಹರ, ಭಗನೇತ್ರಹರ–ಇವೇ ಮೊದಲಾದ ಅನೇಕ ನಾಮಧೇಯಗಳಿವೆ.

ನಾರಾಯಣಾತ್ಮಕೋ ಜ್ಞೇಯಃ ಪಾಣ್ಡವೇಯ ಯುಗೇ ಯುಗೇ ।
ತಸ್ಮಿನ್ನಪಿ ಪೂಜ್ಯಮಾನೇ ವೈ ದೇವದೇವೇ ಮಹೇಶ್ವರೇ ।
ಸಮ್ಪೂಜಿತೋ ಭವೇತ್ಪಾರ್ಥ ದೇವೋ ನಾರಾಯಣಃ ಪ್ರಭುಃ ॥೨೨॥

ಪಾಂಡುಪುತ್ರನೇ! ರುದ್ರನನ್ನು ನಾರಾಯಣಾತ್ಮಕನೆಂದೇ ತಿಳಿಯಬೇಕು. ಪ್ರತಿಯೊಂದು ಯುಗದಲ್ಲಿಯೂ ದೇವದೇವನಾದ ಪರಮೇಶ್ವರನನ್ನು ಪೂಜಿಸಿದರೆ–ಪ್ರಭುವಾದ, ದೇವದೇವನಾದ ಶ್ರೀಮನ್ನಾರಾಯಣನನ್ನೇ ಪೂಜಿಸಿದಂತಾಗುತ್ತದೆ.

ಅಹಮಾತ್ಮಾ ಹಿ ಲೋಕಾನಾಂ ವಿಶ್ವೇಷಾಂ ಪಾಣ್ಡುನನ್ದನ ।
ತಸ್ಮಾದಾತ್ಮಾನಮೇವಾಗ್ರೇ ರುದ್ರಂ ಸಮ್ಪೂಜಯಾಮ್ಯಹಮ್ ॥೨೩॥

ಪಾಂಡುನಂದನನೇ! ಸಮಸ್ತವಾದ ಲೋಕಗಳಿಗೂ ನಾನೇ ಆತ್ಮನಾಗಿದ್ದೇನೆ. ಆದುದರಿಂದ ನಾನು ನನ್ನ ಆತ್ಮನೇ ಆಗಿರುವ ರುದ್ರನನ್ನು ಪೂಜಿಸುತ್ತೇನೆ.

ಯದ್ಯಹಂ ನಾರ್ಚಯೇಯಂ ವೈ ಈಶಾನಂ ವರದಂ ಶಿವಮ್ ।
ಆತ್ಮಾನಂ ನಾರ್ಚಯೇತ್ಕಶ್ಚಿದಿತಿ ಮೇ ಭಾವಿತಾತ್ಮನಃ ॥೨೪॥

ಒಂದು ವೇಳೆ ನಾನೇನಾದರೂ ನನ್ನ ಆತ್ಮವಾಗಿರುವ, ವರದನಾದ, ಈಶಾನಮೂರ್ತಿಯಾದ ಶಿವನನ್ನು ಪೂಜಿಸದಿದ್ದರೆ–ಬೇರೆ ಯಾವನೂ ಅವನನ್ನು ಪೂಜಿಸುವುದಿಲ್ಲವೆಂದು ನನ್ನ ಭಾವನೆಯಾಗಿದೆ.

ಮಯಾ ಪ್ರಮಾಣಂ ಹಿ ಕೃತಂ ಲೋಕಃ ಸಮನುವರ್ತತೇ ।
ಪ್ರಮಾಣಾನಿ ಹಿ ಪೂಜ್ಯಾನಿ ತತಸ್ತಂ ಪೂಜಯಾಮ್ಯಹಮ್ ।
ಯಸ್ತಂ ವೇತ್ತಿ ಸ ಮಾಂ ವೇತ್ತಿ ಯೋಽನು ತಂ ಸ ಹಿ ಮಾಮನು ॥

ನಾನು ಮಾಡಿದ ಕಾರ್ಯವನ್ನು ಪ್ರಮಾಣವನ್ನಾಗಿ ಅಥವಾ

ಆದರ್ಶವನ್ನಾಗಿ ಭಾವಿಸಿ ಲೋಕದ ಜನರೂ ಆ ಆದರ್ಶವನ್ನೇ ಅನುಸರಿಸುತ್ತಾರೆ. ಪ್ರಮಾಣವಾಗಿ ಇರುವುವುಗಳನ್ನು ತಾನೇ ಎಲ್ಲರೂ ಪೂಜಿಸಬೇಕು! ಈ ಕಾರಣದಿಂದಲೂ ನಾನು ಶಂಕರನನ್ನು ಪೂಜಿಸುತ್ತೇನೆ. ಯಾವನು ರುದ್ರನನ್ನು ತಿಳಿಯುವನೋ–ಅವನು ನನ್ನನ್ನು ತಿಳಿಯುತ್ತಾನೆ. ಯಾವನು ಅವನನ್ನು ಅನುಸರಿಸುವನೋ ಅವನು ನನ್ನನ್ನೂ ಅನುಸರಿಸುತ್ತಾನೆ.

ರುದ್ರೋ ನಾರಾಯಣಶ್ಚೈವ ಸತ್ತ್ವಮೇಕಂ ದ್ವಿಧಾಕೃತಮ್ ।
ಲೋಕೇ ಚರತಿ ಕೌನ್ತೇಯ ವ್ಯಕ್ತಿಸ್ಥಂ ಸರ್ವಕರ್ಮಸು ॥೨೭॥

ಕೌಂತೇಯ! ಒಂದೇ ಸತ್ತ್ವವು ರುದ್ರ-ನಾರಾಯಣ ಎಂಬ ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ನಾರಾಯಣ-ರುದ್ರಾತ್ಮಕವಾದ ಈ ಸತ್ತ್ವವು ಸರ್ವಕರ್ಮಗಳಲ್ಲಿಯೂ ಶಿವ-ನಾರಾಯಣರೆಂಬ ಎರಡು ವಿಧವಾದ ಮೂರ್ತಸ್ವರೂಪದಿಂದ ಆವಿರ್ಭವಿಸಿದ್ದು ಲೋಕದಲ್ಲಿ ವ್ಯಕ್ತಗೊಂಡು ಸಂಚರಿಸುತ್ತಿರುತ್ತದೆ.

ನ ಹಿ ಮೇ ಕೇನಚಿದ್ದೇಯೋ ವರಃ ಪಾಣ್ಡವನನ್ದನ ।
ಇತಿ ಸಂಚಿನ್ತ್ಯ ಮನಸಾ ಪುರಾಣಂ ರುದ್ರಮೀಶ್ವರಮ್ ।
ಪುತ್ರಾರ್ಥಮಾರಾಧಿತವಾನಹಮಾತ್ಮಾನಮಾತ್ಮನಾ ॥೨೮॥

ಪಾಂಡವರಿಗೆ ಆನಂದದಾಯಕನಾದ ಅರ್ಜುನನೇ! ನನಗೆ–'ರುದ್ರನೇ ಹೊರತಾಗಿ ಬೇರೆ ಯಾವನೂ ವರವನ್ನು ಕೊಡಬೇಕಾಗಿಲ್ಲ'–ಎಂಬುದಾಗಿ ನಾನು ಮನಸ್ಸಿನಲ್ಲಿಯೇ ನಿಶ್ಚಯಿಸಿ ಪುರಾಣಪುರುಷನಾದ, ಜಗದೀಶ್ವರನಾದ ನನ್ನ ಆತ್ಮಸ್ವರೂಪನಾದ ರುದ್ರನನ್ನು ಪುತ್ರಪ್ರಾಪ್ತಿಯ ಸಲುವಾಗಿ ಆರಾಧಿಸಿದೆನು.

ನ ಹಿ ವಿಷ್ಣುಃ ಪ್ರಣಮತಿ ಕಸ್ಮೈಚಿದ್ವಿಬುಧಾಯ ಚ ।
ಋತೇ ಆತ್ಮಾನಮೇವೇತಿ ತತೋ ರುದ್ರಂ ಭಜಾಮ್ಯಹಮ್ ॥೨೯॥

ವಿಷ್ಣುವು ತನ್ನ ಆತ್ಮಸ್ವರೂಪನಾದ ರುದ್ರನ ಹೊರತಾಗಿ ಬೇರೆ ಯಾವ ದೇವತೆಗಳೂ ಪ್ರಣಾಮಮಾಡುವುದಿಲ್ಲ. ಈ ಕಾರಣದಿಂದಲೇ ನಾನು ರುದ್ರನನ್ನು ಆರಾಧಿಸುತ್ತೇನೆ.

ಸಬ್ರಹ್ಮಕಾಃ ಸರುದ್ರಾಶ್ಚ ಸೇನ್ದ್ರಾ ದೇವಾಃ ಸಹರ್ಷಿಭಿಃ ।
ಅರ್ಚಯನ್ತಿ ಸುರಶ್ರೇಷ್ಠಂ ದೇವಂ ನಾರಾಯಣಂ ಹರಿಮ್ ॥೩೦॥

ಬ್ರಹ್ಮೇಂದ್ರ-ರುದ್ರರೂ, ಸಕಲದೇವತೆಗಳೂ, ಮಹರ್ಷಿಗಳೂ ಸುರಶ್ರೇಷ್ಠನಾದ, ದೇವದೇವನಾದ ಹರಿನಾರಾಯಣನನ್ನು ಪೂಜಿಸುತ್ತಾರೆ.

ಭವಿಷ್ಯತಾಂ ವರ್ತತಾಂ ಚ ಭೂತಾನಾಂ ಚೈವ ಭಾರತ ।
ಸರ್ವೇಷಾಮಗ್ರಣೀರ್ವಿಷ್ಣುಃ ಸೇವ್ಯಃ ಪೂಜ್ಯಶ್ಚ ನಿತ್ಯಶಃ ॥೩೧॥

ಸಕಲದೇವತೆಗಳಿಗೂ ಶ್ರೇಷ್ಠನಾದ ಮತ್ತು ಮೊದಲಿಗನಾದ ಮಹಾವಿಷ್ಣುವು–ಹಿಂದಿನ, ಈಗಿರುವ ಮತ್ತು ಮುಂದೆ ಹುಟ್ಟುವ ಸಕಲಪ್ರಾಣಿಗಳಿಗೂ ಅನುದಿನವೂ ಪೂಜ್ಯನೂ, ಸಂಸೇವ್ಯನೂ ಆಗಿರುತ್ತಾನೆ.

ನಮಸ್ವ ಹವ್ಯದಂ ವಿಷ್ಣುಂ ತಥಾ ಶರಣದಂ ನಮ ।
ವರದಂ ನಮಸ್ವ ಕೌನ್ತೇಯ ಹವ್ಯಕವ್ಯಭುಜಂ ನಮ ॥೩೨॥

ಅರ್ಜುನ! ನೀನು ಹವ್ಯವನ್ನು ಕೊಡುವ ವಿಷ್ಣುವಿಗೆ ನಮಸ್ಕಾರಮಾಡು. ಶರಣ್ಯನಾದ ಆ ಶ್ರೀಹರಿಗೆ ನಮಸ್ಕರಿಸು. ವರಪ್ರದಾನಮಾಡುವ ಶ್ರೀಮನ್ನಾರಾಯಣನನ್ನು ನಮಸ್ಕರಿಸು. ಹವ್ಯ-ಕವ್ಯಭೋಕ್ತೃವಾದ ಭಗವಂತನನ್ನು ನಮಸ್ಕರಿಸು.

ಚತುರ್ವಿಧಾ ಮಮ ಜನಾ ಭಕ್ತಾ ಏವ ಹಿ ಮೇ ಶ್ರುತಮ್ ।
ತೇಷಾಮೇಕಾನ್ತಿನಃ ಶ್ರೇಷ್ಠಾ ಯೇ ಚೈವಾನನ್ಯದೇವತಾಃ ॥೩೩॥

ಅಹಮೇವ ಗತಿಸ್ತೇಷಾಂ ನಿರಾಶೀಃ ಕರ್ಮಕಾರಿಣಾಮ್ ॥೩೪॥

ನನಗೆ ಆರ್ತ, ಜಿಜ್ಞಾಸು, ಅರ್ಥಾರ್ಥೀ ಮತ್ತು ಜ್ಞಾನಿಗಳೆಂಬ ನಾಲ್ಕು ಬಗೆಯ ಭಕ್ತರಿರುವರೆಂಬುದನ್ನು ನೀನು ಕೇಳಿರುವೆ. ಅವರಲ್ಲಿ ಯಾರು ಇತರ ದೇವತೆಗಳನ್ನು ಆರಾಧಿಸದೇ ನನ್ನಲ್ಲಿಯೇ ಅನನ್ಯಭಕ್ತಿಯುಳ್ಳವರಾಗಿ ನನ್ನನ್ನೇ ಆರಾಧಿಸುವರೋ–ಜ್ಞಾನಿಗಳಾದ ಆ ಭಕ್ತರೇ ಶ್ರೇಷ್ಠರು. ನಿಷ್ಕಾಮ ಭಾವದಿಂದ ಸಮಸ್ತಕರ್ಮಗಳನ್ನೂ ಮಾಡುವ ಅವರಿಗೆ ನಾನೇ ಪರಮ ಗತಿಯಾಗಿದ್ದೇನೆ.

ಯೇ ಚ ಶಿಷ್ಟಾಸ್ತ್ರಯೋ ಭಕ್ತಾಃ ಫಲಕಾಮಾ ಹಿ ತೇ ಮತಾಃ ।
ಸರ್ವೇ ಚ್ಯವನಧರ್ಮಾಸ್ತೇ ಪ್ರತಿಬುದ್ಧಸ್ತು ಶ್ರೇಷ್ಠಭಾಕ್ ॥೩೫॥

ಉಳಿದ ಮೂರು ಬಗೆಯ ಭಕ್ತರೂ ಫಲಾಭಿಲಾಷಿಗಳೆಂದೇ ಕರೆಯಲ್ಪಡುತ್ತಾರೆ. ಅವರೆಲ್ಲರೂ ಪುಣ್ಯವನ್ನು ಉಪಭೋಗಿಸಿದನಂತರ ಸ್ವರ್ಗದಿಂದ ಕೆಳಗೆ ಬೀಳುವ ಧರ್ಮವುಳ್ಳವರಾಗಿರುತ್ತಾರೆ. ಆದರೆ ಜ್ಞಾನಿಯು ಮಾತ್ರ ಸರ್ವಶ್ರೇಷ್ಠವಾದ ಭಗವತ್ಪ್ರಾಪ್ತಿಯೆಂಬ ಫಲವನ್ನು ಪಡೆಯುತ್ತಾನೆ.

ಬ್ರಹ್ಮಾಣಂ ಶಿತಿಕಣ್ಠಂ ಚ ಯಾಶ್ಚಾನ್ಯಾ ದೇವತಾಃ ಸ್ಮೃತಾಃ ।
ಪ್ರಬುದ್ಧಚರ್ಯಾಃ ಸೇವನ್ತೋ ಮಾಮೇವೈಷ್ಯನ್ತಿ ಯತ್ಪರಮ್ ॥೩೬॥

ಜ್ಞಾನಿಗಳಾದ ಭಕ್ತರು ಬ್ರಹ್ಮನನ್ನಾಗಲೀ, ಶಿವನನ್ನಾಗಲೀ, ಉಳಿದ ಇತರ ಯಾವ ದೇವತೆಗಳನ್ನೇ ಸೇವಿಸುತ್ತಿದ್ದರೂ ಕಡೆಯಲ್ಲಿ ಶ್ರೇಷ್ಠನಾದ ನನ್ನನ್ನೇ ಸೇರುತ್ತಾರೆ.

ಭಕ್ತಂ ಪ್ರತಿ ವಿಶೇಷಸ್ತೇ ಏಷ ಪಾರ್ಥಾನುಕೀರ್ತಿತಃ ।
ತ್ವಂ ಚೈವಾಹಂ ಚ ಕೌನ್ತೇಯ ನರನಾರಾಯಣೌ ಸ್ಮೃತೌ ।
ಭಾರಾವತರಣಾರ್ಥಂ ತು ಪ್ರವಿಷ್ಟೌ ಮಾನುಷೀಂ ತನುಮ್ ॥೩೭॥

ನಾನು ನಿನಗೆ ಭಕ್ತರಲ್ಲಿರುವ ವಿಶೇಷವನ್ನು ಹೇಳಿದೆನು. ನೀನೂ ಮತ್ತು ನಾನೂ ನರ-ನಾರಾಯಣರೆಂಬ ಹೆಸರಿನ ವಿಖ್ಯಾತರಾದ ಋಷಿಗಳಾಗಿದ್ದೆವು. ಭೂಭಾರಹರಣಾರ್ಥವಾಗಿ ನಾವು ಮನುಷ್ಯಶರೀರವನ್ನು ಪ್ರವೇಶಿಸಿದ್ದೇವೆ.

ಜಾನಾಮ್ಯಧ್ಯಾತ್ಮಯೋಗಾಂಶ್ಚ ಯೋಽಹಂ ಯಸ್ಮಾಚ್ಚ ಭಾರತ ।
ನಿವೃತ್ತಿಲಕ್ಷಣೋ ಧರ್ಮಸ್ತಥಾಭ್ಯುದಯಿಕೋಽಪಿ ಚ ।
ನರಾಣಾಮಯನಂ ಖ್ಯಾತಮಹಮೇಕಃ ಸನಾತನಃ ॥೩೮॥

ನಾನು ಅಧ್ಯಾತ್ಮಯೋಗವನ್ನು ತಿಳಿದಿರುತ್ತೇನೆ. ನಾನು ಯಾರು? ಎಲ್ಲಿಂದ ಬಂದವನು?–ಎಂಬುದನ್ನೂ ತಿಳಿದುಕೊಂಡಿದ್ದೇನೆ. ಲೌಕಿಕಾಭ್ಯುದಯಕ್ಕೆ ಸಾಧಕವಾದ ಪ್ರವೃತ್ತಿಧರ್ಮವೂ, ಮೋಕ್ಷಕ್ಕೆ ಸಾಧನವಾದ ನಿವೃತ್ತಿಲಕ್ಷಣವುಳ್ಳ ಧರ್ಮವೂ ನಾನೇ ಆಗಿರುತ್ತೇನೆ. ಏಕಮಾತ್ರ ಸನಾತನ ಪುರುಷನಾಗಿ ಮನುಷ್ಯರಿಗೆ ಸುವಿಖ್ಯಾತನಾದ, ಆಶ್ರಯಭೂತನಾದ ನಾರಾಯಣನೂ ನಾನೇ ಆಗಿದ್ದೇನೆ.

ಆಪೋ ನಾರಾ ಇತಿ ಪ್ರೋಕ್ತಾ ಆಪೋ ವೈ ನರಸೂನವಃ ।
ಆಯನಂ ಮಮ ತತ್ಪೂರ್ವಮತೋ ನಾರಾಯಣೋ ಹ್ಯಹಮ್ ॥

ನರನಿಂದ (ಪರಮಾತ್ಮನಿಂದ) ಹುಟ್ಟಿದ ಕಾರಣ ನೀರಿಗೆ ‘ನಾರ’ ಎಂದು ಹೆಸರು. ಆ ನಾರವೇ (ಜಲವೇ) ನನಗೆ ಹಿಂದೆ ನಿವಾಸಸ್ಥಾನವಾಗಿದ್ದಿತು. ಆದುದರಿಂದ ನಾನು ನಾರಾಯಣನಾಗಿದ್ದೇನೆ.

ಛಾದಯಾಮಿ ಜಗದ್ವಿಶ್ವಂ ಭೂತ್ವಾ ಸೂರ್ಯ ಇವಾಂಶುಭಿಃ ।
ಸರ್ವಭೂತಾಧಿವಾಸಶ್ಚ ವಾಸುದೇವಸ್ತತೋ ಹ್ಯಹಮ್ ॥೪೧॥

ನಾನು ಸೂರ್ಯನ ರೂಪವನ್ನು ಧರಿಸಿ ಕಿರಣಗಳಿಂದ ಸಮಸ್ತ ಜಗತ್ತನ್ನೂ ಮುಚ್ಚಿಬಿಡುತ್ತೇನೆ. ಸರ್ವಪ್ರಾಣಿಗಳಿಗೂ ನಾನು ವಾಸಸ್ಥಾನ ನಾಗಿದ್ದೇನೆ. ಆದುದರಿಂದ ನಾನು ವಾಸುದೇವನಾಗಿದ್ದೇನೆ.

ಗತಿಶ್ಚ ಸರ್ವಭೂತಾನಾಂ ಪ್ರಜನಶ್ಚಾಪಿ ಭಾರತ ।
ವ್ಯಾಪ್ತಾ ಮೇ ರೋದಸೀ ಪಾರ್ಥ ಕಾನ್ತಿಶ್ಚಾಭ್ಯಧಿಕಾ ಮಮ ॥೪೨॥

ಅಧಿಭೂತಾನಿ ಚಾನ್ತೇಷು ತದಿಚ್ಛಂಶ್ಚಾಸ್ಮಿ ಭಾರತ ।
ಕ್ರಮಣಾಚ್ಚಾಪ್ಯಹಂ ಪಾರ್ಥ ವಿಷ್ಣುರಿತ್ಯಭಿಸಂಜ್ಞಿತಃ ॥೪೩॥

ನಾನು ಸರ್ವಪ್ರಾಣಿಗಳಿಗೂ ಆಶ್ರಯವೂ ಮತ್ತು ಉತ್ಪತ್ತಿಸ್ಥಾನವೂ ಆಗಿದ್ದೇನೆ. ನಾನು ದ್ಯಾವಾಪೃಥಿವಿಗಳನ್ನು ವ್ಯಾಪಿಸಿದ್ದೇನೆ. ನನ್ನ ಕಾಂತಿಯು ಎಲ್ಲರ ಕಾಂತಿಗಿಂತಲೂ ಅಧಿಕವಾಗಿದೆ. ಸಮಸ್ತಪ್ರಾಣಿಗಳೂ ಅಂತಕಾಲದಲ್ಲಿ ಯಾವ ಪರಬ್ರಹ್ಮವಸ್ತುವನ್ನು ಕಂಡುಕೊಳ್ಳಲು ಅಪೇಕ್ಷಿಸುತ್ತವೆಯೋ–ಆ ಬ್ರಹ್ಮವಸ್ತುವೂ ನಾನೇ ಆಗಿದ್ದೇನೆ. ಈ ಕಾರಣಗಳಿಂದಲೂ ಮತ್ತು ವಿಶೇಷ ವಾಗಿ ಪಾದಗಳನ್ನು ಚಾಚಿರುವುದರಿಂದಲೂ ವಿಷ್ಣುವೆಂಬ ಸಂಜ್ಞೆಯನ್ನು ಪಡೆದಿರುತ್ತೇನೆ.

ದಮಾತ್ಸಿದ್ಧಿಂ ಪರೀಪ್ಸನ್ತೋ ಮಾಂ ಜನಾಃ ಕಾಮಯನ್ತಿ ಹ ।
ದಿವಂ ಚೋರ್ವೀಂ ಚ ಮಧ್ಯಂ ಚ ತಸ್ಮಾದ್ದಾಮೋದರೋ ಹ್ಯಹಮ್ ॥೪೪॥

ದಮ (ಇಂದ್ರಿಯ ನಿಗ್ರಹ) ದಿಂದ ಸಿದ್ಧಿಯನ್ನು ಪಡೆಯಲು ಬಯ

ಸುವ ಜನರು ನನ್ನನ್ನೇ ಕಾಮಿಸುತ್ತಾರೆ. ಇದಲ್ಲದೇ ದ್ಯಾವಾಪೃಥಿವಿಗಳನ್ನೂ ಮಧ್ಯವನ್ನೂ (ಆಕಾಶವನ್ನೂ) ನಾನು ನನ್ನ ಉದರದಲ್ಲಿ ಅಡಗಿಸಿ ಇಟ್ಟುಕೊಂಡಿರುವುದರಿಂದ ನಾನು ದಾಮೋದರನು.

(ದಮವೇ (ಇಂದ್ರಿಯನಿಗ್ರಹವೇ) ದಾಮ. ಆ ದಾಮದಿಂದ ಯಾವನ ಮೂಲಕವಾಗಿ ಉನ್ನತಿಯನ್ನು ಋಷಿಗಳು ಹೊಂದುವರೋ –ಅವನು ದಾಮೋದರ. ದಮ ಏವ ದಾಮಃ, ತೇನ ಉದೀರ್ಯತಿ ಉನ್ನತಿಂ ಪ್ರಾಪ್ನೋತಿ ಯಸ್ಮಾತ್ ಸಃ ದಾಮೋದರಃ –ಇದು ದಾಮೋದರಪದದ ವ್ಯುತ್ಪತ್ತಿಯಾಗಿದೆ.)

ಪೃಶ್ನಿರಿತ್ಯುಚ್ಯತೇ ಚಾನ್ನಂ ವೇದ ಆಪೋಽಮೃತಂ ತಥಾ ।
ಮಮೈತಾನಿ ಸದಾ ಗರ್ಭಂ ಪೃಶ್ನಿಗರ್ಭಸ್ತತೋ ಹ್ಯಹಮ್ ॥೪೫॥

ಅನ್ನ, ವೇದ, ಜಲ ಮತ್ತು ಅಮೃತಗಳನ್ನು 'ಪೃಶ್ನಿ' ಎಂದು ಹೇಳುತ್ತಾರೆ. ಇವೆಲ್ಲವೂ ಸದಾ ನನ್ನ ಗರ್ಭದಲ್ಲಿಯೇ ಇರುವುದರಿಂದ ನಾನು ಪೃಶ್ನಿಗರ್ಭನಾಗಿದ್ದೇನೆ.

ಋಷಯಃ ಪ್ರಾಹುರೇವಂ ಮಾಂ ತ್ರಿತಂ ಕೂಪನಿಪಾತಿತಮ್ ।
ಪೃಶ್ನಿಗರ್ಭ ತ್ರಿತಂ ಪಾಹೀತ್ಯೇಕತದ್ವಿತಪಾತಿತಮ್ ॥೪೬॥

ತತಃ ಸ ಬ್ರಹ್ಮಣಃ ಪುತ್ರ ಆದ್ಯೋ ಹ್ಯೃಷಿವರಸ್ತ್ರಿತಃ ।
ಉತ್ತತಾರೋದಪಾನಾದ್ವೈ ಪೃಶ್ನಿಗರ್ಭಾನುಕೀರ್ತನಾತ್ ॥೪೭॥

ಏಕತ ಮತ್ತು ದ್ವಿತ ಎಂಬ ಇಬ್ಬರು ಋಷಿಗಳು ತ್ರಿತನನ್ನು ಬಾವಿಗೆ ತಳ್ಳಿಬಿಟ್ಟರು. ಆ ಸಮಯದಲ್ಲಿ ಋಷಿಗಳು ನನ್ನನ್ನು ಕುರಿತು– 'ಪೃಶ್ನಿಗರ್ಭನೇ! ಏಕತ ಮತ್ತು ದ್ವಿತರಿಂದ ಬಾವಿಗೆ ತಳ್ಳಲ್ಪಟ್ಟಿರುವ ತ್ರಿತನನ್ನು ಸಂರಕ್ಷಿಸು'–ಎಂಬುದಾಗಿ ಪ್ರಾರ್ಥಿಸಿದರು. ಹೀಗೆ ಅವರು ಆ ಸಮಯದಲ್ಲಿ ಪೃಶ್ನಿಗರ್ಭ ಎಂಬ ಹೆಸರಿನಿಂದ ನನ್ನನ್ನು ಸ್ತೋತ್ರಮಾಡಿದುದರಿಂದ ಬ್ರಹ್ಮನ ಮೊದಲನೆಯ ಮಗನಾದ, ಋಷಿಪ್ರವರನಾದ ತ್ರಿತನು ಬಾವಿಯಿಂದ ಮೇಲಕ್ಕೆ ಬಂದನು. ('ಪೃಶ್ನಿಗರ್ಭ'–ಎಂಬ ನಾಮವು ಅಷ್ಟು ಮಹತ್ತ್ವವುಳ್ಳದ್ದಾಗಿದೆ.)

ಸೂರ್ಯಸ್ಯ ತಪತೋ ಲೋಕಾನಗ್ನೇಃ ಸೋಮಸ್ಯ ಚಾಪ್ಯುತ ।
ಅಂಶವೋ ಯತ್ಪ್ರಕಾಶನ್ತೇ ಮಮೈತೇ ಕೇಶಸಂಜ್ಞಿತಾಃ ।
ಸರ್ವಜ್ಞಾಃ ಕೇಶವಂ ತಸ್ಮಾನ್ಮಾಮಾಹುರ್ದ್ವಿಜಸತ್ತಮಾಃ ॥೪೮॥

ಲೋಕಗಳನ್ನು ಪ್ರಕಾಶಗೊಳಿಸುವ ಸೂರ್ಯನ, ಅಗ್ನಿಯ ಮತ್ತು ಚಂದ್ರನ ಪ್ರಕಾಶಮಾನವಾದ ಕಿರಣಗಳೇ ನನ್ನ ಕೇಶಗಳೆಂಬ ಸಂಜ್ಞೆಯನ್ನು ಪಡೆದಿವೆ. ಅಂತಹ ಕೇಶಯುಕ್ತನಾದುದರಿಂದ ಸರ್ವಜ್ಞರಾದ ದ್ವಿಜಶ್ರೇಷ್ಠರು ನನ್ನನ್ನು ಕೇಶವನೆಂದು ಕರೆಯುತ್ತಾರೆ.

ಏವಂ ಹಿ ವರದಂ ನಾಮ ಕೇಶವೇತಿ ಮಮಾರ್ಜುನ ।
ದೇವಾನಾಮಥ ಸರ್ವೇಷಾಮೃಷೀಣಾಂ ಚ ಮಹಾತ್ಮನಾಮ್ ॥೪೯॥

ಅರ್ಜುನ! ಹೀಗೆ 'ಕೇಶವ'–ಎಂಬ ನನ್ನ ನಾಮವು ಸಮಸ್ತದೇವತೆಗಳಿಗೂ ಮತ್ತು ಮಹಾತ್ಮರಾದ ಸಮಸ್ತಮಹರ್ಷಿಗಳಿಗೂ ವರದಾಯಕವಾಗಿದೆ.

ಅಗ್ನಿಃ ಸೋಮೇನ ಸಂಯುಕ್ತ ಏಕಯೋನಿತ್ವಮಾಗತಃ ।
ಅಗ್ನೀಷೋಮಮಯಂ ತಸ್ಮಾಜ್ಜಗತ್ಕೃತ್ಸ್ನಂ ಚರಾಚರಮ್ ॥೫೦॥

ಅಗ್ನಿಯು ಸೋಮನೊಡನೆ ಸೇರಿ ಏಕಯೋನಿತ್ವವನ್ನು ಹೊಂದಿರುವನು. ಆದುದರಿಂದ ಚರಾಚರಾತ್ಮಕವಾದ ಸಕಲಜಗತ್ತೂ ಅಗ್ನೀಷೋಮಮಯವಾಗಿದೆ. ಪುರಾಣದಲ್ಲಿಯೂ ಅಗ್ನೀಷೋಮರು ಏಕಯೋನ್ಯಾತ್ಮಕರೆಂದೂ–ದೇವತೆಗಳೆಲ್ಲರೂ ಅಗ್ನಿಯೇ ಮುಖವಾಗಿ ಉಳ್ಳವರೆಂದೂ ಹೇಳಿದೆ. ಏಕಯೋನಿತ್ವದಿಂದ ಅಗ್ನೀಷೋಮರು ಪರಸ್ಪರವಾಗಿ ಭೋಕ್ತೃ-ಭೋಜ್ಯತ್ವಭಾವದಿಂದಿರುವರೆಂದೂ–ಲೋಕಗಳನ್ನು ಧರಿಸಿರುವರೆಂದೂ ಪುರಾಣದಲ್ಲಿ ಹೇಳಿದೆ."

ಇ೪೧ನೆಯ ಅಧ್ಯಾಯವು ಮುಗಿಯಿತು.

೩೪೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಶ್ರೀಕೃಷ್ಣನಿಂದ ಸೃಷ್ಟಿಯ ಪ್ರಾರಂಭದ ವರ್ಣನೆ: ಬ್ರಾಹ್ಮಣರ ಮಹಿಮಾರೂಪವಾದ ಅನೇಕಕಥೆಗಳ ಉಲ್ಲೇಖ: ರುದ್ರ-ನಾರಾಯಣರ ಯುದ್ಧದಲ್ಲಿ ನಾರಾಯಣನ ವಿಜಯ

ಅರ್ಜುನನು ಪ್ರಶ್ನಿಸುತ್ತಾನೆ :

ಅಗ್ನೀಷೋಮೌ ಕಥಂ ಪೂರ್ವಮೇಕಯೋನೀ ಪ್ರವರ್ತಿತೌ ।
ಏಷ ಮೇ ಸಂಶಯೋ ಜಾತಸ್ತಂ ಛಿನ್ಧಿ ಮಧುಸೂದನ ॥೧॥

"ಮಧುಸೂದನ! ಹಿಂದೆ ಅಗ್ನಿ ಮತ್ತು ಸೋಮರು ಏಕಯೋನಿಗಳು ಹೇಗಾದರು? ಈ ಸಂಶಯವು ನನಗುಂಟಾಗಿದೆ. ಇದನ್ನು ನಿವಾರಿಸು."

ಶ್ರೀಕೃಷ್ಣನು ಹೇಳುತ್ತಾನೆ :

"ಪಾಂಡುಪುತ್ರ! ನನ್ನ ತೇಜಸ್ಸಿನಿಂದಲೇ ಹುಟ್ಟಿದ ಅಗ್ನೀಷೋಮರ ಹಿಂದಿನ ಇತಿಹಾಸವನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ನಾಲ್ಕು ಸಹಸ್ರಯುಗಗಳು ಕಳೆದುಹೋಗಿ ಪ್ರಲಯಕಾಲವು ಸಂಭವಿಸಿದ್ದಿತು. ಸ್ಥಾವರ-ಜಂಗಮಾತ್ಮಕವಾದ ಸಮಸ್ತಪ್ರಾಣಿಗಳೂ ಅವ್ಯಕ್ತದಲ್ಲಿ ಲಯ ಹೊಂದಿದ್ದುವು. ಪೃಥ್ವೀ-ತೇಜಸ್ಸು-ವಾಯುಗಳೂ ಇರಲಿಲ್ಲ. ಎಲ್ಲ ಕಡೆ ಗಳಲ್ಲಿಯೂ ಘೋರಾಂಧಕಾರವು ಕವಿದಿದ್ದಿತು. ಎಲ್ಲ ಲೋಕಗಳೂ ಏಕಾರ್ಣವವಾದ ನೀರಿನಲ್ಲಿ ಮುಳುಗಿಹೋಗಿದ್ದುವು. ಅಗಾಧವಾದ ಜಲರಾಶಿಯೊಂದೇ ಆ ಸಮಯದಲ್ಲಿ ಸರ್ವತ್ರವ್ಯಾಪಿಸಿದ್ದಿತು. ಬೇರೆ ಯಾವ ವಸ್ತುವೂ ಅಲ್ಲಿ ಕಾಣುತ್ತಿರಲಿಲ್ಲ. 'ಅಪ್'-ಎಂಬ ಬ್ರಹ್ಮಭೂತಸಂಜ್ಞಕವಾದ ಏಕಮಾತ್ರಜಲವು-ಸರ್ವತ್ರ ಪ್ರತಿಷ್ಠಿತವಾಗಿದ್ದಿತು. ಆ ಸಮಯದಲ್ಲಿ ರಾತ್ರಿಯಾಗಲೀ-ಹಗಲಾಗಲೀ ಇರಲಿಲ್ಲ. ಸತ್ತಾಗಲೀ-ಅಸತ್ತಾಗಲೀ ಇರ ಲಿಲ್ಲ. ವ್ಯಕ್ತವಾಗಲೀ-ಅವ್ಯಕ್ತವಾಗಲೀ ಇರಲಿಲ್ಲ. ಅಂತಹ ಅವಸ್ಥೆಯಲ್ಲಿ ಅಜರನಾದ, ಅಮರನಾದ, ಇಂದ್ರಿಯಗಳಿಂದ ರಹಿತನಾದ, ಅಗ್ರಾಹ್ಯನಾದ, ಅಸಂಭವನಾದ, ಸತ್ಯಸ್ವರೂಪನಾದ, ಹಿಂಸಾರಹಿತನಾದ, ಸುಂದರನಾದ, ನಾನಾಪ್ರಕಾರವಾದ ವಿಶೇಷಪ್ರವೃತ್ತಿಗಳಿಗೆ ಕಾರಣಭೂತನಾದ, ವೈರ

ರಹಿತನಾದ, ಅಕ್ಷಯನಾದ, ಅಮರನಾದ, ಜರಾರಹಿತನಾದ, ನಿರಾಕಾರನಾದ, ಸರ್ವವ್ಯಾಪಿಯಾದ, ಸರ್ವಕರ್ತೃವಾದ ನಾರಾಯಣನ ಗುಣಗಳ ಆಶ್ರಯದಿಂದ ಶಾಶ್ವತನಾದ, ಅವ್ಯಯನಾದ, ಪುರುಷಶ್ರೇಷ್ಠನಾದ ಹರಿಯು ಪ್ರಾದುರ್ಭವಿಸಿದನು. ಈ ವಿಷಯದಲ್ಲಿ ಶ್ರುತಿಯ ನಿದರ್ಶನವೂ ಇದೆ.

ನಾಸೀದಹೋ ನ ರಾತ್ರಿರಾಸೀನ್ನ ಸದಾಸೀನ್ನಾಸದಾಸೀತ್ತಮ ಏವ ಪುರಸ್ತಾದಭವದ್ವಿಶ್ವರೂಪಮ್ । ಸಾ ವಿಶ್ವರೂಪಸ್ಯ ರಜನೀ ಹಿ ಏವಮಸ್ಯಾರ್ಥೋಽನುಭಾಷ್ಯಃ (ಯಜುರ್ವೇದದಲ್ಲಿ ಹೀಗೆ ಬರುತ್ತದೆ. ತಮ ಆಸೀತ್ತಮಸಾ ಗೂಢಮಗ್ರೇಽಪ್ರಕೇತಮ್ । ಸಲಿಲಗ್ಂ ಸರ್ವಮಾ ಇದಮ್ । ತುಚ್ಛೇನಾಭ್ವಪಿಹಿತಂ ಯದಾಸೀತ್ । ತಮಸಸ್ತನ್ಮಹಿನಾಽಜಾಯತೈಕಮ್ ॥)

ಪ್ರಳಯಕಾಲದಲ್ಲಿ ಹಗಲೂ ಇರಲಿಲ್ಲ ; ರಾತ್ರಿಯೂ ಇರಲಿಲ್ಲ. ಸತ್ತೂ ಇರಲಿಲ್ಲ ; ಅಸತ್ತೂ ಇರಲಿಲ್ಲ. ಕೇವಲ ತಮಸ್ಸೇ ಇದ್ದಿತು. ಅದು ಸರ್ವರೂಪವೂ ಆಗಿದ್ದಿತು. ಅದು ವಿಶ್ವರೂಪನ ರಾತ್ರಿಯಾಗಿದ್ದಿತು. ಹೀಗೆ ಈ ಶ್ರುತಿಯ ಅರ್ಥವನ್ನು ಹೇಳಬೇಕು ಮತ್ತು ಹಾಗೆಯೇ ತಿಳಿದುಕೊಳ್ಳಬೇಕು.

ಆ ಸಮಯದಲ್ಲಿ ತಮೋವಿಶಿಷ್ಟನಾದ, ಬ್ರಹ್ಮಯೋನಿಯಾದ ಪುರುಷನಿಂದ ಬ್ರಹ್ಮನ ಪ್ರಾದುರ್ಭಾವವಾಯಿತು. ಆಗ ಆ ಮಾಯಾವಿಶಿಷ್ಟನಾದ ಪುರುಷನು ಪ್ರಜೆಗಳನ್ನು ಸೃಷ್ಟಿಮಾಡುವ ಇಚ್ಛೆಯಿಂದ ತನ್ನ ದಿವ್ಯನೇತ್ರಗಳಿಂದ ಅಗ್ನಿ ಮತ್ತು ಸೋಮರನ್ನು ಸೃಷ್ಟಿಸಿದನು. ಹೀಗೆ ಭೂತಸೃಷ್ಟಿಯು ಅನುಕ್ರಮವಾಗಿ ಪ್ರಾರಂಭವಾದನಂತರ ಪ್ರಜೆಗಳ ಸೃಷ್ಟಿಯ ಸಮಯದಲ್ಲಿ ಅನುಕ್ರಮವಾಗಿ ಬ್ರಹ್ಮ-ಕ್ಷತ್ರರ ಸೃಷ್ಟಿಯಾಯಿತು.

ಯಃ ಸೋಮಸ್ತದ್ಬ್ರಹ್ಮ ಯದ್ಬ್ರಹ್ಮ ತೇ ಬ್ರಾಹ್ಮಣಾ ಯೋಽಗ್ನಿಸ್ತತ್ಕ್ಷತ್ರಂ ಕ್ಷತ್ರಾದ್ಬ್ರಹ್ಮ ಬಲವತ್ತರಮ್ ।

ಯಾವನು ಸೋಮನೋ ಅವನೇ ಬ್ರಹ್ಮನು. ಯಾವನು ಬ್ರಹ್ಮನೋ ಅವರೇ ಬ್ರಾಹ್ಮಣರು. ಯಾವನು ಅಗ್ನಿಯೋ ಅವನೇ ಕ್ಷತ್ರಿಯನು. ಆದರೆ

ಕ್ಷತ್ರಕ್ಕಿಂತಲೂ ಬ್ರಹ್ಮವು ಬಲವತ್ತರವಾದುದು. ಏಕೆ ಹೀಗಾಯಿತೆಂದರೆ ಇದು ಲೋಕಪ್ರತ್ಯಕ್ಷವಾದ (ಲೋಕಾನುಭವದ) ಗುಣವೇ ಆಗಿದೆ :

ಬ್ರಾಹ್ಮಣೇಭ್ಯಃ ಪರಂ ಭೂತಂ ನೋತ್ಪನ್ನಪೂರ್ವಂ ದೀಪ್ಯ ಮಾನೇಽಗ್ನೌ ಜುಹೋತಿ । ಯೋ ಬ್ರಾಹ್ಮಣಮುಖೇ ಜುಹೋತೀತಿ ಕೃತ್ವಾ ಬ್ರವೀಮಿ ।

ಬ್ರಾಹ್ಮಣನಿಗಿಂತಲೂ ಶ್ರೇಷ್ಠವಾದ ಬೇರೆ ಯಾವ ಪ್ರಾಣಿಯೂ ಹಿಂದೆ ಹುಟ್ಟಿರಲಿಲ್ಲ. ಯಾವನು ಬ್ರಾಹ್ಮಣನಿಗೆ ಭೋಜನವನ್ನು ಮಾಡಿಸುವನೋ– ಅವನು ಪ್ರಜ್ವಲಿತವಾದ ಅಗ್ನಿಯಲ್ಲಿ ಹೋಮಮಾಡಿದವನಾಗುತ್ತಾನೆ. ಆ ವಿಷಯವನ್ನು ತಿಳಿದೇ ನಾನು ಬ್ರಾಹ್ಮಣರ ವಿಷಯದಲ್ಲಿ ಹೀಗೆ ಹೇಳುತ್ತೇನೆ.

ಭೂತಸರ್ಗಃ ಕೃತೋ ಬ್ರಹ್ಮಣಾ ಭೂತಾನಿ ಚ ಪ್ರತಿಷ್ಠಾಪ್ಯ ತ್ರೈಲೋಕ್ಯಂ ಧಾರ್ಯತ ಇತಿ.

ಬ್ರಹ್ಮಶಕ್ತಿಯಿಂದಲೇ ಪ್ರಾಣಿಗಳು ಸೃಷ್ಟಿಸಲ್ಪಟ್ಟುವು. ಎಲ್ಲ ಪ್ರಾಣಿಗಳನ್ನೂ ಸಮುಚಿತವಾದ ಸ್ಥಾನಗಳಲ್ಲಿ ಪ್ರತಿಷ್ಠಾಪಿಸಿ ಮೂರು ಲೋಕಗಳನ್ನೂ ಅದು ಧರಿಸುತ್ತದೆ.

ಮನ್ತ್ರವಾದೋಽಪಿ ಹಿ ಭವತಿ

ಈ ವಿಷಯದಲ್ಲಿ ವೇದವಾಕ್ಯವೂ (ಈ ರೀತಿ) ಇದೆ :

ತ್ವಮಗ್ನೇ ಯಜ್ಞಾನಾಂ ಹೋತಾ ವಿಶ್ವೇಷಾಂ ಹಿತೋ ದೇವಾನಾಂ ಮಾನುಷಾಣಾಂ ಚ ಜಗತ ಇತಿ ।

'ಅಗ್ನಿಯೇ! ನೀನು ಯಜ್ಞಗಳಲ್ಲಿ ಹೋತೃವಾಗಿರುವೆ. ಸಂಪೂರ್ಣ ದೇವತೆಗಳಿಗೂ ಮನುಷ್ಯರಿಗೂ ಮತ್ತು ಜಗತ್ತಿಗೂ ಹಿತೈಷಿಯಾಗಿರುವೆ.'

ಈ ವಿಷಯದಲ್ಲಿ ಮತ್ತೊಂದು ದೃಷ್ಟಾಂತವೂ ಇದೆ.

ವಿಶ್ವೇಷಾಮಗ್ನೇ ಯಜ್ಞಾನಾಂ ತ್ವಂ ಹೋತೇತಿ । ತ್ವಂ ಹಿತೋ ದೇವೈರ್ಮನುಷ್ಯೈರ್ಜಗತ ಇತಿ

'ಅಗ್ನಿದೇವನೇ! ನೀನು ಸಕಲವಿಧವಾದ ಯಜ್ಞಗಳಿಗೂ ಹೋತೃ

ವಾಗಿರುವೆ. ಸಮಸ್ತದೇವತೆಗಳಿಗೂ ಮನುಷ್ಯರಿಂದ ಸಹಿತವಾದ ಜಗತ್ತಿಗೂ ನೀನು ಹಿತೈಷಿಯಾಗಿರುವೆ.

ಅಗ್ನಿರ್ಹಿ ಯಜ್ಞಾನಾಂ ಹೋತಾ । ಕರ್ತಾ ಸ ಚಾಗ್ನಿರ್ಬ್ರಹ್ಮ ॥

ಅಗ್ನಿದೇವನು ಯಜ್ಞಗಳಲ್ಲಿ ಹೋತೃವೂ ಕರ್ತೃವೂ ಆಗಿದ್ದಾನೆ. ಉಭಯರೂಪಿಯಾದ ಅಗ್ನಿಯು ಬ್ರಾಹ್ಮಣನು. ಮಂತ್ರವಿಲ್ಲದೇ ಹವನ ವಾಗುವುದಿಲ್ಲ. ಪುರುಷನಿಲ್ಲದೇ ತಪಸ್ಸಾಗುವುದಿಲ್ಲ. ಮಂತ್ರೋಕ್ತವಾದ ಹವಿಃಪ್ರದಾನದಿಂದ ದೇವ-ಮನುಷ್ಯರ್ಷಿಗಳು ಸತ್ಕೃತರಾಗುತ್ತಾರೆ. ಆದುದ ರಿಂದ, 'ಹೇ ಅಗ್ನಿದೇವ! ನಿನ್ನನ್ನು ಯಜ್ಞದಲ್ಲಿ ಹೋತೃವನ್ನಾಗಿ ಮಾಡಿದ್ದಾರೆ.' ಮನುಷ್ಯರಲ್ಲಿ ಹೋತೃವಿನ ಅಧಿಕಾರವನ್ನು ವಹಿಸುವವನು ಬ್ರಾಹ್ಮಣನೇ ಆಗಿದ್ದಾನೆ. ಏಕೆಂದರೆ : ಅವನಲ್ಲಿ ಯಜ್ಞಮಾಡಿಸುವ ವಿಧಾನವಿದೆ. ಅವನೇ ಯಾಜಕನೆಂಬುದು ಶಾಸ್ತ್ರವಿಹಿತವಾಗಿದೆ. ಕ್ಷತ್ರಿಯ-ವೈಶ್ಯರಿಗೆ–ಅವರು ದ್ವಿಜರೇ ಆಗಿದ್ದರೂ–ಯಾಜಕರಾಗುವ ಅಧಿಕಾರವಿಲ್ಲ. ಆದುದರಿಂದ ಅಗ್ನಿಸ್ವರೂಪರಾದ ಬ್ರಾಹ್ಮಣರೇ ಯಜ್ಞದ ಭಾರವನ್ನು ನಿರ್ವಹಿಸುತ್ತಾರೆ. ಬ್ರಾಹ್ಮಣರು ಮಾಡಿಸುವ ಯಜ್ಞಗಳು ದೇವತೆಗಳನ್ನು ತೃಪ್ತಿಗೊಳಿಸುತ್ತವೆ. ಹೀಗೆ ತೃಪ್ತರಾದ ದೇವತೆಗಳು ಭೂಮಂಡಲವನ್ನು ಧನ-ಧಾನ್ಯಗಳಿಂದ ಸಂಪನ್ನವನ್ನಾಗಿ ಮಾಡುತ್ತಾರೆ.

ಅಗ್ನೌ ಸಮಿದ್ಧೇ ಸ ಜುಹೋತಿ ಯೋ ವಿದ್ವಾನ್ಬ್ರಾಹ್ಮಣ ಮುಖೇನಾಹುತಿಂ ಜುಹೋತಿ ।

ಯಾವ ವಿದ್ವಾಂಸನು ಬ್ರಾಹ್ಮಣನ ಮುಖರೂಪವಾದ ಅಗ್ನಿಯಲ್ಲಿ ಅನ್ನರೂಪವಾದ ಆಹುತಿಯನ್ನು ಕೊಡುವನೋ–ಅವನು ಪ್ರಜ್ವಲಿಸುವ ಅಗ್ನಿಯಲ್ಲಿ ಹೋಮಮಾಡಿದವನಾಗುತ್ತಾನೆ.

(ಶತಪಥಬ್ರಾಹ್ಮಣದಲ್ಲಿಯೂ ಬ್ರಾಹ್ಮಣಮುಖವಾಗಿ ಆಹುತಿಯನ್ನು ಕೊಡುವ ಪ್ರಸ್ತಾಪವಿದೆ.

ಅಗ್ನೌ ಹುತೇ ಸತಿ ಬ್ರಾಹ್ಮಣೋ ನ ತೃಪ್ಯತಿ ಬ್ರಾಹ್ಮಣಮುಖೇ ಹುತಂ ಚೇದಗ್ನ್ಯಾದಯೋ ದೇವತಾ ಬ್ರಾಹ್ಮಣಶರೀರಂ ಪ್ರವಿಶ್ಯ ಧಾರಯನ್ತ್ಯತಸ್ತತ್ತೃಪ್ತ್ಯಾ ತೃಪ್ಯನ್ತಿ।)

ಏವಮಪ್ಯಗ್ನಿಭೂತಾ ಬ್ರಾಹ್ಮಣಾ ವಿದ್ವಾಂಸೋಽಗ್ನಿಂ ಭಾವಯನ್ತಿ।
ಅಗ್ನಿರ್ವಿಷ್ಣುಃ ಸರ್ವಭೂತಾನ್ಯನುಪ್ರವಿಶ್ಯ ಪ್ರಾಣಾನ್ಧಾರಯತಿ ।

ಹೀಗೆ ಬ್ರಾಹ್ಮಣರು ಅಗ್ನಿಸ್ವರೂಪರು. ವಿದ್ವಾಂಸರಾದ ಬ್ರಾಹ್ಮಣರು ಅಗ್ನಿಯನ್ನು ಆರಾಧಿಸುತ್ತಾರೆ. ಅಗ್ನಿಯೇ ಮಹಾವಿಷ್ಣುವು. ವಿಷ್ಣುರೂಪನಾದ ಅಗ್ನಿಯೇ ಎಲ್ಲ ಪ್ರಾಣಿಗಳನ್ನೂ ಪ್ರವೇಶಿಸಿ ಅವುಗಳ ಪ್ರಾಣಗಳನ್ನು ಧಾರಣೆಮಾಡುತ್ತಾನೆ.

ಈ ವಿಷಯದಲ್ಲಿ ಸನತ್ಕುಮಾರರು ಹೇಳಿರುವ ಶ್ಲೋಕಗಳೂ ನಿದರ್ಶನವಾಗಿವೆ.

ಬ್ರಹ್ಮಾ ವಿಶ್ವಂ ಸೃಜತ್ಸರ್ವಂ ಸರ್ವಾದಿರ್ನಿರವಸ್ಕೃತಮ್ ।
ಬ್ರಹ್ಮಘೋಷೈರ್ದಿವಂ ಗಚ್ಛನ್ತ್ಯಮರಾ ಬ್ರಹ್ಮಯೋನಯಃ ॥

ಸಕಲಕ್ಕೂ ಆದಿಕಾರಣನಾದ ಬ್ರಹ್ಮನು ಎಲ್ಲಕ್ಕಿಂತಲೂ ಮೊದಲು ನಿರ್ಮಲವಾದ ವಿಶ್ವವನ್ನು ಸೃಷ್ಟಿಸಿದನು. ಬ್ರಹ್ಮಯೋನಿಗಳಾದ ದೇವತೆಗಳು ಬ್ರಾಹ್ಮಣರ ವೇದಧ್ವನಿಗಳಿಂದಲೇ ಸ್ವರ್ಗಲೋಕಕ್ಕೆ ಹೋಗುತ್ತಾರೆ.

ಬ್ರಾಹ್ಮಣಾನಾಂ ಮತಿರ್ವಾಕ್ಯಂ ಕರ್ಮ ಶ್ರದ್ಧಾ ತಪಾಂಸಿ ಚ ।
ಧಾರಯನ್ತಿ ಮಹೀಂ ದ್ಯಾಂ ಚ ಶೈಕ್ಯೋ ವಾಗಮೃತಂ ತಥಾ ॥

ಯಾವ ರೀತಿಯಲ್ಲಿ ಮನೆಯಲ್ಲಿ ನೇತುಹಾಕಿರುವ ಕಾವಡಿಯ ನಿಲುವು ಅದರಲ್ಲಡಗಿರುವ ವಸ್ತುಗಳೆಲ್ಲವನ್ನೂ ಧರಿಸಿರುವುದೋ–ಅದೇ ರೀತಿಯಲ್ಲಿ ಬ್ರಾಹ್ಮಣರ ಬುದ್ಧಿ, ವೇದವಾಕ್ಯಗಳು, ಕರ್ಮಗಳು, ಶ್ರದ್ಧೆ, ತಪಸ್ಸುಗಳು ಮತ್ತು ಅಮೃತರೂಪವಾದ ಮಾತುಗಳು ಇವೆಲ್ಲವೂ ಪೃಥ್ವಿಯನ್ನೂ, ಸ್ವರ್ಗವನ್ನೂ ಧರಿಸಿರುತ್ತದೆ.

ನಾಸ್ತಿ ಸತ್ಯಾತ್ಪರೋ ಧರ್ಮೋ ನಾಸ್ತಿ ಮಾತೃಸಮೋ ಗುರುಃ ।
ಬ್ರಾಹ್ಮಣೇಭ್ಯಃ ಪರಂ ನಾಸ್ತಿ ಪ್ರೇತ್ಯ ಚೇಹ ಚ ಭೂತಯೇ ॥೧೪॥

ಸತ್ಯಕ್ಕಿಂತಲೂ ಶ್ರೇಷ್ಠವಾದ ಬೇರೆಯ ಧರ್ಮವಿಲ್ಲ. ತಾಯಿಗೆ ಸಮಾನರಾದ ಬೇರೆಯ ಗುರುವಿಲ್ಲ. ಇಹಲೋಕದಲ್ಲಿಯೇ ಆಗಲೀ ಪರ

ಲೋಕದಲ್ಲಿಯೇ ಆಗಲೀ–ಕಲ್ಯಾಣಾಭಿವೃದ್ಧಿಗೆ ಬ್ರಾಹ್ಮಣನಿಗಿಂತಲೂ ಶ್ರೇಷ್ಠನಾದವನು ಬೇರೆ ಯಾವನೂ ಇಲ್ಲ.

ನೈಷಾಮುಕ್ಷಾ ವಹತಿ ನೋತ ವಾಹಾ
ನ ಗರ್ಗರೋ ಮಥ್ನತಿ ಸಮ್ಪ್ರದಾನೇ ।
ಅಪಧ್ವಸ್ತಾ ದಸ್ಯುಭೂತಾ ಭವನ್ತಿ
ಯೇಷಾಂ ರಾಷ್ಟ್ರೇ ಬ್ರಾಹ್ಮಣಾ ವೃತ್ತಿಹೀನಾಃ ॥೧೯॥

ಯಾವ ರಾಜನ ರಾಜ್ಯದಲ್ಲಿ ಬ್ರಾಹ್ಮಣರು ವೃತ್ತಿಹೀನರಾಗಿರುವರೋ–ಅಂತಹ ರಾಜನ ರಾಜ್ಯದಲ್ಲಿ ಎತ್ತುಗಳಾಗಲೀ ಕುದುರೆಗಳಾಗಲೀ ಭಾರವನ್ನು ಹೊರುವುದಿಲ್ಲ. (ಕೃಷಿ-ವಾಣಿಜ್ಯಗಳಿರುವುದಿಲ್ಲ.) ಬೆಣ್ಣೆಯನ್ನಾಗಲೀ, ಮಜ್ಜಿಗೆಯನ್ನಾಗಲೀ ಕೊಡಲು ಅವನ ರಾಜ್ಯದಲ್ಲಿ ಮೊಸರು ಕಡೆಯುವ ಪಾತ್ರೆಗಳೂ ಇರುವುದಿಲ್ಲ. (ಗೋಧನವಿರುವುದಿಲ್ಲ.) ಅಂತಹ ರಾಜರು ಎಲ್ಲರಿಂದಲೂ ಧಿಕ್ಕರಿಸಲ್ಪಟ್ಟು ದಸ್ಯುಗಳಂತಾಗಿಬಿಡುತ್ತಾರೆ.

ವೇದಪುರಾಣೇತಿಹಾಸಪ್ರಾಮಾಣ್ಯಾನ್ನಾರಾಯಣಮುಖೋದ್ಗತಾಃ ।
ಸರ್ವಾತ್ಮಾನಃ ಸರ್ವಕರ್ತಾರಃ ಸರ್ವಭಾವಾಶ್ಚ ಬ್ರಾಹ್ಮಣಾಶ್ಚ ॥೨೦॥

ಬ್ರಾಹ್ಮಣರು ಶ್ರೀಮನ್ನಾರಾಯಣನ ಮುಖದಿಂದ ಹುಟ್ಟಿದರೆಂಬುದು ವೇದ-ಪುರಾಣೇತಿಹಾಸಗಳ ಪ್ರಮಾಣಗಳಿಂದ ಸಿದ್ಧವಾಗಿದೆ. ಆದುದರಿಂದ ಬ್ರಾಹ್ಮಣರು ಸರ್ವಾತ್ಮರೂ, ಸರ್ವಕರ್ತೃಗಳೂ, ಸರ್ವಭಾವಸ್ವರೂಪರೂ ಆಗಿದ್ದಾರೆ.

ವಾಕ್ಸಂಯಮಕಾಲೇ ಹಿತಸ್ಯ ವರಪ್ರದಸ್ಯ ದೇವದೇವಸ್ಯ ಬ್ರಾಹ್ಮಣಾಃ ಪ್ರಥಮಂ ಪ್ರಾದುರ್ಭೂತಾ ಬ್ರಾಹ್ಮಣೇಭ್ಯಶ್ಚ ಶೇಷಾವರ್ಣಾಃ ಪ್ರಾದುರ್ಭೂತಾಃ ॥೨೧॥

ವಾಣಿಯ ಸಂಯಮಕಾಲದಲ್ಲಿ ಎಲ್ಲರಿಗೂ ಹಿತೈಷಿಯಾದ, ವರಪ್ರದನಾದ, ದೇವಾಧಿದೇವನಾದ ಬ್ರಹ್ಮನಿಂದ ಎಲ್ಲರಿಗಿಂತಲೂ ಮೊದಲು ಬ್ರಾಹ್ಮಣರು ಹುಟ್ಟಿದರು. ಅನಂತರ ಬ್ರಾಹ್ಮಣವರ್ಣದಿಂದ ಹೊರತಾದ ಉಳಿದ ವರ್ಣಗಳು ಹುಟ್ಟಿದುವು.

ಇತ್ಥಂ ಚ ಸುರಾಸುರವಿಶಿಷ್ಟಾ ಬ್ರಾಹ್ಮಣಾ ಯ ಏವ
ಮಯಾ ಬ್ರಹ್ಮಭೂತೇನ ಪುರಾ ಸ್ವಯಮೇವೋತ್ಪಾದಿತಾಃ
ಸುರಾಸುರಮಹರ್ಷಯೋ ಭೂತವಿಶೇಷಾಃ ಸ್ಥಾಪಿತಾ
ನಿಗೃಹೀತಾಶ್ಚ ॥೨೨॥

ಹೀಗೆ ಬ್ರಾಹ್ಮಣರು ದೇವಾಸುರರಿಗಿಂತಲೂ ಶ್ರೇಷ್ಠರಾದವರು. ಹಿಂದೆ ನಾನೇ ಬ್ರಹ್ಮಸ್ವರೂಪನಾಗಿ ಬ್ರಾಹ್ಮಣರನ್ನು ಸೃಷ್ಟಿಸಿದೆನು. ದೇವಾಸುರ-ಮಹರ್ಷಿಗಳೇ ಮೊದಲಾದ ಭೂತವಿಶೇಷಗಳನ್ನು ಬ್ರಾಹ್ಮಣರೇ ಅವರವರ ಸ್ಥಾನಗಳಲ್ಲಿ ಸ್ಥಾಪಿಸಿದರು ಮತ್ತು ಅಪರಾಧಿಗಳನ್ನು ದಂಡಿಸಿದರು.

ಅಹಲ್ಯಾಧರ್ಷಣನಿಮಿತ್ತಂ ಹಿ ಗೌತಮಾದ್ಧರಿಶ್ಮಶ್ರುತಾಮಿನ್ದ್ರಃ ಪ್ರಾಪ್ತಃ ಕೌಶಿಕನಿಮಿತ್ತಂ ಚೇನ್ದ್ರೋ ಮುಷ್ಕವಿಯೋಗಂ ಮೇಷವೃಷಣತ್ವಂ ಚಾವಾಪ ॥೨೩॥

ಅಹಲ್ಯೆಯ ಮಾನಭಂಗವನ್ನು ಮಾಡಿದ ಇಂದ್ರನು ಗೌತಮರ ಶಾಪದ ದೆಸೆಯಿಂದ ಹರಿಶ್ಮಶ್ರುತ್ವವನ್ನು (ಹಸಿರಾದ ಮೀಸೆ-ಗಡ್ಡಗಳನ್ನು) ಹೊಂದಿದನು. ಕೌಶಿಕನ (ಗೌತಮನ) ಶಾಪದ ಕಾರಣದಿಂದಲೇ ಇಂದ್ರನು ತನ್ನ ವೃಷಣಗಳನ್ನು ಕಳೆದುಕೊಂಡು ಮೇಷವೃಷಣಗಳನ್ನು ಹೊಂದಿದನು.

ಅಶ್ವಿನೋರ್ಗ್ರಹಪ್ರತಿಷೇಧೋದ್ಯತವಜ್ರಧರಸ್ಯ ಪುರನ್ದರಸ್ಯ ಚ್ಯವನೇನ ಸ್ತಮ್ಭಿತೌ ಬಾಹೂ ॥೨೪॥

ಅಶ್ವಿನೀದೇವತೆಗಳಿಗೆ ನಿಯತವಾಗಿದ್ದ ಯಜ್ಞಭಾಗವನ್ನು ತಡೆಯುವ ಸಲುವಾಗಿ ವಜ್ರಾಯುಧವನ್ನು ಮೇಲೆತ್ತಿದ್ದ ಇಂದ್ರನ ತೋಳುಗಳನ್ನು ಚ್ಯವನನು ಸ್ತಬ್ಧಗೊಳಿಸಿದನು.

ಕ್ರತುವಧಪ್ರಾಪ್ತಮನ್ಯುನಾ ಚ ದಕ್ಷೇಣ ಭೂಯಸ್ತಪಸಾ ಚಾತ್ಮಾನಂ ಸಂಯೋಜ್ಯ ನೇತ್ರಾಕೃತಿರನ್ಯಾ ಲಲಾಟೇ ರುದ್ರಸ್ಯೋತ್ಪಾದಿತಾ ॥೨೫॥

ರುದ್ರನ ಮೂಲಕವಾಗಿ ತನ್ನ ಯಜ್ಞವು ವಿಧ್ವಸ್ತವಾದುದಕ್ಕಾಗಿ ಕೋಪಗೊಂಡ ದಕ್ಷಪ್ರಜಾಪತಿಯು ಘೋರವಾದ ತಪಸ್ಸನ್ನು ಮಾಡಿ ರುದ್ರನ ಹಣೆಯಲ್ಲಿ ಮತ್ತೊಂದು ಕಣ್ಣು ಹುಟ್ಟುವಂತೆ ಮಾಡಿದನು.

ತ್ರಿಪುರವಧಾರ್ಥಂ ದೀಕ್ಷಾಮುಪಗತಸ್ಯ ರುದ್ರಸ್ಯ ಉಶನಸಾ ಜಟಾಃ ಶಿರಸ ಉತ್ಕೃತ್ಯ ಪ್ರಯುಕ್ತಾಸ್ತತಃ ಪ್ರಾದುರ್ಭೂತಾಭುಜಗಾಸ್ತೈರಸ್ಯ ಭುಜಗೈಃ ಪೀಡ್ಯಮಾನಃ ಕಣ್ಠೋ ನೀಲತಾಮುಪಗತಃ । ಪೂರ್ವೇ ಚ ಮನ್ವನ್ತರೇ ಸ್ವಾಯಮ್ಭುವೇ ನಾರಾಯಣ ಹಸ್ತಗ್ರಹಣಾನ್ನೀಲಕಣ್ಠತ್ವಮೇವ ಚ ॥೨೭॥

ರುದ್ರನು–ತ್ರಿಪುರನಿವಾಸಿಗಳನ್ನು ಸಂಹರಿಸಲು ಬದ್ಧಕಂಕಣನಾದನು. ಆ ಸಮಯದಲ್ಲಿ ದೈತ್ಯಗುರುವಾದ ಬ್ರಾಹ್ಮಣನಾದ ಶುಕ್ರನು ತನ್ನ ತಲೆಯ ಜಟೆಗಳನ್ನು ಕಿತ್ತು ಅಭಿಮಂತ್ರಿಸಿ ಈಶ್ವರನ ಮೇಲೆ ಪ್ರಯೋಗಿಸಿದನು. ಒಡನೆಯೇ ಆ ಜಟೆಗಳೆಲ್ಲವೂ ಹಾವುಗಳಾಗಿ ಪರಿವರ್ತನೆಯನ್ನು ಹೊಂದಿ ರುದ್ರನ ಕುತ್ತಿಗೆಯನ್ನು ಸುತ್ತಿಕೊಂಡು ಪೀಡಿಸಲು ಪ್ರಾರಂಭಿಸಿದುವು. ಸರ್ಪಗಳಿಂದ ಪೀಡಿಸಲ್ಪಡುತ್ತಿದ್ದ ರುದ್ರನ ಕಂಠವು ನೀಲತ್ವವನ್ನು ಹೊಂದಿತು. ಅದರಿಂದ ರುದ್ರನು ನೀಲಕಂಠನಾದನು. ಹಿಂದಿನ ಸ್ವಾಯಂಭುವಮನ್ವಂತರದಲ್ಲಿ ನಾರಾಯಣನು ತನ್ನ ಕೈಯಿಂದ ರುದ್ರನ ಕಂಠವನ್ನು ಹಿಡಿದನು. ಆಗ ಕುತ್ತಿಗೆಯು ಕಪ್ಪಾಯಿತು. ಈ ಕಾರಣದಿಂದಲೂ ರುದ್ರನು ನೀಲಕಂಠನಾದನು.*

ಅಮೃತೋತ್ಪಾದನೇ ಪುರಶ್ಚರಣತಾಮುಪಗತಸ್ಯಾಙ್ಗಿರಸೋ ಬೃಹಸ್ಪತೇರುಪಸ್ಪೃಶತೋ ನ ಪ್ರಸಾದಂ ಗತವತ್ಯಃ ಕಿಲಾಪಃ । ಅಥ ಬೃಹ

---

*ನೀಲಕಂಠಃ : ಬೇರೆ ಬೇರೆ ಕಲ್ಪಗಳಲ್ಲಿ ಶಿವನಿಗೆ ನೀಲಕಂಠತ್ವವು ಪ್ರಾಪ್ತವಾದ ರೀತಿಗಳನ್ನು ಮೇಲಿನ ಪ್ರಕರಣಗಳು ಹೇಳುತ್ತವೆ. ವೈವಸ್ವತಮನ್ವಂತರದಲ್ಲಿ ಕ್ಷೀರಸಮುದ್ರವನ್ನು ದೇವ-ದಾನವರು ಮಥನಮಾಡಿದಾಗ ಅದರಿಂದ ವಿಷವು ಹೊರಬಂದಿತು. ಆಗ ಶಿವನು ದೇವತೆಗಳ ಪ್ರಾರ್ಥನೆಯ ಮೇರೆಗೆ ವಿಷವನ್ನು ಪಾನಮಾಡಿ ತನ್ನ ಕೊರಳಿನಲ್ಲಿಯೇ ನಿಲ್ಲಿಸಿದನು. ಅದರಿಂದ ಅವನಿಗೆ ನೀಲಕಂಠನೆಂಬ ಹೆಸರು ಬಂದಿತು. ಪ್ರಸಿದ್ಧವಾಗಿರುವ ಈ ಕಥೆಯು ಮಹಾಭಾರತದ ಆದಿಪರ್ವದಲ್ಲಿ ಬರುತ್ತದೆ.

ಸ್ಪತಿರಪಾಂ ಚುಕ್ರೋಧ ಯಸ್ಮಾನ್ಮಮೋಪಸ್ಪೃಶತಃ ಕಲುಷೀ ಭೂತಾ ನ ಚ ಪ್ರಸಾದಮುಪಗತಾಸ್ತಸ್ಮಾದದ್ಯಪ್ರಭೃತಿ ಝಷಮಕರಕ ಚ್ಛಪಜನ್ತುಭಿಃ ಕಲುಷೀಭವತೇತಿ । ತದಾ ಪ್ರಭೃತ್ಯಾಪೋ ಯಾದೋಭಿಃ ಸಂಕೀರ್ಣಾಃ ಸಮ್ಪ್ರವೃತ್ತಾಃ ॥೨೭॥

ಅಂಗಿರಸನ ಮಗನಾದ ಬೃಹಸ್ಪತಿಯು ಅಮೃತಮಂಥನದ ಕಾಲದಲ್ಲಿ ಮಂತ್ರಪುರಶ್ಚರಣೆಯನ್ನು ಪ್ರಾರಂಭಿಸಿದನು. ಪ್ರಾರಂಭದಲ್ಲಿ ಅವನು ಉಪಸ್ಪರ್ಶನಮಾಡಲು ಹೋದಾಗ ಜಲಾಶಯಗಳು ಪ್ರಸನ್ನವಾಗಲಿಲ್ಲ. ಸ್ವಚ್ಛವಾಗಿಯೂ ಇರಲಿಲ್ಲ. ಅದರಿಂದ ಬೃಹಸ್ಪತಿಯು ಕುಪಿತನಾಗಿ–"ನಾನು ಆಚಮನಮಾಡಲು ಬಂದ ಸಮಯದಲ್ಲಿ ನೀವು ಕಲುಷಿತರಾಗಿದ್ದಿರಿ. ಪ್ರಶಾಂತವಾಗಿರಲಿಲ್ಲ. ಆದುದರಿಂದ ನಾನೀಗ ಶಾಪಕೊಡುತ್ತಿದ್ದೇನೆ. ಇಂದು ಮೊದಲ್ಗೊಂಡು ಮೀನು, ಮೊಸಳೆ, ಆಮೆ ಇವೇ ಮೊದಲಾದ ಜಂತು ಗಳಿಂದ ನೀವು ಕಲುಷಿತರಾಗಿರಿ"–ಎಂದು ಶಾಪವಿತ್ತನು. ಬೃಹಸ್ಪತಿಯ ಶಾಪದಂತೆ ಅಂದಿನಿಂದ ಎಲ್ಲ ಜಲಾಶಯಗಳೂ ಜಲಜಂತುಗಳಿಂದ ತುಂಬಿಹೋಗಿರುತ್ತವೆ.

ತ್ವಷ್ಟ್ರುವಿನ ಮಗನಾದ ವಿಶ್ವರೂಪನು ದೇವತೆಗಳ ಪುರೋಹಿತ ನಾಗಿದ್ದನು. ಅವನು ಅಸುರೇಶ್ವರರಿಗೆ ತಂಗಿಯ ಮಗನಾಗಿದ್ದನು. ವಿಶ್ವರೂಪನು ದೇವತೆಗಳಿಗೆ ಪ್ರತ್ಯಕ್ಷವಾಗಿಯೂ–ಅಸುರರಿಗೆ ಪರೋಕ್ಷ ವಾಗಿಯೂ ಯಜ್ಞಭಾಗವನ್ನು ಕೊಡುತ್ತಿದ್ದನು. ಸ್ವಲ್ಪಕಾಲವು ಕಳೆದನಂತರ ಅಸುರರೆಲ್ಲರೂ ಹಿರಣ್ಯಕಶಿಪುವನ್ನು ಮುಂದೆಮಾಡಿಕೊಂಡು ವಿಶ್ವರೂಪನ ತಾಯಿಯ ಬಳಿಗೆ ಹೋಗಿ ವರವನ್ನು ಕೇಳಿದರು–"ತಂಗಿ! ನಿನಗೆ ತ್ವಷ್ಟ್ರುವಿ ನಿಂದ ಹುಟ್ಟಿದ ಮೂರು ತಲೆಗಳುಳ್ಳ ವಿಶ್ವರೂಪನು ದೇವತೆಗಳ ಪುರೋ ಹಿತನಾಗಿ ದೇವತೆಗಳಿಗೆ ಪ್ರತ್ಯಕ್ಷವಾಗಿ ಯಜ್ಞಭಾಗವನ್ನು ಕೊಡುತ್ತಾನೆ. ನಮಗಾದರೋ ಪರೋಕ್ಷವಾಗಿ ಯಜ್ಞಭಾಗವನ್ನು ಕೊಡುತ್ತಾನೆ. ಹೀಗೆ ಮಾಡುವುದರಿಂದ ದೇವತೆಗಳು ವರ್ಧಿಸುತ್ತಲೇ ಇದ್ದಾರೆ. ನಾವು ಕ್ಷೀಣಿ ಸುತ್ತಲೇ ಇದ್ದೇವೆ. ಆದುದರಿಂದ ವಿಶ್ವರೂಪನು ದೇವತೆಗಳ ಬಳಿಗೆ ಹೋಗದಂತೆ ನೀನು ಅವನನ್ನು ತಡೆದು ನಮ್ಮ ಪಕ್ಷಕ್ಕೇ ಸೇರುವಂತೆ ಅವನಿಗೆ ಸಲಹೆನೀಡಬೇಕು."

ವಿಶ್ವರೂಪನ ತಾಯಿಯು ಹಾಗೆಯೇ ಆಗಲೆಂದು ಹಿರಣ್ಯಕಶಿಪು ಪ್ರಮುಖರಾದ ಅಸುರರಿಗೆ ಅಭಯವನ್ನಿತ್ತು ನಂದನವನದಲ್ಲಿದ್ದ ವಿಶ್ವರೂಪನ ಬಳಿಗೆ ಹೋಗಿ ಅವನೊಡನೆ ಹೇಳಿದಳು :

"ಮಗು! ನೀನು ಶತ್ರುಪಕ್ಷವನ್ನು ವರ್ಧಿಸುವವನಾಗಿದ್ದು ಮಾತುಲ ಪಕ್ಷವನ್ನೇಕೆ ಕ್ಷೀಣಗೊಳಿಸುತ್ತಿರುವೆ? ಹೀಗೆ ಮಾಡುವುದು ನಿನಗೆ ಯುಕ್ತವಲ್ಲ." ತಾಯಿಯ ಆ ಮಾತನ್ನು ಕೇಳಿದೊಡನೆಯೇ ವಿಶ್ವರೂಪನು ತಾಯಿಯ ಮಾತು ಅನತಿಕ್ರಮಣೀಯವೆಂದು ಭಾವಿಸಿ, ತಾಯಿಯನ್ನು ಯಥೋಚಿತವಾಗಿ ಸತ್ಕರಿಸಿ ಬೀಳ್ಕೊಟ್ಟು, ದೇವತೆಗಳ ಪಕ್ಷವನ್ನು ಬಿಟ್ಟು ಹಿರಣ್ಯಕಶಿಪುವಿನ ಸಮೀಪಕ್ಕೆ ಹೋದನು. ತನ್ನ ಆಶಯದಂತೆ ದೇವತೆಗಳ ಪಕ್ಷವನ್ನು ಬಿಟ್ಟು ತಮ್ಮ ಪಕ್ಷಕ್ಕೇ ಬಂದ ವಿಶ್ವರೂಪನನ್ನು ಅಸುರೇಶ್ವರನು ಸತ್ಕರಿಸಿ ತಾನು ಮಾಡುತ್ತಿದ್ದ ಯಾಗಕ್ಕೆ ಅವನನ್ನು ಹೋತೃವನ್ನಾಗಿ ಮಾಡಿಕೊಂಡನು. ಅದಕ್ಕೆ ಮೊದಲು ಬ್ರಹ್ಮಮಾನಸಪುತ್ರನಾದ ವಸಿಷ್ಠನು ಹಿರಣ್ಯಕಶಿಪುವಿಗೆ ಯಾಜಕನಾಗಿದ್ದನು. ತನ್ನನ್ನು ಅನಾದರಿಸಿ ವಿಶ್ವರೂಪನನ್ನು ಹೋತೃವನ್ನಾಗಿ ಮಾಡಿಕೊಂಡುದಕ್ಕಾಗಿ ಕುಪಿತನಾದ ವಸಿಷ್ಠನು ಹಿರಣ್ಯಕಶಿಪುವಿಗೆ ಶಾಪವನ್ನಿತ್ತನು.

ಯಸ್ಮಾತ್ತ್ವಯಾನ್ಯೋ ವೃತೋ ಹೋತಾ ತಸ್ಮಾದಸಮಾಪ್ತ
ಯಜ್ಞಸ್ತ್ವಮಪೂರ್ವಾತ್ಸತ್ತ್ವಜಾತಾದ್ವಧಂ ಪ್ರಾಪ್ಸ್ಯತಿ

"ನೀನು ಬೇರೊಬ್ಬನನ್ನು ಹೋತೃವನ್ನಾಗಿ ಆರಿಸಿಕೊಂಡೆಯಾದುದ ರಿಂದ ನೀನು ಪ್ರಾರಂಭಿಸಿರುವ ಈ ಯಜ್ಞವು ಮುಗಿಯುವುದರೊಳ ಗಾಗಿಯೇ ಅಪೂರ್ವವಾದೊಂದು ಪ್ರಾಣಿಯಿಂದ ಸಾವಿಗೆ ಈಡಾಗುವೆ."

ವಸಿಷ್ಠನ ಆ ಶಾಪಾನುಸಾರವಾಗಿ ಅಪೂರ್ವಸತ್ತ್ವದಿಂದ (ಶ್ರೀನೃಸಿಂಹ ನಿಂದ) ಹಿರಣ್ಯಕಶಿಪುವಿನ ವಧೆಯಾಯಿತು. ಅದರಿಂದ ಖಿನ್ನನಾದ ವಿಶ್ವರೂಪನು ಮಾತೃಪಕ್ಷದ ವೃದ್ಧಿಗಾಗಿ ಅತಿಕಠೋರವಾದ ತಪಸ್ಸಿನಲ್ಲಿ ತೊಡಗಿದನು. ಅವನ ತಪಸ್ಸನ್ನು ಭಂಗಪಡಿಸಲು ಇಂದ್ರನು ಕಾಂತಿ

ಯುಕ್ತರಾದ ಬಹುಮಂದಿ ಅಪ್ಸರೆಯರನ್ನು ವಿಶ್ವರೂಪನ ಬಳಿಗೆ ಕಳುಹಿಸಿದನು. ಅವರನ್ನು ನೋಡಿ ವಿಶ್ವರೂಪನ ಮನಸ್ಸು ಕ್ಷುಭಿತವಾಯಿತು. ವಿಶ್ವರೂಪನು ಬಹಳ ಬೇಗ ಆ ಅಪ್ಸರೆಯರಲ್ಲಿಯೇ ಆಸಕ್ತನಾಗಿಬಿಟ್ಟನು. ತಮ್ಮಲ್ಲಿಯೇ ವಿಶ್ವರೂಪನು ಆಸಕ್ತನಾಗಿರುವುದನ್ನು ತಿಳಿದು ಅಪ್ಸರೆಯರು ವಿಶ್ವರೂಪನೊಡನೆ "**ಗಚ್ಛಾಮಹೇ ವಯಂ ಯಥಾಗತಮ್ ।** "ನಾವು ಬಂದ ದಾರಿಯನ್ನು ಹಿಡಿದು ಹೋಗುತ್ತೇವೆ"– ಎಂದು ಹೇಳಿದರು.

ಅಪ್ಸರೆಯರ ಮಾತನ್ನು ಕೇಳಿದ ವಿಶ್ವರೂಪನು ದೇವಕನ್ಯೆಯರೊಡನೆ ಹೇಳಿದನು :

ಕ್ವ ಗಮಿಷ್ಯಥಾಸ್ಯತಾಂ ತಾವನ್ಮಯಾ ಸಹ ಶ್ರೇಯೋ ಭವಿಷ್ಯತಿ ।

"ಚೆಲುವೆಯರೇ! ನೀವೆಲ್ಲಿಗೆ ಹೋಗುವಿರಿ? ಇಲ್ಲಿಯೇ ನನ್ನ ಜೊತೆಯಲ್ಲಿಯೇ ಇದ್ದುಬಿಡಿರಿ. ಇದರಿಂದ ನಿಮಗೆ ಶ್ರೇಯಸ್ಸೇ ಉಂಟಾಗುತ್ತದೆ."

ವಿಶ್ವರೂಪನ ಮಾತನ್ನು ಕೇಳಿದ ಅಪ್ಸರೆಯರು ಪುನಃ ಹೇಳಿದರು :

ವಯಂ ದೇವಸ್ತ್ರಿಯೋಽಪ್ಸರಸಃ ಇನ್ದ್ರಂ ದೇವಂ ವರದಂ ಪುರಾ ಪ್ರಭವಿಷ್ಣುಂ ವೃಣೀಮಹೇ ।

"ವಿಶ್ವರೂಪನೇ! ನಾವು ದೇವಾಂಗನೆಯರಾದ ಅಪ್ಸರೆಯರು. ವರದನಾದ, ಪ್ರಭಾವಶಾಲಿಯಾದ ದೇವೇಂದ್ರನನ್ನು ನಾವು ಮೊದಲೇ ವರಿಸಿಬಿಟ್ಟಿದ್ದೇವೆ."

ಅಪ್ಸರೆಯರ ಮಾತನ್ನು ಕೇಳಿ ವಿಶ್ವರೂಪನು ಹೇಳಿದನು :

ಅದ್ಯೈವ ಸೇನ್ದ್ರಾ ದೇವಾ ನ ಭವಿಷ್ಯನ್ತಿ ।

"ಈ ಕ್ಷಣದಲ್ಲಿಯೇ ಇಂದ್ರಸಹಿತರಾದ ದೇವತೆಗಳಲ್ಲಿ ಯಾರೂ ಉಳಿಯುವುದಿಲ್ಲ."

ಹೀಗೆ ಹೇಳಿ ವಿಶ್ವರೂಪನು ಮಂತ್ರಗಳನ್ನು ಜಪಿಸಲು ಉಪಕ್ರಮಿಸಿದನು. ಆ ಮಂತ್ರಗಳ ಜಪದಿಂದ ಅವನ ಶಕ್ತಿಯು ಬಹಳವಾಗಿ ವರ್ಧಿ

ಸಿತು. ಮೂರು ತಲೆಗಳನ್ನು ಹೊಂದಿದ್ದ ವಿಶ್ವರೂಪನು ತನ್ನ ಒಂದು ಮುಖದಿಂದ ಜಗತ್ತಿನಲ್ಲಿ ಕ್ರಿಯಾನಿಷ್ಠರಾದ ಬ್ರಾಹ್ಮಣರಿಂದ ವಿಧಿಪೂರ್ವಕವಾದ ಯಜ್ಞಗಳಲ್ಲಿ ಹೋಮರೂಪವಾಗಿ ಅರ್ಪಿತವಾಗುತ್ತಿದ್ದ ಸೋಮರಸವನ್ನು ಪಾನಮಾಡುತ್ತಿದ್ದನು. ಎರಡನೆಯ ಮುಖದಿಂದ ಅನ್ನವನ್ನು ತಿನ್ನುತ್ತಿದ್ದನು. ಮೂರನೆಯ ಮುಖದಿಂದ ಇಂದ್ರಾದಿದೇವತೆಗಳ ತೇಜಸ್ಸನ್ನು ಹೀರುತ್ತಿದ್ದನು. ವಿಶ್ವರೂಪನ ಸಂಪೂರ್ಣಶರೀರವೂ ಸೋಮಪಾನದಿಂದ ಪರಿಪುಷ್ಟವಾಗಿರುವುದನ್ನು ಇಂದ್ರನು ನೋಡಿದನು. ಅದರಿಂದ ದೇವತೆಗಳೊಡನೆ ಇಂದ್ರನು ಚಿಂತಾಕ್ರಾಂತನಾದನು. ಬಳಿಕ ಇಂದ್ರಪ್ರಮುಖರಾದ ಎಲ್ಲ ದೇವತೆಗಳೂ ಬ್ರಹ್ಮನ ಬಳಿಗೆ ಹೋಗಿ ಹೇಳಿದರು :

ವಿಶ್ವರೂಪೇಣ ಸರ್ವಯಾಗೇಷು ಸುಹುತಃ ಸೋಮಃ ಪೀಯತೇ ವಯಮಭಾಗಾಃ ಸಂವೃತ್ತಾಃ ಅಸುರಪಕ್ಷೋವರ್ಧತೇ ವಯಂ ಕ್ಷೀಯಾಮಃ ತದರ್ಹಸಿ ನೋ ವಿಧಾತುಂ ಶ್ರೇಯೋಽನನ್ತರಮ್ ।

“ಭಗವನ್! ವಿಶ್ವರೂಪನು ಜಗತ್ತಿನಲ್ಲಿ ನಡೆಯುತ್ತಿರುವ ಎಲ್ಲ ಯಜ್ಞಗಳಲ್ಲಿಯೂ ಸುಹುತವಾದ ಸೋಮವನ್ನು ಪಾನಮಾಡುತ್ತಿದ್ದಾನೆ. ಈಗ ನಮಗೆ ಯಜ್ಞಗಳಲ್ಲಿ ಭಾಗವೇ ಸಿಕ್ಕುತ್ತಿಲ್ಲ. ಯಜ್ಞಭಾಗವಿಲ್ಲದವರಾಗಿದ್ದೇವೆ. ಇದರಿಂದ ನಾವು ಕ್ಷೀಣಿಸುತ್ತಿದ್ದೇವೆ. ಅಸುರರ ಪಕ್ಷವು ದಿನ-ದಿನಕ್ಕೂ ವರ್ಧಿಸುತ್ತಿದೆ. ಈ ಸಮಯದಲ್ಲಿ ನೀನು ನಮಗೆ ಶ್ರೇಯಸ್ಸನ್ನುಂಟುಮಾಡುವ ಕೃಪೆಮಾಡು.”

ದೇವತೆಗಳ ಮಾತನ್ನು ಕೇಳಿ ಬ್ರಹ್ಮನು ಹೇಳಿದನು :

“ದೇವತೆಗಳೇ! ಭೃಗುವಂಶೀಯನಾದ ದಧೀಚಮಹರ್ಷಿಯು ತಪಸ್ಸನ್ನು ಮಾಡುತ್ತಿದ್ದಾನೆ. ಅವನ ಸಮೀಪಕ್ಕೆ ಹೋಗಿ ಕಳೇಬರವನ್ನು ಪರಿತ್ಯಾಗಮಾಡುವಂತೆ ಅವನಿಂದ ನೀವು ವರವನ್ನು ಪ್ರಾರ್ಥಿಸಿರಿ. ಅನಂತರ ಅವನ ಶರೀರದಲ್ಲಿರುವ ಮೂಳೆಗಳಿಂದ ವಜ್ರಾಯುಧವನ್ನು ನಿರ್ಮಿಸಿರಿ.”

ಬ್ರಹ್ಮದೇವನ ಮಾತನ್ನು ಕೇಳಿ ಇಂದ್ರಸಹಿತರಾದ ದೇವತೆಗಳು ಪೂಜ್ಯನಾದ ದಧೀಚಮಹರ್ಷಿಯು ತಪಸ್ಸುಮಾಡುತ್ತಿದ್ದ ಸ್ಥಳಕ್ಕೆ ಹೋದರು. ದಧೀಚಮಹರ್ಷಿಯನ್ನು ಸಂಧಿಸಿ ವಿನೀತರಾಗಿ –“ತಮ್ಮ ತಪಸ್ಸು ನಿರ್ವಿಘ್ನವಾಗಿ ನಡೆಯುತ್ತಿರುವುದೇ?”–ಎಂದು ಪ್ರಶ್ನಿಸಿದರು. ಅದಕ್ಕೆ ಉತ್ತರವಾಗಿ ದಧೀಚನು–“ಇಂದ್ರಪ್ರಮುಖರಾದ ದೇವತೆಗಳೇ! ನಿಮ್ಮೆಲ್ಲರಿಗೂ ಸ್ವಾಗತವನ್ನು ಬಯಸುತ್ತೇನೆ. ನಾನು ತಮಗೋಸ್ಕರ ಯಾವ ಕಾರ್ಯವನ್ನು ಮಾಡಿಕೊಡಲಿ? ನೀವು ಹೇಳಿದಂತೆಯೇ ನಡೆಸಿಕೊಡುತ್ತೇನೆ. ಹೇಳಿರಿ”–ಎಂದು ಹೇಳಿದನು. ದೇವತೆಗಳು ತಮ್ಮ ಆಶಯವನ್ನು ವ್ಯಕ್ತಪಡಿಸಿದರು :

ಶರೀರಪರಿತ್ಯಾಗಂ ಲೋಕಹಿತಾರ್ಥಂ ಭಗವಾನ್ಕರ್ತುಮರ್ಹತಿ ॥

“ಋಷಿಸತ್ತಮನೇ! ಲೋಕಹಿತಾರ್ಥವಾಗಿ ಶರೀರಪರಿತ್ಯಾಗಮಾಡುವ ಕೃಪೆಮಾಡು.”

ದೇವತೆಗಳ ಆ ಮಾತನ್ನು ಕೇಳಿ ಸುಖ-ದುಃಖಗಳನ್ನು ಸಮಾನವನ್ನಾಗಿ ಭಾವಿಸಿದ್ದ, ಮಹಾಯೋಗಿಯಾದ ದಧೀಚಮಹರ್ಷಿಯು ಸ್ವಲ್ಪವೂ ವಿಮನಸ್ಕನಾಗದೇ ಉತ್ಸಾಹಪೂರ್ವಕವಾಗಿಯೇ ತನ್ನ ಮನಸ್ಸನ್ನು ಪರಮಾತ್ಮನಲ್ಲಿ ವಿಲೀನಗೊಳಿಸಿ ಶರೀರವನ್ನು ತ್ಯಾಗಮಾಡಿಬಿಟ್ಟನು. ದಧೀಚನು ಪರಮಾತ್ಮನಲ್ಲಿ ಲೀನನಾದನಂತರ ಧಾತೃವು ಅವನ ಅಸ್ಥಿಗಳನ್ನು ಸಂಗ್ರಹಿಸಿ ಅದರಿಂದಲೇ ವಜ್ರಾಸ್ತ್ರವನ್ನು ಸಿದ್ಧಗೊಳಿಸಿದನು. ಅಭೇದ್ಯವಾದ, ಎದುರಿಸಲು ಅಸಾಧ್ಯವಾದ, ಬ್ರಾಹ್ಮಣನ ಅಸ್ಥಿಗಳಿಂದ ನಿರ್ಮಿತವಾದ, ವಿಷ್ಣುವಿನ ಅಧಿಷ್ಠಾನವಿದ್ದ ವಜ್ರಾಯುಧದಿಂದ ಇಂದ್ರನು ವಿಶ್ವರೂಪನನ್ನು ಪ್ರಹರಿಸಿದನು. ಅವನ ಮೂರು ತಲೆಗಳನ್ನೂ ಕತ್ತರಿಸಿದನು. ಅನಂತರ ವಿಶ್ವರೂಪನ ತಂದೆಯಾದ ತ್ವಷ್ಟೃವು ವಿಶ್ವರೂಪನ ಶರೀರವನ್ನೇ ಮಥಿಸಿದನು. ಅವನ ಶರೀರದಿಂದ ವೃತ್ರಾಸುರನು ಹುಟ್ಟಿದನು. ಇಂದ್ರನು ವೈರಿಯಾದ ವೃತ್ರಾಸುರನನ್ನೂ ಅದೇ ವಜ್ರಾಯುಧದಿಂದಲೇ ಸಂಹರಿಸಿದನು. ಹೀಗೆ ಇಂದ್ರನು ವಿಶ್ವರೂಪನನ್ನೂ–ವೃತ್ರನನ್ನೂ ಸಂಹರಿಸಿದ್ದರಿಂದ ಎರಡು ಬಗೆಯ ಬ್ರಹ್ಮಹತ್ಯಾಪಾಪವು ಅವನನ್ನು ಕಾಡತೊಡಗಿತು. ಅದರಿಂದ ಭಯಗ್ರಸ್ತ

ನಾದ ಇಂದ್ರನು ದೇವರಾಜ್ಯವನ್ನು ಪರಿತ್ಯಜಿಸಿ, ಶೀತಲವಾದ ಮಾನಸ ಸರೋವರದ ನೀರಿನಲ್ಲಿ ಹುಟ್ಟಿರುವ ಕಮಲದಲ್ಲಿ ಸೇರಿಕೊಂಡನು. ಇಂದ್ರನು ಅಣಿಮಾದಿ ಐಶ್ವರ್ಯಯೋಗದಿಂದ ಅಣುರೂಪನಾಗಿ ಕಮಲದ ದಂಟಿನ ಗೆಣ್ಣನ್ನು ಪ್ರವೇಶಿಸಿದನು. ಬ್ರಹ್ಮಹತ್ಯಾಪಾಪದ ಭಯದಿಂದ ತ್ರೈಲೋಕನಾಥನಾದ ಶಚೀಪತಿಯಾದ ಇಂದ್ರನು ಅದೃಶ್ಯನಾದನಂತರ ಜಗತ್ತು ಅರಾಜಕವಾಯಿತು. ರಜಸ್ತಮೋಗುಣಗಳು ದೇವತೆಗಳನ್ನು ಪ್ರವೇಶಿಸಿದುವು. ಮಹರ್ಷಿಗಳು ಹೇಳುತ್ತಿದ್ದ ಮಂತ್ರಗಳಿಂದ ಯಾವ ಪ್ರಯೋಜನವೂ ಆಗುತ್ತಿರಲಿಲ್ಲ. ರಾಕ್ಷಸರು ಹೆಚ್ಚಿಕೊಂಡರು. ವೇದಗಳ ಅಧ್ಯಯನ-ಅಧ್ಯಾಪನಗಳು ನಿಂತುಹೋದುವು. ಇಂದ್ರನಿಲ್ಲದೇ ಇದ್ದುದ ರಿಂದ ಲೋಕಗಳೆಲ್ಲವೂ ದುರ್ಬಲವಾದುವು. ಆ ಸಮಯದಲ್ಲಿ ಮೂರು ಲೋಕಗಳನ್ನೂ ಯಾರು ಬೇಕಾದರೂ ಎದುರಿಸಿ ಜಯಿಸಬಹುದಾಗಿದ್ದಿತು.

ಅನಂತರ ದೇವತೆಗಳೂ ಮತ್ತು ಋಷಿಗಳೂ ಆಯುವಿನ ಮಗನಾದ ನಹುಷನನ್ನು ದೇವರಾಜ್ಯದ ಸಿಂಹಾಸನದಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕ ಮಾಡಿದರು. ನಹುಷನು ತನ್ನ ಹಣೆಯಲ್ಲಿ ಸಮಸ್ತಪ್ರಾಣಿಗಳ ತೇಜಸ್ಸನ್ನೂ ಅಪಹರಿಸುವ ಸಾಮರ್ಥ್ಯವಿದ್ದ, ಪ್ರಜ್ವಲಿಸುತ್ತಿದ್ದ ಐದು ನೂರು ಜ್ಯೋತಿಗಳನ್ನು ಹೊಂದಿದ್ದು ಆ ಮಹಾಶಕ್ತಿಯ ಮೂಲಕವಾಗಿ ಸ್ವರ್ಗರಾಜ್ಯವನ್ನು ಪರಿಪಾಲಿಸುತ್ತಿದ್ದನು. ನಹುಷನು ಮೂರು ಲೋಕಗಳ ಚಕ್ರವರ್ತಿಯಾದ ನಂತರ ಎಲ್ಲ ಲೋಕಗಳೂ ಸ್ವಾಭಾವಿಕಸ್ಥಿತಿಗೆ ಮರಳಿದುವು. ಸಕಲಪ್ರಜೆಗಳೂ ಶಾಂತರೂ, ಹೃಷ್ಟರೂ, ಸುಖಿಗಳೂ ಆದರು.

ಸ್ವಲ್ಪಕಾಲ ಕಳೆದ ನಂತರ ನಹುಷನು ದೇವತೆಗಳೊಡನೆ ಹೇಳಿದನು :

ಸರ್ವಂ ಮಾಂ ಶಕ್ರೋಪಭುಕ್ತಮುಪಸ್ಥಿತಮೃತೇ ಶಚೀಮ್

“ಶಚಿಯೊಬ್ಬಳನ್ನು ಬಿಟ್ಟು ಇಂದ್ರನು ಉಪಭೋಗಿಸುತ್ತಿದ್ದ ಸಕಲ ವಸ್ತುಗಳೂ ನನ್ನ ಉಪಭೋಗಕ್ಕೆ ಬಂದಿವೆ. (ನಾನು ಇಂದ್ರನೇ ಆಗಿರುವುದ ರಿಂದ ಶಚಿಯನ್ನೂ ಅಪೇಕ್ಷಿಸುತ್ತೇನೆ.)” ನಹುಷನು ಹೀಗೆ ಹೇಳಿ ಶಚೀದೇವಿಯ ಬಳಿಗೆ ಹೋಗಿ ಅವಳೊಡನೆ ಹೇಳಿದನು :

ಸುಭಗೇಽಹಮಿನ್ದ್ರೋ ದೇವಾನಾಂ ಭಜಸ್ವ ಮಾಮ್ ।

“ಸೌಭಾಗ್ಯವತಿಯೇ! ನಾನು ದೇವತೆಗಳಿಗೆ ರಾಜನಾದ ಇಂದ್ರನಾಗಿದ್ದೇನೆ ; ನನ್ನನ್ನು ಸೇವಿಸು.”

ಶಚೀದೇವಿಯು ಪ್ರತ್ಯುತ್ತರಿಸಿದಳು :

ಪ್ರಕೃತ್ಯಾ ತ್ವಂ ಧರ್ಮವತ್ಸಲಃ ಸೋಮವಂಶೋದ್ಭವಶ್ಚ । ನಾರ್ಹಸಿ ಪರಪತ್ನೀಧರ್ಷಣಂ ಕರ್ತುಮ್

“ಸ್ವಾಭಾವಿಕವಾಗಿಯೇ ನೀನು ಧರ್ಮವತ್ಸಲನಾಗಿರುವೆ. ಸುಪ್ರಸಿದ್ಧವಾದ ಚಂದ್ರವಂಶದಲ್ಲಿ ಹುಟ್ಟಿರುವೆ. ನಿನ್ನಂತಹವನು ಪರಪತ್ನಿಯ ಮಾನಭಂಗಮಾಡುವುದು ಯೋಗ್ಯವಲ್ಲ.”

ನಹುಷನು ಪುನಃ ಶಚಿಯೊಡನೆ ಹೇಳಿದನು :

ಐನ್ದ್ರಂ ಪದಮಧ್ಯಾಸ್ಯತೇ ಮಯಾ । ಅಹಮಿನ್ದ್ರಸ್ಯ ರಾಜ್ಯರತ್ನಹರಃ, ನಾತ್ರಾಧರ್ಮಃ ಕಶ್ಚಿತ್ । ತ್ವಮಿನ್ದ್ರೋಪಭುಕ್ತಾ ।

“ನಾನೀಗ ಇಂದ್ರನ ಪದವಿಯಲ್ಲಿ ಪ್ರತಿಷ್ಠಿತನಾಗಿದ್ದೇನೆ. ನಾನು ಇಂದ್ರನ ರಾಜ್ಯವನ್ನೂ ರತ್ನಾದ್ಯೈಶ್ವರ್ಯಗಳನ್ನೂ ಪಡೆದುಕೊಂಡಿರುತ್ತೇನೆ. ಹಾಗೆಯೇ ನಿನ್ನನ್ನೂ ಪಡೆದುಕೊಳ್ಳುವುದರಲ್ಲಿ ಯಾವ ಅಧರ್ಮವೂ ಇಲ್ಲ. ಏಕೆಂದರೆ : ನೀನು ಇಂದ್ರನಿಂದ ಉಪಭೋಗಿಸಲ್ಪಡುವ ವಸ್ತುಗಳಲ್ಲಿ ಸೇರಿರುವೆ.”

ನಹುಷನನ್ನು ಆ ಸಮಯದಲ್ಲಿ ದೂರೀಕರಿಸಲು ಸಾಧ್ಯವಿಲ್ಲವೆಂದು ಭಾವಿಸಿದ ಶಚೀದೇವಿಯು ಉಪಾಯಾಂತರವನ್ನು ಆಶ್ರಯಿಸಿ ನಹುಷನೊಡನೆ ಹೇಳಿದಳು :

ಅಸ್ತಿ ಮಮ ಕಿಂಚಿದ್ವ್ರತಮಪರ್ಯವಸಿತಮ್ । ತಸ್ಯಾವಭೃಥೇ ತ್ವಾಮುಪಗಮಿಷ್ಯಾಮಿ ಕೈಶ್ಚಿದೇವಾಹೋಭಿಃ ।

“ಮಹಾರಾಜ! ನಾನೊಂದು ವ್ರತವನ್ನು ಆಚರಿಸುತ್ತಿದ್ದೇನೆ.

ಅದಿನ್ನೂ ಮುಗಿದಿರುವುದಿಲ್ಲ. ಆ ವ್ರತದ ಅವಭೃಥವಾದೊಡನೆಯೇ ಕೆಲವೇ ದಿವಸಗಳಲ್ಲಿ ನಿನ್ನ ಸೇವೆಯಲ್ಲಿ ಉಪಸ್ಥಿತಳಾಗುತ್ತೇನೆ. (ನಿನ್ನ ಬಳಿಗೆ ಬರುತ್ತೇನೆ.)"

ಶಚೀದೇವಿಯು ಹೀಗೆ ಹೇಳುತ್ತಲೇ ನಹುಷನು ತನ್ನ ಅರಮನೆಗೆ ಹಿಂದಿರುಗಿದನು.

ದುಃಖ-ಶೋಕಗಳಿಂದ ಪೀಡಿತಳಾಗಿದ್ದ, ಪತಿಯನ್ನು ಕಾಣುವ ಔತ್ಸುಕ್ಯವುಳ್ಳವಳಾಗಿದ್ದ ಶಚೀದೇವಿಯು ನಹುಷನ ಭಯದಿಂದ ಪೀಡಿತಳಾಗಿ ತನ್ನ ಕಷ್ಟವನ್ನು ಹೇಳಿಕೊಳ್ಳಲು ದೇವಗುರುವಾದ ಬೃಹಸ್ಪತಿಯ ಬಳಿಗೆ ಹೋದಳು. ಉದ್ವಿಗ್ನಳಾಗಿದ್ದ ಶಚೀದೇವಿಯನ್ನು ನೋಡಿದೊಡನೆಯೇ ಬೃಹಸ್ಪತಿಯು ಧ್ಯಾನಮಗ್ನನಾಗಿ ಶಚೀದೇವಿಯ ಭರ್ತೃಕಾರ್ಯತತ್ಪರ ಳಾಗಿರುವಳೆಂಬುದನ್ನು ಜ್ಞಾನದೃಷ್ಟಿಯಿಂದ ತಿಳಿದುಕೊಂಡು ಶಚಿಯೊಡನೆ ಹೇಳಿದನು :

"ಮಗಳೇ! ನೀನೀಗ ಕೈಗೊಂಡಿರುವ ವ್ರತದಿಂದಲೂ ಮತ್ತು ತಪಸ್ಸಿನಿಂದಲೂ ಕೂಡಿದವಳಾಗಿ ವರದೆಯಾದ ಉಪಶ್ರುತಿದೇವಿಯನ್ನು ಆಹ್ವಾನಿಸು. ಆಗ ಅವಳು ನಿನಗೆ ಇಂದ್ರನನ್ನು ತೋರಿಸಿಕೊಡುತ್ತಾಳೆ." ಬೃಹಸ್ಪತಿಯು ಹೇಳಿದಂತೆ ಮಹಾನಿಯಮಾನುಷ್ಠಾನಸಂಪನ್ನಳಾಗಿದ್ದ ಶಚೀದೇವಿಯು ವರದಳಾದ ಉಪಶ್ರುತಿದೇವಿಯನ್ನು ಮಂತ್ರಪುರಸ್ಸರವಾಗಿ ಆಹ್ವಾನಿಸಿದಳು. ಒಡನೆಯೇ ಉಪಶ್ರುತಿದೇವಿಯು ಶಚೀದೇವಿಯ ಸಮೀಪಕ್ಕೆ ಬಂದು ಹೇಳಿದಳು :

ಇಯಮಸ್ಮಿ ತ್ವಯಾಹೂತೋಪಸ್ಥಿತಾ ।
ಕಿಂ ತೇ ಪ್ರಿಯಂ ಕರವಾಣಿ ।

"ಶಚೀದೇವಿ! ನೀನೀಗ ಮಂತ್ರಪೂರ್ವಕವಾಗಿ ಆಹ್ವಾನಿಸಿದ ಉಪ ಶ್ರುತಿಯೇ ನಾನಾಗಿದ್ದೇನೆ. ನಿನ್ನ ಕರೆಯಂತೆ ನಾನು ಇಲ್ಲಿಗೆ ಆಗಮಿಸಿದ್ದೇನೆ. ನಿನಗೆ ಪ್ರಿಯವಾದ ಯಾವ ಕಾರ್ಯವನ್ನು ಮಾಡಿಕೊಡಲಿ?"

ಶಚೀದೇವಿಯು ಅವಳಿಗೆ ತಲೆಬಾಗಿ ನಮಸ್ಕರಿಸಿ ಹೇಳಿದಳು :

ಭಗವತಿ! ಅರ್ಹಸಿ ಮೇ ಭರ್ತಾರಂ ದರ್ಶಯಿತುಮ್ ।
ತ್ವಂ ಸತ್ಯಾ ಋತಾ ಚ ।

"ಭಗವತಿಯೇ! ನೀನು ಸತ್ಯವೂ * ಋತವೂ ಆಗಿರುವೆ. ಕೃಪೆಮಾಡಿ ನನ್ನ ಪತಿಯನ್ನು ತೋರಿಸು."

ಹಾಗೆಯೇ ಆಗಲೆಂದು ಹೇಳಿದ ಉಪಶ್ರುತಿದೇವಿಯು ಶಚೀದೇವಿಯನ್ನು ಮಾನಸಸರೋವರದ ಬಳಿಗೆ ಕರೆದೊಯ್ದು ಅಲ್ಲಿ ಕಮಲದ ದಂಟಿನ ಗೆಣ್ಣಿನಲ್ಲಿ ಅಣುರೂಪದಲ್ಲಿದ್ದ ಇಂದ್ರನನ್ನು ತೋರಿಸಿದಳು.

ದುರ್ಬಲಳಾಗಿಯೂ, ಕೃಶಳಾಗಿಯೂ ಇದ್ದ ತನ್ನ ಪತ್ನಿಯನ್ನು ನೋಡಿ ಇಂದ್ರನು ಚಿಂತಾಕ್ರಾಂತನಾಗಿ ದುಃಖಿಸುತ್ತಾ ತನ್ನಲ್ಲಿಯೇ ಹೇಳಿಕೊಂಡನು :

ಅಹೋ ಮಮ ದುಃಖಮಿದಮುಪಗತಂ ನಷ್ಟಂ ಹಿ ಮಾಮಿಯಮನ್ವಿಷ್ಯ ಯತ್ಪತ್ನ್ಯಭ್ಯಗಮದ್ದುಃಖಾರ್ತಾ ।

"ಅಯ್ಯೋ! ನಿಶ್ಚಯವಾಗಿಯೂ ಇದು ಅತ್ಯಂತದುಃಖದ ವಿಷಯವಾಗಿದೆ. ನಾನಿಲ್ಲಿ ಅಡಗಿಕೊಂಡಿದ್ದೇನೆ. ನನ್ನ ಪತ್ನಿಯು ಅತಿದುಃಖಿತಳಾಗಿ ನನ್ನನ್ನು ಹುಡುಕಿಕೊಂಡು ಇಲ್ಲಿಗೆ ಬಂದಿದ್ದಾಳೆ."

ಬಳಿಕ ಇಂದ್ರನು ಶಚಿಯನ್ನು ಪ್ರಶ್ನಿಸಿದನು :

ಕಥಂ ವರ್ತಯಸಿ?–"ದೇವಿ! ದಿನಗಳನ್ನು ಹೇಗೆ ಕಳೆಯುತ್ತಿರುವೆ?"

ಶಚಿಯು ಹೇಳಿದಳು :

ನಹುಷೋ ಮಾಮಾಹ್ವಯತಿ ಪತ್ನೀಂ ಕರ್ತುಮ್ ।
ಕಾಲಶ್ಚಾಸ್ಯ ಮಯಾ ಕೃತಃ ।

"ಪ್ರಾಣೇಶ್ವರ! ನಹುಷನು ನನ್ನನ್ನು ಪತ್ನಿಯನ್ನಾಗಿ ಮಾಡಿ

---

*ಋತ = ಆಂತರಿಕವಾದ ಸತ್ಯ. ಸತ್ಯ = ಮಾತು ಮತ್ತು ಕೆಲಸಗಳ ರೂಪದಲ್ಲಿ ಹೊರಗೆ ಪ್ರಕಟಗೊಳ್ಳುವ ಋತ.

ಕೊಳ್ಳಲು ಆಹ್ವಾನಿಸುತ್ತಿದ್ದಾನೆ. ಆದರೆ ನಾನು ವ್ಯಾಜಾಂತರದಿಂದ ಸ್ವಲ್ಪ ಕಾಲಾವಕಾಶವನ್ನು ಕೇಳಿದ್ದೇನೆ.”

ಇಂದ್ರನು ಹೇಳಿದನು :

ಗಚ್ಛ ನಹುಷಸ್ತ್ವಯಾ ವಾಚ್ಯಃ ಅಪೂರ್ವೇಣ ಮಾಮೃಷಿಯುಕ್ತೇನ ಯಾನೇನ ತ್ವಮಧಿರೂಢ ಉದ್ವಹಸ್ವ ।ಇನ್ದ್ರಸ್ಯ ಮಹಾನ್ತಿ ವಾಹನಾನಿ ಸನ್ತಿ ಮನಃಪ್ರಿಯಾಣ್ಯಧಿರೂಢಾನಿ ಮಯಾ ತ್ವಮನ್ಯೇ ನೋಪಯಾತು-ಮರ್ಹಸಿ ।

“ಪ್ರೇಯಸಿ! ನೀನೀಗಲೇ ಸ್ವರ್ಗಕ್ಕೆ ಹೋಗು. ನಹುಷನೊಡನೆ ಹೀಗೆ ಹೇಳು : ‘ಅಪೂರ್ವವಾದ, ಋಷಿಗಳಿಂದ ಹೊರಲ್ಪಟ್ಟ ವಾಹನದಲ್ಲಿ ಕುಳಿತು ನೀನು ನನ್ನ ಬಳಿಗೆ ಬಂದು ಮದುವೆಯಾಗು. ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವ ಮಹಾರ್ಹವಾದ ಇಂದ್ರನ ಅನೇಕವಾಹನಗಳಿವೆ. ನಾನು ಆ ಎಲ್ಲ ವಾಹನಗಳಲ್ಲಿಯೂ ಕುಳಿತಿದ್ದೇನೆ. ಆ ಎಲ್ಲ ವಾಹನಗಳಿಂದಲೂ ಭಿನ್ನವಾದ ಮತ್ತು ವಿಲಕ್ಷಣವಾದ ವಾಹನದಲ್ಲಿ ನನ್ನ ಬಳಿಗೆ ನೀನು ಬರಬೇಕೆಂಬುದು ನನ್ನ ಆಶಯವಾಗಿದೆ.’–ನೀನು ನಹುಷನೊಡನೆ ಹೀಗೆ ಹೇಳಿದರೆ ನಮ್ಮ ಕಾರ್ಯದ ಸಾಧನೆಯಾಗುತ್ತದೆ.” ಇಂದ್ರನ ಮಾತನ್ನು ಕೇಳಿದೊಡನೆಯೇ ಶಚೀದೇವಿಯು ಪರಮಹೃಷ್ಟಳಾಗಿ ಸ್ವರ್ಗಕ್ಕೆ ಹೊರಟುಹೋದಳು. ಇಂದ್ರನು ಕೂಡ ಪುನಃ ಕಮಲದ ದಂಟಿನ ಗೆಣ್ಣಿನಲ್ಲಿಯೇ ಸೇರಿಕೊಂಡನು.

ಇಂದ್ರಾಣಿಯು ತನ್ನ ಸಮೀಪಕ್ಕೆ ತಾನಾಗಿಯೇ ಬಂದುದನ್ನು ಕಂಡು ಪರಮಹೃಷ್ಟನಾದ ನಹುಷನು–“ದೇವಿ! ನೀನು ಹೇಳಿದ ಕಾಲದ ಅವಧಿಯು ಪೂರ್ಣವಾಗಿದೆ”–ಎಂದು ಹೇಳಿದನು. ಪೂರ್ಣವಾಯಿತೆಂದು ಉತ್ತರವಿತ್ತ ಶಚಿಯು, ಇಂದ್ರನು ಕೊಟ್ಟಿದ್ದ ಸಲಹೆಯಂತೆ ಋಷಿಗಳು ಹೊತ್ತ ವಾಹನದಲ್ಲಿ ತನ್ನ ಅರಮನೆಗೆ ಬರಬೇಕೆಂದು ನಹುಷನಿಗೆ ಹೇಳಿ ಹೊರಟುಹೋದಳು. ಯುಕ್ತಾಯುಕ್ತವಿವೇಚನೆಯೇ ಇಲ್ಲದ ನಹುಷನು ಋಷಿಗಳು ಹೊತ್ತ ಪಲ್ಲಕ್ಕಿಯಲ್ಲಿಯೇ ಕುಳಿತು ಶಚೀದೇವಿಯ ಅರಮನೆಗೆ ಹೊರಟನು. ಪಲ್ಲಕ್ಕಿಯನ್ನು ಹೊತ್ತಿದ್ದವರಲ್ಲಿ ಕುಂಭಸಂಭವನಾದ,

ಮಿತ್ರಾವರುಣರ ಮಗನಾದ, ಋಷಿಶ್ರೇಷ್ಠನಾದ ಅಗಸ್ತ್ಯನೂ ಒಬ್ಬನಾಗಿದ್ದನು. ನಹುಷನು ಮಹರ್ಷಿಗಳನ್ನು ಬೇಗ-ಬೇಗ ಮುಂದೆ ಹೋಗುವಂತೆ ಗದರಿಸುತ್ತಿರುವುದನ್ನೂ ಬೇಗ ನಡೆಯಲಾಗದವರನ್ನು ಧಿಕ್ಕರಿಸುತ್ತಿರುವುದನ್ನೂ ಅಗಸ್ತ್ಯನು ನೋಡಿದನು. ಶೀಘ್ರವಾಗಿ ನಡೆಯಲಾಗದಿದ್ದ ಅಗಸ್ತ್ಯನಿಗೆ ನಹುಷನ ಪಾದಗಳ ಪ್ರಹಾರವೂ ಬಿದ್ದಿತು. ಕುಪಿತನಾದ ಅಗಸ್ತ್ಯನು ನಹುಷನನ್ನು ಕುರಿತು ಹೇಳಿದನು :

ಅಕಾರ್ಯಪ್ರವೃತ್ತ! ಪಾಪ! ಪತಸ್ವ ಮಹೀಂ। ಸರ್ಪೋ ಭವ ಯಾವದ್ಭೂಮಿರ್ಗಿರಯಶ್ಚ ತಿಷ್ಠೇಯುಸ್ತಾವತ್ ।

"ಅಕಾರ್ಯಪ್ರವೃತ್ತನೇ! ಪಾಪಿಷ್ಠನೇ! ನಹುಷ! ನೀನೀಗಲೇ ಭೂಮಿಯಲ್ಲಿ ಬೀಳು. ಸರ್ಪವಾಗು. ಎಂದಿನವರೆಗೆ ಭೂಮಿ ಮತ್ತು ಪರ್ವತಗಳು ಇರುತ್ತವೆಯೋ–ಅಂದಿನವರೆಗೂ ನೀನು ಸರ್ಪವಾಗಿಯೇ ಇರು."

ಅಗಸ್ತ್ಯನು ಹೀಗೆ ಹೇಳುತ್ತಿರುವಾಗಲೇ ನಹುಷನು ಪಲ್ಲಕ್ಕಿಯಿಂದ ಕೆಳಕ್ಕೆ ಬಿದ್ದುಬಿಟ್ಟನು.

ನಹುಷನು ಶಾಪಗ್ರಸ್ತನಾಗಿ ಭೂಮಿಯಲ್ಲಿ ಬಿದ್ದೊಡನೆಯೇ ಪುನಃ ಮೂರು ಲೋಕಗಳೂ ಅರಾಜಕವಾದುವು. ಆಗ ದೇವತೆಗಳೂ ಮತ್ತು ಋಷಿಗಳೂ ಇಂದ್ರನ ಸಲುವಾಗಿ ಭಗವಂತನಾದ ಮಹಾವಿಷ್ಣುವನ್ನು ಶರಣುಹೊಂದಿದರು ಮತ್ತು ಅವನೊಡನೆ ಹೇಳಿದರು :

ಭಗವನ್! ಇನ್ದ್ರಂ ಬ್ರಹ್ಮಹತ್ಯಾಭಿಭೂತಂ ತ್ರಾತುಮರ್ಹಸಿ ।

"ಭಗವನ್! ಮಹಾವಿಷ್ಣುವೇ! ಬ್ರಹ್ಮಹತ್ಯಾಪಾಪದಿಂದ ಪೀಡಿತನಾಗಿರುವ ಇಂದ್ರನನ್ನು ಆ ಮಹಾಪಾಪದಿಂದ ಪಾರುಮಾಡಿಸುವ ಕೃಪೆ ಮಾಡು."

ದೇವತೆಗಳ ಮತ್ತು ಋಷಿಗಳ ಮಾತನ್ನು ಕೇಳಿ ವರದನಾದ ಮಹಾವಿಷ್ಣುವು ಹೇಳಿದನು :

ಅಶ್ವಮೇಧಂ ಯಜ್ಞಂ ವೈಷ್ಣವಂ ಶಕ್ರೋಽಭಿಯಜತಾಂ ತತಃ ಸ್ವಸ್ಥಾನಂ ಪ್ರಾಪ್ಸ್ಯತಿ ।

"ದೇವರ್ಷಿಗಳೇ! ಇಂದ್ರನು ನನ್ನನ್ನು (ವಿಷ್ಣುವನ್ನು) ಉದ್ದೇಶಿಸಿ ಅಶ್ವಮೇಧಯಾಗವನ್ನು ಮಾಡಲಿ. ಅನಂತರ ಅವನು ತನ್ನ ಪದವಿಯನ್ನು ಪುನಃ ಪಡೆದುಕೊಳ್ಳುತ್ತಾನೆ." ಮಹಾವಿಷ್ಣುವು ಹೇಳಿದ ಮಾತನ್ನು ಕೇಳಿ ದೇವತೆಗಳೂ ಮತ್ತು ಋಷಿಗಳೂ ಇಂದ್ರನನ್ನು ಎಲ್ಲ ಕಡೆಗಳಲ್ಲೂ ಹುಡುಕಿದರು. ಆದರೂ ಅವನನ್ನು ಅವರು ಕಾಣಲಿಲ್ಲ. ಒಡನೆಯೇ ಶಚೀದೇವಿಯ ಬಳಿಗೆ ಹೋಗಿ ಅವಳನ್ನು ಕುರಿತು ಹೇಳಿದರು :

ಗಚ್ಛ ಸುಭಗೇ! ಇನ್ದ್ರಮಾನಯಸ್ವ ।

"ಸೌಭಾಗ್ಯವತಿಯೇ! ಇಂದ್ರಾಣಿ! ಬೇಗಹೋಗು. ಇಂದ್ರನನ್ನು ಕರೆದುಕೊಂಡು ಬಾ."

ದೇವರ್ಷಿಗಳ ಮಾತಿನಂತೆ ಶಚೀದೇವಿಯು ಪುನಃ ಮಾನಸ ಸರೋವರದ ಬಳಿಗೆ ಹೋದಳು. ಅಲ್ಲಿದ್ದ ತನ್ನ ಪತಿಗೆ ದೇವರ್ಷಿಗಳ ಅಭಿಪ್ರಾಯವನ್ನು ಹೇಳಿದನಂತರ ಇಂದ್ರನು ಆ ಸರೋವರದಿಂದ ಹೊರ ಬಂದು ಬೃಹಸ್ಪತಿಯ ಬಳಿಗೆ ಹೋದನು. ಬೃಹಸ್ಪತಿಯು ಇಂದ್ರನಿಂದ ಅಶ್ವ ಮೇಧಮಹಾಯಜ್ಞವನ್ನು ಮಾಡಿಸಿದನು. ಆ ಯಜ್ಞದಲ್ಲಿ ಬೃಹಸ್ಪತಿಯು ಕೃಷ್ಣಸಾರಂಗವರ್ಣದ ಮೇಧ್ಯಾಶ್ವವನ್ನು ದೇಶಪರ್ಯಟನಕ್ಕಾಗಿ ಬಿಟ್ಟಿದ್ದನು. ಅದನ್ನೇ ವಾಹನವನ್ನಾಗಿ ಮಾಡಿ ಬೃಹಸ್ಪತಿಯು ಮರುತ್ಪತಿಯಾದ ಇಂದ್ರ ನನ್ನು ಅವನ ಸ್ಥಾನದಲ್ಲಿ ಪ್ರತಿಷ್ಠಾಪಿಸಿದನು.

ಅನಂತರ ಇಂದ್ರನು ದೇವತೆಗಳಿಂದಲೂ ಋಷಿಗಳಿಂದಲೂ ಸ್ತುತಿಸಲ್ಪಡುತ್ತಾ ಬ್ರಹ್ಮಹತ್ಯಾಪಾಪದಿಂದ ವಿಮುಕ್ತನಾಗಿ ಸ್ವರ್ಗಲೋಕದಲ್ಲಿ ರಾಜ್ಯವಾಳತೊಡಗಿದನು. ಇಂದ್ರನು ತನ್ನ ಬ್ರಹ್ಮಹತ್ಯಾಪಾಪವನ್ನು–ಸ್ತ್ರೀ, ಅಗ್ನಿ, ವೃಕ್ಷ ಮತ್ತು ಗೋವು–ಈ ನಾಲ್ಕು ಸ್ಥಾನಗಳಲ್ಲಿ ವಿಭಾಗಿಸಿ ವಿಸರ್ಜಿಸಿದನು. ಬ್ರಹ್ಮತೇಜಸ್ಸಿನ ಪ್ರಭಾವದಿಂದ ವೃದ್ಧಿಯನ್ನು ಹೊಂದಿದ ಇಂದ್ರನು ಶತ್ರುಗಳನ್ನು ಸಂಹರಿಸಿ ತನ್ನ ಪದವಿಯನ್ನು ಪುನಃ ಪಡೆದುಕೊಂಡನು.

ಹಿಂದೊಮ್ಮೆ ಭರದ್ವಾಜಮಹರ್ಷಿಯು ಆಕಾಶಗಂಗೆಯ ನೀರಿನಲ್ಲಿ ಆಚಮನವನ್ನು ಮಾಡುತ್ತಿದ್ದನು. ಆ ಸಮಯದಲ್ಲಿ ಮೂರು ಹೆಜ್ಜೆಗಳಿಂದ

ಮೂರು ಲೋಕಗಳನ್ನೂ ಅಳೆಯುತ್ತಿದ್ದ ಮಹಾವಿಷ್ಣುವು ಭರದ್ವಾಜನ ಬಳಿಗೆ ಬಂದನು. ಆಗ ಭರದ್ವಾಜನು ಆಚಮನಜಲದಿಂದ ಕೂಡಿದ್ದ ತನ್ನ ಕೈಯಿಂದ ಮಹಾವಿಷ್ಣುವಿನ ವಕ್ಷಃಸ್ಥಳವನ್ನು ಪ್ರಹರಿಸಿದನು. ಅದರಿಂದ ಮಹಾವಿಷ್ಣುವು ಗುರುತಿನಿಂದ (ಲಾಂಛನದಿಂದ) ಕೂಡಿದ ವಕ್ಷಃಸ್ಥಳವುಳ್ಳವನಾದನು.

ಮಹರ್ಷಿಯಾದ ಭೃಗುವಿನ ಶಾಪದ ಫಲವಾಗಿ ಅಗ್ನಿಯು ಸರ್ವಭಕ್ಷನಾದನು.

ಅದಿತಿಯು ತಾನು ಸಿದ್ಧಪಡಿಸುವ ಅನ್ನವನ್ನು ದೇವತೆಗಳು ಭಕ್ಷಿಸಿ ಅಸುರರನ್ನು ಕೊಲ್ಲುವ ಸಾಮರ್ಥ್ಯವನ್ನು ಪಡೆಯಬೇಕೆಂಬ ಆಶಯದಿಂದ ಅನ್ನವನ್ನು ಬೇಯಿಸುತ್ತಿದ್ದಳು. ಆ ಸಮಯಕ್ಕೆ ಸರಿಯಾಗಿ ಬುಧನು ತನ್ನ ವ್ರತಾನುಷ್ಠಾನಗಳನ್ನು ಮುಗಿಸಿ ಅದಿತಿಯ ಬಳಿಗೆ ಬಂದು ಹೇಳಿದನು :

‘ಭವತಿ ಭಿಕ್ಷಾಂ ದೇಹಿ’–“ಆರ್ಯಳೇ! ನೀನು ನನಗೆ ಭಿಕ್ಷೆಯನ್ನು ನೀಡು.”

‘ನಾನು ಸಿದ್ಧಪಡಿಸಿರುವ ಅನ್ನವನ್ನು ಮೊದಲು ದೇವತೆಗಳೇ ಭಕ್ಷಿಸಬೇಕು. ಬೇರೆ ಯಾರೂ ತಿನ್ನಕೂಡದು’–ಎಂದು ಯೋಚಿಸಿದ ಅದಿತಿಯು ಬುಧನಿಗೆ ಭಿಕ್ಷೆಯನ್ನು ಹಾಕಲಿಲ್ಲ. ಭಿಕ್ಷೆಯು ಸಿಗದಿದ್ದ ರೋಷದಿಂದ ಬ್ರಾಹ್ಮಣನಾದ ಬುಧನು ಅದಿತಿಗೆ ಶಾಪವನ್ನಿತ್ತನು.

ಅದಿತೇರುದರೇ ಭವಿಷ್ಯತಿ ವ್ಯಥಾ ವಿವಸ್ವತೋ ದ್ವಿತೀಯಜನ್ಮನ್ಯಣ್ಡ ಸಂಜ್ಞಿತಸ್ಯ ।

“ಅಂಡ ಎಂಬ ಹೆಸರುಳ್ಳ ವಿವಸ್ವಂತನ ಎರಡನೆಯ ಜನ್ಮದ ಸಮಯದಲ್ಲಿ ತಾಯಿಯಾದ ಅದಿತಿಗೆ ಉದರಪೀಡೆಯಾಗುತ್ತದೆ.” ಆ ಶಾಪದ ಫಲವಾಗಿ ತಾಯಿಗುಂಟಾದ ಉದರಪೀಡೆಯಿಂದ ಅಲ್ಲಿದ್ದ ಅಂಡವು ಅವಸಾನ ಹೊಂದಿತು. ಆದರೂ ವಿವಸ್ವಂತನು ಮರಣಹೊಂದಿದ ಆ ಅಂಡದಿಂದಲೇ ಪ್ರಾದುರ್ಭವಿಸಿದನು. ಈ ಕಾರಣದಿಂದಲೇ ಶ್ರಾದ್ಧದೇವಸಂಜ್ಞನಾದ ವಿವಸ್ವಂತನು ಮಾರ್ತಂಡ–ಎಂಬ ಹೆಸರಿನಿಂದಲೂ ಪ್ರಸಿದ್ಧನಾದನು.

ದಕ್ಷಪ್ರಜಾಪತಿಗೆ ಅರುವತ್ತು ಮಂದಿ ಕನ್ಯೆಯರಿದ್ದರು. ಅವರಲ್ಲಿ ಹದಿಮೂರು ಕನ್ಯೆಯರನ್ನು ಕಶ್ಯಪನಿಗೆ ಮದುವೆಮಾಡಿಕೊಟ್ಟನು. ಹತ್ತು ಮಂದಿ ಕನ್ಯೆಯರನ್ನು ಧರ್ಮನಿಗೂ, ಹತ್ತು ಮಂದಿ ಕನ್ಯೆಯರನ್ನು ಮನುವಿಗೂ, ಉಳಿದ ಇಪ್ಪತ್ತೇಳು ಕನ್ಯೆಯರನ್ನು ಸೋಮನಿಗೂ ಮದುವೆಮಾಡಿಕೊಟ್ಟನು.

ಚಂದ್ರನ ಪತ್ನಿಯರಾದ ಅಶ್ವಿನ್ಯಾದಿ ಕನ್ಯೆಯರು ನಕ್ಷತ್ರಗಳೆಂಬ ಹೆಸರಿನಿಂದ ಪ್ರಸಿದ್ಧರಾದರು. ಅವರೆಲ್ಲರೂ ರೂಪ-ಲಾವಣ್ಯಗಳಲ್ಲಿ ಸಮಾನರಾಗಿದ್ದರು. ಆದರೆ ಸೋಮನು ರೋಹಿಣಿಯೊಬ್ಬಳಲ್ಲಿಯೇ ಹೆಚ್ಚು ಪ್ರೀತಿಯುಳ್ಳವನಾಗಿದ್ದನು. ಉಳಿದ ಇಪ್ಪತ್ತಾರು ಮಂದಿ ಪತ್ನಿಯರೂ ಈರ್ಷ್ಯಾಯುಕ್ತರಾಗಿ ತಮ್ಮ ತಂದೆಯಾದ ದಕ್ಷಪ್ರಜಾಪತಿಯ ಬಳಿಗೆ ಹೋಗಿ ಅವನೊಡನೆ ಹೇಳಿದರು :

ಭಗವನ್! ಅಸ್ಮಾಸು ತುಲ್ಯಪ್ರಭಾವಾಸು ಸೋಮೋ ರೋಹಿಣೀಂ ಪ್ರತ್ಯಧಿಕಂ ಭಜತಿ ।

"ಪೂಜ್ಯನೇ! ನಾವೆಲ್ಲರೂ ಸಮಾನವಾದ ಪ್ರಭಾವವುಳ್ಳವರಾಗಿದ್ದರೂ ನಮ್ಮ ಪತಿಯಾದ ಸೋಮನು ರೋಹಿಣಿಯ ಜೊತೆಯಲ್ಲಿಯೇ ಹೆಚ್ಚು ಕಾಲ ವಿಹರಿಸುತ್ತಾನೆ."

ಪುತ್ರಿಯರು ಹೇಳಿದ ಆ ಮಾತನ್ನು ಕೇಳಿ ಕುಪಿತನಾದ ದಕ್ಷನು ಚಂದ್ರನಿಗೆ "ಯಕ್ಷ್ಮೈನಮಾವಿಶ್ಯೇತ"–'ಕ್ಷಯರೋಗವು ಇವನನ್ನು ಪ್ರವೇಶಿಸಲಿ!' ಎಂದು ಶಾಪವನ್ನಿತ್ತನು. ದಕ್ಷಪ್ರಜಾಪತಿಯು ಶಾಪವಿತ್ತೊಡನೆಯೇ ಚಂದ್ರನನ್ನು ಕ್ಷಯರೋಗವು ಪ್ರವೇಶಿಸಿತು. ಕ್ಷಯದಿಂದ ಪೀಡಿತನಾದ ಚಂದ್ರನು ದಕ್ಷನ ಬಳಿಗೆ ಹೋದನು. ಶಾಪಕೊಟ್ಟುದಕ್ಕೆ ಕಾರಣವನ್ನು ಕೇಳಲಾಗಿ ದಕ್ಷನು-ಪತ್ನಿಯರಲ್ಲಿ ಪಕ್ಷಪಾತದಿಂದ ವರ್ತಿಸುವೆಯಾದುದರಿಂದ ಹೀಗೆ ಶಾಪಕೊಡಬೇಕಾಯಿತೆಂದು–ಚಂದ್ರನಿಗೆ ಹೇಳಿದನು. ಆ ಸಮಯದಲ್ಲಿ ಅಲ್ಲಿಯೇ ಇದ್ದ ಋಷಿಗಳು ಚಂದ್ರನೊಡನೆ ಹೇಳಿದರು :

ಕ್ಷೀಯಸೇ ಯಕ್ಷ್ಮಣಾ। ಪಶ್ಚಿಮಾಯಾಂ ದಿಶಿ ಸಮುದ್ರೇ ಹಿರಣ್ಯಸರಸ್ತೀರ್ಥಮ್। ತತ್ರ ಗತ್ವಾ ಆತ್ಮಾನಮಭಿಷೇಚಯಸ್ವ ।

“ಸೋಮದೇವ! ನೀನು ಕ್ಷಯರೋಗದಿಂದ ಪೀಡಿತನಾಗಿರುವೆ. ಪಶ್ಚಿಮಸಮುದ್ರತೀರದಲ್ಲಿ ಹಿರಣ್ಯಸರಸ್ಸು ಎಂಬ ತೀರ್ಥವಿದೆ. ಅಲ್ಲಿಗೆ ಹೋಗಿ ಸ್ನಾನಮಾಡು. (ಕ್ಷಯರೋಗವು ಪರಿಹಾರವಾಗುವುದು.)”

ಋಷಿಗಳ ಮಾತಿನಂತೆ ಸೋಮನು ಪಶ್ಚಿಮಸಮುದ್ರದಲ್ಲಿದ್ದ ಹಿರಣ್ಯ ಸರಸ್ಸೆಂಬ ತೀರ್ಥಕ್ಕೆ ಹೋದನು. ಆ ತೀರ್ಥದಲ್ಲಿ ಸೋಮನು ವಿಧಿ ಪೂರ್ವಕವಾಗಿ ಸ್ನಾನಮಾಡಿದನು. ಸ್ನಾನಮಾಡಿ ಸೋಮನು ಪಾಪರಹಿತ ನಾದನು. (ಕ್ಷಯರೋಗದಿಂದ ವಿಮುಕ್ತನಾದನು.) ಸೋಮನು ಹಿರಣ್ಯ ಸರಸ್ತೀರ್ಥದಲ್ಲಿ ಸ್ನಾನಮಾಡಿ ಯಾವಾಗ ದಿವ್ಯಪ್ರಭೆಯಿಂದ ಪ್ರಭಾಸಿತ ನಾದನೋ (ತನ್ನ ಹಿಂದಿನ ಕಾಂತಿಯನ್ನು ಪಡೆದುಕೊಂಡನೋ)– ಅಂದಿನಿಂದಲೂ ಆ ತೀರ್ಥವು ಪ್ರಭಾಸವೆಂಬ ಹೆಸರಿನಿಂದ ಪ್ರಖ್ಯಾತ ವಾಯಿತು. ದಕ್ಷನ ಶಾಪದ ಪರಿಣಾಮವಾಗಿಯೇ ಚಂದ್ರನು ಕೃಷ್ಣಪಕ್ಷದ ಅಮಾವಾಸ್ಯೆಯವರೆಗೆ ಕ್ಷೀಣಿಸುತ್ತಲೇ ಇರುತ್ತಾನೆ. ಪುನಃ ಶುಕ್ಲಪಕ್ಷದ ಹುಣ್ಣಿಮೆಯವರೆಗೆ ವೃದ್ಧಿಸುತ್ತಿರುತ್ತಾನೆ. ಅವನ ಶರೀರವು (ಚಂದ್ರ ಮಂಡಲವು) ಮೇಘದಂತೆ ಇರುವ ಶ್ಯಾಮಲವರ್ಣದ ರೇಖೆಯಿಂದ ಆಚ್ಛಾದಿತವಾಗಿದೆ. ಚಂದ್ರಮಂಡಲದಲ್ಲಿರುವ ಮೊಲದ ಚಿಹ್ನೆಯು ಮೇಘ ಸದೃಶವಾದ ಶ್ಯಾಮಲವರ್ಣವನ್ನು ಹೊಂದಿ ಸ್ಪಷ್ಟವಾಗಿ ಕಾಣುತ್ತಿದೆ.

ಹಿಂದೆ ಮೇರುಪರ್ವತದ ಈಶಾನ್ಯದಿಕ್ಕಿನಲ್ಲಿ ಸ್ಥೂಲಶಿರಸನೆಂಬ ಮಹರ್ಷಿಯು ತಪಸ್ಸುಮಾಡುತ್ತಿದ್ದನು. ಆಗ ಸುಗಂಧಯುಕ್ತವಾದ, ಶುಚಿಯಾದ ವಾಯುವು ಸರ್ವತ್ರ ಬೀಸುತ್ತಾ ಮಹರ್ಷಿಯನ್ನು ಸ್ಪರ್ಶಿಸಿತು. ತಪಸ್ಸಿನಿಂದ ಸಂತಪ್ತನಾಗಿದ್ದ, ಕೃಶವಾದ ಶರೀರವನ್ನು ಹೊಂದಿದ್ದ ಆ ಮುನಿಯು ಸುಗಂಧಯುಕ್ತವಾದ ವಾತಾವರಣದಿಂದ ಪ್ರಹೃಷ್ಟನಾದನು. ಬೀಸಣಿಗೆಯ ರೂಪವಾದ ವಾಯುವಿನಿಂದ ಪರಿತುಷ್ಟನಾಗಿದ್ದ ಋಷಿಗೆ ಅಲ್ಲಿದ್ದ ವೃಕ್ಷಗಳೂ ಒಡನೆಯೇ ಪುಷ್ಪಭರಿತವಾಗಿ ಆನಂದವನ್ನುಂಟು ಮಾಡದಿದ್ದ ಕಾರಣ ಅದರಿಂದ ಕುಪಿತನಾದ ಋಷಿಯು ಎಂದಿಗೂ ಫಲ-ಪುಷ್ಪಭರಿತವಾಗಿರದಂತೆ ಆ ವೃಕ್ಷಗಳಿಗೆ ಶಾಪವನ್ನಿತ್ತನು.

ಒಂದು ಸಮಯದಲ್ಲಿ ಭಗವಾನ್ ನಾರಾಯಣನು ಲೋಕಹಿತಾರ್ಥ

ವಾಗಿ ವಡವಾಮುಖನೆಂಬ ಮಹರ್ಷಿಯಾಗಿ ಅವತರಿಸಿದನು. ವಡವಾಮುಖನು ಮೇರುಪರ್ವತದಲ್ಲಿ ತಪಸ್ಸುಮಾಡುತ್ತಿದ್ದಾಗ ಸಮುದ್ರನನ್ನು ಆಹ್ವಾನಿಸಿದನು. ಆದರೆ ಸಮುದ್ರನು ಆ ಮುನಿಯ ಸಮೀಪಕ್ಕೆ ಬರಲಿಲ್ಲ. ಅದರಿಂದ ಕುಪಿತನಾದ ವಡವಾಮುಖನು ತನ್ನ ಶರೀರದ ಉಷ್ಣದಿಂದ ಸಮುದ್ರವನ್ನು ಮೇರೆಮೀರದಂತೆ ಸ್ತಿಮಿತಗೊಳಿಸಿದನು. ಬೆವರಿನ ಹನಿಗೆ ಸದೃಶವಾದ ಲವಣಭಾವವನ್ನು ಹೊಂದುವಂತೆಯೂ ಮಾಡಿದನು. ಅನಂತರ ಸಮುದ್ರವನ್ನು ಕುರಿತು ಋಷಿಯು ಹೇಳಿದನು :

ಅಪೇಯೋ ಭವಿಷ್ಯಸಿ। ಏತಚ್ಚ ತೇ ತೋಯಂ ವಡವಾಮುಖ ಸಂಜ್ಞಿತೇನ ಪೇಪೀಯಮಾನಂ ಮಧುರಂ ಭವಿಷ್ಯತಿ ।

"ಸಮುದ್ರರಾಜನೇ! ನಿನ್ನಲ್ಲಿರುವ ನೀರು ಕುಡಿಯಲು ಯೋಗ್ಯವಾಗುವುದಿಲ್ಲ. ಆದರೆ ವಡವಾಮುಖವೆಂಬ ಅಗ್ನಿಯಿಂದ ಕುಡಿಯಲ್ಪಟ್ಟ ನಿನ್ನ ನೀರು ಮಧುರವಾಗುತ್ತದೆ."

ಋಷಿಯು ಹೇಳಿದ್ದಂತೆಯೇ ಈಗಲೂ ವಡವಾಮುಖವೆಂಬ ಅಗ್ನಿಯು ಸಮುದ್ರದ ನೀರನ್ನು ಪಾನಮಾಡುತ್ತದೆ.

ಹಿಮವಂತನ ಪುತ್ರಿಯಾದ ಉಮೆಯು ಕನ್ಯಾವಸ್ಥೆಯಲ್ಲಿದ್ದಾಗ ಅವಳನ್ನು ವರಿಸಲು ರುದ್ರನು ಇಚ್ಛಿಸಿದನು. ಅದೇ ಸಮಯದಲ್ಲಿ ಮಹರ್ಷಿಯಾದ ಭೃಗುವೂ ಹಿಮವಂತನ ಬಳಿಗೆ ಹೋಗಿ ಅವನೊಡನೆ ಹೇಳಿದನು :

ಕನ್ಯಾಮಿಮಾಂ ಮೇ ದೇಹಿ

"ಹಿಮವಂತನೇ! ಈ ನಿನ್ನ ಮಗಳಾದ ಉಮೆಯನ್ನು ನನಗೆ ಮದುವೆಮಾಡಿಕೊಡು."

ಅದಕ್ಕುತ್ತರವಾಗಿ ಹಿಮವಂತನು – '**ಅಭಿಲಕ್ಷಿತೋ ವರೋರುದ್ರಃ**' 'ಇವಳಿಗೆ ನಾವು ರುದ್ರನನ್ನು ವರನನ್ನಾಗಿ ಲಕ್ಷದಲ್ಲಿಟ್ಟುಕೊಂಡಾಗಿದೆ'– ಎಂದು ಹೇಳಿದನು.

ಹಿಮವಂತನ ಮಾತನ್ನು ಕೇಳಿ ಕುಪಿತನಾದ ಭೃಗುವು ಹೇಳಿದನು :

ಯಸ್ಮಾತ್ತ್ವಯಾಹಂ ಕನ್ಯಾವರಣಕೃತಭಾವಃ ಪ್ರತ್ಯಾಖ್ಯಾತಸ್ತಸ್ಮಾನ್ನ ರತ್ನಾನಾಂ ಭವಾನ್ ಭಾಜನಂ ಭವಿಷ್ಯತಿ

“ನಿನ್ನ ಮಗಳನ್ನು ವರಿಸುವ ಭಾವನೆಯನ್ನಿಟ್ಟುಕೊಂಡು ಬಂದಿದ್ದ ನನ್ನನ್ನು ನೀನು ಉಪೇಕ್ಷೆಮಾಡಿರುವೆ. ಆದುದರಿಂದ ನೀನು ರತ್ನಗಳಿಗೆ ನಿಧಿಯಾಗುವುದಿಲ್ಲ. (ನಿನ್ನಲ್ಲಿ ರತ್ನಗಳಾವುವೂ ಇರುವುದಿಲ್ಲ.)”

ಭೃಗುಋಷಿಯು ಹೇಳಿದಂತೆಯೇ ಅಂದಿನಿಂದ ಹಿಮವತ್ಪರ್ವತದಲ್ಲಿ ರತ್ನಗಳಾವುವೂ ಸಿಕ್ಕುತ್ತಿಲ್ಲ. ಅರ್ಜುನ! ಬ್ರಾಹ್ಮಣರ ಮಾಹಾತ್ಮ್ಯವು ಇಂತಹುದು. ಕ್ಷತ್ರಿಯರು ಕೂಡ ಬ್ರಾಹ್ಮಣರ ಅನುಗ್ರಹದಿಂದಲೇ ಶಾಶ್ವತವಾದ, ಅವಿನಾಶಿಯಾದ ಪೃಥ್ವಿಯನ್ನು ಪತ್ನಿಯಂತೆ ಪರಿಗ್ರಹಿಸಿ ಉಪಭೋಗಿಸುತ್ತಾರೆ.

ಯದೇತದ್ಬ್ರಹ್ಮಾಗ್ನೀಷೋಮೀಯಂ ತೇನ ಜಗದ್ಧಾರ್ಯತೇ ॥೬೫॥

ಅಗ್ನಿ ಮತ್ತು ಸೋಮರ ಸಂಬಂಧವಾದ ಯಾವ ಬ್ರಹ್ಮತೇಜಸ್ಸಿರುವುದೋ–ಅದೇ ಈ ಜಗತ್ತನ್ನು ಧರಿಸಿದೆ.”

ಶ್ರೀಕೃಷ್ಣನು ಮುಂದುವರಿದು ಹೇಳುತ್ತಾನೆ :

ಸೂರ್ಯಾಚನ್ದ್ರಮಸೌ ಚಕ್ಷುಃ ಕೇಶಾಶ್ಚೈವಾಂಶವಃ ಸ್ಮೃತಾಃ ।
ಬೋಧಯಂಸ್ತಾಪಯಂಶ್ಚೈವ ಜಗದುತ್ತಿಷ್ಠತೇ ಪೃಥಕ್ ॥೬೬॥

“ಸೂರ್ಯ-ಚಂದ್ರರು (ಅಗ್ನೀಷೋಮರು) ನನ್ನ ನೇತ್ರಗಳು. ಸೂರ್ಯ-ಚಂದ್ರರ ಕಿರಣಗಳೇ ನನ್ನ ಕೇಶಗಳಾಗಿವೆ. ಆ ಸೂರ್ಯ- ಚಂದ್ರರು ಅನುಕ್ರಮವಾಗಿ ಜಗತ್ತನ್ನು ಎಚ್ಚರಗೊಳಿಸುತ್ತಾ ಮತ್ತು ಅದಕ್ಕೆ ತಾಪವನ್ನುಂಟುಮಾಡುತ್ತಾ ಪ್ರತ್ಯೇಕ-ಪ್ರತ್ಯೇಕವಾಗಿ ಉದಯಿಸುತ್ತಾರೆ.

ಬೋಧನಾತ್ತಾಪನಾಚ್ಚೈವ ಜಗತೋ ಹರ್ಷಣಂ ಭವೇತ್ ।
ಅಗ್ನೀಷೋಮಕೃತೈರೇಭಿಃ ಕರ್ಮಭಿಃ ಪಾಣ್ಡುನನ್ದನ ।
ಹೃಷೀಕೇಶೋಽಹಮೀಶಾನೋ ವರದೋ ಲೋಕಭಾವನಃ ॥೬೭॥

ಪಾಂಡುನಂದನನೇ! ಸೂರ್ಯ-ಚಂದ್ರರ ತಾಪನದಿಂದಲೂ ಮತ್ತು ಬೋಧನದಿಂದಲೂ ಜಗತ್ತಿಗೆ ಹರ್ಷವುಂಟಾಗುತ್ತದೆ. ಅಗ್ನೀಷೋಮರು ಮಾಡುವ ಈ ಕರ್ಮಗಳಿಂದಲೇ ನಾನು ಈಶಾನನೂ, ವರದನೂ, ಲೋಕಭಾವನನೂ ಆದ ಹೃಷೀಕೇಶನಾಗಿದ್ದೇನೆ.

ಇಡೋಪಹೂತಯೋಗೇನ ಹರೇ ಭಾಗಂ ಕ್ರತುಷ್ವಹಮ್ ।
ವರ್ಣಶ್ಚ ಮೇ ಹರಿಃ ಶ್ರೇಷ್ಠಸ್ತಸ್ಮಾದ್ಧರಿರಹಂ ಸ್ಮೃತಃ ॥೬೮॥

ಇಡೋಪಹೂತಾ । ಉಪಹೂತೇಡಾ–ಎಂಬ ಮಂತ್ರಯೋಗದಿಂದ ಯಜ್ಞಗಳಲ್ಲಿ ಮಾಡುವ ಆಹುತಿಭಾಗವನ್ನು ನಾನು ಪರಿಗ್ರಹಿಸುತ್ತೇನೆ. ಆದರಿಂದ ನನಗೆ 'ಹರಿ' ಎಂಬ ಹೆಸರು ಬಂದಿದೆ. ನನ್ನ ಮೈಬಣ್ಣವೂ ಶ್ರೇಷ್ಠ ವಾದ ಹರಿನ್ಮಣಿಯಂತೆ (ಪಚ್ಚೆಮಣಿಯಂತೆ) ಇರುವುದರಿಂದಲೂ ನಾನು 'ಹರಿ' ಎಂದು ಕರೆಯಲ್ಪಡುತ್ತೇನೆ.

ಧಾಮ ಸಾರೋ ಹಿ ಭೂತಾನಾಮೃತಂ ಚೈವ ವಿಚಾರಿತಮ್ ।
ಋತಧಾಮಾ ತತೋ ವಿಪ್ರೈಃ ಸತ್ಯಶ್ಚಾಹಂ ಪ್ರಕೀರ್ತಿತಃ ॥೬೯॥

ಪ್ರಾಣಿಗಳ ಶಕ್ತಿಯು 'ಧಾಮ'–ಎಂಬ ಹೆಸರನ್ನು ಹೊಂದಿದೆ. 'ಋತ' ಎಂಬುದರ ಅರ್ಥವು 'ವಿಚಾರಮಾಡಿ ಕೈಗೊಂಡ ನಿರ್ಣಯ' ಎಂದಾಗಿದೆ. ಈ ಕಾರಣದಿಂದ ನನ್ನನ್ನು ವಿದ್ವಾಂಸರು ಋತಧಾಮನೆಂದೂ ಸತ್ಯನೆಂದೂ ವರ್ಣಿಸಿದ್ದಾರೆ.

ನಷ್ಟಾಂ ಚ ಧರಣೀಂ ಪೂರ್ವಮವಿನ್ದಂ ವೈ ಗುಹಾಗತಾಮ್ ।
ಗೋವಿನ್ದ ಇತಿ ತೇನಾಹಂ ದೇವೈರ್ವಾಗ್ಭಿರಭಿಷ್ಟುತಃ ॥೭೦॥

ಹಿಂದೆ ನಾನು ಅದೃಶ್ಯಳಾಗಿ ರಸಾತಲಕ್ಕೆ ಹೋಗಿದ್ದ, ಗೋಶಬ್ದದಿಂದ ಕರೆಯಲ್ಪಡುವ ಭೂದೇವಿಯನ್ನು ವರಾಹರೂಪವನ್ನು ಧರಿಸಿ ಮೇಲಕ್ಕೆತ್ತಿ ದೆನು. ಈ ಕಾರಣದಿಂದ ದೇವತೆಗಳು ನನ್ನನ್ನು ಅವರ ವಾಕ್ಕುಗಳಿಂದ ಗೋವಿಂದನೆಂದು ಸ್ತೋತ್ರಮಾಡುತ್ತಾರೆ. (ಗಾಂ ವಿನ್ದತ ಇತಿ ಗೋವಿನ್ದಃ)

ಶಿಪಿವಿಷ್ಟೇತಿ ಚಾಖ್ಯಾಯಾಂ ಹೀನರೋಮಾ ಚ ಯೋ ಭವೇತ್ ।
ತೇನಾವಿಷ್ಟಂ ತು ಯತ್ಕಿಂಚಿಚ್ಛಿಪಿವಿಷ್ಟೇತಿ ಚ ಸ್ಮೃತಃ ॥೭೧॥

ನನ್ನ 'ಶಿಪಿವಿಷ್ಟ'–ಎಂಬ ನಾಮಕ್ಕೆ ಅವಯವಾರ್ಥವು ಈ ರೀತಿ ಯಾಗಿದೆ. ರೋಮವಿಲ್ಲದವನು ಅರ್ಥಾತ್ ಅಂಶಗಳಿಲ್ಲದವನು ; ಅವಯವ ಗಳಿಲ್ಲದವನು–ಶಿಪಿ. ಅಂತಹ ಶಿಪಿಯಿಂದ ಈ ಜಗತ್ತು ಆವಿಷ್ಟವಾಗಿದೆ. ವ್ಯಾಪ್ತವಾಗಿದೆ. ಆದುದರಿಂದಲೇ ನಾನು ಶಿಪಿವಿಷ್ಟನೆಂದು ಪ್ರಸಿದ್ಧನಾಗಿದ್ದೇನೆ.

ಯಾಸ್ಕೋ ಮಾಮೃಷಿರವ್ಯಗ್ರೋ ನೈಕಯಜ್ಞೇಷು ಗೀತವಾನ್ ।
ಶಿಪಿವಿಷ್ಟ ಇತಿ ಹ್ಯಸ್ಮಾದ್ಗುಹ್ಯನಾಮಧರೋ ಹ್ಯಹಮ್ ॥೭೨॥

ಯಾಸ್ಕನು ಏಕಾಗ್ರಚಿತ್ತನಾಗಿ ನನ್ನನ್ನು ಅನೇಕಯಜ್ಞಗಳಲ್ಲಿ ಶಿಪಿವಿಷ್ಟ ಎಂಬ ನಾಮದಿಂದಲೇ ಸ್ತೋತ್ರಮಾಡಿದ್ದಾನೆ. ಆ ಕಾರಣದಿಂದಲೂ ನಾನು ರಹಸ್ಯವಾದ ಈ ನಾಮವನ್ನು ಹೊಂದಿರುತ್ತೇನೆ.

ಸ್ತುತ್ವಾ ಮಾಂ ಶಿಪಿವಿಷ್ಟೇತಿ ಯಾಸ್ಕೋ ಋಷಿರುದಾರಧೀಃ ।
ಮತ್ಪ್ರಸಾದಾದಧೋ ನಷ್ಟಂ ನಿರುಕ್ತಮಭಿಜಗ್ಮಿವಾನ್ ॥೭೩॥

ಉದಾರಚಿತ್ತನಾದ ಯಾಸ್ಕಮುನಿಯು – 'ಶಿಪಿವಿಷ್ಟ'–ಎಂಬ ಹೆಸರಿನಿಂದ ನನ್ನನ್ನು ಸ್ತುತಿಸಿ ನನ್ನ ಅನುಗ್ರಹದಿಂದಲೇ – ಕೆಳಗೆಬಿದ್ದು ನಷ್ಟವಾಗಿ ಹೋಗಿದ್ದ ನಿರುಕ್ತಶಾಸ್ತ್ರವನ್ನು ಪುನಃ ಪಡೆದುಕೊಂಡನು.

ನ ಹಿ ಜಾತೋ ನ ಜಾಯೇಯಂ ನ ಜನಿಷ್ಯೇ ಕದಾಚನ ।
ಕ್ಷೇತ್ರಜ್ಞಃ ಸರ್ವಭೂತಾನಾಂ ತಸ್ಮಾದಹಮಜಃ ಸ್ಮೃತಃ ॥೭೪॥

ನಾನು ಹಿಂದೆಂದೂ ಹುಟ್ಟಿದವನಲ್ಲ ; ಈಗಲೂ ಹುಟ್ಟಿರುವುದಿಲ್ಲ ; ಮುಂದೆ ಹುಟ್ಟುವವನೂ ಅಲ್ಲ. ನಾನು ಸರ್ವಪ್ರಾಣಿಗಳಲ್ಲಿಯೂ ಇರುವ ಕ್ಷೇತ್ರಜ್ಞನಾಗಿದ್ದೇನೆ. ಅದರಿಂದ ನನ್ನನ್ನು ಅಜನೆಂದೂ ಕರೆಯುತ್ತಾರೆ.

ನೋಕ್ತಪೂರ್ವಂ ಮಯಾ ಕ್ಷುದ್ರಮಶ್ಲೀಲಂ ವಾ ಕದಾಚನ ।
ಋತಾ ಬ್ರಹ್ಮಸುತಾ ಸಾ ಮೇ ಸತ್ಯಾ ದೇವೀ ಸರಸ್ವತೀ ॥೭೫॥

ಸಚ್ಚಾಸಚ್ಚೈವ ಕೌನ್ತೇಯ ಮಯಾವೇಶಿತಮಾತ್ಮನಿ ।
ಪೌಷ್ಕರೇ ಬ್ರಹ್ಮಸದನೇ ಸತ್ಯಂ ಮಾಮೃಷಯೋ ವಿದುಃ ॥೭೬॥

ಕೌಂತೇಯನೇ! ನಾನು ಯಾವಾಗಲೂ ಕ್ಷುದ್ರವಾದ ಮತ್ತು ಅಶ್ಲೀಲವಾದ ಮಾತನ್ನಾಡಿರುವುದಿಲ್ಲ. ಸತ್ಯಸ್ವರೂಪಳಾದ, ಬ್ರಹ್ಮಪುತ್ರಿಯಾದ ಸರಸ್ವತಿದೇವಿಯೇ ನನ್ನ ವಾಣಿಯಾಗಿದ್ದಾಳೆ. ಸತ್ತು ಮತ್ತು ಅಸತ್ತುಗಳು ನನ್ನಲ್ಲಿಯೇ ಆಶ್ರಯವನ್ನು ಪಡೆದಿವೆ. ಈ ಕಾರಣದಿಂದ ಕಮಲರೂಪವಾದ ಬ್ರಹ್ಮಲೋಕದಲ್ಲಿರುವ ಋಷಿಗಳು ನನ್ನನ್ನು ಸತ್ಯನನ್ನಾಗಿ (ಸತ್ಯಸ್ವರೂಪನನ್ನಾಗಿ) ತಿಳಿದಿರುತ್ತಾರೆ.

ಸತ್ತ್ವಾನ್ನ ಚ್ಯುತಪೂರ್ವೋಽಹಂ ಸತ್ತ್ವಂ ವೈ ವಿದ್ಧಿ ಮತ್ಕೃತಮ್ ।
ಜನ್ಮನೀಹಾ ಭವೇತ್ಸತ್ತ್ವಂ ಪೌರ್ವಿಕಂ ಮೇ ಧನಂಜಯ ॥೭೭॥

ನಿರಾಶೀಃ ಕರ್ಮಸಂಯುಕ್ತಃ ಸತ್ತ್ವತಶ್ಚಾಪ್ಯಕಲ್ಮಷಃ ।
ಸಾತ್ತ್ವತಜ್ಞಾನದೃಷ್ಟೋಽಹಂ ಸಾತ್ತ್ವತಾಮಿತಿ ಸಾತ್ತ್ವತಃ ॥೭೮॥

ನಾನು ಯಾವಾಗಲೂ ಸತ್ತ್ವದಿಂದ ಚ್ಯುತನಾಗಿರುವುದಿಲ್ಲ. ಸತ್ತ್ವವು ನನ್ನಿಂದಲೇ ಹುಟ್ಟಿದುದೆಂದು ತಿಳಿ. ನನ್ನ ಪುರಾತನವಾದ ಸತ್ತ್ವವು ಅವತಾರಕಾಲದಲ್ಲಿಯೂ ಇರುತ್ತದೆ. ಆ ಸತ್ತ್ವದಿಂದಲೇ ನಾನು ನಿಷ್ಪಾಪನೂ-ನಿಷ್ಕಾಮಕರ್ಮನೂ ಆಗಿದ್ದೇನೆ. ಸತ್ತ್ವಗುಣಸಂಪನ್ನರಿಗೆ ಪಾಂಚರಾತ್ರವೇ ಮೊದಲಾದ ಸಾತ್ತ್ವತಜ್ಞಾನದಿಂದ ನಾನು ತಿಳಿಯಲ್ಪಡತಕ್ಕವನಾಗಿದ್ದೇನೆ. ಈ ಎಲ್ಲ ಕಾರಣಗಳಿಂದ ನನ್ನನ್ನು ಸಾತ್ತ್ವತನೆಂದು ಕರೆಯುತ್ತಾರೆ.

ಕೃಷಾಮಿ ಮೇದಿನೀಂ ಪಾರ್ಥ ಭೂತ್ವಾ ಕಾರ್ಷ್ಣಾಯಸೋ ಮಹಾನ್ ।
ಕೃಷ್ಣೋ ವರ್ಣಶ್ಚ ಮೇ ಯಸ್ಮಾತ್ತಸ್ಮಾತ್ಕೃಷ್ಣೋಽಹಮರ್ಜುನ ॥೭೯॥

ಅರ್ಜುನ! ದೊಡ್ಡದಾದ ನೇಗಿಲಿನ ಕಬ್ಬಿಣದ ಗುಳದ ಸ್ವರೂಪನಾಗಿ ಭೂಮಿಯನ್ನು ಉಳುತ್ತೇನೆ. ನನ್ನ ಬಣ್ಣವೂ ಕಪ್ಪಾಗಿದೆ. ಈ ಕಾರಣದಿಂದಲೇ ನಾನು ಕೃಷ್ಣನಾಗಿದ್ದೇನೆ.

ಮಯಾ ಸಂಶ್ಲೇಷಿತಾ ಭೂಮಿರದ್ಭಿರ್ವ್ಯೋಮ ಚ ವಾಯುನಾ ।
ವಾಯುಶ್ಚ ತೇಜಸಾ ಸಾರ್ಧಂ ವೈಕುಣ್ಠತ್ವಂ ತತೋ ಮಮ ॥೮೦॥

ನಾನು ಭೂಮಿಯನ್ನು ನೀರಿನೊಡನೆಯೂ, ಆಕಾಶವನ್ನು ವಾಯುವಿನೊಡನೆಯೂ, ವಾಯುವನ್ನು ತೇಜಸ್ಸಿನೊಡನೆಯೂ ಸಂಯೋಜಿಸಿದ್ದೇನೆ. ಅದರಿಂದಲೇ ನನಗೆ ವೈಕುಂಠನೆಂಬ ಹೆಸರು ಬಂದಿದೆ.

(**ವಿಗತಾ-ಕುಣ್ಠಾ-ಪಞ್ಚಾನಾಂ ಭೂತಾನಾಂ ಮೇಲನೇ ಅಸಾಮರ್ಥ್ಯಂ ಯಸ್ಯ ಸಃ ವಿಕುಣ್ಠಃ = ವಿಕುಣ್ಠ ಏವ ವೈಕುಣ್ಠಃ** ಪಂಚಭೂತಗಳ ಸಂಯೋಜನೆಯಲ್ಲಿ ಅಸಾಮರ್ಥ್ಯವು ಯಾವನಿಗಿಲ್ಲವೋ ಅವನು ವಿಕುಂಠ. ಅವನೇ ವೈಕುಂಠ–ಎಂದು ನೀಲಕಂಠೀಯಭಾಷ್ಯದಲ್ಲಿ ವ್ಯುತ್ಪತ್ತಿಯಿದೆ.)

ನಿರ್ವಾಣಂ ಪರಮಂ ಬ್ರಹ್ಮ ಧರ್ಮೋಽಸೌ ಪರ ಉಚ್ಯತೇ ।
ತಸ್ಮಾನ್ನ ಚ್ಯುತಪೂರ್ವೋಽಹಮಚ್ಯುತಸ್ತೇನ ಕರ್ಮಣಾ ॥೮೧॥

ಪರಮಶಾಂತಿಮಯವಾದ ಬ್ರಹ್ಮವಸ್ತುವನ್ನೇ ಪರಮಧರ್ಮವೆನ್ನುತ್ತಾರೆ. ಅಂತಹ ಬ್ರಹ್ಮರೂಪವಾದ ಪರಮಧರ್ಮದಿಂದ ನಾನು ಯಾವಾಗಲೂ ಚ್ಯುತನಾಗಿರುವುದಿಲ್ಲ. ಆದುದರಿಂದಲೇ ನನ್ನನ್ನು ಅಚ್ಯುತನೆನ್ನುತ್ತಾರೆ.

ಪೃಥಿವೀನಭಸೀ ಚೋಭೇ ವಿಶ್ರುತೇ ವಿಶ್ವತೋಮುಖೇ ।
ತಯೋಃ ಸಂಧಾರಣಾರ್ಥಂ ಹಿ ಮಾಮಧೋಕ್ಷಜಮಞ್ಜಸಾ ॥೮೨॥

ದ್ಯಾವಾಪೃಥಿವಿಗಳೆರಡೂ ಸರ್ವತೋಮುಖಗಳೆಂದು ಪ್ರಸಿದ್ಧವಾಗಿವೆ. ಅವೆರಡನ್ನೂ ನಾನು ಅನಾಯಾಸವಾಗಿ ಧರಿಸಿರುವುದರಿಂದ ನನ್ನನ್ನು ಅಧೋಕ್ಷಜನೆಂದು ಕರೆಯುತ್ತಾರೆ.

ನಿರುಕ್ತಂ ವೇದವಿದುಷೋ ವೇದಶಬ್ದಾರ್ಥಚಿನ್ತಕಾಃ ।
ತೇ ಮಾಂ ಗಾಯನ್ತಿ ಪ್ರಾಗ್ವಂಶೇ ಅಧೋಕ್ಷಜ ಇತಿ ಸ್ಥಿತಿಃ ॥೮೩॥

ವೇದಗಳ ಶಬ್ದ ಮತ್ತು ಅರ್ಥಗಳನ್ನು ವಿಚಾರಮಾಡುವ ವೇದ ವಿದ್ವಾಂಸರು ಪ್ರಾಗ್ವಂಶದಲ್ಲಿ (ಯಜಮಾನ ಮತ್ತು ಋತ್ವಿಕ್ಕುಗಳು ಇರುವ ಮನೆಯಲ್ಲಿ) ಕಲೆತು ಅಧೋಕ್ಷಜ ಎಂಬ ಹೆಸರಿನ ಮೂಲಕ ನನ್ನ ಮಹಿಮೆಯನ್ನು ಕೊಂಡಾಡುತ್ತಾರೆ. ಈ ಕಾರಣದಿಂದಲೂ ನಾನು ಅಧೋಕ್ಷಜನಾಗಿದ್ದೇನೆ. (ಅಧೋ ನ ಕ್ಷಿಯತೇ ಯಸ್ಮಾದ್ವದನ್ತ್ಯನ್ಯೇ ಹ್ಯಧೋಕ್ಷಜಮ್–ಯಾವನ ಅನುಗ್ರಹದಿಂದ ಜೀವರು ಅಧೋಗತಿಗೆ ಬಿದ್ದು ಹಾಳಾಗುವುದಿಲ್ಲವೋ–ಅಂತಹವನು ಅಧೋಕ್ಷಜನೆಂದು ಇತರ ವಿದ್ವಾಂಸರು ಅಧೋಕ್ಷಜಶಬ್ದಕ್ಕೆ ನಿರುಕ್ತವನ್ನು ಹೇಳಿರುತ್ತಾರೆ. ಅಕ್ಷಾನ್ = ಇಂದ್ರಿಯಗಳನ್ನು ಅಧಃ = ಕೆಳಗೆ ತಳ್ಳಿ ಜಃ = ಅವತರಿಸಿರುವವನು – ಎಂದೂ ಅರ್ಥಮಾಡಬಹುದು.)

ಶಬ್ದ ಏಕಪದೈರೇಷ ವ್ಯಾಹೃತಃ ಪರಮರ್ಷಿಭಿಃ ।
ನಾನ್ಯೋ ಹ್ಯಧೋಕ್ಷಜೋ ಲೋಕೇ ಋತೇ ನಾರಾಯಣಂ
ಪ್ರಭುಮ್ ॥೮೪॥

ಮಹರ್ಷಿಗಳು ಅಧೋಕ್ಷಜಶಬ್ದವನ್ನು ಮೂರು ಪ್ರತ್ಯೇಕಪದಗಳ ಸಮುದಾಯವೆನ್ನುತ್ತಾರೆ. ಅ-ಧೋಕ್ಷ-ಜ. 'ಅ' ಎಂದರೆ ಲಯಸ್ಥಾನ. 'ಧೋಕ್ಷ' ಎಂದರೆ ಪಾಲನಸ್ಥಾನ. 'ಜ' ಎಂದರೆ ಉತ್ಪತ್ತಿಸ್ಥಾನ. ಸೃಷ್ಟಿ-ಸ್ಥಿತಿ-ಲಯಗಳಿಗೆ ಆಶ್ರಯನಾಗಿರತಕ್ಕವನು ಲೋಕದಲ್ಲಿ ನಾರಾಯಣನ ಹೊರತಾಗಿ ಬೇರೆ ಯಾರೂ ಇರುವುದಿಲ್ಲ. ಆದುದರಿಂದ ಅಧೋಕ್ಷಜ ಎಂಬ ಹೆಸರು ಶ್ರೀಮನ್ನಾರಾಯಣನಿಗೆ ಹೊರತಾಗಿ ಮತ್ತಾರಿಗೂ ಇರುವುದಿಲ್ಲ.

ಘೃತಂ ಮಮಾರ್ಚಿಷೋ ಲೋಕೇ ಜನ್ತೂನಾಂ ಪ್ರಾಣಧಾರಣಮ್
ಘೃತಾರ್ಚಿರಹಮವ್ಯಗ್ರೈರ್ವೇದಜ್ಞೈಃ ಪರಿಕೀರ್ತಿತಃ ॥೮೫॥

ಪ್ರಾಣಿಗಳ ಪ್ರಾಣಧಾರಣೆಗೆ ಸಾಧಕವಾದ ತುಪ್ಪವು ಅಗ್ನಿಸ್ವರೂಪನಾದ ನನ್ನ ಜ್ವಾಲೆಗಳನ್ನು ಉತ್ಪಾದಿಸುವುದೇ ಆಗಿದೆ. ಈ ಕಾರಣದಿಂದಲೇ ಏಕಾಗ್ರಚಿತ್ತರಾದ ವೇದವಿದ್ವಾಂಸರು ನನ್ನನ್ನು ಘೃತಾರ್ಚಿಯೆಂದೂ ಸ್ತೋತ್ರಮಾಡುತ್ತಾರೆ.

ತ್ರಯೋ ಹಿ ಧಾತವಃ ಖ್ಯಾತಾಃ ಕರ್ಮಜಾ ಇತಿ ತೇ ಸ್ಮೃತಾಃ ।
ಪಿತ್ತಂ ಶ್ಲೇಷ್ಮಾ ಚ ವಾಯುಶ್ಚ ಏಷ ಸಂಘಾತ ಉಚ್ಯತೇ ॥೮೬॥

ಏತೈಶ್ಚ ಧಾರ್ಯತೇ ಜನ್ತುರೇತೈಃ ಕ್ಷೀಣೈಶ್ಚ ಕ್ಷೀಯತೇ ।
ಆಯುರ್ವೇದವಿದಸ್ತಸ್ಮಾತ್ತ್ರಿಧಾತುಂ ಮಾಂ ಪ್ರಚಕ್ಷತೇ ॥೮೭॥

ಶರೀರದಲ್ಲಿ ವಾತ, ಪಿತ್ತ ಮತ್ತು ಕಫಗಳೆಂಬ ಮೂರು ವಿಖ್ಯಾತವಾದ ಧಾತುಗಳಿವೆ. ಇವು ಕರ್ಮಜನ್ಯಗಳೆಂದು ಹೇಳಲ್ಪಟ್ಟಿವೆ. ಈ ಮೂರು ಧಾತುಗಳ ಸಮುದಾಯವನ್ನು ತ್ರಿಧಾತುವೆನ್ನುತ್ತಾರೆ. ಈ ತ್ರಿಧಾತುಗಳಿರುವುದರಿಂದಲೇ ಪ್ರಾಣಿಯು ಜೀವಿಸಿರುತ್ತದೆ. ಇವು ಕ್ಷೀಣಿಸಿದೊಡನೆಯೇ ಪ್ರಾಣಿಯೂ ನಾಶವಾಗುತ್ತದೆ. ಈ ಕಾರಣದಿಂದಲೇ ಆಯುರ್ವೇದ ವಿದ್ವಾಂಸರು ನನ್ನನ್ನು ತ್ರಿಧಾತುವೆಂದು ಹೇಳುತ್ತಾರೆ.

ವೃಷೋ ಹಿ ಭಗವಾನ್ಧರ್ಮಃ ಖ್ಯಾತೋ ಲೋಕೇಷು ಭಾರತ ।
ನೈಘಣ್ಟುಕಪದಾಖ್ಯಾನೇ ವಿದ್ಧಿ ಮಾಂ ವೃಷಮುತ್ತಮಮ್ ॥೮೮॥

ಭಗವಂತನಾದ ಧರ್ಮನು ಎಲ್ಲ ಲೋಕಗಳಲ್ಲಿಯೂ ವೃಷನೆಂದು

ವಿಖ್ಯಾತನಾಗಿದ್ದಾನೆ. ವೈದಿಕಶಬ್ದಾರ್ಥಬೋಧಕವಾದ ಕೋಶದಲ್ಲಿ 'ವೃಷ' ಎಂಬ ಪದಕ್ಕೆ ಧರ್ಮವೆಂದೇ ಅರ್ಥಮಾಡಿರುತ್ತಾರೆ. ಆದುದರಿಂದ ಉತ್ತಮ ಧರ್ಮಸ್ವರೂಪನಾದ ನನ್ನನ್ನು ವೃಷನೆಂದು ತಿಳಿ.

ಕಪಿರ್ವರಾಹಃ ಶ್ರೇಷ್ಠಶ್ಚ ಧರ್ಮಶ್ಚ ವೃಷ ಉಚ್ಯತೇ ।
ತಸ್ಮಾದ್ವೃಷಾಕಪಿಂ ಪ್ರಾಹ ಕಶ್ಯಪೋ ಮಾಂ ಪ್ರಜಾಪತಿಃ ॥೮೯॥

ಕಪಿಶಬ್ದಕ್ಕೆ 'ವರಾಹ ಮತ್ತು ಶ್ರೇಷ್ಠ' ಎಂಬ ಅರ್ಥಗಳಿವೆ ಮತ್ತು ಧರ್ಮವನ್ನು ವೃಷವೆಂದು ಕರೆಯುತ್ತಾರೆ. ನಾನು ಧರ್ಮನೂ ಮತ್ತು ಶ್ರೇಷ್ಠವರಾಹಸ್ವರೂಪನೂ ಆಗಿದ್ದೇನೆ. ಈ ಕಾರಣದಿಂದ ಪ್ರಜಾಪತಿಯಾದ ಕಶ್ಯಪನು ನನ್ನನ್ನು 'ವೃಷಾಕಪಿ' ಎಂದು ಕರೆದನು.

ನ ಚಾದಿಂ ನ ಮಧ್ಯಂ ತಥಾ ಚೈವ ನಾನ್ತಂ
ಕದಾಚಿದ್ವಿದನ್ತೇ ಸುರಾಶ್ಚಾಸುರಾಶ್ಚ ।
ಅನಾದ್ಯೋ ಹ್ಯಮಧ್ಯಸ್ತಥಾ ಚಾಪ್ಯನನ್ತಃ
ಪ್ರಗೀತೋಽಹಮೀಶೋ ವಿಭುರ್ಲೋಕಸಾಕ್ಷೀ ॥೯೦॥

ನಾನು ಜಗತ್ಸಾಕ್ಷಿಯೂ ಸರ್ವವ್ಯಾಪಿಯೂ ಆದ ಈಶ್ವರನಾಗಿದ್ದೇನೆ. ದೇವತೆಗಳಾಗಲೀ ಅಸುರರಾಗಲೀ ನನ್ನ ಆದಿ-ಮಧ್ಯಾಂತಗಳನ್ನು ಎಂದೂ ತಿಳಿದವರಾಗಿಲ್ಲ. ಆದುದರಿಂದ ನನ್ನನ್ನು ಅನಾದಿಯೆಂದೂ, ಅಮಧ್ಯನೆಂದೂ, ಅನಂತನೆಂದೂ ಕರೆಯುತ್ತಾರೆ.

ಶುಚೀನಿ ಶ್ರವಣೀಯಾನಿ ಶೃಣೋಮೀಹ ಧನಂಜಯ ।
ನ ಚ ಪಾಪಾನಿ ಗೃಹ್ಣಾಮಿ ತತೋಽಹಂ ವೈ ಶುಚಿಶ್ರವಾಃ ॥೯೧॥

ಧನಂಜಯ! ನಾನು ಪವಿತ್ರವಾದ ಮತ್ತು ಕೇಳಲು ಯೋಗ್ಯವಾದ ಮಾತುಗಳನ್ನೇ ಕೇಳುತ್ತೇನೆ. ಪಾಪಪೂರ್ಣವಾದ ಮಾತುಗಳನ್ನು ಯಾವಾಗಲೂ ಗ್ರಹಿಸುವುದಿಲ್ಲ. ಈ ಕಾರಣದಿಂದ ನಾನು ಶುಚಿಶ್ರವನಾಗಿದ್ದೇನೆ.

ಏಕಶೃಙ್ಗಃ ಪುರಾ ಭೂತ್ವಾ ವರಾಹೋ ನನ್ದಿವರ್ಧನಃ ।
ಇಮಾಂ ಚೋದ್ಧೃತವಾನ್ಭೂಮಿಮೇಕಶೃಙ್ಗಸ್ತತೋ ಹ್ಯಹಮ್ ॥೯೨॥

ಹಿಂದೆ ನಾನು ಒಂದು ಕೊಂಬುಳ್ಳ ವರಾಹನಾಗಿ ಅವತರಿಸಿ ಈ ಪೃಥ್ವಿಯನ್ನು ನೀರಿನಿಂದ ಮೇಲೆತ್ತಿ ಜಗತ್ತಿನ ಆನಂದವನ್ನು ಹೆಚ್ಚಿಸಿದೆನು. ಈ ಕಾರಣದಿಂದ ನನ್ನನ್ನು ಏಕಶೃಂಗನೆಂದು ಕರೆಯುತ್ತಾರೆ.

ತಥೈವಾಸಂ ತ್ರಿಕಕುದೋ ವಾರಾಹಂ ರೂಪಮಾಸ್ಥಿತಃ |
ತ್ರಿಕಕುತ್ತೇನ ವಿಖ್ಯಾತಃ ಶರೀರಸ್ಯ ತು ಮಾಪನಾತ್ ||೯೩||

ಹಾಗೆಯೇ ನಾನು ವರಾಹರೂಪಿಯಾಗಿದ್ದಾಗ ಮೂರು ಹಿಳಲುಗಳನ್ನು ಹೊಂದಿದ್ದೆನು. ಶರೀರವನ್ನು ಅಳೆಯುವಾಗ ನನಗೆ ಮೂರು ಹಿಳಲುಗಳಿದ್ದುದರಿಂದ 'ತ್ರಿಕಕುತ್' ಎಂಬ ಹೆಸರಿನಿಂದಲೂ ವಿಖ್ಯಾತನಾದೆನು.

ವಿರಿಞ್ಚ ಇತಿ ಯತ್ಪ್ರೋಕ್ತಂ ಕಾಪಿಲಜ್ಞಾನಚಿನ್ತಕೈಃ |
ಸ ಪ್ರಜಾಪತಿರೇವಾಹಂ ಚೇತನಾತ್ಸರ್ವಲೋಕಕೃತ್ ||೯೪||

ಕಪಿಲಮುನಿಯಿಂದ ಪ್ರತಿಪಾದಿತವಾದ ಸಾಂಖ್ಯಶಾಸ್ತ್ರವನ್ನು ವಿಮರ್ಶಿಸುವ ವಿದ್ವಾಂಸರು 'ವಿರಿಂಚ' ಎಂದು ಯಾರನ್ನು ಕರೆದಿರುವರೋ ಅಂತಹ ಚೈತನ್ಯದಿಂದ ಸರ್ವಲೋಕಗಳನ್ನೂ ಸೃಷ್ಟಿಸುವ ಪ್ರಜಾಪತಿಯು ನಾನೇ ಆಗಿದ್ದೇನೆ.

ವಿದ್ಯಾಸಹಾಯವನ್ತಂ ಮಾಮಾದಿತ್ಯಸ್ಥಂ ಸನಾತನಮ್ |
ಕಪಿಲಂ ಪ್ರಾಹುರಾಚಾರ್ಯಾಃ ಸಾಂಖ್ಯಾ ನಿಶ್ಚಿತನಿಶ್ಚಯಾಃ ||೬೫||

ತತ್ತ್ವವನ್ನು ನಿಶ್ಚಯಿಸಿ ಹೇಳುವ ಸಾಂಖ್ಯಶಾಸ್ತ್ರದ ಆಚಾರ್ಯರು–ಆದಿತ್ಯಮಂಡಲದಲ್ಲಿರುವ, ವಿದ್ಯಾಶಕ್ತಿಯನ್ನೇ ಸಹಾಯಕಳನ್ನಾಗಿ ಹೊಂದಿರುವ ನನ್ನನ್ನು ಸನಾತನನಾದ 'ಕಪಿಲ' ಎಂದು ಹೇಳುತ್ತಾರೆ.

ಹಿರಣ್ಯಗರ್ಭೋ ದ್ಯುತಿಮಾನ್ಯ ಏಷ ಛನ್ದಸಿ ಸ್ತುತಃ |
ಯೋಗೈಃ ಸಮ್ಪೂಜ್ಯತೇ ನಿತ್ಯಂ ಸ ಏವಾಹಂ ಭುವಿ ಸ್ಮೃತಃ ||೯೬||

ವೇದಗಳು ಯಾವನನ್ನು 'ಹಿರಣ್ಯಗರ್ಭ' ಎಂಬ ಅಭಿಧಾನದಿಂದ ಸ್ತೋತ್ರಮಾಡುವುವೋ, ಪ್ರಪಂಚದಲ್ಲಿ ಯೋಗಿಗಳು ಯಾವನನ್ನು ಸದಾಕಾಲದಲ್ಲಿಯೂ ಸ್ಮರಿಸುತ್ತಾ ಪೂಜಿಸುವರೋ–ಅಂತಹ ತೇಜಸ್ವಿಯಾದ ಹಿರಣ್ಯಗರ್ಭನೂ ನಾನೇ ಆಗಿದ್ದೇನೆ.

ಏಕವಿಂಶತಿಸಾಹಸ್ರಂ ಋಗ್ವೇದಂ ಮಾಂ ಪ್ರಚಕ್ಷತೇ ।
ಸಹಸ್ರಶಾಖಂ ಯತ್ಸಾಮ ಯೇ ವೈ ವೇದವಿದೋ ಜನಾಃ ॥೯೭॥

ವೇದವಿದ್ವಾಂಸರು ನನ್ನನ್ನು ಇಪ್ಪತ್ತೊಂದು ಸಾವಿರ ಋಕ್ಕುಗಳಿಂದ ಕೂಡಿರುವ ಋಗ್ವೇದವೆನ್ನುತ್ತಾರೆ. ಹಾಗೆಯೇ ಸಹಸ್ರಶಾಖೆಗಳಿಂದ ಯುಕ್ತವಾಗಿರುವ ಸಾಮವೇದವೆನ್ನುತ್ತಾರೆ.

ಗಾಯನ್ತ್ಯಾರಣ್ಯಕೇ ವಿಪ್ರಾ ಮದ್ಭಕ್ತಾಸ್ತೇ ಹಿ ದುರ್ಲಭಾಃ ।
ಷಟ್ಪಞ್ಚಾಶತಮಷ್ಟೌ ಚ ಸಪ್ತತ್ರಿಂಶತಮಿತ್ಯುತ ।
ಯಸ್ಮಿಞ್ಶಾಖಾ ಯಜುರ್ವೇದೇ ಸೋಽಹಮಾಧ್ವರ್ಯವೇ ಸ್ಮೃತಃ ॥

ನನ್ನ ಭಕ್ತರಾದ ಮತ್ತು ದುರ್ಲಭರಾದ ಬ್ರಾಹ್ಮಣರು ಆರಣ್ಯಕಗಳಲ್ಲಿಯೂ ನನ್ನನ್ನೇ ಸ್ತೋತ್ರಮಾಡುತ್ತಾರೆ. ಐವತ್ತಾರು, ಎಂಟು ಮತ್ತು ಮೂವತ್ತೇಳು–ಒಟ್ಟು ನೂರೊಂದು ಶಾಖೆಗಳಿರುವ ಅಧ್ವರ್ಯುಶಾಖೆಯಾದ ಯಜುರ್ವೇದದಲ್ಲಿಯೂ ನಾನೇ ಸ್ತೋತ್ರಮಾಡಲ್ಪಟ್ಟಿದ್ದೇನೆ.

ಪಞ್ಚಕಲ್ಪಮಥರ್ವಾಣಂ ಕೃತ್ಯಾಭಿಃ ಪರಿಬೃಂಹಿತಮ್ ।
ಕಲ್ಪಯನ್ತಿ ಹಿ ಮಾಂ ವಿಪ್ರಾ ಅಥರ್ವಾಣವಿದಸ್ತಥಾ ॥೯೯॥

ಅಥರ್ವವೇದವನ್ನು ತಿಳಿದಿರುವ ವಿದ್ವಾಂಸರು ನನ್ನನ್ನೇ ಅಭಿಚಾರಿಕ ಪ್ರಯೋಗಗಳಿಂದ ಯುಕ್ತವಾದ ಪಂಚಕಲ್ಪಾತ್ಮಕವಾದ ಅಥರ್ವವೇದವನ್ನಾಗಿ ತಿಳಿಯುತ್ತಾರೆ.

ಶಾಖಾಭೇದಾಶ್ಚ ಯೇ ಕೇಚಿದ್ಯಾಶ್ಚ ಶಾಖಾಸು ಗೀತಯಃ ।
ಸ್ವರವರ್ಣಸಮುಚ್ಚಾರಾಃ ಸರ್ವಾಂಸ್ತಾನ್ವಿದ್ಧಿ ಮತ್ಕೃತಾನ್ ॥೧೦೦॥

ವೇದಗಳಲ್ಲಿ ಭಿನ್ನ-ಭಿನ್ನವಾದ ಎಷ್ಟು ಶಾಖೆಗಳಿವೆಯೋ–ಪ್ರತಿಯೊಂದು ಶಾಖೆಯಲ್ಲಿಯೂ ಯಾವ ಯಾವ ಗೀತಗಳಿವೆಯೋ–ಆ ಗೀತಗಳಲ್ಲಿ ಯಾವ ವಿಧವಾದ ಸ್ವರ, ವರ್ಣ ಮತ್ತು ಉಚ್ಚಾರಣೆಗಳಿವೆಯೋ ಅವೆಲ್ಲವನ್ನೂ ನಾನೇ ರಚಿಸಿರುವೆನೆಂದು ತಿಳಿ.

ಯತ್ತದ್ಧಯಶಿರಃ ಪಾರ್ಥ ಸಮುದೇತಿ ವರಪ್ರದಮ್ ।
ಸೋಽಹಮೇವೋತ್ತರೇ ಭಾಗೇ ಕ್ರಮಾಕ್ಷರವಿಭಾಗವಿತ್ ॥೧೦೧॥

ಸರ್ವರಿಗೂ ವರವನ್ನು ನೀಡುವ ಯಾವ ಹಯಗ್ರೀವನು ಅವತರಿಸುವನೋ ಅವನೂ ನಾನೇ ಆಗಿದ್ದೇನೆ. ಹಾಗೆ ಹಯಗ್ರೀವನಾಗಿ ಅವತರಿಸಿ ಸಂಹಿತೆಯ ಉತ್ತರಭಾಗದಲ್ಲಿ ಕ್ರಮಾಕ್ಷರವಿಭಾಗವನ್ನು ತಿಳಿದುಕೊಳ್ಳುವವನೂ ನಾನೇ ಆಗಿದ್ದೇನೆ.*

ವಾಮಾದೇಶಿತಮಾರ್ಗೇಣ ಮತ್ಪ್ರಸಾದಾನ್ಮಹಾತ್ಮನಾ ।
ಪಾಞ್ಚಾಲೇನ ಕ್ರಮಃ ಪ್ರಾಪ್ತಸ್ತಸ್ಮಾದ್ಭೂತಾತ್ಸನಾತನಾತ್ ॥೧೦೨॥

ಮಹಾತ್ಮನಾದ ಪಾಂಚಾಲನು, ವಾಮದೇವನು ಉಪದೇಶಿಸಿದ ಮಾರ್ಗದ ಮೂಲಕವಾಗಿ ನನ್ನನ್ನು ಆರಾಧಿಸಿ, ಸನಾತನಮಹಾಭೂತನೆಂದು ಖ್ಯಾತನಾಗಿರುವ ನನ್ನ ಅನುಗ್ರಹದಿಂದಲೇ ವೇದಗಳ ಕ್ರಮಪಾಠವನ್ನು ಪಡೆದುಕೊಂಡನು.

ಬಾಭ್ರವ್ಯಗೋತ್ರಃ ಸ ಬಭೌ ಪ್ರಥಮಂ ಕ್ರಮಪಾರಗಃ ।
ನಾರಾಯಣಾದ್ವರಂ ಲಬ್ಧ್ವಾ ಪ್ರಾಪ್ಯ ಯೋಗಮನುತ್ತಮಮ್ ।
ಕ್ರಮಂ ಪ್ರಣೀಯ ಶಿಕ್ಷಾಂ ಚ ಪ್ರಣಯಿತ್ವಾ ಸ ಗಾಲವಃ ॥೧೦೩॥

ಬಾಭ್ರವ್ಯಗೋತ್ರೋತ್ಪನ್ನನಾದ ಮಹರ್ಷಿಯಾದ ಗಾಲವನು ಭಗವಂತನಾದ ನಾರಾಯಣನಿಂದ ಪರಮಶ್ರೇಷ್ಠವಾದ ಯೋಗವನ್ನು ಪಡೆದು ವೇದಗಳ ಕ್ರಮವಿಭಾಗವನ್ನು ಮಾಡಿ ಶಿಕ್ಷೆಯನ್ನು (ಪ್ರಾತಿಶಾಖ್ಯವನ್ನು) ರಚಿಸಿ ಮೊಟ್ಟಮೊದಲನೆಯ ಪಾರಂಗತನಾದ ಕ್ರಮಪಾಠಿಯಾದನು.

ಕಣ್ಡರೀಕೋಽಥ ರಾಜಾ ಚ ಬ್ರಹ್ಮದತ್ತಃ ಪ್ರತಾಪವಾನ್ ।
ಜಾತೀಮರಣಜಂ ದುಃಖಂ ಸ್ಮೃತ್ವಾ ಸ್ಮೃತ್ವಾ ಪುನಃ ಪುನಃ ।
ಸಪ್ತಜಾತಿಷು ಮುಖ್ಯತ್ವಾದ್ಯೋಗಾನಾಂ ಸಮ್ಪದಂ ಗತಃ ॥೧೦೪॥

---

*ಸಂಹಿತಾಪಾಠವೆಂಬುದು ವೇದದಲ್ಲಿ ಮೊದಲನೆಯ ಭಾಗ. ಪದ-ಕ್ರಮಪಾಠಗಳು ಉತ್ತರಭಾಗ ಅಥವಾ ಎರಡನೆಯ ಭಾಗ. ಉದಾ : ಇಷೇತ್ವೋರ್ಜೇತ್ವಾ ವಾಯವಸ್ಥೋಪಾಯವಸ್ಸ್ಥ –ಎಂಬುದು ಸಂಹಿತೆ. ಇಷೇ–ತ್ವಾ–ಊರ್ಜೇ–ತ್ವಾ– ವಾಯವಃ–ಸ್ಥ–ಉಪಾಯವಃ–ಸ್ಥ ಎಂಬುದು ಪದ. ಇಷೇತ್ವಾ–ತ್ವೋರ್ಜೇ–ಊರ್ಜೇತ್ವಾ–ತ್ವಾ ವಾಯವಃ–ವಾಯವಃ ಸ್ಥ–ಸ್ಥೋಪಾಯವಃ ಉಪಾಯವಃ ಸ್ಥ–ಎಂಬುದು ಕ್ರಮ.

ಕಂಡರೀಕವೆಂಬ ಕುಲದಲ್ಲಿ ಹುಟ್ಟಿದ್ದ ಪ್ರತಾಪವಂತನಾದ ಬ್ರಹ್ಮದತ್ತರಾಜನು ಹಿಂದಿನ ಏಳು ಜನ್ಮಗಳ ಜನ್ಮ-ಜರಾ-ಮೃತ್ಯುಸಂಬಂಧವಾದ ದುಃಖಗಳನ್ನು ಪುನಃ ಪುನಃ ಸ್ಮರಿಸುತ್ತಾ ತೀವ್ರತಮವಾದ ವೈರಾಗ್ಯವುಂಟಾದ ಕಾರಣದಿಂದ ಯೋಗೈಶ್ವರ್ಯವನ್ನು ಪಡೆದುಕೊಂಡನು.

ಪುರಾಹಮಾತ್ಮಜಃ ಪಾರ್ಥ ಪ್ರಥಿತಃ ಕಾರಣಾನ್ತರೇ ।
ಧರ್ಮಸ್ಯ ಕುರುಶಾರ್ದೂಲ ತತೋಽಹಂ ಧರ್ಮಜಃ ಸ್ಮೃತಃ ॥೧೦೬॥

ಹಿಂದೆ ನಾನು ಕಾರಣಾಂತರದಿಂದ ಧರ್ಮದೇವತೆಯ ಪುತ್ರನೆಂದು ಪ್ರಸಿದ್ಧನಾಗಿದ್ದೆನು. ಆದುದರಿಂದ ನನ್ನನ್ನು ಧರ್ಮಜನೆಂದೂ ಕರೆಯುತ್ತಾರೆ.

ಹಿಂದೆ ನರ-ನಾರಾಯಣರ್ಷಿಗಳು ಧರ್ಮಮಯವಾದ ರಥದಲ್ಲಿ ಕುಳಿತು ಗಂಧಮಾದನಪರ್ವತದಲ್ಲಿ ಅಕ್ಷಯವಾದ ತಪಸ್ಸನ್ನು ಮಾಡುತ್ತಿದ್ದರು. ಅದೇ ಸಮಯದಲ್ಲಿಯೇ ದಕ್ಷಪ್ರಜಾಪತಿಯ ಯಜ್ಞವು ಪ್ರಾರಂಭವಾಯಿತು. ಆ ಯಜ್ಞದಲ್ಲಿ ದಕ್ಷನು ರುದ್ರನಿಗೆ ಯಜ್ಞಭಾಗವನ್ನು ಕೊಡಲಿಲ್ಲ. ದಧೀಚನ ಮಾತಿನಂತೆ ರುದ್ರನು ದಕ್ಷನ ಯಜ್ಞವನ್ನು ವಿಧ್ವಂಸಮಾಡಿದನು. ರುದ್ರನು ಕೋಪಾವಿಷ್ಟನಾಗಿ ಪ್ರಜ್ವಲಿಸುತ್ತಿದ್ದ ತನ್ನ ತ್ರಿಶೂಲವನ್ನು ಬಾರಿ-ಬಾರಿಗೂ ದಕ್ಷನ ಯಜ್ಞದ ಕಡೆಗೆ ಪ್ರಯೋಗಿಸುತ್ತಲೇ ಇದ್ದನು. ಆ ತ್ರಿಶೂಲವು ವಿಸ್ತಾರವಾದ ದಕ್ಷಯಜ್ಞವನ್ನು ಸಂಪೂರ್ಣವಾಗಿ ಸುಟ್ಟುಹಾಕಿ ಬದರಿಕಾಶ್ರಮದಲ್ಲಿ ತಪಸ್ಸುಮಾಡುತ್ತಿದ್ದ ನಮ್ಮ ಬಳಿಗೂ (ನರ-ನಾರಾಯಣರ ಬಳಿಗೂ) ಬಂದಿತು.

ವೇಗೇನ ಮಹತಾ ಪಾರ್ಥ ಪತನ್ನಾರಾಯಣೋರಸಿ ।
ತತಸ್ತತ್ತೇಜಸಾವಿಷ್ಟಾಃ ಕೇಶಾ ನಾರಾಯಣಸ್ಯ ಹ ।
ಬಭೂವುರ್ಮುಞ್ಜವರ್ಣಾಸ್ತು ತತೋಽಹಂ ಮುಞ್ಜಕೇಶವಾನ್ ॥

ಆ ಶೂಲವು ಮಹಾವೇಗದಿಂದ ಬಂದು ನಾರಾಯಣನ (ನನ್ನ) ಎದೆಯಲ್ಲಿ ನೆಟ್ಟಿತು. ತ್ರಿಶೂಲದ ತೇಜಸ್ಸಿನಿಂದ ಆವಿಷ್ಟವಾದ ನಾರಾಯಣನ ಕೂದಲುಗಳು ನೊಜೆಹುಲ್ಲಿನ ಬಣ್ಣಕ್ಕೆ ಸಮಾನವಾದ ಬಣ್ಣವನ್ನು ಹೊಂದಿದುವು. ಈ ಕಾರಣದಿಂದಲೇ ನಾನು ಮುಂಜಕೇಶನಾದೆನು.

ತಚ್ಚ ಶೂಲಂ ವಿನಿರ್ಧೂತಂ ಹುಂಕಾರೇಣ ಮಹಾತ್ಮನಾ ।
ಜಗಾಮ ಶಂಕರಕರಂ ನಾರಾಯಣಸಮಾಹತಮ್ ॥೧೧೩॥

ಮಹಾತ್ಮನಾದ ನಾರಾಯಣನ ಎದೆಯಲ್ಲಿ ನೆಟ್ಟುಕೊಂಡಿದ್ದ ಆ ಶೂಲವು ಅವನ ಹುಂಕಾರಮಾತ್ರದಿಂದ ಹೊರಬಂದು ನಾರಾಯಣನಿಂದ ಪುನಃ ಬಿಡಲ್ಪಟ್ಟು ಶಂಕರನ ಕೈಯನ್ನು ಸೇರಿತು.

ಅಥ ರುದ್ರ ಉಪಾಧಾವತ್ತಾವೃಷೀ ತಪಸಾನ್ವಿತೌ ।
ತತ ಏನಂ ಸಮುದ್ಧೂತಂ ಕಣ್ಠೇ ಜಗ್ರಾಹ ಪಾಣಿನಾ ।
ನಾರಾಯಣಃ ಸ ವಿಶ್ವಾತ್ಮಾ ತೇನಾಸ್ಯ ಶಿತಿಕಣ್ಠತಾ ॥೧೧೪॥

ನಾರಾಯಣಪ್ರಹೃತವಾದ ಆ ಶೂಲವು ತನ್ನ ಬಳಿಗೇ ಬಂದುದನ್ನು ನೋಡಿ ರುದ್ರನು ತಪಶ್ಚರಣೆ ಮಾಡುತ್ತಿದ್ದ ನರ-ನಾರಾಯಣರ ಸಮೀಪಕ್ಕೆ ಧಾವಿಸಿಬಂದನು. ವಿಶ್ವಾತ್ಮನಾದ ಶ್ರೀಮನ್ನಾರಾಯಣನು ತನ್ನ ಮೇಲೆ ಬೀಳಲು ಬಂದ ರುದ್ರನ ಕುತ್ತಿಗೆಯನ್ನು ತನ್ನ ಕೈಯಿಂದ ಹಿಡಿದು ನಿಲ್ಲಿಸಿದನು. ಒಡನೆಯೇ ರುದ್ರನ ಕಂಠವು ನೀಲಿಯ ಬಣ್ಣಕ್ಕೆ ತಿರುಗಿತು. ಆ ಕಾರಣದಿಂದಲೇ ಅವನು ಶಿತಿಕಂಠನಾದನು.

ಅಥ ರುದ್ರವಿಘಾತಾರ್ಥಮಿಷೀಕಾಂ ನರ ಉದ್ಧರನ್ ।
ಮನ್ತ್ರೈಶ್ಚ ಸಂಯುಯೋಜಾಶು ಸೋಽಭವತ್ಪರಶುರ್ಮಹಾನ್ ॥

ಆ ಸಮಯದಲ್ಲಿ ನರನು ರುದ್ರನನ್ನು ವಿನಾಶಗೊಳಿಸಲು ಒಂದು ಜಂಬುಹುಲ್ಲನ್ನು ತೆಗೆದುಕೊಂಡು ಮಂತ್ರಗಳಿಂದ ಅಭಿಮಂತ್ರಿಸಿದನು. ಒಡನೆಯೇ ಅದು ಮಹಾಪರಶುವಾಯಿತು.

ಕ್ಷಿಪ್ತಶ್ಚ ಸಹಸಾ ತೇನ ಖಣ್ಡನಂ ಪ್ರಾಪ್ತವಾಂಸ್ತದಾ ।
ತತೋಽಹಂ ಖಣ್ಡಪರಶುಃ ಸ್ಮೃತಃ ಪರಶುಖಣ್ಡನಾತ್ ॥೧೧೬॥

ನರನಿಂದ ಬಿಡಲ್ಪಟ್ಟ ಆ ಪರಶುವು ರುದ್ರನಿಂದ (ನನ್ನಿಂದ) ಖಂಡಿಸಲ್ಪಟ್ಟಿತು. ಪರಶುಖಂಡನದಿಂದ ನಾನು ಖಂಡಪರಶುವಾದೆನು.”*

---

*‘ಖಂಡಪರಶು’ ಎಂದು ಈಶ್ವರನಿಗೂ ಹೆಸರಿದೆ. ವಿಷ್ಣುವಿಗೂ ಹೆಸರಿದೆ. ಖಣ್ಡಃ ಪರಶುಃ ಅಸ್ಯ = ಖಂಡವಾದ ಗಂಡುಗೊಡಲಿಯಿರುವವನು ಪರಮೇಶ್ವರ. ಅಮರ ಕಾರನೂ ರುದ್ರನ ಪರ್ಯಾಯಪದವಾಗಿಯೇ ಖಂಡಪರಶು ಶಬ್ದವನ್ನು ಹೇಳಿ

ಅರ್ಜುನನು ಪ್ರಶ್ನಿಸುತ್ತಾನೆ :

ಅಸ್ಮಿನ್ಯುದ್ಧೇ ತು ವಾರ್ಷ್ಣೇಯ ತ್ರೈಲೋಕ್ಯಶಮನೇ ತದಾ ।
ಕೋ ಜಯಂ ಪ್ರಾಪ್ತವಾಂಸ್ತತ್ರ ಶಂಸೈತನ್ಮೇ ಜನಾರ್ದನ ॥೧೧೭॥

"ವಾರ್ಷ್ಣೇಯನೇ! ಮೂರು ಲೋಕಗಳನ್ನೂ ವಿನಾಶಗೊಳಿಸುವಂತಹ ರುದ್ರ-ನಾರಾಯಣರ ಯುದ್ಧವು ಸನ್ನಿಹಿತವಾದಾಗ ಅವರಿಬ್ಬರಲ್ಲಿ ಯಾರು ಜಯವನ್ನು ಪಡೆದರು? ಈ ವಿಷಯವನ್ನು ನನಗೆ ಹೇಳು."

ಶ್ರೀಕೃಷ್ಣನು ಹೇಳುತ್ತಾನೆ :

ತಯೋಃ ಸಂಲಗ್ನಯೋರ್ಯುದ್ಧೇ ರುದ್ರನಾರಾಯಣಾತ್ಮನೋಃ ।
ಉದ್ವಿಗ್ನಾಃ ಸಹಸಾ ಕೃತ್ಸ್ನಾ ಸರ್ವೇ ಲೋಕಾಸ್ತದಾಭವನ್ ।
ನಾಗೃಹ್ಣಾತ್ಪಾವಕಃ ಶುಭ್ರಂ ಮಖೇಷು ಸುಹುತಂ ಹವಿಃ ॥೧೧೯॥

"ಅರ್ಜುನ! ರುದ್ರ-ನಾರಾಯಣರಿಬ್ಬರೂ ಹೀಗೆ ಯುದ್ಧದಲ್ಲಿ ತೊಡಗಲಾಗಿ ಎಲ್ಲ ಲೋಕಗಳ ಸಮಸ್ತಪ್ರಾಣಿಗಳೂ ಉದ್ವೇಗಗೊಂಡುವು. ಅಗ್ನಿದೇವನು ಯಜ್ಞಗಳಲ್ಲಿ ವಿಧಿಪೂರ್ವಕವಾಗಿ ಹೋಮಮಾಡಿದ ವಿಶುದ್ಧವಾದ ಹವಿಸ್ಸನ್ನೂ ಪರಿಗ್ರಹಿಸಲಿಲ್ಲ.

ವೇದಾ ನ ಪ್ರತಿಭಾನ್ತಿ ಸ್ಮ ಋಷೀಣಾಂ ಭಾವಿತಾತ್ಮನಾಮ್ ।
ದೇವಾನ್ರಜಸ್ತಮಶ್ಚೈವ ಸಮಾವಿವಿಶತುಸ್ತದಾ ॥೧೨೦॥

ದ್ದಾನೆ. (ಭೂತೇಶಃ ಖಣ್ಡಪರಶುಃ) ಪರಶುರಾಮನಿಗೂ ಖಂಡಪರಶುವೆಂಬ ಹೆಸರಿದೆ. ವಿಷ್ಣುಸಹಸ್ರನಾಮದಲ್ಲಿ ಖಂಡಪರಶು ಎಂಬುದಕ್ಕೆ ಪರಶುರಾಮನ ಪರವಾಗಿ ಅರ್ಥಮಾಡಲಾಗಿದೆ. ಶತ್ರೂಣಾಂ ಖಣ್ಡನಾತ್ ಖಣ್ಡಃ ಪರಶುಃ ಅಸ್ಯ ಜಾಮದಗ್ನ್ಯಾಕೃತೇಃ ಇತಿ ಖಣ್ಡಪರಶುಃ । ನೇರವಾಗಿ ವಿಷ್ಣುವಿಗೂ ಈ ಹೆಸರಿದೆ. ತೀವ್ರಕೋಪಾತ್ಪರಶುನಾ ರೌದ್ರಸಂಗ್ರಾಮಖಣ್ಡನಾತ್ । ಇತ್ಯುಕ್ತಃ ಖಣ್ಡಪರಶುಃ ತೀವ್ರವಾದ ಕೋಪದಿಂದ ರುದ್ರನಿಗೆ ಸಂಬಂಧಿಸಿದ ಸಂಗ್ರಾಮವನ್ನು ಪರಶುವಿನಿಂದ ಖಂಡಿಸಿದುದರಿಂದ (ಅಡ್ಡಿಪಡಿಸಿದುದರಿಂದ) 'ಖಂಡಪರಶು' ಎಂದು ಹೆಸರು. ಆದರೆ ಇಲ್ಲಿನ ನಿರೂಪಣೆಯು ಇವೆಲ್ಲಕ್ಕಿಂತಲೂ ಭಿನ್ನವಾಗಿದೆ. ಈ ಶ್ಲೋಕಕ್ಕೆ ಎರಡು ವಿಧವಾಗಿಯೂ ಅರ್ಥಮಾಡಬಹುದಾಗಿದೆ. ಪರಶುಃ ಖಣ್ಡನಂ ಪ್ರಾಪ್ತವಾನ್ (ಮಯಾ–

ವಸುಧಾ ಸಂಚಕಮ್ಪೇ ಚ ನಭಶ್ಚ ವಿಚಚಾಲ ಹ ।
ನಿಷ್ಪ್ರಭಾಣಿ ಚ ತೇಜಾಂಸಿ ಬ್ರಹ್ಮಾ ಚೈವಾಸನಚ್ಯುತಃ ।
ಅಗಾಚ್ಛೋಷಂ ಸಮುದ್ರಶ್ಚ ಹಿಮವಾಂಶ್ಚ ವ್ಯಶೀರ್ಯತ ॥೧೨೧॥

ಭೂಮಿಯು ನಡುಗಿತು. ಆಕಾಶವು ಚಲಿಸತೊಡಗಿತು. ಗ್ರಹ-ನಕ್ಷತ್ರಾದಿಗಳ ಮತ್ತು ಚಂದ್ರ-ಸೂರ್ಯರ ತೇಜಸ್ಸುಗಳು ಪ್ರಭಾಹೀನವಾದುವು. ಬ್ರಹ್ಮನು ತಾನು ಕುಳಿತಿದ್ದ ಆಸನದಿಂದ ಕೆಳಕ್ಕೆ ಬಿದ್ದನು. ಸಮುದ್ರವು ಒಣಗತೊಡಗಿತು. ಹಿಮವತ್ಪರ್ವತವು ಸೀಳಿಹೋಯಿತು.

ಅರ್ಜುನ! ಅಂತಹ ವಿಪತ್ಸೂಚಕವಾದ ಅಪಶಕುನಗಳು ಕಂಡು ಬರುತ್ತಿರಲಾಗಿ, ಮಹಾತ್ಮರಾದ ಋಷಿಗಳಿಂದಲೂ ದೇವತೆಗಳಿಂದಲೂ ಪರಿವೃತನಾದ ಬ್ರಹ್ಮನು ಯುದ್ಧವು ನಡೆಯುತ್ತಿದ್ದ ಸ್ಥಳಕ್ಕೆ ಬಹಳ ಬೇಗ ಆಗಮಿಸಿದನು. ನಿರುಕ್ತಗಮ್ಯನಾದ ಭಗವಂತನಾದ ಚತುರ್ಮುಖನು ಕೈಮುಗಿದುಕೊಂಡು ರುದ್ರನೊಡನೆ ಹೇಳಿದನು :

"ಪ್ರಭುವೇ! ಸಮಸ್ತಲೋಕಗಳಿಗೂ ಮಂಗಳವಾಗಲಿ. ವಿಶ್ವೇಶ್ವರ! ಜಗತ್ತಿಗೆ ಹಿತವನ್ನುಂಟುಮಾಡುವ ಸಲುವಾಗಿ ನೀನು ಹಿಡಿದಿರುವ ಆಯುಧಗಳನ್ನು ಕೆಳಗಿಡು.

ಯದಕ್ಷರಮಥಾವ್ಯಕ್ತಮೀಶಂ ಲೋಕಸ್ಯ ಭಾವನಮ್ ।
ಕೂಟಸ್ಥಂ ಕರ್ತೃ ನಿರ್ದ್ವನ್ದ್ವಮಕರ್ತೇತಿ ಚ ಯಂ ವಿದುಃ ।
ವ್ಯಕ್ತಿಭಾವಗತಸ್ಯಾಸ್ಯ ಏಕಾ ಮೂರ್ತಿರಿಯಂ ಶುಭಾ ॥೧೨೬॥

ರುದ್ರೇಣ) ಎಂದು ಎರಡು ರೀತಿಯಲ್ಲೂ ಹೇಳಬಹುದು. ರುದ್ರೇಣ ಎಂದು ಅಧ್ಯಾಹಾರಮಾಡಿಕೊಂಡರೆ ಪರಶುವನ್ನು ಖಂಡಿಸಿದವನು ರುದ್ರನಾಗುತ್ತಾನೆ. ನಾರಾಯಣನ ಸಂಬಂಧವೇ ಇರುವುದಿಲ್ಲ. ರುದ್ರನೇ ಕತ್ತರಿಸಿದನೆಂದೂ ರುದ್ರ-ವಿಷ್ಣುಗಳಲ್ಲಿ ಭೇದವಿರದ ಕಾರಣ ರುದ್ರನಂತೆ ವಿಷ್ಣುವೂ ಖಂಡಪರಶುವೆಂದೂ ಅರ್ಥಬರುವ ರೀತಿಯಲ್ಲಿ ವ್ಯಾಖ್ಯಾನಕಾರರು ವಿವರಣೆ ಕೊಟ್ಟಿದ್ದಾರೆ. ನರನು ಬಿಟ್ಟ ಪರಶುವನ್ನು ರುದ್ರನ ಮೇಲಿನ ಅನುಕಂಪದಿಂದ ನಾರಾಯಣನೇ ತಡೆದನೆಂದರೆ ಅಸಮಂಜಸವಾಗುವುದಿಲ್ಲ. ಆದುದರಿಂದ ನರನು ಬಿಟ್ಟ ಪರಶುವನ್ನು ನಾರಾಯಣನು ಖಂಡಿಸಿದ್ದರಿಂದ ನಾರಾಯಣನು ಖಂಡಪರಶುವಾದನು. **ತತೋಽಹಂ ಖಂಡಪರಶುಃ** ಎಂದು ನಾರಾಯಣನೇ ಹೇಳಿಕೊಂಡಿರುವುದರಿಂದ ಈ ಅರ್ಥವೇ ಸಮೀಚೀನವಾಗಿ ಕಾಣುತ್ತದೆ.

ಲೋಕದ ಸೃಷ್ಟಿಗೆ ಯಾವುದು ಮೂಲಕಾರಣವಾಗಿರುವುದೋ ಯಾವುದು ಅವಿನಾಶಿಯೋ, ಅವ್ಯಕ್ತವೋ ಮತ್ತು ಈಶ್ವರನೋ, ಯಾವನನ್ನು ಜ್ಞಾನಿಗಳು ಕೂಟಸ್ಥನೆಂದೂ, ನಿರ್ದ್ವಂದ್ವನೆಂದೂ, ಕರ್ತೃವೆಂದೂ ಮತ್ತು ಅಕರ್ತೃವೆಂದೂ ತಿಳಿದಿರುವರೋ, ಯಾವನು ಪ್ರಕೃತ ವ್ಯಕ್ತಭಾವವನ್ನು ಹೊಂದಿರುವನೋ–ಅಂತಹ ಪರಮೇಶ್ವರನ ಏಕಕಲ್ಯಾಣಮೂರ್ತಿ ಸ್ವರೂಪನು ಈ ನಾರಾಯಣನೇ ಆಗಿದ್ದಾನೆ.

ನರೋ ನಾರಾಯಣಶ್ಚೈವ ಜಾತೌ ಧರ್ಮಕುಲೋದ್ವಹೌ ।
ತಪಸಾ ಮಹತಾ ಯುಕ್ತೌ ದೇವಶ್ರೇಷ್ಠೌ ಮಹಾವ್ರತೌ ॥೧೨೭॥

ಧರ್ಮಕುಲದಲ್ಲಿ ಹುಟ್ಟಿರುವ ದೇವಶ್ರೇಷ್ಠರಾದ, ಮಹಾವ್ರತನಿಷ್ಠರಾದ ನರ-ನಾರಾಯಣರಿಬ್ಬರೂ ಮಹಾತಪಸ್ಸಿನಲ್ಲಿ ನಿಯುಕ್ತರಾಗಿದ್ದಾರೆ.

ಅಹಂ ಪ್ರಸಾದಜಸ್ತಸ್ಯ ಕುತಶ್ಚಿತ್ಕಾರಣಾನ್ತರೇ ।
ತ್ವಂ ಚೈವ ಕ್ರೋಧಜಸ್ತಾತ ಪೂರ್ವಸರ್ಗೇ ಸನಾತನಃ ॥೧೨೮॥

ಪ್ರಿಯನೇ! ಯಾವುದೋ ಕಾರಣದಿಂದ ಆ ನಾರಾಯಣನ ಅನುಗ್ರಹದಿಂದ ನಾನು ಹುಟ್ಟಿದ್ದೇನೆ. ನೀನಾದರೂ ಹಿಂದಿನ ಸೃಷ್ಟಿಕಾಲದಲ್ಲಿ ಭಗವಂತನ ಕೋಪದಿಂದ ಹುಟ್ಟಿರುವ ಸನಾತನಪುರುಷನಾಗಿರುವೆ.

ಮಯಾ ಚ ಸಾರ್ಧಂ ವರದ ವಿಬುಧೈಶ್ಚ ಮಹರ್ಷಿಭಿಃ ।
ಪ್ರಸಾದಯಾಶು ಲೋಕಾನಾಂ ಶಾನ್ತಿರ್ಭವತು ಮಾ ಚಿರಮ್ ॥೧೨೯॥

ವರದನೇ! ನೀನು ನನ್ನೊಡನೆಯೂ, ದೇವತೆಗಳೊಡನೆಯೂ, ಮಹರ್ಷಿಗಳೊಡನೆಯೂ ಸೇರಿ ಶ್ರೀಮನ್ನಾರಾಯಣನನ್ನು ಪ್ರಸನ್ನಗೊಳಿಸು. ಎಲ್ಲ ಲೋಕಗಳಲ್ಲಿಯೂ ಶೀಘ್ರವಾಗಿ ಶಾಂತಿಯು ನೆಲೆಸಲಿ.”

ಅರ್ಜುನ! ಬ್ರಹ್ಮನು ಹೀಗೆ ಪ್ರಾರ್ಥಿಸಿದೊಡನೆಯೇ ರುದ್ರನು ಕ್ರೋಧಾಗ್ನಿಯನ್ನು ವಿಸರ್ಜಿಸಿ ಪ್ರಭುವಾದ ನಾರಾಯಣನನ್ನು ನಾನಾ ವಿಧವಾದ ಸ್ತೋತ್ರಗಳಿಂದ ಪ್ರಸನ್ನಗೊಳಿಸಿದನು. ಶ್ರೇಷ್ಠನಾದ, ವರದನಾದ, ಪ್ರಭುವಾದ ನಾರಾಯಣನಿಗೆ ಶರಣುಹೊಂದಿದನು. ಬಳಿಕ ವರದನಾದ, ಜಿತಕ್ರೋಧನಾದ, ಜಿತೇಂದ್ರಿಯನಾದ ನಾರಾಯಣದೇವನು ಪ್ರಸನ್ನನಾಗಿ ರುದ್ರನೊಡನೆ ಮೈತ್ರಿಯಿಂದ ಹೊಂದಿಕೊಂಡನು.

ಋಷಿಗಳಿಂದಲೂ, ದೇವತೆಗಳಿಂದಲೂ, ಬ್ರಹ್ಮನಿಂದಲೂ ಸಂಪೂಜಿತನಾದ ಜಗದೀಶ್ವರನಾದ ಶ್ರೀಹರಿಯು ರುದ್ರದೇವನೊಡನೆ ಹೇಳಿದನು :

ಯಸ್ತ್ವಾಂ ವೇತ್ತಿ ಸ ಮಾಂ ವೇತ್ತಿ ಯಸ್ತ್ವಾಮನು ಸ ಮಾಮನು ।
ನಾವಯೋರನ್ತರಂ ಕಿಂಚಿನ್ಮಾ ತೇऽಭೂದ್ಬುದ್ಧಿರನ್ಯಥಾ ॥೧೩೩॥

"ರುದ್ರದೇವ! ನಿನ್ನನ್ನು ಯಾವನು ತಿಳಿಯುವನೋ–ಅವನು ನನ್ನನ್ನೂ ತಿಳಿಯುತ್ತಾನೆ. ಯಾರು ನಿನ್ನ ಅನುಗಾಮಿಯೋ-ಅವನು ನನ್ನ ಅನುಗಾಮಿಯೂ ಆಗುತ್ತಾನೆ. ನಮ್ಮಿಬ್ಬರಲ್ಲಿ ಯಾವ ವಿಧವಾದ ವ್ಯತ್ಯಾಸವೂ ಇರುವುದಿಲ್ಲ. ನಿನ್ನ ಮನಸ್ಸಿನಲ್ಲಿಯೂ ಇದಕ್ಕೆ ವಿಪರೀತವಾದ ವಿಚಾರವು ಸುಳಿಯದಿರಲಿ.

ಅದ್ಯಪ್ರಭೃತಿ ಶ್ರೀವತ್ಸಃ ಶೂಲಾಙ್ಕೋ ಮೇ ಭವತ್ವಯಮ್ ।
ಮಮ ಪಾಣ್ಯಙ್ಕಿತಶ್ಚಾಪಿ ಶ್ರೀಕಣ್ಠಸ್ತ್ವಂ ಭವಿಷ್ಯಸಿ ॥೧೩೪॥

ಇಂದಿನಿಂದ ಮೊದಲ್ಗೊಂಡು ನನ್ನ ವಕ್ಷಃಸ್ಥಳದಲ್ಲಿ ಬಿದ್ದಿರುವ ನಿನ್ನ ಶೂಲದ ಚಿಹ್ನೆಯು ಶ್ರೀವತ್ಸವೆಂಬ ಹೆಸರಿನಿಂದ ಪ್ರಸಿದ್ಧವಾಗಲಿ. ಹಾಗೆಯೇ ನನ್ನ ಹಸ್ತದ ಚಿಹ್ನೆಯನ್ನು ಕತ್ತಿನಲ್ಲಿ ಹೊಂದಿರುವ ನೀನು ಶ್ರೀಕಂಠನೆಂದು ಪ್ರಸಿದ್ಧನಾಗುವೆ."

ಅರ್ಜುನ! ಹೀಗೆ ಪರಸ್ಪರವಾಗಿ ತಮ್ಮ ಶರೀರಗಳಲ್ಲಿ ಮಾಡಿಕೊಂಡಿದ್ದ ಗುರುತುಗಳಿಗೆ ಶುಭಲಕ್ಷಣಗಳ ಸ್ವರೂಪಗಳನ್ನಿತ್ತು ಅನಂತರ ನರ-ನಾರಾಯಣರ್ಷಿಗಳು ರುದ್ರನೊಡನೆ ಅನುಪಮಮೈತ್ರಿಯನ್ನು ಮಾಡಿಕೊಂಡರು. ಬಳಿಕ ಬ್ರಹ್ಮಪುರಃಸರರಾದ ದೇವತೆಗಳನ್ನೂ ರುದ್ರನನ್ನೂ ಅವರವರ ಸ್ಥಾನಗಳಿಗೆ ಕಳುಹಿಸಿಕೊಟ್ಟು ಏಕಾಗ್ರಚಿತ್ತರಾದ ನರ-ನಾರಾಯಣರು ಪುನಃ ಮಹಾತಪಸ್ಸಿನಲ್ಲಿ ತೊಡಗಿದರು. ಪಾರ್ಥ! ನೀನು ಕೇಳಿದಂತೆ ನಿನಗೆ ಯುದ್ಧದಲ್ಲಿ ನಾರಾಯಣನ ವಿಜಯದ ವೃತ್ತಾಂತವನ್ನು ಪೂರ್ಣವಾಗಿ ತಿಳಿಸಿದ್ದೇನೆ. ನನ್ನ ಗುಪ್ತನಾಮಗಳನ್ನೂ ಆ ನಾಮಗಳ ಅವಯವಾರ್ಥಗಳನ್ನೂ ಹೇಳಿದ್ದೇನೆ. ಋಷಿಗಳು ಹೇಳಿದ ನಾಮಗಳನ್ನೂ ವರ್ಣಿಸಿದ್ದೇನೆ. ಹೀಗೆ ನನ್ನ ಬಹುವಿಧವಾದ ರೂಪಗಳಿಂದ ಭೂಮಿ

ಯಲ್ಲಿಯೂ, ಬ್ರಹ್ಮಲೋಕದಲ್ಲಿಯೂ, ಸನಾತನವಾದ ಗೋಲೋಕದಲ್ಲಿಯೂ ಸಂಚರಿಸುತ್ತಿರುತ್ತೇನೆ.

ಮಯಾ ತ್ವಂ ರಕ್ಷಿತೋ ಯುದ್ಧೇ ಮಹಾನ್ತಂ ಪ್ರಾಪ್ತವಾಞ್ಜಯಮ್ ।
ಯಸ್ತು ತೇ ಸೋಽಗ್ರತೋ ಯಾತಿ ಯುದ್ಧೇ ಸಮ್ಪ್ರತ್ಯುಪಸ್ಥಿತೇ ॥

ತಂ ವಿದ್ಧಿ ರುದ್ರಂ ಕೌನ್ತೇಯ ದೇವದೇವಂ ಕಪರ್ದಿನಮ್ ।
ಕಾಲಃ ಸ ಏವ ಕಥಿತಃ ಕ್ರೋಧಜೇತಿ ಮಯಾ ತವ ॥೧೪೦॥

ನನ್ನಿಂದ ಸಂರಕ್ಷಿತನಾಗಿಯೇ ನೀನು ಭಾರತಯುದ್ಧದಲ್ಲಿ ಮಹಾಜಯವನ್ನು ಗಳಿಸಿದೆ. ಯುದ್ಧಸಮಯದಲ್ಲಿ ಯಾವನು ನಿನ್ನ ಅಗ್ರಭಾಗದಲ್ಲಿ ಹೋಗುತ್ತಿದ್ದನೋ–ಅವನೇ ದೇವದೇವನಾದ ಜಟಾಜೂಟಧರನಾದ ರುದ್ರನೆಂದು ತಿಳಿ. ರುದ್ರನು ನನ್ನ ಕ್ರೋಧದಿಂದ ಹುಟ್ಟಿದವನೆಂಬುದನ್ನು ಈಗಾಗಲೇ ನಿನಗೆ ಹೇಳಿದ್ದೇನೆ. ಆ ರುದ್ರನನ್ನೇ ಕಾಲನೆಂದೂ ಕರೆಯುತ್ತಾರೆ.

ನಿಹತಾಸ್ತೇನ ವೈ ಪೂರ್ವಂ ಹತವಾನಸಿ ಯಾನ್ರಿಪೂನ್ ।
ಅಪ್ರಮೇಯಪ್ರಭಾವಂ ತಂ ದೇವದೇವಮುಮಾಪತಿಮ್ ।
ನಮಸ್ವ ದೇವಂ ಪ್ರಯತೋ ವಿಶ್ವೇಶಂ ಹರಮಕ್ಷಯಮ್ ॥೧೪೧॥

ನೀನು ಯುದ್ಧದಲ್ಲಿ ಯಾವ ನಿನ್ನ ಶತ್ರುಗಳನ್ನು ಸಂಹರಿಸಿದೆಯೋ–ಅವರೆಲ್ಲರೂ ಮೊದಲೇ ಆ ರುದ್ರದೇವನಿಂದ ಕೊಲ್ಲಲ್ಪಟ್ಟಿದ್ದರು. ಅಮಿತಪ್ರಭಾವನಾದ, ದೇವದೇವನಾದ, ಉಮಾಪತಿಯಾದ, ವಿಶ್ವೇಶನಾದ, ಪಾಪಹರನಾದ, ಅವಿನಾಶಿಯಾದ ಮಹಾದೇವನಿಗೆ ಸಂಯತಚಿತ್ತನಾಗಿ ನಮಸ್ಕರಿಸು.

ಯಶ್ಚ ತೇ ಕಥಿತಃ ಪೂರ್ವಂ ಕ್ರೋಧಜೇತಿ ಪುನಃ ಪುನಃ ।
ತಸ್ಯ ಪ್ರಭಾವ ಏವಾಗ್ರೇ ಯಚ್ಛ್ರುತಂ ತೇ ಧನಂಜಯ ॥೧೪೨॥

ನನ್ನ ಕೋಪದಿಂದ ಹುಟ್ಟಿದವನೆಂದು ನಾನು ನಿನ್ನೊಡನೆ ಯಾವನ ವಿಷಯವಾಗಿ ಪುನಃ ಪುನಃ ಹಿಂದೆ ಹೇಳಿದೆನೋ ಮತ್ತು ನೀನು ಕೇಳಿದೆಯೋ–ಆ ರುದ್ರನ ಪ್ರಭಾವವೇ ಅವೆಲ್ಲವೂ ಆಗಿದೆ.”

ಇ೪೨ನೆಯ ಅಧ್ಯಾಯವು ಮುಗಿಯಿತು.

ದೇವರ್ಷಿಗಳಾದ ನಾರದರು ಶ್ವೇತದ್ವೀಪಕ್ಕೆ ಹೋಗಿ ನರ-ನಾರಾಯಣರನ್ನು ಸಂಧಿಸಿದುದು : ಅಲ್ಲಿಯ ಮಹತ್ವಪೂರ್ಣ ದೃಶ್ಯಗಳ ವರ್ಣನೆ

ಶೌನಕರು ಹೇಳುತ್ತಾರೆ :

ಸೌತೇ ಸುಮಹದಾಖ್ಯಾನಂ ಭವತಾ ಪರಿಕೀರ್ತಿತಮ್ ।
ಯಚ್ಛ್ರುತ್ವಾ ಮುನಯಃ ಸರ್ವೇ ವಿಸ್ಮಯಂ ಪರಮಂ ಗತಾಃ ॥೧॥

“ಸೌತಿಗಳೇ! ನಾರಾಯಣನ ಮಹಿಮಾಪೂರ್ಣವಾದ ಮಹತ್ತಾದ ಆಖ್ಯಾನವನ್ನು ತಾವು ಹೇಳಿರುವಿರಿ. ಇದನ್ನು ಕೇಳಿ ಮುನಿಗಳೆಲ್ಲರೂ ತುಂಬಾ ವಿಸ್ಮಿತರಾಗಿದ್ದಾರೆ.

ಸರ್ವಾಶ್ರಮಾಭಿಗಮನಂ ಸರ್ವತೀರ್ಥಾವಗಾಹನಮ್ ।
ನ ತಥಾ ಫಲದಂ ಸೌತೇ ನಾರಾಯಣಕಥಾ ಯಥಾ ॥೨॥

ಎಲ್ಲ ಋಷ್ಯಾಶ್ರಮಗಳ ಯಾತ್ರೆಯಾಗಲೀ, ಸರ್ವತೀರ್ಥಗಳಲ್ಲಿಯೂ ಮಾಡುವ ಸ್ನಾನವಾಗಲೀ–ನಾರಾಯಣಕಥಾಶ್ರವಣದಷ್ಟು ಫಲದಾಯಕಗಳಾಗುವುದಿಲ್ಲ.

ಪಾವಿತಾಙ್ಗಾಃ ಸ್ಮ ಸಂವೃತ್ತಾಃ ಶ್ರುತ್ವೇಮಾಮಾದಿತಃ ಕಥಾಮ್ ।
ನಾರಾಯಣಾಶ್ರಯಾಂ ಪುಣ್ಯಾಂ ಸರ್ವಪಾಪಪ್ರಮೋಚನೀಮ್ ॥೩॥

ಸರ್ವಪಾಪಗಳನ್ನೂ ತೊಡೆದುಹಾಕುವ, ಪುಣ್ಯಕರವಾದ, ಶ್ರೀಮನ್ನಾರಾಯಣನ ಸಂಬಂಧವಾದ ಈ ಕಥೆಯನ್ನು ಮೊದಲಿನಿಂದಲೂ ಕೇಳಿದ ನಮ್ಮ ತನು-ಮನಗಳೆಲ್ಲವೂ ಪವಿತ್ರವಾದುವು.

ದುರ್ದರ್ಶೋ ಭಗವಾನ್ದೇವಃ ಸರ್ವಲೋಕನಮಸ್ಕೃತಃ ।
ಸ ಬ್ರಹ್ಮಕೈಃ ಸುರೈಃ ಕೃತ್ಸ್ನೈರನ್ಯೈಶ್ಚೈವ ಮಹರ್ಷಿಭಿಃ ॥೪॥

ಸರ್ವಲೋಕನಮಸ್ಕೃತನಾದ, ಭಗವಂತನಾದ ನಾರಾಯಣದೇವನ ದರ್ಶನವು ಬ್ರಹ್ಮನೇ ಮೊದಲಾದ ಸಕಲದೇವತೆಗಳಿಗೂ ಮತ್ತು ಇತರ ಮಹರ್ಷಿಗಳಿಗೂ ಬಹಳ ಕಷ್ಟಸಾಧ್ಯವು.

ದೃಷ್ಟವಾನ್ನಾರದೋ ಯತ್ತು ದೇವಂ ನಾರಾಯಣಂ ಹರಿಮ್ ।
ನೂನಮೇತದ್ಧ್ಯನುಮತಂ ತಸ್ಯ ದೇವಸ್ಯ ಸೂತಜ ॥೫॥

ಸೌತಿಗಳೇ! ನಿಶ್ಚಯವಾಗಿಯೂ ದೇವದೇವನಾದ ಆ ಮಹಾವಿಷ್ಣುವು ಅನುಮತಿಸಿದ್ದರಿಂದಲೇ ನಾರದರು ಶ್ರೀಹರಿಯನ್ನು ನೋಡಲು ಸಾಧ್ಯವಾಯಿತು.

ಯದ್ದೃಷ್ಟವಾಞ್ಜಗನ್ನಾಥಮನಿರುದ್ಧತನೌ ಸ್ಥಿತಮ್ ।
ಯತ್ಪ್ರಾದ್ರವತ್ಪುನರ್ಭೂಯೋ ನಾರದೋ ದೇವಸತ್ತಮೌ ।
ನರನಾರಾಯಣೌ ದ್ರಷ್ಟುಂ ಕಾರಣಂ ತದ್ಬ್ರವೀಹಿ ಮೇ ॥೬॥

ನಾರದರು ಅನಿರುದ್ಧನ ರೂಪದಲ್ಲಿದ್ದ ಜಗನ್ನಾಥನನ್ನು ನೋಡಿದರು. ಪುನಃ ಅವರು ನರ-ನಾರಾಯಣರನ್ನು ಸಂದರ್ಶಿಸಲು ಓಡುತ್ತಲೇ ಹೋದರು. ಇದಕ್ಕೆ ಕಾರಣವನ್ನು ದಯಮಾಡಿ ಹೇಳಿರಿ.”*

ಸೌತಿಗಳು ಹೇಳುತ್ತಾರೆ :

ತಸ್ಮಿನ್ಯಜ್ಞೇ ವರ್ತಮಾನೇ ರಾಜ್ಞಃ ಪಾರಿಕ್ಷಿತಸ್ಯ ವೈ ।
ಕರ್ಮಾನ್ತರೇಷು ವಿಧಿವದ್ವರ್ತಮಾನೇಷು ಶೌನಕ ॥೭॥

ಕೃಷ್ಣದ್ವೈಪಾಯನಂ ವ್ಯಾಸಮೃಷಿಂ ವೇದನಿಧಿಂ ಪ್ರಭುಮ್ ।
ಪರಿಪಪ್ರಚ್ಛ ರಾಜೇನ್ದ್ರಃ ಪಿತಾಮಹಪಿತಾಮಹಮ್ ॥೮॥

“ಶೌನಕರೇ! ಜನಮೇಜಯರಾಜನ ಆ ಮಹಾಯಜ್ಞವು ವಿಧಿ

---

*೩೩೯ನೆಯ ಅಧ್ಯಾಯದಲ್ಲಿ ಶ್ರೀಮನ್ನಾರಾಯಣನು ನಾರದರಿಗೆ ದರ್ಶನವಿತ್ತ ಪ್ರಕರಣವು ಬರುತ್ತದೆ. ಅಲ್ಲಿ ವಿಶ್ವರೂಪದ ವರ್ಣನೆಯಿದೆ. ಅನಿರುದ್ಧಮೂರ್ತಿಯ ಸ್ವರೂಪವೆಂದು ಹೇಳಿಲ್ಲ. ನಾರದರೊಬ್ಬರಿಗೆ ತನ್ನ ನಿಜಸ್ವರೂಪವನ್ನು ಭಗವಂತನು ಪ್ರಕಟಿಸಿದನೆಂದು ಅಲ್ಲಿ ಹೇಳಿದೆ. ಇಲ್ಲಿ ಅನಿರುದ್ಧನ ಸ್ವರೂಪದಲ್ಲಿ ದರ್ಶನವಿತ್ತನೆಂದು ಹೇಳಿರುವುದರಿಂದ ಅನಿರುದ್ಧನನ್ನೇ ಅಲ್ಲಿ ವರ್ಣಿಸಿರುವರೆಂದು ಭಾವಿಸಬೇಕಾಗಿದೆ.

ಪೂರ್ವಕವಾಗಿ ನಡೆಯುತ್ತಿರಲಾಗಿ, ಅಲ್ಲಿ ನಡೆಯುತ್ತಿದ್ದ ವಿಭಿನ್ನಕರ್ಮಗಳ ಮಧ್ಯದಲ್ಲಿ ಅವಕಾಶವನ್ನು ಮಾಡಿಕೊಂಡು ಜನಮೇಜಯರಾಜನು ತನ್ನ ಪಿತಾಮಹನಿಗೂ ಪಿತಾಮಹರಾದ, ವೇದನಿಧಿಗಳಾದ, ಸಮರ್ಥರಾದ ಕೃಷ್ಣದ್ವೈಪಾಯನವ್ಯಾಸಮಹರ್ಷಿಗಳನ್ನು ಪ್ರಶ್ನಿಸಿದನು :

ಶ್ವೇತದ್ವೀಪಾನ್ನಿವೃತ್ತೇನ ನಾರದೇನ ಸುರರ್ಷಿಣಾ ।
ಧ್ಯಾಯತಾ ಭಗವದ್ವಾಕ್ಯಂ ಚೇಷ್ಟಿತಂ ಕಿಮತಃ ಪರಮ್ ॥೯॥

"ಪೂಜ್ಯರೇ! ಶ್ರೀಮನ್ನಾರಾಯಣನ ಅನುಜ್ಞೆಯಂತೆ ಶ್ವೇತದ್ವೀಪದಿಂದ ಹೊರಟ, ಭಗವಂತನು ಹೇಳಿದ ಮಾತುಗಳನ್ನೇ ಮನನಮಾಡುತ್ತಿದ್ದ ದೇವರ್ಷಿಗಳಾದ ನಾರದರು ಮುಂದೇನು ಮಾಡಿದರು?

ಬದರ್ಯಾಶ್ರಮಮಾಗಮ್ಯ ಸಮಾಗಮ್ಯ ಚ ತಾವೃಷೀ ।
ಕಿಯನ್ತಂ ಕಾಲಮವಸತ್ಕಾಂ ಕಥಾಂ ಪೃಷ್ಟವಾಂಶ್ಚ ಸಃ ॥೧೦॥

ನಾರದರು ನರ-ನಾರಾಯಣರು ತಪಸ್ಸುಮಾಡುತ್ತಿದ್ದ ಬದರಿಕಾಶ್ರಮಕ್ಕೆ ಬಂದು ಆ ಇಬ್ಬರು ಋಷಿಗಳನ್ನೂ ಸಂದರ್ಶಿಸಿದನಂತರ ಅವರು ಎಷ್ಟು ಕಾಲದವರೆಗೆ ಅಲ್ಲಿಯೇ ವಾಸವಾಗಿದ್ದರು ಮತ್ತು ನರ- ನಾರಾಯಣರನ್ನು ಯಾವ ವಿಷಯವಾಗಿ ಪ್ರಶ್ನಿಸಿದರು?

ಇದಂ ಶತಸಹಸ್ರಾದ್ಧಿ ಭಾರತಾಖ್ಯಾನವಿಸ್ತರಾತ್ ।
ಆಮನ್ಥ್ಯ ಮತಿಮನ್ಥೇನ ಜ್ಞಾನೋದಧಿಮನುತ್ತಮಮ್ ॥೧೧॥

ನವನೀತಂ ಯಥಾ ದಧ್ನೋ ಮಲಯಾಚ್ಚನ್ದನಂ ಯಥಾ ।
ಆರಣ್ಯಕಂ ಚ ವೇದೇಭ್ಯ ಓಷಧಿಭ್ಯೋಽಮೃತಂ ಯಥಾ ।
ಸಮುದ್ಧೃತಮಿದಂ ಬ್ರಹ್ಮನ್ಕಥಾಮೃತಮಿದಂ ತಥಾ ॥೧೨॥

ಒಂದು ಲಕ್ಷ ಶ್ಲೋಕಗಳಿಂದ ಯುಕ್ತವಾಗಿರುವ ವಿಸ್ತಾರವಾದ ಭಾರತಾಖ್ಯಾನದಿಂದ ಉದ್ಧರಿಸಿ ನೀನು ಹೇಳುತ್ತಿರುವ ಕಥಾಸಮುದಾಯವು ಬುದ್ಧಿಯೆಂಬ ಕಡೆಗೋಲಿನಿಂದ ಜ್ಞಾನವೆಂಬ ಸಮುದ್ರವನ್ನು ಕಡೆದು ಹೊರತೆಗೆದ ಅಮೃತದಂತೆಯೇ ಇದೆ. ಮೊಸರಿನಿಂದ ಬೆಣ್ಣೆಯನ್ನು ತೆಗೆಯುವಂತೆಯೂ, ಮಲಯಪರ್ವತದಿಂದ ಗಂಧವನ್ನು ತರುವಂತೆಯೂ, ವೇದ

ಗಳಿಂದ ಆರಣ್ಯಕವನ್ನು ಉದ್ಧರಿಸಿರುವಂತೆಯೂ, ಓಷಧಿಗಳಿಂದ ಅಮೃತವನ್ನು ತೆಗೆಯುವಂತೆಯೂ–ಭಾರತಕಥಾಭಾಗರೂಪವಾದ ಈ ಅಮೃತವು ಸಮುದ್ಧೃತವಾಗಿದೆ.

ತಪೋನಿಧೇ ತ್ವಯೋಕ್ತಂ ಹಿ ನಾರಾಯಣಕಥಾಶ್ರಯಮ್ ।
ಸ ಈಶೋ ಭಗವಾನ್ದೇವಃ ಸರ್ವಭೂತಾತ್ಮಭಾವನಃ ॥೧೪॥

ತಪೋನಿಧಿಗಳೇ! ನಾರಾಯಣನ ಕಥೆಗಳಿಗೆ ಸಂಬಂಧಿಸಿದಂತೆ ಎಲ್ಲ ಪ್ರವಚನಗಳನ್ನೂ ನೀವು ಹೇಳಿರುವಿರಿ. ನಿಶ್ಚಯವಾಗಿಯೂ ಭಗವಂತನಾದ ಶ್ರೀಮನ್ನಾರಾಯಣನು ಸರ್ವೇಶ್ವರನು. ಎಲ್ಲ ಪ್ರಾಣಿಗಳನ್ನೂ ಸೃಷ್ಟಿಸುವವನು.

ಅಹೋ ನಾರಾಯಣಂ ತೇಜೋ ದುರ್ದರ್ಶಂ ದ್ವಿಜಸತ್ತಮ ।
ಯತ್ರಾವಿಶನ್ತಿ ಕಲ್ಪಾನ್ತೇ ಸರ್ವೇ ಬ್ರಹ್ಮಾದಯಃ ಸುರಾಃ ॥೧೫॥

ಋಷಯಶ್ಚ ಸಗನ್ಧರ್ವಾ ಯಚ್ಚ ಕಿಂಚಿಚ್ಚರಾಚರಮ್ ।
ನ ತತೋಽಸ್ತಿ ಪರಂ ಮನ್ಯೇ ಪಾವನಂ ದಿವಿ ಚೇಹ ಚ ॥೧೬॥

ದ್ವಿಜಶ್ರೇಷ್ಠರೇ! ನಿಶ್ಚಯವಾಗಿಯೂ ಶ್ರೀಮನ್ನಾರಾಯಣನ ತೇಜಸ್ಸು ನೋಡಲು ಅಸಾಧ್ಯವಾದುದು. ಕಲ್ಪದ ಕಡೆಯಲ್ಲಿ ಬ್ರಹ್ಮಾದಿದೇವತೆಗಳೂ, ಗಂಧರ್ವಸಹಿತರಾದ ಋಷಿಗಳೂ, ಸ್ಥಾವರ-ಜಂಗಮಗಳೂ ಆ ಮಹಾ ತೇಜಸ್ಸಿನಲ್ಲಿಯೇ ವಿಲೀನರಾಗುತ್ತಾರೆ. ಸ್ವರ್ಗದಲ್ಲಾಗಲೀ ಭೂಮಿಯಲ್ಲಾಗಲೀ ಅದಕ್ಕಿಂತಲೂ ಮಿಗಿಲಾದ ಮತ್ತು ಪವಿತ್ರವಾದ ತೇಜಸ್ಸು ಇಲ್ಲವೆಂದೇ ನಾನು ಭಾವಿಸಿದ್ದೇನೆ.

ಸರ್ವಾಶ್ರಮಾಭಿಗಮನಂ ಸರ್ವತೀರ್ಥಾವಗಾಹನಮ್ ।
ನ ತಥಾ ಫಲದಂ ಚಾಪಿ ನಾರಾಯಣಕಥಾ ಯಥಾ ॥೧೭॥

ಎಲ್ಲ ಋಷ್ಯಾಶ್ರಮಗಳ ಯಾತ್ರೆಯಾಗಲೀ, ಎಲ್ಲ ತೀರ್ಥಗಳಲ್ಲಿಯೂ ಮಾಡುವ ಸ್ನಾನವಾಗಲೀ–ನಾರಾಯಣಕಥಾಶ್ರವಣದಷ್ಟು ಫಲದಾಯಕಗಳಾಗುವುದಿಲ್ಲ.

ಸರ್ವಥಾ ಪಾವಿತಾಃ ಸ್ಮೇಹ ಶ್ರುತ್ವೇಮಾಮಾದಿತಃ ಕಥಾಮ್ ।
ಹರೇರ್ವಿಶ್ವೇಶ್ವರಸ್ಯೇಹ ಸರ್ವಪಾಪಪ್ರಣಾಶನೀಮ್ ॥೧೮॥

ಸಮಸ್ತಪಾಪಗಳನ್ನೂ ಪರಿಹರಿಸುವ ಸರ್ವೇಶ್ವರನಾದ ಶ್ರೀಹರಿಯ ಕಥೆಯನ್ನು ಮೊದಲಿನಿಂದಲೂ ಕೇಳಿ ನಾವೆಲ್ಲರೂ ಸರ್ವಪ್ರಕಾರದಿಂದಲೂ ಪಾವನರಾಗಿದ್ದೇವೆ.

ನ ಚಿತ್ರಂ ಕೃತವಾಂಸ್ತತ್ರ ಯದಾರ್ಯೋ ಮೇ ಧನಂಜಯಃ ।
ವಾಸುದೇವಸಹಾಯೋ ಯಃ ಪ್ರಾಪ್ತವಾಞ್ಜಯಮುತ್ತಮಮ್ ॥೧೯॥

ನನ್ನ ಪ್ರಪಿತಾಮಹನಾದ ಅರ್ಜುನನು ವಾಸುದೇವನ ಸಹಾಯವನ್ನು ಪಡೆದು ಉತ್ತಮರೀತಿಯಲ್ಲಿ ಜಯಗಳಿಸಿದನು. ಇದು ಆಶ್ಚರ್ಯಕರವೇನೂ ಅಲ್ಲ. ಇದರಲ್ಲಿ ಅವನು ಅಂತಹ ಅದ್ಭುತವಾದ ಕಾರ್ಯವನ್ನೇನೂ ಮಾಡಿದಂತಾಗಲಿಲ್ಲ. (ವಾಸುದೇವನ ಸಹಾಯವಿದ್ದುದರಿಂದಲೇ ಅರ್ಜುನನಿಗೆ ಜಯವು ಲಭಿಸಿತು.)

ನ ಚಾಸ್ಯ ಕಿಂಚಿದಪ್ರಾಪ್ಯಂ ಮನ್ಯೇ ಲೋಕೇಷ್ವಪಿ ತ್ರಿಷು ।
ತ್ರೈಲೋಕ್ಯನಾಥೋ ವಿಷ್ಣುಃ ಸ ಯಥಾಸೀತ್ಸಾಹ್ಯಕೃತ್ಸ ವೈ ॥೨೦॥

ತ್ರೈಲೋಕ್ಯನಾಥನಾದ ಶ್ರೀಕೃಷ್ಣನು ನಮ್ಮ ಪ್ರಪಿತಾಮಹನಿಗೆ ಸಹಾಯಕನಾಗಿದ್ದುದರಿಂದಲೇ ಅವನಿಗೆ ಮೂರು ಲೋಕಗಳಲ್ಲಿಯೂ ಲಭ್ಯವಾಗದಿರುವ ವಸ್ತುವು ಯಾವುದೂ ಇರಲಿಲ್ಲವೆಂದೇ ನನ್ನ ಭಾವನೆಯಾಗಿದೆ.

ಧನ್ಯಾಶ್ಚ ಸರ್ವ ಏವಾಸನ್ ಬ್ರಹ್ಮಂಸ್ತೇ ಮಮ ಪೂರ್ವಜಾಃ ।
ಹಿತಾಯ ಶ್ರೇಯಸೇ ಚೈವ ಯೇಷಾಮಾಸೀಜ್ಜನಾರ್ದನಃ ॥೨೧॥

ಬ್ರಾಹ್ಮಣೋತ್ತಮರೇ! ಯಾವ ಶ್ರೇಯಸ್ಸಿಗೂ ಮತ್ತು ಹಿತಕ್ಕೂ ಜನಾರ್ದನನೇ ಕಾರಣನಾಗಿದ್ದನೋ–ಅಂತಹ ನನ್ನ ಪೂರ್ವಜರೆಲ್ಲರೂ ನಿಶ್ಚಯವಾಗಿಯೂ ಧನ್ಯರೇ ಆಗಿದ್ದರು.

ತಪಸಾಥ ಸುದೃಶ್ಯೋ ಹಿ ಭಗವಾಲ್ಲೋಕಪೂಜಿತಃ ।
ಯಂ ದೃಷ್ಟವನ್ತಸ್ತೇ ಸಾಕ್ಷಾಚ್ಛ್ರೀವತ್ಸಾಙ್ಕವಿಭೂಷಣಮ್ ॥೨೨॥

ಭಗವಂತನಾದ ಲೋಕಪೂಜಿತನಾದ ನಾರಾಯಣನು ತಪಸ್ಸಿನಿಂದಲೇ ನೋಡಲ್ಪಡತಕ್ಕವನು. ಅಂತಹ ಶ್ರೀವತ್ಸಾಂಕವಿಭೂಷಿತನಾದ ಶ್ರೀಮನ್ನಾರಾಯಣನನ್ನು ನನ್ನ ಪೂರ್ವಜರು ಸಾಕ್ಷಾತ್ತಾಗಿ ನೋಡಿದ್ದರು.

ತೇಭ್ಯೋ ಧನ್ಯತರಶ್ಚೈವ ನಾರದಃ ಪರಮೇಷ್ಠಿಜಃ ।
ನ ಚಾಲ್ಪತೇಜಸಮೃಷಿಂ ವೇದ್ಮಿ ನಾರದಮವ್ಯಯಮ್ ॥೨೩॥

ಶ್ವೇತದ್ವೀಪಂ ಸಮಾಸಾದ್ಯ ಯೇನ ದೃಷ್ಟಃ ಸ್ವಯಂ ಹರಿಃ ।
ದೇವಪ್ರಸಾದಾನುಗತಂ ವ್ಯಕ್ತಂ ತತ್ತಸ್ಯ ದರ್ಶನಮ್ ॥೨೪॥

ಅವರೆಲ್ಲರಿಗಿಂತಲೂ ಧನ್ಯತರರಾದವರು ಬ್ರಹ್ಮನ ಮಾನಸಪುತ್ರರಾದ ನಾರದರೇ ಸರಿ. ಅವಿನಾಶಿಗಳಾದ ನಾರದರು ಸಾಧಾರಣತೇಜಸ್ವಿಗಳೆಂದು ನಾನು ಭಾವಿಸುವುದಿಲ್ಲ. ಏಕೆಂದರೆ : ಅವರು ಶ್ವೇತದೀಪಕ್ಕೆ ಹೋಗಿ ಸಾಕ್ಷಾತ್ ಶ್ರೀಹರಿಯನ್ನೇ ಸಂದರ್ಶಿಸಿದರು. ಭಗವದ್ದರ್ಶನವು ಆ ದೇವನ ಕೃಪೆಯಿಂದಲೇ ಲಭಿಸಿತೆಂಬುದು ಸ್ಪಷ್ಟವಾಗಿಯೇ ಇದೆ.

ತದ್ದೃಷ್ಟವಾಂಸ್ತದಾ ದೇವಮನಿರುದ್ಧತನೌ ಸ್ಥಿತಮ್ ।
ಬದರೀಮಾಶ್ರಮಂ ಯತ್ತು ನಾರದಃ ಪ್ರಾದ್ರವತ್ಪುನಃ ।
ನರನಾರಾಯಣೌ ದ್ರಷ್ಟುಂ ಕಿಂ ನು ತತ್ಕಾರಣಂ ಮುನೇ ॥೨೫॥

ಶ್ವೇತದ್ವೀಪದಲ್ಲಿ ನಾರದರು ಅನಿರುದ್ಧರೂಪದಲ್ಲಿದ್ದ ನಾರಾಯಣನನ್ನು ಸಂದರ್ಶಿಸಿದರು. ಪುನಃ ಅವರು ನರ-ನಾರಾಯಣರನ್ನು ಸಂದರ್ಶಿಸಲು ಬದರಿಕಾಶ್ರಮಕ್ಕೆ ಧಾವಿಸಿದರು. ಇದಕ್ಕೆ ಕಾರಣವೇನು?

ಶ್ವೇತದ್ವೀಪಾನ್ನಿವೃತ್ತಶ್ಚ ನಾರದಃ ಪರಮೇಷ್ಠಿಜಃ ।
ಬದರೀಮಾಶ್ರಮಂ ಪ್ರಾಪ್ಯ ಸಮಾಗಮ್ಯ ಚ ತಾವೃಷೀ ।
ಕಿಯನ್ತಂ ಕಾಲಮವಸತ್ಪ್ರಶ್ನಾನ್ಕಾನ್ಪೃಷ್ಟವಾಂಶ್ಚ ಹ ॥೨೬॥

ಬ್ರಹ್ಮಮಾನಸಪುತ್ರರಾದ ನಾರದರು ಶ್ವೇತದ್ವೀಪದಿಂದ ಹಿಂದಿರುಗಿ ಬದರಿಕಾಶ್ರಮಕ್ಕೆ ಬಂದು ನರ-ನಾರಾಯಣರ್ಷಿಗಳನ್ನು ಸಂಧಿಸಿ, ಎಷ್ಟು ಕಾಲದವರೆಗೆ ಅವರ ಜೊತೆಯಲ್ಲಿಯೇ ಇದ್ದರು ಮತ್ತು ಯಾವ ಯಾವ ಪ್ರಶ್ನೆಗಳನ್ನು ಕೇಳಿದರು?

ಶ್ವೇತದ್ವೀಪಾದುಪಾವೃತ್ತೇ ತಸ್ಮಿನ್ವಾ ಸುಮಹಾತ್ಮನಿ ।
ಕಿಮಬ್ರೂತಾಂ ಮಹಾತ್ಮಾನೌ ನರನಾರಾಯಣಾವೃಷೀ ।
ತದೇತನ್ಮೇ ಯಥಾತತ್ತ್ವಂ ಸರ್ವಮಾಖ್ಯಾತುಮರ್ಹಸಿ ॥೨೭॥

ಮಹಾತ್ಮರಾದ ನಾರದರು ಶ್ವೇತದ್ವೀಪದಿಂದ ಹಿಂದಿರುಗಿ ಬಂದಾಗ ನರ-ನಾರಾಯಣರ್ಷಿಗಳು ಅವರೊಡನೆ ಏನು ಹೇಳಿದರು? ಈ ಎಲ್ಲ ವಿಷಯಗಳನ್ನೂ ನನಗೆ ಯಥಾವತ್ತಾಗಿ ಹೇಳುವ ಕೃಪೆಮಾಡಿರಿ."

ವೈಶಂಪಾಯನರು ಹೇಳುತ್ತಾರೆ :

"ಮಹಾತೇಜಸ್ವಿಗಳಾದ ಪೂಜ್ಯರಾದ ವ್ಯಾಸರಿಗೆ ನಮಸ್ಕಾರ ಮಾಡುತ್ತೇನೆ. ಅವರ ದಿವ್ಯಾನುಗ್ರಹದಿಂದಲೇ ನಾನು ನಾರಾಯಣನ ಈ ಕಥೆಯನ್ನು ಹೇಳುತ್ತೇನೆ.

ಜನಮೇಜಯ! ನಾರದರು ಶ್ವೇತದ್ವೀಪಕ್ಕೆ ಹೋಗಿ ಅವಿನಾಶಿಯಾದ ಹರಿಯನ್ನು ಸಂದರ್ಶಿಸಿ, ಪರಮಾತ್ಮನು ಹೇಳಿದ ಕಾರ್ಯಭಾರವನ್ನೇ ಮನಸ್ಸಿನಲ್ಲಿಟ್ಟುಕೊಂಡು, ಶ್ವೇತದ್ವೀಪದಿಂದ ಹಿಂದಿರುಗಿ ಒಡನೆಯೇ ಮೇರುಪರ್ವತಕ್ಕೆ ಹೋದರು. ಮೇರುಪರ್ವತಕ್ಕೆ ಹಿಂದಿರುಗಿ ಬಂದನಂತರ ನಾರದರ ಮನಸ್ಸಿನಲ್ಲಿ ಮಹಾಭಯವುಂಟಾಯಿತು. "ಇಷ್ಟು ದೂರ ಪ್ರಯಾಣಮಾಡಿದರೂ ನಾನು ಸಕುಶಲನಾಗಿಯೇ ಹಿಂದಿರುಗಿದೆನಲ್ಲಾ! ಇದು ಹೇಗೆ ಸಾಧ್ಯವಾಯಿತು? (ನಾನು ಪ್ರಯಾಣಮಾಡಿರುವ ದೂರ ವೆಷ್ಟೆಂಬುದನ್ನು ಮನಸ್ಸಿನಲ್ಲಿ ಯೋಚಿಸಿದರೆ ಭಯವೇ ಆಗುತ್ತದೆ. ಆದರೂ ಪ್ರಯಾಣಮಾಡಿದ್ದೇನೆ. ಕುಶಲಿಯಾಗಿಯೇ ಹಿಂದಿರುಗಿದ್ದೇನೆ.)" ಹೀಗೆ ಯೋಚಿಸಿ ನಾರದರು ಮೇರುಪರ್ವತದಲ್ಲಿಯೂ ನಿಲ್ಲದೇ ಮುಂದೆ ಗಂಧಮಾದನಪರ್ವತಕ್ಕೆ ಹೋದರು. ಅಲ್ಲಿಂದ ಬಹಳ ಶೀಘ್ರವಾಗಿ ಪ್ರಯಾಣಮಾಡಿ ವಿಶಾಲವಾಗಿದ್ದ ಬದರಿಕಾಶ್ರಮದ ಸಮೀಪದಲ್ಲಿ ಅಂತರಿಕ್ಷದಿಂದ ಇಳಿದರು. ಬದರಿಕಾಶ್ರಮದಲ್ಲಿ ನಾರದರು ಪುರಾತನಮುನಿಶ್ರೇಷ್ಠರಾದ, ಮಹಾತಪಸ್ವಿಗಳಾದ, ಮಹಾವ್ರತನಿಷ್ಠರಾದ, ಆತ್ಮನಿಷ್ಠರಾದ, ತಪಸ್ಸುಮಾಡುತ್ತಿದ್ದ ನರ-ನಾರಾಯಣರನ್ನು ಸಂದರ್ಶಿಸಿದರು.

ತೇಜಸಾಭ್ಯಧಿಕೌ ಸೂರ್ಯಾತ್ಸರ್ವಲೋಕವಿರೋಚನಾತ್ ।
ಶ್ರೀವತ್ಸಲಕ್ಷಣೌ ಪೂಜ್ಯೌ ಜಟಾಮಣ್ಡಲಧಾರಿಣೌ ॥೩೫॥

ಸರ್ವಲೋಕಗಳಿಗೂ ಪ್ರಕಾಶವನ್ನುಂಟುಮಾಡುವ ಸೂರ್ಯನಿ ಗಿಂತಲೂ ಅಧಿಕವಾದ ತೇಜಸ್ಸಿನಿಂದ ಕೂಡಿರುವ, ವಕ್ಷಃಸ್ಥಳದಲ್ಲಿ ಶ್ರೀವತ್ಸ

ಲಕ್ಷಣದಿಂದ ಕೂಡಿರುವ, ಜಟಾಮಂಡಲಧಾರಿಗಳಾದ, ಪೂಜ್ಯರಾದ ನರ-ನಾರಾಯಣರ್ಷಿಗಳನ್ನು ಸಂದರ್ಶಿಸಿದರು.

ಜಾಲಪಾದಭುಜೌ ತೌ ತು ಪಾದಯೋಶ್ಚಕ್ರಲಕ್ಷಣೌ ।
ವ್ಯೂಢೋರಸ್ಕೌ ದೀರ್ಘಭುಜೌ ತಥಾ ಮುಷ್ಕಚತುಷ್ಕಿಣೌ ॥೩೬॥

ಷಷ್ಟಿದನ್ತಾವಷ್ಟದಂಷ್ಟ್ರೌ ಮೇಘೌಘಸದೃಶಸ್ವನೌ ।
ಸ್ವಾಸ್ಯೌ ಪೃಥುಲಲಾಟೌ ಚ ಸುಭ್ರೂಸುಹನುನಾಸಿಕೌ ॥೩೭॥

ಭುಜಗಳಲ್ಲಿ ಹಂಸಪಕ್ಷಿಯ ಗುರುತುಗಳನ್ನೂ ಕಾಲುಗಳಲ್ಲಿ ಚಕ್ರದ ಗುರುತುಗಳನ್ನೂ ಹೊಂದಿರುವ, ವಿಶಾಲವಕ್ಷಃಸ್ಥಳದಿಂದ ಕೂಡಿದ ಆಜಾನುಬಾಹುಗಳಾದ, ಅಂಡಕೋಶದಲ್ಲಿ ನಾಲ್ಕು ವೃಷಣಗಳನ್ನು ಹೊಂದಿರುವ, ಅರುವತ್ತು ಹಲ್ಲುಗಳನ್ನೂ –ಎಂಟು ಕೋರೆಹಲ್ಲುಗಳನ್ನೂ ಹೊಂದಿರುವ, ಮೇಘಗಳ ಸಮೂಹದಿಂದ ಹೊರಬರುವ ಶಬ್ದಕ್ಕೆ ಸಮಾನವಾದ ಕಂಠಧ್ವನಿಯಿಂದ ಕೂಡಿರುವ, ಸುಂದರವದನರಾದ, ವಿಶಾಲ ಲಲಾಟರಾದ, ಸುಂದರವಾದ ಹುಬ್ಬುಗಳನ್ನೂ–ಸುಂದರವಾದ ದವಡೆಗಳನ್ನೂ ಮತ್ತು ಮೂಗುಗಳನ್ನೂ ಹೊಂದಿರುವ ನರ-ನಾರಾಯಣರನ್ನು ನಾರದರು ಸಂದರ್ಶಿಸಿದರು.

ಆತಪತ್ರೇಣ ಸದೃಶೇ ಶಿರಸೀ ದೇವಯೋಸ್ತಯೋಃ ।
ಏವಂ ಲಕ್ಷಣಸಮ್ಪನ್ನೌ ಮಹಾಪುರುಷಸಂಜ್ಞಿತೌ ॥೩೮॥

ತೌ ದೃಷ್ಟ್ವಾ ನಾರದೋ ಹೃಷ್ಟಸ್ತಾಭ್ಯಾಂ ಚ ಪ್ರತಿಪೂಜಿತಃ ।
ಸ್ವಾಗತೇನಾಭಿಭಾಷ್ಯಾಥ ಪೃಷ್ಟಶ್ಚಾನಾಮಯಂ ತಥಾ ॥೩೯॥

ಅವರ ತಲೆಗಳು ಛತ್ರಸದೃಶವಾಗಿದ್ದುವು. ಹೀಗೆ ಸರ್ವಲಕ್ಷಣಸಂಪನ್ನರಾಗಿದ್ದ, ಮಹಾಪುರುಷರೆಂದು ವಿಖ್ಯಾತರಾಗಿದ್ದ ನರ-ನಾರಾಯಣರನ್ನು ನೋಡಿ ನಾರದರು ಆನಂದಭರಿತರಾದರು. ನರ-ನಾರಾಯಣರೂ ನಾರದರನ್ನು ನೋಡಿ ಸ್ವಾಗತವನ್ನಿತ್ತು ಯಥೋಚಿತವಾಗಿ ಸತ್ಕರಿಸಿದರು. ಅನಂತರ ನರ-ನಾರಾಯಣರು ನಾರದರ ಕ್ಷೇಮಸಮಾಚಾರವನ್ನು ಕೇಳಿದರು.

ಬಭೂವಾನ್ತರ್ಗತಮತಿರ್ನಿರೀಕ್ಷ್ಯ ಪುರುಷೋತ್ತಮೌ ।

ಸದೋಗತಾಸ್ತತ್ರ ಯೇ ವೈ ಸರ್ವಭೂತನಮಸ್ಕೃತಾಃ ।
ಶ್ವೇತದ್ವೀಪೇ ಮಯಾ ದೃಷ್ಟಾಸ್ತಾದೃಶಾವೃಷಿಸತ್ತಮೌ ॥೪೦॥

ನಾರದರು ಪುರುಷಶ್ರೇಷ್ಠರಾದ ನರ-ನಾರಾಯಣರನ್ನು ನೋಡಿ ಮನಸ್ಸಿನಲ್ಲಿಯೇ –'ನಾನು ಶ್ವೇತದ್ವೀಪದಲ್ಲಿ ಭಗವಂತನ ಆ ಮಹಾಸಭೆಯಲ್ಲಿ ಸರ್ವಪ್ರಾಣಿಗಳಿಂದಲೂ ನಮಸ್ಕರಿಸಲ್ಪಡುತ್ತಿದ್ದ ಯಾವ ಸದಸ್ಯರನ್ನು ನೋಡಿದ್ದೆನೋ ಅವರಂತೆಯೇ ಈ ನರ-ನಾರಾಯಣರ್ಷಿಗಳೂ ಕಾಣುತ್ತಿದ್ದಾರೆ'–ಎಂದು ಚಿಂತಿಸಿದರು.

ಹೀಗೆ ನಾರದರು ಮನಸ್ಸಿನಲ್ಲಿಯೇ ಯೋಚಿಸುತ್ತಾ ಋಷಿಶ್ರೇಷ್ಠರಾದ ಅವರಿಬ್ಬರಿಗೂ ಪ್ರದಕ್ಷಿಣ-ನಮಸ್ಕಾರಗಳನ್ನು ಮಾಡಿ ಮಂಗಳಕರವಾದ ಕುಶಾಸನದಲ್ಲಿ ಕುಳಿತರು. ಶಮ-ದಮೋಪೇತರಾದ, ತಪಸ್ಸು-ಯಶಸ್ಸು ಮತ್ತು ತೇಜಸ್ಸುಗಳಿಗೆ ನಿವಾಸಸ್ಥಾನರಾದ, ಏಕಾಗ್ರವಾದ ಮನಸ್ಸುಳ್ಳ ನರ-ನಾರಾಯಣರು ವಿಧಿವತ್ತಾಗಿ ಪೂರ್ವಾಹ್ಣದಲ್ಲಿ ಮಾಡಬೇಕಾದ ನಿತ್ಯಕರ್ಮಗಳನ್ನು ಮುಗಿಸಿ ನಾರದರನ್ನು ಪಾದ್ಯಾರ್ಘ್ಯಗಳಿಂದ ಸತ್ಕರಿಸಿದರು. ನಿತ್ಯಕರ್ಮಗಳನ್ನು ಮಾಡಿ, ಅತಿಥಿಯನ್ನು ಸತ್ಕರಿಸಿ, ನರ-ನಾರಾಯಣರು ಕುಶಾಸನಗಳಲ್ಲಿ ಕುಳಿತರು. ಯಜ್ಞಮಂಟಪವು ಆಜ್ಯಾಹುತಿಗಳಿಂದ ಉಂಟಾದ ಮಹಾಜ್ವಾಲೆಗಳಿಂದ ಯುಕ್ತವಾದ ಅಗ್ನಿಗಳಿಂದ ಪ್ರಕಾಶಿಸುವಂತೆ–ನಾರದ-ನರ-ನಾರಾಯಣರು ಕುಳಿತಿದ್ದ ಆ ಪ್ರದೇಶವು ಬಹಳವಾಗಿ ಪ್ರಕಾಶಿಸಿತು.

ಬಳಿಕ ನಾರಾಯಣನು ಆತಿಥ್ಯವನ್ನು ಪಡೆದು ವಿಶ್ರಾಂತರಾಗಿದ್ದ ಸುಖಾಸನದಲ್ಲಿ ಸುಖವಾಗಿ ಕುಳಿತಿದ್ದ ನಾರದರಿಗೆ ಹೇಳಿದನು :

ಅಪೀದಾನೀಂ ಸ ಭಗವಾನ್ಪರಮಾತ್ಮಾ ಸನಾತನಃ ।
ಶ್ವೇತದ್ವೀಪೇ ತ್ವಯಾ ದೃಷ್ಟ ಆವಯೋಃ ಪ್ರಕೃತಿಃ ಪರಾ ॥೪೬॥

"ನಾರದ! ನಮ್ಮ ಪರಾಪ್ರಕೃತಿಯಾದ, ಪೂಜ್ಯನಾದ, ಸನಾತನನಾದ ಪರಮಾತ್ಮನನ್ನು ಶ್ವೇತದ್ವೀಪದಲ್ಲಿ ನೀನು ಈಗತಾನೇ ನೋಡಿ ಬಂದೆಯಲ್ಲವೇ?"

ನಾರದರು ಹೇಳಿದರು :

ದೃಷ್ಟೋ ಮೇ ಪುರುಷಃ ಶ್ರೀಮಾನ್ವಿಶ್ವರೂಪಧರೋಽವ್ಯಯಃ ।
ಸರ್ವೇ ಲೋಕಾ ಹಿ ತತ್ರಸ್ಥಾಸ್ತಥಾ ದೇವಾಃ ಸಹರ್ಷಿಭಿಃ ॥೪೭॥

“ಪೂಜ್ಯರೇ! ನಾನು ವಿಶ್ವರೂಪಧರನಾದ, ಅವಿನಾಶಿಯಾದ, ಶ್ರೀಮಂತನಾದ ಪರಮಪುರುಷನನ್ನು ಸಂದರ್ಶಿಸಿದೆನು. ಎಲ್ಲ ಲೋಕಗಳೂ ಅವನಲ್ಲಿಯೇ ಇವೆ. ಅಂತೆಯೇ ಋಷಿಗಳಿಂದ ಕೂಡಿದ ದೇವತೆಗಳೂ ಅವನಲ್ಲಿಯೇ ಉಪಸ್ಥಿತರಾಗಿದ್ದಾರೆ.

ಅದ್ಯಾಪಿ ಚೈನಂ ಪಶ್ಯಾಮಿ ಯುವಾಂ ಪಶ್ಯನ್ಸನಾತನೌ ।
ಯೈರ್ಲಕ್ಷಣೈರುಪೇತಃ ಸ ಹರಿರವ್ಯಕ್ತರೂಪಧೃಕ್ ।
ತೈರ್ಲಕ್ಷಣೈರುಪೇತೌ ಹಿ ವ್ಯಕ್ತರೂಪಧರೌ ಯುವಾಮ್ ॥೪೮॥

ಈಗ ನಿಮ್ಮನ್ನು ನೋಡುತ್ತಿರುವ ನನಗೆ ಅವನನ್ನು ನೋಡುತ್ತಿರುವಂತೆಯೇ ಭಾಸವಾಗುತ್ತಿದೆ. ಅವ್ಯಕ್ತವಾದ ರೂಪವನ್ನು ಧರಿಸಿರುವ ಶ್ರೀಹರಿಯು ಯಾವ ಲಕ್ಷಣಗಳಿಂದ ಕೂಡಿರುವನೋ-ವ್ಯಕ್ತ ರೂಪವನ್ನು ಧರಿಸಿರುವ ನೀವೂ ಅದೇ ಲಕ್ಷಣಗಳನ್ನೇ ಹೊಂದಿರುವಿರಿ.

ದೃಷ್ಟೌ ಯುವಾಂ ಮಯಾ ತತ್ರ ತಸ್ಯ ದೇವಸ್ಯ ಪಾರ್ಶ್ವತಃ ।
ಇಹೈವ ಚಾಗತೋಽಸ್ಮ್ಯದ್ಯ ವಿಸೃಷ್ಟಃ ಪರಮಾತ್ಮನಾ ॥೫೦॥

ಶ್ವೇತದ್ವೀಪದಲ್ಲಿ ನಾನು ನಿಮ್ಮಿಬ್ಬರನ್ನೂ ಶ್ರೀಹರಿಯ ಪಕ್ಕದಲ್ಲಿಯೇ ನೋಡಿದೆನು. ಶ್ರೀಹರಿಯಿಂದಲೇ ಕಳುಹಿಸಲ್ಪಟ್ಟ ನಾನು ನೇರವಾಗಿ ಇಲ್ಲಿಗೇ ಆಗಮಿಸಿದ್ದೇನೆ.

ಕೋ ಹಿ ನಾಮ ಭವೇತ್ತಸ್ಯ ತೇಜಸಾ ಯಶಸಾ ಶ್ರಿಯಾ ।
ಸದೃಶಸ್ತ್ರಿಷು ಲೋಕೇಷು ಋತೇ ಧರ್ಮಾತ್ಮಜೌ ಯುವಾಮ್ ॥೫೧॥

ಮೂರುಲೋಕಗಳಲ್ಲಿಯೂ ಧರ್ಮನ ಪುತ್ರರಾದ ನಿಮ್ಮಿಬ್ಬರನ್ನು ಬಿಟ್ಟರೆ–ತೇಜಸ್ಸಿನಿಂದಲೂ, ಯಶಸ್ಸಿನಿಂದಲೂ, ಕಾಂತಿಯಿಂದಲೂ ಆ ಶ್ರೀಹರಿಗೆ ಸದೃಶರಾದರು ಬೇರೆ ಯಾರಿದ್ದಾರೆ?

ತೇನ ಮೇ ಕಥಿತಃ ಕೃತ್ಸ್ನೋ ಧರ್ಮಃ ಕ್ಷೇತ್ರಜ್ಞ ಸಂಜ್ಞಿತಃ ।
ಪ್ರಾದುರ್ಭಾವಾಶ್ಚ ಕಥಿತಾ ಭವಿಷ್ಯಾ ಇಹ ಯೇ ಯಥಾ ॥೫೨॥

ಶ್ರೀಹರಿಯು ನನ್ನೊಡನೆ ಕ್ಷೇತ್ರಜ್ಞನ ಜ್ಞಾನಕ್ಕೆ ಸಂಬಂಧಿಸಿದ ಸಮಗ್ರವಾದ ಧರ್ಮವನ್ನೂ ಹೇಳಿದನು. ಮುಂದಾಗುವ ಅವತಾರ ವಿಷಯಗಳನ್ನೂ ಹೇಳಿದನು.

ತತ್ರ ಯೇ ಪುರುಷಾಃ ಶ್ವೇತಾಃ ಪಞ್ಚೇನ್ದ್ರಿಯವಿವರ್ಜಿತಾಃ ।
ಪ್ರತಿಬುದ್ಧಾಶ್ಚ ತೇ ಸರ್ವೇ ಭಕ್ತಾಶ್ಚ ಪುರುಷೋತ್ತಮಮ್ ॥೫೩॥

ಶ್ವೇತದ್ವೀಪದಲ್ಲಿದ್ದ ಪುರುಷರೆಲ್ಲರೂ ಗೌರವರ್ಣದವರು, ಪಂಚೇಂದ್ರಿಯಗಳಿಂದ ರಹಿತರಾದವರು, ಜ್ಞಾನಿಗಳು. ಅವರೆಲ್ಲರೂ ಪುರುಷೋತ್ತಮನಾದ ಶ್ರೀಹರಿಯನ್ನು ಪೂಜಿಸುವವರಾಗಿದ್ದರು.

ತೇಽರ್ಚಯನ್ತಿ ಸದಾ ದೇವಂ ತೈಃ ಸಾರ್ಧಂ ರಮತೇ ಚ ಸಃ ।
ಪ್ರಿಯಭಕ್ತೋ ಹಿ ಭಗವಾನ್ಪರಮಾತ್ಮಾ ದ್ವಿಜಪ್ರಿಯಃ ॥೫೪॥

ಶ್ವೇತದ್ವೀಪದಲ್ಲಿರುವ ಆ ಪುರುಷರು ದೇವದೇವನನ್ನು ಸದಾ ಪೂಜಿಸುತ್ತಲೇ ಇರುತ್ತಾರೆ. ಶ್ರೀಹರಿಯು ಕೂಡ ಅವರೊಡನೆ ಯಾವಾಗಲೂ ಪ್ರಸನ್ನನಾಗಿಯೇ ಇರುತ್ತಾನೆ. ಪರಮಾತ್ಮನಾದ ಬ್ರಾಹ್ಮಣಪ್ರಿಯನಾದ ಶ್ರೀಹರಿಯು ಭಕ್ತಪ್ರಿಯನು.

ರಮತೇ ಸೋಽರ್ಚ್ಯಮಾನೋ ಹಿ ಸದಾ ಭಾಗವತಪ್ರಿಯಃ ।
ವಿಶ್ವಭುಕ್ಸರ್ವಗೋ ದೇವೋ ಮಾಧವೋ ಭಕ್ತವತ್ಸಲಃ ॥೫೫॥

ವಿಶ್ವವನ್ನು ಪರಿಪಾಲಿಸುವ, ಸರ್ವವ್ಯಾಪಿಯಾದ, ಭಕ್ತವತ್ಸಲನಾದ, ಭಾಗವತಪ್ರಿಯನಾದ ಶ್ರೀಹರಿಯು ಸದಾ ತನ್ನ ಭಕ್ತರಿಂದ ಅರ್ಚಿಸಲ್ಪಡುತ್ತಿದ್ದು ಅವರೊಡನೆ ವಿಹರಿಸುತ್ತಿರುತ್ತಾನೆ.

ಸ ಕರ್ತಾ ಕಾರಣಂ ಚೈವ ಕಾರ್ಯಂ ಚಾತಿಬಲದ್ಯುತಿಃ ।
ಹೇತುಶ್ಚಾಜ್ಞಾ ವಿಧಾನಂ ಚ ತತ್ತ್ವಂ ಚೈವ ಮಹಾಯಶಾಃ ॥೫೬॥

ಶ್ರೀಹರಿಯೇ ಕರ್ತೃವೂ, ಕಾರಣನೂ ಮತ್ತು ಕಾರ್ಯವೂ ಆಗಿದ್ದಾನೆ. ಅವನ ಬಲ ಮತ್ತು ತೇಜಸ್ಸುಗಳೂ ಅನಂತವಾಗಿವೆ. ಮಹಾಯಶೋವಂತನಾದ ಆ ಭಗವಂತನೇ ಹೇತು, ಆಜ್ಞೆ, ವಿಧಾನ ಮತ್ತು ತತ್ತ್ವಗಳ ತದ್ರೂಪನೂ ಆಗಿದ್ದಾನೆ.

ತಪಸಾ ಯೋಜ್ಯ ಸೋಽತ್ಮಾನಂ ಶ್ವೇತದ್ವೀಪಾತ್ಪರಂ ಹಿ ಯತ್ ।
ತೇಜ ಇತ್ಯಭಿವಿಖ್ಯಾತಂ ಸ್ವಯಂಭಾಸಾವಭಾಸಿತಮ್ ॥೫೭॥

ಶ್ವೇತದ್ವೀಪಕ್ಕೂ ಆಚೆ –ಶ್ರೀಹರಿಯ ಸ್ವಪ್ರಕಾಶದಿಂದಲೇ ಪ್ರಕಾಶಿತವಾದ, ತೇಜಃಪುಂಜವಾದ, ತೇಜಸ್ಸೆಂದೇ ವಿಖ್ಯಾತವಾಗಿರುವ ಸ್ಥಳವಿದೆ. ಅಲ್ಲಿ ನಾರಾಯಣನು ತನ್ನನ್ನು ತಪಸ್ಸಿನಲ್ಲಿ ತೊಡಗಿಸಿಕೊಂಡಿದ್ದಾನೆ. (ತಪಸ್ಸು ಮಾಡುತ್ತಿದ್ದಾನೆ.)

ಶಾನ್ತಿಃ ಸಾ ತ್ರಿಷು ಲೋಕೇಷು ವಿಹಿತಾ ಭಾವಿತಾತ್ಮನಾ ।
ಏತಯಾ ಶುಭಯಾ ಬುದ್ಧ್ಯಾ ನೈಷ್ಠಿಕಂ ವ್ರತಮಾಸ್ಥಿತಃ ॥೫೮॥

ಪೂತಾತ್ಮನಾದ ಪರಮಾತ್ಮನು ಮೂರು ಲೋಕಗಳಲ್ಲಿಯೂ ಶಾಂತಿಯನ್ನು ಸ್ಥಾಪಿಸಿದ್ದಾನೆ. ತನ್ನ ಕಲ್ಯಾಣಮಯವಾದ ಬುದ್ಧಿಯಿಂದ ಶ್ರೀಹರಿಯು ಜಗತ್ಕಲ್ಯಾಣವೆಂಬ ನೈಷ್ಠಿಕವ್ರತವನ್ನು ಆಶ್ರಯಿಸಿದ್ದಾನೆ.

ನ ತತ್ರ ಸೂರ್ಯಸ್ತಪತಿ ನ ಸೋಮೋಽಭಿವಿರಾಜತೇ ।
ನ ವಾಯುರ್ವಾತಿ ದೇವೇಶೇ ತಪಶ್ಚರತಿ ದುಶ್ಚರಮ್ ॥೫೯॥

ಶ್ರೀಹರಿಯಿರುವ ಆ ಸ್ಥಳದಲ್ಲಿ ಸೂರ್ಯನು ತಾಪವನ್ನುಂಟು ಮಾಡುವುದಿಲ್ಲ. ಚಂದ್ರನು ಪ್ರಕಾಶಮಾನವಾಗಿ ಕಾಣುವುದಿಲ್ಲ. (ಪರಮಾತ್ಮನ ತೇಜಸ್ಸಿನಿಂದಲೇ ಆ ಸ್ಥಳವು ಪ್ರಕಾಶಿಸುತ್ತದೆ.) ದುಷ್ಕರವಾದ ತಪಸ್ಸನ್ನು ಮಾಡುತ್ತಿರುವ ದೇವೇಶನಾದ ಆ ಶ್ರೀಹರಿಯಿರುವ ಸ್ಥಳದಲ್ಲಿ ಗಾಳಿಯೂ ಬೀಸುವುದಿಲ್ಲ.

ವೇದೀಮಷ್ಟನಲೋತ್ಸೇಧಾಂ ಭೂಮಾವಾಸ್ಥಾಯ ವಿಶ್ವಕೃತ್ ।
ಏಕಪಾದಸ್ಥಿತೋ ದೇವ ಊರ್ಧ್ವಬಾಹುರುದಙ್ಮುಖಃ ॥೬೦॥

ವಿಶ್ವವನ್ನು ಸೃಷ್ಟಿಸಿರುವ ದೇವದೇವನಾದ ಶ್ರೀಹರಿಯು ಭೂಮಿಯಿಂದ ಎಂಟು ಅಂಗುಲಗಳಷ್ಟು ಎತ್ತರವಾಗಿರುವ ವೇದಿಯನ್ನು ಆಶ್ರಯಿಸಿ ತೋಳುಗಳನ್ನು ಮೇಲಕ್ಕೆತ್ತಿಕೊಂಡು ಉತ್ತರಾಭಿಮುಖವಾಗಿ ಒಂದೇ ಕಾಲಿನಲ್ಲಿ ನಿಂತು ತಪಸ್ಸುಮಾಡುತ್ತಿದ್ದಾನೆ.

ಸಾಙ್ಗಾನಾವರ್ತಯನ್ವೇದಾಂಸ್ತಪಸ್ತೇಪೇ ಸುದುಶ್ಚರಮ್ ।
ಯದ್ಬ್ರಹ್ಮಾ ಋಷಯಶ್ಚೈವ ಸ್ವಯಂ ಪಶುಪತಿಶ್ಚ ಯತ್ ॥೬೧॥

ಶೇಷಾಶ್ಚ ವಿಬುಧಶ್ರೇಷ್ಠಾ ದೈತ್ಯದಾನವರಾಕ್ಷಸಾಃ ।
ನಾಗಾಃ ಸುಪರ್ಣಾ ಗನ್ಧರ್ವಾಃ ಸಿದ್ಧಾ ರಾಜರ್ಷಯಶ್ಚ ಯೇ ॥೬೨॥
ಹವ್ಯಂ ಕವ್ಯಂ ಚ ಸತತಂ ವಿಧಿಯುಕ್ತಂ ಪ್ರಯುಞ್ಜತೇ ।
ಕೃತ್ಸ್ನಂ ತು ತಸ್ಯ ದೇವಸ್ಯ ಚರಣಾವುಪತಿಷ್ಠತಿ ॥೬೩॥

ಶ್ರೀಹರಿಯು ಷಡಂಗಯುಕ್ತವಾದ ವೇದಗಳನ್ನು ಆವರ್ತನೆಮಾಡುತ್ತಾ ಅತ್ಯಂತಕಠೋರವಾದ ತಪಸ್ಸನ್ನು ಮಾಡುತ್ತಿದ್ದಾನೆ. ಬ್ರಹ್ಮ ಸ್ವಯಂ ಪಶುಪತಿ, ಋಷಿಗಳು, ಉಳಿದ ವಿಬುಧಶ್ರೇಷ್ಠರು, ದೈತ್ಯ-ದಾನವ- ರಾಕ್ಷಸರು, ನಾಗರು, ಗರುಡರು, ಗಂಧರ್ವರು, ಸಿದ್ಧರು, ರಾಜರ್ಷಿಗಳು–ಇವರೆಲ್ಲರೂ ವಿಧಿಯುಕ್ತವಾದ ಹವ್ಯ-ಕವ್ಯಗಳನ್ನು ಸತತವಾಗಿ ಅರ್ಪಿಸುತ್ತಲೇ ಇರುತ್ತಾರೆ. ಅವೆಲ್ಲವೂ ದೇವದೇವನಾದ ಶ್ರೀಹರಿಯ ಚರಣಗಳನ್ನೇ ಹೊಂದುತ್ತದೆ.

ಯಾಃ ಕ್ರಿಯಾಃ ಸಮ್ಪ್ರಯುಕ್ತಾಶ್ಚ ಏಕಾನ್ತಗತಬುದ್ಧಿಭಿಃ ।
ತಾಃ ಸರ್ವಾಃ ಶಿರಸಾ ದೇವಃ ಪ್ರತಿಗೃಹ್ಣಾತಿ ವೈ ಸ್ವಯಮ್ ॥೬೪॥

ಅನನ್ಯಭಾವದಿಂದ ಏಕಮಾತ್ರ ಶ್ರೀಹರಿಯಲ್ಲಿಯೇ ಲೀನವಾದ ಬುದ್ಧಿಯುಳ್ಳ ಭಕ್ತರು ಪೂಜಾರೂಪವಾದ ಯಾವ ಕರ್ಮಗಳನ್ನು ಸಮರ್ಪಿಸುವರೋ–ಆ ಎಲ್ಲ ಕರ್ಮಗಳನ್ನೂ ಶ್ರೀಹರಿಯು ತಾನಾಗಿಯೇ ಶಿರಸಾ ಪ್ರತಿಗ್ರಹಿಸುತ್ತಾನೆ.

ನ ತಸ್ಯಾನ್ಯಃ ಪ್ರಿಯತರಃ ಪ್ರತಿಬುದ್ಧೈರ್ಮಹಾತ್ಮಭಿಃ ।
ವಿದ್ಯತೇ ತ್ರಿಷು ಲೋಕೇಷು ತತೋಽಸ್ಮ್ಯೈಕಾನ್ತಿಕಂ ಗತಃ ॥೬೫॥

ಮಹಾತ್ಮರಾದ, ಜ್ಞಾನಿಗಳಾದ ಭಕ್ತರಿಗಿಂತಲೂ ಶ್ರೀಹರಿಗೆ ಪ್ರಿಯತರರಾದವರು ಮೂರು ಲೋಕಗಳಲ್ಲಿಯೂ ಬೇರೆ ಯಾರೂ ಇಲ್ಲ. ಆದುದರಿಂದಲೇ ನಾನು ಅನನ್ಯಭಾವದಿಂದ ಶ್ರೀಹರಿಗೆ ಶರಣುಹೋದೆನು.

ಇಹ ಚೈವಾಗತಸ್ತೇನ ವಿಸೃಷ್ಟಃ ಪರಮಾತ್ಮನಾ ।
ಏವಂ ಮೇ ಭಗವಾನ್ದೇವಃ ಸ್ವಯಮಾಖ್ಯಾತವಾನ್ಹರಿಃ ।
ಆಸಿಷ್ಯೇ ತತ್ಪರೋ ಭೂತ್ವಾ ಯುವಾಭ್ಯಾಂ ಸಹ ನಿತ್ಯಶಃ ॥೬೬॥

ಪರಮಾತ್ಮನಿಂದ ಕಳುಹಿಸಲ್ಪಟ್ಟ ನಾನು ನೇರವಾಗಿ ಇಲ್ಲಿಗೇ ಆಗಮಿಸಿದೆನು. ಭಗವಾನ್ ಶ್ರೀಹರಿಯೇ ಸ್ವಯಂ ಈ ವಿಷಯವನ್ನು ನನಗೆ ಹೇಳಿರುವನು. ಈಗ ನಾನು ಸದಾ ಅವನ ಆರಾಧನೆಯಲ್ಲಿಯೇ ತತ್ಪರನಾಗಿ ನಿಮ್ಮೊಡನೆಯೇ ಇದ್ದುಬಿಡುತ್ತೇನೆ."*

ಇ೪೩ನೆಯ ಅಧ್ಯಾಯವು ಮುಗಿಯಿತು.

ಇ೪೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನರ-ನಾರಾಯಣರು ನಾರದರನ್ನು ಪ್ರಶಂಸಿಸಿ ವಾಸುದೇವನ ಮಾಹಾತ್ಮ್ಯವನ್ನು ಹೇಳಿದುದು

ನರ-ನಾರಾಯಣರು ಹೇಳುತ್ತಾರೆ :

ಧನ್ಯೋಽಸ್ಯನುಗೃಹೀತೋಽಸಿ ಯತ್ತೇ ದೃಷ್ಟಃ ಸ್ವಯಂ ಪ್ರಭುಃ ।
ನ ಹಿ ತಂ ದೃಷ್ಟವಾನ್ಕಶ್ಚಿತ್ಪದ್ಮಯೋನಿರಪಿ ಸ್ವಯಮ್ ॥೧॥

"ನಾರದ! ನೀನು ಶ್ವೇತದ್ವೀಪಕ್ಕೆ ಹೋಗಿ ಭಗವಂತನನ್ನು ಸಾಕ್ಷಾತ್ತಾಗಿ ನೋಡಿರುವೆ. ಅವನ ದರ್ಶನವು ಸುಲಭವಾಗಿ ಲಭಿಸತಕ್ಕುದಲ್ಲ. ಆದುದರಿಂದ ನೀನೇ ಧನ್ಯನು. ಭಗವಂತನಿಂದ ಅನುಗೃಹೀತನಾಗಿರುವೆ. ನಿನ್ನೊಬ್ಬನನ್ನು ಬಿಟ್ಟು ಪದ್ಮಯೋನಿಯಾದ ಬ್ರಹ್ಮನೂ ಕೂಡ ಅವನನ್ನು ನೋಡಿರುವುದಿಲ್ಲ.

ಅವ್ಯಕ್ತಯೋನಿರ್ಭಗವಾನ್ದುರ್ದರ್ಶಃ ಪುರುಷೋತ್ತಮಃ ।
ನಾರದೈತದ್ಧಿ ನೌ ಸತ್ಯಂ ವಚನಂ ಸಮುದಾಹೃತಮ್ ॥೨॥

ನಾಸ್ಯ ಭಕ್ತಾತ್ಪ್ರಿಯತರೋ ಲೋಕೇ ಕಶ್ಚನ ವಿದ್ಯತೇ ।
ತತಃ ಸ್ವಯಂ ದರ್ಶಿತವಾನ್ಸ್ವಮಾತ್ಮಾನಂ ದ್ವಿಜೋತ್ತಮ ॥೩॥

---

*ಈ ಅಧ್ಯಾಯದಲ್ಲಿ ಜನಮೇಜಯನು ವೈಶಂಪಾಯನರ ಬದಲಾಗಿ ವ್ಯಾಸರನ್ನು ಪ್ರಶ್ನಿಸಿದನೆಂಬ ವಿಷಯವೂ ಬಂದಿದೆ. (ಶ್ಲೋ. ೭-೮) ಆದರೆ ಮುಂದೆ ವ್ಯಾಸರು ಉತ್ತರಿಸಿದರೆಂಬ ವಿಷಯವು ಬಂದಿಲ್ಲ. ವೈಶಂಪಾಯನರೇ ಉತ್ತರಿಸುತ್ತಾರೆ. (ಶ್ಲೋ. ೨೯) ಭಂಡಾರಕರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿರುವ ಪುಸ್ತಕದಲ್ಲಿ ಸೌತಿ-ಶೌನಕರ ಸಂಭಾಷಣಾಪ್ರಕರಣವು ಬರುವುದಿಲ್ಲ. ಜನಮೇಜಯ

ನಾರದ! ಭಗವಂತನಾದ ಪುರುಷೋತ್ತಮನು ಅವ್ಯಕ್ತಪ್ರಕೃತಿಗೆ ಮೂಲಕಾರಣನಾಗಿದ್ದಾನೆ. ಅವನು ಸುಲಭವಾಗಿ ನೋಡಲ್ಪಡತಕ್ಕವನಲ್ಲ. ನಾವಿಬ್ಬರೂ ನಿನಗೆ ಸತ್ಯವಾದ ಈ ಮಾತನ್ನು ಹೇಳುತ್ತಿದ್ದೇವೆ. ಲೋಕದಲ್ಲಿ ಪರಮಾತ್ಮನಿಗೆ ಭಕ್ತನಿಗಿಂತಲೂ ಪ್ರಿಯತರನು ಬೇರೆ ಯಾರೂ ಇಲ್ಲ. ಈ ಕಾರಣದಿಂದಲೇ ಅವನು ನಿನಗೆ ತಾನಾಗಿಯೇ ದರ್ಶನವನ್ನಿತ್ತನು.

ತಪೋ ಹಿ ತಪ್ಯತಸ್ತಸ್ಯ ಯತ್ಸ್ಥಾನಂ ಪರಮಾತ್ಮನಃ ।
ನ ತತ್ಸಮ್ಪ್ರಾಪ್ನುತೇ ಕಶ್ಚಿದೃತೇ ಹ್ಯಾವಾಂ ದ್ವಿಜೋತ್ತಮ ॥೪॥

ದ್ವಿಜೋತ್ತಮನೇ! ತಪಸ್ಸಿನಲ್ಲಿ ಸಂಲಗ್ನನಾಗಿರುವ ಆ ಪರಮಾತ್ಮನ ಯಾವ ಸ್ಥಾನವಿರುವುದೋ ಆ ಸ್ಥಳಕ್ಕೆ ನಮ್ಮಿಬ್ಬರ ಹೊರತಾಗಿ ಬೇರೆ ಯಾರೂ ಹೋಗಲಾರರು.

ಯಾ ಹಿ ಸೂರ್ಯಸಹಸ್ರಸ್ಯ ಸಮಸ್ತಸ್ಯ ಭವೇದ್ದ್ಯುತಿಃ ।
ಸ್ಥಾನಸ್ಯ ಸಾ ಭವೇತ್ತಸ್ಯ ಸ್ವಯಂ ತೇನ ವಿರಾಜತಾ ॥೫॥

ಒಂದು ಸಾವಿರ ಸೂರ್ಯರು ಒಟ್ಟಾಗಿ ಸೇರಿದರೆ ಯಾವ ಕಾಂತಿಯುಂಟಾಗುವುದೋ–ಅಷ್ಟೇ ಕಾಂತಿಯು ಸ್ವಯಂಪ್ರಕಾಶನಾದ ಪರಮಾತ್ಮನಿಂದ ಆ ಸ್ಥಾನಕ್ಕೆ ಉಂಟಾಗಿದೆ.

ತಸ್ಮಾದುತ್ತಿಷ್ಠತೇ ವಿಪ್ರ ದೇವಾದ್ವಿಶ್ವಭುವಃ ಪತೇಃ ।
ಕ್ಷಮಾ ಕ್ಷಮಾವತಾಂ ಶ್ರೇಷ್ಠ ಯಯಾ ಭೂಮಿಸ್ತು ಯುಜ್ಯತೇ ॥೬॥

ಕ್ಷಮಾವಂತರಲ್ಲಿ ಶ್ರೇಷ್ಠನಾದವನೇ! ವಿಶ್ವವಿಧಾತನಾದ ಬ್ರಹ್ಮನಿಗೂ ಒಡೆಯನಾದ ಆ ಪರಮೇಶ್ವರನಿಂದಲೇ ಕ್ಷಮಾಗುಣವು ಹುಟ್ಟಿದೆ. ಅಂತಹ ಕ್ಷಮಾಗುಣದೊಡನೆ ಭೂಮಿಯು ಸಂಯೋಗವನ್ನು ಹೊಂದಿದೆ. (ಆದುದ

ಉವಾಚ ಎಂಬುದರಿಂದ ಅಧ್ಯಾಯವು ಪ್ರಾರಂಭವಾಗಿ ಶೌನಕರು ಹೇಳಿರುವ ಮೊದಲನೆಯ ಶ್ಲೋಕದಲ್ಲಿ 'ಸೌತೇ' ಎಂಬುದಕ್ಕೆ ಬದಲಾಗಿ 'ಬ್ರಹ್ಮನ್' ಎಂಬುದಾಗಿದ್ದು ವೈಶಂಪಾಯನರನ್ನು ಕುರಿತು ಹೇಳಿದಂತೆಯೇ ಇದೆ. ಸರ್ವತ್ರ ವೈಶಂಪಾಯನ-ಜನಮೇಜಯರ ಸಂಭಾಷಣೆಯೇ ಬಂದಿರುವುದರಿಂದ ಈ ಪಾಠವೇ ಸಮಂಜಸವಾಗಿ ತೋರುತ್ತದೆ. ಈ ಅಧ್ಯಾಯದಲ್ಲಿಯೂ ಭೀಷ್ಮ-ಯುಧಿಷ್ಠಿರರ ಸಂವಾದವಿರುವುದಿಲ್ಲ.

ರಿಂದಲೇ ಭೂಮಿಯು ಕ್ಷಮಾಶೀಲವಾಗಿದೆ. ಭೂಮಿಗೆ 'ಕ್ಷಮಾ' ಎಂದು ಹೆಸರಾಗಿದೆ.)

ತಸ್ಮಾಚ್ಚೋತ್ತಿಷ್ಠತೇ ದೇವಾತ್ಸರ್ವಭೂತಹಿತಾದ್ರಸಃ ।
ಆಪೋ ಹಿ ತೇನ ಯುಜ್ಯನ್ತೇ ದ್ರವತ್ವಂ ಪ್ರಾಪ್ನುವನ್ತಿ ಚ ॥೭॥

ಸರ್ವಪ್ರಾಣಿಗಳಿಗೂ ಹಿತವನ್ನುಂಟುಮಾಡುವ ಆ ನಾರಾಯಣನಿಂದಲೇ ರಸವು ಪ್ರಾದುರ್ಭವಿಸಿದೆ. ಆ ರಸವು ಜಲದೊಡನೆ ಸಂಯೋಗವನ್ನು ಹೊಂದಿ ದ್ರವತ್ವವನ್ನು ಪಡೆದುಕೊಂಡಿದೆ.

ತಸ್ಮಾದೇವ ಸಮುದ್ಭೂತಂ ತೇಜೋ ರೂಪಗುಣಾತ್ಮಕಮ್ ।
ಯೇನ ಸಂಯುಜ್ಯತೇ ಸೂರ್ಯಸ್ತತೋ ಲೋಕೇ ವಿರಾಜತೇ ॥೮॥

ಆ ಶ್ರೀಹರಿಯಿಂದಲೇ ರೂಪ-ಗುಣವಿಶಿಷ್ಟವಾದ ತೇಜಸ್ಸು ಪ್ರಾದುರ್ಭವಿಸಿದೆ. ಆ ತೇಜಸ್ಸಿನೊಡನೆ ಸೂರ್ಯನು ಸಂಯೋಗವನ್ನು ಹೊಂದಿದ ಕಾರಣ ಲೋಕದಲ್ಲಿ ತೇಜೋಮಯನಾಗಿ ವಿರಾಜಿಸುತ್ತಿದ್ದಾನೆ.

ತಸ್ಮಾದ್ದೇವಾತ್ಸಮುದ್ಭೂತಃ ಸ್ಪರ್ಶಸ್ತು ಪುರುಷೋತ್ತಮಾತ್ ।
ಯೇನ ಸ್ಮ ಯುಜ್ಯತೇ ವಾಯುಸ್ತತೋ ಲೋಕಾನ್ವಿವಾತ್ಯಸೌ ॥೯॥

ಶ್ವೇತದ್ವೀಪವಾಸಿಯಾದ ಆ ಪುರುಷೋತ್ತಮನಿಂದಲೇ ಸ್ಪರ್ಶವೆಂಬ ಗುಣವು ಹುಟ್ಟಿದೆ. ಸ್ಪರ್ಶದೊಡನೆ ಸಂಯೋಗವನ್ನು ಹೊಂದಿದುದರಿಂದ ವಾಯುವು ಎಲ್ಲ ಲೋಕಗಳಲ್ಲಿಯೂ ಬೀಸುತ್ತದೆ.

ತಸ್ಮಾಚ್ಚೋತ್ತಿಷ್ಠತೇ ಶಬ್ದಃ ಸರ್ವಲೋಕೇಶ್ವರಾತ್ಪ್ರಭೋಃ ।
ಆಕಾಶಂ ಯುಜ್ಯತೇ ಯೇನ ತತಸ್ತಿಷ್ಠತ್ಯಸಂವೃತಮ್ ॥೧೦॥

ಪ್ರಭುವಾದ ಸರ್ವಲೋಕೇಶ್ವರನಾದ ಹರಿಯಿಂದಲೇ ಶಬ್ದವೂ ಪ್ರಾದುರ್ಭವಿಸಿದೆ. ಆ ಶಬ್ದದೊಡನೆ ಆಕಾಶವು ಸಂಯೋಗವನ್ನು ಹೊಂದಿರುವ ಕಾರಣ ಆಕಾಶವು ಯಾವಾಗಲೂ ಅನಾವೃತವಾಗಿಯೇ ಇರುತ್ತದೆ.

ತಸ್ಮಾಚ್ಚೋತ್ತಿಷ್ಠತೇ ದೇವಾತ್ಸರ್ವಭೂತಗತಂ ಮನಃ ।
ಚನ್ದ್ರಮಾ ಯೇನ ಸಂಯುಕ್ತಃ ಪ್ರಕಾಶಗುಣಧಾರಣಃ ॥೧೧॥

ಆ ನಾರಾಯಣನಿಂದಲೇ ಎಲ್ಲ ಪ್ರಾಣಿಗಳಲ್ಲಿಯೂ ಅಂತರ್ಗತವಾಗಿ

ರುವ ಮನಸ್ಸು ಹುಟ್ಟಿದೆ. ಆ ಮನಸ್ಸಿನೊಡನೆ ಚಂದ್ರನು ಸಂಯೋಗವನ್ನು ಹೊಂದಿ ಪ್ರಕಾಶಗುಣವನ್ನು ಹೊಂದಿರುತ್ತಾನೆ.

ಸದ್ಭೂತೋತ್ಪಾದಕಂ ನಾಮ ತತ್ಸ್ಥಾನಂ ವೇದಸಂಜ್ಞಿತಮ್ ।
ವಿದ್ಯಾಸಹಾಯೋ ಯತ್ರಾಸ್ತೇ ಭಗವಾನ್ಹವ್ಯಕವ್ಯಭುಕ್ ॥೧೨॥

ಭಗವಂತನು ಭಕ್ತರು ಕೊಡುವ ಹವ್ಯ-ಕವ್ಯಗಳನ್ನು ಉಪಭುಂಜಿಸುತ್ತಾ ವಿದ್ಯಾಶಕ್ತಿಯೊಡನಿರುವ ವೇದಸಂಜ್ಞಿತವಾದ ಸ್ಥಾನವನ್ನು 'ಸದ್ಭೂತೋತ್ಪಾದಕ'–ಎಂಬ ಹೆಸರಿನಿಂದ ಕರೆಯುತ್ತಾರೆ.

ಯೇ ಹಿ ನಿಷ್ಕಲುಷಾ ಲೋಕೇ ಪುಣ್ಯಪಾಪವಿವರ್ಜಿತಾಃ ।
ತೇಷಾಂ ವೈ ಕ್ಷೇಮಮಧ್ವಾನಂ ಗಚ್ಛತಾಂ ದ್ವಿಜಸತ್ತಮ ।
ಸರ್ವಲೋಕತಮೋಹನ್ತಾ ಆದಿತ್ಯೋ ದ್ವಾರಮುಚ್ಯತೇ ॥೧೩॥

ದ್ವಿಜಶ್ರೇಷ್ಠನೇ! ನಾರದ! ಪ್ರಪಂಚದಲ್ಲಿ ಯಾರು ಪುಣ್ಯ-ಪಾಪಗಳೆರಡರಿಂದಲೂ ರಹಿತರಾಗಿ ನಿರ್ಮಲರಾಗಿರುವರೋ, ಮಂಗಳಕರವಾದ ಮಾರ್ಗದಿಂದ ಭಗವಂತನ ಸನ್ನಿಧಾನಕ್ಕೆ ಹೋಗುವರೋ–ಅಂತಹವರಿಗೆ ಸರ್ವಲೋಕಗಳ ಕತ್ತಲೆಯನ್ನೂ ಹೋಗಲಾಡಿಸುವ ಆದಿತ್ಯನೇ (ಆದಿತ್ಯ ಮಂಡಲವೇ) ಬಾಗಿಲೆಂದು ವಿದ್ವಾಂಸರು ಹೇಳುತ್ತಾರೆ.

ಆದಿತ್ಯದಗ್ಧಸರ್ವಾಙ್ಗಾ ಅದೃಶ್ಯಾಃ ಕೇನಚಿತ್ಕ್ವಚಿತ್ ।
ಪರಮಾಣುಭೂತಾ ಭೂತ್ವಾ ತು ತಂ ದೇವಂ ಪ್ರವಿಶನ್ತ್ಯುತ ॥೧೪॥

ಜ್ಞಾನಿಗಳು ಸೂರ್ಯನಿಂದ ದಹಿಸಲ್ಪಟ್ಟ ಸರ್ವಾಂಗವುಳ್ಳವರಾಗಿ ಯಾರಿಗೂ ಎಲ್ಲಿಯೂ ಕಾಣಿಸದೇ ಪರಮಾಣುಸ್ವರೂಪರಾಗಿ ಸೂರ್ಯದೇವನನ್ನು ಪ್ರವೇಶಿಸುತ್ತಾರೆ.

ತಸ್ಮಾದಪಿ ಚ ನಿರ್ಮುಕ್ತಾ ಅನಿರುದ್ಧತನೌ ಸ್ಥಿತಾಃ ।
ಮನೋಭೂತಾಸ್ತತೋ ಭೂತ್ವಾ ಪ್ರದ್ಯುಮ್ನಂ ಪ್ರವಿಶನ್ತ್ಯುತ ॥೧೫॥

ಅನಂತರ ಅವರು ಸೂರ್ಯನಿಂದಲೂ ಹೊರಬಂದು ಅನಿರುದ್ಧನ ಶರೀರದಲ್ಲಿರುತ್ತಾರೆ. ಅವರು ಪುನಃ ಮನೋಮಯರಾಗಿ ಪ್ರದ್ಯುಮ್ನನಲ್ಲಿ ಪ್ರವೇಶಿಸುತ್ತಾರೆ.

ಪ್ರದ್ಯುಮ್ನಾಚ್ಚಾಪಿ ನಿರ್ಮುಕ್ತಾ ಜೀವಂ ಸಂಕರ್ಷಣಂ ತತಃ ।
ವಿಶನ್ತಿ ವಿಪ್ರಪ್ರವರಾಃ ಸಾಂಖ್ಯಾ ಭಾಗವತೈಃ ಸಹ ॥೧೬॥

ಸಾಂಖ್ಯಜ್ಞಾನನಿಷ್ಠರಾದ ಆ ವಿಪ್ರಶ್ರೇಷ್ಠರು ಪ್ರದ್ಯುಮ್ನರೂಪದಿಂದಲೂ ನಿರ್ಮುಕ್ತರಾಗಿ ಭಗವದ್ಭಕ್ತರೊಡನೆ ಜೀವರೂಪನಾದ ಸಂಕರ್ಷಣನನ್ನು ಪ್ರವೇಶಿಸುತ್ತಾರೆ.

ತತಸ್ತ್ರೈಗುಣ್ಯಹೀನಾಸ್ತೇ ಪರಮಾತ್ಮಾನಮಞ್ಜಸಾ ॥೧೭॥

ಪ್ರವಿಶನ್ತಿ ದ್ವಿಜಶ್ರೇಷ್ಠಾಃ ಕ್ಷೇತ್ರಜ್ಞಂ ನಿರ್ಗುಣಾತ್ಮಕಮ್ ।
ಸರ್ವಾವಾಸಂ ವಾಸುದೇವಂ ಕ್ಷೇತ್ರಜ್ಞಂ ವಿದ್ಧಿ ತತ್ತ್ವತಃ ॥೧೮॥

ಬಳಿಕ ದ್ವಿಜಶ್ರೇಷ್ಠರಾದ ಆ ಸಾಂಖ್ಯರು ಸತ್ತ್ವಾದಿ ಮೂರು ಗುಣಗಳಿಂದಲೂ ರಹಿತರಾಗಿ ನಿರ್ಗುಣಾತ್ಮಕನಾದ, ಕ್ಷೇತ್ರಜ್ಞನಾದ ಪರಮಾತ್ಮನನ್ನು ಅನಾಯಾಸವಾಗಿ ಪ್ರವೇಶಿಸುತ್ತಾರೆ. ಸರ್ವರಿಗೂ ಆಶ್ರಯಸ್ಥಾನನಾದ ವಾಸುದೇವನೇ ತತ್ತ್ವತಃ ಕ್ಷೇತ್ರಜ್ಞನೆಂಬುದನ್ನು ಸ್ಪಷ್ಟವಾಗಿ ತಿಳಿ.

ಸಮಾಹಿತಮನಸ್ಕಾಶ್ಚ ನಿಯತಾಃ ಸಂಯತೇನ್ದ್ರಿಯಾಃ ।
ಏಕಾನ್ತಭಾವೋಪಗತಾ ವಾಸುದೇವಂ ವಿಶನ್ತಿ ತೇ ॥೧೯॥

ಪರಮಾತ್ಮನಲ್ಲಿಯೇ ಏಕಾಗ್ರವಾದ ಮನಸ್ಸನ್ನು ಹೊಂದಿರುವ, ಶೌಚ-ಸಂತೋಷಾದಿ ನಿಯಮನಿಷ್ಠರಾದ, ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ, ಅನನ್ಯಭಾವದಿಂದ ಪರಮಾತ್ಮನನ್ನೇ ಶರಣು ಹೊಂದಿರುವ ಆ ಭಕ್ತರು ವಾಸುದೇವನನ್ನು ಪ್ರವೇಶಿಸುತ್ತಾರೆ.

ಆವಾಮಪಿ ಚ ಧರ್ಮಸ್ಯ ಗೃಹೇ ಜಾತೌ ದ್ವಿಜೋತ್ತಮ ।
ರಮ್ಯಾಂ ವಿಶಾಲಾಮಾಶ್ರಿತ್ಯ ತಪ ಉಗ್ರಂ ಸಮಾಸ್ಥಿತೌ ॥೨೦॥

ದ್ವಿಜಶ್ರೇಷ್ಠನೇ! ನಾವಿಬ್ಬರೂ ಧರ್ಮನ ಮನೆಯಲ್ಲಿ ಹುಟ್ಟಿದವರು. ರಮ್ಯವಾದ, ವಿಶಾಲವಾದ ಬದರಿಕಾಶ್ರಮವನ್ನು ಆಶ್ರಯಿಸಿ ಉಗ್ರವಾದ ತಪಸ್ಸಿನಲ್ಲಿ ತೊಡಗಿದ್ದೇವೆ.

ಯೇ ತು ತಸ್ಯೈವ ದೇವಸ್ಯ ಪ್ರಾದುರ್ಭಾವಾಃ ಸುರಪ್ರಿಯಾಃ ।
ಭವಿಷ್ಯನ್ತಿ ತ್ರಿಲೋಕಸ್ಥಾಸ್ತೇಷಾಂ ಸ್ವಸ್ತೀತ್ಯಥೋ ದ್ವಿಜ ॥೨೧॥

ಆ ದೇವನವೇ ಆದ, ದೇವತೆಗಳಿಗೆ ಪ್ರಿಯವಾದ ಯಾವ ಅವತಾರಗಳು ಮೂರು ಲೋಕಗಳಲ್ಲಿಯೂ ಪ್ರಾದುರ್ಭವಿಸುವುವೋ–ಅಂತಹ ಅವತಾರಗಳಿಗೆ ಮಂಗಳವಾಗಲಿ ಎಂಬುದೇ ನಮ್ಮ ಈ ತಪಸ್ಸಿನ ಉದ್ದೇಶವಾಗಿದೆ.

ವಿಧಿನಾ ಸ್ವೇನ ಯುಕ್ತಾಭ್ಯಾಂ ಯಥಾಪೂರ್ವಂ ದ್ವಿಜೋತ್ತಮ ।
ಆಸ್ಥಿತಾಭ್ಯಾಂ ಸರ್ವಕೃಚ್ಛ್ರಂ ವ್ರತಂ ಸಮ್ಯಗನುತ್ತಮಮ್ ॥೨೨॥

ಆವಾಭ್ಯಾಮಪಿ ದೃಷ್ಟಸ್ತ್ವಂ ಶ್ವೇತದ್ವೀಪೇ ತಪೋಧನ ।
ಸಮಾಗತೋ ಭಗವತಾ ಸಂಜಲ್ಪಂ ಕೃತವಾಂಸ್ತಥಾ ॥೨೩॥

ಸರ್ವಂ ಹಿ ನೌ ಸಂವಿದಿತಂ ತ್ರೈಲೋಕ್ಯೇ ಸಚರಾಚರೇ ।
ಯದ್ಭವಿಷ್ಯತಿ ವೃತ್ತಂ ವಾ ವರ್ತತೇ ವಾ ಶುಭಾಶುಭಮ್ ।
ಸರ್ವಂ ಸ ತೇ ಕಥಿತವಾನ್ದೇವದೇವೋ ಮಹಾಮುನೇ ॥೨೪॥

ದ್ವಿಜಶ್ರೇಷ್ಠನೇ! ನಾವು ಹಿಂದಿನಂತೆಯೇ ನಮ್ಮ ವಿಧ್ಯುಕ್ತವಾದ ಕರ್ಮಗಳಲ್ಲಿ ತೊಡಗಿದ್ದು ಶ್ರೇಷ್ಠವಾದ ಸರ್ವಕೃಚ್ಛ್ರವೆಂಬ ವ್ರತವನ್ನು ಆಶ್ರಯಿಸಿದ್ದೇವೆ. ತಪೋಧನನೇ! ಆ ಶ್ವೇತದ್ವೀಪದಲ್ಲಿ ನಾವೂ ನಿನ್ನನ್ನು ನೋಡಿದೆವು. ನೀನು ಮಾಡಿದ ಸ್ತೋತ್ರಕ್ಕೆ ಪ್ರಸನ್ನನಾಗಿ ಭಗವಂತನು ಸಾಕ್ಷಾತ್ತಾಗಿ ಬಂದು ನಿನ್ನೊಡನೆ ಮಾತನಾಡಿದನು. ಆ ಎಲ್ಲ ವಿಷಯಗಳೂ ನಮಗೆ ತಿಳಿದಿವೆ. ಸ್ಥಾವರ-ಜಂಗಮಗಳಿಂದ ಯುಕ್ತವಾಗಿರುವ ಮೂರು ಲೋಕಗಳಲ್ಲಿಯೂ ಹಿಂದೆ ನಡೆದುದು, ಈಗ ನಡೆಯುತ್ತಿರುವುದು ಮತ್ತು ಮುಂದೆ ನಡೆಯುವುದು, ಆ ಸಮಯಗಳಲ್ಲಾಗುವ ಶುಭಾಶುಭಕರ್ಮಗಳು–ಈ ಎಲ್ಲ ವಿಷಯಗಳನ್ನೂ ದೇವದೇವನಾದ ಶ್ರೀಹರಿಯು ನಿನಗೆ ಹೇಳಿದನು."

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಕಠೋರವಾದ ತಪಸ್ಸಿನಲ್ಲಿ ತೊಡಗಿದ್ದ ನರ-ನಾರಾಯಣರ ಆ ಮಾತಗಳನ್ನು ಕೇಳಿ ನಾರದರು-ನಾರಾಯಣಪರಾಯಣರಾಗಿ ನರ-ನಾರಾಯಣಾಶ್ರಮದಲ್ಲಿ ದಿವ್ಯಸಹಸ್ರವರ್ಷಗಳ ಪರ್ಯಂತವಾಗಿ ಅನೇಕಮಂತ್ರಗಳನ್ನು ವಿಧಿವತ್ತಾಗಿ ಪುನಶ್ಚರಣೆಮಾಡಿದರು. ಮಹಾ

ತೇಜಸ್ವಿಗಳಾದ, ಪೂಜ್ಯರಾದ ನಾರದರ್ಷಿಗಳು ಶ್ವೇತದ್ವೀಪನಿವಾಸಿಯಾದ ಶ್ರೀಮನ್ನಾರಾಯಣನನ್ನೂ ಮತ್ತು ನರ-ನಾರಾಯಣರನ್ನೂ ಆರಾಧಿಸುತ್ತಾ ಆ ಬದರಿಕಾಶ್ರಮದಲ್ಲಿಯೇ ಬಹಳ ಕಾಲದವರೆಗೆ ವಾಸವಾಗಿದ್ದರು."

ಮುನ್ನೂರನಲವತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

೩೪೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವರಾಹಸ್ವಾಮಿಯು ಪಿತೃಪೂಜೆಯನ್ನು ನಿಯಮಗೊಳಿಸಿದುದು

ವೈಶಂಪಾಯನರು ಮುಂದುವರಿಸಿ ಹೇಳುತ್ತಾರೆ :

ಕಸ್ಯಚಿತ್ತ್ವಥ ಕಾಲಸ್ಯ ನಾರದಃ ಪರಮೇಷ್ಠಿಜಃ ।
ದೈವಂ ಕೃತ್ವಾ ಯಥಾನ್ಯಾಯಂ ಪಿತ್ರ್ಯಂ ಚಕ್ರೇ ತತಃ ಪರಮ್ ॥೧॥

"ಜನಮೇಜಯ! ಒಂದಾನೊಂದು ಸಮಯದಲ್ಲಿ ಬ್ರಹ್ಮನ ಮಾನಸ ಪುತ್ರರಾದ ನಾರದರು ಶಾಸ್ತ್ರವಿಧಿಗೆ ಅನುಸಾರವಾಗಿ ಮೊದಲು ದೇವ ಕಾರ್ಯವನ್ನು (ಹವನ-ಪೂಜೆಗಳನ್ನು) ಮಾಡಿ ಅನಂತರ ಪಿತೃಕಾರ್ಯವನ್ನು (ಶ್ರಾದ್ಧ-ತರ್ಪಣಾದಿಗಳನ್ನು) ಮಾಡಿದರು. ಆ ಸಮಯದಲ್ಲಿ ಧರ್ಮನ ಜ್ಯೇಷ್ಠಪುತ್ರನಾದ ನಾರಾಯಣನು ನಾರದರನ್ನು ಪ್ರಶ್ನಿಸಿದನು :

ಕ ಇಜ್ಯತೇ ದ್ವಿಜಶ್ರೇಷ್ಠ ದೈವೇ ಪಿತ್ರ್ಯೇ ಚ ಕಲ್ಪಿತೇ ।
ತ್ವಯಾ ಮತಿಮತಾಂ ಶ್ರೇಷ್ಠ ತನ್ಮೇ ಶಂಸ ಯಥಾಗಮಮ್ ।
ಕಿಮೇತತ್ಕ್ರಿಯತೇ ಕರ್ಮ ಫಲಂ ವಾಸ್ಯ ಕಿಮಿಷ್ಯತೇ ॥೨॥

"ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ನೀನು ದೇವಕಾರ್ಯ-ಪಿತೃ ಕಾರ್ಯಗಳೆರಡನ್ನೂ ಮಾಡಿರುವೆ. ಈ ಕರ್ಮಗಳಿಂದ ಯಾರನ್ನು ಪೂಜಿಸಿದಂತಾಗುತ್ತದೆ? ಈ ಕರ್ಮಗಳನ್ನು ಏಕೆ ಮಾಡಬೇಕು? ಇವುಗಳಿಂದ ಪ್ರಾಪ್ತವಾಗುವ ಫಲವು ಯಾವುದು? ಈ ವಿಷಯವನ್ನು ನೀನು ಶಾಸ್ತ್ರದಲ್ಲಿ ಹೇಳಿರುವಂತೆ ಹೇಳು."

ನಾರದರು ಹೇಳುತ್ತಾರೆ :

ತ್ವಯ್ಯೈತತ್ಕಥಿತಂ ಪೂರ್ವಂ ದೈವಂ ಕರ್ತವ್ಯಮಿತ್ಯಪಿ ।
ದೈವತಂ ಚ ಪರೋ ಯಜ್ಞಃ ಪರಮಾತ್ಮಾ ಸನಾತನಃ ॥೪॥

"ಭಗವನ್! ದೇವಕಾರ್ಯವನ್ನು ಮಾಡುವುದು ಪ್ರತಿಯೊಬ್ಬನ ಕರ್ತವ್ಯವೂ ಆಗಿದೆಯೆಂದು ಹಿಂದೆ ನೀನೇ ನನಗೆ ಹೇಳಿರುವೆ. ದೇವಕಾರ್ಯವೇ ಪರಮಶ್ರೇಷ್ಠವಾದ ಯಜ್ಞ. ಆ ಯಜ್ಞವೇ ಸನಾತನನಾದ ಪರಮಾತ್ಮನ ಸ್ವರೂಪವಾಗಿದೆ.

ತತಸ್ತದ್ಭಾವಿತೋ ನಿತ್ಯಂ ಯಜೇ ವೈಕುಣ್ಠಮವ್ಯಯಮ್ ।
ತಸ್ಮಾಚ್ಚ ಪ್ರಸೃತಃ ಪೂರ್ವಂ ಬ್ರಹ್ಮಾ ಲೋಕಪಿತಾಮಹಃ ॥೫॥

ನಿನ್ನ ಆ ಉಪದೇಶದಿಂದಲೇ ಪ್ರಭಾವಿತನಾದ ನಾನು ಪ್ರತಿನಿತ್ಯವೂ ಅವಿನಾಶಿಯಾದ, ಶಾಶ್ವತನಾದ ವೈಕುಂಠನನ್ನು ಪೂಜಿಸುತ್ತೇನೆ. ಆ ವೈಕುಂಠನಿಂದಲೇ ಮೊದಲು ಲೋಕಪಿತಾಮಹನಾದ ಬ್ರಹ್ಮನು ಹುಟ್ಟಿದನು.

ಮಮ ವೈ ಪಿತರಂ ಪ್ರೀತಃ ಪರಮೇಷ್ಠ್ಯಪ್ಯಜೀಜನತ್ ।
ಅಹಂ ಸಂಕಲ್ಪಜಸ್ತಸ್ಯ ಪುತ್ರಃ ಪ್ರಥಮಕಲ್ಪಿತಃ ॥೬॥

ಪರಮೇಷ್ಠೀಪರಬ್ರಹ್ಮನು ಸುಪ್ರೀತನಾಗಿ ನನ್ನ ತಂದೆಯಾದ ಪ್ರಜಾಪತಿಯನ್ನು ಪುತ್ರನನ್ನಾಗಿ ಪಡೆದುಕೊಂಡನು. ನಾನು ಅವನಿಗೆ ಸಂಕಲ್ಪದಿಂದಲೇ ಹುಟ್ಟಿದ ಮೊದಲನೆಯ ಮಗನಾಗಿದ್ದೇನೆ.

ಯಜಾಮಿ ವೈ ಪಿತೄನ್ಸಾಧೋ ನಾರಾಯಣವಿಧೌ ಕೃತೇ ।
ಏವಂ ಸ ಏವ ಭಗವಾನ್ಪಿತಾ ಮಾತಾ ಪಿತಾಮಹಃ ॥೭॥

ನಾನು ಮೊದಲು ನಾರಾಯಣನ ಆರಾಧನೆಯನ್ನು ಮಾಡಿದನಂತರ ಪಿತೃಗಳ ಪೂಜೆಯನ್ನು ಮಾಡುತ್ತೇನೆ. ಹೀಗೆ ಆ ಭಗವಂತನೇ ನನಗೆ ತಂದೆ, ತಾಯಿ ಮತ್ತು ಅಜ್ಜನೂ ಆಗಿದ್ದಾನೆ.

ಇಜ್ಯತೇ ಪಿತೃಯಜ್ಞೇಷು ತಥಾ ನಿತ್ಯಂ ಜಗತ್ಪತಿಃ ।
ಶ್ರುತಿಶ್ಚಾಪ್ಯಪರಾ ದೇವೀ ಪುತ್ರಾನ್ಹಿ ಪಿತರೋಽಜಯನ್ ॥೮॥

ಪಿತೃಯಜ್ಞಗಳಲ್ಲಿಯೂ (ಶ್ರಾದ್ಧ-ತರ್ಪಣಾದಿಗಳಲ್ಲಿಯೂ) ಶ್ರೀಹರಿಯೇ ಆರಾಧಿಸಲ್ಪಡುತ್ತಾನೆ. ಪಿತೃದೇವತೆಗಳೇ ಅಗ್ನಿಷ್ವಾತ್ತಾದಿ ಮಕ್ಕಳನ್ನು ಪೂಜಿಸಿದರೆಂದು ಮತ್ತೊಂದು ಶ್ರುತಿಯು ಹೇಳುತ್ತದೆ.

ವೇದಶ್ರುತಿಃ ಪ್ರಣಷ್ಟಾ ಚ ಪುನರಧ್ಯಾಪಿತಾ ಸುತೈಃ ।
ತತಸ್ತೇ ಮನ್ತ್ರದಾಃ ಪುತ್ರಾಃ ಪಿತೃತ್ವಮುಪಪೇದಿರೇ ॥೯॥

ದೇವತೆಗಳು ಅಸುರರೊಡನೆ ಬಹಳ ಕಾಲ ಯುದ್ಧದಲ್ಲಿ ತೊಡಗಿದ್ದುದರಿಂದ ಹಿಂದೆ ಕಲಿತಿದ್ದ ವೇದವು ಅವರಿಗೆ ಮರೆತುಹೋಯಿತು. ಆಗ ದೇವತೆಗಳು ಪುನಃ ವೇದಗಳನ್ನು ತಮ್ಮ ಮಕ್ಕಳಾದ ಅಗ್ನಿಷ್ವಾತ್ತಾದಿಗಳಿಂದ ಕಲಿತರು. ಆಗ ಅಗ್ನಿಷ್ವಾತ್ತಾದಿಗಳು ತಮ್ಮ ತಂದೆಗಳಿಗೇ ಮಂತ್ರೋಪದೇಶಕರಾದರು. ಆದುದರಿಂದ ಪಿತೃತ್ವವನ್ನು ಹೊಂದಿದರು.

ನೂನಂ ಪುರೈತದ್ವಿದಿತಂ ಯುವಯೋರ್ಭಾವಿತಾತ್ಮನೋಃ ।
ಪುತ್ರಾಶ್ಚ ಪಿತರಶ್ಚೈವ ಪರಸ್ಪರಮಪೂಜಯನ್ ॥೧೦॥

ತ್ರೀನ್ಪಿಣ್ಡಾನ್ನ್ಯಸ್ಯ ವೈ ಪೃಥ್ವ್ಯಾಂ ಪೂರ್ವಂ ದತ್ತ್ವಾ ಕುಶಾನಿತಿ ।
ಕಥಂ ತು ಪಿಣ್ಡಸಂಜ್ಞಾಂ ತೇ ಪಿತರೋ ಲೇಭಿರೇ ಪುರಾ ॥೧೧॥

ತಂದೆ-ಮಕ್ಕಳು ಪರಸ್ಪರವಾಗಿ ಪೂಜೆಮಾಡಿದರೆಂಬ ವಿಷಯವು ಪವಿತ್ರಾತ್ಮರಾದ ನಿಮಗೆ ಈ ಹಿಂದೆಯೇ ನಿಶ್ಚಯವಾಗಿಯೂ ತಿಳಿದಿದ್ದಿತು. ದೇವತೆಗಳು ಮೊದಲು ನೆಲದ ಮೇಲೆ ದರ್ಭೆಗಳನ್ನು ಹಾಸಿ ಅನಂತರ ಅವುಗಳ ಮೇಲೆ ಮೂರು ಪಿಂಡಗಳನ್ನಿಟ್ಟು ಪೂಜಿಸುತ್ತಿದ್ದುದರ ಕಾರಣವೇನು? ಹಿಂದೆ ಪಿತೃಗಳು ಪಿಂಡಸಂಜ್ಞೆಯನ್ನು ಹೇಗೆ ಪಡೆದರು?”

ನರ-ನಾರಾಯಣರು ಹೇಳುತ್ತಾರೆ :

ಇಮಾಂ ಹಿ ಧರಣೀಂ ಪೂರ್ವಂ ನಷ್ಟಾಂ ಸಾಗರಮೇಖಲಾಮ್ ।
ಗೋವಿನ್ದ ಉಜ್ಜಹಾರಾಶು ವಾರಾಹಂ ರೂಪಮಾಸ್ಥಿತಃ ॥೧೨॥

“ನಾರದ! ಗೋವಿಂದನು ಹಿಂದೆ ನಷ್ಟವಾಗಿ ಹೋಗಿದ್ದ, ಸಾಗರ

ಗಳಿಂದ ಸುತ್ತುವರಿಯಲ್ಪಟ್ಟಿರುವ ಈ ಭೂಮಿಯನ್ನು ವರಾಹರೂಪವನ್ನು ಧರಿಸಿ ಬಹಳ ಬೇಗ ಮೇಲಕ್ಕೆತ್ತಿದನು.

ಸ್ಥಾಪಯಿತ್ವಾ ತು ಧರಣೀಂ ಸ್ವೇ ಸ್ಥಾನೇ ಪುರುಷೋತ್ತಮಃ ।
ಜಲಕರ್ದಮಲಿಪ್ತಾಙ್ಗೋ ಲೋಕಕಾರ್ಯಾರ್ಥಮುದ್ಯತಃ ॥೧೩॥

ಲೋಕಹಿತದ ಕಾರ್ಯವನ್ನು ಆರಂಭಿಸಿದ ಪುರುಷೋತ್ತಮನು ಭೂಮಿಯನ್ನು ಸ್ವಸ್ಥಾನದಲ್ಲಿ ಸ್ಥಾಪಿಸಿ, ನೀರಿನಲ್ಲಿರುವ ಕೆಸರಿನಿಂದಲೂ ಲಿಪ್ತವಾದ ಅಂಗಗಳಿಂದ ಕೂಡಿದವನಾದನು.

ಪ್ರಾಪ್ತೇ ಚಾಹ್ನಿಕಕಾಲೇ ತು ಮಧ್ಯದೇಶಗತೇ ರವೌ ।
ದಂಷ್ಟ್ರಾವಿಲಗ್ನಾಂಸ್ತ್ರೀನ್ಪಿಣ್ಡಾನ್ವಿಧಾಯ ಸಹಸಾ ಪ್ರಭುಃ ॥೧೪॥

ಸ್ಥಾಪಯಾಮಾಸ ವೈ ಪೃಥ್ವ್ಯಾಂ ಕುಶಾನಾಸ್ತೀರ್ಯ ನಾರದ ।
ಸ ತೇಷ್ವಾತ್ಮಾನಮುದ್ದಿಶ್ಯ ಪಿತ್ರ್ಯಂ ಚಕ್ರೇ ಯಥಾವಿಧಿ ॥೧೫॥

ಸೂರ್ಯನು ಹಗಲಿನ ಮಧ್ಯಭಾಗಕ್ಕೆ ಬಂದು ಮಾಧ್ಯಾಹ್ನಿಕದ ಕಾಲವು ಪ್ರಾಪ್ತವಾಗಲು, ವರಾಹಮೂರ್ತಿಯು ತನ್ನ ಕೋರೆಹಲ್ಲುಗಳಿಗೆ ಮೆತ್ತಿಕೊಂಡಿದ್ದ ಮಣ್ಣಿನಿಂದ ಮೂರು ಪಿಂಡಗಳನ್ನು ಮಾಡಿದನು. ಅನಂತರ ನೆಲದ ಮೇಲೆ ದರ್ಭೆಗಳನ್ನು ಹಾಸಿ ಅದರ ಮೇಲೆ ಆ ಮೂರು ಪಿಂಡಗಳನ್ನೂ ಸ್ಥಾಪಿಸಿದನು. ಬಳಿಕ ಅವನು ತನ್ನನ್ನೇ ಉದ್ದೇಶಿಸಿ (ಆತ್ಮಾರ್ಥವಾಗಿಯೇ) ಆ ಪಿಂಡಗಳಲ್ಲಿ ಪಿತೃಗಳನ್ನು ಆವಾಹನೆಮಾಡಿ ಯಥಾವಿಧಿಯಾಗಿ ಸಂಪೂಜಿಸಿದನು.

ಸಂಕಲ್ಪಯಿತ್ವಾ ತ್ರೀನ್ಪಿಣ್ಡಾನ್ಸ್ವೇನೈವ ವಿಧಿನಾ ಪ್ರಭುಃ ।
ಆತ್ಮಗಾತ್ರೋಷ್ಮಸಮ್ಭೂತೈಃ ಸ್ನೇಹಗರ್ಭೈಸ್ತಿಲೈರಪಿ ॥೧೬॥

ಪ್ರೋಕ್ಷ್ಯಾಪಸವ್ಯಂ ದೇವೇಶಃ ಪ್ರಾಙ್ಮುಖಃ ಕೃತವಾನ್ಸ್ವಯಮ್ ।
ಮರ್ಯಾದಾಸ್ಥಾಪನಾರ್ಥಂ ಚ ತತೋ ವಚನಮುಕ್ತವಾನ್ ॥೧೭॥

ಪ್ರಭುವಾದ, ದೇವೇಶನಾದ ವರಾಹಮೂರ್ತಿಯು ತನ್ನದೇ ಆದ ವಿಧಿಯಿಂದ ಸಂಕಲ್ಪಮಾಡಿ ತನ್ನ ಶರೀರಶಾಖದಿಂದ ಹುಟ್ಟಿದ, ಎಣ್ಣೆಯಿಂದ ಕೂಡಿದ ಎಳ್ಳುಗಳಿಂದ ಮೂರು ಪಿಂಡಗಳನ್ನೂ ಅಪ್ರದಕ್ಷಿಣವಾಗಿ ಪ್ರೋಕ್ಷಿಸಿ

ದನು. ಪಿಂಡಪೂಜೆಯ ವಿಷಯದಲ್ಲಿ ಒಂದು ನಿಯಮವನ್ನು ಸ್ಥಾಪಿಸುವ ಸಲುವಾಗಿ ಪೂರ್ವಾಭಿಮುಖವಾಗಿ ಕುಳಿತು ವರಾಹಮೂರ್ತಿಯು ಈ ಮಾತುಗಳನ್ನು ಹೇಳಿದನು :

ಅಹಂ ಹಿ ಪಿತರಃ ಸ್ರಷ್ಟುಮುದ್ಯತೋ ಲೋಕಕೃತ್ಸ್ನಯಮ್ ।
ಯಸ್ಯ ಚಿನ್ತಯತಃ ಸದ್ಯಃ ಪಿತೃಕಾರ್ಯವಿಧೀನ್ಪರಾನ್ ॥೧೮॥

ದಂಷ್ಟ್ರಾಭ್ಯಾಂ ಪ್ರವಿನಿರ್ಧೂತಾ ಮಮೈತೇ ದಕ್ಷಿಣಾಂ ದಿಶಮ್ ।
ಆಶ್ರಿತಾ ಧರಣೀಂ ಪಿಣ್ಡಾಸ್ತಸ್ಮಾತ್ಪಿತರ ಏವ ತೇ ॥೧೯॥

"ನಾನೇ ಎಲ್ಲ ಲೋಕಗಳ ಸೃಷ್ಟಿಕರ್ತೃವೂ ಆಗಿದ್ದೇನೆ. ನಾನು ಯಾವಾಗ ಪಿತೃದೇವತೆಗಳನ್ನು ಸೃಷ್ಟಿಸಲು ಪ್ರಾರಂಭಿಸಿದೆನೋ ಮತ್ತು ಇತರ ಪಿತೃಕಾರ್ಯವಿಧಿಗಳನ್ನು ಯೋಚಿಸುತ್ತಿದ್ದೆನೋ–ಆ ಕ್ಷಣದಲ್ಲಿಯೇ ನನ್ನ ಕೋರೆಹಲ್ಲುಗಳಿಂದ ಮೂರು ಪಿಂಡಗಳು ದಕ್ಷಿಣದಿಕ್ಕಿನೆಡೆಗೆ ಭೂಮಿಯ ಮೇಲೆ ಬಿದ್ದುವು. ಆದುದರಿಂದ ಈ ಮೂರು ಪಿಂಡಗಳೂ ಪಿತೃಸ್ವರೂಪಗಳೇ ಆದುವು.

ತ್ರಯೋ ಮೂರ್ತಿವಿಹೀನಾ ವೈ ಪಿಣ್ಡಮೂರ್ತಿಧರಾಸ್ತ್ವಿಮೇ ।
ಭವನ್ತು ಪಿತರೋ ಲೋಕೇ ಮಯಾ ಸೃಷ್ಟಾಃ ಸನಾತನಾಃ ॥೨೦॥

ಅಮೂರ್ತರಾದ ಪಿತೃಗಳು ಪಿಂಡಾಕಾರವನ್ನು ಧರಿಸಿರುತ್ತಾರೆ. ನನ್ನಿಂದ ಸೃಷ್ಟಿಸಲ್ಪಟ್ಟ ಪಿಂಡರೂಪದಲ್ಲಿರುವ ಈ ಮೂವರೂ ಸನಾತನ ಪಿತೃಗಳಾಗಲಿ.

ಪಿತಾ ಪಿತಾಮಹಶ್ಚೈವ ತಥೈವ ಪ್ರಪಿತಾಮಹಃ ।
ಅಹಮೇವಾತ್ರ ವಿಜ್ಞೇಯಸ್ತ್ರಿಷು ಪಿಣ್ಡೇಷು ಸಂಸ್ಥಿತಃ ॥೨೧॥

ಈ ಮೂರು ಪಿಂಡಗಳೂ ಪಿತೃ-ಪಿತಾಮಹ-ಪ್ರಪಿತಾಮಹ ರೂಪವಾಗಿವೆ. ಈ ಮೂರು ಪಿಂಡಗಳಲ್ಲಿಯೂ ಅವರ ರೂಪಿನಿಂದ ನಾನೇ ಇದ್ದೇನೆ.

ನಾಸ್ತಿ ಮತ್ತೋಽಧಿಕಃ ಕಶ್ಚಿತ್ಕೋವಾನ್ಯೋಽರ್ಚ್ಯೋ ಮಯಾ ಸ್ವಯಮ್ ।

ಕೋ ವಾ ಮಮ ಪಿತಾ ಲೋಕೇ ಅಹಮೇವ ಪಿತಾಮಹಃ ।
ಪಿತಾಮಹಪಿತಾ ಚೈವ ಅಹಮೇವಾತ್ರ ಕಾರಣಮ್ ॥೨೨॥

ಈ ವಿಶ್ವದಲ್ಲಿ ನನ್ನಿಂದ ಅಧಿಕನಾದವನು ಯಾರೂ ಇಲ್ಲ. ಸಾಕ್ಷಾತ್ ನನ್ನಿಂದಲೇ ಪೂಜೆಮಾಡಲ್ಪಡುವವನು ಯಾವನಿದ್ದಾನೆ? ಈ ಪ್ರಪಂಚದಲ್ಲಿ ನನಗೆ ತಂದೆಯು ಯಾರು? ಎಲ್ಲರಿಗೂ ನಾನೇ ಪಿತಾಮಹನಾಗಿದ್ದೇನೆ. ಪಿತಾಮಹನಿಗೂ ನಾನು ತಂದೆಯಾಗಿದ್ದೇನೆ. ಈ ಜಗತ್ತಿಗೇ ನಾನು ಕಾರಣನಾಗಿದ್ದೇನೆ."

ನಾರದ! ದೇವದೇವನಾದ ವೃಷಾಕಪಿಯಾದ ವರಾಹಸ್ವಾಮಿಯು ಹೀಗೆ ಹೇಳಿ ಆ ವರಾಹಪರ್ವತದಲ್ಲಿ ವಿಧಿಪೂರ್ವಕವಾಗಿ ವಿಸ್ತಾರವಾದ ಪಿಂಡಪ್ರದಾನಮಾಡಿ ಆ ಪಿಂಡಪಿತೃಪೂಜನದ ಮೂಲಕವಾಗಿ ತನ್ನನ್ನೇ ಪೂಜಿಸಿಕೊಂಡು ಅದೃಶ್ಯನಾದನು. ಹೀಗೆ ವರಾಹಸ್ವಾಮಿಯು ಪಿಂಡಗಳ ಮೂಲಕವಾಗಿ ಪಿತೃಗಳ ಪೂಜೆಯನ್ನು ವಿಧಿಸಿರುತ್ತಾನೆ. ಪಿತೃಗಳು ಪಿಂಡ ಸಂಜ್ಞರಾಗಿರುತ್ತಾರೆ. ವೃಷಾಕಪಿಯ (ವರಾಹಸ್ವಾಮಿಯ) ಮಾತಿನಂತೆ ಪಿತೃದೇವತೆಗಳು ಪಿಂಡಗಳ ಮೂಲಕವಾಗಿ ನಿತ್ಯವೂ ಪೂಜಿಸಲ್ಪಡುತ್ತಾರೆ.

ಯೇ ಯಜನ್ತಿ ಪಿತೄನ್ದೇವಾನ್ಗುರೂಂಶ್ಚೈವಾತಿಥೀಂಸ್ತಥಾ ।
ಗಾಶ್ಚೈವ ದ್ವಿಜಮುಖ್ಯಾಂಶ್ಚ ಪೃಥಿವೀಂ ಮಾತರಂ ಯಥಾ ॥೨೬॥

ಕರ್ಮಣಾ ಮನಸಾ ವಾಚಾ ವಿಷ್ಣುಮೇವ ಯಜನ್ತಿ ತೇ ।
ಅನ್ತರ್ಗತಃ ಸ ಭಗವಾನ್ಸರ್ವಸತ್ತ್ವಶರೀರಗಃ ॥೨೭॥

ಯಾರು ಕರ್ಮ, ಮನಸ್ಸು ಮತ್ತು ಮಾತುಗಳಿಂದ –ಪಿತೃಗಳನ್ನೂ, ದೇವತೆಗಳನ್ನೂ, ಗುರುಜನರನ್ನೂ, ಅತಿಥಿಗಳನ್ನೂ, ಗೋವುಗಳನ್ನೂ, ಬ್ರಾಹ್ಮಣಶ್ರೇಷ್ಠರನ್ನೂ, ಪೃಥ್ವಿಯನ್ನೂ, ತಾಯಿಯನ್ನೂ ಆರಾಧಿಸುವರೋ ಅವರು ವಿಷ್ಣುವನ್ನೇ ಪೂಜಿಸುತ್ತಾರೆ. ಹೇಗೆಂದರೆ : ಭಗವಂತನಾದ ಮಹಾವಿಷ್ಣುವು ಎಲ್ಲ ಪ್ರಾಣಿಗಳ ಶರೀರಗಳಲ್ಲಿಯೂ ಅಂತರ್ಗತನಾಗಿದ್ದಾನೆ. ಆದುದರಿಂದ ಪಿತೃದೇವತೆಗಳೇ ಮೊದಲಾದವರಿಗೆ ಮಾಡಿದ ಪೂಜೆಯು ಅವರ ಅಂತರಂಗದಲ್ಲಿರುವ ವಿಷ್ಣುವಿಗೇ ಸೇರುತ್ತದೆ.

ಸಮಃ ಸರ್ವೇಷು ಭೂತೇಷು ಈಶ್ವರಃ ಸುಖದುಃಖಯೋಃ ।
ಮಹಾನ್ಮಹಾತ್ಮಾ ಸರ್ವಾತ್ಮಾ ನಾರಾಯಣ ಇತಿ ಶ್ರುತಿಃ ॥೨೮॥

ಸುಖ-ದುಃಖಗಳೆರಡಕ್ಕೂ ಸ್ವಾಮಿಯಾದ ಶ್ರೀಹರಿಯು ಸಮಸ್ತ ಪ್ರಾಣಿಗಳಲ್ಲಿಯೂ ಸಮಸ್ವರೂಪಿಯಾಗಿದ್ದಾನೆ. ಆತನು ಮಹಾಮಹಾತ್ಮನೆಂದೂ–ಸರ್ವಾತ್ಮನೆಂದೂ ಶ್ರುತಿಯು ಹೇಳುತ್ತದೆ.”

ಮೂರುನೂರಾನಲ್ವತ್ತೈದನೆಯ ಅಧ್ಯಾಯವು ಮುಗಿಯಿತು.

೩೪೬ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾರಾಯಣನ ಮಾಹಾತ್ಮ್ಯಕಥನದ ಉಪಸಂಹಾರ

ವೈಶಂಪಾಯನರು ಹೇಳುತ್ತಾರೆ :

ಶ್ರುತ್ವೈತನ್ನಾರದೋ ವಾಕ್ಯಂ ನರನಾರಾಯಣೇರಿತಮ್ ।
ಅತ್ಯನ್ತಂ ಭಕ್ತಿಮಾನ್ದೇವೇ ಏಕಾನ್ತಿತ್ವಮುಪೇಯಿವಾನ್ ॥೧॥

“ಜನಮೇಜಯ! ನರ-ನಾರಾಯಣರು ಹೇಳಿದ ಆ ಮಾತನ್ನು ಕೇಳಿ ನಾರದರು ದೇವದೇವನಾದ ಶ್ರೀಮನ್ನಾರಾಯಣನಲ್ಲಿ ಅತ್ಯಂತಭಕ್ತಿಯುಳ್ಳವರಾದರು ಮತ್ತು ನಾರಾಯಣನ ಅನನ್ಯಭಕ್ತರಾದರು. (ಪರಮೈಕಾನ್ತಿಗಳಾದರು.)

ನಾರದರು ನರ-ನಾರಾಯಣಾಶ್ರಮದಲ್ಲಿ ಅನುದಿನವೂ ಭಗವತ್ಕಥೆಗಳನ್ನು ಕೇಳುತ್ತಾ, ಅವಿನಾಶಿಯಾದ ಶ್ರೀಹರಿಯನ್ನು ಸಂದರ್ಶಿಸುತ್ತಾ, ಒಂದು ಸಾವಿರ ವರ್ಷಗಳವರೆಗೆ ವಾಸವಾಗಿದ್ದರು. ಅನಂತರ ತಮ್ಮದೇ ಆದ ಆಶ್ರಮವಿದ್ದ ಹಿಮವತ್ಪರ್ವತಕ್ಕೆ ಶೀಘ್ರವಾಗಿ ಹೊರಟುಹೋದರು. ಖ್ಯಾತತಪಸ್ವಿಗಳಾದ ನರ-ನಾರಾಯಣರ್ಷಿಗಳೂ ರಮಣೀಯವಾದ ಆ ಬದರಿಕಾಶ್ರಮದಲ್ಲಿಯೇ ಶ್ರೇಷ್ಠವಾದ ತಪಸ್ಸಿನಲ್ಲಿ ಪುನಃ ತೊಡಗಿದರು.

ಜನಮೇಜಯ! ಪಾಂಡವರ ಪವಿತ್ರವಾದ ಕುಲದಲ್ಲಿ ಹುಟ್ಟಿರುವ ಮಹಾಪರಾಕ್ರಮಿಯಾದ ನೀನು ಕೂಡ ನಾರಾಯಣನ ಮಾಹಾತ್ಮ್ಯವನ್ನು ಮೊದಲಿನಿಂದಲೂ ಕೇಳಿ ಪವಿತ್ರಾತ್ಮನಾಗಿರುವೆ.

ನೈವ ತಸ್ಯಾಪರೋ ಲೋಕೋ ನಾಯಂ ಪಾರ್ಥಿವಸತ್ತಮ ।
ಕರ್ಮಣಾ ಮನಸಾ ವಾಚಾ ಯೋ ದ್ವಿಷ್ಯಾದ್ವಿಷ್ಣುಮವ್ಯಯಮ್ ॥೫॥

ಯಾವನು ಕರ್ಮದಿಂದಲೂ, ಮನಸ್ಸಿನಿಂದಲೂ ಮತ್ತು ಮಾತಿನಿಂದಲೂ ಅವಿನಾಶಿಯಾದ ವಿಷ್ಣುವನ್ನು ದ್ವೇಷಿಸುವನೋ–ಅಂತಹವನಿಗೆ ಪರಲೋಕವೂ ಇಲ್ಲ ; ಈ ಲೋಕದಲ್ಲಿಯೂ ಸುಖವಾಗಿರಲು ಸಾಧ್ಯವಾಗುವುದಿಲ್ಲ. ಅವನು ಇಹ-ಪರಗಳೆರಡರಿಂದಲೂ ಭ್ರಷ್ಟನಾಗುತ್ತಾನೆ.

ಮಜ್ಜನ್ತಿ ಪಿತರಸ್ತಸ್ಯ ನರಕೇ ಶಾಶ್ವತೀಃ ಸಮಾಃ ।
ಯೋ ದ್ವಿಷ್ಯಾದ್ವಿಬುಧಶ್ರೇಷ್ಠಂ ದೇವಂ ನಾರಾಯಣಂ ಹರಿಮ್ ॥೬॥

ಯಾವನು ದೇವಶ್ರೇಷ್ಠನಾದ ಹರಿನಾರಾಯಣದೇವನನ್ನು ದ್ವೇಷಿಸುವನೋ–ಅವನ ಪಿತೃಗಳು ಶಾಶ್ವತವಾಗಿ ನರಕದಲ್ಲಿಯೇ ಮುಳುಗಿರುತ್ತಾರೆ.

ಕಥಂ ನಾಮ ಭವೇದ್ದ್ವೇಷ್ಯ ಆತ್ಮಾ ಲೋಕಸ್ಯ ಕಸ್ಯಚಿತ್ ।
ಆತ್ಮಾ ಹಿ ಪುರುಷವ್ಯಾಘ್ರ ಜ್ಞೇಯೋ ವಿಷ್ಣುರಿತಿ ಸ್ಥಿತಿಃ ॥೭॥

ಪುರುಷವ್ಯಾಘ್ರನೇ! ಲೋಕದಲ್ಲಿ ತಮ್ಮ ಆತ್ಮವೇ ಯಾರಿಗಾದರೂ ಶತ್ರುವಾದೀತೇ? ನಾರಾಯಣನಾದರೋ ಲೋಕಕ್ಕೇ ಆತ್ಮವು. ಹೀಗಿರುವಾಗ ಆ ವಿಷ್ಣುವು ಯಾವನಿಗೇ ಆಗಲಿ ದ್ವೇಷ್ಯನು ಹೇಗಾಗುತ್ತಾನೆ?

ಗಂಧವತಿಯ ಮಕ್ಕಳಾದ ಇಲ್ಲಿರುವ ವ್ಯಾಸರೇ ನಮಗೆ ಗುರುಗಳು. ಅವರಿಂದಲೇ ಹೇಳಲ್ಪಟ್ಟ ಶ್ರೇಷ್ಠವಾದ ಮತ್ತು ಅವಿನಾಶಿಯಾದ ಮಹಾವಿಷ್ಣುವಿನ ಈ ಮಾಹಾತ್ಮ್ಯವನ್ನು ನಾನು ನಿನಗೆ ಹೇಳಿದ್ದೇನೆ. ನಾರದರು, ಜಗನ್ನಾಥನಾದ ಸಾಕ್ಷಾತ್ ನಾರಾಯಣನಿಂದಲೇ ರಹಸ್ಯಯುಕ್ತವಾದ ಮತ್ತು ಸಂಗ್ರಹಯುಕ್ತವಾದ ಈ ಧರ್ಮವನ್ನು ಪಡೆದುಕೊಂಡರು. ನೃಪಶ್ರೇಷ್ಠನೇ! ಈ ಮಹಾಧರ್ಮವನ್ನೇ ನಾನು ಈ ಹಿಂದೆ ಹರಿಗೀತಗಳಲ್ಲಿ (ಭಗವದ್ಗೀತೆಯಲ್ಲಿ) ಸಂಕ್ಷೇಪವಾಗಿ ಹೇಳಿದ್ದೆನು.

ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಭುವಿ ।
ಕೋ ಹ್ಯನ್ಯಃ ಪುರುಷವ್ಯಾಘ್ರ ಮಹಾಭಾರತಕೃದ್ಭವೇತ್ ।
ಧರ್ಮಾನ್ನಾನಾವಿಧಾಂಶ್ಚೈವ ಕೋ ಬ್ರೂಯಾತ್ತಮೃತೇ ಪ್ರಭುಮ್ ॥೧೨॥

ಜನಮೇಜಯ! ಕೃಷ್ಣದ್ವೈಪಾಯನವ್ಯಾಸರನ್ನು ಈ ಪ್ರಪಂಚದಲ್ಲಿ ನಾರಾಯಣನೆಂದೇ ಭಾವಿಸು. ನಾರಾಯಣಸ್ವರೂಪರಾದ ವ್ಯಾಸರಲ್ಲದೇ ಬೇರೆ ಯಾರು ತಾನೇ ಮಹಾಭಾರತದ ಕರ್ತೃವಾಗಲು ಸಾಧ್ಯ? ಪ್ರಭುಗಳಾದ ಅವರಲ್ಲದೇ ನಾನಾವಿಧವಾದ ಧರ್ಮಗಳನ್ನು ಬೇರೆ ಯಾರು ತಾನೇ ಹೇಳಿಯಾರು? ನೀನು ಯಾವ ರೀತಿಯಲ್ಲಿ ಸಂಕಲ್ಪಿಸಿರುವೆಯೋ ಅದೇ ರೀತಿಯಲ್ಲಿ ನಿನ್ನ ಯಜ್ಞವು ನಡೆಯಲಿ. ನೀನು ಅಶ್ವಮೇಧಯಜ್ಞವನ್ನು ಮಾಡುವುದಾಗಿ ಸಂಕಲ್ಪಮಾಡಿರುವೆ ಮತ್ತು ಧರ್ಮವನ್ನೂ ಯಥಾವತ್ತಾಗಿ ಕೇಳಿರುವೆ.”

ಸೌತಿಗಳು ಶೌನಕರಿಗೆ ಹೇಳುತ್ತಾರೆ :

“ಶೌನಕರೇ! ಪಾರ್ಥಿವಶ್ರೇಷ್ಠನಾದ ಜನಮೇಜಯನು ವೈಶಂಪಾಯನರಿಂದ ಈ ಮಹೋಪಾಖ್ಯಾನವನ್ನು ಕೇಳಿ ಯಜ್ಞವನ್ನು ಪೂರೈಸುವ ಸಲುವಾಗಿ ಎಲ್ಲ ಕಾರ್ಯಗಳನ್ನೂ ಆರಂಭಿಸಿದನು. ನಿಮ್ಮ ಪ್ರಶ್ನೆಗೆ ಅನುಸಾರವಾಗಿ ನೈಮಿಷಾರಣ್ಯವಾಸಿಗಳ ಸಮ್ಮುಖದಲ್ಲಿ ನಾರಾಯಣನ ಮಾಹಾತ್ಮ್ಯಸಂಬಂಧವಾದ (ನಾರಾಯಣೀಯವೆಂಬ) ಈ ಆಖ್ಯಾನವನ್ನು ಹೇಳಿರುತ್ತೇನೆ. ಹಿಂದೆ ನಾರದರು ಈ ನಾರಾಯಣೀಯವನ್ನು ಋಷಿಗಳೂ, ಪಾಂಡವರೂ, ಶ್ರೀಕೃಷ್ಣನೂ ಮತ್ತು ಭೀಷ್ಮನೂ ಕೇಳುತ್ತಿರುವಾಗ ನನ್ನ ಗುರುಗಳಾದ ವ್ಯಾಸರಿಗೆ ಹೇಳಿದರು :

ಸ ಹಿ ಪರಮಗುರುರ್ಜನಭುವನಪತಿಃ
ಪೃಥುಧರಣಿಧರಃ ಶ್ರುತಿವಿನಯನಿಧಿಃ ।
ಶಮನಿಯಮನಿಧಿರ್ದ್ವಿಜಪರಮಹಿತ-
ಸ್ತವ ಭವತು ಗತಿರ್ಹರಿರಮರಹಿತಃ ॥೧೮॥

ಪರಮಗುರುವಾದ, ಜನಪತಿಯಾದ, ಭುವನಪತಿಯಾದ, ವಿಶಾಲವಾದ ಭೂಮಿಯನ್ನು ಧಾರಣೆಮಾಡಿರುವ, ವೇದಜ್ಞಾನಕ್ಕೂ ಮತ್ತು ವಿನಯಕ್ಕೂ ನಿಧಿಪ್ರಾಯನಾದ, ಶಮ-ನಿಯಮಗಳಿಗೆ ನಿಧಿಪ್ರಾಯನಾದ, ಬ್ರಾಹ್ಮಣರಿಗೆ ಪರಮಹಿತೈಷಿಯಾದ, ದೇವತೆಗಳ ಹಿತಚಿಂತಕನಾದ ಶ್ರೀಹರಿಯು ನಿನಗೆ ಆಶ್ರಯನಾಗಲಿ.

ಅಸುರವಧಕರಸ್ತಪಸಾಂ ನಿಧಿಃ
ಸುಮಹತಾಂ ಯಶಸಾಂ ಚ ಭಾಜನಮ್ ।
ಮಧುಕೈಟಭಘ್ನಾ ಕೃತಧರ್ಮವಿದಾಂ ಗತಿದೋಽ-
ಭಯದೋ ಮಖಭಾಗಹರೋಽಸ್ತು ಶರಣಂ ಸ ತೇ ॥

ಅಸುರಸಂಹಾರಕನಾದ, ತಪಸ್ಸುಗಳಿಗೆ ನಿಧಿಪ್ರಾಯನಾದ, ಮಹಾ ಯಶಸ್ಸಿಗೆ ಪಾತ್ರನಾದ, ಮಧು-ಕೈಟಭಸಂಹಾರಕನಾದ, ಕೃತಯುಗದ ಧರ್ಮವನ್ನು ತಿಳಿದುಕೊಂಡು ಆ ಧರ್ಮವನ್ನು ಆಚರಿಸತಕ್ಕವರಿಗೆ ಸದ್ಗತಿ ಪ್ರದನಾದ, ಯಜ್ಞಭಾಗಹರನಾದ ಶ್ರೀಮನ್ನಾರಾಯಣನು ನಿನಗೆ ರಕ್ಷಕ ನಾಗಲಿ.

ತ್ರಿಗುಣೋ ವಿಗುಣಶ್ಚತುರಾತ್ಮಧರಃ
ಪೂರ್ತೇಷ್ಟಯೋಶ್ಚ ಫಲಭಾಗಹರಃ ।
ವಿದಧಾತು ನಿತ್ಯಮಜಿತೋಽತಿಬಲೋ
ಗತಿಮಾತ್ಮಗಾಂ ಸುಕೃತಿನಾಮೃಷೀಣಾಮ್ ॥೨೦॥

ಸತ್ತ್ವ-ರಜಸ್ತಮಸ್ಸುಗಳೆಂಬ ಮೂರು ಗುಣಗಳಿಂದ ಕೂಡಿರುವವನೂ ನಿರ್ಗುಣನೂ ಆಗಿರುವ, ವಾಸುದೇವ-ಸಂಕರ್ಷಣ-ಪ್ರದ್ಯುಮ್ನ ಮತ್ತು ಅನಿರುದ್ಧರೆಂಬ ನಾಲ್ಕು ರೂಪಗಳನ್ನು ಧರಿಸಿರುವ, ಯಜ್ಞ-ಯಾಗಾದಿಗಳ ಫಲದ ಭಾಗವನ್ನೂ ವಾಪೀ-ಕೂಪ-ತಟಾಕಾದಿ ನಿರ್ಮಾಣಗಳಿಂದ ಪ್ರಾಪ್ತವಾಗುವ ಫಲದ ಭಾಗವನ್ನೂ ಪರಿಗ್ರಹಿಸುವ, ಅಪರಾಜಿತನಾದ, ಮಹಾಬಲನಾದ ಶ್ರೀಹರಿಯು ಆತ್ಮಜ್ಞಾನಿಗಳಾದ ಪುಣ್ಯಾತ್ಮರಾದ ಋಷಿಗಳಿಗೆ ಸರ್ವದಾ ಸದ್ಗತಿಪ್ರದನಾಗಲಿ.

ತಂ ಲೋಕಸಾಕ್ಷಿಣಮಜಂ ಪುರುಷಂ ಪುರಾಣಂ
ರವಿವರ್ಣಮೀಶ್ವರಂ ಗತಿಂ ಬಹುಶಃ ।
ಪ್ರಣಮಧ್ವಮೇಕಮನಸೋ ಯತಃ
ಸಲಿಲೋದ್ಭವೋಽಪಿ ತಮೃಷಿಂ ಪ್ರಣತಃ ॥೨೧॥

ಸಂಪೂರ್ಣಜಗತ್ತಿಗೂ ಸಾಕ್ಷಿಯಾದ, ಜನ್ಮರಹಿತನಾದ, ಪುರಾಣ ಪುರುಷನಾದ, ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿ

ರುವ, ಸರ್ವೇಶ್ವರನಾದ, ಎಲ್ಲ ಪ್ರಕಾರಗಳಲ್ಲಿಯೂ ಸದ್ಗತಿಪ್ರದನಾದ ನಾರಾಯಣರ್ಷಿಯನ್ನು ಏಕಾಗ್ರಚಿತ್ತರಾಗಿ ಬಾರಿ-ಬಾರಿಗೂ ನಮಸ್ಕರಿಸಿರಿ. ಏಕೆಂದರೆ : ಸಲಿಲೋದ್ಭವನಾದ ಬ್ರಹ್ಮನೂ ಆ ನಾರಾಯಣರ್ಷಿಯನ್ನು ಪ್ರಣಮಿಸುತ್ತಾನೆ.

ಸ ಹಿ ಲೋಕಯೋನಿರಮೃತಸ್ಯ ಪದಂ
ಸೂಕ್ಷ್ಮಂ ಪರಾಯಣಮಚಲಂ ಹಿ ಪದಮ್ ।
ತತ್ಸಾಂಖ್ಯಯೋಗಿಭಿರುದಾರವೃತಂ
ಬುದ್ಧ್ಯಾ ಯತಾತ್ಮಭಿರಿದಂ ಸನಾತನಮ್ ॥೨೨॥

ಉದಾರರಾದ ಶೌನಕರೇ! ಶ್ರೀಮನ್ನಾರಾಯಣನು ಈ ಜಗತ್ತಿಗೇ ಆದಿಕಾರಣನಾಗಿದ್ದಾನೆ. ಮೋಕ್ಷಕ್ಕೆ ಆಶ್ರಯನಾಗಿದ್ದಾನೆ. ಸೂಕ್ಷ್ಮಸ್ವರೂಪ ನಾಗಿದ್ದಾನೆ. ಭಕ್ತರಿಗೆ ಪರಾಯಣನಾಗಿದ್ದಾನೆ. ಅಚಲವಾದ ಪರಮಪದ ಸ್ವರೂಪನಾಗಿದ್ದಾನೆ. ಜಿತಮನಸ್ಕರಾದ ಸಾಂಖ್ಯಯೋಗಿಗಳಿಂದ ಬುದ್ಧಿಯ ಮೂಲಕವಾಗಿ ವರಿಸಲ್ಪಟ್ಟವನಾಗಿದ್ದಾನೆ. ಅಂತಹ ಸನಾತನನಾದ ಶ್ರೀಹರಿ ಯನ್ನು ನಮಸ್ಕರಿಸಿರಿ."

ಇ೪೬ನೆಯ ಅಧ್ಯಾಯವು ಮುಗಿಯಿತು.

೩೪೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಹಯಗ್ರೀವಾವತಾರದ ಕಥೆ : ವೇದಗಳ ಉದ್ಧಾರ : ಮಧು-ಕೈಟಭರ ವಧೆ : ನಾರಾಯಣನ ಮಹಿಮೆ

ಶೌನಕರು ಹೇಳುತ್ತಾರೆ :

ಶ್ರುತಂ ಭಗವತಸ್ತಸ್ಯ ಮಾಹಾತ್ಮ್ಯಂ ಪರಮಾತ್ಮನಃ ।
ಜನ್ಮ ಧರ್ಮಗೃಹೇ ಚೈವ ನರನಾರಾಯಣಾತ್ಮಕಮ್ ॥೧॥

"ಸೌತಿಗಳೇ! ಷಡ್ಗುಣೈಶ್ವರ್ಯಪರಿಪೂರ್ಣನಾದ ಪರಮಾತ್ಮನ ಮಾಹಾತ್ಮ್ಯವನ್ನು ಕೇಳಿದೆವು. ಧರ್ಮನ ಮನೆಯಲ್ಲಿ ಆ ಪರಮಾತ್ಮನೇ ನರ-ನಾರಾಯಣರೂಪದಿಂದ ಅವತರಿಸಿದ ಕಥೆಯನ್ನೂ ಕೇಳಿದೆವು. ಮಹಾ ವರಾಹನಿಂದ ಕಲ್ಪಿತವಾದ ಪುರಾತನವಾದ ಪಿಂಡೋತ್ಪತ್ತಿಯ ಕಥೆಯನ್ನೂ

ಕೇಳಿದೆವು. ಪ್ರವೃತ್ತಿಯ ವಿಷಯದಲ್ಲಿಯೂ ಮತ್ತು ನಿವೃತ್ತಿಯ ವಿಷಯದಲ್ಲಿಯೂ ಯಾರು ಹೇಗೆ ವ್ಯವಸ್ಥೆಮಾಡಿದರೆಂಬುದನ್ನೂ ನಿಮ್ಮಿಂದ ಕೇಳಿದೆವು. ಸಮುದ್ರದ ಈಶಾನ್ಯಭಾಗದಲ್ಲಿ ಹವ್ಯ-ಕವ್ಯಭುಜನಾದ ಮಹಾವಿಷ್ಣುವು ಹಯಗ್ರೀವನಾಗಿ ಅವತರಿಸಿದನೆಂಬ ವಿಷಯವನ್ನು ಈ ಹಿಂದೆಯೇ ನೀವು ಹೇಳಿದ್ದೀರಿ. ಪರಮೇಷ್ಠಿಯಾದ, ಭಗವಂತನಾದ ಬ್ರಹ್ಮನು ಹಯಗ್ರೀವನನ್ನು ಸಂದರ್ಶಿಸಿದ ವಿಷಯವನ್ನೂ ಹೇಳಿದ್ದೀರಿ.

ಕಿಂ ತದುತ್ಪಾದಿತಂ ಪೂರ್ವಂ ಹರಿಣಾ ಲೋಕಧಾರಿಣಾ ।
ರೂಪಂ ಪ್ರಭಾವಂ ಮಹತಾಮಪೂರ್ವಂ ಧೀಮತಾಂ ವರ ॥೫॥

ಬುದ್ಧಿವಂತರಲ್ಲಿ ಶ್ರೇಷ್ಠರಾದ ಸೌತಿಗಳೇ! ಸಂಪೂರ್ಣಜಗತ್ತನ್ನೂ ಧರಿಸಿರುವ ಶ್ರೀಹರಿಯು ಹಿಂದೆ ಅಂತಹ ಪರಮಾದ್ಭುತವಾದ ಪ್ರಭಾವಶಾಲಿಯಾದ ರೂಪವನ್ನೇಕೆ ಸೃಷ್ಟಿಸಿದನು? ಅಂತಹ ರೂಪವನ್ನು ಶ್ರೀಹರಿಯು ಹಿಂದೆಂದೂ ಪ್ರಕಟಿಸಿರಲಿಲ್ಲ.

ದೃಷ್ಟ್ವಾ ಹಿ ವಿಬುಧಶ್ರೇಷ್ಠಮಪೂರ್ವಮಮಿತೌಜಸಮ್ ।
ತದಶ್ವಶಿರಸಂ ಪುಣ್ಯಂ ಬ್ರಹ್ಮಾ ಕಿಮಕರೋನ್ಮುನೇ ॥೬॥

ದೇವತೆಗಳಲ್ಲಿ ಶ್ರೇಷ್ಠನಾದ, ಅಪೂರ್ವರೂಪಧರನಾದ, ಮಹಾತೇಜಸ್ವಿಯಾದ, ಶುಭಪ್ರದನಾದ ಹಯಗ್ರೀವನನ್ನು ನೋಡಿ ಬ್ರಹ್ಮನು ಏನು ಮಾಡಿದನು?

ಶ್ರೇಷ್ಠವಾದ ಬುದ್ಧಿಯುಳ್ಳ ಸೌತಿಗಳೇ! ಇದು ನಮ್ಮ ಸಂದೇಹ. ಇದನ್ನು ಹೋಗಲಾಡಿಸಿರಿ. ಮಹಾಪುರುಷನಿರ್ಮಿತವಾದ ಜ್ಞಾನದಿಂದಲೇ ಹುಟ್ಟಿರುವ ಈ ಪುರಾಣಕಥೆಯನ್ನು ಹೇಳಿರಿ. ಪುಣ್ಯಪ್ರಾಪಕವಾದ ಇಂತಹ ಕಥೆಗಳನ್ನು ಹೇಳಿ ನಮ್ಮನ್ನು ಪಾವನರನ್ನಾಗಿ ಮಾಡಿದ್ದೀರಿ."

ಸೌತಿಗಳು ಹೇಳುತ್ತಾರೆ :

"ಶೌನಕರೇ! ನಿಮಗೆ ನಾನು ವೇದಸದೃಶಪ್ರಮಾಣಭೂತವಾದ ಹಯಗ್ರೀವಪುರಾಣವನ್ನು ಸಂಪೂರ್ಣವಾಗಿ ಹೇಳುತ್ತೇನೆ. ಈ ಪುರಾಣ ಕಥೆಯನ್ನೇ ವ್ಯಾಸರು ಹಿಂದೆ ಧರ್ಮನ ಮಗನಾದ ಯುಧಿಷ್ಠಿರನಿಗೆ ಹೇಳಿದ್ದರು. ಭಗವಾನ್ ವಿಷ್ಣುವಿನ ಹಯಗ್ರೀವಾವತಾರದ ವಿಷಯವನ್ನು

ಕೇಳಿದ ಧರ್ಮರಾಜನು ನಿಮ್ಮಂತೆಯೇ ಸಂಶಯಗ್ರಸ್ತನಾಗಿ ವ್ಯಾಸರನ್ನು ಪ್ರಶ್ನಿಸಿದನು : "ಸತ್ಪುರುಷರಲ್ಲಿ ಶ್ರೇಷ್ಠರಾದ ವ್ಯಾಸಮಹರ್ಷಿಗಳೇ! ಪೂಜ್ಯನಾದ ಬ್ರಹ್ಮನು ವಿಷ್ಣುವಿನ ಯಾವ ಹಯಗ್ರೀವರೂಪವನ್ನು ಸಂದರ್ಶಿಸಿದನೋ–ಆ ಹಯಗ್ರೀವರೂಪವು ಯಾವ ಕಾರಣದಿಂದ ಆವಿರ್ಭವಿಸಿತು?–ಈ ವಿಷಯವನ್ನು ಹೇಳಿರಿ."

ವ್ಯಾಸರು ಹೇಳುತ್ತಾರೆ :

"ಯುಧಿಷ್ಠಿರ! ಈ ಜಗತ್ತಿನಲ್ಲಿ ಎಷ್ಟು ಪ್ರಾಣಿಗಳಿವೆಯೋ ಅವೆಲ್ಲವೂ ಈಶ್ವರಸಂಕಲ್ಪದಿಂದ ಹುಟ್ಟಿದ ಪಂಚಭೂತಗಳಿಂದಲೇ ವ್ಯಾಪ್ತವಾಗಿವೆ.

ಈಶ್ವರೋ ಹಿ ಜಗತ್ಸ್ರಷ್ಟಾ ಪ್ರಭುರ್ನಾರಾಯಣೋ ವಿರಾಟ್ ।
ಭೂತಾನ್ತರಾತ್ಮಾ ವರದಃ ಸಗುಣೋ ನಿರ್ಗುಣೋಽಪಿ ಚ ॥೧೨॥

ವಿರಾಟ್ಸ್ವರೂಪನಾದ, ಪ್ರಭುವಾದ, ವರದನಾದ, ಸರ್ವಪ್ರಾಣಿಗಳ ಅಂತರಾತ್ಮನಾದ ಶ್ರೀಮನ್ನಾರಾಯಣನೇ ಈ ಜಗತ್ತಿನ ಸೃಷ್ಟಿಕರ್ತೃವೂ ಈಶ್ವರನೂ ಆಗಿದ್ದಾನೆ. ಅವನು ಸಗುಣನೂ ನಿರ್ಗುಣನೂ ಆಗಿದ್ದಾನೆ.

ಯುಧಿಷ್ಠಿರ! ಈಗ ನೀನು ಪಂಚಭೂತಗಳ ಆತ್ಯಂತಿಕಪ್ರಳಯದ ವಿಷಯವನ್ನು ಕೇಳು :

ಧರಣ್ಯಾಮಥಲೀನಾಯಾಮಪ್ಸು ಚೈಕಾರ್ಣವೇ ಪುರಾ ।
ಜ್ಯೋತಿರ್ಭೂತೇ ಜಲೇ ಚಾಪಿ ಲೀನೇ ಜ್ಯೋತಿಷಿ ಚಾನಿಲೇ ॥೧೪॥

ವಾಯೌ ಚಾಕಾಶಸಂಲೀನೇ ಆಕಾಶೇ ಚ ಮನೋಽನುಗೇ ।
ವ್ಯಕ್ತೇ ಮನಸಿ ಸಂಲೀನೇ ವ್ಯಕ್ತೇ ಚಾವ್ಯಕ್ತತಾಂ ಗತೇ ॥೧೫॥

ಅವ್ಯಕ್ತೇ ಪುರುಷಂ ಯಾತೇ ಪುಂಸಿ ಸರ್ವಗತೇಽಪಿ ಚ ।
ತಮ ಏವಾಭವತ್ಸರ್ವಂ ನ ಪ್ರಾಜ್ಞಾಯತ ಕಿಂಚನ ॥೧೬॥

ಹಿಂದೆ ಮಹಾಪ್ರಳಯವಾದಾಗ ಪೃಥ್ವಿಯು ನೀರಿನಿಂದ ತುಂಬಿಹೋಗಿ ಅದರಲ್ಲಿಯೇ ಲೀನವಾಗಿ ಹೋಯಿತು. (ಭೂಮಿಯು ನೀರಿನಲ್ಲಿ ಲೀನ ವಾಯಿತು. ಜಲವು ತೇಜಸ್ಸಿನಲ್ಲಿಯೂ, ತೇಜಸ್ಸು ವಾಯುವಿನಲ್ಲಿಯೂ, ವಾಯುವು ಆಕಾಶದಲ್ಲಿಯೂ, ಆಕಾಶವು ಮನಸ್ಸಿನಲ್ಲಿಯೂ, ಮನಸ್ಸು ವ್ಯಕ್ತ

(ಮಹತ್ತತ್ತ್ವ) ದಲ್ಲಿಯೂ, ವ್ಯಕ್ತವು ಅವ್ಯಕ್ತಪ್ರಕೃತಿಯಲ್ಲಿಯೂ, ಅವ್ಯಕ್ತ ಪ್ರಕೃತಿಯು ಪುರುಷನಲ್ಲಿಯೂ, ಪುರುಷನು ಸರ್ವವ್ಯಾಪಿಯಾದ ಪರಮಾತ್ಮನಲ್ಲಿಯೂ ಲೀನವಾಗಲಾಗಿ–ಎಲ್ಲವೂ ಅಂಧಕಾರಮಯ ವಾಯಿತು. 'ಎಲ್ಲಿ-ಏನಿದೆ?' ಎಂಬುದೊಂದೂ ತಿಳಿಯುತ್ತಿರಲಿಲ್ಲ.

ತಮಸೋ ಬ್ರಹ್ಮ ಸಮ್ಭೂತಂ ತಮೋಮೂಲಮೃತಾತ್ಮಕಮ್ ।
ತದ್ವಿಶ್ವಭಾವಸಂಜ್ಞಾನ್ತಂ ಪೌರುಷೀಂ ತನುಮಾಶ್ರಿತಮ್ ॥೧೭॥

ಆ ತಮಸ್ಸಿನಿಂದ ಜಗತ್ತಿಗೆ ಕಾರಣಭೂತವಾದ ಬ್ರಹ್ಮವು ಹುಟ್ಟಿತು. ತಮಸ್ಸೇ ಮೂಲವಾದ ಆ ಬ್ರಹ್ಮವು ಋತಾತ್ಮಕವಾದುದು. ಋತಾತ್ಮಕವಾದ ಬ್ರಹ್ಮವೇ ತಮಸ್ಸಿನೊಡನೆ ಸೇರಿ ಪುರುಷಸಂಬಂಧವಾದ ಶರೀರವನ್ನು ಆಶ್ರಯಿಸಿ (ವಿರಾಟ್ಸ್ವರೂಪವನ್ನು ತಾಳಿ) ಸಕಲವಿಧವಾದ ನಾಮ-ರೂಪ ಗಳಿಂದ ಕೂಡಿರುವ ಪ್ರಪಂಚದ ಪ್ರಾದುರ್ಭಾವಕ್ಕೆ ಕಾರಣವಾಗುತ್ತದೆ.

ಸೋಽನಿರುದ್ಧ ಇತಿ ಪ್ರೋಕ್ತಸ್ತತ್ಪ್ರಧಾನಂ ಪ್ರಚಕ್ಷತೇ ।
ತದವ್ಯಕ್ತಮಿತಿ ಜ್ಞೇಯಂ ತ್ರಿಗುಣಂ ನೃಪಸತ್ತಮ ॥೧೮॥

ಆ ಪುರುಷನೇ ಅನಿರುದ್ಧನೆಂದೂ ಕರೆಯಲ್ಪಡುತ್ತಾನೆ. ಅವನನ್ನು ಪ್ರಧಾನನೆಂದೂ ಕರೆಯುತ್ತಾರೆ. ತ್ರಿಗುಣಾತ್ಮಕವಾದ ಅವ್ಯಕ್ತನೆಂದೂ ಅವನನ್ನು ತಿಳಿಯಬೇಕು.

ವಿದ್ಯಾಸಹಾಯವಾನ್ದೇವೋ ವಿಷ್ವಕ್ಸೇನೋ ಹರಿಃ ಪ್ರಭುಃ ।
ಅಪ್ಸ್ವೇವ ಶಯನಂ ಚಕ್ರೇ ನಿದ್ರಾಯೋಗಮುಪಾಗತಃ ॥೧೯॥

ವಿದ್ಯಾಶಕ್ತಿಯಿಂದ ಸಂಪನ್ನನಾದ ಸರ್ವವ್ಯಾಪಿಯಾದ ಭಗವಾನ್ ವಿಷ್ವಕ್ಸೇನನು ನಿದ್ರಾಯೋಗವನ್ನು ಹೊಂದಿ ನೀರಿನಲ್ಲಿಯೇ ಮಲಗಿದನು.

ಜಗತಶ್ಚಿನ್ತಯನ್ಸೃಷ್ಟಿಂ ಚಿತ್ರಾಂ ಬಹುಗುಣೋದ್ಭವಾಮ್ ।
ತಸ್ಯ ಚಿನ್ತಯತಃ ಸೃಷ್ಟಿಂ ಮಹಾನಾತ್ಮಗುಣಃ ಸ್ಮೃತಃ ॥೨೦॥

ಅಹಂಕಾರಸ್ತತೋ ಜಾತೋ ಬ್ರಹ್ಮಾ ಸ ತು ಚತುರ್ಮುಖಃ ।
ಹಿರಣ್ಯಗರ್ಭೋ ಭಗವಾನ್ಸರ್ವಲೋಕಪಿತಾಮಹಃ ॥೨೧॥

ಆ ಸಮಯದಲ್ಲಿ ವಿಷ್ವಕ್ಸೇನನು ನಾನಾಗುಣಗಳಿಂದ ಕೂಡಿ ಪ್ರಾದುರ್ಭವಿಸಬೇಕಾಗಿದ್ದ ಅದ್ಭುತವಾದ ಜಗತ್ತಿನ ಸೃಷ್ಟಿಯ ವಿಷಯವಾಗಿ

ಯೋಚಿಸುತ್ತಿದ್ದಾಗ –ಶ್ರೀಹರಿಗೆ ತನ್ನದೇ ಆದ ಮಹತ್ತತ್ತ್ವವೆಂಬ ಗುಣದ ಸ್ಮರಣೆಯಾಯಿತು. ಆ ಮಹತ್ತತ್ತ್ವದಿಂದ ಒಡನೆಯೇ ಅಹಂಕಾರವು ಹುಟ್ಟಿತು. ಚತುರ್ಮುಖನಾದ, ಹಿರಣ್ಯಗರ್ಭನಾದ, ಸರ್ವಲೋಕಪಿತಾಮಹನಾದ ಪೂಜ್ಯನಾದ ಬ್ರಹ್ಮನೇ ಅಹಂಕಾರರೂಪನಾಗಿ ಹುಟ್ಟಿದನು.

ಪದ್ಮೇಽನಿರುದ್ಧಾತ್ಸಮ್ಭೂತಸ್ತದಾ ಪದ್ಮನಿಭೇಕ್ಷಣಃ ।
ಸಹಸ್ರಪತ್ರೇ ದ್ಯುತಿಮಾನುಪವಿಷ್ಟಃ ಸನಾತನಃ ॥೨೨॥

ದದೃಶೇಽದ್ಭುತಸಂಕಾಶೋ ಲೋಕಾನಾಪೋಮಯಾನ್ಪ್ರಭುಃ ।
ಸತ್ತ್ವಸ್ಥಃ ಪರಮೇಷ್ಠೀ ಸ ತತೋ ಭೂತಗಣಾನ್ಸೃಜನ್ ॥೨೩॥

ಪದ್ಮಸದೃಶವಾದ ಕಣ್ಣುಗಳನ್ನು ಹೊಂದಿದ್ದ ಚತುರ್ಮುಖಬ್ರಹ್ಮನು ಅನಿರುದ್ಧನ ನಾಭಿಪದ್ಮದಲ್ಲಿ ಹುಟ್ಟಿದನು. ಸನಾತನನಾದ ಆ ಬ್ರಹ್ಮನು ಸಹಸ್ರದಳಕಮಲದಲ್ಲಿ ಕುಳಿತಿದ್ದನು. ಅದ್ಭುತವಾದ ರೂಪವನ್ನು ಧರಿಸಿದ್ದ, ಪ್ರಭುವಾದ ಚತುರ್ಮುಖನು ಲೋಕಗಳೆಲ್ಲವೂ ಜಲಮಯವಾಗಿರುವುದನ್ನು ನೋಡಿದನು. ಬಳಿಕ ಸತ್ತ್ವಗುಣದಿಂದ ಆವಿರ್ಭೂತನಾಗಿದ್ದ ಆ ಪರಮೇಷ್ಠಿಯು ಪ್ರಾಣಿಸಮೂಹವನ್ನು ಸೃಷ್ಟಿಸಲು ಪ್ರಾರಂಭಿಸಿದನು.

ಪೂರ್ವಮೇವ ಚ ಪದ್ಮಸ್ಯ ಪತ್ರೇ ಸೂರ್ಯಾಂಶುಸಪ್ರಭೇ ।
ನಾರಾಯಣಕೃತೌ ಬಿನ್ದೂ ಅಪಾಮಾಸ್ತಾಂ ಗುಣೋತ್ತರೌ ॥೨೪॥

ಚತುರ್ಮುಖನು ಕುಳಿತಿದ್ದ ಪದ್ಮವು ಸೂರ್ಯನ ಕಿರಣಗಳಿಗೆ ಸಮಾನವಾಗಿ ಪ್ರಜ್ವಲಿಸುತ್ತಿದ್ದಿತು. ಕಮಲದ ದಳಗಳ ಮೇಲೆ ಆ ಹಿಂದೆಯೇ ನಾರಾಯಣನು ಸೃಷ್ಟಿಸಿದ ರಜೋಗುಣ-ತಮೋಗುಣಪ್ರತೀಕಗಳಾದ ಎರಡು ನೀರಿನ ಬಿಂದುಗಳಿದ್ದುವು.

ತಾವಪಶ್ಯತ್ಸ ಭಗವಾನನಾದಿನಿಧನೋಽಚ್ಯುತಃ ।
ಏಕಸ್ತತ್ರಾಭವದ್ಬಿನ್ದುರ್ಮಧ್ವಾಭೋ ರುಚಿರಪ್ರಭಃ ॥೨೫॥

ಸ ತಾಮಸೋ ಮಧುರ್ಜಾತಸ್ತದಾ ನಾರಾಯಣಾಜ್ಞಯಾ ।
ಕಠಿನಸ್ತ್ವಪರೋ ಬಿನ್ದುಃ ಕೈಟಭೋ ರಾಜಸಸ್ತು ಸಃ ॥೨೬॥

ಆದ್ಯಂತರಹಿತನಾದ ಭಗವಾನ್ ಅಚ್ಯುತನು ಆ ಎರಡು ಬಿಂದುಗಳನ್ನೂ ನೋಡಿದನು. ಆ ಬಿಂದುಗಳಲ್ಲೊಂದಾದ, ಜೇನುತುಪ್ಪದ ಕಾಂತಿಯಿಂದ

ಕೂಡಿದ್ದ, ಸುಂದರವಾದ ಪ್ರಭೆಯಿಂದ ಯುಕ್ತವಾಗಿದ್ದ ತಮೋಬಿಂದುವಿನಿಂದ 'ಮಧು' ಎಂಬ ರಾಕ್ಷಸನು ಹುಟ್ಟಿದನು. ಶ್ರೀಮನ್ನಾರಾಯಣನ ಆಜ್ಞೆಯಿಂದಲೇ ಅತ್ಯಂತಕಠಿನವಾಗಿದ್ದ ಮತ್ತೊಂದು ಜಲಬಿಂದುವು ರಜೋಮಯವಾಗಿದ್ದು ಅದರಿಂದ 'ಕೈಟಭ' ಎಂಬ ರಾಕ್ಷಸನು ಹುಟ್ಟಿದನು.

ತಾವಭ್ಯಧಾವತಾಂ ಶ್ರೇಷ್ಠೌ ತಮಸಾ ರಜಸಾನ್ವಿತೌ ।
ಬಲವನ್ತೌ ಗದಾಹಸ್ತೌ ಪದ್ಮನಾಲಾನುಸಾರಿಣೌ ॥೨೭॥

ತಮೋಗುಣ-ರಜೋಗುಣಗಳಿಂದ ಯುಕ್ತರಾಗಿದ್ದ ಬಲಿಷ್ಠರಾಗಿದ್ದ ಗದಾಪಾಣಿಗಳಾಗಿದ್ದ ಮಧು-ಕೈಟಭರೆಂಬ ರಾಕ್ಷಸರಿಬ್ಬರೂ ಪದ್ಮದ ಕಾಂಡವನ್ನೇ ಅನುಸರಿಸಿ ಮುಂದೆ ಓಡಿಬಂದರು.

ದದೃಶಾತೇಽರವಿನ್ದಸ್ಥಂ ಬ್ರಹ್ಮಾಣಮಮಿತಪ್ರಭಮ್ ।
ಸೃಜನ್ತಂ ಪ್ರಥಮಂ ವೇದಾಂಶ್ಚತುರಶ್ಚಾರುವಿಗ್ರಹಾನ್ ॥೨೮॥

ಆ ದೈತ್ಯರು ಕಮಲದ ಮಧ್ಯಭಾಗದಲ್ಲಿ ಕುಳಿತಿದ್ದ, ಮಹಾಪ್ರಭೆಯಿಂದ ಕೂಡಿದ್ದ, ಸುಂದರವಾದ ದೇಹಗಳುಳ್ಳ ನಾಲ್ಕು ವೇದಗಳನ್ನು ಪ್ರಥಮತಃ ಸೃಷ್ಟಿಸುತ್ತಿದ್ದ ಬ್ರಹ್ಮನನ್ನು ನೋಡಿದರು.

ತತೋ ವಿಗ್ರಹವನ್ತೌ ತೌ ವೇದಾನ್ದೃಷ್ಟ್ವಾ ಸುರೋತ್ತಮೌ ।
ಸಹಸಾ ಜಗೃಹತುರ್ವೇದಾನ್ಬ್ರಹ್ಮಣಃ ಪಶ್ಯತಸ್ತದಾ ॥೨೯॥

ವಿಶಾಲಕಾಯರಾಗಿದ್ದ, ಅಸುರಶ್ರೇಷ್ಠರಾದ ಮಧು-ಕೈಟಭರು ಮನೋಹರವಾದ ರೂಪವನ್ನು ಧರಿಸಿದ್ದ ಆ ವೇದಗಳನ್ನು ನೋಡಿ ಬ್ರಹ್ಮನು ನೋಡುತ್ತಿದ್ದಂತೆಯೇ ಅವನನ್ನು ಅನಾದರಿಸಿ ಆ ಎಲ್ಲ ವೇದಪುರುಷರನ್ನೂ ಅಪಹರಿಸಿದರು.

ಅಥ ತೌ ದಾನವಶ್ರೇಷ್ಠೌ ವೇದಾನ್ಗೃಹ್ಯ ಸನಾತನಾನ್ ।
ರಸಾಂ ವಿವಿಶತುಸ್ತೂರ್ಣಮುದಕ್ಪೂರ್ವೇ ಮಹೋದಧೌ ॥೩೦॥

ದಾನವಶ್ರೇಷ್ಠರಿಬ್ಬರೂ ಸನಾತನವಾದ ವೇದಗಳನ್ನು ಅಪಹರಿಸಿಕೊಂಡು ಮಹೋದಧಿಯ ಈಶಾನ್ಯಭಾಗದಲ್ಲಿದ್ದ ಭೂಮಿಯನ್ನು ಬಹಳ ಶೀಘ್ರವಾಗಿ ಪ್ರವೇಶಿಸಿಬಿಟ್ಟರು.

ತತೋ ಹೃತೇಷು ವೇದೇಷು ಬ್ರಹ್ಮಾ ಕಶ್ಮಲಮಾವಿಶತ್ ।
ತತೋ ವಚನಮೀಶಾನಂ ಪ್ರಾಹ ವೇದೈರ್ವಿನಾಕೃತಃ ॥೩೧॥

ಹೀಗೆ ಮಧು-ಕೈಟಭರಿಂದ ವೇದಗಳು ಅಪಹೃತವಾಗಲು ಬ್ರಹ್ಮನು ಖಿನ್ನನಾದನು. ವೇದಗಳಿಂದ ರಹಿತನಾಗಿದ್ದ ಅವನು ಭಗವಂತನನ್ನು ಕುರಿತು ಈ ಮಾತನ್ನು ಹೇಳಿದನು :

ವೇದಾ ಮೇ ಪರಮಂ ಚಕ್ಷುರ್ವೇದಾ ಮೇ ಪರಮಂ ಬಲಮ್ ।
ವೇದಾ ಮೇ ಪರಮಂ ಧಾಮ ವೇದಾ ಮೇ ಬ್ರಹ್ಮ ಚೋತ್ತರಮ್ ॥

"ಈಶಾನನೇ! ವೇದಗಳೇ ನನ್ನ ಶ್ರೇಷ್ಠವಾದ ಕಣ್ಣುಗಳು. ವೇದಗಳೇ ನನ್ನ ಶ್ರೇಷ್ಠವಾದ ಬಲವು. ವೇದಗಳೇ ನನ್ನ ಶ್ರೇಷ್ಠವಾದ ನಿವಾಸಸ್ಥಾನವು. ವೇದಗಳೇ ನನ್ನ ಸರ್ವೋತ್ಕೃಷ್ಟವಾದ ತತ್ತ್ವವು.

ಮಮ ವೇದಾ ಹೃತಾಃ ಸರ್ವೇ ದಾನವಾಭ್ಯಾಂ ಬಲಾದಿತಃ ।
ಅನ್ಧಕಾರಾ ಹಿ ಮೇ ಲೋಕಾ ಜಾತಾ ವೇದೈರ್ವಿನಾಕೃತಾಃ ॥೩೩॥

ನಾನು ಸೃಷ್ಟಿಸಿದ ಎಲ್ಲ ವೇದಗಳೂ ಈ ಸ್ಥಳದಿಂದ ಬಲಾತ್ಕಾರಪೂರ್ವಕವಾಗಿ ಆ ದೈತ್ಯರಿಂದ ಅಪಹೃತವಾದುವು. ವೇದಗಳಿಂದ ವಿಹೀನನಾಗಿರುವ ನನಗೆ ಲೋಕಗಳೆಲ್ಲವೂ ಈಗ ಅಂಧಕಾರಮಯವಾಗಿವೆ.

ವೇದಾನೃತೇ ಹಿ ಕಿಂ ಕುರ್ಯಾಂ ಲೋಕಾನಾಂ ಸೃಷ್ಟಿಮುತ್ತಮಾಮ್ ।
ಅಹೋ ಬತ ಮಹದ್ದುಃಖಂ ವೇದನಾಶನಜಂ ಮಮ ॥೩೪॥

ಪ್ರಾಪ್ತಂ ದುನೋತಿ ಹೃದಯಂ ತೀವ್ರಂ ಶೋಕಪರಾಯಣಮ್ ।
ಕೋ ಹಿ ಶೋಕಾರ್ಣವೇ ಮಗ್ನಂ ಮಾಮಿತೋಽದ್ಯ ಸಮುದ್ಧರೇತ್ ॥೩೫॥
ವೇದಾಂಸ್ತಾಂಶ್ಚಾನಯೇನ್ನಷ್ಟಾನ್ಕಸ್ಯ ಚಾಹಂ ಪ್ರಿಯೋ ಭವೇ ॥

ವೇದಗಳಿಲ್ಲದೇ ಉತ್ತಮವಾದ ಲೋಕಸೃಷ್ಟಿಯನ್ನು ನಾನು ಹೇಗೆ ಮಾಡಲಿ? ವೇದಗಳ ವಿನಾಶದಿಂದ ನನಗೆ ಮಹತ್ತರವಾದ ದುಃಖವಾಗಿದೆ. ಶೋಕಮಗ್ನವಾದ ಮನಸ್ಸಿನಿಂದ ಕೂಡಿರುವ ನನಗೆ ದುಸ್ಸಹವಾದ ಪೀಡೆ

ಯುಂಟಾಗುತ್ತಿದೆ. ಶೋಕಸಾಗರದಲ್ಲಿ ಮುಳುಗಿರುವ ನನ್ನನ್ನು ಯಾರು ತಾನೇ ಉದ್ಧರಿಸುತ್ತಾರೆ? ನಷ್ಟವಾಗಿ ಹೋಗಿರುವ ನನ್ನ ವೇದಗಳನ್ನು ತಂದುಕೊಡುವಷ್ಟು ನಾನು ಯಾರಿಗೆ ಪ್ರಿಯನಾಗಿದ್ದೇನೆ? (ಈ ಸಮಯದಲ್ಲಿ ನನ್ನಲ್ಲಿ ಪ್ರೀತಿಯಿಟ್ಟು ನನಗೆ ಯಾರು ಸಹಾಯಮಾಡುವರು?)"

ಬುದ್ಧಿವಂತರಲ್ಲಿ ಶ್ರೇಷ್ಠನಾದ ನೃಪಶ್ರೇಷ್ಠನೇ! ಹೀಗೆ ಬ್ರಹ್ಮನು ಕಳವಳಗೊಂಡು ಮಾತನಾಡುತ್ತಿದ್ದಾಗ ಬ್ರಹ್ಮನಿಗೆ ಶ್ರೀಹರಿಯನ್ನು ಸ್ತೋತ್ರ ಮಾಡಬೇಕೆಂಬ ಬುದ್ಧಿಯುಂಟಾಯಿತು. ಆಗ ಪೂಜ್ಯನಾದ ಬ್ರಹ್ಮನು ಕೈಗಳೆರಡನ್ನೂ ಜೋಡಿಸಿಕೊಂಡು ಉತ್ತಮವಾದ ಮತ್ತು ಅನುದಿನವೂ ಜಪಿಸಲು ಯೋಗ್ಯವಾದ ಸ್ತೋತ್ರದಿಂದ ಸ್ತುತಿಸಲು ಉಪಕ್ರಮಿಸಿದನು.

ಓಂ ನಮಸ್ತೇ ಬ್ರಹ್ಮಹೃದಯ ನಮಸ್ತೇ ಮಮ ಪೂರ್ವಜ ।
ಲೋಕಾದ್ಯ ಭುವನಶ್ರೇಷ್ಠ ಸಾಂಖ್ಯಯೋಗನಿಧೇ ಪ್ರಭೋ ॥೩೮॥

ವ್ಯಕ್ತಾವ್ಯಕ್ತಕರಾಚಿನ್ತ್ಯ ಕ್ಷೇಮಂ ಪನ್ಥಾನಮಾಸ್ಥಿತ ।
ವಿಶ್ವಭುಕ್ಸರ್ವಭೂತಾನಾಮನ್ತರಾತ್ಮನ್ನಯೋನಿಜ ।
ಅಹಂ ಪ್ರಸಾದಜಸ್ತುಭ್ಯಂ ಲೋಕಧಾಮ್ನೇ ಸ್ವಯಮ್ಭುವೇ ॥೩೯॥

"ವೇದವನ್ನೇ ಹೃದಯವನ್ನಾಗಿ ಹೊಂದಿರುವವನೇ! ನಿನಗೆ ನಮಸ್ಕಾರಮಾಡುತ್ತೇನೆ. ನನಗಿಂತಲೂ ಮೊದಲು ಹುಟ್ಟಿದವನೇ! ನಿನಗೆ ನಮಸ್ಕಾರಮಾಡುತ್ತೇನೆ. ಲೋಕಗಳೆಲ್ಲಕ್ಕೂ ಮೊದಲಿಗನೇ! ಭುವನ ಗಳೆಲ್ಲಕ್ಕೂ ಶ್ರೇಷ್ಠನೇ! ಸಾಂಖ್ಯಯೋಗಕ್ಕೆ ಭಂಡಾರಪ್ರಾಯನಾಗಿರುವವನೇ! ಪ್ರಭಾವಶಾಲಿಯೇ! ನಿನಗೆ ನಮಸ್ಕಾರಮಾಡುತ್ತೇನೆ.

ವ್ಯಕ್ತಜಗತ್ತನ್ನೂ-ಅವ್ಯಕ್ತಪ್ರಕೃತಿಯನ್ನೂ ಸೃಷ್ಟಿಸಿರುವವನೇ! ಅಚಿಂತ್ಯನೇ! ಕ್ಷೇಮಕರವಾದ ಮೋಕ್ಷಮಾರ್ಗವನ್ನು ಆಶ್ರಯಿಸಿರತಕ್ಕವನೇ! ವಿಶ್ವಪಾಲಕನೇ! ಸರ್ವಪ್ರಾಣಿಗಳಿಗೂ ಅಂತರಾತ್ಮನಾಗಿರುವವನೇ! ಅಯೋನಿಜನೇ! ನಾನು ನಿನ್ನ ಅನುಗ್ರಹದಿಂದಲೇ ಹುಟ್ಟಿದವನಾಗಿದ್ದೇನೆ. ಸಕಲಲೋಕಾಶ್ರಯನಾದ ಸ್ವಯಂಜಾತನಾದ ನಿನಗೆ ನಮಸ್ಕಾರವನ್ನು ಮಾಡುತ್ತೇನೆ.

ತ್ವತ್ತೋ ಮೇ ಮಾನಸಂ ಜನ್ಮ ಪ್ರಥಮಂ ದ್ವಿಜಪೂಜಿತಮ್ ।
ಚಾಕ್ಷುಷಂ ವೈ ದ್ವಿತೀಯಂ ಮೇ ಜನ್ಮ ಚಾಸೀತ್ಪುರಾತನಮ್ ॥೪೦॥

ನಿನ್ನಿಂದಲೇ ನನ್ನ ಮೊದಲನೆಯ–ದ್ವಿಜರಿಂದ ಸಮ್ಮಾನ್ಯವಾದ–ಮಾನಸಜನ್ಮವಾಯಿತು. (ಮೊದಲು ನಾನು ನಿನ್ನ ಮನಸ್ಸಂಕಲ್ಪದಿಂದಲೇ ಹುಟ್ಟಿದೆನು.) ನಿನ್ನ ಕಣ್ಣುಗಳಿಂದ ನನ್ನ ಪುರಾತನವಾದ ಎರಡನೆಯ ಜನ್ಮವಾಯಿತು.

ತ್ವತ್ಪ್ರಸಾದಾತ್ತು ಮೇ ಜನ್ಮ ತೃತೀಯಂ ವಾಚಿಕಂ ಮಹತ್ ।
ತ್ವತ್ತಃ ಶ್ರವಣಜಂ ಚಾಪಿ ಚತುರ್ಥಂ ಜನ್ಮ ಮೇ ವಿಭೋ ॥೪೧॥

ನಿನ್ನ ಅನುಗ್ರಹದ ಕಾರಣದಿಂದಲೇ ನಿನ್ನ ವಾಕ್ಕಿನಿಂದ ಮಹತ್ತಾದ ನನ್ನ ಮೂರನೆಯ ಜನ್ಮವಾಯಿತು. ವಿಭುವೇ! ನಾನು ನಿನ್ನ ಕಿವಿಗಳಿಂದಲೂ ಹುಟ್ಟಿ ನಾಲ್ಕನೆಯ ಜನ್ಮವನ್ನು ಪಡೆದೆನು.

ನಾಸಿಕ್ಯಂ ಚಾಪಿ ಮೇ ಜನ್ಮ ತ್ವತ್ತಃ ಪಞ್ಚಮಮುಚ್ಯತೇ ।
ಅಣ್ಡಜಂ ಚಾಪಿ ಮೇ ಜನ್ಮ ತ್ವತ್ತಃ ಷಷ್ಠಂ ವಿನಿರ್ಮಿತಮ್ ॥೪೨॥

ನಿನ್ನ ಮೂಗಿನಿಂದಲೂ ನನಗೆ ಜನ್ಮವು ಲಭಿಸಿತು. ಅದು ನನ್ನ ಐದನೆಯ ಜನ್ಮವಾಯಿತು. ನನ್ನ ಮತ್ತೊಂದು ಜನ್ಮವು ನಿನ್ನ ಅಂಡದಿಂದ (ಬ್ರಹ್ಮಾಂಡದಿಂದ) ಉಂಟಾದುದು. ಅದು ನನ್ನ ಆರನೆಯ ಜನ್ಮ.

ಇದಂ ಚ ಸಪ್ತಮಂ ಜನ್ಮ ಪದ್ಮಜನ್ಮೇತಿ ವೈ ಪ್ರಭೋ ।
ಸರ್ಗೇ ಸರ್ಗೇ ಹ್ಯಹಂ ಪುತ್ರಸ್ತವ ತ್ರಿಗುಣವರ್ಜಿತ ॥೪೩॥

ನಾಭಿಪದ್ಮದಿಂದ ಹುಟ್ಟಿದ ಈಗಿನ ನನ್ನ ಜನ್ಮವು ಏಳನೆಯದು. ತ್ರಿಗುಣವರ್ಜಿತನೇ! (ನಿರ್ಗುಣನೇ!) ಪ್ರತಿಯೊಂದು ಸೃಷ್ಟಿಯ ಕಾಲದಲ್ಲಿಯೂ ನಾನು ನಿನಗೆ ಮಗನಾಗಿಯೇ ಹುಟ್ಟುತ್ತೇನೆ.

ಪ್ರಥಿತಃ ಪುಣ್ಡರೀಕಾಕ್ಷ ಪ್ರಧಾನಗುಣಕಲ್ಪಿತಃ ।
ತ್ವಮೀಶ್ವರಃ ಸ್ವಭಾವಶ್ಚ ಸ್ವಯಮ್ಭೂಃ ಪುರುಷೋತ್ತಮಃ ॥೪೪॥

ಕಮಲಾಕ್ಷನೇ! ನಿನ್ನ ಪುತ್ರನಾದ ನಾನು ಶುದ್ಧಸತ್ತ್ವಮಯಶರೀರ

ನೆಂದು ಪ್ರಸಿದ್ಧನಾಗಿರುವೆನು. ನೀನೇ ಈಶ್ವರನು. ಸ್ವಭಾವವೂ ನೀನೇ ಆಗಿರುವೆ. ಸ್ವಯಂಭುವೂ–ಪುರುಷೋತ್ತಮನೂ ನೀನೇ ಆಗಿರುವೆ.

ತ್ವಯಾ ವಿನಿರ್ಮಿತೋऽಹಂ ವೈ ವೇದಚಕ್ಷುರ್ವಯೋತಿಗಃ ।
ತೇ ಮೇ ವೇದಾ ಹೃತಾಶ್ಚಕ್ಷುರನ್ಧೋ ಜಾತೋऽಸ್ಮಿ ಜಾಗೃಹಿ ।
ದದಸ್ವ ಚಕ್ಷೂಂಷಿ ಮಮ ಪ್ರಿಯೋऽಹಂ ತೇ ಪ್ರಿಯೋऽಸಿ ಮೇ ॥

ನೀನು ನನ್ನನ್ನು ಶ್ರುತಿನೇತ್ರನನ್ನಾಗಿ ಸೃಷ್ಟಿಸಿರುವೆ. ನಿನ್ನ ಅನುಗ್ರಹ ದಿಂದಾಗಿ ನಾನು ಕಾಲವನ್ನೂ ಅತಿಕ್ರಮಿಸಿದ್ದೇನೆ. ನನ್ನ ಕಣ್ಣುಗಳ ರೂಪ ವಾಗಿದ್ದ ವೇದಗಳು ದೈತ್ಯರಿಂದ ಅಪಹೃತವಾದುವು. ಈ ಕಾರಣದಿಂದ ನಾನೀಗ ಕುರುಡನಾಗಿದ್ದೇನೆ. ದೇವದೇವ! ಯೋಗನಿದ್ರೆಯಿಂದ ಎಚ್ಚರ ಗೊಳ್ಳು. ಅಪಹೃತವಾಗಿರುವ ನನ್ನ ಕಣ್ಣುಗಳನ್ನು ತಂದುಕೊಡು. ನಾನು ನಿನಗೆ ಪ್ರಿಯನಾಗಿರುವೆನು. ಹಾಗೆಯೇ ನನಗೂ ನೀನು ಪ್ರಿಯನಾಗಿರುವೆ."

ಬ್ರಹ್ಮನು ಹೀಗೆ ಸ್ತೋತ್ರಮಾಡಿದನಂತರ ಸರ್ವತೋಮುಖನಾದ, ಸರ್ವಾಂತರ್ಯಾಮಿಯಾದ, ಭಗವಂತನಾದ ಪುರುಷೋತ್ತಮನು ಒಡನೆಯೇ ನಿದ್ರೆಯನ್ನು ಪರಿತ್ಯಜಿಸಿ ವೇದಗಳನ್ನು ರಕ್ಷಿಸಲು ಉದ್ಯುಕ್ತನಾದನು.

ಐಶ್ವರ್ಯೇಣ ಪ್ರಯೋಗೇಣ ದ್ವಿತೀಯಾಂ ತನುಮಾಸ್ಥಿತಃ ॥೪೭॥
ಸುನಾಸಿಕೇನ ಕಾಯೇನ ಭೂತ್ವಾ ಚನ್ದ್ರಪ್ರಭಸ್ತದಾ ।
ಕೃತ್ವಾ ಹಯಶಿರಃ ಶುಭ್ರಂ ವೇದಾನಾಮಾಲಯಂ ಪ್ರಭುಃ ॥೪೮॥

ಶ್ರೀಮನ್ನಾರಾಯಣನು ತನ್ನ ಯೋಗೈಶ್ವರ್ಯದಿಂದ ಎರಡನೆಯ ಶರೀರವನ್ನು ಧಾರಣೆಮಾಡಿದನು. ಆ ಶರೀರವು ಚಂದ್ರನ ಬೆಳದಿಂಗಳಿನಂತೆ ಕಾಂತಿಯುಕ್ತವಾಗಿದ್ದಿತು. ಭಗವಂತನು ಸುಂದರವಾದ ಮೂಗಿನಿಂದ ಕೂಡಿದ ಶರೀರವುಳ್ಳವನಾಗಿ ಶುಭ್ರವಾದ ಕುದುರೆಯ ಶಿರಸ್ಸನ್ನು ಧರಿಸಿದ್ದನು. ಅವನ ಆ ದಿವ್ಯವಾದ ಮುಖವು ವೇದಗಳ ಆಲಯವೇ ಆಗಿದ್ದಿತು.

ತಸ್ಯ ಮೂರ್ಧಾ ಸಮಭವದ್ದ್ಯೌಃ ಸನಕ್ಷತ್ರತಾರಕಾ ।
ಕೇಶಾಶ್ಚಾಸ್ಯಾಭವನ್ದೀರ್ಘಾ ರವೇರಂಶುಸಮಪ್ರಭಾಃ ॥೪೯॥

ನಕ್ಷತ್ರಗಳಿಂದಲೂ ಮತ್ತು ತಾರೆಗಳಿಂದಲೂ ಕೂಡಿರುವ ಸ್ವರ್ಗ ಲೋಕವೇ ಅವನ ತಲೆಯಾಗಿದ್ದಿತು. ಅವನ ಕೂದಲುಗಳು ನೀಳವಾಗಿಯೂ ಸೂರ್ಯನ ರಶ್ಮಿಗಳಂತೆ ಪ್ರಭಾಯುಕ್ತವಾಗಿಯೂ ಇದ್ದುವು.

ಕರ್ಣಾವಾಕಾಶಪಾತಾಲೇ ಲಲಾಟಂ ಭೂತಧಾರಿಣೀ ।
ಗಙ್ಗಾ ಸರಸ್ವತೀ ಶ್ರೋಣ್ಯೌ ಭ್ರುವಾವಾಸ್ತಾಂ ಮಹೋದಧೀ ॥೫೦॥

ಆಕಾಶ ಮತ್ತು ಪಾತಾಳಗಳು ಆ ಹಯಗ್ರೀವನ ಕಿವಿಗಳಾಗಿದ್ದುವು. ಸಮಸ್ತಪ್ರಾಣಿಗಳನ್ನೂ ಧರಿಸಿರುವ ಭೂಮಿಯೇ ಹಣೆಯಾಗಿದ್ದಿತು. ಗಂಗಾ ಮತ್ತು ಸರಸ್ವತೀನದಿಗಳು ನಿತಂಬಗಳಾಗಿದ್ದುವು. ಎರಡು ಸಮುದ್ರಗಳೇ ಹುಬ್ಬುಗಳಾಗಿದ್ದುವು.

ಚಕ್ಷುಷೀ ಸೋಮಸೂರ್ಯೌ ತೇ ನಾಸಾ ಸಂಧ್ಯಾ ಪುನಃ ಸ್ಮೃತಾ ।
ಓಂಕಾರಸ್ತ್ವಥ ಸಂಸ್ಕಾರೋ ವಿದ್ಯುಜ್ಜಿಹ್ವಾ ಚ ನಿರ್ಮಿತಾ ॥೫೧॥

ಚಂದ್ರ-ಸೂರ್ಯರೇ ಹಯಗ್ರೀವನ ಕಣ್ಣುಗಳಾಗಿದ್ದರು. ಸಂಧ್ಯಾ ಕಾಲವು ನಾಸಿಕವಾಗಿದ್ದಿತು. ಓಂಕಾರವು ಆಭರಣವಾಗಿದ್ದಿತು. ವಿದ್ಯುತ್ತೇ ನಾಲಿಗೆಯಾಗಿದ್ದಿತು.

ದನ್ತಾಶ್ಚ ಪಿತರೋ ರಾಜನ್ಸೋಮಪಾ ಇತಿ ವಿಶ್ರುತಾಃ ।
ಗೋಲೋಕೋ ಬ್ರಹ್ಮಲೋಕಶ್ಚ ಓಷ್ಠಾವಾಸ್ತಾಂ ಮಹಾತ್ಮನಃ ॥೫೨॥

ವಿಖ್ಯಾತರಾದ ಸೋಮಪರೆಂಬ ಪಿತೃದೇವತೆಗಳೇ ಮಹಾತ್ಮನಾದ ಹಯಗ್ರೀವಸ್ವಾಮಿಯ ಹಲ್ಲುಗಳಾಗಿದ್ದುವು. ಗೋಲೋಕ-ಬ್ರಹ್ಮಲೋಕಗಳು ತುಟಿಗಳಾಗಿದ್ದುವು.

ಗ್ರೀವಾ ಚಾಸ್ಯಾಭವದ್ರಾಜನ್ಕಾಲರಾತ್ರಿರ್ಗುಣೋತ್ತರಾ ॥೫೩॥

ಏತದ್ಧಯಶಿರಃ ಕೃತ್ವಾ ನಾನಾಮೂರ್ತಿಭಿರಾವೃತಮ್ ।
ಅನ್ತರ್ದಧೌ ಸ ವಿಶ್ವೇಶೋ ವಿವೇಶ ಚ ರಸಾಂ ಪ್ರಭುಃ ॥೫೪॥

ತಮೋಮಯವಾದ ಕಾಳರಾತ್ರಿಯು ಹಯಗ್ರೀವನ ಕುತ್ತಿಗೆಯಾಗಿದ್ದಿತು. ನಾನಾಪ್ರಕಾರವಾದ ವಿಶ್ವಮೂರ್ತಿಗಳಿಂದ ಸಂಘಟಿತವಾದ ಕುದುರೆಯ ಮುಖದ ಆಕಾರವನ್ನು ಹೊಂದಿ ವಿಶ್ವೇಶನಾದ ಶ್ರೀಹರಿಯು ಅದೃಶ್ಯನಾಗಿ ರಸಾತಳವನ್ನು ಪ್ರವೇಶಿಸಿದನು.

ರಸಾಂ ಪುನಃ ಪ್ರವಿಷ್ಟಶ್ಚ ಯೋಗಂ ಪರಮಮಾಸ್ಥಿತಃ ।
ಶೈಕ್ಷ್ಯಂ ಸ್ವರಂ ಸಮಾಸ್ಥಾಯ ಉದ್ಗೀತಂ ಪ್ರಾಸೃಜತ್ಸ್ವರಮ್ ॥೫೫॥

ರಸಾತಳವನ್ನು ಪ್ರವೇಶಿಸಿ, ಪರಮಯೋಗವನ್ನು ಆಶ್ರಯಿಸಿ, ವೇದದ ಮಂತ್ರಗಳ ಸರಿಯಾದ ಉಚ್ಚಾರಣೆಯನ್ನು ತಿಳಿಸುವ 'ಶಿಕ್ಷಾ' ಎಂಬ ವೇದಾಂಗದ ನಿಯಮಕ್ಕೆ ಅನುಸಾರವಾಗಿ ಕ್ರುಷ್ಟವೇ ಮೊದಲಾದ ಸಪ್ತಸ್ವರಗಳಿಂದ ಯುಕ್ತವಾದ ಸಾಮವೇದವನ್ನು ಗಾನಮಾಡತೊಡಗಿದನು.

ಸ ಸ್ವರಃ ಸಾನುನಾದೀ ಚ ಸರ್ವಶಃ ಸ್ನಿಗ್ಧ ಏವ ಚ ।
ಬಭೂವಾನ್ತರ್ಮಹೀಭೂತಃ ಸರ್ವಭೂತಗುಣೋದಿತಃ ॥೫೬॥

ಸರ್ವತ್ರ ಪ್ರತಿಧ್ವನಿಸುತ್ತಿದ್ದ ಆ ಸಾಮಗಾನಸ್ವರವು ಮನೋಹರವಾಗಿದ್ದಿತು. ಸಮಸ್ತಪ್ರಾಣಿಗಳಿಗೂ ಧೈರ್ಯ-ಶೌರ್ಯ-ವಾತ್ಸಲ್ಯಾದಿ ಗುಣಗಳನ್ನು ಉದ್ಬೋಧಿಸುವುದಾಗಿದ್ದ ಆ ಸುಮಧುರಸಾಮಗಾನವು ಭೂಮಿಯ ಕೆಳಭಾಗದಲ್ಲಿದ್ದ ರಸಾತಳದಲ್ಲಿ ಎಲ್ಲ ಕಡೆಗೂ ವ್ಯಾಪಿಸಿತು.

ತತಸ್ತಾವಸುರೌ ಕೃತ್ವಾ ವೇದಾನ್ಸಮಯಬನ್ಧನಾನ್ ।
ರಸಾತಲೇ ವಿನಿಕ್ಷಿಪ್ಯ ಯತಃ ಶಬ್ದಸ್ತತೋ ದ್ರುತೌ ॥೫೭॥

ಸಾಮಗಾನವನ್ನು ಕೇಳುತ್ತಲೇ ಮಧು-ಕೈಟಭದೈತ್ಯರು ವೇದಗಳನ್ನು ಕಾಲಪಾಶಗಳಿಂದ ಬಂಧಿಸಿ ರಸಾತಳದಲ್ಲಿ ಬಚ್ಚಿಟ್ಟು ಸಾಮಗಾನವು ಕೇಳಿಬರುತ್ತಿದ್ದ ಕಡೆಗೆ ಧಾವಿಸಿದರು.

ಏತಸ್ಮಿನ್ನನ್ತರೇ ರಾಜನ್ದೇವೋ ಹಯಶಿರೋಧರಃ ।
ಜಗ್ರಾಹ ವೇದಾನಖಿಲಾನ್ರಸಾತಲಗತಾನ್ಹರಿಃ ।
ಪ್ರಾದಾಚ್ಚ ಬ್ರಹ್ಮಣೇ ಭೂಯಸ್ತತಃ ಸ್ವಾಂ ಪ್ರಕೃತಿಂ ಗತಃ ॥೫೮॥

ಯುಧಿಷ್ಠಿರ! ಈ ಮಧ್ಯದಲ್ಲಿ ದೇವದೇವನಾದ ಕುದುರೆಯ ಶಿರಸ್ಸನ್ನು ಧರಿಸಿದ್ದ ಶ್ರೀಹರಿಯು ರಸಾತಳದಲ್ಲಿದ್ದ ಸಮಸ್ತವೇದಗಳನ್ನೂ ತೆಗೆದುಕೊಂಡು ಬ್ರಹ್ಮನ ಬಳಿಗೆ ಹೋಗಿ ಆ ನಿಖಿಲವಾದ ವೇದಗಳನ್ನೂ ಅವನಿಗೆ ಕೊಟ್ಟನು. ಪುನಃ ತನ್ನ ಮೂಲಸ್ವರೂಪವನ್ನೇ ಹೊಂದಿದನು.

ಸ್ಥಾಪಯಿತ್ವಾ ಹಯಶಿರ ಉದಕ್ಪೂರ್ವೇ ಮಹೋದಧೌ ।
ವೇದಾನಾಮಾಲಯಂ ಚಾಪಿ ಬಭೂವಾಶ್ವಶಿರಾಸ್ತತಃ ॥೫೯॥

ಶ್ರೀಹರಿಯು ಮಹೋದಧಿಯ ಈಶಾನ್ಯಭಾಗದಲ್ಲಿ ವೇದಗಳಿಗೆ ಆಶ್ರಯಭೂತವಾದ ಹಯಗ್ರೀವರೂಪವನ್ನು ಸ್ಥಾಪಿಸಿ ತನ್ನ ಮೂಲ ಸ್ವರೂಪವನ್ನು ಹೊಂದಿದನು. ಅಲ್ಲಿಂದ ಮುಂದೆ ವೇದೋದ್ಧಾರಕನಾದ ಶ್ರೀಹರಿಯು ಹಯಗ್ರೀವನೆಂಬ ಹೆಸರಿನಿಂದ ವಿಖ್ಯಾತನಾದನು.

ಇತ್ತಲಾಗಿ ಸಾಮಗಾನವಾಗುತ್ತಿದ್ದೆಡೆಗೆ ಧಾವಿಸಿಹೋದ ಮಧು-ಕೈಟಭ ದೈತ್ಯರು ಅಲ್ಲಿ ಯಾವುದನ್ನೂ ಕಾಣಲಿಲ್ಲ. ಪುನಃ ಅವರು ಅಲ್ಲಿಂದ ವೇದ ಗಳನ್ನು ಕಾಲಪಾಶಗಳಿಂದ ಬಂಧಿಸಿಟ್ಟಿದ್ದ ಸ್ಥಳಕ್ಕೆ ಅತ್ಯಂತವೇಗವಾಗಿ ಹೋದರು. ಆ ಸ್ಥಳವೂ ಶೂನ್ಯವಾಗಿರುವುದನ್ನು ಅವರು ನೋಡಿದರು. ಬಳಿಕ ಬಲಿಷ್ಠರಲ್ಲಿ ಶ್ರೇಷ್ಠರಾದ ಇಬ್ಬರು ದೈತ್ಯರೂ ಉತ್ತಮವಾದ ವೇಗವನ್ನಾಶ್ರಯಿಸಿ ರಸಾತಳದಿಂದ ಹೊರಟು ಶೀಘ್ರವಾಗಿ ಮೇಲಕ್ಕೆ ಬಂದರು. ಅಲ್ಲಿ ಅವರು ಆದಿಕರ್ತೃವಾದ, ಪ್ರಭುವಾದ, ಚಂದ್ರನಂತೆ ವಿಶುದ್ಧವಾದ ಕಾಂತಿಯಿಂದ ಕೂಡಿದ್ದ, ಗೌರವರ್ಣನಾದ, ಅನಿರುದ್ಧನ ರೂಪದಲ್ಲಿದ್ದ, ಅಮಿತಪರಾಕ್ರಮಿಯಾದ, ಯೋಗನಿದ್ರೆಯನ್ನು ಆಶ್ರಯಿಸಿದ್ದ ಪುರುಷೋತ್ತಮನಾದ ಅದೇ ಶ್ರೀಹರಿಯನ್ನೇ ಪುನಃ ನೋಡಿದರು.

ಆತ್ಮಪ್ರಮಾಣರಚಿತೇ ಅಪಾಮುಪರಿ ಕಲ್ಪಿತೇ ।
ಶಯನೇ ನಾಗಭೋಗಾಢ್ಯೇ ಜ್ವಾಲಾಮಾಲಾಸಮಾವೃತೇ ॥೬೪॥

ನಿಷ್ಕಲ್ಮಷೇಣ ಸತ್ತ್ವೇನ ಸಮ್ಪನ್ನಂ ರುಚಿರಪ್ರಭಮ್ ।
ತಂ ದೃಷ್ಟ್ವಾ ದಾನವೇನ್ದ್ರೌ ತೌ ಮಹಾಹಾಸಮಮುಞ್ಚತಾಮ್ ॥೬೫॥

ನೀರಿನ ಮೇಲೆ ಶರೀರದ ಪ್ರಮಾಣಕ್ಕನುಗುಣವಾಗಿ ಕಲ್ಪಿತವಾಗಿದ್ದ, ಜ್ವಾಲೆಯ ಮಾಲೆಗಳಿಂದ ಆವೃತವಾಗಿದ್ದ ಶೇಷನಾಗನ ಶರೀರರೂಪವಾದ ಹಾಸಿಗೆಯಲ್ಲಿ ಮಲಗಿದ್ದ, ನಿಷ್ಕಲ್ಮಷವಾದ ಸತ್ತ್ವಗುಣದಿಂದ ಸಂಪನ್ನನಾಗಿದ್ದ, ಸುಂದರವಾದ ಪ್ರಭೆಯಿಂದ ಕೂಡಿದ್ದ ಆ ಶ್ರೀಹರಿಯನ್ನು ನೋಡಿ ದಾನವೇಂದ್ರರಿಬ್ಬರೂ ಅಟ್ಟಹಾಸದಿಂದ ನಗತೊಡಗಿದರು. ರಜೋಗುಣ-

ತಮೋಗುಣಗಳಿಂದ ಆವಿಷ್ಟರಾಗಿದ್ದ ಆ ದೈತ್ಯರು ಪರಸ್ಪರವಾಗಿ ಮಾತನಾಡಿಕೊಂಡರು :

ಅಯಂ ಸ ಪುರುಷಃ ಶ್ವೇತಃ ಶೇತೇ ನಿದ್ರಾಮುಪಾಗತಃ ।
ಅನೇನ ನೂನಂ ವೇದಾನಾಂ ಕೃತಮಾಹರಣಂ ರಸಾತ್ ।
ಕಸ್ಯೈಷ ಕೋ ನು ಖಲ್ವೇಷ ಕಿಂ ಚ ಸ್ವಪಿತಿ ಭೋಗವಾನ್ ॥೬೭॥

“ಗೌರಾಂಗನಾದ ಈ ಪುರುಷನೇ ರಸಾತಳಕ್ಕೆ ಬಂದಿದ್ದವನು. ನಿದ್ರಾವಶನಾಗಿ ಮಲಗಿಬಿಟ್ಟಿದ್ದಾನೆ. ನಿಶ್ಚಯವಾಗಿಯೂ ಇವನೇ ರಸಾತಳದಿಂದ ವೇದಗಳನ್ನು ಅಪಹರಿಸಿರತಕ್ಕವನು. ಇವನು ಯಾರ ಮಗನಿರಬಹುದು?

ಯಾರಾಗಿರಬಹುದು? ಇಲ್ಲಿ ಸರ್ಪವನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡು ಏಕೆ ಮಲಗಿದ್ದಾನೆ.?"

ಹೀಗೆ ಪರಸ್ಪರವಾಗಿ ಮಾತನಾಡಿಕೊಂಡ ಆ ದೈತ್ಯರು ಹರಿಯನ್ನು ಎಚ್ಚರಗೊಳಿಸಿದರು. ದೈತ್ಯರಿಂದ ಎಚ್ಚರಗೊಳಿಸಲ್ಪಟ್ಟ ಪುರುಷೋತ್ತಮನು ಆ ಅಸುರೇಂದ್ರರನ್ನು ಒಮ್ಮೆ ನೋಡಿ, ಅವರು ಯುದ್ಧಮಾಡುವ ಇಚ್ಛೆಯುಳ್ಳವರಾಗಿರುವರೆಂಬುದನ್ನು ತಿಳಿದು, ತಾನೂ ಅವರೊಡನೆ ಯುದ್ಧ ಮಾಡಲು ನಿಶ್ಚಯಿಸಿದನು. ಅನಂತರ ನಾರಾಯಣನಿಗೂ ಮಧು-ಕೈಟಭರಿಗೂ ಯುದ್ಧವು ಪ್ರಾರಂಭವಾಯಿತು. ಬ್ರಹ್ಮನಿಗೆ ಅಭ್ಯುದಯವನ್ನುಂಟು ಮಾಡುತ್ತಾ ಶ್ರೀಮನ್ನಾರಾಯಣನು ರಜೋಗುಣ-ತಮೋಗುಣಗಳಿಂದ ವ್ಯಾಪ್ತವಾದ ಶರೀರಗಳನ್ನು ಹೊಂದಿದ್ದ ಆ ಇಬ್ಬರು ದೈತ್ಯರನ್ನೂ ಸಂಹರಿಸಿದನು. ಹೀಗೆ ಪುರುಷೋತ್ತಮನು ಮಧು-ಕೈಟಭರ ಸಂಹಾರದಿಂದಲೂ, ವೇದಗಳನ್ನು ತಂದುಕೊಟ್ಟುದರಿಂದಲೂ ಬ್ರಹ್ಮನ ಶೋಕವನ್ನು ನಿವಾರಿಸಿದನು. ಬಳಿಕ ವೇದಗಳಿಂದ ಸಮ್ಮಾನಿತನಾದ ಮತ್ತು ಶ್ರೀಹರಿಯಿಂದ ಸಂರಕ್ಷಿತನಾದ ಬ್ರಹ್ಮನು ಚರಾಚರಪ್ರಾಣಿಗಳಿಂದ ಯುಕ್ತವಾದ ಸಮಸ್ತ ಲೋಕಗಳನ್ನೂ ನಿರ್ಮಿಸಿದನು. ಭಗವಾನ್ ನಾರಾಯಣನು ಬ್ರಹ್ಮನಿಗೆ ಲೋಕಸೃಷ್ಟಿರೂಪವಾದ ಶ್ರೇಷ್ಠವಾದ ಬುದ್ಧಿಯನ್ನು ದಯಪಾಲಿಸಿ ಅಲ್ಲಿಯೇ ಅಂತರ್ಹಿತನಾಗಿ ಎಲ್ಲಿಂದ ಬಂದಿದ್ದನೋ ಅಲ್ಲಿಗೇ ಹೊರಟುಹೋದನು.

ಹೀಗೆ ಶ್ರೀಹರಿಯು ಕುದುರೆಯ ಶಿರಸ್ಸುಳ್ಳ ಶರೀರವನ್ನು ಧರಿಸಿ ವೇದಗಳನ್ನು ತಂದು ಮಧು-ಕೈಟಭರನ್ನು ಸಂಹರಿಸಿ ಪ್ರವೃತ್ತಿಧರ್ಮದ ಪ್ರಚಾರಾರ್ಥವಾಗಿ ತನ್ನ ಹಿಂದಿನ ಶರೀರವನ್ನೇ ಪುನಃ ಧರಿಸಿದನು. ಹೀಗೆ ಮಹಾಭಾಗ್ಯಶಾಲಿಯಾದ ಶ್ರೀಹರಿಯು ಹಯಗ್ರೀವನಾದನು. ಭಗವಂತನ ವರದಾಯಕವಾದ ಈ ಹಯಗ್ರೀವರೂಪವು ಪುರಾತನವಾದುದು ಹಾಗೂ ಪುರಾಣಪ್ರಸಿದ್ಧವಾದುದು.

ಯೋ ಹ್ಯೇತದ್ಬ್ರಾಹ್ಮಣೋ ನಿತ್ಯಂ ಶೃಣುಯಾದ್ಧಾರಯೀತ ವಾ ।
ನ ತಸ್ಯಾಧ್ಯಯನಂ ನಾಶಮುಪಗಚ್ಛೇತ್ಕದಾಚನ ॥೭೬॥

ಯಾವ ಬ್ರಾಹ್ಮಣನು ಪ್ರತಿದಿನವೂ ಈ ಹಯಗ್ರೀವಾವತಾರದ ಕಥೆ

ಯನ್ನು ಕೇಳುವನೋ ಅಥವಾ ಸ್ಮರಿಸುವನೋ–ಅಂತಹವನ ಅಧ್ಯಯನವು ಯಾವಾಗಲೂ ನಷ್ಟವಾಗಿ (ನಿಷ್ಫಲವಾಗಿ) ಹೋಗುವುದಿಲ್ಲ.

ಆರಾಧ್ಯ ತಪಸೋಗ್ರೇಣ ದೇವಂ ಹಯಶಿರೋಧರಮ್ ।
ಪಞ್ಚಾಲೇನ ಕ್ರಮಃ ಪ್ರಾಪ್ತೋ ದೇವೇನ ಪಥಿ ದೇಶಿತೇ ॥೭೭॥

ಪಾಂಚಾಲದೇಶೀಯನಾದ ಗಾಲವಮುನಿಯು ಮಹಾದೇವನು ಉಪದೇಶಿಸಿದ ಮಾರ್ಗದಲ್ಲಿ ದೇವದೇವನಾದ ಹಯಗ್ರೀವನನ್ನು ಉಗ್ರವಾದ ತಪಸ್ಸಿನಿಂದ ಆರಾಧಿಸಿ ಕ್ರಮಪಾಠವನ್ನು ಪಡೆದುಕೊಂಡನು.

ಮಹಾರಾಜ! ನೀನು ಯಾವ ಹಯಗ್ರೀವನ ವಿಷಯವಾಗಿ ನನ್ನನ್ನು ಪ್ರಶ್ನಿಸಿದೆಯೋ –ಅಂತಹ ಹಯಗ್ರೀವನಿಗೆ ಸಂಬಂಧಿಸಿದ ಪುರಾತನವಾದ ವೇದಸಮ್ಮತವಾದ ಆಖ್ಯಾನವನ್ನು ನಿನಗೆ ಹೇಳಿದ್ದೇನೆ.

ಯಾಂ ಯಾಮಿಚ್ಛೇತ್ತನುಂ ದೇವಃ ಕರ್ತುಂ ಕಾರ್ಯವಿಧೌ ಕ್ವಚಿತ್ ।
ತಾಂ ತಾಂ ಕುರ್ಯಾದ್ವಿಕುರ್ವಾಣಃ ಸ್ವಯಮಾತ್ಮಾನಮಾತ್ಮನಾ ॥೭೮॥

ಪರಮಾತ್ಮನು ಯಾವ ಯಾವ ಕಾರ್ಯಸಿದ್ಧಿಗಾಗಿ ಯಾವ ಯಾವ ಶರೀರವನ್ನು ಧರಿಸಲು ಇಚ್ಛಿಸುವನೋ –ಆಯಾ ಕಾರ್ಯವನ್ನು ಮಾಡುವ ಸಮಯದಲ್ಲಿ ತಾನಾಶಿಸಿದ ಆಯಾ ಶರೀರವನ್ನು ತನ್ನಿಂದಲೇ ಪ್ರಕಟಪಡಿಸುತ್ತಾನೆ.

ಏಷ ವೇದನಿಧಿಃ ಶ್ರೀಮಾನೇಷ ವೈ ತಪಸೋ ನಿಧಿಃ ।
ಏಷ ಯೋಗಶ್ಚ ಸಾಂಖ್ಯಂ ಚ ಬ್ರಹ್ಮ ಚಾಗ್ರ್ಯಂ ಹವಿರ್ವಿಭುಃ ॥೭೯॥

ಶ್ರೀಮಂತನಾದ ಶ್ರೀಹರಿಯೇ ವೇದ ಮತ್ತು ತಪಸ್ಸುಗಳಿಗೆ ನಿಧಿಯಾಗಿದ್ದಾನೆ. ಯೋಗ, ಸಾಂಖ್ಯ, ಬ್ರಹ್ಮ ಶ್ರೇಷ್ಠವಾದ ಹವಿಸ್ಸು, ವಿಭು–ಎಲ್ಲವೂ ಇವನೇ ಆಗಿದ್ದಾನೆ.

ನಾರಾಯಣಪರಾ ವೇದಾ ಯಜ್ಞಾ ನಾರಾಯಣಾತ್ಮಕಾಃ ।
ತಪೋ ನಾರಾಯಣಪರಂ ನಾರಾಯಣಪರಾ ಗತಿಃ ॥೮೦॥

ವೇದಗಳೆಲ್ಲವೂ ನಾರಾಯಣಪರವಾಗಿಯೇ ಇವೆ. (ನಾರಾಯಣನನ್ನೇ ಸ್ತುತಿಸುತ್ತವೆ.) ಯಜ್ಞಗಳೆಲ್ಲವೂ ನಾರಾಯಣನ ಸ್ವರೂಪಗಳೇ

ಆಗಿವೆ. ತಪಸ್ಸಿಗೆ ಪರಮಫಲವೂ ನಾರಾಯಣನೇ. ನಾರಾಯಣಪ್ರಾಪ್ತಿಯೇ ಸರ್ವೋತ್ತಮವಾದ ಗತಿಯೂ ಆಗಿದೆ.

ನಾರಾಯಣಪರಂ ಸತ್ಯಮೃತಂ ನಾರಾಯಣಾತ್ಮಕಮ್ ।
ನಾರಾಯಣಪರೋ ಧರ್ಮಃ ಪುನರಾವೃತ್ತಿರ್ದುರ್ಲಭಃ ॥೮೨॥

ಸತ್ಯದ ಪರಮಗುರಿಯು ನಾರಾಯಣನೇ ಆಗಿದ್ದಾನೆ. ಋತವು ನಾರಾಯಣನ ಸ್ವರೂಪವೇ ಆಗಿದೆ. ಪುನರಾವೃತ್ತಿಶೀಲರಾದ ಪ್ರವೃತ್ತಿ ಧರ್ಮಿಗಳಿಗೆ ದುರ್ಲಭವಾದ, ನಿವೃತ್ತಿಪ್ರಧಾನವಾದ ಧರ್ಮದ ಅಂತಿಮ ಗುರಿಯೂ ನಾರಾಯಣನೇ ಆಗಿದ್ದಾನೆ.

ಪ್ರವೃತ್ತಿಲಕ್ಷಣಶ್ಚೈವ ಧರ್ಮೋ ನಾರಾಯಣಾತ್ಮಕಃ ।
ನಾರಾಯಣಾತ್ಮಕೋ ಗನ್ಧೋ ಭೂಮೌ ಶ್ರೇಷ್ಠತಮಃ ಸ್ಮೃತಃ ॥೮೩॥

ಪ್ರವೃತ್ತಿಲಕ್ಷಣವುಳ್ಳ ಧರ್ಮವೂ ನಾರಾಯಣನ ಸ್ವರೂಪವೇ ಆಗಿದೆ. ಪೃಥ್ವಿಯ ಗುಣವಾದ ಶ್ರೇಷ್ಠತರವಾದ ಗಂಧವೂ ನಾರಾಯಣಾತ್ಮಕವೇ ಆಗಿದೆ.

ಅಪಾಂ ಚಾಪಿ ಗುಣಾ ರಾಜನ್ರಸಾ ನಾರಾಯಣಾತ್ಮಕಾಃ ।
ಜ್ಯೋತಿಷಾಂ ಚ ಪರಂ ರೂಪಂ ಸ್ಮೃತಂ ನಾರಾಯಣಾತ್ಮಕಮ್ ॥

ಜಲದ ಗುಣವಾದ ರಸಗಳೂ ನಾರಾಯಣನ ಸ್ವರೂಪಗಳೇ ಆಗಿವೆ. ತೇಜಸ್ಸುಗಳ ಉತ್ತಮಗುಣವಾದ ರೂಪವೂ ನಾರಾಯಣಾತ್ಮಕವೆಂದು ಹೇಳಲ್ಪಟ್ಟಿದೆ.

ನಾರಾಯಣಾತ್ಮಕಶ್ಚಾಪಿ ಸ್ಪರ್ಶೋ ವಾಯುಗುಣಃ ಸ್ಮೃತಃ ।
ನಾರಾಯಣಾತ್ಮಕಶ್ಚೈವ ಶಬ್ದ ಆಕಾಶಸಮ್ಭವಃ ॥೮೫॥

ವಾಯುವಿನ ಗುಣವಾದ ಸ್ಪರ್ಶವೂ ನಾರಾಯಣಾತ್ಮಕವೇ ಆಗಿದೆ. ಆಕಾಶದಿಂದ ಹುಟ್ಟುವ ಶಬ್ದವೆಂಬ ಗುಣವೂ ನಾರಾಯಣನ ಸ್ವರೂಪವೇ ಆಗಿದೆ.

ಮನಶ್ಚಾಪಿ ತತೋ ಭೂತಮವ್ಯಕ್ತಗುಣಲಕ್ಷಣಮ್ ।
ನಾರಾಯಣಪರಂ ಕಾಲೋ ಜ್ಯೋತಿಷಾಮಯನಂ ಚ ಯತ್ ॥೮೬॥

ಅವ್ಯಕ್ತಗುಣವನ್ನೂ ಮತ್ತು ಅವ್ಯಕ್ತಲಕ್ಷಣವನ್ನೂ ಹೊಂದಿರುವ ಮನಸ್ಸೆಂಬ ವಸ್ತುವೂ, ಕಾಲವೂ ಮತ್ತು ನಕ್ಷತ್ರಮಂಡಲವೂ ನಾರಾಯಣನನ್ನೇ ಆಶ್ರಯಿಸಿವೆ.

ನಾರಾಯಣಪರಾ ಕೀರ್ತಿಃ ಶ್ರೀಶ್ಚ ಲಕ್ಷ್ಮೀಶ್ಚ ದೇವತಾಃ ।
ನಾರಾಯಣಪರಂ ಸಾಂಖ್ಯಂ ಯೋಗೋ ನಾರಾಯಣಾತ್ಮಕಃ ॥೮೭॥

ಕೀರ್ತಿ, ಶ್ರೀ ಮತ್ತು ಲಕ್ಷ್ಮೀ –ಈ ಮೂವರು ದೇವತೆಗಳೂ ನಾರಾಯಣನನ್ನೇ ತಮ್ಮ ಪರಮಾಶ್ರಯನನ್ನಾಗಿ ಭಾವಿಸಿದ್ದಾರೆ. ಸಾಂಖ್ಯ ಶಾಸ್ತ್ರವೂ ನಾರಾಯಣನನ್ನೇ ಪ್ರತಿಪಾದಿಸುತ್ತದೆ. ಯೋಗಶಾಸ್ತ್ರವೂ ನಾರಾಯಣನ ಸ್ವರೂಪವೇ ಆಗಿದೆ.

ಕಾರಣಂ ಪುರುಷೋ ಹ್ಯೇಷಾಂ ಪ್ರಧಾನಂ ಚಾಪಿ ಕಾರಣಮ್ ।
ಸ್ವಭಾವಶ್ಚೈವ ಕರ್ಮಾಣಿ ದೈವಂ ಯೇಷಾಂ ಚ ಕಾರಣಮ್ ॥೮೮॥

ಇವೆಲ್ಲಕ್ಕೂ ಪುರುಷನು ಕಾರಣನು. ಪ್ರಧಾನವೂ ಕಾರಣವು. ಸ್ವಭಾವವೂ ಮತ್ತು ಕರ್ಮಗಳೂ ಕಾರಣಗಳು. ಆದರೆ ಇವುಗಳೆಲ್ಲಕ್ಕೂ ನಾರಾಯಣನೇ ಕಾರಣನು.

ಅಧಿಷ್ಠಾನಂ ತಥಾ ಕರ್ತಾ ಕರಣಂ ಚ ಪೃಥಗ್ವಿಧಮ್ ।
ವಿವಿಧಾ ಚ ತಥಾ ಚೇಷ್ಟಾ ದೈವಂ ಚೈವಾತ್ರ ಪಞ್ಚಮಮ್ ।
ಪಞ್ಚಕಾರಣಸಂಖ್ಯಾತೋ ನಿಷ್ಠಾ ಸರ್ವತ್ರ ವೈ ಹರಿಃ ॥೮೯॥

ಅಧಿಷ್ಠಾನ, ಕರ್ತಾ, ಪ್ರತ್ಯೇಕ-ಪ್ರತ್ಯೇಕವಾದ ಕರಣಗಳು, ನಾನಾ ವಿಧವಾದ ಚೇಷ್ಟೆಗಳು (ಕ್ರಿಯೆಗಳು) ಮತ್ತು ಐದನೆಯದಾದ ದೈವ–ಈ ಐದು ಕಾರಣಗಳ ರೂಪದಲ್ಲಿ ಸರ್ವತ್ರ ಶ್ರೀಹರಿಯೇ ಇದ್ದಾನೆ.

ತತ್ತ್ವಂ ಜಿಜ್ಞಾಸಮಾನಾನಾಂ ಹೇತುಭಿಃ ಸರ್ವತೋಮುಖೈಃ ।
ತತ್ತ್ವಮೇಕೋ ಮಹಾಯೋಗೀ ಹರಿರ್ನಾರಾಯಣಃ ಪ್ರಭುಃ ॥೯೦॥

ಯಾರು ಸರ್ವಮುಖವಾದ ಕಾರಣಗಳ ಮೂಲಕ ತತ್ತ್ವವನ್ನು ತಿಳಿಯಲು ಇಚ್ಛಿಸುವರೋ –ಅವರಿಗೆ ಮಹಾಯೋಗಿಯಾದ ಪ್ರಭುವಾದ ಹರಿನಾರಾಯಣನೇ ಜ್ಞೇಯನಾದ ಏಕೈಕ ಮಹಾತತ್ತ್ವವು.

ಬ್ರಹ್ಮಾದೀನಾಂ ಸ ಲೋಕಾನಾಮೃಷೀಣಾಂ ಚ ಮಹಾತ್ಮನಾಮ್ ।
ಸಾಂಖ್ಯಾನಾಂ ಯೋಗಿನಾಂ ಚಾಪಿ ಯತೀನಾಮಾತ್ಮವೇದಿನಾಮ್ ।
ಮನೀಷಿತಂ ವಿಜಾನಾತಿ ಕೇಶವೋ ನ ತು ತಸ್ಯ ತೇ ॥೯೨॥

ಶ್ರೀಕೇಶವನು ಬ್ರಹ್ಮಾದಿ ದೇವತೆಗಳ, ಲೋಕಗಳ (ಸಕಲಪ್ರಾಣಿಗಳ), ಮಹಾತ್ಮರಾದ ಋಷಿಗಳ, ಸಾಂಖ್ಯರ, ಯೋಗಿಗಳ ಮತ್ತು ಆತ್ಮವನ್ನು ತಿಳಿದಿರುವ ಯತಿಗಳ ಅಂತರಂಗವನ್ನು ತಿಳಿದಿರುತ್ತಾನೆ. ಆದರೆ ಇವರಲ್ಲಿ ಯಾರೂ ಶ್ರೀಕೇಶವನ ಅಂತರಂಗವನ್ನು ತಿಳಿದವರಾಗಿಲ್ಲ.

ಯೇ ಕೇಚಿತ್ಸರ್ವಲೋಕೇಷು ದೈವಂ ಪಿತ್ರ್ಯಂ ಚ ಕುರ್ವತೇ ।
ದಾನಾನಿ ಚ ಪ್ರಯಚ್ಛನ್ತಿ ತಪ್ಯನ್ತೇ ಚ ತಪೋ ಮಹತ್ ॥೯೩॥

ಸರ್ವೇಷಾಮಾಶ್ರಯೋ ವಿಷ್ಣುರೈಶ್ವರಂ ವಿಧಿಮಾಸ್ಥಿತಃ ।
ಸರ್ವಭೂತಕೃತಾವಾಸೋ ವಾಸುದೇವೇತಿ ಚೋಚ್ಯತೇ ॥೯೪॥

ಎಲ್ಲ ಲೋಕಗಳಲ್ಲಿಯೂ ಯಾವ ಕೆಲವರು ದೇವತೆಗಳಿಗಾಗಿ ಯಜ್ಞಾದಿಗಳನ್ನೂ, ಪಿತೃಗಳಿಗಾಗಿ ಶ್ರಾದ್ಧ-ತರ್ಪಣಾದಿಗಳನ್ನೂ ಮಾಡುವರೋ, ದಾನಗಳನ್ನು ಕೊಡುವರೋ, ದುಷ್ಕರವಾದ ಮಹಾತಪಸ್ಸುಗಳನ್ನು ಮಾಡುವರೋ –ಅವರೆಲ್ಲರಿಗೂ ಯೋಗೈಶ್ವರ್ಯದಲ್ಲಿ ಸ್ಥಿತನಾಗಿರುವ ಶ್ರೀಮನ್ಮಹಾವಿಷ್ಣುವೇ ಆಶ್ರಯನಾಗಿರುತ್ತಾನೆ. ಸರ್ವಪ್ರಾಣಿಗಳಲ್ಲಿಯೂ ಅವನು ವಾಸಮಾಡುವುದರಿಂದ ಮಹಾವಿಷ್ಣುವನ್ನು ವಾಸುದೇವನೆಂದೂ ಕರೆಯುತ್ತಾರೆ.

ಅಯಂ ಹಿ ನಿತ್ಯಃ ಪರಮೋ ಮಹರ್ಷಿ-
ರ್ಮಹಾವಿಭೂತಿರ್ಗುಣವರ್ಜಿತಾಖ್ಯಃ ।
ಗುಣೈಶ್ಚ ಸಂಯೋಗಮುಪೈತಿ ಶೀಘ್ರಂ
ಕಾಲೋ ಯಥರ್ತಾವೃತುಸಮ್ಪ್ರಯುಕ್ತಃ ॥೯೫॥

ಪರಮಮಹರ್ಷಿಯಾದ ಶ್ರೀಮನ್ನಾರಾಯಣನು ನಿತ್ಯನೂ, ಮಹೈಶ್ವರ್ಯದಿಂದ ಯುಕ್ತನಾದವನೂ ಮತ್ತು ಗುಣಗಳಿಂದ ರಹಿತನೂ ಆಗಿದ್ದಾನೆ. ಯಾವ ರೀತಿಯಲ್ಲಿ ಗುಣಗಳಿಂದ ರಹಿತವಾಗಿರುವ ಕಾಲವು ಆಯಾ

ಋತುಗಳಿಗೆ ಸಂಬಂಧಿಸಿದ ಶೀತೋಷ್ಣಾದಿ ಗುಣಗಳಿಂದ ಯುಕ್ತವಾಗುವುದೋ–ಅದೇ ರೀತಿಯಲ್ಲಿ ಪರಮಾತ್ಮನು ನಿರ್ಗುಣನಾಗಿದ್ದರೂ ಸಮಯಗಳಲ್ಲಿ ಗುಣಗಳೊಡನೆ ಸಂಪರ್ಕವನ್ನು ಹೊಂದುತ್ತಾನೆ.

ನೈವಾಸ್ಯ ವಿನ್ದನ್ತಿ ಗತಿಂ ಮಹಾತ್ಮನೋ
ನ ಚಾಗತಿಂ ಕಶ್ಚಿದಿಹಾನುಪಶ್ಯತಿ ।
ಜ್ಞಾನಾತ್ಮಕಾಃ ಸನ್ತಿ ಹಿ ಯೇ ಮಹರ್ಷಯಃ
ಪಶ್ಯನ್ತಿ ನಿತ್ಯಂ ಪುರುಷಂ ಗುಣಾಧಿಕಮ್ ॥೯೬॥

ಮಹಾತ್ಮನಾದ ನಾರಾಯಣನ ಮಾರ್ಗವನ್ನು ಯಾರೂ ತಿಳಿಯಲಾರರು. ಅವನ ಆಗಮನದ ವಿಷಯವನ್ನೂ (ಯಾವಾಗ ಅವನು ಭೂಮಿಯಲ್ಲಿ ಅವತಾರಮಾಡುವನೆಂಬುದನ್ನೂ) ಯಾರೂ ಅರಿಯರು. ಜ್ಞಾನಸ್ವರೂಪರಾಗಿರುವ ಮಹರ್ಷಿಗಳು ಮಾತ್ರವೇ ಅನಂತಗುಣಸಂಪನ್ನನಾದ, ನಿತ್ಯನಾದ ಪುರುಷೋತ್ತಮನನ್ನು ನೋಡುತ್ತಾರೆ.”

ಇಳ೭ನೆಯ ಅಧ್ಯಾಯವು ಮುಗಿಯಿತು.

ಇಳ೮ನೆಯ ಅಧ್ಯಾಯ — ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಸಾತ್ವತ ಧರ್ಮದ ಉಪದೇಶ ಪರಂಪರೆ: ಭಗವಂತನಲ್ಲಿ ಅನನ್ಯಭಕ್ತಿಯ ಮಹಿಮೆ

ಜನಮೇಜಯನು ಹೇಳುತ್ತಾನೆ :

ಅಹೋ ಹ್ಯೇಕಾನ್ತಿನಃ ಸರ್ವಾನ್ಪ್ರೀಣಾತಿ ಭಗವಾನ್ಹರಿಃ ।
ವಿಧಿಪ್ರಯುಕ್ತಾಂ ಪೂಜಾಂ ಚ ಗೃಹ್ಣಾತಿ ಭಗವಾನ್ಸ್ವಯಮ್ ॥೧॥

“ಪೂಜ್ಯರೇ! ಏನಾಶ್ಚರ್ಯ! ಶ್ರೀಹರಿಯು ಅನನ್ಯಭಾವದಿಂದ ಭಜಿಸುವ ಎಲ್ಲ ಭಕ್ತರ ವಿಷಯದಲ್ಲಿಯೂ ಪ್ರಸನ್ನನಾಗಿರುತ್ತಾನೆ. ಅವರು ವಿಧಿವತ್ತಾಗಿ ಮಾಡುವ ಪೂಜೆಯನ್ನು ಶ್ರೀಹರಿಯೇ ಸ್ವತಃ ಸ್ವೀಕರಿಸುತ್ತಾನೆ.

ಯೇ ತು ದಗ್ಧೇನ್ಧನಾ ಲೋಕೇ ಪುಣ್ಯಪಾಪವಿವರ್ಜಿತಾಃ ।
ತೇಷಾಂ ತ್ವಯಾಭಿನಿರ್ದಿಷ್ಟಾ ಪಾರಮ್ಪರ್ಯಾಗತಾ ಗತಿಃ ॥೨॥

ಪ್ರಪಂಚದಲ್ಲಿ ಯಾರು ಸುಟ್ಟುಹೋದ ಕಟ್ಟಿಗೆಯುಳ್ಳವರಾಗಿರುವರೋ (ನಷ್ಟವಾದ ವಾಸನೆಯುಳ್ಳವರಾಗಿರುವರೋ), ಪುಣ್ಯ-ಪಾಪಗಳಿಂದ ರಹಿತರಾಗಿರುವರೋ –ಅಂತಹವರಿಗೆ ಪರಂಪರೆಯಿಂದ ಯಾವ ಸದ್ಗತಿಯು ಸಿಕ್ಕುವುದೆಂಬುದನ್ನು ನೀವು ಹೇಳಿರುವಿರಿ.

ಚತುರ್ಥ್ಯಾಂ ಚೈವ ತೇ ಗತ್ಯಾಂ ಗಚ್ಛನ್ತಿ ಪುರುಷೋತ್ತಮಮ್ ।
ಏಕಾನ್ತಿನಸ್ತು ಪುರುಷಾ ಗಚ್ಛನ್ತಿ ಪರಮಂ ಪದಮ್ ॥೩॥

ಪುಣ್ಯ-ಪಾಪವಿವರ್ಜಿತರಾದ ಮತ್ತು ವಾಸನಾರಹಿತರಾದ ಸಾಧಕರು ಪರಂಪರೆಯಿಂದ ನಾಲ್ಕನೆಯ ಮಾರ್ಗದಲ್ಲಿ ಪುರುಷೋತ್ತಮನನ್ನು ಹೊಂದುತ್ತಾರೆ. (ಅನಿರುದ್ಧ-ಪ್ರದ್ಯುಮ್ನ-ಸಂಕರ್ಷಣರ ಮಾರ್ಗವನ್ನು ಸಾಧಿಸಿ ಅನಂತರ ನಾಲ್ಕನೆಯವನಾದ ವಾಸುದೇವನ ಮಾರ್ಗವನ್ನು ಆಶ್ರಯಿಸುತ್ತಾರೆ. ಕ್ರಮಮುಕ್ತಿಯನ್ನು ಹೊಂದುತ್ತಾರೆ.) ಆದರೆ ಅನನ್ಯಭಕ್ತರಾದವರು ಅನಿರುದ್ಧ-ಪ್ರದ್ಯುಮ್ನ-ಸಂಕರ್ಷಣರನ್ನು ಅತಿಕ್ರಮಿಸಿ ನೇರವಾಗಿ ವಾಸುದೇವನ ಪರಮಪದವನ್ನೇ ಸೇರುತ್ತಾರೆ.

ನೂನಮೇಕಾನ್ತಧರ್ಮೋಽಯಂ ಶ್ರೇಷ್ಠೋ ನಾರಾಯಣಪ್ರಿಯಃ ।
ಅಗತ್ವಾ ಗತಯಸ್ತಿಸ್ರೋ ಯದ್ಗಚ್ಛತ್ಯವ್ಯಯಂ ಹರಿಮ್ ॥೪॥

ನಿಶ್ಚಯವಾಗಿಯೂ ಈ ಏಕಾಂತಧರ್ಮವು (ಅನನ್ಯಭಾವದಿಂದ ಶ್ರೀಹರಿಯನ್ನೇ ಆರಾಧಿಸುವ ಧರ್ಮವು) ಅತ್ಯಂತಶ್ರೇಷ್ಠವಾದುದು ; ನಾರಾಯಣನಿಗೂ ಅತ್ಯಂತಪ್ರಿಯವಾದುದು. ಈ ಧರ್ಮವನ್ನಾಶ್ರಯಿಸಿದವರು ಅನಿರುದ್ಧ-ಪ್ರದ್ಯುಮ್ನ-ಸಂಕರ್ಷಣರ ಗತಿಯನ್ನು ಹೊಂದದೆಯೇ ನೇರವಾಗಿ ಅವಿನಾಶಿಯಾದ ಶ್ರೀಹರಿಯನ್ನು ಹೊಂದುತ್ತಾರೆ.

ಸಹೋಪನಿಷದಾನ್ವೇದಾನ್ಯೇ ವಿಪ್ರಾಃ ಸಮ್ಯಗಾಸ್ಥಿತಾಃ ।
ಪಠನ್ತಿ ವಿಧಿಮಾಸ್ಥಾಯ ಯೇ ಚಾಪಿ ಯತಿಧರ್ಮಿಣಃ ।
ತೇಭ್ಯೋ ವಿಶಿಷ್ಟಾಂ ಜಾನಾಮಿ ಗತಿಮೇಕಾನ್ತಿನಾಂ ನೃಣಾಮ್ ॥೫॥

ಯಾವ ಬ್ರಾಹ್ಮಣರು ಉಪನಿಷತ್ತುಗಳಿಂದ ಕೂಡಿರುವ ವೇದಗಳನ್ನೇ ಪರಮಾಶ್ರಯವನ್ನಾಗಿ ಭಾವಿಸಿ ವಿಧಿಪೂರ್ವಕವಾಗಿ ಅಧ್ಯಯನಮಾಡುವರೋ

ಮತ್ತು ಯಾರು ಯತಿಧರ್ಮವನ್ನು ಆಶ್ರಯಿಸಿರುವರೋ–ಅಂತಹವರಿಗೆ ಪ್ರಾಪ್ತವಾಗುವ ಸದ್ಗತಿಗಿಂತಲೂ ಶ್ರೇಷ್ಠವಾದ ಸದ್ಗತಿಯು ಪರಮಾತ್ಮ ನಲ್ಲಿಯೇ ಅನನ್ಯಭಕ್ತಿಯುಳ್ಳ ಮನುಷ್ಯರಿಗೆ ಪ್ರಾಪ್ತವಾಗುವುದೆಂದು ನಾನು ಭಾವಿಸುತ್ತೇನೆ.

ಕೇನೈಷ ಧರ್ಮಃ ಕಥಿತೋ ದೇವೇನ ಋಷಿಣಾಪಿ ವಾ ॥೬॥

ಏಕಾನ್ತಿನಾಂ ಚ ಕಾ ಚರ್ಯಾ ಕದಾ ಚೋತ್ಪಾದಿತಾ ವಿಭೋ ।
ಏತನ್ಮೇ ಸಂಶಯಂ ಛಿನ್ಧಿ ಪರಂ ಕೌತೂಹಲಂ ಹಿ ಮೇ ॥೭॥

ವೈಶಂಪಾಯನರೇ! ಭಕ್ತಿರೂಪವಾದ ಈ ಧರ್ಮವನ್ನು ಮೊದಲು ಯಾವ ದೇವತೆಯು ಅಥವಾ ಋಷಿಯು ಉಪದೇಶಿಸಿದನು? ಏಕಾಂತಿಗಳ ಜೀವನವಿಧಾನವು ಹೇಗಿರುತ್ತದೆ? ಈ ಅನನ್ಯಭಕ್ತಿಧರ್ಮವು ಎಂದಿನಿಂದ ಪ್ರಚಲಿತವಾಯಿತು?–ಈ ಎಲ್ಲ ವಿಷಯಗಳನ್ನೂ ಹೇಳಿ ನನ್ನ ಸಂಶಯವನ್ನು ನಿವಾರಿಸಿರಿ. ಇದನ್ನು ತಿಳಿಯಲು ನನಗೆ ಬಹಳ ಕುತೂಹಲವಿದೆ.”

ವೈಶಂಪಾಯನರು ಹೇಳುತ್ತಾರೆ :

ಸಮುಪೋಢೇಷ್ವನೀಕೇಷು ಕುರುಪಾಣ್ಡವಯೋರ್ಮೃಧೇ ।
ಅರ್ಜುನೇ ವಿಮನಸ್ಕೇ ಚ ಗೀತಾ ಭಗವತಾ ಸ್ವಯಮ್ ॥೮॥

“ಜನಮೇಜಯ! ಕೌರವ-ಪಾಂಡವರ ಯುದ್ಧದಲ್ಲಿ ಎರಡು ಸೈನ್ಯಗಳೂ ಯುದ್ಧಕ್ಕೆ ಸಜ್ಜಾಗಿ ಎದುರು-ಬದುರಾಗಿ ನಿಂತಿದ್ದಾಗ – ಅರ್ಜುನನು ಖಿನ್ನಮನಸ್ಕನಾಗಿ ಕುಳಿತನು. ಆ ಸಮಯದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಈ ಅನನ್ಯಭಕ್ತಿಯ ಧರ್ಮವನ್ನೊಳಗೊಂಡ ಗೀತೆಯನ್ನು ಉಪದೇಶಿಸಿದನು.

ಅಗತಿಶ್ಚ ಗತಿಶ್ಚೈವ ಪೂರ್ವಂ ತೇ ಕಥಿತಾ ಮಯಾ ।
ಗಹನೋ ಹ್ಯೇಷ ಧರ್ಮೋ ವೈ ದುರ್ವಿಜ್ಞೇಯೋಽಕೃತಾತ್ಮಭಿಃ ॥೯॥

ನಾನು ಈ ಹಿಂದೆ ನಿನಗೆ ಅಗತಿಧರ್ಮವನ್ನೂ (ನಿವೃತ್ತಿಧರ್ಮವನ್ನೂ) ಗತಿಧರ್ಮವನ್ನೂ (ಪ್ರವೃತ್ತಿಧರ್ಮವನ್ನೂ) ಹೇಳಿದ್ದೇನೆ. ಈ ಏಕಾಂತ ಧರ್ಮವು ಅಥವಾ ಉಪಾಸನಾಧರ್ಮವು ಅತಿಗಹನವಾದುದು ಮತ್ತು ಜಿತೇಂದ್ರಿಯರಲ್ಲದವರಿಂದ ತಿಳಿಯಲು ಅಸಾಧ್ಯವಾದುದು.

ಸಮ್ಮಿತಃ ಸಾಮವೇದೇನ ಪುರೈವಾದಿಯುಗೇ ಕೃತಃ ।
ಧಾರ್ಯತೇ ಸ್ವಯಮೀಶೇನ ರಾಜನ್ನಾರಾಯಣೇನ ಚ ॥೧೦॥

ಮಹಾರಾಜ! ಈ ಈಶ್ವರಪ್ರಣಿದಾನಧರ್ಮವು (ಭಕ್ತಿಪ್ರಪತ್ತಿ ಧರ್ಮವು) ಸಾಮವೇದಕ್ಕೆ ಸಮಾನವಾದುದು. ಹಿಂದೆ ಈ ಧರ್ಮವು ಆದಿಯುಗವಾದ ಕೃತಯುಗದಿಂದಲೇ ಪ್ರಾರಂಭವಾಯಿತು. ಮಹಾದೇವನಾದ ನಾರಾಯಣನೇ ಈ ಧರ್ಮವನ್ನು ಸ್ವತಃ ಧರಿಸಿದ್ದಾನೆ.

ಏತದರ್ಥಂ ಮಹಾರಾಜ ಪೃಷ್ಟಃ ಪಾರ್ಥೇನ ನಾರದಃ ।
ಋಷಿಮಧ್ಯೇ ಮಹಾಭಾಗಃ ಶೃಣ್ವತೋಃ ಕೃಷ್ಣಭೀಷ್ಮಯೋಃ ॥೧೧॥

ಕುಂತೀಪುತ್ರನಾದ ಯುಧಿಷ್ಠಿರನು ಕೃಷ್ಣ-ಭೀಷ್ಮರು ಕೇಳುತ್ತಿದ್ದಂತೆ ಋಷಿಗಳ ಮಧ್ಯದಲ್ಲಿ ಇದೇ ವಿಷಯವಾಗಿ ಮಹಾಭಾಗ್ಯಶಾಲಿಗಳಾದ ನಾರದರನ್ನು ಪ್ರಶ್ನಿಸಿದನು.

ಗುರುಣಾ ಚ ಮಯಾಪ್ಯೇಷ ಕಥಿತೋ ನೃಪಸತ್ತಮ ।
ಯಥಾ ತತ್ಕಥಿತಂ ತತ್ರ ನಾರದೇನ ತಥಾ ಶೃಣು ॥೧೨॥

ನಾರದರು ಋಷಿಗಳ ಮಧ್ಯದಲ್ಲಿ ಯುಧಿಷ್ಠಿರಾದಿಗಳಿಗೆ ಹೇಳಿದುದನ್ನೇ ನನ್ನ ಗುರುಗಳಾದ ಕೃಷ್ಣದ್ವೈಪಾಯನವ್ಯಾಸರು ನನಗೂ ಹೇಳಿದರು. ಆ ವಿಷಯವನ್ನೇ ನಿನಗೂ ಯಥಾವತ್ತಾಗಿ ಹೇಳುತ್ತೇನೆ, ಲಾಲಿಸು.

ಯದಾಸೀನ್ಮಾನಸಂ ಜನ್ಮ ನಾರಾಯಣಮುಖೋದ್ಗತಮ್ ।
ಬ್ರಹ್ಮಣಃ ಪೃಥಿವೀಪಾಲ ತದಾ ನಾರಾಯಣಃ ಸ್ವಯಮ್ ॥೧೩॥

ತೇನ ಧರ್ಮೇಣ ಕೃತವಾನ್ದೈವಂ ಪಿತ್ರ್ಯಂ ಚ ಭಾರತ ।
ಫೇನಪಾ ಋಷಯಶ್ಚೈವ ತಂ ಧರ್ಮಂ ಪ್ರತಿಪೇದಿರೇ ॥೧೪॥

ಪೃಥಿವೀಪಾಲನೇ! ಸೃಷ್ಟಿಯ ಆದಿಯಲ್ಲಿ ಯಾವಾಗ ಶ್ರೀಮನ್ನಾರಾಯಣನ ಮುಖದಿಂದ ಬ್ರಹ್ಮನ ಮಾನಸಿಕಜನ್ಮವಾಯಿತೋ ಆಗಲೇ ನಾರಾಯಣನು ಈ ಧರ್ಮವನ್ನು ಬ್ರಹ್ಮನಿಗೆ ಸಾಕ್ಷಾತ್ತಾಗಿ ಉಪದೇಶಿಸಿದನು. ಈ ಧರ್ಮವನ್ನು ಅನುಸರಿಸಿಯೇ ನಾರಾಯಣರ್ಷಿಯು ದೇವತಾ ಸಂಬಂಧವಾದ ಮತ್ತು ಪಿತೃಸಂಬಂಧವಾದ ಪೂಜೆಗಳನ್ನು ಮಾಡುತ್ತಿದ್ದನು.

ಅನಂತರ ಫೇನಪರೆಂಬ ಋಷಿಗಳೂ ಅದೇ ಧರ್ಮವನ್ನು ವಿಷ್ಣುವಿನಿಂದ ಪಡೆದುಕೊಂಡರು.

ವೈಖಾನಸಾಃ ಫೇನಪೇಭ್ಯೋ ಧರ್ಮಂ ತಂ ಪ್ರತಿಪೇದಿರೇ ।
ವೈಖಾನಸೇಭ್ಯಃ ಸೋಮಸ್ತು ತತಃ ಸೋಽನ್ತರ್ದಧೇ ಪುನಃ ॥೧೫॥

ಫೇನಪರಿಂದ ವೈಖಾನಸರು ಆ ಧರ್ಮವನ್ನು ಪಡೆದುಕೊಂಡರು. ಬಳಿಕ ವೈಖಾನಸರಿಂದ ಸೋಮನು ಆ ಧರ್ಮವನ್ನು ಪಡೆದುಕೊಂಡನು. ಅನಂತರ ಅದು ಲುಪ್ತವಾಗಿಹೋಯಿತು.

ಯದಾಸೀಚ್ಚಾಕ್ಷುಷಂ ಜನ್ಮ ದ್ವಿತೀಯಂ ಬ್ರಹ್ಮಣೋ ನೃಪ ।
ತದಾ ಪಿತಾಮಹೇನೈವ ಸೋಮಾದ್ಧರ್ಮಃ ಪರಿಶ್ರುತಃ ।
ನಾರಾಯಣಾತ್ಮಕೋ ರಾಜನ್ರುದ್ರಾಯ ಪ್ರದದೌ ಚ ತಮ್ ॥೧೬॥

ಮತ್ತೊಂದು ಕಲ್ಪದಲ್ಲಿ ಯಾವಾಗ ಬ್ರಹ್ಮನಿಗೆ ಶ್ರೀಮನ್ನಾರಾಯಣನ ಕಣ್ಣುಗಳಿಂದ ಎರಡನೆಯ ಜನ್ಮವಾಯಿತೋ ಆಗ ಅವನು ಸೋಮನಿಂದ ನಾರಾಯಣಾತ್ಮಕವಾದ ಆ ಧರ್ಮವನ್ನು ಕೇಳಿ ತಿಳಿದುಕೊಂಡನು. ಬಳಿಕ ಬ್ರಹ್ಮನು ಅದೇ ಧರ್ಮವನ್ನು ರುದ್ರನಿಗೆ ಉಪದೇಶಿಸಿದನು.

ತತೋ ಯೋಗಸ್ಥಿತೋ ರುದ್ರಃ ಪುರಾ ಕೃತಯುಗೇ ನೃಪ ।
ವಾಲಖಿಲ್ಯಾನೃಷೀನ್ಸರ್ವಾನ್ಧರ್ಮಮೇತದಪಾಠಯತ್ ॥೧೭॥

ಅನ್ತರ್ದಧೇ ತತೋ ಭೂಯಸ್ತಸ್ಯ ದೇವಸ್ಯ ಮಾಯಯಾ ॥೧೮॥

ಬಳಿಕ ಯೋಗನಿಷ್ಠನಾದ ರುದ್ರನು ಕೃತಯುಗದಲ್ಲಿ ನಾರಾಯಣಾತ್ಮಕವಾದ ಆ ಧರ್ಮವನ್ನು ವಾಲಖಿಲ್ಯಮಹರ್ಷಿಗಳಿಗೆ ಹೇಳಿಕೊಟ್ಟನು. ಅನಂತರ ಮಹಾವಿಷ್ಣುವಿನ ಮಾಯೆಯಿಂದಾಗಿ ಪುನಃ ಆ ಧರ್ಮವು ಲುಪ್ತವಾಗಿಹೋಯಿತು.

ತೃತೀಯಂ ಬ್ರಹ್ಮಣೋ ಜನ್ಮ ಯದಾಸೀದ್ವಾಚಿಕಂ ಮಹತ್ ।
ತತ್ರೈಷ ಧರ್ಮಃ ಸಮ್ಭೂತಃ ಸ್ವಯಂ ನಾರಾಯಣಾನ್ನೃಪ ॥೧೯॥

ಮತ್ತೊಂದು ಕಲ್ಪದಲ್ಲಿ ಯಾವಾಗ ಬ್ರಹ್ಮನ ಮಹತ್ವಪೂರ್ಣವಾದ ಮೂರನೆಯ ಜನ್ಮವು ಭಗವಂತನಾದ ಶ್ರೀಮನ್ನಾರಾಯಣನ ವಾಣಿ

ಯಿಂದಲೇ ಉಂಟಾಯಿತೋ–ಆಗ ಅಲ್ಲಿಯೇ ಸಾಕ್ಷಾತ್ ನಾರಾಯಣ ನಿಂದಲೇ ಈ ಧರ್ಮವು ಪುನಃ ಪ್ರಕಟವಾಯಿತು.

ಸುಪರ್ಣೋ ನಾಮ ತಮೃಷಿಃ ಪ್ರಾಪ್ತವಾನ್ಪುರುಷೋತ್ತಮಾತ್ ।
ತಪಸಾ ವೈ ಸುತಪ್ತೇನ ದಮೇನ ನಿಯಮೇನ ಚ ॥೨೦॥

ಸುಪರ್ಣ ಎಂಬ ಹೆಸರಿನ ಋಷಿಯು ಇಂದ್ರಿಯಗಳ ಸಂಯಮ ದಿಂದಲೂ, ಮನೋನಿಗ್ರಹರೂಪವಾದ ನಿಯಮದಿಂದಲೂ, ದುಷ್ಕರವಾದ ತಪಸ್ಸಿನಿಂದಲೂ ಭಗವಂತನಾದ ಪುರುಷೋತ್ತಮನಿಂದ ಈ ಮಹಾಧರ್ಮ ವನ್ನು ಪಡೆದುಕೊಂಡನು.

ತ್ರಿಃ ಪರಿಕ್ರಾನ್ತವಾನೇತತ್ಸುಪರ್ಣೋ ಧರ್ಮಮುತ್ತಮಮ್ ।
ಯಸ್ಮಾತ್ತಸ್ಮಾದ್ವ್ರತಂ ಹ್ಯೇತತ್ತ್ರಿಸೌಪರ್ಣಮಿಹೋಚ್ಯತೇ ॥೨೧॥

ಸುಪರ್ಣನು ಈ ಧರ್ಮಸಂಹಿತೆಯನ್ನು ಪ್ರತಿನಿತ್ಯವೂ ಮೂರು ಸಲ ಪಾರಾಯಣಮಾಡುತ್ತಿದ್ದನು. ಆದುದರಿಂದ ಈ ವ್ರತವನ್ನು ಅಥವಾ ಧರ್ಮವನ್ನು 'ತ್ರಿಸೌಪರ್ಣ' ವೆಂದೂ ಕರೆಯುತ್ತಾರೆ.

ಋಗ್ವೇದಪಾಠಪಠಿತಂ ವ್ರತಮೇತದ್ಧಿ ದುಶ್ಚರಮ್ ।
ಸುಪರ್ಣಾಚ್ಚಾಪ್ಯಧಿಗತೋ ಧರ್ಮ ಏಷ ಸನಾತನಃ ।
ವಾಯುನಾ ದ್ವಿಪದಾಂ ಶ್ರೇಷ್ಠ ಕಥಿತೋ ಜಗದಾಯುಷಾ ॥೨೨॥

ಅತ್ಯಂತದುಷ್ಕರವಾದ ಈ ಏಕಾಂತವ್ರತವು (ಧರ್ಮವು) ಋಗ್ವೇದ ಪಾಠದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಜಗತ್ತಿಗೆ ಪ್ರಾಣಸ್ವರೂಪನಾದ ವಾಯುವು ಸುಪರ್ಣನಿಂದ ಈ ಸನಾತನಧರ್ಮವನ್ನು ಪಡೆದುಕೊಂಡನು.

ವಾಯೋಃ ಸಕಾಶಾತ್ಪ್ರಾಪ್ತಶ್ಚ ಋಷಿಭಿರ್ವಿಘಸಾಶಿಭಿಃ ।
ತತೋ ಮಹೋದಧಿಶ್ಚೈವ ಪ್ರಾಪ್ತವಾನ್ಧರ್ಮಮುತ್ತಮಮ್ ॥೨೩॥
ಅನ್ತರ್ದಧೇ ತತೋ ಭೂಯೋ ನಾರಾಯಣಸಮಾಹಿತಃ ॥೨೪॥

ವಿಘಸವನ್ನು (ಯಜ್ಞಶೇಷವನ್ನು) ತಿಂದು ಜೀವಿಸುತ್ತಿದ್ದ ಋಷಿಗಳು ಈ ಏಕಾಂತಧರ್ಮವನ್ನು ವಾಯುವಿನಿಂದ ಪಡೆದುಕೊಂಡರು. ಅನಂತರ

ವಿಘಸಾಶಿಗಳಾದ ಆ ಮಹರ್ಷಿಗಳಿಂದ ಮಹೋದಧಿಯು (ಸಮುದ್ರ ರಾಜನು) ಈ ಧರ್ಮವನ್ನು ಪಡೆದುಕೊಂಡನು. ಪುನಃ ಈ ಧರ್ಮವು ಲುಪ್ತವಾಗಿ ನಾರಾಯಣನಲ್ಲಿ ಸೇರಿಹೋಯಿತು.

ಯದಾ ಭೂಯಃ ಶ್ರವಣಜಾ ಸೃಷ್ಟಿರಾಸೀನ್ಮಹಾತ್ಮನಃ ।
ಬ್ರಹ್ಮಣಃ ಪುರುಷವ್ಯಾಘ್ರ ತತ್ರ ಕೀರ್ತಯತಃ ಶೃಣು ॥೨೫॥

ಮತ್ತೊಂದು ಕಲ್ಪದಲ್ಲಿ ಯಾವಾಗ ಬ್ರಹ್ಮನ ನಾಲ್ಕನೆಯ ಜನ್ಮವು ಶ್ರೀಮನ್ನಾರಾಯಣನ ಕಿವಿಯಿಂದಾಯಿತೋ –ಆಗ ಈ ಧರ್ಮವು ಪುನಃ ಪ್ರಾದುರ್ಭವಿಸಿತು. ಅದು ಹೇಗೆ ಪುನಃ ಹುಟ್ಟಿತೆಂಬುದನ್ನು ಹೇಳುವೆನು ; ಕೇಳು.

ಜಗತ್ಸ್ರಷ್ಟುಮನಾ ದೇವೋ ಹರಿರ್ನಾರಾಯಣಃ ಸ್ವಯಮ್ ।
ಚಿನ್ತಯಾಮಾಸ ಪುರುಷಂ ಜಗತ್ಸರ್ಗಕರಂ ಪ್ರಭುಮ್ ॥೨೬॥

ದೇವದೇವನಾದ ಸಾಕ್ಷಾತ್ ಹರಿನಾರಾಯಣನೇ ಜಗತ್ತನ್ನು ಸೃಷ್ಟಿಸುವ ಇಚ್ಛೆಯಿಂದ ಕೂಡಿದವನಾಗಿ ಸ್ಥಾವರ-ಜಂಗಮಾತ್ಮಕವಾದ ಪ್ರಪಂಚವನ್ನು ಸೃಷ್ಟಿಸಲು ಸಮರ್ಥನಾದ ಪುರುಷನೊಬ್ಬನನ್ನು ಸ್ಮರಿಸಿದನು.

ಅಥ ಚಿನ್ತಯತಸ್ತಸ್ಯ ಕರ್ಣಾಭ್ಯಾಂ ಪುರುಷಃ ಸ್ಮೃತಃ ।
ಪ್ರಜಾಸರ್ಗಕರೋ ಬ್ರಹ್ಮಾ ತಮುವಾಚ ಜಗತ್ಪತಿಃ ।
ಸೃಜ ಪ್ರಜಾಃ ಪುತ್ರ ಸರ್ವಾ ಮುಖತಃ ಪಾದತಸ್ತಥಾ ॥೨೭॥

ಹಾಗೆ ಸ್ಮರಿಸಿದೊಡನೆಯೇ ಭಗವಂತನ ಕಿವಿಗಳಿಂದ ಪುರುಷನೊಬ್ಬನು ಹುಟ್ಟಿದನೆಂದು ಹೇಳಲ್ಪಟ್ಟಿದೆ. ಅವನೇ ಪ್ರಜೆಗಳನ್ನು ಸೃಷ್ಟಿಮಾಡುವ ಬ್ರಹ್ಮನು. (ಬ್ರಹ್ಮನ ನಾಲ್ಕನೆಯ ಜನ್ಮವಿದು.) ಬ್ರಹ್ಮನು ಹುಟ್ಟಿದನಂತರ ಜಗತ್ಪತಿಯಾದ ನಾರಾಯಣನು ಅವನೊಡನೆ ಹೇಳಿದನು : "ಪುತ್ರ! ಮುಖದಿಂದಲೂ ಪಾದಗಳಿಂದಲೂ (ಮುಖದಿಂದ ಪಾದಗಳವರೆಗಿನ ಎಲ್ಲ ಅವಯವಗಳಿಂದಲೂ) ಎಲ್ಲ ಪ್ರಜೆಗಳನ್ನೂ ಸೃಷ್ಟಿಸು.

ಶ್ರೇಯಸ್ತವ ವಿಧಾಸ್ಯಾಮಿ ಬಲಂ ತೇಜಶ್ಚ ಸುವ್ರತ ।
ಧರ್ಮಂ ಚ ಮತ್ತೋ ಗೃಹ್ಣೀಷ್ವ ಸಾತ್ವತಂ ನಾಮ ನಾಮತಃ ॥೨೮॥

ತೇನ ಸೃಷ್ಟಂ ಕೃತಯುಗಂ ಸ್ಥಾಪಯಸ್ವ ಯಥಾವಿಧಿ ।
ತ್ವಂ ಕರ್ತಾ ಯುಗಧರ್ಮಾಣಾಂ ನಿರಾಶೀಃ ಕರ್ಮಸಂಜ್ಞಿತಮ್ ॥

ಸುವ್ರತನೇ! ನಾನು ನಿನಗೆ ಶ್ರೇಯಸ್ಸನ್ನುಂಟುಮಾಡುತ್ತೇನೆ. ನಿನ್ನ ಬಲವನ್ನೂ ಮತ್ತು ತೇಜಸ್ಸನ್ನೂ ವೃದ್ಧಿಗೊಳಿಸುತ್ತೇನೆ. ಯುಗಧರ್ಮಗಳನ್ನೂ ನೀನು ರಚಿಸು. ನಿಷ್ಕಾಮಕರ್ಮಯೋಗವೆಂದು ಕರೆಯಲ್ಪಡುವ ಸಾತ್ವತವೆಂಬ ಧರ್ಮವನ್ನು ನನ್ನಿಂದ ಪಡೆದುಕೊ. ನೀನು ಸೃಷ್ಟಿಮಾಡಿದ ಕೃತಯುಗವನ್ನು ಆ ಸಾತ್ವತಧರ್ಮದಿಂದ ವಿಧಿಗೆ ತಕ್ಕಂತೆ ನೆಲೆಗೊಳಿಸುವವನಾಗು.”

ಅನಂತರ ಬ್ರಹ್ಮನು ಶ್ರೀಹರಿಗೆ ನಮಸ್ಕರಿಸಿದನು. ರಹಸ್ಯಯುಕ್ತವಾದ, ಸಂಗ್ರಹಯುಕ್ತವಾದ ಆರಣ್ಯಕದಿಂದ ಸಹಿತವಾದ, ನಾರಾಯಣನ ಮುಖದಿಂದ ಪ್ರಕಟವಾದ ಶ್ರೇಷ್ಠವಾದ ಆ ಸಾತ್ವತಧರ್ಮವನ್ನು ಪ್ರತಿಗ್ರಹಿಸಿದನು. ಮಹಾತೇಜಸ್ವಿಯಾದ ಬ್ರಹ್ಮನಿಗೆ ಸಾತ್ವತಧರ್ಮವನ್ನು ಉಪದೇಶಿಸಿ ಶ್ರೀಹರಿಯು ಅಜ್ಞಾನಾಂಧಕಾರದಿಂದ ಆಚೆಯಿದ್ದ (ತಮಸಃ ಪಾರಂ) ತನ್ನ ಜ್ಯೋತಿರ್ಮಯವೂ ಅವ್ಯಕ್ತಸ್ವರೂಪವುಳ್ಳದ್ದೂ ಆದ ಸ್ಥಾನಕ್ಕೆ ತೆರಳಿದನು. ಬಳಿಕ ಲೋಕಪಿತಾಮಹನಾದ ವರದನಾದ ಬ್ರಹ್ಮದೇವನು ಸ್ಥಾವರ-ಜಂಗಮಗಳಿಂದ ಯುಕ್ತವಾದ ಸಮಸ್ತಲೋಕಗಳನ್ನೂ ಸೃಷ್ಟಿಸಿದನು. ಆಗ ಮೊದಲನೆಯದಾಗಿ ಶುಭಕರವಾದ ಕೃತಯುಗವು ಪ್ರಾರಂಭವಾಯಿತು. ಆ ಸಮಯದಲ್ಲಿ ಸಾತ್ವತಧರ್ಮವು ಎಲ್ಲ ಲೋಕಗಳಲ್ಲಿಯೂ ವ್ಯಾಪಿಸಿದ್ದಿತು. ಲೋಕಸೃಷ್ಟಿಕರ್ತನಾದ ಬ್ರಹ್ಮನು ಆ ಆದಿಧರ್ಮದ ಮೂಲಕವಾಗಿಯೇ ಪ್ರಭುವಾದ, ದೇವೇಶನಾದ ಹರಿನಾರಾಯಣನನ್ನು ಪೂಜಿಸಿದನು. ಧರ್ಮಪ್ರತಿಷ್ಠಾಪನೆಗಾಗಿಯೂ ಲೋಕಗಳಿಗೆ ಹಿತವನ್ನುಂಟುಮಾಡುವ ಇಚ್ಛೆಯಿಂದಲೂ ಬ್ರಹ್ಮನು ಸಾತ್ವತಧರ್ಮವನ್ನು ಸ್ವಾರೋಚಿಷಮನುವಿಗೆ ಉಪದೇಶಿಸಿದನು. ಸರ್ವಲೋಕಗಳಿಗೂ ಪತಿಯಾದ, ಪ್ರಭುವಾದ, ಪುರುಷವ್ಯಾಘ್ರನಾದ ಸ್ವಾರೋಚಿಷಮನುವು ಶಂಖಪದನೆಂಬ ತನ್ನ ಮಗನಿಗೆ ಸಾತ್ವತಧರ್ಮವನ್ನು ತಾನೇ ಅಧ್ಯಯನಮಾಡಿಸಿದನು. ಬಳಿಕ ಶಂಖಪದನು ತನ್ನ ಔರಸಪುತ್ರನಾದ, ದಿಕ್ಪತಿಯಾದ

ಸುವರ್ಣಾಭನಿಗೆ ಆ ಧರ್ಮವನ್ನೇ ಅಧ್ಯಯನಮಾಡಿಸಿದನು. ಆದರೆ ತ್ರೇತಾಯುಗವು ಪ್ರಾರಂಭವಾದೊಡನೆಯೇ ಆ ಸಾತ್ವತಧರ್ಮವು ಪುನಃ ಲುಪ್ತವಾಯಿತು. ಆ ಸಮಯದಲ್ಲಿ ಬ್ರಹ್ಮನು ಶ್ರೀಮನ್ನಾರಾಯಣನ ಮೂಗಿನಿಂದ ತನ್ನ ಐದನೆಯ ಜನ್ಮವನ್ನು ಪಡೆದುಕೊಂಡನು. ಕಮಲಾಕ್ಷನಾದ, ಪ್ರಭುವಾದ ಹರಿನಾರಾಯಣದೇವನು ಅದೇ ಸಾತ್ವತಧರ್ಮವನ್ನು ಬ್ರಹ್ಮನ ಸಮ್ಮುಖದಲ್ಲಿ ಹೇಳಿದನು. ಬಳಿಕ ಪೂಜ್ಯನಾದ ಸನತ್ಕುಮಾರನು ಬ್ರಹ್ಮನಿಂದ ಆ ಧರ್ಮದ ಉಪದೇಶವನ್ನು ಪಡೆದನು. ಕೃತಯುಗದ ಆದಿಯಲ್ಲಿ ವೀರಣಪ್ರಜಾಪತಿಯು ಸನತ್ಕುಮಾರನಿಂದ ಆ ಧರ್ಮವನ್ನು ಅಧ್ಯಯನಮಾಡಿದನು.

ವೀರಣಪ್ರಜಾಪತಿಯು ಸಾತ್ವತಧರ್ಮವನ್ನು ಅಧ್ಯಯನಮಾಡಿ ಅದೇ ಧರ್ಮವನ್ನು ರೈಭ್ಯಮುನಿಗೆ ಉಪದೇಶಿಸಿದನು. ರೈಭ್ಯನು ಅದನ್ನು ಪವಿತ್ರಾತ್ಮನಾದ, ಉತ್ತಮವ್ರತನಿಷ್ಠನಾದ, ಒಳ್ಳೆಯ ಮೇಧಾಶಕ್ತಿಯನ್ನು ಹೊಂದಿದ್ದ, ದಿಕ್ಪಾಲನಾಗಿದ್ದ, ಧರ್ಮಿಷ್ಠನಾಗಿದ್ದ ಕುಕ್ಷಿ ಎಂಬ ಹೆಸರಿನ ತನ್ನ ಮಗನಿಗೆ ಉಪದೇಶಿಸಿದನು. ಶ್ರೀಮನ್ನಾರಾಯಣನ ಮುಖದಿಂದ ಹುಟ್ಟಿಬಂದಿದ್ದ ಸಾತ್ವತಧರ್ಮವು ಪುನಃ ಲುಪ್ತವಾಯಿತು. ಮಹಾವಿಷ್ಣುವಿನ ಹೊಟ್ಟೆಯಿಂದ ಪುನಃ ಬ್ರಹ್ಮನು ತನ್ನ ಆರನೆಯ ಜನ್ಮವನ್ನು ಪಡೆದನು. ಹರಿಯೋನಿಯಾದ ಬ್ರಹ್ಮನ ಸಲುವಾಗಿ ಆ ಸಾತ್ವತಧರ್ಮವು ಪುನಃ ನಾರಾಯಣನ ಮುಖದಿಂದ ಹೊರಟಿತು. ಬ್ರಹ್ಮನು ಆ ಧರ್ಮವನ್ನು ಪುನಃ ಪರಿಗ್ರಹಿಸಿ ಯಥಾವಿಧಿಯಾಗಿ ಅದನ್ನು ತನ್ನ ಅನುಷ್ಠಾನದಲ್ಲಿಯೂ ಇಟ್ಟುಕೊಂಡನು. ಅನಂತರ ಬ್ರಹ್ಮನು ಆ ಧರ್ಮವನ್ನು ಬರ್ಹಿಷದರೆಂಬ ಮುನಿಗಳಿಗೆ ಉಪದೇಶಿಸಿದನು. ಬರ್ಹಿಷದರು ಆ ಸಾತ್ವತಧರ್ಮವನ್ನು ಸಾಮವೇದಪಾರಂಗತನಾದ ಜ್ಯೇಷ್ಠ ಎಂಬ ಹೆಸರಿನಿಂದ ವಿಖ್ಯಾತನಾಗಿದ್ದ ಬ್ರಾಹ್ಮಣನಿಗೆ ಉಪದೇಶಿಸಿದರು. ಜ್ಯೇಷ್ಠಸಾಮದ ಮೂಲಕವಾಗಿ ಶ್ರೀಹರಿಯನ್ನು ಉಪಾಸನೆಮಾಡಲು ವ್ರತವನ್ನು ಕೈಗೊಂಡಿದ್ದ ಕಾರಣದಿಂದ ಜ್ಯೇಷ್ಠನೆಂಬ ಆ ಬ್ರಾಹ್ಮಣನನ್ನು ಜ್ಯೇಷ್ಠಸಾಮವ್ರತಿಯಾದ ಹರಿ–ಎಂದೂ ಕರೆಯುತ್ತಿದ್ದರು. ಅನಂತರ ಜ್ಯೇಷ್ಠನು ಆ ಧರ್ಮವನ್ನು ಅವಿಕಂಪನನೆಂಬ ರಾಜನಿಗೆ ಉಪದೇಶಿಸಿದನು. ಹರಿಪ್ರಭುವಿನ ಆ ಧರ್ಮವು ಪುನಃ ಕಣ್ಮರೆ

ಯಾಯಿತು. ಕಲ್ಪಾದಿಯಲ್ಲಿ ಪುನಃ ಬ್ರಹ್ಮನು ನಾರಾಯಣನ ನಾಭಿಕಮಲದಿಂದ ಏಳನೆಯ ಜನ್ಮವನ್ನು ಪಡೆದನು. ಬ್ರಹ್ಮನು ನಾಭಿಕಮಲದಲ್ಲಿದ್ದಾಗಲೇ ಸ್ವತಃ ನಾರಾಯಣನೇ ಆ ಸಾತ್ವತಧರ್ಮವನ್ನು ಪಿತಾಮಹನಾದ, ಪರಮಪವಿತ್ರನಾದ, ಲೋಕಧರನಾದ ಬ್ರಹ್ಮನಿಗೆ ಹೇಳಿದನು. ಆಗಲೇ ಪಿತಾಮಹನು ಅದನ್ನು ದಕ್ಷನಿಗೆ ಉಪದೇಶಿಸಿದನು. ಅನಂತರ ದಕ್ಷನು ಅದಿತಿಯ ಮಗನಾದ, ಸವಿತೃಗಿಂತಲೂ ದೊಡ್ಡವನಾದ ತನ್ನ ಮಗಳ ಹಿರಿಯಮಗನಿಗೆ (ಆದಿತ್ಯನಿಗೆ) ಆ ಧರ್ಮವನ್ನು ಉಪದೇಶಿಸಿದನು. ಅವನಿಂದ ವಿವಸ್ವಂತನು ಆ ಧರ್ಮವನ್ನು ಪಡೆದುಕೊಂಡನು. ತ್ರೇತಾಯುಗದ ಆದಿಯಲ್ಲಿ ವಿವಸ್ವಂತನು ತನ್ನ ಮಗನಾದ ಮನುವಿಗೆ ಆ ಧರ್ಮವನ್ನು ಉಪದೇಶಿಸಿದನು. ಅನಂತರ ಮನುವು ಅದನ್ನು ಲೋಕಕಲ್ಯಾಣಾರ್ಥವಾಗಿ ತನ್ನ ಮಗನಾದ ಇಕ್ಷ್ವಾಕುವಿಗೆ ಉಪದೇಶಿಸಿದನು.* ಇಕ್ಷ್ವಾಕುವಿಗೆ ಉಪದೇಶಿಸಿದ ಆ ಧರ್ಮವು ಎಲ್ಲ ಲೋಕಗಳನ್ನೂ ವ್ಯಾಪಿಸಿ ಸುಪ್ರತಿಷ್ಠಿತವಾಯಿತು. ಆ ಧರ್ಮವು ಕಲ್ಪಾಂತದಲ್ಲಿ ಲುಪ್ತವಾಗಿ ಪುನಃ ನಾರಾಯಣನನ್ನೇ ಸೇರುತ್ತದೆ. ಯತಿಗಳ ಧರ್ಮವು ಯಾವುದೆಂಬುದನ್ನು ನಾನು ಈ ಹಿಂದೆಯೇ ನಿನಗೆ ಸಂಕ್ಷೇಪವಾಗಿ ಹರಿಗೀತೆಯಲ್ಲಿ ಹೇಳಿದ್ದೇನೆ. ನಾರದರು ರಹಸ್ಯದಿಂದಲೂ, ಸಂಗ್ರಹದಿಂದಲೂ ಯುಕ್ತವಾದ ಆ ಧರ್ಮವನ್ನು ಜಗನ್ನಾಥನಾದ ಸಾಕ್ಷಾತ್ ನಾರಾಯಣನಿಂದಲೇ ಪಡೆದುಕೊಂಡರು. ಸನಾತನವಾದ ಆ ಮಹಾಧರ್ಮವೇ ಮೊದಲನೆಯ ಧರ್ಮ. ತಿಳಿಯಲು ಅತಿಕಷ್ಟವಾದ ಆಚರಿಸಲು ದುಷ್ಕರವಾದ ಆ ಸಾತ್ವತಧರ್ಮವನ್ನು ಭಗವಂತನಲ್ಲಿ ಅನನ್ಯಭಕ್ತಿಯುಳ್ಳವರು ಸದಾ ಆಚರಿಸುತ್ತಾರೆ. ಅಹಿಂಸಾಧರ್ಮಯುಕ್ತವಾದ ಆ ಸಾತ್ವತಧರ್ಮವನ್ನು ತಿಳಿದುಕೊಳ್ಳುವುದರಿಂದಲೂ ಮತ್ತು ಕಾರ್ಯತಃ ಆಚರಣೆಗೆ ತರುವುದರಿಂದಲೂ ಪರಮೇಶ್ವರನಾದ ಹರಿಯು ಸುಪ್ರೀತನಾಗುತ್ತಾನೆ.

ಇಮಂ ವಿವಸ್ವತೇ ಯೋಗಂ ಪ್ರೋಕ್ತವಾನಹಮವ್ಯಯಮ್ ।
ವಿವಸ್ವಾನ್ಮನವೇ ಪ್ರಾಹ ಮನುರಿಕ್ಷ್ವಾಕವೇಽಬ್ರವೀತ್ ॥೧॥ ಅಧ್ಯಾಯ ೪ – ಎಂಬ ಗೀತಾಶ್ಲೋಕವನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಏಕವ್ಯೂಹವಿಭಾಗೋ ವಾ ಕ್ವಚಿದ್ದ್ವಿವ್ಯೂಹಸಂಜ್ಞಿತಃ ।
ತ್ರಿವ್ಯೂಹಶ್ಚಾಪಿ ಸಂಖ್ಯಾತಶ್ಚತುರ್ವ್ಯೂಹಶ್ಚ ದೃಶ್ಯತೇ ॥೫೭॥

ಕೆಲವು ಕಡೆ ಕೆಲವು ಭಕ್ತರು ಏಕವ್ಯೂಹವನ್ನೇ ಇಟ್ಟುಕೊಂಡು ವಾಸುದೇವನೊಬ್ಬನನ್ನೇ ಉಪಾಸನೆಮಾಡುವುದು ಕಂಡುಬರುತ್ತದೆ. ಕೆಲವೆಡೆಗಳಲ್ಲಿ ಎರಡು ವ್ಯೂಹಗಳನ್ನು (ವಾಸುದೇವ-ಸಂಕರ್ಷಣರನ್ನು) ಉಪಾಸನೆಮಾಡುತ್ತಾರೆ. ಮತ್ತೂ ಕೆಲವೆಡೆಗಳಲ್ಲಿ ಮೂರು ವ್ಯೂಹಗಳನ್ನು (ವಾಸುದೇವ -ಸಂಕರ್ಷಣ -ಪ್ರದ್ಯುಮ್ನರನ್ನು) ಉಪಾಸನೆಮಾಡುತ್ತಾರೆ. ಇನ್ನೂ ಕೆಲವರು ಭಕ್ತರು ನಾಲ್ಕು ವ್ಯೂಹಗಳನ್ನು (ವಾಸುದೇವ-ಸಂಕರ್ಷಣ-ಪ್ರದ್ಯುಮ್ನ-ಅನಿರುದ್ಧರನ್ನು) ಉಪಾಸನೆಮಾಡುತ್ತಾರೆ.

ಹರಿರೇವ ಹಿ ಕ್ಷೇತ್ರಜ್ಞೋ ನಿರ್ಮಮೋ ನಿಷ್ಕಲಸ್ತಥಾ ।
ಜೀವಶ್ಚ ಸರ್ವಭೂತೇಷು ಪಞ್ಚಭೂತಗುಣಾತಿಗಃ ॥೫೮॥

ಶ್ರೀಹರಿಯೇ ಕ್ಷೇತ್ರಜ್ಞನು ; ಮಮತಾರಹಿತನು ಮತ್ತು ನಿಷ್ಕಲನು. ಪಂಚಭೂತಗಳ ಗುಣಗಳಿಂದ ಅತೀತನಾಗಿ ಸರ್ವಪ್ರಾಣಿಗಳಲ್ಲಿಯೂ ಇರುವ ಜೀವಾತ್ಮನೂ ಆಗಿದ್ದಾನೆ.

ಮನಶ್ಚ ಪ್ರಥಿತಂ ರಾಜನ್ಪಞ್ಚೇನ್ದ್ರಿಯಸಮೀರಣಮ್ ।
ಏಷ ಲೋಕವಿಧಿರ್ಧೀಮಾನೇಷ ಲೋಕವಿಸರ್ಗಕೃತ್ ॥೫೯॥

ಪಂಚೇಂದ್ರಿಯಗಳ ಪ್ರೇರಕವಾದ, ವಿಖ್ಯಾತವಾದ ಮನಸ್ಸೂ ಶ್ರೀಹರಿಯೇ ಆಗಿದ್ದಾನೆ. ಧೀಮಂತನಾದ ಶ್ರೀಹರಿಯೇ ಲೋಕಗಳ ಸೃಷ್ಟಿಕರ್ತೃವೂ ಮತ್ತು ವಿಧಾಯಕನೂ ಆಗಿದ್ದಾನೆ.

ಅಕರ್ತಾ ಚೈವ ಕರ್ತಾ ಚ ಕಾರ್ಯಂ ಕಾರಣಮೇವ ಚ ।
ಯಥೇಚ್ಛತಿ ತಥಾ ರಾಜನ್ಕ್ರೀಡತೇ ಪುರುಷೋಽವ್ಯಯಃ ॥೬೦॥

ಅವಿನಾಶಿಯಾದ, ಪುರುಷೋತ್ತಮನಾದ ಶ್ರೀಮನ್ನಾರಾಯಣನು ಅಕರ್ತೃವೂ ಆಗಿದ್ದಾನೆ ; ಕರ್ತೃವೂ ಆಗಿದ್ದಾನೆ ; ಕಾರ್ಯವೂ–ಕಾರಣನೂ ಆಗಿದ್ದಾನೆ. ತನಗೆ ಇಚ್ಛೆಬಂದಂತೆ ಈ ವಿಶ್ವದಲ್ಲಿ ಕ್ರೀಡಿಸುತ್ತಾನೆ.

ಜನಮೇಜಯ! ಜಿತೇಂದ್ರಿಯರಲ್ಲದವರಿಂದ ತಿಳಿಯಲು ಅಸಾಧ್ಯವಾದ ಈ ಏಕಾಂತಧರ್ಮವನ್ನು ಗುರುಗಳ ಅನುಗ್ರಹದಿಂದ ನಿನಗೆ ಹೇಳಿರುತ್ತೇನೆ :

ಏಕಾನ್ತಿನೋ ಹಿ ಪುರುಷಾ ದುರ್ಲಭಾ ಬಹವೋ ನೃಪ ।
ಯದ್ಯೇಕಾನ್ತಿಭಿರಾಕೀರ್ಣಂ ಜಗತ್ಸ್ಯಾತ್ಕುರುನನ್ದನ ॥೬೨॥

ಅಹಿಂಸಕೈರಾತ್ಮವಿದ್ಭಿಃ ಸರ್ವಭೂತಹಿತೇ ರತೈಃ ।
ಭವೇತ್ಕೃತಯುಗಪ್ರಾಪ್ತಿರಾಶೀಃ ಕರ್ಮವಿವರ್ಜಿತಾ ॥೬೩॥

ಭಗವಂತನಲ್ಲಿಯೇ ಅನನ್ಯಭಕ್ತಿಯಿರುವವರು ದುರ್ಲಭರು. ಏಕೆಂದರೆ : ಇಂತಹವರು ಅತಿವಿರಳರು. ಒಂದು ವೇಳೆ ಈ ಜಗತ್ತು ಆತ್ಮಜ್ಞಾನಿಗಳಾದ, ಅಹಿಂಸಾವ್ರತನಿಷ್ಠರಾದ, ಸರ್ವಪ್ರಾಣಿಗಳ ಹಿತದಲ್ಲಿಯೇ ನಿರತರಾದ ಏಕಾಂತಿಗಳಿಂದಲೇ ವ್ಯಾಪ್ತವಾಗಿಬಿಟ್ಟಿದ್ದಿದ್ದರೆ –ಈ ಯುಗವು ಕಾಮ್ಯಕರ್ಮಗಳಿಂದ ರಹಿತವಾದ ಕೃತಯುಗವೇ ಆಗಿಬಿಡುತ್ತಿದ್ದಿತು.

ಪ್ರಜಾನಾಯಕನೇ! ಜನಮೇಜಯ! ಹೀಗೆ ಪೂಜ್ಯರಾದ, ದ್ವಿಜಶ್ರೇಷ್ಠರಾದ, ಧರ್ಮಜ್ಞರಾದ ನನ್ನ ಗುರುಗಳಾದ ವ್ಯಾಸರು ಧರ್ಮರಾಜನಿಗೆ ಈ ಸಾತ್ವತಧರ್ಮವನ್ನು ಋಷಿಗಳ ಸನ್ನಿಧಿಯಲ್ಲಿ ಮತ್ತು ಕೃಷ್ಣ-ಭೀಷ್ಮರು ಕೇಳುತ್ತಿರುವಂತೆಯೇ ಹೇಳಿದರು. ಅದಕ್ಕಿಂತಲೂ ಹಿಂದೆಯೇ ಮಹಾತಪಸ್ವಿಗಳಾದ ನಾರದರು ಇದೇ ಧರ್ಮವನ್ನೇ ವ್ಯಾಸರಿಗೆ ಹೇಳಿದ್ದರು. ನಾರಾಯಣನನ್ನೇ ಆಶ್ರಯಿಸಿರುವ ಸಾತ್ವತಧರ್ಮಾವಲಂಬಿಗಳಾದ ಅನನ್ಯಭಕ್ತರು-ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ ಗೌರಾಂಗನಾದ, ಪರಬ್ರಹ್ಮಸ್ವರೂಪನಾದ ಅಚ್ಯುತನನ್ನು ಸೇರುತ್ತಾರೆ.”

ಜನಮೇಜಯನು ಪ್ರಶ್ನಿಸುತ್ತಾನೆ :

ಏವಂ ಬಹುವಿಧಂ ಧರ್ಮಂ ಪ್ರತಿಬುದ್ಧೈರ್ನಿಷೇವಿತಮ್ ।
ನ ಕುರ್ವನ್ತಿ ಕಥಂ ವಿಪ್ರಾ ಅನ್ಯೇ ನಾನಾವ್ರತೇ ಸ್ಥಿತಾಃ ॥೬೪॥

“ಪೂಜ್ಯರೇ! ತಾವು ಹೇಳಿದಂತೆ ಜ್ಞಾನಿಗಳಿಂದ ಆಚರಿಸಲ್ಪಡುವ ಬಹುವಿಧಗುಣಗಳಿಂದ ಯುಕ್ತವಾದ ಪರಮಶ್ರೇಷ್ಠವಾದ ಈ ಸಾತ್ವತಧರ್ಮ

ವನ್ನು ನಾನಾವಿಧವಾದ ವ್ರತಾನುಷ್ಠಾನಗಳಲ್ಲಿ ತೊಡಗಿರುವ ಇತರ ಬ್ರಾಹ್ಮಣರು ಏಕೆ ಆಚರಿಸುವುದಿಲ್ಲ?"

ವೈಶಂಪಾಯನರು ಹೇಳುತ್ತಾರೆ :

ತಿಸ್ರಃ ಪ್ರಕೃತಯೋ ರಾಜನ್ದೇಹಬನ್ಧೇಷು ನಿರ್ಮಿತಾಃ ।
ಸಾತ್ತ್ವಿಕೀ ರಾಜಸೀ ಚೈವ ತಾಮಸೀ ಚೈವ ಭಾರತ ॥೬೮॥

"ಮಹಾರಾಜ! ಶರೀರವೆಂಬ ಸೆರೆಮನೆಯಲ್ಲಿ ಬಂಧಿಸಲ್ಪಟ್ಟಿರುವ ಜೀವನ ಸಲುವಾಗಿ ಪರಮೇಶ್ವರನು ಸತ್ತ್ವ-ರಜಸ್ತಮಸ್ಸುಗಳಿಂದು ಮೂರು ವಿಧವಾದ ಪ್ರಕೃತಿಗಳನ್ನು ಸೃಷ್ಟಿಸಿದ್ದಾನೆ.

ದೇಹಬನ್ಧೇಷು ಪುರುಷಃ ಶ್ರೇಷ್ಠಃ ಕುರುಕುಲೋದ್ವಹ ।
ಸಾತ್ತ್ವಿಕಃ ಪುರುಷವ್ಯಾಘ್ರ ಭವೇನ್ಮೋಕ್ಷಾಯ ನಿಶ್ಚಿತಃ ॥೬೯॥

ಕುರುಕುಲಾವತಂಸನೇ! ದೇಹಬಂಧನದಲ್ಲಿರುವ ಜೀವಗಳಲ್ಲಿ ಸತ್ತ್ವ ಗುಣಯುಕ್ತನಾದ ಪುರುಷನು ಶ್ರೇಷ್ಠನು. ಅವನೇ ಮೋಕ್ಷಕ್ಕೆ ಅರ್ಹನೆಂಬುದು ನಿಶ್ಚಿತವಾಗಿದೆ.

ಅತ್ರಾಪಿ ಸ ವಿಜಾನಾತಿ ಪುರುಷಂ ಬ್ರಹ್ಮವಿತ್ತಮಮ್ ।
ನಾರಾಯಣಪರೋ ಮೋಕ್ಷಸ್ತತೋ ವೈ ಸಾತ್ತ್ವಿಕಃ ಸ್ಮೃತಃ ॥೭೦॥

ಅಂತಹ ಸಾತ್ವಿಕನು–ಪುರುಷೋತ್ತಮನೇ ಬ್ರಹ್ಮವಿದರಲ್ಲಿ ಶ್ರೇಷ್ಠನಾದ ವನೆಂದೂ–ಮೋಕ್ಷವು ನಾರಾಯಣನನ್ನೇ ಆಶ್ರಯಿಸಿರುವುದೆಂದೂ ತಿಳಿದಿರುತ್ತಾನೆ. ಆದುದರಿಂದ ಅವನು ಸಾತ್ತ್ವಿಕನೆಂದು ಭಾವಿಸಲ್ಪಡುತ್ತಾನೆ.

ಮನೀಷಿತಂ ಚ ಪ್ರಾಪ್ನೋತಿ ಚಿನ್ತಯನ್ಪುರುಷೋತ್ತಮಮ್ ।
ಏಕಾನ್ತಭಕ್ತಿಃ ಸತತಂ ನಾರಾಯಣಪರಾಯಣಃ ॥೭೧॥

ಸಾತ್ತ್ವಿಕನಾದ ಮನುಷ್ಯನು–ಪುರುಷೋತ್ತಮನಾದ ಶ್ರೀಹರಿಯನ್ನು ಸದಾ ಧ್ಯಾನಮಾಡುತ್ತಾ ಮನೋವಾಂಛಿತಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ. ಏಕಾಂತಭಕ್ತಿಯು ಸದಾ ನಾರಾಯಣನನ್ನೇ ಆಶ್ರಯಿಸಿರುತ್ತದೆ.

ಮನೀಷಿಣೋ ಹಿ ಯೇ ಕೇಚಿದ್ಯತಯೋ ಮೋಕ್ಷಧರ್ಮಿಣಃ ।
ತೇಷಾಂ ವಿಚ್ಛಿನ್ನತೃಷ್ಣಾನಾಂ ಯೋಗಕ್ಷೇಮವಹೋ ಹರಿಃ ॥೭೨॥

ಮೋಕ್ಷಸಾಧನತತ್ಪರರಾದ ಯಾವ ಕೆಲವು ಮಂದಿ ವಿದ್ವಾಂಸರಾದ ಯತಿಗಳಿರುವರೋ–ನಿರಾಶಿಗಳಾದ ಅಂತಹವರ ಯೋಗ-ಕ್ಷೇಮಗಳನ್ನು ಹರಿಯೇ ವಹಿಸಿಕೊಳ್ಳುತ್ತಾನೆ.

ಜಾಯಮಾನಂ ಹಿ ಪುರುಷಂ ಯಂ ಪಶ್ಯೇನ್ಮಧುಸೂದನಃ ।
ಸಾತ್ತ್ವಿಕಸ್ತು ಸ ವಿಜ್ಞೇಯೋ ಭವೇನ್ಮೋಕ್ಷೇ ಚ ನಿಶ್ಚಿತಃ ॥೭೩॥

ಹುಟ್ಟು-ಸಾವುಗಳ ಸುಳಿಯಲ್ಲಿ ಸಿಕ್ಕಿರುವ ಯಾವ ಪುರುಷನನ್ನು ಮಧುಸೂದನನು ಕೃಪಾದೃಷ್ಟಿಯಿಂದ ನೋಡುವನೋ–ಅವನನ್ನೇ ಸಾತ್ತ್ವಿಕನೆಂದು ತಿಳಿಯಬೇಕು. ಅಂತಹವನೇ ಮೋಕ್ಷಕ್ಕೂ ಸುನಿಶ್ಚಿತನಾದ ಅಧಿಕಾರಿಯು.

ಸಾಂಖ್ಯಯೋಗೇನ ತುಲ್ಯೋ ಹಿ ಧರ್ಮ ಏಕಾನ್ತಸೇವಿತಃ ।
ನಾರಾಯಣಾತ್ಮಕೇ ಮೋಕ್ಷೇ ತತೋ ಯಾನ್ತಿ ಪರಾಂ ಗತಿಮ್ ॥೭೪॥

ಅನನ್ಯಭಕ್ತರಿಂದ ಆಚರಿಸಲ್ಪಡುವ ಧರ್ಮವು ಸಾಂಖ್ಯ-ಯೋಗಗಳ ಧರ್ಮಕ್ಕೆ ಸಮಾನವಾಗಿದೆ. ಮೋಕ್ಷವು ನಾರಾಯಣನ ಸ್ವರೂಪವೇ ಆಗಿರುವುದರಿಂದ ನಾರಾಯಣನನ್ನು ಅನನ್ಯಭಕ್ತಿಯಿಂದ ಸದಾ ಧ್ಯಾನ ಮಾಡುವ ಸಾತ್ವತಧರ್ಮಿಗಳು ಶ್ರೇಷ್ಠವಾದ ಸದ್ಗತಿಯನ್ನೇ ಹೊಂದುತ್ತಾರೆ.

ನಾರಾಯಣೇನ ದೃಷ್ಟಸ್ತು ಪ್ರತಿಬುದ್ಧೋ ಭವೇತ್ಪುಮಾನ್ ।
ಏವಮಾತ್ಮೇಚ್ಛಯಾ ರಾಜನ್ಪ್ರತಿಬುದ್ಧೋ ನ ಜಾಯತೇ ॥೭೫॥

ಶ್ರೀಮನ್ನಾರಾಯಣನು ಕೃಪಾದೃಷ್ಟಿಯಿಂದ ನೋಡಲು ಮನುಷ್ಯನು ಒಡನೆಯೇ ಜ್ಞಾನಿಯಾಗುತ್ತಾನೆ. ಜ್ಞಾನಿಯಾಗಬೇಕೆಂಬ ಇಚ್ಛೆಪಡುವುದರಿಂದ ಮಾತ್ರವೇ ಯಾವನೂ ಜ್ಞಾನಿಯಾಗುವುದಿಲ್ಲ. (ಜ್ಞಾನಿಯಾಗಲು ಭಗವಂತನ ಕೃಪೆಯು ಅವಶ್ಯವಾಗಿ ಬೇಕೇಬೇಕು.)

ರಾಜಸೀ ತಾಮಸೀ ಚೈವ ವ್ಯಾಮಿಶ್ರೇ ಪ್ರಕೃತೀ ಸ್ಮೃತೇ ।
ತದಾತ್ಮಕಂ ಹಿ ಪುರುಷಂ ಜಾಯಮಾನಂ ವಿಶಾಮ್ಪತೇ ।
ಪ್ರವೃತ್ತಿಲಕ್ಷಣೈರ್ಯುಕ್ತಂ ನಾವೇಕ್ಷತಿ ಹರಿಃ ಸ್ವಯಮ್ ॥೭೬॥

ರಾಜಸೀ-ತಾಮಸೀಪ್ರಕೃತಿಗಳು ಮಿಶ್ರವಾದ ಪ್ರಕೃತಿಗಳೆಂದು ಹೇಳಲ್ಪಟ್ಟಿವೆ. ರಾಜಸ-ತಾಮಸಗುಣಗಳಿಂದ ಯುಕ್ತನಾಗಿ ಹುಟ್ಟುವ ಮನುಷ್ಯನು ಸಾಮಾನ್ಯವಾಗಿ ಪ್ರವೃತ್ತಿಲಕ್ಷಣಗಳಿಂದಲೇ ಕೂಡಿರುತ್ತಾನೆ. ಅಂತಹ ಕಾಮ್ಯಕರ್ಮಿಯನ್ನು ಶ್ರೀಹರಿಯು ಕಣ್ಣೆತ್ತಿಯೂ ನೋಡುವುದಿಲ್ಲ.

ಪಶ್ಯತ್ಯೇನಂ ಜಾಯಮಾನಂ ಬ್ರಹ್ಮಾ ಲೋಕಪಿತಾಮಹಃ ।
ರಜಸಾ ತಮಸಾ ಚೈವ ಮಾನಸಂ ಸಮಭಿಪ್ಲುತಮ್ ॥೭೭॥

ರಜಸ್ತಮಸ್ಸುಗಳಲ್ಲಿಯೇ ಮುಳುಗಿಹೋಗಿರುವ ಮನಸ್ಸಿನಿಂದ ಕೂಡಿ ಜನ್ಮವನ್ನು ತಾಳಿರುವ ಪುರುಷನನ್ನು ಲೋಕಪಿತಾಮಹನಾದ ಬ್ರಹ್ಮನು ನೋಡಿಕೊಳ್ಳುತ್ತಾನೆ. (ಅವನಿಗೆ ಬೇಕಾದ ಕಾಮ್ಯಫಲಗಳನ್ನು ಕೊಟ್ಟು ಅನುಗ್ರಹಿಸುತ್ತಾನೆ.)

ಕಾಮಂ ದೇವಾ ಋಷಯಶ್ಚ ಸತ್ತ್ವಸ್ಥಾ ನೃಪಸತ್ತಮ ।
ಹೀನಾಃ ಸತ್ತ್ವೇನ ಶುದ್ಧೇನ ತತೋ ವೈಕಾರಿಕಾಃ ಸ್ಮೃತಾಃ ॥೭೮॥

ಮಹಾರಾಜ! ದೇವತೆಗಳೂ ಮತ್ತು ಋಷಿಗಳೂ ಹೆಚ್ಚಾಗಿ ಸತ್ತ್ವಗುಣವನ್ನೇ ಆಶ್ರಯಿಸಿರುತ್ತಾರೆ. ದೇವತೆಗಳೇ ಆಗಲೀ ಋಷಿಗಳೇ ಆಗಲಿ ಶುದ್ಧಸತ್ತ್ವಗುಣದಿಂದ ರಹಿತರಾಗಿದ್ದರೆ–ಅಂತಹವರನ್ನು ವೈಕಾರಿಕರೆಂದು ಕರೆಯುತ್ತಾರೆ."

ಜನಮೇಜಯನು ಪ್ರಶ್ನಿಸುತ್ತಾನೆ :

ಕಥಂ ವೈಕಾರಿಕೋ ಗಚ್ಛೇತ್ಪುರುಷಃ ಪುರುಷೋತ್ತಮಮ್ ।
ವದ ಸರ್ವಂ ಯಥಾದೃಷ್ಟಂ ಪ್ರವೃತ್ತಿಂ ಚ ಯಥಾಕ್ರಮಮ್ ॥೭೯॥

"ಪೂಜ್ಯರೇ! ವೈಕಾರಿಕನಾದ (ಶುದ್ಧಸತ್ತ್ವಗುಣದಿಂದ ಹೀನನಾದ) ಪುರುಷನು ಪುರುಷೋತ್ತಮನನ್ನು ಹೇಗೆ ಹೊಂದುತ್ತಾನೆ? ಈ ಸಂಬಂಧವಾದ ಎಲ್ಲ ವಿಷಯಗಳನ್ನೂ ನಿಮ್ಮ ಅನುಭವವನ್ನು ಆಧರಿಸಿ ಹೇಳಿರಿ. ಅದರ ಪ್ರವೃತ್ತಿಯನ್ನೂ ಅನುಕ್ರಮವಾಗಿ ಹೇಳಿರಿ."

ವೈಶಂಪಾಯನರು ಹೇಳುತ್ತಾರೆ :

ಸುಸೂಕ್ಷ್ಮಂ ಸತ್ತ್ವಸಂಯುಕ್ತಂ ಸಂಯುಕ್ತಂ ತ್ರಿಭಿರಕ್ಷರೈಃ ।
ಪುರುಷಃ ಪುರುಷಂ ಗಚ್ಛೇನ್ನಿಷ್ಕ್ರಿಯಃ ಪಞ್ಚವಿಂಶಕಃ ॥೮೦॥

“ಅತ್ಯಂತಸೂಕ್ಷ್ಮನಾದ, ಸತ್ತ್ವಸಂಪನ್ನನಾದ, ಅ-ಉ-ಮ್ ಎಂಬ ಮೂರು ಅಕ್ಷರಗಳಿಂದ ಕೂಡಿ ಪ್ರಣವಾತ್ಮಕನಾದ ಪರಮಪುರುಷನಾದ ಪುರುಷೋತ್ತಮನನ್ನು ನಿಷ್ಕರ್ಮನಾದ (ನಿಷ್ಕಾಮನಾದ) ಇಪ್ಪತ್ತೈದನೆಯವನಾದ ಪುರುಷನು (ಜೀವನು) ಸೇರುತ್ತಾನೆ.

ಏವಮೇಕಂ ಸಾಂಖ್ಯಯೋಗಂ ವೇದಾರಣ್ಯಕಮೇವ ಚ ।
ಪರಸ್ಪರಾಙ್ಗಾನ್ಯೇತಾನಿ ಪಾಞ್ಚರಾತ್ರಂ ಚ ಕಥ್ಯತೇ ॥೮೧॥
ಏಷ ಏಕಾನ್ತಿನಾಂ ಧರ್ಮೋ ನಾರಾಯಣಪರಾತ್ಮಕಃ ॥೮೨॥

ಹೀಗೆ ಆತ್ಮಾನಾತ್ಮಗ್ರಳನ್ನು ವಿವೇಚಿಸಿ ಹೇಳಿರುವ ಸಾಂಖ್ಯಶಾಸ್ತ್ರವೂ, ಚಿತ್ತವೃತ್ತಿಯನ್ನು ನಿರೋಧಿಸಬೇಕೆಂದು ಉಪದೇಶಿಸುವ ಯೋಗಶಾಸ್ತ್ರವೂ, ಜೀವ-ಬ್ರಹ್ಮಗ್ರಳ ಸಂಬಂಧವನ್ನು ಯುಕ್ತಿಯುಕ್ತವಾಗಿ ಪ್ರತಿಪಾದಿಸಿರುವ ವೇದಗಳ ಆರಣ್ಯಕಭಾಗದಲ್ಲಿರುವ ಉಪನಿಷತ್ತುಗಳೂ ಮತ್ತು ಭಕ್ತಿಮಾರ್ಗವನ್ನು ಪ್ರತಿಪಾದಿಸುವ ಪಾಂಚರಾತ್ರಾಗಮವೂ ಪರಮಾತ್ಮಪ್ರಾಪ್ತಿಯೆಂಬ ಒಂದೇ ಲಕ್ಷ್ಯವನ್ನು ಹೊಂದಿರುವ ಶಾಸ್ತ್ರಗಳಾಗಿವೆ. ಈ ಕಾರಣದಿಂದ ಇವು ಪರಸ್ಪರವಾಗಿ ಒಂದು ಶಾಸ್ತ್ರಕ್ಕೆ ಉಳಿದುವು ಅಂಗಭೂತಗಳಾಗಿರುತ್ತವೆ. ಸಕಲವೂ ನಾರಾಯಣನೇ ಎಂದು ಹೇಳುವ ನಾರಾಯಣಾತ್ಮಕವಾದ ಇದು ಅನನ್ಯಭಕ್ತರು ಆಶ್ರಯಿಸಿರುವ ಸಾತ್ವತ ಅಥವಾ ಪಾಂಚರಾತ್ರ ಧರ್ಮವಾಗಿದೆ.

ಯಥಾ ಸಮುದ್ರಾತ್ಪ್ರಸೃತಾ ಜಲೌಘಾ-
ಸ್ತಮೇವ ರಾಜನ್ಪುನರಾವಿಶನ್ತಿ ।
ಇಮೇ ತಥಾ ಜ್ಞಾನಮಹಾಜಲೌಘಾ
ನಾರಾಯಣಂ ವೈ ಪುನರಾವಿಶನ್ತಿ ॥೮೩॥

ಯಾವ ರೀತಿಯಲ್ಲಿ ಸಮುದ್ರದಿಂದ ಮೇಘರೂಪದಲ್ಲಿ ಹೊರಟ ನೀರಿನ ಸಮೂಹಗಳು ನದೀ-ನದಗಳ ಮೂಲಕವಾಗಿ ಆ ಸಮುದ್ರವನ್ನೇ ಸೇರುವುವೋ–ಅದೇ ರೀತಿಯಲ್ಲಿ ನಾರಾಯಣನಿಂದಲೇ ಪ್ರಾದುರ್ಭೂತವಾದ ಜ್ಞಾನರೂಪವಾದ ಮಹಾಜಲಪ್ರವಾಹಗಳು ಪುನಃ ನಾರಾಯಣನನ್ನೇ ಸೇರುತ್ತವೆ.

ಕುರುಪುತ್ರನೇ! ನಿನಗೆ ಈ ಸಾತ್ವತಧರ್ಮವನ್ನು ವಿಸ್ತಾರವಾಗಿ ಹೇಳಿರುತ್ತೇನೆ. ನೀನೇನಾದರೂ ಈ ಧರ್ಮವನ್ನು ಆಚರಿಸಲು ಸಮರ್ಥನಾಗಿದ್ದರೆ ಯಥಾವಿಧಿಯಾಗಿ ಇದನ್ನು ಆಚರಿಸು. ಹೀಗೆ ಮಹಾಭಾಗರಾದ ನಾರದರು ನನ್ನ ಗುರುಗಳಾದ ವ್ಯಾಸರಿಗೆ ಶ್ವೇತದ್ವೀಪ ನಿವಾಸಿಗಳಾದ ಯತಿಗಳ ಅವಿನಾಶಿಯಾದ ಏಕಾಂತಮಾರ್ಗವನ್ನು ವಿವರಿಸಿ ಹೇಳಿದರು. ವ್ಯಾಸರು ಈ ಸಾತ್ವತಧರ್ಮವನ್ನು ಧರ್ಮರಾಜನಿಗೆ ಪ್ರೀತಿಪೂರ್ವಕವಾಗಿ ಹೇಳಿದರು. ಅವರ ಮುಖಾರವಿಂದದಿಂದ ಹೊರಟ ಈ ದಿವ್ಯೋಪದೇಶವನ್ನು ನಾನು ನಿನಗೆ ಯಥಾವತ್ತಾಗಿ ಹೇಳಿದ್ದೇನೆ. ನೃಪಶ್ರೇಷ್ಠನೇ! ಹೀಗೆ ಈ ಧರ್ಮವು ಆಚರಿಸಲು ಕಷ್ಟಸಾಧ್ಯವಾದುದು. ನೀನು ಹೇಗೆ ಈ ಧರ್ಮದ ವಿಷಯದಲ್ಲಿ ವಿಮೋಹಿತನಾಗಿರುವೆಯೋ– ಹಾಗೆಯೇ ಇತರರೂ ವಿಮೋಹಿತರಾಗುತ್ತಾರೆ.

ಕೃಷ್ಣ ಏವ ಹಿ ಲೋಕಾನಾಂ ಭಾವನೋ ಮೋಹನಸ್ತಥಾ ।
ಸಂಹಾರಕಾರಕಶ್ಚೈವ ಕಾರಣಂ ಚ ವಿಶಾಮ್ಪತೇ ॥೮೮॥

ಜನಮೇಜಯ! ಶ್ರೀಕೃಷ್ಣನೇ ಎಲ್ಲ ಲೋಕಗಳ ಹಿತೈಷಿಯೂ ಆಗಿದ್ದಾನೆ ; ಸಂಹಾರಕನೂ ಆಗಿದ್ದಾನೆ ; ಕಾರಣನೂ ಆಗಿದ್ದಾನೆ. (ಆದುದರಿಂದ ಶ್ರೀಕೃಷ್ಣನನ್ನೇ ಅನನ್ಯಭಕ್ತಿಯಿಂದ ಭಜಿಸು.)”

ಾ೪೮ನೆಯ ಅಧ್ಯಾಯವು ಮುಗಿಯಿತು.

೩೪೯ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವ್ಯಾಸರು ಮೊದಲು ಅಪಾಂತರತಮನಾಗಿ ಹುಟ್ಟಿದುದು: ಆ ಅವತಾರದಲ್ಲಿ ಅವರ ಪ್ರಭಾವ

ಜನಮೇಜಯನು ಪ್ರಶ್ನಿಸುತ್ತಾನೆ :

ಸಾಂಖ್ಯಂ ಯೋಗಃ ಪಾಞ್ಚರಾತ್ರಂ ವೇದಾರಣ್ಯಕಮೇವ ಚ ।
ಜ್ಞಾನಾನ್ಯೇತಾನಿ ಬ್ರಹ್ಮರ್ಷೇ ಲೋಕೇಷು ಪ್ರಚರನ್ತಿ ಹ ॥೧॥

"ಬ್ರಹ್ಮರ್ಷಿಗಳೇ! ಲೋಕಗಳಲ್ಲಿ ಸಾಂಖ್ಯ, ಯೋಗ, ಪಾಂಚರಾತ್ರ ಮತ್ತು ಉಪನಿಷದ್ ಎಂಬ ಜ್ಞಾನಗಳು ಪ್ರಚಲಿತವಾಗಿವೆ.

ಕಿಮೇತಾನ್ಯೇಕನಿಷ್ಠಾನಿ ಪೃಥಙ್ನಿಷ್ಠಾನಿ ವಾ ಮುನೇ ।
ಪ್ರಬ್ರೂಹಿ ವೈ ಮಯಾ ಪೃಷ್ಟಃ ಪ್ರವೃತ್ತಿಂ ಚ ಯಥಾಕ್ರಮಮ್ ॥೨॥

ಈ ನಾಲ್ಕು ಶಾಸ್ತ್ರಗಳೂ ಒಂದೇ ಲಕ್ಷ್ಯವನ್ನು ಕುರಿತು ಹೇಳುತ್ತವೆಯೇ ಅಥವಾ ಒಂದೊಂದಕ್ಕೂ ಪ್ರತ್ಯೇಕ-ಪ್ರತ್ಯೇಕವಾದ ಗುರಿಯು ಇರುವುದೇ? ನನ್ನ ಈ ಪ್ರಶ್ನೆಗೆ ಉತ್ತರವನ್ನೂ ಹಾಗೂ ಪ್ರವೃತ್ತಿಮಾರ್ಗವನ್ನೂ ಯಥಾನುಕ್ರಮವಾಗಿ ಹೇಳಿರಿ."

ವೈಶಂಪಾಯನರು ಹೇಳುತ್ತಾರೆ :

ಜಜ್ಞೇ ಬಹುಜ್ಞಂ ಪರಮತ್ಯುದಾರಂ
ಯಂ ದ್ವೀಪಮಧ್ಯೇ ಸುತಮಾತ್ಮಯೋಗಾತ್ ।
ಪರಾಶರಾತ್ಸತ್ಯವತೀ ಮಹರ್ಷಿಂ
ತಸ್ಮೈ ನಮೋಽಜ್ಞಾನತಮೋನುದಾಯ ॥೩॥

"ಸತ್ಯವತೀದೇವಿಯು ದೈವಯೋಗದಿಂದ ಯಮುನಾನದಿಯ ದ್ವೀಪದ ಮಧ್ಯದಲ್ಲಿ ಅನೇಕಶಾಸ್ತ್ರಗಳನ್ನು ತಿಳಿದವನೂ, ಪರಮೋದಾರನೂ, ಮಹರ್ಷಿಯೂ ಆದ ಯಾವ ಪುತ್ರನನ್ನು ಪರಾಶರರಿಂದ ಪಡೆದಳೋ ಅಂತಹ ಅಜ್ಞಾನಾಂಧಕಾರವನ್ನು ವಿನಾಶಗೊಳಿಸುವ ಪರಮಗುರುಗಳಾದ ವ್ಯಾಸರಿಗೆ ನಮಸ್ಕರಿಸುತ್ತೇನೆ.

ಪಿತಾಮಹಾದ್ಯಂ ಪ್ರವದನ್ತಿ ಷಷ್ಠಂ
ಮಹರ್ಷಿಮಾರ್ಷೇಯವಿಭೂತಿಯುಕ್ತಮ್ ।
ನಾರಾಯಣಸ್ಯಾಂಶಜಮೇಕಪುತ್ರಂ
ದ್ವೈಪಾಯನಂ ವೇದ ಮಹಾನಿಧಾನಮ್ ॥೪॥

ಪಿತಾಮಹನಿಗೂ ಮೊದಲಿಗನಾದ ಮಹಾವಿಷ್ಣುವಿಗೆ ಯಾರನ್ನು ಆರನೆಯವನೆಂದು ಹೇಳುವರೋ,* ಯಾರು ಋಷಿಗಳ ಐಶ್ವರ್ಯದಿಂದ ಯುಕ್ತರಾಗಿರುವರೋ (ಋಷಿಗಳಲ್ಲಿರಬೇಕಾದ ಶಮ-ದಮಾದಿ ಐಶ್ವರ್ಯ ರೂಪವಾದ ಗುಣಗಳು ಯಾರಲ್ಲಿ ನೆಲೆಸಿವೆಯೋ), ಯಾರು ನಾರಾಯಣನ ಅಂಶದಿಂದ ಹುಟ್ಟಿರುವರೋ, ಪರಾಶರರಿಗೆ ಏಕಮಾತ್ರಪುತ್ರರಾಗಿ ದ್ವೀಪದಲ್ಲಿ ಹುಟ್ಟಿದರೋ, ವೇದಗಳಿಗೆ ಮಹಾನಿಧಿಗಳಾಗಿರುವರೋ– ಅಂತಹ ವ್ಯಾಸರಿಗೆ ನಮಸ್ಕರಿಸುತ್ತೇನೆ!

ತಮಾದಿಕಾಲೇಷು ಮಹಾವಿಭೂತಿ-
ರ್ನಾರಾಯಣೋ ಬ್ರಹ್ಮಮಹಾನಿಧಾನಮ್ ।
ಸಸರ್ಜ ಪುತ್ರಾರ್ಥಮುದಾರತೇಜಾ
ವ್ಯಾಸಂ ಮಹಾತ್ಮಾನಮಜಂ ಪುರಾಣಮ್ ॥೫॥

ಮಹಾತೇಜಸ್ವಿಯಾದ, ಮಹಾವೈಭವಸಂಪನ್ನನಾದ ಶ್ರೀಮನ್ನಾರಾಯಣನು –ಹಿಂದೆ ವೈದಿಕಜ್ಞಾನಕ್ಕೆ ಮಹಾನಿಧಿಸ್ವರೂಪರಾದ, ಮಹಾತ್ಮರಾದ, ಜನ್ಮರಹಿತರಾದ, ಪುರಾಣಪುರುಷರಾದ ವ್ಯಾಸರನ್ನು ಪುತ್ರರೂಪದಲ್ಲಿ ಸೃಷ್ಟಿಸಿದನು.”

ಜನಮೇಜಯನು ಪ್ರಶ್ನಿಸುತ್ತಾನೆ :

ತ್ವಯೈವ ಕಥಿತಂ ಪೂರ್ವಂ ಸಮ್ಭವೇ ದ್ವಿಜಸತ್ತಮ ।
ವಸಿಷ್ಠಸ್ಯ ಸುತಃ ಶಕ್ತಿಃ ಶಕ್ತಿಪುತ್ರಃ ಪರಾಶರಃ ॥೬॥

ಪರಾಶರಸ್ಯ ದಾಯಾದಃ ಕೃಷ್ಣದ್ವೈಪಾಯನೋ ಮುನಿಃ ।
ಭೂಯೋ ನಾರಾಯಣಸುತಂ ತ್ವಮೇವೈನಂ ಪ್ರಭಾಷಸೇ ॥೭॥

---

*ನಾರಾಯಣ, ಬ್ರಹ್ಮಾ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ–ಈ ಕ್ರಮದಲ್ಲಿ ವ್ಯಾಸರು ಮಹಾವಿಷ್ಣುವಿಗೆ ಆರನೆಯವರು.

“ದ್ವಿಜಶ್ರೇಷ್ಠರೇ! ಆದಿಪರ್ವದ ಕಥೆಯನ್ನು ಹೇಳುವಾಗ ನೀವು ವಸಿಷ್ಠರ ಮಗನು ಶಕ್ತಿಯೆಂದೂ, ಶಕ್ತಿಯ ಮಗನು ಪರಾಶರನೆಂದೂ, ಪರಾಶರನ ಮಗನು ಕೃಷ್ಣದ್ವೈಪಾಯನಮುನಿಯೆಂದೂ ಹೇಳಿರುವಿರಿ. ಈಗ ನೀವೇ ವ್ಯಾಸರನ್ನು ನಾರಾಯಣನ ಮಗನೆಂದೂ ಹೇಳುತ್ತಿರುವಿರಿ.

ಕಿಮತಃ ಪೂರ್ವಜಂ ಜನ್ಮ ವ್ಯಾಸಸ್ಯಾಮಿತತೇಜಸಃ ।
ಕಥಯಸ್ವೋತ್ತಮಮತೇ ಜನ್ಮ ನಾರಾಯಣೋದ್ಭವಮ್ ॥೮॥

ಉತ್ತಮಬುದ್ಧಿಯ ವೈಶಂಪಾಯನರೇ! ಮಹಾತೇಜಸ್ವಿಗಳಾದ ವ್ಯಾಸರಿಗೆ ಹಿಂದೆ ಮತ್ತೊಂದು ಜನ್ಮವಿದ್ದಿತೆ? ನಾರಾಯಣನಿಂದ ವ್ಯಾಸರ ಜನ್ಮವು ಯಾವಾಗ ಮತ್ತು ಹೇಗೆ ಆಯಿತು?–ಈ ವಿಷಯವನ್ನು ಹೇಳಿರಿ.”

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯಮಹಾರಾಜ! ವೇದಾರ್ಥಗಳನ್ನು ತಿಳಿಯುವ ಇಚ್ಛೆಯುಳ್ಳವರಾಗಿದ್ದ, ಧರ್ಮಿಷ್ಠರಾಗಿದ್ದ, ತಪಸ್ಸಿಗೆ ನಿಧಿಯಾಗಿದ್ದ, ಜ್ಞಾನನಿಷ್ಠರಾಗಿದ್ದ ನನ್ನ ಗುರುಗಳು ಮಹಾಭಾರತದ ಆಖ್ಯಾನವನ್ನು ಮುಗಿಸಿ ಹಿಮವತ್ಪರ್ವತದ ತಪ್ಪಲಿನಲ್ಲಿ ವಾಸಮಾಡುತ್ತಿದ್ದರು. ಆ ಸಮಯದಲ್ಲಿ ಬಹುಕಾಲದ ತಪಸ್ಸಿನಿಂದ ಶ್ರಾಂತರಾಗಿದ್ದ ಧೀಮಂತರಾದ ಆ ವ್ಯಾಸರ ಶುಶ್ರೂಷೆಯಲ್ಲಿಯೇ ನಾವೆಲ್ಲರೂ ತತ್ಪರರಾಗಿದ್ದೆವು. ಸುಮಂತು, ಜೈಮಿನಿ, ದೃಢವ್ರತನಾದ, ಪೈಲ, ನಾಲ್ಕನೆಯವನಾದ ನಾನು, ವ್ಯಾಸರ ಮಗನಾದ ಶುಕ –ಈ ಐವರು ಉತ್ತಮಶಿಷ್ಯರಿಂದ ಪರಿವೃತರಾಗಿದ್ದ ವ್ಯಾಸರು–ಹಿಮವತ್ಪರ್ವತದ ತಪ್ಪಲಿನಲ್ಲಿ ಭೂತಗಳಿಂದ ಪರಿವೃತನಾದ ಭೂತಪತಿಯಾದ ಪರಮೇಶ್ವರನಂತೆ–ಪ್ರಕಾಶಿಸುತ್ತಿದ್ದರು. ಷಡಂಗಯುಕ್ತವಾದ ವೇದಗಳನ್ನೂ ಮಹಾಭಾರತದ ಅರ್ಥಗಳನ್ನೂ ಆವರ್ತನೆಮಾಡುತ್ತಾ ಜಿತೇಂದ್ರಿಯರಾದ, ಏಕಾಗ್ರಚಿತ್ತರಾದ ವ್ಯಾಸರನ್ನು ನಾವೈವರೂ ಗುರುಭಕ್ತಿಯಿಂದ ಯುಕ್ತರಾಗಿ ಶುಶ್ರೂಷೆಮಾಡುತ್ತಿದ್ದೆವು. ವ್ಯಾಸರು ಒಂದು ಕಥೆಯನ್ನು ಹೇಳುತ್ತಿದ್ದಾಗ ಮಧ್ಯದಲ್ಲಿ ನಾವು ವೇದಾರ್ಥಗಳನ್ನೂ, ಮಹಾಭಾರತದ

ಅರ್ಥಗಳನ್ನೂ, ಹಾಗೆಯೇ ಹಿಂದಿನ ಜನ್ಮದಲ್ಲಿ ನಾರಾಯಣನಿಂದ ಅವರು ಜನ್ಮಪಡೆದ ವೃತ್ತಾಂತವನ್ನೂ ಹೇಳಬೇಕೆಂದು ದ್ವಿಜಶ್ರೇಷ್ಠರಾದ ವ್ಯಾಸರನ್ನು ಪ್ರಾರ್ಥಿಸಿದೆವು. ತತ್ತ್ವವಿದರಾದ ವ್ಯಾಸರು ಮೊದಲು ವೇದಾರ್ಥಗಳನ್ನೂ ಮಹಾಭಾರತದ ಅರ್ಥಗಳನ್ನೂ ಹೇಳಿ ಅನಂತರ ನಾರಾಯಣನಿಂದಾದ ತಮ್ಮ ಜನ್ಮವೃತ್ತಾಂತವನ್ನು ಹೇಳತೊಡಗಿದರು :

"ವಿಪ್ರರೇ! ಸೃಷ್ಟಿಯ ಆದಿಯಲ್ಲಿ ನಡೆದ ಋಷಿಸಂಬಂಧವಾದ, ಶ್ರೇಷ್ಠವಾದ ಈ ಆಖ್ಯಾನವನ್ನು ಕೇಳಿರಿ. ಈ ವಿಷಯವು ತಪಶ್ಚರಣೆಯಿಂದ ನನಗೆ ತಿಳಿಯಿತು.

ಏಳನೆಯ ಕಲ್ಪದ ಪ್ರಾರಂಭದಲ್ಲಿ ಬ್ರಹ್ಮನ ಏಳನೆಯ ಜನ್ಮದ ಸಮಯವು ಪ್ರಾಪ್ತವಾದಾಗ –ಮಹಾಪ್ರಭನಾದ, ಶುಭಾಶುಭಕರ್ಮಫಲರಹಿತನಾದ, ಮಹಾಯೋಗಿಯಾದ ಶ್ರೀಮನ್ನಾರಾಯಣನು ಮೊದಲು ತನ್ನ ನಾಭಿಕಮಲದಿಂದ ಬ್ರಹ್ಮನನ್ನು ಸೃಷ್ಟಿಸಿದನು. ಬ್ರಹ್ಮನು ಹುಟ್ಟಿದನಂತರ ಮಹಾವಿಷ್ಣುವು ಬ್ರಹ್ಮನಿಗೆ ಹೇಳಿದನು :

ಮಮ ತ್ವಂ ನಾಭಿತೋ ಜಾತಃ ಪ್ರಜಾಸರ್ಗಕರಃ ಪ್ರಭುಃ ।
ಸೃಜ ಪ್ರಜಾಸ್ತ್ವಂ ವಿವಿಧಾ ಬ್ರಹ್ಮನ್ಸಜಡಪಣ್ಡಿತಾಃ ॥೧೯॥

"ಪ್ರಜಾಪತಿಯೇ! ಪ್ರಜೆಗಳನ್ನು ಸೃಷ್ಟಿಮಾಡುವ ಮತ್ತು ಸಕಲ ಜಗತ್ತಿಗೂ ಪ್ರಭುವಾದ ನೀನು ನನ್ನ ನಾಭಿಯಿಂದ ಹುಟ್ಟಿರುವೆ. ಜಡ ರಿಂದಲೂ–ಪಂಡಿತರಿಂದಲೂ ಯುಕ್ತರಾದ ವಿವಿಧ ಪ್ರಜೆಗಳನ್ನು ಸೃಷ್ಟಿಸು." ಶ್ರೀಹರಿಯು ಹೀಗೆ ಹೇಳಿದೊಡನೆಯೇ ಬ್ರಹ್ಮನು ಸೃಷ್ಟಿಕಾರ್ಯದಿಂದ ವಿಮುಖನಾಗಿ ಚಿಂತೆಯಿಂದ ಕಳವಳಗೊಂಡನು. ಈಶ್ವರನಾದ ಶ್ರೀಹರಿ ಯನ್ನು ಪ್ರಣಮಿಸಿ ಹೇಳಿದನು :

ಕಾ ಶಕ್ತಿರ್ಮಮ ದೇವೇಶ ಪ್ರಜಾಃ ಸ್ರಷ್ಟುಂ ನಮೋಽಸ್ತು ತೇ ।
ಅಪ್ರಜ್ಞಾವಾನಹಂ ದೇವ ವಿಧತ್ಸ್ವ ಯದನನ್ತರಮ್ ॥೨೦॥

"ದೇವೇಶ್ವರ! ನಿನಗೆ ನಮಸ್ಕರಿಸುತ್ತೇನೆ. ಪ್ರಜೆಗಳನ್ನು ಸೃಷ್ಟಿಸಲು ನನ್ನಲ್ಲಿ ಯಾವ ಶಕ್ತಿಯಿದೆ? ನಿಶ್ಚಯವಾಗಿಯೂ ನಾನು ಸೃಷ್ಟಿಯ

ವಿಷಯದಲ್ಲಿ ಸ್ವಲ್ಪವಾದರೂ ಬುದ್ಧಿಯಿಲ್ಲದವನು. ಹೀಗಿರುವಾಗ ಮುಂದೆ ನಾನೇನು ಮಾಡಬೇಕೆಂಬುದನ್ನು ನೀನೇ ಆಜ್ಞಾಪಿಸು.”

ಬ್ರಹ್ಮನು ಹೀಗೆ ಹೇಳಲಾಗಿ ಬುದ್ಧಿವಂತರಲ್ಲಿ ಶ್ರೇಷ್ಠನಾದ ಶ್ರೀಹರಿಯು ಅದೃಶ್ಯನಾಗಿ ಬುದ್ಧಿಯನ್ನೇ ಕುರಿತು ಧ್ಯಾನಮಾಡಿದನು.

ಸ್ವರೂಪಿಣೀ ತತೋ ಬುದ್ಧಿರುಪತಸ್ಥೇ ಹರಿಂ ಪ್ರಭುಮ್ ।
ಯೋಗೇನ ಚೈನಾಂ ನಿರ್ಯೋಗಃ ಸ್ವಯಂ ನಿಯುಯುಜೇ ತದಾ ॥

ಶ್ರೀಹರಿಯು ಧ್ಯಾನಿಸುತ್ತಿದ್ದಂತೆಯೇ ಬುದ್ಧಿಯು ಶರೀರವನ್ನು ಧರಿಸಿ ಪ್ರಭುವಾದ ಹರಿಯನ್ನು ಸೇವಿಸಲು ಸಿದ್ಧಳಾಗಿ ನಿಂತಳು. ಮಹಾಯೋಗಿಯಾದ ನಾರಾಯಣನು ತಾನೇ ಬುದ್ಧಿದೇವಿಯನ್ನು ಯೋಗಶಕ್ತಿಯೊಡನೆ ಸಂಯೋಜಿಸಿದನು.

ಅನಂತರ ಅವಿನಾಶಿಯಾದ ಪ್ರಭುವಾದ ಶ್ರೀಮನ್ನಾರಾಯಣನು ಐಶ್ವರ್ಯಯೋಗವನ್ನು ಹೊಂದಿದ್ದ, ಸತಿಯಾದ, ಪ್ರಗತಿಶೀಲಳಾದ ಬುದ್ಧಿಯನ್ನು ಕುರಿತು ಲೋಕದ ಸೃಷ್ಟಿಪ್ರಯೋಜನದ ಸಿದ್ಧಿಗಾಗಿ ಬ್ರಹ್ಮನನ್ನು ಪ್ರವೇಶಿಸುವಂತೆ ಹೇಳಿದನು. ಶ್ರೀಮನ್ನಾರಾಯಣನಿಂದ ಆಜ್ಞಪ್ತಳಾದ ಬುದ್ಧಿದೇವಿಯು ಒಡನೆಯೇ ಬ್ರಹ್ಮನನ್ನು ಪ್ರವೇಶಿಸಿದಳು. ಯೋಗಯುಕ್ತವಾದ ಬುದ್ಧಿಯಿಂದ ಕೂಡಿದ ಬ್ರಹ್ಮನನ್ನು ಶ್ರೀಹರಿಯು ಪುನಃ ನೋಡಿದನು. ಅವನೊಡನೆ ನಾನಾಪ್ರಕಾರವಾದ ಪ್ರಜೆಗಳನ್ನು ಸೃಷ್ಟಿಸುವಂತೆ ಪುನಃ ಹೇಳಿದನು. ಬ್ರಹ್ಮನು ಶ್ರೀಹರಿಯ ಆಜ್ಞೆಯನ್ನು ಶಿರಸಾ ಧರಿಸಿ ‘ಬಾಢಂ’–‘ಹಾಗೆಯೇ ಆಗಲಿ’ ಎಂಬುದಾಗಿ ಹೇಳಿದನು.

ಹೀಗೆ ಶ್ರೀಹರಿಯ ಬ್ರಹ್ಮನಿಗೆ ಜಗತ್ಸೃಷ್ಟಿಯನ್ನು ಮಾಡೆಂದು ಹೇಳಿ ಅಲ್ಲಿಯೇ ಅದೃಶ್ಯನಾದನು ಮತ್ತು ಮುಹೂರ್ತಮಾತ್ರದಲ್ಲಿ ದೇವಸಂಜ್ಞಿತವಾದ ತನ್ನ ಧಾಮಕ್ಕೆ ಹೊರಟುಹೋದನು. ಅಲ್ಲಿ ತನ್ನ ಪೂರ್ವಪ್ರಕೃತಿಯನ್ನು (ಬ್ರಹ್ಮತತ್ತ್ವವನ್ನು) ಹೊಂದಿ ಅದರೊಡನೆಯೇ ಏಕೀಭೂತನಾದನು.

ಸ್ವಲ್ಪಕಾಲ ಕಳೆದನಂತರ ಶ್ರೀಹರಿಯ ಮನಸ್ಸಿನಲ್ಲಿ ಮತ್ತೊಂದು ವಿಚಾರವು ಹುಟ್ಟಿತು. "ಪರಮೇಷ್ಠಿಬ್ರಹ್ಮನು ಎಲ್ಲ ವಿಧವಾದ ಪ್ರಜೆಗಳನ್ನೂ ಸೃಷ್ಟಿಸಿಬಿಟ್ಟಿದ್ದಾನೆ. ಆದರೆ ದೈತ್ಯ-ದಾನವ-ಗಂಧರ್ವ-ರಾಕ್ಷಸರ ಸಮೂಹ ಗಳಿಂದ ಆಕ್ರಾಂತಳಾಗಿರುವ ತಪಸ್ವಿನಿಯಾದ ಈ ಭೂದೇವಿಯು ಅತಿಯಾದ ಭಾರದಿಂದ ಪೀಡಿತಳಾಗಿದ್ದಾಳೆ. ಈ ಪೃಥ್ವಿಯಲ್ಲಿ ಬಲಿಷ್ಠರಾದ ಅನೇಕ ದೈತ್ಯ-ದಾನವ-ರಾಕ್ಷಸರು ಇನ್ನೂ ಹುಟ್ಟುತ್ತಾರೆ. ಅವರು ದುಃಸಾಧ್ಯವಾದ ತಪಸ್ಸುಗಳನ್ನು ಮಾಡಿ ಉತ್ತಮವಾದ ವರಗಳನ್ನು ಪಡೆದುಕೊಳ್ಳುತ್ತಾರೆ. ವರದಾನದಿಂದ ದರ್ಪಿತರಾದ ಆ ದೈತ್ಯ-ದಾನವ- ರಾಕ್ಷಸರು ಅವಶ್ಯವಾಗಿ ತಪೋಧನರಾದ ಋಷಿಗಳನ್ನೂ ದೇವತೆಗಳನ್ನೂ ಬಾಧೆಪಡಿಸುತ್ತಾರೆ. ಆದುದರಿಂದ ನಾನು ಪೃಥ್ವಿಯಲ್ಲಿ ಅನುಕ್ರಮವಾಗಿ ನಾನಾಪ್ರಕಾರವಾದ ಅವತಾರಗಳನ್ನೆತ್ತಿ ಪೃಥ್ವಿಯ ಭಾರವನ್ನಿಳಿಸುವುದು ಸಮುಚಿತವಾಗಿದೆ.

ನಿಗ್ರಹೇಣ ಚ ಪಾಪಾನಾಂ ಸಾಧೂನಾಂ ಪ್ರಗ್ರಹೇಣ ಚ ।
ಇಯಂ ತಪಸ್ವಿನೀ ಸತ್ಯಾ ಧಾರಯಿಷ್ಯತಿ ಮೇದಿನೀ ॥೩೪॥

ಪಾಪಿಷ್ಠರನ್ನು ದಂಡಿಸುವುದರಿಂದಲೂ–ಸತ್ಪುರುಷರನ್ನು ಅನುಗ್ರಹಿ ಸುವುದರಿಂದಲೂ ತಪಸ್ವಿನಿಯಾದ ಸತ್ಯಸ್ವರೂಪಳಾದ ಭೂದೇವಿಯು ಪ್ರಜೆಗಳ ಭಾರವನ್ನು ಧರಿಸಬಲ್ಲವಳಾಗುತ್ತಾಳೆ.

ಮಯಾ ಹ್ಯೇಷಾ ಹಿ ಧ್ರಿಯತೇ ಪಾತಾಲಸ್ಥೇನ ಭೋಗಿನಾ ।
ಮಯಾ ಧೃತಾ ಧಾರಯತಿ ಜಗದ್ವಿಶ್ವಂ ಚರಾಚರಮ್ ॥೩೫॥

ನಾನು ಪಾತಾಲದಲ್ಲಿ ಶೇಷನಾಗನ ರೂಪವನ್ನು ಧರಿಸಿ ಈ ಪೃಥ್ವಿಯನ್ನು ಧರಿಸಿರುತ್ತೇನೆ. ನನ್ನಿಂದ ಧರಿಸಲ್ಪಟ್ಟವಳಾಗಿ ಚರಾಚರಾತ್ಮಕವಾದ ಈ ವಿಶ್ವವನ್ನು ಭೂದೇವಿಯು ಧಾರಣೆಮಾಡುತ್ತಾಳೆ.

ತಸ್ಮಾತ್ಪೃಥ್ವ್ಯಾಃ ಪರಿತ್ರಾಣಂ ಕರಿಷ್ಯೇ ಸಮ್ಭವಂ ಗತಃ ।

ಆದುದರಿಂದ ನಾನು ಪೃಥ್ವಿಯಲ್ಲಿ ಅವತರಿಸಿ ಭೂಮಿಯನ್ನು ರಕ್ಷಿಸು ತ್ತೇನೆ." ಹೀಗೆ ಭಗವಂತನಾದ ಮಧುಸೂದನನು ಯೋಚಿಸಿ ಜಗತ್ತಿನಲ್ಲಿ

ಅವತರಿಸುವ ಕಾರಣದಿಂದ ವರಾಹಾವತಾರ, ನರಸಿಂಹಾವತಾರ, ವಾಮನಾವತಾರ, ಮನುಷ್ಯಸಂಬಂಧವಾದ ಪರಶುರಾಮ-ರಾಮ-ಕೃಷ್ಣಾವತಾರಗಳೇ ಮೊದಲಾದ ಅನೇಕರೂಪಗಳನ್ನು ಸೃಷ್ಟಿಸಿದನು. 'ಈ ಅವತಾರವಿಶೇಷಗಳಿಂದ ದೇವತೆಗಳ ಶತ್ರುಗಳಾದ ಉದ್ಧಟರಾದ ದೈತ್ಯರನ್ನು ಸಂಹರಿಸಬೇಕು'-ಎಂದು ನಿಶ್ಚಯಿಸಿದನು. ಅನಂತರ ಜಗತ್ಸ್ರಷ್ಟೃವಾದ ಶ್ರೀಹರಿಯು-'ಭೋಃ!'-ಎಂಬ ಶಬ್ದದಿಂದ ಜಗತ್ತಿನಲ್ಲಿ ಪ್ರತಿಧ್ವನಿಯನ್ನುಂಟುಮಾಡುತ್ತಾ ಗಟ್ಟಿಯಾಗಿ ಕೂಗಿದನು. ಹೀಗೆ ಕೂಗಿದ ಮಾತ್ರದಿಂದಲೇ ಸಾರಸ್ವತನ ಆವಿರ್ಭಾವವಾಯಿತು. ವಾಕ್ಕಿನಿಂದ ಹುಟ್ಟಿದ ಶಕ್ತಿಶಾಲಿಯಾದ ಶ್ರೀಹರಿಯ ಆ ಪುತ್ರನೇ 'ಅಪಾಂತರತಮ' ಎಂಬ ಹೆಸರಿನಿಂದ ಪ್ರಸಿದ್ಧನಾದನು. ಶ್ರೀಹರಿಯ ಪುತ್ರನಾದ ಅಪಾಂತರತಮನು ಹಿಂದಿನದನ್ನೂ, ಈಗಿನದನ್ನೂ, ಮುಂದಿನದನ್ನೂ ತಿಳಿದವನಾಗಿದ್ದನು. ಸತ್ಯವಾದಿಯೂ-ದೃಢವ್ರತನೂ ಆಗಿದ್ದನು. ಹುಟ್ಟಿದೊಡನೆಯೇ ತಲೆಬಾಗಿ ನಮಸ್ಕರಿಸಿದ ಅಪಾಂತರತಮನಿಗೆ ದೇವತೆಗಳಿಗೂ ಮೊದಲಿಗನಾದ, ಅವಿನಾಶಿಯಾದ ಶ್ರೀಹರಿಯು ಹೇಳಿದನು :

ವೇದಾಖ್ಯಾನೇ ಶ್ರುತಿಃ ಕಾರ್ಯಾ ತ್ವಯಾ ಮತಿಮತಾಂ ವರ ।
ತಸ್ಮಾತ್ಕುರು ಯಥಾಜ್ಞಪ್ತಂ ಮಮೈತದ್ವಚನಂ ಮುನೇ ॥೪೧॥

"ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ವೇದಗಳನ್ನು ವ್ಯಾಖ್ಯಾನಿಸುವ ಸಲುವಾಗಿ ನೀನು ಋಗ್ಯಜುಸ್ಸಾಮಾಥರ್ವಗಳನ್ನು ವಿಂಗಡಿಸಬೇಕು. ಮುನಿಯೇ! ನಾನು ಆಜ್ಞಾಪಿಸಿರುವಂತೆ ನನ್ನ ಮಾತನ್ನು ನಡೆಸಿಕೊಡು."

ಅಪಾಂತರತಮನು ಸ್ವಾಯಂಭುವಮನ್ವಂತರದಲ್ಲಿ ಶ್ರೀಹರಿಯ ಆಜ್ಞಾನುಸಾರವಾಗಿ ವೇದಗಳನ್ನು ಋಗ್ಯಜುಸ್ಸಾಮಾಥರ್ವಗಳೆಂಬ ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದನು. ಅವನು ಮಾಡಿದ ಆ ಕಾರ್ಯದಿಂದಲೂ, ಒಳ್ಳೆಯ ತಪಸ್ಸಿನಿಂದಲೂ ಮತ್ತು ಯಮ-ನಿಯಮಾದಿಗಳ ಅನುಷ್ಠಾನದಿಂದಲೂ ಶ್ರೀಹರಿಯು ಸಂತುಷ್ಟನಾಗಿ ಅಪಾಂತರತಮನಿಗೆ ಹೇಳಿದನು :

ಮನ್ವನ್ತರೇಷು ಪುತ್ರತ್ವಮೇವಮೇವ ಪ್ರವರ್ತಕಃ ॥೪೩॥

“ಮಗನೇ! ನೀನು ಎಲ್ಲ ಮನ್ವಂತರಗಳಲ್ಲಿಯೂ ಹೀಗೆಯೇ ಧರ್ಮ ಪ್ರವರ್ತಕನಾಗು.

ಭವಿಷ್ಯಸ್ಯಚಲೋ ಬ್ರಹ್ಮನ್ನಪ್ರಧೃಷ್ಯಶ್ಚ ನಿತ್ಯಶಃ ।
ಪುನಸ್ತಿಷ್ಯೇ ಚ ಸಮ್ಪ್ರಾಪ್ತೇ ಕುರವೋ ನಾಮ ಭಾರತಾಃ ।
ಭವಿಷ್ಯನ್ತಿ ಮಹಾತ್ಮಾನೋ ರಾಜಾನಃ ಪ್ರಥಿತಾ ಭುವಿ ॥೪೪॥

ಬ್ರಾಹ್ಮಣೋತ್ತಮನೇ! ನೀನು ಯಾವಾಗಲೂ ಅವಿಚಲನೂ, ಅಜೇಯನೂ ಆಗುವೆ. ದ್ವಾಪರ ಮತ್ತು ಕಲಿಯುಗಗಳ ಸಂಧಿಕಾಲದಲ್ಲಿ ಭರತನ ವಂಶದಲ್ಲಿ ಕುರುಗಳೆಂಬ ಹೆಸರಿನ ವಿಶ್ವವಿಖ್ಯಾತರಾದ ಮಹಾತ್ಮರಾದ ಕ್ಷತ್ರಿಯರು ಹುಟ್ಟುತ್ತಾರೆ.

ತೇಷಾಂ ತ್ವತ್ತಃ ಪ್ರಸೂತಾನಾಂ ಕುಲಭೇದೋ ಭವಿಷ್ಯತಿ ।
ಪರಸ್ಪರವಿನಾಶಾರ್ಥಂ ತ್ವಾಮೃತೇ ದ್ವಿಜಸತ್ತಮ ॥೪೫॥

ನಿನ್ನಿಂದಲೇ ಪ್ರಾದುರ್ಭೂತರಾಗುವ ಅವರಲ್ಲಿ ನಿನ್ನ ಸಂಪರ್ಕ ವಿಲ್ಲದೆಯೇ ಪರಸ್ಪರವಿನಾಶಾರ್ಥವಾಗಿ ಕುಲಭೇದ (ಒಡಕು) ವುಂಟಾಗುತ್ತದೆ.

ತತ್ರಾಪ್ಯನೇಕಧಾ ವೇದಾನ್ಭೇತ್ಸ್ಯಸೇ ತಪಸಾನ್ವಿತಃ ।
ಕೃಷ್ಣೇ ಯುಗೇ ಚ ಸಮ್ಪ್ರಾಪ್ತೇ ಕೃಷ್ಣವರ್ಣೋ ಭವಿಷ್ಯಸಿ ॥೪೬॥

ಆ ಸಮಯದಲ್ಲಿಯೂ ತಪೋಬಲಯುಕ್ತನಾದ ನೀನು ವೇದಗಳನ್ನು ಅನೇಕಪ್ರಕಾರವಾಗಿ ವಿಭಾಗಿಸುವೆ. ಕಲಿಯುಗವು ಪ್ರಾಪ್ತವಾಗುತ್ತಲೇ ನೀನು ಕೃಷ್ಣವರ್ಣನಾಗುವೆ.

ಧರ್ಮಾಣಾಂ ವಿವಿಧಾನಾಂ ಚ ಕರ್ತಾ ಜ್ಞಾನಕರಸ್ತಥಾ ।
ಭವಿಷ್ಯಸಿ ತಪೋಯುಕ್ತೋ ನ ಚ ರಾಗಾದ್ವಿಮೋಕ್ಷ್ಯಸೇ ॥೪೭॥

ನೀನು ನಾನಾವಿಧವಾದ ಧರ್ಮಗಳ ಪ್ರವರ್ತಕನಾಗುವೆ. ಶಿಷ್ಯರಿಗೆ ಜ್ಞಾನಪ್ರದನೂ, ತಪಸ್ವಿಯೂ ಆಗುವೆ. ಆದರೆ ಆಸಕ್ತಿಯಿಂದ ವಿಮುಕ್ತ ನಾಗಿರುವುದಿಲ್ಲ.

ವೀತರಾಗಶ್ಚ ಪುತ್ರಸ್ತೇ ಪರಮಾತ್ಮಾ ಭವಿಷ್ಯತಿ ।
ಮಹೇಶ್ವರಪ್ರಸಾದೇನ ನೈತದ್ವಚನಮನ್ಯಥಾ ॥೪೮॥

ನಿನ್ನ ಪುತ್ರನು ಮಹೇಶ್ವರನ ಅನುಗ್ರಹದಿಂದ ರಾಗರಹಿತನಾಗಿ ಪರಮಾತ್ಮಮಯನೇ ಆಗುತ್ತಾನೆ. ನನ್ನ ಈ ಮಾತು ಬೇರೆಯ ರೀತಿಯಲ್ಲಿ ಪರಿಣಮಿಸುವುದಿಲ್ಲ.

ಯಂ ಮಾನಸಂ ವೈ ಪ್ರವದನ್ತಿ ವಿಪ್ರಾಃ
ಪಿತಾಮಹಸ್ಯೋತ್ತಮಬುದ್ಧಿಯುಕ್ತಮ್ ।
ವಸಿಷ್ಠಮಗ್ರ್ಯಂ ಚ ತಪೋನಿಧಾನಂ
ಯಸ್ಯಾತಿಸೂರ್ಯಂ ವ್ಯತಿರಿಚ್ಯತೇ ಭಾಃ ॥೪೯॥
ತಸ್ಯಾನ್ವಯೇ ಚಾಪಿ ತತೋ ಮಹರ್ಷಿಃ
ಪರಾಶರೋ ನಾಮ ಮಹಾಪ್ರಭಾವಃ ।
ಪಿತಾ ಸ ತೇ ವೇದನಿಧಿರ್ವರಿಷ್ಠೋ
ಮಹಾತಪಾ ವೈ ತಪಸೋ ನಿವಾಸಃ ॥೫೦॥

ಯಾವನನ್ನು ಬ್ರಾಹ್ಮಣರು ಬ್ರಹ್ಮಮಾನಸಪುತ್ರನೆಂದು ಹೇಳುವರೋ, ಯಾವನು ಶ್ರೇಷ್ಠವಾದ ಬುದ್ಧಿಯಿಂದ ಯುಕ್ತನಾಗಿರುವನೋ, ತಪೋ ನಿಧಿಯೋ, ಯಾವನ ತೇಜಸ್ಸು ಸೂರ್ಯನ ತೇಜಸ್ಸಿಗಿಂತಲೂ ಅತಿ ಶಯಿಸಿರುವುದೋ –ಅಂತಹ ಸರ್ವಶ್ರೇಷ್ಠನಾದ ವಸಿಷ್ಠಮಹರ್ಷಿಯ ವಂಶ ದಲ್ಲಿ ಮಹಾಪ್ರಭಾವಶಾಲಿಯಾದ ಪರಾಶರನೆಂಬ ಹೆಸರಿನ ಮಹರ್ಷಿಯು ಹುಟ್ಟುತ್ತಾನೆ. ವೇದನಿಧಿಯಾದ, ಶ್ರೇಷ್ಠನಾದ, ಮಹಾತಪಸ್ವಿಯಾದ, ತಪಸ್ಸಿಗೆ ಆವಾಸಸ್ಥಾನನಾದ ಆ ಪರಾಶರನು ನಿನಗೆ ತಂದೆಯಾಗುತ್ತಾನೆ.

ಕಾನೀನಗರ್ಭಃ ಪಿತೃಕನ್ಯಕಾಯಾಂ
ತಸ್ಮಾದೃಷೇಸ್ತ್ವಂ ಭವಿತಾ ಚ ಪುತ್ರಃ ॥೫೧॥

ತಂದೆಯ ಮನೆಯಲ್ಲಿಯೇ ಇರುವ ಕನ್ಯೆಯೊಬ್ಬಳಲ್ಲಿ ಪರಾಶರ ಮುನಿಗಳಿಗೆ ನೀನು ಪುತ್ರನಾಗಿ ಹುಟ್ಟುವೆ ಮತ್ತು ಕನ್ಯೆಯಲ್ಲಿ ಹುಟ್ಟಿದ ಕಾರಣ ಕಾನೀನಗರ್ಭನೆಂದು ಪ್ರಸಿದ್ಧನಾಗುವೆ.

ಭೂತಭವ್ಯಭವಿಷ್ಯಾಣಾಂ ಛಿನ್ನಸರ್ವಾರ್ಥಸಂಶಯಃ ।
ಯೇ ಹ್ಯತಿಕ್ರಾನ್ತಕಾಃ ಪೂರ್ವಂ ಸಹಸ್ರಯುಗಪರ್ಯಯಾಃ ॥೫೨॥

ತಾಂಶ್ಚ ಸರ್ವಾನ್ಮಯೋದ್ದಿಷ್ಟಾನ್ದ್ರಕ್ಷ್ಯಸೇ ತಪಸಾನ್ವಿತಃ ।
ಪುನರ್ದ್ರಕ್ಷ್ಯಸಿ ಚಾನೇಕಸಹಸ್ರಯುಗಪರ್ಯಯಾನ್ ॥೫೩॥

ಹಿಂದಿನ, ಇಂದಿನ ಮತ್ತು ಮುಂದಿನ ಎಲ್ಲ ವಿಷಯಗಳಲ್ಲಿಯೂ ನಿನಗೆ ಸಂಶಯವೆಂಬುದೇ ಇರುವುದಿಲ್ಲ. ತಪೋಬಲದಿಂದ ಕೂಡಿರುವ ನೀನು ನನ್ನ ಉದ್ದೇಶದಂತೆ ನಿರ್ಮಿತವಾದ ಸಾವಿರ ಯುಗಗಳ ಹಿಂದೆ ಕಳೆದುಹೋದ ವಿಷಯಗಳನ್ನು ಸ್ಪಷ್ಟವಾಗಿ ನೋಡುವೆ. ಮುಂದಿನ ಸಾವಿರ ಯುಗಗಳಲ್ಲಿ ನಡೆಯುವ ವಿಷಯಗಳನ್ನೂ ನೀನು ಸ್ಪಷ್ಟರೂಪದಿಂದ ಕಾಣುವೆ.

ಅನಾದಿನಿಧನಂ ಲೋಕೇ ಚಕ್ರಹಸ್ತಂ ಚ ಮಾಂ ಮುನೇ ।
ಅನುಧ್ಯಾನಾನ್ಮಮ ಮುನೇ ನೈತದ್ವಚನಮನ್ಯಥಾ ॥೫೪॥

ಮಹಾಮುನಿಯೇ! ನಿರಂತರವೂ ನನ್ನನ್ನು ಧ್ಯಾನಮಾಡುವುದರಿಂದ ಆದಿ ಮತ್ತು ಅಂತ್ಯಗಳಿಲ್ಲದ, ಚಕ್ರಪಾಣಿಯಾದ ನನ್ನನ್ನು ನೋಡುತ್ತಿರುವೆ. ನನ್ನ ಈ ಮಾತು ಬೇರೆಯ ರೀತಿಯಲ್ಲಿ ಪರಿಣಮಿಸುವುದಿಲ್ಲ.

ಭವಿಷ್ಯತಿ ಮಹಾಸತ್ತ್ವ ಖ್ಯಾತಿಶ್ಚಾಪ್ಯತುಲಾ ತವ ।
ಶನೈಶ್ಚರಃ ಸೂರ್ಯಪುತ್ರೋ ಭವಿಷ್ಯತಿ ಮನುರ್ಮಹಾನ್ ॥೫೫॥

ತಸ್ಮಿನ್ಮನ್ವನ್ತರೇ ಚೈವ ಮನ್ವಾದಿಗಣಪೂರ್ವಕಃ ।
ತ್ವಮೇವ ಭವಿತಾ ವತ್ಸ ಮತ್ಪ್ರಸಾದಾನ್ನ ಸಂಶಯಃ ॥೫೬॥

ಮಹಾಸತ್ತ್ವನೇ! ವಿಶ್ವದಲ್ಲಿ ನಿನಗೆ ಅಪಾರವಾದ ಖ್ಯಾತಿಯುಂಟಾಗುತ್ತದೆ. ಯಾವಾಗ ಸೂರ್ಯನ ಮಗನಾದ ಶನೈಶ್ಚರನು ಮನ್ವಂತರದ ಪ್ರವರ್ತಕನಾಗಿ ಮಹಾಮನುವಿನ ಸ್ಥಾನದಲ್ಲಿ ಪ್ರತಿಷ್ಠಿತನಾಗುವನೋ–ಅದೇ ಮನ್ವಂತರದಲ್ಲಿ ನನ್ನ ಅನುಗ್ರಹದಿಂದ ಮನ್ವಾದಿಗಣಗಳಿಗೆ ನೀನು ಪ್ರಧಾನನಾಗುವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಯತ್ಕಿಂಚಿದ್ವಿದ್ಯತೇ ಲೋಕೇ ಸರ್ವಂ ತನ್ಮದ್ವಿಚೇಷ್ಟಿತಮ್ ।
ಅನ್ಯೋ ಹ್ಯನ್ಯಂ ಚಿನ್ತಯತಿ ಸ್ವಚ್ಛನ್ದಂ ವಿದಧಾಮ್ಯಹಮ್ ॥೫೭॥

ಈ ಪ್ರಪಂಚದಲ್ಲಿ ಯಾವ ಯಾವ ಘಟನೆಗಳು ನಡೆಯುವುವೋ–ಅವೆಲ್ಲವೂ ನನ್ನ ಕಾರ್ಯವೇ ಆಗಿದೆ. ಬೇರೆಯವನು ಬೇರೆಯದನ್ನು ಯೋಚಿಸುತ್ತಾನೆ. ಆದರೆ ನಾನು ಮಾತ್ರ ಎಲ್ಲ ಕಾರ್ಯಗಳನ್ನೂ ನನ್ನ ಇಚ್ಛೆಗೆ ಅನುಸಾರವಾಗಿಯೇ ಮಾಡುತ್ತಿರುತ್ತೇನೆ. (ನಾನು ಸತ್ಯಕಾಮನೂ ಸತ್ಯಸಂಕಲ್ಪನೂ ಆಗಿದ್ದೇನೆ).” ಹೀಗೆ ಭಗವಾನ್ ಈಶಾನನು ಸರಸ್ವತಿಯ (ವಾಕ್ಕಿನ) ಪುತ್ರನಾದ ಅಪಾಂತರತಮನಿಗೆ ಹೇಳಿ ಮುಂದಿನಕಾರ್ಯಗಳನ್ನು ಸಾಧಿಸುವಂತೆಯೂ ಹೇಳಿದನು.

ಹೀಗೆ ನಾನು ದೇವದೇವನಾದ ಮಹಾವಿಷ್ಣುವಿನ ಕೃಪಾಪ್ರಸಾದದಿಂದ ಅಪಾಂತರತಮನೆಂಬ ಹೆಸರಿನಿಂದ ಹುಟ್ಟಿದ್ದೆನು. ಅವರ ಆಜ್ಞಾನುಸಾರ ವಾಗಿಯೇ ಪುನಃ ನಾನು ವಸಿಷ್ಠಕುಲನಂದನನಾಗಿ ಪರಾಶರಪುತ್ರನಾಗಿ ಹುಟ್ಟಿದ್ದೇನೆ.

ಶಿಷ್ಯರೇ! ಶ್ರೀಮನ್ನಾರಾಯಣನ ಕೃಪೆಯಿಂದ ಹಿಂದೆ ನಾನು ನಾರಾಯಣನ ಅಂಶದಿಂದ ಹೇಗೆ ಹುಟ್ಟಿದೆನೆಂಬುದನ್ನು ನಿಮಗೆ ಹೇಳಿದ್ದೇನೆ.

ಬುದ್ಧಿವಂತರಲ್ಲಿ ಶ್ರೇಷ್ಠರಾದವರೇ! ಹಿಂದೆ ನಾನು ಅತ್ಯುತ್ತಮವಾದ ಏಕಾಗ್ರತೆಯಿಂದ ಪರಮದಾರುಣವಾದ ಮಹಾತಪಸ್ಸನ್ನು ಮಾಡಿದೆನು.

ಮಕ್ಕಳೇ! ನೀವು ಕೇಳಿದ ಪ್ರಶ್ನೆಗೆ ಅನುಸಾರವಾಗಿ ನಾನು ಎಲ್ಲ ವಿಷಯಗಳನ್ನೂ ನಿಮಗೆ ಹೇಳಿದ್ದೇನೆ. ಗುರುಭಕ್ತರಾದ ನಿಮ್ಮ ಮೇಲಿನ ವಿಶ್ವಾಸದಿಂದ ನನ್ನ ಹಿಂದಿನ ಜನ್ಮವೃತ್ತಾಂತವನ್ನೂ ಮತ್ತು ಮುಂದೆ ಆಗುವುದನ್ನೂ ಹೇಳಿದ್ದೇನೆ.”

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ನಿನ್ನ ಪ್ರಶ್ನೆಗೆ ಅನುಸಾರವಾಗಿ ನಮ್ಮ ಗುರು ಗಳಾದ ಕ್ಲೇಶರಹಿತವಾದ ಮನಸ್ಸನ್ನು ಹೊಂದಿರುವ ವ್ಯಾಸರ ಜನ್ಮ

ವೃತ್ತಾಂತವನ್ನು ಹೇಳಿರುವೆನು. ಅವರಿಗೆ ಸಂಬಂಧಿಸಿದಂತೆ ಇನ್ನೂ ಕೆಲವು ವಿಷಯಗಳನ್ನು ಹೇಳುವೆನು ; ಕೇಳು.

ರಾಜರ್ಷಿಯೇ! ಸಾಂಖ್ಯ, ಯೋಗ, ಪಾಂಚರಾತ್ರ, ವೇದಗಳು, ಪಾಶುಪತ –ಈ ಎಲ್ಲ ಜ್ಞಾನಗಳೂ ಒಂದೇ ಲಕ್ಷ್ಯವನ್ನು ಕುರಿತು ಹೇಳಿರುವ ನಾನಾಪ್ರಕಾರವಾದ ಅಭಿಪ್ರಾಯಗಳೆಂಬುದನ್ನು ತಿಳಿ.

ಸಾಂಖ್ಯಸ್ಯ ವಕ್ತಾ ಕಪಿಲಃ ಪರಮರ್ಷಿಃ ಸ ಉಚ್ಯತೇ ।
ಹಿರಣ್ಯಗರ್ಭೋ ಯೋಗಸ್ಯ ವೇತ್ತಾ ನಾನ್ಯಃ ಪುರಾತನಃ ॥೬೫॥

ಸಾಂಖ್ಯಶಾಸ್ತ್ರವನ್ನು ಹೇಳಿರುವವನು ಭಗವಾನ್ ಕಪಿಲನು. ಅವನನ್ನು ಪರಮರ್ಷಿಯೆಂದು ಹೇಳುತ್ತಾರೆ. ಪುರಾತನನಾದ ಹಿರಣ್ಯಗರ್ಭನೇ ಯೋಗಶಾಸ್ತ್ರದ ಪ್ರವರ್ತಕನಾಗಿದ್ದಾನೆ. ಅವನನ್ನು ಬಿಟ್ಟರೆ ಈ ಶಾಸ್ತ್ರ ಪ್ರವರ್ತಕರು ಬೇರೆ ಯಾರೂ ಇಲ್ಲ.

ಅಪಾನ್ತರತಮಾಶ್ಚೈವ ವೇದಾಚಾರ್ಯಃ ಸ ಉಚ್ಯತೇ ।
ಪ್ರಾಚೀನಗರ್ಭಂತಮೃಷಿಂ ಪ್ರವದನ್ತೀಹ ಕೇಚನ ॥೬೬॥

ಅಪಾಂತರತಮನನ್ನು ವೇದಾಚಾರ್ಯನೆಂದು ಹೇಳುತ್ತಾರೆ. ಕೆಲವರು ಆ ಋಷಿಯನ್ನು ಪ್ರಾಚೀನಗರ್ಭನೆಂದೂ ಕರೆಯುತ್ತಾರೆ.

ಉಮಾಪತಿರ್ಭೂತಪತಿಃ ಶ್ರೀಕಣ್ಠೋ ಬ್ರಹ್ಮಣಃ ಸುತಃ ।
ಉಕ್ತವಾನಿದಮವ್ಯಗ್ರೋ ಜ್ಞಾನಂ ಪಾಶುಪತಂ ಶಿವಃ ॥೬೭॥

ಬ್ರಹ್ಮನ ಪುತ್ರನಾದ, ಭೂತಪತಿಯಾದ, ಶ್ರೀಕಂಠನಾದ, ಉಮಾಪತಿ ಯಾದ ಶಿವನು ಏಕಾಗ್ರಚಿತ್ತನಾಗಿ ಪಾಶುಪತಶಾಸ್ತ್ರವನ್ನು ಉಪದೇಶಿಸಿದನು.

ಪಾಞ್ಚರಾತ್ರಸ್ಯ ಕೃತ್ಸ್ನಸ್ಯ ವೇತ್ತಾ ತು ಭಗವಾನ್ಸ್ವಯಮ್ ।
ಸರ್ವೇಷು ಚ ನೃಪಶ್ರೇಷ್ಠ ಜ್ಞಾನೇಷ್ವೇತೇಷು ದೃಶ್ಯತೇ ॥೬೮॥

ಯಥಾಗಮಂ ಯಥಾಜ್ಞಾನಂ ನಿಷ್ಠಾ ನಾರಾಯಣಃ ಪ್ರಭುಃ ।
ನ ಚೈನಮೇವಂ ಜಾನನ್ತಿ ತಮೋಭೂತಾ ವಿಶಾಮ್ಪತೇ ॥೬೯॥

ನೃಪಶ್ರೇಷ್ಠನೇ! ಸಮಗ್ರವಾದ ಪಾಂಚರಾತ್ರಶಾಸ್ತ್ರವನ್ನು ತಿಳಿದಿರುವವನು ಸಾಕ್ಷಾತ್ ನಾರಾಯಣನೇ ಆಗಿರುತ್ತಾನೆ. ಜ್ಞಾನಬೋಧಕವಾದ ಈ ಎಲ್ಲ ಶಾಸ್ತ್ರಗಳಲ್ಲಿಯೂ, ವೇದಗಳಲ್ಲಿಯೂ, ಅನುಭವದಲ್ಲಿಯೂ ಪ್ರಭುವಾದ ನಾರಾಯಣನೊಬ್ಬನೇ ಸ್ಥಿರವಾಗಿ ನೆಲೆಸಿರುವುದು ಕಂಡುಬರುತ್ತದೆ. ಅಜ್ಞಾನಾಂಧಕಾರದಲ್ಲಿ ಮುಳುಗಿರುವವರು –ಶ್ರೀಹರಿಯೇ ಏಕೈಕಲಕ್ಷ್ಯನೆಂಬ ವಿಷಯವನ್ನು–ತಿಳಿದವರಾಗಿಲ್ಲ.

ತಮೇವ ಶಾಸ್ತ್ರಕರ್ತಾರಃ ಪ್ರವದನ್ತಿ ಮನೀಷಿಣಃ ।
ನಿಷ್ಠಾಂ ನಾರಾಯಣಮೃಷಿಂ ನಾನ್ಯೋಽಸ್ತೀತಿ ವಚೋ ಮಮ ॥೭೦॥

ಶಾಸ್ತ್ರಕರ್ತೃಗಳಾದ ಜ್ಞಾನಿಗಳು ನಾರಾಯಣರ್ಷಿಯನ್ನೇ ಸಕಲಶಾಸ್ತ್ರಗಳಿಗೂ ಪರಮಲಕ್ಷ್ಯನೆಂದು ಹೇಳುತ್ತಾರೆ. ಅವನಲ್ಲದೇ ಬೇರೆ ಯಾರೂ ಅಲ್ಲವೆಂಬುದು ನನ್ನ ಅಭಿಮತವೂ ಆಗಿದೆ.

ನಿಃಸಂಶಯೇಷು ಸರ್ವೇಷು ನಿತ್ಯಂ ವಸತಿ ವೈ ಹರಿಃ ।
ಸಸಂಶಯಾನ್ಹೇತುಬಲಾನ್ನಾಧ್ಯಾವಸತಿ ಮಾಧವಃ ॥೭೧॥

ಜ್ಞಾನದ ಬಲದಿಂದ ಯಾರಿಗೆ ಸಂಶಯವು ನಿವಾರಣೆಯಾಗಿರುವುದೋ ಅಂತಹವರ ಹೃದಯದಲ್ಲಿ ಶ್ರೀಹರಿಯು ನಿತ್ಯವೂ ವಾಸಮಾಡುತ್ತಾನೆ. ಆದರೆ ಕುತರ್ಕಗಳ ಪ್ರಭಾವದಿಂದ ಪರಮಾತ್ಮನ ಅಸ್ತಿತ್ವದಲ್ಲಿಯೇ ಸಂಶಯವನ್ನು ಹೊಂದಿರುವವರ ಹೃದಯದಲ್ಲಿ ಮಾಧವನೆಂದಿಗೂ ವಾಸಮಾಡುವುದಿಲ್ಲ.

ಪಾಞ್ಚರಾತ್ರವಿದೋ ಯೇ ತು ಯಥಾಕ್ರಮಪರಾ ನೃಪ ।
ಏಕಾನ್ತಭಾವೋಪಗತಾಸ್ತೇ ಹರಿಂ ಪ್ರವಿಶನ್ತಿ ವೈ ॥೭೨॥

ನರೇಶ್ವರನೇ! ಯಾರು ಪಾಂಚರಾತ್ರಾಗಮವನ್ನು ತಿಳಿದಿರುವರೋ ಮತ್ತು ಅದರಲ್ಲಿ ಹೇಳಿರುವಂತೆ ಯಥಾಕ್ರಮವಾಗಿ ಭಗವಂತನ ಆರಾಧನೆಯನ್ನು ಮಾಡುವರೋ, ಭಗವಂತನಲ್ಲಿ ಅನನ್ಯಭಾವವನ್ನು ಹೊಂದಿರುವರೋ –ಅಂತಹವರು ಹರಿಯನ್ನು ಪ್ರವೇಶಿಸುತ್ತಾರೆ.

ಸಾಂಖ್ಯಂ ಚ ಯೋಗಂ ಚ ಸನಾತನೇ ದ್ವೇ
ವೇದಾಶ್ಚ ಸರ್ವೇ ನಿಖಿಲೇನ ರಾಜನ್ ।

ಸರ್ವೈಃ ಸಮಸ್ತೈರ್ಋಷಿಭಿರ್ನಿರುಕ್ತೋ
ನಾರಾಯಣೋ ವಿಶ್ವಮಿದಂ ಪುರಾಣಮ್ ॥೭೩॥

ಸಾಂಖ್ಯ ಮತ್ತು ಯೋಗಗಳೂ, ಎಲ್ಲ ವೇದಗಳೂ, ಸನಾತನವಾದ ಪಾಂಚರಾತ್ರ-ಪಾಶುಪತಗಳೆಂಬ ಎರಡು ಶಾಸ್ತ್ರಗಳೂ, ಪುರಾತನವಾದ ಈ ವಿಶ್ವವೂ ನಾರಾಯಣಸ್ವರೂಪವೇ–ಎಂದು ಸಮಸ್ತಮಹರ್ಷಿಗಳೂ ಹೇಳಿದ್ದಾರೆ.

ಶುಭಾಶುಭಂ ಕರ್ಮ ಸಮೀರಿತಂ ಯ-
ತ್ಪ್ರವರ್ತತೇ ಸರ್ವಲೋಕೇಷು ಕಿಞ್ಚಿತ್ ।
ತಸ್ಮಾದೃಷೇಸ್ತದ್ಭವತೀತಿ ವಿದ್ಯಾ-
ದ್ದಿವ್ಯನ್ತರಿಕ್ಷೇ ಭುವಿ ಚಾಪ್ಸು ಚೇತಿ ॥೭೪॥

ಸ್ವರ್ಗ, ಅಂತರಿಕ್ಷ, ಭೂಮಿ, ನೀರು – ಈ ಎಲ್ಲ ಸ್ಥಳಗಳಲ್ಲಿಯೂ ಮತ್ತು ಎಲ್ಲ ಲೋಕಗಳಲ್ಲಿಯೂ ಯಾವ ಶುಭಾಶುಭಕರ್ಮಗಳು ನಡೆಯುತ್ತಿವೆಯೋ –ಅವೆಲ್ಲವೂ ನಾರಾಯಣರ್ಷಿಯಿಂದಲೇ ನಡೆಯುತ್ತಿರುವುದೆಂದು ತಿಳಿಯಬೇಕು.”

ಖ೪೯ನೆಯ ಅಧ್ಯಾಯವು ಮುಗಿಯಿತು.

ಖ೫೦ನೆಯ ಅಧ್ಯಾಯ — ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ವೈಜಯಂತಪರ್ವತದ ಮೇಲೆ ಬ್ರಹ್ಮ-ರುದ್ರರ ಸಮಾಗಮ: ಬ್ರಹ್ಮನಿಂದ ನಾರಾಯಣನ ಮಹಿಮೆಯ ವರ್ಣನೆ

ಜನಮೇಜಯನು ಪ್ರಶ್ನಿಸುತ್ತಾನೆ :

ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು ।
ಕೋ ಹ್ಯತ್ರ ಪುರುಷಃ ಶ್ರೇಷ್ಠಃ ಕೋ ವಾ ಯೋನಿರಿಹೋಚ್ಯತೇ ॥

“ಬ್ರಾಹ್ಮಣೋತ್ತಮರೇ! ಪುರುಷರು ಅನೇಕರಿರುವರೇ? ಅಥವಾ ಒಬ್ಬನೇ ಇರುವನೇ? ಅನೇಕರಿರುವುದಾದರೆ ಎಲ್ಲರಿಗಿಂತಲೂ ಶ್ರೇಷ್ಠನಾದ ಪುರುಷನು ಯಾರು? ಯಾರನ್ನು ಎಲ್ಲರಿಗೂ ಉತ್ಪತ್ತಿಸ್ಥಾನವೆಂದು ಹೇಳುತ್ತಾರೆ?”

ವೈಶಂಪಾಯನರು ಹೇಳುತ್ತಾರೆ :

ಬಹವಃ ಪುರುಷಾ ಲೋಕೇ ಸಾಂಖ್ಯಯೋಗವಿಚಾರಣೇ ।
ನೈತದಿಚ್ಛನ್ತಿ ಪುರುಷಮೇಕಂ ಕುರುಕುಲೋದ್ವಹ ॥೨॥

“ಕುರುಕುಲಾವತಂಸನೇ! ಸಾಂಖ್ಯ-ಯೋಗಗಳ ವಿಚಾರಧಾರೆಗೆ ಅನುಸಾರವಾಗಿ ಈ ಜಗತ್ತಿನಲ್ಲಿ ಪುರುಷರು ಅನೇಕರಿದ್ದಾರೆ. ಅವರು ಏಕ ಪುರುಷವಾದವನ್ನು ಮಾನ್ಯಮಾಡುವುದಿಲ್ಲ.

ಬಹೂನಾಂ ಪುರುಷಾಣಾಂ ಚ ಯಥೈಕಾ ಯೋನಿರುಚ್ಯತೇ ।
ತಥಾ ತಂ ಪುರುಷಂ ವಿಶ್ವಂ ವ್ಯಾಖ್ಯಾಸ್ಯಾಮಿ ಗುಣಾಧಿಕಮ್ ॥೩॥

ನಮಸ್ಕೃತ್ವಾ ಚ ಗುರವೇ ವ್ಯಾಸಾಯ ವಿದಿತಾತ್ಮನೇ ।
ತಪೋಯುಕ್ತಾಯ ದಾನ್ತಾಯ ವನ್ದ್ಯಾಯ ಪರಮರ್ಷಯೇ ॥೪॥

ಪರಮಗುರುಗಳಾದ, ಆತ್ಮವಿದರಾದ, ತಪೋಯುಕ್ತರಾದ, ಜಿತೇಂದ್ರಿಯರಾದ, ಸರ್ವವಂದ್ಯರಾದ, ಪರಮರ್ಷಿಗಳಾದ ವ್ಯಾಸರಿಗೆ ನಮಸ್ಕರಿಸಿ ಅನೇಕಪುರುಷರಿಗೂ ಯಾವ ಒಬ್ಬ ಪುರುಷನನ್ನೇ ಉತ್ಪತ್ತಿಸ್ಥಾನನೆನ್ನುವರೋ –ಅಂತಹ ಗುಣಾಧಿಕನಾದ ವಿಶ್ವಾತ್ಮನಾದ ಪುರುಷೋತ್ತಮನನ್ನು ವರ್ಣಿಸುತ್ತೇನೆ.

ಇದಂ ಪುರುಷಸೂಕ್ತಂ ಹಿ ಸರ್ವವೇದೇಷು ಪಾರ್ಥಿವ ।
ಋತಂ ಸತ್ಯಂ ಚ ವಿಖ್ಯಾತಮೃಷಿಸಿಂಹೇನ ಚಿನ್ತಿತಮ್ ॥೫॥

ಋಷಿಸಿಂಹನಾದ ನಾರಾಯಣನಿಂದ ದೃಷ್ಟವಾದ ಈ ಪುರುಷಸೂಕ್ತವು ಎಲ್ಲ ವೇದಗಳಲ್ಲಿಯೂ ಕಂಡುಬರುತ್ತದೆ. ಇದು ಋತ-ಸತ್ಯಸ್ವರೂಪವೆಂದೂ ಪ್ರಸಿದ್ಧವಾಗಿದೆ.

(ಋತವು ಸತ್ಯದ ಒಳಸ್ವರೂಪ. ಆ ಋತವನ್ನು ಮಾತಿನಿಂದಲೂ ಕರ್ಮದಿಂದಲೂ ಪ್ರಕಟಪಡಿಸಿದರೆ ಅದು ಸತ್ಯವಾಗುತ್ತದೆ. ವೇದೇಷು ಪೌರುಷಂ ಸೂಕ್ತಂ–ಎಂಬಂತೆ ಪುರುಷಸೂಕ್ತವು ಎಲ್ಲ ವೇದಗಳಲ್ಲಿಯೂ ಕಂಡುಬರುವ ವೇದಗಳ ಸಾರವತ್ತಾದ ಭಾಗವು.)

ಉತ್ಸರ್ಗೇಣಾಪವಾದೇನ ಋಷಿಭಿಃ ಕಪಿಲಾದಿಭಿಃ ।
ಅಧ್ಯಾತ್ಮಚಿನ್ತಾಮಾಶ್ರಿತ್ಯ ಶಾಸ್ತ್ರಾಣ್ಯುಕ್ತಾನಿ ಭಾರತ ॥೬॥

ಕಪಿಲನೇ ಮೊದಲಾದ ಮಹರ್ಷಿಗಳು ಸಾಮಾನ್ಯ ಮತ್ತು ವಿಶೇಷ ಶಾಸ್ತ್ರಗಳ ಹಿನ್ನೆಲೆಯಲ್ಲಿ ಅಧ್ಯಾತ್ಮತತ್ತ್ವವನ್ನು ಚಿಂತನೆಮಾಡಿ ಅಧ್ಯಾತ್ಮಕ್ಕೆ ಸಂಬಂಧಿಸಿದಂತೆ ಅನೇಕಶಾಸ್ತ್ರಗಳನ್ನು ಹೇಳಿರುತ್ತಾರೆ.

ಸಮಾಸತಸ್ತು ಯದ್ವ್ಯಾಸಃ ಪುರುಷೈಕತ್ವಮುಕ್ತವಾನ್ ।
ತತ್ತೇಽಹಂ ಸಮ್ಪ್ರವಕ್ಷ್ಯಾಮಿ ಪ್ರಸಾದಾದಮಿತೌಜಸಃ ॥೭॥

ಆದರೆ ವ್ಯಾಸರು ಸಂಕ್ಷೇಪವಾಗಿ ಪುರುಷನ ಯಾವ ಏಕತ್ವವನ್ನು ಹೇಗೆ ಪ್ರತಿಪಾದಿಸಿ ಹೇಳಿರುವರೋ–ಅದನ್ನೇ ನಾನು ನಿನಗೆ ಮಹಾತೇಜಸ್ವಿಗಳಾದ ಅವರ ಅನುಗ್ರಹದಿಂದ ಹೇಳುತ್ತೇನೆ.

ಈ ವಿಷಯದಲ್ಲಿ ಹಿಂದೆ ಬ್ರಹ್ಮನಿಗೂ–ತ್ರ್ಯಂಬಕನಿಗೂ ನಡೆದ ಇತಿಹಾಸರೂಪವಾದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಕ್ಷೀರಸಮುದ್ರದ ಮಧ್ಯಭಾಗದಲ್ಲಿ ಸುವರ್ಣಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿರುವ ವೈಜಯಂತವೆಂಬ ಹೆಸರಿನಿಂದ ಪ್ರಸಿದ್ಧವಾದ ಶ್ರೇಷ್ಠ ಪರ್ವತವಿದೆ. ಬ್ರಹ್ಮನು ಅಧ್ಯಾತ್ಮಮಾರ್ಗವನ್ನು ಚಿಂತಿಸುತ್ತಾ ಏಕಾಕಿಯಾಗಿ ಅನುದಿನವೂ ಬ್ರಹ್ಮಲೋಕದಿಂದ ವೈಜಯಂತಪರ್ವತಕ್ಕೆ ಬಂದು ಅದನ್ನು ಸೇವಿಸುತ್ತಿದ್ದನು. ಒಮ್ಮೆ ಧೀಮಂತನಾದ ಚತುರ್ಮುಖನು ವೈಜಯಂತ ಪರ್ವತದಲ್ಲಿ ಇರುವ ಸಮಯದಲ್ಲಿ–ಅವನ ನೆತ್ತಿಯಿಂದ ಹುಟ್ಟಿದ, ಮಹಾಯೋಗಿಯಾದ, ಮುಕ್ಕಣ್ಣನಾದ, ಪ್ರಭುವಾದ ಶಿವನು ಸ್ವೇಚ್ಛೆಯಿಂದ ಆಕಾಶಮಾರ್ಗವಾಗಿ ಬರುತ್ತಿದ್ದಾಗ–ವೈಜಯಂತಪರ್ವತವನ್ನು ನೋಡಿದೊಡನೆಯೇ ಆಕಾಶದಿಂದ ಆ ಪರ್ವತಶಿಖರದಲ್ಲಿಳಿದು ಬ್ರಹ್ಮನ ಬಳಿಗೇ ಬಂದನು. ಎದುರಿನಲ್ಲಿಯೇ ಬ್ರಹ್ಮನಿದ್ದುದನ್ನು ಕಂಡು ಪರಮಪ್ರೀತನಾದ ಶಿವನು ಬ್ರಹ್ಮನ ಕಾಲುಗಳಿಗೆ ನಮಸ್ಕರಿಸಿದನು. ಪಾದಕಮಲಗಳಲ್ಲಿ ಬಿದ್ದ ಶಿವನನ್ನು ಬ್ರಹ್ಮನು ಎಡಗೈಯಿಂದ ಹಿಡಿದು ಮೇಲಕ್ಕೆಬ್ಬಿಸಿದನು. ಏಕಮಾತ್ರ ಸರ್ವಸಮರ್ಥನಾದ ಪ್ರಜಾಪತಿಯು ಬಹಳ ಕಾಲದ ಮೇಲೆ ಆಗಮಿಸಿದ ತನ್ನ ಮಗನೊಡನೆ ಹೇಳಿದನು :

"ಮಹಾಬಾಹುವೇ! ಶಂಕರ! ನಿನ್ನನ್ನು ಪ್ರೀತಿಯಿಂದ ಸ್ವಾಗತಿಸುತ್ತೇನೆ. ಸೌಭಾಗ್ಯವಶದಿಂದ ಈಗ ನೀನು ನನ್ನ ಬಳಿಗೆ ಬಂದಿರುವೆ. ಪುತ್ರ! ನೀನು ಕುಶಲಿಯಾಗಿರುವೆಯಾ? ನಿನ್ನ ಸ್ವಾಧ್ಯಾಯ ಮತ್ತು ತಪಸ್ಸುಗಳು ನಿರಾತಂಕವಾಗಿ ನಡೆಯುತ್ತಿವೆಯೇ? ನೀನು ನಿತ್ಯವೂ ಉಗ್ರವಾದ ತಪಸ್ಸಿನಲ್ಲಿಯೇ ನಿರತನಾಗಿರತಕ್ಕವನು. ಆದುದರಿಂದ ಪುನಃ ಪುನಃ ನಿನ್ನ ತಪಸ್ಸಿನ ವಿಷಯವಾಗಿಯೇ ಪ್ರಶ್ನಿಸುತ್ತೇನೆ."

ರುದ್ರನು ಹೇಳುತ್ತಾನೆ :

"ಭಗವನ್! ನಿನ್ನ ಕೃಪೆಯಿಂದಾಗಿ ನನ್ನ ಸ್ವಾಧ್ಯಾಯ-ತಪಸ್ಸುಗಳು ನಿರಾತಂಕವಾಗಿಯೂ ಮತ್ತು ನಿರ್ವಿಘ್ನವಾಗಿಯೂ ನಡೆಯುತ್ತಿವೆ. ಸಂಪೂರ್ಣವಾದ ಜಗತ್ತೂ ಕುಶಲದಿಂದಲೂ ಕ್ಷೇಮದಿಂದಲೂ ಕೂಡಿದೆ. ಬಹಳ ದಿವಸಗಳ ಹಿಂದೆ ನಾನು ಬ್ರಹ್ಮಲೋಕದಲ್ಲಿ ನಿನ್ನನ್ನು ಸಂದರ್ಶಿಸಿದ್ದೆನು. ನಿನ್ನ ಚರಣಗಳಿಂದ ಸೇವಿತವಾದ ಈ ಪರ್ವತಕ್ಕೆ ಪುನಃ ನಿನ್ನನ್ನು ನೋಡಲೆಂದೇ ಬಂದಿರುತ್ತೇನೆ. ನೀನು ಏಕಾಂತವಾಗಿ ಇಲ್ಲಿರುವುದನ್ನು ನೋಡಿ ನನಗೆ ಕುತೂಹಲವೂ ಉಂಟಾಗಿದೆ. ಪಿತಾಮಹನೇ! ನೀನು ಏಕಾಂತದಲ್ಲಿರುವುದಕ್ಕೆ ಕಾರಣವು ಅಲ್ಪವಾದುದೇನೂ ಆಗಿರಲಾರದು. ಹಸಿವು-ಬಾಯಾರಿಕೆಗಳಿಲ್ಲದ ದೇವತೆಗಳಿಂದಲೂ, ಅಸುರರಿಂದಲೂ, ಮಹಾಪ್ರಭೆಯುಳ್ಳ ಋಷಿಗಳಿಂದಲೂ, ಗಂಧರ್ವಾಪ್ಸರೆಯರಿಂದಲೂ ಸತತವಾಗಿ ಸಂಸೇವಿಸಲ್ಪಡುವ ಶ್ರೇಷ್ಠವಾದ ಬ್ರಹ್ಮಲೋಕವನ್ನು ಬಿಟ್ಟು ಶ್ರೇಷ್ಠವಾದ ವೈಜಯಂತಪರ್ವತಕ್ಕೆ ಏಕಾಕಿಯಾಗಿ ಬಂದಿರುವ ಕಾರಣವೇನು?"

"ವತ್ಸ! ವೈಜಯಂತಪರ್ವತವನ್ನು ನಾನು ಸತತವಾಗಿ ಸೇವಿಸುತ್ತಲೇ ಇದ್ದೇನೆ. (ಇಲ್ಲಿಗೆ ಬರುತ್ತಲೇ ಇರುತ್ತೇನೆ.) ಇಲ್ಲಿ ನಾನು ಏಕಾಕಿ ಯಾಗಿದ್ದುಕೊಂಡು ಏಕಾಗ್ರವಾದ ಮನಸ್ಸಿನಿಂದ ವಿರಾಟ್ಪುರುಷನನ್ನು ಧ್ಯಾನಮಾಡುತ್ತೇನೆ."

"ಬ್ರಹ್ಮದೇವ! ನೀನು ಇದುವರೆಗೆ ಅನೇಕಪುರುಷರನ್ನು ಸೃಷ್ಟಿಸಿರುವೆ. ಇನ್ನೂ ಅನೇಕಪುರುಷರನ್ನು ಸೃಷ್ಟಿಮಾಡಲಿರುವೆ. ಆ ವಿರಾಟ್ಪುರುಷನೂ ನೀನು ಸೃಷ್ಟಿಸಿರುವ ಅನೇಕಪುರುಷರಲ್ಲಿ ಒಬ್ಬನಾಗಿದ್ದಾನೆ.

ಅವನನ್ನು ನೀನು ಧ್ಯಾನಿಸಬೇಕಾದರೆ ಅವನಲ್ಲಿರುವ ವೈಶಿಷ್ಟ್ಯವೇನು? ನೀನು ಧ್ಯಾನಮಾಡುತ್ತಿರುವ ಆ ಏಕೈಕಪುರುಷೋತ್ತಮನು ಯಾರು? ಈ ನನ್ನ ಸಂಶಯಕ್ಕೆ ಸಮಾಧಾನವನ್ನು ಹೇಳು. ಈ ವಿಷಯವನ್ನು ತಿಳಿಯಲು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ."

ಬ್ರಹ್ಮನು ಹೇಳುತ್ತಾನೆ :

"ವತ್ಸ! ನಾನು ಸೃಷ್ಟಿಸಿರುವ ಅನೇಕಪುರುಷರ ವಿಷಯವಾಗಿ ನೀನು ಹೇಳಿದ ಮಾತು ಸಾಧುವೇ ಆಗಿದೆ. (ನಾನು ಇದುವರೆಗೆ ಅನೇಕಪುರುಷರನ್ನು ಸೃಷ್ಟಿಸಿದ್ದೇನೆ ; ಮುಂದೆಯೂ ಸೃಷ್ಟಿಸುತ್ತೇನೆ.) ಆದರೆ ನಾನು ಸೃಷ್ಟಿಸಿರುವ ಪುರುಷರನ್ನು ಹೀಗೆ ಧ್ಯಾನದಿಂದ ನೋಡಬೇಕಾದುದೇನೂ ಇಲ್ಲ. ನಾನು ನಿನಗೆ ಎಲ್ಲಕ್ಕೂ ಆಧಾರಭೂತನಾಗಿರುವ, ಅನೇಕಪುರುಷರಿಗೂ ಉತ್ಪತ್ತಿಸ್ಥಾನನೆಂದು ಹೇಳಲ್ಪಡುವ ಏಕಮಾತ್ರನಾದ ಪುರುಷನ ವಿಷಯವಾಗಿ ಹೇಳುತ್ತೇನೆ. ಯಾರು ಅನವರತವಾದ ಸಾಧನೆಗಳಿಂದ ತ್ರಿಗುಣಗಳನ್ನು ಕಳೆದುಕೊಂಡು (ಸತ್ವಾದಿಗುಣಗಳಿಂದ ವಿಹೀನರಾಗಿ) ವಿಶ್ವರೂಪನಾದ, ಶ್ರೇಷ್ಠನಾದ, ಅತ್ಯಂತಮಹತ್ತಮನಾದ, ನಿರ್ಗುಣನಾದ, ಸನಾತನನಾದ ಪುರುಷನನ್ನು ಪ್ರವೇಶಿಸುವರೋ–ಆ ಮಹಾಪುರುಷನ ವಿಷಯವನ್ನು ಹೇಳುತ್ತೇನೆ."

ೱ೫೦ನೆಯ ಅಧ್ಯಾಯವು ಮುಗಿಯಿತು.

ೱ೫೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾರಾಯಣನ ಮಹಿಮೆಯ ವರ್ಣನೆ

ಭಗವಂತನಾದ ಪ್ರಜಾಪತಿಬ್ರಹ್ಮನು ಹೇಳುತ್ತಾನೆ :

ಶೃಣು ಪುತ್ರ ಯಥಾ ಹ್ಯೇಷ ಪುರುಷಃ ಶಾಶ್ವತೋಽವ್ಯಯಃ ।
ಅಕ್ಷಯಶ್ಚಾಪ್ರಮೇಯಶ್ಚ ಸರ್ವಗಶ್ಚ ನಿರುಚ್ಯತೇ ॥೧॥

"ಪುತ್ರ! ಆ ವಿರಾಟ್ಪುರುಷನು ಹೇಗೆ ಶಾಶ್ವತನೂ, ಅವಿನಾಶಿಯೂ, ಅಕ್ಷಯನೂ, ಅಪ್ರಮೇಯನೂ, ಸರ್ವವ್ಯಾಪಿಯೂ ಆಗಿರುವನೆಂಬುದನ್ನು ಹೇಳುವೆನು, ಕೇಳು. ವಿಶ್ವಾತ್ಮನಾದ ಆ ಪುರುಷೋತ್ತಮನನ್ನು ನೀನಾ

ಗಲೀ, ನಾನಾಗಲೀ, ಸಗುಣರಾಗಲೀ, ಗುಣಾತೀತರಾಗಲೀ, ಯಾರೇ ಆದರೂ–ಸಗುಣನಾದ ಮತ್ತು ನಿರ್ಗುಣನಾದ ವಿಶ್ವಾತ್ಮನಾದ ಆ ಪುರುಷನನ್ನು ಚರ್ಮಚಕ್ಷುಸ್ಸಿನಿಂದ ನೋಡಲು ಸಾಧ್ಯವೇ ಆಗುವುದಿಲ್ಲ. ಜ್ಞಾನದೃಷ್ಟಿಗೆ ಮಾತ್ರವೇ ಅವನು ಗೋಚರನಾಗತಕ್ಕವನೆಂದು ಹೇಳುತ್ತಾರೆ.

ಅಶರೀರಃ ಶರೀರೇಷು ಸರ್ವೇಷು ನಿವಸತ್ಯಸೌ ।
ವಸನ್ನಪಿ ಶರೀರೇಷು ನ ಸ ಲಿಪ್ಯತಿ ಕರ್ಮಭಿಃ ॥೩॥

ಶರೀರರಹಿತನಾಗಿದ್ದರೂ ಪುರುಷೋತ್ತಮನು ಸರ್ವರ ಶರೀರದಲ್ಲಿಯೂ ವಾಸಮಾಡುತ್ತಾನೆ. ಎಲ್ಲರ ಶರೀರಗಳಲ್ಲಿಯೂ ನಿವಾಸ ಮಾಡಿಕೊಂಡಿದ್ದರೂ ಶರೀರಗಳು ಮಾಡುವ ಪಾಪ-ಪುಣ್ಯಕರ್ಮಗಳಿಂದ ಲಿಪ್ತನಾಗುವುದಿಲ್ಲ.

ಮಮಾನ್ತರಾತ್ಮಾ ತವ ಚ ಯೇ ಚಾನ್ಯೇ ದೇಹಿಸಂಜ್ಞಿತಾಃ ।
ಸರ್ವೇಷಾಂ ಸಾಕ್ಷಿಭೂತೋಽಸೌ ನ ಗ್ರಾಹ್ಯಃ ಕೇನಚಿತ್ಕ್ವಚಿತ್ ॥೪॥

ಪುರುಷೋತ್ತಮನು ನನ್ನ, ನಿನ್ನ ಮತ್ತು ದೇಹಿಗಳೆಂಬ ಸಂಜ್ಞೆಯನ್ನು ಹೊಂದಿರುವ ಇತರಜೀವಿಗಳ ಅಂತರಾತ್ಮನೂ ಆಗಿದ್ದಾನೆ. ಎಲ್ಲರಿಗೂ ಎಲ್ಲರ ಕರ್ಮಗಳಿಗೂ ಅವನು ಸಾಕ್ಷಿಯಾಗಿದ್ದಾನೆ. ಆದರೆ ಅವನು ಯಾರಿಂದಲೂ ಯಾವಾಗಲೂ ಗ್ರಹಿಸಲ್ಪಡತಕ್ಕವನಲ್ಲ. (ಅಂತರಾತ್ಮದಲ್ಲಿಯೇ ಇದ್ದರೂ ಪುರುಷೋತ್ತಮನನ್ನು ಯಾರೂ ಹಿಡಿದುಕೊಳ್ಳಲಾರರು.)

ವಿಶ್ವಮೂರ್ಧಾ ವಿಶ್ವಭುಜೋ ವಿಶ್ವಪಾದಾಕ್ಷಿನಾಸಿಕಃ ।
ಏಕಶ್ಚರತಿ ಕ್ಷೇತ್ರೇಷು ಸ್ವೈರಚಾರೀ ಯಥಾಸುಖಮ್ ॥೫॥

ಅವನಿಗೆ ಎಲ್ಲೆಲ್ಲಿಯೂ ಶಿರಸ್ಸುಗಳು, ಎಲ್ಲೆಲ್ಲಿಯೂ ಭುಜಗಳು, ಎಲ್ಲೆಲ್ಲಿಯೂ ಪಾದಗಳು, ಕಣ್ಣುಗಳು ಮತ್ತು ಮೂಗುಗಳು ಇರುತ್ತವೆ. ಆ ಪುರುಷನು ಏಕಾಕಿಯಾಗಿ ಎಲ್ಲ ಕ್ಷೇತ್ರ (ಶರೀರ) ಗಳಲ್ಲಿಯೂ ಯಥೇಷ್ಟವಾಗಿ ಸುಖವಾಗಿ ಸಂಚರಿಸುತ್ತಾನೆ. (ವಿಶ್ವತಶ್ಚಕ್ಷುರುತ ವಿಶ್ವತೋ

ಮುಖೋ ವಿಶ್ವತೋ ಹಸ್ತ ಉತ ವಿಶ್ವತಸ್ಪಾತ್–ಎಂಬ ಶ್ರುತಿವಾಕ್ಯವೂ ಇದನ್ನೇ ಹೇಳುತ್ತದೆ.)

ಕ್ಷೇತ್ರಾಣಿ ಹಿ ಶರೀರಾಣಿ ಬೀಜಂ ಚಾಪಿ ಶುಭಾಶುಭಮ್ ।
ತಾನಿ ವೇತ್ತಿ ಸ ಯೋಗಾತ್ಮಾ ತತಃ ಕ್ಷೇತ್ರಜ್ಞ ಉಚ್ಯತೇ ॥೬॥

ಪ್ರಾಣಿಗಳ ಶರೀರಗಳೇ ಕ್ಷೇತ್ರಗಳಾಗಿವೆ. ಶುಭಾಶುಭಕರ್ಮಗಳೇ ಆ ಕ್ಷೇತ್ರದಲ್ಲಿ ಬಿತ್ತುವ ಬೀಜಗಳಾಗಿವೆ. ಯೋಗಾತ್ಮನಾದ ಪುರುಷೋತ್ತಮನು ಕ್ಷೇತ್ರ-ಬೀಜಗಳೆರಡನ್ನೂ ತಿಳಿದವನಾಗಿರುವುದರಿಂದ ಅವನನ್ನು ಕ್ಷೇತ್ರಜ್ಞ ನೆಂದು ಹೇಳುತ್ತಾರೆ.

ನಾಗತಿರ್ನ ಗತಿಸ್ತಸ್ಯ ಜ್ಞೇಯಾ ಭೂತೇಷು ಕೇನಚಿತ್ ।
ಸಾಂಖ್ಯೇನ ವಿಧಿನಾ ಚೈವ ಯೋಗೇನ ಚ ಯಥಾಕ್ರಮಮ್ ॥೭॥

ಚಿನ್ತಯಾಮಿ ಗತಿಂ ಚಾಸ್ಯ ನ ಗತಿಂ ವೇದ್ಮಿ ಚೋತ್ತರಾಮ್ ।
ಯಥಾಜ್ಞಾನಂ ತು ವಕ್ಷ್ಯಾಮಿ ಪುರುಷಂ ತು ಸನಾತನಮ್ ॥೮॥

ಪ್ರಾಣಿಗಳ ಸಮೂಹದಲ್ಲಿ ಯಾವುದೇ ಪ್ರಾಣಿಗಾದರೂ ಅವನು ಯಾವ ರೀತಿಯಲ್ಲಿ ಶರೀರದಲ್ಲಿ ಪ್ರವೇಶಿಸುತ್ತಾನೆ? ಯಾವ ರೀತಿಯಲ್ಲಿ ಶರೀರವನ್ನು ಬಿಟ್ಟು ಹೊರಟುಹೋಗುತ್ತಾನೆ?–ಎಂಬ ವಿಷಯವು ತಿಳಿಯದು. ಯಥಾನುಕ್ರಮವಾದ ಸಾಂಖ್ಯವಿಧಿಯಿಂದಲೂ ಯೋಗಾಭ್ಯಾಸದಿಂದಲೂ ಅವನ ಮಾರ್ಗವು ಯಾವುದೆಂಬುದನ್ನು ಚಿಂತಿಸುತ್ತಿದ್ದೇನೆ. ಆದರೆ ಅವನ ಉತ್ಕೃಷ್ಟವಾದ ಪರಮಪದವನ್ನು ನಾನಿನ್ನೂ ತಿಳಿದವನಾಗಿಯೇ ಇದ್ದೇನೆ. ಸನಾತನನಾದ ಪುರುಷೋತ್ತಮನ ಮಾಹಾತ್ಮ್ಯವನ್ನು ನನಗೆ ತಿಳಿದಿರುವಷ್ಟು ಹೇಳುತ್ತೇನೆ.

ತಸ್ಮೈಕತ್ವಂ ಮಹತ್ತ್ವಂ ಚ ಸ ಚೈಕಃ ಪುರುಷಃ ಸ್ಮೃತಃ ।
ಮಹಾಪುರುಷಶಬ್ದಂ ಸ ಬಿಭರ್ತ್ಯೇಕಃ ಸನಾತನಃ ॥೯॥

ಅವನಲ್ಲಿ ಏಕತ್ವವೂ ಇದೆ ; ಮಹತ್ತ್ವವೂ ಇದೆ. ಆದುದರಿಂದಲೇ ಅವನನ್ನು ಏಕಮಾತ್ರಪುರುಷನೆಂದು ಹೇಳುತ್ತಾರೆ. ಸನಾತನನಾದ ಅವನೊಬ್ಬನೇ 'ಮಹಾಪುರುಷ' ಎಂಬ ಅಭಿದಾನವನ್ನು ಹೊಂದಿದ್ದಾನೆ.

ಏಕೋ ಹುತಾಶೋ ಬಹುಧಾ ಸಮಿಧ್ಯತೇ |
ಏಕಃ ಸೂರ್ಯಸ್ತಪಸೋ ಯೋನಿರೇಕಾ |
ಏಕೋ ವಾಯುರ್ಬಹುಧಾ ವಾತಿ ಲೋಕೇ
ಮಹೋದಧಿಶ್ಚಾಮ್ಭಸಾಂ ಯೋನಿರೇಕಃ |
ಪುರುಷಶ್ಚೈಕೋ ನಿರ್ಗುಣೋ ವಿಶ್ವರೂಪ-
ಸ್ತಂ ನಿರ್ಗುಣಂ ಪುರುಷಂ ಚಾವಿಶನ್ತಿ ||೧೦||

ಒಬ್ಬನೇ ಅಗ್ನಿಯು ಅನೇಕರೂಪಗಳಿಂದ ಪ್ರಜ್ವಲಿಸುತ್ತಾನೆ ಮತ್ತು ಪ್ರಕಾಶಿಸುತ್ತಾನೆ. ಒಬ್ಬನೇ ಸೂರ್ಯನು ಅನೇಕವಿಧವಾದ ಪ್ರಕಾಶಕ್ಕೆ ಏಕೈಕಉತ್ಪತ್ತಿಕಾರಣನಾಗಿರುತ್ತಾನೆ. ಒಬ್ಬನೇ ವಾಯುವು ಲೋಕದಲ್ಲಿ ನಾನಾವಿಧವಾದ ಆಕಾರಗಳನ್ನು ಹೊಂದಿ ಬೀಸುತ್ತಿರುತ್ತಾನೆ. ಸಮುದ್ರವು ಹಲವು ರೂಪಗಳಲ್ಲಿರುವ ನೀರುಗಳಿಗೆ ಉತ್ಪತ್ತಿಸ್ಥಾನವಾಗಿದೆ. ಹಾಗೆಯೇ ಒಬ್ಬನೇ ಪುರುಷನು ನಿರ್ಗುಣನೂ, ವಿಶ್ವರೂಪನೂ ಆಗಿದ್ದಾನೆ. ನಿರ್ಗುಣನಾದ ಆ ಪರಮಪುರುಷನಲ್ಲಿ ಎಲ್ಲ ರೂಪಗಳೂ ಲಯಹೊಂದುತ್ತವೆ.

ಹಿತ್ವಾ ಗುಣಮಯಂ ಸರ್ವಂ ಕರ್ಮ ಹಿತ್ವಾ ಶುಭಾಶುಭಮ್ |
ಉಭೇ ಸತ್ಯಾನೃತೇ ತ್ಯಕ್ತ್ವಾ ಏವಂ ಭವತಿ ನಿರ್ಗುಣಃ ||೧೧||

ದೇಹೇಂದ್ರಿಯಾದಿ ಸಮಸ್ತಗುಣಮಯಪದಾರ್ಥಗಳಲ್ಲಿಯೂ ಮಮತೆಯನ್ನು ತೊರೆದು, ಶುಭಾಶುಭಕರ್ಮಗಳನ್ನು ತ್ಯಾಗಮಾಡಿ, ಸತ್ಯಾನೃತಗಳೆರಡನ್ನೂ ಪರಿತ್ಯಜಿಸಿರುವ ಸಾಧಕನು ನಿರ್ಗುಣನಾಗುತ್ತಾನೆ.

ಅಚಿನ್ತ್ಯಂ ಚಾಪಿ ತಂ ಜ್ಞಾತ್ವಾ ಭಾವಸೂಕ್ಷ್ಮಂ ಚತುಷ್ಟಯಮ್ |
ವಿಚರೇದ್ಯೋಽಸಮುನ್ನದ್ಧಃ ಸ ಗಚ್ಛೇತ್ಪುರುಷಂ ಶುಭಮ್ ||೧೨||

ಯಾವನು –ಈ ಏಕಪುರುಷನು ಚಿಂತಿಸಲು ಅಸಾಧ್ಯನಾದವನು, ಅಪ್ರಮೇಯನು, ಭಾವಿಸಲು ಅತ್ಯಂತಸೂಕ್ಷ್ಮನಾದವನು –ಎಂದು ತಿಳಿದು ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ಎಂಬ ಅವನ ನಾಲ್ಕು ವ್ಯೂಹಗಳನ್ನು ಅಹಂಕಾರ-ದರ್ಪಗಳಿಲ್ಲದೆ ಉಪಾಸನೆಮಾಡು

ವನೋ–ಅಂತಹವನು ಕಲ್ಯಾಣಮಯನಾದ ಆ ಪರಮಪುರುಷನನ್ನು ಹೊಂದುತ್ತಾನೆ.

ಏವಂ ಹಿ ಪರಮಾತ್ಮಾನಂ ಕೇಚಿದಿಚ್ಛನ್ತಿ ಪಣ್ಡಿತಾಃ ।
ಏಕಾತ್ಮಾನಂ ತಥಾತ್ಮಾನಮಪರೇ ಜ್ಞಾನಚಿನ್ತಕಾಃ ॥೧೩॥

ಹೀಗೆ ಕೆಲವು ಪಂಡಿತರು ಪರಮಾತ್ಮನು ನಾಲ್ಕು ವ್ಯೂಹಗಳುಳ್ಳವನೆಂದು ತಿಳಿಯುತ್ತಾರೆ. ಮತ್ತೆ ಕೆಲವು ಜ್ಞಾನಿಗಳು 'ಅವನು ಏಕಾತ್ಮನು, ತಮಗೂ ಆತ್ಮಭೂತನಾಗಿರುವನು'–ಎಂದು ತಿಳಿಯುತ್ತಾರೆ.

ತತ್ರ ಯಃ ಪರಮಾತ್ಮಾ ಹಿ ಸ ನಿತ್ಯಂ ನಿರ್ಗುಣಃ ಸ್ಮೃತಃ ।
ಸ ಹಿ ನಾರಾಯಣೋ ಜ್ಞೇಯಃ ಸರ್ವಾತ್ಮಾ ಪುರುಷೋ ಹಿ ಸಃ ।
ನ ಲಿಪ್ಯತೇ ಫಲೈಶ್ಚಾಪಿ ಪದ್ಮಪತ್ರಮಿವಾಮ್ಭಸಾ ॥೧೪॥

ಇಲ್ಲಿ ಯಾವನು ಪರಮಾತ್ಮನೋ–ಅವನು ನಿತ್ಯ-ನಿರ್ಗುಣನೆಂದು ಅಥವಾ ಅಖಿಲಹೇಯಗುಣವರ್ಜಿತನೆಂದು ಹೇಳಲ್ಪಟ್ಟಿದ್ದಾನೆ. ಅವನನ್ನೇ ನಾರಾಯಣನೆಂದೂ–ಸರ್ವಾತ್ಮನಾದ ಪುರುಷನೆಂದೂ ತಿಳಿಯಬೇಕು. ತಾವರೆಯ ಎಲೆಯು ನೀರಿನಲ್ಲಿಯೇ ಇದ್ದರೂ ಆ ನೀರಿಗೆ ಅಂಟಿಕೊಳ್ಳುವುದಿಲ್ಲ. ಹಾಗೆಯೇ ಪರಮಾತ್ಮನು ಕರ್ಮಮಾಡುವ ಜೀವ ಗಳಿಗೆ ಅಂತರ್ಯಾಮಿಯಾಗಿದ್ದರೂ ಕರ್ಮಗಳಿಗೆ ಅಂಟಿಕೊಳ್ಳುವುದಿಲ್ಲ.

ಕರ್ಮಾತ್ಮಾ ತ್ವಪರೋ ಯೋಽಸೌ ಮೋಕ್ಷಬನ್ಧೈಃ ಸ ಯುಜ್ಯತೇ ।
ಸ ಸಪ್ತದಶಕೇನಾಪಿ ರಾಶಿನಾ ಯುಜ್ಯತೇ ಚ ಸಃ ।
ಏವಂ ಬಹುವಿಧಃ ಪ್ರೋಕ್ತಃ ಪುರುಷಸ್ತೇ ಯಥಾಕ್ರಮಮ್ ॥೧೫॥

ಯಾವನು ಕರ್ಮಗಳಿಗೆ ಅಂಟಿಕೊಳ್ಳುತ್ತಾನೆಯೋ–ಅವನು (ಜೀವಾತ್ಮನು) ಹುಟ್ಟು-ಸಾವು ಮುಂತಾದ ಬಂಧನಗಳಿಗೆ ಈಡಾಗುತ್ತಾನೆ. ಆ ಕರ್ಮಾತ್ಮನು ಅಥವಾ ಜೀವನು – ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳು, ಐದು ಮಹಾಭೂತಗಳು, ಬುದ್ಧಿ ಮತ್ತು ಮನಸ್ಸು–ಒಟ್ಟು ಈ ಹದಿನೇಳು ಗುಣಗಳ ರಾಶಿಯಿಂದ ಯುಕ್ತನಾಗಿರುತ್ತಾನೆ. ಹೀಗೆ ಆ ಕರ್ಮಾತ್ಮನು ಕರ್ಮಫಲಗಳಿಗೆ ಅನುಸಾರವಾಗಿ ಬಹುವಿಧವಾದ ಯೋನಿ

ಗಳಲ್ಲಿ ಜನ್ಮವನ್ನು ಹೊಂದುತ್ತಾನೆ. ವತ್ಸ! ರುದ್ರ! ಈ ರೀತಿಯಲ್ಲಿ ನೀನು ಕೇಳಿದ ಪುರುಷನ ವಿಷಯವನ್ನು ನಿನಗೆ ಕ್ರಮವನ್ನು ಅನುಸರಿಸಿ ಹೇಳಿರುತ್ತೇನೆ.

ಯತ್ತತ್ಕೃತ್ಸ್ನಂ ಲೋಕತನ್ತ್ರಸ್ಯ ಧಾಮ
ವೇದ್ಯಂ ಪರಂ ಬೋಧನೀಯಂ ಸ ಬೋದ್ಧಾ ।
ಮನ್ತಾ ಮನ್ತವ್ಯಂ ಪ್ರಾಶಿತಾ ಪ್ರಾಶನೀಯಂ
ಘ್ರಾತಾ ಘ್ರೇಯಂ ಸ್ಪರ್ಶಿತಾ ಸ್ಪರ್ಶನೀಯಮ್ ॥೧೭॥

ಯಾವುದು ಸಂಪೂರ್ಣವಾಗಿ ಲೋಕತಂತ್ರಕ್ಕೆ ಆಶ್ರಯಸ್ಥಾನವಾಗಿ ರುವುದೋ–ಆ ಪರತತ್ತ್ವವೇ ತಿಳಿಯಲ್ಪಡತಕ್ಕುದೂ, ಬೋಧಿಸಲ್ಪಡತಕ್ಕುದೂ ಆಗಿದೆ. ಆ ಪರಬ್ರಹ್ಮಪರಮಾತ್ಮನೇ ಬೋಧಿಸುವವನೂ ಆಗಿ ದ್ದಾನೆ. ಮನನಶೀಲನೂ, ಮನನಮಾಡಬೇಕಾದ ವಸ್ತುವೂ ಅವನೇ ಆಗಿ ದ್ದಾನೆ. ಪ್ರಾಶನಮಾಡುವವನೂ (ಭೋಕ್ತೃವೂ) ಪ್ರಾಶನಮಾಡುವ ವಸ್ತುವೂ (ಭೋಜ್ಯವೂ) ಆಗಿದ್ದಾನೆ. ಆಘ್ರಾಣಿಸುವವನೂ ಮತ್ತು ಆಘ್ರೇಯವಾದ ವಸ್ತುವೂ (ಗಂಧವೂ) ಅವನೇ ಆಗಿದ್ದಾನೆ. ಸ್ಪರ್ಶಿಸುವವನೂ, ಸ್ಪರ್ಶಿಸುವ ವಸ್ತುವೂ ಅವನೇ ಆಗಿದ್ದಾನೆ.

ದ್ರಷ್ಟಾ ದ್ರಷ್ಟವ್ಯಂ ಶ್ರಾವಿತಾ ಶ್ರಾವಣೀಯಂ
ಜ್ಞಾತಾ ಜ್ಞೇಯಂ ಸಗುಣಂ ನಿರ್ಗುಣಂ ಚ ।
ಯದ್ವೈ ಪ್ರೋಕ್ತಂ ತಾತ ಸಮ್ಯಕ್ಪ್ರಧಾನಂ
ನಿತ್ಯಂ ಚೈತಚ್ಛಾಶ್ವತಂ ಚಾವ್ಯಯಂ ಚ ॥೧೮॥

ನೋಡುವವನೂ ನೋಡುವ ಪದಾರ್ಥವೂ ಅವನೇ ಆಗಿದ್ದಾನೆ. ಕೇಳುವವನೂ ಕೇಳುವ ಶಬ್ದವೂ ಅವನೇ ಆಗಿದ್ದಾನೆ. ತಿಳಿಯುವವನೂ ತಿಳಿಯಲ್ಪಡಬೇಕಾದ ತತ್ತ್ವವೂ ಅವನೇ ಆಗಿದ್ದಾನೆ. ಸಗುಣನೂ ನಿರ್ಗುಣನೂ ಅವನೇ ಆಗಿದ್ದಾನೆ. ಯಾವುದು ಪ್ರಧಾನತತ್ತ್ವವೆಂದು ಹೇಳಲ್ಪಟ್ಟಿರುವುದೋ– ಅದು ನಿತ್ಯವೂ, ಶಾಶ್ವತವೂ, ಅವಿನಾಶಿಯೂ ಆಗಿದೆ.

ಯದ್ವೈ ಸೂತೇ ಧಾತುರಾದ್ಯಂ ವಿಧಾನಂ
ತದ್ವೈ ವಿಪ್ರಾಃ ಪ್ರವದನ್ತೇಽನಿರುದ್ಧಮ್ ।
ಯದ್ವೈ ಲೋಕೇ ವೈದಿಕಂ ಕರ್ಮ ಸಾಧು
ಆಶೀರ್ಯುಕ್ತಂ ತದ್ಧಿ ತಸ್ಯೈವ ಭಾವ್ಯಮ್ ॥೧೯॥

ಯಾವ ಪ್ರಧಾನತತ್ತ್ವವು ಬ್ರಹ್ಮನಿಗಿಂತಲೂ (ನನಗಿಂತಲೂ) ಮೊದಲನೆಯದಾದ ಮೂಲಕಾರಣವನ್ನು ಅಥವಾ ಮೂಲಪ್ರಕೃತಿಯನ್ನು ಸೃಷ್ಟಿಸಿತೋ –ಅದನ್ನೇ ವಿಪ್ರರು 'ಅನಿರುದ್ಧ' ಎಂಬ ಹೆಸರಿನಿಂದ ಕರೆಯುತ್ತಾರೆ. ಲೋಕದಲ್ಲಿ ಕಾಮ್ಯಗಳಾದ ಯಾವ ವೈದಿಕಶುಭಕರ್ಮಗಳು ನಡೆಯುವುವೋ –ಅವೆಲ್ಲವೂ ಅವನವೇ ಆಗಿವೆಯೆಂದು ಭಾವಿಸಬೇಕು.

ದೇವಾಃ ಸರ್ವೇ ಮುನಯಃ ಸಾಧು ಶಾನ್ತಾ-
ಸ್ತಂ ಪ್ರಾಗ್ವಂಶೇ ಯಜ್ಞಭಾಗೈರ್ಯಜನ್ತೇ ।
ಅಹಂ ಬ್ರಹ್ಮಾ ಆದ್ಯ ಈಶಃ ಪ್ರಜಾನಾಂ
ತಸ್ಮಾಜ್ಜಾತಸ್ತ್ವಂ ಚ ಮತ್ತಃ ಪ್ರಸೂತಃ ॥೨೦॥

ಎಲ್ಲ ದೇವತೆಗಳೂ, ಶಾಂತಸ್ವಭಾವವುಳ್ಳ ಮುನಿಗಳೂ ಯಜ್ಞಶಾಲೆಯ ಪ್ರಾಗ್ವಂಶವೆಂಬ ಸ್ಥಳದಲ್ಲಿ (ಹೋಮದ್ರವ್ಯವಿರುವ ಗೃಹಕ್ಕೆ ಪೂರ್ವಭಾಗದಲ್ಲಿರುವ ಗೃಹದಲ್ಲಿ ಅಥವಾ ಯಜಮಾನನೂ ಮತ್ತು ಋತ್ವಿಜರೂ ಇರುವ ಮನೆಯಲ್ಲಿ) ಆ ಅನಿರುದ್ಧನನ್ನೇ ಯಜ್ಞಭಾಗಗಳಿಂದ ಆರಾಧಿಸುತ್ತಾರೆ. ಅನಿರುದ್ಧನಿಂದಲೇ ಹುಟ್ಟಿರುವ ನಾನು ಎಲ್ಲ ಪ್ರಜೆಗಳಿಗೂ ಆದಿಯೂ ಈಶ್ವರನೂ ಆಗಿದ್ದೇನೆ. ನನ್ನಿಂದ ನೀನು ಹುಟ್ಟಿರುವೆ.

ಮತ್ತೋ ಜಗಜ್ಜಙ್ಗಮಂ ಸ್ಥಾವರಂ ಚ
ಸರ್ವೇ ವೇದಾಃ ಸರಹಸ್ಯಾ ಹಿ ಪುತ್ರ ॥೨೧॥

ಪುತ್ರ! ನನ್ನಿಂದ ಚರಾಚರಗಳಿಂದ ಯುಕ್ತವಾದ ಈ ಜಗತ್ತೂ ಮತ್ತು ರಹಸ್ಯಗಳಿಂದ ಯುಕ್ತವಾದ ಸರ್ವವೇದಗಳೂ ಹುಟ್ಟಿವೆ.

ಚತುರ್ವಿಭಕ್ತಃ ಪುರುಷಃ ಸ ಕ್ರೀಡತಿ ಯಥೇಚ್ಛತಿ ।
ಏವಂ ಸ ಭಗವಾನ್ಸ್ವೇನ ಜ್ಞಾನೇನ ಪ್ರತಿಬೋಧಿತಃ ॥೨೨॥

ವಾಸುದೇವನೇ ಆದಿಯಾಗಿ ನಾಲ್ಕು ರೂಪಗಳಿಂದ ವಿಭಾಗಿಸಲ್ಪಟ್ಟಿರುವ ಆ ಪುರುಷನು ಹೇಗೆ ಇಚ್ಛಿಸುವನೋ –ಹಾಗೆ ಆಟವಾಡುತ್ತಾನೆ. ಹೀಗೆ ಆ ಭಗವಂತನು ತನ್ನದೇ ಆದ ಜ್ಞಾನದಿಂದ ತಿಳಿಯಲ್ಪಡುತ್ತಾನೆ.

ಏತತ್ತೇ ಕಥಿತಂ ಪುತ್ರ ಯಥಾವದನುಪೃಚ್ಛತಃ ।
ಸಾಂಖ್ಯಜ್ಞಾನೇ ತಥಾ ಯೋಗೇ ಯಥಾವದನುವರ್ಣಿತಮ್ ॥೨೩॥

ಪುತ್ರ! ರುದ್ರದೇವ! ನಿನ್ನ ಪ್ರಶ್ನೆಗೆ ಅನುಗುಣವಾಗಿ ನಾನು ಯಥಾವತ್ತಾಗಿ ಉತ್ತರಿಸಿದ್ದೇನೆ. ಸಾಂಖ್ಯವಿಜ್ಞಾನದಲ್ಲಿಯೂ ಮತ್ತು ಯೋಗದಲ್ಲಿಯೂ ಯಾವ ರೀತಿಯಲ್ಲಿ ಭಗವಂತನು ವರ್ಣಿಸಲ್ಪಟ್ಟಿರುವನೋ ಅದೇ ರೀತಿಯಲ್ಲಿ ಪಾಂಚರಾತ್ರದಲ್ಲಿಯೂ ಭಗವಂತನ ಹಿರಿಮೆಯು ವರ್ಣಿಸಲ್ಪಟ್ಟಿದೆ."

ಇಃ೫೧ನೆಯ ಅಧ್ಯಾಯವು ಮುಗಿಯಿತು.

೩೫೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಇಂದ್ರನು ನಾರದರಿಂದ ಉಂಛವೃತ್ತಿಯ ಬ್ರಾಹ್ಮಣನ ಕಥೆಯನ್ನು ಕೇಳಿದುದು

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಧರ್ಮಾಃ ಪಿತಾಮಹೇನೋಕ್ತಾ ಮೋಕ್ಷಧರ್ಮಾಶ್ರಿತಾಃ ಶುಭಾಃ ।
ಧರ್ಮಮಾಶ್ರಮಿಣಾಂ ಶ್ರೇಷ್ಠಂ ವಕ್ತುಮರ್ಹತಿ ಮೇ ಭವಾನ್ ॥೧॥

"ಪಿತಾಮಹ! ಮೋಕ್ಷಧರ್ಮಕ್ಕೆ ಸಂಬಂಧಿಸಿದ ಶುಭಕರವಾದ ಅನೇಕಧರ್ಮಗಳನ್ನು ನೀನು ಹೇಳಿರುವೆ. ಈಗ ನೀನು ಆಶ್ರಮಧರ್ಮಗಳನ್ನು ಪರಿಪಾಲಿಸತಕ್ಕವರಿಗೆ ಶ್ರೇಷ್ಠವಾದ ಧರ್ಮವು ಯಾವುದೆಂಬುದನ್ನು ನನಗೆ ತಿಳಿಯಪಡಿಸು."

ಭೀಷ್ಮನು ಹೇಳುತ್ತಾನೆ :

ಸರ್ವತ್ರ ವಿಹಿತೋ ಧರ್ಮಃ ಸ್ವರ್ಗಃ ಸತ್ಯಫಲಂ ಮಹತ್ ।
ಬಹುದ್ವಾರಸ್ಯ ಧರ್ಮಸ್ಯ ನೇಹಾಸ್ತಿ ವಿಫಲಾ ಕ್ರಿಯಾ ॥೨॥

"ಧರ್ಮಜ! ಎಲ್ಲ ಆಶ್ರಮಿಗಳಿಗೂ ಇಂತಹುದೇ ಧರ್ಮವೆಂಬುದು

ವಿಹಿತವಾಗಿದೆ. ಆ ಧರ್ಮಗಳು ಸ್ವರ್ಗಪ್ರಾಪಕಗಳೂ ಆಗಿವೆ ; ಸತ್ಯಫಲಗಳೂ (ಮೋಕ್ಷದಾಯಕಗಳೂ) ಆಗಿವೆ. ಯಜ್ಞ, ದಾನ, ತಪಸ್ಸು – ಮೊದಲಾದ ಅನೇಕಬಾಗಿಲುಗಳುಳ್ಳ ಧರ್ಮದ ಯಾವುದೇ ಕಾರ್ಯವೂ ನಿಷ್ಫಲವಾಗುವುದಿಲ್ಲ.

ಯಸ್ಮಿನ್ಯಸ್ಮಿಂಶ್ಚ ವಿಷಯೇ ಯೋ ಯೋ ಯಾತಿ ವಿನಿಶ್ಚಯಮ್ ।
ಸ ತಮೇವಾಭಿಜಾನಾತಿ ನಾನ್ಯಂ ಭರತಸತ್ತಮ ॥೩॥

ಯಾವ-ಯಾವನು ಯಾವ-ಯಾವ ವಿಷಯಗಳಲ್ಲಿ ನಿಶ್ಚಯವಾದ ಬುದ್ಧಿಯನ್ನು ಹೊಂದಿರುವನೋ –ಆ ವಿಷಯವನ್ನೇ ಅವನು ಪರಮಶ್ರೇಷ್ಠವೆಂದು ಭಾವಿಸುತ್ತಾನೆ. (ಕಾಮ್ಯಕರ್ಮಗಳಲ್ಲಿ ಶ್ರದ್ಧೆಯಿರುವವನು ಕಾಮ್ಯಕರ್ಮಗಳನ್ನೇ ಶ್ರೇಷ್ಠವನ್ನಾಗಿ ಭಾವಿಸುತ್ತಾನೆ. ಮೋಕ್ಷದಲ್ಲಿ ಶ್ರದ್ಧೆಯಿರುವವನು ಅದಕ್ಕೆ ಸಂಬಂಧಿಸಿದ ಸಾಧನಗಳನ್ನೇ ಶ್ರೇಷ್ಠವಾದುವೆಂದು ಭಾವಿಸುತ್ತಾನೆ.) ಉಳಿದ ಧರ್ಮಗಳನ್ನು ಅವನು ಮಾನ್ಯಮಾಡುವುದಿಲ್ಲ.

ನರವ್ಯಾಘ್ರನೇ! ಈ ವಿಷಯದಲ್ಲಿ ಹಿಂದೆ ಮಹರ್ಷಿಗಳಾದ ನಾರದರು ಇಂದ್ರನಿಗೆ ಹೇಳಿದ ಕಥೆಯನ್ನು ನಾನು ನಿನಗೂ ಹೇಳುವೆನು, ಕೇಳು. ಸಿದ್ಧಪುರುಷರಾದ, ಮೂರು ಲೋಕದವರಿಂದಲೂ ಸಮ್ಮಾನಿತರಾದ ನಾರದ ಮಹರ್ಷಿಗಳು –ವಾಯುವು ಅಡೆ-ತಡೆಗಳಿಲ್ಲದೇ ಸರ್ವತ್ರಸಂಚರಿಸುವಂತೆ ಅನುಕ್ರಮವಾಗಿ ಎಲ್ಲ ಲೋಕಗಳಲ್ಲಿಯೂ ಸಂಚರಿಸುತ್ತಿರುತ್ತಾರೆ. ಹೀಗೆಯೇ ಸಂಚರಿಸುತ್ತಿದ್ದಾಗ ಅವರೊಮ್ಮೆ ದೇವರಾಜನಾದ ಇಂದ್ರನ ಅರಮನೆಗೆ ಹೋದರು. ಮಹೇಂದ್ರನಿಂದ ಸತ್ಕೃತರಾದ ನಾರದರು ಅವನ ಸಮೀಪದಲ್ಲಿಯೇ ಕುಳಿತುಕೊಂಡರು. ಅತಿಥಿಪೂಜೆಯಿಂದ ಸತ್ಕರಿಸಲ್ಪಟ್ಟ ನಾರದರನ್ನು ಶಚೀಪತಿಯಾದ ಇಂದ್ರನು ಪ್ರಶ್ನಿಸಿದನು :

“ಪಾಪರಹಿತರಾದ ಮಹರ್ಷಿಗಳೇ! ನಿಮ್ಮ ಸಂಚಾರದಲ್ಲಿ ಯಾವುದಾದರೂ ಆಶ್ಚರ್ಯಕರವಾದ ಘಟನೆಯನ್ನು ನೋಡಿದ್ದುದಿದೆಯೇ? ಯದ್ಯಪಿ ನೀವು ಸಿದ್ಧರೇ ಆಗಿದ್ದರೂ (ಪ್ರಪಂಚದ ಆಗು-ಹೋಗುಗಳನ್ನು ಅಂತರ್ದೃಷ್ಟಿಯಿಂದಲೇ ಕಾಣುವ ಸಾಮರ್ಥ್ಯವನ್ನು ಪಡೆದಿದ್ದರೂ) ಕುತೂಹಲಾವಿಷ್ಟರಾಗಿ ಚರಾಚರಯುಕ್ತವಾದ ಮೂರು ಲೋಕಗಳನ್ನೂ ಸಾಕ್ಷಿ

ಯಂತೆ ಸುತ್ತುತ್ತಿರುವಿರಿ. ಆದುದರಿಂದ ಪ್ರಪಂಚದಲ್ಲಿ ನಿಮಗೆ ತಿಳಿಯದೇ ಇರುವುದು ಯಾವುದೂ ಇಲ್ಲ. ನೀವು ಯಾವುದಾದರೂ ಆಶ್ಚರ್ಯಕರವಾದ ಘಟನೆಯನ್ನು ನೋಡಿದ್ದರೆ, ಕೇಳಿದ್ದರೆ ಅಥವಾ ಅನುಭವಿಸಿದ್ದರೆ ಅದನ್ನು ನನಗೆ ಹೇಳಿರಿ.”

ಯುಧಿಷ್ಠಿರ! ಹೀಗೆ ಪ್ರಶ್ನಿಸಿದ ತನ್ನ ಸಮೀಪದಲ್ಲಿಯೇ ಕುಳಿತಿದ್ದ ಇಂದ್ರನಿಗೆ ವಾಗ್ಮಿಗಳಲ್ಲಿ ಶ್ರೇಷ್ಠರಾದ ನಾರದರು ವಿಸ್ತಾರವಾದ ಒಂದು ಕಥೆಯನ್ನು ಹೇಳಿದರು. ಇಂದ್ರನಿಂದ ಪ್ರಶ್ನಿಸಲ್ಪಟ್ಟ ದ್ವಿಜಶ್ರೇಷ್ಠರಾದ ನಾರದರು ಯಾವ ಕಲ್ಪವನ್ನು ಅನುಸರಿಸಿ ದೇವೇಂದ್ರನಿಗೆ ಆ ಕಥೆಯನ್ನು ಹೇಳಿದರೋ –ಅದೇ ಕಲ್ಪವನ್ನೇ ಅನುಸರಿಸಿ ನಾನೂ ಆ ಕಥೆಯನ್ನು ನಿನಗೆ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.”

೩೫೨ನೆಯ ಅಧ್ಯಾಯವು ಮುಗಿಯಿತು.

೩೫೩ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಮಹಾಪದ್ಮಪುರದಲ್ಲಿದ್ದ ಬ್ರಾಹ್ಮಣನ ಸದಾಚಾರವರ್ಣನೆ: ಅವನ ಮನೆಗೆ ಅತಿಥಿಯ ಆಗಮನ

ಭೀಷ್ಮನು ಹೇಳುತ್ತಾನೆ :

ಆಸೀತ್ಕಿಲ ನರಶ್ರೇಷ್ಠ ಮಹಾಪದ್ಮೇ ಪುರೋತ್ತಮೇ ।
ಗಙ್ಗಾಯಾ ದಕ್ಷಿಣೇ ತೀರೇ ಕಶ್ಚಿದ್ವಿಪ್ರಃ ಸಮಾಹಿತಃ ॥೧॥

“ನರಶ್ರೇಷ್ಠನೇ! ಯುಧಿಷ್ಠಿರ! ಗಂಗಾನದಿಯ ದಕ್ಷಿಣತೀರದಲ್ಲಿದ್ದ ಮಹಾಪದ್ಮವೆಂಬ ಶ್ರೇಷ್ಠವಾದೊಂದು ಪುರದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಅವನು ಏಕಾಗ್ರಚಿತ್ತನೂ ಸೌಮ್ಯಸ್ವಭಾವನೂ ಆಗಿದ್ದನು. ಚಂದ್ರವಂಶದಲ್ಲಿ ಅತ್ರಿಗೋತ್ರದಲ್ಲಿ ಹುಟ್ಟಿದ್ದ ಆ ಬ್ರಾಹ್ಮಣನು ವೇದಗಳಲ್ಲಿ ಪಾರಂಗತ ನಾಗಿದ್ದನು. ವೇದ-ವೇದಾಂಗಗಳಲ್ಲಿ ಅವನಿಗೆ ಎಲ್ಲಿಯೂ ಸಂದೇಹ ವೆಂಬುದೇ ಇರಲಿಲ್ಲ. ಅವನು ಧರ್ಮಪರಾಯಣನಾಗಿದ್ದನು. ಕೋಪವನ್ನು ಜಯಿಸಿದ್ದನು. ನಿತ್ಯತೃಪ್ತನೂ–ಜಿತೇಂದ್ರಿಯನೂ ಆಗಿದ್ದನು. ತಪಸ್ಸಿನಲ್ಲಿಯೂ,

ಅಧ್ಯಯನ-ಅಧ್ಯಾಪನಗಳಲ್ಲಿಯೂ ಸರ್ವದಾ ನಿರತನಾಗಿರುತ್ತಿದ್ದನು. ಸತ್ಯನಿಷ್ಠನಾಗಿಯೂ, ಸಜ್ಜನಸಮ್ಮತನಾಗಿಯೂ ಇದ್ದನು. ನ್ಯಾಯದಿಂದ ಪ್ರಾಪ್ತವಾದ ಐಶ್ವರ್ಯದಿಂದಲೇ ಜೀವನವನ್ನು ನಿರ್ವಹಿಸುತ್ತಾ ಬ್ರಾಹ್ಮಣೋಚಿತವಾದ ಶೀಲದಿಂದ ಸಂಪನ್ನನಾಗಿದ್ದನು.

ಸತ್ತ್ವಪ್ರಧಾನವಾದ ಸದ್ಗುಣಗಳನ್ನೇ ಆಶ್ರಯಿಸಿದ್ದ ಜ್ಞಾತಿಗಳಿಂದಲೂ ಬಂಧು-ಬಳಗದವರಿಂದಲೂ ಹೇರಳವಾಗಿ ತುಂಬಿರುವ ವಿಖ್ಯಾತವಾದ ಕುಲದಲ್ಲಿ (ಅತ್ರಿವಂಶದಲ್ಲಿ) ಹುಟ್ಟಿದ್ದ ಆ ಬ್ರಾಹ್ಮಣನು–ಶ್ರೇಷ್ಠವಾದ ವೃತ್ತಿಯನ್ನು ಅವಲಂಬಿಸಿ ಜೀವನವನ್ನು ನಡೆಸುತ್ತಿದ್ದನು. ಗೃಹಸ್ಥಾಶ್ರಮೋಕ್ತವಾದ ಅನೇಕಕರ್ಮದಲ್ಲಿ ತೊಡಗಿದ್ದ ಅವನು ಹಲವಾರು ಮಂದಿ ಮಕ್ಕಳನ್ನೂ ಮೊಮ್ಮಕ್ಕಳನ್ನೂ ನೋಡಿದನು. (ಅವನ ಸಂತತಿಯೂ ಬಹಳವಾಗಿ ಬೆಳೆಯಿತು.) ಕುಲಧರ್ಮವನ್ನೇ ಆಶ್ರಯಿಸಿದ್ದ ಅವನು ಧರ್ಮಾಚರಣೆಯಲ್ಲಿಯೇ ಯಾವಾಗಲೂ ತತ್ಪರನಾಗಿದ್ದನು.

ಹೀಗೆಯೇ ಇರುತ್ತಿರಲಾಗಿ ಅವನೊಮ್ಮೆ ವೇದೋಕ್ತವಾದ ಧರ್ಮಗಳು, ಶಾಸ್ತ್ರೋಕ್ತವಾದ ಧರ್ಮಗಳು ಮತ್ತು ಶಿಷ್ಟಾಚಾರದ ಮೂಲಕವಾಗಿ ಬಂದಿರುವ ಧರ್ಮಗಳು –ಹೀಗೆ ಮೂರು ವಿಧವಾದ ಧರ್ಮಗಳನ್ನೂ ಕುರಿತು ಆಲೋಚಿಸತೊಡಗಿದನು.

"ಈ ಮೂರು ವಿಧವಾದ ಧರ್ಮಗಳಲ್ಲಿ ಯಾವುದನ್ನು ಆಚರಿಸಿದರೆ ನನಗೆ ಒಳ್ಳೆಯದಾಗುತ್ತದೆ? ಯಾವುದನ್ನು ಮಾಡುವುದು ನನ್ನ ಕರ್ತವ್ಯವಾಗಿದೆ? ಈ ಮೂರು ಧರ್ಮಗಳಲ್ಲಿ ಯಾವುದು ನನಗೆ ಉತ್ತಮವಾದ ಆಶ್ರಯವಾಗುತ್ತದೆ?"–ಹೀಗೆ ಅವನು ಅನುದಿನವೂ ಆಲೋಚಿಸುತ್ತಾ ಖಿನ್ನನಾಗುತ್ತಿದ್ದನು. ಆದರೆ ಅವನಿಗೆ ಯಾವುದು ಅತ್ಯಂತಶುಭಾವಹವಾದ ಧರ್ಮವೆಂಬುದನ್ನು ನಿರ್ಣಯಿಸಲು ಸಾಧ್ಯವಾಗಲೇ ಇಲ್ಲ.

ಒಂದು ದಿನ ಖಿನ್ನನಾಗಿ ಅದೇ ವಿಷಯವನ್ನೇ ಕುರಿತು ಯೋಚಿಸುತ್ತಿದ್ದ ಆ ಬ್ರಾಹ್ಮಣನ ಮನೆಗೆ ಪರಮಧರ್ಮಾತ್ಮನಾದ, ಏಕಾಗ್ರಚಿತ್ತನಾದ ಬ್ರಾಹ್ಮಣನೊಬ್ಬನು ಅತಿಥಿಯಾಗಿ ಆಗಮಿಸಿದನು. ಒಡನೆಯೇ ಬ್ರಾಹ್ಮಣನು ಆಗಮಿಸಿದ ಅತಿಥಿಗೆ ಶಾಸ್ತ್ರೋಕ್ತವಾದ ವಿಧಿಯಿಂದ ಸತ್ಕಾರವನ್ನು ಮಾಡಿ

ದನು. ಬಳಿಕ ವಿಶ್ರಾಂತನಾಗಿ ಸುಖಾಸನದಲ್ಲಿ ಕುಳಿತಿದ್ದ ಅತಿಥಿಯನ್ನು ಕುರಿತು ಬ್ರಾಹ್ಮಣನು ತನ್ನ ಸಂಶಯದ ವಿಷಯವಾಗಿ ಹೇಳತೊಡಗಿದನು.”

ಇ೫೩ನೆಯ ಅಧ್ಯಾಯವು ಮುಗಿಯಿತು.

ಇ೫೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅತಿಥಿಯಿಂದ ಸ್ವರ್ಗದ ವಿಭಿನ್ನಮಾರ್ಗಗಳ ಕಥನ

ಯುಧಿಷ್ಠಿರ! ಬ್ರಾಹ್ಮಣನು ಹೇಳುತ್ತಾನೆ :

ಸಮುತ್ಪನ್ನಾಭಿಧಾನೋಽಸ್ಮಿ ವಾಙ್ಮಾಧುರ್ಯೇಣ ತೇಽನಘ ।
ಮಿತ್ರತ್ವಮಭಿಪನ್ನಸ್ತ್ವಾಂ ಕಿಂಚಿದ್ವಕ್ಷ್ಯಾಮಿ ತಚ್ಛೃಣು ॥೧॥

“ನಿಷ್ಪಾಪನೇ! ನಿನ್ನ ಸುಮಧುರವಾದ ಮಾತನ್ನು ಕೇಳಿದನಂತರ ನಿನ್ನಲ್ಲಿ ಇನ್ನೂ ಕೆಲವು ವಿಷಯಗಳನ್ನು ಹೇಳಬೇಕೆಂಬ ಮನಸ್ಸುಂಟಾಗಿದೆ. ಈಗ ನೀನು ನನ್ನೊಡನೆ ಮೈತ್ರಿಯನ್ನು ಹೊಂದಿರುವೆ. ನಿನ್ನೊಡನೆ ಕೆಲವು ವಿಷಯಗಳನ್ನು ಹೇಳುತ್ತೇನೆ ; ಕೇಳುವವನಾಗು.

ಗೃಹಸ್ಥಧರ್ಮಂ ವಿಪ್ರೇನ್ದ್ರ ಕೃತ್ವಾ ಪುತ್ರಗತಂ ತ್ವಹಮ್ ।
ಧರ್ಮಂ ಪರಮಕಂ ಕುರ್ಯಾಂ ಕೋ ಹಿ ಮಾರ್ಗೋ ಭವೇದ್ದ್ವಿಜ ॥೨॥

ವಿಪ್ರಶ್ರೇಷ್ಠನೇ! ಗೃಹಸ್ಥಾಶ್ರಮಧರ್ಮವನ್ನು ಮಕ್ಕಳಿಗೆ ವಹಿಸಿಕೊಟ್ಟು ನಾನು ಶ್ರೇಷ್ಠವಾದ ಧರ್ಮವನ್ನು ಆಚರಿಸಬೇಕೆಂದಿದ್ದೇನೆ. ಅಂತಹ ಧರ್ಮವನ್ನು ಆಚರಿಸಲು ಯಾವ ಮಾರ್ಗವಿದೆ?

ಅಹಮಾತ್ಮಾನಮಾಸ್ಥಾಯ ಏಕ ಏವಾತ್ಮನಿ ಸ್ಥಿತಮ್ ।
ಕರ್ತುಂ ಕಾಙ್ಕ್ಷಾಮಿ ನೇಚ್ಛಾಮಿ ಬದ್ಧಃ ಸಾಧಾರಣೈರ್ಗುಣೈಃ ॥೩॥

ಏಕಾಕಿಯಾಗಿರುತ್ತಾ ಅಂತರ್ಯಾಮಿಯಾಗಿರುವ ಪರಮಾತ್ಮನಲ್ಲಿಯೇ ಯಾವಾಗಲೂ ಇರುವಿಕೆಯನ್ನು ಕಲ್ಪಿಸಿಕೊಳ್ಳಬೇಕೆಂಬ ಇಚ್ಛೆಯುಳ್ಳವನಾಗಿದ್ದೇನೆ. ಆದರೆ (ಅತಿಥಿಸತ್ಕಾರ-ಅಗ್ನಿಹೋತ್ರಾದಿ) ಸಾಧಾರಣಗುಣ

ಗಳಿಂದ (ಧರ್ಮಗಳಿಂದ) ಬಂಧಿಸಲ್ಪಟ್ಟಿರುವುದರಿಂದ ಅವುಗಳೆಲ್ಲವನ್ನೂ ಒಡನೆಯೇ ಬಿಟ್ಟುಹೋಗಲೂ ಇಚ್ಛಿಪಡುತ್ತಿಲ್ಲ.

ಯಾವದೇತದತೀತಂ ಮೇ ವಯಃ ಪುತ್ರಫಲಾಶ್ರಿತಮ್ ।
ತಾವದಿಚ್ಛಾಮಿ ಪಾಥೇಯಮಾದಾತುಂ ಪಾರಲೌಕಿಕಮ್ ॥೪॥

ಮಕ್ಕಳ ಫಲವನ್ನೇ ಆಶ್ರಯಿಸಿದ್ದ ಇದುವರೆಗಿನ ನನ್ನ ಆಯುಷ್ಯವೆಲ್ಲವೂ ಕಳೆದೇ ಹೋಯಿತು. ಈಗ ನಾನು ಪರಲೋಕಸಂಬಂಧವಾದ ಮಾರ್ಗದಲ್ಲಿ ಪ್ರಯಾಣಮಾಡಲು ಅನುಕೂಲವಾದ ಬುತ್ತಿಯನ್ನು ಸಂಗ್ರಹಿಸಲು ಇಚ್ಛಿಸುತ್ತಿದ್ದೇನೆ.

ಅಸ್ಮಿನ್ಹಿ ಲೋಕಸಮ್ಭಾರೇ ಪರಂ ಪಾರಮಭೀಪ್ಸತಃ ।
ಉತ್ಪನ್ನಾ ಮೇ ಮತಿರಿಯಂ ಕುತೋ ಧರ್ಮಮಯಃ ಪ್ಲವಃ ॥೫॥

ಈ ಲೌಕಿಕವಸ್ತುಗಳ ಮಧ್ಯದಲ್ಲಿರುವ ಮತ್ತು ಈ ಸಂಸಾರಸಾಗರವನ್ನು ದಾಟಬೇಕೆಂದು ಇಚ್ಛಿಸಿರುವ ನನಗೆ ಸಂಸಾರಸಾಗರವನ್ನು ದಾಟಿಸತಕ್ಕ ಧರ್ಮಮಯವಾದ ನಾವೆಯು ಎಲ್ಲಿ ಸಿಕ್ಕುವುದೆಂಬ ಬಗೆಗೆ ಜಿಜ್ಞಾಸೆಯುಂಟಾಗಿದೆ.

ಸಂಯುಜ್ಯಮಾನಾನಿ ನಿಶಮ್ಯ ಲೋಕೇ
ನಿರ್ಯಾತ್ಯಮಾನಾನಿ ಚ ಸಾತ್ತ್ವಿಕಾನಿ ।
ದೃಷ್ಟ್ವಾ ತು ಧರ್ಮಧ್ವಜಕೇತುಮಾಲಾಂ
ಪ್ರಕೀರ್ಯಮಾಣಾಮುಪರಿ ಪ್ರಜಾನಾಮ್ ॥೬॥
ನ ಮೇ ಮನೋ ರಜ್ಯತಿ ಭೋಗಕಾಲೇ
ದೃಷ್ಟ್ವಾ ಯತೀನ್ಪ್ರಾರ್ಥಯತಃ ಪರತ್ರ ।
ತೇನಾತಿಥೇ ಬುದ್ಧಿಬಲಾಶ್ರಯೇಣ
ಧರ್ಮೇಣ ಧರ್ಮೇ ವಿನಿಯುಂಕ್ಷ್ವ ಮಾಂ ತ್ವಮ್ ॥೭॥

ಅತಿಥಿಯೇ! ಈ ಲೋಕದಲ್ಲಿ ವಿಷಯಗಳೊಡನೆ ಸಂಪರ್ಕವನ್ನು ಹೊಂದಿದ ಸಾತ್ತ್ವಿಕರು ಕೂಡ ವಿಧ-ವಿಧವಾದ ಯಾತನೆಗಳಿಂದ ಪೀಡಿಸಲ್ಪಡುತ್ತಿರುವುದನ್ನು ನಾನು ನೋಡುತ್ತಿದ್ದೇನೆ. ಜನಗಳ ಮೇಲೆ ಧರ್ಮ

ಧ್ವಜಪಟಗಳ ಸಾಲು (ತನ್ನನ್ನು ಧರ್ಮಿಷ್ಠನೆಂದು ಲೋಕಕ್ಕೆ ತೋರಿಸಿಕೊಳ್ಳುವ ಗುರುತುಗಳ ಪರಂಪರೆಯು) ಸತತವಾಗಿ ಹಾರಾಡುತ್ತಿರುವುದನ್ನೂ ನೋಡಿದ್ದೇನೆ. ಇವುಗಳನ್ನು ನೋಡಿದನಂತರ ನನ್ನ ಮನಸ್ಸು ಭೋಗಪಡುವ ಕಾಲದಲ್ಲಿ ಯಾವ ವಿಧವಾದ ಸಂತೋಷವನ್ನೂ ಹೊಂದುವುದಿಲ್ಲ. ವಿರಕ್ತರೆನಿಸಿಕೊಂಡ ಯತಿಗಳು ಕೂಡ ತಮ್ಮ ಜೀವನನಿರ್ವಹಣೆಗಾಗಿ ಇತರರನ್ನು ಪ್ರಾರ್ಥಿಸುವುದನ್ನು ನೋಡಿ ನನಗೆ ವಿರಕ್ತಸಂನ್ಯಾಸ ಧರ್ಮದಲ್ಲಿಯೂ ಅಭಿರುಚಿಯುಂಟಾಗುತ್ತಿಲ್ಲ. ಆದುದರಿಂದ ನೀನು ನಿನ್ನ ಧರ್ಮಯುಕ್ತವಾದ ಬುದ್ಧಿಬಲದ ಆಶ್ರಯದಿಂದ ನನ್ನನ್ನು ಧರ್ಮಮಾರ್ಗದಲ್ಲಿ ತೊಡಗಿಸು.”

ಯುಧಿಷ್ಠಿರ! ಧರ್ಮಯುಕ್ತವಾದ ಮಾತನ್ನು ಹೇಳಿದ ಆ ಬ್ರಾಹ್ಮಣನ ಮಾತನ್ನು ಕೇಳಿ ಪ್ರಾಜ್ಞನಾದ ಆ ಅತಿಥಿಯು, ಮೃದುವಾದ ಮಾತನ್ನು ಸುಮಧುರವಾದ ವಾಣಿಯಿಂದ ಹೇಳಿದನು :

ಅಹಮಪ್ಯತ್ರ ಮುಹ್ಯಾಮಿ ಮಮಾಪ್ಯೇಷ ಮನೋರಥಃ ।
ನ ಚ ಸಂನಿಶ್ಚಯಂ ಯಾಮಿ ಬಹುದ್ವಾರೇ ತ್ರಿವಿಷ್ಟಪೇ ॥೯॥

“ಬ್ರಾಹ್ಮಣೋತ್ತಮನೇ! ಈ ವಿಷಯದಲ್ಲಿ ನಾನೂ ವಿಮೋಹ ಗೊಂಡಿದ್ದೇನೆ. ಶ್ರೇಷ್ಠವಾದ ಧರ್ಮವನ್ನು ಆಶ್ರಯಿಸಬೇಕೆಂಬುದೇ ನನ್ನ ಮನೋರಥವೂ ಆಗಿದೆ. ತ್ರಿವಿಷ್ಟಪವು ಬಹುದ್ವಾರವುಳ್ಳದ್ದಾಗಿರುವಾಗ (ಸ್ವರ್ಗಪ್ರಾಪ್ತಿಗೆ ಅನೇಕಸಾಧನಮಾರ್ಗಗಳಿರುವಾಗ) ಅದನ್ನು ಹೊಂದಲು ನಿರ್ದಿಷ್ಟವಾದ ಮತ್ತು ಶ್ರೇಷ್ಠವಾದ ಧರ್ಮವು ಯಾವುದೆಂಬುದರ ಬಗೆಗೆ ನಾನು ಇನ್ನೂ ಯಾವ ನಿರ್ಣಯಕ್ಕೂ ಬಂದಿಲ್ಲ.

ಕೇಚಿನ್ಮೋಕ್ಷಂ ಪ್ರಶಂಸನ್ತಿ ಕೇಚಿದ್ಯಜ್ಞಫಲಂ ದ್ವಿಜಾಃ ।
ವಾನಪ್ರಸ್ಥಾಶ್ರಯಾಃ ಕೇಚಿದ್ಗಾರ್ಹಸ್ಥ್ಯಂ ಕೇಚಿದಾಸ್ಥಿತಾಃ ॥೧೦॥

ಕೆಲವರು ಮೋಕ್ಷಮಾರ್ಗವನ್ನೇ ಬಹಳವಾಗಿ ಪ್ರಶಂಸೆಮಾಡುತ್ತಾರೆ. ಕೆಲವು ಬ್ರಾಹ್ಮಣರು ಯಜ್ಞಗಳಿಂದ ಪ್ರಾಪ್ತವಾಗುವ ಅಪಾರವಾದ

ಫಲವನ್ನೇ ಪ್ರಶಂಸೆಮಾಡುತ್ತಾರೆ. ಕೆಲವರು ವಾನಪ್ರಸ್ಥಾಶ್ರಮವನ್ನು ಆಶ್ರಯಿಸಿರುತ್ತಾರೆ. ಇನ್ನೂ ಕೆಲವರು ಗೃಹಸ್ಥಾಶ್ರಮದಲ್ಲಿಯೇ ಇರುತ್ತಾರೆ.

ರಾಜಧರ್ಮಾಶ್ರಯಂ ಕೇಚಿತ್ಕೇಚಿದಾತ್ಮಫಲಾಶ್ರಯಮ್ ।
ಗುರುಧರ್ಮಾಶ್ರಯಂ ಕೇಚಿತ್ಕೇಚಿದ್ವಾಕ್ಸಂಯಮಾಶ್ರಯಮ್ ॥೧೧॥

ಕೆಲವರು ರಾಜಧರ್ಮದ ಆಶ್ರಯವನ್ನು ಪಡೆಯುತ್ತಾರೆ. ಕೆಲವರು ಆತ್ಮಧರ್ಮದ (ಅಧ್ಯಾತ್ಮದ) ಆಶ್ರಯವನ್ನು ಪಡೆದಿರುತ್ತಾರೆ. ಕೆಲವರು ಗುರುಶುಶ್ರೂಷಾಧರ್ಮವನ್ನೇ ಆಶ್ರಯವನ್ನಾಗಿ ಪಡೆದಿರುತ್ತಾರೆ. ಮತ್ತೆ ಕೆಲವರು ಮೌನವ್ರತಧರ್ಮವನ್ನೇ ಆಶ್ರಯಿಸಿರುತ್ತಾರೆ. (ಇವರೆಲ್ಲರೂ ಸ್ವರ್ಗಕ್ಕೆ ಹೋಗಿರುತ್ತಾರೆ.)

ಮಾತರಂ ಪಿತರಂ ಕೇಚಿಚ್ಛುಶ್ರೂಷನ್ತೋ ದಿವಂ ಗತಾಃ ।
ಅಹಿಂಸಯಾ ಪರೇ ಸ್ವರ್ಗಂ ಸತ್ಯೇನ ಚ ತಥಾ ಪರೇ ॥೧೨॥

ಮಾತಾ-ಪಿತೃಗಳ ಶುಶ್ರೂಷೆಯನ್ನು ಮಾಡಿ ಕೆಲವರು ಸ್ವರ್ಗಕ್ಕೆ ಹೋಗಿರುತ್ತಾರೆ. ಕೆಲವರು ಅಹಿಂಸಾಧರ್ಮವನ್ನು ಆಶ್ರಯಿಸಿ ಸ್ವರ್ಗಕ್ಕೆ ಹೋಗಿರುತ್ತಾರೆ. ಕೆಲವರು ಸತ್ಯನಿಷ್ಠೆಯಿಂದಲೇ ಸ್ವರ್ಗಕ್ಕೆ ಹೋಗಿರುತ್ತಾರೆ.

ಆಹವೇಽಭಿಮುಖಾಃ ಕೇಚನ್ನಿಹತಾಸ್ತ್ರಿದಿವಂ ಗತಾಃ ।
ಕೇಚಿದುಞ್ಛವೃತ್ತ್ಯೈಃ ಸಿದ್ಧಾಃ ಸ್ವರ್ಗಮಾರ್ಗಂ ಸಮಾಶ್ರಿತಾಃ ॥೧೩॥

ಕೆಲವರು ಯುದ್ಧದಲ್ಲಿ ಶತ್ರುವಿಗೆ ಎದುರಾಗಿ ನಿಂತು ಯುದ್ಧಮಾಡುತ್ತಾ ಶತ್ರುವಿನಿಂದ ಕೊಲ್ಲಲ್ಪಟ್ಟವರಾಗಿ ಸ್ವರ್ಗಕ್ಕೆ ಹೋಗಿದ್ದಾರೆ. ಕೆಲವರು ಉಂಛವೃತ್ತಿಯನ್ನು ಆಶ್ರಯಿಸಿ ಸಿದ್ಧಿಯನ್ನು ಪಡೆದು ಸ್ವರ್ಗಕ್ಕೆ ಹೋಗಿದ್ದಾರೆ.

ಕೇಚಿದಧ್ಯಯನೇ ಯುಕ್ತಾ ವೇದವ್ರತಪರಾಃ ಶುಭಾಃ ।
ಬುದ್ಧಿಮನ್ತೋ ಗತಾಃ ಸ್ವರ್ಗಂ ತುಷ್ಟಾತ್ಮಾನೋ ಜಿತೇನ್ದ್ರಿಯಾಃ ॥೧೪॥

ಕೆಲವರು ಬುದ್ಧಿವಂತರು ವೇದಾಧ್ಯಾಯನದಲ್ಲಿಯೇ ಸರ್ವದಾ ತೊಡಗಿದ್ದು ವೇದವ್ರತಪರಾಯಣರಾಗಿ, ಶುಭಸಂಪನ್ನರಾಗಿ, ತೃಪ್ತಾತ್ಮರೂ

ಜಿತೇಂದ್ರಿಯರೂ ಆಗಿ ಸ್ವರ್ಗಕ್ಕೆ ಹೋಗಿದ್ದಾರೆ. (ವೇದಾಧ್ಯಯನದಿಂದಲೂ ಸ್ವರ್ಗಪ್ರಾಪ್ತಿಯಾಗಿದೆ.)

ಆರ್ಜವೇನಾಪರೇ ಯುಕ್ತಾ ನಿಹತಾನಾರ್ಜವೈರ್ಜನೈಃ ।
ಋಜವೋ ನಾಕಪೃಷ್ಠೇ ವೈ ಶುದ್ಧಾತ್ಮಾನಃ ಪ್ರತಿಷ್ಠಿತಾಃ ॥೧೫॥

ಕೆಲವರು ಶುದ್ಧಾತ್ಮರಾದ ಸರಳಜೀವಿಗಳು ಋಜುಮಾರ್ಗದಲ್ಲಿಯೇ ಇರುತ್ತಿದ್ದು ಋಜುಮಾರ್ಗವಿಲ್ಲದ ವಂಚಕರಿಂದ ಕೊಲ್ಲಲ್ಪಟ್ಟವರಾಗಿ ಸ್ವರ್ಗಲೋಕದಲ್ಲಿ ಪ್ರತಿಷ್ಠಿತರಾಗಿದ್ದಾರೆ.

ಏವಂ ಬಹುವಿಧೈರ್ಲೋಕೈರ್ಧರ್ಮದ್ವಾರೈರನಾವೃತೈಃ ।
ಮಮಾಪಿ ಮತಿರಾವಿಗ್ನಾ ಮೇಘಲೇಖೇವ ವಾಯುನಾ ॥೧೬॥

ಹೀಗೆ ತೆರೆದೇ ಇರುವ ಧರ್ಮದ ಬಾಗಿಲುಗಳಿಂದ ಕೂಡಿರುವ ಅನೇಕವಿಧವಾದ ಲೋಕಗಳು ಇರುತ್ತಿರಲಾಗಿ ನನ್ನ ಮನಸ್ಸು ಯಾವ ಧರ್ಮಮಾರ್ಗವನ್ನು ಅನುಸರಿಸಬೇಕೆಂಬುದರ ಬಗೆಗೆ–ವಾಯುವಿನಿಂದ ಚದುರಿಸಲ್ಪಟ್ಟ ಮೇಘದ ಸಾಲಿನಂತೆ–ಉದ್ವಿಗ್ನವಾಗಿದೆ.”

ಇಳಿಳನೆಯ ಅಧ್ಯಾಯವು ಮುಗಿಯಿತು.

೩೫೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅತಿಥಿಯಿಂದ ನಾಗರಾಜನ ಸದಾಚಾರ-ಸದ್ಗುಣಗಳ ವರ್ಣನೆ

ಅತಿಥಿಯು ಮಾತನ್ನು ಮುಂದುವರಿಸುತ್ತಾನೆ :

ಉಪದೇಶಂ ತು ತೇ ವಿಪ್ರ ಕರಿಷ್ಯೇಽಹಂ ಯಥಾಕ್ರಮಮ್ ।
ಗುರುಣಾ ಮೇ ಯಥಾಖ್ಯಾತಮರ್ಥತತ್ತ್ವಂ ತು ಮೇ ಶೃಣು ॥೧॥

“ವಿಪ್ರಶ್ರೇಷ್ಠನೇ! ನನ್ನ ಗುರುಗಳು ಈ ವಿಷಯದಲ್ಲಿ ಯಾವ ತತ್ತ್ವಾರ್ಥಯುಕ್ತವಾದ ಮಾತನ್ನು ಹೇಳಿರುವರೋ–ಅದನ್ನೇ ನಾನು ನಿನಗೆ ಕ್ರಮವಾಗಿ ಉಪದೇಶಿಸುತ್ತೇನೆ. ಆ ಉಪಾಖ್ಯಾನವನ್ನು ಕೇಳು. ಹಿಂದಿನ ಕಲ್ಪದಲ್ಲಿ ಆ ಕಲ್ಪಕ್ಕೆ ಸಂಬಂಧಿಸಿದಂತೆ ಧರ್ಮಚಕ್ರವು ಸಾಗುತ್ತಿದ್ದಿತು. ನೈಮಿಷಾರಣ್ಯದ ಗೋಮತೀನದಿಯ ತೀರದಲ್ಲಿ ‘ನಾಗ’–ಎಂಬ

ಹೆಸರಿನ ಪುರವಿದ್ದಿತು. ಎಲ್ಲ ದೇವತೆಗಳೂ ಅಲ್ಲಿ ಯಾಗಮಾಡುತ್ತಿದ್ದರು. ಅದೇ ರೀತಿಯಲ್ಲಿ ರಾಜಶ್ರೇಷ್ಠನಾದ ಮಾಂಧಾತೃವೂ ಅಲ್ಲಿಯೇ ಯಜ್ಞಮಾಡುತ್ತಿದ್ದನು. ಕಾಲಾನುಕ್ರಮವಾಗಿ ಯಜ್ಞಮಾಡುವುದರಲ್ಲಿ ಮಾಂಧಾತೃವು ಇಂದ್ರನನ್ನೂ ಮೀರಿಸಿಬಿಟ್ಟನು.

ಅದೇ ನಾಗಪುರದಲ್ಲಿಯೇ ಧರ್ಮಬುದ್ಧಿಯಿಂದ ಕೂಡಿರುವ ದೊಡ್ಡದಾದ ಸರ್ಪವೊಂದು ವಾಸಮಾಡುತ್ತಿದೆ. ಆ ಮಹಾನಾಗನ ಹೆಸರು 'ಪದ್ಮನಾಭ'–ಎಂದು. ಆದರೆ ಅವನು ಆ ಊರಿನಲ್ಲಿ 'ಪದ್ಮ'–ಎಂಬ ಹೆಸರಿನಿಂದಲೇ ಪ್ರಸಿದ್ಧನಾಗಿದ್ದಾನೆ. ಅವನು ಮಾತು, ಕರ್ಮ ಮತ್ತು ಮನಸ್ಸುಗಳ ಮೂಲಕವಾಗಿ ಕರ್ಮ, ಉಪಾಸನೆ ಮತ್ತು ಜ್ಞಾನ–ಈ ಮೂರು ವಿಧವಾದ ಮಾರ್ಗಗಳನ್ನೂ ಆಶ್ರಯಿಸಿದ್ದಾನೆ. ತನ್ನ ಸದ್ವ್ಯವಹಾರದಿಂದ ಎಲ್ಲ ಪ್ರಾಣಿಗಳನ್ನೂ ಪ್ರಸನ್ನಗೊಳಿಸಿದ್ದಾನೆ. ಆ ನಾಗನು ಕುಮಾರ್ಗಿಯನ್ನು ಸಾಮ-ದಾನ-ಭೇದ ಮತ್ತು ದಂಡೋಪಾಯಗಳ ಮೂಲಕವಾಗಿ ಸನ್ಮಾರ್ಗಕ್ಕೆ ತರುತ್ತಾನೆ. ಕಣ್ಣುಗಳನ್ನು ಮುಚ್ಚಿ ಧ್ಯಾನಮಾಡುವುದರಿಂದಲೇ ಸನ್ಮಾರ್ಗಿಗೆ ಒದಗಿರುವ ಕಷ್ಟವನ್ನು ತಿಳಿದು ಅದನ್ನು ಪರಿಹರಿಸಿ ರಕ್ಷಣೆಯನ್ನು ನೀಡುತ್ತಾನೆ.

ನೀನು ಆ ನಾಗರಾಜನ ಸಮೀಪಕ್ಕೆ ಹೋಗಿ ಮನೋವಾಂಛಿತವಾದ ಪ್ರಶ್ನೆಯನ್ನು ಕೇಳು. ಅವನು ನಿನಗೆ ಪರಮಶ್ರೇಷ್ಠವಾದ ಧರ್ಮವನ್ನೇ ಉಪದೇಶಿಸುತ್ತಾನೆ. ಮಿಥ್ಯಾಧರ್ಮವನ್ನೆಂದಿಗೂ ಉಪದೇಶಿಸುವುದಿಲ್ಲ. ಆ ನಾಗನು ಮಹಾಬುದ್ಧಿಶಾಲಿಯು. ಸರ್ವಶಾಸ್ತ್ರವಿಶಾರದನು. ಅಲ್ಲಿಗೆ ಹೋಗುವ ಎಲ್ಲ ಅತಿಥಿಗಳಿಗೂ ವಿಧಿಪೂರ್ವಕವಾಗಿ ಸತ್ಕಾರವನ್ನು ಮಾಡತಕ್ಕವನು. ಅನುಪಮವಾದ ಮತ್ತು ಅಪೇಕ್ಷಣೀಯವಾದ ಸಮಸ್ತವಾದ, ಸದ್ಗುಣಗಳಿಂದಲೂ ಸಂಪನ್ನನಾಗಿರತಕ್ಕವನು. ಸ್ವಭಾವದಿಂದಲೇ ಅವನು ನೀರಿನಂತೆ ನಿತ್ಯನಿರ್ಮಲನು. ನಿತ್ಯವೂ ಅಧ್ಯಯನದಲ್ಲಿ ತೊಡಗಿರತಕ್ಕವನು. ತಪಸ್ಸು ಮತ್ತು ಇಂದ್ರಿಯಸಂಯಮಗಳಿಂದ ಯುಕ್ತನಾಗಿರತಕ್ಕವನು. ಉತ್ತಮವಾದ ಆಚಾರ-ವ್ಯವಹಾರವನ್ನು ಇಟ್ಟುಕೊಂಡಿರತಕ್ಕವನು. ಪದ್ಮನಾಭನು ಯಾವಾಗಲೂ ಯಜ್ಞಶೀಲನು ; ದಾನಿಗಳಲ್ಲಿ ಶ್ರೇಷ್ಠನಾದ

ವನು ; ಕ್ಷಮಾಶೀಲನು ; ಶ್ರೇಷ್ಠವಾದ ಸದಾಚಾರದಲ್ಲಿರತಕ್ಕವನು ; ಸತ್ಯವಾದಿಯು ; ಅಸೂಯಾರಹಿತನು ; ಶೀಲವಂತನು ಮತ್ತು ಜಿತೇಂದ್ರಿಯನು.

ಶೇಷಾನ್ನಭೋಕ್ತಾ ವಚನಾನುಕೂಲೋ
ಹಿತಾರ್ಜವೋತ್ಕೃಷ್ಟಕೃತಾಕೃತಜ್ಞಃ ।
ಅವೈರಕೃದ್ಭೂತಹಿತೇ ನಿಯುಕ್ತೋ
ಗಙ್ಗಾಹ್ರದಾಮ್ಭೋಽಭಿಜನೋಪಪನ್ನಃ ॥೧೧॥

ಪದ್ಮನಾಭನು ಯಾವಾಗಲೂ ಯಜ್ಞಶೇಷವನ್ನೇ ಊಟಮಾಡತಕ್ಕವನು. ಅನುಕೂಲಕರವಾದ ಮಾತನ್ನೇ ಆಡತಕ್ಕವನು. ಸರ್ವಹಿತನು. ಸರಳ ಸ್ವಭಾವದವನು. ಉತ್ಕೃಷ್ಟವಾದ ಕರ್ತವ್ಯವನ್ನೂ–ಮಾಡಬಾರದುದನ್ನೂ ತಿಳಿದಿರತಕ್ಕವನು. ಯಾರೊಡನೆಯೂ ದ್ವೇಷವನ್ನು ಕಟ್ಟಿಕೊಳ್ಳದವನು. ಪ್ರಾಣಿಗಳಿಗೆ ಹಿತವಾಗುವ ಕಾರ್ಯದಲ್ಲಿಯೇ ಯಾವಾಗಲೂ ತೊಡಗಿರತಕ್ಕವನು. ಗಂಗಾನದಿಯಂತೆ ಪರಮಪಾವನವಾದ ಮತ್ತು ನಿರ್ಮಲವಾದ ಕುಲದಲ್ಲಿ ಹುಟ್ಟಿರುವವನು. (ಅಂತಹ ಸಕಲಸದ್ಗುಣಸಂಪನ್ನನಾದ ನಾಗರಾಜನ ಬಳಿಗೆ ನೀನು ಹೋಗು. ಅಲ್ಲಿ ನಿನಗೆ ಶ್ರೇಷ್ಠವಾದ ಧರ್ಮವು ಯಾವುದೆಂಬುದರ ಅರಿವಾಗುತ್ತದೆ.)”

೩೫೫ನೆಯ ಅಧ್ಯಾಯವು ಮುಗಿಯಿತು.

೩೫೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಅತಿಥಿಯ ಮಾತಿನಿಂದ ಸಂತುಷ್ಟನಾದ ಬ್ರಾಹ್ಮಣನು ನಾಗರಾಜನ ಬಳಿಗೆ ಹೋದುದು

ಬ್ರಾಹ್ಮಣನು ಹೇಳುತ್ತಾನೆ :

ಅತಿಭಾರೋಽದ್ಯ ತಸ್ಯೈವ ಭಾರಾವತರಣಂ ಮಹತ್ ।
ಪರಾಶ್ವಾಸಕರಂ ವಾಕ್ಯಮಿದಂ ಮೇ ಭವತಃ ಶ್ರುತಮ್ ॥೧॥

“ಅತಿಥಿದೇವನೇ! ನನ್ನ ಮನಸ್ಸು ಅತ್ಯಂತಭಾರವಾಗಿದ್ದಿತು. ನನ್ನ ಮನಸ್ಸಿನ ಮಹತ್ತಾದ ಆ ಭಾರವನ್ನು ನೀನು ಇಳಿಸಿರುವೆ. ನಾನು ಕೇಳಿದ ಈ ನಿನ್ನ ಮಾತು ಇತರರನ್ನೂ ಸಂತೈಸಲು ಸಮರ್ಥವಾಗಿದೆ.

ಅಧ್ವಕ್ಲಾನ್ತಸ್ಯ ಶಯನಂ ಸ್ಥಾನಕ್ಲಾನ್ತಸ್ಯ ಚಾಸನಮ್ ।
ತೃಷಿತಸ್ಯ ಚ ಪಾನೀಯಂ ಕ್ಷುಧಾರ್ತಸ್ಯ ಚ ಭೋಜನಮ್ ॥೨॥

ದಾರಿಯನ್ನು ನಡೆದು ಆಯಾಸಗೊಂಡಿರುವವನಿಗೆ ಮಲಗಲು ಹಾಸಿಗೆಯನ್ನು ಕೊಟ್ಟರೆ ಎಷ್ಟು ಸಂತೋಷವಾಗುವುದೋ, ಯಾವಾಗಲೂ ನಿಂತು ಆಯಾಸಗೊಂಡಿರುವವನಿಗೆ ಕುಳಿತುಕೊಳ್ಳಲು ಆಸನವನ್ನು ಕೊಟ್ಟರೆ ಎಷ್ಟು ಸಂತೋಷವಾಗುವುದೋ, ಬಾಯಾರಿದವನಿಗೆ ನೀರನ್ನು ಕೊಟ್ಟರೆ ಎಷ್ಟು ಸಂತೋಷವಾಗುವುದೋ, ಹಸಿದು ಬಂದವನಿಗೆ ಭೋಜನವನ್ನು ಮಾಡಿಸಿದರೆ ಎಷ್ಟು ಸಂತೋಷವಾಗುವುದೋ –ಅಷ್ಟೇ ಸಂತೋಷವನ್ನು ನಿನ್ನ ಸಾಂತ್ವನದ ಮಾತುಗಳಿಂದ ಪಡೆದಿರುತ್ತೇನೆ.

ಈಪ್ಸಿತಸ್ಯೇವ ಸಮ್ಪ್ರಾಪ್ತಿರನ್ನಸ್ಯ ಸಮಯೇಽತಿಥೇಃ ।
ಏಷಿತಸ್ಯಾತ್ಮನಃ ಕಾಲೇ ವೃದ್ಧಸ್ಯೈವ ಸುತೋ ಯಥಾ ॥೩॥
ಮನಸಾ ಚಿನ್ತಿತಸ್ಯೇವ ಪ್ರೀತಿಸ್ನಿಗ್ಧಸ್ಯ ದರ್ಶನಮ್ ।
ಪ್ರಹ್ಲಾದಯತಿ ಮಾಂ ವಾಕ್ಯಂ ಭವತಾ ಯದುದೀರಿತಮ್ ॥೪॥

ಭೋಜನಮಾಡಬೇಕಾದ ಸಮಯದಲ್ಲಿ ಮನೋವಾಂಛಿತವಾದ ಭೋಜನವು ಸಿಕ್ಕಿದರೆ ಅತಿಥಿಯಾದವನಿಗೆ ಎಷ್ಟು ಆನಂದವಾಗುವುದೋ, ಸಮಯದಲ್ಲಿ ಅಭೀಷ್ಟವಾದ ವಸ್ತುವು ಸಿಕ್ಕಿದರೆ ಮನಸ್ಸಿಗೆ ಎಷ್ಟು ಆನಂದವಾಗುವುದೋ, ಮಕ್ಕಳೇ ಇಲ್ಲದ ವೃದ್ಧನಿಗೆ ಪುತ್ರಪ್ರಾಪ್ತಿಯಾದರೆ ಎಷ್ಟು ಆನಂದವಾಗುವುದೋ, ಮನಸ್ಸಿನಲ್ಲಿ ನೆನೆದ ಪ್ರೀತಿಯ ಗೆಳೆಯನನ್ನು ಪ್ರತ್ಯಕ್ಷವಾಗಿ ನೋಡುವುದರಿಂದ ಎಷ್ಟು ಸಂತೋಷವಾಗುವುದೋ –ನೀನು ಹೇಳಿದ ಸಾಂತ್ವನದ ಈ ಮಾತು ನನಗೆ ಅಷ್ಟೇ ಆನಂದವನ್ನುಂಟುಮಾಡಿದೆ.

ದತ್ತಚಕ್ಷುರಿವಾಕಾಶೇ ಪಶ್ಯಾಮಿ ವಿಮೃಶಾಮಿ ಚ ।
ಪ್ರಜ್ಞಾನವಚನಾದ್ಯೋಽಯಮುಪದೇಶೋ ಹಿ ಮೇ ಕೃತಃ ॥೫॥

ಜ್ಞಾನಮಯವಾದ ಮಾತಿನ ಮೂಲಕವಾಗಿ ನೀನು ನನಗೆ ಯಾವುದನ್ನು ಉಪದೇಶಿಸಿದೆಯೋ–ಈ ಉಪದೇಶವು ಆಕಾಶದಲ್ಲಿ* ಕುರುಡನಿಗೆ

---

*ಆಕಾಶಃ = ಅವಕಾಶ-ಅಂತರಾಳ–ಶೂನ್ಯ (ಏನೂ ಇಲ್ಲದ ಜಾಗ)

ಕಣ್ಣುಕೊಟ್ಟಂತಾಗಿದೆ. ಈಗ ನಾನು ನನ್ನ ಮುಂದಿನ ಕರ್ತವ್ಯವನ್ನು ವಿಚಾರಮಾಡುತ್ತಿದ್ದೇನೆ. ಪ್ರಿಯಸಖನೇ! ನೀನು ಹೇಳಿದಂತೆಯೇ ಮಾಡುತ್ತೇನೆ. ಪಶ್ಚಿಮಾಭಿಮುಖನಾದ ಸೂರ್ಯನು ಮಂದರಶ್ಮಿಯಾಗಿದ್ದಾನೆ. ರಾತ್ರಿಯು ಸಮೀಪಿಸುತ್ತಿದೆ. ಈ ರಾತ್ರಿ ನನ್ನೊಡನೆಯೇ ತಂಗಿರು. ಸುಖವಾಗಿ ವಿಶ್ರಾಂತಿಯನ್ನು ಪಡೆದು ದಣಿವಾರಿಸಿಕೊಂಡು ಬೆಳಗಾದೊಡನೆಯೇ ಪ್ರಯಾಣಮಾಡು.”

ಭೀಷ್ಮನು ಹೇಳುತ್ತಾನೆ :

“ಧರ್ಮಜ! ಬಳಿಕ ಆ ಅತಿಥಿಯು ಬ್ರಾಹ್ಮಣನಿಂದ ಸತ್ಕೃತನಾಗಿ ಆ ರಾತ್ರಿಯನ್ನು ಬ್ರಾಹ್ಮಣನ ಜೊತೆಯಲ್ಲಿಯೇ ಕಳೆದನು. ಮೋಕ್ಷಧರ್ಮ ಸಂಬಂಧವಾದ ಮಾತುಗಳನ್ನೇ ಆಡುತ್ತಿದ್ದ ಅವರಿಬ್ಬರಿಗೂ ಇಡೀ ರಾತ್ರಿಯು ಹಗಲಿನಂತೆಯೇ ಸುಖವಾಗಿ ಕಳೆದುಹೋಯಿತು. ಬೆಳಗಾಗುತ್ತಲೇ ತನ್ನ ಕಾರ್ಯದ ಸಿದ್ಧಿಯನ್ನು ಪಡೆಯಲು ಇಚ್ಛಿಸಿದ್ದ ಆ ಬ್ರಾಹ್ಮಣನು ಅತಿಥಿಯನ್ನು ಯಥಾವಿಧಿಯಾಗಿ ಸತ್ಕರಿಸಿದನು. ಅತಿಥಿಯು ಬ್ರಾಹ್ಮಣನ ಅನುಮತಿಯನ್ನು ಪಡೆದು ಹೊರಟುಹೋದನು.

ಅನಂತರ ಧರ್ಮಚಾರಿಯಾದ ಆ ಬ್ರಾಹ್ಮಣನು ತಾನು ಆಶಿಸಿದ್ದ ಕಾರ್ಯವನ್ನು ಪೂರ್ಣಗೊಳಿಸಲು ನಿಶ್ಚಯಿಸಿದವನಾಗಿ ಸ್ವಜನರಿಂದ ಅನುಮತಿಯನ್ನು ಪಡೆದು ಅತಿಥಿಯು ಹೇಳಿದಂತೆ ಸಕಾಲದಲ್ಲಿ ಪದ್ಮನಾಭನಾಗನಿರುವ ನಾಗಪುರಕ್ಕೆ ಪ್ರಯಾಣಮಾಡಿದನು. ಶುಭಸಂಕಲ್ಪವನ್ನು ಸಿದ್ಧಿಮಾಡಿಕೊಳ್ಳಬೇಕೆಂಬುದೇ ಆ ಬ್ರಾಹ್ಮಣನ ಏಕೈಕನಿಶ್ಚಯವಾಗಿದ್ದಿತು.”

ಽ೫೬ನೆಯ ಅಧ್ಯಾಯವು ಮುಗಿಯಿತು.

ಒ೫೭ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ನಾಗರಾಜನ ಗೃಹಕ್ಕೆ ಬ್ರಾಹ್ಮಣನ ಆಗಮನ: ನಾಗಪತ್ನಿಯಿಂದ ಸತ್ಕಾರ

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಆ ಬ್ರಾಹ್ಮಣನು ಅನುಕ್ರಮವಾಗಿ ವಿಚಿತ್ರವಾದ ಅನೇಕವನಗಳನ್ನೂ, ಪವಿತ್ರವಾದ ತೀರ್ಥಗಳನ್ನೂ, ಸರೋವರಗಳನ್ನೂ ದಾಟಿ ಒಬ್ಬ ಋಷಿಯ ಬಳಿಗೆ ಹೋದನು. ಬ್ರಾಹ್ಮಣನು ಅತಿಥಿಯು ಹೇಳಿದ್ದ ನಾಗರಾಜನ ವಿಷಯವಾಗಿ ಋಷಿಯನ್ನು ಕೇಳಿದನು. ಅವನಿಂದ ಮುಂದಿನ ಹಾದಿಯು ತಿಳಿದೊಡನೆಯೇ ಬ್ರಾಹ್ಮಣನು ಮುಂದೆ ಪ್ರಯಾಣಮಾಡಿದನು. ತನ್ನ ಪ್ರಯಾಣದ ಪ್ರಯೋಜನವನ್ನು ಚೆನ್ನಾಗಿ ತಿಳಿದಿದ್ದ ಬ್ರಾಹ್ಮಣನು ವಿಧಿಪೂರ್ವಕವಾಗಿ ಯಾತ್ರೆಯನ್ನು ಮುಗಿಸಿ ನಾಗರಾಜನ ಮನೆಯನ್ನು ಸೇರಿದನು. ಬಾಗಿಲಿನಲ್ಲಿ ನಿಂತು 'ಭೋಃ' ಎಂಬ ಶಬ್ದದಿಂದ ಸಮಲಂಕೃತವಾದ 'ಅಹಮಸ್ಮಿ' ಎಂಬ ವಾಕ್ಯವನ್ನು ('ಭೋಃ ಅಹಮಸ್ಮಿ ಬ್ರಾಹ್ಮಣಃ'–'ನಾನು ಬ್ರಾಹ್ಮಣನಾಗಿದ್ದೇನೆ') ಹೇಳಿದನು.

ಬ್ರಾಹ್ಮಣನ ಆ ಮಾತನ್ನು ಕೇಳಿ ರೂಪವತಿಯಾದ, ಧರ್ಮವತ್ಸಲೆಯಾದ, ಪತಿವ್ರತೆಯಾದ ನಾಗರಾಜನ ಪತ್ನಿಯು ಅವನನ್ನು ಸಂದರ್ಶಿಸಿದಳು. ಒಡನೆಯೇ ಧರ್ಮಪರಾಯಣೆಯಾದ ನಾಗಪತ್ನಿಯು ಅವನನ್ನು ಸ್ವಾಗತಪೂರ್ವಕವಾಗಿ ಮನೆಯೊಳಕ್ಕೆ ಬರಮಾಡಿಕೊಂಡು ವಿಧಿವತ್ತಾಗಿ ಸತ್ಕರಿಸಿ–"ಬ್ರಾಹ್ಮಣೋತ್ತಮ! ನಿನಗಾಗಿ ನಾನು ಯಾವ ಕಾರ್ಯವನ್ನು ಮಾಡಿಕೊಡಲಿ?"ಎಂಬುದಾಗಿಯೂ ಪ್ರಶ್ನಿಸಿದಳು.

ಅದಕ್ಕೆ ಉತ್ತರವಾಗಿ ಬ್ರಾಹ್ಮಣನು ಹೇಳಿದನು :

"ದೇವಿ! ನೀನು ಸುಮಧುರವಾದ ಮಾತಿನಿಂದ ನನ್ನನ್ನು ಸ್ವಾಗತಿಸಿ ವಿಧಿವತ್ತಾಗಿ ಸತ್ಕರಿಸಿರುವೆ. ಇದರಿಂದಲೇ ನನ್ನ ಬಳಲಿಕೆಯ ಪರಿಹಾರವಾಗಿ ವಿಶ್ರಾಂತನಾಗಿದ್ದೇನೆ. ನಾನೀಗ ಶ್ರೇಷ್ಠನಾದ ನಾಗದೇವನನ್ನು ಸಂದರ್ಶಿಸಲು ಇಚ್ಛಿಸಿದ್ದೇನೆ. ಇದೇ ನನ್ನ ಮಹತ್ತರವಾದ ಕಾರ್ಯ

ವಾಗಿದೆ. ಇದೇ ನನ್ನ ದೊಡ್ಡದಾದ ಮನೋರಥವಾಗಿದೆ. ಈ ಉದ್ದೇಶದಿಂದಲೇ ನಾನು ನಾಗರಾಜನ ಆಶ್ರಮಕ್ಕೆ ಬಂದಿದ್ದೇನೆ.”

ನಾಗರಾಜನ ಪತ್ನಿಯು ಹೇಳುತ್ತಾಳೆ :

“ವಿಪ್ರಶ್ರೇಷ್ಠನೇ! ಮಾನನೀಯನಾದ ನನ್ನ ಪತಿಯು ಸೂರ್ಯನ ರಥವನ್ನು ಹೊರಲು ಹೋಗಿದ್ದಾನೆ. ವರ್ಷದಲ್ಲಿ ಒಂದು ಬಾರಿ ಒಂದು ತಿಂಗಳವರೆಗೆ ನನ್ನ ಪತಿಯು ಈ ಕಾರ್ಯವನ್ನು ಮಾಡಬೇಕಾಗಿದೆ. ಇನ್ನು ಹದಿನೈದು ದಿವಸಗಳ ಅವಧಿಯಲ್ಲಿ ಅವನು ಇಲ್ಲಿಗೆ ಬಂದು ನಿನಗೆ ದರ್ಶನವನ್ನೀಯುತ್ತಾನೆಂಬುದರಲ್ಲಿ ಸಂಶಯವೇ ಇಲ್ಲ. ಆರ್ಯಪುತ್ರನ ಈ ಪ್ರವಾಸದ ಕಾರಣವು ನಿನಗೆ ತಿಳಿಯಿತಲ್ಲವೇ! ನನ್ನ ಪತಿಯ ಸಂದರ್ಶನವನ್ನು ಬಿಟ್ಟು ಬೇರೆ ಯಾವ ಕಾರ್ಯವನ್ನು ಮಾಡಬೇಕಾಗಿದೆಯೆಂಬುದನ್ನು ನನ್ನೊಡನೆ ಹೇಳು.”

ವಿಪ್ರನು ಹೇಳುತ್ತಾನೆ :

“ಸಾಧ್ವಿಯಾದ ನಾಗದೇವಿಯೇ! ನಾಗರಾಜನನ್ನು ದರ್ಶನಮಾಡುವ ನಿಶ್ಚಯದಿಂದಲೇ ನಾನಿಲ್ಲಿಗೆ ಬಂದಿರುತ್ತೇನೆ. ಆದುದರಿಂದ ನಾನು ಅವನ ಆಗಮನವನ್ನೇ ಪ್ರತೀಕ್ಷಿಸುತ್ತಾ ಈ ಅರಣ್ಯದಲ್ಲಿರುತ್ತೇನೆ. ಅವನಿಲ್ಲಿಗೆ ಆಗಮಿಸಿದೊಡನೆಯೇ ನಾನಿಲ್ಲಿಗೆ ಬಂದಿರುವ ವಿಷಯವನ್ನು ಶಾಂತ ಭಾವದಿಂದ ಅವನಿಗೆ ತಿಳಿಸಬೇಕು ಮತ್ತು ಅವನು ನನ್ನ ಬಳಿಗೆ ಬಂದು ದರ್ಶನವನ್ನೀಯುವ ರೀತಿಯಲ್ಲಿ ನಿನ್ನ ಪತಿಯೊಡನೆ ಮಾತನಾಡಬೇಕು. ನಾನು ಕೂಡ ಗೋಮತೀನದಿಯ ಸುಂದರವಾದ ತಟಪ್ರದೇಶದಲ್ಲಿ ಮಿತಾಹಾರನಾಗಿ ನೀನು ಹೇಳಿರುವ ಕಾಲವನ್ನು ಪ್ರತೀಕ್ಷಿಸುತ್ತಾ ವಾಸ ಮಾಡುತ್ತೇನೆ.”

ಯುಧಿಷ್ಠಿರ! ಹೀಗೆ ಹೇಳಿ ಶ್ರೇಷ್ಠನಾದ ಆ ಬ್ರಾಹ್ಮಣನು ನಾಗಪತ್ನಿಯನ್ನು ಪುನಃ ಪುನಃ ಸಮಾಧಾನಪಡಿಸುತ್ತಾ ಗೋಮತೀನದಿಯ ತೀರಪ್ರದೇಶಕ್ಕೆ ಹೊರಟುಹೋದನು.”

೩೫೭ನೆಯ ಅಧ್ಯಾಯವು ಮುಗಿಯಿತು.

ನಾಗರಾಜನ ದರ್ಶನಕ್ಕಾಗಿ ಬ್ರಾಹ್ಮಣನಿಂದ ತಪಶ್ಚರಣೆ

ಭೀಷ್ಮನು ಹೇಳುತ್ತಾನೆ :

ಅಥ ತೇನ ನರಶ್ರೇಷ್ಠ ಬ್ರಾಹ್ಮಣೇನ ತಪಸ್ವಿನಾ ।
ನಿರಾಹಾರೇಣ ವಸತಾ ದುಃಖಿತಾಸ್ತೇ ಭುಜಙ್ಗಮಾಃ ॥೧॥

"ನರಶ್ರೇಷ್ಠನೇ! ಯುಧಿಷ್ಠಿರ! ತಪಸ್ವಿಯಾದ ಆ ಬ್ರಾಹ್ಮಣನು ಗೋಮತೀನದಿಯ ತೀರಕ್ಕೆ ಹೋಗಿ ನಿರಾಹಾರನಾಗಿ ತಪಸ್ಸುಮಾಡಲು ಉಪಕ್ರಮಿಸಿದನು. ಅವನು ಭೋಜನಮಾಡದೇ ಇದ್ದುದರಿಂದ ಸರ್ಪಗಳೆಲ್ಲವೂ ಖೇದಗೊಂಡುವು. ನಾಗರಾಜನ ಬಂಧು-ಬಳಗದವರೂ, ಸಹೋದರರೂ, ಭಾರ್ಯೆಯರೂ, ಮಕ್ಕಳೂ ಎಲ್ಲರೂ ಒಟ್ಟಾಗಿ ಬ್ರಾಹ್ಮಣನ ಬಳಿಗೆ ಹೋದರು. ಗೋಮತೀನದಿಯ ತೀರಪ್ರದೇಶದಲ್ಲಿ ಏಕಾಂತವಾದ ಸ್ಥಳವೊಂದರಲ್ಲಿ ನಿಯತವ್ರತಾನುಷ್ಠಾನಪರನಾಗಿ ನಿರಾಹಾರನಾಗಿ ಮಂತ್ರವನ್ನು ಜಪಿಸುತ್ತಾ ಕುಳಿತಿದ್ದ ಆ ಬ್ರಾಹ್ಮಣನನ್ನು ನೋಡಿದರು. ಅತಿಥಿಗಳನ್ನು ಸತ್ಕರಿಸುವುದರಲ್ಲಿ ಪ್ರಸಿದ್ಧನಾಗಿದ್ದ ನಾಗರಾಜನ ಎಲ್ಲ ಬಂಧು-ಬಳಗದವರೂ ಬ್ರಾಹ್ಮಣನನ್ನು ಸಮೀಪಿಸಿ ಅವನನ್ನು ಹಲವಾರು ಬಾರಿ ಸತ್ಕರಿಸಿ ಸಂಪೂಜಿಸಿ ಸಂಶಯರಹಿತವಾದ ಈ ಮಾತನ್ನು ಹೇಳಿದರು :

"ಧರ್ಮವತ್ಸಲನೇ! ತಪೋಧನನೇ! ನೀನು ಇಲ್ಲಿಗೆ ಬಂದು ಇಂದಿಗೆ ಆರು ದಿವಸಗಳಾಗಿವೆ. ಆದರೆ ನೀನು ಸ್ವಲ್ಪವಾದರೂ ಆಹಾರವನ್ನು ತೆಗೆದುಕೊಳ್ಳುವ ವಿಷಯವಾಗಿ ನಮ್ಮೊಡನೆ ಮಾತನಾಡುತ್ತಲೇ ಇಲ್ಲ. ನೀನು ನಮ್ಮ ಮನೆಗೆ ಅತಿಥಿಯ ರೂಪದಲ್ಲಿ ಆಗಮಿಸಿರುವೆ. ನಾವೂ ನಿನ್ನ ಸೇವೆಗಾಗಿ ಇಲ್ಲಿ ಉಪಸ್ಥಿತರಾಗಿದ್ದೇವೆ. ನಾವೆಲ್ಲರೂ ಗೃಹಸ್ಥರಾಗಿರುವುದರಿಂದ ನಿನಗೆ ಆತಿಥ್ಯವನ್ನು ಮಾಡುವುದು ನಮ್ಮ ಕರ್ತವ್ಯವಾಗಿದೆ. ದ್ವಿಜಶ್ರೇಷ್ಠನೇ! (ಆಹಾರರೂಪದಲ್ಲಿ ನಾವು ತಂದಿರುವ) ಗೆಡ್ಡೆ-ಗೆಣಸುಗಳನ್ನಾಗಲಿ, ಫಲವನ್ನಾಗಲೀ, ಪತ್ರಗಳನ್ನಾಗಲೀ, ಹಾಲನ್ನಾಗಲೀ, ಅನ್ನವನ್ನಾಗಲೀ ಪರಿಗ್ರಹಿಸುವುದು ನಿನಗೆ ಉಚಿತವಾಗಿದೆ. ನಿರಾಹಾರನಾಗಿ ಈ

ವನದಲ್ಲಿ ವಾಸಮಾಡುತ್ತಿರುವ ನೀನು ಅಬಾಲ-ವೃದ್ಧಪರ್ಯಂತವಾಗಿ ನಮ್ಮೆಲ್ಲರನ್ನೂ ಧರ್ಮಸಂಕಟದ ಮೂಲಕವಾಗಿ ಪೀಡಿಸುತ್ತಿರುವೆ.

ನ ಹಿ ನೋ ಭ್ರೂಣಹಾ ಕಶ್ಚಿದ್ರಾಜಾಪಥ್ಯೋಽನೃತೋಽಪಿ ವಾ ।
ಪೂರ್ವಾಶೀ ವಾ ಕುಲೇ ಹ್ಯಸ್ಮಿನ್ದೇವತಾತಿಥಿಬನ್ಧುಷು ॥೯॥

ಈ ನಮ್ಮ ಕುಲದಲ್ಲಿ ಭ್ರೂಣಹತ್ಯೆಯನ್ನು ಮಾಡಿದವನಾಗಲೀ, ರಾಜನ ನಿಯಮವನ್ನು ಉಲ್ಲಂಘಿಸುವವನಾಗಲೀ, ಸುಳ್ಳಾಡುವವನಾಗಲೀ, ದೇವತೆಗಳಿಗೆ ನಿವೇದನೆಮಾಡುವ ಮೊದಲು ಮತ್ತು ಅತಿಥಿಗಳೂ–ಬಂಧುಗಳೂ ಊಟಮಾಡುವ ಮೊದಲು ಭೋಜನಮಾಡುವವನಾಗಲೀ ಯಾರೂ ಇರುವುದಿಲ್ಲ."

ಬ್ರಾಹ್ಮಣನು ಹೇಳುತ್ತಾನೆ :

"ನಾಗಪ್ರಮುಖರೇ! ನಿಮ್ಮ ಹಿತಕರವಾದ ಈ ಮಾತಿನಿಂದಲೇ ನಾನು ಆಹಾರವನ್ನು ಪರಿಗ್ರಹಿಸಿದಂತೆಯೇ ಆಗಿದೆ. ನಾಗರಾಜನ ಆಗಮನಕ್ಕೆ ಕೇವಲ ಎಂಟು ದಿವಸಗಳು ಮಾತ್ರವೇ ಉಳಿದಿವೆ. ಒಂದು ವೇಳೆ ಎಂಟು ರಾತ್ರಿಗಳು ಕಳೆದ ನಂತರವೂ ನಾಗರಾಜನೂ ಬಾರದಿದ್ದರೆ ಆಗ ನಾನು ಆಹಾರವನ್ನು ಸೇವಿಸುತ್ತೇನೆ. ನಾಗರಾಜನ ಸಲುವಾಗಿಯೇ ನನ್ನ ಈ ವ್ರತವಾಗಿದೆ. ನಾನು ವ್ರತಸ್ಥನಾಗಿದ್ದು ನಿರಾಹಾರನಾಗಿರುವುದರಿಂದ ನೀವು ಸಂತಾಪಪಡುವ ಕಾರಣವಿಲ್ಲ. ಈ ನನ್ನ ನಿಯಮವ್ರತಾನುಷ್ಠಾನಗಳೆಲ್ಲವೂ ನಾಗರಾಜನ ಸಂದರ್ಶನಾರ್ಥವಾಗಿಯೇ. ಈ ನನ್ನ ವ್ರತವನ್ನು ಭಂಗಪಡಿಸುವುದು ನಿಮಗೆ ಉಚಿತವಲ್ಲ."

ಯುಧಿಷ್ಠಿರ! ಬ್ರಾಹ್ಮಣನು ಹೇಳಿದ ಮಾತನ್ನು ಕೇಳಿ ನಾಗರೆಲ್ಲರೂ ಅವನ ಅನುಮತಿಯನ್ನು ಪಡೆದು ಅಸಫಲರಾಗಿಯೇ ತಮ್ಮ-ತಮ್ಮ ನಿವಾಸಗಳಿಗೆ ತೆರಳಿದರು."

ಆ ೩೫೮ನೆಯ ಅಧ್ಯಾಯವು ಮುಗಿಯಿತು.

ನಾಗರಾಜನು ಮನೆಗೆ ಹಿಂದಿರುಗಿದುದು: ಪತ್ನಿಯೊಡನೆ ಧರ್ಮಸಂಬಂಧವಾದ ಸಂಭಾಷಣೆ: ಬ್ರಾಹ್ಮಣನನ್ನು ಸಂದರ್ಶಿಸಲು ಪತಿಗೆ ನಾಗಪತ್ನಿಯ ಒತ್ತಾಯ

ಭೀಷ್ಮನು ಹೇಳುತ್ತಾನೆ :

ಅಥ ಕಾಲೇ ಬಹುತಿಥೇ ಪೂರ್ಣೇ ಪ್ರಾಪ್ತೋ ಭುಜಙ್ಗಮಃ ।
ದತ್ತಾಭ್ಯನುಜ್ಞಃ ಸ್ವಂ ವೇಶ್ಮ ಕೃತಕರ್ಮಾ ವಿವಸ್ವತಾ ॥೧॥

"ಯುಧಿಷ್ಠಿರ! ಸೂರ್ಯನೊಡನೆ ಇರಬೇಕಾಗಿದ್ದ ಬಹುದಿನಗಳು (ಮೂವತ್ತು ದಿವಸಗಳು) ಪೂರ್ಣವಾದನಂತರ ತನ್ನ ಕೆಲಸವನ್ನು ಮುಗಿಸಿಕೊಂಡು ಸೂರ್ಯನ ಅನುಜ್ಞೆಯನ್ನು ಪಡೆದು ನಾಗರಾಜನು ತನ್ನ ಮನೆಗೆ ಹಿಂದಿರುಗಿದನು. ಪತಿಯು ಬಂದುದನ್ನು ನೋಡಿದೊಡನೆಯೇ ಸಾಧ್ವಿಯಾದ ನಾಗಪತ್ನಿಯು ಕಾಲುತೊಳೆಯಲು ನೀರನ್ನೂ, ಸತ್ಕಾರಕ್ಕಾಗಿ ಇತರ ಸಾಮಗ್ರಿಗಳನ್ನೂ ತೆಗೆದುಕೊಂಡು ಪತಿಯ ಬಳಿಗೆ ಹೋದಳು. ಸಾಧ್ವಿಯಾದ ತನ್ನ ಪತ್ನಿಯು ಸಮೀಪಕ್ಕೆ ಬರುತ್ತಲೇ ನಾಗರಾಜನು ಅವಳನ್ನು ಪ್ರಶ್ನಿಸಿದನು :

ಅಥ ತ್ವಮಸಿ ಕಲ್ಯಾಣಿ ದೇವತಾತಿಥಿಪೂಜನೇ ।
ಪೂರ್ವಮುಕ್ತೇನ ವಿಧಿನಾ ಯುಕ್ತಾ ಯುಕ್ತೇನ ಮತ್ಸಮಮ್ ॥೩॥

"ಕಲ್ಯಾಣಿ! ನಾನು ಹಿಂದೆ ಹೇಳಿದ್ದ ರೀತಿಯಲ್ಲಿಯೇ ವಿಧ್ಯುಕ್ತವಾಗಿ ನನ್ನಂತೆಯೇ ನೀನೂ ದೇವತಾತಿಥಿಪೂಜೆಯಲ್ಲಿ ನಿರತಳಾಗಿರುವೆಯಲ್ಲವೇ?

ನ ಖಲ್ವಸ್ಯಕೃತಾರ್ಥೇನ ಸ್ತ್ರೀಬುದ್ಧ್ಯಾ ಮಾರ್ದವೀಕೃತಾ ।
ಮದ್ವಿಯೋಗೇನ ಸುಶ್ರೋಣಿ ವಿಮುಕ್ತಾ ಧರ್ಮಸೇತುನಾ ॥೪॥

ನನ್ನ ವಿಯೋಗದ ಕಾರಣದಿಂದ ನೀನು ಸ್ತ್ರೀಸಹಜವಾದ ಬುದ್ಧಿಯನ್ನು ಹೊಂದಿ ಮೃದುವಾಗಿ (ಕಷ್ಟಸಾಧ್ಯವಾದ ಅತಿಥಿಸತ್ಕಾರಾದಿ ಗೃಹಕಾರ್ಯಗಳನ್ನು ಮಾಡಲು ಅಶಕ್ತಳಾಗಿ) ಧರ್ಮವೆಂಬ ಪರಲೋಕಸೇತುವು ಕೃತಾರ್ಥವಾಗದಂತೆ ಮಾಡಿ ಅದರಿಂದ (ಧರ್ಮದಿಂದ) ಬಿಡಲ್ಪಟ್ಟಿಲ್ಲವಷ್ಟೆ? (ನನ್ನ

ವಿಯೋಗದಿಂದಾಗಿ ದೀನಮನಸ್ಕಳಾದ ನೀನು ಮಾಡಬೇಕಾದ ಯಾವ ಧರ್ಮಕಾರ್ಯಗಳನ್ನೂ ಬಿಟ್ಟಿಲ್ಲ ತಾನೇ?)"

ನಾಗಪತ್ನಿಯು ಹೇಳುತ್ತಾಳೆ :

ಶಿಷ್ಯಾಣಾಂ ಗುರುಶುಶ್ರೂಷಾ ವಿಪ್ರಾಣಾಂ ವೇದಧಾರಣಮ್ ।
ಭೃತ್ಯಾನಾಂ ಸ್ವಾಮಿವಚನಂ ರಾಜ್ಞೋ ಲೋಕಾನುಪಾಲನಮ್ ॥೫॥

"ಪತಿದೇವ! ಗುರುಶುಶ್ರೂಷೆಯು ಶಿಷ್ಯರ ಧರ್ಮವಾಗಿದೆ. ವೇದ ಗಳನ್ನು ಹೃದ್ಗತಮಾಡಿಕೊಳ್ಳುವುದು ಬ್ರಾಹ್ಮಣರ ಧರ್ಮವಾಗಿದೆ. ಒಡೆಯನ ಆಜ್ಞೆಯನ್ನು ಪರಿಪಾಲಿಸುವುದು ಸೇವಕರ ಧರ್ಮವಾಗಿದೆ. ಪ್ರಜೆಗಳನ್ನು ಧರ್ಮದಿಂದ ಸಂರಕ್ಷಿಸುವುದು ರಾಜನ ಧರ್ಮವಾಗಿದೆ.

ಸರ್ವಭೂತಪರಿತ್ರಾಣಂ ಕ್ಷತ್ರಧರ್ಮ ಇಹೋಚ್ಯತೇ ।
ವೈಶ್ಯಾನಾಂ ಯಜ್ಞಸಂವೃತ್ತಿರಾತಿಥೇಯಸಮನ್ವಿತಾ ॥೬॥

ಪ್ರಪಂಚದಲ್ಲಿರುವ ಎಲ್ಲ ಪ್ರಾಣಿಗಳಿಗೂ ರಕ್ಷಣೆಯನ್ನು ನೀಡುವುದು ಕ್ಷತ್ರಿಯಧರ್ಮವಾಗಿದೆ. ಅತಿಥಿಸತ್ಕಾರದೊಡನೆ ಯಜ್ಞಗಳನ್ನೂ ಮಾಡು ವುದು ವೈಶ್ಯರ ಧರ್ಮವಾಗಿದೆ.

ವಿಪ್ರಕ್ಷತ್ರಿಯವೈಶ್ಯಾನಾಂ ಶುಶ್ರೂಷಾ ಶೂದ್ರಕರ್ಮ ತತ್ ।
ಗೃಹಸ್ಥಧರ್ಮೋ ನಾಗೇನ್ದ್ರ ಸರ್ವಭೂತಹಿತೈಷಿತಾ ॥೭॥

ನಾಗೇಂದ್ರ! ಬ್ರಾಹ್ಮಣ-ಕ್ಷತ್ರಿಯ-ವೈಶ್ಯರನ್ನು ಶುಶ್ರೂಷೆಮಾಡುವುದು ಶೂದ್ರರ ಕರ್ತವ್ಯವೆಂದು ಹೇಳಲ್ಪಟ್ಟಿದೆ. ಸರ್ವಪ್ರಾಣಿಗಳಿಗೂ ಹಿತವನ್ನು ಬಯಸುವುದೇ ಗೃಹಸ್ಥಧರ್ಮವಾಗಿದೆ.

ನಿಯತಾಹಾರತಾ ನಿತ್ಯಂ ವ್ರತಚರ್ಯಾ ಯಥಾಕ್ರಮಮ್ ।
ಧರ್ಮೋ ಹಿ ಧರ್ಮಸಮ್ಬನ್ಧಾದಿನ್ದ್ರಿಯಾಣಾಂ ವಿಶೇಷತಃ ॥೮॥

ವಿಧಿವತ್ತಾಗಿ ನಿತ್ಯವೂ ಮಿತವಾಗಿ ಆಹಾರವನ್ನು ತೆಗೆದುಕೊಳ್ಳುತ್ತಾ ವ್ರತಾನುಷ್ಠಾನಮಾಡುವುದು ಎಲ್ಲರ ಧರ್ಮವೂ ಆಗಿದೆ. ಏಕೆಂದರೆ : ಈ ಧರ್ಮವು ವಿಶೇಷವಾಗಿ ಇಂದ್ರಿಯಗಳನ್ನು ಧರ್ಮದಲ್ಲಿಯೇ ಇರುವಂತೆ (ಕೆಟ್ಟಮಾರ್ಗಕ್ಕೆ ಹೋಗದಂತೆ) ಮಾಡುತ್ತದೆ. (ವಿಷಯಾ ವಿನಿ

ವರ್ತನ್ತೇ ನಿರಾಹಾರಸ್ಯ ದೇಹಿನಃ ಎಂಬ ಗೀತಾಶ್ಲೋಕವನ್ನು ಇಲ್ಲಿ ಸ್ಮರಿಸಬಹುದಾಗಿದೆ.)

ಅಹಂ ಕಸ್ಯ ಕುತೋ ವಾಪಿ ಕಃ ಕೋ ಮೇ ಹ ಭವೇದಿತಿ ।
ಪ್ರಯೋಜನಮತಿರ್ನಿತ್ಯಮೇವಂ ಮೋಕ್ಷಾಶ್ರಮೇ ವಸೇತ್ ॥೯॥

'ನಾನು ಯಾರವನಾಗಿದ್ದೇನೆ? ಎಲ್ಲಿಂದ ಬಂದಿದ್ದೇನೆ? ನನ್ನವರು ಯಾರಿದ್ದಾರೆ? ಈ ಜೀವನದ ಪ್ರಯೋಜನವೇನು?'–ಇತ್ಯಾದಿ ವಿಷಯಗಳನ್ನೇ ಸದಾ ವಿಚಾರಮಾಡುತ್ತಾ ಸಂನ್ಯಾಸಾಶ್ರಮದಲ್ಲಿರುವುದು ಸಂನ್ಯಾಸಿಯ ಧರ್ಮವಾಗಿದೆ.

ಪತಿವ್ರತಾತ್ವಂ ಭಾರ್ಯಾಯಾಃ ಪರಮೋ ಧರ್ಮ ಉಚ್ಯತೇ ।
ತವೋಪದೇಶಾನ್ನಾಗೇನ್ದ್ರ ತಚ್ಚ ತತ್ತ್ವೇನ ವೇದ್ಮಿ ವೈ ॥೧೦॥

ಪತ್ನಿಗೆ ಪಾತಿವ್ರತ್ಯವೇ ಎಲ್ಲಕ್ಕಿಂತಲೂ ಶ್ರೇಷ್ಠವಾದ ಧರ್ಮವೆಂದು ಹೇಳಲ್ಪಟ್ಟಿದೆ. ನಿನ್ನ ಉಪದೇಶದಿಂದ ನಾನು ಆ ಧರ್ಮವನ್ನು ಯಥಾವತ್ತಾಗಿ ತಿಳಿದಿರುತ್ತೇನೆ.

ಸಾಹಂ ಧರ್ಮಂ ವಿಜಾನನ್ತೀ ಧರ್ಮನಿತ್ಯೇ ತ್ವಯಿ ಸ್ಥಿತೇ ।
ಸತ್ಪಥಂ ಕಥಮುತ್ಸೃಜ್ಯ ಯಾಸ್ಯಾಮಿ ವಿಪಥಂ ಪಥಃ ॥೧೧॥

ಪತಿಯಾದ ನೀನು ಧರ್ಮಮಾರ್ಗದಲ್ಲಿಯೇ ಸದಾ ಸುಸ್ಥಿರನಾಗಿರುವಾಗ –ಅಂತಹ ಧರ್ಮಿಷ್ಠನ ಪತ್ನಿಯಾದ ನಾನು ಆ ಧರ್ಮವನ್ನು ತಿಳಿದುಕೊಂಡಿರುವಾಗ–ಸನ್ಮಾರ್ಗವನ್ನು ಪರಿತ್ಯಜಿಸಿ ಹೇಗೆ ತಾನೇ ದುರ್ಮಾರ್ಗವನ್ನು ಅವಲಂಬಿಸುವೆನು?

ದೇವತಾನಾಂ ಮಹಾಭಾಗ ಧರ್ಮಚರ್ಯಾ ನ ಹೀಯತೇ ।
ಅತಿಥೀನಾಂ ಚ ಸತ್ಕಾರೇ ನಿತ್ಯಯುಕ್ತಾಸ್ಮ್ಯತನ್ದ್ರಿತಾ ॥೧೨॥

ಮಹಾಭಾಗನೇ! ದೇವತೆಗಳ ಆರಾಧನಾರೂಪವಾದ ಧರ್ಮಾಚರಣೆಯಲ್ಲಿ ಯಾವ ನ್ಯೂನತೆಯೂ ಉಂಟಾಗಿರುವುದಿಲ್ಲ. ಅತಿಥಿಗಳ ಸತ್ಕಾರದ ವಿಷಯದಲ್ಲಿ ಯಾವ ವಿಧವಾದ ಪಾಲುಮಾರಿಕೆಯೂ ಇಲ್ಲದೇ ನಾನು ನಿತ್ಯಾಸಕ್ತಳಾಗಿದ್ದೇನೆ.

ಸಪ್ತಾಷ್ಟದಿವಸಾಸ್ತ್ವದ್ಯ ವಿಪ್ರಸ್ಯೇಹಾಗತಸ್ಯ ವೈ ।
ತಚ್ಚ ಕಾರ್ಯಂ ನ ಮೇಖ್ಯಾತಿ ದರ್ಶನಂ ತವ ಕಾಂಕ್ಷತಿ ॥೧೩॥

ಆದರೆ, ಇಂದಿಗೆ ಹದಿನೈದು ದಿವಸಗಳ ಹಿಂದೆ ಒಬ್ಬ ಬ್ರಾಹ್ಮಣನು ಇಲ್ಲಿಗೆ ಬಂದನು. ತಾನು ಯಾವ ಕಾರ್ಯವಶದಿಂದ ಬಂದಿರುವನೆಂಬುದನ್ನು ನನ್ನೊಡನೆ ಹೇಳಲಿಲ್ಲ. ಅವನು ನಿನ್ನ ದರ್ಶನಾಕಾಂಕ್ಷಿಯಾಗಿದ್ದಾನೆ.

ಗೋಮತ್ಯಾಸ್ತ್ವೇಷ ಪುಲಿನೇ ತ್ವದ್ದರ್ಶನಸಮುತ್ಸುಕಃ ।
ಆಸೀನೋ ವರ್ತಯನ್ಬ್ರಹ್ಮ ಬ್ರಾಹ್ಮಣಃ ಸಂಶಿತವ್ರತಃ ॥೧೪॥

ಕಠೋರವ್ರತನಿಷ್ಠನಾದ ಆ ಬ್ರಾಹ್ಮಣನು ವೇದಪಾರಾಯಣಮಾಡುತ್ತಾ ನಿನ್ನನ್ನು ಸಂದರ್ಶಿಸಲು ಉತ್ಸುಕನಾಗಿ ಗೋಮತೀನದಿಯ ತೀರದ ಮರಳುದಿಣ್ಣೆಯ ಮೇಲೆ ಕುಳಿತಿದ್ದಾನೆ.

ಅಹಂ ತ್ವನೇನ ನಾಗೇನ್ದ್ರ ಸತ್ಯಪೂರ್ವಂ ಸಮಾಹಿತಾ ।
ಪ್ರಸ್ಥಾಪ್ಯೋ ಮತ್ಸಕಾಶಂ ಸ ಸಮ್ಪ್ರಾಪ್ತೋ ಭುಜಗೋತ್ತಮಃ ॥೧೫॥

ನಾಗರಾಜನು ಬಂದೊಡನೆಯೇ ತನ್ನ ಬಳಿಗೆ ಕಳುಹಿಸಬೇಕೆಂಬ ಸತ್ಯ ಪ್ರತಿಜ್ಞೆಯನ್ನು ನನ್ನಿಂದ ಅವನು ಮಾಡಿಸಿಕೊಂಡಿದ್ದಾನೆ.

ಮಹಾಪ್ರಾಜ್ಞನೇ! ಕಣ್ಣುಗಳನ್ನೇ ಕಿವಿಗಳನ್ನಾಗಿಯೂ ಹೊಂದಿರುವ ಸರ್ಪರಾಜನೇ! ನನ್ನ ಈ ಮಾತನ್ನು ಕೇಳಿರುವ ನೀನು ಈಗಲೇ ಅವನ ಬಳಿಗೆ ಹೋಗುವುದು ಯೋಗ್ಯವಾಗಿದೆ ಮತ್ತು ಆ ಬ್ರಾಹ್ಮಣನಿಗೆ ದರ್ಶನವನ್ನೀಯುವುದೂ ಉಚಿತವಾಗಿದೆ.”

ಇ೫೯ನೆಯ ಅಧ್ಯಾಯವು ಮುಗಿಯಿತು.

೩೬೦ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಪತ್ನಿಯ ಧರ್ಮಯುಕ್ತವಾದ ಮಾತುಗಳನ್ನು ಕೇಳಿ ನಾಗರಾಜನ ಸಂತೋಷ: ಬ್ರಾಹ್ಮಣನ ಬಳಿಗೆ ಹೋಗಲು ನಿಶ್ಚಯಿಸಿದುದು

ಧರ್ಮಜ! ನಾಗರಾಜನು ಪ್ರಶ್ನಿಸುತ್ತಾನೆ :

ಅಥ ಬ್ರಾಹ್ಮಣರೂಪೇಣ ಕಂ ತಂ ಸಮನುಪಶ್ಯಸಿ ।
ಮಾನುಷಂ ಕೇವಲಂ ವಿಪ್ರಂ ದೇವಂ ವಾಥ ಶುಚಿಸ್ಮಿತೇ ॥೧॥

“ಶುಭ್ರವಾದ ಮಂದಹಾಸವುಳ್ಳವಳೇ! ನಾಗಕುಮಾರಿ! ಬ್ರಾಹ್ಮಣನ ರೂಪದಲ್ಲಿ ನೀನು ಯಾರನ್ನು ಸಂದರ್ಶಿಸಿದೆ? ಬ್ರಾಹ್ಮಣನ ರೂಪವನ್ನು ಧರಿಸಿ ಬಂದಿದ್ದ ಅವನು ಮನುಷ್ಯನೇ ಅಥವಾ ದೇವತೆಯೇ?

ಕೋ ಹಿ ಮಾಂ ಮಾನುಷಃ ಶಕ್ತೋ ದ್ರಷ್ಟುಕಾಮೋ ಯಶಸ್ವಿನಿ ।
ಸಂದರ್ಶನರುಚಿರ್ವಾಕ್ಯಮಾಜ್ಞಾಪೂರ್ವಂ ವದಿಷ್ಯತಿ ॥೨॥

ಯಶಸ್ವಿನಿಯೇ! ಮನುಷ್ಯರಲ್ಲಿ ಯಾವನು ತಾನೇ ನನ್ನನ್ನು ನೋಡಲು ಶಕ್ತನಾಗಿದ್ದಾನೆ? (ನಾನು ಮನುಷ್ಯರಿಗೆ ದುರ್ದರ್ಶನು) ಹಾಗೆ ಅವನು ಅತಿಸಮರ್ಥನೇ ಆಗಿದ್ದು ನೋಡಲು ಅಪೇಕ್ಷಿಸಿದರೂ ತನ್ನಲ್ಲಿಗೇ ಬಂದು ದರ್ಶನವನ್ನೀಯಬೇಕೆಂದು ಯಾವ ಮನುಷ್ಯನು ತಾನೇ ಆಜ್ಞಾ ಪೂರ್ವಕವಾಗಿ ಹೇಳಬಲ್ಲನು?

ಸುರಾಸುರಗಣಾನಾಂ ಚ ದೇವರ್ಷೀಣಾಂ ಚ ಭಾಮಿನಿ ।
ನನು ನಾಗಾ ಮಹಾವೀರ್ಯಾಃ ಸೌರಸೇಯಾಸ್ತರಸ್ವಿನಃ ॥೩॥

ವನ್ದನೀಯಾಶ್ಚ ವರದಾ ವಯಮಪ್ಯನುಯಾಯಿನಃ ।
ಮನುಷ್ಯಾಣಾಂ ವಿಶೇಷೇಣ ನಾವೇಕ್ಷ್ಯಾ ಇತಿ ಮೇ ಮತಿಃ ॥೪॥

ಭಾಮಿನಿ! ಸುರಸೆಯ ವಂಶಜರಾದ, ಅತ್ಯಂತವೇಗಶಾಲಿಗಳಾದ ನಾವು ಸುರಾಸುರರಿಗಿಂತಲೂ, ದೇವರ್ಷಿಗಳಿಗಿಂತಲೂ ಮಹಾವೀರ್ಯಪರಾಕ್ರಮ ಯುತರಲ್ಲವೇ? ನಮ್ಮನ್ನು ಅನುಸರಿಸಿ ಬರುವ ಭಕ್ತರಿಗೆ ನಾವು ವರಪ್ರದರಾಗಿದ್ದೇವೆ. ಹೀಗಿರುವಾಗ ನಾವು ಮನುಷ್ಯರಿಂದ ಸುಲಭವಾಗಿ ನೋಡಲ್ಪಡತಕ್ಕವರಲ್ಲ. ಇದು ನನ್ನ ಅಭಿಪ್ರಾಯವಾಗಿದೆ.”

ನಾಗಭಾರ್ಯೆಯು ಹೇಳುತ್ತಾಳೆ :

ಆರ್ಜವೇನ ವಿಜಾನಾಮಿ ನಾಸೌ ದೇವೋಽನಿಲಾಶನ ।
ಏಕಂ ತಸ್ಮಿನ್ವಿಜಾನಾಮಿ ಭಕ್ತಿಮಾನತಿರೋಷಣ ॥೫॥

“ಕಡುಕೋಪಿಯೇ! ವಾಯುಭಕ್ಷನೇ! ನಾಗರಾಜನೇ! ಆ ಬ್ರಾಹ್ಮಣನಲ್ಲಿರುವ ಸರಳತೆಯನ್ನು ನೋಡಿ ಅವನು ದೇವತೆಯಲ್ಲವೆಂದು ನಾನು ತಿಳಿಯುತ್ತೇನೆ. ಅವನಲ್ಲಿರುವ ವಿಶೇಷವಾದ ಒಂದು ಗುಣವನ್ನು ಕಂಡುಕೊಂಡಿದ್ದೇನೆ. ಅವನು ನಿನ್ನ ಅತ್ಯಂತಭಕ್ತನು.

ಸ ಹಿ ಕಾರ್ಯಾನ್ತರಾಕಾಂಕ್ಷೀ ಜಲೇಪ್ಸುಃ ಸ್ತೋಕಕೋ ಯಥಾ ।
ವರ್ಷಂ ವರ್ಷಪ್ರಿಯಃ ಪಕ್ಷೀ ದರ್ಶನಂ ತವ ಕಾಂಕ್ಷತಿ ॥೬॥

ವರ್ಷರ್ತುವನ್ನು ಪ್ರೀತಿಸುವ ನೀರನ್ನು ಬಯಸಿದ ಚಾತಕಪಕ್ಷಿಯು ಯಾವ ರೀತಿಯಲ್ಲಿ ಮಳೆಯಾಗುವುದನ್ನೇ ಪ್ರತೀಕ್ಷಿಸುತ್ತಿರುವುದೋ–ಅದೇ ರೀತಿಯಲ್ಲಿ ಯಾವುದೋ ಕಾರ್ಯದ ಸಿದ್ಧಿಗಾಗಿ ಆ ಬ್ರಾಹ್ಮಣನು ನಿನ್ನ ದರ್ಶನವನ್ನೇ ಪ್ರತೀಕ್ಷಿಸುತ್ತಿದ್ದಾನೆ.

ಹಿತ್ವಾ ತ್ವದ್ದರ್ಶನಂ ಕಂಚಿದ್ವಿಘ್ನಂ ನ ಪ್ರತಿಪಾಲಯೇತ್ ।
ತುಲ್ಯೋಽಪ್ಯಭಿಜನೇ ಜಾತೋ ನ ಕಶ್ಚಿತ್ಪರ್ಯುಪಾಸತೇ ॥೭॥

ಆ ಬ್ರಾಹ್ಮಣನು ನಿನ್ನ ದರ್ಶನವೊಂದನ್ನು ಬಿಟ್ಟು ಮತ್ತೇನನ್ನೂ ಅಪೇಕ್ಷಿಸುತ್ತಿಲ್ಲ. ಆದುದರಿಂದ ನಿನ್ನನ್ನು ಸಂದರ್ಶಿಸುವ ಕಾರ್ಯದಲ್ಲಿ ಅವನಿಗೆ ಯಾವ ವಿಧವಾದ ವಿಘ್ನವೂ ಉಂಟಾಗದಿರಲಿ. ಉತ್ತಮವಾದ ಕುಲದಲ್ಲಿ ಹುಟ್ಟಿರುವ ನಿನಗೆ ಸಮಾನನಾದ ಯಾವನೇ ಆದರೂ ಅತಿಥಿಯನ್ನು ಉಪೇಕ್ಷಿಸಿ ಮನೆಯಲ್ಲಿಯೇ ಕುಳಿತಿರುವುದಿಲ್ಲ.

ತದ್ರೋಷಂ ಸಹಜಂ ತ್ಯಕ್ತ್ವಾ ತ್ವಮೇನಂ ದ್ರಷ್ಟುಮರ್ಹಸಿ ।
ಆಶಾಚ್ಛೇದೇನ ತಸ್ಯಾದ್ಯ ನಾತ್ಮಾನಂ ದಗ್ಧುಮರ್ಹಸಿ ॥೮॥

ಆದುದರಿಂದ ನಿನಗೆ ಸಹಜವಾಗಿಯೇ ಬಂದಿರುವ ಕೋಪವನ್ನು ಪರಿತ್ಯಜಿಸಿ ಅವನನ್ನು ನೋಡುವುದು ಉಚಿತವಾಗಿದೆ. ಈಗ ಅವನ ಆಸೆಯನ್ನು ವಿನಾಶಗೊಳಿಸಿ ಅದರ ಪರಿಣಾಮವಾಗಿ ನಿನ್ನನ್ನೇ ನೀನು ಸುಟ್ಟುಕೊಳ್ಳಬೇಡ.

ಆಶಯಾ ಹ್ಯಭಿಪನ್ನಾನಾಮಕೃತ್ವಾಶ್ರುಪ್ರಮಾರ್ಜನಮ್ ।
ರಾಜಾ ವಾ ರಾಜಪುತ್ರೋ ವಾ ಭ್ರೂಣಹತ್ಯೈವ ಯುಜ್ಯತೇ ॥೯॥

ಯಾವುದೋ ಆಶೆಯನ್ನಿಟ್ಟುಕೊಂಡು ಮರೆಹೊಕ್ಕವರ ಕಣ್ಣೀರನ್ನೊರೆಸಿ ಸಂತೈಸದಿದ್ದರೆ–ಅವನು ರಾಜನಾಗಿರಲೀ–ರಾಜಪುತ್ರನೇ ಆಗಿರಲೀ ಭ್ರೂಣಹತ್ಯಾಪಾಪದಿಂದ ಯುಕ್ತನಾಗುತ್ತಾನೆ.

ಮೌನೇ ಜ್ಞಾನಫಲಾವಾಪ್ತಿರ್ದಾನೇನ ಚ ಯಶೋ ಮಹತ್ ।
ವಾಗ್ಮಿತ್ವಂ ಸತ್ಯವಾಕ್ಯೇನ ಪರತ್ರ ಚ ಮಹೀಯತೇ ॥೧೦॥

ಮೌನವ್ರತದಿಂದ ಜ್ಞಾನರೂಪವಾದ ಫಲವು ಲಭಿಸುತ್ತದೆ. ದಾನ ಮಾಡುವುದರಿಂದ ಮಹಾಯಶಸ್ಸು ಪ್ರಾಪ್ತವಾಗುತ್ತದೆ. ಸತ್ಯನಿಷ್ಠೆಯಿಂದ ವಾಕ್ಪಟುತ್ವವುಂಟಾಗುತ್ತದೆ ಮತ್ತು ಪರಲೋಕದಲ್ಲಿಯೂ ಖ್ಯಾತನಾಗುತ್ತಾನೆ.

ಭೂಪ್ರದಾನೇನ ಚ ಗತಿಂ ಲಭತ್ಯಾಶ್ರಮಸಮ್ಮಿತಾಮ್ ।
ನ್ಯಾಯ್ಯಸ್ಯಾರ್ಥಸ್ಯ ಸಮ್ಪ್ರಾಪ್ತಿಂ ಕೃತ್ವಾ ಫಲಮುಪಾಶ್ನುತೇ ॥೧೧॥

ಭೂದಾನಮಾಡುವುದರಿಂದ ಮನುಷ್ಯನು ಆಶ್ರಮಧರ್ಮಗಳನ್ನು ಪರಿಪಾಲಿಸಿದ ಮಹಾಫಲಕ್ಕೆ ಸದೃಶವಾದ ಉತ್ತಮಗತಿಯನ್ನು ಹೊಂದುತ್ತಾನೆ. ನ್ಯಾಯಪೂರ್ವಕವಾಗಿ ಧನವನ್ನು ಸಂಗ್ರಹಿಸುವುದರಿಂದ ಮಹಾಫಲವನ್ನು ಹೊಂದುತ್ತಾನೆ.

ಅಭಿಪ್ರೇತಾಮಸಂಶ್ಲಿಷ್ಟಾಂ ಕೃತ್ವಾ ಚಾತ್ಮಹಿತಾಂ ಕ್ರಿಯಾಮ್ ।
ನ ಯಾತಿ ನಿರಯಂ ಕಶ್ಚಿದಿತಿ ಧರ್ಮವಿದೋ ವಿದುಃ ॥೧೨॥

ತನ್ನ ಇಷ್ಟಕ್ಕೆ ಅನುಸಾರವಾದ, ಪಾಪದ ಸೋಂಕಿಲ್ಲದ, ಆತ್ಮಹಿತವಾದ ಕಾರ್ಯವನ್ನು ಮಾಡುವುದರಿಂದ ಯಾರೇ ಆಗಲಿ, ನರಕಕ್ಕೆ ಹೋಗುವುದಿಲ್ಲವೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ.”

ನಾಗರಾಜನು ಹೇಳುತ್ತಾನೆ :

ಅಭಿಮಾನೈರ್ನ ಮಾನೋ ಮೇ ಜಾತಿದೋಷೇಣ ವೈ ಮಹಾನ್ ।
ರೋಷಃ ಸಂಕಲ್ಪಜಃ ಸಾಧ್ವಿ ದಗ್ಧೋ ವಾಗಗ್ನಿನಾ ತ್ವಯಾ ॥೧೩॥

“ಸಾಧ್ವಿಯೇ! ವೀರ್ಯ-ಪರಾಕ್ರಮಗಳು, ಸತ್ಕುಲಪ್ರಸೂತಿ – ಇತ್ಯಾದಿ ಅಭಿಮಾನಗಳಿಂದ ನಾನು ದುರಭಿಮಾನವನ್ನು ಹೊಂದಿರುವುದಿಲ್ಲ. ಜಾತಿದೋಷದಿಂದಾಗಿ (ನಾನು ನಾಗನಾಗಿ ಹುಟ್ಟಿರುವ ಕಾರಣದಿಂದಾಗಿ) ನನ್ನಲ್ಲಿ ಅತಿಯಾದ ಕೋಪವಿದೆ. ಸಂಕಲ್ಪದಿಂದ (ಸ್ವಭಾವದಿಂದ) ಹುಟ್ಟಿದ ಆ ಕೋಪವು ಕೂಡ ನಿನ್ನ ವಾಗ್ರೂಪವಾದ ಅಗ್ನಿಯಿಂದ ಸುಟ್ಟು ಭಸ್ಮವಾಗಿ ಹೋಯಿತು.

ನ ಚ ರೋಷಾದಹಂ ಸಾಧ್ವಿ ಪಶ್ಯೇಯಮಧಿಕಂ ತಮಃ ।
ತಸ್ಯ ವಕ್ತವ್ಯತಾಂ ಯಾನ್ತಿ ವಿಶೇಷೇಣ ಭುಜಙ್ಗಮಾಃ ॥೧೪॥

ಸಾಧ್ವಿಯೇ! (ಕೋಪವೆಂಬುದು ಗಾಢಾಂಧಕಾರಕ್ಕೆ ಸಮಾನ ವಾದುದು.) ಕೋಪಕ್ಕಿಂತಲೂ ಅಧಿಕವಾದ ತಮಸ್ಸನ್ನು ನಾನು ನೋಡಿಯೇ ಇಲ್ಲ. ಅದರಲ್ಲಿಯೂ ವಿಶೇಷವಾಗಿ ನಾಗಗಳು ಅತ್ಯಂತ ರೋಷಯುಕ್ತ ವಾದುವುಗಳೆಂಬ ಅಪವಾದವನ್ನು ಹೊಂದಿವೆ.

ರೋಷಸ್ಯ ಹಿ ವಶಂ ಗತ್ವಾ ದಶಗ್ರೀವಃ ಪ್ರತಾಪವಾನ್ ।
ತಥಾ ಶಕ್ರಪ್ರತಿಸ್ಪರ್ಧೀ ಹತೋ ರಾಮೇಣ ಸಂಯುಗೇ ॥೧೫॥

ಪ್ರತಾಪವಂತನಾದ, ಇಂದ್ರನಿಗೂ ಪ್ರತಿಸ್ಪರ್ಧಿಯಾದ ದಶಕಂಠ ರಾವಣನು ಕ್ರೋಧವಶನಾಗಿ ಯುದ್ಧದಲ್ಲಿ ಶ್ರೀರಾಮನಿಂದ ಹತನಾದನು.

ಅನ್ತಃಪುರಗತಂ ವತ್ಸಂ ಶ್ರುತ್ವಾ ರಾಮೇಣ ನಿರ್ಹೃತಮ್ ।
ಧರ್ಷಣಾರೋಷಸಂವಿಗ್ನಾಃ ಕಾರ್ತವೀರ್ಯಸುತಾ ಹತಾಃ ॥೧೬॥

ಅಂತಃಪುರದಲ್ಲಿ ಬಚ್ಚಿಟ್ಟಿದ್ದ ಹೋಮಧೇನುವಿನ ಕರುವನ್ನು ಪರಶುರಾಮನು ಹಿಡಿದುಕೊಂಡು ಹೋದನೆಂಬುದನ್ನು ಕೇಳಿ–ತಮ್ಮನ್ನು ಕೆಣಕಿದುದರಿಂದ ಉಂಟಾದ ಆಕ್ರಮಣದ ಬುದ್ಧಿಯಿಂದಲೂ ಮತ್ತು ರೋಷದಿಂದಲೂ ಉದ್ವಿಗ್ನರಾದ ಕಾರ್ತವೀರ್ಯನ ಮಕ್ಕಳೆಲ್ಲರೂ ಪರಶು ರಾಮನಿಂದ ಹತರಾದರು.

ಜಾಮದಗ್ನ್ಯೇನ ರಾಮೇಣ ಸಹಸ್ರನಯನೋಪಮಃ ।
ಸಂಯುಗೇ ನಿಹತೋ ರೋಷಾತ್ಕಾರ್ತವೀರ್ಯೋ ಮಹಾಬಲಃ ॥

ಮಹಾಬಲಿಷ್ಠನಾದ, ಇಂದ್ರೋಪಮನಾಗಿದ್ದ ಕಾರ್ತವೀರ್ಯನು ರೋಷಪರೀತನಾಗಿದ್ದುದರಿಂದಲೇ ಜಮದಗ್ನಿಯ ಮಗನಾದ ಪರಶುರಾಮ ನಿಂದ ಯುದ್ಧದಲ್ಲಿ ಹತನಾದನು.

ತದೇಷ ತಪಸಾಂ ಶತ್ರುಃ ಶ್ರೇಯಸಾಂ ವಿನಿಪಾತಕಃ ।
ನಿಗೃಹೀತೋ ಮಯಾ ರೋಷಃ ಶ್ರುತ್ವೈವಂ ವಚನಂ ತವ ॥೧೮॥

ನಿಶ್ಚಯವಾಗಿಯೂ ಅಂತಹ ಕೋಪವೇ ತಪಸ್ಸುಗಳಿಗೆ ಶತ್ರುಪ್ರಾಯ ವಾಗಿದೆ. ಕಲ್ಯಾಣಕಾರಕವಾದ ಮಾರ್ಗದಿಂದ ಭ್ರಷ್ಟಗೊಳಿಸುವುದಾಗಿದೆ. ನಿನ್ನ ಮಾತನ್ನು ಕೇಳಿದಕೂಡಲೇ ಅಂತಹ ಕೋಪವನ್ನು ನಾನು ನಿಗ್ರಹಿಸಿದ್ದೇನೆ.

ಆತ್ಮಾನಂ ಚ ವಿಶೇಷೇಣ ಪ್ರಶಂಸಾಮ್ಯನಪಾಯಿನಿ ।
ಯಸ್ಯ ಮೇ ತ್ವಂ ವಿಶಾಲಾಕ್ಷಿ ಭಾರ್ಯಾ ಗುಣಸಮನ್ವಿತಾ ॥೧೯॥

ಅನಪಾಯಿನಿಯೇ! (ಸಹಧರ್ಮಿಣಿಯೇ! ಜೊತೆಯಲ್ಲಿರುವವಳೇ!) ವಿಶಾಲಾಕ್ಷಿಯೇ! ಸದ್ಗುಣಸಂಪನ್ನೆಯಾದ ನಿನ್ನನ್ನು ಭಾರ್ಯೆಯನ್ನಾಗಿ ಪಡೆದಿರುವ ನಾನು ನನ್ನನ್ನೇ ವಿಶೇಷವಾಗಿ ಪ್ರಶಂಸೆಮಾಡಿಕೊಳ್ಳುತ್ತೇನೆ.

ಏಷ ತತ್ರೈವ ಗಚ್ಛಾಮಿ ಯತ್ರ ತಿಷ್ಠತ್ಯಸೌ ದ್ವಿಜಃ ।
ಸರ್ವಥಾ ಚೋಕ್ತವಾನ್ವಾಕ್ಯಂ ಸ ಕೃತಾರ್ಥಃ ಪ್ರಯಾಸ್ಯತಿ ॥೨೦॥

ಆ ಬ್ರಾಹ್ಮಣನು ಎಲ್ಲಿರುವನೋ ಅಲ್ಲಿಗೆ ನಾನೇ ಹೋಗುತ್ತೇನೆ. ಅವನು ಹೇಳಿದಂತೆಯೇ ಮಾಡುತ್ತೇನೆ. ಸರ್ವಪ್ರಕಾರದಿಂದಲೂ ಅವನು ಇಲ್ಲಿಂದ ಕೃತಾರ್ಥನಾಗಿಯೇ ಪ್ರಯಾಣಮಾಡುತ್ತಾನೆ.”

ಃ೬೦ನೆಯ ಅಧ್ಯಾಯವು ಮುಗಿಯಿತು.

ಃ೬೧ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣ-ನಾಗರಾಜರ ಸಮಾಗಮ ಮತ್ತು ಸಂಭಾಷಣೆ

ಭೀಷ್ಮನು ಹೇಳುತ್ತಾನೆ :

ಸ ಪನ್ನಗಪತಿಸ್ತತ್ರ ಪ್ರಯಯೌ ಬ್ರಾಹ್ಮಣಂ ಪ್ರತಿ ।
ತಮೇವ ಮನಸಾ ಧ್ಯಾಯನ್ಕಾರ್ಯವತ್ತಾಂ ವಿಚಾರಯನ್ ॥೧॥

“ಯುಧಿಷ್ಠಿರ! ನಾಗರಾಜನು ಪತ್ನಿಯೊಡನೆ ಹೀಗೆ ಹೇಳಿ ಬ್ರಾಹ್ಮಣನು ಯಾವ ಕಾರ್ಯಾರ್ಥವಾಗಿ ಬಂದಿರಬಹುದೆಂಬುದನ್ನೇ ಮನಸ್ಸಿನಲ್ಲಿ ಯೋಚಿಸುತ್ತಾ ಬ್ರಾಹ್ಮಣನಿದ್ದ ಗೋಮತೀನದಿಯ ತೀರಪ್ರದೇಶಕ್ಕೆ ಪ್ರಯಾಣಮಾಡಿದನು. ಸ್ವಭಾವತಃ ಧರ್ಮವತ್ಸಲನಾಗಿದ್ದ, ಬುದ್ಧಿವಂತನಾದ ನಾಗರಾಜನು ಬ್ರಾಹ್ಮಣನ ಬಳಿಗೆ ಹೋಗಿ ಸುಮಧುರವಾದ ಈ ಮಾತನ್ನು ಹೇಳಿದನು :

ಭೋ ಭೋಃ ಕ್ಷಾಮ್ಯಾಭಿಭಾಷೇ ತ್ವಾಂ ನ ರೋಷಂ ಕರ್ತುಮರ್ಹಸಿ ।
ಇಹ ತ್ವಮಭಿಸಮ್ಪ್ರಾಪ್ತಃ ಕಸ್ಯಾರ್ಥೇ ಕಿಂ ಪ್ರಯೋಜನಮ್ ॥೩॥

"ಭೋ ಭೋಃ ಬ್ರಾಹ್ಮಣದೇವನೇ! ನನ್ನ ಅಪರಾಧವನ್ನು ಕ್ಷಮಿಸು. ನನ್ನ ಮೇಲೆ ಕೋಪಗೊಳ್ಳಬೇಡ. ನಿನ್ನನ್ನು ನಾನೀಗ ಪ್ರಶ್ನಿಸುತ್ತಿದ್ದೇನೆ. ನೀನು ಯಾರ ಸಲುವಾಗಿ ಇಲ್ಲಿಗೆ ಆಗಮಿಸಿರುವೆ ಮತ್ತು ಯಾವ ಪ್ರಯೋಜನವನ್ನು ಉದ್ದೇಶಿಸಿ ಬಂದಿರುವೆ?

ಅಭಿಮುಖ್ಯಾದಭಿಕ್ರಮ್ಯ ಸ್ನೇಹಾತ್ಪೃಚ್ಛಾಮಿ ತೇ ದ್ವಿಜ ।
ವಿವಿಕ್ತೇ ಗೋಮತೀತೀರೇ ಕಂ ವಾ ತ್ವಂ ಪರ್ಯುಪಾಸಸೇ ॥೪॥

ದ್ವಿಜಸತ್ತಮ! ನಿನ್ನ ಸಮ್ಮುಖಕ್ಕೆ ಬಂದು ಸ್ನೇಹದ ಕಾರಣದಿಂದ ನಿನ್ನನ್ನು ಪ್ರಶ್ನಿಸುತ್ತಿದ್ದೇನೆ. ನಿರ್ಜನವಾದ ಈ ಗೋಮತೀನದಿಯ ತೀರಪ್ರದೇಶದಲ್ಲಿ ಯಾರನ್ನು ಉಪಾಸನೆಮಾಡುತ್ತಿರುವೆ?"

ಭೀಷ್ಮನು ಹೇಳುತ್ತಾನೆ :

ಧರ್ಮಾರಣ್ಯಂ ಹಿ ಮಾಂ ವಿದ್ಧಿ ನಾಗಂ ದ್ರಷ್ಟುಮಿಹಾಗತಮ್ ।
ಪದ್ಮನಾಭಂ ದ್ವಿಜಶ್ರೇಷ್ಠ ತತ್ರ ಮೇ ಕಾರ್ಯಮಾಹಿತಮ್ ॥೫॥

"ದ್ವಿಜಶ್ರೇಷ್ಠನೇ! ನನ್ನನ್ನು 'ಧರ್ಮಾರಣ್ಯ'–ಎಂಬ ಹೆಸರಿನವನೆಂದು ತಿಳಿ. ಪದ್ಮನಾಭನೆಂಬ ಹೆಸರಿನ ನಾಗರಾಜನನ್ನು ಸಂದರ್ಶಿಸುವ ಸಲುವಾಗಿ ನಾನು ಇಲ್ಲಿಗೆ ಬಂದಿರುತ್ತೇನೆ. ಅವನಲ್ಲಿ ನನಗೆ ಸ್ವಲ್ಪ ಕೆಲಸವಿದೆ.

ತಸ್ಯ ಚಾಹಮಸಾಂನಿಧ್ಯೇ ಶ್ರುತವಾನಸ್ಮಿ ತಂ ಗತಮ್ ।
ಸ್ವಜನಾತ್ತಂ ಪ್ರತೀಕ್ಷಾಮಿ ಪರ್ಜನ್ಯಮಿವ ಕರ್ಷಕಃ ॥೬॥

ನಾಗರಾಜನು ನಾಗಪುರದಲ್ಲಿಲ್ಲವೆಂದೂ–ಬಹಳ ದೂರಕ್ಕೆ ಹೋಗಿರುವನೆಂದೂ ಅವನ ಸ್ವಜನರಿಂದ ನಾನು ಕೇಳಿದೆನು. ಕೃಷಿಕನು ಮಳೆಯನ್ನೇ ಪ್ರತೀಕ್ಷಿಸುವಂತೆ–ನಾನು ಆ ನಾಗರಾಜನ ಆಗಮನವನ್ನೇ ಪ್ರತೀಕ್ಷಿಸುತ್ತಿದ್ದೇನೆ.

ತಸ್ಯ ಚಾಕ್ಲೇಶಕರಣಂ ಸ್ವಸ್ತಿಕಾರಸಮಾಹಿತಮ್ ।
ಆವರ್ತಯಾಮಿ ತದ್ಬ್ರಹ್ಮ ಯೋಗಯುಕ್ತೋ ನಿರಾಮಯಃ ॥೭॥

ನೀರೋಗನೂ ಯೋಗಯುಕ್ತನೂ ಆಗಿರುವ ನಾನು ಆ ನಾಗರಾಜನಿಗೆ ಯಾವ ವಿಧವಾದ ಕ್ಲೇಶವೂ ಉಂಟಾಗದಿರಲೆಂದೂ, ಅವನು ಸಕುಶಲನಾಗಿ ಮನೆಗೆ ಹಿಂದಿರುಗಲೆಂದೂ-ವೇದಪಾರಾಯಣವನ್ನು ಮಾಡುತ್ತಿದ್ದೇನೆ."

ನಾಗರಾಜನು ಹೇಳುತ್ತಾನೆ :

ಅಹೋ ಕಲ್ಯಾಣವೃತ್ತಸ್ತ್ವಂ ಸಾಧುಃ ಸಜ್ಜನವತ್ಸಲಃ ।
ಅವಾಚ್ಯಸ್ತ್ವಂ ಮಹಾಭಾಗ ಪರಂ ಸ್ನೇಹೇನ ಪಶ್ಯಸಿ ॥೮॥

ಮಹಾಭಾಗನೇ! ನಿನ್ನ ಆಚರಣೆಯು ಕಲ್ಯಾಣಮಯವಾಗಿದೆ. ನೀನು ಸತ್ಪುರುಷನು. ಸಜ್ಜನವತ್ಸಲನು. ಯಾವುದೇ ಕಾರಣದಿಂದಲೂ ನೀನು ನಿಂದನೀಯನಲ್ಲ. ನೀನು ಇತರರನ್ನು ಪರಮಸ್ನೇಹದಿಂದ ಕಾಣುವೆ.

ಅಹಂ ಸ ನಾಗೋ ವಿಪ್ರರ್ಷೇ ಯಥಾ ಮಾಂ ವಿನ್ದತೇ ಭವಾನ್ ।
ಆಜ್ಞಾಪಯ ಯಥಾ ಸ್ವೈರಂ ಕಿಂ ಕರೋಮಿ ಪ್ರಿಯಂ ತವ ॥೯॥

ವಿಪ್ರರ್ಷಿಯೇ! ನೀನು ಸಂದರ್ಶಿಸಲು ಪ್ರತೀಕ್ಷಿಸುತ್ತಿರುವ ಪದ್ಮನಾಭ ನಾಗನು ನಾನೇ ಆಗಿದ್ದೇನೆ. ನಿನ್ನ ಇಚ್ಛಾನುಸಾರವಾಗಿ ನೀನು ನನಗೆ ಆಜ್ಞೆಯನ್ನು ಮಾಡು. ನಾನು ನಿನಗೆ ಯಾವ ಪ್ರಿಯವಾದ ಕಾರ್ಯವನ್ನು ಮಾಡಿಕೊಡಲಿ?

ಭವನ್ತಂ ಸ್ವಜನಾದಸ್ಮಿ ಸಮ್ಪ್ರಾಪ್ತಂ ಶ್ರುತವಾನಹಮ್ ।
ಅತಸ್ತ್ವಾಂ ಸ್ವಯಮೇವಾಹಂ ದ್ರಷ್ಟುಮಭ್ಯಾಗತೋ ದ್ವಿಜ ॥೧೦॥

ದ್ವಿಜಶ್ರೇಷ್ಠನೇ! ಸ್ವಜನರ ಮೂಲಕವಾಗಿ (ಪತ್ನಿಯ ಮೂಲಕವಾಗಿ) ನಿನ್ನ ಆಗಮನದ ಸಮಾಚಾರವನ್ನು ಕೇಳಿದೆನು. ಆದುದರಿಂದ ನಾನಾಗಿಯೇ ನಿನ್ನನ್ನು ಸಂದರ್ಶಿಸಲು ಇಲ್ಲಿಗೆ ಆಗಮಿಸಿದ್ದೇನೆ.

ಸಮ್ಪ್ರಾಪ್ತಶ್ಚ ಭವಾನದ್ಯ ಕೃತಾರ್ಥಃ ಪ್ರತಿಯಾಸ್ಯತಿ ।
ವಿಸ್ರಬ್ಧೋ ಮಾಂ ದ್ವಿಜಶ್ರೇಷ್ಠ ವಿಷಯೇ ಯೋಕ್ತುಮರ್ಹಸಿ ॥೧೧॥

ಈಗ ನನ್ನ ಬಳಿಗೆ ಆಗಮಿಸಿರುವ ನೀನು ಕೃತಾರ್ಥನಾಗಿಯೇ ಹಿಂದಿರುಗುವೆ. ದ್ವಿಜಶ್ರೇಷ್ಠನೇ! ಯಾವ ವಿಧವಾದ ಸಂದೇಹವೂ ಇಲ್ಲದೇ ನಂಬಿಕೆಯಿಟ್ಟು ನನ್ನನ್ನು ನಿನ್ನ ಕಾರ್ಯದಲ್ಲಿ ನಿಯೋಜಿಸು.

ವಯಂ ಹಿ ಭವತಾ ಸರ್ವೇ ಗುಣಕ್ರೀತಾ ವಿಶೇಷತಃ ।
ಯಸ್ತ್ವಮಾತ್ಮಹಿತಂ ತ್ಯಕ್ತ್ವಾ ಮಾಮೇವೇಹಾನುರುಧ್ಯಸೇ ॥೧೨॥

ಆತ್ಮಹಿತವನ್ನೂ ಪರಿತ್ಯಜಿಸಿ ನನ್ನ ಕಲ್ಯಾಣವನ್ನೇ ಚಿಂತಿಸುತ್ತಿರುವ ನೀನು ನನ್ನನ್ನೂ ಮತ್ತು ನನ್ನ ಬಂಧು-ಬಳಗದವರನ್ನೂ ನಿನ್ನ ವಿಶಿಷ್ಟವಾದ ಗುಣಗಳಿಂದಲೇ ಕೊಂಡುಕೊಂಡುಬಿಟ್ಟಿರುವೆ.”

ಬ್ರಾಹ್ಮಣನು ಹೇಳುತ್ತಾನೆ :

ಆಗತೋಽಹಂ ಮಹಾಭಾಗ ತವ ದರ್ಶನಲಾಲಸಃ ।
ಕಿಂಚಿದರ್ಥಮನರ್ಥಜ್ಞಃ ಪ್ರಷ್ಟುಕಾಮೋ ಭುಜಙ್ಗಮ ॥೧೩॥

“ಮಹಾಭಾಗನೇ! ನಾಗರಾಜ! ನಾನು ನಿನ್ನನ್ನು ಸಂದರ್ಶಿಸುವ ಲಾಲಸೆಯಿಂದಲೇ ಇಲ್ಲಿಗೆ ಆಗಮಿಸಿರುವೆನು. ನನಗೆ ತಿಳಿಯದೇ ಇರುವ ಒಂದು ವಿಷಯವನ್ನು ತಿಳಿದುಕೊಳ್ಳಲು ನಿನ್ನನ್ನು ಪ್ರಶ್ನಿಸಲು ಬಯಸುತ್ತೇನೆ.

ಅಹಮಾತ್ಮಾನಮಾತ್ಮಸ್ಥೋ ಮಾರ್ಗಮಾಣೋಽತ್ಮನೋ ಗತಿಮ್ ।
ವಾಸಾರ್ಥಿನಂ ಮಹಾಪ್ರಜ್ಞಂ ಚಲಚ್ಚಿತ್ತಮುಪಾಸ್ಮಿ ಹ ॥೧೪॥

ವಿಷಯವ್ಯಾಪಾರಗಳಿಂದ ವಿರಕ್ತನಾಗಿ ಮನಸ್ಸನ್ನು ಆತ್ಮನಲ್ಲಿಯೇ ಸ್ಥಿರೀಕರಿಸಿ ಜೀವಾತ್ಮನ ಪರಮಗತಿಸ್ವರೂಪವಾದ ಪರಬ್ರಹ್ಮವಸ್ತುವನ್ನು ಹುಡುಕುತ್ತಿದ್ದೇನೆ. ಆದರೆ ನನ್ನ ಮನಸ್ಸು ಈ ಸಮಯದಲ್ಲಿ ಇಬ್ಬಗೆಯಾಗಿದೆ. ಚಂಚಲವಾಗಿದೆ. ಮನೆಯಲ್ಲಿಯೇ ಇರಲು ಅದು ಆಸಕ್ತವಾಗಿದೆ. ಮಹಾಪ್ರಜ್ಞೆಯನ್ನು ಹೊಂದಿರುವ ಕಾರಣ ವಿರಕ್ತವಾಗಿಯೂ ಇರಲು ಅದು ಇಚ್ಛಿಸುತ್ತಿದೆ. ಇಂತಹ ಎರಡು ವಿಧವಾದ ಭಾವನೆಗಳಿಂದ ಕೂಡಿರುವ ಮನಸ್ಸನ್ನು ನಾನು ಹೊಂದಿದ್ದೇನೆ.

ಪ್ರಕಾಶಿತಸ್ತ್ವಂ ಸ್ವಗುಣೈರ್ಯಶೋಗರ್ಭಗಭಸ್ತಿಭಿಃ ।
ಶಶಾಙ್ಕಕರಸಂಸ್ಪರ್ಶೈರ್ಹೃದ್ಯೈರಾತ್ಮಪ್ರಕಾಶಿತೈಃ ॥೧೫॥

ಚಂದ್ರನ ಕಿರಣಗಳಂತೆ ಸುಖಸ್ಪರ್ಶಿಗಳಾದ ಮತ್ತು ಸ್ವಯಂಪ್ರಕಾಶ ವನ್ನು ಹೊಂದಿರುವ, ಯಶಸ್ಸನ್ನು ಗರ್ಭದಲ್ಲಿ ಹೊಂದಿರುವ (ಯಶಸ್ಸಿಗೆ ಕಾರಣವಾದ) ಕಿರಣಗಳಿಂದ ಯುಕ್ತವಾದ ನಿನ್ನ ಗುಣಗಳಿಂದ ನೀನು ಅತ್ಯಂತಪ್ರಕಾಶಮಾನನಾಗಿ ಕಾಣುತ್ತಿರುವೆ.

ತಸ್ಯ ಮೇ ಪ್ರಶ್ನಮುತ್ಪನ್ನಂ ಛಿನ್ಧಿ ತ್ವಮನಿಲಾಶನ ।
ಪಶ್ಚಾತ್ಕಾರ್ಯಂ ವದಿಷ್ಯಾಮಿ ಶ್ರೋತುಮರ್ಹತಿ ತದ್ಭವಾನ್ ॥೧೬॥

ವಾಯುಭಕ್ಷನೇ! ಈ ಸಮಯದಲ್ಲಿ ನನ್ನ ಮನಸ್ಸಿನಲ್ಲಿ ಒಂದು

ಪ್ರಶ್ನೆಯು ಉದ್ಭವಿಸಿದೆ. ಈ ನನ್ನ ಪ್ರಶ್ನೆಗೆ ಉತ್ತರಿಸುವುದರ ಮೂಲಕ ನನ್ನ ಸಂದೇಹವನ್ನು ಪರಿಹರಿಸು. ಅನಂತರ ನಾನು ಬಂದ ಕಾರ್ಯವು ಯಾವುದೆಂಬುದನ್ನು ಹೇಳುತ್ತೇನೆ. ಅದನ್ನು ನೀನು ಕೇಳುವ ಕೃಪೆಮಾಡು."

೩೬೧ನೆಯ ಅಧ್ಯಾಯವು ಮುಗಿಯಿತು.

೩೬೨ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣನಿಗೆ ನಾಗರಾಜನಿಂದ ಸೂರ್ಯಮಂಡಲದಲ್ಲಿನ ಆಶ್ಚರ್ಯಕರವಾದ ಘಟನೆಗಳ ವಿವರಣೆ

ಧರ್ಮಜ! ಬ್ರಾಹ್ಮಣನು ಹೇಳುತ್ತಾನೆ :

ವಿವಸ್ವತೋ ಗಚ್ಛತಿ ಪರ್ಯಯೇಣ
ವೋಢುಂ ಭವಾಂಸ್ತಂ ರಥಮೇಕಚಕ್ರಮ್ ।
ಆಶ್ಚರ್ಯಭೂತಂ ಯದಿ ತತ್ರ ಕಿಂಚಿ-
ದ್ದೃಷ್ಟಂ ತ್ವಯಾ ಶಂಸಿತುಮರ್ಹಸಿ ತ್ವಮ್ ॥೧॥

"ನಾಗರಾಜ! ನೀನು ಸೂರ್ಯನ ಆ ಏಕಚಕ್ರರಥವನ್ನು ಧರಿಸಲು ಸರದಿಯ ಪ್ರಕಾರ ಅಲ್ಲಿಗೆ ಹೋಗುವೆ. ಅಲ್ಲೇನಾದರೂ ನೀನು ಯಾವುದಾದರೂ ಆಶ್ಚರ್ಯಕರವಾದ ಸಂಗತಿಯನ್ನು ನೋಡಿದ್ದುದಾದರೆ ಅದನ್ನು ನನಗೂ ಹೇಳುವ ಕೃಪೆಮಾಡು."

ನಾಗನು ಹೇಳುತ್ತಾನೆ :

ಆಶ್ಚರ್ಯಾಣಾಮನೇಕಾನಾಂ ಪ್ರತಿಷ್ಠಾ ಭಗವಾನ್ರವಿಃ ।
ಯತೋ ಭೂತಾಃ ಪ್ರವರ್ತನ್ತೇ ಸರ್ವೇ ತ್ರೈಲೋಕ್ಯಸಮ್ಮತಾಃ ॥೨॥

"ದ್ವಿಜಶ್ರೇಷ್ಠನೇ! ಭಗವಂತನಾದ ಸೂರ್ಯನೇ ಅನೇಕವಿಧವಾದ ಆಶ್ಚರ್ಯಸಂಗತಿಗಳಿಗೆ ಮೂಲಸ್ಥಾನನಾಗಿದ್ದಾನೆ. ಮೂರುಲೋಕಗಳಲ್ಲಿಯೂ ಇರುವ ಎಲ್ಲ ಪ್ರಾಣಿಗಳೂ ಅವನ ಪ್ರೇರಣೆಯಿಂದಲೇ ತಮ್ಮ ಕಾರ್ಯಗಳಲ್ಲಿ ಪ್ರವೃತ್ತವಾಗುತ್ತವೆ.

ಯಸ್ಯ ರಶ್ಮಿಸಹಸ್ರೇಷು ಶಾಖಾಸ್ವಿಹ ವಿಹಙ್ಗಮಾಃ ।
ವಸನ್ತ್ಯಾಶ್ರಿತ್ಯ ಮುನಯಃ ಸಂಸಿದ್ಧಾ ದೇವತೈಃ ಸಹ ॥೩॥

ಪಕ್ಷಿಗಳು ವೃಕ್ಷಗಳ ರೆಂಬೆಗಳಲ್ಲಿ ಆಶ್ರಯವನ್ನು ಹೊಂದಿರುವಂತೆ–ಸಿದ್ಧಿಯನ್ನು ಪಡೆದ ಮುನಿಗಳು ದೇವತೆಗಳೊಡನೆ ಸೂರ್ಯನ ಸಾವಿರಾರು ಕಿರಣಗಳಲ್ಲಿ ಆಶ್ರಯವನ್ನು ಹೊಂದಿ ವಾಸಮಾಡುತ್ತಿದ್ದಾರೆ.

ಯತೋ ವಾಯುರ್ವಿನಿಃಸೃತ್ಯ ಸೂರ್ಯರಶ್ಮ್ಯಾಶ್ರಿತೋ ಮಹಾನ್ ।
ವಿಜೃಮ್ಭತ್ಯಮ್ಬರೇ ತತ್ರ ಕಿಮಾಶ್ಚರ್ಯಮತಃ ಪರಮ್ ॥೪॥

ಮಹಾಬಲಿಷ್ಠನಾದ ವಾಯುವು ಸೂರ್ಯಮಂಡಲದಿಂದಲೇ ಹೊರ ಬಿದ್ದು, ಸೂರ್ಯಕಿರಣಗಳನ್ನೇ ಆಶ್ರಯಿಸಿ ಆಕಾಶದಲ್ಲಿ ವಿಜೃಂಭಿಸುತ್ತಾನೆ. ಅದಕ್ಕಿಂತಲೂ ಆಶ್ಚರ್ಯಕರವಾದುದು ಬೇರೆ ಯಾವುದಿದೆ?

ವಿಭಜ್ಯ ತಂ ತು ವಿಪ್ರರ್ಷೇ ಪ್ರಜಾನಾಂ ಹಿತಕಾಮ್ಯಯಾ ।
ತೋಯಂ ಸೃಜತಿ ವರ್ಷಾಸು ಕಿಮಾಶ್ಚರ್ಯಮತಃ ಪರಮ್ ॥೫॥

ಬ್ರಹ್ಮರ್ಷಿಯೇ! ಸೂರ್ಯದೇವನು ಪ್ರಜೆಗಳಿಗೆ ಹಿತವನ್ನುಂಟು ಮಾಡುವ ಇಚ್ಛೆಯಿಂದ ಆ ವಾಯುವನ್ನೇ ಅನೇಕಭಾಗಗಳನ್ನಾಗಿ ವಿಂಗಡಿಸಿ ವರ್ಷರ್ತುಗಳಲ್ಲಿ ನೀರನ್ನು ಸುರಿಸುತ್ತಾನೆ. ಅದಕ್ಕಿಂತಲೂ ಆಶ್ಚರ್ಯ ವಾದುದು ಬೇರೆ ಯಾವುದಿದೆ?

ಯಸ್ಯ ಮಣ್ಡಲಮಧ್ಯಸ್ಥೋ ಮಹಾತ್ಮಾ ಪರಮತ್ವಿಷಾ ।
ದೀಪ್ತಃ ಸಮೀಕ್ಷತೇ ಲೋಕಾನ್ಕಿಮಾಶ್ಚರ್ಯಮತಃ ಪರಮ್ ॥೬॥

ಸೂರ್ಯಮಂಡಲದ ಮಧ್ಯದಲ್ಲಿರುವ ಮಹಾತ್ಮನಾದ ಶ್ರೀಮನ್ನಾರಾ ಯಣನು–ತನ್ನ ಶ್ರೇಷ್ಠವಾದ ಪ್ರಭೆಯಿಂದ ಪ್ರಕಾಶಿಸುತ್ತಾ ಸಮಸ್ತ ಲೋಕಗಳನ್ನೂ ಚೆನ್ನಾಗಿ ನೋಡುತ್ತಿರುತ್ತಾನೆ. ಅದಕ್ಕಿಂತಲೂ ಆಶ್ಚರ್ಯ ವಾದುದು ಬೇರೆ ಯಾವುದಿದೆ?

ಶುಕ್ರೋ ನಾಮಾಸಿತಃ ಪಾದೋ ಯಶ್ಚ ವಾರಿಧರೋಽಮ್ಬರೇ ।
ತೋಯಂ ಸೃಜತಿ ವರ್ಷಾಸು ಕಿಮಾಶ್ಚರ್ಯಮತಃ ಪರಮ್ ॥೭॥

ಶುಕ್ರ ಎಂಬ ಹೆಸರಿನ ಕಾಳಮೇಘವು ಆಕಾಶದಲ್ಲಿ ವರ್ಷಾಕಾಲದಲ್ಲಿ

ನೀರನ್ನು ಸೃಷ್ಟಿಸುತ್ತದೆ. ಆ ಮೇಘವು ಸೂರ್ಯನ ಸ್ವರೂಪವೇ ಆಗಿದೆ. ಅದಕ್ಕಿಂತಲೂ ಆಶ್ಚರ್ಯವಾದುದು ಬೇರೆ ಯಾವುದಿದೆ?

ಯೋಽಷ್ಟಮಾಸಾಂಸ್ತು ಶುಚಿನಾ ಕಿರಣೇನೋಕ್ಷಿತಂ ಪಯಃ ।
ಪ್ರತ್ಯಾದತ್ತೇ ಪುನಃ ಕಾಲೇ ಕಿಮಾಶ್ಚರ್ಯಮತಃ ಪರಮ್ ॥೮॥

ಸೂರ್ಯದೇವನು ವರ್ಷಾಕಾಲದಲ್ಲಿ ಸುರಿಸಿದ ನೀರನ್ನು ಪುನಃ ಎಂಟು ತಿಂಗಳ ಪರ್ಯಂತವಾಗಿ ಶುದ್ಧವಾದ ಕಿರಣಗಳಿಂದ ಸಂಗ್ರಹಿಸುತ್ತಾನೆ. ಅದಕ್ಕಿಂತಲೂ ಆಶ್ಚರ್ಯವಾದುದು ಬೇರೆ ಯಾವುದಿದೆ?

ಯಸ್ಯ ತೇಜೋವಿಶೇಷೇಷು ಸ್ವಯಮಾತ್ಮಾ ಪ್ರತಿಷ್ಠಿತಃ ।
ಯತೋ ಬೀಜಂ ಮಹೀ ಚೇಯಂ ಧಾರ್ಯತೇ ಸಚರಾಚರಾ ॥೯॥

ಯತ್ರ ದೇವೋ ಮಹಾಬಾಹುಃ ಶಾಶ್ವತಃ ಪುರುಷೋತ್ತಮಃ ।
ಅನಾದಿನಿಧನೋ ವಿಪ್ರ ಕಿಮಾಶ್ಚರ್ಯಮತಃ ಪರಮ್ ॥೧೦॥

ಸೂರ್ಯದೇವನ ವಿಶೇಷವಾದ ತೇಜಸ್ಸುಗಳಲ್ಲಿ ಸಾಕ್ಷಾತ್ ಪರಮಾತ್ಮನೇ ಪ್ರತಿಷ್ಠಿತನಾಗಿದ್ದಾನೆ. ಸೂರ್ಯನಿಂದಲೇ ನಾನಾಪ್ರಕಾರವಾದ ಬೀಜಗಳು ಹುಟ್ಟುತ್ತವೆ. ಸೂರ್ಯನೇ ಚರಾಚರಪ್ರಾಣಿಗಳಿಂದ ಯುಕ್ತವಾದ ಭೂಮಂಡಲವನ್ನೂ ಧರಿಸಿದ್ದಾನೆ. ಮಹಾಬಾಹುವಾದ, ಶಾಶ್ವತನಾದ, ಆದ್ಯಂತರಹಿತನಾದ ಪುರುಷೋತ್ತಮನು ಸೂರ್ಯನ ಮಂಡಲದಲ್ಲಿಯೇ ವಿರಾಜಮಾನನಾಗಿದ್ದಾನೆ. ವಿಪ್ರನೇ! ಅದಕ್ಕಿಂತಲೂ ಆಶ್ಚರ್ಯಕರವಾದುದು ಬೇರೆ ಯಾವುದಿದೆ?

ಆಶ್ಚರ್ಯಾಣಾಮಿವಾಶ್ಚರ್ಯಮಿದಮೇಕಂ ತು ಮೇ ಶೃಣು ।
ವಿಮಲೇ ಯನ್ಮಯಾ ದೃಷ್ಟಮಮ್ಬರೇ ಸೂರ್ಯಸಂಶ್ರಯಾತ್ ॥೧೧॥

ಸೂರ್ಯನ ಆಶ್ರಯದಿಂದಾಗಿ ನಾನು ವಿಮಲವಾದ ಆಕಾಶದಲ್ಲಿ ನೋಡಿದ ಆಶ್ಚರ್ಯವಾದ ಸಂಗತಿಗಳಲ್ಲಿಯೇ ಆಶ್ಚರ್ಯದಂತಿರುವ ಈ ಒಂದು ವಿಷಯವನ್ನು ಹೇಳುವೆನು ; ಕೇಳು.

ಪುರಾ ಮಧ್ಯಾಹ್ನಸಮಯೇ ಲೋಕಾಂಸ್ತಪತಿ ಭಾಸ್ಕರೇ ।
ಪ್ರತ್ಯಾದಿತ್ಯಪ್ರತೀಕಾಶಃ ಸರ್ವತಃ ಸಮದೃಶ್ಯತ ॥೧೨॥

ಹಿಂದೊಮ್ಮೆ ಸೂರ್ಯನು ಮಧ್ಯಾಹ್ನದ ಸಮಯದಲ್ಲಿ ಲೋಕಗಳನ್ನು ತನ್ನ ಪ್ರಖರವಾದ ಕಿರಣಗಳಿಂದ ಪ್ರಕಾಶಗೊಳಿಸುತ್ತಿದ್ದಾಗ–ಅದೇ ಆಕಾಶದಲ್ಲಿಯೇ ಮತ್ತೊಬ್ಬ ಸೂರ್ಯನಂತೆಯೇ ಪ್ರಕಾಶಿಸುತ್ತಿದ್ದ ಪುರುಷನು ಎಲ್ಲ ಕಡೆಗಳಲ್ಲಿಯೂ ಕಾಣಿಸತೊಡಗಿದನು.

ಸ ಲೋಕಾಂಸ್ತೇಜಸಾ ಸರ್ವಾನ್ಸ್ವಭಾಸಾ ನಿರ್ವಿಭಾಸಯನ್ ।
ಆದಿತ್ಯಾಭಿಮುಖೋಽಭ್ಯೇತಿ ಗಗನಂ ಪಾಟಯನ್ನಿವ ॥೧೩॥

ಅವನು ತನ್ನ ತೇಜಸ್ಸಿನಿಂದ ಎಲ್ಲ ಲೋಕಗಳನ್ನೂ ಪ್ರಕಾಶಗೊಳಿಸುತ್ತಾ–ಆಕಾಶವನ್ನೇ ಸೀಳಿಬಿಡುವನೋ–ಎಂಬಂತೆ ವೇಗವಾಗಿ ಸೂರ್ಯನಿಗೆ ಅಭಿಮುಖವಾಗಿ ಬಂದನು.

ಹುತಾಹುತಿರಿವ ಜ್ಯೋತಿರ್ವ್ಯಾಪ್ಯ ತೇಜೋಮರೀಚಿಭಿಃ ।
ಅನಿರ್ದೇಶ್ಯೇನ ರೂಪೇಣ ದ್ವಿತೀಯ ಇವ ಭಾಸ್ಕರಃ ॥೧೪॥

ಆಜ್ಯಾಹುತಿಯಿಂದ ಹುತಮಾಡಲ್ಪಟ್ಟ ಪ್ರಜ್ವಲಿಸುವ ಅಗ್ನಿಯಂತೆ–ತೇಜೋಮಯವಾದ ಕಿರಣಗಳಿಂದ ಸಮಸ್ತಜ್ಯೋತಿರ್ಮಂಡಲವನ್ನೂ ವ್ಯಾಪಿಸಿ, ಅನಿರ್ವಚನೀಯವಾದ ರೂಪದಿಂದ ಎರಡನೆಯ ಸೂರ್ಯನಂತೆಯೇ ಆ ಮಹಾಪುರುಷನು ಕಾಣುತ್ತಿದ್ದನು.

ತಸ್ಯಾಭಿಗಮನಪ್ರಾಪ್ತೌ ಹಸ್ತೌ ದತ್ತೌ ವಿವಸ್ವತಾ ।
ತೇನಾಪಿ ದಕ್ಷಿಣೋ ಹಸ್ತೋ ದತ್ತಃ ಪ್ರತ್ಯರ್ಚಿತಾರ್ಥಿನಾ ॥೧೫॥

ಆ ಮಹಾಪುರುಷನು ತನ್ನ ಸಮೀಪಕ್ಕೆ ಬರಲಾಗಿ ಸೂರ್ಯನು ತನ್ನೆರಡು ಕೈಗಳನ್ನೂ ಮುಂದಕ್ಕೆ ಚಾಚಿ ಅವನನ್ನು ಸ್ವಾಗತಿಸಿದನು. ಆ ಮಹಾಪುರುಷನೂ ಸೂರ್ಯನನ್ನು ಪ್ರತಿಸಮ್ಮಾನಿಸುವ ಸಲುವಾಗಿ ತನ್ನ ಬಲಗೈಯನ್ನು ಮುಂದಕ್ಕೆ ಚಾಚಿದನು.

ತತೋ ಭಿತ್ತ್ವೈವ ಗಗನಂ ಪ್ರವಿಷ್ಟೋ ರಶ್ಮಿಮಣ್ಡಲಮ್ ।
ಏಕೀಭೂತಂ ಚ ತತ್ತೇಜಃ ಕ್ಷಣೇನಾದಿತ್ಯತಾಂ ಗತಮ್ ॥೧೬॥

ಅನಂತರ ಆ ಮಹಾಪುರುಷನು ಆಕಾಶವನ್ನು ಭೇದಿಸಿಕೊಂಡೇ ಸೂರ್ಯಮಂಡಲವನ್ನು ಪ್ರವೇಶಿಸಿದನು. ಕ್ಷಣಮಾತ್ರದಲ್ಲಿ ಆ ಮಹಾ ಪುರುಷನ ತೇಜಸ್ಸು ಸೂರ್ಯನ ತೇಜಸ್ಸಿನೊಂದಿಗೆ ಏಕೀಭೂತವಾಗಿ ಆದಿತ್ಯತ್ವವನ್ನೇ ಹೊಂದಿಬಿಟ್ಟಿತು.

ತತ್ರ ನಃ ಸಂಶಯೋ ಜಾತಸ್ತಯೋಸ್ತೇಜಃಸಮಾಗಮೇ ।
ಅನಯೋಃ ಕೋ ಭವೇತ್ಸೂರ್ಯೋ ರಥಸ್ಥೋ
ಯೋಽಯಮಾಗತಃ ॥೧೭॥

ಆ ಎರಡು ಮಹಾತೇಜಸ್ಸುಗಳೂ ಒಂದರಲ್ಲಿ ಮತ್ತೊಂದು ಸೇರಿ ಕೊಂಡಾಗ –ಆ ಇಬ್ಬರಲ್ಲಿ ನಿಜವಾದ ಸೂರ್ಯನು ಯಾರೆಂಬ ವಿಷಯವಾಗಿ ನಮ್ಮಲ್ಲಿಯೇ ಸಂಶಯವುಂಟಾಯಿತು. ರಥದಲ್ಲಿ ಕುಳಿತಿರುವವನು ನಿಜವಾದ ಸೂರ್ಯನೇ ಅಥವಾ ಅವನಿಗೆ ಅಭಿಮುಖವಾಗಿ ಬಂದಿರುವವನು ನಿಜವಾದ ಸೂರ್ಯನೇ?–ಎಂದು ನಾವೆಲ್ಲರೂ ಸಂದೇಹಿಸಿದೆವು.

ತೇ ವಯಂ ಜಾತಸಂದೇಹಾಃ ಪರ್ಯಪೃಚ್ಛಾಮಹೇ ರವಿಮ್ ।
ಕ ಏಷ ದಿವಮಾಕ್ರಮ್ಯ ಗತಃ ಸೂರ್ಯ ಇವಾಪರಃ ॥೧೮॥

ಸಂದೇಹಗ್ರಸ್ತರಾಗಿದ್ದ ನಾವು–"ಭಗವನ್! ಆಕಾಶವನ್ನೇ ತನ್ನ ತೇಜಸ್ಸಿನಿಂದ ಆಕ್ರಮಿಸಿ ಇಲ್ಲಿಗೆ ಆಗಮಿಸಿದ್ದ, ಮತ್ತೊಬ್ಬ ಸೂರ್ಯನಂತೆಯೇ ಕಾಣುತ್ತಿದ್ದ ಅವನು ಯಾರು?"–ಎಂದು ರಥಸ್ಥನಾಗಿದ್ದ ಸೂರ್ಯನನ್ನೇ ಪ್ರಶ್ನಿಸಿದೆವು."

ಇ೬೨ನೆಯ ಅಧ್ಯಾಯವು ಮುಗಿಯಿತು.

ಇ೬ಇನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಉಂಛವೃತ್ತಿಯಿಂದಲೇ ಸಿದ್ಧಿಯನ್ನು ಪಡೆದ ಪುರುಷನಿಗೆ ಲಭಿಸಿದ ಗತಿಯ ವರ್ಣನೆ

ಸೂರ್ಯನು ಹೇಳುತ್ತಾನೆ : ವಿಪ್ರೋತ್ತಮನೇ!

ನೈಷ ದೇವೋಽನಿಲಸಖೋ ನಾಸುರೋ ನ ಚ ಪನ್ನಗಃ ।
ಉಞ್ಛವೃತ್ತಿವ್ರತೇ ಸಿದ್ಧೋ ಮುನಿರೇಷ ದಿವಂ ಗತಃ ॥೧॥

“ನನ್ನೆದುರಾಗಿ ಬಂದು ಸೂರ್ಯಮಂಡಲದಲ್ಲಿ ಸೇರಿಕೊಂಡವನು ವಾಯುಸಖನಾದ ಅಗ್ನಿಯೂ ಅಲ್ಲ ; ಅಸುರನೂ ಅಲ್ಲ. ನಾಗನೂ ಅಲ್ಲ. ಉಂಛವೃತ್ತಿಯ ವ್ರತದಲ್ಲಿ ಸಿದ್ಧಿಯನ್ನು ಪಡೆದ ಈ ಮುನಿಯು ನನ್ನ ಮೂಲಕವಾಗಿ ಸ್ವರ್ಗಲೋಕಕ್ಕೆ ಹೋದನು.

ಏಷ ಮೂಲಫಲಾಹಾರಃ ಶೀರ್ಣಪರ್ಣಾಶನಸ್ತಥಾ ।
ಅಬ್ಭಕ್ಷೋ ವಾಯುಭಕ್ಷಶ್ಚ ಆಸೀದ್ವಿಪ್ರಃ ಸಮಾಹಿತಃ ॥೨॥

ಈ ಬ್ರಾಹ್ಮಣನು ಕಂದ-ಮೂಲ-ಫಲಗಳನ್ನೇ ಆಹಾರವನ್ನಾಗಿ ತಿನ್ನುತ್ತಿದ್ದನು. ಒಣಗಿದ ಎಲೆಗಳನ್ನು ತಿನ್ನುತ್ತಿದ್ದನು. ಅನೇಕದಿವಸಗಳವರೆಗೆ ನೀರನ್ನೇ ಕುಡಿದುಕೊಂಡು ಇದ್ದುಬಿಡುತ್ತಿದ್ದನು. ವಾಯುಭಕ್ಷನಾಗಿಯೂ ಇರುತ್ತಾ ಏಕಾಗ್ರಚಿತ್ತನಾಗಿ ಧ್ಯಾನದಲ್ಲಿಯೇ ನಿಮಗ್ನನಾಗಿರುತ್ತಿದ್ದನು.

ಭವಶ್ಚಾನೇನ ವಿಪ್ರೇಣ ಸಂಹಿತಾಭಿರಭಿಷ್ಟುತಃ ।
ಸ್ವರ್ಗದ್ವಾರೇ ಕೃತೋದ್ಯೋಗೋ ಯೇನಾಸೌ ತ್ರಿದಿವಂ ಗತಃ ॥೩॥

ಶ್ರೇಷ್ಠನಾದ ಈ ಬ್ರಾಹ್ಮಣನು ಸಂಹಿತೆಯ ಮಂತ್ರಗಳ ಮೂಲಕವಾಗಿ ಪೂಜ್ಯನಾದ ಶಂಕರನನ್ನು ಸ್ತೋತ್ರಮಾಡಿದನು. ಸ್ವರ್ಗಲೋಕವನ್ನು ಪಡೆಯಲು ಸತತವಾಗಿ ಪ್ರಯತ್ನಿಸಿ ಈಶ್ವರನ ಅನುಗ್ರಹದಿಂದ ಸ್ವರ್ಗಕ್ಕೆ ಹೋದನು.

ಅಸಙ್ಗತಿರನಾಕಾಂಕ್ಷೀ ನಿತ್ಯಮುಞ್ಛಶಿಲಾಶನಃ ।
ಸರ್ವಭೂತಹಿತೇ ಯುಕ್ತ ಏಷ ವಿಪ್ರೋ ಭುಜಙ್ಗಮ ॥೪॥

ನಾಗರಾಜನೇ! ಈ ಬ್ರಾಹ್ಮಣನು ಅಸಂಗನಾಗಿದ್ದನು. ಲೌಕಿಕವಾದ ಕಾಮನೆಗಳನ್ನು ಸಂಪೂರ್ಣವಾಗಿ ತ್ಯಜಿಸಿದ್ದನು. ಪ್ರತಿನಿತ್ಯವೂ ಉಂಛ-ಶಿಲವೃತ್ತಿಯಿಂದ* ಪ್ರಾಪ್ತವಾದ ಅನ್ನದಿಂದಲೇ ಜೀವನವನ್ನು ನಿರ್ವಹಿಸುತ್ತಿದ್ದನು. ಸಮಸ್ತಪ್ರಾಣಿಗಳ ಹಿತದಲ್ಲಿಯೂ ನಿರತನಾಗಿದ್ದನು.

---

*ಉಞ್ಛಶಿಲಂ : ಗದ್ದೆಯಿಂದ ಯಜಮಾನನು ಧಾನ್ಯವನ್ನು ತೆಗೆದುಕೊಂಡನಂತರ ಕೆಳಗೆ ಬಿದ್ದಿರುವ ಕಾಳುಗಳನ್ನು ಆರಿಸಿಕೊಳ್ಳುವುದು ಉಞ್ಛಃ ಕಣಶ ಆದಾನಂ ಕಣಿಶಾದ್ಯರ್ಜನಂ ಶಿಲಮ್ – ಒಂದೊಂದು ಕಾಳನ್ನೇ ಆರಿಸಿಕೊಳ್ಳುವುದಕ್ಕೆ ಉಂಛವೆಂದೂ–ತೆನೆಗಳ ರೂಪದಲ್ಲಿ ಸಂಗ್ರಹಿಸುವುದಕ್ಕೆ ಶಿಲವೆಂದೂ ಹೆಸರು.

ನ ಹಿ ದೇವಾ ನ ಗನ್ಧರ್ವಾ ನಾಸುರಾ ನ ಚ ಪನ್ನಗಾಃ ।
ಪ್ರಭವನ್ತೀಹ ಭೂತಾನಾಂ ಪ್ರಾಪ್ತಾನಾಮುತ್ತಮಾಂ ಗತಿಮ್ ॥೫॥

ಇಂತಹ ಉಂಛವೃತ್ತಿವ್ರತಧಾರಿಗಳು ಪಡೆಯುವ ಉತ್ತಮಗತಿಯನ್ನು ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರರಾಗಲೀ, ಪನ್ನಗರಾಗಲೀ ಪಡದುಕೊಳ್ಳಲಾರರು.”

ನಾಗರಾಜನು ಬ್ರಾಹ್ಮಣನಿಗೆ ಹೇಳುತ್ತಾನೆ :

ಏತದೇವಂವಿಧಂ ದೃಷ್ಟಮಾಶ್ಚರ್ಯಂ ತತ್ರ ಮೇ ದ್ವಿಜ ।
ಸಂಸಿದ್ಧೋ ಮಾನುಷಃ ಕಾಮಂ ಯೋಽಸೌ ಸಿದ್ಧಗತಿಂ ಗತಃ ।
ಸೂರ್ಯೇಣ ಸಹಿತೋ ಬ್ರಹ್ಮನ್ಪೃಥಿವೀಂ ಪರಿವರ್ತತೇ ॥೬॥

“ವಿಪ್ರಶ್ರೇಷ್ಠನೇ! ಸೂರ್ಯಮಂಡಲದಲ್ಲಿ ನಾನು ಇಂತಹ ಆಶ್ಚರ್ಯಕರವಾದ ಘಟನೆಯನ್ನು ನೋಡಿದೆನು. ಉಂಛವೃತ್ತಿವ್ರತದಲ್ಲಿ ಸಿದ್ಧಿಯನ್ನು ಪಡೆದ ಆ ಮನುಷ್ಯನು ಸಿದ್ಧರ ಗತಿಯನ್ನು ಹೊಂದಿದವನಾಗಿ ಸೂರ್ಯನೊಡನೆ ಸೇರಿಕೊಂಡು ತನ್ನ ಇಚ್ಛಾನುಸಾರವಾಗಿ ಭೂಮಿಯನ್ನು ಸುತ್ತುತ್ತಿದ್ದಾನೆ.”

೩೬೩ನೆಯ ಅಧ್ಯಾಯವು ಮುಗಿಯಿತು.

೩೬೪ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣನು ಉಂಛವೃತ್ತಿಯಿಂದ ಜೀವಿಸುವುದಾಗಿ ನಿಶ್ಚಯಿಸಿ ಮನೆಗೆ ಹಿಂದಿರುಗಲು ನಾಗರಾಜನ ಅನುಮತಿಯನ್ನು ಕೇಳಿದುದು

ಬ್ರಾಹ್ಮಣನು ಹೇಳುತ್ತಾನೆ :

ಆಶ್ಚರ್ಯಂ ನಾತ್ರ ಸಂದೇಹಃ ಸುಪ್ರೀತೋಽಸ್ಮಿ ಭುಜಙ್ಗಮ ।
ಅನ್ವರ್ಥೋಪಗತೈರ್ವಾಕ್ಯೈಃ ಪನ್ಥಾನಂ ಚಾಸ್ಮಿ ದರ್ಶಿತಃ ॥೧॥

“ನಾಗರಾಜನೇ! ನೀನು ಹೇಳಿದುದೆಲ್ಲವೂ ಆಶ್ಚರ್ಯಕರವಾದ

ವೃತ್ತಾಂತವೆಂಬುದರಲ್ಲಿ ಸಂಶಯವೇ ಇಲ್ಲ. ಈ ನಿನ್ನ ಮಾತಿನಿಂದ ನಾನು ಸುಪ್ರೀತನಾಗಿದ್ದೇನೆ. ನನ್ನ ಮನಸ್ಸಿನಲ್ಲಿ ಯಾವ ಅಭಿಲಾಷೆಯಿದ್ದಿತೋ ಅದಕ್ಕೆ ಅನುಕೂಲಕರವಾದ ಮಾತನ್ನೇ ಹೇಳಿ ನನಗೆ ದಾರಿಯನ್ನು ತೋರಿರುವೆ.

ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸಾಧೋ ಭುಜಗಸತ್ತಮ ।
ಸ್ಮರಣೀಯೋಽಸ್ಮಿ ಭವತಾ ಸಮ್ಪ್ರೇಷಣನಿಯೋಜನೈಃ ॥೨॥

ಭುಜಂಗಮನೇ! ನಿನಗೆ ಮಂಗಳವಾಗಲಿ. ನಾನಿನ್ನು ಹೋಗಿ ಬರುತ್ತೇನೆ. ನೀನು ನನ್ನನ್ನು ಎಲ್ಲಿಗಾದರೂ ಕಳುಹಿಸಬೇಕಾಗಿದ್ದರೆ ಅಥವಾ ಯಾವುದಾದರೂ ಕಾರ್ಯವನ್ನು ನನ್ನಿಂದ ಮಾಡಿಸಿಕೊಳ್ಳಬೇಕಾಗಿದ್ದರೆ ನನ್ನನ್ನು ಖಂಡಿತವಾಗಿಯೂ ಸ್ಮರಿಸಬೇಕು. (ನೀನು ಸ್ಮರಿಸಿದೊಡನೆಯೇ ನಾನು ನಿನ್ನ ಬಳಿಗೆ ಬರುತ್ತೇನೆ.)"

ನಾಗರಾಜನು ಹೇಳುತ್ತಾನೆ :

ಅನುಕ್ತ್ವಾ ಹೃದ್ಗತಂ ಕಾರ್ಯಂ ಕ್ವೇದಾನೀಂ ಪ್ರಸ್ಥಿತೋ ಭವಾನ್ ।
ಉಚ್ಯತಾಂ ದ್ವಿಜ ಯತ್ಕಾರ್ಯಂ ಯದರ್ಥಂ ತ್ವಮಿಗಾಹತಃ ॥೩॥

"ವಿಪ್ರಶ್ರೇಷ್ಠನೇ! ನಿನ್ನ ಮನಸ್ಸಿನಲ್ಲಿರುವ ಕಾರ್ಯವನ್ನು ಹೇಳದೆಯೇ ಈಗ ನೀನು ಎಲ್ಲಿಗೆ ಹೋಗುತ್ತಿರುವೆ? ನಿನಗೆ ಆಗಬೇಕಾಗಿರುವ ಕಾರ್ಯವು ಯಾವುದೆಂಬುದನ್ನೂ ಯಾವ ಪ್ರಯೋಜನಕ್ಕಾಗಿ ನೀನು ಇಲ್ಲಿಗೆ ಆಗಮಿಸಿರುವೆಯೆಂಬುದನ್ನೂ ಹೇಳು.

ಉಕ್ತಾನುಕ್ತೇ ಕೃತೇ ಕಾರ್ಯೇ ಮಾಮಾಮನ್ತ್ರ್ಯ ದ್ವಿಜರ್ಷಭ ।
ಮಯಾ ಪ್ರತ್ಯಭ್ಯನುಜ್ಞಾತಸ್ತತೋ ಯಾಸ್ಯಸಿ ಸುವ್ರತ ॥೪॥

ಸುವ್ರತನೇ! ನೀನು ನಿನ್ನ ಮನೋವಾಂಛಿತವನ್ನು ಹೇಳು ಅಥವಾ ಹೇಳದೆಯೇ ಇರು. ನೀನು ಬಂದಿರುವ ಕಾರ್ಯವು ಮುಗಿದನಂತರ ನನ್ನನ್ನು ಕೇಳಿ ನನ್ನ ಅನುಮತಿಯನ್ನು ಪಡೆದನಂತರವೇ ನೀನು ಇಲ್ಲಿಂದ ಮುಂದೆ ಪ್ರಯಾಣಮಾಡಬೇಕು.

ನ ಹಿ ಮಾಂ ಕೇವಲಂ ದೃಷ್ಟ್ವಾ ತ್ಯಕ್ತ್ವಾ ಪ್ರಣಯವಾನಿಹ ।
ಗನ್ತುಮರ್ಹಸಿ ವಿಪ್ರರ್ಷೇ ವೃಕ್ಷಮೂಲಗತೋ ಯಥಾ ॥೫॥

ವಿಪ್ರರ್ಷಿಯೇ! ನನ್ನ ಮೇಲೆ ಅಪಾರವಾದ ಪ್ರೇಮವನ್ನು ಹೊಂದಿರುವ ನೀನು–ಮರದ ಬುಡದಲ್ಲಿಯೇ ಕುಳಿತು ಹೊರಟುಹೋಗುವ ದಾರಿ ಹೋಕನಂತೆ–ನನ್ನನ್ನು ಸುಮ್ಮನೆ ಸಂದರ್ಶಿಸಿ ಹೊರಟುಹೋಗುವುದು ಉಚಿತವಲ್ಲ.

ತ್ವಯಿ ಚಾಹಂ ದ್ವಿಜಶ್ರೇಷ್ಠ ಭವಾನ್ಮಯಿ ನ ಸಂಶಯಃ ।
ಲೋಕೋಽಯಂ ಭವತಃ ಸರ್ವಃ ಕಾ ಚಿನ್ತಾ ಮಯಿ ತೇಽನಘ ॥

ದ್ವಿಜಶ್ರೇಷ್ಠನೇ! ಅನಘನೇ! ನೀನು ನನ್ನಲ್ಲಿರುವೆ. ನಾನು ನಿನ್ನಲ್ಲಿಯೂ ಇದ್ದೇನೆ. ಇದರಲ್ಲಿ ಸಂಶಯವೇ ಇಲ್ಲ. ಈ ಲೋಕವೆಲ್ಲವೂ ನಿನ್ನದೇ ಆಗಿದೆ. ನನ್ನ ಮನೆಯಲ್ಲಿಯೇ ವಾಸಮಾಡಿಕೊಂಡಿರಲು ನಿನಗೆ ಯಾವ ಚಿಂತೆಯಿದೆ? (ನಿಶ್ಚಿಂತನಾಗಿ ನೀನು ನನ್ನ ಮನೆಯಲ್ಲಿಯೇ ಇದ್ದುಕೊಂಡು ನಿನ್ನ ಮನಸ್ಸಿನ ಆಶಯವನ್ನು ಸಾಧಿಸಿಕೊಳ್ಳಬಹುದಾಗಿದೆ.)"

ಬ್ರಾಹ್ಮಣನು ಹೇಳುತ್ತಾನೆ :

ಏವಮೇತನ್ಮಹಾಪ್ರಾಜ್ಞ ವಿದಿತಾತ್ಮನ್ಭುಜಙ್ಗಮ ।
ನಾತಿಕ್ರಾನ್ತಾಸ್ತ್ವಯಾ ದೇವಾಃ ಸರ್ವಥೈವ ಯಥಾತಥಮ್ ॥೭॥

"ಮಹಾಪ್ರಾಜ್ಞನೇ! ಆತ್ಮಜ್ಞಾನಿಯೇ! ಸರ್ಪರಾಜನೇ! ನೀನು ಹೇಳಿದಂತೆಯೇ ಆಗಲಿ. ದೇವತೆಗಳೂ ನಿನ್ನನ್ನು ಮೀರಲಾರರು. ಈ ಮಾತು ಸರ್ವಥಾ ಯಥಾರ್ಹವಾದುದು.

ಸ ಏವ ತ್ವಂ ಸ ಏವಾಹಂ ಯೋಽಹಂ ಸ ತು ಭವಾನಪಿ ।
ಅಹಂ ಭವಾಂಶ್ಚ ಭೂತಾನಿ ಸರ್ವೇ ಯತ್ರ ಗತಾಃ ಸದಾ ॥೮॥

ನೀನು ಸೂರ್ಯಮಂಡಲದಲ್ಲಿ ಪ್ರತಿಷ್ಠಿತನಾಗಿರುವ ಯಾವ ಶ್ರೀಮನ್ನಾರಾಯಣನ ವಿಷಯವನ್ನು ಹೇಳಿದೆಯೋ ಮತ್ತು ನಾನು, ನೀನು ಮತ್ತು ಸರ್ವಪ್ರಾಣಿಗಳೂ ಸಮಸ್ತವೂ ಸರ್ವದಾ ಎಲ್ಲಿಗೆ ಹೋಗಿ ಸೇರುತ್ತಿರುತ್ತವೆಯೋ–ಅಂತಹ ಶ್ರೀಮನ್ನಾರಾಯಣನೇ ನೀನಾಗಿರುವೆ ನಾನೂ

ಅವನೇ ಆಗಿದ್ದೇನೆ. ನಾನು ಯಾವನ ಸ್ವರೂಪವಾಗಿರುವೆನೋ–ನೀನೂ ಅವನ ಸ್ವರೂಪವೇ ಆಗಿರುವೆ.

ಆಸೀತ್ತು ಮೇ ಭೋಗಪತೇ ಸಂಶಯಃ ಪುಣ್ಯಸಂಚಯೇ ।
ಸೋಽಹಮುಞ್ಛವ್ರತಂ ಸಾಧೋ ಚರಿಷ್ಯಾಮ್ಯರ್ಥಸಾಧನಮ್ ॥೧೦॥

ಭುಜಂಗಮನೇ! ನನಗೆ ಪುಣ್ಯಸಂಗ್ರಹದ ವಿಷಯದಲ್ಲಿ ಸಂಶಯ ವುಂಟಾಗಿದ್ದಿತು. ಯಾವ ಸಾಧನೆಯ ಮೂಲಕವಾಗಿ ಸದ್ಗತಿಯನ್ನು ಪಡೆಯಬೇಕೆಂಬುದರ ಬಗೆಗೆ ನನಗೆ ನಿಶ್ಚಯವಾದ ಬುದ್ಧಿಯಿರಲಿಲ್ಲ. ಈ ಕಾರಣದಿಂದಲೇ ನಾನು ಇಲ್ಲಿಗೆ ಆಗಮಿಸಿದೆನು. ನಿನ್ನೊಡನೆ ನಡೆದ ಮಾತು-ಕತೆಗಳಿಂದಲೇ ನನ್ನ ಸಂದೇಹವು ದೂರವಾಗಿದೆ. ನಾನು ನನ್ನ ಅಭೀಷ್ಟಸಿದ್ಧಿಗಾಗಿ ಉಂಛವ್ರತವನ್ನು ಆಚರಿಸುತ್ತೇನೆ.

ಏಷ ಮೇ ನಿಶ್ಚಯಃ ಸಾಧೋ ಕೃತಂ ಕಾರಣಮುತ್ತಮಮ್ ।
ಆಮನ್ತ್ರಯಾಮಿ ಭದ್ರಂ ತೇ ಕೃತಾರ್ಥೋಽಸ್ಮಿ ಭುಜಙ್ಗಮ ॥೧೧॥

ಸತ್ಪುರುಷನೇ! ಇದು ನನ್ನ ನಿಶ್ಚಯವಾಗಿದೆ. ನಿನ್ನ ಮೂಲಕವಾಗಿ ನಾನು ಉದ್ದೇಶಿಸಿದ್ದ ಕಾರ್ಯವು ಉತ್ತಮರೀತಿಯಲ್ಲಿ ಮುಗಿಯಿತು. ನಾನು ಕೃತಾರ್ಥನಾದೆನು. ನಿನಗೆ ಮಂಗಳವಾಗಲಿ. ನಾನು ಪ್ರಯಾಣಮಾಡಲು ಅನುಜ್ಞೆಯನ್ನು ದಯಪಾಲಿಸು.”

ಇ೬೪ನೆಯ ಅಧ್ಯಾಯವು ಮುಗಿಯಿತು.

ಇ೬೫ನೆಯ ಅಧ್ಯಾಯ ಮೋಕ್ಷಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣನು ನಾಗರಾಜನ ಅನುಮತಿಯನ್ನು ಪಡೆದು ಚ್ಯವನಮಹರ್ಷಿಯ ಬಳಿಗೆ ಹೋಗಿ ಉಂಛವೃತ್ತಿಯ ದೀಕ್ಷೆಯನ್ನು ಕೈಗೊಂಡುದು

ಭೀಷ್ಮನು ಹೇಳುತ್ತಾನೆ :

ಸ ಚಾಮನ್ತ್ರ್ಯೋರಗಶ್ರೇಷ್ಠಂ ಬ್ರಾಹ್ಮಣಃ ಕೃತನಿಶ್ಚಯಃ ।
ದೀಕ್ಷಾಕಾಂಕ್ಷೀ ತದಾ ರಾಜಂಶ್ಚ್ಯವನಂ ಭಾರ್ಗವಂ ಶ್ರಿತಃ ॥೧॥

“ಯುಧಿಷ್ಠಿರ! ಹೀಗೆ ಆ ಬ್ರಾಹ್ಮಣನು ಊರಿಗೆ ಹಿಂದಿರುಗಲು ನಾಗರಾಜನಿಂದ ಅನುಮತಿಯನ್ನು ಪಡೆದು ಉಂಛವೃತ್ತಿವ್ರತವನ್ನೇ ಸ್ವೀಕರಿಸಲು ನಿಶ್ಚಯಿಸಿದವನಾಗಿ ದೀಕ್ಷೆಯನ್ನು ಪಡೆಯುವ ಇಚ್ಛೆಯಿಂದ ಭೃಗುಪುತ್ರನಾದ ಚ್ಯವನಮಹರ್ಷಿಯನ್ನು ಆಶ್ರಯಿಸಿದನು. ಮಹರ್ಷಿ ಚ್ಯವನನು ಧರ್ಮಾರಣ್ಯನೆಂಬ ಆ ಬ್ರಾಹ್ಮಣನಿಗೆ ದೀಕ್ಷೆಯನ್ನಿತ್ತು ಅವನನ್ನು ಸತ್ಕರಿಸಿದನಂತರ ಧರ್ಮಾರಣ್ಯನು ಧರ್ಮವನ್ನೇ ಆಶ್ರಯಿಸಿ ಜೀವನನಿರ್ವಹಣೆಯನ್ನು ಮಾಡುತ್ತಿದ್ದನು. ಉಂಛವೃತ್ತಿಯ ಮಹಿಮೆಗೆ ಸಂಬಂಧಿಸಿದ ಈ ಕಥೆಯನ್ನು ಆ ಬ್ರಾಹ್ಮಣನು ಮಹರ್ಷಿಯಾದ ಚ್ಯವನನಿಗೂ ಹೇಳಿದನು. ಪೂಜ್ಯನಾದ ಚ್ಯವನನು ಜನಕನ ಅರಮನೆಯಲ್ಲಿ ಪುಣ್ಯಕರವಾದ ಈ ಕಥೆಯನ್ನು ಮಹಾತ್ಮರಾದ ನಾರದರಿಗೆ ಹೇಳಿದನು. ಅನಂತರ ಪೂರ್ವಕಾಲದಲ್ಲಿ ಇಂದ್ರನು ಮಂಗಳಪ್ರದವಾದ ಈ ಕಥೆಯನ್ನು ಸಮಸ್ತ ಬ್ರಾಹ್ಮಣಶ್ರೇಷ್ಠರ ಸಮ್ಮುಖದಲ್ಲಿ ಹೇಳಿದನು. ನನಗೂ ಮತ್ತು ಭಗವಾನ್ ಪರಶುರಾಮನಿಗೂ ಯುದ್ಧವು ನಡೆದ ಸಮಯದಲ್ಲಿ ವಸುಗಳು ಈ ಪುಣ್ಯಕಥೆಯನ್ನು ನನಗೆ ಹೇಳಿದರು. ಧರ್ಮಾತ್ಮರಲ್ಲಿ ಶ್ರೇಷ್ಠನಾದ ಯುಧಿಷ್ಠಿರನೇ! ನೀನು ಧರ್ಮಕ್ಕೆ ಸಂಬಂಧಿಸಿದಂತೆ ನನ್ನನ್ನು ಪ್ರಶ್ನಿಸಿದೆ. ಅದಕ್ಕೆ ಉತ್ತರರೂಪವಾಗಿ ಪುಣ್ಯಪ್ರಾಪಕವಾದ ಈ ಕಥೆಯನ್ನು ಹೇಳಿರುತ್ತೇನೆ. ನೀನು ಯಾವ ಧರ್ಮವು ಶ್ರೇಷ್ಠವೆಂದು ಪ್ರಶ್ನಿಸಿದೆಯಲ್ಲವೇ? ಉಂಛವೃತ್ತಿಯೇ ಪರಮಧರ್ಮವು. ಧೀರನಾದ ಆ ಬ್ರಾಹ್ಮಣನು ನಿಷ್ಕಾಮನಾಗಿ ಧರ್ಮಾರ್ಥಕರ್ಮಗಳಲ್ಲಿಯೇ ತೊಡಗಿದ್ದನು. ನಾಗರಾಜನ ಉಪದೇಶಾನುಸಾರವಾಗಿ ಆಚರಿಸುವುದೇ ತನ್ನ ಕರ್ತವ್ಯವೆಂದು ಭಾವಿಸಿ ಉಂಛವೃತ್ತಿಯ ವ್ರತವನ್ನು ಕೈಗೊಳ್ಳಲು ದೃಢವಾಗಿ ನಿಶ್ಚಯಿಸಿದನು. ಅನಂತರ ಅವನು ಅಲ್ಲಿಂದ ಮತ್ತೊಂದು ಅರಣ್ಯಕ್ಕೆ ಹೋಗಿ ಯಮ-ನಿಯಮಗಳನ್ನು ಪಾಲಿಸುತ್ತಾ ಉಂಛಶಿಲವೃತ್ತಿಯಿಂದ ಪ್ರಾಪ್ತವಾದ ಪರಿಮಿತವಾದ ಆಹಾರವನ್ನೇ

ಭುಂಜಿಸುತ್ತಿದ್ದು ಕಡೆಗೆ ಆ ವ್ರತದ ಪರಿಪಾಲನೆಯಿಂದಲೇ ಸಿದ್ಧಿಯನ್ನು ಪಡೆದನು."*

ಒ೬೫ನೆಯ ಅಧ್ಯಾಯವು ಮುಗಿಯಿತು.

ಶಾಂತಿಪರ್ವವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।

ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ।

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ ತತ್ಸತ್

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

---

*ಇದರ ಅಭಿಪ್ರಾಯವು ಹೀಗಿದೆ : ಸಾಧ್ಯವಾದಷ್ಟು ಯಾವುದೇ ಪ್ರಾಣಿಗೂ ತೊಂದರೆಯನ್ನು ಕೊಡದೇ ಜೀವಿಸುವುದೇ ಮೋಕ್ಷಾರ್ಥಿಯ ಪರಮಧ್ಯೇಯವಾಗಿರ ಬೇಕು. ಶಾಸ್ತ್ರಕಾರರಾದ ಪೂರ್ವಸೂರಿಗಳು ಆಳವಾಗಿ ವಿಚಾರಿಸಿ ಶಿಲೋಂಛವೃತ್ತಿಯಿಂದ ಜೀವಿಸುವುದೇ ಶುದ್ಧಜೀವನವೆಂದು ನಿರ್ಣಯಿಸಿದ್ದಾರೆ.

ಸಂಕ್ಷೇಪದಲ್ಲಿ ಶಾಂತಿಪರ್ವ

ಆದಿಪರ್ವ–ಅಧ್ಯಾಯ–೨

ಅತಃ ಪರಂ ಶಾನ್ತಿಪರ್ವ ದ್ವಾದಶಂ ಬುದ್ಧಿವರ್ಧನಮ್ ।
ಯತ್ರ ನಿರ್ವೇದಮಾಪನ್ನೋ ಧರ್ಮರಾಜೋ ಯುಧಿಷ್ಠಿರಃ ॥

ಘಾತಯಿತ್ವಾ ಪಿತೄನ್ಭ್ರಾತೄನ್ಪುತ್ರಾನ್ಸಮ್ಬನ್ಧಿಮಾತುಲಾನ್ ।
ಶಾನ್ತಿಪರ್ವಣಿ ಧರ್ಮಾಶ್ಚ ವ್ಯಾಖ್ಯಾತಾಃ ಶಾರತಲ್ಪಿಕಾಃ ॥೩೨೬॥

ರಾಜಭಿರ್ವೇದಿತವ್ಯಾಸ್ತೇ ಸಮ್ಯಗ್ಜ್ಞಾನಬುಭುತ್ಸುಭಿಃ ।
ಆಪದ್ಧರ್ಮಾಶ್ಚ ತತ್ರೈವ ಕಾಲಹೇತುಪ್ರದರ್ಶಿನಃ ॥೩೨೭॥

ಯಾನ್ಬುದ್ಧ್ವಾ ಪುರುಷಃ ಸಮ್ಯಕ್ಸರ್ವಜ್ಞತ್ವಮವಾಪ್ನುಯಾತ್ ।
ಮೋಕ್ಷಧರ್ಮಾಶ್ಚ ಕಥಿತಾ ವಿಚಿತ್ರಾ ಬಹುವಿಸ್ತರಾಃ ॥೩೨೮॥

ದ್ವಾದಶಂ ಪರ್ವ ನಿರ್ದಿಷ್ಟಮೇತತ್ಪ್ರಾಜ್ಞಜನಪ್ರಿಯಮ್ ।
ಅತ್ರ ಪರ್ವಣಿ ವಿಜ್ಞೇಯಮಧ್ಯಾಯಾನಾಂ ಶತತ್ರಯಮ್ ॥೩೨೯॥

ತ್ರಿಂಶಚ್ಚೈವ ತಥಾಧ್ಯಾಯಾ ನವ ಚೈವ ತಪೋಧನಾಃ ।
ಚತುರ್ದಶ ಸಹಸ್ರಾಣಿ ತಥಾ ಸಪ್ತ ಶತಾನಿ ಚ ।
ಸಪ್ತ ಶ್ಲೋಕಾಸ್ತಥೈವಾತ್ರ ಪಞ್ಚವಿಂಶತಿಸಂಖ್ಯಯಾ ॥೩೩೦॥

ಸ್ತ್ರೀಪರ್ವವಾದ ನಂತರ ಹನ್ನೆರಡನೆಯದು ಶಾಂತಿಪರ್ವವೆಂದು ವಿಖ್ಯಾತವಾಗಿದೆ. ಇದರ ಶ್ರವಣ-ಪ್ರವಚನಗಳು ಬುದ್ಧಿಯನ್ನೂ ವಿವೇಕವನ್ನೂ ಹೆಚ್ಚಿಸುತ್ತವೆ. ಪಿತೃಗಳನ್ನೂ, ಪುತ್ರರನ್ನೂ, ಸಹೋದರರನ್ನೂ, ಸೋದರ ಮಾವಂದಿರನ್ನೂ ಯುದ್ಧದಲ್ಲಿ ಸಂಹರಿಸಿದ ಕಾರಣ ಧರ್ಮರಾಜನು ದುಃಖವನ್ನೂ–ವೈರಾಗ್ಯವನ್ನೂ ಹೊಂದುತ್ತಾನೆ. ಅವನನ್ನು ಸಮಾಧಾನಪಡಿಸುವ ಸಲುವಾಗಿಯೇ ಬಾಣಗಳ ಹಾಸಿಗೆಯಲ್ಲಿ ಮಲಗಿದ್ದ ಭೀಷ್ಮನು ಸಮಸ್ತ ಧರ್ಮಗಳನ್ನೂ ಯುಧಿಷ್ಠಿರನಿಗೆ ಉಪದೇಶಿಸುತ್ತಾನೆ. ಒಳ್ಳೆಯ ಜ್ಞಾನವನ್ನು ಪಡೆಯಲು ಇಚ್ಛಿಸುವ ರಾಜರು ಈ ಧರ್ಮಗಳನ್ನು ಚೆನ್ನಾಗಿ

ತಿಳಿದುಕೊಳ್ಳಬೇಕು. ಕಾಲ-ದೇಶಗಳನ್ನು ಅನುಸರಿಸಿ ವ್ಯವಹರಿಸಬೇಕಾದ ಆಪದ್ಧರ್ಮವೂ ಈ ಪರ್ವದಲ್ಲಿದೆ. ಇದರ ಅಧ್ಯಯನದಿಂದ ಮನುಷ್ಯನಿಗೆ ಒಳ್ಳೆಯ ಜ್ಞಾನವುಂಟಾಗುತ್ತದೆ. ಬಹುವಿಸ್ತಾರವಾದ ಮೋಕ್ಷಧರ್ಮವನ್ನು ಇಲ್ಲಿ ಹೇಳಿದ್ದಾರೆ. ಪ್ರಾಜ್ಞರಿಗೆ ಹನ್ನೆರಡನೆಯ ಈ ಶಾಂತಿಪರ್ವವು ಅತ್ಯಂತಪ್ರಿಯವಾದುದು.

ಈ ಶಾಂತಿಪರ್ವದಲ್ಲಿ ೩೩೯ ಅಧ್ಯಾಯಗಳಿವೆ. ೧೪,೭೩೨ ಶ್ಲೋಕಗಳಿವೆ.

(ನಾವು ಅನುವಾದಿಸಿರುವ ಪಾಠದಲ್ಲಿ ೩೬೫ ಅಧ್ಯಾಯಗಳಿವೆ. ೧೪,೭೨೦ ಶ್ಲೋಕಗಳಿವೆ. ಪದ್ಯದ ಎಣಿಕೆಯಲ್ಲಿ ಸ್ವಲ್ಪ ವ್ಯತ್ಯಾಸ ವಿರಬಹುದು.

ಭಂಡಾರ್‌ಕರ್ ರಿಸರ್ಚ್ ಇನ್‌ಸ್ಟಿಟ್ಯೂಟಿನವರು ಪ್ರಕಟಿಸಿರುವ ಪುಸ್ತಕದಲ್ಲಿ ೩೫೩ ಅಧ್ಯಾಯಗಳಿವೆ.)

ಶ್ರೀಮಹಾಗಣಪತಯೇ ನಮಃ ಶ್ರೀಸರಸ್ವತ್ಯೈನಮಃ ಶ್ರೀಸದ್ಗುರವೇನಮಃ

ಓಂ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಶ್ರೀಮನ್ಮಹಾಭಾರತ-ಅನುಶಾಸನಪರ್ವ

೧ನೆಯ ಅಧ್ಯಾಯ ದಾನಧರ್ಮಪರ್ವ

ಯುಧಿಷ್ಠಿರನನ್ನು ಸಮಾಧಾನಗೊಳಿಸಲು ಭೀಷ್ಮನಿಂದ ಗೌತಮೀಬ್ರಾಹ್ಮಣೀ, ವ್ಯಾಧ, ಸರ್ಪ, ಮೃತ್ಯು ಮತ್ತು ಕಾಲ- ಇವರ ಪರಸ್ಪರ ಸಂವಾದಗಳ ವಿವರಣೆ

ವೈಶಂಪಾಯನರು ಪ್ರಣವೋಚ್ಚಾರಣಪೂರ್ವಕವಾಗಿ ಪ್ರವಚನವನ್ನು ಪ್ರಾರಂಭಿಸಿ ಹೇಳತೊಡಗಿದರು :

"ಜನಮೇಜಯ! ಯುಧಿಷ್ಠಿರನು ಹೇಳುತ್ತಾನೆ :

ಶಮೋ ಬಹುವಿಧಾಕಾರಃ ಸೂಕ್ಷ್ಮ ಉಕ್ತಃ ಪಿತಾಮಹ ।
ನ ಚ ಮೇ ಹೃದಯೇ ಶಾನ್ತಿರಸ್ತಿ ಶ್ರುತ್ವೇದಮೀದೃಶಮ್ ॥೧॥

"ಪಿತಾಮಹನೇ! ವ್ಯಸನವನ್ನು ಕಳೆದುಕೊಂಡು ಮನಃಶಾಂತಿಯನ್ನು ಹೊಂದಲು ನೀನು ನನಗೆ ಬಹುವಿಧವಾದ ಮತ್ತು ಸೂಕ್ಷ್ಮವಾದ ಶಮ ಸಾಧಕಗಳಾದ ಉಪಾಖ್ಯಾನಗಳನ್ನು ಹೇಳಿರುವೆ. ಆದರೆ ಇಂತಹ ಅನೇಕ ವಿಧವಾದ ಉಪದೇಶಗಳನ್ನು ಕೇಳಿಯೂ ನನ್ನ ಮನಸ್ಸಿನಲ್ಲಿ ಶಾಂತಿಯು ಉಂಟಾಗಿಲ್ಲ. ಮನಸ್ಸು ಇನ್ನೂ ತಳಮಳಿಸುತ್ತಲೇ ಇದೆ.

ಅಸ್ಮಿನ್ನರ್ಥೇ ಬಹುವಿಧಾ ಶಾನ್ತಿರುಕ್ತಾ ಪಿತಾಮಹ ।
ಸ್ವಕೃತೇ ಕಾ ನು ಶಾನ್ತಿಃ ಸ್ಯಾಚ್ಛಮಾದ್ಬಹುವಿಧಾದಪಿ ॥೨॥

ನನ್ನ ಮನಸ್ಸಿಗೆ ಸಮಾಧಾನವನ್ನುಂಟುಮಾಡಲು ಶಾಂತಿಪ್ರಾಪಕವಾದ ಬಹುವಿಧವಾದ ಉಪಾಖ್ಯಾನಗಳನ್ನೇನೋ ಹೇಳಿರುವೆ. ಶಮಪ್ರಧಾನವಾದ ಅನೇಕ ಉಪಾಖ್ಯಾನಗಳನ್ನು ಕೇಳಿದರೂ ನಾನೇ ಮಾಡಿರುವ ಅಪರಾಧಕ್ಕೆ ಯಾವ ಶಾಂತಿಯಿದೆ?

ಶರಾಚಿತಶರೀರಂ ಹಿ ತೀವ್ರವ್ರಣಮುದೀಕ್ಷ್ಯ ಚ ।
ಶರ್ಮ ನೋಪಲಭೇ ವೀರ ದುಷ್ಕೃತಾನ್ಯೇವ ಚಿನ್ತಯನ್ ॥೩॥

ವೀರನೇ! ತೀವ್ರವಾದ ಗಾಯಗಳಿಂದ ಕೂಡಿರುವ, ಬಾಣಗಳಿಂದ ವ್ಯಾಪ್ತವಾಗಿರುವ ಶರೀರವುಳ್ಳ ನಿನ್ನನ್ನು ನೋಡಿ ನಾನು ಮಾಡಿದ ದುಷ್ಕೃತ್ಯಗಳನ್ನೇ ಚಿಂತಿಸುತ್ತಿರುವ ನನಗೆ ಶಾಂತಿಯೇ ಲಭಿಸುತ್ತಿಲ್ಲ.

ರುಧಿರೇಣಾವಸಿಕ್ತಾಙ್ಗಂ ಪ್ರಸ್ರವನ್ತಂ ಯಥಾಚಲಮ್ ।
ತ್ವಾಂ ದೃಷ್ಟ್ವಾ ಪುರುಷವ್ಯಾಘ್ರ ಸೀದೇ ವರ್ಷಾಸ್ವಿವಾಮ್ಬುಜಮ್ ॥೪॥

ಪುರುಷವ್ಯಾಘ್ರನೇ! ಗೈರಿಕಾದಿ ಧಾತುಗಳನ್ನು ಸುರಿಸುತ್ತಿರುವ ಪರ್ವತದಂತೆ–ಸ್ರವಿಸುತ್ತಿರುವ ರಕ್ತದಿಂದ ವ್ಯಾಪ್ತವಾದ ನಿನ್ನನ್ನು ನೋಡಿ–ವರ್ಷಾಕಾಲದಲ್ಲಿ ಮುರುಟಿ ಹೋಗುವ ಕಮಲದಂತೆ–ನಾನು ಕುಸಿಯುತ್ತಿದ್ದೇನೆ.

ಅತಃ ಕಷ್ಟತರಂ ಕಿಂ ನು ಮತ್ಕೃತೇ ಯತ್ಪಿತಾಮಹಃ ।
ಇಮಾಮವಸ್ಥಾಂ ಗಮಿತಃ ಪ್ರತ್ಯಮಿತ್ರೈ ರಣಾಜಿರೇ ॥೫॥

ನನ್ನ ಸಲುವಾಗಿ ರಣರಂಗದಲ್ಲಿ ಶತ್ರುಗಳು ನಮ್ಮ ಪಿತಾಮಹನಾದ ನಿನಗೆ ಇಂತಹ ಅವಸ್ಥೆಯನ್ನುಂಟುಮಾಡಿದರು. ಇದಕ್ಕಿಂತಲೂ ಕಷ್ಟತರವಾದುದು ಬೇರೆ ಯಾವುದಿದೆ?

ತಥಾ ಚಾನ್ಯೇ ನೃಪತಯಃ ಸಹಪುತ್ರಾಃ ಸಬಾನ್ಧವಾಃ ।
ಮತ್ಕೃತೇ ನಿಧನಂ ಪ್ರಾಪ್ತಾಃ ಕಿಂ ನು ಕಷ್ಟತರಂ ತತಃ ॥೬॥

ಹಾಗೆಯೇ ಇತರ ಅನೇಕರಾಜರೂ ತಮ್ಮ ಮಕ್ಕಳೊಡನೆ ಮತ್ತು ನೆಂಟರಿಷ್ಟರೊಡನೆ ನನ್ನ ಸಲುವಾಗಿಯೇ ಅಸುನೀಗಿದರು. ಇದಕ್ಕಿಂತಲೂ ಸಹಿಸಲು ಕಷ್ಟತರವಾದುದು ಬೇರೆ ಯಾವುದಿದೆ?

ವಯಂ ಹಿ ಧಾರ್ತರಾಷ್ಟ್ರಾಶ್ಚ ಕಾಲಮನ್ಯುವಶಂಗತಾಃ ।
ಕೃತ್ವೇದಂ ನಿನ್ದಿತಂ ಕರ್ಮ ಪ್ರಾಪ್ಸ್ಯಾಮಃ ಕಾಂ ಗತಿಂ ನೃಪ ॥೭॥

ನಾವೂ ಮತ್ತು ಧೃತರಾಷ್ಟ್ರನ ಮಕ್ಕಳೂ ಕಾಲವಶರಾಗಿ ಮತ್ತು ಮನ್ಯುಪರವಶರಾಗಿ ನಿಂದಿತವಾದ ಇಂತಹ ಕರ್ಮವನ್ನು ಮಾಡಿದೆವು. ಇದರಿಂದ ನಾವು ಎಂತಹ ದುರ್ಗತಿಯನ್ನು ಹೊಂದುವೆವೋ?

ಇದಂ ತು ಧಾರ್ತರಾಷ್ಟ್ರಸ್ಯ ಶ್ರೇಯೋ ಮನ್ಯೇ ಜನಾಧಿಪ ।
ಇಮಾಮವಸ್ಥಾಂ ಸಮ್ಪ್ರಾಪ್ತಂ ಯದಸೌ ತ್ವಾಂ ನ ಪಶ್ಯತಿ ॥೮॥

ಹೀಗಾದುದು (ಮರಣ ಹೊಂದಿದುದು) ದುರ್ಯೋಧನನಿಗೆ ಒಳಿತೇ ಆಯಿತೆಂದು ನಾನು ಭಾವಿಸುತ್ತೇನೆ. ಏಕೆಂದರೆ : ಇಂತಹ ದುರವಸ್ಥೆಯನ್ನು ಹೊಂದಿರುವ ನಿನ್ನನ್ನವನು ನೋಡುವಂತಾಗಲಿಲ್ಲ.

ಸೋಽಹಂ ತವ ಹ್ಯನ್ತಕರಃ ಸುಹೃದ್ವಧಕರಸ್ತಥಾ ।
ನ ಶಾನ್ತಿಮಧಿಗಚ್ಛಾಮಿ ಪಶ್ಯಂಸ್ತ್ವಾಂ ದುಃಖಿತಂ ಕ್ಷಿತೌ ॥೯॥

ನಿನ್ನನ್ನು ಸಂಹಾರಮಾಡಿದವನು ನಾನೇ ಆಗಿದ್ದೇನೆ. ಹಾಗೆಯೇ ಗೆಳೆಯರನ್ನೂ ನಾನೇ ವಧಿಸಿದ್ದೇನೆ. ದುಃಖಿತನಾಗಿ ಭೂಮಿಯಲ್ಲಿ ಬಿದ್ದಿರುವ ನಿನ್ನನ್ನು ನೋಡಿ ನಾನು ಶಾಂತಿಯನ್ನು ಹೊಂದುತ್ತಿಲ್ಲ. (ನನ್ನ ಮನಸ್ಸಿಗೆ ಶಾಂತಿಯು ಸಿಗುತ್ತಿಲ್ಲ.)

ದುರ್ಯೋಧನೋ ಹಿ ಸಮರೇ ಸಹಸೈನ್ಯಃ ಸಹಾನುಜಃ ।
ನಿಹತಃ ಕ್ಷತ್ರಧರ್ಮೇಽಸ್ಮಿನ್ದುರಾತ್ಮಾ ಕುಲಪಾಂಸನಃ ॥೧೦॥

ದುರಾತ್ಮನಾದ, ಕುಲಕಳಂಕನಾದ ದುರ್ಯೋಧನನು ಸೈನಿಕರಿಂದಲೂ ಅನುಜರಿಂದಲೂ ಒಡಗೂಡಿ ಕ್ಷತ್ರಧರ್ಮಾನುಸಾರವಾಗಿ ನಡೆದ ಈ ಯುದ್ಧದಲ್ಲಿ ಹತನಾದನು.

ನ ಸ ಪಶ್ಯತಿ ದುಷ್ಟಾತ್ಮಾ ತ್ವಾಮದ್ಯ ಪತಿತಂ ಕ್ಷಿತೌ ।
ಅತಃ ಶ್ರೇಯೋ ಮೃತಂ ಮನ್ಯೇ ನೇಹ ಜೀವಿತಮಾತ್ಮನಃ ॥೧೧॥

ದುಷ್ಟಾತ್ಮನಾದ ಅವನು ನೀನು ಹೀಗೆ ಭೂಮಿಯಲ್ಲಿ ಬಿದ್ದಿರುವುದನ್ನು ನೋಡುತ್ತಿಲ್ಲ. ಆದುದರಿಂದ ದುರ್ಯೋಧನನ ಸಾವು ಇಲ್ಲಿ ಹೀಗಿರುವ ನನ್ನ ಬದುಕಿಗಿಂತಲೂ ಮೇಲೆಂದು ನಾನು ಭಾವಿಸುತ್ತೇನೆ. ಜೀವಿಸಿರುವ ನನಗೆ

ಅಂತಹ ಶ್ರೇಯಸ್ಸು ಲಭಿಸಲಿಲ್ಲ. (ನಿನ್ನ ಈ ಸ್ಥಿತಿಯನ್ನು ನೋಡುತ್ತಾ ಬದುಕಿರುವುದು ನನಗೆ ಶ್ರೇಯಸ್ಕರವಲ್ಲ.)

ಅಹಂ ಹಿ ಸಮರೇ ವೀರ ಗಮಿತಃ ಶತ್ರುಭಿಃ ಕ್ಷಯಮ್ ।
ಅಭವಿಷ್ಯಂ ಯದಿ ಪುರಾ ಸಹ ಭ್ರಾತೃಭಿರಚ್ಯುತ ।
ನ ತ್ವಾಮೇವಂ ಸುದುಃಖಾರ್ತಮದ್ರಾಕ್ಷಂ ಸಾಯಕಾರ್ದಿತಮ್ ॥೧೨॥

ಅಚ್ಯುತನೇ! ಈ ಹಿಂದೆಯೇ ನಾನೂ ನನ್ನ ಅನುಜರೊಡನೆ ಶತ್ರುಗಳಿಂದ ಯುದ್ಧದಲ್ಲಿ ಹತನಾಗಿ ಬಿಟ್ಟಿದ್ದರೆ–ಬಾಣಗಳಿಂದ ಹಿಂಸಿಸಲ್ಪಟ್ಟಿರುವ ದುಃಖಪೀಡಿತನಾದ ನಿನ್ನನ್ನು ನೋಡುತ್ತಿರಲಿಲ್ಲ.

ನೂನಂ ಹಿ ಪಾಪಕರ್ಮಾಣೋ ಧಾತ್ರಾ ಸೃಷ್ಟಾಃ ಸ್ಮಹೇ ನೃಪ ।
ಅನ್ಯಸ್ಮಿನ್ನಪಿ ಲೋಕೇ ವೈ ಯಥಾ ಮುಚ್ಯೇಮ ಕಿಲ್ಬಿಷಾತ್ ॥೧೩॥

ತಥಾ ಪ್ರಶಾಧಿ ಮಾಂ ರಾಜನ್ಮಮ ಚೇದಿಚ್ಛಸಿ ಪ್ರಿಯಮ್ ॥೧೪॥

ನಿಶ್ಚಯವಾಗಿಯೂ ಪಾಪಕರ್ಮಗಳನ್ನು ಮಾಡಲೆಂದೇ ನಾವು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದ್ದೇವೆ. ಭೀಷ್ಮಪಿತಾಮಹನೇ! ನನಗೆ ನೀನು ಪ್ರಿಯವನ್ನುಂಟುಮಾಡುವ ಇಚ್ಛೆಯುಳ್ಳವನಾಗಿದ್ದರೆ–ಬೇರೆ ಲೋಕದಲ್ಲಾದರೂ (ಬೇರೆ ಲೋಕಕ್ಕೆ ಹೋಗುವ ಸಮಯದಲ್ಲಾದರೂ) ನಾವು ಈ ಪಾಪದಿಂದ ಮುಕ್ತರಾಗಲು ಏನು ಮಾಡಬೇಕೆಂಬುದನ್ನು ಆಜ್ಞಾಪಿಸು."

ಭೀಷ್ಮನು ಹೇಳುತ್ತಾನೆ :

ಪರತನ್ತ್ರಂ ಕಥಂ ಹೇತುಮಾತ್ಮಾನಮನುಪಶ್ಯಸಿ ।
ಕರ್ಮಣಾಂ ಹಿ ಮಹಾಭಾಗ ಸೂಕ್ಷ್ಮಂ ಹ್ಯೇತದತೀನ್ದ್ರಿಯಮ್ ॥೧೫॥

"ಯುಧಿಷ್ಠಿರ! ಕರ್ಮಗಳಿಗೆ ಅಧೀನನಾಗಿರುವ ನಿನ್ನನ್ನು ಈ ವಿನಾಶಕಾರ್ಯಗಳಿಗೆ ಕಾರಣನೆಂದು ಹೇಗೆ ತಿಳಿಯುವೆ? ಈ ಕರ್ಮಫಲವು ಅತಿಸೂಕ್ಷ್ಮವಾದುದು ಮತ್ತು ಇಂದ್ರಿಯಾತೀತವಾದುದು. ಈ ವಿಷಯದಲ್ಲಿ ಹಿಂದೆ ಮೃತ್ಯುವಿಗೂ, ಗೌತಮಿಯೆಂಬ ಬ್ರಾಹ್ಮಣಿಗೂ, ಕಾಲನಿಗೂ, ವ್ಯಾಧನಿಗೂ ಮತ್ತು ಸರ್ಪಕ್ಕೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ತಿಳಿಸುವೆನು, ಕೇಳು :

ಗೌತಮೀ ಎಂಬ ಹೆಸರಿನ ಶಾಂತಸ್ವಭಾವದ ವೃದ್ಧೆಯೊಬ್ಬಳಿದ್ದಳು. ಒಂದು ದಿನ ಸರ್ಪದಿಂದ ಕಚ್ಚಲ್ಪಟ್ಟು ಹತನಾಗಿ ಬಿದ್ದಿದ್ದ ತನ್ನ ಮಗನನ್ನು ನೋಡಿದಳು. ಆ ವೇಳೆಗೆ ಸರಿಯಾಗಿ ಅರ್ಜುನಕನೆಂಬ ಹೆಸರಿನ ವ್ಯಾಧನು ಕೋಪಗೊಂಡು ವೃದ್ಧೆಯ ಪುತ್ರನನ್ನು ಕಡಿದಿದ್ದ ಸರ್ಪವನ್ನು ನೇಣದಿಂದ ಬಿಗಿದು ಗೌತಮಿಯ ಸಮೀಪಕ್ಕೆ ತಂದು ಸರ್ಪವನ್ನು ತೋರಿಸುತ್ತಾ ಹೇಳಿದನು : "ಮಹಾಭಾಗೇ! ಈ ನೀಚಸರ್ಪವೇ ನಿನ್ನ ಮಗನನ್ನು ಕಡಿದು ಸಾಯಿಸಿದುದು. ಯಾವ ರೀತಿಯಲ್ಲಿ ಇದನ್ನು ಕೊಲ್ಲಬೇಕೆಂಬುದನ್ನು ಬೇಗ ಹೇಳು.

ಅಗ್ನೌ ಪ್ರಕ್ಷಿಪ್ಯತಾಮೇಷ ಚ್ಛಿದ್ಯತಾಂ ಖಣ್ಡಶೋಽಪಿವಾ ।
ನ ಹ್ಯಯಂ ಬಾಲಹಾ ಪಾಪಶ್ಚಿರಂ ಜೀವಿತುಮರ್ಹತಿ ॥೨೦॥

ಬೆಂಕಿಯಲ್ಲಿ ಹಾಕಿ ಸುಟ್ಟುಬಿಡಲೇ? ತುಂಡು-ತುಂಡುಗಳಾಗಿ ಕತ್ತರಿಸಿ ಬಿಡಲೇ? ನಿನ್ನ ಮಗನನ್ನು ಕೊಂದಿರುವ ಈ ಸರ್ಪವು ಖಂಡಿತವಾಗಿಯೂ ಹೆಚ್ಚುಕಾಲ ಬದುಕಿರಲು ಯೋಗ್ಯವಾಗಿಲ್ಲ."

ಗೌತಮಿಯು ಹೇಳುತ್ತಾಳೆ :

ವಿಸೃಜೈನಮಬುದ್ಧಿಸ್ತ್ವಮವಧ್ಯೋಽರ್ಜುನಕ ತ್ವಯಾ ।
ಕೋ ಹ್ಯಾತ್ಮಾನಂ ಗುರುಂ ಕುರ್ಯಾತ್ಪ್ರಾಪ್ತವ್ಯಮವಿಚಿನ್ತಯನ್ ॥೨೧॥

"ಅರ್ಜುನಕ! ಈ ಸರ್ಪವನ್ನು ಬಿಟ್ಟುಬಿಡು. ನೀನು ಬುದ್ಧಿಯಿಲ್ಲದವನು. ಇದನ್ನು ನೀನು ಖಂಡಿತವಾಗಿಯೂ ವಧಿಸಬಾರದು. ಯಾವುದು ಹೇಗೆ ನಡೆಯಬೇಕೋ ಅದು ಹಾಗೆಯೇ ನಡೆಯುತ್ತದೆ. ಈ ವಿಷಯವನ್ನು ಗಮನಿಸದೇ ಯಾವನು ತಾನೇ ತನ್ನನ್ನು ಪಾಪದಿಂದ ಭಾರವುಳ್ಳವನನ್ನಾಗಿ ಮಾಡಿಕೊಳ್ಳುತ್ತಾನೆ? (ಪಾಪಿಷ್ಠನಾಗಲು ಯಾವನು ತಾನೇ ಬಯಸುತ್ತಾನೆ?)

ಪ್ಲವನ್ತೇ ಧರ್ಮಲಘವೋ ಲೋಕೇಽಮ್ಭಸಿ ಯಥಾ ಪ್ಲವಾಃ ।
ಮಜ್ಜನ್ತಿ ಪಾಪಗುರವಃ ಶಸ್ತ್ರಂ ಸ್ಕನ್ನಮಿವೋದಕೇ ॥೨೨॥

ಲೋಕದಲ್ಲಿ ಧರ್ಮಕಾರ್ಯಗಳನ್ನು ಮಾಡಿ ಪಾಪಗಳನ್ನು ಕಳೆದು

ಕೊಂಡು ಹಗುರವಾಗಿರುವವರು ಸಮುದ್ರದಲ್ಲಿನ ನೌಕೆಗಳಂತೆ ಭವಸಾಗರವನ್ನು ದಾಟುತ್ತಾರೆ. ಪಾಪದಿಂದ ಭಾರವಾಗಿರುವವರು ನೀರಿನಲ್ಲಿ ಬಿದ್ದ ಶಸ್ತ್ರವು ಒಡನೆಯೇ ಮುಳುಗಿಹೋಗುವಂತೆ ನರಕಸಮುದ್ರದಲ್ಲಿ ಮುಳುಗಿಹೋಗುತ್ತಾರೆ.

ಹತ್ವಾ ಚೈನಂ ನಾಮೃತಃ ಸ್ಯಾದಯಂ ಮೇ
ಜೀವತ್ಯಸ್ಮಿನ್ಕೋಽತ್ಯಯಃ ಸ್ಯಾದಯಂ ತೇ ।
ಅಸ್ಯೋತ್ಸರ್ಗೇ ಪ್ರಾಣಯುಕ್ತಸ್ಯ ಜನ್ತೋ-
ರ್ಮೃತ್ಯೋರ್ಲೋಕಂ ಕೋ ನು ಗಚ್ಛೇದನನ್ತಮ್ ॥

ವ್ಯಾಧ! ಈ ಸರ್ಪವನ್ನು ಕೊಂದರೆ ನನ್ನ ಮಗನು ಪುನಃ ಜೀವಿತನಾಗುವುದಿಲ್ಲ. ಇದು ಜೀವಿಸಿದ್ದರೆ ನಿನಗಾಗುವ ಹಾನಿಯಾದರೂ ಏನು? ಈ ಸರ್ಪವನ್ನು ಪ್ರಾಣಸಹಿತವಾಗಿ ಬಿಟ್ಟರೆ–ಯಾವನು ತಾನೇ ಅನಂತವಾದ ಮೃತ್ಯುಲೋಕಕ್ಕೆ ಹೋಗುವನು? (ಯಾವನೂ ಹೋಗುವುದಿಲ್ಲ. ಕೊಂದರೆ ನಾನೂ ಮತ್ತು ನೀನೂ ಪಾಪಭಾಗಿಗಳಾಗುವೆವು.)"

ವ್ಯಾಧನು ಹೇಳುತ್ತಾನೆ :

ಜಾನಾಮ್ಯಹಂ ದೇವಿ ಗುಣಾಗುಣಜ್ಞೇ
ಸರ್ವಾರ್ತಿಯುಕ್ತಾ ಗುರವೋ ಭವನ್ತಿ ।
ಸ್ವಸ್ಥಸ್ಯೈತೇ ತೂಪದೇಶಾ ಭವನ್ತಿ
ತಸ್ಮಾತ್ಕ್ಷುದ್ರಂ ಸರ್ಪಮೇನಂ ಹನಿಷ್ಯೇ ॥೨೪॥

"ಗುಣ ಮತ್ತು ಅವಗುಣಗಳನ್ನು ತಿಳಿದಿರುವವಳೇ! ದೇವಿ! ಕಷ್ಟಕ್ಕೆ ಒಳಗಾದವರೆಲ್ಲರೂ ದುಃಖದಿಂದ ಭಾರವಾದ ಮನಸ್ಸುಳ್ಳವರಾಗುತ್ತಾರೆ–ಎಂಬುದನ್ನು ನಾನು ತಿಳಿದಿದ್ದೇನೆ. ಇಂತಹ ಉಪದೇಶಗಳೆಲ್ಲವೂ ಸ್ವಸ್ಥಚಿತ್ತರಾಗಿರುವವರಿಗೆ ಮಾತ್ರವೇ ಹಿಡಿಸುತ್ತವೆ. ಕಷ್ಟದಲ್ಲಿರುವವರಿಗೆ ಇಂತಹ ಉಪದೇಶಗಳು ಹಿಡಿಸಲಾರವು. (ಪುತ್ರವಿಯೋಗದ ದುಃಖವನ್ನು ಅನುಭವಿಸುತ್ತಿರುವ ನೀನು ಹೀಗೆ ಉಪದೇಶಿಸಲೂಬಾರದು ; ಆಚರಿಸಲೂ ಬಾರದು.) ನಿನ್ನ ಪುತ್ರವಿಯೋಗದುಃಖದ ನಿವಾರಣೆಗಾಗಿಯೇ ನಾನು ಕ್ಷುದ್ರವಾದ ಈ ಸರ್ಪವನ್ನು ಕೊಲ್ಲುತ್ತೇನೆ.

ಶರ್ಮಾರ್ಥಿನಃ ಕಾಲಗತಿಂ ವದನ್ತಿ
ಸದ್ಯಃ ಶುಚಂ ತ್ವರ್ಥವಿದಸ್ತ್ಯಜನ್ತಿ ।
ಶ್ರೇಯಃಕ್ಷಯಂ ಶೋಚತಿ ನಿತ್ಯಮೋಹಾ-
ತ್ತಸ್ಮಾಚ್ಛುಚಂ ಮುಞ್ಚ ಹತೇ ಭುಜಙ್ಗೇ ॥೨೫॥

ಶಾಂತಿಯನ್ನು ಬಯಸುವವರು ಎಲ್ಲಕ್ಕೂ ಕಾಲಗತಿಯೇ ಕಾರಣವೆಂದು ಹೇಳುತ್ತಾರೆ. ('ಕಾಲನೇ ಈ ನನ್ನ ಮಗನನ್ನು ಒಯ್ದುಬಿಟ್ಟನು'– ಎಂದು ಹೇಳಿಕೊಂಡು ಮನಸ್ಸಿಗೆ ಸಮಾಧಾನವನ್ನು ತಂದುಕೊಳ್ಳುತ್ತಾರೆ.) ಆದರೆ ಪ್ರತೀಕಾರವನ್ನು ಮಾಡಲು ತಿಳಿದವರು ಒಡನೆಯೇ ತಮ್ಮ ಶತ್ರುವನ್ನು ವಿನಾಶಗೊಳಿಸಿ ತಮ್ಮ ಶೋಕವನ್ನು ತ್ಯಜಿಸುತ್ತಾರೆ. ಉಳಿದವರು ಶ್ರೇಯಸ್ಸಿನ ವಿನಾಶವಾದನಂತರ (ಪುತ್ರನನ್ನು ಕಳೆದುಕೊಂಡನಂತರ) ಮೋಹವಶರಾಗಿ ಸದಾ ಅದನ್ನೇ ಚಿಂತಿಸುತ್ತಾ ಶೋಕಪಡುತ್ತಿರುತ್ತಾರೆ. ಆದುದರಿಂದ ಶತ್ರುರೂಪವಾಗಿರುವ ಈ ಸರ್ಪವನ್ನು ಕೊಂದ ಬಳಿಕ ನೀನು ಪುತ್ರಶೋಕವನ್ನು ಪರಿತ್ಯಜಿಸು."

ಗೌತಮಿಯು ಹೇಳುತ್ತಾಳೆ :

ಆರ್ತಿರ್ನೈವಂ ವಿದ್ಯತೇಽಸ್ಮದ್ವಿಧಾನಾಂ
ಧರ್ಮಾತ್ಮಾನಃ ಸರ್ವದಾ ಸಜ್ಜನಾ ಹಿ ।
ನಿತ್ಯಾಯಸ್ತೋ ಬಾಲಕೋಽಪ್ಯಸ್ಯ ತಸ್ಮಾ-
ದೀಶೇ ನಾಹಂ ಪನ್ನಗಸ್ಯ ಪ್ರಮಾಥೇ ॥೨೬॥

"ಅರ್ಜುನಕ! ನಮ್ಮಂತಹವರಿಗೆ ಯಾವಾಗಲೂ ಯಾವುದೇ ಕಾರಣದಿಂದಲೂ ಮನಸ್ಸಿಗೆ ಬಾಧೆಯುಂಟಾಗುವುದಿಲ್ಲ. ಧರ್ಮಾತ್ಮರಾದವರು ಯಾವಾಗಲೂ ಸಜ್ಜನರಾಗಿಯೇ ಇರುತ್ತಾರೆ. (ಸುಖ-ದುಃಖಗಳಿಗೆ ಮನಸೋಲುವುದಿಲ್ಲ.) ನನ್ನ ಮಗನು ಯಾವಾಗಲೂ ಮೃತ್ಯುಮುಖದಲ್ಲಿಯೇ ಇದ್ದನು. ಆದುದರಿಂದ ಈ ಸರ್ಪದ ವಿನಾಶವನ್ನು ಅನುಮತಿಸಲು ನಾನು ಸಮರ್ಥಳಲ್ಲ.

ನ ಬ್ರಾಹ್ಮಣಾನಾಂ ಕೋಪೋಽಸ್ತಿ ಕುತಃ ಕೋಪಾಚ್ಚಯಾತನಾಮ್ ।
ಮಾರ್ದವಾತ್ಕ್ಷಮ್ಯತಾಂ ಸಾಧೋ ಮುಚ್ಯತಾಮೇಷ ಪನ್ನಗಃ ॥೨೭॥

ಬ್ರಾಹ್ಮಣರಿಗೆ ಕೋಪವೇ ಬರುವುದಿಲ್ಲ. (ಬರಕೂಡದು.) ಹೀಗಿರುವಾಗ ಅವರು ಕೋಪಗೊಂಡು ಬೇರೆಯವರಿಗೆ ಯಾತನೆಯನ್ನೇಕೆ ಉಂಟುಮಾಡುತ್ತಾರೆ? ಸಾಧುಪುರುಷನೇ! ಮೃದುಸ್ವಭಾವವನ್ನು ಆಶ್ರಯಿಸಿ ಈ ಸರ್ಪವು ಮಾಡಿದ ಅಪರಾಧವನ್ನು ಕ್ಷಮಿಸಿ ಇದನ್ನು ಬಿಟ್ಟುಬಿಡು."

ವ್ಯಾಧನು ಹೇಳುತ್ತಾನೆ :

ಹತ್ವಾ ಲಾಭಃ ಶ್ರೇಯ ಏವಾವ್ಯಯಃ ಸ್ಯಾ-
ಲ್ಲಭ್ಯೋ ಲಾಭಃ ಸ್ಯಾದ್ಬಲಿಭ್ಯಃ ಪ್ರಶಸ್ತಃ ।
ಕಾಲಾಲ್ಲಾಭೋ ಯಸ್ತು ಸತ್ಯೋ ಭವೇತ
ಶ್ರೇಯೋಲಾಭಃ ಕುತ್ಸಿತೋಽಸ್ಮಿನ್ನ ತೇ ಸ್ಯಾತ್ ॥೨೮॥

“ದೇವಿ! ಶತ್ರುರೂಪವಾದ ಈ ಸರ್ಪವನ್ನು ಕೊಲ್ಲುವುದರಿಂದ ಅಕ್ಷಯವಾದ ಶ್ರೇಯಸ್ಸೇ ಉಂಟಾಗುತ್ತದೆ. ಬಲಿಷ್ಠರಿಂದ ಹೊಂದಲ್ಪಡುವ ಅಂತಹ ಶ್ರೇಯಸ್ಸಿನ ಲಾಭವೇ ಪ್ರಶಸ್ತವು. (ಶತ್ರುವಧೆಯಿಂದ ಮೂರು ಲೋಕಗಳಲ್ಲಿಯೂ ಮಾನ್ಯನಾಗುತ್ತಾನೆ.) ಇದನ್ನು ಕರುಣೆಯಿಂದ ಕೊಲ್ಲದೇ ಬಿಟ್ಟುಬಿಟ್ಟರೆ ಕಾಲಾಂತರದಲ್ಲಿ ಸತ್ಯವಾಗಿಯೂ ಪುಣ್ಯಪ್ರಾಪ್ತಿಯಾಗುವುದೆಂದು ನೀನು ಹೇಳಬಹುದು. ಆದರೆ ಈ ಕುತ್ಸಿತಪ್ರಾಣಿಯನ್ನು ಕುರಿತು ದಯೆತೋರಿದ್ದರಿಂದ ಶ್ರೇಯಸ್ಸೇನೂ ಉಂಟಾಗುವುದಿಲ್ಲ. ಇದು ದಯೆಗೆ ಯೋಗ್ಯವಾದ ಜೀವಿಯಲ್ಲ.”*

ಬ್ರಾಹ್ಮಣಿಯು ಹೇಳುತ್ತಾಳೆ :

ಕಾ ನು ಪ್ರಾಪ್ತಿರ್ಗೃಹ್ಯ ಶತ್ರುಂ ನಿಹತ್ಯ
ಕಾ ಕಾಮಾಪ್ತಿಃ ಪ್ರಾಪ್ಯ ಶತ್ರುಂ ನ ಮುಕ್ತ್ವಾ ।
ಕಸ್ಮಾತ್ಸೌಮ್ಯಾಹಂ ನ ಕ್ಷಮೇ ನೋ ಭುಜಙ್ಗೇ
ಮೋಕ್ಷಾರ್ಥಂ ವಾ ಕಸ್ಯ ಹೇತೋರ್ನ ಕುರ್ಯಾಮ್ ॥

“ಅರ್ಜುನಕ! ಶತ್ರುವನ್ನು ಹಿಡಿದು ಅವನನ್ನು ಕೊಲ್ಲುವುದರಿಂದ ಯಾವ ಲಾಭವಿದೆ? ಶತ್ರುವನ್ನು ಹಿಡಿದು ಅವನನ್ನು ಬಿಡದೇ ಇರುವುದರಿಂದ ಯಾವ ಮನೋರಥವು ಸಿದ್ಧಿಯಾಗುತ್ತದೆ? ಸೌಮ್ಯನೇ! ಯಾವ ಕಾರಣದಿಂದ ನಾನು ಈ ಸರ್ಪವನ್ನು ಕ್ಷಮಿಸದಿರಲಿ? ಯಾವ ಕಾರಣದಿಂದ ನಾನು ಇದರ ಮುಕ್ತಿಗಾಗಿ ಪ್ರಯತ್ನಿಸದಿರಲಿ?”

ಅರ್ಜುನಕನು ಹೇಳುತ್ತಾನೆ :

ಅಸ್ಮಾದೇಕಾದ್ಬಹವೋ ರಕ್ಷಿತವ್ಯಾ
ನೈಕೋ ಬಹುಭ್ಯೋ ಗೌತಮಿ ರಕ್ಷಿತವ್ಯಃ ।
ಕೃತಾಗಸಂ ಧರ್ಮವಿದಸ್ತ್ಯಜನ್ತಿ
ಸರೀಸೃಪಂ ಪಾಪಮಿಮಂ ಜಹಿ ತ್ವಮ್ ॥೩೦॥

---

*ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಯಾ–ಎಂಬಂತೆ ಚೇಳೂ-ಹಾವೂ ಕೊಲ್ಲಲ್ಪಟ್ಟರೆ ಅದರಿಂದ ಸತ್ಪುರುಷರೂ ಸಂತೋಷಪಡುತ್ತಾರೆ. (ಶ್ರೀಮದ್ಭಾಗವತ)

"ಗೌತಮಿ! ಈ ಒಂದು ಸರ್ಪದಿಂದ ಅನೇಕಮನುಷ್ಯರ ಜೀವನವನ್ನು ರಕ್ಷಿಸಬೇಕಾಗಿದೆ. (ಇದು ಜೀವಿಸಿದ್ದರೆ ಇನ್ನೂ ಅನೇಕರನ್ನು ಕಚ್ಚಿ ಸಾಯಿಸುತ್ತದೆ.) ಅನೇಕರ ಪ್ರಾಣರಕ್ಷಣೆಯು ಆಗಬೇಕಾಗಿರುವಲ್ಲಿ ಘಾತಕನಾದ ಒಬ್ಬನನ್ನು ಖಂಡಿತವಾಗಿಯೂ ರಕ್ಷಿಸಬಾರದು. ಅಪರಾಧಮಾಡಿದವನನ್ನು ಧರ್ಮಾತ್ಮರಾದವರು ಪರಿತ್ಯಜಿಸುತ್ತಾರೆ. ಆದುದರಿಂದ ಪಾಪಿಯಾದ ಈ ಸರ್ಪವನ್ನು ನೀನೂ ಪರಿತ್ಯಜಿಸು. (ಸಂಹರಿಸಲು ಅನುಮತಿಯನ್ನು ಕೊಡು.)"

ತಾಪಸಿಯು ಹೇಳುತ್ತಾಳೆ :

ನಾಸ್ಮಿನ್ಹತೇ ಪನ್ನಗೇ ಪುತ್ರಕೋ ಮೇ
ಸಮ್ಪ್ರಾಪ್ಸ್ಯತೇ ಲುಬ್ಧಕ ಜೀವಿತಂ ವೈ
ಗುಣಂ ಚಾನ್ಯಂ ನಾಸ್ಯ ವಧೇ ಪ್ರಪಶ್ಯೇ
ತಸ್ಮಾತ್ಸರ್ಪಂ ಲುಬ್ಧಕ ಮುಞ್ಚ ಜೀವಮ್ ॥೩೧॥

"ಲುಬ್ಧಕ! ಈ ಸರ್ಪವು ಹತವಾದರೆ ನನ್ನ ಮಗನು ಪುನಃ ಜೀವವನ್ನು ಪಡೆದುಕೊಳ್ಳುತ್ತಾನೆಯೇ? ಹಾಗೆಂದಿಗೂ ಆಗಲಾರದು. ಇದನ್ನು ಕೊಲ್ಲುವುದರಿಂದ ಬೇರೆ ಯಾವ ಪ್ರಯೋಜನವನ್ನೂ ನಾನು ಕಾಣುತ್ತಿಲ್ಲ. ಆದುದರಿಂದ ಕೂಡಲೇ ನೀನು ಈ ಸರ್ಪವನ್ನು ಜೀವಸಹಿತವಾಗಿ ಬಿಟ್ಟುಬಿಡು."

ಲುಬ್ಧಕನು ಹೇಳುತ್ತಾನೆ :

ವೃತ್ರಂ ಹತ್ವಾ ದೇವರಾಟ್ ಶ್ರೇಷ್ಠಭಾಕ್ವೈ
ಯಜ್ಞಂ ಹತ್ವಾ ಭಾಗಮವಾಪ ಚೈವ ।
ಶೂಲೀ ದೇವೋ ದೇವವೃತ್ತಂ ಚರ ತ್ವಂ
ಕ್ಷಿಪ್ರಂ ಸರ್ಪಂ ಜಹಿ ಮಾ ಭೂತ್ತೇ ವಿಶಙ್ಕಾ ॥೩೨॥

"ದೇವಿ! ಇಂದ್ರನು ವೃತ್ರಾಸುರನನ್ನು ಸಂಹರಿಸಿ ಶ್ರೇಷ್ಠಪದವಿಗೆ ಭಾಗಿಯಾದನು. ಶೂಲಪಾಣಿಯಾದ ಪರಶಿವನು ದಕ್ಷಯಜ್ಞವನ್ನು ಧ್ವಂಸಮಾಡಿ ಯಜ್ಞದಲ್ಲಿ ಹವಿರ್ಭಾಗವನ್ನು ಪಡೆದನು. ನೀನು ಕೂಡ ದೇವತೆ

ಗಳು ವ್ಯವಹರಿಸಿದಂತೆಯೇ ವ್ಯವಹರಿಸು. ಶೀಘ್ರವಾಗಿ ಸರ್ಪವನ್ನು ಸಾಯಿಸು. (ಸಾಯಿಸಲು ಅನುಮತಿಯನ್ನು ಕೊಡು.) ಈ ವಿಷಯದಲ್ಲಿ ನಿನಗೆ ಸಂದೇಹವೇ ಉಂಟಾಗದಿರಲಿ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಹೀಗೆ ವ್ಯಾಧನು ಯುಕ್ತಿಯುಕ್ತವಾಗಿ ಸರ್ಪವನ್ನು ಕೊಲ್ಲುವಂತೆ ಗೌತಮಿಗೆ ಅನೇಕಬಾರಿ ಹೇಳಿದರೂ ಮಹಾಭಾಗೆಯಾದ ಅವಳು ಸರ್ಪವಧರೂಪವಾದ ಪಾಪಕಾರ್ಯವನ್ನು ಮಾಡಲು ಮನಸ್ಸು ಮಾಡಲಿಲ್ಲ. ಆ ಸಮಯಕ್ಕೆ ಸರಿಯಾಗಿ ಪಾಶಬಂಧನದಿಂದ ಪೀಡಿತವಾಗಿದ್ದ ಸರ್ಪವು ಅತ್ಯಂತಕಷ್ಟದಿಂದ ಸ್ವಲ್ಪ-ಸ್ವಲ್ಪವಾಗಿ ಉಸಿರಾಡುತ್ತಾ ಧೈರ್ಯವನ್ನಾಶ್ರಯಿಸಿ ಮನುಷ್ಯವಾಣಿಯಿಂದ ಮಂದಸ್ವರದಲ್ಲಿ ಮಾತನಾಡತೊಡಗಿತು :

ಕೋನ್ವರ್ಜುನಕ ದೋಷೋಽತ್ರ ವಿದ್ಯತೇ ಮಮ ಬಾಲಿಶ ।
ಅಸ್ವತನ್ತ್ರಂ ಹಿ ಮಾಂ ಮೃತ್ಯುರ್ವಿವಶಂ ಯದಚೂಚುದತ್ ॥೩೫॥

“ಮೂರ್ಖನೇ! ಅರ್ಜುನಕ! ಗೌತಮಿಯ ಪುತ್ರನನ್ನು ಕಚ್ಚಿದುದರಲ್ಲಿ ನನ್ನದೇನು ದೋಷವಿದೆ? ಅಸ್ವತಂತ್ರನಾದ ಮತ್ತು ಎಚ್ಚರದಪ್ಪಿದ ನನ್ನನ್ನು ಗೌತಮಿಯ ಪುತ್ರನನ್ನು ಕಚ್ಚುವಂತೆ ಮೃತ್ಯುವು ಪ್ರಚೋದಿಸಿತು.

ತಸ್ಯಾಯಂ ವಚನಾದ್ದಷ್ಟೋ ನ ಕೋಪೇನ ನ ಕಾಮ್ಯಯಾ ।
ತಸ್ಯ ತತ್ಕಿಲ್ಬಿಷಂ ಲುಬ್ಧ ವಿದ್ಯತೇ ಯದಿ ಕಿಲ್ಬಿಷಮ್ ॥೩೬॥

ನಾನು ಮೃತ್ಯುವಿನ ಪ್ರೇರಣೆಯಿಂದಲೇ ಗೌತಮಿಯ ಪುತ್ರನನ್ನು ಕಚ್ಚಿದೆನು. ಕೋಪದಿಂದಾಗಲೀ ಯಾವುದಾದರೂ ಕಾಮನೆಯಿಂದಾಗಲೀ ನಾನವನನ್ನು ಕಚ್ಚಲಿಲ್ಲ. ವ್ಯಾಧನೇ! ಇದರಲ್ಲೇನಾದರೂ ಅಪರಾಧವಿದ್ದರೆ ಆ ಅಪರಾಧವು ಮೃತ್ಯುವಿನದೇ ಹೊರತು ನನ್ನದಲ್ಲ.”

ವ್ಯಾಧನು ಹೇಳುತ್ತಾನೆ :

ಯದ್ಯನ್ಯವಶಗೇನೇದಂ ಕೃತಂ ತೇ ಪನ್ನಗಾಶುಭಮ್ ।
ಕಾರಣಂ ವೈ ತ್ವಮಪ್ಯತ್ರ ತಸ್ಮಾತ್ತ್ವಮಪಿ ಕಿಲ್ಬಿಷೀ ॥೩೭॥

"ಸರ್ಪ! ನೀನು ಪರಾಧೀನನಾಗಿಯೇ ಈ ಅಪರಾಧವನ್ನು ಮಾಡಿದ್ದರೂ ಈ ಕಾರ್ಯಕ್ಕೆ ನೀನೂ ಒಬ್ಬ ಕಾರಣನೇ ಆಗಿರುವೆ. ಆದುದರಿಂದ ನೀನೂ ಅಪರಾಧಿಯೇ ಸರಿ.

ಮೃತ್ಪಾತ್ರಸ್ಯ ಕ್ರಿಯಾಯಾಂ ಹಿ ದಣ್ಡಚಕ್ರಾದಯೋ ಯಥಾ ।
ಕಾರಣತ್ವೇ ಪ್ರಕಲ್ಪ್ಯನ್ತೇ ತಥಾ ತ್ವಮಪಿ ಪನ್ನಗ ॥೩೮॥

ಮಡಕೆಯನ್ನು ಮಾಡುವಾಗ ದಂಡ, ಚಕ್ರ ಮುಂತಾದುವು ಕಾರಣಗಳೆಂದು ಹೇಳಲ್ಪಡುತ್ತವೆ. ಅದರಂತೆಯೇ ಬಾಲಕನ ಮೃತ್ಯುವಿಗೆ ನೀನೂ ಒಬ್ಬ ಕಾರಣನಾಗಿರುವೆ.

ಕಿಲ್ಬಿಷೀ ಚಾಪಿ ಮೇ ವಧ್ಯಃ ಕಿಲ್ಬಿಷೀ ಚಾಸಿ ಪನ್ನಗ ।
ಆತ್ಮಾನಂ ಕಾರಣಂ ಹ್ಯತ್ರ ತ್ವಮಾಖ್ಯಾಸಿ ಭುಜಙ್ಗಮ ॥೩೯॥

ಭುಜಂಗಮನೇ! ಅಪರಾಧಿಯು ಯಾರೇ ಆಗಿರಲಿ–ಅವನನ್ನು ನಾನು ವಧಿಸುತ್ತೇನೆ. ನೀನು ಅಪರಾಧಿಯಾಗಿರುವೆ. ಪ್ರಚೋದಕನು ಯಾರೇ ಆಗಿರಲಿ–'ಬಾಲಕನ ವಧೆಗೆ ನಾನೇ ಕಾರಣನು'–ಎಂದು ನೀನೇ ಹೇಳುತ್ತಿರುವೆ."

ಸರ್ಪವು ಹೇಳುತ್ತದೆ :

ಸರ್ವ ಏತೇ ಹ್ಯಸ್ವವಶಾ ದಣ್ಡಚಕ್ರಾದಯೋ ಯಥಾ ।
ತಥಾಹಮಪಿ ತಸ್ಮಾನ್ಮೇ ನೈಷ ದೋಷೋ ಮತಸ್ತವ ॥೪೦॥

"ಬೇಡನೇ! ಮಣ್ಣಿನ ಮಡಕೆಯನ್ನು ಮಾಡಲು ದಂಡ-ಚಕ್ರಾದಿಗಳು ಕಾರಣಗಳಾಗಿದ್ದರೂ ಅವು ಅಸ್ವತಂತ್ರವಸ್ತುಗಳು. ತಾವಾಗಿಯೇ ಯಾವ ಕಾರ್ಯವನ್ನೂ ಮಾಡಲು ಹೋಗುವುದಿಲ್ಲ. ಕುಂಬಾರನು ತಿರುಗಿಸಿದಂತೆ ಅವು ತಿರುಗುತ್ತಿರುತ್ತವೆ. ಹಾಗೆಯೇ ನಾನೂ ಅಸ್ವತಂತ್ರನು. ಮೃತ್ಯುವಿನ ಅಧೀನನು. ಅದರ ಪ್ರೇರಣೆಯಂತೆ ಕೆಲಸಮಾಡಿದ್ದೇನೆ. ನಾನು ಅಪರಾಧಿಯೆಂಬುದು ನಿನ್ನ ಅಭಿಪ್ರಾಯವಾಗಿದೆ. ಆದರೆ ನಾನು ಹೇಳಿರುವ ಕಾರಣಗಳಿಂದ ನನ್ನದೇನೂ ದೋಷವಿಲ್ಲ.

ಅಥವಾ ಮತಮೇತತ್ತೇ ತೇಽಪ್ಯನ್ಯೋನ್ಯಪ್ರಯೋಜಕಾಃ ।
ಕಾರ್ಯಕಾರಣಸಂದೇಹೋ ಭವತ್ಯನ್ಯೋನ್ಯಚೋದನಾತ್ ॥೪೧॥

ಅಥವಾ ದಂಡ-ಚಕ್ರಾದಿಗಳೂ ಪರಸ್ಪರಪ್ರಯೋಜಕಗಳು. ಆದುದರಿಂದಲೇ ಕಾರಣಗಳಾಗುತ್ತವೆ–ಎಂದು ನೀನು ಹೇಳುವುದಾದರೆ.: ನನ್ನ ವಿಷಯದಲ್ಲಿ ಈ ಕಾರ್ಯಕ್ಕೆ ಪರಸ್ಪರಪ್ರಚೋದನೆಯಿರುವುದರಿಂದ ಕಾರ್ಯವು ಯಾವುದು? ಕಾರಣವು ಯಾವುದು? ಕಾರ್ಯಕ್ಕೆ ಮುಖ್ಯ ಕಾರಣವು ಯಾವುದು?–ಎಂಬುದರಲ್ಲಿ ಸಂದೇಹವುಂಟಾಗುತ್ತದೆ.

ಏವಂ ಸತಿ ನ ದೋಷೋ ಮೇ ನಾಸ್ಮಿ ವಧ್ಯೋ ನ ಕಿಲ್ಬಿಷೀ ।
ಕಿಲ್ಬಿಷಂ ಸಮವಾಯೇ ಸ್ಯಾನ್ಮನ್ಯಸೇ ಯದಿ ಕಿಲ್ಬಿಷಮ್ ॥೪೨॥

ವಿಷಯವು ಹೀಗಿರುವಾಗ ಬಾಲಕನು ಮರಣಹೊಂದಿರುವುದರಲ್ಲಿ ನನಗೆ ಯಾವ ದೋಷವೂ ಇಲ್ಲ. ಅಪರಾಧವೂ ಇಲ್ಲ. ಆದುದರಿಂದ ನಾನು ವಧಾರ್ಹನಲ್ಲ. ಒಂದು ವೇಳೆ ಬಾಲಕನು ಸಾಯುವಂತೆ ಮಾಡಿದುದು ಅಪರಾಧವೆಂದು ಪರಿಗಣಿಸುವುದಾದರೆ–ಅದು ಒಬ್ಬನು ಮಾಡಿದ ಅಪರಾಧವಲ್ಲ. ಸಾಮೂಹಿಕವಾಗಿ ಮಾಡಿದ ಅಪರಾಧವಾಗಿದೆ."

ವ್ಯಾಧನು ಹೇಳುತ್ತಾನೆ :

ಕಾರಣಂ ಯದಿ ನ ಸ್ಯಾದ್ವೈ ನ ಕರ್ತಾ ಸ್ಯಾಸ್ತ್ವಮಪ್ಯುತ ।
ವಿನಾಶಕಾರಣಂ ತ್ವಂ ಚ ತಸ್ಮಾದ್ವಧ್ಯೋಽಸಿ ಮೇ ಮತಃ ॥೪೩॥

"ಸರ್ಪವೇ! ಈ ಅಪರಾಧಕ್ಕೆ ನೀನೊಬ್ಬನೇ ಕಾರಣನಾಗದೆಯೇ ಇರು. ಪ್ರಚೋದನೆಯೇ ಮುಖ್ಯಕಾರಣವೆಂದಾದರೂ ಹೇಳು. ಸ್ವತಂತ್ರಕರ್ತೃವೂ ಆಗದೆಯೇ ಇರು. ಮೃತ್ಯುವೇ ಅಪಹರಿಸಿತೆಂದಾದರೂ ಹೇಳು. ಆದರೆ ಬಾಲಕನ ವಿನಾಶಕ್ಕೆ ನೇರವಾದ ಕಾರಣನು ನೀನೇ ಆಗಿರುವೆ. ಆದುದರಿಂದಲೇ ನೀನು ವಧ್ಯನೆಂಬುದು ನನ್ನ ಅಭಿಪ್ರಾಯವಾಗಿದೆ.

ಅಸತ್ಯಪಿ ಕೃತೇ ಕಾರ್ಯೇ ನೇಹಪನ್ನಗ ಲಿಪ್ಯತೇ ।
ತಸ್ಮಾನ್ನಾತ್ರೈವ ಹೇತುಃ ಸ್ಯಾದ್ವಧ್ಯಃ ಕಿಂ ಬಹು ಭಾಷಸೇ ॥೪೪॥

ನಿನ್ನ ಅಭಿಪ್ರಾಯಾನುಸಾರವಾಗಿ ದುಷ್ಟವಾದ ಕಾರ್ಯವನ್ನು ಮಾಡಿದರೂ ಕರ್ತೃವು ಆ ದೋಷದಿಂದ ಲಿಪ್ತನಾಗದಿದ್ದರೆ–ಅಪರಾಧ ಮಾಡಿದ ಯಾವನೂ ಅಪರಾಧಕ್ಕೆ ಕಾರಣನು ಆಗುವುದೇ ಇಲ್ಲ. (ವಿಧಿಯ

ಪ್ರಚೋದನೆಯಿಂದಲೇ ಮಾಡಿದೆನೆನ್ನುತ್ತಾನೆ. ರಾಜನಿಂದ ಅವನು ವಧಿಸಲ್ಪಡುವುದೂ ಇಲ್ಲ. ಪಾಪ ಮತ್ತು ದಂಡನೆ ಇವೆಲ್ಲವೂ ವ್ಯರ್ಥವೇ ಆಗುತ್ತವೆ. ಹಾಗಾಗುವುದು ಎಂದಾದರೂ ಸಾಧ್ಯವಾಗುವುದೇ?) ಹೆಚ್ಚೇಕೆ ಮಾತನಾಡುವೆ? ನೀನೇ ಅಪರಾಧಿಯು, ನೀನೇ ವಧ್ಯನು."

ಸರ್ಪವು ಹೇಳುತ್ತದೆ :

ಕಾರ್ಯಾಭಾವೇ ಕ್ರಿಯಾ ನ ಸ್ಯಾತ್ಸತ್ಯಸತ್ಯಪಿ ಕಾರಣೇ ।
ತಸ್ಮಾತ್ಸಮೇಽಸ್ಮಿನ್ಹೇತೌ ಮೇ ವಾಚ್ಯೋ ಹೇತುರ್ವಿಶೇಷತಃ ॥೪೫॥

ಯದ್ಯಹಂ ಕಾರಣತ್ವೇನ ಮತೋ ಲುಬ್ಧಕ ತತ್ತ್ವತಃ ।
ಅನ್ಯಃ ಪ್ರಯೋಗೇ ಸ್ಯಾದತ್ರ ಕಿಲ್ಬಿಷೀ ಜನ್ತುನಾಶನೇ ॥೪೬॥

"ವ್ಯಾಧನೇ! ಕಾರಣವು ಇರಲಿ ; ಇಲ್ಲದಿರಲಿ–ಕಾರ್ಯವು ಆಗಿಯೇ ಆಗುತ್ತದೆ. ಇಲ್ಲದಿದ್ದರೆ ಕೆಲವು ಕ್ರಿಯೆಗಳೇ ಆಗುತ್ತಿರಲಿಲ್ಲ. ಕೊಡಲಿಯನ್ನು ತೆಗೆದುಕೊಳ್ಳುವುದು, ಮೇಲಕ್ಕೆತ್ತುವುದು ಮತ್ತು ಪ್ರಹರಿಸುವುದು– ಇವೆಲ್ಲವೂ ಛೇದನಕ್ರಿಯೆಗೆ ಕಾರಣಗಳಾಗುತ್ತವೆ. ಅರ್ಥಾತ್ ಕಾರಣ ವಿದ್ದರೂ ಕ್ರಿಯೆಯಾಗುತ್ತದೆ. ಕಾರಣವಿಲ್ಲದಿದ್ದರೂ ಕ್ರಿಯೆಯಾಗುತ್ತದೆ. ಎರಡು ರೆಂಬೆಗಳು ಪರಸ್ಪರವಾಗಿ ಸಂಘರ್ಷಿಸುವಾಗ ಬೆಂಕಿಯು ಹುಟ್ಟಿ ವನವನ್ನೆಲ್ಲಾ ದಹಿಸುತ್ತದೆ. ಇಲ್ಲಿ ಕಾರಣವಿಲ್ಲದಿದ್ದರೂ ಕ್ರಿಯೆಯು ನಡೆಯು ತ್ತದೆ. ಕೊಂಬೆಗಳು ಪರಸ್ಪರವಾಗಿ ಸಂಘರ್ಷಿಸಲು ಅಗೋಚರವಾದ ವಾಯುವೇ ಕರ್ತೃವೆನ್ನಬಹುದು. ಆದರದು ನಿಷ್ಪ್ರಯೋಜಕವಾದ ಕರ್ತೃತ್ವ. ಈ ಪ್ರಕರಣಗಳಲ್ಲಿಯೂ ನಾನು ಇಂತಹುದೇ ಕರ್ತೃತ್ವವನ್ನು ಹೊಂದಿದ್ದೇನೆ. ವಾಯುವಿಗೆ ರೆಂಬೆಯನ್ನು ಹೊತ್ತಿಸುವ ಕಾರ್ಯವೇನೂ ಇರಲಿಲ್ಲ. ಉದ್ದೇಶವೂ ಇರಲಿಲ್ಲ. ನನಗೂ ಬಾಲಕನನ್ನು ಕಚ್ಚುವ ಕಾರ್ಯವೂ ಇರಲಿಲ್ಲ. ಉದ್ದೇಶವೂ ಇರಲಿಲ್ಲ. ನಾನೂ ಮತ್ತು ವಾಯುವೂ ಸಮನಾಗಿದ್ದೇವೆ. ಆದುದರಿಂದ ಬಾಲಕನ ಸಾವಿಗೆ ನಾನು ವಿಶೇಷತಃ ಕಾರಣನೆಂದು ಹೇಳುವ ಕಾರಣವಿಲ್ಲ."

(ಕಾರಣೇ ಸತಿ ಕ್ರಿಯಾ ಸ್ಯಾತ್ ಕಾರಣೇ ಅಸತ್ಯಪಿ ಕ್ರಿಯಾ

"ಸ್ಯಾತ್ ತಸ್ಮಾತ್ ಕಾರ್ಯಾಭಾವೇ ಹೇತೌ ಚ ಸಮೇ ಸತಿ ಮೇ ವಿಶೇಷತಃ ಹೇತುಃ ನ ವಾಚ್ಯಃ-ಹೀಗೆ ಅನ್ವಯಿಸಲಾಗಿದೆ.

ಬಾಲಕನ ಸಾವಿಗೆ ನೇರವಾಗಿ ಕಾರಣನಾಗಿರುವುದರಿಂದ ನನ್ನನ್ನೇ ನೀನು ಅಪರಾಧಿಯೆನ್ನುವುದಾದರೆ -ಕೊಂಬೆಗಳ ಘರ್ಷಣೆಗೆ ವಾಯುವು ಪ್ರೇರಕನಾಗಿರುವಂತೆ ನನಗೊಬ್ಬ ಪ್ರೇರಕನಿರುವನೆಂಬುದನ್ನು ನೀನು ಅರಿಯಬೇಕು. ಆ ಪ್ರೇರಕನೇ (ಮೃತ್ಯುವೇ) ಈ ಬಾಲಕನ ವಿನಾಶದಲ್ಲಿ ಅಪರಾಧಿಯಾಗಿದ್ದಾನೆ. ಯಾವುದೇ ರೀತಿಯಲ್ಲಿಯೂ ನೀನು ಭಾವಿಸಿರುವಂತೆ ನಾನು ಅಪರಾಧಿಯಲ್ಲ.)"

ವ್ಯಾಧನು ಹೇಳುತ್ತಾನೆ :

ವಧ್ಯಸ್ತ್ವಂ ಮಮ ದುರ್ಬುದ್ಧೇ ಬಾಲಘಾತೀ ನೃಶಂಸಕೃತ್ ।
ಭಾಷಸೇ ಕಿಂ ಬಹು ಪುನರ್ವಧ್ಯಃ ಸನ್ಪನ್ನಗಾಧಮ ॥೪೭॥

"ದುರ್ಬುದ್ಧಿಯಾದ ಪನ್ನಗಾಧಮನೇ! ನೀನೇ ಬಾಲಕನನ್ನು ಕೊಂದವನು. ಕ್ರೂರಕರ್ಮಿಯು. ನಿಶ್ಚಯವಾಗಿಯೂ ನನ್ನಿಂದ ವಧಿಸಲ್ಪಡಲು ಅರ್ಹನಾಗಿರತಕ್ಕವನು. ವಧಾರ್ಹನಾಗಿದ್ದೂ ನೀನು ನಿರ್ದೋಷಿಯೆಂಬುದನ್ನು ಸ್ಥಿರೀಕರಿಸಲು ಬಹಳವಾಗಿ ಮಾತನಾಡುತ್ತಿರುವೆ."

ಸರ್ಪವು ಹೇಳುತ್ತದೆ :

ಯಥಾ ಹವೀಂಷಿ ಜುಹ್ವಾನಾ ಮಖೇ ವೈ ಲುಬ್ಧಕರ್ತ್ವಿಜಃ ।
ನ ಫಲಂ ಪ್ರಾಪ್ನುವನ್ತ್ಯತ್ರ ಫಲಯೋಗೇ ತಥಾ ಹ್ಯಹಮ್ ॥೪೮॥

"ವ್ಯಾಧನೇ! ನಾನು ನಿರಪರಾಧಿಯೆಂಬುದನ್ನು ಸ್ಥಿರೀಕರಿಸುವುದು ನನ್ನ ಕರ್ತವ್ಯವಾಗಿದೆ. ಯಜ್ಞಗಳಲ್ಲಿ ಋತ್ವಿಜರು ಹವಿಸ್ಸುಗಳಿಂದ ಹೋಮ ಮಾಡುತ್ತಾರೆ. ಆದರೆ ಹಾಗೆ ಹೋಮಮಾಡಿದುದರ ಫಲವು ಅವರಿಗೆ ಲಭ್ಯವಾಗುವುದಿಲ್ಲ. ಅದು ಯಜಮಾನನಿಗೆ ಸೇರುತ್ತದೆ. ಋತ್ವಿಜರೇ ಹೋಮ ಕರ್ತೃಗಳಾಗಿದ್ದರೂ ಫಲವು ಯಜಮಾನನಿಗೆ ಸೇರುವಂತೆ – ಈ ಪ್ರಕರಣದಲ್ಲಿ ನಾನೇ ಬಾಲಕನ ಮರಣಕ್ಕೆ ಕರ್ತೃವೆಂಬುದಾಗಿ ಕಂಡುಬಂದರೂ ಇದರ

ಫಲವಾಗಲೀ ಶಿಕ್ಷೆಯಾಗಲೀ ನನಗೆ ಸಲ್ಲತಕ್ಕುದಲ್ಲ. ಪ್ರೇರಕನಾದ ಮೃತ್ಯುವಿಗೇ ಸೇರತಕ್ಕುದಾಗಿದೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಮೃತ್ಯುವಿನ ಪ್ರಚೋದನೆಯಿಂದಾಗಿ ಬಾಲಕನನ್ನು ಕಚ್ಚಿದ ಸರ್ಪವು ವ್ಯಾಧನೊಡನೆ ಹೀಗೆ ಹೇಳುತ್ತಿರುವಾಗ–ಮೃತ್ಯುವೇ ಅಲ್ಲಿಗೆ ಬಂದು ಸರ್ಪದೊಡನೆ ಹೇಳಿತು :

ಪ್ರಚೋದಿತೋಽಹಂ ಕಾಲೇನ ಪನ್ನಗ ತ್ವಾಮಚೂಚುದಮ್ ।
ವಿನಾಶಹೇತುರ್ನಾಸ್ಯ ತ್ವಮಹಂ ನ ಪ್ರಾಣಿನಃ ಶಿಶೋಃ ॥೫೦॥

“ಸರ್ಪವೇ! ಕಾಲನಿಂದ ಪ್ರೇರಿತನಾದ ನಾನು ಬಾಲಕನನ್ನು ಕಚ್ಚುವಂತೆ ನಿನ್ನನ್ನು ಪ್ರಚೋದಿಸಿದೆನು. ಆದುದರಿಂದ ಈ ಶಿಶುಪ್ರಾಣಿಯ ವಿನಾಶದಲ್ಲಿ ನಾನೂ ಕಾರಣನಲ್ಲ–ನೀನೂ ಕಾರಣನಲ್ಲ. ಕಾಲನೇ ಕಾರಣನು.

ಯಥಾ ವಾಯುರ್ಜಲಧರಾನ್ವಿಕರ್ಷತಿ ತತಸ್ತತಃ ।
ತದ್ವಜ್ಜಲದವತ್ಸರ್ಪ ಕಾಲಸ್ಯಾಹಂ ವಶಾನುಗಃ ॥೫೧॥

ಯಾವ ರೀತಿಯಲ್ಲಿ ವಾಯುವು ಮೇಘಗಳನ್ನು ಇಲ್ಲಿಂದಲ್ಲಿಗೂ ಅಲ್ಲಿಂದಿಲ್ಲಿಗೂ ಸೆಳೆದಾಡುವುದೋ–ಅದೇ ರೀತಿಯಲ್ಲಿ ಕಾಲನು ನನ್ನನ್ನು ಮನಬಂದಂತೆ ಸೆಳೆದಾಡುತ್ತಿರುತ್ತಾನೆ. ಮೇಘಗಳು ವಾಯುವಿನ ವಶದಲ್ಲಿರುವಂತೆ ನಾನು ಕಾಲನ ಅಧೀನದಲ್ಲಿದ್ದೇನೆ.

ಸಾತ್ತ್ವಿಕಾ ರಾಜಸಾಶ್ಚೈವ ತಾಮಸಾ ಯೇ ಚ ಕೇಚನ ।
ಭಾವಾಃ ಕಾಲಾತ್ಮಕಾಃ ಸರ್ವೇ ಪ್ರವರ್ತನ್ತೇ ಹಿ ಜನ್ತುಷು ॥೫೨॥

ಪ್ರಾಣಿಗಳಲ್ಲಿ ಸಾತ್ತ್ವಿಕ-ರಾಜಸ-ತಾಮಸಭಾವಗಳಿಂದ ಕೂಡಿರುವ ಎಲ್ಲ ಜಂತುಗಳೂ ಕಾಲಾಧೀನವಾಗಿಯೇ ಪ್ರವರ್ತಿಸುತ್ತವೆ.

ಜಙ್ಗಮಾಃ ಸ್ಥಾವರಾಶ್ಚೈವ ದಿವಿ ವಾ ಯದಿ ವಾ ಭುವಿ ।
ಸರ್ವೇ ಕಾಲಾತ್ಮಕಾಃ ಸರ್ಪ ಕಾಲಾತ್ಮಕಮಿದಂ ಜಗತ್ ॥೫೩॥

ಭೂಮಿಯಲ್ಲಿರುವ ಅಥವಾ ಸ್ವರ್ಗದಲ್ಲಿರುವ ಎಲ್ಲ ಸ್ಥಾವರ-ಜಂಗಮ ವಸ್ತುಗಳೂ ಕಾಲಕ್ಕೆ ಅಧೀನಗಳಾಗಿಯೇ ಇವೆ. ಸರ್ಪವೇ! ಹೆಚ್ಚೇನು ಹೇಳಲಿ? ಈ ಜಗತ್ತೇ ಕಾಲಸ್ವರೂಪವಾಗಿದೆ.

ಪ್ರವೃತ್ತಯಶ್ಚ ಲೋಕೇಽಸ್ಮಿಂಸ್ತಥೈವ ಚ ನಿವೃತ್ತಯಃ ।
ತಾಸಾಂ ವಿಕೃತಯೋ ಯಾಶ್ಚ ಸರ್ವಂ ಕಾಲಾತ್ಮಕಂ ಸ್ಮೃತಮ್ ॥೫೪॥

ಈ ಲೋಕದಲ್ಲಿ ಎಷ್ಟು ವಿಧವಾದ ಪ್ರವೃತ್ತಿಮಾರ್ಗಗಳಿವೆಯೋ, ಹಾಗೆಯೇ ನಿವೃತ್ತಿಮಾರ್ಗಗಳಿವೆಯೋ, ಅವುಗಳ ವಿಕೃತಿಗಳು (ಫಲಗಳು) ಯಾವುಗಳಿವೆಯೋ–ಅವೆಲ್ಲವೂ ಕಾಲಸ್ವರೂಪಗಳೆಂದೇ ಹೇಳಲ್ಪಟ್ಟಿವೆ.

ಆದಿತ್ಯಶ್ಚನ್ದ್ರಮಾ ವಿಷ್ಣುರಾಪೋ ವಾಯುಃ ಶತಕ್ರತುಃ ।
ಅಗ್ನಿಃ ಖಂ ಪೃಥಿವೀ ಮಿತ್ರಃ ಪರ್ಜನ್ಯೋ ವಸವೋಽದಿತಿಃ ॥೫೫॥

ಸರಿತಃ ಸಾಗರಾಶ್ಚೈವ ಭಾವಾಭಾವೌ ಚ ಪನ್ನಗ ।
ಸರ್ವೇ ಕಾಲೇನ ಸೃಜ್ಯನ್ತೇ ಹ್ರಿಯನ್ತೇ ಚ ಪುನಃ ಪುನಃ ॥೫೬॥

ಪನ್ನಗ! ಸೂರ್ಯ, ಚಂದ್ರ, ವಿಷ್ಣು, ಜಲ, ವಾಯು, ಇಂದ್ರ, ಅಗ್ನಿ, ಆಕಾಶ, ಪೃಥಿವೀ, ಮಿತ್ರ, ಪರ್ಜನ್ಯ, ವಸುಗಳು, ಅದಿತಿ, ನದಿಗಳು, ಸಮುದ್ರಗಳು, ಭಾವ ಮತ್ತು ಅಭಾವ (ಸೃಷ್ಟಿ-ಪ್ರಳಯಗಳು)–ಇವೆಲ್ಲವೂ ಕಾಲನಿಂದಲೇ ಸೃಷ್ಟಿಸಲ್ಪಡುತ್ತವೆ. ಪುನಃ ಅವನಿಂದಲೇ ಸೆಳೆಯಲ್ಪಡುತ್ತವೆ.

ಏವಂ ಜ್ಞಾತ್ವಾ ಕಥಂ ಮಾಂ ತ್ವಂ ಸದೋಷಂ ಸರ್ಪ ಮನ್ಯಸೇ ।
ಅಥ ಚೈವಂಗತೇ ದೋಷೇ ಮಯಿ ತ್ವಮಪಿ ದೋಷವಾನ್ ॥೫೭॥

ಸರ್ಪ! ಈ ಎಲ್ಲವನ್ನೂ ತಿಳಿದಿದ್ದರೂ ನೀನು ನನ್ನನ್ನು ಅಪರಾಧಿಯೆಂದು ಹೇಗೆ ಭಾವಿಸುವೆ? ವಿಷಯವು ಹೀಗಿರುವಾಗಲೂ ನನ್ನನ್ನು ದೋಷಿಯೆಂದೆಣಿಸಿದುದಾದರೆ–ನನ್ನ ಜೊತೆಯಲ್ಲಿ ನೀನೂ ದೋಷಿಯೇ ಆಗುವೆ.”

ಸರ್ಪವು ಹೇಳುತ್ತದೆ :

ನಿರ್ದೋಷಂ ದೋಷವನ್ತಂ ವಾ ನ ತ್ವಾಂ ಮೃತ್ಯೋ ಬ್ರವೀ-
ಮ್ಯಹಮ್ ।
ತ್ವಯಾಹಂ ಚೋದಿತ ಇತಿ ಬ್ರವೀಮ್ಯೇತಾವದೇವ ತು ॥೫೮॥

“ಮೃತ್ಯುದೇವನೇ! ನಿನ್ನನ್ನು ನಾನು ದೋಷಿಯೆಂದಾಗಲೀ–

ನಿರ್ದೋಷನೆಂದಾಗಲೀ ಹೇಳುತ್ತಿಲ್ಲ. 'ಬಾಲಕನನ್ನು ಕಚ್ಚಲು ನಿನ್ನಿಂದ ನಾನು ಪ್ರೇರಿತನಾದೆನು'–ಎಂದು ಇಷ್ಟು ಮಾತ್ರ ಹೇಳುತ್ತಿದ್ದೇನೆ.

ಯದಿ ಕಾಲೇ ತು ದೋಷೋಽಸ್ತಿ ಯದಿ ತತ್ರಾಪಿ ನೇಷ್ಯತೇ ।
ದೋಷೋ ನೈವ ಪರೀಕ್ಷ್ಯೋ ಮೇ ನ ಹ್ಯತ್ರಾಧಿಕೃತಾ ವಯಮ್ ॥೫೯॥

ಈ ವಿಷಯದಲ್ಲಿ ಕಾಲನಲ್ಲಿಯೇ ದೋಷವಿರಬಹುದು ಅಥವಾ ಅವನೂ ನಿರ್ದೋಷನೇ ಆಗಿರಬಹುದು. ಇದು ನನಗೆ ಸಂಬಂಧಪಟ್ಟ ವಿಷಯವಲ್ಲ. ದೋಷಿಯು ಯಾರೆಂಬುದನ್ನು ನಾನು ಪರೀಕ್ಷಿಸಹೊರಟಿಲ್ಲ. ಹಾಗೆ ಪರೀಕ್ಷಿಸಲು ನನಗೆ ಯಾವ ಅಧಿಕಾರವೂ ಇಲ್ಲ.

ನಿರ್ಮೋಕ್ಷಸ್ತ್ವಸ್ಯ ದೋಷಸ್ಯ ಮಯಾ ಕಾರ್ಯೋ ಯಥಾ ತಥಾ ।
ಮೃತ್ಯೋರಪಿ ನ ದೋಷಃ ಸ್ಯಾದಿತಿ ಮೇಽತ್ರ ಪ್ರಯೋಜನಮ್ ॥

ನನ್ನ ಮೇಲೆ ಬಂದಿರುವ ಈ ದೋಷದಿಂದ ಹೇಗಾದರೂ ಮಾಡಿ ನಾನು ಮುಕ್ತನಾಗಬೇಕಾಗಿದೆ. ಮೃತ್ಯುವಿನಲ್ಲಿಯೂ ದೋಷವಿಲ್ಲವೆಂದರೆ ಅದರಿಂದ ನನಗೆ ಪ್ರಯೋಜನವೇ ಆಯಿತು."

ಭೀಷ್ಮನು ಹೇಳುತ್ತಾನೆ :

ಸರ್ಪೋಽಥಾರ್ಜುನಕಂ ಪ್ರಾಹ ಶ್ರುತಂ ತೇ ಮೃತ್ಯುಭಾಷಿತಮ್ ।
ನಾನಾಗಸಂ ಮಾಂ ಪಾಶೇನ ಸಂತಾಪಯಿತುಮರ್ಹಸಿ ॥೬೦॥

ಧರ್ಮಜ! ಮೃತ್ಯುವಿನೊಡನೆ ಹೀಗೆ ಹೇಳಿದ ನಂತರ ಸರ್ಪವು ವ್ಯಾಧನಿಗೆ ಹೇಳಿತು :

"ಅರ್ಜುನಕ! ಮೃತ್ಯುವು ಹೇಳಿದುದನ್ನು ನೀನೂ ಕೇಳಿರುವೆ. ನಾನು ನಿರಪರಾಧಿಯೆಂಬುದು ಈಗ ನಿನಗೂ ಸ್ಪಷ್ಟವಾಗಿ ತಿಳಿದಂತಾಯಿತು. ಇನ್ನಾದರೂ ನಿರಪರಾಧಿಯಾದ ನನ್ನನ್ನು ಬಂಧಿಸಿ ಸಂತಾಪಗೊಳಿಸುವುದು ಯುಕ್ತವಲ್ಲ."

ವ್ಯಾಧನು ಹೇಳುತ್ತಾನೆ :

ಮೃತ್ಯೋಃ ಶ್ರುತಂ ಮೇ ವಚನಂ ತವ ಚೈವ ಭುಜಙ್ಗಮ ।
ನೈವ ತಾವದದೋಷತ್ವಂ ಭವತಿ ತ್ವಯಿ ಪನ್ನಗ ॥೬೧॥

"ಸರ್ಪವೇ! ನಾನು ಮೃತ್ಯುವಿನ ಮಾತನ್ನೂ ಕೇಳಿದೆನು ; ನಿನ್ನ ಮಾತನ್ನೂ ಕೇಳಿದೆನು. ಆದರೆ ಇಷ್ಟರಿಂದಲೇ ನಿನ್ನಲ್ಲಿ ದೋಷವಿಲ್ಲದಿರುವಿಕೆಯು ಸಿದ್ಧವಾಗಿ ಬಿಡುವುದಿಲ್ಲ.

ಮೃತ್ಯುಸ್ತ್ವಂ ಚೈವ ಹೇತುರ್ಹಿ ಬಾಲಸ್ಯಾಸ್ಯ ವಿನಾಶನೇ ।
ಉಭಯಂ ಕಾರಣಂ ಮನ್ಯೇ ನ ಕಾರಣಮಕಾರಣಮ್ ॥೬೩॥

ಈ ಬಾಲಕನ ವಿನಾಶದಲ್ಲಿ ನೀನು ಮತ್ತು ಮೃತ್ಯು – ಇಬ್ಬರೂ ಕಾರಣರಾಗಿರುವಿರಿ. ನಿಮ್ಮಿಬ್ಬರನ್ನೂ ನಾನು ಅಪರಾಧಿಗಳೆಂದೇ ಭಾವಿಸುತ್ತೇನೆ. ನಿಮ್ಮಿಬ್ಬರಲ್ಲಿ ಒಬ್ಬನನ್ನು ಅಪರಾಧಿಯೆಂದಾಗಲೀ ಮತ್ತೊಬ್ಬನನ್ನು ನಿರಪರಾಧಿಯೆಂದಾಗಲೀ ಭಾವಿಸುವುದಿಲ್ಲ. ಕಾರಣವಲ್ಲದುದನ್ನು ಕಾರಣವೆಂದು ತಿಳಿಯುತ್ತಿಲ್ಲ.

ಧಿಙ್ಮೃತ್ಯುಂ ಚ ದುರಾತ್ಮಾನಂ ಕ್ರೂರಂ ದುಃಖಕರಂ ಸತಾಮ್ ।
ತ್ವಾಂ ಚೈವಾಹಂ ವಧಿಷ್ಯಾಮಿ ಪಾಪಂ ಪಾಪಸ್ಯ ಕಾರಣಮ್ ॥೬೪॥

ಸತ್ಪುರುಷರಿಗೂ ದುಃಖವನ್ನುಂಟುಮಾಡುವ, ಕ್ರೂರನಾದ, ದುರಾತ್ಮನಾದ ಈ ಮೃತ್ಯುವಿಗೆ ಧಿಕ್ಕಾರವಿರಲಿ! ಸರ್ಪವೇ! ನೀನಾದರೋ ಈ ಪಾಪಕ್ಕೆ ಮುಖ್ಯಕಾರಣನಾಗಿರುವೆ. ಪಾಪಿಷ್ಠನಾಗಿರುವ ನಿನ್ನನ್ನು ನಿಶ್ಚಯವಾಗಿಯೂ ಸಂಹರಿಸುತ್ತೇನೆ."

ಮೃತ್ಯುಪುರುಷನು ಹೇಳುತ್ತಾನೆ :

ವಿವಶೌ ಕಾಲವಶಗಾವಾವಾಂ ನಿರ್ದಿಷ್ಟಕಾರಿಣೌ ।
ನಾವಾಂ ದೋಷೇಣ ಗನ್ತವ್ಯೌ ಯದಿ ಸಮ್ಯಕ್ಪ್ರಪಶ್ಯಸಿ ॥೬೫॥

"ನಾವಿಬ್ಬರೂ ಅಸ್ವತಂತ್ರರು. ಕಾಲನಿಗೆ ಅಧೀನರಾಗಿರತಕ್ಕವರು. ಅವರ ಆಜ್ಞೆಯಂತೆ ಕೆಲಸಮಾಡತಕ್ಕವರು. ನೀನು ಈ ವಿಷಯವನ್ನು ಚೆನ್ನಾಗಿ ಪರಿಶೀಲಿಸಿದ್ದೇ ಆದರೆ–ನಮ್ಮಿಬ್ಬರಲ್ಲಿ ಯಾರನ್ನೂ ಅಪರಾಧಿಯೆಂದು ಭಾವಿಸುವುದಿಲ್ಲ."

ವ್ಯಾಧನು ಹೇಳುತ್ತಾನೆ :

ಯುವಾಮುಭೌ ಕಾಲವಶೌ ಯದಿ ಮೇ ಮೃತ್ಯುಪನ್ನಗೌ ।
ಹರ್ಷಕ್ರೋಧೌ ಯಥಾಸ್ಯಾತಾಮೇತದಿಚ್ಛಾಮಿ ವೇದಿತುಮ್ ॥೬೬॥

"ಮೃತ್ಯು-ಪನ್ನಗರೇ! ನೀವಿಬ್ಬರೂ ಕಾಲನಿಗೆ ಅಧೀನರೇ ಆಗಿದ್ದ ಪಕ್ಷದಲ್ಲಿ ಉಪಕಾರಿಯಾದ ಮತ್ತು ತಟಸ್ಥನಾದ ನನ್ನ ವಿಷಯದಲ್ಲಿ ಪ್ರೀತಿಯೂ, ಅಪಕಾರಿಗಳಾದ ನಿಮ್ಮ ವಿಷಯದಲ್ಲಿ ಕ್ರೋಧವೂ ಜನರಿಗೆ ಹೇಗೆ ಉಂಟಾಗುತ್ತಿದ್ದಿತು?

ಎಲ್ಲವೂ ಕಾಲಾಧೀನವೆಂದೇ ಭಾವಿಸಿಬಿಟ್ಟಿದ್ದಿದ್ದರೆ ಲೋಕದಲ್ಲಿ ರಾಗ-ದ್ವೇಷಗಳಿಗೆ ಅವಕಾಶವೇ ಇರುತ್ತಿರಲಿಲ್ಲ. ಈ ವಿಷಯವನ್ನು ನಿಮ್ಮಿಂದ ಕೇಳಿ ತಿಳಿಯಬೇಕೆಂದಿರುತ್ತೇನೆ."

ಮೃತ್ಯುವು ಹೇಳುತ್ತಾನೆ :

ಯಾ ಕಾಚಿದೇವ ಚೇಷ್ಟಾ ಸ್ಯಾತ್ಸರ್ವಾ ಕಾಲಪ್ರಚೋದಿತಾ ।
ಪೂರ್ವಮೇವೈತದುಕ್ತಂ ಹಿ ಮಯಾ ಲುಬ್ಧಕ ಕಾಲತಃ ॥೬೭॥

"ವ್ಯಾಧನೇ! ಜಗತ್ತಿನಲ್ಲಿ ಯಾವ ಒಂದು ಕೆಲಸವೇ ಆಗಲಿ–ಕಾಲನ ಪ್ರೇರಣೆಯಿಂದಲೇ ನಡೆಯುತ್ತದೆ. ಕಾಲಾನುಗುಣವಾದ ಈ ವಿಷಯವನ್ನು ನಿನಗೆ ಈ ಮೊದಲೇ ಹೇಳಿರುತ್ತೇನೆ.

ತಸ್ಮಾದುಭೌ ಕಾಲವಶಾವಾವಾಂ ನಿರ್ದಿಷ್ಟಕಾರಿಣೌ ।
ನಾವಾಂ ದೋಷೇಣ ಗನ್ತವ್ಯೌ ತ್ವಯಾ ಲುಬ್ಧಕ ಕರ್ಹಿಚಿತ್ ॥೬೮॥

ನಾವಿಬ್ಬರೂ ಕಾಲವಶರಾಗಿದ್ದೇವೆ. ಅವನ ಆಜ್ಞೆಯಂತೆ ನಡೆಯುತ್ತೇವೆ. ಆದುದರಿಂದ ಯಾವುದೇ ಕಾರಣದಿಂದಲೂ ನೀನು ನಮ್ಮನ್ನು ಅಪರಾಧಿಗಳೆಂದು ಭಾವಿಸಬಾರದು."

ಭೀಷ್ಮನು ಹೇಳುತ್ತಾನೆ :

ಅಥೋಪಗಮ್ಯ ಕಾಲಸ್ತು ತಸ್ಮಿನ್ಧರ್ಮಾರ್ಥಸಂಶಯೇ ।
ಅಬ್ರವೀತ್ಪನ್ನಗಂ ಮೃತ್ಯುಂ ಲುಬ್ಧಂ ಚಾರ್ಜುನಕಂ ತಥಾ ॥೬೯॥

ಯುಧಿಷ್ಠಿರ! ಧರ್ಮದ ವಿಷಯದಲ್ಲಿ ಸಂದೇಹವುಂಟಾಗಿದ್ದ ಆ ಸಮಯದಲ್ಲಿ ಕಾಲಪುರುಷನೇ ಅಲ್ಲಿಗೆ ಆಗಮಿಸಿ ಪನ್ನಗ-ಮೃತ್ಯುಗಳನ್ನೂ ವ್ಯಾಧನಾದ ಅರ್ಜುನಕನನ್ನೂ ಕುರಿತು ಹೇಳಿದನು :

ನ ಹ್ಯಹಂ ನಾಪ್ಯಯಂ ಮೃತ್ಯುರ್ನಾಯಂ ಲುಬ್ಧಕ ಪನ್ನಗಃ ।
ಕಿಲ್ಬಿಷೀ ಜನ್ತುಮರಣೇ ನ ವಯಂ ಹಿ ಪ್ರಯೋಜಕಾಃ ॥೭೦॥

“ಲುಬ್ಧಕ! ನಾನಾಗಲೀ, ಈ ಮೃತ್ಯುವಾಗಲೀ, ಈ ಸರ್ಪವಾಗಲೀ– ಈ ಬಾಲಕನ ಮರಣದಲ್ಲಿ ಅಪರಾಧಿಗಳಲ್ಲ. ನಾವು ಈ ಕಾರ್ಯದಲ್ಲಿ ಪರಸ್ಪರಪ್ರೇರಕರೂ ಅಲ್ಲ.

ಅಕರೋದ್ಯದಯಂ ಕರ್ಮ ತನ್ನೋಽರ್ಜುನಕ ಚೋದಕಮ್ ।
ವಿನಾಶಹೇತುರ್ನಾನ್ಯೋಽಸ್ಯ ವಧ್ಯತೇಽಯಂ ಸ್ವಕರ್ಮಣಾ ॥೭೧॥

ಅರ್ಜುನಕ! ಈ ಬಾಲಕನು ಮಾಡಿದ ಕರ್ಮವೇ ನಮ್ಮೆಲ್ಲರ ಕಾರ್ಯಗಳಿಗೂ ಪ್ರಚೋದಕವಾಗಿದೆ. ಈ ಬಾಲಕನ ವಿನಾಶಕ್ಕೆ ಬೇರೆ ಯಾರೂ ಕಾರಣರಲ್ಲ. ಅವನು ಮಾಡಿದ ಕರ್ಮದಿಂದಲೇ ಅವನು ವಧಿಸಲ್ಪಟ್ಟಿರುತ್ತಾನೆ.

ಯದನೇನ ಕೃತಂ ಕರ್ಮ ತೇನಾಯಂ ನಿಧನಂ ಗತಃ ।
ವಿನಾಶಹೇತುಃ ಕರ್ಮಾಸ್ಯ ಸರ್ವೇ ಕರ್ಮವಶಾ ವಯಮ್ ॥೭೨॥

ಇವನು ಯಾವ ಕರ್ಮವನ್ನು ಮಾಡಿದ್ದನೋ–ಆ ಕರ್ಮದ ಫಲಾನುಸಾರವಾಗಿ ನಿಧನಹೊಂದಿದನು. ಇವನ ವಿನಾಶಕ್ಕೆ ಇವನ ಕರ್ಮಫಲವೇ ಕಾರಣ. ನಾವೆಲ್ಲರೂ ಕರ್ಮಕ್ಕೆ ಅಧೀನರಾಗಿದ್ದೇವೆ.

ಕರ್ಮದಾಯಾದವಾಲ್ಲೋಕಃ ಕರ್ಮಸಮ್ಬನ್ಧಲಕ್ಷಣಃ ।
ಕರ್ಮಾಣಿ ಚೋದಯನ್ತೀಹ ಯಥಾನ್ಯೋನ್ಯಂ ತಥಾ ವಯಮ್ ॥೭೩॥

ಲೋಕದಲ್ಲಿ ಕರ್ಮವು ಪುತ್ರ-ಪೌತ್ರಾದಿಗಳಂತೆ ಕರ್ತೃವನ್ನು ಸದಾ ಅನುಸರಿಸುತ್ತಲೇ ಇರುತ್ತದೆ. ಕರ್ಮವೇ ಸುಖ-ದುಃಖಾದಿಗಳ ಸಂಬಂಧ ಸೂಚಕವಾಗಿದೆ. ಲೋಕದಲ್ಲಿ ಪರಸ್ಪರವಾಗಿ ಒಬ್ಬರು ಮತ್ತೊಬ್ಬರನ್ನು ಸ್ವಕಾರ್ಯಾರ್ಥವಾಗಿ ಹೇಗೆ ಪ್ರಚೋದಿಸುತ್ತೇವೆಯೋ ಹಾಗೆಯೇ ಕರ್ಮಗಳೂ ಎಲ್ಲರನ್ನೂ ಪ್ರಚೋದಿಸುತ್ತವೆ. ನಾವೆಲ್ಲರೂ ಪ್ರಾಣಿಗಳು ಮಾಡುವ ಕರ್ಮಗಳಿಂದ ಪ್ರಚೋದಿತರಾಗುತ್ತೇವೆ.

ಯಥಾ ಮೃತ್ಪಿಣ್ಡತಃ ಕರ್ತಾ ಕುರುತೇ ಯದ್ಯದಿಚ್ಛತಿ ।
ಏವಮಾತ್ಮಕೃತಂ ಕರ್ಮ ಮಾನವಃ ಪ್ರತಿಪದ್ಯತೇ ॥೭೪॥

ಯಾವ ರೀತಿಯಲ್ಲಿ ಕುಂಬಾರನು ಮಣ್ಣಿನ ಮುದ್ದೆಯಿಂದ ಬೇಕು ಬೇಕಾದ ಪದಾರ್ಥಗಳನ್ನು ಮಾಡಿಕೊಳ್ಳುವನೋ–ಅದೇ ರೀತಿಯಲ್ಲಿ ಮನುಷ್ಯನು ತಾನು ಮಾಡಿದ ಕರ್ಮಾನುಸಾರವಾಗಿ ಎಲ್ಲವನ್ನೂ ಪಡೆದುಕೊಳ್ಳುತ್ತಾನೆ.

ಯಥಾ ಚ್ಛಾಯಾತಪೌ ನಿತ್ಯಂ ಸುಸಮ್ಬದ್ಧೌ ನಿರನ್ತರಮ್ ।
ತಥಾ ಕರ್ಮ ಚ ಕರ್ತಾ ಚ ಸಮ್ಬದ್ಧಾವಾತ್ಮಕರ್ಮಭಿಃ ॥೭೫॥

ಯಾವ ರೀತಿಯಲ್ಲಿ ಬಿಸಿಲು ಮತ್ತು ನೆರಳುಗಳು ಯಾವಾಗಲೂ ಒಂದಕ್ಕೊಂದು ಸೇರಿಕೊಂಡೇ ಇರುತ್ತವೆಯೋ–ಅದೇ ರೀತಿಯಲ್ಲಿ ಕರ್ಮ ಮತ್ತು ಕರ್ತೃಗಳಿಬ್ಬರೂ ಸೇರಿಕೊಂಡೇ ಇರುತ್ತಾರೆ. ತಾನು ಮಾಡಿದ ಕರ್ಮಗಳಿಗೆ ಅನುಸಾರವಾಗಿ ಮನುಷ್ಯನು ಫಲವನ್ನು ಪಡೆಯುತ್ತಾನೆ.

ಏವಂ ನಾಹಂ ನ ವೈ ಮೃತ್ಯುರ್ನ ಸರ್ಪೋ ನ ತಥಾ ಭವಾನ್ ।
ನ ಚೇಯಂ ಬ್ರಾಹ್ಮಣೀ ವೃದ್ಧಾ ಶಿಶುರೇವಾತ್ರ ಕಾರಣಮ್ ॥೭೬॥

ಹೀಗೆ ನಾನಾಗಲೀ, ಮೃತ್ಯುವಾಗಲೀ, ಸರ್ಪವಾಗಲೀ, ನೀನಾಗಲೀ, ವೃದ್ಧಬ್ರಾಹ್ಮಣಿಯಾಗಲೀ–ಶಿಶುವಿನ ಮರಣಕ್ಕೆ ಕಾರಣರಲ್ಲ. ಶಿಶುವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮವೇ ಇಂದಿನ ಅದರ ಮರಣಕ್ಕೆ ಕಾರಣವಾಗಿದೆ. (ಶಿಶುವೇ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಕ್ಕೆ ಅನುಗುಣವಾಗಿ ತನ್ನ ಮರಣಕ್ಕೆ ತಾನೇ ಕಾರಣವಾಗಿದೆ.)"

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಕಾಲನು ಹೀಗೆಂದು ಹೇಳಲಾಗಿ ಗೌತಮೀ ಬ್ರಾಹ್ಮಣಿಯು ಪ್ರತಿಯೊಬ್ಬ ಮನುಷ್ಯನಿಗೂ ತಮ್ಮ ಕರ್ಮಾನುಸಾರವಾಗಿಯೇ ಫಲವು ದೊರೆಯುತ್ತದೆಂಬುದನ್ನು ತಿಳಿದು ಅರ್ಜುನಕನೊಡನೆ ಹೇಳಿದಳು :

ನೈವ ಕಾಲೋ ನ ಭುಜಗೋ ನ ಮೃತ್ಯುರಿಹ ಕಾರಣಮ್ ।
ಸ್ವಕರ್ಮಭಿರಯಂ ಬಾಲಃ ಕಾಲೇನ ನಿಧನಂ ಗತಃ ॥೭೭॥

“ವ್ಯಾಧನೇ! ನನ್ನ ಮಗನ ಮರಣಕ್ಕೆ ಕಾಲನಾಗಲೀ, ಸರ್ಪವಾಗಲೀ, ಮೃತ್ಯುವಾಗಲೀ–ಕಾರಣರಲ್ಲ. ಈ ನನ್ನ ಮಗನು ತನ್ನ ಪೂರ್ವಾರ್ಜಿತ ಕರ್ಮದಿಂದಲೇ ಪ್ರೇರಿತನಾಗಿ ಕಾಲನಿಂದ ಮೃತನಾಗಿದ್ದಾನೆ.

ಮಯಾ ಚ ತತ್ಕೃತಂ ಕರ್ಮ ಯೇನಾಯಂ ಮೇ ಮೃತಃ ಸುತಃ ।
ಯಾ ತು ಕಾಲಸ್ತಥಾ ಮೃತ್ಯುರ್ಮುಞ್ಚಾರ್ಜುನಕ ಪನ್ನಗಮ್ ॥೭೯॥

ಅರ್ಜುನಕ! ನಾನು ಕೂಡ ಅಂತಹ ದುಷ್ಕರ್ಮವನ್ನು ಮಾಡಿರುವುದ ರಿಂದಲೇ ನನ್ನ ಈ ಮಗನು ಮೃತನಾದನು. ಆದುದರಿಂದ ಇವನ ಮರಣಕ್ಕೆ ಬೇರೆ ಯಾರೂ ಹೊಣೆಗಾರರಲ್ಲ. ಕಾಲ-ಮೃತ್ಯುಗಳು ಹೊರಟುಹೋಗಲಿ. ಈ ಸರ್ಪವನ್ನೂ ನೀನು ಬಿಟ್ಟುಬಿಡು.”

ಭೀಷ್ಮನು ಹೇಳುತ್ತಾನೆ :

“ಧರ್ಮಜ! ಅನಂತರ ಮೃತ್ಯು-ಕಾಲ-ಪನ್ನಗರು ತಾವು ಎಲ್ಲಿಂದ ಬಂದಿದ್ದರೋ ಅಲ್ಲಿಗೇ ಹೊರಟುಹೋದರು. ಕಾಲ-ಮೃತ್ಯು-ಸರ್ಪಗಳ ಸಮುಚಿತವಾದ ಮಾತುಗಳನ್ನು ಕೇಳಿದನಂತರ ಅರ್ಜುನಕನೂ ಶೋಕ ರಹಿತನಾದನು. ಗೌತಮೀಬ್ರಾಹ್ಮಣಿಯೂ ಶೋಕವನ್ನು ತ್ಯಜಿಸಿದಳು.

ಯುಧಿಷ್ಠಿರ! ನೀನು ಈ ಆಖ್ಯಾನವನ್ನು ಕೇಳಿದ ನಂತರವಾದರೂ ಶಾಂತಚಿತ್ತನಾಗು. ಶೋಕಪರನಾಗಬೇಡ. ಪ್ರಪಂಚದಲ್ಲಿರುವ ಎಲ್ಲ ಮನುಷ್ಯರೂ ತಾವು ಮಾಡಿದ ಕರ್ಮಗಳಿಗೆ ಅನುಸಾರವಾಗಿ ಪ್ರಾಪ್ತವಾಗುವ ಲೋಕಗಳಿಗೆ ಹೋಗುತ್ತಾರೆ.

ನೈವ ತ್ವಯಾ ಕೃತಂ ಕರ್ಮ ನಾಪಿ ದುರ್ಯೋಧನೇನ ವೈ ।
ಕಾಲೇನೈತತ್ಕೃತಂ ವಿದ್ಧಿ ನಿಹತಾ ಯೇನ ಪಾರ್ಥಿವಾಃ ॥೮೨॥

ಈ ಸಂಹಾರಕಾರ್ಯವು ನಿನ್ನಿಂದಲೂ ಆಗಿಲ್ಲ; ದುರ್ಯೋಧನ ನಿಂದಲೂ ಆಗಿಲ್ಲ. ಅವರವರ ಕರ್ಮಾನುಸಾರವಾಗಿ ಕಾಲವೇ ಈ ಕಾರ್ಯ ವನ್ನು ಮಾಡಿರುವುದೆಂದೂ ತಿಳಿ. ಆ ಕಾಲನಿಂದಲೇ ಎಲ್ಲ ರಾಜರೂ ಹತರಾಗಿದ್ದಾರೆ.”

ವೈಶಂಪಾಯನರು ಹೇಳುತ್ತಾರೆ :

“ಜನಮೇಜಯ! ಭೀಷ್ಮನು ಹೇಳಿದ ಈ ಮಾತನ್ನು ಕೇಳಿ ಮಹಾ

ತೇಜಸ್ವಿಯಾದ, ಧರ್ಮಜ್ಞನಾದ ಯುಧಿಷ್ಠಿರನು ನಿಶ್ಚಿಂತನಾದನು. ಪುನಃ ಭೀಷ್ಮನನ್ನು ಕುರಿತು ಮುಂದಿನ ಪ್ರಶ್ನೆಯನ್ನು ಕೇಳತೊಡಗಿದನು.”

೧ನೆಯ ಅಧ್ಯಾಯವು ಮುಗಿಯಿತು.

ಪ್ರಜಾಪತಿಮನುವಂಶದ ವರ್ಣನೆ: ಅಗ್ನಿಯ ಮಗನಾದ ಸುದರ್ಶನನು ಅತಿಥಿಸತ್ಕಾರರೂಪವಾದ ಧರ್ಮದಿಂದ ಮೃತ್ಯುವನ್ನು ಜಯಿಸಿದುದು

ಯುಧಿಷ್ಠಿರನು ಹೇಳುತ್ತಾನೆ :

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಶ್ರುತಂ ಮೇ ಮಹದಾಖ್ಯಾನಮಿದಂ ಮತಿಮತಾಂ ವರ ॥೧॥

“ಮಹಾಪ್ರಾಜ್ಞನೇ! ಸರ್ವಶಾಸ್ತ್ರವಿಶಾರದನೇ! ಬುದ್ಧಿವಂತರಲ್ಲಿ ಶ್ರೇಷ್ಠನಾದವನೇ! ಪಿತಾಮಹನೇ! ಮಹತ್ತ್ವಪೂರ್ಣವಾದ ಈ ಆಖ್ಯಾನವನ್ನು ಏಕಾಗ್ರಚಿತ್ತನಾಗಿ ಕೇಳಿದೆನು. ಪುನಃ ನಾನು ನೀನು ಹೇಳುವ ಧರ್ಮಾರ್ಥಯುಕ್ತವಾದ ಇನ್ನೂ ಕೆಲವು ಉಪಾಖ್ಯಾನಗಳನ್ನು ಕೇಳಲು ಇಚ್ಛಿಸಿದ್ದೇನೆ. ನೀನು ಅವೆಲ್ಲವನ್ನೂ ವಿಸ್ತಾರವಾಗಿಯೇ ಹೇಳುವ ಕೃಪೆ ಮಾಡು.

ಕೇನ ಮೃತ್ಯುರ್ಗೃಹಸ್ಥೇನ ಧರ್ಮಮಾಶ್ರಿತ್ಯ ನಿರ್ಜಿತಃ ।
ಇತ್ಯೇತತ್ಸರ್ವಮಾಚಕ್ಷ್ವ ತತ್ತ್ವೇನಾಪಿ ಚ ಪಾರ್ಥಿವ ॥೨॥

ಯಾವ ಗೃಹಸ್ಥನು ಗೃಹಸ್ಥಾಶ್ರಮಧರ್ಮವನ್ನೇ ಆಶ್ರಯಿಸಿ ಮೃತ್ಯುವನ್ನು ಜಯಿಸಿರುವನು? ಇದರ ಬಗೆಗೆ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಯಾವ ರೀತಿಯಲ್ಲಿ ಗೃಹಸ್ಥನು ಧರ್ಮವನ್ನೇ ಆಶ್ರಯಿಸಿ ಮೃತ್ಯುವನ್ನು ಜಯಿಸಿರುವನೆಂಬ ವಿಷಯದಲ್ಲಿ ಪುರಾತನವಾದ

ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು, ಕೇಳು :

ಪ್ರಜಾಪತಿಮನುವಿಗೆ 'ಇಕ್ಷ್ವಾಕು' ಎಂಬ ಹೆಸರಿನ ಒಬ್ಬ ಮಗನಿದ್ದನು. ಸೂರ್ಯಸಮಾನತೇಜಸ್ವಿಯಾದ ಆ ಇಕ್ಷ್ವಾಕುರಾಜನಿಗೆ ನೂರು ಮಂದಿ ಮಕ್ಕಳು ಹುಟ್ಟಿದರು. ಅವರಲ್ಲಿ ಹತ್ತನೆಯವನಾದ ಧರ್ಮಾತ್ಮನಾದ, ಸತ್ಯ ವಿಕ್ರಮನಾದ ದಶಾಶ್ವನೆಂಬುವನು ಮಾಹಿಷ್ಮತೀಪಟ್ಟಣದಲ್ಲಿ ರಾಜನಾಗಿದ್ದನು. ದಶಾಶ್ವರಾಜನ ಮಗನು ಕೂಡ ಪರಮಧಾರ್ಮಿಕನಾದ ರಾಜನಾಗಿದ್ದನು. ಅವನ ಮನಸ್ಸು ಯಾವಾಗಲೂ ಸತ್ಯ, ತಪಸ್ಸು, ದಾನ –ಇವುಗಳಲ್ಲಿಯೇ ಆಸಕ್ತಿಯನ್ನು ಹೊಂದಿದ್ದಿತು. ಆ ರಾಜನು ಭೂಮಂಡಲದಲ್ಲಿ ಮದಿರಾಶ್ವ ಎಂಬ ಹೆಸರಿನಿಂದ ವಿಖ್ಯಾತನಾಗಿದ್ದನು. ಅವನು ಯಾವಾಗಲೂ ವೇದಾಭ್ಯಾಸದಲ್ಲಿಯೂ ಮತ್ತು ಧನುರ್ವಿದ್ಯಾಭ್ಯಾಸದಲ್ಲಿಯೂ ನಿರತನಾಗಿದ್ದನು. ಮದಿರಾಶ್ವನ ಮಗನಾದ ದ್ಯುತಿಮಂತನು ಮಹಾಭಾಗ್ಯಶಾಲಿಯೂ, ಮಹಾತೇಜಸ್ವಿಯೂ, ಮಹಾಸತ್ತ್ವಶಾಲಿಯೂ, ಮಹಾಬಲನೂ ಆಗಿದ್ದನು. ಸುವೀರನೆಂಬ ಹೆಸರಿನ ಪರಮಧಾರ್ಮಿಕನಾದ ರಾಜನು ದ್ಯುತಿಮಂತನ ಮಗನು. ಅವನು ಎಲ್ಲ ಲೋಕಗಳಲ್ಲಿಯೂ ವಿಖ್ಯಾತನಾಗಿದ್ದನು. ಧರ್ಮಾತ್ಮನಾಗಿಯೂ ಧನವಂತನಾಗಿಯೂ ಇದ್ದ ಸುವೀರನು ಮತ್ತೊಬ್ಬ ಇಂದ್ರನಂತೆಯೇ ಪರಾಕ್ರಮಿಯೂ ಆಗಿದ್ದನು. ಸುವೀರನಿಗೆ ಎಲ್ಲ ಯುದ್ಧಗಳಲ್ಲಿಯೂ ದುರ್ಜಯನಾದ, ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ದುರ್ಜಯನೆಂಬ ಮಗನು ಹುಟ್ಟಿದನು. ಇಂದ್ರನ ಶರೀರಕ್ಕೆ ಸಮಾನವಾದ ಶರೀರವನ್ನು ಹೊಂದಿದ್ದ ದುರ್ಜಯನಿಗೆ ಒಬ್ಬ ಮಗನು ಹುಟ್ಟಿದನು. ಅವನು ಅಶ್ವಿನೀ ದೇವತೆಗಳಂತೆಯೇ ಕಾಂತಿಯುಕ್ತನಾಗಿದ್ದನು. ರಾಜರ್ಷಿಗಳಲ್ಲಿ ಶ್ರೇಷ್ಠನಾದ ಆ ಮಹಾರಾಜನು ದುರ್ಯೋಧನನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನು. ಇಂದ್ರನ ಪರಾಕ್ರಮಕ್ಕೆ ಅನುರೂಪವಾದ ಪರಾಕ್ರಮವನ್ನು ಹೊಂದಿದ್ದ, ಯುದ್ಧದಲ್ಲಿ ಹಿಮ್ಮೆಟ್ಟದಿದ್ದ ದುರ್ಯೋಧನನ ರಾಜ್ಯದಲ್ಲಿ ಇಂದ್ರನು ಉಚಿತವಾದ ಕಾಲದಲ್ಲಿ ಬೇಕಾದಷ್ಟು ಮಳೆಗರೆಯುತ್ತಿದ್ದನು. ಅದರಿಂದಾಗಿ ದುರ್ಯೋಧನನ ರಾಜ್ಯವು ರತ್ನಗಳಿಂದಲೂ, ಧನದಿಂದಲೂ, ಗೋವುಗಳಿಂದಲೂ, ವಿಧ-ವಿಧವಾದ ಸಸ್ಯ

ಗಳಿಂದಲೂ (ಧ್ಯಾನಗಳಿಂದಲೂ) ಸಮೃದ್ಧವಾಗಿದ್ದಿತು. ಅವನ ರಾಜ್ಯದಲ್ಲಿ ಕೃಪಣನಾಗಲೀ, ದುರ್ಗತಿಯನ್ನು ಹೊಂದಿದವನಾಗಲೀ, ರೋಗಪೀಡಿತ ನಾಗಲೀ, ದುರ್ಬಲನಾಗಲೀ –ಇರಲೇ ಇಲ್ಲ. ದುರ್ಯೋಧನರಾಜನು ಹೆಚ್ಚು ಉದಾರನೂ, ಮಧುರಭಾಷಿಯೂ ಅಸೂಯಾರಹಿತನೂ, ಜಿತೇಂದ್ರಿಯನೂ, ಧರ್ಮಾತ್ಮನೂ, ದಯಾಳುವೂ, ಮಹಾಪರಾಕ್ರಮಿಯೂ ಆಗಿದ್ದನು. ಇಷ್ಟು ಅಪಾರಗುಣಗಳುಳ್ಳವನಾಗಿದ್ದರೂ ಅವನು ಆತ್ಮಪ್ರಶಂಸೆಯನ್ನು ಮಾಡಿಕೊಳ್ಳುತ್ತಿರಲಿಲ್ಲ. ಅವನು ಯಾಗಶೀಲನೂ, ಜಿತೇಂದ್ರಿಯನೂ, ಮೇಧಾವಿಯೂ, ಬ್ರಾಹ್ಮಣಪ್ರಿಯನೂ, ಸತ್ಯನಿಷ್ಠನೂ, ವೇದ-ವೇದಾಂಗಪಾರಂಗತನೂ ಆಗಿದ್ದನು. ಯಾರೊಬ್ಬನನ್ನೂ ಅವಮಾನ ಗೊಳಿಸುತ್ತಿರಲಿಲ್ಲ. ದಾನಶೀಲನಾಗಿದ್ದನು.

ಯುಧಿಷ್ಠಿರ! ಒಮ್ಮೆ ಪವಿತ್ರಳಾದ, ಶೀತಜಲಳಾದ, ಶುಭಕರಳಾದ, ದೇವನದಿಯಾದ ನರ್ಮದೆಯು ಪುರುಷವ್ಯಾಘ್ರನಾದ ದುರ್ಯೋಧನ ರಾಜನನ್ನು ಪೂರ್ಣಮನಸ್ಸಿನಿಂದ ಕಾಮಿಸಿ ಅವನನ್ನು ಮದುವೆಯಾದಳು. ಅವಳಲ್ಲಿ ದುರ್ಯೋಧನರಾಜನಿಗೆ ಕಮಲಲೋಚನೆಯಾದ, ರೂಪದಿಂದ ಕಡುಚೆಲುವೆಯಾಗಿದ್ದ ಸುದರ್ಶನಾ ಎಂಬ ಕನ್ಯೆಯು ಹುಟ್ಟಿದಳು. ವರವರ್ಣಿನಿಯಾದ ದುರ್ಯೋಧನನ ಮಗಳಾದ ಸುದರ್ಶನೆಯು ಎಷ್ಟು ರೂಪವತಿಯಾಗಿದ್ದಳೋ–ಅಷ್ಟು ರೂಪವತಿಯರು ಹಿಂದೆ ಯಾವಾಗಲೂ ಇರಲೇ ಇಲ್ಲ. ರಾಜಕನ್ಯೆಯಾದ ಸುದರ್ಶನೆಯನ್ನು ಸಾಕ್ಷಾತ್ ಅಗ್ನಿಯೇ ಕಾಮಿಸಿ, ಬ್ರಾಹ್ಮಣವೇಷವನ್ನು ಧರಿಸಿ ರಾಜನ ಬಳಿಗೆ ಬಂದು ಮಗಳನ್ನು ಮದುವೆಮಾಡಿಕೊಡುವಂತೆ ಕೇಳಿದನು. ಕನ್ಯೆಯನ್ನು ಬೇಡಲು ಬಂದಿರುವವನು ದರಿದ್ರನಾದ ಬ್ರಾಹ್ಮಣನೆಂದು ಭಾವಿಸಿದ ದುರ್ಯೋಧನ ರಾಜನು – 'ಇವನು ದರಿದ್ರನು. ಅಲ್ಲದೇ ನನ್ನ ವರ್ಣಕ್ಕೆ ಸಮಾನವಾದ ಕ್ಷತ್ರಿಯವರ್ಣದವನೂ ಅಲ್ಲ'–ಎಂದು ನಿಶ್ಚಯಿಸಿ ಬ್ರಾಹ್ಮಣನ ರೂಪವನ್ನು ಧರಿಸಿ ಬಂದಿದ್ದ ಅಗ್ನಿಗೆ ತನ್ನ ಮಗಳಾದ ಸುದರ್ಶನೆಯನ್ನು ಕೊಟ್ಟು ಮದುವೆಮಾಡಲಿಲ್ಲ. ಅದರಿಂದ ಕುಪಿತನಾದ ಅಗ್ನಿಯು ರಾಜನು ಮಾಡುತ್ತಿದ್ದ ಯಜ್ಞದಲ್ಲಿ ಅದೃಶ್ಯನಾಗಿ ಹೋದನು. ಅದರಿಂದ ಅತ್ಯಂತ ದುಃಖಿತನಾದ ರಾಜನು ಅಲ್ಲಿದ್ದ ಬ್ರಾಹ್ಮಣರಿಗೆ ಹೇಳಿದನು :

ದುಷ್ಕೃತಂ ಮಮ ಕಿಂ ನು ಸ್ಯಾದ್ಭವತಾಂ ವಾ ದ್ವಿಜರ್ಷಭಾಃ ।
ಯೇನ ನಾಶಂ ಜಗಾಮಾಗ್ನಿಃ ಕೃತಂ ಕುಪುರುಷೇಷ್ವಿವ ॥೨೪॥

"ವಿಪ್ರಶ್ರೇಷ್ಠರೇ! ನಾನೇನಾದರೂ ಮಾಡಬಾರದ ಕಾರ್ಯವನ್ನು ಮಾಡಿರುವೆನೇ? ನೀವಾದರೂ ಮಾಡಿರುವಿರಾ? ಕೆಟ್ಟ ಮನುಷ್ಯರಲ್ಲಿ ಮಾಡಿದ ಉಪಕಾರವು ಹಾಳಾಗಿ ಹೋಗುವಂತೆ –ನಾವು ಮಾಡಿರುವ ಯಾವ ದುಷ್ಕರ್ಮದ ಫಲವಾಗಿ ಅಗ್ನಿದೇವನು ನಷ್ಟವಾಗಿ ಹೋಗಿದ್ದಾನೆ?

ನ ಹ್ಯಲ್ಪಂ ದುಷ್ಕೃತಂ ನೋಽಸ್ತಿ ಯೇನಾಗ್ನಿರ್ನಾಶಮಾಗತಃ ।
ಭವತಾಂ ಚಾಥವಾ ಮಹ್ಯಂ ತತ್ತ್ವೇನೈತದ್ವಿಮೃಶ್ಯತಾಮ್ ॥೨೫॥

ನಮ್ಮ ಅಲ್ಪವಾದ ಅಪರಾಧದ ಕಾರಣದಿಂದಾಗಿ ಅಗ್ನಿಯು ಅದೃಶ್ಯನಾಗಿರುವುದಿಲ್ಲ. ನಾನೇ ಆಗಲೀ, ನೀವೇ ಆಗಲೀ–ಯಾವುದೋ ಮಹತ್ತರವಾದ ಅಪರಾಧವನ್ನೇ ಮಾಡಿರಬೇಕು. ಈ ವಿಷಯವನ್ನು ನೀವೆಲ್ಲರೂ ಸೇರಿ ಯಥಾವತ್ತಾಗಿ ವಿಮರ್ಶಿಸಿರಿ."

ಯುಧಿಷ್ಠಿರ! ದುರ್ಯೋಧನರಾಜನ ಆ ಮಾತನ್ನು ಕೇಳಿ ಆ ಎಲ್ಲ ಬ್ರಾಹ್ಮಣರೂ ನಿಯಮದಿಂದಲೂ ಮೌನದಿಂದಲೂ ಇದ್ದು, ಅಗ್ನಿಯನ್ನು ಆರಾಧಿಸಿ ಅವನನ್ನೇ ಶರಣುಹೊಂದಿದರು. ಶರತ್ಕಾಲದ ಸೂರ್ಯನಿಗೆ ಸಮಾನವಾದ ಕಾಂತಿಯಿಂದ ಪ್ರಕಾಶಿಸುತ್ತಿದ್ದ ಪೂಜ್ಯನಾದ ಯಜ್ಞೇಶ್ವರನು ತೇಜೋಯುಕ್ತವಾದ ತನ್ನ ಸ್ವರೂಪವನ್ನು ಪ್ರಕಟಪಡಿಸುತ್ತಾ ಅವರಿಗೆ ರಾತ್ರಿಯಲ್ಲಿ ದರ್ಶನವನ್ನಿತ್ತನು. ಬಳಿಕ ಮಹಾತ್ಮನಾದ ಪಾವಕನು ಬ್ರಾಹ್ಮಣಶ್ರೇಷ್ಠರನ್ನು ಕುರಿತು ಹೇಳಿದನು :

ವರಯಾಮ್ಯಾತ್ಮನೋಽರ್ಥಾಯ ದುರ್ಯೋಧನಸುತಾಮಿತಿ ।

'ನಾನು ದುರ್ಯೋಧನನ ಮಗಳನ್ನು ನನ್ನ ಸಲುವಾಗಿಯೇ ವರಿಸುತ್ತೇನೆ. (ವರಿಸಲು ಇಚ್ಛಿಸಿದ್ದೇನೆ.)'

ಯಜ್ಞೇಶ್ವರನು ತಮ್ಮೆಲ್ಲರ ಕನಸಿನಲ್ಲಿ ಹೇಳಿದ ಆ ಮಾತನ್ನು ನೆನೆದು ವಿಪ್ರರೆಲ್ಲರೂ ಆಶ್ಚರ್ಯಚಕಿತರಾಗಿ ಬೆಳಗಾದೊಡನೆಯೇ ಎದ್ದು ರಾಜನ ಬಳಿಗೆ ಹೋಗಿ ಅಗ್ನಿಯು ಹೇಳಿದುದನ್ನು ರಾಜನಿಗೆ ತಿಳಿಯಪಡಿಸಿದರು. ಬ್ರಹ್ಮವಾದಿಗಳ ಮಾತನ್ನು ಕೇಳಿ ಪರಮಬುದ್ಧಿಶಾಲಿಯಾದ ರಾಜನು

ಪರಮಹರ್ಷಿತನಾಗಿ ಹಾಗೆಯೇ ಆಗಲೆಂದು ಹೇಳಿ ಸುದರ್ಶನೆಯನ್ನು ಅಗ್ನಿದೇವನಿಗೆ ಕೊಟ್ಟು ಮದುವೆಮಾಡಲೊಪ್ಪಿದನು. ಅನಂತರ ದುರ್ಯೋಧನನು ಪೂಜ್ಯನಾದ ಅಗ್ನಿದೇವನಿಂದ–

ನಿತ್ಯಂ ಸಾಂನಿಧ್ಯಮಿಹ ತೇ ಚಿತ್ರಭಾನೋ ಭವೇದಿತಿ ॥೩೧॥

"ಚಿತ್ರಭಾನುವೇ! ಈ ನನ್ನ ಮನೆಯಲ್ಲಿ ನಿನ್ನ ಸಾನ್ನಿಧ್ಯವು ಸದಾ ಇರಬೇಕು"–ಎಂಬ ಕನ್ಯಾಶುಲ್ಕವನ್ನು ಪ್ರಾರ್ಥಿಸಿದನು.

ಅದನ್ನು ಕೇಳಿ ಅಗ್ನಿದೇವನು–'ಏವಮಸ್ತು–ಹಾಗೆಯೇ ಆಗಲಿ'–ಎಂದು ರಾಜನೊಡನೆ ಹೇಳಿದನು.

ಯುಧಿಷ್ಠಿರ! ಅಂದು ಮೊದಲ್ಗೊಂಡು ಇಂದಿನವರೆಗೂ ಮಾಹಿಷ್ಮತೀ ಪಟ್ಟಣದಲ್ಲಿ ಅಗ್ನಿಯ ಸಾನ್ನಿಧ್ಯವು ಅವಿಚ್ಛಿನ್ನವಾಗಿದೆ. ಸಹದೇವನು ದಕ್ಷಿಣದಿಕ್ಕಿಗೆ ದಿಗ್ವಿಜಯದ ಸಲುವಾಗಿ ಹೋಗಿದ್ದಾಗ ಮಾಹಿಷ್ಮತೀ ಪಟ್ಟಣದಲ್ಲಿದ್ದ ಅಗ್ನಿದೇವನನ್ನು ಪ್ರತ್ಯಕ್ಷವಾಗಿಯೇ ನೋಡಿಬಂದಿದ್ದಾನೆ.

ಅಗ್ನಿದೇವನು ಶಾಶ್ವತವಾಗಿ ಮಾಹಿಷ್ಮತೀಪಟ್ಟಣದಲ್ಲಿರಲು ಒಪ್ಪಿದ ನಂತರ ದುರ್ಯೋಧನರಾಜನು ಸರ್ವಾಭರಣಗಳಿಂದಲೂ ಮತ್ತು ಬಹುಮೂಲ್ಯವಾದ ವಸ್ತ್ರಗಳಿಂದಲೂ ಸಮಲಂಕೃತಳಾದ ಸುದರ್ಶನೆಯನ್ನು ಕರೆತಂದು ಮಹಾತ್ಮನಾದ ಪಾವಕನಿಗೆ ವಿಧ್ಯುಕ್ತವಾಗಿ ಮದುವೆಮಾಡಿ ಕೊಟ್ಟನು. ಅಗ್ನಿಯು ಕೂಡ ರಾಜಕನ್ಯೆಯಾದ ಸುದರ್ಶನೆಯನ್ನು ವೇದೋಕ್ತವಾದ ವಿಧಿಯಿಂದ–ಯಜ್ಞದಲ್ಲಿ ವಸೋರ್ಧಾರೆಯನ್ನು ಪ್ರತಿಗ್ರಹಿಸುವಂತೆ–ಪ್ರತಿಗ್ರಹಿಸಿದನು. ಸುದರ್ಶನೆಯ ರೂಪದಿಂದಲೂ, ಶೀಲದಿಂದಲೂ, ಕೋಮಲವಾದ ಶರೀರದಿಂದಲೂ, ಕಾಂತಿಯಿಂದಲೂ ಅಗ್ನಿಯು ಪರಮಪ್ರೀತನಾದನು. ಅವಳಲ್ಲಿ ಒಬ್ಬ ಪುತ್ರನನ್ನು ಪಡೆದುಕೊಳ್ಳಬೇಕೆಂದು ಇಚ್ಛಿಸಿದನು. ಸ್ವಲ್ಪಕಾಲಾನಂತರ ಸುದರ್ಶನೆಯಲ್ಲಿ ಅಗ್ನಿಗೆ ಸುದರ್ಶನನೆಂಬ ಮಗನು ಹುಟ್ಟಿದನು. ಅವನು ರೂಪದಲ್ಲಿ ಪೂರ್ಣಚಂದ್ರಸದೃಶನಾಗಿದ್ದನು. ಅವನಿನ್ನೂ ಶಿಶುವಾಗಿದ್ದಾಗಲೇ ಸರ್ವಶಾಸ್ತ್ರಗಳನ್ನೂ, ವೇದಗಳನ್ನೂ ಅಧ್ಯಯನಮಾಡಿದನು. ಅದೇ ಸಮಯದಲ್ಲಿ ನೃಗನ ಪಿತಾಮಹನಾದ ಓಘವಂತನೆಂಬ ಹೆಸರಿನ ರಾಜನಿದ್ದನು.

ಅವನಿಗೆ ಓಘವತೀ ಎಂಬ ಹೆಸರಿನ ಒಬ್ಬಳು ಮಗಳೂ ಓಘರಥ ಎಂಬ ಹೆಸರಿನ ಒಬ್ಬ ಮಗನೂ ಇದ್ದರು. ಓಘವಂತನು ದೇವರೂಪಿಣಿಯಾದ ತನ್ನ ಮಗಳಾದ ಓಘವತಿಯನ್ನು ವಿದ್ವಾಂಸನಾದ, ಅಗ್ನಿಯ ಮಗನಾದ ಸುದರ್ಶನನಿಗೆ ಮದುವೆಮಾಡಿಕೊಟ್ಟನು. ಸುದರ್ಶನನು ಓಘವತಿಯೊಡನೆ ಗೃಹಸ್ಥಧರ್ಮವನ್ನು ಪರಿಪಾಲಿಸುತ್ತಾ ಕುರುಕ್ಷೇತ್ರದಲ್ಲಿ ವಾಸವಾಗಿದ್ದನು. ಪ್ರಜಾನಾಥನೇ! ಪ್ರಭುವೇ! ಯುಧಿಷ್ಠಿರ! ಜಾಜ್ವಲ್ಯಮಾನವಾದ ತೇಜಸ್ಸನ್ನು ಹೊಂದಿದ್ದ ಸುದರ್ಶನನು ಗೃಹಸ್ಥನಾಗಿಯೇ ಇದ್ದುಕೊಂಡು ಮೃತ್ಯುವನ್ನು ಜಯಿಸುವುದಾಗಿ ಪ್ರತಿಜ್ಞೆಮಾಡಿದನು. ಅನಂತರ ಅಗ್ನಿಯ ಮಗನಾದ ಸುದರ್ಶನನು ಪತ್ನಿಯಾದ ಓಘವತಿಯೊಡನೆ ಹೇಳಿದನು :

ಅತಿಥೇಃ ಪ್ರತಿಕೂಲಂ ತೇ ನ ಕರ್ತವ್ಯಂ ಕಥಂಚನ ।
ಯೇನ ಯೇನ ಚ ತುಷ್ಯೇತ ನಿತ್ಯಮೇವ ತ್ವಯಾತಿಥಿಃ ।
ಅಪ್ಯಾತ್ಮನಃ ಪ್ರದಾನೇನ ನ ತೇ ಕಾರ್ಯಾ ವಿಚಾರಣಾ ॥೪೩॥

“ಪ್ರಿಯೇ! ಅತಿಥಿಗೆ ಪ್ರತಿಕೂಲವಾಗುವ ಕಾರ್ಯವನ್ನು ನೀನು ಯಾವಾಗಲೂ ಮಾಡಲೇಬಾರದು. ಅತಿಥಿಯು ಯಾವುದರಿಂದ ತೃಪ್ತನಾಗುವನೋ ಅದನ್ನು ಅವನಿಗೆ ಒದಗಿಸಿಕೊಟ್ಟು ನೀನು ಅವನನ್ನು ಸತ್ಕರಿಸಬೇಕು. ಒಂದು ವೇಳೆ ನಿನ್ನನ್ನೇ ನೀನು ಕೊಟ್ಟುಕೊಳ್ಳಬೇಕಾಗಿ ಬಂದರೂ ನಿನ್ನನ್ನೇ ಸಮರ್ಪಿಸಿಕೊಂಡು ಅತಿಥಿಸತ್ಕಾರವನ್ನು ಮಾಡಬೇಕು. ಅಂತಹ ಸಂದರ್ಭದಲ್ಲಿಯೂ ನೀನು ಯೋಚಿಸಬೇಕಾದ ಕಾರಣವೇನೂ ಇಲ್ಲ.

ಏತದ್ವ್ರತಂ ಮಮ ಸದಾ ಹೃದಿ ಸಮ್ಪರಿವರ್ತತೇ ।
ಗೃಹಸ್ಥಾನಾಂ ಚ ಸುಶ್ರೋಣಿ ನಾತಿಥೇರ್ವಿದ್ಯತೇ ಪರಮ್ ॥೪೪॥

ಸುಂದರಿ! ಅತಿಥಿಸತ್ಕಾರವನ್ನೇ ಮಾಡುತ್ತಿರಬೇಕೆಂಬ ಈ ವ್ರತವು ನನ್ನ ಹೃದಯದಲ್ಲಿ ಸ್ಥಿರವಾಗಿ ಬೇರೂರಿಬಿಟ್ಟಿದೆ. ಗೃಹಸ್ಥರಿಗೆ ಅತಿಥಿಸತ್ಕಾರಕ್ಕಿಂತಲೂ ಮಿಗಿಲಾದ ಬೇರೆ ಯಾವ ಧರ್ಮವೂ ಇಲ್ಲ.

ಪ್ರಮಾಣಂ ಯದಿ ವಾಮೋರು ವಚಸ್ತೇ ಮಮ ಶೋಭನೇ ।
ಇದಂ ವಚನಮವ್ಯಗ್ರಾ ಹೃದಿ ತ್ವಂ ಧಾರಯೇಃ ಸದಾ ॥೪೫॥

ಶೋಭನಳೇ! ನನ್ನ ಮಾತೇನಾದರೂ ನಿನಗೆ ಪ್ರಮಾಣಭೂತ

ವಾಗಿದ್ದರೆ –ಈ ನನ್ನ ಮಾತನ್ನು ಅನನ್ಯಮನಸ್ಕಳಾಗಿ ನಿನ್ನ ಹೃದಯದಲ್ಲಿ ಧರಿಸು.

ನಿಷ್ಕ್ರಾನ್ತೇ ಮಯಿ ಕಲ್ಯಾಣಿ ತಥಾ ಸಂನಿಹಿತೇಽನಘೇ ।
ನಾತಿಥಿಸ್ತೇಽವಮನ್ತವ್ಯಃ ಪ್ರಮಾಣಂ ಯದ್ಯಹಂ ತವ ॥೪೬॥

ನಿಷ್ಪಾಪಳೇ! ನಾನೇನಾದರೂ ನಿನಗೆ ಪ್ರಮಾಣಭೂತನಾಗಿದ್ದರೆ ನಾನು ಮನೆಯಲ್ಲಿಯೇ ಇರಲಿ ; ಎಲ್ಲಿಗಾದರೂ ಹೊರಟುಹೋಗಿರಲಿ ; ನೀನು ಮಾತ್ರ ಮನೆಗೆ ಬಂದ ಅತಿಥಿಯನ್ನು ಯಾವ ಕಾರಣದಿಂದಲೂ ಅವಮಾನಿಸಬಾರದು."

ಪತಿಯ ಮಾತನ್ನು ಕೇಳಿ ಓಘವತಿಯು ತಲೆಯ ಮೇಲೆ ಕೈಗಳೆರಡನ್ನೂ ಜೋಡಿಸಿಕೊಂಡು ಹೇಳಿದಳು :

ನ ಮೇ ತ್ವದ್ವಚನಾತ್ಕಿಂಚಿನ್ನ ಕರ್ತವ್ಯಂ ಕಥಂಚನ ॥೪೭॥

"ನಿನ್ನ ಆಜ್ಞಾನುಸಾರವಾಗಿ ನಾನು ಮಾಡದೇ ಇರುವ ಕಾರ್ಯವು ಯಾವುದೂ ಇರುವುದಿಲ್ಲ. (ನೀನು ಹೇಳಿರುವಂತೆಯೇ ನಡೆದುಕೊಳ್ಳು ತ್ತೇನೆ)." ಪತ್ನಿಯಿಂದ ಅಂತಹ ಆಶ್ವಾಸನೆಯನ್ನು ಪಡೆದು ಸುದರ್ಶನನು ತನ್ನ ದೈನಂದಿನಧರ್ಮಕಾರ್ಯಗಳಲ್ಲಿ ನಿರತನಾದನು. ಗೃಹಸ್ಥಧರ್ಮವನ್ನು ನಿಷ್ಠೆಯಿಂದ ಪರಿಪಾಲಿಸುತ್ತಿದ್ದ ಆ ಸಮಯದಲ್ಲಿ ಸುದರ್ಶನನನ್ನು ಜಯಿಸುವ ಸಲುವಾಗಿ ಮೃತ್ಯುದೇವನು ಅವನಲ್ಲುಂಟಾಗಬಹುದಾದ ನ್ಯೂನತೆಯನ್ನೇ ಸರ್ವಕಾಲದಲ್ಲಿಯೂ ಹುಡುಕುತ್ತಾ ಸುದರ್ಶನನನ್ನೇ ಹಿಂಬಾಲಿಸುತ್ತಿದ್ದನು. ಅಗ್ನಿಯ ಮಗನಾದ ಸುದರ್ಶನನು ಇಧ್ಮವನ್ನು (ಸಮಿತ್ತನ್ನು) ತರುವ ಸಲುವಾಗಿ ಹೊರಕ್ಕೆ ಹೋಗಿರುವಾಗ ಮಹಾತೇಜಸ್ವಿಯಾಗಿದ್ದ ಒಬ್ಬ ಅತಿಥಿಯು ಅವನ ಮನೆಗೆ ಬಂದು ಓಘವತಿಯೊಡನೆ ಹೇಳಿದನು :

ಆತಿಥ್ಯಂ ಕೃತಮಿಚ್ಛಾಮಿ ತ್ವಯಾದ್ಯ ವರವರ್ಣಿನಿ ।
ಪ್ರಮಾಣಂ ಯದಿ ಧರ್ಮಸ್ತೇ ಗೃಹಸ್ಥಾಶ್ರಮಸಮ್ಮತಃ ॥೫೦॥

"ವರವರ್ಣಿನಿಯೇ! ನಿನ್ನಿಂದ ಆತಿಥ್ಯವನ್ನು ಮಾಡಿಸಿಕೊಳ್ಳಲು ಇಚ್ಛಿಸಿದ್ದೇನೆ. ಗೃಹಸ್ಥಾಶ್ರಮಸಮ್ಮತವಾದ ಅತಿಥಿಸತ್ಕಾರಧರ್ಮವು ನಿನಗೆ ಪ್ರಮಾಣಭೂತವಾಗಿದ್ದರೆ ನನ್ನನ್ನು ಸತ್ಕರಿಸು."

ಯುಧಿಷ್ಠಿರ! ಬ್ರಾಹ್ಮಣನಿಂದ ಹೀಗೆ ಹೇಳಲ್ಪಟ್ಟ ಕೀರ್ತಿವಂತಳಾದ ರಾಜಪುತ್ರಿಯಾದ ಓಘವತಿಯು ವೇದೋಕ್ತವಾದ ವಿಧಿಯಿಂದ ಆ ಬ್ರಾಹ್ಮಣನನ್ನು ಬರಮಾಡಿಕೊಂಡಳು. ಬಳಿಕ ಆಸನವನ್ನೂ–ಪಾದ್ಯಾರ್ಘ್ಯಗಳನ್ನೂ ಕೊಟ್ಟನಂತರ ಓಘವತಿಯು ಬ್ರಾಹ್ಮಣನಿಗೆ ಹೇಳಿದಳು :

ವಿಪ್ರವರ! ಕೇನಾರ್ಥಃ ಕಿಂ ದದಾಮಿ ತೇ ।

"ವಿಪ್ರಶ್ರೇಷ್ಠನೇ! ಯಾವ ಪ್ರಯೋಜನವನ್ನು ಉದ್ದೇಶಿಸಿ ನೀನು ಇಲ್ಲಿಗೆ ಬಂದಿರುವೆ? ನಿನಗೆ ನಾನು ಏನನ್ನು ಕೊಡಲಿ?"

ಹೀಗೆ ಪ್ರಶ್ನಿಸಲ್ಪಟ್ಟ ಬ್ರಾಹ್ಮಣನು ರಾಜಪುತ್ರಿಯಾದ ಸುದರ್ಶನೆಯೊಡನೆ ಹೇಳಿದನು :

ತ್ವಯಾ ಮಮಾರ್ಥಃ ಕಲ್ಯಾಣಿ ನಿರ್ವಿಶಙ್ಕೈತದಾಚರ ॥೫೩॥

"ಕಲ್ಯಾಣಿ! ನಿನ್ನಿಂದಲೇ ನನಗೆ ಪ್ರಯೋಜನವಾಗಬೇಕಾಗಿದೆ. ಯಾವ ವಿಧವಾದ ಶಂಕೆಯೂ ಇಲ್ಲದವಳಾಗಿ ನನ್ನ ಈ ಕಾರ್ಯವನ್ನು ಮಾಡಿಕೊಡು.

ಯದಿ ಪ್ರಮಾಣಂ ಧರ್ಮಸ್ತೇ ಗೃಹಸ್ಥಾಶ್ರಮಸಮ್ಮತಃ ।
ಪ್ರದಾನೇನಾತ್ಮನೋ ರಾಜ್ಞಿ ಕರ್ತುಮರ್ಹಸಿ ಮೇ ಪ್ರಿಯಮ್ ॥೫೪॥

ಮಹಾರಾಣಿ! ಗೃಹಸ್ಥಾಶ್ರಮಸಮ್ಮತವಾದ ಅತಿಥಿಧರ್ಮವೇನಾದರೂ ನಿನಗೆ ಪ್ರಮಾಣಭೂತವಾಗಿದ್ದರೆ –ನಿನ್ನ ಆತ್ಮ (ಶರೀರ) ಪ್ರದಾನದಿಂದಲೇ ಅತಿಥಿಯಾಗಿ ಬಂದಿರುವ ನನಗೆ ಪ್ರಿಯವನ್ನುಂಟುಮಾಡು."

ಯುಧಿಷ್ಠಿರ! ಓಘವತಿಯು ಆತ್ಮಪ್ರದಾನವನ್ನು ಬಿಟ್ಟು ಬೇರೆ ಯಾವುದಾದರೂ ಈಪ್ಸಿತವಾದ ವಸ್ತುವನ್ನು ಕೇಳಬೇಕೆಂದು ಬ್ರಾಹ್ಮಣನನ್ನು ಬಾರಿ-ಬಾರಿಗೂ ಪ್ರಾರ್ಥಿಸಿದಳು. ಆದರೆ ಆ ಬ್ರಾಹ್ಮಣನು ಆತ್ಮಪ್ರದಾನವೊಂದರ ಹೊರತಾಗಿ ಬೇರೆ ಯಾವುದನ್ನೂ ಅಪೇಕ್ಷಿಸಲೇ ಇಲ್ಲ. ಆಗ ರಾಜಪುತ್ರಿಯು ತನ್ನ ಪತಿಯು ತನಗೆ ಮೊದಲಿನಿಂದಲೂ ಹೇಳುತ್ತಿದ್ದುದನ್ನು (ಅಪ್ಯಾತ್ಮನಃ ಪ್ರದಾನೇನ ಸ ತುಷ್ಯೇತ ತ್ವಯಾತಿಥಿಃ) ಸ್ಮರಿಸಿ ಲಜ್ಜೆಯಿಂದ ಕೂಡಿದವಳಾಗಿ 'ತಥಾಸ್ತು–ಹಾಗೆಯೇ ಆಗಲಿ'– ಎಂದು ಬ್ರಾಹ್ಮಣನಿಗೆ ಹೇಳಿದಳು. ಗೃಹಸ್ಥಾಶ್ರಮಧರ್ಮವನ್ನು ಪರಿಪಾಲಿಸುವುದರಲ್ಲಿ

ಅತ್ಯಾಸಕ್ತನಾಗಿದ್ದ ಪತಿಯ ಮಾತಿನಂತೆ ಓಘವತಿಯು ಆತ್ಮಪ್ರದಾನಕ್ಕೂ ಒಪ್ಪಿದಳು. ವಿಪ್ರರ್ಷಿಯು ನಸುನಗುತ್ತಾ ಓಘವತಿಯೊಡನೆ ಮನೆಯೊಳಗೆ ಪ್ರವೇಶಿಸಿದನು.

ಇತ್ತಲಾಗಿ ಇಧ್ಮವನ್ನು ತರಲು ಹೊರಗೆ ಹೋಗಿದ್ದ ಅಗ್ನಿಯ ಮಗನಾದ ಸುದರ್ಶನನು ಇಧ್ಮವನ್ನು ತೆಗೆದುಕೊಂಡು ಮನೆಗೆ ಹಿಂದಿರುಗಿದನು. ಆತ್ಮೀಯಬಂಧುವು ಹಿಂದೆ-ಹಿಂದೆಯೇ ಬರುವಂತೆ ರೌದ್ರಭಾವದಿಂದ ಕೂಡಿದ್ದ ಮೃತ್ಯುವೂ ಸುದರ್ಶನನನ್ನೇ ಅನುಸರಿಸಿ ಬಂದನು. ಆಶ್ರಮಕ್ಕೆ ಬಂದನಂತರ ಸುದರ್ಶನನು ಓಘವತಿಯನ್ನು ಕುರಿತು–'ಕ್ವಾಸಿ ಯಾತಾ' 'ದೇವೀ! ನೀನು ಎಲ್ಲಿಗೆ ಹೋಗಿರುವೆ?'– ಎಂದು ಅನೇಕಬಾರಿ ಕೂಗಿದನು. ಸುದರ್ಶನನು ಕೂಗುತ್ತಿದ್ದುದು ಕೇಳಿಸಿದರೂ ಓಘವತಿಯು ಪ್ರತ್ಯುತ್ತರವನ್ನೀಯಲಿಲ್ಲ. ಅತಿಥಿಯ ರೂಪದಲ್ಲಿ ಬಂದಿದ್ದ ಬ್ರಾಹ್ಮಣನ ಕೈಗಳಿಂದ ಹಿಡಿಯಲ್ಪಟ್ಟಿದ್ದ ಪತಿವ್ರತೆಯಾದ, ಸತಿಯಾದ, ಸಾಧ್ವಿಯಾದ ಓಘವತಿಯು ತಾನು ಉಚ್ಚಿಷ್ಟಳಾಗಿರುವೆನೆಂದು ಭಾವಿಸಿ ಪತಿಯ ವಿಷಯದಲ್ಲಿಯೂ ನಾಚಿಕೆಗೊಂಡವಳಾಗಿ ಮೌನವಾಗಿಯೇ ಇದ್ದುಬಿಟ್ಟಳು. ಯಾವ ಮಾತನ್ನೂ ಆಡಲೇ ಇಲ್ಲ. ಪುನಃ ಸುದರ್ಶನನು ಪತ್ನಿಯನ್ನುದ್ದೇಶಿಸಿ ಈ ಮಾತನ್ನು ಹೇಳಿದನು :

ಕ್ವ ಸಾ ಸಾಧ್ವೀ ಕ್ವ ಸಾ ಯಾತಾ ಗರೀಯಃ ಕಿಮತೋ ಮಮ ।
ಪತಿವ್ರತಾ ಸತ್ಯಶೀಲಾ ನಿತ್ಯಂ ಚೈವಾರ್ಜವೇ ರತಾ ।
ಕಥಂ ನ ಪ್ರತ್ಯುದೇತ್ಯದ್ಯ ಸ್ಮಯಮಾನಾ ಯಥಾ ಪುರಾ ॥೬೩॥

"ಸಾಧ್ವಿಯಾದ ಆ ನನ್ನ ಪತ್ನಿಯೆಲ್ಲಿ? ಅವಳು ಎಲ್ಲಿಗೆ ಹೊರಟುಹೋಗಿದ್ದಾಳೆ? ನನ್ನ ಸೇವೆಗಿಂತಲೂ ಗುರುತರವಾದ ಯಾವ ಕಾರ್ಯವನ್ನವಳು ಮಾಡುತ್ತಿದ್ದಾಳೆ? ಪತಿವ್ರತೆಯಾದ, ಸತ್ಯಶೀಲಳಾದ, ನಿತ್ಯವೂ ಸರಳತೆಯಿಂದಲೇ ಇರುತ್ತಿದ್ದ ಆ ನನ್ನ ಪ್ರೇಯಸಿಯು ಹಿಂದಿನಂತೆ ನಗು-ನಗುತ್ತಾ ನನ್ನನ್ನು ಎದುರುಗೊಳ್ಳಲೇಕೆ ಬರಲಿಲ್ಲ?"

ಸುದರ್ಶನನ ಮಾತನ್ನು ಕೇಳಿ ಆಶ್ರಮದ ಒಳಭಾಗದಲ್ಲಿ ಓಘವತಿಯೊಡನಿದ್ದ ವಿಪ್ರನು ಸುದರ್ಶನನಿಗೆ ಹೇಳಿದನು :

“ಅಗ್ನಿಪುತ್ರನೇ! ನಾನು ನಿನ್ನ ಮನೆಗೆ ಅತಿಥಿಯಾಗಿ ಬಂದಿರುವ ಬ್ರಾಹ್ಮಣನೆಂದು ತಿಳಿ. ನಿನ್ನ ಈ ಭಾರ್ಯೆಯು ಅತಿಥಿಸತ್ಕಾರದ ಮೂಲಕ ನನ್ನ ಇಚ್ಛೆಯನ್ನು ಪೂರ್ಣಗೊಳಿಸುವುದಾಗಿ ಹೇಳಿದಳು. ಆಗ ನಾನು ನನ್ನ ಮನಸ್ತೃಪ್ತಿಗಾಗಿ ಇವಳನ್ನೇ ವರಿಸಿದೆನು. ಸುಮುಖಿಯಾದ ಈ ನಿನ್ನ

ಪತ್ನಿಯು ಅತಿಥಿಸತ್ಕಾರವಿಧಿಗೆ ಅನುಸಾರವಾಗಿ ನನ್ನೊಡನಿದ್ದಾಳೆ. ಈ ಸಮಯದಲ್ಲಿ ನಿನಗೆ ಯಾವುದು ಉಚಿತವಾಗಿ ಕಾಣುವುದೋ ಆ ಕಾರ್ಯವನ್ನು ನೀನು ಮಾಡಬಹುದು.”

ಆ ಸಮಯಕ್ಕೆ ಸರಿಯಾಗಿ ಮೃತ್ಯುವು ಲೋಹದ ದಂಡವನ್ನು

ಕೈಯಲ್ಲಿ ಹಿಡಿದು ಸುದರ್ಶನನ ಹಿಂದೆಯೇ ನಿಂತಿದ್ದನು. "ಈಗಂತೂ ಇವನು ತನ್ನ ಪ್ರತಿಜ್ಞೆಯ ಭಂಗವನ್ನು ಮಾಡಿಯೇ ತೀರುತ್ತಾನೆ. ಒಡನೆಯೇ ನಾನು ಇವನನ್ನು ಸಂಹರಿಸುತ್ತೇನೆ"–ಎಂದು ಮೃತ್ಯುವು ಆಲೋಚಿಸುತ್ತಿದ್ದನು. ಆದರೆ ಸುದರ್ಶನನು ಮನಸ್ಸಿನಿಂದಲೂ, ಕರ್ಮದಿಂದಲೂ, ಕಣ್ಣಿನಿಂದಲೂ ಮತ್ತು ಮಾತಿನಿಂದಲೂ –ಈರ್ಷ್ಯೆಯನ್ನೂ, ಕೋಪವನ್ನೂ ತ್ಯಾಗಮಾಡಿ ನಗುತ್ತಲೇ ಈ ಮಾತನ್ನು ಹೇಳಿದನು :

ಸುರತಂ ತೇಽಸ್ತು ವಿಪ್ರಾಗ್ರ್ಯ ಪ್ರೀತಿರ್ಹಿ ಪರಮಾ ಮಮ ।
ಗೃಹಸ್ಥಸ್ಯ ಹಿ ಧರ್ಮೋಽಗ್ರ್ಯಃ ಸಮ್ಪ್ರಾಪ್ತಾತಿಥಿಪೂಜನಮ್ ॥೧೯॥

"ವಿಪ್ರಶ್ರೇಷ್ಠನೇ! ನಿನ್ನ ಸುರತೇಚ್ಛೆಯು ಪೂರ್ಣವಾಗಲಿ. ಇದರಿಂದ ನನಗೆ ಅತ್ಯಂತಸಂತೋಷವೇ ಆಗಿದೆ. ಏಕೆಂದರೆ : ಮನೆಗೆ ಬಂದ ಅತಿಥಿಯನ್ನು ಪೂಜಿಸಿ ಸತ್ಕರಿಸುವುದು ಗೃಹಸ್ಥನಿಗೆ ಪರಮಶ್ರೇಷ್ಠವಾದ ಧರ್ಮವಾಗಿದೆ.

ಅತಿಥಿಃ ಪೂಜಿತೋ ಯಸ್ಯ ಗೃಹಸ್ಥಸ್ಯ ತು ಗಚ್ಛತಿ ।
ನಾನ್ಯಸ್ತಸ್ಮಾತ್ಪರೋ ಧರ್ಮ ಇತಿ ಪ್ರಾಹುರ್ಮನೀಷಿಣಃ ॥೨೦॥

ಯಾವ ಗೃಹಸ್ಥನ ಮನೆಗೆ ಬಂದ ಅತಿಥಿಯು ಸತ್ಕೃತನಾಗಿ ಹಿಂದಿರುಗುವನೋ–ಅಂತಹವನೇ ಶ್ರೇಷ್ಠನಾದ ಗೃಹಸ್ಥನು. ಗೃಹಸ್ಥನಿಗೆ ಅತಿಥಿ ಸತ್ಕಾರಕ್ಕಿಂತಲೂ ಮಿಗಿಲಾದ ಬೇರೆಯ ಧರ್ಮವೇ ಇಲ್ಲವೆಂದು ವಿದ್ವಾಂಸರು ಹೇಳುತ್ತಾರೆ.

ಪ್ರಾಣಾ ಹಿ ಮಮ ದಾರಾಶ್ಚ ಯಚ್ಚಾನ್ಯದ್ವಿದ್ಯತೇ ವಸು ।
ಅತಿಥಿಭ್ಯೋ ಮಯಾ ದೇಯಮಿತಿ ಮೇ ವ್ರತಮಾಹಿತಮ್ ॥೨೧॥

ನನ್ನ ಪ್ರಾಣಗಳು, ನನ್ನ ಪತ್ನಿ ಮತ್ತು ನನ್ನಲ್ಲಿರುವ ಇತರ ಧನ-ಕನಕಾದಿಗಳು–ಇವೆಲ್ಲವನ್ನೂ ಹಿಂದು-ಮುಂದು ನೋಡದೇ ಅತಿಥಿಗಳಿಗೆ ಕೊಡಬೇಕೆಂಬುದೇ ನನ್ನ ವ್ರತವಾಗಿದೆ.

ನಿಃಸಂದಿಗ್ಧಂ ಯಥಾ ವಾಕ್ಯಮೇತನ್ಮೇ ಸಮುದಾಹೃತಮ್ ।
ತೇನಾಹಂ ವಿಪ್ರ ಸತ್ಯೇನ ಸ್ವಯಮಾತ್ಮಾನಮಾಲಭೇ ॥೨೨॥

ಬ್ರಾಹ್ಮಣೋತ್ತಮನೇ! ನಾನೀಗ ಹೇಳುತ್ತಿರುವುದು ಸಂಶಯಲೇಶವೂ ಇಲ್ಲದ ಮಾತಾಗಿದೆ. ಸತ್ಯದಿಂದ ನನ್ನ ಹೃದಯವನ್ನು ಮುಟ್ಟಿ ಶಪಥಪೂರ್ವಕವಾಗಿ ಹೇಳುತ್ತೇನೆ.

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿಶ್ಚ ಪಞ್ಚಮಮ್ ।
ಬುದ್ಧಿರಾತ್ಮಾ ಮನಃ ಕಾಲೋ ದಿಶಶ್ಚೈವ ಗುಣಾ ದಶ ॥೭೩॥

ನಿತ್ಯಮೇವ ಹಿ ಪಶ್ಯನ್ತಿ ದೇಹಿನಾಂ ದೇಹಸಂಶ್ರಿತಾಃ ।
ಸುಕೃತಂ ದುಷ್ಕೃತಂ ಚಾಪಿ ಕರ್ಮ ಧರ್ಮಭೃತಾಂ ವರ ॥೭೪॥

ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಪೃಥಿವೀ, ವಾಯು, ಆಕಾಶ, ಜಲ, ಐದನೆಯದಾದ ಜ್ಯೋತಿ, ಬುದ್ಧಿ, ಆತ್ಮಾ, ಮನಸ್ಸು, ಕಾಲ, ದಿಕ್ಕುಗಳು – ಈ ಹತ್ತು ಗುಣಗಳು (ವಸ್ತುಗಳು) ಪ್ರಾಣಿಗಳ ದೇಹದಲ್ಲಿಯೇ ಇದ್ದುಕೊಂಡು ಅವುಗಳು ಮಾಡುವ ಒಳ್ಳೆಯ ಅಥವಾ ಕೆಟ್ಟಕೆಲಸಗಳನ್ನು ನೋಡುತ್ತಲೇ ಇರುತ್ತವೆ.

ಯಥೈಷಾ ನಾನೃತಾ ವಾಣೀ ಮಯಾದ್ಯ ಸಮುದೀರಿತಾ ।
ತೇನ ಸತ್ಯೇನ ಮಾಂ ದೇವಾಃ ಪಾಲಯನ್ತು ದಹನ್ತು ವಾ ॥೭೫॥

ನಾನು ಈಗ ಹೇಳಿರುವ ಮಾತು ಸುಳ್ಳಾಗಿರದಿದ್ದರೆ–ಅದೇ ಸತ್ಯದ ಆಧಾರದ ಮೇಲೆ ದೇವತೆಗಳು ನನ್ನನ್ನು ಪರಿಪಾಲಿಸಲಿ ; ಸುಳ್ಳಾಗಿದ್ದರೆ ದಹಿಸಿಬಿಡಲಿ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಸುದರ್ಶನನು ಹೀಗೆ ಹೇಳಿದೊಡನೆಯೇ – ‘ನೀನು ಹೇಳಿರುವುದು ಸತ್ಯವಾಗಿಯೇ ಇದೆ. ಇದರಲ್ಲಿ ಲೇಶಮಾತ್ರವೂ ಮಿಥ್ಯೆ ಯಿಲ್ಲ’–ಎಂಬ ಧ್ವನಿಯು ಎಲ್ಲ ದಿಕ್ಕುಗಳಿಂದಲೂ ಏಕಕಾಲದಲ್ಲಿ ಹಲವಾರು ಬಾರಿ ಕೇಳಿಬಂದಿತು.

ಅನಂತರ ಆಶ್ರಮದ ಒಳಗಿನ ಅಂಗಣದಿಂದ ಅತಿಥಿಯು ಹೊರ ಬಂದನು. ವಾಯುವಿನಂತೆಯೇ ಅವನು ತನ್ನ ಶರೀರದಿಂದ ಭೂಮ್ಯಾಕಾಶ

ಗಳೆರಡನ್ನೂ ವ್ಯಾಪಿಸಿದ್ದನು. ಆ ಬ್ರಾಹ್ಮಣನು ಶಿಕ್ಷಾಶಾಸ್ತ್ರಕ್ಕೆ ಸಂಬಂಧಿಸಿದ ಉದಾತ್ತ-ಸ್ವರಿತಾದಿ ಸ್ವರಗಳಿಂದ ಯುಕ್ತವಾದ ಧ್ವನಿಯಿಂದ ಮೂರು ಲೋಕಗಳನ್ನೂ ಪ್ರತಿಧ್ವನಿಸುತ್ತಾ ಮೊದಲು ಧರ್ಮಜ್ಞನಾದ ಸುದರ್ಶನನನ್ನು ಹೆಸರು ಹಿಡಿದು ಸಂಬೋಧಿಸಿ ಹೇಳಿದನು :

ಧರ್ಮೋಽಹಮಸ್ಮಿ ಭದ್ರಂ ತೇ ಜಿಜ್ಞಾಸಾರ್ಥಂ ತವಾನಘ ।
ಪ್ರಾಪ್ತಃ ಸತ್ಯಂ ಚ ತೇ ಜ್ಞಾತ್ವಾ ಪ್ರೀತಿರ್ಮೇ ಪರಮಾ ತ್ವಯಿ ॥೭೯॥

"ನಿಷ್ಪಾಪನೇ! ಸುದರ್ಶನ! ನಿನಗೆ ಮಂಗಳವಾಗಲಿ. ನಾನು ಧರ್ಮನಾಗಿದ್ದೇನೆ. ನಿನ್ನನ್ನು ಪರೀಕ್ಷಿಸುವ ಸಲುವಾಗಿಯೇ ನಾನಿಲ್ಲಿಗೆ ಬಂದೆನು. ನಿನ್ನ ಸತ್ಯನಿಷ್ಠೆಯನ್ನು ತಿಳಿದು ನಿನ್ನಲ್ಲಿ ನನಗೆ ಅಪಾರವಾದ ಪ್ರೀತಿಯುಂಟಾಗಿದೆ.

ವಿಜಿತಶ್ಚ ತ್ವಯಾ ಮೃತ್ಯುರ್ಯೋಽಯಂ ತ್ವಾಮನುಗಚ್ಛತಿ ।
ರನ್ಧ್ರಾನ್ವೇಷೀ ತವ ಸದಾ ತ್ವಯಾ ಧೃತ್ಯಾ ವಶೀಕೃತಃ ॥೮೦॥

ನಿನ್ನಲ್ಲಿ ನ್ಯೂನತೆಯನ್ನು ಹುಡುಕುತ್ತಾ ನಿನ್ನ ಹಿಂದೆಯೇ ಬರುತ್ತಿರುವ ಮೃತ್ಯುವನ್ನು ನೀನು ಜಯಿಸಿರುವೆ. ಧೈರ್ಯದಿಂದ ಅವನನ್ನು ನಿನ್ನ ವಶಪಡಿಸಿಕೊಂಡಿರುವೆ.

ನ ಚಾಸ್ತಿ ಶಕ್ತಿಸ್ತ್ರೈಲೋಕ್ಯೇ ಕಸ್ಯಚಿತ್ಪುರುಷೋತ್ತಮ ।
ಪತಿವ್ರತಾಮಿಮಾಂ ಸಾಧ್ವೀಂ ತವೋದ್ವೀಕ್ಷಿತುಮಪ್ಯುತ ॥೮೧॥

ರಕ್ಷಿತಾ ತ್ವದ್ಗುಣೈರೇಷಾ ಪತಿವ್ರತಗುಣೈಸ್ತಥಾ ।
ಅಧೃಷ್ಯಾ ಯದಿಯಂ ಬ್ರೂಯಾತ್ತಥಾ ತನ್ನಾನ್ಯಥಾ ಭವೇತ್ ॥೮೨॥

ಪುರುಷಶ್ರೇಷ್ಠನೇ! ಮೂರು ಲೋಕಗಳಲ್ಲಿ ಯಾರಿಗೇ ಆಗಲೀ–ಪತಿವ್ರತೆಯಾದ, ಸಾಧ್ವಿಯಾದ ಈ ನಿನ್ನ ಪತ್ನಿಯನ್ನು ಕಣ್ಣೆತ್ತಿ ನೋಡಲು ಕೂಡ ಶಕ್ತಿಯಿಲ್ಲ. ಇವಳು ನಿನ್ನ ಗುಣಗಳಿಂದಲೂ ತನ್ನ ಪಾತಿವ್ರತ್ಯದ ಗುಣಗಳಿಂದಲೂ ರಕ್ಷಿತಳಾಗಿದ್ದಾಳೆ. ಯಾರೂ ಇವಳನ್ನು ಪರಾಭವ ಗೊಳಿಸಲಾರರು. ಓಘವತಿಯು ಯಾವ ಮಾತನ್ನೇ ಆಡಿದರೂ ಅದು ಸತ್ಯವಾಗಿಯೇ ಪರಿಣಮಿಸುತ್ತದೆ. ಸುಳ್ಳೆಂದಿಗೂ ಆಗುವುದಿಲ್ಲ.

ಏಷಾ ಹಿ ತಪಸಾ ಸ್ವೇನ ಸಂಯುಕ್ತಾ ಬ್ರಹ್ಮವಾದಿನೀ ।
ಪಾವನಾರ್ಥಂ ಚ ಲೋಕಸ್ಯ ಸರಿಚ್ಛ್ರೇಷ್ಠಾ ಭವಿಷ್ಯತಿ ॥೮೩॥
ಅರ್ಧೇನೌಘವತೀ ನಾಮ ತ್ವಾಮರ್ಧೇನಾನುಯಾಸ್ಯತಿ ।
ಶರೀರೇಣ ಮಹಾಭಾಗಾ ಯೋಗೋ ಹ್ಯಸ್ಯಾ ವಶೇ ಸ್ಥಿತಃ ॥೮೪॥

ತನ್ನ ತಪೋಬಲದಿಂದಲೇ ಯುಕ್ತಳಾಗಿರುವ ಬ್ರಹ್ಮವಾದಿನಿಯಾದ ಈ ನಿನ್ನ ಪತ್ನಿಯು–ಪ್ರಪಂಚವನ್ನು ಪವಿತ್ರಗೊಳಿಸುವ ಸಲುವಾಗಿ ತನ್ನ ಅರ್ಧಶರೀರದಿಂದ 'ಓಘವತೀ' ಎಂಬ ಹೆಸರಿನ ಶ್ರೇಷ್ಠನದಿಯಾಗುತ್ತಾಳೆ. ಪರಮಭಾಗ್ಯಶಾಲಿನಿಯಾದ ಇವಳು ಉಳಿದ ಅರ್ಧಶರೀರದಿಂದ ನಿನ್ನನ್ನು ಸೇವಿಸುತ್ತಾಳೆ. ಯೋಗವಿದ್ಯೆಯು ಇವಳ ಅಧೀನವಾಗಿದೆ. (ಆದುದರಿಂದಲೇ ಅವಳು ಹೀಗಾಗಲು ಸಮರ್ಥಳು.)

ಅನಯಾ ಸಹ ಲೋಕಾಂಶ್ಚ ಗನ್ತಾಸಿ ತಪಸಾರ್ಜಿತಾನ್ ।
ಯತ್ರ ನಾವೃತ್ತಿಮಭ್ಯೇತಿ ಶಾಶ್ವತಾಂಸ್ತಾನ್ಸನಾತನಾನ್ ॥೮೫॥

ನೀನೂ ಕೂಡ ನಿನ್ನ ತಪಸ್ಸಿನಿಂದ ಸಂಪಾದಿಸಲ್ಪಟ್ಟ ಶಾಶ್ವತವೂ, ಸನಾತನವೂ ಆದ ಲೋಕಗಳಿಗೆ ಇವಳೊಡನೆ ಹೋಗುವೆ. ಆ ಲೋಕಗಳಿಗೆ ಹೋದ ಮೇಲೆ ಪುನಃ ಈ ಪ್ರಪಂಚಕ್ಕೆ ಹಿಂದಿರುಗಬೇಕಾಗುವುದಿಲ್ಲ.

ಅನೇನ ಚೈವ ದೇಹೇನ ಲೋಕಾಂಸ್ತ್ವಮಭಿಪತ್ಸ್ಯಸೇ ।
ನಿರ್ಜಿತಶ್ಚ ತ್ವಯಾ ಮೃತ್ಯುರೈಶ್ವರ್ಯಂ ಚ ತವೋತ್ತಮಮ್ ॥೮೬॥

ನೀನು ಈ ನಿನ್ನ ದೇಹದಿಂದಲೇ ಉತ್ತಮಲೋಕಗಳಿಗೆ ಹೋಗುವೆ. ನೀನು ಮೃತ್ಯುವನ್ನು ಜಯಿಸಿರುವೆ. ಇಹದಲ್ಲಿ ನಿನಗೆ ಉತ್ತಮವಾದ ಐಶ್ವರ್ಯವೂ ಲಭಿಸುತ್ತದೆ.

ಪಞ್ಚಭೂತಾನ್ಯತಿಕ್ರಾನ್ತಃ ಸ್ವವೀರ್ಯಾಚ್ಚ ಮನೋಜವಃ ।
ಗೃಹಸ್ಥಧರ್ಮೇಣಾನೇನ ಕಾಮಕ್ರೋಧೌ ಚ ತೇ ಜಿತೌ ॥೮೭॥

ನೀನು ನಿನ್ನ ವೀರ್ಯಾತಿಶಯದಿಂದ ಪಂಚಭೂತಗಳನ್ನೂ ಅತಿ ಕ್ರಮಿಸಿ ಮನಸ್ಸಿನ ವೇಗಕ್ಕೆ ಸಮಾನವಾಗಿ ಪ್ರಯಾಣಮಾಡಲು ಸಮರ್ಥ

ನಾಗುವೆ. ಗೃಹಸ್ಥಧರ್ಮದ ಪರಿಪಾಲನೆಯಿಂದಲೇ ಕಾಮ-ಕ್ರೋಧಗಳನ್ನೂ ಜಯಿಸಿರುವೆ.

ಸ್ನೇಹೋ ರಾಗಶ್ಚ ತನ್ದ್ರೀ ಚ ಮೋಹೋ ದ್ರೋಹಶ್ಚ ಕೇವಲಃ ।
ತವ ಶುಶ್ರೂಷಯಾ ರಾಜನ್ರಾಜಪುತ್ರ್ಯಾ ವಿನಿರ್ಜಿತಾಃ ॥೮೮॥

ಮಹಾರಾಜ! ಸುದರ್ಶನ! ರಾಜಕುಮಾರಿಯಾದ ಓಘವತಿಯು ನಿನ್ನ ಶುಶ್ರೂಷೆಯಿಂದಲೇ ಸ್ನೇಹ, ಅನುರಾಗ, ಆಲಸ್ಯ, ಮೋಹ, ದ್ರೋಹ –ಇವೇ ಮೊದಲಾದ ದೋಷಗಳೆಲ್ಲವನ್ನೂ ಜಯಿಸಿದ್ದಾಳೆ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಧರ್ಮನು ಹೀಗೆ ಹೇಳುತ್ತಿದ್ದಾಗಲೇ ಭಗವಾನ್ ದೇವೇಂದ್ರನು ಸಾವಿರ ಬಿಳಿಯ ಕುದುರೆಗಳಿಂದ ಯುಕ್ತವಾಗಿದ್ದ ಶ್ರೇಷ್ಠವಾದ ರಥದೊಡನೆ ಸುದರ್ಶನನ ಸಮೀಪಕ್ಕೆ ಬಂದು, ಪತ್ನೀಸಮೇತನಾದ ಆತನನ್ನು ಆ ದಿವ್ಯರಥದಲ್ಲಿ ಕುಳ್ಳಿರಿಸಿಕೊಂಡು ತನ್ನ ಲೋಕಕ್ಕೆ ಹೋದನು.

ಯುಧಿಷ್ಠಿರ! ಹೀಗೆ ಸುದರ್ಶನನು ಅತಿಥಿಸತ್ಕಾರವೆಂಬ ಮಹಾ ಧರ್ಮವನ್ನಾಶ್ರಯಿಸಿ ಮೃತ್ಯು, ಆತ್ಮಾ, ಲೋಕಗಳು, ಪಂಚಭೂತಗಳು, ಬುದ್ಧಿ, ಕಾಲ, ಮನಸ್ಸು, ಆಕಾಶ, ಕಾಮ ಮತ್ತು ಕ್ರೋಧ– ಇವುಗಳೆಲ್ಲವನ್ನೂ ಜಯಿಸಿದನು.

ತಸ್ಮಾದ್ಗೃಹಾಶ್ರಮಸ್ಥಸ್ಯ ನಾನ್ಯದ್ದೈವತಮಸ್ತಿ ವೈ ।
ಋತೇಽತಿಥಿಂ ನರವ್ಯಾಘ್ರ ಮನಸೈತದ್ವಿಚಾರಯ ॥೯೧॥

ಪುರುಷಸಿಂಹನೇ! ಆದುದರಿಂದ ಗೃಹಸ್ಥಾಶ್ರಮಿಗೆ ಅತಿಥಿಯ ಹೊರತಾಗಿ ಬೇರೆ ದೇವತೆಯೇ ಇಲ್ಲ. ಈ ವಿಷಯವನ್ನು ನೀನು ಮನಸ್ಸಿನಲ್ಲಿ ವಿಚಾರಮಾಡು.

ಅತಿಥಿಃ ಪೂಜಿತೋ ಯದ್ಧಿ ಧ್ಯಾಯತೇ ಮನಸಾ ಶುಭಮ್ ।
ನ ತತ್ಕ್ರತುಶತೇನಾಪಿ ತುಲ್ಯಮಾಹುರ್ಮನೀಷಿಣಃ ॥೯೨॥

ನೂರು ಅಶ್ವಮೇಧಯಾಗಗಳನ್ನು ಮಾಡಿ ಹೊಂದುವ ಫಲವು ಕೂಡ, ಅರ್ಘ್ಯ-ಪಾದ್ಯಾದಿಗಳಿಂದ ಸತ್ಕೃತನಾದ ಅತಿಥಿಯು ಆತಿಥೇಯನಿಗೆ (ಅತಿಥಿ

ಸತ್ಕಾರ ಮಾಡಿದ ಗೃಹಸ್ಥನಿಗೆ) ಮನಸ್ಸಿನಲ್ಲಿ ಶುಭವನ್ನು ಕೋರುವುದರಿಂದ ಲಭಿಸುವ ಫಲಕ್ಕೆ ಸಾಟಿಯಾಗಲಾರದೆಂದು ವಿದ್ವಾಂಸರು ಹೇಳುತ್ತಾರೆ.

ಪಾತ್ರಂ ತ್ವತಿಥಿಮಾಸಾದ್ಯ ಶೀಲಾಢ್ಯಂ ಯೋ ನ ಪೂಜಯೇತ್ ।
ಸ ದತ್ತ್ವಾ ದುಷ್ಕೃತಂ ತಸ್ಮೈ ಪುಣ್ಯಮಾದಾಯ ಗಚ್ಛತಿ ॥೯೩॥

ಗೃಹಸ್ಥನು ಸುಪಾತ್ರನಾದ ಮತ್ತು ಸುಶೀಲನಾದ ಅತಿಥಿಯನ್ನು ಪಡೆದೂ ಅವನನ್ನು ಯಥೋಚಿತವಾಗಿ ಆದರಿಸಿ ಸತ್ಕರಿಸದಿದ್ದರೆ –ಆ ಅತಿಥಿಯು ತಾನು ಮಾಡಿರುವ ಪಾಪವನ್ನು ಆ ಗೃಹಸ್ಥನಿಗೆ ಕೊಟ್ಟು ಅವನ ಪುಣ್ಯವನ್ನು ಪಡೆದುಕೊಂಡು ಹೊರಟುಹೋಗುತ್ತಾನೆ.

ಮಗು! ನಿನ್ನ ಪ್ರಶ್ನೆಗೆ ಅನುಸಾರವಾಗಿ ಹಿಂದೆ ಗೃಹಸ್ಥನು ಯಾವ ರೀತಿಯಲ್ಲಿ ಮೃತ್ಯುವನ್ನು ಜಯಿಸಿದನೆಂಬ ಉತ್ತಮವಾದ ಈ ಉಪಾಖ್ಯಾನವನ್ನು ನಿನಗೆ ಹೇಳಿದ್ದೇನೆ.

ಧನ್ಯಂ ಯಶಸ್ಯಮಾಯುಷ್ಯಮಿದಮಾಖ್ಯಾನಮುತ್ತಮಮ್ ।
ಬುಭೂಷತಾಭಿಮನ್ತವ್ಯಂ ಸರ್ವದುಶ್ಚರಿತಾಪಹಮ್ ॥೯೪॥

ಉತ್ತಮವಾದ ಈ ಆಖ್ಯಾನವು ಧನವರ್ಧಕವಾದುದು. ಯಶೋವರ್ಧಕವಾದುದು. ಆಯುರ್ವರ್ಧಕವಾದುದು. ಸಕಲದುಷ್ಕರ್ಮಗಳನ್ನೂ ನಾಶಮಾಡತಕ್ಕುದು. ಆದುದರಿಂದ ತನ್ನ ಉನ್ನತಿಯನ್ನು ಬಯಸುವವನು ಈ ಉಪಾಖ್ಯಾನವನ್ನು ಮನನಮಾಡಬೇಕು.

ಇದಂ ಯಃ ಕಥಯೇದ್ವಿದ್ವಾನಹನ್ಯಹನಿ ಭಾರತ ।
ಸುದರ್ಶನಸ್ಯ ಚರಿತಂ ಪುಣ್ಯಾಲ್ಲೋಕಾನವಾಪ್ನುಯಾತ್ ॥೯೬॥

ಯಾವ ವಿದ್ವಾಂಸನು ಸುದರ್ಶನನ ಈ ಚರಿತ್ರೆಯನ್ನು ಅನುದಿನವೂ ಹೇಳುವನೋ–ಅವನು ಅಕ್ಷಯವಾದ ಪುಣ್ಯಲೋಕಗಳನ್ನು ಹೊಂದುತ್ತಾನೆ.”

ಎರಡನೆಯ ಅಧ್ಯಾಯವು ಮುಗಿಯಿತು.

ವಿಶ್ವಾಮಿತ್ರನ ಬ್ರಾಹ್ಮಣ್ಯಪ್ರಾಪ್ತಿಯ ವಿಷಯವಾಗಿ ಯುಧಿಷ್ಠಿರನ ಪ್ರಶ್ನೆ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಬ್ರಾಹ್ಮಣ್ಯಂ ಯದಿ ದುಷ್ಪ್ರಾಪ್ಯಂ ತ್ರಿಭಿರ್ವರ್ಣೈರ್ನರಾಧಿಪ ।
ಕಥಂ ಪ್ರಾಪ್ತಂ ಮಹಾರಾಜ ಕ್ಷತ್ರಿಯೇಣ ಮಹಾತ್ಮನಾ ॥೧॥

ವಿಶ್ವಾಮಿತ್ರೇಣ ಧರ್ಮಾತ್ಮನ್ಬ್ರಾಹ್ಮಣತ್ವಂ ನರರ್ಷಭ ।
ಶ್ರೋತುಮಿಚ್ಛಾಮಿ ತತ್ತ್ವೇನ ತನ್ಮೇ ಬ್ರೂಹಿ ಪಿತಾಮಹ ॥೨॥

"ಮಾನವಶ್ರೇಷ್ಠನಾದ ಪಿತಾಮಹನೇ! ಇತರ ಮೂರು ವರ್ಣಗಳವರಿಂದಲೂ ಬ್ರಾಹ್ಮಣ್ಯವನ್ನು ಹೊಂದುವುದು ಕಷ್ಟಸಾಧ್ಯವಾಗಿದ್ದ ಪಕ್ಷದಲ್ಲಿ–ಮಹಾತ್ಮನಾದ, ಧರ್ಮಾತ್ಮನಾದ ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದು ಬ್ರಾಹ್ಮಣತ್ವವನ್ನು ಹೇಗೆ ಪಡೆದನು? ಈ ವಿಷಯವನ್ನು ಯಥಾವತ್ತಾಗಿ ನಿನ್ನಿಂದ ಕೇಳಬೇಕೆಂದಿದ್ದೇನೆ. ಆ ಇತಿಹಾಸವನ್ನು ನನಗೆ ಹೇಳು.

ಮಹಾಪರಾಕ್ರಮಿಯೂ ಆಗಿದ್ದ ವಿಶ್ವಾಮಿತ್ರನು ತನ್ನ ತಪಸ್ಸಿನ ಪ್ರಭಾವದಿಂದ ಮಹಾತ್ಮರಾದ ವಸಿಷ್ಠರ ನೂರು ಮಕ್ಕಳನ್ನು ಏಕಕಾಲದಲ್ಲಿ ಧ್ವಂಸಮಾಡಿದನು. ಕ್ರೋಧಾವಿಷ್ಟನಾಗಿದ್ದ ವಿಶ್ವಾಮಿತ್ರನೊಮ್ಮೆ ತೀಕ್ಷ್ಣವಾದ ತೇಜಸ್ಸಿನಿಂದ ಕೂಡಿದ್ದ, ಯಮರಾಜಸದೃಶರಾಗಿದ್ದ ಅನೇಕ ಯಾತುಧಾನರನ್ನೂ–ರಾಕ್ಷಸರನ್ನೂ ಸೃಷ್ಟಿಸಿದನು. ಅವನು ಈ ಮನುಷ್ಯಲೋಕದಲ್ಲಿ ನೂರಾರು ಬ್ರಹ್ಮರ್ಷಿಗಳಿಂದ ಸಂಪನ್ನವಾದ, ವಿದ್ವಾಂಸರಾದ ಬ್ರಾಹ್ಮಣರಿಂದ ಪ್ರಶಂಸಿತವಾದ ಕುಶಿಕವಂಶವನ್ನು ಸ್ಥಾಪಿಸಿದನು. ಹರಿಶ್ಚಂದ್ರನು ಮಾಡುತ್ತಿದ್ದ ಮಹಾಯಜ್ಞದಲ್ಲಿ ಯಜ್ಞಪಶುವಾಗಿ ಮಾಡಲ್ಪಟ್ಟಿದ್ದ ಋಚೀಕನ ಮಗನಾದ, ಮಹಾತಪಸ್ವಿಯಾದ ಶುನಃಶೇಫನನ್ನು ವಿಶ್ವಾಮಿತ್ರನು ತನ್ನ ಮಹಾತೇಜಸ್ಸಿನಿಂದ ದೇವತೆಗಳನ್ನು ತೃಪ್ತಿಗೊಳಿಸಿ ಯಜ್ಞಪಶುತ್ವದಿಂದ ಬಿಡುಗಡೆಮಾಡಿದನು. ಈ ಕಾರಣದಿಂದಲೇ ಧೀಮಂತನಾದ ವಿಶ್ವಾಮಿತ್ರನಿಗೆ ಶುನಃಶೇಫನು ಪುತ್ರತ್ವವನ್ನು ಹೊಂದಿದನು (ಪುತ್ರನಾದನು).

ದೇವತೆಗಳಿಂದಲೇ ಕೊಡಲ್ಪಟ್ಟು ದೇವರಾತನೆಂದು ಪ್ರಸಿದ್ಧನಾದ ಶುನಃಶೇಫನನ್ನು ವಿಶ್ವಾಮಿತ್ರನು ತನ್ನ ಹಿರಿಯ ಮಗನನ್ನಾಗಿ ಪ್ರತಿಗ್ರಹಿಸಿದನು. ಆದರೆ ವಿಶ್ವಾಮಿತ್ರನ ಐವತ್ತು ಮಕ್ಕಳೂ ಶುನಃಶೇಫನನ್ನು ಹಿರಿಯಣ್ಣನೆಂದು ಗೌರವಿಸಲಿಲ್ಲ. ಅದರಿಂದ ಕುಪಿತನಾದ ವಿಶ್ವಾಮಿತ್ರನ ಶಾಪದಿಂದ ಅವರೆಲ್ಲರೂ ಚಂಡಾಲತ್ವವನ್ನು ಪಡೆದರು. ಜ್ಞಾತಿ-ಬಾಂಧವರಿಂದ ಪರಿತ್ಯಕ್ತನಾಗಿದ್ದ ಇಕ್ವ್ವಾಕುವಂಶದ ತ್ರಿಶಂಕುವು ಸ್ವರ್ಗದಿಂದ ಭ್ರಷ್ಟನಾಗಿ ದಕ್ಷಿಣದಿಕ್ಕಿನಲ್ಲಿ ತಲೆಯನ್ನು ಕೆಳಕ್ಕೆ ಮಾಡಿಕೊಂಡು ನೇತಾಡುತ್ತಿದ್ದನು. ಅಂತಹವನನ್ನು ವಿಶ್ವಾಮಿತ್ರನು ಪ್ರೀತಿಪೂರ್ವಕವಾಗಿ ತನ್ನ ತಪಸ್ಸಿನ ಬಲದಿಂದಲೇ ಸ್ವರ್ಗಕ್ಕೆ ಕಳುಹಿಸಿದನು.

ದೇವರ್ಷಿಗಳಿಂದಲೂ – ಬ್ರಹ್ಮರ್ಷಿಗಳಿಂದಲೂ – ದೇವತೆಗಳಿಂದಲೂ ಸಂಸೇವಿತವಾದ, ಪವಿತ್ರವಾದ, ಮಂಗಳಕರವಾದ ಮತ್ತು ವಿಶಾಲವಾದ ಕೌಶಿಕೀನದಿಯು ವಿಶ್ವಾಮಿತ್ರನ ಪ್ರಭಾವದಿಂದಲೇ ಹುಟ್ಟಿತು. ಐದು ಮುಡಿಗಳನ್ನು ಹೊಂದಿದ್ದ, ಲೋಕಪ್ರಿಯಳಾದ, ತಪಸ್ಸಿಗೆ ವಿಘ್ನವನ್ನುಂಟು ಮಾಡುತ್ತಿದ್ದ ರಂಭಾ ಎಂಬ ಹೆಸರಿನ ಅಪ್ಸರೆಯು ವಿಶ್ವಾಮಿತ್ರನ ಶಾಪದಿಂದಲೇ ಶಿಲೆಯಾದಳು. ಅದೇ ರೀತಿಯಲ್ಲಿ ಹಿಂದೆ ವಿಶ್ವಾಮಿತ್ರನ ಭಯದಿಂದಲೇ ಪ್ರಾಣಗಳನ್ನು ತೊರೆಯಬೇಕೆಂದು ನಿಶ್ಚಯಿಸಿದ ವಸಿಷ್ಠರು ತಮ್ಮನ್ನೇ ಬಂಧಿಸಿಕೊಂಡು ನದಿಯಲ್ಲಿ ಬಿದ್ದುಬಿಟ್ಟರು. ಆದರೆ ಆ ನದಿಯು ಅವರನ್ನು ಕೊಲ್ಲಲು ಧೈರ್ಯಮಾಡದೇ ಪಾಶಗಳೆಲ್ಲವನ್ನೂ ಬಿಚ್ಚಿಬಿಟ್ಟಿತು. ಅನಂತರ ವಸಿಷ್ಠರು ನದಿಯಿಂದ ಮೇಲಕ್ಕೆ ಬಂದರು. ಮಹಾತ್ಮರಾದ ವಸಿಷ್ಠರ ಆ ಕ್ರಿಯೆಯಿಂದ ಪವಿತ್ರವಾದ ಆ ಮಹಾನದಿಯು ಅಂದು ಮೊದಲ್ಗೊಂಡು 'ವಿಪಾಶಾ' ಎಂಬ ಹೆಸರಿನಿಂದಲೇ ಪ್ರಸಿದ್ಧವಾಯಿತು.

(ಒಮ್ಮೆ ವಿಶ್ವಾಮಿತ್ರನು ಶಾಪದ ಮೂಲಕವಾಗಿ ಶ್ವಪಚತ್ವವನ್ನು ಹೊಂದಿದ್ದ ತ್ರಿಶಂಕುವಿನಿಂದ ಯಜ್ಞವನ್ನು ಮಾಡಿಸುತ್ತಿದ್ದನು. ಅದನ್ನು ನೋಡಿದ ವಸಿಷ್ಠರ ಮಕ್ಕಳು ಶ್ವಪಚನಿಗೆ ಯಜ್ಞಮಾಡಿಸಿದವನೂ ಶ್ವಪಚನೇ ಆಗಲೆಂದು ಶಾಪವನ್ನಿತ್ತರು. ಆ ಶಾಪದ ಪರಿಣಾಮವಾಗಿ ಆಪತ್ಕಾಲದಲ್ಲಿ ವಿಶ್ವಾಮಿತ್ರನು ಶ್ವಪಚನಾಗಿ ಸತ್ತ ನಾಯಿಯ ಕಟಿಪ್ರದೇಶದ ಮಾಂಸವನ್ನು ಬೇಯಿಸುತ್ತಿದ್ದನು. (ಈ ಕಥೆಯು ಹಿಂದೆ ಬಂದಿರುತ್ತದೆ.) ಆ ಸಮಯ

ದಲ್ಲಿ ಇಂದ್ರನು ಗಿಡಗದ ರೂಪವನ್ನು ಧರಿಸಿ ಬೇಯಿಸುತ್ತಿದ್ದ ಮಾಂಸವನ್ನು ಅಪಹರಿಸಿದನೆಂದೂ ಅದರಿಂದಲೇ ವಿಶ್ವಾಮಿತ್ರರಿಗೆ ಬಂದಿದ್ದ ಶಾಪದ ವಿಮೋಚನೆಯಾಯಿತೆಂದೂ ಪುರಾಣಕಥೆಯಿದೆ. ಈ ಹಿನ್ನೆಲೆಯಲ್ಲಿ ಯುಧಿಷ್ಠಿರನು ಈ ಮುಂದಿನ ಮಾತನ್ನು ಹೇಳಿದ್ದಾನೆ.)

ವಿಶ್ವಾಮಿತ್ರನು ವಾಕ್ಕುಗಳ ಮೂಲಕವಾಗಿ ದೇವಸೇನೆಯ ನಾಯಕ ನಾದ ಪ್ರಭುವಾದ ಭಗವಾನ್ ಇಂದ್ರನನ್ನು ಸ್ತೋತ್ರಮಾಡಿದನು. ಅದರಿಂದ ಸುಪ್ರೀತನಾದ ಇಂದ್ರನು ವಿಶ್ವಾಮಿತ್ರನನ್ನು ಶಾಪದಿಂದ ಬಿಡುಗಡೆ ಮಾಡಿದನು.

ಧ್ರುವಸ್ಯೌತ್ತಾನಪಾದಸ್ಯ ಬ್ರಹ್ಮರ್ಷೀಣಾಂ ತಥೈವ ಚ ।
ಮಧ್ಯಂ ಜ್ವಲತಿ ಯೋ ನಿತ್ಯಮುದೀಚೀಮಾಶ್ರಿತೋ ದಿಶಮ್ ॥

ವಿಶ್ವಾಮಿತ್ರನು ಉತ್ತಾನಪಾದನ ಮಗನಾದ ಧ್ರುವನ (ಧ್ರುವನಕ್ಷತ್ರದ) ಮತ್ತು ಬ್ರಹ್ಮರ್ಷಿಗಳ (ಸಪ್ತರ್ಷಿನಕ್ಷತ್ರಗಳ) ಮಧ್ಯದಲ್ಲಿ ಉತ್ತರದಿಕ್ಕನ್ನು ಆಶ್ರಯಿಸಿ ನಕ್ಷತ್ರರೂಪದಲ್ಲಿ ಪ್ರಜ್ವಲಿಸುತ್ತಿದ್ದಾನೆ. ಕ್ಷತ್ರಿಯನಾದ ವಿಶ್ವಾಮಿತ್ರನು ಆ ಎಲ್ಲ ಅದ್ಭುತಕರ್ಮಗಳನ್ನೂ–ಇನ್ನೂ ಅನೇಕಕರ್ಮಗಳನ್ನೂ ಮಾಡಿದ್ದಾನೆ. ಅಂತಹವನು ಬ್ರಾಹ್ಮಣತ್ವವನ್ನು ಹೇಗೆ ಪಡೆದನೆಂಬುದರ ವಿಷಯವಾಗಿ ನನಗೆ ಕುತೂಹಲವುಂಟಾಗಿದೆ. ಇದೇನು? ಹೇಗೆ ನಡೆಯಿತು?–ಎಂಬುದನ್ನು ಯಥಾವತ್ತಾಗಿ ಹೇಳು.

ದೇಹಾನ್ತರಮನಾಸಾದ್ಯ ಕಥಂ ಸ ಬ್ರಾಹ್ಮಣೋಽಭವತ್ ॥೧೭॥

ವಿಶ್ವಾಮಿತ್ರನು ದೇಹಾಂತರವನ್ನು ಹೊಂದದೆಯೇ ಬ್ರಾಹ್ಮಣನು ಹೇಗಾದನು? ಈ ಎಲ್ಲ ವಿಷಯಗಳನ್ನೂ ನೀನು ಯಥಾವತ್ತಾಗಿ ಹೇಳುವ ಕೃಪೆಮಾಡು. ಮತಂಗರ್ಷಿಯ ಕಥೆಯನ್ನೂ ಹಾಗೆಯೇ ವಿಶ್ವಾಮಿತ್ರನ ಕಥೆಯನ್ನೂ ಯಥಾವತ್ತಾಗಿ ಹೇಳು. ಚಂಡಾಲಯೋನಿಯಲ್ಲಿ ಹುಟ್ಟಿದ್ದ ಮತಂಗಮುನಿಯು ಬ್ರಾಹ್ಮಣ್ಯವನ್ನು ಹೊಂದಲಿಲ್ಲ. ಆದರೆ ಕ್ಷತ್ರಿಯನಾಗಿದ್ದ ವಿಶ್ವಾಮಿತ್ರನು ಹೇಗೆ ಬ್ರಾಹ್ಮಣ್ಯವನ್ನು ಹೊಂದಿದನು?”

ಇನೆಯ ಅಧ್ಯಾಯವು ಮುಗಿಯಿತು.

೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಆಜಮೀಢವಂಶದ ವರ್ಣನೆ: ವಿಶ್ವಾಮಿತ್ರನ ಜನ್ಮಕಥೆ: ಅವನ ಪುತ್ರರ ಹೆಸರುಗಳು

ಭೀಷ್ಮನು ಹೇಳುತ್ತಾನೆ :

ಶ್ರೂಯತಾಂ ಪಾರ್ಥ ತತ್ತ್ವೇನ ವಿಶ್ವಾಮಿತ್ರೋ ಯಥಾ ಪುರಾ ।
ಬ್ರಾಹ್ಮಣತ್ವಂ ಗತಸ್ತಾತ ಬ್ರಹ್ಮರ್ಷಿತ್ವಂ ತಥೈವ ಚ ॥೧॥

"ಕುಂತೀಪುತ್ರನೇ! ಹಿಂದೆ ವಿಶ್ವಾಮಿತ್ರನು ಯಾವ ರೀತಿಯಲ್ಲಿ ಬ್ರಾಹ್ಮಣತ್ವವನ್ನು ಪಡೆದನು ಮತ್ತು ಹೇಗೆ ಬ್ರಹ್ಮರ್ಷಿಯಾದನು?– ಎಂಬುದನ್ನು ಯಥಾವತ್ತಾಗಿ ಕೇಳು.

ಭರತನ ವಂಶದಲ್ಲಿ ಅಜಮೀಢನೆಂಬ ಹೆಸರಿನ ಪ್ರಸಿದ್ಧನಾದ ರಾಜನಿದ್ದನು. ಅವನು ಅನೇಕಯಜ್ಞಗ್ಗಳ ಕರ್ತೃವೂ ಮತ್ತು ಧರ್ಮಾತ್ಮರಲ್ಲಿ ಶ್ರೇಷ್ಠನೂ ಆಗಿದ್ದನು. ಜಹ್ನುಮಹಾರಾಜನು ಅಜಮೀಢನ ಮಗನು. ಗಂಗಾದೇವಿಯು ಮಹಾತ್ಮನಾದ ಜಹ್ನುವಿನ ಸಮೀಪಕ್ಕೆ ಹೋಗಿ ಅವನ ಪುತ್ರಿಯ ಭಾವವನ್ನು ಹೊಂದಿದಳು. ಮಹಾಯಶೋವಂತನಾದ ಸಿಂಧು ದ್ವೀಪನು ಜಹ್ನುವಿನ ಮಗನು. ಸಿಂಧುದ್ವೀಪನು ತಂದೆಯಂತೆಯೇ ಗುಣ ಶಾಲಿಯಾಗಿದ್ದನು. ಸಿಂಧುದ್ವೀಪನಿಗೆ ಬಲಾಕಾಶ್ವನೆಂಬ ಮಗನು ಹುಟ್ಟಿದನು. ಅವನು ರಾಜರ್ಷಿಯೂ ಮಹಾಬಲಿಷ್ಠನೂ ಆಗಿದ್ದನು. ಬಲಾಕಾಶ್ವನಿಗೆ ವಲ್ಲಭನೆಂಬ ಮಗನು ಹುಟ್ಟಿದನು. ಅವನು ಮತ್ತೊಬ್ಬ ಧರ್ಮರಾಜ ನಂತೆಯೇ ಇದ್ದನು. ಕುಶಿಕನೆಂಬುವನು ವಲ್ಲಭನ ಮಗನು. ಕುಶಿಕನು ಇಂದ್ರನ ಕಾಂತಿಗೆ ಸಮಾನವಾದ ಕಾಂತಿಯುಳ್ಳವನಾಗಿದ್ದನು. ಶ್ರೀಮಂತ ನಾದ ಗಾಧಿ ಎಂಬ ಹೆಸರಿನ ರಾಜನು ಕುಶಿಕನ ಮಗನು. ಗಾಧಿಯು ಅಪುತ್ರವಂತನಾಗಿದ್ದುದರಿಂದ ವ್ರತಾನುಷ್ಠಾನಗಳಿಂದ ಸಂತಾನವನ್ನು ಪಡೆಯುವ ಸಲುವಾಗಿ ಅರಣ್ಯಕ್ಕೆ ಹೋದನು. ಅರಣ್ಯದಲ್ಲಿ ವಾಸಮಾಡು ತ್ತಿದ್ದ ಸತ್ಪುರುಷನಾದ ಗಾಧಿಗೆ ಹೆಣ್ಣುಮಗಳು ಹುಟ್ಟಿದಳು. ಸತ್ಯವತೀ ಎಂಬ ಹೆಸರಿನ ಆ ಕನ್ಯೆಯು ಭೂಮಿಯಲ್ಲಿಯೇ ಅಪ್ರತಿಮಳಾದ ರೂಪ

ವತಿಯಾಗಿದ್ದಳು. ಅದೇ ಸಮಯದಲ್ಲಿ ಭೃಗುವಂಶೀಯನಾದ, ಚ್ಯವನನ ಮಗನಾದ, ಶ್ರೀಮಂತನಾದ, ಋಚೀಕನೆಂದು ಖ್ಯಾತನಾಗಿದ್ದ ಋಷಿ ಪುಂಗವನು ಯಾವಾಗಲೂ ತಪಸ್ಸಿನಲ್ಲಿಯೇ ನಿರತನಾಗಿದ್ದನು. ಆ ಋಚೀಕನು ಸತ್ಯವತಿಯನ್ನು ಭಾರ್ಯಾರ್ಥವಾಗಿ ವರಣಮಾಡಿದನು. (ಪ್ರಾರ್ಥಿಸಿದನು). ಆದರೆ ಶತ್ರುಸೂದನನಾದ ಗಾಧಿಯು ಮಹಾತ್ಮನಾದ ಋಚೀಕನು ದರಿದ್ರನೆಂದು ಭಾವಿಸಿ ಅವನಿಗೆ ತನ್ನ ಮಗಳನ್ನು ಮದುವೆಮಾಡಿಕೊಡಲಿಲ್ಲ. ರಾಜನಿಂದ ನಿರಾಕರಿಸಲ್ಪಟ್ಟು ಹೊರಡುವುದರಲ್ಲಿದ್ದ ಋಚೀಕನನ್ನು ಪುನಃ ಕರೆದು ರಾಜಶ್ರೇಷ್ಠನಾದ ಗಾಧಿಯು ಹೇಳಿದನು :

ಶುಲ್ಕಂ ಪ್ರದೀಯತಾಂ ಮಹ್ಯಂ ತತೋ ವೇತ್ಸ್ಯಸಿ ಮೇ ಸುತಾಮ್ ॥೧೦॥

"ಮಹರ್ಷಿಯೇ! ನೀನು (ಸಂಪ್ರದಾಯಾನುಸಾರವಾಗಿ) ಕನ್ಯಾಶುಲ್ಕ ವನ್ನು ನನಗೆ ಕೊಡು. ಅನಂತರ ನೀನು ನನ್ನ ಮಗಳನ್ನು ವಿವಾಹದ ಮೂಲಕವಾಗಿ ಹೊಂದುವೆ."

ಋಚೀಕನು ಹೇಳುತ್ತಾನೆ :

ಕಿಂ ಪ್ರಯಚ್ಛಾಮಿ ರಾಜೇನ್ದ್ರ ತುಭ್ಯಂ ಶುಲ್ಕಮಹಂ ನೃಪ ।
ದುಹಿತುರ್ಬ್ರೂಹ್ಯಸಂಸಕ್ತೋ ಮಾಭೂತ್ತತ್ರ ವಿಚಾರಣಾ ॥೧೧॥

"ರಾಜೇಂದ್ರ! ಕನ್ಯಾಶುಲ್ಕದ ರೂಪವಾಗಿ ನಾನು ನಿನಗೆ ಏನನ್ನು ತಂದುಕೊಡಲಿ? ಸ್ವಲ್ಪವಾದರೂ ಸಂಕೋಚವಿಲ್ಲದೇ ಹೇಳು. ಈ ವಿಷಯದಲ್ಲಿ ನೀನು ಹಿಂದು-ಮುಂದು ಯೋಚಿಸುವ ಕಾರಣವೇ ಇಲ್ಲ."

ಗಾಧಿಯು ಹೇಳುತ್ತಾನೆ :

ಚನ್ದ್ರರಶ್ಮಿಪ್ರಕಾಶಾನಾಂ ಹಯಾನಾಂ ವಾತರಂಹಸಾಮ್ ।
ಏಕತಃ ಶ್ಯಾಮಕರ್ಣಾನಾಂ ಸಹಸ್ರಂ ದೇಹಿ ಭಾರ್ಗವ ॥೧೨॥

"ಭೃಗುಕುಮಾರನೇ! ಚಂದ್ರನ ಕಾಂತಿಗೆ ಸಮಾನವಾದ ಕಾಂತಿ ಯನ್ನು ಹೊಂದಿರುವ, ವಾಯುವಿನ ವೇಗಕ್ಕೆ ಸಮಾನವಾದ ವೇಗದಿಂದ

ಕೂಡಿರುವ, ಒಂದು ಕಡೆಯಲ್ಲಿ ಮಾತ್ರ ಕಪ್ಪಾದ ಕಿವಿಗಳನ್ನು ಹೊಂದಿರುವ ಒಂದು ಸಾವಿರ ಕುದುರೆಗಳನ್ನು ಕನ್ಯಾಶುಲ್ಕಾರ್ಥವಾಗಿ ನನಗೆ ತಂದು ಕೊಡು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಅನಂತರ ಭಾರ್ಗವರಲ್ಲಿ ಶ್ರೇಷ್ಠನಾದ, ಚ್ಯವನನ ಮಗನಾದ, ಮಹಾಪ್ರಭಾವಶಾಲಿಯಾದ ಋಚೀಕನು ಸಮುದ್ರಗಳಿಗೆ ಒಡೆಯನಾದ, ಅದಿತಿಯ ಮಗನಾದ ವರುಣನ ಬಳಿಗೆ ಹೋಗಿ ಹೇಳಿದನು :

ಏಕತಃ ಶ್ಯಾಮಕರ್ಣಾನಾಂ ಹಯಾನಾಂ ಚನ್ದ್ರವರ್ಚಸಾಮ್ ।
ಸಹಸ್ರಂ ವಾತವೇಗಾನಾಂ ಭಿಕ್ಷೇ ತ್ವಾಂ ದೇವಸತ್ತಮ ॥೧೪॥

“ದೇವಶ್ರೇಷ್ಠನೇ! ಒಂದು ಕಡೆಯಲ್ಲಿ ಮಾತ್ರ ಕಪ್ಪುಬಣ್ಣವುಳ್ಳ ಕಿವಿಯನ್ನು ಹೊಂದಿರುವ, ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿರುವ, ವಾಯುವೇಗಕ್ಕೆ ಸಮಾನವಾದ ವೇಗದಿಂದ ಕೂಡಿರುವ ಒಂದು ಸಾವಿರ ಕುದುರೆಗಳ ಭಿಕ್ಷೆಯನ್ನು ನಿನ್ನಿಂದ ಪ್ರಾರ್ಥಿಸುತ್ತೇನೆ.” ಅದಿತಿಯ ಮಗನಾದ ವರುಣದೇವನು ಋಚೀಕನ ಪ್ರಾರ್ಥನೆಗೆ ಸಮ್ಮತಿಸಿ ಭಾರ್ಗವನನ್ನು ಕುರಿತು ಹಾಗೆಯೇ ಆಗಲೆಂದು ಹೇಳಿ–‘ನೀನು ಎಲ್ಲಿ ಇಚ್ಛಿಸುವೆಯೋ ಅಲ್ಲಿಯೇ ನೀನು ಹೇಳಿದ ಲಕ್ಷಣಗಳುಳ್ಳ ಕುದುರೆಗಳು ಪ್ರಕಟವಾಗುತ್ತವೆ’–ಎಂದೂ ಹೇಳಿದನು. ಋಚೀಕನು ಗಂಗಾನದಿಯ ತೀರದಲ್ಲಿ ನಿಂತು ಕುದುರೆಗಳು ಪ್ರಕಟವಾಗಬೇಕೆಂದು ಧ್ಯಾನಮಾಡುತ್ತಿದ್ದಂತೆಯೇ ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯಿಂದ ಕೂಡಿದ್ದ, ವಿಪುಲವಾದ ತೇಜಸ್ಸಿನಿಂದ ಪ್ರಜ್ವಲಿಸುತ್ತಿದ್ದ ಒಂದು ಸಾವಿರ ಕುದುರೆಗಳು ಗಂಗಾನದಿಯಿಂದ ಹೊರಬಂದುವು.

ಅದೂರೇ ಕಾನ್ಯಕುಬ್ಜಸ್ಯ ಗಙ್ಗಾಯಾಸ್ತೀರಮುತ್ತಮಮ್ ।
ಅಶ್ವತೀರ್ಥಂ ತದದ್ಯಾಪಿ ಮಾನವೈಃ ಪರಿಚಕ್ಷ್ಯತೇ ॥೧೭॥

ಕಾನ್ಯಕುಬ್ಜದ ಸಮೀಪದಲ್ಲಿ ಗಂಗಾನದಿಯ ಆ ಉತ್ತಮತೀರ ಪ್ರದೇಶವನ್ನು ಈಗಲೂ ಅಲ್ಲಿನ ಜನರು ಅಶ್ವತೀರ್ಥವೆಂಬ ಹೆಸರಿನಿಂದ

ಕರೆಯುತ್ತಾರೆ. ಬಳಿಕ ತಪಸ್ವಿಗಳಲ್ಲಿ ಶ್ರೇಷ್ಠನಾದ ಋಚೀಕನು ಪರಮ ಪ್ರೀತನಾಗಿ ಗಾಧಿಯ ಬಳಿಗೆ ಬಂದು ಸುಂದರವಾದ ಒಂದು ಸಾವಿರ ಕುದುರೆಗಳನ್ನು ಕನ್ಯಾಶುಲ್ಕಾರ್ಥವಾಗಿ ಗಾಧಿಗೆ ಕೊಟ್ಟನು. ಆಶ್ಚರ್ಯಚಕಿತ ನಾದ ಗಾಧಿರಾಜನು ಋಷಿಯ ಶಾಪಕ್ಕೆ ಹೆದರಿ ತನ್ನ ಮಗಳನ್ನು ವಸ್ತ್ರಾಭರಣ



ಗಳಿಂದ ಅಲಂಕರಿಸಿ ಭೃಗುವಂಶಜನಾದ ಋಚೀಕನಿಗೆ ಮದುವೆಮಾಡಿ ಕೊಟ್ಟನು. ಬ್ರಹ್ಮರ್ಷಿಶ್ರೇಷ್ಠನಾದ ಋಚೀಕನು ಗಾಧಿಯ ಮಗಳಾದ ಸತ್ಯವತಿಯನ್ನು ವಿಧಿವತ್ತಾಗಿ ಪಾಣಿಗ್ರಹಣಮಾಡಿಕೊಂಡನು. ಸತ್ಯ ವತಿಯೂ ಕೂಡ ಋಚೀಕನನ್ನು ಪತಿಯನ್ನಾಗಿ ಪಡೆದು ಪರಮಹರ್ಷಿತ ಳಾದಳು. ಬ್ರಹ್ಮರ್ಷಿಯಾದ ಋಚೀಕನು ಸತ್ಯವತಿಯ ಸದ್ವ್ಯವಹಾರ

ಗಳಿಂದ ಪರಮಸಂತುಷ್ಟನಾದನು. ವರವರ್ಣಿನಿಯಾದ ಸತ್ಯವತಿಗೆ ಮನೋವಾಂಛಿತವಾದ ವರವನ್ನು ಕೊಡಲು ಇಚ್ಛಿಸಿದನು.

ರಾಜಶ್ರೇಷ್ಠನೇ! ರಾಜಕನ್ಯೆಯಾದ ಸತ್ಯವತಿಯು ಎಲ್ಲ ವಿಷಯಗಳನ್ನೂ ತನ್ನ ತಾಯಿಗೆ ಹೇಳಿದಳು. ಆ ಸಮಯದಲ್ಲಿ ಸತ್ಯವತಿಯ ತಾಯಿಯು ಸಂಕೋಚದಿಂದ ತಲೆಯನ್ನು ತಗ್ಗಿಸಿಕೊಂಡು ಮಗಳೊಡನೆ ಹೇಳಿದಳು :

ಮಮಾಪಿ ಪುತ್ರಿ ಭರ್ತಾ ತೇ ಪ್ರಸಾದಂ ಕರ್ತುಮರ್ಹತಿ ।
ಅಪತ್ಯಸ್ಯ ಪ್ರಸಾದೇನ ಸಮರ್ಥಶ್ಚ ಮಹಾತಪಾಃ ॥೨೩॥

"ಮಗಳೇ! ನಿನ್ನ ಪತಿಯು ನನಗೂ ಪುತ್ರನನ್ನು ದಯಪಾಲಿಸಿ ಅನುಗ್ರಹಿಸಲು ಯೋಗ್ಯನಾಗಿದ್ದಾನೆ. ಮಹಾತಪಸ್ವಿಯಾದ ಅವನು ಅನುಗ್ರಹಿಸಲು ಸಮರ್ಥನೂ ಆಗಿದ್ದಾನೆ." ಒಡನೆಯೇ ಸತ್ಯವತಿಯು ಪತಿಯ ಬಳಿಗೆ ಹೋಗಿ ತಾಯಿಯ ಇಚ್ಛೆಯನ್ನು ಅವನಿಗೆ ಹೇಳಿದಳು. ಪತ್ನಿಯ ಮಾತನ್ನು ಕೇಳಿದ ಋಚೀಕನು ಹೇಳಿದನು :

ಗುಣವನ್ತಮಪತ್ಯಂ ಸಾ ಅಚಿರಾಜ್ಜನಯಿಷ್ಯತಿ ।
ಮಮ ಪ್ರಸಾದಾತ್ಕಲ್ಯಾಣಿ ಮಾಭೂತ್ತೇ ಪ್ರಣಯೋಽನ್ಯಥಾ ॥೨೪॥

"ಕಲ್ಯಾಣಿ! ನನ್ನ ಅನುಗ್ರಹದಿಂದ ನಿನ್ನ ತಾಯಿಯು ಬಹಳ ಬೇಗ ಗುಣವಂತನಾದ ಪುತ್ರನನ್ನು ಪ್ರಸವಿಸುತ್ತಾಳೆ. ಪ್ರೇಮಪೂರ್ಣವಾದ ನಿನ್ನ ಪ್ರಾರ್ಥನೆಯು ನಿಷ್ಫಲವಾಗುವುದಿಲ್ಲ.

ತವ ಚೈವ ಗುಣಶ್ಲಾಘೀ ಪುತ್ರ ಉತ್ಪತ್ಸ್ಯತೇ ಮಹಾನ್ ।
ಅಸ್ಮದ್ವಂಶಕರಃ ಶ್ರೀಮಾನ್ಸತ್ಯಮೇತದ್ಬ್ರವೀಮಿ ತೇ ॥೨೬॥

ಶ್ರೇಷ್ಠವಾದ ಗುಣಗಳಿಂದ ಶ್ಲಾಘಿಸಲ್ಪಡುವ, ಮಹಾತೇಜಸ್ವಿಯಾದ, ವಂಶೋದ್ಧಾರಕನಾದ, ಶ್ರೀಮಂತನಾದ ಪುತ್ರನು ನಿನ್ನ ಗರ್ಭದಲ್ಲಿಯೂ ಹುಟ್ಟುತ್ತಾನೆ. ನಾನು ನಿನಗೆ ಸತ್ಯವಾದ ಈ ಮಾತನ್ನು ಹೇಳುತ್ತಿದ್ದೇನೆ.

ಋತುಸ್ನಾತಾ ಚ ಸಾಶ್ವತ್ಥಂ ತ್ವಂ ಚ ವೃಕ್ಷಮುದುಮ್ಬರಮ್ ।
ಪರಿಷ್ವಜೇಥಾಃ ಕಲ್ಯಾಣಿ ತತ ಏವಮವಾಪ್ಸ್ಯಥಃ ॥೨೭॥

ಋತುಸ್ನಾನಮಾಡಿದ ನಿಮ್ಮ ತಾಯಿಯು ಅಶ್ವತ್ಥವೃಕ್ಷವನ್ನೂ ಋತುಸ್ನಾನಮಾಡಿದ ನೀನು ಉದುಂಬರ (ಅತ್ತಿ) ವೃಕ್ಷವನ್ನೂ ಆಲಿಂಗಿಸಿಕೊಳ್ಳಿರಿ. ಹೀಗೆ ಮಾಡುವುದರಿಂದ ನಿಮ್ಮಿಬ್ಬರಿಗೂ ಪುತ್ರರ ಪ್ರಾಪ್ತಿಯಾಗುತ್ತದೆ.

ಚರುದ್ವಯಮಿದಂ ಚೈವ ಮನ್ತ್ರಪೂತಂ ಶುಚಿಸ್ಮಿತೇ ।
ತ್ವಂ ಚ ಸಾ ಚೋಪಭುಞ್ಜೀತಂ ತತಃ ಪುತ್ರಾವವಾಪ್ಸ್ಯಥಃ ॥೨೮॥

ಶುಭ್ರವಾದ ಮಂದಹಾಸವುಳ್ಳವಳೇ! ನಾನು ಮಂತ್ರಪೂತವಾದ ಈ ಎರಡು ಚರುಗಳನ್ನು ಸಿದ್ಧಪಡಿಸಿದ್ದೇನೆ. ಇದರಲ್ಲಿ ಒಂದನ್ನು ನೀನು ಭಕ್ಷಿಸು. ಮತ್ತೊಂದನ್ನು ನಿನ್ನ ತಾಯಿಯು ಭಕ್ಷಿಸಲಿ. ಇದರಿಂದ ನೀವಿಬ್ಬರೂ ಪುತ್ರರನ್ನು ಪಡೆಯುವಿರಿ."

ಪತಿಯು ಹೇಳಿದ ಈ ಮಾತಿನಿಂದ ಪರಮಹೃಷ್ಟಳಾದ ಸತ್ಯವತಿಯು ಋಚೀಕನು ಹೇಳಿದ ಎಲ್ಲ ವಿಷಯಗಳನ್ನೂ ತಾಯಿಯೊಡನೆ ಹೇಳಿದಳು. ಎರಡು ಚರುಗಳ ವಿಷಯವಾಗಿಯೂ ಹೇಳಿದಳು.

ಮಗಳ ಮಾತನ್ನು ಕೇಳಿ ತಾಯಿಯು ಅವಳೊಡನೆ ಹೇಳಿದಳು :

ಪುತ್ರಿ ಪೂರ್ವೋಪಪನ್ನಾಯಾಃ ಕುರುಷ್ವ ವಚನಂ ಮಮ ॥೩೦॥

"ಮಗಳೇ! ಹಿರಿತನವನ್ನು ಹೊಂದಿರುವ ನನ್ನ ಮಾತಿನಂತೆಯೇ ನೀನು ನಡೆದುಕೊಳ್ಳಬೇಕು.

ಭರ್ತ್ರಾ ಯ ಏಷ ದತ್ತಸ್ತೇ ಚರುರ್ಮನ್ತ್ರಪುರಸ್ಕೃತಃ ।
ಏನಂ ಪ್ರಯಚ್ಛ ಮಹ್ಯಂ ತ್ವಂ ಮದೀಯಂ ತ್ವಂ ಗೃಹಾಣ ಚ ॥

ವ್ಯತ್ಯಾಸಂ ವೃಕ್ಷಯೋಶ್ಚಾಪಿ ಕರವಾವ ಶುಚಿಸ್ಮಿತೇ ।
ಯದಿ ಪ್ರಮಾಣಂ ವಚನಂ ಮಮ ಮಾತುರನಿನ್ದಿತೇ ॥೩೧॥

ಅನಿಂದ್ಯಳೇ! ಶುಭ್ರವಾದ ಮಂದಹಾಸವುಳ್ಳವಳೇ! ತಾಯಿಯಾದ ನನ್ನ ಮಾತು ನಿನಗೆ ಪ್ರಮಾಣಭೂತವಾಗಿದ್ದರೆ ನಿನ್ನ ಪತಿಯು ನಿನಗೆ ಕೊಟ್ಟಿರುವ ಮಂತ್ರಪೂತವಾದ ಚರುವನ್ನು ನನಗೆ ಕೊಡು. ನನಗೆಂದು ಕೊಟ್ಟಿರುವ ಈ ಚರುವನ್ನು ನೀನು ತೆಗೆದುಕೊ. ವೃಕ್ಷಗಳಲ್ಲಿಯೂ ನಾವು

ಅದಲು-ಬದಲು ಮಾಡಿಕೊಳ್ಳೋಣ. (ಅಶ್ವತ್ಥವೃಕ್ಷವನ್ನು ನೀನು ಆಲಿಂಗಿಸು. ಅತ್ತಿಯ ಮರವನ್ನು ನಾನು ಆಲಿಂಗಿಸಿಕೊಳ್ಳುತ್ತೇನೆ.)

ಸ್ವಮಪತ್ಯಂ ವಿಶಿಷ್ಟಂ ಹಿ ಸರ್ವ ಇಚ್ಛತ್ಯನಾವಿಲಮ್ ।
ವ್ಯಕ್ತಂ ಭಗವತಾ ಚಾತ್ರ ಕೃತಮೇವಂ ಭವಿಷ್ಯತಿ ॥೩೩॥

ಪ್ರಾಯಶಃ ಎಲ್ಲರೂ ತಮಗೆ ನಿರ್ಮಲನೂ, ಸರ್ವಗುಣಸಂಪನ್ನನೂ, ಎಲ್ಲರಿಗಿಂತಲೂ ಶ್ರೇಷ್ಠನೂ ಆದ ಮಗನಾಗಬೇಕೆಂದು ಇಚ್ಛಿಸುತ್ತಾರೆ. ಪೂಜ್ಯನಾದ ಋಚೀಕನೂ ಸ್ಪಷ್ಟವಾಗಿ ಹೀಗೆಯೇ (ತನಗೆ ವಿಶಿಷ್ಟನಾದ ಪುತ್ರನು ಹುಟ್ಟಬೇಕೆಂದೇ) ಭಾವಿಸಿ ಚರುವನ್ನು ಸಿದ್ಧಪಡಿಸಿರಬಹುದು.

ತತೋ ಮೇ ತ್ವಚ್ಚರೌ ಭಾವಃ ಪಾದಪೇ ಚ ಸುಮಧ್ಯಮೇ ।
ಕಥಂ ವಿಶಿಷ್ಟೋ ಭ್ರಾತಾ ಮೇ ಭವೇದಿತ್ಯೇವ ಚಿನ್ತಯ ॥೩೪॥

ಸುಮಧ್ಯಮೆಯೇ! ಈ ಕಾರಣದಿಂದಲೇ ನಿನಗೆ ಕೊಟ್ಟಿರುವ ಚರುವಿನಲ್ಲಿಯೂ ಮತ್ತು ನೀನು ಆಲಿಂಗಿಸಲು ಹೇಳಿರುವ ವೃಕ್ಷದಲ್ಲಿಯೂ ನನಗೆ ಅನುರಾಗವುಂಟಾಗಿದೆ. 'ನನಗೆ ಹೇಗೆ ವಿಶಿಷ್ಟಗುಣಸಂಪನ್ನನಾದ ಸೋದರನು ಹುಟ್ಟುವನು!'–ಎಂಬುದನ್ನು ನೀನೂ ಚಿಂತಿಸುತ್ತಿರು. (ನಿನ್ನ ತಮ್ಮನು ವಿಶಿಷ್ಟವ್ಯಕ್ತಿಯಾದರೆ ನಿನಗೂ ಸಂತೋಷವಲ್ಲವೇ?)"

ಯುಧಿಷ್ಠಿರ! ತಾಯಿಯ ಆ ಸಲಹೆಯಂತೆಯೇ ತಾಯಿಯೂ ಮತ್ತು ಮಗಳೂ ಚರುವನ್ನೂ ಮತ್ತು ವೃಕ್ಷವನ್ನೂ ಅದಲು-ಬದಲು ಮಾಡಿಕೊಂಡರು. ಇಬ್ಬರೂ ಗರ್ಭವತಿಯರಾದರು. ಭಾರ್ಯೆಯು ಗರ್ಭವತಿಯಾದುದನ್ನು ನೋಡಿ ಮಹರ್ಷಿಯಾದ, ಭೃಗುಶ್ರೇಷ್ಠನಾದ ಋಚೀಕನು (ಅವಳ ಆಗಿನ ಲಕ್ಷಣಗಳನ್ನು ಸೂಕ್ಷ್ಮವಾಗಿ ಪರೀಕ್ಷಿಸಿ) ಅತ್ಯಂತಖಿನ್ನನಾಗಿ ಸತ್ಯವತಿಯನ್ನು ಕುರಿತು ಹೇಳಿದನು :

ವ್ಯತ್ಯಾಸೇನೋಪಯುಕ್ತಸ್ತೇ ಚರುರ್ವ್ಯಕ್ತಂ ಭವಿಷ್ಯತಿ ।
ವ್ಯತ್ಯಾಸಃ ಪಾದಪೇ ಚಾಪಿ ಸುವ್ಯಕ್ತಂ ತೇ ಕೃತಃ ಶುಭೇ ॥೩೭॥

"ಮಂಗಳಸ್ವರೂಪಳೇ! ನೀನು ಚರುವನ್ನು ವ್ಯತ್ಯಾಸವಾಗಿ ಉಪ

ಯೋಗಿಸಿರುವುದು ಸ್ಪಷ್ಟವಾಗಿಯೇ ಕಾಣುತ್ತಿದೆ. ಇಷ್ಟು ಮಾತ್ರವಲ್ಲ. ಆಲಿಂಗಿಸಿಕೊಳ್ಳಬೇಕಾಗಿದ್ದ ವೃಕ್ಷಗಳಲ್ಲಿಯೂ ವ್ಯತ್ಯಾಸಮಾಡಿರುವುದು ಸ್ಪಷ್ಟವಾಗಿದೆ.

ಮಯಾ ಹಿ ವಿಶ್ವಂ ಯದ್ಬ್ರಹ್ಮ ತ್ವಚ್ಚರೌ ಸಂನಿವೇಶಿತಮ್ ।
ಕ್ಷತ್ರವೀರ್ಯಂ ಚ ಸಕಲಂ ಚರೌ ತಸ್ಯಾ ನಿವೇಶಿತಮ್ ॥೩೮॥

ನಾನು ನಿನಗೆ ಕೊಟ್ಟ ಚರುವಿನಲ್ಲಿ ಸಂಪೂರ್ಣವಾದ ಬ್ರಹ್ಮತೇಜಸ್ಸನ್ನು ಸಮಾವೇಶಗೊಳಿಸಿದ್ದೆನು. ನಿಮ್ಮ ತಾಯಿಗೆ ಕೊಟ್ಟ ಚರುವಿನಲ್ಲಿ ಸಮಗ್ರವಾದ ಕ್ಷತ್ರತೇಜಸ್ಸನ್ನೂ ಸಮಾವೇಶಗೊಳಿಸಿದ್ದೆನು.

ತ್ರೈಲೋಕ್ಯವಿಖ್ಯಾತಗುಣಂ ತ್ವಂ ವಿಪ್ರಂ ಜನಯಿಷ್ಯಸಿ ।
ಸಾ ಚ ಕ್ಷತ್ರಂ ವಿಶಿಷ್ಟಂ ವೈ ತತ ಏತತ್ಕೃತಂ ಮಯಾ ॥೩೯॥

ನೀನು ಮೂರು ಲೋಕಗಳಲ್ಲಿಯೂ ವಿಖ್ಯಾತಗುಣನಾದ ಬ್ರಾಹ್ಮಣನನ್ನು ಹಡೆಯಬೇಕೆಂಬುದೂ–ನಿನ್ನ ತಾಯಿಯು ಸರ್ವಶ್ರೇಷ್ಠನಾದ ಕ್ಷತ್ರಿಯನನ್ನು ಹಡೆಯಬೇಕೆಂಬುದೂ ನನ್ನ ಅಭಿಮತವಾಗಿದ್ದಿತು. ಅದಕ್ಕಾಗಿ ಎರಡು ಬಗೆಯ ಚರುವನ್ನು ಮಾಡಿದ್ದೆನು.

ವ್ಯತ್ಯಾಸಸ್ತು ಕೃತೋ ಯಸ್ಮಾತ್ತ್ವಯಾ ಮಾತ್ರಾ ಚ ತೇ ಶುಭೇ ।
ತಸ್ಮಾತ್ಸಾ ಬ್ರಾಹ್ಮಣಂ ಶ್ರೇಷ್ಠಂ ಮಾತಾ ತೇ ಜನಯಿಷ್ಯತಿ ॥೪೦॥

ಕ್ಷತ್ರಿಯಂ ತೂಗ್ರಕರ್ಮಾಣಂ ತ್ವಂ ಭದ್ರೇ ಜನಯಿಷ್ಯಸಿ ।
ನ ಹಿ ತೇ ತತ್ಕೃತಂ ಸಾಧು ಮಾತೃಸ್ನೇಹೇನ ಭಾವಿನಿ ॥೪೧॥

ಭದ್ರೇ! ಈಗ ನೀನೂ ಮತ್ತು ನಿನ್ನ ತಾಯಿಯೂ ಚರುವಿನಲ್ಲಿಯೂ ಮತ್ತು ವೃಕ್ಷದಲ್ಲಿಯೂ ಅದಲು-ಬದಲು ಮಾಡಿಕೊಂಡ ಕಾರಣ ನಿನ್ನ ತಾಯಿಯು ಬ್ರಾಹ್ಮಣಶ್ರೇಷ್ಠನನ್ನು ಹಡೆಯುತ್ತಾಳೆ. ನೀನು ಉಗ್ರಕರ್ಮನಾದ ಕ್ಷತ್ರಿಯನನ್ನು ಹಡೆಯುವೆ. ತಾಯಿಯ ಮೇಲಿನ ಪ್ರೀತಿಯಿಂದ ನೀನು ಮಾಡಿರುವ ಕಾರ್ಯವು ಸಾಧುವಲ್ಲ."

ಯುಧಿಷ್ಠಿರ! ಪತಿಯ ಆ ಮಾತನ್ನು ಕೇಳಿ ವರವರ್ಣಿನಿಯಾದ ಸತ್ಯವತಿಯು–ಕತ್ತರಿಸಿಹಾಕಿದ ಸುಂದರವಾದ ಲತೆಯಂತೆ ಶೋಕತಪ್ತಳಾಗಿ

ಕುಸಿದುಬಿದ್ದಳು. ಸ್ವಲ್ಪಹೊತ್ತು ಕಳೆದನಂತರ ಗಾಧಿಯ ಮಗಳಾದ, ಋಚೀಕನ ಭಾರ್ಯೆಯಾದ ಸತ್ಯವತಿಯು ಎಚ್ಚರಗೊಂಡವಳಾಗಿ ಭಾರ್ಗವಶ್ರೇಷ್ಠನಾದ ಋಚೀಕನಿಗೆ ತಲೆಬಾಗಿ ನಮಸ್ಕರಿಸಿ ಹೇಳಿದಳು :

ಪ್ರಸಾದಯನ್ತ್ಯಾಂ ಭಾರ್ಯಾಯಾಂ ಮಯಿ ಬ್ರಹ್ಮವಿದಾಂ ವರ ।
ಪ್ರಸಾದಂ ಕುರು ವಿಪ್ರರ್ಷೇ ನ ಮೇ ಸ್ಯಾತ್ಕ್ಷತ್ರಿಯಃ ಸುತಃ ॥

"ಬ್ರಹ್ಮವಿದರಲ್ಲಿ ಶ್ರೇಷ್ಠನಾದವನೇ! ವಿಪ್ರರ್ಷಿಯೇ! ಕೈಮುಗಿದು ಕೊಂಡು ನಿನ್ನ ಪ್ರಸನ್ನತೆಗಾಗಿ ಬೇಡಿಕೊಳ್ಳುತ್ತಿರುವ ಭಾರ್ಯೆಯಾದ ನನ್ನ ವಿಷಯದಲ್ಲಿ ಪ್ರಸನ್ನನಾಗು. ನನಗೆ ಕ್ಷತ್ರಿಯಪುತ್ರನು ಹುಟ್ಟದಿರುವಂತೆ ಅನುಗ್ರಹಿಸು.

ಕಾಮಂ ಮಮೋಗ್ರಕರ್ಮಾ ವೈ ಪೌತ್ರೋ ಭವಿತುಮರ್ಹತಿ ।
ನ ತು ಮೇ ಸ್ಯಾತ್ಸುತೋ ಬ್ರಹ್ಮನ್ನೇಷ ಮೇ ದೀಯತಾಂ ವರಃ ॥

ಹಾಗೊಂದು ವೇಳೆ ವ್ಯತ್ಯಾಸಮಾಡಲು ಸಾಧ್ಯವೇ ಇಲ್ಲವೆನ್ನುವು ದಾದರೆ–ನನ್ನ ಮೊಮ್ಮಗನು ಉಗ್ರಕರ್ಮನಾದ ಕ್ಷತ್ರಿಯನಾಗಿ ಹುಟ್ಟಲಿ. ನನಗಂತೂ ಕ್ಷತ್ರಿಯಪುತ್ರನು ಹುಟ್ಟುವುದು ಬೇಡ. ಬ್ರಾಹ್ಮಣಶ್ರೇಷ್ಠನೇ! ಈ ವರವನ್ನಾದರೂ ದಯಪಾಲಿಸು."

ಯುಧಿಷ್ಠಿರ! ಮಹಾತಪಸ್ವಿಯಾದ ಋಚೀಕನು 'ಏವಮಸ್ತು–ಹಾಗೆಯೇ ಆಗಲಿ'–ಎಂದು ತನ್ನ ಪತ್ನಿಗೆ ಹೇಳಿದನು. ಅನಂತರ ಸತ್ಯವತಿಯು ಜಮದಗ್ನಿ ಎಂಬ ಹೆಸರಿನ ಶುಭಗುಣಸಂಪನ್ನನಾದ ಮಗನನ್ನು ಹಡೆದಳು.

ಬ್ರಹ್ಮರ್ಷಿಯಾದ ಋಚೀಕಮಹರ್ಷಿಯ ಅನುಗ್ರಹದಿಂದ ಯಶೋ ವತಿಯಾದ ಗಾಧಿಯ ಪತ್ನಿಯು ಬ್ರಹ್ಮವಾದಿಯಾದ ವಿಶ್ವಾಮಿತ್ರನನ್ನು ಹಡೆದಳು. ಈ ಕಾರಣದಿಂದಲೇ ಮಹಾತಪಸ್ವಿಯಾದ ವಿಶ್ವಾಮಿತ್ರನು ಕ್ಷತ್ರಿಯಕುಲದಲ್ಲಿಯೇ ಹುಟ್ಟಿದರೂ ಬ್ರಾಹ್ಮಣತ್ವವನ್ನು ಹೊಂದಿ ಬ್ರಾಹ್ಮಣ ವಂಶದ ಪ್ರವರ್ತಕನೂ ಆದನು. ಬ್ರಹ್ಮವಿದನಾದ ಮಹಾತಪಸ್ವಿಯಾದ ವಿಶ್ವಾಮಿತ್ರನ ಮಕ್ಕಳು ಕೂಡ ಮಹಾತ್ಮರೂ, ಬ್ರಾಹ್ಮಣವಂಶವರ್ಧಕರೂ, ಗೋತ್ರಪ್ರವರ್ತಕರೂ ಆದರು.

ಮಧುಚ್ಛನ್ದಶ್ಚ ಭಗವಾನ್ದೇವರಾತಶ್ಚ ವೀರ್ಯವಾನ್ ।
ಅಕ್ಷೀಣಶ್ಚ ಶಕುನ್ತಶ್ಚ ಬಭ್ರುಃ ಕಾಲಪಥಸ್ತಥಾ ॥೫೦॥
ಯಾಜ್ಞವಲ್ಕ್ಯಶ್ಚ ವಿಖ್ಯಾತಸ್ತಥಾ ಸ್ಥೂಣೋ ಮಹಾವ್ರತಃ ।
ಉಲೂಕೋ ಯಮದೂತಶ್ಚ ತಥರ್ಷಿಃ ಸೈನ್ಧವಾಯನಃ ॥೫೧॥

ವಲ್ಗುಜಙ್ಘಶ್ಚ ಭಗವಾನ್ಗಾಲವಶ್ಚ ಮಹಾನೃಷಿಃ ।
ಋಷಿರ್ವಜ್ರಸ್ತಥಾ ಖ್ಯಾತಃ ಸಾಲಂಕಾಯನ ಏವ ಚ ॥೫೨॥

ಲೀಲಾಢ್ಯೋ ನಾರದಶ್ಚೈವ ತಥಾ ಕೂರ್ಚಾಮುಖಃ ಸ್ಮೃತಃ ।
ವಾದುಲಿರ್ಮುಸಲಶ್ಚೈವ ವಕ್ಷೋಗ್ರೀವಸ್ತಥೈವ ಚ ॥೫೩॥

ಆಂಘ್ರಿಕೋ ನೈಕದೃಕ್ಚೈವ ಶಿಲಾಯೂಪಃ ಶಿತಃ ಶುಚಿಃ ।
ಚಕ್ರಕೋ ಮಾರುತನ್ತವ್ಯೋ ವಾತಘ್ನೋಽಥಾಶ್ವಲಾಯನಃ ॥೫೪॥

ಶ್ಯಾಮಾಯನೋಽಥ ಗಾರ್ಗ್ಯಶ್ಚ ಜಾಬಾಲಿಃ ಸುಶ್ರುತಸ್ತಥಾ ।
ಕಾರೀಷಿರಥ ಸಂಶ್ರುತ್ಯಃ ಪರಪೌರವತನ್ತವಃ ॥೫೫॥

ಮಹಾನೃಷಿಶ್ಚ ಕಪಿಲಸ್ತಥರ್ಷಿಸ್ತಾಡಕಾಯನಃ ।
ತಥೈವ ಚೋಪಗಹನಸ್ತಥರ್ಷಿಶ್ಚಾಸುರಾಯಣಃ ॥೫೬॥

ಮಾರ್ದಮರ್ಷಿರ್ಹಿರಣ್ಯಾಕ್ಷೋ ಜಙ್ಗಾರಿರ್ಬಾಭ್ರವಾಯಣಿಃ ।
ಭೂತಿರ್ವಿಭೂತಿಃ ಸೂತಶ್ಚ ಸುರಕೃತ್ತು ತಥೈವ ಚ ॥೫೭॥

ಅರಾಲಿರ್ನಾಚಿಕಶ್ಚೈವ ಚಾಮ್ಪೇಯೋಜ್ಜಯನೌ ತಥಾ ।
ನವತನ್ತುರ್ಬಕನಖಃ ಸೇಯನೋ ಯತಿರೇವ ಚ ॥೫೮॥

ಅಮ್ಭೋರುಹಶ್ಚಾರುಮತ್ಸ್ಯಃ ಶಿರೀಷೀ ಚಾಥ ಗಾರ್ದಭಿಃ ।
ಊರ್ಜಯೋನಿರುದಾಪೇಕ್ಷೀ ನಾರದೀ ಚ ಮಹಾನೃಷಿಃ ।
ವಿಶ್ವಾಮಿತ್ರಾತ್ಮಜಾಃ ಸರ್ವೇ ಮುನಯೋ ಬ್ರಹ್ಮವಾದಿನಃ ॥೫೯॥

ಪೂಜ್ಯನಾದ ಮಧುಚ್ಛಂದ, ವೀರ್ಯವಂತನಾದ ದೇವರಾತ, ಅಕ್ಷೀಣ, ಶಕುಂತ, ಬಭ್ರು, ಕಾಲಪಥ, ವಿಖ್ಯಾತನಾದ ಯಾಜ್ಞವಲ್ಕ್ಯ, ಮಹಾವ್ರತನಾದ ಸ್ಥೂಣ, ಉಲೂಕ, ಯಮದೂತ, ಸೈಂಧವಾಯನಮುನಿ, ಪೂಜ್ಯನಾದ ವಲ್ಗುಜಂಘ, ಮಹರ್ಷಿಯಾದ ಗಾಲವ, ವಜ್ರಮುನಿ, ವಿಖ್ಯಾತನಾದ

ಸಾಲಂಕಾಯನ, ಲೀಲಾಢ್ಯ, ನಾರದ, ಕೂರ್ಚಾಮುಖ, ವಾದುಲಿ, ಮುಸಲ, ವಕ್ಷೋಗ್ರೀವ, ಆಂಘ್ರಿಕ, ನೈಕದೃಕ್, ಶಿಲಾಯೂಪ, ಶಿತ, ಶುಚಿ, ಚಕ್ರಕ, ಮಾರುತಂತವ್ಯ, ವಾತಘ್ನ, ಆಶ್ವಲಾಯನ, ಶ್ಯಾಮಾಯನ, ಗಾರ್ಗ್ಯ, ಜಾಬಾಲಿ, ಸುಶ್ರುತ, ಕಾರೀಷಿ, ಸಂಶ್ರುತ್ಯ, ಪರ, ಪೌರವ, ತಂತು, ಕಪಿಲ ಮಹರ್ಷಿ, ಮುನಿಶ್ರೇಷ್ಠನಾದ ತಾಡಕಾಯನ, ಉಪಗಹನ, ಆಸುರಾಯಣ ಮುನಿ, ಮಾರ್ದಮರ್ಷಿ, ಹಿರಣ್ಯಾಕ್ಷ, ಜಂಗಾರಿ, ಬಾಭ್ರವಾಯಣಿ, ಭೂತಿ, ವಿಭೂತಿ, ಸೂತ, ಸುರಕೃತ್, ಅರಾಲಿ, ನಾಚಿಕ, ಚಾಂಪೇಯ, ಉಜ್ಜಯನ, ನವತಂತು, ಬಕನಖ, ಸೇಯನ, ಯತಿ, ಅಂಭೋರುಹ, ಚಾರುಮತ್ಸ್ಯ, ಶಿರೀಷೀ, ಗಾರ್ದಭಿ, ಊರ್ಜಯೋನಿ, ಉದಾಪೇಕ್ಷೀ ಮತ್ತು ಮಹರ್ಷಿಯಾದ ನಾರದೀ–ಇವರೆಲ್ಲರೂ ಮುನಿಗಳೂ ಬ್ರಹ್ಮವಾದಿಗಳೂ ಆದ ವಿಶ್ವಾಮಿತ್ರನ ಮಕ್ಕಳು.

ತಥೈವ ಕ್ಷತ್ರಿಯೋ ರಾಜನ್ವಿಶ್ವಾಮಿತ್ರೋ ಮಹಾತಪಾಃ ।
ಋಚೀಕೇನಾಹಿತಂ ಬ್ರಹ್ಮ ಪರಮೇತದ್ಯುಧಿಷ್ಠಿರ ॥೬೦॥

ಯುಧಿಷ್ಠಿರ! ಮಹಾತಪಸ್ವಿಯಾದ ವಿಶ್ವಾಮಿತ್ರನು ಕ್ಷತ್ರಿಯನೇ ಆಗಿದ್ದರೂ ಋಚೀಕಮಹರ್ಷಿಯು ಅವನಲ್ಲಿ ಉತ್ಕೃಷ್ಟವಾದ ಬ್ರಹ್ಮತೇಜಸ್ಸನ್ನು ಸಮಾವೇಶಗೊಳಿಸಿದನು.

ಹೀಗೆ ನಿನಗೆ ಸೋಮ-ಸೂರ್ಯಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ವಿಶ್ವಾಮಿತ್ರನ ಹುಟ್ಟಿನ ವಿಷಯವಾಗಿ ಎಲ್ಲ ವಿಷಯಗಳನ್ನೂ ಹೇಳಿದ್ದೇನೆ. ರಾಜಶ್ರೇಷ್ಠನೇ! ನಿನಗೆ ಪುನಃ ಎಲ್ಲೆಲ್ಲಿ ಸಂದೇಹವಿದೆಯೋ ಅವೆಲ್ಲವನ್ನೂ ನನ್ನೊಡನೆ ಹೇಳು. ನಿನ್ನ ಸಂದೇಹಗಳೆಲ್ಲವನ್ನೂ ತೊಡೆದುಹಾಕುತ್ತೇನೆ.”

ಳನೆಯ ಅಧ್ಯಾಯವು ಮುಗಿಯಿತು.

ಌನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಸ್ವಾಮಿಭಕ್ತನಾದ ದಯಾಳುಪುರುಷನ ಶ್ರೇಷ್ಠತೆಯ ವಿಷಯದಲ್ಲಿ ಇಂದ್ರನ ಮತ್ತು ಗಿಳಿಯ ಸಂವಾದ

ಪಾರಿಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಆನೃಶಂಸ್ಯಸ್ಯ ಧರ್ಮಜ್ಞ ಗುಣಾನ್ಭಕ್ತಜನಸ್ಯ ಚ ।
ಶ್ರೋತುಮಿಚ್ಛಾಮಿ ಧರ್ಮಜ್ಞ ತನ್ಮೇ ಬ್ರೂಹಿ ಪಿತಾಮಹ ॥೧॥

"ಧರ್ಮಜ್ಞನೇ! ಪಿತಾಮಹನೇ! ದಯಾಳುವಾದವನ ಮತ್ತು ಭಕ್ತನ ಗುಣಗಳನ್ನು ಕೇಳಬೇಕೆಂದಿರುತ್ತೇನೆ. ಈ ವಿಷಯವನ್ನು ಕೃಪೆಮಾಡಿ ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಇಂದ್ರನಿಗೂ–ಉದಾರವಾದ ಮನಸ್ಸನ್ನು ಹೊಂದಿದ್ದ ಗಿಳಿಗೂ ನಡೆದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ನಿನಗೂ ತಿಳಿಸುವೆನು, ಕೇಳು.

ಕಾಶಿರಾಜನ ರಾಜ್ಯದ ಗ್ರಾಮವೊಂದರಲ್ಲಿ ವ್ಯಾಧನೊಬ್ಬನು ವಾಸ ವಾಗಿದ್ದನು. ಒಂದು ದಿನ ಆ ವ್ಯಾಧನು ವಿಷಯುಕ್ತವಾದ ಬಾಣವನ್ನು ತೆಗೆದುಕೊಂಡು ಊರಿನಿಂದ ಹೊರಟು ಅರಣ್ಯಕ್ಕೆ ಹೋಗಿ ಅಲ್ಲಿ ಮೃಗವನ್ನು ಹುಡುಕುತ್ತಿದ್ದನು. ಆ ಮಹಾರಣ್ಯದಲ್ಲಿ ಹೀಗೆಯೇ ಸುತ್ತುತ್ತಿದ್ದಾಗ ಮಾಂಸ ಲೋಭಿಯಾದ ಆ ವ್ಯಾಧನು ಸ್ವಲ್ಪದೂರದಲ್ಲಿಯೇ ಮೃಗಗಳನ್ನು ನೋಡಿ ಅವುಗಳ ಮೇಲೆ ಬಾಣವನ್ನು ಬಿಟ್ಟನು. ವ್ಯಾಧನು ಬಿಟ್ಟ ಬಾಣವೇನೋ ತಡೆಯಲು ಅಸಾಧ್ಯವಾದುದೇ ಆಗಿದ್ದಿತು. ಆದರೆ ಮೃಗಗಳ ಮೇಲೆ ಇಟ್ಟಿದ್ದ ಲಕ್ಷ್ಯವು ಗುರಿತಪ್ಪಿ ವಿಚಲಿತವಾಯಿತು. ಈ ಕಾರಣದಿಂದ ಮೃಗಗಳನ್ನು ಕೊಲ್ಲಬೇಕೆಂದು ಪ್ರಯೋಗಿಸಿದ್ದ ಆ ಬಾಣವು ದೊಡ್ಡದಾಗಿದ್ದ ಕಾಡು ಮರವೊಂದರಲ್ಲಿ ನೆಟ್ಟುಕೊಂಡಿತು.

ತೀಕ್ಷ್ಣವಾಗಿಯೂ ವಿಷಯುಕ್ತವಾಗಿಯೂ ಇದ್ದ ಆ ಬಾಣದಿಂದ ಬಲ

ಪೂರ್ವಕವಾಗಿ ಛೇದಿಸಲ್ಪಟ್ಟ ಆ ವೃಕ್ಷವು ಫಲ-ಪತ್ರಗಳೆಲ್ಲವನ್ನೂ ಕಳೆದು ಕೊಂಡು ಒಣಮರವಾಗಿ ಉಳಿಯಿತು. ಅಂತಹ ಸ್ಥಿತಿಯನ್ನು ಹೊಂದಿದ ಆ ವೃಕ್ಷದ ಪೊಟರೆಗಳಲ್ಲಿಯೇ ಬಹಳ ಕಾಲದಿಂದ ವಾಸಮಾಡುತ್ತಿದ್ದ ಗಿಳಿಯು ಆ ವೃಕ್ಷದ ಮೇಲಿದ್ದ ಸ್ನೇಹದ ಕಾರಣದಿಂದಾಗಿ ತಾನು ವಾಸವಾಗಿದ್ದ ಆ ವೃಕ್ಷದ ಪೊಟರೆಯನ್ನು ಬಿಟ್ಟು ಹೋಗಲೇ ಇಲ್ಲ. ಮಾಡಿದ ಉಪಕಾರವನ್ನು ಸ್ಮರಿಸುವ

ಗುಣದಿಂದ ಕೂಡಿದ್ದ, ಧರ್ಮಸ್ವಭಾವದ ಆ ಗಿಳಿಯು ಎಲ್ಲಿಗೂ ಸಂಚಾರಕ್ಕೂ ಹೋಗುತ್ತಿರಲಿಲ್ಲ. ಆಹಾರವನ್ನೂ ತಿನ್ನುತ್ತಿರಲಿಲ್ಲ. ಅದರಿಂದ ಅದು ಬಹಳವಾಗಿ ಆಯಾಸಗೊಂಡಿದ್ದಿತು. ಅದರ ಧ್ವನಿಯು ಕುಸಿದಿದ್ದಿತು. ತಾನು ವಾಸಿಸುತ್ತಿದ್ದ ಆ ವೃಕ್ಷದಂತೆಯೇ ಆ ಗಿಳಿಯೂ ಒಣಗಿಹೋಯಿತು.

ಉದಾರವಾದ ಬುದ್ಧಿಯಿಂದ ಕೂಡಿದ್ದ, ಮಹಾಧೈರ್ಯಶಾಲಿಯಾದ, ಅಲೌಕಿಕವಾದ ರೀತಿಯಲ್ಲಿ ವರ್ತಿಸುತ್ತಿದ್ದ, ಸುಖ-ದುಃಖಗಳೆರಡನ್ನೂ ಸಮಾನವಾಗಿ ಭಾವಿಸಿದ್ದ ಆ ಗಿಳಿಯನ್ನು ನೋಡಿ ದೇವೇಂದ್ರನೇ ವಿಸ್ಮಿತನಾದನು. 'ತಿರ್ಯಗ್ಯೋನಿಯಲ್ಲಿ ಹುಟ್ಟಿರುವ ಈ ಪಕ್ಷಿಯು ಪಶು-ಪಕ್ಷಿ ಮುಂತಾದ ತಿರ್ಯಗ್ಜಂತುಗಳಲ್ಲಿ ಅಸಂಭಾವ್ಯವಾದ ದಯಾಪರತೆಯನ್ನು ಹೇಗೆ ಆಶ್ರಯಿಸಿದೆ?'–ಎಂದು ಇಂದ್ರನು ಚಿಂತಿಸತೊಡಗಿದನು. 'ಅಥವಾ ಇದರಲ್ಲಿ ವಿಚಿತ್ರವೇನೂ ಇಲ್ಲ; ಎಲ್ಲೆಡೆಗಳಲ್ಲಿಯೂ ಇರುವ ಎಲ್ಲ ಪ್ರಾಣಿಗಳಲ್ಲಿಯೂ ಎಲ್ಲ ವಿಧವಾದ ಗುಣಗಳೂ ಇರುವುದು ಕಂಡುಬರುತ್ತದೆ'–ಎಂಬುದಾಗಿ ಚಿಂತಿಸಿ ಮರುಕ್ಷಣದಲ್ಲಿಯೇ ಇಂದ್ರನು ಸಮಾಧಾನಪಟ್ಟುಕೊಂಡನು. ಆದರೂ ಆ ಗಿಳಿಯನ್ನು ಪರೀಕ್ಷಿಸಬೇಕೆಂಬ ಇಚ್ಛೆಯು ಇಂದ್ರನಿಗುಂಟಾಯಿತು. ಅನಂತರ ಇಂದ್ರನು ಭೂಮಿಗೆ ಇಳಿದುಬಂದು ಬ್ರಾಹ್ಮಣವೇಷದಿಂದ ಮಾನವರೂಪವನ್ನು ತಾಳಿ ವೃಕ್ಷದ ಬಳಿಗೆ ಹೋಗಿ ಅದರ ಪೊಟರೆಯಲ್ಲಿದ್ದ ಗಿಳಿಗೆ ಹೇಳಿದನು :

ಶುಕ ಭೋ ಪಕ್ಷಿಣಾಂ ಶ್ರೇಷ್ಠ ದಾಕ್ಷೇಯೀ ಸುಪ್ರಜಾ ತ್ವಯಾ ।
ಪೃಚ್ಛೇ ತ್ವಾಂ ಶುಕಮೇನಂ ತ್ವಂ ಕಸ್ಮಾನ್ನ ತ್ಯಜಸಿ ದ್ರುಮಮ್ ॥

"ಪಕ್ಷಿಗಳಲ್ಲಿಯೇ ಶ್ರೇಷ್ಠವಾದ ಗಿಳಿಯೇ! ನಿನ್ನಂತಹ ಉತ್ತಮ ಸಂತಾನವನ್ನು ಪಡೆದು ದಕ್ಷನ ಮೊಮ್ಮಗಳಾದ ಶುಕಿಯು ಶ್ರೇಷ್ಠಸಂತಾನ ಳಾದಳು. ನಾನೀಗ ಒಂದು ವಿಷಯವಾಗಿ ನಿನ್ನನ್ನು ಪ್ರಶ್ನಿಸಬೇಕೆಂದಿದ್ದೇನೆ. ಅನೇಕ ವಿಧವಾದ ತೊಂದರೆಗಳಿದ್ದರೂ ನೀನು ಈ ವೃಕ್ಷವನ್ನೇಕೆ ತ್ಯಜಿಸಲಿಲ್ಲ?"

ದೇವರಾಜನಿಂದ ಹೀಗೆ ಪ್ರಶ್ನಿಸಲ್ಪಟ್ಟ ಶುಕವು ತಲೆಬಾಗಿ ಅವನಿಗೆ ನಮಸ್ಕರಿಸಿ ಹೇಳಿತು :

ಸ್ವಾಗತಂ ದೇವರಾಜ ತ್ವಂ ವಿಜ್ಞಾತಸ್ತಪಸಾ ಮಯಾ ।

"ದೇವರಾಜ! ನಿನಗೆ ಸ್ವಾಗತವನ್ನು ಬಯಸುತ್ತೇನೆ. ತಪಸ್ಸಿನ ಪ್ರಭಾವದಿಂದ ನೀನು ಇಂದ್ರನೆಂಬುದು ನನಗೆ ತಿಳಿದಿದೆ."

ಗಿಳಿಯು ಹೇಳಿದ ಈ ಮಾತನ್ನು ಕೇಳಿದ ಕೂಡಲೇ ಸಹಸ್ರಾಕ್ಷನು

'ಸಾಧು ಶುಕ! ಸಾಧು!' ಎಂದು ಗಿಳಿಯನ್ನು ಪ್ರಶಂಸಿಸಿದನು : 'ನಿಶ್ಚಯವಾಗಿಯೂ ಈ ಗಿಳಿಯದು ಎಂತಹ ಅದ್ಭುತವಿಜ್ಞಾನ!' ಎಂಬುದಾಗಿ ಭಾವಿಸಿ ಇಂದ್ರನು ಮನಸ್ಸಿನಿಂದಲೇ ಆ ಶುಕವನ್ನು ಅಭಿನಂದಿಸಿದನು. ವೃಕ್ಷದ ವಿಷಯದಲ್ಲಿ ಗಿಳಿಗೆ ಎಂತಹ ಅದ್ಭುತವಾದ ಪ್ರೇಮವಿರುವುದೆಂಬುದನ್ನು ತಿಳಿದಿದ್ದರೂ ಇಂದ್ರನು ಶುಭವಾದ ಕೆಲಸಗಳನ್ನೇ ಮಾಡುತ್ತಿದ್ದ ಧಾರ್ಮಿಕಬುದ್ಧಿಯುಳ್ಳ ಶುಕವನ್ನು ಪುನಃ ಪ್ರಶ್ನಿಸಿದನು :



ನಿಷ್ಪತ್ರಮಫಲಂ ಶುಷ್ಕಮಶರಣ್ಯಂ ಪತತ್ರಿಣಾಮ್ ।
ಕಿಮರ್ಥಂ ಸೇವಸೇ ವೃಕ್ಷಂ ಯದಾ ಮಹದಿದಂ ವನಮ್ ॥೧೭॥

"ಗಿಳಿಯೇ! ಈ ಮಹಾವನದಲ್ಲಿ ಫಲ-ಪುಷ್ಪಭರಿತವಾದ ಅನೇಕ

ವೃಕ್ಷಗಳಿರುವಾಗ ಫಲ-ಪುಷ್ಪಗಳಾಗಲೀ–ಎಲೆಗಳಾಗಲೀ ಇಲ್ಲದೇ ಒಣಗಿ ಹೋಗಿರುವ, ಪಕ್ಷಿಗಳಿಗೆ ಆಶ್ರಯಿಸಲು ಯೋಗ್ಯವಲ್ಲದ ಈ ವೃಕ್ಷವನ್ನೇ ಏಕೆ ಆಶ್ರಯಿಸಿರುವೆ?

ಅನ್ಯೇಽಪಿ ಬಹವೋ ವೃಕ್ಷಾಃ ಪತ್ರಸಂಛನ್ನಕೋಟರಾಃ ।
ಶುಭಾಃ ಪರ್ಯಾಪ್ತಸಂಚಾರಾ ವಿದ್ಯನ್ತೇಽಸ್ಮಿನ್ಮಹಾವನೇ ॥೧೮॥

ಈ ಮಹಾರಣ್ಯದಲ್ಲಿ ಎಲೆಗಳಿಂದ ಮುಚ್ಚಲ್ಪಟ್ಟ ಪೊಟರೆಗಳುಳ್ಳ, ಸುಂದರವಾದ, ಹಾರಾಡಲು ಸಾಕಷ್ಟು ಸ್ಥಳಾವಕಾಶವಿರುವ ಇನ್ನೂ ಅನೇಕ ವೃಕ್ಷಗಳಿವೆ.

ಗತಾಯುಷಮಸಾಮರ್ಥ್ಯಂ ಕ್ಷೀಣಸಾರಂ ಹತಶ್ರಿಯಮ್ ।
ವಿಮೃಶ್ಯ ಪ್ರಜ್ಞಯಾ ಧೀರ ಜಹೀಮಂ ಸ್ಥವಿರಂ ದ್ರುಮಮ್ ॥೧೯॥

ಧೀರತ್ವದಿಂದ ಕೂಡಿರುವ ಗಿಳಿಯೇ! ನೀನು ವಾಸಿಸುತ್ತಿರುವ ಈ ವೃಕ್ಷದ ಆಯುಷ್ಯವು ಕಳೆದುಹೋಗಿದೆ. ಇದಕ್ಕೀಗ ಯಾವ ಸಾಮರ್ಥ್ಯವೂ ಇಲ್ಲ. ಇದರ ಸಾರವೆಲ್ಲವೂ ಕ್ಷೀಣಿಸಿಹೋಗಿದೆ. ಶೋಭೆಯೂ ಅಪಹೃತವಾಗಿದೆ. ಈ ವಿಷಯವನ್ನು ನಿನ್ನ ಬುದ್ಧಿಯಿಂದ ಚೆನ್ನಾಗಿ ವಿಮರ್ಶಿಸಿ ಮುದಿಯಾಗಿರುವ ಈ ವೃಕ್ಷವನ್ನು ಬಿಟ್ಟುಬಿಡು."

ಯುಧಿಷ್ಠಿರ! ಧರ್ಮಬುದ್ಧಿಯಿಂದ ಕೂಡಿದ್ದ ಆ ಗಿಳಿಯು ಇಂದ್ರನು ಹೇಳಿದ ಮಾತನ್ನು ಕೇಳಿ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಅತ್ಯಂತ ದೀನಭಾವದಿಂದ ಕೂಡಿ ಈ ಮಾತನ್ನು ಹೇಳಿತು :

ಅನತಿಕ್ರಮಣೀಯಾನಿ ದೈವತಾನಿ ಶಚೀಪತೇ ।
ಯತ್ರಾಭವತ್ತವ ಪ್ರಶ್ನಸ್ತನ್ನಿಬೋಧ ಸುರಾಧಿಪ ॥೨೦॥

"ಶಚೀಪತಿಯೇ! ದೇವತೆಗಳನ್ನು ಮೀರಿ ನಡೆಯಬಾರದು. ಆದುದರಿಂದ ನೀನು ಯಾವುದರ ವಿಷಯವಾಗಿ ಪ್ರಶ್ನೆಯನ್ನು ಕೇಳಿದೆಯೋ–ಅದರ ವಿಷಯವಾಗಿಯೇ ನಾನು ಹೇಳುವುದನ್ನು ಕೇಳು.

ಅಸ್ಮಿನ್ನಹಂ ದ್ರುಮೇ ಜಾತಃ ಸಾಧುಭಿಶ್ಚ ಗುಣೈರ್ಯುತಃ ।
ಬಾಲಭಾವೇನ ಸಂಗುಪ್ತಃ ಶತ್ರುಭಿಶ್ಚ ನ ಧರ್ಷಿತಃ ॥೨೧॥

ನಾನು ಈ ವೃಕ್ಷದಲ್ಲಿಯೇ ಹುಟ್ಟಿದೆನು. ಇಲ್ಲಿಯೇ ಬೆಳೆದು ಒಳ್ಳೊಳ್ಳೆಯ ಗುಣಗಳಿಂದಲೂ ಯುಕ್ತನಾಗಿದ್ದೇನೆ. ತಂದೆಯು ಬಾಲಕನನ್ನು ರಕ್ಷಿಸುವಂತೆ –ಈ ವೃಕ್ಷವು ನನ್ನನ್ನು ರಕ್ಷಿಸಿದೆ. ಶತ್ರುಗಳಾರೂ ನನ್ನನ್ನಾಕ್ರಮಿಸಲು ಇಲ್ಲಿಗೆ ಬರಲಿಲ್ಲ. (ಇಲ್ಲಿ ನನಗೆ ಶತ್ರುಗಳಿಂದಲೂ ಪೀಡೆಯಿರಲಿಲ್ಲ.)

ಕಿಮನುಕ್ರೋಶ ವೈಫಲ್ಯಮುತ್ಪಾದಯಸಿ ಮೇಽನಘ ।
ಆನೃಶಂಸ್ಯಾಭಿಯುಕ್ತಸ್ಯ ಭಕ್ತಸ್ಯಾನನ್ಯಗಸ್ಯ ಚ ॥೨೩॥

ನಿಷ್ಪಾಪನಾದ ದೇವೇಂದ್ರನೇ! ದಯಾಪರತೆಯಿಂದ ಯುಕ್ತನಾಗಿರುವ, ವೃಕ್ಷದ ವಿಷಯದಲ್ಲಿ ಅತ್ಯಂತಭಕ್ತಿಭಾವದಿಂದಿರುವ, ಈ ಕಾರಣದಿಂದಲೇ ಬೇರೆಲ್ಲಿಗೂ ಹೋಗದೇ ಇರುವ ನನ್ನ ಕನಿಕರದ ವೈಫಲ್ಯವನ್ನು ಹುಟ್ಟಿಸಲು (ಕನಿಕರವು ನಿಷ್ಪ್ರಯೋಜಕವೆಂಬ ಭಾವನೆಯನ್ನು ಉಂಟುಮಾಡಲು) ನೀನೇಕೆ ಯತ್ನಿಸುತ್ತಿರುವೆ?

ಅನುಕ್ರೋಶೋ ಹಿ ಸಾಧೂನಾಂ ಮಹದ್ಧರ್ಮಸ್ಯ ಲಕ್ಷಣಮ್ ।
ಅನುಕ್ರೋಶಶ್ಚ ಸಾಧೂನಾಂ ಸದಾ ಪ್ರೀತಿಂ ಪ್ರಯಚ್ಛತಿ ॥೨೪॥

ಸತ್ಪುರುಷರಿಗೆ, ಇತರರ ವಿಷಯದಲ್ಲಿ ದಯೆಯನ್ನು ತೋರುವುದೇ ಸತ್ಪುರುಷರಲ್ಲಿರುವ ಮಹಾಧರ್ಮದ ಮಹಾಲಕ್ಷಣವಾಗಿದೆ. ಸತ್ಪುರುಷರಿಗೆ ದಯಾಪರತೆಯೇ ಸದಾ ಸಂತೋಷವನ್ನುಂಟುಮಾಡುತ್ತದೆ.

ತ್ವಮೇವ ದೈವತೈಃ ಸರ್ವೈಃ ಪೃಚ್ಛ್ಯಸೇ ಧರ್ಮಸಂಶಯಾತ್ ।
ಅತಸ್ತ್ವಂ ದೇವದೇವಾನಾಮಾಧಿಪತ್ಯೇ ಪ್ರತಿಷ್ಠಿತಃ ॥೨೫॥

ಧರ್ಮದ ವಿಷಯದಲ್ಲಿ ಸಂದೇಹವುಂಟಾದಾಗ ಅದರ ನಿವಾರಣೆಗಾಗಿ ದೇವತೆಗಳೆಲ್ಲರೂ ನಿನ್ನನ್ನೇ ಪ್ರಶ್ನಿಸುತ್ತಾರೆ. ಅದರಿಂದಲೇ ನೀನು ದೇವಾಧಿದೇವತೆಗಳ ಅಧಿಪತಿಯ ಸ್ಥಾನದಲ್ಲಿ ಪ್ರತಿಷ್ಠಿತನಾಗಿರುವೆ.

ನಾರ್ಹಸೇ ಮಾಂ ಸಹಸ್ರಾಕ್ಷ ದ್ರುಮಂ ತ್ಯಾಜಯಿತುಂ ಚಿರಾತ್ ।
ಸಮರ್ಥಮುಪಜೀವ್ಯೇಮಂ ತ್ಯಜೇಯಂ ಕಥಮದ್ಯ ವೈ ॥೨೬॥

ಸಹಸ್ರಾಕ್ಷನೇ! ಈ ವೃಕ್ಷವನ್ನು ತ್ಯಾಗಮಾಡಿ ಹೋಗುವಂತೆ ನನಗೆ ಸಲಹೆನೀಡುವುದು ನಿನಗೆ ಉಚಿತವಾಗಿ ಕಾಣುವುದಿಲ್ಲ. ನಾನು ಬಹಳ ಬಲಿಷ್ಠವಾಗಿದ್ದ ಈ ವೃಕ್ಷದ ಆಶ್ರಯವನ್ನೇ ಪಡೆದು ಬಹಳ ಕಾಲದಿಂದಲೂ

ಜೀವನವನ್ನು ನಡೆಸಿದ್ದೇನೆ. ಈಗ ಈ ವೃಕ್ಷವು ಒಣಗಿಹೋದ ಮಾತ್ರಕ್ಕೆ ಇದನ್ನು ನಾನು ಹೇಗೆ ತಾನೇ ಬಿಟ್ಟುಹೋಗಲಿ?"

ಯುಧಿಷ್ಠಿರ! ಗಿಳಿಯು ಹೇಳಿದ ಕನಿಕರದಿಂದ ಯುಕ್ತವಾದ ಕೋಮಲವಾದ ಮಾತಿನಿಂದ ಪರಮಹರ್ಷಿತನಾದ ಧರ್ಮಾತ್ಮನಾದ ಇಂದ್ರನು ಗಿಳಿಯೊಡನೆ–'ವರಂ ವೃಣೀಷ್ವ'–'ನಿನಗೆ ಬೇಕಾದ ವರವನ್ನು ಕೇಳು'–ಎಂದು ಹೇಳಿದನು. ಆಗ ಶುಕವು ತಾನು ಯಾವಾಗಲೂ ದಯಾಪರತೆಯಿಂದ ಇರುವಂತೆಯೇ ಅನುಗ್ರಹಿಸಬೇಕೆಂದೂ–ವೃಕ್ಷವು ಹಿಂದಿನಂತೆಯೇ ಫಲ-ಪುಷ್ಪಗಳಿಂದ ಭರಿತವಾಗಬೇಕೆಂದೂ–ಎರಡು ವರಗಳನ್ನು ಕೇಳಿತು.

ಇಂದ್ರನು ಗಿಳಿಗೆ ವೃಕ್ಷದ ವಿಷಯದಲ್ಲಿರುವ ದೃಢವಾದ ಭಕ್ತಿಯನ್ನೂ ಮತ್ತು ಗಿಳಿಯಲ್ಲಿರುವ ಅಪಾರವಾದ ಶೀಲಸಂಪತ್ತನ್ನೂ ತಿಳಿದು ಸುಪ್ರೀತನಾಗಿ ಒಡನೆಯೇ ವೃಕ್ಷವನ್ನು ಅಮೃತದಿಂದ ಪ್ರೋಕ್ಷಿಸಿದನು. ಒಡನೆಯೇ ಒಣಗಿಹೋಗಿದ್ದ ಆ ವೃಕ್ಷದಲ್ಲಿ ಫಲಗಳೂ, ಎಲೆಗಳೂ, ಮನೋಹರವಾದ ರೆಂಬೆಗಳೂ ಹುಟ್ಟಿಕೊಂಡುವು. ಗಿಳಿಯ ದೃಢಭಕ್ತಿಯ ಕಾರಣದಿಂದಾಗಿ ಆ ವೃಕ್ಷವು ಹಿಂದಿನಂತೆಯೇ ಕಾಂತಿಯುಕ್ತವಾಯಿತು. ಗಿಳಿಯು ದಯಾಭಾವದಿಂದ ಮಾಡಿದ ಆ ಕರ್ಮದಿಂದಾಗಿ ಆಯುಷ್ಯವು ಮುಗಿದನಂತರ ಇಂದ್ರಲೋಕವನ್ನೇ ಪಡೆಯಿತು. ಮನುಷ್ಯೇಂದ್ರನೇ! ಯುಧಿಷ್ಠಿರ! ಹೀಗೆಯೇ ಭಕ್ತಿಯುಳ್ಳವನನ್ನು ಆಶ್ರಯಿಸಿದ ಪುರುಷನು ಸ್ನೇಹಯುಕ್ತವಾದ ಗಿಳಿಯನ್ನು ಆಶ್ರಯಿಸಿದ ವೃಕ್ಷದಂತೆ–ಸರ್ವಾರ್ಥಸಿದ್ಧಿಯನ್ನು ಹೊಂದುತ್ತಾನೆ."

೫ನೆಯ ಅಧ್ಯಾಯವು ಮುಗಿಯಿತು.

೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ದೈವಕ್ಕಿಂತಲೂ ಪುರುಷಪ್ರಯತ್ನದ ಶ್ರೇಷ್ಠತೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ದೈವೇ ಪುರುಷಕಾರೇ ಚ ಕಿಂಸ್ವಿಚ್ಛ್ರೇಷ್ಠತರಂ ಭವೇತ್ ॥೧॥

“ಮಹಾಪ್ರಾಜ್ಞನೇ! ಸರ್ವಶಾಸ್ತ್ರವಿಶಾರದನೇ! ಪಿತಾಮಹನೇ! ಪುರುಷಪ್ರಯತ್ನ ಮತ್ತು ದೈವಾನುಕೂಲ್ಯ –ಈ ಎರಡರಲ್ಲಿ ಯಾವುದು ಶ್ರೇಷ್ಠತರವಾದುದು?”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ವಸಿಷ್ಠರಿಗೂ ಮತ್ತು ಬ್ರಹ್ಮನಿಗೂ ನಡೆದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಹೇಳುವೆನು ; ಕೇಳು.

ಹಿಂದೆ ಪೂಜ್ಯರಾದ ವಸಿಷ್ಠರು ಬ್ರಹ್ಮನನ್ನು ಪ್ರಶ್ನಿಸಿದರು :

“ಪೂಜ್ಯನೇ! ದೈವಾನುಕೂಲ್ಯವು ಶ್ರೇಷ್ಠವೇ ಅಥವಾ ಮನುಷ್ಯ ಪ್ರಯತ್ನವು ಶ್ರೇಷ್ಠವೇ?–ಈ ಎರಡರಲ್ಲಿ ಯಾವುದು ಶ್ರೇಷ್ಠತರವಾದುದು?”

ಅದಕ್ಕೆ ಪದ್ಮೋದ್ಭವನಾದ, ದೇವದೇವನಾದ, ಪಿತಾಮಹಬ್ರಹ್ಮನು ಮಧುರವಾದ, ಅರ್ಥವತ್ತಾದ ಮತ್ತು ಕಾರಣಯುಕ್ತವಾದ ಈ ಮಾತನ್ನು ಹೇಳಿದನು :

ನಾಬೀಜಂ ಜಾಯತೇ ಕಿಂಚಿನ್ನ ಬೀಜೇನ ವಿನಾ ಫಲಮ್ ।
ಬೀಜಾದ್ಬೀಜಂ ಪ್ರಭವತಿ ಬೀಜಾದೇವ ಫಲಂ ಸ್ಮೃತಮ್ ॥೫॥

“ವತ್ಸ, ವಸಿಷ್ಠ! ಬೀಜವಿಲ್ಲದೇ ಯಾವುದೂ ಹುಟ್ಟುವುದಿಲ್ಲ. ಬೀಜವಿಲ್ಲದೇ ಫಲವಾಗುವುದಿಲ್ಲ. ಒಂದು ಬೀಜದಿಂದ ಮತ್ತೊಂದು ಬೀಜದ ಉತ್ಪತ್ತಿಯಾಗುತ್ತದೆ. ಆದುದರಿಂದ ಬೀಜದಿಂದಲೇ ಫಲವಾಗುವುದೆಂದು ಹೇಳಲ್ಪಟ್ಟಿದೆ.

ಯಾದೃಶಂ ವಪತೇ ಬೀಜಂ ಕ್ಷೇತ್ರಮಾಸಾದ್ಯ ಕರ್ಷಕಃ ।
ಸುಕೃತೇ ದುಷ್ಕೃತೇ ವಾಪಿ ತಾದೃಶಂ ಲಭತೇ ಫಲಮ್ ॥೬॥

ರೈತನು ಗದ್ದೆಗೆ ಹೋಗಿ ಯಾವ ವಿಧವಾದ ಬೀಜವನ್ನು ಬಿತ್ತುವನೋ–ಅಂತಹ ಬೀಜಕ್ಕೆ ಅನುಸಾರವಾಗಿಯೇ ಅವನು ಫಸಲನ್ನು ಪಡೆದುಕೊಳ್ಳುತ್ತಾನೆ. ಹೀಗೆಯೇ ಮನುಷ್ಯನು ಸತ್ಕಾರ್ಯವನ್ನು ಮಾಡಿದರೆ ಪುಣ್ಯವನ್ನೂ–ದುಷ್ಕಾರ್ಯವನ್ನು ಮಾಡಿದರೆ ಪಾಪವನ್ನೂ ಪಡೆದುಕೊಳ್ಳುತ್ತಾನೆ.

ಯಥಾ ಬೀಜಂ ವಿನಾ ಕ್ಷೇತ್ರಮುಪ್ತಂ ಭವತಿ ನಿಷ್ಫಲಮ್ ।
ತಥಾ ಪುರುಷಕಾರೇಣ ವಿನಾ ದೇವಂ ನ ಸಿಧ್ಯತಿ ॥೭॥

ಯಾವ ರೀತಿಯಲ್ಲಿ ಬೀಜವು ಹುಲುಸಾದ ಗದ್ದೆಯಿಲ್ಲದಿದ್ದರೆ ಬಿತ್ತಿಯೂ ನಿಷ್ಫಲವಾಗುವುದೋ–ಹಾಗೆಯೇ ದೈವಾನುಕೂಲವು ಪುರುಷ ಪ್ರಯತ್ನವಿಲ್ಲದಿದ್ದರೆ ಸಿದ್ಧಿಸುವುದಿಲ್ಲ.

ಕ್ಷೇತ್ರಂ ಪುರುಷಕಾರಸ್ತು ದೈವಂ ಬೀಜಮುದಾಹೃತಮ್ ।
ಕ್ಷೇತ್ರಬೀಜಸಮಾಯೋಗಾತ್ತತಃ ಸಸ್ಯಂ ಸಮೃದ್ಧ್ಯತೇ ॥೮॥

ಗದ್ದೆಯನ್ನು ಉತ್ತು ಹಸನುಮಾಡುವುದು ಪುರುಷಪ್ರಯತ್ನವೆಂದೂ, ಬೀಜವು ದೈವವೆಂದೂ ಹೇಳಲ್ಪಟ್ಟಿದೆ. ಕ್ಷೇತ್ರ ಮತ್ತು ಬೀಜಗಳ ಸಮಾವೇಶವಾದರೆ ಮಾತ್ರವೇ ಸಸ್ಯಸಮೃದ್ಧಿಯಾಗುತ್ತದೆ. (ಪುರುಷ ಪ್ರಯತ್ನವು ಉತ್ತು ಸಿದ್ಧಪಡಿಸಿರುವ ಕ್ಷೇತ್ರ. ದೈವಾನುಕೂಲ್ಯವೇ ಬೀಜ. ಹೇಗೆ ಬೀಜ-ಕ್ಷೇತ್ರಗಳ ಸಮಾಯೋಗದಿಂದ ಉತ್ತಮವಾದ ಸಸ್ಯಸಮೃದ್ಧಿ ಯಾಗುವುದೋ–ಹಾಗೆಯೇ ಪುರುಷಕಾರ ಮತ್ತು ದೈವಯೋಗಗಳಿಂದ ಉತ್ತಮವಾದ ಫಲಪ್ರಾಪ್ತಿಯಾಗುತ್ತದೆ.)

ಕರ್ಮಣಃ ಫಲನಿರ್ವೃತ್ತಿಂ ಸ್ವಯಮಶ್ನಾತಿ ಕಾರಕಃ ।
ಪ್ರತ್ಯಕ್ಷಂ ದೃಶ್ಯತೇ ಲೋಕೇ ಕೃತಸ್ಯಾಪಕೃತಸ್ಯ ಚ ॥೯॥

ಕರ್ಮಗಳನ್ನು ಮಾಡುವ ಮನುಷ್ಯನು ತಾನು ಮಾಡಿದ ಒಳ್ಳೆಯ ಅಥವಾ ಕೆಟ್ಟ ಕೆಲಸಗಳಿಗೆ ಅನುಗುಣವಾದ ಫಲವನ್ನು ತಾನೇ ಅನುಭವಿಸುತ್ತಾನೆ. ಈ ವಿಷಯವು ನಮಗೆ ಲೋಕದಲ್ಲಿ ಪ್ರತ್ಯಕ್ಷವಾಗಿಯೇ ಕಂಡುಬರುತ್ತಿದೆ.

ಶುಭೇನ ಕರ್ಮಣಾ ಸೌಖ್ಯಂ ದುಃಖಂ ಪಾಪೇನ ಕರ್ಮಣಾ ।
ಕೃತಂ ಫಲತಿ ಸರ್ವತ್ರ ನಾಕೃತಂ ಭುಜ್ಯತೇ ಕ್ವಚಿತ್ ॥೧೦॥

ಒಳ್ಳೆಯ ಕರ್ಮಗಳನ್ನು ಮಾಡುವುದರಿಂದ ಮನುಷ್ಯನು ಸೌಖ್ಯವನ್ನು ಅನುಭವಿಸುತ್ತಾನೆ. ಪಾಪಕರ್ಮಗಳನ್ನು ಮಾಡುವುದರಿಂದ ದುಃಖವನ್ನು ಅನುಭವಿಸುತ್ತಾನೆ. ತಾನು ಮಾಡಿದ ಕಾರ್ಯಕ್ಕೆ ಸರ್ವತ್ರ ಫಲವು

ಲಭಿಸಿಯೇ ತೀರುತ್ತದೆ. ಯಾವನೇ ಆಗಲೀ–ಕರ್ಮವನ್ನು ಮಾಡದೆಯೇ ಇದ್ದರೆ ಯಾವ ವಿಧವಾದ ಫಲವನ್ನೂ ಪಡೆಯುವುದಿಲ್ಲ.

ಕೃತೀ ಸರ್ವತ್ರ ಲಭತೇ ಪ್ರತಿಷ್ಠಾಂ ಭಾಗ್ಯಸಂಯುತಾಮ್ ।
ಅಕೃತೀ ಲಭತೇ ಭ್ರಷ್ಟಃ ಕ್ಷತೇ ಕ್ಷಾರಾವಸೇಚನಮ್ ॥೧೧॥

ಕೆಲಸಮಾಡುವವನು ಯಾವಾಗಲೂ ಭಾಗ್ಯಯುಕ್ತವಾದ ಗೌರವವನ್ನು ಹೊಂದುತ್ತಾನೆ. ಯಾವ ಕೆಲಸವನ್ನೂ ಮಾಡದವನು ಸಮಾಜದಲ್ಲಿ ಭ್ರಷ್ಟನಾಗಿ–ಗಾಯದ ಮೇಲೆ ಉಪ್ಪುನೀರನ್ನು ಸುರಿದಂತೆ–ಮಹಾ ದುಃಖವನ್ನೇ ಅನುಭವಿಸುತ್ತಾನೆ.

ತಪಸಾ ರೂಪಸೌಭಾಗ್ಯಂ ರತ್ನಾನಿ ವಿವಿಧಾನಿ ಚ ।
ಪ್ರಾಪ್ಯತೇ ಕರ್ಮಣಾ ಸರ್ವಂ ನ ದೈವಾದಕೃತಾತ್ಮನಾ ॥೧೨॥

ಮನುಷ್ಯನು ತಪಸ್ಸೆಂಬ ಕರ್ಮವನ್ನು ಮಾಡಿ ರೂಪವನ್ನೂ, ಸೌಭಾಗ್ಯವನ್ನೂ, ವಿಧ-ವಿಧವಾದ ರತ್ನಗಳನ್ನೂ (ಐಶ್ವರ್ಯವನ್ನೂ) ಪಡೆದು ಕೊಳ್ಳುತ್ತಾನೆ. ಹೀಗೆ ಕರ್ಮದಿಂದ ಎಲ್ಲವನ್ನೂ ಪಡೆದುಕೊಳ್ಳಬಹುದು. ಆದರೆ ಯಾವ ಕಾರ್ಯವನ್ನೂ ಮಾಡದೇ ದೈವಾನುಕೂಲ್ಯವನ್ನು ಅಥವಾ ಅದೃಷ್ಟವನ್ನೇ ನಿರೀಕ್ಷಿಸುತ್ತಾ ಕುಳಿತಿರುವವನು ಯಾವ ಫಲವನ್ನೂ ಪಡೆದುಕೊಳ್ಳಲಾರನು.

ತಥಾ ಸ್ವರ್ಗಶ್ಚ ಭೋಗಶ್ಚ ನಿಷ್ಠಾ ಯಾ ಚ ಮನೀಷಿತಾ ।
ಸರ್ವಂ ಪುರುಷಕಾರೇಣ ಕೃತೇನೇಹೋಪಲಭ್ಯತೇ ॥೧೩॥

ಈ ಪ್ರಪಂಚದಲ್ಲಿ ಪುರುಷಪ್ರಯತ್ನದಿಂದಲೇ, ಸ್ವರ್ಗ, ಭೋಗ, ಧರ್ಮನಿಷ್ಠೆ, ಬುದ್ಧಿಮತ್ತೆ.–ಇವೆಲ್ಲವೂ ಲಭಿಸುತ್ತವೆ.

ಜ್ಯೋತೀಂಷಿ ತ್ರಿದಶಾ ನಾಗಾ ಯಕ್ಷಾಶ್ಚನ್ದ್ರಾರ್ಕಮಾರುತಾಃ ।
ಸರ್ವೇ ಪುರುಷಕಾರೇಣ ಮಾನುಷ್ಯಾದ್ದೇವತಾಂ ಗತಾಃ ॥೧೪॥

ನಕ್ಷತ್ರಗಳು, ದೇವತೆಗಳು, ನಾಗರು, ಯಕ್ಷರು, ಚಂದ್ರ-ಸೂರ್ಯ-ವಾಯುಗಳು–ಇವರೆಲ್ಲರೂ ಪುರುಷಪ್ರಯತ್ನದಿಂದಲೇ ಮನುಷ್ಯತ್ವದಿಂದ ದೇವತ್ವವನ್ನು ಹೊಂದಿದ್ದಾರೆ.

ಅರ್ಥೋ ವಾ ಮಿತ್ರವರ್ಗೋ ವಾ ಐಶ್ವರ್ಯಂ ವಾ ಕುಲಾನ್ವಿತಮ್ ।
ಶ್ರೀಶ್ಚಾಪಿ ದುರ್ಲಭಾ ಭೋಕ್ತುಂ ತಥೈವಾಕೃತಕರ್ಮಭಿಃ ॥೧೫॥

ಯಾವ ಕಾರ್ಯವನ್ನೂ ಮಾಡದೇ ಇರುವ ಮನುಷ್ಯನು ಧನವನ್ನಾಗಲೀ, ಮಿತ್ರವರ್ಗವನ್ನಾಗಲೀ, ವಂಶಾನುಗತವಾದ ಐಶ್ವರ್ಯವನ್ನಾಗಲೀ, ದುರ್ಲಭವಾದ ಸಂಪತ್ತನ್ನಾಗಲೀ–ಉಪಭೋಗಿಸಲಾರನು.

ಶೌಚೇನ ಲಭತೇ ವಿಪ್ರಃ ಕ್ಷತ್ರಿಯೋ ವಿಕ್ರಮೇಣ ತು ।
ವೈಶ್ಯಃ ಪುರುಷಕಾರೇಣ ಶೂದ್ರಃ ಶುಶ್ರೂಷಯಾ ಶ್ರಿಯಮ್ ॥೧೬॥

ಶೌಚ-ಸದಾಚಾರಗಳಿಂದ ಬ್ರಾಹ್ಮಣನೂ, ಪರಾಕ್ರಮದಿಂದ ಕ್ಷತ್ರಿಯನೂ, ನಿತ್ಯೋದ್ಯೋಗದಿಂದ ವೈಶ್ಯನೂ, ಶುಶ್ರೂಷೆಯಿಂದ ಶೂದ್ರನೂ ಸಂಪತ್ತನ್ನು ಪಡೆಯುತ್ತಾರೆ.

ನಾದಾತಾರಂ ಭಜನ್ತ್ಯರ್ಥಾ ನ ಕ್ಲೀಬಂ ನಾಪಿ ನಿಷ್ಕ್ರಿಯಮ್ ।
ನಾಕರ್ಮಶೀಲಂ ನಾಶೂರಂ ತಥಾ ನೈವಾತಪಸ್ವಿನಮ್ ॥೧೭॥

ದಾನಕೊಡದೇ ಇರುವ ಕೃಪಣನನ್ನು ಐಶ್ವರ್ಯಗಳು ಸೇವಿಸುವುದಿಲ್ಲ. (ಅಂತಹವನ ಬಳಿಯಲ್ಲಿ ಐಶ್ವರ್ಯವು ಸೇರುವುದಿಲ್ಲ.) ನಪುಂಸಕನನ್ನೂ, ನಿಷ್ಕ್ರಿಯನನ್ನೂ, ಕೆಲಸಮಾಡದೆಯೇ ಇರುವ ಸ್ವಭಾವವಿರುವವನನ್ನೂ, ಶೂರನಲ್ಲದವನನ್ನೂ, ತಪಸ್ವಿಯಲ್ಲದವನನ್ನೂ ಐಶ್ವರ್ಯವು ಸೇರುವುದಿಲ್ಲ.

ಯೇನ ಲೋಕಾಸ್ತ್ರಯಃ ಸೃಷ್ಟಾ ದೈತ್ಯಾಃ ಸರ್ವಾಶ್ಚ ದೇವತಾಃ ।
ಸ ಏಷ ಭಗವಾನ್ವಿಷ್ಣುಃ ಸಮುದ್ರೇ ತಪ್ಯತೇ ತಪಃ ॥೧೮॥

ಮೂರು ಲೋಕಗಳನ್ನೂ, ದೈತ್ಯರನ್ನೂ, ಎಲ್ಲ ದೇವತೆಗಳನ್ನೂ ಸೃಷ್ಟಿಸಿರುವ ಪೂಜ್ಯನಾದ ಆ ಮಹಾವಿಷ್ಣುವೇ ಸಮುದ್ರದಲ್ಲಿ ತಪಸ್ಸು ಮಾಡುತ್ತಿದ್ದಾನೆ.

ಸ್ವಂ ಚೇತ್ಕರ್ಮಫಲಂ ನ ಸ್ಯಾತ್ಸರ್ವಮೇವಾಫಲಂ ಭವೇತ್ ।
ಲೋಕೋ ದೈವಂ ಸಮಾಲಕ್ಷ್ಯ ಉದಾಸೀನೋ ಭವೇನ್ನನು ॥೧೯॥

ಒಂದು ವೇಳೆ ತಾನು ಮಾಡಿದ ಕರ್ಮಕ್ಕೆ ಫಲವೇ ಲಭಿಸದೇ ತಾನು ಮಾಡಿದ ಕಾರ್ಯಗಳೆಲ್ಲವೂ ನಿಷ್ಫಲವೇ ಆಗುತ್ತಿದ್ದ ಪಕ್ಷದಲ್ಲಿ–ಜನರೆಲ್ಲರೂ

ಅದೃಷ್ಟವನ್ನೇ ನಿರೀಕ್ಷಿಸುತ್ತಾ ಕರ್ಮಮಾಡುವುದರಲ್ಲಿ ಉದಾಸೀನರಾಗಿಯೇ ಇದ್ದುಬಿಡುತ್ತಿದ್ದರಲ್ಲವೇ?

ಅಕೃತ್ವಾ ಮಾನುಷಂ ಕರ್ಮ ಯೋ ದೈವಮನುವರ್ತತೇ ।
ವೃಥಾ ಶ್ರಾಮ್ಯತಿ ಸಮ್ಪ್ರಾಪ್ಯ ಪತಿಂ ಕ್ಲೀಬಮಿವಾಙ್ಗನಾ ॥೨೦॥

ಯಾವಾತನು ತಾನು ಮಾಡಬೇಕಾದ ಕರ್ಮವನ್ನು ಮಾಡದೇ ಕೇವಲ ಅದೃಷ್ಟವನ್ನೇ ನಿರೀಕ್ಷಿಸುವನೋ –ಅವನು ನಪುಂಸಕನಾದ ಪತಿಯನ್ನು ಪಡೆದ ಸ್ತ್ರೀಯಂತೆ –ಯಾವ ಪ್ರಯೋಜನವನ್ನೂ ಹೊಂದುವುದಿಲ್ಲ. ವ್ಯರ್ಥವಾಗಿ ಆಯಾಸಪಡುತ್ತಾನೆ.

ನ ತಥಾ ಮಾನುಷೇ ಲೋಕೇ ಭಯಮಸ್ತಿ ಶುಭಾಶುಭೇ ।
ತಥಾ ತ್ರಿದಶಲೋಕೇ ಹಿ ಭಯಮಲ್ಪೇನ ಜಾಯತೇ ॥೨೧॥

ದೇವಲೋಕದಲ್ಲಿ ಅಲ್ಪವಾದ ಪಾಪಕ್ರಿಯೆಯಿಂದಲೇ ಹೇಗೆ ಹೆಚ್ಚಿನ ಭಯವುಂಟಾಗುವುದೋ –ಹಾಗೆಯೇ ಮನುಷ್ಯಲೋಕದಲ್ಲಿ ಶುಭಾಶುಭ ಕರ್ಮಗಳನ್ನು ಮಾಡುವುದರಿಂದ ಅಷ್ಟು ಭಯವುಂಟಾಗುವುದಿಲ್ಲ.

ಕೃತಃ ಪುರುಷಕಾರಸ್ತು ದೈವಮೇವಾನುವರ್ತತೇ ।
ನ ದೈವಮಕೃತೇ ಕಿಂಚಿತ್ಕಸ್ಯಚಿದ್ದಾತುಮರ್ಹತಿ ॥೨೨॥

ಮನುಷ್ಯನು ಮಾಡಿದ ಪುರುಷಪ್ರಯತ್ನವು ದೈವಾನುಕೂಲವನ್ನೇ ಅನುಸರಿಸಿ ಫಲವನ್ನು ಕೊಡುತ್ತದೆ. ಆದರೆ ಪ್ರಯತ್ನವನ್ನೇ ಮಾಡದಿದ್ದರೆ ದೈವವು ಯಾರಿಗೂ ಯಾವುದನ್ನೂ ಕೊಡಲು ಸಮರ್ಥವಾಗುವುದಿಲ್ಲ.

ಯಥಾ ಸ್ಥಾನಾನ್ಯನಿತ್ಯಾನಿ ದೃಶ್ಯನ್ತೇ ದೈವತೇಷ್ವಪಿ ।
ಕಥಂ ಕರ್ಮ ವಿನಾ ದೈವಂ ಸ್ಥಾಸ್ಯತಿ ಸ್ಥಾಪಯಿಷ್ಯತಿ ॥೨೩॥

ದೇವತೆಗಳಲ್ಲಿಯೂ ಅವರಿರುವ ಇಂದ್ರಾದಿ ಪದವಿಗಳು ಅನಿತ್ಯಗಳೇ ಆಗಿರುವಂತೆ ಕಾಣುತ್ತವೆ. ಅವರು ತಮ್ಮ ತಮ್ಮ ಪದವಿಗಳನ್ನು ಪಡೆಯಲು ಮತ್ತು ಉಳಿಸಿಕೊಳ್ಳಲು ಕರ್ಮಗಳನ್ನು ಮಾಡಲೇಬೇಕಾಗುತ್ತದೆ. ಹೀಗಿರುವಾಗ ಕಾರ್ಯವನ್ನೇ ಮಾಡದೆ ದೈವವು ಹೇಗೆ ತಾನೇ ತನ್ನ ಪದವಿಯಲ್ಲಿಯೇ ಸ್ಥಿರವಾಗಿ ಇರಬಲ್ಲುದು? ಇತರರನ್ನೂ ಇರುವಂತೆ ಮಾಡಬಲ್ಲುದು?

(ದೇವತೆಗಳೇ ತಮ್ಮ ಸ್ಥಾನವನ್ನು ಪಡೆದುಕೊಳ್ಳಲು ಕರ್ಮಮಾಡಬೇಕಾಗಿರುವಾಗ ಬೇರೆಯವರು ಕೆಲಸಮಾಡದೆಯೇ ಇದ್ದರೆ ಅಂತಹವರಿಗೆ ದೈವವು ಹೇಗೆ ಅನುಕೂಲಿಸುತ್ತದೆ?)

ನ ದೈವತಾನಿ ಲೋಕೇಽಸ್ಮಿನ್ವ್ಯಾಪಾರಂ ಯಾನ್ತಿ ಕಸ್ಯಚಿತ್ ।
ವ್ಯಾಸಙ್ಗಂ ಜನಯನ್ತ್ಯುಗ್ರಮಾತ್ಮಾಭಿಭವಶಙ್ಕಯಾ ॥೨೪॥

ದೇವತೆಗಳೂ ಈ ಲೋಕದಲ್ಲಿ ಯಾವನೊಬ್ಬನು ಮಾಡುವ ಕರ್ಮವನ್ನೂ ಪ್ರೋತ್ಸಾಹಿಸುವುದಿಲ್ಲ. ತಮಗೆ ಪರಾಭವವಾದೀತೆಂಬ ಸಂದೇಹದಿಂದ ಅವರು ಮನುಷ್ಯರು ಮಾಡುವ ತಪಸ್ಸೇ ಮೊದಲಾದ ಕರ್ಮಗಳಿಗೆ ವಿಘ್ನವನ್ನು ಉಂಟುಮಾಡುತ್ತಾರೆ. (ಹೀಗಿರುವಾಗ ಕರ್ಮವನ್ನೇ ಮಾಡದವರಿಗೆ ದೇವತೆಗಳ ಸಹಾಯವು ಹೇಗೆ ತಾನೇ ಲಭ್ಯವಾಗುತ್ತದೆ?)

ಋಷೀಣಾಂ ದೇವತಾನಾಂ ಚ ಸದಾ ಭವತಿ ವಿಗ್ರಹಃ ।
ಕಸ್ಯ ವಾಚಾ ಹ್ಯದೈವಂ ಸ್ಯಾದ್ಯತೋ ದೈವಂ ಪ್ರವರ್ತತೇ ॥೨೫॥

ಕಥಂ ತಸ್ಯ ಸಮುತ್ಪತ್ತಿರ್ಯತೋ ದೈವಂ ಪ್ರವರ್ತತೇ ।
ಏವಂ ತ್ರಿದಶಲೋಕೇಽಪಿ ಪ್ರಾಪ್ಯನ್ತೇ ಬಹವೋ ಗುಣಾಃ ॥೨೬॥

ಋಷಿಗಳಿಗೂ-ದೇವತೆಗಳಿಗೂ ಸದಾ ಕಲಹವಿದ್ದೇ ಇರುತ್ತದೆ. (ದೇವತೆಗಳು ಋಷಿಗಳು ಮಾಡುವ ತಪಸ್ಸಿಗೆ ವಿಘ್ನವನ್ನುಂಟುಮಾಡುತ್ತಾರೆ. ಋಷಿಗಳು ತಮ್ಮ ತಪಸ್ಸಿನ ಪ್ರಭಾವದಿಂದ ದೇವತೆಗಳನ್ನೇ ಸ್ಥಾನಭ್ರಷ್ಟರನ್ನಾಗಿ ಮಾಡುತ್ತಾರೆ.) 'ಯಾವನ ಮಾತಿನಿಂದ ದೈವವು ಅದೈವವಾಗುತ್ತದೆ? (ಅದೃಷ್ಟವು ನಿಷ್ಫಲವಾಗುತ್ತದೆ?) ಎಲ್ಲಿಂದ (ಯಾವ ಸಮಯದಲ್ಲಿ) ದೈವವು (ಅದೃಷ್ಟವು) ಕಾರ್ಯದಲ್ಲಿ ತೊಡಗುತ್ತದೆ? ಉತ್ಪತ್ತಿಯು ಹೇಗೆ? ಮತ್ತು ಯಾವ ರೀತಿಯಲ್ಲಿ ಅದೃಷ್ಟವು ಅಥವಾ ದೈವವು ಕಾರ್ಯದಲ್ಲಿ ತೊಡಗುತ್ತದೆ?' ಹೀಗೆ ದೇವತೆಗಳಲ್ಲಿ ಕೂಡ ಅನೇಕವಿಧವಾದ ಗುಣಜಿಜ್ಞಾಸೆಗಳು ನಡೆಯುತ್ತಲೇ ಇರುತ್ತವೆ.

ಆತ್ಮೈವ ಹ್ಯಾತ್ಮನೋ ಬನ್ಧುರಾತ್ಮೈವ ರಿಪುರಾತ್ಮನಃ ।
ಆತ್ಮೈವ ಹ್ಯಾತ್ಮನಃ ಸಾಕ್ಷೀ ಕೃತಸ್ಯಾಪ್ಯಕೃತಸ್ಯ ಚ ॥೨೭॥

ಮಾನವನು ತನಗೆ ತಾನೇ ಬಂಧುವು. ತನಗೆ ತಾನೇ ಶತ್ರುವು.

ತಾನು ಮಾಡಿರುವ ಮತ್ತು ಮಾಡದಿರುವ ಸತ್ಕರ್ಮ-ದುಷ್ಕರ್ಮಗಳಿಗೆ ತಾನೇ ಸಾಕ್ಷಿಯೂ ಆಗಿರುತ್ತಾನೆ.

ಕೃತಂ ಚಾಪ್ಯಕೃತಂ ಕಿಂಚಿತ್ಕೃತೇ ಕರ್ಮಣಿ ಸಿಧ್ಯತಿ ।
ಸುಕೃತಂ ದುಷ್ಕೃತಂ ಕರ್ಮ ನ ಯಥಾರ್ಥಂ ಪ್ರಪದ್ಯತೇ ॥೨೮॥

ಮಾಡಿದ ಕೆಲಸವು ಸ್ವಲ್ಪ ನ್ಯೂನತೆಯಿಂದ ಕೂಡಿದ್ದರೂ ಕಾರ್ಯವನ್ನು ಮುಂದುವರಿಸುತ್ತಲೇ ಹೋದರೆ ಸಿದ್ಧಿಯಾಗಿಯೇ ತೀರುತ್ತದೆ. ಸತ್ಕರ್ಮವನ್ನೇ ವಿಶೇಷವಾಗಿ ಮಾಡಿದರೆ ಮಾಡಿದ ದುಷ್ಕರ್ಮವು ಅದಕ್ಕೆ ತಕ್ಕುದಾದ ಫಲವನ್ನು ಕೊಡುವುದಿಲ್ಲ.

(ಸತ್ಕರ್ಮವು ಹೆಚ್ಚಾಗಿ ದುಷ್ಕರ್ಮವು ಕಡಿಮೆಯಾಗಿದ್ದರೆ ದುಷ್ಕರ್ಮದ ಪ್ರಮಾಣದಷ್ಟು ಸತ್ಕರ್ಮದ ಫಲವು ಕಳೆದು ಕಡೆಯಲ್ಲಿ ಸತ್ಕರ್ಮಫಲವೇ ಸಿಕ್ಕುತ್ತದೆ. ಹಾಗೆಯೇ ಹೆಚ್ಚು ದುಷ್ಕರ್ಮವನ್ನು ಮಾಡಿ ಸ್ವಲ್ಪವೇ ಸತ್ಕರ್ಮವನ್ನು ಮಾಡಿದ್ದರೆ ಸತ್ಕರ್ಮದ ಪ್ರಮಾಣದಷ್ಟು ದುಷ್ಫಲವು ಕಳೆದು ಪರಿಣಾಮದಲ್ಲಿ ದುಷ್ಕರ್ಮದ ಫಲವನ್ನು ಅನುಭವಿಸಬೇಕಾಗುತ್ತದೆ. ಆದುದರಿಂದ ಸತ್ಕರ್ಮವೇ ಆಗಲೀ, ದುಷ್ಕರ್ಮವೇ ಆಗಲೀ–ಅವುಗಳ ಪರಿಮಾಣಕ್ಕೆ ತಕ್ಕಂತೆ ಪ್ರತ್ಯೇಕ-ಪ್ರತ್ಯೇಕವಾಗಿ ಫಲಗಳನ್ನು ಕೊಡುವುದಿಲ್ಲ.)

ದೇವಾನಾಂ ಶರಣಂ ಪುಣ್ಯಂ ಸರ್ವಂ ಪುಣ್ಯೈರವಾಪ್ಯತೇ ।
ಪುಣ್ಯಶೀಲಂ ನರಂ ಪ್ರಾಪ್ಯ ಕಿಂ ದೈವಂ ಪ್ರತರಿಷ್ಯತಿ ॥೨೯॥

ದೇವತೆಗಳಿಗೂ ಪರಮಾಶ್ರಯವು ಪುಣ್ಯವೇ ಆಗಿದೆ. (ಪುಣ್ಯಕಾರ್ಯ ಗಳಿಂದಲೇ ಅವರಿಗೆ ದೇವತ್ವವು ಲಭಿಸಿದೆ.) ಎಲ್ಲ ವಸ್ತುಗಳೂ ಪುಣ್ಯ ದಿಂದಲೇ ಲಭ್ಯವಾಗುತ್ತವೆ. ಅಂತಹ ಪುಣ್ಯವಂತರಾದ ಮನುಷ್ಯರನ್ನು ಅದೃಷ್ಟವೆಂಬುದು ಏನುಮಾಡಬಲ್ಲುದು?

ಪುರಾ ಯಯಾತಿರ್ವಿಭ್ರಷ್ಟಶ್ಚ್ಯಾವಿತಃ ಪತಿತಃ ಕ್ಷಿತೌ ।
ಪುನರಾರೋಪಿತಃ ಸ್ವರ್ಗಂ ದೌಹಿತ್ರೈಃ ಪುಣ್ಯಕರ್ಮಭಿಃ ॥೩೦॥

ಹಿಂದೆ ಯಯಾತಿಯು ಕ್ಷೀಣಪುಣ್ಯನಾಗಿ ಸ್ವರ್ಗದಿಂದ ಕೆಳಕ್ಕೆ ತಳ್ಳಲ್ಪಟ್ಟು ಭೂಮಿಯಲ್ಲಿ ಬಿದ್ದನು. (ಅದು ಅವನ ಅದೃಷ್ಟಕ್ಕೆ ಸೇರಿದುದು.) ಆದರೆ ಪುನಃ ಅವನು ಪುಣ್ಯಕರ್ಮಿಗಳಾದ ತನ್ನ ಮೊಮ್ಮಕ್ಕಳಿಂದ ಸ್ವರ್ಗಕ್ಕೆ

ಹತ್ತಿಸಲ್ಪಟ್ಟನು. (ಇದು ಪುಣ್ಯದ ಪ್ರಭಾವ. ಪುಣ್ಯದ ಪ್ರಭಾವದ ಮುಂದೆ ಅದೃಷ್ಟವು ಅಥವಾ ದೈವವು ಏನೂ ಮಾಡಲಾರದು.)

ಪುರೂರವಾಶ್ಚ ರಾಜರ್ಷಿರ್ದ್ವಿಜೈರಭಿಹಿತಃ ಪುರಾ ।
ಐಲ ಇತ್ಯಭಿವಿಖ್ಯಾತಃ ಸ್ವರ್ಗಂ ಪ್ರಾಪ್ತೋ ಮಹೀಪತಿಃ ॥೩೧॥

ಹೀಗೆಯೇ ಹಿಂದೆ ಐಲ ಎಂಬ ಹೆಸರಿನಿಂದ ವಿಖ್ಯಾತನಾಗಿದ್ದ ರಾಜರ್ಷಿಯಾದ ಪುರೂರವನು ಬ್ರಾಹ್ಮಣರ ಮಾತಿನಂತೆ ಪುಣ್ಯಕರ್ಮಗಳನ್ನು ಆಚರಿಸಿ ಸ್ವರ್ಗವನ್ನು ಸೇರಿದನು.

ಅಶ್ವಮೇಧಾದಿಭಿರ್ಯಜ್ಞೈಃ ಸತ್ಕೃತಃ ಕೋಸಲಾಧಿಪಃ ।
ಮಹರ್ಷಿಶಾಪಾತ್ಸೌದಾಸಃ ಪುರುಷಾದತ್ವಮಾಗತಃ ॥೩೨॥

ಕೋಸಲಾಧಿಪತಿಯಾದ ಸೌದಾಸನು ಅಶ್ವಮೇಧವೇ ಮೊದಲಾದ ಯಜ್ಞಗಳನ್ನು ಮಾಡಿ ಸಮ್ಮಾನಿತನಾಗಿದ್ದರೂ–ವಸಿಷ್ಠಮಹರ್ಷಿಯ ಶಾಪ ದಿಂದ ನರಭಕ್ಷಕನಾದ ರಾಕ್ಷಸನಾದನು. (ಹಿಂದಿನ ಶ್ಲೋಕಗಳು ಪುಣ್ಯವು ಪಾಪವನ್ನು ತೊಡೆದು ಹಾಕುತ್ತವೆಯೆಂಬುದಕ್ಕೆ ದೃಷ್ಟಾಂತವಾದರೆ–ಈ ಶ್ಲೋಕವು ಪಾಪವು ಪುಣ್ಯವನ್ನು ತೊಡೆದುಹಾಕುವುದೆಂಬುದಕ್ಕೆ ದೃಷ್ಟಾಂತವಾಗಿದೆ. ವಸಿಷ್ಠರಿಗೆ ಮಾಡಿದ ಅಪಚಾರದಿಂದಾಗಿ ಸೌದಾಸನು ಮಾಡಿದ್ದ ಪುಣ್ಯವೆಲ್ಲವೂ ನಶಿಸಿಹೋಯಿತು.)

ಅಶ್ವತ್ಥಾಮಾ ಚ ರಾಮಶ್ಚ ಮುನಿಪುತ್ರೌ ಧನುರ್ಧರೌ ।
ನ ಗಚ್ಛತಃ ಸ್ವರ್ಗಲೋಕಂ ಸುಕೃತೇನೇಹ ಕರ್ಮಣಾ ॥೩೩॥

ಅಶ್ವತ್ಥಾಮನೂ ಮತ್ತು ಪರಶುರಾಮನೂ ಮುನಿಪುತ್ರರೂ ಧನು ರ್ಧಾರಿಗಳೂ ಆಗಿದ್ದರು. (ಕ್ಷಾತಧರ್ಮವನ್ನು ಆಶ್ರಯಿಸಿದ್ದರು.) ಅವರು ಇಲ್ಲಿ ಮಾಡಿದ ಪುಣ್ಯಕರ್ಮಗಳಿಂದಾಗಿ ಈ ಲೋಕದಲ್ಲಿಯೇ ಚಿರಂಜೀವಿಗಳಾಗಿ ಉಳಿದರು. ಅವರು ಸ್ವರ್ಗಲೋಕಕ್ಕೆ ಹೋಗುವುದೇ ಇಲ್ಲ.

(ಅಶ್ವತ್ಥಾಮ-ಪರಶುರಾಮರು ಮಾಡಿದ್ದ ಪುಣ್ಯಕರ್ಮವನ್ನು ಅವರ ಕ್ಷಾತ್ರವು ಹೋಗಲಾಡಿಸಿಬಿಟ್ಟಿತು. ಆದುದರಿಂದ ಮತ್ತೆ ತಪಸ್ಸುಮಾಡಿ ಅವರು ಸದ್ಗತಿಯನ್ನು ಸಂಪಾದಿಸಬೇಕು. ಪರಶುರಾಮನು ಶ್ರೀರಾಮನನ್ನು ಕೆಣಕಿದಾಗ ಶ್ರೀರಾಮನು ವೈಷ್ಣವಾಸ್ತ್ರವನ್ನು ಅನುಸಂಧಾನಮಾಡಿ

ಪರಶುರಾಮನ ಪುಣ್ಯವನ್ನೇ ಆಹುತಿಯನ್ನಾಗಿ ತೆಗೆದುಕೊಂಡನು. ಈ ಕಾರಣದಿಂದ ಪರಶುರಾಮನು ಪುನಃ ತಪಸ್ಸುಮಾಡಬೇಕಾಯಿತು. ಅಶ್ವತ್ಥಾಮನು ತನ್ನ ಪಾಪಗಳಿಗಾಗಿ ಶ್ರೀಕೃಷ್ಣನಿಂದಲೇ ಶಪ್ತನಾದನು. ಅವನೂ ಕೂಡ ಪುನಃ ತಪಸ್ಸುಮಾಡಬೇಕಾಯಿತು.)

ವಸುರ್ಯಜ್ಞಶತೈರಿಷ್ಟ್ವಾದ್ವಿತೀಯ ಇವ ವಾಸವಃ ।
ಮಿಥ್ಯಾಭಿಧಾನೇನೈಕೇನ ರಸಾತಲತಲಂ ಗತಃ ॥೩೪॥

ಉಪರಿಚರವಸುವು ನೂರು ಯಜ್ಞಗಳಿಂದ ದೇವತೆಗಳನ್ನು ಪೂಜಿಸಿ ಎರಡನೆಯ ಇಂದ್ರನಂತೆಯೇ ಪ್ರಭಾವಶಾಲಿಯಾಗಿದ್ದರೂ–ತಾನು ಹೇಳಿದ ಒಂದೇ ಒಂದು ಸುಳ್ಳಿನಿಂದಾಗಿ ರಸಾತಳದ ತಳಕ್ಕೆ ಹೊರಟುಹೋದನು. (ಒಂದು ಸುಳ್ಳು ಹೇಳಿದುದರಿಂದ ಪ್ರಾಪ್ತವಾದ ಪಾಪವು ನೂರು ಯಜ್ಞಗಳನ್ನು ಮಾಡಿ ಸಂಪಾದಿಸಿದ ಪುಣ್ಯರಾಶಿಯನ್ನೇ ನುಂಗಿಹಾಕಿತು.)

ಬಲಿರ್ವೈರೋಚನಿರ್ಬದ್ಧೋ ಧರ್ಮಪಾಶೇನ ದೈವತೈಃ ।
ವಿಷ್ಣೋಃ ಪುರುಷಕಾರೇಣ ಪಾತಾಲಸದನಃ ಕೃತಃ ॥೩೫॥

ವಿರೋಚನನ ಮಗನಾದ ಬಲಿಯನ್ನು ದೇವತೆಗಳು ಧರ್ಮಪಾಶದಿಂದ ಬಂಧಿಸಿದರು. ಮಹಾವಿಷ್ಣುವಿನ ಪುರುಷಪ್ರಯತ್ನದಿಂದಾಗಿ ಬಲಿಯು ಪಾತಾಳವಾಸಿಯಾದನು.

ಶಕ್ರಸ್ಯೋದ್ಗಮ್ಯ ಚರಣಂ ಪ್ರಸ್ಥಿತೋ ಜನಮೇಜಯಃ ।
ದ್ವಿಜಸ್ತ್ರೀಣಾಂ ವಧಂ ಕೃತ್ವಾ ಕಿಂ ದೈವೇನ ನಿವಾರಿತಃ ॥೩೬॥

ಜನಮೇಜಯರಾಜನು ದ್ವಿಜಸ್ತ್ರೀಯರನ್ನು ಸಂಹರಿಸಿದರೂ ಇಂದ್ರನ ಚರಣಗಳ ಆಶ್ರಯವನ್ನು ಪಡೆದು ಸ್ವರ್ಗಕ್ಕೆ ಹೊರಟುಹೋದನು. ಆ ಸಮಯದಲ್ಲಿ ದೈವವು ಅವನನ್ನು ತಡೆಯಿತೇನು? (ವಿಶೇಷವಾದ ಪುಣ್ಯಕರ್ಮಗಳ ಬಲದಿಂದ ಅವನು ದೈವವನ್ನು ಗೆದ್ದು ಸ್ವರ್ಗಕ್ಕೆ ಹೋಗಿಯೇ ಹೋದನು.)

ಅಜ್ಞಾನಾದ್ಬ್ರಾಹ್ಮಣಂ ಹತ್ವಾ ಸ್ಪೃಷ್ಟೋ ಬಾಲವಧೇನ ಚ ।
ವೈಶಮ್ಪಾಯನವಿಪ್ರರ್ಷಿಃ ಕಿಂ ದೈವೇನ ನಿವಾರಿತಃ ॥೩೭॥

ಬ್ರಹ್ಮರ್ಷಿಗಳಾದ ವೈಶಂಪಾಯನರು ಅಜ್ಞಾನದಿಂದ ಬ್ರಾಹ್ಮಣನನ್ನು

ಸಂಹರಿಸಿ ಬಾಲಕನನ್ನು ವಧೆಮಾಡಿದ ಪಾಪದಿಂದಲೂ ಲಿಪ್ತರಾಗಿದ್ದರು. ಆದರೂ ಅವರು ಪುರುಷಪ್ರಯತ್ನದಿಂದ ಸ್ವರ್ಗಕ್ಕೆ ಹೋದರು. ಆ ಸಮಯದಲ್ಲಿ ದೈವವು ಅವರನ್ನು ತಡೆಯಿತೇನು? (ಪುಣ್ಯಕರ್ಮಬಲದಿಂದ ಅವರು ದೈವವನ್ನು ಗೆದ್ದು ಪುಣ್ಯಗತಿಯನ್ನು ಪಡೆದೇ ಪಡೆದರು.)

ಗೋಪ್ರದಾನೇನ ಮಿಥ್ಯಾ ಚ ಬ್ರಾಹ್ಮಣೇಭ್ಯೋ ಮಹಾಮಖೇ ।
ಪುರಾ ನೃಗಶ್ಚ ರಾಜರ್ಷಿಃ ಕೃಕಲಾಸತ್ವಮಾಗತಃ ॥೩೮॥

ಹಿಂದೆ ರಾಜರ್ಷಿಯಾದ ನೃಗನು ಮಹಾದಾನಿಯಾಗಿದ್ದನು. ಒಮ್ಮೆ ಅವನು ಮಹಾಯಜ್ಞದ ಸಮಯದಲ್ಲಿ ಗೋದಾನಮಾಡುತ್ತಿದ್ದಾಗ ವಿಸ್ಮರಣೆಯುಂಟಾಗಿ ಒಂದೇ ಗೋವನ್ನು ಎರಡು ಬಾರಿ ದಾನಕೊಟ್ಟನು. ಆ ಒಂದು ಪಾಪಕ್ಕಾಗಿ ಅವನು ಹೆಂಟೇಗೊದ್ದದ ಯೋನಿಯಲ್ಲಿ ಹುಟ್ಟಬೇಕಾಯಿತು.

ದುನ್ಧುಮಾರಶ್ಚ ರಾಜರ್ಷಿಃ ಸತ್ರೇಷ್ವೇವ ಜರಾಂ ಗತಃ ।
ಪ್ರೀತಿದಾಯಂ ಪರಿತ್ಯಜ್ಯ ಸುಷ್ವಾಪ ಸ ಗಿರಿವ್ರಜೇ ॥೩೯॥

ದುಂಧುಮಾರನೆಂಬ ರಾಜರ್ಷಿಯು ಯಜ್ಞಗಳನ್ನು ಮಾಡುತ್ತಲೇ ವೃದ್ಧನಾದನು. ಆದರೆ ಸುಪ್ರೀತರಾದ ದೇವತೆಗಳು ದಯಪಾಲಿಸಿದ ವರವನ್ನೂ ಪರಿತ್ಯಜಿಸಿ ಗಿರಿವ್ರಜದಲ್ಲಿ ಸುಖವಾಗಿ ಮಲಗಿಬಿಟ್ಟನು. (ಅದೂ ಮಹಾಪುಣ್ಯದ ಫಲವೇ.)

ಪಾಣ್ಡವಾನಾಂ ಹೃತಂ ರಾಜ್ಯಂ ಧಾರ್ತರಾಷ್ಟ್ರೈರ್ಮಹಾಬಲೈಃ ।
ಪುನಃ ಪ್ರತ್ಯಾಹೃತಂ ಚೈವ ನ ದೈವಾದ್ಭುಜಸಂಶ್ರಯಾತ್ ॥೪೦॥

ಮಹಾಬಲರಾದ ಧೃತರಾಷ್ಟ್ರನ ಮಕ್ಕಳು ಪಾಂಡವರ ರಾಜ್ಯವನ್ನು ಅಪಹರಿಸಿದರು. ಆದರೆ ಪುನಃ ಪಾಂಡವರು ತಮ್ಮ ರಾಜ್ಯವನ್ನು ಪಡೆದುಕೊಂಡರು. ಹೀಗೆ ಪಡೆದುಕೊಂಡುದು ದೈವದ ಆಶ್ರಯದಿಂದಲ್ಲ. ಭುಜಗಳ ಬಲವನ್ನು ಆಶ್ರಯಿಸಿದುದರಿಂದ ಅವರಿಗೆ ತಮ್ಮ ರಾಜ್ಯವನ್ನು ಹಿಂದಕ್ಕೆ ಪಡೆಯಲು ಸಾಧ್ಯವಾಯಿತು.

ತಪೋನಿಯಮಸಂಯುಕ್ತಾ ಮುನಯಃ ಸಂಶಿತವ್ರತಾಃ ।
ಕಿಂ ತೇ ದೈವಬಲಾಚ್ಛಾಪಮುತ್ಸೃಜನ್ತೇ ನ ಕರ್ಮಣಾ ॥೪೧॥

ತಪಸ್ಸು ಮತ್ತು ನಿಯಮಗಳಿಂದ ಯುಕ್ತರಾದ, ಕಠೋರವ್ರತನಿಷ್ಠ

ರಾದ ಮುನಿಗಳು ದೈವಬಲದಿಂದ ಯಾರಿಗಾದರೂ ಶಾಪವನ್ನು ಕೊಡುವರೇನು? ತಾವು ಮಾಡಿದ ತಪಸ್ಸಿನಿಂದ ಸಂಚಿತವಾದ ಶಕ್ತಿಯಿಂದಲೇ ಕೊಡುತ್ತಾರಲ್ಲವೇ!

ಪಾಪಮುತ್ಸೃಜತೇ ಲೋಕೇ ಸರ್ವಂ ಪ್ರಾಪ್ಯ ಸುದುರ್ಲಭಮ್ ।
ಲೋಭಮೋಹಸಮಾಪನ್ನಂ ನ ದೈವಂ ತ್ರಾಯತೇ ನರಮ್ ॥೪೨॥

ಅತಿಶಯವಾದ ಪುಣ್ಯಕಾರ್ಯಮಾಡುವವನು ಸುದುರ್ಲಭವಾದ ಸಕಲಪದಾರ್ಥಗಳನ್ನೂ ಹೊಂದಿ ಪಾಪವನ್ನು ಪರಿತ್ಯಜಿಸುತ್ತಾನೆ. ಲೋಭ-ಮೋಹಗಳಿಂದ ಕೂಡಿರುವ ಮನುಷ್ಯನನ್ನು ದೈವವೂ ಸಂಕಟದಿಂದ ರಕ್ಷಿಸಲಾರದು.

ಯಥಾಗ್ನಿಃ ಪವನೋದ್ಧೂತಃ ಸುಸೂಕ್ಷ್ಮೋಽಪಿ ಮಹಾನ್ಭವೇತ್ ।
ತಥಾ ಕರ್ಮಸಮಾಯುಕ್ತಂ ದೈವಂ ಸಾಧು ವಿವರ್ಧತೇ ॥೪೩॥

ಅಗ್ನಿಯ ಕಿಡಿಯು ಬಹಳ ಸಣ್ಣದೇ ಆಗಿದ್ದರೂ ವಾಯುವಿನಿಂದ ಪ್ರೇರಿತವಾಗಿ ಎಬ್ಬಿಸಲ್ಪಟ್ಟರೆ ಜ್ವಾಲೆಗಳಿಂದ ಕೂಡಿದ ಮಹಾಗ್ನಿಯೇ ಆಗುವುದು. ಅದೇ ರೀತಿಯಲ್ಲಿ ಕರ್ಮದಿಂದ ಯುಕ್ತವಾದರೆ ದೈವವು ಚೆನ್ನಾಗಿ ಅಭಿವೃದ್ಧಿಹೊಂದುತ್ತದೆ.

ಯಥಾ ತೈಲಕ್ಷಯಾದ್ದೀಪಃ ಪ್ರಹ್ರಾಸಮುಪಗಚ್ಛತಿ ।
ತಥಾ ಕರ್ಮಕ್ಷಯಾದ್ದೈವಂ ಪ್ರಹ್ರಾಸಮುಪಗಚ್ಛತಿ ॥೪೪॥

ಯಾವ ರೀತಿಯಲ್ಲಿ ಸೊಡರಿನಲ್ಲಿರುವ ಎಣ್ಣೆಯು ಮುಗಿದು ಹೋದಾಗ ದೀಪವು ನಂದಿಹೋಗುವುದೋ –ಅದೇ ರೀತಿಯಲ್ಲಿ ಕರ್ಮವನ್ನು ಮಾಡದೇ ಇರುವುದರಿಂದ ದೈವಸಹಾಯವೂ ಇಲ್ಲವಾಗುತ್ತದೆ.

ವಿಪುಲಮಪಿ ಧನೌಘಂ ಪ್ರಾಪ್ಯ ಭೋಗಾನ್ಸ್ತ್ರಿಯೋ ವಾ
ಪುರುಷ ಇಹ ನ ಶಕ್ತಃ ಕರ್ಮಹೀನೋ ಹಿ ಭೋಕ್ತುಮ್ ।

ಸುನಿಹಿತಮಪಿ ಚಾರ್ಥಂ ದೈವತೈ ರಕ್ಷ್ಯಮಾಣಂ
ಪುರುಷ ಇಹ ಮಹಾತ್ಮಾ ಪ್ರಾಪ್ನುತೇ ನಿತ್ಯಯುಕ್ತಃ ॥೪೫॥

ಉದ್ಯೋಗಹೀನನಾದ ಮನುಷ್ಯನು ವಿಪುಲವಾದ ಧನದ ರಾಶಿಯನ್ನೇ ಹೊಂದಿದ್ದರೂ–ನಾನಾವಿಧವಾದ ಭೋಗವಸ್ತುಗಳನ್ನೂ, ಸ್ತ್ರೀಯರನ್ನೂ

ಹೊಂದಿದ್ದರೂ–ಅವುಗಳನ್ನು ಉಪಭೋಗಿಸಲು ಸಮರ್ಥನಾಗುವುದಿಲ್ಲ. ಆದರೆ ನಿತ್ಯೋದ್ಯೋಗಿಯಾದ, ಮಹಾತ್ಮನಾದ ಮನುಷ್ಯನು ಐಶ್ವರ್ಯವು ಭದ್ರವಾಗಿ ಇಡಲ್ಪಟ್ಟಿದ್ದರೂ –ದೇವತೆಗಳಿಂದಲೇ ರಕ್ಷಿಸಲ್ಪಡುತ್ತಿದ್ದರೂ–ಅದನ್ನು ಪಡೆದುಕೊಂಡು ಉಪಭೋಗಿಸುತ್ತಾನೆ.

ವ್ಯಯಗುಣಮಪಿ ಸಾಧುಂ ಕರ್ಮಣಾ ಸಂಶ್ರಯನ್ತೇ
ಭವತಿ ಮನುಜಲೋಕಾದ್ದೇವಲೋಕೋ ವಿಶಿಷ್ಟಃ ।
ಬಹುತರಸುಸಮೃದ್ಧ್ಯಾ ಮಾನುಷಾಣಾಂ ಗೃಹಾಣಿ
ಪಿತೃವನಭವನಾಭಂ ದೃಶ್ಯತೇ ಚಾಮರಾಣಾಮ್ ॥೪೬॥

ದಾನದ ಮೂಲಕವಾಗಿ ಐಶ್ವರ್ಯವನ್ನು ವ್ಯಯಮಾಡುವ ಗುಣವನ್ನು ಹೊಂದಿರುವ ಸತ್ಪುರುಷನನ್ನು ಅವನು ಮಾಡಿರುವ ಸತ್ಕರ್ಮಕ್ಕಾಗಿ ದೇವತೆಗಳೂ ಆಶ್ರಯಿಸುತ್ತಾರೆ. ಈ ಕಾರಣದಿಂದ ಅವನ ಮನೆಯು ಮನುಷ್ಯಲೋಕದಲ್ಲಿರುವ ಮನೆಗಿಂತಲೂ ಅತಿಶಯವಾದ ದೇವಲೋಕದ ಮನೆಯೇ ಆಗಿರುತ್ತದೆ. (ಅಂತಹವನ ಮನೆಯಲ್ಲಿ ದೇವತಾಸಾನ್ನಿಧ್ಯವು ಎಲ್ಲ ಕಾಲಗಳಲ್ಲಿಯೂ ಇರುತ್ತದೆ.) ಆದರೆ ಯಾವ ಮನುಷ್ಯರ ಮನೆಗಳಲ್ಲಿ ದಾನ-ಧರ್ಮಕ್ರಿಯಾದಿಗಳಿರುವುದಿಲ್ಲವೋ–ಅಂತಹವರ ಮನೆಗಳು ಬಹು ವಿಧವಾದ ಸಂಪತ್ತಿನಿಂದ ಸಮೃದ್ಧವಾಗಿದ್ದರೂ ದೇವತೆಗಳಿಗೆ ಶ್ಮಶಾನ ಸದೃಶವಾಗಿ ಕಾಣುತ್ತವೆ.

ನ ಚ ಫಲತಿ ವಿಕರ್ಮಾ ಜೀವಲೋಕೇ ನ ದೈವಂ
ವ್ಯಪನಯತಿ ವಿಮಾರ್ಗಂ ನಾಸ್ತಿ ದೈವೇ ಪ್ರಭುತ್ವಮ್ ।
ಗುರುಮಿವ ಕೃತಮಗ್ರ್ಯಂ ಕರ್ಮ ಸಂಯಾತಿ ದೈವಂ
ನಯತಿ ಪುರುಷಕಾರಃ ಸಂಚಿತಸ್ತತ್ರ ತತ್ರ ॥೪೭॥

ಈ ಮನುಷ್ಯಲೋಕದಲ್ಲಿ ಉದ್ಯೋಗಹೀನನಾದ ಮನುಷ್ಯನು ಎಂದಿಗೂ ಸಫಲನಾಗುವುದಿಲ್ಲ. ದುರ್ಮಾರ್ಗದಲ್ಲಿ ಹೋಗುತ್ತಿರುವವನನ್ನು ತಡೆಹಿಡಿದು ಸನ್ಮಾರ್ಗದಲ್ಲಿ ಹೋಗುವಂತೆ ಮಾಡುವ ಶಕ್ತಿಯು ದೈವಕ್ಕಿರುವುದಿಲ್ಲ. ಗುರುವನ್ನು ಮುಂದಿಟ್ಟುಕೊಂಡು ಶಿಷ್ಯರು ಹಿಂದೆ ಹೋಗುವಂತೆ–ಕರ್ಮವನ್ನು ಮುಂದೆಮಾಡಿಕೊಂಡು ದೈವವು ಅದನ್ನೇ ಅನುಸರಿಸಿ ಹಿಂದೆ

ಹೋಗುತ್ತಿರುತ್ತದೆ. ಸಂಚಿತವಾಗಿರುವ ಪುರುಷಪ್ರಯತ್ನವೇ ದೈವವನ್ನು ಎಲ್ಲಿಗೆಂದರೆ ಅಲ್ಲಿಗೆ ಒಯ್ಯುತ್ತಿರುತ್ತದೆ."

ಬ್ರಹ್ಮನು ಹೇಳುತ್ತಾನೆ :

ವಸಿಷ್ಠಮುನಿಯೇ! ಪುರುಷಪ್ರಯತ್ನದ ಫಲವನ್ನು ನಾನು ಯಾವಾಗಲೂ ಪ್ರತ್ಯಕ್ಷವಾಗಿ ನೋಡುತ್ತಿರುವುದರಿಂದ ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ನಿನಗೆ ಹೇಳಿದ್ದೇನೆ.

ಅಭ್ಯುತ್ಥಾನೇನ ದೈವಸ್ಯ ಸಮಾರಬ್ಧೇನ ಕರ್ಮಣಾ ।
ವಿಧಿನಾ ಕರ್ಮಣಾ ಚೈವ ಸ್ವರ್ಗಮಾರ್ಗಮವಾಪ್ನುಯಾತ್ ॥೪೯॥

ದೈವಬಲದ ಉದಯದಿಂದ ಪ್ರಾರಂಭಿಸಿದ ಕರ್ಮದಿಂದಲೂ-ವಿಧಿವತ್ತಾಗಿ ಕಾರ್ಯಮಾಡುವುದರಿಂದಲೂ ಮನುಷ್ಯನು ಸ್ವರ್ಗಮಾರ್ಗವನ್ನು ಹೊಂದುತ್ತಾನೆ."

ಆರನೆಯ ಅಧ್ಯಾಯವು ಮುಗಿಯಿತು.

ಏಳನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಕರ್ಮಫಲಗಳ ವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕರ್ಮಣಾಂ ಚ ಸಮಸ್ತಾನಾಂ ಶುಭಾನಾಂ ಭರತರ್ಷಭ ।
ಫಲಾನಿ ಮಹತಾಂ ಶ್ರೇಷ್ಠ ಪ್ರಬ್ರೂಹಿ ಪರಿಪೃಚ್ಛತಃ ॥೧॥

"ಮಹಾತ್ಮರಲ್ಲಿ ಶ್ರೇಷ್ಠನಾದವನೇ! ಭರತಶ್ರೇಷ್ಠನೇ! ಪ್ರಶ್ನಿಸುತ್ತಿರುವ ನನಗೆ ಶ್ರೇಷ್ಠಕರ್ಮಗಳ ಸಮಸ್ತ ಫಲಗಳನ್ನೂ ಹೇಳು."

ಭೀಷ್ಮನು ಹೇಳುತ್ತಾನೆ :

ಹನ್ತ ತೇ ಕಥಯಿಷ್ಯಾಮಿ ಯನ್ಮಾಂ ಪೃಚ್ಛಸಿ ಭಾರತ ।
ರಹಸ್ಯಂ ಯದೃಷೀಣಾಂ ತು ತಚ್ಛೃಣುಷ್ವ ಯುಧಿಷ್ಠಿರ ।
ಯಾ ಗತಿಃ ಪ್ರಾಪ್ಯತೇ ಯೇನ ಪ್ರೇತ್ಯಭಾವೇ ಚಿರೇಪ್ಸಿತಾ ॥೨॥

"ಭಾರತನೇ! ನೀನು ಕೇಳಿದ ಪ್ರಶ್ನೆಗೆ ಸಂತೋಷದಿಂದ ಉತ್ತರಿಸುತ್ತೇನೆ. ಈ ವಿಷಯವು ಋಷಿಗಳಿಗೂ ರಹಸ್ಯವಾಗಿಯೇ ಉಳಿದಿದೆ.

ಮರಣಾನಂತರದಲ್ಲಿ ಯಾವ ಮನುಷ್ಯನಿಗೆ ಬಹಳ ಕಾಲದಿಂದಲೂ ಅಪೇಕ್ಷಿತವಾದ ಯಾವ ಗತಿಯು ಲಭಿಸುವುದೆಂಬುದನ್ನು ಹೇಳುತ್ತೇನೆ, ಕೇಳು.

ಯೇನ ಯೇನ ಶರೀರೇಣ ಯದ್ಯತ್ಕರ್ಮ ಕರೋತಿ ಯಃ ।
ತೇನ ತೇನ ಶರೀರೇಣ ತತ್ತತ್ಫಲಮುಪಾಶ್ನುತೇ ॥೩॥

ಮನುಷ್ಯನು ಯಾವ ಯಾವ ಶರೀರದಿಂದ ಯಾವ ಯಾವ ಕರ್ಮವನ್ನು ಮಾಡುವನೋ–ಮರುಹುಟ್ಟಿನಲ್ಲಿ ಆಯಾ ಶರೀರದಿಂದಲೇ ಆಯಾ ಫಲವನ್ನು ಉಪಭೋಗಿಸುತ್ತಾನೆ.

ಯಸ್ಯಾಂ ಯಸ್ಯಾಮವಸ್ಥಾಯಾಂ ಯತ್ಕರೋತಿ ಶುಭಾಶುಭಮ್ ।
ತಸ್ಯಾಂ ತಸ್ಯಾಮವಸ್ಥಾಯಾಂ ಭುಙ್ಕ್ತೇ ಜನ್ಮನಿ ಜನ್ಮನಿ ॥೪॥

ಬಾಲ್ಯ-ಯೌವನ-ವಾರ್ಧಕ್ಯಾದಿ ಯಾವ ಯಾವ ಅವಸ್ಥೆಗಳಲ್ಲಿ ಮನುಷ್ಯನು ಯಾವ ಯಾವ ಪಾಪ-ಪುಣ್ಯಕಾರ್ಯಗಳನ್ನು ಮಾಡುವನೋ– ಅದರ ಪಾಪ-ಪುಣ್ಯಫಲಗಳನ್ನು ಮರುಹುಟ್ಟುಗಳಲ್ಲಿ ಆಯಾ ಅವಸ್ಥೆಗಳಲ್ಲಿದ್ದಾಗಲೇ ಅನುಭವಿಸುತ್ತಾನೆ.

ನ ನಶ್ಯತಿ ಕೃತಂ ಕರ್ಮ ಸದಾ ಪಞ್ಚೇನ್ದ್ರಿಯೈರಿಹ ।
ತೇ ಹ್ಯಸ್ಯ ಸಾಕ್ಷಿಣೋ ನಿತ್ಯಂ ಷಷ್ಠ ಆತ್ಮಾ ತಥೈವ ಚ ॥೫॥

ಪಂಚೇಂದ್ರಿಯಗಳ ಮೂಲಕವಾಗಿ ಮಾಡಿರುವ ಕರ್ಮವು ಎಂದಿಗೂ ನಷ್ಟವಾಗಿ ಹೋಗುವುದಿಲ್ಲ. ಆ ಪಂಚೇಂದ್ರಿಯಗಳೂ ಮತ್ತು ಆರನೆಯವನಾದ ಆತ್ಮನೂ ಮನುಷ್ಯನು ಮಾಡುವ ಶುಭಾಶುಭಕರ್ಮಗಳಿಗೆ ನಿತ್ಯ ಸಾಕ್ಷಿಗಳಾಗಿರುತ್ತಾರೆ. ಆದುದರಿಂದ ಮನುಷ್ಯನು ಯಾವಾಗಲೂ ಸತ್ಕರ್ಮಗಳನ್ನೇ ಮಾಡುತ್ತಿರಬೇಕು.

ಚಕ್ಷುರ್ದದ್ಯಾನ್ಮನೋ ದದ್ಯಾದ್ವಾಚಂ ದದ್ಯಾಚ್ಚ ಸೂನೃತಾಮ್ ।
ಅನುವ್ರಜೇದುಪಾಸೀತ ಸ ಯಜ್ಞಃ ಪಞ್ಚದಕ್ಷಿಣಃ ॥೬॥

ಅತಿಥಿಯಾದವನು ಮನೆಯ ಬಾಗಿಲಿಗೆ ಬಂದರೆ ಅವನನ್ನು ಪ್ರಸನ್ನವಾದ ದೃಷ್ಟಿಯಿಂದ ನೋಡಬೇಕು. ಅವನ ಸೇವೆಯಲ್ಲಿ ಮನಸ್ಸನ್ನು ತೊಡಗಿಸಬೇಕು. ಸುಮಧುರವಾದ ಮಾತನ್ನು ಹೇಳಿ ಅವನನ್ನು ಸಂತೋಷಗೊಳಿಸಬೇಕು. ಅವನು ಅತಿಥ್ಯವನ್ನು ಸ್ವೀಕರಿಸಿ ಮನೆಯಿಂದ ಹೊರಟಾಗ

ಸ್ವಲ್ಪದೂರದವರೆಗೆ ಅವನನ್ನು ಹಿಂಬಾಲಿಸಬೇಕು. ಅತಿಥಿಯು ಎಲ್ಲಿಯ ವರೆಗೆ ಮನೆಯಲ್ಲಿರುವನೋ ಅಲ್ಲಿಯವರೆಗೂ ಅವನನ್ನು ಉಪಚರಿಸುತ್ತಲೇ ಇರಬೇಕು. ಈ ಐದು ಕರ್ಮಗಳೂ ಗೃಹಸ್ಥನಾದವನಿಗೆ ಐದು ವಿಧವಾದ ದಕ್ಷಿಣೆಗಳನ್ನೊಳಗೊಂಡ ಯಜ್ಞವೇ ಆಗುತ್ತದೆ. ಯಜ್ಞಮಾಡಿದ ಫಲವೇ ಪಂಚಾಂಗಯುಕ್ತವಾದ ಅತಿಥಿಸತ್ಕಾರದಿಂದಲೂ ಲಭಿಸುತ್ತದೆ.

ಯೋ ದದ್ಯಾದಪರಿಕ್ಲಿಷ್ಟಮನ್ನಮಧ್ವನಿ ವರ್ತತೇ ।
ಶ್ರಾನ್ತಾಯಾದೃಷ್ಟಪೂರ್ವಾಯ ತಸ್ಯ ಪುಣ್ಯಫಲಂ ಮಹತ್ ॥೭॥

ಯಾವನು ಬಳಲಿರುವ, ಹಿಂದೆಂದೂ ನೋಡದಿರುವ ಅಪರಿಚಿತನಾದ ದಾರಿಹೋಕನಾದ ಅತಿಥಿಗೆ ಸುಲಭವಾಗಿ ತಿನ್ನಬಹುದಾದ ಅನ್ನವನ್ನು ಮನಸ್ಸಿಗೆ ನೋವಾಗದ ರೀತಿಯಲ್ಲಿ ಕೊಡುವನೋ ಅಂತಹವನಿಗೆ ಮಹತ್ತಾದ ಪುಣ್ಯಫಲವು ಲಭಿಸುತ್ತದೆ.

ಸ್ಥಣ್ಡಿಲೇಷು ಶಯಾನಾನಾಂ ಗೃಹಾಣಿ ಶಯನಾನಿ ಚ ।
ಚೀರವಲ್ಕಲಸಂವೀತೇ ವಾಸಾಂಸ್ಯಾಭರಣಾನಿ ಚ ॥೮॥

ವಾನಪ್ರಸ್ಥಾಶ್ರಮಧರ್ಮವನ್ನು ಪರಿಪಾಲನೆಮಾಡುತ್ತಾ ವೇದಿಯ ಮೇಲೆ ಮಲಗುವವರಿಗೆ ಜನ್ಮಾಂತರದಲ್ಲಿ ಉತ್ತಮವಾದ ಮನೆಗಳೂ-ಹಾಸಿಗೆಗಳೂ ಲಭಿಸುತ್ತವೆ. ನಾರುಮಡಿಯನ್ನು ಉಟ್ಟಿರುವವನಿಗೆ ಜನ್ಮಾಂತರದಲ್ಲಿ ಉತ್ತಮವಾದ ವಸ್ತ್ರಗಳೂ-ಆಭರಣಗಳೂ ಲಭಿಸುತ್ತವೆ.

ವಾಹನಾನಿ ಚ ಯಾನಾನಿ ಯೋಗಾತ್ಮನಿ ತಪೋಧನೇ ।
ಅಗ್ನೀನುಪಶಯಾನಸ್ಯ ರಾಜ್ಞಃ ಪೌರುಷಮೇವ ಚ ॥೯॥

ಯೋಗಾತ್ಮನಾದ ತಪೋಧನನಿಗೆ ಜನ್ಮಾಂತರದಲ್ಲಿ ಅನೇಕವಿಧವಾದ ವಾಹನಗಳೂ -ಯಾನಗಳೂ ಲಭಿಸುತ್ತವೆ. ಅಗ್ನಿಯನ್ನು ಉಪಾಸನೆ ಮಾಡುವ ರಾಜನಿಗೆ ಜನ್ಮಾಂತರದಲ್ಲಿ ಪೌರುಷವು ಪ್ರಾಪ್ತವಾಗುತ್ತದೆ.

ರಸಾನಾಂ ಪ್ರತಿಸಂಹಾರೇ ಸೌಭಾಗ್ಯಮನುಗಚ್ಛತಿ ।
ಆಮಿಷಪ್ರತಿಸಂಹಾರೇ ಪಶೂನ್ಪುತ್ರಾಂಶ್ಚ ವಿನ್ದತಿ ॥೧೦॥

ರಸಗಳನ್ನು (ಮದಿರಾದಿಗಳನ್ನು) ಪರಿತ್ಯಾಗಮಾಡುವುದರಿಂದ

ಜನ್ಮಾಂತರದಲ್ಲಿ ಸೌಭಾಗ್ಯವನ್ನು ಹೊಂದುತ್ತಾನೆ. ಮಾಂಸವನ್ನು ಪರಿತ್ಯಾಗ ಮಾಡುವುದರಿಂದ ಪಶುಗಳನ್ನೂ-ಪುತ್ರರನ್ನೂ ಹೊಂದುತ್ತಾನೆ.

ಅವಾಕ್ಛಿರಾಸ್ತು ಯೋ ಲಮ್ಬೇದುದವಾಸಂ ಚ ಯೋ ವಸೇತ್ ।
ಸತತಂ ಚೈಕಶಾಯೀ ಯಃ ಸ ಲಭೇತೇಪ್ಸಿತಾಂ ಗತಿಮ್ ॥೧೧॥

ಯಾವ ತಪಸ್ವಿಯು ತಲೆಯನ್ನು ಕೆಳಕ್ಕೆ ಮಾಡಿಕೊಂಡು ತಪಸ್ಸು ಮಾಡುವನೋ, ನೀರಿನಲ್ಲಿಯೇ ನಿಂತು ತಪಸ್ಸುಮಾಡುವನೋ, ಯಾವಾಗಲೂ ಏಕಾಕಿಯಾಗಿಯೇ ಮಲಗುವನೋ, (ಬ್ರಹ್ಮಚರ್ಯವ್ರತವನ್ನು ಪಾಲಿಸುವನೋ)-ಅವನು ಮನೋವಾಂಛಿತವಾದ ಉತ್ತಮಗತಿಯನ್ನು ಹೊಂದುತ್ತಾನೆ.

ಪಾದ್ಯಮಾಸನಮೇವಾಥ ದೀಪಮನ್ನಂ ಪ್ರತಿಶ್ರಯಮ್ ।
ದದ್ಯಾದತಿಥಿಪೂಜಾರ್ಥಂ ಸ ಯಜ್ಞಃ ಪಞ್ಚದಕ್ಷಿಣಃ ॥೧೨॥

ಕಾಲು ತೊಳೆಯಲು ನೀರನ್ನು ಕೊಡುವುದು, ಕುಳಿತುಕೊಳ್ಳಲು ಆಸನವನ್ನು ನೀಡುವುದು, ಪ್ರಕಾಶಕ್ಕಾಗಿ ಅವನ ಮುಂದೆ ದೀಪವನ್ನಿಡುವುದು, ಊಟ ಮಾಡಲು ಅನ್ನವನ್ನು ಬಡಿಸುವುದು, ವಿಶ್ರಾಂತಿಗಾಗಿ ಸ್ಥಳವನ್ನು ಕೊಡುವುದು -ಈ ಐದನ್ನೂ ಅತಿಥಿಸತ್ಕಾರದ ಸಲುವಾಗಿ ಮಾಡುವುದು ಪಂಚದಕ್ಷಿಣಾಯುಕ್ತವಾದ ಯಜ್ಞವಾಗುತ್ತದೆ.

ವೀರಾಸನಂ ವೀರಶಯ್ಯಾಂ ವೀರಸ್ಥಾನಮುಪಾಗತಃ ।
ಅಕ್ಷಯಾಸ್ತಸ್ಯ ವೈ ಲೋಕಾಃ ಸರ್ವಕಾಮಗಮಾಸ್ತಥಾ ॥೧೩॥

ಯಾವನು ವೀರಸ್ಥಾನವಾದ ರಣಭೂಮಿಗೆ ಹೋಗಿ ವೀರರ ಶಯ್ಯೆಯಲ್ಲಿ ಮಲಗಿ (ಮರಣಹೊಂದಿ) ವೀರಸ್ಥಾನಕ್ಕೆ (ಸ್ವರ್ಗಕ್ಕೆ) ಹೋಗುವನೋ-ಅವನಿಗೆ ಸಕಲವಿಧವಾದ ಕಾಮನೆಗಳನ್ನೂ ಒದಗಿಸಿ ಕೊಡುವ ಅಕ್ಷಯ ಪುಣ್ಯಲೋಕಗಳು ಸಿಕ್ಕುತ್ತವೆ.

ಧನಂ ಲಭೇತ ದಾನೇನ ಮೌನೇನಾಜ್ಞಾಂ ವಿಶಾಮ್ಪತೇ ।
ಉಪಭೋಗಾಂಶ್ಚ ತಪಸಾ ಬ್ರಹ್ಮಚರ್ಯೇಣ ಜೀವಿತಮ್ ॥೧೪॥

ಮಹಾರಾಜ! ದಾನಮಾಡುವುದರಿಂದ ಧನವನ್ನು ಹೊಂದುತ್ತಾನೆ. ಮೌನವ್ರತವನ್ನು ಪರಿಪಾಲಿಸುವುದರಿಂದ ಇತರರಿಗೆ ಆಜ್ಞೆಯನ್ನು ಮಾಡುವ

ಶಕ್ತಿಯನ್ನು ಪಡೆದುಕೊಳ್ಳುತ್ತಾನೆ. ತಪಸ್ಸಿನಿಂದ ಸಕಲವಿಧವಾದ ಭೋಗಗಳನ್ನೂ ಪಡೆದುಕೊಳ್ಳುತ್ತಾನೆ. ಬ್ರಹ್ಮಚರ್ಯವ್ರತಪಾಲನೆಯಿಂದ ದೀರ್ಘಾಯುಷ್ಯವನ್ನು ಪಡೆದುಕೊಳ್ಳುತ್ತಾನೆ.

ರೂಪಮೈಶ್ವರ್ಯಮಾರೋಗ್ಯಮಹಿಂಸಾಫಲಮಶ್ನುತೇ ।
ಫಲಮೂಲಾಶಿನೋ ರಾಜ್ಯಂ ಸ್ವರ್ಗಃ ಪರ್ಣಾಶಿನಾಂ ಭವೇತ್ ॥೧೫॥

ಅಹಿಂಸಾಧರ್ಮದ ಪರಿಪಾಲನೆಯಿಂದ ರೂಪ, ಐಶ್ವರ್ಯ ಮತ್ತು ಆರೋಗ್ಯರೂಪವಾದ ಫಲವು ಲಭಿಸುತ್ತದೆ. ಫಲ-ಮೂಲಾದಿಗಳನ್ನು ತಿನ್ನುವವನಿಗೆ ಜನ್ಮಾಂತರದಲ್ಲಿ ರಾಜ್ಯವು ಲಭಿಸುತ್ತದೆ. ತರಗೆಲೆಗಳನ್ನೇ ತಿಂದು ಜೀವಿಸುವವನಿಗೆ ಸ್ವರ್ಗಪ್ರಾಪ್ತಿಯಾಗುತ್ತದೆ.

ಪ್ರಾಯೋಪವೇಶಿನೋ ರಾಜನ್ಸರ್ವತ್ರ ಸುಖಮುಚ್ಯತೇ ।
ಗವಾಢ್ಯಃ ಶಾಕದೀಕ್ಷಾಯಾಂ ಸ್ವರ್ಗಗಾಮೀ ತೃಣಾಶನಃ ॥೧೬॥

ಪ್ರಾಯೋಪವೇಶವ್ರತನಿಷ್ಠನಾಗಿ ಕುಳಿತು ಅನ್ನ-ನೀರುಗಳನ್ನು ಬಿಟ್ಟು ಪ್ರಾಣಬಿಡುವವನಿಗೆ ಜನ್ಮಾಂತರದಲ್ಲಿ ಎಲ್ಲ ರೀತಿಯಲ್ಲಿಯೂ ಸುಖವು ಲಭಿಸುತ್ತದೆ. ಶಾಕಾಹಾರಿಯಾದವನು ಜನ್ಮಾಂತರದಲ್ಲಿ ಗೋಸಮೃದ್ಧಿಯನ್ನು ಹೊಂದುತ್ತಾನೆ. ಹುಲ್ಲನ್ನೇ ತಿಂದು ಜೀವಿಸುವವನು ಸ್ವರ್ಗಕ್ಕೆ ಹೋಗುತ್ತಾನೆ.

ಸ್ತ್ರಿಯಸ್ತ್ರಿಷವಣಂ ಸ್ನಾತ್ವಾ ವಾಯುಂ ಪೀತ್ವಾ ಕ್ರತುಂ ಲಭೇತ್ ।
ಸ್ವರ್ಗಂ ಸತ್ಯೇನ ಲಭತೇ ದೀಕ್ಷಯಾ ಕುಲಮುತ್ತಮಮ್ ॥೧೭॥

ದಿನದ ಮೂರು ಕಾಲಗಳಲ್ಲಿ ಸ್ನಾನಮಾಡುವವನು ಮುಂದಿನ ಜನ್ಮದಲ್ಲಿ ಸ್ತ್ರೀಸೌಖ್ಯವನ್ನು ಪಡೆಯುತ್ತಾನೆ. ವಾಯುಭಕ್ಷನಾಗಿರುವವನು ಯಜ್ಞಮಾಡಿದ ಫಲವನ್ನು ಹೊಂದುತ್ತಾನೆ. ಸತ್ಯನಿಷ್ಠೆಯಿಂದ ಸ್ವರ್ಗವನ್ನೂ, ವ್ರತಧಾರಣೆಯಿಂದ ಉತ್ತಮಕುಲವನ್ನೂ ಹೊಂದುತ್ತಾನೆ.

ಸಲಿಲಾಶೀ ಭವೇದ್ಯಸ್ತು ಸದಾಗ್ನಿಃ ಸಂಸ್ಕೃತೋ ದ್ವಿಜಃ ।
ಮನುಂ ಸಾಧಯತೋ ರಾಜ್ಯಂ ನಾಕಪೃಷ್ಠಮನಾಶಕೇ ॥೧೮॥

ಯಾವಾತನು ನೀರನ್ನೇ ಆಹಾರವನ್ನಾಗಿ ತೆಗೆದುಕೊಳ್ಳುವನೋ- ಅವನು ಜನ್ಮಾಂತರದಲ್ಲಿ ಯಾವಾಗಲೂ ಅಗ್ನಿಧಾರಣೆಮಾಡುವ ಉತ್ತಮ

ಸಂಸ್ಕಾರಯುಕ್ತನಾದ ಬ್ರಾಹ್ಮಣನಾಗಿ ಹುಟ್ಟುತ್ತಾನೆ. ಮಂತ್ರಸಾಧನೆ ಯಲ್ಲಿಯೇ ಸಂಲಗ್ನನಾಗಿರುವವನು ಜನ್ಮಾಂತರದಲ್ಲಿ ರಾಜ್ಯವನ್ನು ಪಡೆದು ಕೊಳ್ಳುತ್ತಾನೆ. ನಿರಾಹಾರಿಯಾದವನು ಸ್ವರ್ಗವನ್ನು ಹೊಂದುತ್ತಾನೆ.

ಉಪವಾಸಂ ದೀಕ್ಷಾಯಾಮಭಿಷೇಕಂ ಚ ಪಾರ್ಥಿವ ।
ಕೃತ್ವಾ ದ್ವಾದಶ ವರ್ಷಾಣಿ ವೀರಸ್ಥಾನಾದ್ವಿಶಿಷ್ಯತೇ ॥೧೯॥

ಯಾವನು ಹನ್ನೆರಡು ವರ್ಷಗಳ ಪರ್ಯಂತವಾಗಿ ದೀಕ್ಷೆಯನ್ನು ಕೈಗೊಂಡು ಆಹಾರವನ್ನು ತ್ಯಾಗಮಾಡಿ ಪುಣ್ಯತೀರ್ಥಗಳಲ್ಲಿ ಸ್ನಾನಮಾಡು ವನೋ ಅವನಿಗೆ ಯುದ್ಧದಲ್ಲಿ ಮರಣಹೊಂದುವ ವೀರನಿಗೆ ಪ್ರಾಪ್ತವಾಗುವ ಪುಣ್ಯಲೋಕಕ್ಕಿಂತಲೂ ಅತಿಶಯವಾದ ಲೋಕವು ಲಭಿಸುತ್ತದೆ.

ಅಧೀತ್ಯ ಸರ್ವವೇದಾನ್ವೈ ಸದ್ಯೋ ದುಃಖಾದ್ವಿಮುಚ್ಯತೇ ।
ಮಾನಸಂ ಹಿ ಚರನ್ಧರ್ಮಂ ಸ್ವರ್ಗಲೋಕಮುಪಾಶ್ನುತೇ ॥೨೦॥

ಸಂಪೂರ್ಣವೇದಗಳನ್ನು ಅಧ್ಯಯನಮಾಡಿದವನು ಒಡನೆಯೇ ಸರ್ವ ದುಃಖಗಳಿಂದಲೂ ವಿಮುಕ್ತನಾಗುತ್ತಾನೆ. ಮಾನಸಪೂಜಾದಿ ಧರ್ಮವನ್ನು ಆಚರಿಸುವವನು ಸ್ವರ್ಗಲೋಕವನ್ನು ಹೊಂದುತ್ತಾನೆ.

ಯಾ ದುಸ್ತ್ಯಜಾ ದುರ್ಮತಿಭಿರ್ಯಾ ನ ಜೀರ್ಯತಿ ಜೀರ್ಯತಃ ।
ಯೋಽಸೌ ಪ್ರಾಣಾನ್ತಿಕೋ ರೋಗಸ್ತಾಂ ತೃಷ್ಣಾಂ ತ್ಯಜತಃ ಸುಖಮ್ ॥೨೧॥

ದುಷ್ಟಬುದ್ಧಿಯವರಿಂದ ಯಾವುದನ್ನು ತ್ಯಾಗಮಾಡಲು ಸಾಧ್ಯವಾಗು ವುದಿಲ್ಲವೋ, ಮನುಷ್ಯನು ಜೀರ್ಣಹೊಂದುತ್ತಿದ್ದರೂ (ವೃದ್ಧನಾಗುತ್ತಿದ್ದರೂ) ಯಾವುದು ಜೀರ್ಣವಾಗುವುದಿಲ್ಲವೋ (ನಶಿಸಿಹೋಗುವುದಿಲ್ಲವೋ), ಯಾವುದು ಪ್ರತಿಯೊಬ್ಬನಿಗೂ ಪ್ರಾಣಾಂತಿಕವಾದ ರೋಗ ರೂಪವಾಗಿರುವುದೋ –ಅಂತಹ ತೃಷ್ಣೆಯನ್ನು (ಆಶೆಯನ್ನು) ತ್ಯಜಿಸುವವ ನಿಗೆ ಪರಮಸುಖವುಂಟಾಗುತ್ತದೆ.

ಯಥಾ ಧೇನುಸಹಸ್ರೇಷು ವತ್ಸೋ ವಿನ್ದತಿ ಮಾತರಮ್ ।
ಏವಂ ಪೂರ್ವಕೃತಂ ಕರ್ಮ ಕರ್ತಾರಮನುಗಚ್ಛತಿ ॥೨೨॥

ಸಾವಿರ ಹಸುಗಳ ಮಧ್ಯದಲ್ಲಿಯೂ ಕರುವು ಹೇಗೆ ತನ್ನ ತಾಯಿಯನ್ನೇ

ಹೋಗಿ ಸೇರುವುದೋ–ಹಾಗೆಯೇ ಹಿಂದೆ ಮಾಡಿರುವ ಕರ್ಮಫಲವು ತನ್ನ ಕರ್ತೃವನ್ನೇ ಅನುಸರಿಸಿ ಬರುತ್ತದೆ.

ಅಚೋದ್ಯಮಾನಾನಿ ಯಥಾ ಪುಷ್ಪಾಣಿ ಚ ಫಲಾನಿ ಚ ।
ಸ್ವಕಾಲಂ ನಾತಿವರ್ತನ್ತೇ ತಥಾ ಕರ್ಮ ಪುರಾ ಕೃತಮ್ ॥೨೩॥

ಫಲ-ಪುಷ್ಪಗಳು ಯಾರ ಪ್ರೇರಣೆಯೂ ಇಲ್ಲದೇ, ಕಾಲವನ್ನು ಅತಿಕ್ರಮಿಸದೇ, ಯಾವ ರೀತಿಯಲ್ಲಿ ಸರಿಯಾದ ಸಮಯದಲ್ಲಿ ವೃಕ್ಷಗಳಿಂದ ಹೊರಬರುವುವೋ –ಅದೇ ರೀತಿಯಲ್ಲಿ ಹಿಂದೆ ಮಾಡಿದ ಶುಭಾಶುಭ ಕರ್ಮಗಳೂ ಕಾಲವನ್ನು ಅತಿಕ್ರಮಿಸದೇ, ಯಾರ ಪ್ರೇರಣೆಯೂ ಇಲ್ಲದೇ ಸಕಾಲದಲ್ಲಿ ಮನುಷ್ಯನಿಗೆ ಫಲಕೊಡುತ್ತವೆ.

ಜೀರ್ಯನ್ತಿ ಜೀರ್ಯತಃ ಕೇಶಾ ದನ್ತಾ ಜೀರ್ಯನ್ತಿ ಜೀರ್ಯತಃ ।
ಚಕ್ಷುಃಶ್ರೋತ್ರೇ ಚ ಜೀರ್ಯೇತೇ ತೃಷ್ಣೈಕಾ ನ ತು ಜೀರ್ಯತೇ ॥

ಮನುಷ್ಯನು ವೃದ್ಧಾಪ್ಯವನ್ನು ಹೊಂದಿದೊಡನೆಯೇ ಕೂದಲುಗಳು ಜೀರ್ಣವಾಗುತ್ತವೆ (ನರೆಯುತ್ತವೆ). ಹಲ್ಲುಗಳು ಜೀರ್ಣವಾಗುತ್ತವೆ. (ಬಿದ್ದುಹೋಗುತ್ತವೆ). ಕಣ್ಣು-ಕಿವಿಗಳು ಜೀರ್ಣವಾಗುತ್ತವೆ (ಕಣ್ಣು ಕಾಣಿಸುವುದಿಲ್ಲ ; ಕಿವಿಯು ಕೇಳಿಸುವುದಿಲ್ಲ). ಆದರೆ ಆಶೆಯೊಂದು ಮಾತ್ರ ಜೀರ್ಣವಾಗುವುದಿಲ್ಲ (ಅದು ಯಾವಾಗಲೂ ನಿತ್ಯನೂತನವಾಗಿರುತ್ತದೆ).

ಯೇನ ಪ್ರೀಣಾತಿ ಪಿತರಂ ತೇನ ಪ್ರೀತಃ ಪ್ರಜಾಪತಿಃ ।
ಪ್ರೀಣಾತಿ ಮಾತರಂ ಯೇನ ಪೃಥಿವೀ ತೇನ ಪೂಜಿತಾ ।
ಯೇನ ಪ್ರೀಣಾತ್ಯುಪಾಧ್ಯಾಯಂ ತೇನ ಸ್ಯಾದ್ಬ್ರಹ್ಮ ಪೂಜಿತಮ್ ॥

ಯಾವನು ತನ್ನ ತಂದೆಯನ್ನು ಶುಶ್ರೂಷಾದಿಗಳಿಂದ ಪ್ರಸನ್ನಗೊಳಿಸುವನೋ–ಅವನ ವಿಷಯದಲ್ಲಿ ಪ್ರಜಾಪತಿಯು ಸುಪ್ರೀತನಾಗುತ್ತಾನೆ. ಯಾವನು ಸೇವಾದಿಗಳಿಂದ ತನ್ನ ತಾಯಿಯನ್ನು ಪ್ರಸನ್ನಗೊಳಿಸುವನೋ ಅವನು ಭೂದೇವಿಯನ್ನೇ ಪೂಜಿಸಿದಂತಾಗುತ್ತದೆ. ಯಾವನು ತನ್ನ ಉಪಾಧ್ಯಾಯನನ್ನು ಶುಶ್ರೂಷಾದಿಗಳಿಂದ ಪ್ರಸನ್ನಗೊಳಿಸುವನೋ ಅವನು ಬ್ರಹ್ಮವಸ್ತುವನ್ನೇ ಪೂಜೆಯಿಂದ ಪ್ರಸನ್ನಗೊಳಿಸಿದಂತಾಗುತ್ತದೆ.

ಸರ್ವೇ ತಸ್ಯಾದೃತಾ ಧರ್ಮಾ ಯಸ್ಯೈತೇ ತ್ರಯ ಆದೃತಾಃ ।
ಅನಾದೃತಾಸ್ತು ಯಸ್ಯೈತೇ ಸರ್ವಾಸ್ತಸ್ಯಾಫಲಾಃ ಕ್ರಿಯಾ ॥೨೬॥

ಯಾವನು ತಂದೆ, ತಾಯಿ ಮತ್ತು ಉಪಾಧ್ಯಾಯ –ಈ ಮೂವರನ್ನು ಸಮಾದರಿಸುವನೋ, ಶುಶ್ರೂಷಾದಿಗಳಿಂದ ಪ್ರಸನ್ನಗೊಳಿಸುವನೋ– ಅವನು ಎಲ್ಲ ಧರ್ಮಗಳನ್ನೂ ಆದರಿಸಿದಂತೆಯೇ ಸರಿ (ಅನುಷ್ಠಾನಮಾಡಿದಂತೆಯೇ ಆಗುತ್ತದೆ). ಯಾವನು ಈ ಮೂವರನ್ನೂ ಅನಾದರಣೆ ಮಾಡುವನೋ ಅವನು ಮಾಡಿದ ಸಮಸ್ತವಾದ ಯಜ್ಞ-ದಾನಕ್ರಿಯಾದಿಗಳೆಲ್ಲವೂ ನಿಷ್ಫಲವೇ ಆಗುತ್ತವೆ.”

ವೈಶಂಪಾಯನರು ಹೇಳುತ್ತಾರೆ :

ಜನಮೇಜಯ! ಭೀಷ್ಮನು ಯುಧಿಷ್ಠಿರನಿಗೆ ಹೇಳಿದ ಮಾತುಗಳನ್ನು ಕೇಳಿ ಕುರುಪುಂಗವರೆಲ್ಲರೂ ಆಶ್ಚರ್ಯಚಕಿತರಾದರು. ಪ್ರಹೃಷ್ಟವಾದ ಮತ್ತು ಪ್ರಸನ್ನವಾದ ಮನಸ್ಸುಳ್ಳವರಾದರು. ಭೀಷ್ಮನು ಮುಂದುವರಿದು ಹೇಳಿದನು :

ಯನ್ಮನ್ತ್ರೇ ಭವತಿ ವೃಥೋಪಯುಜ್ಯಮಾನೇ
ಯತ್ಸೋಮೇ ಭವತಿ ವೃಥಾಭಿಷೂಯಮಾಣೇ ।
ಯಚ್ಚಾಗ್ನೌ ಭವತಿ ವೃಥಾಭಿಹೂಯಮಾನೇ
ತತ್ಸರ್ವಂ ಭವತಿ ವೃಥಾಭಿಧೀಯಮಾನೇ ॥೨೮॥

“ಧರ್ಮಜ! ವೇದಮಂತ್ರವನ್ನು ವ್ಯರ್ಥವಾಗಿ (ಸ್ವರಾದಿಗಳಿಲ್ಲದೇ ಅಶುದ್ಧವಾಗಿ) ಹೇಳುವುದರಿಂದ ಯಾವ ಪಾಪವು ಪ್ರಾಪ್ತವಾಗುವುದೋ, ಸೋಮಲತೆಯನ್ನು ವ್ಯರ್ಥವಾಗಿ ಹಿಂಡುವುದರಿಂದ ಯಾವ ಪಾಪವು ಸಂಘಟಿಸುವುದೋ, ಮಂತ್ರವೇ ಇಲ್ಲದೇ ಅಗ್ನಿಯಲ್ಲಿ ಹೋಮಮಾಡುವುದರಿಂದ ಯಾವ ಪಾಪವು ಸಂಘಟಿಸುವುದೋ–ಆ ಎಲ್ಲ ಪಾಪಗಳೂ ವ್ಯರ್ಥಾಲಾಪಮಾಡುವವನಿಗೆ ಅಥವಾ ಸುಳ್ಳುಹೇಳುವವನಿಗೆ ಪ್ರಾಪ್ತವಾಗುತ್ತವೆ.”

ಮಹಾರಾಜ! ಶುಭಾಶುಭಕರ್ಮಫಲಗಳ ವಿಷಯವಾಗಿ ವ್ಯಾಸಮಹರ್ಷಿಗಳು ನನಗೆ ಏನೇನನ್ನು ಹೇಳಿದ್ದರೋ ಅವೆಲ್ಲವನ್ನೂ ನಿನಗೂ ಹೇಳಿದ್ದೇನೆ. ಮುಂದೆ ಬೇರೆ ಯಾವ ವಿಷಯವನ್ನು ಕೇಳಲು ಇಷ್ಟಪಡುವೆ?”

೭ನೆಯ ಅಧ್ಯಾಯವು ಮುಗಿಯಿತು.

೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರೇಷ್ಠನಾದ ಬ್ರಾಹ್ಮಣನ ಮಹಿಮೆ

ಪಾರೀಕ್ಷಿತ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಕೇ ಪೂಜ್ಯಾಃ ಕೇ ನಮಸ್ಕಾರ್ಯಾಃ ಕಾನ್ನಮಸ್ಯಸಿ ಭಾರತ ।
ಏತನ್ಮೇ ಸರ್ವಮಾಚಕ್ಷ್ವ ಯೇಭ್ಯಃ ಸ್ಪೃಹಯಸೇ ನೃಪ ॥೧॥

"ಪಿತಾಮಹನೇ! ಯಾರು ಈ ಪ್ರಪಂಚದಲ್ಲಿ ಪೂಜೆಗೆ ಮತ್ತು ನಮಸ್ಕಾರಕ್ಕೆ ಯೋಗ್ಯರಾಗಿದ್ದಾರೆ? ನೀನು ಯಾರನ್ನು ನಮಸ್ಕರಿಸುವೆ? ಯಾರಂತೆ ಆಗಬೇಕೆಂದು ಆಶಿಸುವೆ?–ಈ ಎಲ್ಲ ವಿಷಯಗಳನ್ನೂ ಹೇಳು.

ಉತ್ತಮಾಪದ್ಗತಸ್ಯಾಪಿ ಯತ್ರ ತೇ ವರ್ತತೇ ಮನಃ ।
ಮನುಷ್ಯಲೋಕೇ ಸರ್ವಸ್ಮಿನ್ಯದಮುತ್ರೇಹ ಚಾಪ್ಯುತ ॥೨॥

ಈಗ ನೀನು ದೊಡ್ಡದಾದ ಆಪತ್ತಿನಲ್ಲಿದ್ದರೂ ನಿನ್ನ ಮನಸ್ಸು ಯಾರನ್ನು ಕುರಿತು ಚಿಂತಿಸುತ್ತಿದೆ? ಸಮಸ್ತವಾದ ಮನುಷ್ಯಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಹಿತವನ್ನುಂಟುಮಾಡುವುದು ಯಾವುದು?"

ಭೀಷ್ಮನು ಹೇಳುತ್ತಾನೆ :

ಸ್ಪೃಹಯಾಮಿ ದ್ವಿಜಾತಿಭ್ಯೋ ಯೇಷಾಂ ಬ್ರಹ್ಮ ಪರಂ ಧನಮ್ ।
ಯೇಷಾಂ ಸ್ವಪ್ರತ್ಯಯಃ ಸ್ವರ್ಗಸ್ತಪಃ ಸ್ವಾಧ್ಯಾಯಸಾಧನಮ್ ॥೩॥

"ಯುಧಿಷ್ಠಿರ! ಯಾರಿಗೆ ವೇದವೇ ಶ್ರೇಷ್ಠವಾದ ಧನವಾಗಿರುವುದೋ, ಸ್ವರ್ಗವು ಸ್ವಾಧೀನವಾಗಿಯೇ ಇದೆಯೋ, ವೇದಾಧ್ಯಯನವೇ ಶ್ರೇಷ್ಠವಾದ ತಪಸ್ಸಾಗಿರುವುದೋ–ಅಂತಹ ಬ್ರಾಹ್ಮಣನಂತೆ ನಾನೂ ಆಗಲು ಆಶಿಸುತ್ತೇನೆ.

ಯೇಷಾಂ ಬಾಲಾಶ್ಚ ವೃದ್ಧಾಶ್ಚ ಪಿತೃಪೈತಾಮಹೀಂ ಧುರಮ್ ।
ಉದ್ವಹನ್ತಿ ನ ಸೀದನ್ತಿ ತೇಭ್ಯೋ ವೈ ಸ್ಪೃಹಯಾಮ್ಯಹಮ್ ॥೪॥

ಯಾವ ವಂಶದಲ್ಲಿ–ಬಾಲಕರು ಮೊದಲ್ಗೊಂಡು ವೃದ್ಧರ ಪರ್ಯಂತವಾಗಿ ತಾತ-ಮುತ್ತಾತಂದಿರ ಕಾಲದಿಂದಲೂ ನಡೆದು ಬಂದಿರುವ ಧರ್ಮಧುರವನ್ನು ಯಾರು ಹೊತ್ತಿರುವರೋ ಮತ್ತು ಅಷ್ಟು ಭಾರವನ್ನು ಹೊತ್ತರೂ ಯಾರು ಕುಸಿದುಹೋಗುವುದಿಲ್ಲವೋ –ಅಂತಹ ಬ್ರಾಹ್ಮಣರಂತೆ ನಾನೂ ಆಗಲು ಇಚ್ಛಿಸುತ್ತೇನೆ.

ವಿದ್ಯಾಸ್ವಭಿವಿನೀತಾನಾಂ ದಾನ್ತಾನಾಂ ಮೃದುಭಾಷಿಣಾಮ್ ।
ಶ್ರುತವೃತ್ತೋಪಪನ್ನಾನಾಂ ಸದಾಕ್ಷರವಿದಾಂ ಸತಾಮ್ ॥೫॥

ಸಂಸತ್ಸು ವದತಾಂ ತಾತ ಹಂಸಾನಾಮಿವ ಸಂಘಶಃ ।
ಮಙ್ಗಲ್ಯರೂಪಾ ರುಚಿರಾ ದಿವ್ಯಜೀಮೂತನಿಃಸ್ವನಾಃ ॥೬॥

ಸಮ್ಯಗುಚ್ಚರಿತಾ ವಾಚಃ ಶ್ರೂಯನ್ತೇ ಹಿ ಯುಧಿಷ್ಠಿರ ।
ಶುಶ್ರೂಷಮಾಣೇ ನೃಪತೌ ಪ್ರೇತ್ಯ ಚೇಹ ಸುಖಾವಹಾಃ ॥೭॥

ಯಾರು ವಿದ್ಯೆಗಳಲ್ಲಿ ಸುಶಿಕ್ಷಿತರಾಗಿ–ಇಂದ್ರಿಯಗಳನ್ನು ಸಂಯಮದಲ್ಲಿಟ್ಟುಕೊಂಡಿರುವರೋ, ಮೃದುವಾಗಿ ಮಾತನಾಡುವರೋ, ಶಾಸ್ತ್ರಜ್ಞಾನ-ಸದಾಚಾರಗಳಿಂದ ಸಂಪನ್ನರಾಗಿರುವರೋ, ಅವಿನಾಶಿಯಾದ ಪರಮಾತ್ಮನನ್ನು ತಿಳಿದಿರುವರೋ–ಅಂತಹ ಸತ್ಪುರುಷರಾದ ಬ್ರಾಹ್ಮಣರಂತೆ ನಾನೂ ಆಗಲು ಇಚ್ಛಿಸುತ್ತೇನೆ. ಯುಧಿಷ್ಠಿರ! ಸಭೆಗಳಲ್ಲಿ ಹಂಸಪಕ್ಷಿಗಳಂತೆ ಸಾಮೂಹಿಕವಾಗಿ ಮಾತನಾಡುವ, ದಿವ್ಯಮೇಘಧ್ವನಿಯಂತೆ ಗಂಭೀರವಾದ ಶಬ್ದದಿಂದ ಕೂಡಿರುವ, ಮಂಗಲರೂಪವಾದ, ಸೊಗಸಾದ, ಸುಸ್ಪಷ್ಟವಾಗಿ ಉಚ್ಚರಿಸಲ್ಪಡುವ ಬ್ರಾಹ್ಮಣವಿದ್ವಾಂಸರ ಮಾತುಗಳು ಕೇಳಿಬರುತ್ತವೆ. ಏಕಾಗ್ರತೆಯಿಂದ ಕೇಳುವ ರಾಜನಿಗೆ ಅಂತಹ ದಿವ್ಯವಾದ ವಾಕ್ಕುಗಳೇ ಇಹ-ಪರಗಳೆರಡರಲ್ಲಿಯೂ ಸುಖವನ್ನುಂಟುಮಾಡುತ್ತವೆ.

ಯೇ ಚಾಪಿ ತೇಷಾಂ ಶ್ರೋತಾರಃ ಸದಾ ಸದಸಿ ಸಮ್ಮತಾಃ ।
ವಿಜ್ಞಾನಗುಣಸಮ್ಪನ್ನಾಸ್ತೇಭ್ಯಶ್ಚ ಸ್ಪೃಹಯಾಮ್ಯಹಮ್ ॥೮॥

ಯಾರು ಪ್ರತಿದಿನವೂ ಅಂತಹ ಮಹಾತ್ಮರ ವಾಣಿಯನ್ನು ಕೇಳುವರೋ –ಅವರೂ ವಿಜ್ಞಾನಗುಣಸಂಪನ್ನರಾಗಿ ಸಭೆಗಳಲ್ಲಿ ಸಮ್ಮಾನಿತರಾಗುತ್ತಾರೆ. ಅಂತಹ ಬ್ರಾಹ್ಮಣರಂತೆ ನಾನೂ ಆಗಲು ಇಚ್ಛಿಸುತ್ತೇನೆ.

ಸುಸಂಸ್ಕೃತಾನಿ ಪ್ರಯತಾಃ ಶುಚೀನಿ ಗುಣವನ್ತಿ ಚ ।
ದದತ್ಯನ್ನಾನಿ ತೃಪ್ತ್ಯರ್ಥಂ ಬ್ರಾಹ್ಮಣೇಭ್ಯೋ ಯುಧಿಷ್ಠಿರ ।
ಯೇ ಚಾಪಿ ಸತತಂ ರಾಜಂಸ್ತೇಭ್ಯಶ್ಚ ಸ್ಪೃಹಯಾಮ್ಯಹಮ್ ॥೧೦॥

ಯಾರು ಪರಿಶುದ್ಧರಾಗಿ, ಬ್ರಾಹ್ಮಣರ ತೃಪ್ತ್ಯರ್ಥವಾಗಿ ಸುಸಂಸ್ಕೃತವಾದ (ಚೆನ್ನಾಗಿ ತಯಾರಿಸಿದ), ಶುದ್ಧವಾದ, ಷಡ್ರಸಗಳಿಂದ ಯುಕ್ತವಾದ ಅನ್ನವನ್ನು ಬಡಿಸುವರೋ–ಅವರಂತೆ ನಾನೂ ಆಗಲು ಇಚ್ಛಿಸುತ್ತೇನೆ.

ಶಕ್ಯಂ ಹ್ಯೇವಾಹವೇ ಯೋದ್ಧುಂ ನ ದಾತುಮನಸೂಯಿತಮ್ ।
ಶೂರಾ ವೀರಾಶ್ಚ ಶತಶಃ ಸನ್ತಿ ಲೋಕೇ ಯುಧಿಷ್ಠಿರ ।
ತೇಷಾಂ ಸಂಖ್ಯಾಯಮಾನಾನಾಂ ದಾನಶೂರೋ ವಿಶಿಷ್ಯತೇ ॥೧೧॥

ರಣಾಂಗಣದಲ್ಲಿ ಪ್ರಾಣದ ಹಂಗನ್ನೇ ತೊರೆದು ಯುದ್ಧಮಾಡ ಬಹುದು. ಆದರೆ ದೋಷದೃಷ್ಟಿಯಿಲ್ಲದೆ ದಾನಮಾಡುವುದು ಸುಲಭಸಾಧ್ಯ ವಲ್ಲ. ಪ್ರಪಂಚದಲ್ಲಿ ಶೂರರೂ, ವೀರರೂ ನೂರಾರು ಮಂದಿ ಇದ್ದಾರೆ. ಅವರ ಎಣಿಕೆಯನ್ನು ಮಾಡುವಾಗ ದಾನಶೂರರು ಇತರ ಎಲ್ಲ ಶೂರರಿಗಿಂತಲೂ ವಿಶಿಷ್ಟರಾಗಿರುತ್ತಾರೆ.

ಧನ್ಯಃ ಸ್ಯಾಂ ಯದ್ಯಹಂ ಭೂಯಃ ಸೌಮ್ಯ ಬ್ರಾಹ್ಮಣಕೋಽಪಿ ವಾ ।
ಕುಲೇ ಜಾತೋ ಧರ್ಮಗತಿಸ್ತಪೋವಿದ್ಯಾಪರಾಯಣಃ ॥೧೨॥

ಸೌಮ್ಯನೇ! ಒಂದು ವೇಳೆ ನಾನೇನಾದರೂ ಸತ್ಕುಲಪ್ರಸೂತನಾದ, ಧರ್ಮಾತ್ಮನಾದ, ತಪೋನಿರತನಾದ, ವಿದ್ಯಾಸಂಪನ್ನನಾದ ಬ್ರಾಹ್ಮಣನಾಗಿ ಮತ್ತೆ ಹುಟ್ಟಿದರೆ ಆಗ ಧನ್ಯನಾಗುತ್ತೇನೆ.

ನ ಮೇ ತ್ವತ್ತಃ ಪ್ರಿಯತರೋ ಲೋಕೇಽಸ್ಮಿನ್ಪಾಣ್ಡುನನ್ದನ ।
ತ್ವತ್ತಶ್ಚಾಪಿ ಪ್ರಿಯತರಾ ಬ್ರಾಹ್ಮಣಾ ಭರತರ್ಷಭ ॥೧೩॥

ಯುಧಿಷ್ಠಿರ! ಈ ಲೋಕದಲ್ಲಿ ನನಗೆ ನಿನಗಿಂತಲೂ ಪ್ರಿಯನಾದವನು ಯಾರೂ ಇಲ್ಲ. ಭರತಶ್ರೇಷ್ಠನೇ! ಆದರೆ ಬ್ರಾಹ್ಮಣರು ಮಾತ್ರ ನಿನಗಿಂತಲೂ ನನಗೆ ಪ್ರಿಯರಾಗಿರುತ್ತಾರೆ.

ಯಥಾ ಮಮ ಪ್ರಿಯತಮಾಸ್ತ್ವತ್ತೋ ವಿಪ್ರಾಃ ಕುರೂತ್ತಮ ।
ತೇನ ಸತ್ಯೇನ ಗಚ್ಛೇಯಂ ಲೋಕಾನ್ಯತ್ರ ಸ ಶಾನ್ತನುಃ ॥೧೪॥

ಕುರುಶ್ರೇಷ್ಠನೇ! 'ಬ್ರಾಹ್ಮಣರು ನನಗೆ ನಿನಗಿಂತಲೂ ಪ್ರಿಯತಮರು' –ಎಂಬ ಈ ಸತ್ಯವಚನದ ಪ್ರಭಾವದಿಂದಲೇ ನಾನು ನನ್ನ ತಂದೆಯಾದ ಶಾಂತನುವಿರುವ ಲೋಕಗಳಿಗೆ ಹೋಗುತ್ತೇನೆ.

ನ ಮೇ ಪಿತಾ ಪ್ರಿಯತರೋ ಬ್ರಾಹ್ಮಣೇಭ್ಯಸ್ತಥಾಭವತ್ ।
ನ ಮೇ ಪಿತುಃ ಪಿತಾ ಚಾಪಿ ಯೇ ಚಾನ್ಯೇಽಪಿ ಸುಹೃಜ್ಜನಾಃ ॥೧೫॥

ನನ್ನ ತಂದೆಯು ಕೂಡ ಬ್ರಾಹ್ಮಣರಿಗಿಂತಲೂ ನನಗೆ ಪ್ರಿಯತರನಾಗಿರಲಿಲ್ಲ. ಪಿತಾಮಹನಾಗಲೀ ಇತರ ಸುಹೃಜ್ಜನರಾಗಲೀ ನನಗೆ ಬ್ರಾಹ್ಮಣರಿಗಿಂತಲೂ ಪ್ರಿಯರಾಗಿರಲಿಲ್ಲ.

ನ ಹಿ ಮೇ ವೃಜಿನಂ ಕಿಂಚಿದ್ವಿದ್ಯತೇ ಬ್ರಾಹ್ಮಣೇಷ್ವಿಹ ।
ಅಣು ವಾ ಯದಿ ವಾ ಸ್ಥೂಲಂ ವಿದ್ಯತೇ ಸಾಧುಕರ್ಮಸು ॥೧೬॥

ಸತ್ಕರ್ಮನಿಷ್ಠರಾದ ಬ್ರಾಹ್ಮಣರ ವಿಷಯದಲ್ಲಿ ನನ್ನ ಮೂಲಕವಾಗಿ ಅಣುಮಾತ್ರವಾಗಲೀ –ದೊಡ್ಡದೇ ಆಗಲೀ ಯಾವ ಅಪರಾಧವೂ ಆಗಿರುವುದಿಲ್ಲ.

ಕರ್ಮಣಾ ಮನಸಾ ವಾಪಿ ವಾಚಾ ವಾಪಿ ಪರಂತಪ ।
ಯನ್ಮೇ ಕೃತಂ ಬ್ರಾಹ್ಮಣೇಭ್ಯಸ್ತೇನಾದ್ಯ ನ ತಪಾಮ್ಯಹಮ್ ॥೧೭॥

ಪರಂತಪನೇ! ನಾನು ಹಿಂದೆ ಮನಸ್ಸಿನಿಂದಲೂ, ಮಾತಿನಿಂದಲೂ, ಕರ್ಮದಿಂದಲೂ ಬ್ರಾಹ್ಮಣರಿಗೆ ಯಾವ ಅಲ್ಪ-ಸ್ವಲ್ಪ ಸೇವೆಯನ್ನು ಮಾಡಿರುವೆನೋ ಅದರ ಪ್ರಭಾವದಿಂದಲೇ ನಾನಿಂದು ಈ ಅವಸ್ಥೆಯಲ್ಲಿಯೂ ಸಂಕಟವನ್ನು ಅನುಭವಿಸುತ್ತಿಲ್ಲ.

ಬ್ರಹ್ಮಣ್ಯ ಇತಿ ಮಾಮಾಹುಸ್ತಯಾ ವಾಚಾಸ್ಮಿ ತೋಷಿತಃ ।
ಏತದೇವ ಪವಿತ್ರೇಭ್ಯಃ ಸರ್ವೇಭ್ಯಃ ಪರಮಂ ಸ್ಮೃತಮ್ ॥೧೮॥

ನನ್ನನ್ನು ಬ್ರಾಹ್ಮಣಪ್ರಿಯನೆಂದು ಕರೆಯುತ್ತಾರೆ. ಈ ಮಾತಿನಿಂದ

ನಾನು ಪರಮಸಂತುಷ್ಟನಾಗುತ್ತೇನೆ. ಬ್ರಾಹ್ಮಣಸೇವೆಯೇ ಎಲ್ಲ ವಿಧವಾದ ಪವಿತ್ರಕರ್ಮಗಳಿಗಿಂತಲೂ ಶ್ರೇಷ್ಠಕರ್ಮವೆಂದು ಹೇಳಲ್ಪಟ್ಟಿದೆ.

ಪಶ್ಯಾಮಿ ಲೋಕಾನಮಲಾಞ್ಛುಚೀನ್ಬ್ರಾಹ್ಮಣಯಾಯಿನಃ ।
ತೇಷು ಮೇ ತಾತ ಗನ್ತವ್ಯಮಹ್ನಾಯ ಚ ಚಿರಾಯ ಚ ॥೧೯॥

ಬ್ರಾಹ್ಮಣರ ಸೇವೆಯಲ್ಲಿಯೇ ನಿರತನಾಗಿರುವ ನನಗೆ ಯಾವ ಪವಿತ್ರವಾದ ಮತ್ತು ನಿರ್ಮಲವಾದ ಲೋಕಗಳು ಲಭಿಸುತ್ತವೆಯೆಂಬುದನ್ನು ನಾನು ಇಲ್ಲಿಂದಲೇ ನೋಡುತ್ತಿದ್ದೇನೆ. ಆ ಲೋಕಗಳಲ್ಲಿ ಚಿರಕಾಲವಿರಲು ನಾನು ಶೀಘ್ರವಾಗಿ ಅಲ್ಲಿಗೆ ಹೋಗಬೇಕಾಗಿದೆ.

ಯಥಾ ಭರ್ತಾಶ್ರಯೋ ಧರ್ಮಃ ಸ್ತ್ರೀಣಾಂ ಲೋಕೇ ಯುಧಿಷ್ಠಿರ ।
ಸ ದೇವಃ ಸಾ ಗತಿರ್ನಾನ್ಯಾ ಕ್ಷತ್ರಿಯಸ್ಯ ತಥಾ ದ್ವಿಜಾಃ ॥೨೦॥

ಲೋಕದಲ್ಲಿ ಸ್ತ್ರೀಯರಿಗೆ ಯಾವ ರೀತಿಯಲ್ಲಿ ಪತಿಯನ್ನೇ ಆಶ್ರಯಿಸಿ ಕೊಂಡಿರುವುದು ಪರಮಧರ್ಮವಾಗಿರುವುದೋ, ಪತಿಯೇ ದೇವನೂ ಮತ್ತು ಅನನ್ಯಶರಣ್ಯನೂ ಆಗಿರುವನೋ-ಅದೇ ರೀತಿಯಲ್ಲಿ ಕ್ಷತ್ರಿಯನಿಗೆ ಬ್ರಾಹ್ಮಣನನ್ನು ಆಶ್ರಯಿಸಿಕೊಂಡಿರುವುದೇ ಪರಮಧರ್ಮವಾಗಿದೆ. ಬ್ರಾಹ್ಮಣನೇ ಕ್ಷತ್ರಿಯನಿಗೆ ದೇವತೆಯೂ ಪರಮಾಶ್ರಯನೂ ಆಗಿದ್ದಾನೆ.

ಕ್ಷತ್ರಿಯಃ ಶತವರ್ಷೀ ಚ ದಶವರ್ಷೀ ದ್ವಿಜೋತ್ತಮಃ ।
ಪಿತಾಪುತ್ರೌ ಚ ವಿಜ್ಞೇಯೌ ತಯೋರ್ಹಿ ಬ್ರಾಹ್ಮಣಃ ಪಿತಾ ॥೨೧॥

ಕ್ಷತ್ರಿಯನು ನೂರು ವರ್ಷದವನಾಗಿರಲಿ, ಬ್ರಾಹ್ಮಣನು ಹತ್ತುವರ್ಷ ದವನಾಗಿರಲಿ –ಅವರಿಬ್ಬರನ್ನೂ ತಂದೆ-ಮಕ್ಕಳೆಂದೇ ಭಾವಿಸಬೇಕು. ಅವ ರಿಬ್ಬರಲ್ಲಿ ಬ್ರಾಹ್ಮಣನೇ ತಂದೆಯಾಗುತ್ತಾನೆ.

ನಾರೀ ತು ಪತ್ಯಭಾವೇ ವೈ ದೇವರಂ ಕುರುತೇ ಪತಿಮ್ ।
ಪೃಥಿವೀ ಬ್ರಾಹ್ಮಣಾಲಾಭೇ ಕ್ಷತ್ರಿಯಂ ಕುರುತೇ ಪತಿಮ್ ॥೨೨॥

ಯಾವ ರೀತಿಯಲ್ಲಿ ಸ್ತ್ರೀಯು ಪತಿಯಿಲ್ಲದಿದ್ದರೆ (ಮರಣಹೊಂದಿದರೆ) ದೇವರನನ್ನು (ಪತಿಯ ತಮ್ಮನನ್ನು) ಪತಿಯನ್ನಾಗಿ ವರಿಸುವಳೋ–ಅದೇ

ರೀತಿಯಲ್ಲಿ ಭೂದೇವಿಯು ಬ್ರಾಹ್ಮಣರಿಲ್ಲದಿದ್ದರೆ ಕ್ಷತ್ರಿಯನನ್ನು ಅಧಿಪತಿಯನ್ನಾಗಿ ಮಾಡಿಕೊಳ್ಳುತ್ತಾಳೆ. (ಮೈದುನನನ್ನು ಪತಿಯನ್ನಾಗಿ ವರಿಸುವ ಪದ್ಧತಿಯು ಕಲಿಯುಗದಲ್ಲಿ ನಿಷಿದ್ಧವೆಂದು ಧರ್ಮಶಾಸ್ತ್ರಗಳು ಹೇಳುತ್ತವೆ.)

ಪುತ್ರವಚ್ಚ ತತೋ ರಕ್ಷ್ಯಾ ಉಪಾಸ್ಯಾ ಗುರುವಚ್ಚ ತೇ ।
ಅಗ್ನಿವಚ್ಚೋಪಚರ್ಯಾ ವೈ ಬ್ರಾಹ್ಮಣಾಃ ಕುರುಸತ್ತಮ ॥೨೩॥

ಕುರುಶ್ರೇಷ್ಠನೇ! ಮಗನನ್ನು ರಕ್ಷಿಸುವಂತೆ–ಬ್ರಾಹ್ಮಣರನ್ನು ರಕ್ಷಿಸಬೇಕು. ಗುರುಗಳನ್ನು ಸೇವಿಸುವಂತೆ–ಬ್ರಾಹ್ಮಣರ ಸೇವೆಯನ್ನು ಮಾಡಬೇಕು. ಅಗ್ನಿಯನ್ನು ನಿಯತವಾದ ಕಾಲದಲ್ಲಿ ಹವನಾದಿಗಳಿಂದ ಪೂಜಿಸುವಂತೆ–ಬ್ರಾಹ್ಮಣರನ್ನು ನಿಯತವಾದ ಕಾಲಗಳಲ್ಲಿ ದಾನ, ದಕ್ಷಿಣೆ ಮತ್ತು ಭೋಜನಾದಿಗಳಿಂದ ರಕ್ಷಿಸಬೇಕು.

ಋಜೂನ್ಸತಃ ಸತ್ಯಶೀಲಾನ್ಸರ್ವಭೂತಹಿತೇ ರತಾನ್ ।
ಆಶೀವಿಷಾನಿವ ಕ್ರುದ್ಧಾನ್ದ್ವಿಜಾನ್ಪರಿಚರೇತ್ಸದಾ ॥೨೪॥

ಸರಳಸ್ವಭಾವದವರಾದ, ಸತ್ಪುರುಷರಾದ, ಸತ್ಯನಿಷ್ಠರಾದ, ಸರ್ವ ಪ್ರಾಣಿಗಳ ಹಿತದಲ್ಲಿಯೂ ಆಸಕ್ತರಾದ, ಸರ್ಪಗಳಂತೆ ಸಮಯಗಳಲ್ಲಿ ಸರ್ವರ ಹಿತಕ್ಕಾಗಿಯೇ ಕೋಪಗೊಳ್ಳುವ ಬ್ರಾಹ್ಮಣರನ್ನು ಸದಾ ಎಚ್ಚರಿಕೆಯಿಂದ ಸೇವಿಸಬೇಕು.

ತೇಜಸಸ್ತಪಸಶ್ಚೈವ ನಿತ್ಯಂ ಬಿಭ್ಯೇದ್ಯುಧಿಷ್ಠಿರ ।
ಉಭೇ ಚೈತೇ ಪರಿತ್ಯಾಜ್ಯೇ ತೇಜಶ್ಚೈವ ತಪಸ್ತಥಾ ॥೨೫॥

ಬ್ರಾಹ್ಮಣನ ತೇಜಸ್ಸಿಗೂ (ಆತ್ಮಬಲಕ್ಕೂ) ಮತ್ತು ತಪಸ್ಸಿಗೂ ಸದಾ ಭಯಪಟ್ಟುಕೊಂಡೇ ಇರಬೇಕು. ಬ್ರಾಹ್ಮಣನ ತಪಸ್ಸಿನಿಂದಲೂ, ತೇಜಸ್ಸಿನಿಂದಲೂ ದೂರವಿರಬೇಕು.

ವ್ಯವಸಾಯಸ್ತಯೋಃ ಶೀಘ್ರಮುಭಯೋರೇವ ವಿದ್ಯತೇ ।
ಹನ್ಯುಃ ಕ್ರುದ್ಧಾ ಮಹಾರಾಜ ಬ್ರಾಹ್ಮಣಾ ಯೇ ತಪಸ್ವಿನಃ ॥೨೬॥

ಬ್ರಾಹ್ಮಣನ ತಪಸ್ಸು ಮತ್ತು ತೇಜಸ್ಸುಗಳ (ಆತ್ಮಬಲಗಳ) ಫಲವು ಬಹಳ ತೀವ್ರವಾಗಿಯೇ ಇರುತ್ತದೆ. ತಪಸ್ವಿಗಳಾದ ಬ್ರಾಹ್ಮಣರು ಕೋಪ

ಗೊಂಡರೆಂದರೆ–ತಪಸ್ಸಿನ ಪ್ರಭಾವದಿಂದ ಯಾರನ್ನಾದರೂ ಸಂಹಾರ ಮಾಡಬಲ್ಲರು.

ಭೂಯಃ ಸ್ಯಾದುಭಯಂ ದತ್ತಂ ಬ್ರಾಹ್ಮಣಾದ್ಯದಕೋಪನಾತ್ ।
ಕುರ್ಯಾದುಭಯತಃ ಶೇಷಂ ದತ್ತಶೇಷಂ ನ ಶೇಷಯೇತ್ ॥೨೭॥

ಕೋಪರಹಿತನಾದ ಬ್ರಾಹ್ಮಣನೇನಾದರೂ ತನ್ನ ತಪಸ್ಸು ಮತ್ತು ತೇಜಸ್ಸುಗಳನ್ನು ಇತರರಲ್ಲಿ ಪ್ರಯೋಗಿಸಿದರೆ–ಅವು ಸಹಿಸಲಾರದಷ್ಟು ತೀವ್ರವಾಗಿಬಿಡುತ್ತವೆ. ಆದುದರಿಂದ ಅವೆರಡೂ ಅವನಲ್ಲಿಯೇ ಉಳಿಯು ವಂತೆ ಮಾಡಬೇಕು. ಅವನು ಅವುಗಳನ್ನು ಇತರರ ಮೇಲೆ ಪ್ರಯೋಗಿಸಿ ಬಿಟ್ಟಿದ್ದರೆ (ಅವನನ್ನು ಪ್ರಸನ್ನಗೊಳಿಸಿ) ಅವು ಸ್ವಲ್ಪವೂ ಉಳಿಯದಂತೆ ಕಳೆದುಕೊಂಡುಬಿಡಬೇಕು.

ದಣ್ಡಪಾಣಿರ್ಯಥಾ ಗೋಷು ಪಾಲೋ ನಿತ್ಯಂ ಹಿ ರಕ್ಷಯೇತ್ ।
ಬ್ರಾಹ್ಮಣಾನ್ಬ್ರಹ್ಮ ಚ ತಥಾ ಕ್ಷತ್ರಿಯಃ ಪರಿಪಾಲಯೇತ್ ॥೨೮॥

ಯಾವ ರೀತಿಯಲ್ಲಿ ಗೋಪಾಲನು ಕೈಯ್ಯಲ್ಲಿ ಕೋಲನ್ನು ಹಿಡಿದು ಗೋವುಗಳನ್ನು ರಕ್ಷಿಸುವನೋ–ಅದೇ ರೀತಿಯಲ್ಲಿ ಕ್ಷತ್ರಿಯನು ರಾಜ ದಂಡವನ್ನು ಹಿಡಿದು ಬ್ರಾಹ್ಮಣರನ್ನೂ ಮತ್ತು ವೇದವನ್ನೂ ಧೂರ್ತರಿಂದ ರಕ್ಷಿಸಬೇಕು.

ಪಿತೇವ ಪುತ್ರಾನ್ರಕ್ಷೇಥಾ ಬ್ರಾಹ್ಮಣಾನ್ಧರ್ಮಚೇತಸಃ ।
ಗೃಹೇ ಚೈಷಾಮವೇಕ್ಷೇಥಾಃ ಕಿಂಸ್ವದಸ್ತೀತಿ ಜೀವನಮ್ ॥೨೯॥

ಯುಧಿಷ್ಠಿರ! ನೀನು ಧರ್ಮಾತ್ಮರಾದ ಬ್ರಾಹ್ಮಣರನ್ನು–ತಂದೆಯು ಮಗನನ್ನು ರಕ್ಷಿಸುವಂತೆ–ರಕ್ಷಿಸು. ಯಾವಾಗಲೂ ಬ್ರಾಹ್ಮಣರ ಮನೆಯಲ್ಲಿ ಜೀವನನಿರ್ವಹಣೆಗೆ ಸಾಕಾಗುವಷ್ಟು ಜೀವನಾವಶ್ಯಕಪದಾರ್ಥಗಳು ಇವೆಯೋ ಎಂಬುದನ್ನು ಪರಿಶೀಲಿಸುತ್ತಿರು.”

ಆನೆಯ ಅಧ್ಯಾಯವು ಮುಗಿಯಿತು.

ಬ್ರಾಹ್ಮಣನಿಗೆ ವಾಗ್ದಾನಮಾಡಿ ತಪ್ಪಿದರೆ ಆಗುವ ಪರಿಣಾಮದ ವಿಷಯವಾಗಿ ನರಿಗೂ ಮತ್ತು ಕಪಿಗೂ ನಡೆದ ಸಂವಾದ : ಬ್ರಾಹ್ಮಣರಿಗೆ ದಾನಮಾಡುವುದರ ಮಹಿಮೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಬ್ರಾಹ್ಮಣಾನಾಂ ತು ಯೇ ಲೋಕಾಃ ಪ್ರತಿಶ್ರುತ್ಯ ಪಿತಾಮಹ ।
ನ ಪ್ರಯಚ್ಛನ್ತಿ ಮೋಹಾತ್ತೇ ಕೇ ಭವನ್ತಿ ಮಹಾದ್ಯುತೇ ॥೧॥

ಏತನ್ಮೇ ತತ್ತ್ವತೋ ಬ್ರೂಹಿ ಧರ್ಮಂ ಧರ್ಮಭೃತಾಂ ವರ ।
ಪ್ರತಿಶ್ರುತ್ಯ ದುರಾತ್ಮಾನೋ ನ ಪ್ರಯಚ್ಛನ್ತಿ ಯೇ ನರಾಃ ॥೨॥

“ಧರ್ಮಾತ್ಮರಲ್ಲಿ ಶ್ರೇಷ್ಠನಾದವನೇ! ಮಹಾದ್ಯುತಿಮಂತನೇ! ಪಿತಾಮಹನೇ! ಯಾರು ಬ್ರಾಹ್ಮಣರಿಗೆ ದಾನವನ್ನು ಕೊಡುವುದಾಗಿ ಪ್ರತಿಜ್ಞೆ ಮಾಡಿ ಅನಂತರ ಮೋಹವಶರಾಗಿ ದಾನಕೊಡುವುದಿಲ್ಲವೋ–ಅವರು ಏನಾಗುತ್ತಾರೆ? ಯಾವ ದುರಾತ್ಮರಾದ ಮನುಷ್ಯರು ದಾನಮಾಡುವುದಾಗಿ ಸಂಕಲ್ಪಮಾಡಿಯೂ ದಾನಕೊಡುವುದಿಲ್ಲವೋ–ಅಂತಹವರಿಗೆ ಯಾವ ನರಕಲೋಕಗಳು ಲಭಿಸುತ್ತವೆ?–ಈ ವಿಷಯವನ್ನು ನನಗೆ ಯಥಾವತ್ತಾಗಿ ಹೇಳು.”

ಭೀಷ್ಮನು ಹೇಳುತ್ತಾನೆ :

ಯೋ ನ ದದ್ಯಾತ್ಪ್ರತಿಶ್ರುತ್ಯ ಸ್ವಲ್ಪಂ ವಾ ಯದಿ ವಾ ಬಹು ।
ಆಶಾಸ್ತಸ್ಯ ಹತಾಃ ಸರ್ವಾಃ ಕ್ಲೀಬಸ್ಯೇವ ಪ್ರಜಾಫಲಮ್ ॥೩॥

“ಧರ್ಮಜ! ಯಾವನು ಸ್ವಲ್ಪವನ್ನಾಗಲೀ ಅಥವಾ ಅಧಿಕವನ್ನಾಗಲೀ–ದಾನಕೊಡುವೆನೆಂದು ಪ್ರತಿಜ್ಞೆಮಾಡಿ ಕೊಡುವುದಿಲ್ಲವೋ–ಅಂತಹವನ ಆಶೆಗಳೆಲ್ಲವೂ ನಪುಂಸಕನಿಗೆ ಸಂತಾನದ ಆಶೆಯಂತೆ–ನಿಷ್ಫಲವಾಗುತ್ತವೆ.

ಯಾಂ ರಾತ್ರಿಂ ಜಾಯತೇ ಜೀವೋ ಯಾಂ ರಾತ್ರಿಂ ಚ ವಿನಶ್ಯತಿ ।
ಏತಸ್ಮಿನ್ನನ್ತರೇ ಯದ್ಯತ್ಸುಕೃತಂ ತಸ್ಯ ಭಾರತ ॥೪॥

ಯಚ್ಚ ತಸ್ಯ ಹುತಂ ಕಿಂಚಿದ್ದತ್ತಂ ವಾ ಭರತರ್ಷಭ ।
ತಪಸ್ತಪ್ತಮಥೋ ವಾಪಿ ಸರ್ವಂ ತಸ್ಯೋಪಹನ್ಯತೇ ॥೫॥

ಪ್ರತಿಜ್ಞಾಭಂಗಮಾಡಿದವನು ಹುಟ್ಟಿದ ರಾತ್ರಿಯು ಮೊದಲ್ಗೊಂಡು ಅವಸಾನಹೊಂದುವ ರಾತ್ರಿಯವರೆಗೆ ಮಾಡಿದ ಪುಣ್ಯಫಲಗಳು, ಅಗ್ನಿಯಲ್ಲಿ ಹೋಮಮಾಡಿದ ಫಲಗಳು, ಮಾಡಿದ ಅನೇಕಸತ್ಕಾರ್ಯಗಳ ಫಲಗಳು, ಹೋಮ-ದಾನ-ತಪಸ್ಸುಗಳ ಫಲಗಳು–ಇವೆಲ್ಲವೂ ನಷ್ಟವಾಗಿ ಹೋಗುತ್ತವೆ.

ಅಶ್ವಾನಾಂ ಶ್ಯಾಮಕರ್ಣಾನಾಂ ಸಹಸ್ರೇಣ ಸ ಮುಚ್ಯತೇ ॥೭॥

ಶ್ಯಾಮಲವರ್ಣದ ಕಿವಿಗಳುಳ್ಳ ಒಂದು ಸಾವಿರ ಕುದುರೆಗಳನ್ನು ದಾನ ಮಾಡುವುದರಿಂದ ಮನುಷ್ಯನು ಪ್ರತಿಜ್ಞಾಭಂಗದಿಂದ ಪ್ರಾಪ್ತವಾಗುವ ಪಾಪ ದಿಂದ ವಿಮುಕ್ತನಾಗುತ್ತಾನೆ–ಎಂಬ ಈ ವಚನವನ್ನು ಧರ್ಮಶಾಸ್ತ್ರಜ್ಞರು ತಮ್ಮ ಯೋಗಯುಕ್ತವಾದ ಬುದ್ಧಿಯಿಂದ ವಿಮರ್ಶಿಸಿ ಹೇಳಿರುತ್ತಾರೆ.

ಈ ವಿಷಯದಲ್ಲಿ ಹಿಂದೆ ನರಿಗೂ ಮತ್ತು ಕಪಿಗೂ ನಡೆದ ಇತಿಹಾಸ ರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ನಿನಗೂ ತಿಳಿಸುವೆನು ; ಕೇಳು :

ಪರಂತಪನೇ! ಹಿಂದೆ ಮನುಷ್ಯಜನ್ಮದಲ್ಲಿದ್ದಾಗ ಪರಸ್ಪರಮಿತ್ರರಾಗಿದ್ದ ಇಬ್ಬರು ಮತ್ತೊಂದು ಜನ್ಮದಲ್ಲಿ ತಿರ್ಯಗ್ಜಂತುಗಳಾಗಿ ಹುಟ್ಟಿದರು. ಅವರಲ್ಲಿ ಒಬ್ಬನು ನರಿಯ ಜನ್ಮವನ್ನೂ ಮತ್ತೊಬ್ಬನು ಕಪಿಯ ಜನ್ಮವನ್ನೂ ಪಡೆದಿದ್ದನು. ದೈವವಶದಿಂದ ಆ ಎರಡು ಪ್ರಾಣಿಗಳೂ ಒಂದು ಶ್ಮಶಾನಭೂಮಿಯಲ್ಲಿ ಸಂಧಿಸಿದುವು. ಆ ಸಮಯದಲ್ಲಿ ನರಿಯು ಶ್ಮಶಾನದ ಮಧ್ಯದಲ್ಲಿ ಹೆಣಗಳನ್ನು ಕಿತ್ತು ತಿನ್ನುತ್ತಿದ್ದಿತು. ಅದನ್ನು ನೋಡಿದ ಕಪಿಯು ಪೂರ್ವಜನ್ಮವನ್ನು ಸ್ಮರಿಸಿಕೊಂಡು ನರಿಯನ್ನು ಕೇಳಿತು :

ಕಿಂ ತ್ವಯಾ ಪಾಪಕಂ ಪೂರ್ವಂ ಕೃತಂ ಕರ್ಮ ಸುದಾರುಣಮ್ ।
ಯಸ್ತ್ವಂ ಶ್ಮಶಾನೇ ಮೃತಕಾನ್ಪೂತಿಕಾನತ್ಸಿ ಕುತ್ಸಿತಾನ್ ॥೧೧॥

“ಮಿತ್ರನೇ! ನೀನೀಗ ಈ ಶ್ಮಶಾನದಲ್ಲಿ ಕುತ್ಸಿತವಾದ (ಕೊಳೆತು ಹೋದ) ದುರ್ಗಂಧಯುಕ್ತವಾದ ಹೆಣಗಳನ್ನು ಕಿತ್ತುತಿನ್ನುತ್ತಿರುವೆ.

ಇಂತಹ ಪಾಪಿಷ್ಠವಾದ ಜನ್ಮವನ್ನು ತಾಳಲು ನೀನು ಹಿಂದಿನ ಜನ್ಮದಲ್ಲಿ ದಾರುಣವಾದ ಯಾವ ಪಾಪಕಾರ್ಯವನ್ನು ಮಾಡಿದ್ದೆ?"

ಹೀಗೆ ಪ್ರಶ್ನಿಸಿದ ಕಪಿಗೆ ನರಿಯು ಪ್ರತ್ಯುತ್ತರಿಸಿತು :

ಬ್ರಾಹ್ಮಣಸ್ಯ ಪ್ರತಿಶ್ರುತ್ಯ ನ ಮಯಾ ತದುಪಾಹೃತಮ್ ।
ತತ್ಕೃತೇ ಪಾಪಕೀಂ ಯೋನಿಮಾಪನ್ನೋಽಸ್ಮಿ ಪ್ಲವಙ್ಗಮ ।
ತಸ್ಮಾದೇವಂವಿಧಂ ಭಕ್ಷ್ಯಂ ಭಕ್ಷಯಾಮಿ ಬುಭುಕ್ಷಿತಃ ॥೧೩॥

"ಬ್ರಾಹ್ಮಣನಿಗೆ ದಾನಕೊಡುವೆನೆಂದು ಪ್ರತಿಜ್ಞೆಮಾಡಿ ಅವನಿಗೆ ಕೊಡಬೇಕಾಗಿದ್ದ ದಾನವನ್ನು ಕೊಡಲಿಲ್ಲ. ಕಪಿಶ್ರೇಷ್ಠನೇ! ಈ ಕಾರಣದಿಂದಾಗಿ

ನಾನು ಈ ಪಾಪಯೋನಿಯನ್ನು ಪಡೆದಿರುತ್ತೇನೆ. ಹಸಿವಿನಿಂದ ಪೀಡಿತನಾಗಿ ನಾನು ಈ ವಿಧವಾದ ಆಹಾರವನ್ನು ತಿನ್ನುತ್ತಿದ್ದೇನೆ.”

ಕಪಿಗೆ ಹೀಗೆ ಉತ್ತರವನ್ನಿತ್ತು ನರಿಯು ವಾನರನನ್ನು ಪ್ರಶ್ನಿಸಿತು :

“ಮಿತ್ರನೇ! ಈ ವಾನರಜನ್ಮವನ್ನು ತಾಳಲು ಹಿಂದಿನ ಜನ್ಮದಲ್ಲಿ ನೀನು ಯಾವ ಪಾಪವನ್ನು ಮಾಡಿದ್ದೆ?”

ಕಪಿಯು ಉತ್ತರಿಸಿತು :

ಸದಾ ಚಾಹಂ ಫಲಾಹಾರೋ ಬ್ರಾಹ್ಮಣಾನಾಂ ಪ್ಲವಙ್ಗಮಃ ।
ತಸ್ಮಾನ್ನ ಬ್ರಾಹ್ಮಣಸ್ವಂ ತು ಹರ್ತವ್ಯಂ ವಿದುಷಾ ಸದಾ ।
ಸಮಂ ವಿವಾದೋ ಮೋಕ್ತವ್ಯೋ ದಾತವ್ಯಂ ಚ ಪ್ರತಿಶ್ರುತಮ್ ॥

“ಶೃಗಾಲನೇ! ನಾನು ಯಾವಾಗಲೂ ಬ್ರಾಹ್ಮಣರಿಗೆ ಸೇರಿದ ಫಲಗಳನ್ನು ಕದ್ದು ತಿನ್ನುತ್ತಿದ್ದೆನು. ಆ ಪಾಪದ ಕಾರಣದಿಂದಲೇ ನಾನು ವಾನರನಾದೆನು. ಆದುದರಿಂದ ತಿಳಿದವರು ಯಾವಾಗಲೂ ಬ್ರಾಹ್ಮಣರ ಸ್ವತ್ತನ್ನು ಅಪಹರಿಸಬಾರದು. ಅವರೊಡನೆ ವಿವಾದವನ್ನು ಮಾಡಬಾರದು. ದಾನವನ್ನು ಕೊಡುವುದಾಗಿ ಪ್ರತಿಜ್ಞೆಮಾಡಿದುದನ್ನು ಕೊಟ್ಟುಬಿಡಬೇಕು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಹಿಂದಿನಕಾಲದ ಪುಣ್ಯಕರವಾದ ಕಥೆಗಳನ್ನು ಹೇಳುತ್ತಿದ್ದ ಧರ್ಮಜ್ಞನಾದ ಬ್ರಾಹ್ಮಣನಿಂದ ಈ ಕಥೆಯನ್ನು ನಾನು ಕೇಳಿದೆನು. ಅಲ್ಲದೇ ಇದೇ ಕಥೆಯನ್ನೇ ಶ್ರೀಕೃಷ್ಣನು ಒಮ್ಮೆ ಬ್ರಾಹ್ಮಣನೊಬ್ಬನಿಗೆ ಹೇಳುತ್ತಿದ್ದಾಗಲೂ ಕೇಳಿದೆನು.

ನ ಹರ್ತವ್ಯಂ ವಿಪ್ರಧನಂ ಕ್ಷನ್ತವ್ಯಂ ತೇಷು ನಿತ್ಯಶಃ ।
ಬಾಲಾಶ್ಚ ನಾವಮನ್ತವ್ಯಾ ದರಿದ್ರಾಃ ಕೃಪಣಾ ಅಪಿ ॥೧೮॥

ಬ್ರಾಹ್ಮಣರ ಸ್ವತ್ತನ್ನು ಯಾವುದೇ ಕಾರಣದಿಂದಲೂ ಅಪಹರಿಸ ಬಾರದು. ಅವರು ಅಪರಾಧವನ್ನೆಸಗಿದರೂ ಅವರ ವಿಷಯದಲ್ಲಿ ಸದಾ ಕ್ಷಮಾಭಾವದಿಂದಲೇ ಇರಬೇಕು. ಬಾಲಕರಾಗಿದ್ದರೂ, ದರಿದ್ರರಾಗಿದ್ದರೂ,

ದೀನರಾಗಿದ್ದರೂ–ಅವರನ್ನು ಅನಾದರಣೆಮಾಡಬಾರದು. ಬ್ರಾಹ್ಮಣರು ನನಗೆ ಅನುದಿನವೂ ಇದನ್ನೇ ಉಪದೇಶಿಸುತ್ತಿದ್ದರು.

ಪ್ರತಿಶ್ರುತ್ಯ ಭವೇದ್ದೇಯಂ ನಾಶಾ ಕಾರ್ಯಾ ದ್ವಿಜೋತ್ತಮೇ ॥೧೯॥

ಬ್ರಾಹ್ಮಣನಿಗೆ ದಾನಕೊಡಲು ಒಪ್ಪಿದನಂತರ ಕೊಡಲೇಬೇಕಾಗುತ್ತದೆ. ಬ್ರಾಹ್ಮಣನಿಗೆ ಆಶೆಯನ್ನೆಂದಿಗೂ ಹುಟ್ಟಿಸಬಾರದು.

ಬ್ರಾಹ್ಮಣೋ ಹ್ಯಾಶಯಾ ಪೂರ್ವಂ ಕೃತಯಾ ಪೃಥಿವೀಪತೇ ।
ಸುಸಮಿದ್ಧೋ ಯಥಾ ದೀಪ್ತಃ ಪಾವಕಸ್ತದ್ವಿಧಃ ಸ್ಮೃತಃ ॥೨೦॥

ಪೃಥ್ವೀನಾಥನೇ! ಹಿಂದೆ ಹುಟ್ಟಿಸಿದ್ದ ಆಶೆಯಿಂದ ಬ್ರಾಹ್ಮಣನು–ಕಾಷ್ಠಗಳಿಂದ ಪ್ರಜ್ವಲಿತನಾದ ಯಜ್ಞೇಶ್ವರನಂತೆ ಉದ್ದೀಪ್ತನಾಗುತ್ತಾನೆ.

ಯಂ ನಿರೀಕ್ಷೇತ ಸಂಕ್ರುದ್ಧ ಆಶಯಾ ಪೂರ್ವಜಾತಯಾ ।
ಪ್ರದಹೇಚ್ಚ ಹಿ ತಂ ರಾಜನ್ಕಕ್ಷಮಕ್ಷಯ್ಯಭುಗ್ಯಥಾ ॥೨೧॥

ಹಿಂದೆ ಹುಟ್ಟಿದ ಆಶೆಯು ಪೂರ್ಣವಾಗದೇ ಹಾಗೆಯೇ ಆ ಬ್ರಾಹ್ಮಣನ ಮನಸ್ಸಿನಲ್ಲಿ ಆ ಆಶೆಯು ಉಳಿದಿದ್ದ ಪಕ್ಷದಲ್ಲಿ ಅದರಿಂದ ಪರಮಕ್ರುದ್ಧನಾಗುವ ಅವನು ತನಗೆ ಆ ಆಶೆಯನ್ನು ಹುಟ್ಟಿಸಿದ ಯಾವನನ್ನು ದಿಟ್ಟಿಸಿ ನೋಡುವನೋ, ಅವನನ್ನು ಕೇವಲ ದೃಷ್ಟಿಪಾತದಿಂದಲೇ–ಅಕ್ಷಯ ಭೋಜಿಯಾದ (ಎಷ್ಟು ತಿಂದರೂ ತೃಪ್ತಿಗೊಳ್ಳದ) ಅಗ್ನಿಯು ಹುಲ್ಲಿನ ಮೆದೆಯನ್ನು ಕ್ಷಣಮಾತ್ರದಲ್ಲಿ ಸುಟ್ಟುಹಾಕುವಂತೆ–ಭಸ್ಮಮಾಡಬಲ್ಲನು.

ಸ ಏವ ಹಿ ಯದಾ ತುಷ್ಟೋ ವಚಸಾ ಪ್ರತಿನನ್ದತಿ ।
ಭವತ್ಯಗದಸಂಕಾಶೋ ವಿಷಯೇ ತಸ್ಯ ಭಾರತ ॥೨೨॥

ಅದೇ ಬ್ರಾಹ್ಮಣನು ತನ್ನ ಆಶೆಯನ್ನು ಪೂರ್ಣಮಾಡಿಕೊಂಡು ಸಂತುಷ್ಟನಾದನೆಂದರೆ–ಆಗ ಅವನು ಒಳ್ಳೆಯಮಾತಿನಿಂದ ರಾಜನನ್ನು ಅಭಿನಂದಿಸುತ್ತಾನೆ. ಆ ರಾಜನ ರಾಜ್ಯದಲ್ಲಿ ಚಿಕಿತ್ಸಕನಂತೆಯೇ ಎಲ್ಲರ ಹಿತದಲ್ಲಿಯೂ ಆಸಕ್ತನಾಗುತ್ತಾನೆ.

ಪುತ್ರಾನ್ಪೌತ್ರಾನ್ಪಶೂಂಶ್ಚೈವ ಬಾನ್ಧವಾನ್ಸಚಿವಾಂಸ್ತಥಾ ।
ಪುರಂ ಜನಪದಂ ಚೈವ ಶಾನ್ತಿರಿಷ್ಟೇನ ಪೋಷಯೇತ್ ॥೨೩॥

ಸಂತುಷ್ಟನಾದ ಬ್ರಾಹ್ಮಣನು–ದಾನಿಯನ್ನೂ, ಅವನ ಮಕ್ಕಳು-ಮೊಮ್ಮಕ್ಕಳನ್ನೂ, ಪಶುಗಳನ್ನೂ, ಬಂಧುಗಳನ್ನೂ, ಸಚಿವರನ್ನೂ, ಪಟ್ಟಣವನ್ನೂ, ದೇಶವನ್ನೂ–ಶಾಂತಿಯಿಂದಲೂ ಕ್ಷೇಮದಿಂದಲೂ ಪಾಲಿಸಬಲ್ಲನು.

ಏತದ್ಧಿ ಪರಮಂ ತೇಜೋ ಬ್ರಾಹ್ಮಣಸ್ಯೇಹ ದೃಶ್ಯತೇ ।
ಸಹಸ್ರಕಿರಣಸ್ಯೇವ ಸವಿತುರ್ಧರಣೀತಲೇ ॥೨೪॥

ಈ ರೀತಿಯಲ್ಲಿ–ಸಹಸ್ರಕಿರಣನಾದ ಸೂರ್ಯನ ತೇಜಸ್ಸಿನಂತೆ ಬ್ರಾಹ್ಮಣನ ಪರಮಶ್ರೇಷ್ಠವಾದ ತೇಜಸ್ಸು ಭೂಮಿಯಲ್ಲಿ ಕಂಗೊಳಿಸುತ್ತದೆ.

ತಸ್ಮಾದ್ದಾತವ್ಯಮೇವೇಹ ಪ್ರತಿಶ್ರುತ್ಯ ಯುಧಿಷ್ಠಿರ ।
ಯದೀಚ್ಛೇಚ್ಛೋಭನಾಂ ಜಾತಿಂ ಪ್ರಾಪ್ತುಂ ಭರತಸತ್ತಮ ॥೨೫॥

ಉತ್ತಮಯೋನಿಯಲ್ಲಿ ಜನ್ಮವನ್ನು ಪಡೆಯಲು ಇಚ್ಛಿಸುವುದಾದರೆ–ಬ್ರಾಹ್ಮಣನಿಗೆ ದಾನಕೊಡುವುದಾಗಿ ಪ್ರತಿಜ್ಞೆಯನ್ನು ಮಾಡಿದನಂತರ ಅದನ್ನು ಕೊಟ್ಟೇತೀರಬೇಕು.

ಬ್ರಾಹ್ಮಣಸ್ಯ ಹಿ ದತ್ತೇನ ಧ್ರುವಂ ಸ್ವರ್ಗೋ ಹ್ಯನುತ್ತಮಃ ।
ಶಕ್ಯಃ ಪ್ರಾಪ್ತುಂ ವಿಶೇಷೇಣ ದಾನಂ ಹಿ ಮಹತೀ ಕ್ರಿಯಾ ॥೨೬॥

ಬ್ರಾಹ್ಮಣನಿಗೆ ದಾನಕೊಡುವುದರಿಂದ ಸರ್ವಶ್ರೇಷ್ಠವಾದ ಸ್ವರ್ಗವನ್ನು ವಿಶೇಷರೀತಿಯಲ್ಲಿ ಪಡೆಯಲು ಸಾಧ್ಯವಾಗುತ್ತದೆ. ದಾನವೆಂಬುದು ಮಹಾ ಪುಣ್ಯಕರ್ಮವಾಗಿದೆ.

ಇತೋ ದತ್ತೇನ ಜೀವನ್ತಿ ದೇವತಾಃ ಪಿತರಸ್ತಥಾ ।
ತಸ್ಮಾದ್ದಾನಾನಿ ದೇಯಾನಿ ಬ್ರಾಹ್ಮಣೇಭ್ಯೋ ವಿಜಾನತಾ ॥೨೭॥

ಈ ಲೋಕದಲ್ಲಿ ಬ್ರಾಹ್ಮಣರಿಗೆ ದಾನಕೊಡುವುದರಿಂದಲೇ ದೇವತೆಗಳೂ ಮತ್ತು ಪಿತೃಗಳೂ ಜೀವಿಸುತ್ತಾರೆ. ಆದುದರಿಂದ ವಿದ್ವಾಂಸರು ಬ್ರಾಹ್ಮಣರಿಗೆ ದಾನಗಳನ್ನು ಕೊಡಬೇಕು.

ಮಹದ್ಧಿ ಭರತಶ್ರೇಷ್ಠ ಬ್ರಾಹ್ಮಣಸ್ತೀರ್ಥಮುಚ್ಯತೇ ।
ವೇಲಾಯಾಂ ನ ತು ಕಸ್ಯಾಂಚಿದ್ಗಚ್ಛೇದ್ವಿಪ್ರೋ ಹ್ಯಪೂಜಿತಃ ॥೨೮॥

ಭರತಶ್ರೇಷ್ಠನೇ! ಬ್ರಾಹ್ಮಣನನ್ನೇ ಮಹಾತೀರ್ಥವೆಂದೂ ಹೇಳುತ್ತಾರೆ. ಆದುದರಿಂದ ಬ್ರಾಹ್ಮಣನು ಯಾವುದೇ ಸಮಯದಲ್ಲಿ ಆಗಮಿಸಿದರೂ ಸತ್ಕೃತನಾಗದೇ ಹಿಂತಿರುಗಿ ಹೋಗಬಾರದು.”

೯ನೆಯ ಅಧ್ಯಾಯವು ಮುಗಿಯಿತು.

೧೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಅನಧಿಕಾರಿಗೆ ಮಾಡುವ ಉಪದೇಶದ ಹಾನಿಯ ವಿಷಯವಾಗಿ ಶೂದ್ರನ ಮತ್ತು ತಪಸ್ವಿಯಾದ ಬ್ರಾಹ್ಮಣನ ಕಥೆ

ಜನಮೇಜಯ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಮಿತ್ರಸೌಹಾರ್ದಯೋಗೇನ ಉಪದೇಶಂ ಕರೋತಿ ಯಃ ।
ಜಾತ್ಯಾಧರಸ್ಯ ರಾಜರ್ಷೇ ದೋಷಸ್ತಸ್ಯ ಭವೇನ್ನ ವಾ ॥೧॥

ಏತದಿಚ್ಛಾಮಿ ತತ್ತ್ವೇನ ವ್ಯಾಖ್ಯಾತುಂ ವೈ ಪಿತಾಮಹ ।
ಸೂಕ್ಷ್ಮಾ ಗತಿರ್ಹಿ ಧರ್ಮಸ್ಯ ಯತ್ರ ಮುಹ್ಯನ್ತಿ ಮಾನವಾಃ ॥೨॥

“ಪಿತಾಮಹನೇ! ರಾಜರ್ಷಿಯೇ! ಮೈತ್ರಿಯ ಅಥವಾ ಸೌಹಾರ್ದದ ಕಾರಣದಿಂದ ನೀಚಜಾತಿಯವನಿಗೆ ಮಂತ್ರೋಪದೇಶವನ್ನು ಮಾಡಿದರೆ–ಅದರಿಂದ ದೋಷವು ಸಂಘಟಿಸುವುದೇ ಅಥವಾ ಇಲ್ಲವೆ? ನಾನು ಈ ವಿಷಯವನ್ನು ಯಥಾವತ್ತಾಗಿ ತಿಳಿದುಕೊಳ್ಳಲು ಇಚ್ಛಿಸಿದ್ದೇನೆ. ಆದುದರಿಂದ ಈ ವಿಷಯವನ್ನು ವಿಶದವಾಗಿ ಹೇಳು. ಧರ್ಮದ ಗತಿಯು ಅತಿ ಸೂಕ್ಷ್ಮವಾದುದು. ಇಂತಹ ಸೂಕ್ಷ್ಮವಿಷಯಗಳಲ್ಲಿಯೇ ಮನುಷ್ಯರು ವಿಮೋಹಗೊಳ್ಳುತ್ತಾರೆ.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ನಾನು ಹಿಂದೆ ಋಷಿಗಳು ಹೇಳುತ್ತಿದ್ದ ಮಾತನ್ನು ಕೇಳಿದ್ದೇನೆ. ಅದನ್ನೇ ನಿನಗೆ ಯಥಾಕ್ರಮವಾಗಿ ಹೇಳುತ್ತೇನೆ ; ಕೇಳು.

ಉಪದೇಶೋ ನ ಕರ್ತವ್ಯೋ ಜಾತಿಹೀನಸ್ಯ ಕಸ್ಯಚಿತ್ ।
ಉಪದೇಶೇ ಮಹಾನ್ದೋಷ ಉಪಾಧ್ಯಾಯಸ್ಯ ಭಾಷ್ಯತೇ ॥೪॥

ಜಾತಿಹೀನನು ಯಾವನೇ ಆಗಿದ್ದರೂ (ಮಿತ್ರನಾಗಿದ್ದರೂ) ಅವನಿಗೆ ಉಪದೇಶವನ್ನು ಮಾಡಲೇಬಾರದು. ಹಾಗೆ ಉಪದೇಶವನ್ನು ಕೊಟ್ಟರೆ ಉಪದೇಶಿಸಿದ ಆಚಾರ್ಯನಿಗೇ ಮಹಾದೋಷವು ಪ್ರಾಪ್ತವಾಗುವುದೆಂದು ಹೇಳುತ್ತಾರೆ.

ಭರತಶ್ರೇಷ್ಠನೇ! ಈ ವಿಷಯದಲ್ಲಿ ದುಃಖದಲ್ಲಿದ್ದ ಜಾತಿಹೀನನಿಗೆ ಕೊಟ್ಟ ಉಪದೇಶಕ್ಕೆ ಸಂಬಂಧಿಸಿರುವ ಈ ದೃಷ್ಟಾಂತವನ್ನು ಕೇಳು. ಈ ಘಟನೆಯು ಹಿಮವತ್ಪರ್ವತದ ಸುಂದರವಾದ ಪಾರ್ಶ್ವದಲ್ಲಿರುವ ಬ್ರಹ್ಮಾಶ್ರಮದಲ್ಲಿ ನಡೆಯಿತು. ನಾನಾವಿಧವಾದ ವೃಕ್ಷಗಳ ಸಮೂಹದಿಂದ ವ್ಯಾಪ್ತವಾದ ಪವಿತ್ರವಾದ ಸ್ಥಳದಲ್ಲಿ ಆ ಆಶ್ರಮವಿದ್ದಿತು. ಆ ಆಶ್ರಮಭೂಮಿಯು ಅನೇಕವಿಧವಾದ ಪೊದರುಗಳಿಂದಲೂ-ಲತೆಗಳಿಂದಲೂ ನಿಬಿಡವಾಗಿದ್ದಿತು. ಮೃಗ-ಪಕ್ಷಿಗಳಿಂದ ಆಶ್ರಯಿಸಲ್ಪಟ್ಟಿದ್ದಿತು. ಸಿದ್ಧ-ಚಾರಣರಿಂದ ಯುಕ್ತವಾಗಿದ್ದಿತು. ಆ ಆಶ್ರಮದ ಸುತ್ತಲೂ ರಮ್ಯವಾದ ಮತ್ತು ಸುಪುಷ್ಪಿತವಾದ ಅರಣ್ಯವಿದ್ದಿತು. ಆ ಆಶ್ರಮದಲ್ಲಿ ಬಹಳ ಮಂದಿ ವ್ರತಿಗಳಿದ್ದರು. ತಪಸ್ವಿಗಳಿಂದಲೂ ಅದು ಸೇವಿಸಲ್ಪಡುತ್ತಿದ್ದಿತು. ಸೂರ್ಯಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಮಹಾಭಾಗ್ಯಶಾಲಿಗಳಾದ ಬ್ರಾಹ್ಮಣರಿಂದಲೂ ಆ ಆಶ್ರಮವು ತುಂಬಿಹೋಗಿದ್ದಿತು. ನಿಯಮವ್ರತ ಸಂಪನ್ನರಾದ ತಪಸ್ವಿಗಳಿಂದಲೂ, ದೀಕ್ಷಿತರಿಂದಲೂ, ಮಿತಾಹಾರಿಗಳಿಂದಲೂ, ಜಿತಾತ್ಮರಿಂದಲೂ ಆ ಬ್ರಹ್ಮಾಶ್ರಮವು ಸಂಪನ್ನವಾಗಿದ್ದಿತು. ವೇದಾಧ್ಯಯನಘೋಷಗಳಿಂದ ನಿನಾದಿತವಾಗಿದ್ದಿತು. ಬಹುಸಂಖ್ಯಾತರಾದ ವಾಲಖಿಲ್ಯರಿಂದಲೂ ಮತ್ತು ಯತಿಗಳಿಂದಲೂ ಆ ಆಶ್ರಮವು ಆಶ್ರಯಿಸಲ್ಪಟ್ಟಿದ್ದಿತು.

ಪರಮದಯಾಳುವಾದ ಶೂದ್ರನೊಬ್ಬನು ಆ ಬ್ರಹ್ಮಾಶ್ರಮಕ್ಕೆ ಆಗಮಿಸಿದನು. ಆ ಆಶ್ರಮದಲ್ಲಿದ್ದ ತಪಸ್ವಿಗಳೆಲ್ಲರೂ ಹೆಚ್ಚಿನ ಉತ್ಸಾಹದಿಂದ

ಅವನನ್ನು ಆದರಿಸಿ ಸತ್ಕರಿಸಿದರು. ದೇವಸದೃಶರಾದ, ಮಹಾತೇಜಸ್ವಿಗಳಾದ, ವಿಧ-ವಿಧವಾದ ದೀಕ್ಷೆಗಳನ್ನು ಕೈಗೊಂಡಿದ್ದ ಆ ಮುನಿಗಳ ಸಮೂಹವನ್ನು ನೋಡಿ ಅವನಿಗೆ ಬಹಳ ಸಂತೋಷವಾಯಿತು. ಅನಂತರ ಅವನಿಗೆ ತಪಸ್ಸುಮಾಡಬೇಕೆಂಬ ಮನಸ್ಸುಂಟಾಯಿತು. ಕುಲಪತಿಯ ಪಾದಗಳನ್ನು ಹಿಡಿದುಕೊಂಡು ಅವನು ಹೇಳಿದನು :

ಭವತ್ಪ್ರಸಾದಾದಿಚ್ಛಾಮಿ ಧರ್ಮಂ ವಕ್ತುಂ ದ್ವಿಜರ್ಷಭ ।
ತನ್ಮಾಂ ತ್ವಂ ಭಗವನ್ವಕ್ತುಂ ಪ್ರವ್ರಾಜಯಿತುಮರ್ಹಸಿ ॥೧೪॥

"ದ್ವಿಜಶ್ರೇಷ್ಠರೇ! ನಾನು ನಿಮ್ಮ ಅನುಗ್ರಹದಿಂದ ಧರ್ಮವನ್ನು ಆಚರಿಸಲು ಇಚ್ಛಿಸಿದ್ದೇನೆ. ಆದುದರಿಂದ ನೀವು ವಿಧಿವತ್ತಾಗಿ ನನಗೆ ಸಂನ್ಯಾಸದೀಕ್ಷೆಯನ್ನು ದಯಪಾಲಿಸಿರಿ.

ವರ್ಣಾವರೋಽಹಂ ಭಗವಞ್ಶೂದ್ರೋ ಜಾತ್ಯಾಸ್ಮಿ ಸತ್ತಮ ।
ಶುಶ್ರೂಷಾಂ ಕರ್ತುಮಿಚ್ಛಾಮಿ ಪ್ರಪನ್ನಾಯ ಪ್ರಸೀದ ಮೇ ॥೧೫॥

ಪೂಜ್ಯರೇ! ಜಾತಿಯಲ್ಲಿ ನಾನು ನಾಲ್ಕನೆಯ ವರ್ಣದವನಾದ ಶೂದ್ರನಾಗಿದ್ದೇನೆ. ಇಲ್ಲಿಯೇ ಇದ್ದು ತಮ್ಮ ಶುಶ್ರೂಷೆಮಾಡಲು ಇಚ್ಛಿಸಿದ್ದೇನೆ. ಶರಣಾಗತನಾಗಿರುವ ನನಗೆ ಪ್ರಸನ್ನರಾಗಿರಿ."

ಕುಲಪತಿಗಳು ಹೇಳುತ್ತಾರೆ :

ನ ಶಕ್ಯಮಿಹ ಶೂದ್ರೇಣ ಲಿಙ್ಗಮಾಶ್ರಿತ್ಯ ವರ್ತಿತುಮ್ ।
ಆಸ್ಯತಾಂ ಯದಿ ತೇ ಬುದ್ಧಿಃ ಶುಶ್ರೂಷಾನಿರತೋ ಭವ ।
ಶುಶ್ರೂಷಯಾ ಪರಾಲ್ಲೋಕಾನವಾಪ್ಸ್ಯಸಿ ನ ಸಂಶಯಃ ॥೧೬॥

"ಈ ಆಶ್ರಮದಲ್ಲಿ ಶೂದ್ರನಾದವನು ಸಂನ್ಯಾಸದ ಚಿಹ್ನೆಯನ್ನು ಧರಿಸಿ ವಾಸಮಾಡಲು ಸಾಧ್ಯವಿಲ್ಲ. ಇಲ್ಲಿಯೇ ಇರಬೇಕೆನ್ನುವ ಬುದ್ಧಿಯು ನಿನಗೆ ಇರುವುದಾದರೆ ಅಗತ್ಯವಾಗಿ ಇರಬಹುದು. ಹಾಗೆ ಇಲ್ಲಿರುವಾಗ ಶುಶ್ರೂಷೆಯಲ್ಲಿ ನಿರತನಾಗಿರು. ಕೇವಲ ಶುಶ್ರೂಷೆಯಿಂದಲೇ ಶ್ರೇಷ್ಠವಾದ ಪುಣ್ಯಲೋಕಗಳನ್ನು ನೀನು ಪಡೆಯುವೆ. ಈ ವಿಷಯದಲ್ಲಿ ಸಂದೇಹವೇ ಇಲ್ಲ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಕುಲಪತಿಯು ಹೀಗೆ ಹೇಳಲಾಗಿ ಶೂದ್ರನು ಚಿಂತಿಸ ತೊಡಗಿದನು :

ಕಥಮತ್ರ ಮಯಾ ಕಾರ್ಯಂ ಶ್ರದ್ಧಾ ಧರ್ಮಪರಾ ಚ ಮೇ ।
ವಿಜ್ಞಾತಮೇವಂ ಭವತು ಕರಿಷ್ಯೇ ಪ್ರಿಯಮಾತ್ಮನಃ ॥೧೮॥

'ಈ ವಿಷಯದಲ್ಲಿ ನಾನು ಹೇಗೆ ಮಾಡಲಿ? ನನಗಾದರೋ ಸಂನ್ಯಾಸ ಧರ್ಮದಲ್ಲಿಯೇ ಅಚಲವಾದ ಶ್ರದ್ಧೆಯಿದೆ.' (ಈ ರೀತಿ ಸ್ವಲ್ಪಹೊತ್ತು ಚಿಂತಿಸುತ್ತಿದ್ದು ಅವನು ಒಂದು ನಿರ್ಧಾರಕ್ಕೆ ಬಂದು) 'ತಿಳಿಯಿತು. ಶೂದ್ರನಿಗೆ ಶುಶ್ರೂಷಾಧರ್ಮವೇ ಇರಲಿ. ನಾನು ಮಾತ್ರ ನನ್ನ ಮನಸ್ಸಿಗೆ ಪ್ರಿಯವಾಗುವುದನ್ನೇ ಮಾಡುತ್ತೇನೆ.'

ಹೀಗೆ ನಿರ್ಧರಿಸಿದ ಶೂದ್ರಮುನಿಯು ಬ್ರಹ್ಮಾಶ್ರಮದಿಂದ ಬಹಳ ದೂರಕ್ಕೆ ಹೋಗಿ ಅಲ್ಲೊಂದು ಗುಡಿಸಲನ್ನು ಕಟ್ಟಿಕೊಂಡನು. ಅಲ್ಲವನು ಯಜ್ಞಕ್ಕಾಗಿ ವೇದಿಯನ್ನೂ, ವಾಸಮಾಡಲು ಸ್ಥಳವನ್ನೂ, ದೇವಾಲಯ ಗಳನ್ನೂ ಕಲ್ಪಿಸಿಕೊಂಡು ನಿಯಮಪೂರ್ವಕವಾಗಿ ವ್ರತಾನುಷ್ಠಾನಗಳನ್ನು ಮಾಡುತ್ತಾ ಮುನಿಯೇ ಆದನು. ಆ ಶೂದ್ರಮುನಿಯು ಪ್ರತಿನಿತ್ಯವೂ ತ್ರಿಕಾಲಗಳಲ್ಲಿಯೂ ಸ್ನಾನಮಾಡುತ್ತಿದ್ದನು. ಕಠೋರವಾದ ನಿಯಮಗಳನ್ನು ಪಾಲಿಸುತ್ತಿದ್ದನು. ದೇವತಾಸ್ಥಾನಗಳಲ್ಲಿ ಬಲಿಯನ್ನು ಕೊಡುತ್ತಾ, ಅಗ್ನಿಯಲ್ಲಿ ಹೋಮಮಾಡುತ್ತಾ, ದೇವತೆಗಳನ್ನು ಯಥಾವಿಧಿಯಾಗಿ ಪೂಜಿಸುತ್ತಿದ್ದನು.

ಶೂದ್ರಮುನಿಯು ಮಾನಸಿಕಸಂಕಲ್ಪಗಳನ್ನು ನಿಯಂತ್ರಣಗೊಳಿಸುತ್ತಾ (ಚಿತ್ತವೃತ್ತಿಯನ್ನು ನಿರೋಧಿಸುತ್ತಾ), ಫಲಾಹಾರನಾಗಿಯೂ ಜಿತೇಂದ್ರಿಯ ನಾಗಿಯೂ ಇದ್ದನು. ಆಶ್ರಮಕ್ಕೆ ಆಗಮಿಸುತ್ತಿದ್ದ ಅತಿಥಿಗಳನ್ನು ಆಶ್ರಮದ ಸಮೀಪದಲ್ಲಿಯೇ ಸಿಕ್ಕುತ್ತಿದ್ದ ಮೂಲಿಕೆಗಳಿಂದಲೂ ಹಣ್ಣುಗಳಿಂದಲೂ ನಿತ್ಯವೂ ಸತ್ಕರಿಸುತ್ತಿದ್ದನು. ಇದೇ ರೀತಿಯಲ್ಲಿಯೇ ಅವನು ಬಹಳ ಕಾಲವನ್ನು ಕಳೆದನು.

ಹೀಗೆಯೇ ಇರುತ್ತಿರಲಾಗಿ ಒಂದು ದಿನ ಒಬ್ಬ ಮುನಿಯು ಸತ್ಸಂಗವನ್ನು ಮಾಡಬೇಕೆನ್ನುವ ಆಶಯದಿಂದ ಶೂದ್ರಮುನಿಯ ಆಶ್ರಮಕ್ಕೆ ಆಗಮಿಸಿದನು. ಶೂದ್ರಮುನಿಯು ಆಗಮಿಸಿದ ಋಷಿಯನ್ನು ಆದರಪೂರ್ವಕವಾಗಿ ಸ್ವಾಗತಿಸಿ ವಿಧಿವತ್ತಾಗಿ ಸತ್ಕರಿಸಿ ಸಂತೋಷಪಡಿಸಿದನು. ಬಳಿಕ ಅನುಕೂಲವಾದ (ಮನಸ್ಸಿಗೆ ಆಪ್ಯಾಯಮಾನವಾದ) ಮಾತುಗಳನ್ನಾಡುತ್ತಾ ಋಷಿಯ ಆಗಮನದ ಕಾರಣವನ್ನು ಕೇಳಿದನು. ಯಥೋಚಿತವಾಗಿ ಉತ್ತರಿಸಿ ಋಷಿಯು ಹೊರಟುಹೋದನು. ಅಲ್ಲಿಂದ ಮುಂದೆ ಪರಮತೇಜಸ್ವಿಯಾದ, ಧರ್ಮಾತ್ಮನಾದ, ಕಠೋರವ್ರತನಿಷ್ಠನಾದ ಆ ಋಷಿಯು ಪದೇ-ಪದೇ ಶೂದ್ರಮುನಿಯನ್ನು ಕಾಣಲು ಅವನ ಆಶ್ರಮಕ್ಕೆ ಬರುತ್ತಲೇ ಇದ್ದನು.

ಒಮ್ಮೆ ಹೀಗೆ ಆಗಮಿಸಿದ ಋಷಿಗೆ ಶೂದ್ರಮುನಿಯು ಹೇಳಿದನು :

ಪಿತೃಕಾರ್ಯಂ ಕರಿಷ್ಯಾಮಿ ತತ್ರ ಮೇಽನುಗ್ರಹಂ ಕುರು ॥೨೭॥

“ಋಷಿವರ್ಯನೇ! ನಾನು ಪಿತೃಗಳ ಶ್ರಾದ್ಧವನ್ನು ಮಾಡುತ್ತೇನೆ. ಈ ಕಾರ್ಯದಲ್ಲಿ ನನ್ನನ್ನು ಅನುಗ್ರಹಿಸು.”

ಬ್ರಾಹ್ಮಣಮುನಿಯು ಹಾಗೆಯೇ ಆಗಲೆಂದನು. ಬಳಿಕ ಶೂದ್ರ ಮುನಿಯು ಸ್ನಾನಮಾಡಿ ಶುಚೀಭೂತನಾಗಿ ಆ ಋಷಿಗೆ ಪಾದ್ಯವನ್ನು (ಕಾಲು ತೊಳೆಯಲು ನೀರನ್ನು) ಕೊಟ್ಟನು. ಅನಂತರ ಅವನು ದರ್ಭೆಗಳನ್ನೂ, ಕಾಡಿನಲ್ಲಿ ಸಿಕ್ಕುವ ಓಷಧಿ-ಫಲಗಳನ್ನೂ, ಪವಿತ್ರವಾದ ಆಸನವನ್ನೂ, ದರ್ಭೆಯಿಂದ ಮಾಡಿದ್ದ ಚಾಪೆಯನ್ನೂ ತೆಗೆದುಕೊಂಡು ಬಂದನು. ವಸ್ತುಗಳೆಲ್ಲವನ್ನು ದಕ್ಷಿಣದಿಕ್ಕಿಗೆ ತೆಗೆದುಕೊಂಡು ಹೋಗಿ ಋಷಿಯು ಕುಳಿತುಕೊಳ್ಳುವ ಸಲುವಾಗಿ ಆಸನಕೂರ್ಚವನ್ನು ಪಶ್ಚಿಮಾಗ್ರವಾಗಿ ಹಾಕಿದನು. ಶಾಸ್ತ್ರಕ್ಕೆ ವಿರುದ್ಧವಾದ ಅನುಚಿತಾಚಾರವನ್ನು ನೋಡಿ ಋಷಿಯು ಶೂದ್ರಮುನಿಗೆ ಹೇಳಿದನು :

ಕುರುಷ್ವೈತಾಂ ಪೂರ್ವಶೀರ್ಷಾಂ ಭವಾಂಶ್ಚೋದಙ್ಮುಖಃ ಶುಚಿಃ ।

“ಈ ಆಸನಕೂರ್ಚವನ್ನು ಪೂರ್ವಾಗ್ರವಾಗಿ ಮಾಡು. ನೀನು ಉತ್ತರಾಭಿಮುಖವಾಗಿ ಶುಚಿಯಾಗಿ ಕುಳಿತುಕೊ.”

ಋಷಿಯು ಹೇಳಿದಂತೆಯೇ ಶೂದ್ರಮುನಿಯು ಎಲ್ಲವನ್ನೂ ಮಾಡಿದನು. ಬುದ್ಧಿವಂತನಾದ ಶೂದ್ರಮುನಿಯು ವಿಪ್ರರ್ಷಿಯು ಹೇಳಿದಂತೆಯೇ ದರ್ಭೆಗಳನ್ನು ಉಪಯೋಗಿಸಿದನು. ಅರ್ಘ್ಯಾದಿಗಳನ್ನು ಕೊಟ್ಟನು. ಹವ್ಯ-ಕವ್ಯವಿಧಿಗಳನ್ನೂ ಸಕಲಕರ್ಮಗಳನ್ನೂ ಪೂರೈಸಿದನು. ಋಷಿಯ ನಿರ್ದೇಶದಂತೆಯೇ ಶೂದ್ರಮುನಿಯು ಪಿತೃಕಾರ್ಯವನ್ನು ವಿಧಿವತ್ತಾಗಿ ಮುಗಿಸಿದ ನಂತರ ವಿಪ್ರರ್ಷಿಯು ಶೂದ್ರಮುನಿಯ ಅನುಮತಿಯನ್ನು ಪಡೆದು ಹೊರಟುಹೋದನು. ಶೂದ್ರಮುನಿಯು ಹಿಂದಿನಂತೆಯೇ ತಾನೇ ರೂಪಿಸಿಕೊಂಡಿದ್ದ ಧರ್ಮಮಾರ್ಗದಲ್ಲಿಯೇ ಮುಂದುವರಿದನು. ಅನೇಕ ವರ್ಷಗಳವರೆಗೆ ಶೂದ್ರಮುನಿಯು ಆ ವನದಲ್ಲಿಯೇ ತಪಸ್ಸನ್ನು ಮಾಡುತ್ತಿದ್ದು ಮರಣಹೊಂದಿದನು. ಅವನು ಮಾಡಿದ ಆ ತಪಸ್ಸಿನ ಫಲದಿಂದಾಗಿ ಅವನು ಮಹಾರಾಜನ ವಂಶದಲ್ಲಿ ಮಹಾತೇಜಸ್ವಿಯಾದ ಬಾಲಕನಾಗಿ ಹುಟ್ಟಿದನು. ಅಂತೆಯೇ ಶೂದ್ರಮುನಿಗೆ ಪಿತೃಶ್ರಾದ್ಧದಲ್ಲಿ ಮಾರ್ಗದರ್ಶನಮಾಡಿದ್ದ ವಿಪ್ರರ್ಷಿಯೂ ಮೃತನಾದನು. ಬಳಿಕ ಅವನು ತಾನು ಮಾಡಿದ ಕರ್ಮಫಲಾನುಸಾರವಾಗಿ ಅದೇ ರಾಜವಂಶದ ಪುರೋಹಿತಕುಲದಲ್ಲಿ ಹುಟ್ಟಿದನು. ಹೀಗೆ ಶೂದ್ರಮುನಿ–ವಿಪ್ರರ್ಷಿಗಳಿಬ್ಬರೂ ರಾಜಕುಲ ಮತ್ತು ಪುರೋಹಿತಕುಲಗಳಲ್ಲಿ ಹುಟ್ಟಿ ಕ್ರಮೇಣ ಪ್ರವರ್ಧಮಾನಸ್ಥಿತಿಗೆ ಬಂದರು. ವಿದ್ಯೆಗಳಲ್ಲಿ ಇಬ್ಬರೂ ಮಹಾಕುಶಲರಾದರು.

ಅಥರ್ವವೇದೇ ವೇದೇ ಚ ಬಭೂವರ್ಷಿಃ ಸುನಿಷ್ಠಿತಃ ।
ಕಲ್ಪಪ್ರಯೋಗೇ ಚೋತ್ಪನ್ನೇ ಜ್ಯೋತಿಷೇ ಚ ಪರಂ ಗತಃ ।
ಸಾಂಖ್ಯೇ ಚೈವ ಪರಾ ಪ್ರೀತಿಸ್ತಸ್ಯ ಚೈವಂ ವ್ಯವರ್ಧತ ॥೩೮॥

ಪುರೋಹಿತವಂಶದಲ್ಲಿ ಹುಟ್ಟಿದ್ದ ಆ ಋಷಿಯು ವೇದಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಅಥರ್ವವೇದದಲ್ಲಿ ಪೂರ್ಣಪಾಂಡಿತ್ಯವನ್ನು ಪಡೆದಿದ್ದನು. ಕಲ್ಪಪ್ರಯೋಗ ಮತ್ತು ಜ್ಯೋತಿಷಶಾಸ್ತ್ರಗಳಲ್ಲಿ ಪಾರಂಗತನಾದನು. ಸಾಂಖ್ಯಶಾಸ್ತ್ರದಲ್ಲಿಯೂ ಅವನಿಗೆ ವಿಶೇಷವಾದ ಆಸಕ್ತಿಯಿದ್ದಿತು. ಕಾಲಾನುಗುಣವಾಗಿ ಆ ದೇಶದ ರಾಜನು ಮೃತನಾದನು. ಆಶೌಚವು ಕಳೆದನಂತರ ಮಂತ್ರಿಗಳೂ ಪ್ರಜೆಗಳೂ ಸೇರಿ ರಾಜಕುಮಾರನಿಗೆ ಪಟ್ಟಾಭಿ

ಷೇಕಮಾಡಿದರು. ರಾಜನು ಅಭಿಷಿಕ್ತನಾಗುತ್ತಲೇ ಪುರೋಹಿತನಾಗಿ ಜನ್ಮತಾಳಿದ್ದ ಋಷಿಯೂ ರಾಜಪುರೋಹಿತನಾಗಿ ಅಭಿಷಿಕ್ತನಾದನು. (ಶೂದ್ರಮುನಿ-ವಿಪ್ರರ್ಷಿಗಳು ರಾಜ ಮತ್ತು ಪುರೋಹಿತರಾಗಿ ಪುನಃ ಜೊತೆಗೂಡಿದರು.)

ಋಷಿಯನ್ನು ಪುರೋಹಿತನನ್ನಾಗಿ ಮಾಡಿಕೊಂಡು ರಾಜನು ಸುಖವಾಗಿದ್ದನು. ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುತ್ತಾ ರಾಜ್ಯಭಾರ ಮಾಡುತ್ತಿದ್ದನು.

ಪುರೋಹಿತನು ಅನುದಿನವೂ ಪುಣ್ಯಾಹವಾಚನವನ್ನು ಮಾಡುತ್ತಿದ್ದಾಗ ಮತ್ತು ಧರ್ಮಕಾರ್ಯಗಳಲ್ಲಿ ತೊಡಗಿದ್ದಾಗ –ರಾಜನು ಪುರೋಹಿತನನ್ನು ನೋಡಿ ನಸುನಗುತ್ತಿದ್ದನು. ಹಲವಾರು ಬಾರಿ ಕೇಕೇಹಾಕಿಕೊಂಡು ಗಟ್ಟಿಯಾಗಿಯೂ ನಗುತ್ತಿದ್ದನು. ಹೀಗೆ ಆ ರಾಜನು ಆಗಾಗ ಪುರೋಹಿತನನ್ನು ಅಪಹಾಸ್ಯಮಾಡುತ್ತಲೇ ಇದ್ದನು. ತಾನು ಪುಣ್ಯಾಹವಾಚನವನ್ನೂ–ಧರ್ಮಕಾರ್ಯಗಳನ್ನೂ ಮಾಡುವಾಗಲೆಲ್ಲಾ ರಾಜನು ನಸುನಗುವುದನ್ನೂ, ಕೆಲವೊಮ್ಮೆ ಗಟ್ಟಿಯಾಗಿಯೇ ನಗುವುದನ್ನೂ ಗಮನಿಸಿದ ಪುರೋಹಿತನು ಕುಪಿತನಾದನು.

ಆದರೂ ರಾಜನ ಮುಂದೆ ಕೋಪವನ್ನು ಪ್ರಕಟಪಡಿಸುವಂತಿರಲಿಲ್ಲ. ಸಮಯವನ್ನೇ ಕಾಯುತ್ತಿದ್ದನು.

ಒಂದು ದಿನ ಪುರೋಹಿತನು ರಾಜನನ್ನು ಏಕಾಂತದಲ್ಲಿ ಸಂಧಿಸಿದನು. ರಾಜನಿಗೆ ಮನೋನುಕೂಲವಾದ ಕಥೆಗಳನ್ನೂ ವಾರ್ತೆಗಳನ್ನೂ ಹೇಳುತ್ತಾ ಅವನ ಮನಸ್ಸನ್ನು ಪ್ರಸನ್ನಗೊಳಿಸಿದನು. ರಾಜನು ಸಂತುಷ್ಟನಾಗಿರುವುದನ್ನು ಗಮನಿಸಿ ಪುರೋಹಿತನು ರಾಜನೊಡನೆ ಹೇಳಿದನು :

ವರಮಿಚ್ಛಾಮ್ಯಹಂ ತ್ವೇಕಂ ತ್ವಯಾ ದತ್ತಂ ಮಹಾದ್ಯುತೇ ॥೪೬॥

"ಮಹಾತೇಜಸ್ವಿಯೇ! ಮಹಾರಾಜ! ನಾನು ನಿನ್ನಿಂದ ಒಂದು ವರವನ್ನು ಪಡೆದುಕೊಳ್ಳುವ ಇಚ್ಛೆಯಿಂದಿದ್ದೇನೆ."

ವರಾಣಾಂ ತೇ ಶತಂ ದದ್ಯಾಂ ಕಿಂ ಬತೈಕಂ ದ್ವಿಜೋತ್ತಮ ।
ಸ್ನೇಹಾಚ್ಚ ಬಹುಮಾನಾಚ್ಚ ನಾಸ್ತ್ಯದೇಯಂ ಹಿ ಮೇ ತವ ॥೪೭॥

“ಬ್ರಾಹ್ಮಣಶ್ರೇಷ್ಠನೇ! ಒಂದೇ ವರವೇಕೆ? ನೂರು ವರಗಳನ್ನಾದರೂ ಕೊಡುತ್ತೇನೆ. ನನಗೆ ನಿನ್ನ ಮೇಲಿರುವ ಸ್ನೇಹದ ಕಾರಣದಿಂದಲೂ, ಗೌರವದ ಕಾರಣದಿಂದಲೂ ನಿನಗೆ ಕೊಡಬಾರದೆನ್ನುವ ವಸ್ತುವೇ ನನ್ನಲ್ಲಿ ಇಲ್ಲವಾಗಿದೆ.”

ಏಕಂ ವೈ ವರಮಿಚ್ಛಾಮಿ ಯದಿ ತುಷ್ಟೋಽಸಿ ಪಾರ್ಥಿವ ।
ಪ್ರತಿಜಾನೀಹ ತಾವತ್ತ್ವಂ ಸತ್ಯಂ ಯದ್ವದ ನಾನೃತಮ್ ॥೪೮॥

“ಪಾರ್ಥಿವೋತ್ತಮನೇ! ನೀನು ನನ್ನ ವಿಷಯದಲ್ಲಿ ಸಂತುಷ್ಟನಾಗಿದ್ದರೆ –ನಿನ್ನಿಂದ ನಾನು ಒಂದು ವರವನ್ನು ಮಾತ್ರ ಪಡೆದುಕೊಳ್ಳಲು ಇಚ್ಛಿಸುತ್ತೇನೆ. ಮೊದಲು ನೀನು ಈ ಒಂದು ವರವನ್ನು ಕೊಡುವುದಾಗಿ ಪ್ರತಿಜ್ಞೆಯನ್ನು ಮಾಡಬೇಕು. ಯಾವುದು ಸತ್ಯವೋ ಅದನ್ನೇ ಹೇಳಬೇಕು. ಸುಳ್ಳು ಹೇಳಬಾರದು.”

ಯುಧಿಷ್ಠಿರ! ಪುರೋಹಿತನ ಆ ಮಾತಿಗೆ ರಾಜನು ‘ಬಾಢಂ’ ‘ಹಾಗೆಯೇ ಆಗಲಿ’–ಎಂದು ಹೇಳಿ ಪ್ರತಿಜ್ಞೆಮಾಡಿಕೊಡುತ್ತಾ ಹೇಳಿದನು :

ಯದಿ ಜ್ಞಾಸ್ಯಾಮಿ ವಕ್ಷ್ಯಾಮಿ ಅಜಾನನ್ನ ತು ಸಂವದೇ ॥೪೯॥

“ವಿಷಯವು ನನಗೆ ತಿಳಿದಿದ್ದರೆ ಹೇಳುತ್ತೇನೆ. ತಿಳಿದಿರದಿದ್ದರೆ ಹೇಳುವುದಿಲ್ಲ.”

ಅದಕ್ಕೆ ಒಪ್ಪಿ ರಾಜಪುರೋಹಿತನು ಹೇಳಿದನು :

ಪುಣ್ಯಾಹವಾಚನೇ ನಿತ್ಯಂ ಧರ್ಮಕೃತ್ಯೇಷು ಚಾಸಕೃತ್ ।
ಶಾನ್ತಿಹೋಮೇಷು ಚ ಸದಾ ಕಿಂ ತ್ವಂ ಹಸಸಿ ವೀಕ್ಷ್ಯ ಮಾಮ್॥೫೦॥

“ನಿತ್ಯವೂ ಪುಣ್ಯಾಹವಾಚನವನ್ನು ಮಾಡುವಾಗ, ಎಷ್ಟೋ ಸಮಯಗಳಲ್ಲಿ ಧರ್ಮಕಾರ್ಯಗಳನ್ನು ಮಾಡುವಾಗ ಮತ್ತು ಶಾಂತ್ಯರ್ಥವಾಗಿ ಹೋಮಗಳನ್ನು ಮಾಡುವಾಗ ನೀನು ನನ್ನನ್ನು ನೋಡಿ ಏಕೆ ನಗುವೆ?

ಸವ್ರೀಡಂ ವೈ ಭವತಿ ಹಿ ಮನೋ ಮೇ ಹಸತಾ ತ್ವಯಾ ।
ಕಾಮಯಾ ಶಾಪಿತೋ ರಾಜನ್ನಾನ್ಯಥಾ ವಕ್ತುಮರ್ಹಸಿ ॥೫೧॥

ನೀನು ಹಾಗೆ ನಗುತ್ತಿದ್ದರೆ ನನ್ನ ಮನಸ್ಸು ನಾಚಿಕೆಗೊಳ್ಳುತ್ತದೆ.

ಆಣೆಯಿಟ್ಟು ಹೇಳುತ್ತೇನೆ. ನೀನು ಮನಸ್ಸಿಗೆ ತೋಚಿದಂತೆ ಬೇರಾವುದನ್ನೋ ಹೇಳಿಬಿಡಬಾರದು. ಇರುವ ವಿಷಯವನ್ನೇ ಸತ್ಯವಾಗಿ ಹೇಳಬೇಕು.

ಸುವ್ಯಕ್ತಂ ಕಾರಣಂ ಹ್ಯತ್ರ ನ ತೇ ಹಾಸ್ಯಮಕಾರಣಮ್ ।
ಕೌತೂಹಲಂ ಮೇ ಸುಭೃಶಂ ತತ್ತ್ವೇನ ಕಥಯಸ್ವ ಮೇ ॥೫೨॥

ನೀನು ಯಾವುದೋ ಕಾರಣದಿಂದಲೇ ನಗುವೆಯೆಂಬುದು ಸ್ಪಷ್ಟ ವಾಗಿಯೇ ಇದೆ. ನಿಷ್ಕಾರಣವಾಗಿ ನೀನು ನನ್ನನ್ನು ಹಾಸ್ಯಮಾಡುತ್ತಿಲ್ಲ. ಈ ವಿಷಯವನ್ನು ತಿಳಿಯಬೇಕೆಂದು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ. ನಿಜಾಂಶವನ್ನು ಯಥಾವತ್ತಾಗಿ ಹೇಳು."

ರಾಜನು ಹೇಳುತ್ತಾನೆ :

ಏವಮುಕ್ತೇ ತ್ವಯಾ ವಿಪ್ರ ಯದವಾಚ್ಯಂ ಭವೇದಪಿ ।
ಅವಶ್ಯಮೇವ ವಕ್ತವ್ಯಂ ಶೃಣುಷ್ವೈಕಮನಾ ದ್ವಿಜ ॥೫೩॥

"ವಿಪ್ರೋತ್ತಮನೇ! ನೀನು ಹೀಗೆ ಹೇಳಿದ ಮೇಲೆ ಹೇಳಬಾರದ ವಿಷಯವಾಗಿದ್ದರೂ ಅವಶ್ಯವಾಗಿ ಹೇಳಲೇಬೇಕಾಗಿದೆ. ನಾನು ಹೇಳುವುದನ್ನು ಏಕಾಗ್ರಚಿತ್ತನಾಗಿ ಕೇಳು.

ಪೂರ್ವದೇಹೇ ಯಥಾ ವೃತ್ತಂ ತನ್ನಿಬೋಧ ದ್ವಿಜೋತ್ತಮ ।
ಜಾತಿಂ ಸ್ಮರಾಮ್ಯಹಂ ಬ್ರಹ್ಮನ್ನವಧಾನೇನ ಮೇ ಶೃಣು ॥೫೪॥

ನನಗೆ ಹಿಂದಿನ ಜನ್ಮದ ಸ್ಮರಣಶಕ್ತಿಯಿದೆ. ಅದರ ಪರಿಣಾಮವಾಗಿ ನಾವಿಬ್ಬರೂ ಹಿಂದಿನ ಶರೀರಗಳಲ್ಲಿದ್ದಾಗ ಏನು ನಡೆಯಿತೆಂಬುದನ್ನು ಹೇಳುತ್ತೇನೆ. ಗಮನವಿಟ್ಟು ನಾನು ಹೇಳುವುದನ್ನು ಕೇಳು.

ಶೂದ್ರೋಽಹಮಭವಂ ಪೂರ್ವಂ ತಾಪಸೋ ಭೃಶಸಂಯುತಃ ।
ಋಷಿರುಗ್ರತಪಾಸ್ತ್ವಂ ಚ ತದಾಭೂರ್ದ್ವಿಜಸತ್ತಮ ॥೫೫॥

ದ್ವಿಜಶ್ರೇಷ್ಠನೇ! ನಾನು ಹಿಂದಿನ ಜನ್ಮದಲ್ಲಿ ಶೂದ್ರಮುನಿಯಾಗಿದ್ದೆನು. ಮಹಾತಪಸ್ಸಿನಿಂದಲೂ ಯುಕ್ತನಾಗಿದ್ದೆನು. ಆ ಸಮಯದಲ್ಲಿ ನೀನು ಉಗ್ರವಾದ ತಪಸ್ಸನ್ನು ಮಾಡುವ ವಿಪ್ರರ್ಷಿಯಾಗಿದ್ದೆ.

ಪ್ರೀಯತಾ ಹಿ ತದಾ ಬ್ರಹ್ಮನ್ಮಮಾನುಗ್ರಹಬುದ್ಧಿನಾ ।
ಪಿತೃಕಾರ್ಯೇ ತ್ವಯಾ ಪೂರ್ವಮುಪದೇಶಃ ಕೃತೋಽನಘ ॥೫೬॥

ಬ್ರಾಹ್ಮಣಶ್ರೇಷ್ಠನೇ! ನನ್ನ ವಿಷಯದಲ್ಲಿ ಸುಪ್ರೀತನಾದ ನೀನು ನನ್ನನ್ನು ಅನುಗ್ರಹಿಸುವ ಬುದ್ಧಿಯಿಂದ ಕೂಡಿದವನಾಗಿ ಪಿತೃಕಾರ್ಯವನ್ನು ಯಾವ ವಿಧಾನದಿಂದ ಮಾಡಬೇಕೆಂಬುದನ್ನು ಮೊದಲು ನನಗೆ ಉಪದೇಶಿಸಿದೆ.

ಬೃಸ್ಯಾಂ ದರ್ಭೇಷು ಹವ್ಯೇ ಚ ಕವ್ಯೇ ಚ ಮುನಿಸತ್ತಮ ।
ಏತೇನ ಕರ್ಮದೋಷೇಣ ಪುರೋಧಾಸ್ತ್ವಮಜಾಯಥಾಃ ॥೫೭॥

ಮುನಿಶ್ರೇಷ್ಠನೇ! ಆಸನಕೂರ್ಚವನ್ನು ಹೇಗೆ ಹಾಕಬೇಕು? ಮತ್ತು ಅದರಲ್ಲಿ ಹೇಗೆ ಕುಳಿತುಕೊಳ್ಳಬೇಕು? ದರ್ಭೆಗಳಲ್ಲಿ ಪರಿಸ್ತರಣಾದಿಗಳನ್ನು ಹೇಗೆ ಮಾಡಬೇಕು? ಹವ್ಯ ಮತ್ತು ಕವ್ಯಗಳಲ್ಲಿ ದೇವ-ಪಿತೃಗಳಿಗೆ ಆಹುತಿ ಗಳನ್ನು ಹೇಗೆ ಸಮರ್ಪಿಸಬೇಕು?–ಈ ಎಲ್ಲ ವಿಷಯಗಳನ್ನೂ ನೀನು ನನಗೆ ವಿಧ್ಯನುಸಾರವಾಗಿ ಉಪದೇಶಿಸಿದೆ. ಆ ನಿನ್ನ ಕರ್ಮದೋಷದಿಂದಾಗಿ ಈ ಜನ್ಮದಲ್ಲಿ ನೀನು ಪುರೋಹಿತನಾಗಿ ಹುಟ್ಟಿರುವೆ.

ಅಹಂ ರಾಜಾ ಚ ವಿಪ್ರೇನ್ದ್ರ ಪಶ್ಯ ಕಾಲಸ್ಯ ಪರ್ಯಯಮ್ ।
ಮತ್ಕೃತಸ್ಯೋಪದೇಶಸ್ಯ ತ್ವಯಾವಾಪ್ತಮಿದಂ ಫಲಮ್ ॥೫೮॥

ವಿಪ್ರಶ್ರೇಷ್ಠನೇ! ಕಾಲದ ವೈಪರೀತ್ಯವನ್ನಾದರೂ ನೋಡು. ನಿನ್ನಿಂದ ಉಪದಿಷ್ಟನಾದ ನಾನು ರಾಜನಾಗಿ ಹುಟ್ಟಿದ್ದೇನೆ. ನನಗೆ ಉಪದೇಶಿಸಿದುದ ಕ್ಕಾಗಿ ನಿನಗೆ ಈ ಫಲವು ಲಭಿಸಿದೆ.

ಏತಸ್ಮಾತ್ಕಾರಣಾದ್ಬ್ರಹ್ಮನ್ಪ್ರಹಸೇ ತ್ವಾಂ ದ್ವಿಜೋತ್ತಮ ।
ನ ತ್ವಾಂ ಪರಿಭವನ್ಬ್ರಹ್ಮನ್ಪ್ರಹಸಾಮಿ ಗುರುರ್ಭವಾನ್ ॥೫೯॥

ದ್ವಿಜಶ್ರೇಷ್ಠನೇ! ಈ ಕಾರಣದಿಂದಲೇ ನಾನು ನಿನ್ನನ್ನು ನೋಡಿ ನಗುತ್ತಿದ್ದೇನೆ. ನಿನ್ನನ್ನು ಅಪಮಾನಗೊಳಿಸಲು ನಾನು ಹೀಗೆ ನಗುತ್ತಿಲ್ಲ. ನೀನು ನನಗೆ ಪೂಜ್ಯನಾದ ಗುರುವಾಗಿರುವೆ.

ವಿಪರ್ಯಯೇಣ ಮೇ ಮನ್ಯುಸ್ತೇನ ಸಂತಪ್ಯತೇ ಮನಃ ।
ಜಾತಿಂ ಸ್ಮರಾಮ್ಯಹಂ ತುಭ್ಯಮತಸ್ತ್ವಾಂ ಪ್ರಹಸಾಮಿ ವೈ ॥೬೦॥

ಈ ವೈಪರೀತ್ಯದಿಂದಾಗಿ ನನ್ನ ಮನಸ್ಸಿಗೆ ಖೇದವುಂಟಾಗಿದೆ. ಇದರಿಂದ ನನ್ನ ಮನಸ್ಸು ಪರಿತಪಿಸುತ್ತಿದೆ. ನಾನು ನಿನ್ನ ಮತ್ತು ನನ್ನ ಪೂರ್ವಜನ್ಮದ ವೃತ್ತಾಂತವನ್ನು ಬಾರಿ-ಬಾರಿಗೂ ಸ್ಮರಿಸಿಕೊಳ್ಳುತ್ತೇನೆ. ಈ ಕಾರಣದಿಂದಲೇ ನಾನು ನಿನ್ನನ್ನು ನೋಡಿದೊಡನೆಯೇ ನಗುತ್ತೇನೆ.

ಏವಂ ತವೋಗ್ರಂ ಹಿ ತಪ ಉಪದೇಶೇನ ನಾಶಿತಮ್ ।
ಪುರೋಹಿತತ್ವಮುತ್ಸೃಜ್ಯ ಯತಸ್ವ ತ್ವಂ ಪುನರ್ಭವೇ ॥೬೧॥

ಹೀಗೆ ನನಗೆ ಉಪದೇಶಿಸಿದ ಕಾರಣದಿಂದ ನೀನು ಮಾಡಿದ ಉಗ್ರವಾದ ತಪಸ್ಸಿನ ಫಲವೆಲ್ಲವೂ ನಷ್ಟವಾಗಿ ಹೋಯಿತು. ಈಗಲೇ ನೀನು ಈ ಪುರೋಹಿತವೃತ್ತಿಯನ್ನು ಪರಿತ್ಯಾಗಮಾಡಿ ಶ್ರೇಷ್ಠವಾದ ಜನ್ಮವನ್ನು ಪಡೆಯಲು ಪ್ರಯತ್ನಿಸು.

ಇತಸ್ತ್ವಮಧಮಾಮನ್ಯಾಂ ಮಾ ಯೋನಿಂ ಪ್ರಾಪ್ಸ್ಯಸೇ ದ್ವಿಜ ।
ಗೃಹ್ಯತಾಂ ದ್ರವಿಣಂ ವಿಪ್ರ ಪೂತಾತ್ಮಾ ಭವ ಸತ್ತಮ ॥೬೨॥

ದ್ವಿಜಸತ್ತಮನೇ! ಇನ್ನು ಮುಂದಾದರೂ ನೀನು ನೀಚಯೋನಿಗಳಲ್ಲಿ ಬೀಳದಂತಾಗಲಿ. ಬೇಕಾದಷ್ಟು ಧನವನ್ನು ತೆಗೆದುಕೊ ; ಸತತಪ್ರಯತ್ನದಿಂದ ಪೂತಾತ್ಮನಾಗು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಹೀಗೆ ರಾಜನಿಂದ ಕಳುಹಿಸಲ್ಪಟ್ಟ ಪುರೋಹಿತನು ಬ್ರಾಹ್ಮಣರಿಗೆ ಅನೇಕಪ್ರಕಾರವಾದ ದಾನಗಳನ್ನು ಕೊಟ್ಟನು. ತಾನು ಅದುವರೆಗೂ ಸಂಪಾದಿಸಿದ್ದ ವಿತ್ತವನ್ನೂ, ಭೂಮಿಯನ್ನೂ, ಗ್ರಾಮಗಳನ್ನೂ ದಾನಮಾಡಿಬಿಟ್ಟನು. ಬ್ರಾಹ್ಮಣರು ಹೇಳಿದಂತೆ ಅನೇಕ ಕೃಚ್ಛ್ರ ವ್ರತಗಳನ್ನು ಮಾಡಿದನು. ಪುಣ್ಯತೀರ್ಥಗಳಿಗೆ ಹೋಗಿ ಅಲ್ಲಿಯೂ ಅನೇಕ ವಿಧವಾದ ದಾನಗಳನ್ನು ಕೊಟ್ಟನು. ಜಿತೇಂದ್ರಿಯನಾದ ಆ ಪುರೋಹಿತನು ಬ್ರಾಹ್ಮಣರಿಗೆ ಅಸಂಖ್ಯಾತವಾದ ಗೋವುಗಳನ್ನು ದಾನವಾಗಿಕೊಟ್ಟು

ಪವಿತ್ರಾತ್ಮನಾಗಿ ತಾನು ಪೂರ್ವಜನ್ಮದಲ್ಲಿದ್ದ ಆಶ್ರಮಕ್ಕೇ ಹೋಗಿ ಅಲ್ಲಿ ವಿಪುಲವಾಗಿ ತಪಸ್ಸನ್ನು ಮಾಡಿದನು. ಬಳಿಕ ಆ ಬ್ರಾಹ್ಮಣನು ಸ್ವಲ್ಪ ಕಾಲದಲ್ಲಿಯೇ ಶ್ರೇಷ್ಠವಾದ ಸಿದ್ಧಿಯನ್ನು ಪಡೆದು ಅಲ್ಲಿದ್ದ ಆಶ್ರಮವಾಸಿಗಳೆಲ್ಲರಿಗೂ ಮಾನನೀಯನಾದನು.

ಯುಧಿಷ್ಠಿರ! ಹೀಗೆ ಆ ವಿಪ್ರರ್ಷಿಯು ಶೂದ್ರಮುನಿಗೆ ಉಪದೇಶ ಮಾಡಿದುದಕ್ಕಾಗಿ ಸಂಚಿತವಾದ ತಪಸ್ಸಿನ ಫಲವನ್ನು ಕಳೆದುಕೊಂಡು ಮಹಾಕಷ್ಟವನ್ನು ಹೊಂದಿದನು. ಆದುದರಿಂದ ಬ್ರಾಹ್ಮಣನಾದವನು ಹೀನವರ್ಣದವರಿಗೆ ಉಪದೇಶವನ್ನು ಮಾಡಬಾರದು. ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ದ್ವಿಜರೆಂದು ಹೇಳುತ್ತಾರೆ. ಅವರಿಗೆ ಉಪದೇಶ ಮಾಡುವುದರಿಂದ ಬ್ರಾಹ್ಮಣನು ದೂಷ್ಯನಾಗುವುದಿಲ್ಲ. ಆದುದರಿಂದ ಸತ್ಪುರುಷರು ಯಾವಾಗಲೂ ಯಾರಿಗಾಗಲೀ, ಯಾವುದೇ ಉಪದೇಶವನ್ನಾಗಲೀ–ಮಾಡಲು ಮುಂದಾಗಿ ಹೋಗಬಾರದು. ಧರ್ಮದ ಗತಿಯು ಅತಿಸೂಕ್ಷ್ಮವಾದುದು. ಅಂತಃಕರಣಶುದ್ಧಿಯಿಲ್ಲದವರು ಧರ್ಮದ ಸೂಕ್ಷ್ಮ ಗತಿಯನ್ನು ಸುಲಭವಾಗಿ ತಿಳಿಯಲಾರರು.

ತಸ್ಮಾನ್ಮೌನೇನ ಮುನಯೋ ದೀಕ್ಷಾಂ ಕುರ್ವನ್ತಿ ಚಾದೃತಾಃ ।
ದುರುಕ್ತಸ್ಯ ಭಯಾದ್ರಾಜನ್ನಾಭಾಷನ್ತೇ ಚ ಕಿಂಚನ ॥೭೦॥

ಈ ಕಾರಣದಿಂದಲೇ ಮುನಿಗಳು ಮೌನವಾಗಿಯೇ ಇದ್ದು ಆದರಪೂರ್ವಕವಾಗಿ ದೀಕ್ಷೆಯನ್ನು ಕೊಡುತ್ತಾರೆ. ಅನುಚಿತವಾದ ಮಾತು ಬಾಯಿಂದ ಹೊರಟುಬಿಡಬಹುದೆಂಬ ಭಯದಿಂದ ಮುನಿಗಳು ಯಾರೊಡನೆಯೂ ಯಾವ ಮಾತನ್ನೂ ಆಡುವುದಿಲ್ಲ.

ಧಾರ್ಮಿಕಾ ಗುಣಸಮ್ಪನ್ನಾಃ ಸತ್ಯಾರ್ಜವಸಮನ್ವಿತಾಃ ।
ದುರುಕ್ತವಾಚಾಭಿಹಿತೈಃ ಪ್ರಾಪ್ನುವನ್ತೀಹ ದುಷ್ಕೃತಮ್ ॥೭೧॥

ಧಾರ್ಮಿಕರೂ, ಗುಣಸಂಪನ್ನರೂ, ಸತ್ಯನಿಷ್ಠೆ-ಸರಳತೆ ಮುಂತಾದ ಸದ್ಗುಣವಿಶಿಷ್ಟರಾಗಿರತಕ್ಕವರೂ ಕೂಡ ಶಾಸ್ತ್ರನಿಷಿದ್ಧವಾದ ಅನುಚಿತವಾದ ಮಾತುಗಳನ್ನಾಡುವುದರಿಂದ ಪಾಪವನ್ನು ಕಟ್ಟಿಕೊಳ್ಳುತ್ತಾರೆ.

ಉಪದೇಶೋ ನ ಕರ್ತವ್ಯಃ ಕದಾಚಿದಪಿ ಕಸ್ಯಚಿತ್ ।
ಉಪದೇಶಾದ್ಧಿ ತತ್ಪಾಪಂ ಬ್ರಾಹ್ಮಣಃ ಸಮವಾಪ್ನುಯಾತ್ ॥೭೨॥

ಬ್ರಾಹ್ಮಣನು ಯಾವಾಗಲೂ ಯಾರಿಗೂ ಉಪದೇಶ ಮಾಡಲೇ ಬಾರದು. ಉಪದೇಶಮಾಡುವುದರಿಂದ ಶಿಷ್ಯನ ಪಾಪವನ್ನು ಉಪದೇಶಕನಾದ ಬ್ರಾಹ್ಮಣನೇ ಗ್ರಹಿಸಬೇಕಾಗುತ್ತದೆ.

ವಿಮೃಶ್ಯ ತಸ್ಮಾತ್ಪ್ರಾಜ್ಞೇನ ವಕ್ತವ್ಯಂ ಧರ್ಮಮಿಚ್ಛತಾ ।
ಸತ್ಯಾನೃತೇನ ಹಿ ಕೃತ ಉಪದೇಶೋ ಹಿನಸ್ತಿ ಹಿ ॥೭೩॥

ಧರ್ಮವನ್ನು ಉಪದೇಶಿಸಲು ಇಚ್ಛಿಸುವ ಪ್ರಾಜ್ಞನು ಚೆನ್ನಾಗಿ ಶಾಸ್ತ್ರವಿಧಿಗಳನ್ನು ವಿಮರ್ಶೆಮಾಡಿ ಉಪದೇಶಮಾಡಬೇಕು. ಸತ್ಯ ಮತ್ತು ಅನೃತಗಳೆರಡನ್ನೂ ಕೂಡಿಸಿಕೊಂಡು ಮಾಡುವ ಉಪದೇಶವು ಉಪದೇಶಕನನ್ನು ನಾಶಗೊಳಿಸುತ್ತದೆ.

ವಕ್ತವ್ಯಮಿಹ ಪೃಷ್ಟೇನ ವಿನಿಶ್ಚಿತ್ಯ ವಿನಿಶ್ಚಯಮ್ ।
ಸ ಚೋಪದೇಶಃ ಕರ್ತವ್ಯೋ ಯೇನ ಧರ್ಮಮವಾಪ್ನುಯಾತ್॥೭೪॥

ಧರ್ಮಕಾರ್ಯಗಳಲ್ಲಿ ಆಸಕ್ತಿಯಿರುವವನು ಪ್ರಶ್ನಿಸಿದಾಗ ಶಾಸ್ತ್ರ ಸಿದ್ಧಾಂತವನ್ನು ಸಂಪೂರ್ಣವಾಗಿ ವಿಮರ್ಶಿಸಿ ಅದನ್ನೇ ಅವರಿಗೆ ಉಪದೇಶಿಸಬೇಕು. ಅದರಿಂದ ಪುಣ್ಯವು ಲಭಿಸುತ್ತದೆ.

ಯುಧಿಷ್ಠಿರ! ಉಪದೇಶದ ಸಂಬಂಧವಾಗಿ ನಿನಗೆ ಎಲ್ಲ ವಿಷಯಗಳನ್ನು ಹೇಳಿದ್ದೇನೆ. ತಾತ್ಪರ್ಯಾರ್ಥವನ್ನು ಪುನಃ ಹೇಳುತ್ತೇನೆ.

ಮಹಾನ್ಕ್ಲೇಶೋ ಹಿ ಭವತಿ ತಸ್ಮಾನ್ನೋಪದಿಶೇದಿಹ ॥೭೫॥

ಉಪದೇಶಮಾಡುವುದರಿಂದ ಮಹಾಕ್ಲೇಶವೇ ಉಂಟಾಗುತ್ತದೆ. ಆದುದರಿಂದ ಇಲ್ಲಿ ಯಾರಿಗೂ ಉಪದೇಶವನ್ನು ಮಾಡಲೇಬಾರದು.”

೧೦ನೆಯ ಅಧ್ಯಾಯವು ಮುಗಿಯಿತು.

೧೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಲಕ್ಷ್ಮಿಯ ನಿವಾಸಕ್ಕೆ ಯೋಗ್ಯರಾದ ಹಾಗೂ ಅಯೋಗ್ಯರಾದ ಸ್ತ್ರೀ-ಪುರುಷರ ರೂಪ-ಲಕ್ಷಣಗಳು

ಪಾರಿಕ್ಷಿತ! ಯುಧಿಷ್ಠಿರನು ಹೇಳುತ್ತಾನೆ :

ಕೀದೃಶೇ ಪುರುಷೇ ತಾತ ಸ್ತ್ರೀಷು ವಾ ಭರತರ್ಷಭ ।
ಶ್ರೀಃ ಪದ್ಮಾ ವಸತೇ ನಿತ್ಯಂ ತನ್ಮೇ ಬ್ರೂಹಿ ಪಿತಾಮಹ ॥೧॥

“ಪಿತಾಮಹನೇ! ಎಂತಹ ಪುರುಷನಲ್ಲಿ ಅಥವಾ ಸ್ತ್ರೀಯರಲ್ಲಿ ಪದ್ಮಾಲಯಳಾದ ಮತ್ತು ಪದ್ಮಹಸ್ತೆಯಾದ ಲಕ್ಷ್ಮಿಯು ಶಾಶ್ವತವಾಗಿ ನೆಲೆಸುತ್ತಾಳೆ? ಈ ವಿಷಯವನ್ನು ನನಗೆ ಹೇಳು.”

ಭೀಷ್ಮನು ಹೇಳುತ್ತಾನೆ :

“ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ನಡೆದ ಒಂದು ವೃತ್ತಾಂತವನ್ನು ನಾನು ಕೇಳಿದ್ದೇನೆ. ಹಿಂದೊಮ್ಮೆ ಶ್ರೀಕೃಷ್ಣನ ಪತ್ನಿಯಾದ ರುಕ್ಮಿಣೀ ದೇವಿಯು ದೇವಕೀಪುತ್ರನಾದ ಶ್ರೀಕೃಷ್ಣನ ಸನ್ನಿಧಿಯಲ್ಲಿ ಲಕ್ಷ್ಮಿಯನ್ನು ಕುರಿತು ಪ್ರಶ್ನಿಸಿದುದನ್ನೂ ಮತ್ತು ಆ ಪ್ರಶ್ನೆಗೆ ಅವಳಿತ್ತ ಉತ್ತರವನ್ನೂ ವಿವರಿಸಿ ಹೇಳುತ್ತೇನೆ ; ಕೇಳು.

ಮಕರಧ್ವಜನ (ಪ್ರದ್ಯುಮ್ನನ) ತಾಯಿಯಾದ, ವಿಸ್ಮಯದಿಂದ ವಿಕಸಿತವಾದ ಮತ್ತು ಸುಂದರವಾದ ಕಣ್ಣುಗಳನ್ನು ಹೊಂದಿದ್ದ ರುಕ್ಮಿಣೀ ದೇವಿಯು–ಶ್ರೀಮನ್ನಾರಾಯಣನ ತೊಡೆಯ ಮೇಲೆ ಕುಳಿತಿದ್ದ, ಕಮಲಪುಷ್ಪದ ಬಣ್ಣಕ್ಕೆ ಸಮಾನವಾದ ಬಣ್ಣವುಳ್ಳವಳಾಗಿದ್ದ, ಪ್ರಜ್ವಲಿಸುವ ಕಾಂತಿಯಿಂದ ಕೂಡಿದ್ದ ಲಕ್ಷ್ಮಿಯನ್ನು ಕುತೂಹಲಯುಕ್ತಳಾಗಿ ಪ್ರಶ್ನಿಸಿದಳು :

ಕಾನೀಹ ಭೂತಾನ್ಯುಪಸೇವಸೇ ತ್ವಂ
ಸಂತಿಷ್ಠಸೇ ಕಾನಿವ ಸೇವಸೇ ತ್ವಮ್ ।
ತಾನಿ ತ್ರಿಲೋಕೇಶ್ವರಭೂತಕಾನ್ತೇ
ತತ್ತ್ವೇನ ಮೇ ಬ್ರೂಹಿ ಮಹರ್ಷಿಕನ್ಯೇ ॥೪॥

"ಭೃಗುಮಹರ್ಷಿಗಳ ಮಗಳೇ! ತ್ರಿಲೋಕೇಶ್ವರನಾದ ನಾರಾಯಣನ ಪ್ರಿಯತಮೆಯೇ! ನೀನು ಈ ಜಗತ್ತಿನಲ್ಲಿ ಯಾವ ಪ್ರಾಣಿಗಳ ಮೇಲೆ ಕೃಪೆದೋರುವೆ? ಯಾರ ಮನೆಯಲ್ಲಿ ಸ್ಥಿರವಾಗಿ ನಿಲ್ಲುವೆ? ಹೇಗಿರುವವರನ್ನು ಸೇವಿಸುವೆ?–ಈ ಎಲ್ಲ ವಿಷಯಗಳನ್ನೂ ನನಗೆ ಯಥಾವತ್ತಾಗಿ ಹೇಳು."

ಯುಧಿಷ್ಠಿರ! ರುಕ್ಮಿಣಿಯು ಹೀಗೆಂದು ಪ್ರಶ್ನಿಸಲು ಚಂದ್ರಮುಖಿಯಾದ ಲಕ್ಷ್ಮೀದೇವಿಯು ಪ್ರಸನ್ನಳಾಗಿ ಗರುಡಧ್ವಜನಾದ ಮಹಾವಿಷ್ಣುವಿನ ಸಮಕ್ಷದಲ್ಲಿ ಮನೋಹರವೂ ಮಧುರವೂ ಆಗಿದ್ದ ಈ ಮಾತುಗಳನ್ನು ಹೇಳಿದಳು :

ವಸಾಮಿ ನಿತ್ಯಂ ಸುಭಗೇ ಪ್ರಗಲ್ಭೇ
ದಕ್ಷೇ ನರೇ ಕರ್ಮಣಿ ವರ್ತಮಾನೇ ।
ಅಕ್ರೋಧನೇ ದೇವಪರೇ ಕೃತಜ್ಞೇ
ಜಿತೇನ್ದ್ರಿಯೇ ನಿತ್ಯಮುದೀರ್ಣಸತ್ತ್ವೇ ॥೬॥

"ರುಕ್ಮಿಣೀದೇವಿಯೇ! ಸೌಭಾಗ್ಯಶಾಲಿಯಲ್ಲಿಯೂ, ಧೈರ್ಯದಿಂದ ಚೆನ್ನಾಗಿ ಮಾತನಾಡುವವನಲ್ಲಿಯೂ, ಕಾರ್ಯಕುಶಲನಲ್ಲಿಯೂ, ಕಾರ್ಯದಲ್ಲಿಯೇ ಯಾವಾಗಲೂ ನಿರತನಾಗಿರುವವನಲ್ಲಿಯೂ, ಕ್ರೋಧರಹಿತನಲ್ಲಿಯೂ, ದೇವಾರಾಧನತತ್ಪರನಲ್ಲಿಯೂ, ಮಾಡಿದ ಉಪಕಾರವನ್ನು ಸ್ಮರಿಸುವವನಲ್ಲಿಯೂ, ಜಿತೇಂದ್ರಿಯನಲ್ಲಿಯೂ, ಅಧಿಕವಾದ ಸತ್ತ್ವಗುಣವಿರುವವನಲ್ಲಿಯೂ –ನಾನು ನಿತ್ಯವೂ ವಾಸಮಾಡುತ್ತೇನೆ.

ನಾಕರ್ಮಶೀಲೇ ಪುರುಷೇ ವಸಾಮಿ
ನ ನಾಸ್ತಿಕೇ ಸಾಙ್ಕರಿಕೇ ಕೃತಘ್ನೇ ।
ನ ಭಿನ್ನವೃತ್ತೇ ನ ನೃಶಂಸವರ್ಣೇ
ನ ಚಾಪಿ ಚೌರೇ ನ ಗುರುಷ್ವಸೂಯೇ ॥೭॥

ಕಾರ್ಯಶೀಲನಾಗದೇ ಇರುವವನಲ್ಲಿಯೂ, ನಾಸ್ತಿಕನಲ್ಲಿಯೂ, ವರ್ಣಸಂಕರವುಳ್ಳವನಲ್ಲಿಯೂ, ಮಾಡಿದ ಉಪಕಾರವನ್ನು ಸ್ಮರಿಸದೇ ಇರುವವನಲ್ಲಿಯೂ, ದುರಾಚಾರನಲ್ಲಿಯೂ, ಕ್ರೂರನಲ್ಲಿಯೂ, ಕಳ್ಳನಲ್ಲಿಯೂ,

ಗುರುಜನರಲ್ಲಿ ದೋಷದೃಷ್ಟಿಯುಳ್ಳವನಲ್ಲಿಯೂ ನಾನು ವಾಸಮಾಡುವುದಿಲ್ಲ.

ಯೇ ಚಾಲ್ಪತೇಜೋಬಲಸತ್ತ್ವಮಾನಾಃ
ಕ್ಲಿಶ್ಯನ್ತಿ ಕುಪ್ಯನ್ತಿ ಚ ಯತ್ರ ತತ್ರ ।
ನ ಚೈವ ತಿಷ್ಠಾಮಿ ತಥಾವಿಧೇಷು
ನರೇಷು ಸಂಗುಪ್ತಮನೋರಥೇಷು ॥೮॥

ಯಾರು ತೇಜಸ್ಸಿನಲ್ಲಿಯೂ (ಶೌರ್ಯದಲ್ಲಿಯೂ), ಬಲದಲ್ಲಿಯೂ, ಸತ್ತ್ವದಲ್ಲಿಯೂ (ಬುದ್ಧಿಯಲ್ಲಿಯೂ), ಗೌರವದಲ್ಲಿಯೂ ಹೀನರಾಗಿರುವರೋ, ಎಲ್ಲೆಂದರಲ್ಲಿ ಸಂಕಟಪಡುವರೋ, ಎಲ್ಲೆಂದರಲ್ಲಿ ಕೋಪಗೊಳ್ಳುವರೋ, ಮನಸ್ಸಿನಲ್ಲಿರುವ ಆಶಯವನ್ನು ಗುಟ್ಟಾಗಿಯೇ ಇಟ್ಟುಕೊಳ್ಳುವರೋ, ಬಹಿರಂಗಪಡಿಸುವುದಿಲ್ಲವೋ (ಯಾರ ಮನಸ್ಸು ಮತ್ತು ಕೃತಿಗಳು ಒಂದಕ್ಕೊಂದು ಬೇರೆಯೇ ಆಗಿರುವುವೋ) – ಅಂತಹ ಪುರುಷರಲ್ಲಿ ನಾನು ವಾಸಮಾಡುವುದಿಲ್ಲ.

ಯಶ್ಚಾತ್ಮನಿ ಪ್ರಾರ್ಥಯತೇ ನ ಕಿಞ್ಚಿ-
ದ್ಯಶ್ಚ ಸ್ವಭಾವೋಪಹತಾನ್ತರಾತ್ಮಾ ।
ತೇಷ್ವಲ್ಪಸನ್ತೋಷಪರೇಷು ನಿತ್ಯಂ
ನರೇಷು ನಾಹಂ ನಿವಸಾಮಿ ಸಮ್ಯಕ್ ॥೯॥

ಯಾವಾತನು ತನಗಾಗಿ ಯಾವುದನ್ನೂ ಇಚ್ಛಿಸುವುದೇ ಇಲ್ಲವೋ, ಅಂತರಾತ್ಮನನ್ನು ನೋಯಿಸುವುದೇ ಯಾವನ ಸ್ವಭಾವವಾಗಿರುತ್ತದೆಯೋ, ಅಂತಹ–ಅಲ್ಪತೃಪ್ತರಾದ ಪುರುಷರಲ್ಲಿ ನಾನು ಪೂರ್ಣಮನಸ್ಸಿನಿಂದ ವಾಸಮಾಡುವುದಿಲ್ಲ.

ಸ್ವಧರ್ಮಶೀಲೇಷು ಚ ಧರ್ಮವಿತ್ಸು
ವೃದ್ಧೋಪಸೇವಾನಿರತೇ ಚ ದಾನ್ತೇ ।
ಕೃತಾತ್ಮನಿ ಕ್ಷಾನ್ತಿಪರೇ ಸಮರ್ಥೇ
ಕ್ಷಾನ್ತಾಸು ದಾನ್ತಾಸು ತಥಾಬಲಾಸು ।
ಸತ್ಯಸ್ವಭಾವಾರ್ಜವಸಂಯುತಾಸು
ವಸಾಮಿ ದೇವದ್ವಿಜಪೂಜಿಕಾಸು ॥೧೦॥

ಸ್ವಧರ್ಮಪರಾಯಣರಾಗಿರುವ, ಧರ್ಮಜ್ಞರಾದ, ವೃದ್ಧರ ಸೇವೆ ಯಲ್ಲಿಯೇ ನಿರತರಾಗಿರುವ, ಜಿತೇಂದ್ರಿಯರಾಗಿರುವ, ಮನಸ್ಸನ್ನು ಸ್ವಾಧೀನ ದಲ್ಲಿಟ್ಟುಕೊಂಡಿರುವ, ಕ್ಷಮಾಶೀಲರಾದ, ಸಮರ್ಥರಾದ ಪುರುಷ ರಲ್ಲಿಯೂ –ಕ್ಷಮಾಗುಣಯುಕ್ತರಾದ, ಜಿತೇಂದ್ರಿಯರಾದ, ಸತ್ಯವಾದಿನಿ ಗಳಾಗಿಯೂ ಸರಳಸ್ವಭಾವದವರಾಗಿಯೂ ಇರುವ, ದೇವತೆಗಳನ್ನೂ ಬ್ರಾಹ್ಮಣರನ್ನೂ ಪೂಜಿಸುವ ಸ್ತ್ರೀಯರಲ್ಲಿಯೂ ನಾನು ವಾಸಮಾಡುತ್ತೇನೆ.

ಪ್ರಕೀರ್ಣಭಾಣ್ಡಾಮನವೇಕ್ಷ್ಯಕಾರಿಣೀಂ
ಸದಾ ಚ ಭರ್ತುಃ ಪ್ರತಿಕೂಲವಾದಿನೀಮ್ ।
ಪರಸ್ಯ ವೇಶ್ಮಾಭಿರತಾಮಲಜ್ಜಾ-
ಮೇವಂವಿಧಾಂ ತಾಂ ಪರಿವರ್ಜಯಾಮಿ ॥೧೧॥

ಮನೆಯ ಸುತ್ತಲೂ ಬಿದ್ದಿರುವ ಪಾತ್ರೆ-ಪದಾರ್ಥಗಳನ್ನು ಸರಿಯಾದ ಸ್ಥಳಗಳಲ್ಲಿಡದೇ ಇರುವವಳನ್ನೂ, ವಿವೇಚಿಸದೇ ಕಾರ್ಯಮಾಡು ವವಳನ್ನೂ, ಯಾವಾಗಲೂ ಪತಿಗೆ ಪ್ರತಿಕೂಲವಾದ ಮಾತುಗಳನ್ನೇ ಹೇಳುತ್ತಿರುವವಳನ್ನೂ, ಇತರರ ಮನೆಬಾಗಿಲಿನಲ್ಲಿಯೇ ಇರಲು ಆಸಕ್ತಳಾಗಿ ರುವವಳನ್ನೂ, ನಾಚಿಕೆಬಿಟ್ಟವಳನ್ನೂ ನಾನು ಪರಿತ್ಯಾಗಮಾಡುತ್ತೇನೆ.

ಪಾಪಾಮಚೋಕ್ಷಾಮವಲೇಹಿನೀಂ ಚ
ವ್ಯಪೇತಧೈರ್ಯಾಂ ಕಲಹಪ್ರಿಯಾಂ ಚ ।
ನಿದ್ರಾಭಿಭೂತಾಂ ಸತತಂ ಶಯಾನಾ-
ಮೇವಂವಿಧಾಂ ತಾಂ ಪರಿವರ್ಜಯಾಮಿ ॥೧೨॥

ದಯಾರಹಿತಳಾಗಿ ಪಾಪಕಾರ್ಯಗಳಲ್ಲಿ ತತ್ಪರಳಾಗಿರತಕ್ಕವಳನ್ನೂ, ಕುರೂಪಿಯಾಗಿರುವವಳನ್ನೂ (ಅವುಡುಕಚ್ಚುವವಳನ್ನೂ), ಧೈರ್ಯವಿಲ್ಲ ದವಳನ್ನೂ, ಜಗಳಗಂಟಿಯನ್ನೂ, ತೂಕಡಿಸುತ್ತಿರುವವಳನ್ನೂ, ಯಾವಾ ಗಲೂ ಮಲಗಿರುವವಳನ್ನೂ ನಾನು ಪರಿತ್ಯಾಗಮಾಡುತ್ತೇನೆ.

ಸತ್ಯಾಸು ನಿತ್ಯಂ ಪ್ರಿಯದರ್ಶನಾಸು
ಸೌಭಾಗ್ಯಯುಕ್ತಾಸು ಗುಣಾನ್ವಿತಾಸು ।

ವಸಾಮಿ ನಾರೀಷು ಪತಿವ್ರತಾಸು
ಕಲ್ಯಾಣಶೀಲಾಸು ವಿಭೂಷಿತಾಸು ॥೧೩॥

ಸತ್ಯವನ್ನೇ ಹೇಳುವ, ಪ್ರಿಯದರ್ಶಿನಿಯರಾದ (ಮನಸ್ಸಿಗೆ ಪ್ರಿಯವಾಗುವ ರೂಪ-ಸೌಂದರ್ಯಗಳನ್ನು ಹೊಂದಿರುವ), ಸೌಭಾಗ್ಯವತಿಯರಾದ, ಸದ್ಗುಣಸಂಪನ್ನೆಯರಾದ, ಮಂಗಳಕರವಾದ ಶೀಲ-ಸ್ವಭಾವಗಳುಳ್ಳ, ವಸ್ತ್ರಾಭರಣಗಳಿಂದ ವಿಭೂಷಿತೆಯರಾದ ಪತಿವ್ರತೆಯರಲ್ಲಿ ನಾನು ವಾಸಮಾಡುತ್ತೇನೆ.

ಯಾನೇಷು ಕನ್ಯಾಸು ವಿಭೂಷಣೇಷು
ಯಜ್ಞೇಷು ಮೇಘೇಷು ಚ ವೃಷ್ಟಿಮತ್ಸು ॥೧೪॥

ವಸಾಮಿ ಫುಲ್ಲಾಸು ಚ ಪದ್ಮಿನೀಷು
ನಕ್ಷತ್ರವೀಥೀಷು ಚ ಶಾರದೀಷು ।

ಗಜೇಷು ಗೋಷ್ಠೇಷು ತಥಾಸನೇಷು
ಸರಃಸು ಫುಲ್ಲೋತ್ಪಲಪಙ್ಕಜೇಷು ॥೧೫॥

ಸುಂದರವಾದ ಯಾನಗಳಲ್ಲಿ, ಕನ್ಯೆಯರಲ್ಲಿ, ಆಭರಣಗಳಲ್ಲಿ, ಯಜ್ಞಗಳಲ್ಲಿ, ಮಳೆಗರೆಯುವ ಮೇಘಗಳಲ್ಲಿ, ಅರಳಿರುವ ಕಮಲಗಳಲ್ಲಿ, ಶರತ್ಕಾಲದಲ್ಲಿ ಕಾಣುವ ನಕ್ಷತ್ರಪಂಕ್ತಿಗಳಲ್ಲಿ, ಗಜಶಾಲೆಗಳಲ್ಲಿ, ಗೋಶಾಲೆಗಳಲ್ಲಿ, ಸುಂದರವಾದ ಆಸನಗಳಲ್ಲಿ, ಅರಳಿರುವ ಕನ್ನೈದಿಲೆಗಳಿಂದಲೂ–ಕಮಲಗಳಿಂದಲೂ ಕೂಡಿರುವ ಸರೋವರಗಳಲ್ಲಿ ನಾನು ವಾಸಮಾಡುತ್ತೇನೆ.

ನದೀಷು ಹಂಸಸ್ವನನಾದಿತಾಸು
ಕ್ರೌಞ್ಚಾವಘುಷ್ಟಸ್ವರಶೋಭಿತಾಸು ।

ವಿಕೀರ್ಣಕೂಲದ್ರುಮರಾಜಿತಾಸು
ತಪಸ್ವಿಸಿದ್ಧದ್ವಿಜಸೇವಿತಾಸು ।

ವಸಾಮಿ ನಿತ್ಯಂ ಸುಬಹೂದಕಾಸು
ಸಿಂಹೈರ್ಗಜೈಶ್ಚಾಕುಲಿತೋದಕಾಸು ॥೧೬॥

ಹಂಸಪಕ್ಷಿಗಳ ಧ್ವನಿಯಿಂದ ನಿನಾದಿತವಾದ, ನೀರುಕೊಕ್ಕರೆಗಳ ಕಲ

ರವಸ್ವರದಿಂದ ಸುಶೋಭಿತವಾಗಿ ಕಾಣುವ, ತೀರಪ್ರದೇಶಗಳಲ್ಲಿ ದಟ್ಟವಾಗಿ ಬೆಳೆದಿರುವ ವೃಕ್ಷಗಳಿಂದ ರಾರಾಜಿಸುತ್ತಿರುವ, ತಪಸ್ವಿಗಳಿಂದಲೂ–ಸಿದ್ಧರಿಂದಲೂ–ದ್ವಿಜರಿಂದಲೂ ಸೇವಿಸಲ್ಪಡುತ್ತಿರುವ, ಸಿಂಹಗಳಿಂದಲೂ ಆನೆಗಳಿಂದಲೂ ಅಲ್ಲೋಲ-ಕಲ್ಲೋಲವಾಗಿ ಮಾಡಲ್ಪಟ್ಟ ನೀರಿನಿಂದ ಕೂಡಿರುವ, ಜಲಪೂರ್ಣವಾಗಿರುವ ನದಿಗಳಲ್ಲಿ ನಾನು ನಿತ್ಯವೂ ವಾಸಮಾಡುತ್ತೇನೆ.

ಮತ್ತೇ ಗಜೇ ಗೋವೃಷಭೇ ನರೇನ್ದ್ರೇ
ಸಿಂಹಾಸನೇ ಸತ್ಪುರುಷೇಷು ನಿತ್ಯಮ್ ॥೧೭॥
ಯಸ್ಮಿನ್ಜನೋ ಹವ್ಯಭುಜಂ ಜುಹೋತಿ
ಗೋಬ್ರಾಹ್ಮಣಂ ಚಾರ್ಚತಿ ದೇವತಾಶ್ಚ ।
ಕಾಲೇ ಚ ಪುಷ್ಪೈರ್ಬಲಯಃ ಕ್ರಿಯನ್ತೇ
ತಸ್ಮಿನ್ಗೃಹೇ ನಿತ್ಯಮುಪೈಮಿ ವಾಸಮ್ ॥೧೮॥

ಮದಿಸಿದ ಆನೆಯಲ್ಲಿಯೂ, ಹೋರಿಯಲ್ಲಿಯೂ, ರಾಜನಲ್ಲಿಯೂ, ಸಿಂಹಾಸನದಲ್ಲಿಯೂ, ಸತ್ಪುರುಷರಲ್ಲಿಯೂ ನಾನು ನಿತ್ಯವೂ ವಾಸಮಾಡುತ್ತೇನೆ. ಯಾವ ಮನೆಯಲ್ಲಿ ಪ್ರತಿನಿತ್ಯವೂ ಅಗ್ನಿಹೋತ್ರಮಾಡುವರೋ, ಗೋವುಗಳನ್ನೂ–ಬ್ರಾಹ್ಮಣರನ್ನೂ–ದೇವತೆಗಳನ್ನೂ ಅರ್ಚನೆಮಾಡುವರೋ, ಸಮಯಗಳಲ್ಲಿ ದೇವತೆಗಳಿಗೆ ಪುಷ್ಪಬಲಿಗಳನ್ನು (ಪುಷ್ಪಾಂಜಲಿಯನ್ನು) ಸಮರ್ಪಿಸುವರೋ–ಅಂತಹವರ ಮನೆಯಲ್ಲಿಯೂ ನಾನು ನಿತ್ಯವಾಸವನ್ನು ಹೊಂದುತ್ತೇನೆ.

ಸ್ವಾಧ್ಯಾಯನಿತ್ಯೇಷು ಸದಾ ದ್ವಿಜೇಷು
ಕ್ಷತ್ರೇ ಚ ಧರ್ಮಾಭಿರತೇ ಸದೈವ ।
ವೈಶ್ಯೇ ಚ ಕೃಷ್ಯಾಭಿರತೇ ವಸಾಮಿ
ಶೂದ್ರೇ ಚ ಶುಶ್ರೂಷಣನಿತ್ಯಯುಕ್ತೇ ॥೧೯॥

ಯಾವಾಗಲೂ ಅಧ್ಯಯನ–ಅಧ್ಯಾಪನಗಳಲ್ಲಿಯೇ ತೊಡಗಿರುವ ಬ್ರಾಹ್ಮಣರಲ್ಲಿಯೂ, ಸದಾ ಸ್ವಧರ್ಮಪರಾಯಣನಾಗಿರುವ ಕ್ಷತ್ರಿಯನಲ್ಲಿಯೂ, ಕೃಷಿ-ವಾಣಿಜ್ಯಾದಿಗಳಲ್ಲಿಯೇ ನಿರತನಾಗಿರುವ ವೈಶ್ಯನಲ್ಲಿಯೂ,

ಸದಾ ಶುಶ್ರೂಷೆಯಲ್ಲಿಯೇ ನಿರತನಾಗಿರುವ ಶೂದ್ರನಲ್ಲಿಯೂ ನಾನು ಯಾವಾಗಲೂ ವಾಸಮಾಡುತ್ತೇನೆ.

ನಾರಾಯಣೇ ತ್ವೇಕಮನಾ ವಸಾಮಿ
ಸರ್ವೇಣ ಭಾವೇನ ಶರೀರಭೂತಾ ।
ತಸ್ಮಿನ್ಹಿ ಧರ್ಮಃ ಸುಮಹಾನ್ನಿವಿಷ್ಟೋ
ಬ್ರಹ್ಮಣ್ಯತಾ ಚಾತ್ರ ತಥಾ ಪ್ರಿಯತ್ವಮ್ ॥೨೦॥

ನಾನು ಮೂರ್ತಸ್ವರೂಪವನ್ನು ತಾಳಿ ಅನನ್ಯಚಿತ್ತಳಾಗಿ ಪೂರ್ಣಭಾವದಿಂದ ನಾರಾಯಣನಲ್ಲಿ ವಾಸಮಾಡುತ್ತೇನೆ. ಏಕೆಂದರೆ : ಅವನಲ್ಲಿಯೇ ಮಹಾಧರ್ಮವು ಸನ್ನಿಹಿತವಾಗಿದೆ. (ನಾನು ಧರ್ಮನಿಲಯೆಯಾಗಿದ್ದೇನೆ.) ಅವನಿಗೆ ಬ್ರಾಹ್ಮಣರ ವಿಷಯದಲ್ಲಿ ಪ್ರೀತಿಯಿದೆ. ಮೇಲಾಗಿ ಅವನು ಸರ್ವರಿಗೂ ಪ್ರಿಯನಾಗಿದ್ದಾನೆ.

ನಾಹಂ ಶರೀರೇಣ ವಸಾಮಿ ದೇವಿ
ನೈವಂ ಮಯಾ ಶಕ್ಯಮಿಹಾಭಿಧಾತುಮ್ ।
ಭಾವೇನ ಯಸ್ಮಿನ್ನಿವಸಾಮಿ ಪುಂಸಿ
ಸ ವರ್ಧತೇ ಧರ್ಮಯಶೋಽರ್ಥಕಾಮೈಃ ॥೨೧॥

ನಾರಾಯಣನ ಹೊರತಾಗಿ ನಾನು ಯಾರಲ್ಲಿಯೂ ಶರೀರಯುಕ್ತಳಾಗಿ ನೆಲೆಸುವುದಿಲ್ಲ. ಇದೇ ರೂಪದಿಂದಲೇ ನಾನು ಇನ್ನಾವ ಸ್ಥಳದಲ್ಲಿಯೂ ಇರಲು ಸಾಧ್ಯವೂ ಇಲ್ಲ. ನಾನು ಯಾವ ಪುರುಷನಲ್ಲಿ ಭಾವನಾಮಾತ್ರದಿಂದಲೇ ನೆಲೆಸಿರುವೆನೋ–ಅವನು ಧರ್ಮ, ಯಶಸ್ಸು, ಧನ ಮತ್ತು ಕಾಮನೆಗಳಿಂದ (ಧರ್ಮಾರ್ಥ-ಕಾಮ-ಯಶಸ್ಸುಗಳಿಂದ) ಅಭಿವೃದ್ಧಿಯನ್ನು ಹೊಂದುತ್ತಾನೆ. (ನಾನು ಒಬ್ಬನಲ್ಲಿ ನೆಲೆಸಿರುವೆನೆಂಬುದಕ್ಕೆ ಇದೇ ನಿದರ್ಶನವಾಗಿದೆ.)”

ಇಇನೆಯ ಅಧ್ಯಾಯವು ಮುಗಿಯಿತು.

೨೬ನೆಯ ಸಂಪುಟವು ಮುಗಿಯಿತು.

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯನ್ತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಃ ಸಮಸ್ತಾಃ ಸುಖಿನೋ ಭವನ್ತು ॥

ಕಾಲೇ ವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಽಯಂ ಕ್ಷೋಭರಹಿತೋ ಬ್ರಾಹ್ಮಣಾಃ ಸನ್ತು ನಿರ್ಭಯಾಃ ॥

ಅಪುತ್ರಾಃ ಪುತ್ರಿಣಃ ಸನ್ತು ಪುತ್ರಿಣಃ ಸನ್ತು ಪೌತ್ರಿಣಃ ।
ಅಧನಾಃ ಸಧನಾಃ ಸನ್ತು ಜೀವನ್ತು ಶರದಾಂ ಶತಮ್ ॥

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಹರಿಃ ಓಂ

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು

ಓಂ ತತ್ಸತ್

ಪರಿಶಿಷ್ಟ

ಸ್ತ್ರೀಪರ್ವ :– ೧೧ನೆಯ ಅಧ್ಯಾಯ : ಧೃತರಾಷ್ಟ್ರನು ರಣರಂಗಕ್ಕೆ ಹೋಗುತ್ತಿದ್ದಾಗ ನಡುದಾರಿಯಲ್ಲಿ ಅವನನ್ನು ಕೃಪಾಶ್ವತ್ಥಾಮ-ಕೃತವರ್ಮರು ನೋಡುತ್ತಾರೆ. ಇಲ್ಲಿ ನಾವು ಹಿಂದಿನ ಕಥೆಯನ್ನು ಸ್ಮರಣೆಗೆ ತೆಗೆದುಕೊಳ್ಳಬೇಕಾಗುತ್ತದೆ. ರಾತ್ರಿ ಮಲಗಿದ್ದವರನ್ನು ಸಂಹರಿಸಿದನಂತರ ಆ ವಿಷಯವನ್ನು ತಿಳಿಸಲು ಅಶ್ವತ್ಥಾಮಾದಿಗಳು ದುರ್ಯೋಧನನ ಬಳಿಗೆ ಹೋಗುತ್ತಾರೆ. ಎಲ್ಲ ವಿಷಯಗಳನ್ನೂ ಕೇಳಿ ದುರ್ಯೋಧನನು ಸಂತೃಪ್ತನಾಗಿ ಪ್ರಾಣಬಿಟ್ಟನಂತರ ಆ ಮೂವರೂ ಬರುತ್ತಿರುವ ಹಾದಿಯಲ್ಲಿ ಧೃತರಾಷ್ಟ್ರನನ್ನು ಸಂಧಿಸುತ್ತಾರೆ. ಆ ವೇಳೆಗೆ ಯುಧಿಷ್ಠಿರನಿಗೆ ಧೃಷ್ಟದ್ಯುಮ್ನನ ಸಾರಥಿಯ ಮೂಲಕವಾಗಿ ತನ್ನ ಕಡೆಯವರೆಲ್ಲರೂ ನಿಹತರಾದರೆಂಬ ವಾರ್ತೆ ಮಾತ್ರವೇ ತಿಳಿದಿದ್ದಿತು. ಈ ಕಾರಣದಿಂದಲೇ ಆ ಮೂವರೂ **ತೇಷಾಂ ತು ಕದನಂ ಕೃತ್ವಾ ಸಂಸ್ಥಾತುಂ ನೋತ್ಸಹಾಮಹೇ**(೧೬) ಪಾಂಡವರ ಮಕ್ಕಳನ್ನೂ ಮತ್ತು ಪ್ರಿಯಬಂಧುಗಳನ್ನೂ ಸಂಹರಿಸಿರುವ ನಾವು ಇಲ್ಲಿಯೇ ನಿಲ್ಲಲು ಉತ್ಸಾಹಿಗಳಾಗಿಲ್ಲ–ಎಂದು ಗಾಂಧಾರಿಗೆ ಹೇಳುತ್ತಾರೆ. ಸೂರ್ಯೋದಯವಾಗುವುದರೊಳಗೆ ಮೂವರೂ ಒಂದೊಂದು ಕಡೆಗೆ ಹೊರಟುಹೋಗುತ್ತಾರೆ.

ಮುಂದೆ ಅಶ್ವತ್ಥಾಮನು ಒಬ್ಬೊಂಟಿಗನಾಗಿರುವಾಗಲೇ ಭೀಮಸೇನನು ಅವನನ್ನು ಬೆನ್ನಟ್ಟುತ್ತಾನೆ. ಭೀಮಸೇನನು ಬರುವ ವೇಳೆಗೆ ಕೃಪರಾಗಲೀ, ಕೃತವರ್ಮನಾಗಲೀ –ಅಶ್ವತ್ಥಾಮನೊಡನೆ ಇರುವುದಿಲ್ಲ. ಕಥೆಯನ್ನು ಹೀಗೆ ಅಳವಡಿಸಿಕೊಳ್ಳಬೇಕಾಗಿದೆ.

೧೨ನೆಯ ಅಧ್ಯಾಯ :– ಭೀಮಸೇನನು ಅಶ್ವತ್ಥಾಮನ ಶಿರೋಮಣಿ ಯನ್ನು ದ್ರೌಪದಿಗೆ ತಂದೊಪ್ಪಿಸಿ ಸಮಾಧಾನಪಡಿಸಿದ ನಂತರದ ಪ್ರಕರಣವು ಇಲ್ಲಿ ಪ್ರಾರಂಭವಾಗಿದೆ. ಧೃತರಾಷ್ಟ್ರನು ಪರಿವಾರಸಹಿತನಾಗಿ ರಣಭೂಮಿಗೆ ಹೊರಟನೆಂಬ ವಾರ್ತೆಯನ್ನು ಕೇಳಿ ರಾಜನನ್ನು ಸಂದರ್ಶಿಸಲು ಯುಧಿಷ್ಠಿರನೂ ಸಪರಿವಾರನಾಗಿ ಹೊರಡುತ್ತಾನೆ. ಧೃತರಾಷ್ಟ್ರನ ಸಮೀಪಕ್ಕೆ ಬರುತ್ತಲೇ ಅವನ ಸುತ್ತಲೂ ಇದ್ದ ಸ್ತ್ರೀಯರು ಯುಧಿಷ್ಠಿರನನ್ನು ಬಹಳ

ವಾಗಿ ನಿಂದಿಸುತ್ತಾರೆ. ಅವರ ಮಧ್ಯದಲ್ಲಿಯೇ ಹಾದಿಯನ್ನು ಮಾಡಿಕೊಂಡು ಯುಧಿಷ್ಠಿರನು ಧೃತರಾಷ್ಟ್ರನ ಬಳಿಗೆ ಹೋಗಿ ನಮಸ್ಕಾರಮಾಡುತ್ತಾನೆ. ಮನಸ್ಸಿಲ್ಲದಿದ್ದರೂ ಧೃತರಾಷ್ಟ್ರನು ಯುಧಿಷ್ಠಿರನನ್ನು ಹಿಡಿದೆತ್ತಿ ಆಲಿಂಗಿಸಿ ಕೊಳ್ಳುತ್ತಾನೆ. ಬಳಿಕ ಧೃತರಾಷ್ಟ್ರನು ಭೀಮಸೇನನನ್ನು ಆಲಿಂಗಿಸಿಕೊಳ್ಳಲು ಇಚ್ಛಿಸುತ್ತಾನೆ. ಅವನ ಮನಸ್ಸಿನಲ್ಲಿರುವ ದುಷ್ಟಭಾವನೆಯನ್ನು ತಿಳಿದಿದ್ದ ಶ್ರೀಕೃಷ್ಣನು ಭೀಮಸೇನನ ಲೋಹದ ಪ್ರತಿಮೆಯನ್ನು ಧೃತರಾಷ್ಟ್ರನ ಮುಂದೆ ನಿಲ್ಲಿಸುತ್ತಾನೆ. ಧೃತರಾಷ್ಟ್ರನು ಲೋಹದ ಪ್ರತಿಮೆಯನ್ನೇ ನಿಜವಾದ ಭೀಮಸೇನನೆಂದು ಭಾವಿಸಿ ಭೀಮನನ್ನು ಧ್ವಂಸಮಾಡಬೇಕೆನ್ನುವ ಆಶಯದಿಂದಲೇ ಗಟ್ಟಿಯಾಗಿ ಅಪ್ಪಿಕೊಳ್ಳುತ್ತಾನೆ. ಆ ಪ್ರತಿಮೆಯು ಚೂರು-ಚೂರಾಗುತ್ತದೆ. ಲೋಹದ ಪ್ರತಿಮೆಯಿಂದಾದ ಆಘಾತದಿಂದಾಗಿ ಧೃತರಾಷ್ಟ್ರನ ಬಾಯಿಯ ಮೂಲಕವಾಗಿ ರಕ್ತವು ಹೊರಬರುತ್ತದೆ. ಅವನು ಎಚ್ಚರದಪ್ಪುತ್ತಾನೆ. ಸ್ವಲ್ಪಹೊತ್ತಿನನಂತರ ಮೇಲೆದ್ದು ಭೀಮನು ಸತ್ತು ಹೋದನೆಂದು ಭಾವಿಸಿ ಅವನಿಗಾಗಿ ವಿಲಪಿಸುತ್ತಾನೆ. ಬಳಿಕ ಶ್ರೀಕೃಷ್ಣನು ಭೀಮಸೇನನು ಜೀವಂತನಾಗಿರುವನೆಂದು ಹೇಳಿ ಸಮಾಧಾನ ಗೊಳಿಸುತ್ತಾನೆ. ಇಲ್ಲಿಗೆ ಅಧ್ಯಾಯವು ಮುಗಿಯುತ್ತದೆ. ಕಥಾವಸ್ತುವು ಸ್ವಾರಸ್ಯವಾಗಿದೆ. ಧೃತರಾಷ್ಟ್ರನ ಬಲ ಮತ್ತು ರೋಷಗಳೆಷ್ಟೆಂಬುದು ಈ ಅಧ್ಯಾಯದಲ್ಲಿ ಕಣ್ಣುಗಳಿಗೆ ಕಟ್ಟುವಂತೆ ವರ್ಣಿತವಾಗಿದೆ. ಆದರೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಒಂದೆರಡು ವಿಷಯಗಳೂ ಇವೆ. ಧೃತರಾಷ್ಟ್ರನೂ ಮತ್ತು ಅವನ ಪರಿವಾರದವರೂ ಇರುವುದು ಯುದ್ಧಭೂಮಿಗೂ ಮತ್ತು ಹಸ್ತಿನಾಪಟ್ಟಣಕ್ಕೂ ಮಧ್ಯದಲ್ಲಿ. ರಾಜನಾಗ ಹಸ್ತಿನಾಪಟ್ಟಣದ ಅರಮನೆಯಲ್ಲಿರಲಿಲ್ಲ. ಯುಧಿಷ್ಠಿರನು ಅವನನ್ನು ಸಂದರ್ಶಿಸುವ ಸಲುವಾಗಿ ಸಹೋದರರೊಡನೆ ಅವನಿದ್ದ ಸ್ಥಳಕ್ಕೆ ಬಂದಿರುತ್ತಾನೆ. ಆ ಸಮಯದಲ್ಲಿ ಲೋಹದ ಪ್ರತಿಮೆಯು ಅಲ್ಲಿಗೆ ಹೇಗೆ ಬಂತು? ಶ್ರೀಕೃಷ್ಣನ ದೂರಾಲೋಚನಾಶಕ್ತಿಯು ಎಷ್ಟಿತ್ತೆಂಬುದು ಇಲ್ಲಿ ನಮಗೆ ಅರಿವಾಗುತ್ತದೆ. ನೂರು ಮಕ್ಕಳನ್ನೂ ಕಳೆದುಕೊಂಡ ಧೃತರಾಷ್ಟ್ರನಿಗೆ ಮಕ್ಕಳೆಲ್ಲರನ್ನೂ ಸಂಹಾರಮಾಡಿದ ಭೀಮನ ವಿಷಯದಲ್ಲಿ ಎಂತಹ ದಾರುಣವಾದ ಕೋಪವಿದ್ದಿರಬಹುದೆಂಬುದನ್ನು ಶ್ರೀಕೃಷ್ಣನು

ಮುಂದಾಗಿಯೇ ಅರಿತಿದ್ದನು. ಈ ಕಾರಣದಿಂದಲೇ ಪ್ರತಿಮೆಯೊಂದನ್ನು ಸಿದ್ಧಪಡಿಸಿಕೊಂಡೇ ಪಾಂಡವರೊಡನೆ ಧೃತರಾಷ್ಟ್ರನನ್ನು ಸಂಧಿಸಲು ಹೋಗಿದ್ದನು. ಶ್ರೀಕೃಷ್ಣನು ಯೋಚಿಸಿದ್ದಂತೆಯೇ ಪ್ರತಿಮೆಯು ನುಚ್ಚು ನೂರಾಯಿತು. ಕೋಪದ ಆವೇಶದಲ್ಲಿದ್ದ ಧೃತರಾಷ್ಟ್ರನಿಗೆ ತನ್ನ ಮುಂದಿದ್ದುದು ಲೋಹದ ಪ್ರತಿಮೆ ಎಂಬುದರ ಅರಿವೂ ಆಗಲಿಲ್ಲ. ಇಂತಹ ಅದ್ಭುತವಾದ ಬುದ್ಧಿಚಾತುರ್ಯವನ್ನು ತೋರಿ **ಮಮ ಪ್ರಾಣಾ ಹಿ ಪಾಣ್ಡವಾಃ** ಎಂಬುದನ್ನು ಶ್ರೀಕೃಷ್ಣನು ಲೋಕಕ್ಕೆ ಈ ಸಂದರ್ಭದಲ್ಲಿಯೂ ತೋರಿಸಿಕೊಟ್ಟಿದ್ದಾನೆ.

೧೩ನೆಯ ಅಧ್ಯಾಯ :– ಈ ಅಧ್ಯಾಯದಲ್ಲಿಯೂ ಶ್ರೀಕೃಷ್ಣನ ಮಾತು ಗಳೇ ಇವೆ. ಎಲ್ಲರ ವಿನಾಶಕ್ಕೂ ದುರ್ಯೋಧನನೇ ಕಾರಣನೆಂದು ಶ್ರೀಕೃಷ್ಣನು ಹೇಳುತ್ತಾನೆ. ಶ್ರೀಕೃಷ್ಣನ ಮಾತಿನಿಂದ ಸಮಾಧಾನಗೊಂಡ ಧೃತರಾಷ್ಟ್ರನು ಪಾಂಡವರ ವಿಷಯದಲ್ಲಿ ಸುಪ್ರೀತನಾಗಿ ಭೀಮಾದಿಗಳನ್ನು ಮೈದಡವುತ್ತಾನೆ.

೧೪ನೆಯ ಅಧ್ಯಾಯ :– ಈ ಅಧ್ಯಾಯವೂ ನಾಟಕೀಯವಾಗಿ ಕಾಣುತ್ತದೆ. ಹಿಂದೆ ೮ನೆಯ ಅಧ್ಯಾಯದಲ್ಲಿ ಧೃತರಾಷ್ಟ್ರನಿಗೆ ಸಮಾಧಾನ ಹೇಳಲು ಬಂದ ವ್ಯಾಸರು ಅಲ್ಲಿಯೇ ಅದೃಶ್ಯರಾಗುತ್ತಾರೆ. ಈ ಅಧ್ಯಾಯದಲ್ಲಿ ಪುನಃ ವ್ಯಾಸರು ಗಾಂಧಾರಿಯನ್ನು ಸಮಾಧಾನಗೊಳಿಸುವ ಸಲುವಾಗಿ ಬಂದು ಅವಳೊಡನೆ ಮಾತನಾಡುತ್ತಿದ್ದರೆಂದಿದೆ. ಗಾಂಧಾರಿಯು ತಮ್ಮ ಮೇಲೆ ಕೋಪಗೊಳ್ಳದಂತಾಗಬೇಕೆಂಬ ಇಚ್ಛೆಯಿಂದಲೇ ಯುಧಿಷ್ಠಿರನು ದುರ್ಯೋಧನನ ಸಂಹಾರವಾದೊಡನೆಯೇ ಶ್ರೀಕೃಷ್ಣನನ್ನು ಹಸ್ತಿನಾವತಿಗೆ ಕಳುಹಿಸಿರುತ್ತಾನೆ. ಆ ಸಮಯದಲ್ಲಿ ಶ್ರೀಕೃಷ್ಣನು **ಪಾಣ್ಡವಾನಾಂ ವಿನಾಶಾಯ ಮಾ ತೇ ಬುದ್ಧಿಃ ಕದಾಚನ** (೬೩-೬೪). ಪಾಂಡವರನ್ನು ವಿನಾಶ ಮಾಡಬೇಕೆನ್ನುವ ಬುದ್ಧಿಯು ನಿನಗೆ ಯಾವಾಗಲೂ ಉಂಟಾಗದಿರಲಿ– ಎಂದು ಗಾಂಧಾರಿಯನ್ನು ಪ್ರಾರ್ಥಿಸುತ್ತಾನೆ. ಅದಕ್ಕೆ ಉತ್ತರವಾಗಿ ಗಾಂಧಾರಿಯು ಪುತ್ರರ ಮರಣವಾರ್ತೆಯನ್ನು ಕೇಳಿ ತನ್ನ ಬುದ್ಧಿಯು ಸ್ವಲ್ಪ ಚಲಿಸಿತ್ತೆಂದೂ ಶ್ರೀಕೃಷ್ಣನ ಮಾತನ್ನು ಕೇಳಿದನಂತರ ಬುದ್ಧಿಯು ಸ್ಥಿರವಾಯಿ ತೆಂದೂ ಹೇಳುತ್ತಾಳೆ. **ಸಾ ಮೇ ವ್ಯವಸ್ಥಿತಾ ಶ್ರುತ್ವಾ ತವ ವಾಕ್ಯಂ ಜನಾ**

ರ್ದನ (೬೩-೬೬). ಹೀಗೆ ಹೇಳಿದ್ದವಳು ಪುನಃ ಇಲ್ಲಿ ಪಾಂಡವರಿಗೆ ಶಾಪ ಕೊಡಲು ಇಚ್ಛಿಸಿದ್ದಳೆಂದೂ ವ್ಯಾಸರು ಸಮಾಧಾನಗೊಳಿಸುತ್ತಿದ್ದರೆಂದೂ ಈ ಅಧ್ಯಾಯದಲ್ಲಿ ಹೇಳಿದೆ. ಗಾನ್ಧಾರೀ ಪುತ್ರಶೋಕಾರ್ತಾ ಶಪ್ತುಮೈಚ್ಛದನಿನ್ದಿತಾ (೨) ವ್ಯಾಸರು ಗಾಂಧಾರಿಗೆ ಸಮಾಧಾನ ಹೇಳುತ್ತಾರೆ. ಗಾಂಧಾರಿಯು ಸಮಾಧಾನಗೊಂಡರೂ ಭೀಮಸೇನನು 'ದುರ್ಯೋಧನ ನನ್ನು ಅಧರ್ಮಯುದ್ಧದಲ್ಲಿ ಪ್ರಹರಿಸಿದುದು ಸರಿಯೇ?'–ಎಂದು ಪ್ರಶ್ನಿಸುತ್ತಾಳೆ.

೧೫ನೆಯ ಅಧ್ಯಾಯ :– ಭೀಮಸೇನನೇ ಗಾಂಧಾರಿಗೆ ಉತ್ತರ ಹೇಳು ತ್ತಾನೆ. ದುರ್ಯೋಧನನನ್ನು ಅಧರ್ಮಮಾರ್ಗದಲ್ಲಿ ಕೊಂದುದಕ್ಕೆ ಕಾರಣ ಗಳನ್ನು ವಿವರಿಸುತ್ತಾನೆ. **ನ ಹಿ ಯುದ್ಧೇನ ಪುತ್ರಸ್ತೇ ಧರ್ಮ್ಯೇಣ ಸ ಮಹಾ ಬಲಃ । ಶಕ್ಯಃ ಕೇನಚಿದುದ್ಯನ್ತುಮತೋ ವಿಷಮಮಾಚರಮ್ ॥೩॥** 'ಮಹಾಬಲಿಷ್ಠನಾದ ನಿನ್ನ ಮಗನನ್ನು ಧರ್ಮಯುದ್ಧದ ಮೂಲಕವಾಗಿ ಎದುರಿಸಲು ಅಥವಾ ಸಂಹರಿಸಲು ಯಾರಿಂದಲೂ ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ವಿಷಮಾಚರಣೆಯನ್ನು ಮಾಡಿದೆನು'–ಎಂಬ ಭೀಮಸೇನನ ಮಾತು ಗಾಂಧಾರಿಗೆ ಆಪ್ಯಾಯಮಾನವಾಗಿ ಕಾಣುತ್ತದೆ. ದುರ್ಯೋಧನ ನನ್ನು ಅಧರ್ಮದ ಮೂಲಕವಾಗಿ ಸಂಹರಿಸಿದ ವಿಷಯವನ್ನೇ ಗಾಂಧಾರಿಯು ಬಿಟ್ಟು ದುಃಶಾಸನನ ರಕ್ತವನ್ನು ಹೀರಿದುದೇಕೆಂದು ಪ್ರಶ್ನಿಸುತ್ತಾಳೆ. **ಹತಾಶ್ವೇ ನಕುಲೇ ಯತ್ತು ವೃಷಸೇನೇನ ಭಾರತ । ಅಪಿಬಃ ಶೋಣಿತಂ ಸಂಖ್ಯೇ ದುಃಶಾಸನ ಶರೀರಜಮ್ ॥**(೧೩). 'ವೃಷಸೇನನು ನಕುಲನ ಕುದುರೆಗಳನ್ನು ಸಂಹರಿಸಿ ಅವನನ್ನು ರಥಹೀನನನ್ನಾಗಿ ಮಾಡಿದ ಸಮಯದಲ್ಲಿ ನೀನು ಯುದ್ಧದಲ್ಲಿ ದುಃಶಾಸನನನ್ನು ಸಂಹರಿಸಿ ಅವನ ರಕ್ತವನ್ನು ಪಾನಮಾಡಿದೆ'– ಎಂದು ಗಾಂಧಾರಿಯು ಹೇಳುತ್ತಾಳೆ. ಅದಕ್ಕೆ ಉತ್ತರ ಹೇಳುವಾಗ ಭೀಮಸೇನನು **ಹತಾಶ್ವಂ ನಕುಲಂ ದೃಷ್ಟ್ವಾ ವೃಷಸೇನೇನ ಸಂಯುಗೇ । ಭ್ರಾತೄಣಾಂ ಸಂಪ್ರಹೃಷ್ಟಾನಾಂ ತ್ರಾಸಃ ಸಂಜನಿತೋ ಮಯಾ** (೧೭) 'ವೃಷಸೇನನಿಂದ ನಕುಲನು ಕುದುರೆಗಳನ್ನು ಕಳೆದುಕೊಂಡುದನ್ನು ನೋಡಿ ದುಃಶಾಸನನೇ ಆದಿಯಾಗಿ ದುರ್ಯೋಧನನ ಎಲ್ಲ ಅನುಜರೂ ಹೃಷ್ಟರಾದರು. ಅದನ್ನು ಸಹಿಸದ ನಾನು ದುಃಶಾಸನನನ್ನು ಸಂಹರಿಸಿದೆನು' –ಎಂದು ಭೀಮಸೇನನು ಹೇಳುತ್ತಾನೆ. ಆದರೆ

ದುಃಶಾಸನನ ವಧೆಯ ಈ ಸಂದರ್ಭದಲ್ಲಿ ಕಾರ್ಯಕಾರಣಗಳು ಸರಿ ಹೊಂದುವುದಿಲ್ಲ. ದುಃಶಾಸನನ ವಧೆಯಾದನಂತರ ವೃಷಸೇನನು ನಕುಲನ ಕುದುರೆಗಳನ್ನು ಸಂಹರಿಸಿದ ಪ್ರಕರಣವು ಬರುತ್ತದೆ. ಆ ಸಮಯದಲ್ಲಿ ನಕುಲನನ್ನು ರಥದಲ್ಲಿ ಕುಳ್ಳಿರಿಸಿಕೊಂಡ ಭೀಮಸೇನನು ವೃಷಸೇನನನ್ನು ಸಂಹರಿಸುವಂತೆ ಅರ್ಜುನನಿಗೆ ಹೇಳುವನೇ ಹೊರತು ದುಃಶಾಸನನ ಪ್ರಸ್ತಾಪವೇ ಅಲ್ಲಿ ಬರುವುದಿಲ್ಲ. ದುಃಶಾಸನನ ವಧೆಯು ೮೩ನೆಯ ಅಧ್ಯಾಯದಲ್ಲಿಯೂ–ನಕುಲನ ಕುದುರೆಗಳನ್ನು ವೃಷಸೇನನು ಸಂಹರಿಸಿದ ಕಥೆಯು ೮೪ನೆಯ ಅಧ್ಯಾಯದಲ್ಲಿಯೂ ಬರುತ್ತದೆ. ಪ್ರಕರಣವು ಹೀಗಿರುವಾಗ ಇಲ್ಲಿ ಅದಲು-ಬದಲಾಗಿ ಪ್ರಸ್ತಾಪವು ಗಾಂಧಾರಿಯ ಮತ್ತು ಭೀಮಸೇನರ ಬಾಯಿಂದ ಬಂದುದಕ್ಕೆ ಸಮಾಧಾನಹೇಳಲು ಸಾಧ್ಯವಾಗುವುದಿಲ್ಲ.

ದುಃಶಾಸನನ ರಕ್ತವನ್ನು ಕುಡಿದುದಕ್ಕೆ ಗಾಂಧಾರಿಯು ಆಕ್ಷೇಪಿಸುತ್ತಾಳೆ. ಭೀಮಸೇನನು ತಾನು ದುಃಶಾಸನನ ರಕ್ತವನ್ನು ಕುಡಿಯಲಿಲ್ಲವೆಂದೂ, ತುಟಿ ಮತ್ತು ಹಲ್ಲುಗಳಿಂದ ಒಳಕ್ಕೆ ರಕ್ತವು ಹೋಗಲಿಲ್ಲವೆಂದೂ, ಇದಕ್ಕೆ ಸೂರ್ಯನೇ ಸಾಕ್ಷಿಯೆಂದೂ ಹೇಳುತ್ತಾನೆ. ದುಃಶಾಸನನ ರಕ್ತಕ್ಕೂ ತನ್ನ ರಕ್ತಕ್ಕೂ ವ್ಯತ್ಯಾಸವೇ ಇಲ್ಲವೆಂದೂ, ತನ್ನ ರಕ್ತವನ್ನೇ ಯಾವೊಬ್ಬನೂ ಕುಡಿಯುವುದಿಲ್ಲವೆಂದೂ ಭೀಮಸೇನನು ಹೇಳುತ್ತಾನೆ. ಅನ್ಯಸ್ಯಾಪಿ ನ ಪಾತವ್ಯಂ ರುಧಿರಂ ಕಿಂ ಪುನಃ ಸ್ವಕಮ್ ॥ ಆದರೆ ಭೀಮಸೇನನು ಹೀಗೆ ಹೇಳಲು ಕಾರಣವಿಲ್ಲ. ಇದು ಅವನ ಸ್ವಭಾವಕ್ಕೂ ವಿರುದ್ಧವಾದುದು. ದುಃಶಾಸನನ ರಕ್ತವನ್ನು ತಾನು ಕುಡಿಯುವುದಾಗಿ ಕುರುಸಭೆಯಲ್ಲಿ ಪ್ರತಿಜ್ಞಾಪೂರ್ವಕವಾಗಿ ಘೋಷಿಸುತ್ತಾನೆ. (ಸಭಾಪರ್ವ ಅ. ೬೮ ಶ್ಲೋ. ೫೧-೫೩)

ಗಾಂಧಾರಿಯು ಹೇಳುವಂತೆ–ದುಃಶಾಸನನ ದ್ರೌಪದೀವಸ್ತ್ರಾಪಹರಣ ದಂತಹ ಕುಕರ್ಮಕ್ಕಿಂತ–ಅನಾರ್ಯಕರ್ಮ ಇದಲ್ಲ.

ಭೀಮಸೇನನು ರಕ್ತಪಾನಮಾಡಿದ ವಿಷಯವು ಎಷ್ಟೋ ಕಡೆಗಳಲ್ಲಿ ಬಂದಿರುತ್ತದೆ. ರಕ್ತಪಾನ ಮಾಡುವುದಾಗಿಯೇ ಭೀಮಸೇನನು ಪ್ರತಿಜ್ಞೆ

ಮಾಡುತ್ತಾನೆ. ದುಃಶಾಸನನ ವಧೆಯ ಸಮಯದಲ್ಲಿ ಭೀಮಸೇನನು ರಕ್ತದ ರುಚಿಯನ್ನು ವರ್ಣಿಸುವುದಂತೂ ಹೃದಯಂಗಮವಾಗಿದೆ. **ಸ್ತನ್ಯಸ್ಯ ಮಾತುರ್ಮಧುಸರ್ಪಿಷೋರ್ವಾ ಮಾಧ್ವೀಕಪಾನಸ್ಯ ಚ ಸತ್ಕೃತಸ್ಯ। ದಿವ್ಯಸ್ಯ ವಾ ತೋಯರಸಸ್ಯ ಪಾನಾತ್ಪಯೋದಧಿಭ್ಯಾಂ ಮಥಿತಾಚ್ಚ ಮುಖ್ಯಾತ್ ॥೩೦॥ ಅನ್ಯಾನಿ ಪಾನಾನಿ ಚ ಯಾನಿ ಲೋಕೇ ಸುಧಾಮೃತಸ್ವಾದುರಸಾನಿ ತೇಭ್ಯಃ। ಸರ್ವೇಭ್ಯ ಏವಾಭ್ಯಧಿಕೋ ರಸೋಽಯಂ ಮಮಾದ್ಯ ಚಾಸ್ಯಾಹಿತಲೋಹಿತಸ್ಯ**

(ಕರ್ಣಪರ್ವ–ಅಧ್ಯಾಯ ೮೩ ಶ್ಲೋಕ ೩೧-೩೨)

ಭೀಮಸೇನನ ಈ ಮಾತನ್ನು ಕೇಳಿದ್ದರೂ ಗಾಂಧಾರಿಯೇ ಮುಂದೆ ಶ್ರೀಕೃಷ್ಣನೊಡನೆ ಮಾತನಾಡುವಾಗ **ದುಃಶಾಸನಸ್ಯ ಯತ್ಕ್ರುದ್ಧೋ ಪಿಬ ಚ್ಛೋಣಿತಮಾಹವೇ** (೨೮-೧೮) ಕ್ರುದ್ಧನಾದ ಭೀಮಸೇನನು ದುಃಶಾಸನನ ರಕ್ತವನ್ನು ಕುಡಿದನು – ಎಂದು ಸ್ಪಷ್ಟವಾಗಿ ಹೇಳಿದ್ದಾಳೆ. ಭೀಮಸೇನನು ಗಾಂಧಾರಿಯನ್ನು ಸಂತೈಸುವ ಸಲುವಾಗಿ 'ದುಃಶಾಸನನ ರಕ್ತವು ತುಟಿ-ಹಲ್ಲುಗಳನ್ನು ಮೀರಿ ಒಳಕ್ಕೆ ಹೋಗಲಿಲ್ಲ'–ಎಂದು ಹೇಳಿದನೆಂದು ಭಾವಿಸಬಹುದಾಗಿದೆ. ಮುಂದೆ ಭೀಮಸೇನನು ಅಪರಾಧವನ್ನೇ ಮಾಡದ ನಮ್ಮ ವಿಷಯದಲ್ಲಿ ದೋಷವನ್ನೆಣಿಸುವುದು ಯುಕ್ತವಲ್ಲವೆಂದು ಗಾಂಧಾರಿಗೆ ಹೇಳುತ್ತಾನೆ. ಮುಂದೆ ಗಾಂಧಾರಿಯು ತನ್ನ ಒಬ್ಬನು ಮಗ ನನ್ನಾದರೂ ಏಕೆ ಉಳಿಸಿಕೊಡಲಿಲ್ಲವೆಂದು ಹಲಬುತ್ತಾಳೆ. ಇದ್ದಕ್ಕಿದ್ದಂತೆಯೇ ಅವಳಿಗೆ ಕೋಪವು ಉಲ್ಬಣಿಸುತ್ತದೆ. 'ಆ ರಾಜನೆಲ್ಲಿ? **ಕ್ವ ಸ ರಾಜಾ?**' ಎಂದು ಗದರಿಸುತ್ತಾಳೆ. ಆ ಸಮಯದಲ್ಲಿ ಧರ್ಮರಾಜನು ಮುಂದೆ ಹೋಗಿ 'ನಿನ್ನ ಮಕ್ಕಳೆಲ್ಲರನ್ನೂ ಸಂಹರಿಸಿದವನು ನಾನೇ ಆಗಿದ್ದೇನೆ. ನನ್ನನ್ನು ಶಪಿಸು'–ಎಂದು ಕೈಜೋಡಿಸಿ ಬೇಡಿಕೊಳ್ಳುತ್ತಾನೆ. ತನ್ನನ್ನು ತಾನೇ ಹಳಿದುಕೊಳ್ಳುತ್ತಾನೆ. ಗಾಂಧಾರಿಯು ಯಾವ ಮಾತನ್ನೂ ಆಡುವುದಿಲ್ಲ. ಅವನು ನಮಸ್ಕಾರಮಾಡಲಿದ್ದಾಗ ಗಾಂಧಾರಿಯ ದೃಷ್ಟಿಯು ಕಟ್ಟಿಕೊಂಡಿದ್ದ ಬಟ್ಟೆಯ ಮೂಲಕವಾಗಿ ಯುಧಿಷ್ಠಿರನ ಬೆರಳುಗಳ ಅಗ್ರಭಾಗಗಳ ಮೇಲೆ ಬಿದ್ದು ಅವು ಕಪ್ಪಾಗುತ್ತವೆ. **ಅಙ್ಗುಲ್ಯಗ್ರಾಣಿ ದದಶೇ ದೇವೀ ಪಟ್ಟಾನ್ತರೇಣ ಸಾ। ತತಃ ಸ ಕುನಖೀಭೂತೋ**

ದರ್ಶನೀಯನಖೋ ನೃಪಃ (೩೦) ಇಲ್ಲಿ ವಿವೇಚಿಸಬೇಕಾದ ಒಂದು ವಿಷಯವಿದೆ. ಗಾಂಧಾರಿಗೆ ಹಿಂದೆ ಶ್ರೀಕೃಷ್ಣನೊಮ್ಮೆ ಸಮಾಧಾನಹೇಳಿದ್ದನು. ಈಗ ವ್ಯಾಸರೂ ಸಮಾಧಾನ ಹೇಳಿದ್ದರು. ಭೀಮಸೇನನ ಮಾತಿನಿಂದಲೇ ಅವಳು ಪ್ರಸನ್ನಳಾಗಿದ್ದಳು. ಆದರೆ ಅವಳ ಕೋಪವು ಧರ್ಮಜನ ಮೇಲೆ ತಿರುಗಿತು. ಇದು ಇಲ್ಲಿಯ ತಾತ್ಪರ್ಯ. ೧೨-೧೩-೧೪ ಮತ್ತು ೧೫ನೆಯ ಅಧ್ಯಾಯಗಳನ್ನು ಪರಿಶೀಲಿಸಿದರೆ ಈ ಪ್ರಕರಣವು ಮಾರ್ಗದ ಮಧ್ಯದಲ್ಲಿ ನಡೆಯಿತೆಂಬ ಭಾವನೆಯೇ ಬರುವುದಿಲ್ಲ. ಯಾವುದೋ ಅರಮನೆಯಲ್ಲಿ ನಡೆಯುತ್ತಿರುವಂತೆ ಭಾಸವಾಗುತ್ತದೆ. ನಾವು ಹಿಂದಿನ ಕಥಾಭಾಗವನ್ನು ಸ್ಮರಿಸಿಕೊಂಡರೆ ಗಾಂಧಾರಿಯು ರಥದಲ್ಲಿ ಕುಳಿತಿದ್ದಾಳೆ. ಅವಳನ್ನು ನೋಡಲು ಎಲ್ಲರೂ ಹೋಗುತ್ತಾರೆ. ಗಾಂಧಾರಿಯು ಕಣ್ಣುಗಳನ್ನು ಕಟ್ಟಿಕೊಂಡಿರುತ್ತಾಳೆ. ತೋರಿಕೆಗಾಗಿ ಕಟ್ಟಿಕೊಂಡಿರುವುದಿಲ್ಲ. ತನ್ನ ಪತಿಯು ಅಂಧನಾಗಿರುವಾಗ ತಾನೂ ಹಾಗೆಯೇ ಇರಬೇಕೆಂಬ ಭಾವನೆಯಿಂದ ಕಟ್ಟಿಕೊಂಡಿರುತ್ತಾಳೆ. ಆ ದುರಂತ ಸಮಯದ ಕಠಿನಪರಿಸ್ಥಿತಿಯಲ್ಲಿ ಕಣ್ಣಿಗೆ ಕಟ್ಟಿದ್ದ ಪಟ್ಟಿಯು ಅಸ್ತವ್ಯಸ್ತವಾಗಿದ್ದಿರಬಹುದು. ಗಾಂಧಾರಿಯು ಸಾಮಾನ್ಯಳಲ್ಲ. ಅವಳ ಕೋಪ-ಶೋಕಗಳ ಪ್ರಚಂಡವೇಗದ ಸಹಜ ಪ್ರವಾಹಕ್ಕೆ ಅನಪಾಯಕರವಾದ ಮಾರ್ಗವು ಹೀಗೆ ಸಿಕ್ಕಿ ಅವುಗಳ ಶಮನವಾಯಿತು. ಕಥಾಭಾಗವು ಮನೋರಂಜಕವಾಗಿರುವುದರಲ್ಲಿ ಸಂಶಯವಿಲ್ಲ. ಈ ಪಾಠವು ಎಲ್ಲ ಪುಸ್ತಕಗಳಲ್ಲಿಯೂ ಇದೆ. ಆದರೂ ಇಲ್ಲಿನ ಕೆಲವು ಪ್ರಕರಣಗಳು ಸಮಾಧಾನಕೊಡಲಾಗದ ಪ್ರಕರಣಗಳಿಂದ ಕೂಡಿವೆಯೆಂಬುದನ್ನು ಹೇಳದಿರಲು ಸಾಧ್ಯವಾಗುವುದಿಲ್ಲ.

ಗಾಂಧಾರಿಯ ದೃಷ್ಟಿಪಾತದಿಂದ ಯುಧಿಷ್ಠಿರನ ಉಗುರುಗಳು (ಕೈ ಬೆರಳುಗಳದೋ ಕಾಲ್ಬೆರಳುಗಳದೋ ತಿಳಿಯದು) ಕಪ್ಪಾದುದನ್ನು ನೋಡಿ ಭಯಗೊಂಡು ಅರ್ಜುನನೇ ಆದಿಯಾಗಿ ಎಲ್ಲರೂ ಅಡಗಿಕೊಳ್ಳಲು ಓಡಿ ಹೋಗುತ್ತಾರೆ. ತಂ ದೃಷ್ಟ್ವಾ ಚಾರ್ಜುನೋಽಗಚ್ಛದ್ವಾಸುದೇವಸ್ಯ ಪೃಷ್ಠತಃ (೩೧) ಅರ್ಜುನನು ಹೆದರಿಕೊಂಡು ಕೃಷ್ಣನ ಹಿಂಭಾಗಕ್ಕೆ ಹೋದನೆಂಬುದು ಅರ್ಜುನನ ಸ್ವಭಾವಕ್ಕೆ ವಿರುದ್ಧವಾದ, ವಿಸ್ಮಯಕ್ಕೆ ಕಾರಣವಾದ, ಅಸಹಜವಾದ ವಿಷಯವಾಗಿದೆ.

ಅನಂತರ ಗಾಂಧಾರಿಯ ಕೋಪವು ಉಪಶಮನವನ್ನು ಹೊಂದುತ್ತದೆ. ಅವಳೇ ಎಲ್ಲರನ್ನೂ ಸಂತೈಸುತ್ತಾಳೆ. ಅನಂತರ ಪಾಂಡವರೆಲ್ಲರೂ ತಮ್ಮ ತಾಯಿಯ ಬಳಿಗೆ ಹೋಗುತ್ತಾರೆ. ಕುಂತಿಯು ಮಕ್ಕಳ ಮೈದಡವುತ್ತಾಳೆ. ದ್ರೌಪದಿಯನ್ನು ಸಮಾಧಾನಗೊಳಿಸುತ್ತಾಳೆ. ಪುನಃ ಅವರೆಲ್ಲರೂ ಗಾಂಧಾರಿಯ ಬಳಿಗೆ ಹೋಗುತ್ತಾರೆ. ಆಗ ಗಾಂಧಾರಿಯೇ ದ್ರೌಪದಿಯನ್ನು ಸಮಾಧಾನಗೊಳಿಸುತ್ತಾಳೆ. ಅಲ್ಲಿ ಗಾಂಧಾರಿಯು ಕಡೆಯದಾಗಿ '**ಮಮೈವ ಹ್ಯಪರಾಧೇನ ಕುಲಮಗ್ರ್ಯಂ ವಿನಾಶಿತಮ್ (೪೪)** ನನ್ನೊಬ್ಬಳ ಅಪರಾಧದಿಂದಲೇ ಅಗ್ರಮಾನ್ಯವಾಗಿದ್ದ ವಂಶವೇ ನಾಶವಾಯಿತು'– ಎನ್ನುತ್ತಾಳೆ. ಸ್ತ್ರೀಪರ್ವದಲ್ಲಿ ಮೊದಲನೆಯದಾದ ಈ ಉಪಪರ್ವಕ್ಕೆ 'ಜಲಪ್ರದಾನಿಕಪರ್ವ' ಎಂದು ಹೆಸರು. ಆದರೆ ಇಲ್ಲಿರುವ ೧೫ ಅಧ್ಯಾಯಗಳಲ್ಲಿ ಎಲ್ಲಿಯೂ ಜಲಪ್ರದಾನದ ಪ್ರಸ್ತಾಪವೇ ಬರುವುದಿಲ್ಲ. ಮೊದಲನೆಯ ಅಧ್ಯಾಯದಲ್ಲಿ ಮಾತ್ರ ಸಂಜಯನು ಧೃತರಾಷ್ಟ್ರನಿಗೆ '**ಗುರೂಣಾಂ ಚಾನುಪೂರ್ವ್ಯೇಣ ಪ್ರೇತಕಾರ್ಯಾಣಿ ಕಾರಯ (೮)** – ಅನುಕ್ರಮವಾಗಿ ಪಿತೃ-ಪುತ್ರ-ಪೌತ್ರ-ಜ್ಞಾತಿ-ಸುಹೃದ್ಗುರುಗಳಿಗೆ ಪ್ರೇತ ಕಾರ್ಯಗಳನ್ನು ಮಾಡಿಸು'–ಎಂಬ ಒಂದು ಮಾತನ್ನು ಮಾತ್ರ ಹೇಳುತ್ತಾನೆ.

೧೬ನೆಯ ಅಧ್ಯಾಯದಿಂದ ಸ್ತ್ರೀವಿಲಾಪ ಎಂಬ ಉಪಪರ್ವವು ಪ್ರಾರಂಭವಾಗುತ್ತದೆ. ಗಾಂಧಾರಿಯು ನಿಂತಲ್ಲಿಯೇ ನಿಂತಿದ್ದರೂ ರಣ ರಂಗದ ಎಲ್ಲ ಭಾಗಗಳನ್ನೂ ತನ್ನ ದಿವ್ಯದೃಷ್ಟಿಯಿಂದ ನೋಡುತ್ತಾಳೆ. ಅಂತಹ ದಿವ್ಯದೃಷ್ಟಿಯನ್ನು ವ್ಯಾಸರು ದಯಪಾಲಿಸಿದರೆಂಬ ವಾಕ್ಯವಿದೆ. ಯಾವಾಗ ದಯಪಾಲಿಸಿದರೆಂಬ ವಿಷಯವಿಲ್ಲ. **ವರದಾನೇನ ಕೃಷ್ಣಸ್ಯ ಮಹರ್ಷೇಃ ಪುಣ್ಯಕರ್ಮಣಃ। ದಿವ್ಯಜ್ಞಾನಬಲೋಪೇತಾ ವಿವಿಧಂ ಪರ್ಯದೇವಯತ್ ॥೩॥** ಈ ಪ್ರಕರಣವು ಒಂದು ಅಂತರ್ನಾಟಕ ದಂತಿದೆ. ವ್ಯಾಸರ ನಿರ್ದೇಶದಂತೆ ಧೃತರಾಷ್ಟ್ರನೇ ಆದಿಯಾಗಿ ಎಲ್ಲರೂ ರಣಾಂಗಣದ ಬಳಿಗೆ ಹೋಗುತ್ತಾರೆ. ಘೋರವಾದ ರಣರಂಗವನ್ನು ವೀಕ್ಷಿಸುತ್ತಾರೆ. ಆ ಸಮಯದಲ್ಲಿ ಗಾಂಧಾರಿಯು ಶ್ರೀಕೃಷ್ಣನನ್ನು ಹತ್ತಿರಕ್ಕೆ ಕರೆದು ರಣರಂಗದ ದೃಶ್ಯವನ್ನು ವರ್ಣಿಸಲು ಉಪಕ್ರಮಿಸುತ್ತಾಳೆ.

ವರ್ಣನೆಯು ಅಮೋಘವಾಗಿದೆ. ರಣರಂಗದ ಚಿತ್ರವನ್ನು ಎಂದೆಂದಿಗೂ ಮರೆಯದಂತೆ ವರ್ಣಿಸಿ ಗಾಂಧಾರಿಯು ಹೇಳುತ್ತಿರುತ್ತಾಳೆ.

೧೭ನೆಯ ಅಧ್ಯಾಯದಲ್ಲಿ ಗಾಂಧಾರಿಯು ತನ್ನ ಮಗನನ್ನು ನೋಡಿದ ಪ್ರಕರಣವು ಬರುತ್ತದೆ. ದುರ್ಯೋಧನನನ್ನು ಅವಳು ಆಲಿಂಗಿಸಿಕೊಂಡಳು ಎಂದಿದೆ. **ಪರಿಷ್ವಜ್ಯ ಚ ಗಾನ್ಧಾರೀ ಕೃಪಣಂ ಪರ್ಯದೇವಯತ್** (೩) ಗಾಂಧಾರಿಯು ದಿವ್ಯದೃಷ್ಟಿಯಿಂದ ದೂರದಲ್ಲಿದ್ದುದನ್ನು ಸ್ಪಷ್ಟವಾಗಿ ನೋಡುತ್ತಾ ಶ್ರೀಕೃಷ್ಣನಿಗೆ ವಿವರಿಸುತ್ತಿದ್ದಳು. ನೂರಾರು ಯೋಜನ ಹರಡಿಕೊಂಡಿರುವ ರಣಾಂಗಣದಲ್ಲಿ ದೂರ ದೂರ ಬಿದ್ದಿರುವವರನ್ನು ದಿವ್ಯದೃಷ್ಟಿಯಿಲ್ಲದೇ ಪ್ರತ್ಯಕ್ಷ ನೋಡಲು ಹೇಗೆ ಸಾಧ್ಯ? ಭಾವನೆಯಿಂದಲೇ ದುರ್ಯೋಧನನನ್ನು ಆಲಿಂಗಿಸಿದಳೆಂದು ತಿಳಿಯಬೇಕು. ಒಂದೊಂದು ಅಧ್ಯಾಯದಲ್ಲಿಯೂ ಗಾಂಧಾರಿಯು ಹಲವಾರು ಮಹಾಯೋಧರ ಸ್ವರೂಪಗಳನ್ನೂ ಅವರ ಸುತ್ತಲೂ ಅಳುತ್ತಾ ನಿಂತಿರುವ ಅವರ ಪತ್ನಿಯರನ್ನೂ ವಿವರಿಸಿ ಹೇಳುತ್ತಾಳೆ. ದುಃಶಾಸನನ ಪ್ರಕರಣದಲ್ಲಿ (೧೮ನೆಯ ಅಧ್ಯಾಯ) ಅವನ ರಕ್ತವನ್ನು ಭೀಮಸೇನನು ಕುಡಿದನು– ಎಂದು ಹೇಳಿದುದನ್ನು ಹಿಂದೆಯೇ ಪ್ರಕರಣಾಂತರದಲ್ಲಿ ಉದ್ಧರಿಸಲಾಗಿತ್ತು. ಅವನ ಸಂಬಂಧದಲ್ಲಿಯೇ ಮತ್ತೊಂದು ವಿಷಯವೆಂದರೆ ದುಃಶಾಸನನು ತನ್ನ ಕೈಗಳೆರಡನ್ನೂ ಚಾಚಿಕೊಂಡು ಮಲಗಿದ್ದಾನೆಂಬುದು. **ಏಷ ದುಃಶಾಸನಃ ಶೇತೇ ವಿಕ್ಷಿಪ್ಯ ವಿಪುಲೌ ಭುಜೌ** (೨೭) ಆದರೆ ಹಿಂದೆ ಭೀಮಸೇನನು ದುಃಶಾಸನನ ತೋಳುಗಳೆರಡನ್ನೂ ಕಿತ್ತುಹಾಕಿರುತ್ತಾನೆ. **ಏವಂ ಕ್ರುದ್ಧೋ ಭೀಮಸೇನಃ ಕರೇಣ ಉತ್ಪಾಟಯಾಮಾಸ ಭುಜಂ ಮಹಾತ್ಮಾ** (ಕರ್ಣ-ಅಧ್ಯಾಯ-೮೩-ಶ್ಲೋಕ-೨೭) ಕಿತ್ತುಹಾಕಿದ ತೋಳುಗಳು ಪಕ್ಕದಲ್ಲಿಯೇ ಬಿದ್ದಿರಬಹುದೆಂದು ಭಾವಿಸಿಕೊಳ್ಳ ಬಹುದಾಗಿದೆ. ಗಾಂಧಾರಿಯು ಮುಂದಿನ ೧೯, ೨೦, ೨೧, ೨೨, ೨೩ ಮತ್ತು ೨೪ನೆಯ ಅಧ್ಯಾಯಗಳಲ್ಲಿ ವಿಕರ್ಣ, ದುರ್ಮುಖ, ಚಿತ್ರಸೇನ, ವಿವಿಂಶತಿ, ದುಃಸಹ, ಅಭಿಮನ್ಯು, ಕರ್ಣ, ಅವಂತೀದೇಶದ ರಾಜ, ಜಯದ್ರಥ, ಶಲ್ಯ, ಭಗದತ್ತ, ಭೀಷ್ಮ, ದ್ರೋಣರು, ಭೂರಿಶ್ರವಸ–ಇವರೇ ಮೊದಲಾದವರು ರಣರಂಗದಲ್ಲಿ ಬಿದ್ದಿರು

ವುದನ್ನೂ–ಅವರ ಸುತ್ತಲೂ ಅವರ ಪತ್ನಿಯರು ಕುಳಿತು ಗೋಳಾಡುತ್ತಿರುವುದನ್ನೂ ಕಣ್ಣಿಗೆ ಕಟ್ಟುವಂತೆ ಶ್ರೀಕೃಷ್ಣನೊಡನೆ ವರ್ಣಿಸಿ ಹೇಳುತ್ತಾಳೆ.

ಗಾಂಧಾರಿಯು ದ್ರೋಣರ ವಿಷಯವನ್ನು ಹೇಳುವಾಗ–'ಕೃಪಿಯು ದ್ರೋಣರ ಔರ್ಧ್ವದೈಹಿಕಕಾರ್ಯಗಳನ್ನು ನಡೆಸಲು ಪ್ರಯತ್ನಿಸುತ್ತಿದ್ದಾಳೆ' ಎನ್ನುತ್ತಾಳೆ. ಪ್ರೇತಕೃತ್ಯಂ ಚ ಯತತೇ ಕೃಪೀ ಕೃಪಣಮಾತುರಾ (೩೭) 'ಮುಂದೆ ಬ್ರಹ್ಮಚಾರಿಗಳಾದ ದ್ರೋಣರ ಶಿಷ್ಯರು ಚಿತೆಯನ್ನು ಕಲ್ಪಿಸುತ್ತಿದ್ದಾರೆ'–ಎನ್ನುತ್ತಾಳೆ ಗಾಂಧಾರಿ. ಕುರ್ವನ್ತಿ ಚ ಚಿತಾಮೇತೇ ಜಟಿಲಾ ಬ್ರಹ್ಮಚಾರಿಣಃ (೩೯) ಆದರೆ ಈ ಸಂದರ್ಭದಲ್ಲಿ ದ್ರೋಣರ ಔರ್ಧ್ವದೈಹಿಕಕರ್ಮಗಳನ್ನು ಮಾಡಲು ಅಧಿಕಾರಿಯಾದ ಔರಸಪುತ್ರನಾದ ಅಶ್ವತ್ಥಾಮನ ಹೆಸರೇ ಬರುವುದಿಲ್ಲ. ಮಗನಿಲ್ಲದೆಯೇ ಅವರ ಕ್ರಿಯೆಗಳನ್ನು ನಡೆಸಬಹುದಾಗಿದ್ದಿತೇ? ಅಲ್ಲಿಯೇ ಎಲ್ಲೋ ಇದ್ದ ಅಶ್ವತ್ಥಾಮನು ತಂದೆಯ ಉತ್ತರಕ್ರಿಯೆಯನ್ನು ಮಾಡಲು ಏಕೆ ಬರಲಿಲ್ಲ? ಈ ಪ್ರಶ್ನೆಗಳಿಗೆ ಇಲ್ಲಿ ಉತ್ತರವು ಸಿಗುವುದಿಲ್ಲ.

೨೫ನೆಯ ಅಧ್ಯಾಯದಲ್ಲಿ ಗಾಂಧಾರಿಯು ಕಾಂಬೋಜ, ಕಲಿಂಗರಾಜ, ಜಯತ್ಸೇನ, ಬೃಹದ್ಬಲ, ಐವರು ಕೇಕಯರಾಜಕುಮಾರರು, ದ್ರುಪದ, ವಿರಾಟ, ಧೃಷ್ಟಕೇತು, ವಿಂದಾನುವಿಂದರು, ಇನ್ನೂ ಅನೇಕ ರಾಜಕುಮಾರರು ರಣರಂಗದಲ್ಲಿ ಬಿದ್ದಿರುವುದನ್ನು ವರ್ಣಿಸುತ್ತಾಳೆ. ಹೀಗೆ ಇವರೆಲ್ಲರೂ ವಿನಾಶಹೊಂದುತ್ತಾರೆಂಬುದನ್ನು ಭೀಷ್ಮಮತ್ತು ವಿದುರರು ತನಗೆ ಮೊದಲೇ ಸೂಚಿಸಿದ್ದರೆಂದೂ ಗಾಂಧಾರಿಯು ಶ್ರೀಕೃಷ್ಣನೊಡನೆ ಹೇಳುತ್ತಾಳೆ. ವೀರಮಾತೆಯಾದ ಗಾಂಧಾರಿಯೂ ಆ ಭಯಂಕರದೃಶ್ಯವನ್ನು ನೋಡುತ್ತಾ ಧೃತಿಗೆಟ್ಟು ಕೆಳಗೆ ಬೀಳುತ್ತಾಳೆ. ಎಚ್ಚರಗೊಂಡ ಗಾಂಧಾರಿಗೆ ಇದ್ದಕ್ಕಿದ್ದಂತೆಯೇ ಶ್ರೀಕೃಷ್ಣನ ಮೇಲೆ ಸಿಟ್ಟುಬರುತ್ತದೆ. ಅವನು ಇಚ್ಛಿಸಿದ್ದರೆ ಈ ಮಹಾವಿನಾಶವನ್ನು ತಪ್ಪಿಸಬಹುದಾಗಿತ್ತೆಂಬುದು ಅವಳ ಅಭಿಪ್ರಾಯ. ಅದೇ ನೆಪದಿಂದ ಶ್ರೀಕೃಷ್ಣನನ್ನು ಗಾಂಧಾರಿಯು ಶಪಿಸುತ್ತಾಳೆ–'ನಿನ್ನ ಜ್ಞಾತಿಗಳ ವಿನಾಶಕ್ಕೂ ನೀನೇ ಕಾರಣನಾಗು. ಮೂವತ್ತಾರು ವರ್ಷಗಳು ಕಳೆದ ಕೂಡಲೇ ನಿನ್ನ ಕುಲದ ಸ್ತ್ರೀಯರೆಲ್ಲರೂ–ಈಗ ಕುರುಸ್ತ್ರೀಯರು ಶೋಕಿಸು

ತ್ತಿರುವಂತೆಯೇ–ಶೋಕಪಡುವಂತಾಗಲಿ’–ಇವೇ ಮುಂತಾಗಿ ಶಾಪಕೊಡುತ್ತಾಳೆ. ಅವಳು ಶಾಪಕೊಟ್ಟುದಕ್ಕಾಗಿ ಶ್ರೀಕೃಷ್ಣನು ಕುಪಿತನಾಗುವುದಿಲ್ಲ. ಈ ವಿಷಯವು ತನಗೆ ಮೊದಲೇ ತಿಳಿದಿತ್ತೆಂದು ಹೇಳುತ್ತಾನೆ. ಆದರೆ ಪಾಂಡವರು ಗಾಂಧಾರಿಯು ಶಾಪಕೊಟ್ಟುದನ್ನು ಕೇಳಿ ಬಹಳ ಖಿನ್ನರಾಗುತ್ತಾರೆ.

೨೬ನೆಯ ಅಧ್ಯಾಯ :– ಈ ಅಧ್ಯಾಯದಿಂದ ಶ್ರಾದ್ಧಪರ್ವವೆಂಬ ಉಪಪರ್ವವು ಪ್ರಾರಂಭವಾಗುತ್ತದೆ. ಇಲ್ಲಿ ಶ್ರೀಕೃಷ್ಣನ ಮಾತಿನಿಂದ ಅಧ್ಯಾಯವು ಪ್ರಾರಂಭವಾಗುತ್ತದೆ. ಹಿಂದಿನ ಅಧ್ಯಾಯದ ಅನುವರ್ತನೆಯಿಲ್ಲ. ಇದ್ದಕ್ಕಿದ್ದಂತೆಯೇ ಇಲ್ಲಿ ಶ್ರೀಕೃಷ್ಣನ ಮಾತಿದೆ. ಹಿಂದಿನ ಅಧ್ಯಾಯದ **ಇತ್ಯುಕ್ತ್ವಾ ನ್ಯಪತದ್ಭೂಮೌ ಗಾನ್ಧಾರೀ ಶೋಕಮೂರ್ಛಿತಾ ।** (೩೭) ಎಂಬ ಶ್ಲೋಕದಿಂದ ಮುಂದಕ್ಕೆ ಶ್ರೀಕೃಷ್ಣನ ಈ ಮಾತುಗಳು ಸಮಂಜಸವಾಗಿ ಹೊಂದಿಕೊಳ್ಳುತ್ತವೆ. **ಉತ್ತಿಷ್ಠೋತ್ತಿಷ್ಠ ಗಾನ್ಧಾರಿ ಮಾ ಚ ಶೋಕೇ ಮನಃ ಕೃಥಾಃ । ತವೈವ ಹ್ಯಪರಾಧೇನ ಕುರವೋ ನಿಧನಂ ಗತಾಃ ॥** “ನಿನ್ನ ಅಪರಾಧದಿಂದಲೇ ಕುರುಗಳೆಲ್ಲರೂ ಹತರಾದರು.’ ಶ್ರೀಕೃಷ್ಣನ ಈ ಮಾತೇ ಗಾಂಧಾರಿಯ ಕೋಪವು ಕೆರಳಲು ಕಾರಣವಾಯಿತೆನ್ನಬಹುದು. ಆದರೆ ಎಲ್ಲ ಪುಸ್ತಕಗಳಲ್ಲಿಯೂ ಪಾಠಕ್ರಮವು ಒಂದೇ ರೀತಿಯಲ್ಲಿರುತ್ತದೆ.

ಈ ಯುದ್ಧದಲ್ಲಿ ಎಷ್ಟು ಪ್ರಾಣಿಗಳು ಹತರಾದರೆಂಬುದನ್ನು ಹೇಳಬೇಕೆಂದು ಧೃತರಾಷ್ಟ್ರನು ಯುಧಿಷ್ಠಿರನನ್ನು ಪ್ರಶ್ನಿಸುತ್ತಾನೆ. ಯುಧಿಷ್ಠಿರನು ಒಡನೆಯೇ ಉತ್ತರ ಹೇಳುತ್ತಾನೆ.

ದಶಾಯುತಾನಾಮಯುತಂ ಸಹಸ್ರಾಣಿ ಚ ವಿಂಶತಿಃ ।
ಕೋಟ್ಯಃ ಷಷ್ಟಿಶ್ಚ ಷಟ್ಚೈವ ಹ್ಯಸ್ಮಿನ್ರಾಜನ್ಮೃಧೇ ಹತಾಃ ॥೯॥

ಅಯುತಾನಾಂ ದಶ = ಹತ್ತು ಹತ್ತು ಸಾವಿರಗಳು. ಅಂದರೆ ಒಂದು ಲಕ್ಷ. ಈ ಒಂದು ಲಕ್ಷದ ಹತ್ತುಸಾವಿರದಷ್ಟು. ಅಥವಾ ಹತ್ತು ಸಾವಿರ ಲಕ್ಷಗಳು–ನೂರುಕೋಟಿಗಳು. ಮತ್ತು ಇಪ್ಪತ್ತುಸಾವಿರ–ಇದು ಪೂರ್ವಾರ್ಧದ ಅರ್ಥವಾಗುತ್ತದೆ. ಉತ್ತರಾರ್ಧದಲ್ಲಿ ಅರುವತ್ತು ಮತ್ತು ಆರು ಕೋಟಿ

ಗಳು. ಒಟ್ಟಾರೆ ನೂರ ಅರವತ್ತಾರು ಕೋಟಿಗಳು ಮತ್ತು ಇಪ್ಪತ್ತುಸಾವಿರ ಪ್ರಾಣಿಗಳು ಈ ಯುದ್ಧದಲ್ಲಿ ಹತವಾಗಿವೆ. (೧೬೬,೦೦,೨೦,೦೦೦) ಇದು ಧರ್ಮರಾಜನು ಹೇಳಿದ ಮಾತುಗಳು. ಇಷ್ಟು ನಿಖರವಾಗಿ ಹೇಳಲು ಹೇಗೆ ಸಾಧ್ಯವಾಯಿತು?–ಎಂದು ಧೃತರಾಷ್ಟ್ರನು ಕೇಳಿದ ಪ್ರಶ್ನೆಗೆ ಉತ್ತರವಾಗಿ ಯುಧಿಷ್ಠಿರನು–ದೇವರ್ಷಿಗಳಾದ ಲೋಮಶರಿಂದ ಅನುಸ್ಮೃತಿ ವಿದ್ಯೆಯೂ ಮತ್ತು ಅದರಿಂದ ಜ್ಞಾನದೃಷ್ಟಿಯೂ ಪ್ರಾಪ್ತವಾಯಿತೆಂದೂ ಅದರ ಬಲದಿಂದ ತಾನು ಸಂಖ್ಯೆಯನ್ನು ನಿಖರವಾಗಿ ಹೇಳಲು ಸಾಧ್ಯವಾಯಿತೆಂದೂ ಹೇಳುತ್ತಾನೆ. ಈಗ ಭಾರತದಲ್ಲಿರುವ ೬೦ ಕೋಟಿಯನ್ನೇ ಹೆಚ್ಚೆಂದು ಭಾವಿಸುವ ಜನರು ೧೬೬ ಕೋಟಿ ಯೋಧರು ಮಹಾಭಾರತದ ಯುದ್ಧದಲ್ಲಿ ಸತ್ತರೆಂಬುದನ್ನು ನಂಬಲಾರರು.

ಆದರೆ ಸತ್ಯನಿಷ್ಠನಾದ ಯುಧಿಷ್ಠಿರನು ಹೇಳಿರುವುದು ಸರಿ ಎಂದು ಪ್ರತಿಪಾದಿಸಲು ಸಾಧ್ಯವಾಗುವುದೇ?–ಎಂಬುದನ್ನು ಪರಿಶೀಲಿಸಬೇಕಾಗಿದೆ.

ಆದಿಪರ್ವದಲ್ಲಿ ಬಂದಿರುವ ಅಕ್ಷೌಹಿಣೀಕೋಷ್ಟಕದ ಪ್ರಕಾರ ಹದಿನೆಂಟು ಅಕ್ಷೌಹಿಣೀಸೈನ್ಯಗಳ ಒಟ್ಟು ಸಂಖ್ಯೆ ೩೯,೩೬,೬೦೦. ಒಂದು ಕೋಟಿ ಕೂಡ ಆಗುವುದಿಲ್ಲ. ಇದರಲ್ಲಿ ಕಾಲಾಳುಗಳ ಸಂಖ್ಯೆ ೧೯,೬೮,೩೦೦. ಹೀಗಿರುವಾಗ ೧೬೬ ಕೋಟಿ ಪ್ರಾಣಿಗಳು ಸತ್ತವು ಎಂಬುದನ್ನು ಪ್ರತಿಪಾದಿಸುವುದು ಹೇಗೆ?

ಕೋಷ್ಟಕದ ಪ್ರಕಾರ ಒಂದು ಪತ್ತಿ ಎಂದರೆ ೫ ಕಾಲಾಳುಗಳು. ಆದರೆ ಉದ್ಯೋಗಪರ್ವದ ೧೫೫ನೆಯ ಅಧ್ಯಾಯದಲ್ಲಿ ಹೇಳುವ ಪ್ರಕಾರ ಒಂದು ಪತ್ತಿಗೆ ೫೫ ಕಾಲಾಳುಗಳು. **ನರಾಣಾಂ ಪಞ್ಚಪಞ್ಚಾಶದೇಷಾ ಪತ್ತಿರ್ವಿಧೀಯತೇ ॥೨೮॥**

ಇದೇ ಅಧ್ಯಾಯದಲ್ಲಿ ಅಕ್ಷೌಹಿಣಿಯ ಕೋಷ್ಟಕವು ಹೀಗಿದೆ :

ಸೇನಾ ಪಞ್ಚಶತಂ ನಾಗಾ ರಥಾಸ್ತಾವನ್ತ ಏವ ಚ ।
ದಶ ಸೇನಾ ಚ ಪೃತನಾ ಪೃತನಾ ದಶವಾಹಿನೀ ॥೨೪॥

೫೦೦ ಆನೆಗಳು ಮತ್ತು ೫೦೦ ರಥಗಳು ಇರುವುದಕ್ಕೆ ಒಂದು ಸೇನಾ ಅಥವಾ ಸೇನಾಮುಖ ಎಂದು ಹೆಸರು. (ಆದಿಪರ್ವದ ಕೋಷ್ಟಕದಲ್ಲಿ ಸೇನಾ

ಮುಖಕ್ಕೆ ೩ ಆನೆಗಳು ಮತ್ತು ೩ ರಥಗಳು ಇರಬೇಕೆಂದು ಹೇಳಿದೆ.) ಇಂತಹ ಹತ್ತು ಸೇನೆಗಳಿಗೆ ಅರ್ಥಾತ್ ೫,೦೦೦ ಆನೆಗಳು ಮತ್ತು ೫,೦೦೦ ರಥಗಳು ಇರುವುದಕ್ಕೆ ಪೃತನಾ ಎಂದು ಹೆಸರು. ೫೦ ಸಾವಿರ ಆನೆಗಳೂ ೫೦ ಸಾವಿರ ರಥಗಳೂ ಇರುವುದಕ್ಕೆ ಒಂದು ವಾಹಿನೀ ಅಥವಾ ಅಕ್ಷೌಹಿಣೀ ಎಂದು ಹೆಸರು. ಒಂದು ರಥ ಮತ್ತು ಒಂದು ಆನೆಗೆ ೫೫ ಕಾಲಾಳುಗಳಂತೆ ೫೦ ಸಾವಿರ ಆನೆಗಳು ಮತ್ತು ರಥಗಳ ಹಿಂದೆ ೨೭,೫೦,೦೦೦ ಕಾಲಾಳು ಗಳಿರಬೇಕಾಗುತ್ತದೆ.

ಒಂದೊಂದು ರಥದ ಹಿಂದೆ ಎಷ್ಟು ಆನೆಗಳು, ಎಷ್ಟು ಕುದುರೆಗಳು, ಮತ್ತು ಎಷ್ಟು ಕಾಲಾಳುಗಳು ಇದ್ದುವೆಂಬುದನ್ನು ಇದೇ ಅಧ್ಯಾಯದ ೨೨ ಮತ್ತು ೨೩ನೆಯ ಶ್ಲೋಕಗಳಲ್ಲಿ ಕೇಳಿದ್ದಾರೆ.

ರಥಸ್ಯಾಸನ್ದಶ ಗಜಾ ಗಜಸ್ಯ ದಶ ವಾಜಿನಃ ।
ನರಾ ದಶ ಹಯಸ್ಯಾಸನ್ಪಾದರಕ್ಷಾಃ ಸಮನ್ತತಃ ॥೨೨॥

ಒಂದು ರಥಕ್ಕೆ ಬೆಂಗಾವಲಾಗಿ ೧೦ ಆನೆಗಳೂ, ನೂರು ಕುದುರೆಗಳೂ ಒಂದು ಸಾವಿರ ಕಾಲಾಳುಗಳೂ ಮತ್ತು ಅನೇಕ ಪಾದರಕ್ಷಕರೂ ಇದ್ದರು.

ಮತ್ತೊಂದು ಕಡೆಯಲ್ಲಿ ಈ ಕ್ರಮದಿಂದಲೂ ರಥವನ್ನು ನಿಲ್ಲಿಸ ಲಾಗಿತ್ತು.

ರಥಸ್ಯ ನಾಗಾಃ ಪಞ್ಚಾಶನ್ನಾಗಸ್ಯಾಸಞ್ಛತಂ ಹಯಾಃ ।
ಹಯಸ್ಯ ಪುರುಷಾಃ ಸಪ್ತ ಭಿನ್ನಸಂಧಾನಕಾರಿಣಃ ॥೨೩॥

ಒಂದು ರಥಕ್ಕೆ ಬೆಂಗಾವಲಾಗಿ ೫೦ ಆನೆಗಳೂ, ೫ ಸಾವಿರ ಕುದುರೆ ಗಳೂ, ೩೫ ಸಾವಿರ ಕಾಲಾಳುಗಳೂ ಇದ್ದರು. ಒಂದು ಅಕ್ಷೌಹಿಣಿಯಲ್ಲಿ ಕೆಲವೇ ರಥಗಳ ಹಿಂದಾದರೂ ಹೀಗೆ ಆನೆಗಳನ್ನೂ, ಕುದುರೆಗಳನ್ನೂ, ಕಾಲಾಳುಗಳನ್ನೂ ನಿಲ್ಲಿಸಿದ್ದರೆ ಸಂಖ್ಯೆಯು ಅನೇಕಕೋಟಿಗಳೇ ಆಗುತ್ತವೆ.

ಯುಧಿಷ್ಠಿರನು ಹೇಳಿದಷ್ಟು (ಮನುಷ್ಯರು ಆನೆ-ಕುದುರೆ ಮುಂತಾದ ಪ್ರಾಣಿಗಳೂ ಸೇರಿ) ಸತ್ತಿರಬಹುದೆಂಬುದಕ್ಕೆ ಇನ್ನೂ ಒಂದೆರಡು ಕಾರಣಗಳನ್ನು ಕೊಡಬಹುದಾಗಿದೆ. ೧) ಕೌರವ-ಪಾಂಡವರ

ಯುದ್ಧಕ್ಕೆ ಪಕ್ಷ-ಪ್ರತಿಪಕ್ಷಗಳನ್ನು ವಹಿಸಿ ವಿಶ್ವದ ಎಲ್ಲ ಕಡೆಗಳಿಂದಲೂ ರಾಜರು ಬಂದಿದ್ದರು. ಈ ಯುದ್ಧವು ಕೇವಲ ಭಾರತಕ್ಕೇ ಸೀಮಿತವಾಗಿರಲಿಲ್ಲ. ಆದುದರಿಂದ ನಾವು ಭಾರತದ ಈಗಿನ ಜನಸಂಖ್ಯೆಯನ್ನು ಗಣನೆಗೆ ತೆಗೆದುಕೊಂಡು ಯುಧಿಷ್ಠಿರನು ಹೇಳಿರುವ ಸಂಖ್ಯೆಯನ್ನು ಪರಿ ಶೀಲಿಸಬೇಕಾಗಿಲ್ಲ. ವಿಶ್ವದ ನಾನಾಕಡೆಗಳಿಂದ ಬಂದಿದ್ದರೆಂಬುದಕ್ಕೆ ವಿಪುಲ ವಾದ ಆಧಾರವಾಕ್ಯಗಳಿವೆ.

ಎರಡನೆಯದಾಗಿ ೧೮ ಅಕ್ಷೌಹಿಣೀಸೈನ್ಯಗಳಲ್ಲಿ ಶ್ರೀಕೃಷ್ಣನು ಕಳುಹಿಸಿದ ಹತ್ತುಕೋಟಿ ನಾರಾಯಣಸೈನ್ಯವಾಗಲೀ, ಘಟೋತ್ಕಚ ಮತ್ತು ಅಲಂಬುಷರ ರಾಕ್ಷಸರ ಸೈನ್ಯವಾಗಲೀ, ಸಂಶಪ್ತಕ-ಶಕ-ಕಿರಾತ-ಯವನರ ಸೈನ್ಯಗಳಾಗಲೀ ಸೇರಿರುವುದಿಲ್ಲ. ಸಂಶಪ್ತಕರದ್ದೇ ಹತ್ತುಸಾವಿರ ರಥಗಳಿದ್ದುವೆಂದು ಹೇಳಿದೆ. ಅವರೆಲ್ಲರೂ ಒಂದೇ ದಿವಸ ರಣರಂಗಕ್ಕೆ ಬಂದಿದ್ದರೆಂದು ಭಾವಿಸಬೇಕಾಗಿಲ್ಲ. ಒಂದೊಂದು ಪ್ರಾಂತ್ಯದವರೂ ತಮ್ಮ ತಮ್ಮ ಸೈನಿಕರೊಡನೆ ಬಂದು ಪಕ್ಷ-ಪ್ರತಿಪಕ್ಷಗಳನ್ನು ವಹಿಸಿ ಯುದ್ಧದಲ್ಲಿ ತೊಡಗುತ್ತಿದ್ದರು. ಇವೆಲ್ಲವೂ ಸೇರಿದರೆ ಯುಧಿಷ್ಠಿರನು ಹೇಳಿರುವ ಸಂಖ್ಯೆಗೆ ಸರಿಯಾಗುತ್ತದೆ. ಸಂಜಯನು ಯುದ್ಧಕ್ಕೆ ಸಿದ್ಧವಾಗಿದ್ದ ಸೈನ್ಯದ ಸಂಖ್ಯೆಯನ್ನು ಧೃತರಾಷ್ಟ್ರನೊಡನೆ ಹೀಗೆ ಹೇಳಿದ್ದಾನೆ :

ಸಾಗ್ರಂ ಶತಸಹಸ್ರಂ ತು ನಾಗಾನಾಂ ತವ ಭಾರತ ।
ನಾಗೇ ನಾಗೇ ರಥಶತಂ ಶತಮಶ್ವಾ ರಥೇ ರಥೇ ॥೧೬॥

ಅಶ್ವೇಽಶ್ವೇ ದಶ ಧಾನುಷ್ಕಾ ಧಾನುಷ್ಕೇ ಶತಚರ್ಮಿಣಃ ।
ಏವಂ ವ್ಯೂಢಾನ್ಯನೀಕಾನಿ ಭೀಷ್ಮೇಣ ತವ ಭಾರತ ॥೧೭॥

(ಭೀಷ್ಮಪರ್ವ-ಅಧ್ಯಾಯ ೨೦)

ಒಂದು ಲಕ್ಷಕ್ಕೂ ಮೀರಿ ಆನೆಗಳಿದ್ದುವಂತೆ. ಒಂದೊಂದು ಆನೆಯ ಹಿಂದೆಯೂ ನೂರು ನೂರು ರಥಗಳಿದ್ದುವು. ರಥಗಳ ಸಂಖ್ಯೆಯೇ ನೂರು ಲಕ್ಷವಾಯಿತು (ಒಂದು ಕೋಟಿ) ಒಂದೊಂದು ರಥದ ಹಿಂದೆಯೂ ನೂರು ನೂರು ಕುದುರೆಗಳಿದ್ದುವು. (ನೂರು ಕೋಟಿ ಕುದುರೆಗಳು.) ಒಂದೊಂದು ಕುದುರೆಯ ಹಿಂದೆಯೂ ಹತ್ತುಮಂದಿ ಧನುರ್ಧಾರಿಗಳಿದ್ದರು. (ಸಾವಿರ

ಕೋಟಿ ಧನುರ್ಧಾರಿಗಳು) ಒಬ್ಬೊಬ್ಬ ಧನುರ್ಧಾರಿಯ ಹಿಂದೆಯೂ ಖಡ್ಗಗಳನ್ನು ಧರಿಸಿದ್ದ ನೂರು ನೂರು ಮಂದಿ ಪದಾತಿಗಳಿದ್ದರು (ಲಕ್ಷಕೋಟಿ ಪದಾತಿಗಳು.) 'ಅಪಾರ' ಎಂಬ ಅರ್ಥದಲ್ಲಿ ಹೀಗೆ ಹೇಳಿದ್ದರೂ ೧೬೬ ಕೋಟಿ ೨೦ ಸಾವಿರ ಪ್ರಾಣಿಗಳು ಸತ್ತವೆಂದು ಹೇಳಿರುವ ಯುಧಿಷ್ಠಿರನ ಮಾತಿನಲ್ಲಿ ಅತಿಶಯವೇನೂ ಕಾಣುವುದಿಲ್ಲ.

ಸತ್ತವರ ಸಂಖ್ಯೆಯನ್ನು ಹೇಳಿರುವಂತೆಯೇ ಯುಧಿಷ್ಠಿರನು ತಪ್ಪಿಸಿ ಕೊಂಡು ಹೋಗಿರುವವರು ಅಥವಾ ಲೆಕ್ಕಕ್ಕೆ ಸಿಕ್ಕದವರು–ಎಷ್ಟೆಂಬುದನ್ನೂ ಹೇಳಿದ್ದಾನೆ.

ಅಲಕ್ಷಿತಾನಾಂ ವೀರಾಣಾಂ ಸಹಸ್ರಾಣಿ ಚತುರ್ದಶ ।
ದಶ ಚಾನ್ಯಾನಿ ರಾಜೇನ್ದ್ರ ಶತಂ ಷಷ್ಟಿಶ್ಚ ಪಞ್ಚ ಚ ॥೧೦॥

೨೪,೧೬೫-ಇಷ್ಟು ನಿಷ್ಕೃಷ್ಟವಾಗಿ ಹೇಳಿದ್ದಾನೆ.

ಇನ್ನು, ಇಷ್ಟು ಸಂಖ್ಯೆಯ ಸೈನ್ಯವು ಕುರುಕ್ಷೇತ್ರದಲ್ಲಿ ಸೇರುವುದು ಸಾಧ್ಯವೇ?–ಎಂಬ ಪ್ರಶ್ನೆ.

ರಣರಂಗವು ನೂರಾರು ಯೋಜನಗಳವರೆಗೆ ವ್ಯಾಪಿಸಿದ್ದಿತು. ಕುರುಕ್ಷೇತ್ರದಲ್ಲಿ ಸೇನಾಧಿಪತಿಗಳು ಮತ್ತು ಇತರ ಪ್ರಮುಖರು ಮಾತ್ರ ಪರಸ್ಪರ ಎದುರಾಗಿ ನಿಂತಿದ್ದರು. ಆದುದರಿಂದ ಇಷ್ಟು ಸಂಖ್ಯೆಯ ಸೈನ್ಯವೂ ಕುರುಕ್ಷೇತ್ರದಲ್ಲಿ ಮಾತ್ರ ಸೇರಿತ್ತು ಎಂದು ತಿಳಿಯಬೇಕಾಗಿಲ್ಲ.

(೨) ಅದು ದ್ವಾಪರಯುಗದ ಅಂತ್ಯವಾಗಿದ್ದಿತು. ಭೂಭಾರಹರಣವೇ ಭಾರತಯುದ್ಧದ ಮುಖ್ಯಪ್ರಯೋಜನವಾಗಿದ್ದಿತು. ಸ್ತ್ರೀಪರ್ವದ ೮ನೆಯ ಅಧ್ಯಾಯದಲ್ಲಿ ವ್ಯಾಸರು ಈ ವಿಷಯವನ್ನೇ ಹೇಳುತ್ತಾರೆ. **ತಸ್ಯಾರ್ಥೇ ಪೃಥಿವೀಪಾಲಾಃ ಕುರುಕ್ಷೇತ್ರಂ ಸಮಾಗತಾಃ । ಅನ್ಯೋನ್ಯಂ ಘಾತಯಿಷ್ಯನ್ತಿ ದೃಢೈಃ ಶಸ್ತ್ರೈಃ ಪ್ರಹಾರಿಣಃ । ತತಸ್ತೇ ಭವಿತಾ ದೇವಿ ಭಾರಸ್ಯ ಯುಧಿ ನಾಶನಮ್** (೨೮) ನಾಗರಿಕ ಮನುಷ್ಯರ ಆವಿರ್ಭಾವವೇ ನಾಲ್ಕೈದು ಸಾವಿರ ವರ್ಷಗಳಿಂದ ಇತ್ತೀಚೆಗೆ ಆದುದೆಂದು ಭ್ರಮಿಸಬಾರದು. ಯುಗಗಳು ಉರುಳುತ್ತಿರುತ್ತವೆ. ಯುಗಗಳ ಅಂತ್ಯದಲ್ಲಿ ಪ್ರಳಯವಾಗಿ ಸರ್ವವಿನಾಶವಾಗುತ್ತದೆ–ಎಂಬ ಸಿದ್ಧಾಂತವನ್ನು ನಂಬಬೇಕು. ಈ ಸಿದ್ಧಾಂತದ ಪ್ರಕಾರ ಪ್ರಪಂಚದ

ಜನಸಂಖ್ಯೆಯು ದ್ವಾಪರದ ಅಂತ್ಯದಲ್ಲಿ ಮಿತಿಮೀರಿದ್ದಿರಬಹುದು. ಈ ಕಾರಣದಿಂದ ಭೂಭಾರವು ಹೆಚ್ಚಾಗಿ ಮಹಾಭಾರತದ ಯುದ್ಧವು ನಡೆಯಿತು. ಭೂಭಾರವು ಕಡಿಮೆಯಾಯಿತು. ಮುಂದೆ ಕಲಿಯುಗವು ಪ್ರಾರಂಭವಾಯಿತು. ಎಲ್ಲ ಯುಗಗಳ ಕಡೆಯಲ್ಲಿಯೂ ಜಲಪ್ರಳಯ ವಾಗಲೇಬೇಕೆಂಬುದಿಲ್ಲ. ಚತುರ್ಯುಗಗಳಿಗೊಮ್ಮೆ ಆಗುತ್ತದೆ. ಯುಗಾಂತ್ಯ ದಲ್ಲಿ ದಾವಾಗ್ನಿ-ಚಂಡಮಾರುತಗಳಿಂದ ಎಲ್ಲವೂ ವಿನಾಶಹೊಂದುವು ದೆಂಬುದು ಪ್ರಸಿದ್ಧವಾಗಿದೆ. ಹಾಗೆಯೇ ಮಹಾಭಾರತದ ಯುದ್ಧದಲ್ಲಿಯೂ ಮಹಾಸ್ತ್ರಗಳ ಪ್ರಹಾರಗಳಿಂದಾಗಿ ಸರ್ವನಾಶವಾಗುತ್ತದೆ. ಈ ವಿಷಯವನ್ನು ನಾವು ಗಮನದಲ್ಲಿಟ್ಟುಕೊಂಡರೆ ಯುಧಿಷ್ಠಿರನು ಹೇಳಿರುವುದೇ ಸರಿ ಎನಿಸುತ್ತದೆ.

ಮುಂದೆ ಯುಧಿಷ್ಠಿರನು ಯಾರು ಯಾರಿಗೆ ಯಾವ ಯಾವ ಪುಣ್ಯ ಲೋಕಗಳು ಲಭಿಸಿವೆಯೆಂಬುದನ್ನು ಹೇಳುತ್ತಾನೆ.

ಅನಂತರ ಯುಧಿಷ್ಠಿರನು ವಿದುರನೇ ಮೊದಲಾದವರನ್ನು ಕರೆದು ಯುದ್ಧದಲ್ಲಿ ನಿಧನಹೊಂದಿದವರಿಗೆ ಅಂತ್ಯಕ್ರಿಯೆಗಳಿಗೆ ಸಿದ್ಧಗೊಳಿಸ ಬೇಕೆಂದು ಹೇಳುತ್ತಾನೆ. ಧರ್ಮರಾಜನ ಆಜ್ಞಾನುಸಾರವಾಗಿ ಸಾವಿರಾರು ಚಿತೆಗಳನ್ನು ಸಿದ್ಧಗೊಳಿಸಿ ಮುಖ್ಯ-ಮುಖ್ಯರಾದವರೆಲ್ಲರಿಗೂ ಶಾಸ್ತ್ರೋಕ್ತ ರೀತ್ಯಾ ದಹನಸಂಸ್ಕಾರವನ್ನು ಮಾಡುತ್ತಾರೆ. ಕೋಟ್ಯನುಕೋಟಿ ಯೋಧರ ಶರೀರಗಳನ್ನು ರಾಶಿ-ರಾಶಿಯಾಗಿ ಹಾಕಿ ಆ ಶರೀರಗಳನ್ನು ಕಟ್ಟಿಗೆಗಳಿಂದ ತುಂಬಿ ದಹನಸಂಸ್ಕಾರವನ್ನು ಮಾಡುತ್ತಾರೆ.

ದಹನಸಂಸ್ಕಾರವು ಹೇಗೆ ನಡೆಯಿತೆಂಬುದನ್ನು ನಾವಿಂದು ಊಹಿಸಿ ಕೊಳ್ಳಲು ಸಾಧ್ಯವಾಗುವುದಿಲ್ಲ. ೨೭ನೆಯ ಅಧ್ಯಾಯದಲ್ಲಿ ಜಲಪ್ರದಾನದ ವಿಷಯವು ಬರುತ್ತದೆ.

ತೇ ಸಮಾಸಾದ್ಯ ಗಙ್ಗಾಂ ತು ಶಿವಾಂ ಪುಣ್ಯಜಲೋಚಿತಾಮ್ ।
ಉದಕಂ ಚಕ್ರಿರೇ ಸರ್ವಾ ರುದತ್ಯೋ ಭೃಶದುಃಖಿತಾಃ ॥

ಇಲ್ಲಿ ಸ್ತ್ರೀಯರೇ ತಮ್ಮ ಪತಿ-ಪುತ್ರ-ಪಿತೃ-ಭ್ರಾತೃಗಳಿಗೆ ಜಲತರ್ಪಣ ಮಾಡಿದರೆಂದು ಉಕ್ತವಾಗಿದೆ. ಆದರೆ ಈ ಪದ್ಧತಿಯು ಈಗ ಇಲ್ಲ. ಜಲ

ತರ್ಪಣವನ್ನಾಗಲೀ ಧರ್ಮೋದಕವನ್ನಾಗಲೀ ಗಂಡಸರು ಕೊಡುವ ಪದ್ಧತಿಯಿರುವುದೇ ಹೊರತು ಹೆಂಗಸರು ಕೊಡುವ ಪದ್ಧತಿಯು ಈಗ ಇರುವುದಿಲ್ಲ.

ಈ ಮಧ್ಯದಲ್ಲಿ ಕುಂತಿಯು ಕರ್ಣನಿಗೂ ಜಲತರ್ಪಣಕೊಡುವಂತೆ ಪಾಂಡವರಿಗೆ ಹೇಳುತ್ತಾಳೆ. ಕರ್ಣನೂ ತನ್ನ ಮಗನೇ ಎಂಬುದನ್ನು ಪಾಂಡವರಿಗೆ ತಿಳಿಸುತ್ತಾಳೆ. ತಾಯಿಯ ಆ ಮಾತನ್ನು ಕೇಳಿ ಪಾಂಡವ ರೆಲ್ಲರಿಗೂ ಬಹಳ ದುಃಖವಾಗುತ್ತದೆ. ಯುಧಿಷ್ಠಿರನು ಕರ್ಣನ ಗುಣಗಾನ ಮಾಡುತ್ತಾನೆ. ಅಭಿಮನ್ಯುವಿನ ಮತ್ತು ದ್ರೌಪದೇಯರ ಸಾವಿನಿಂದ ಉಂಟಾದ ದುಃಖಕ್ಕಿಂತಲೂ ಕರ್ಣನ ಸಾವಿನಿಂದ ಉಂಟಾದ ದುಃಖವು ನೂರುಪಟ್ಟು ಹೆಚ್ಚಿನದೆಂದು ಹೇಳುತ್ತಾನೆ. ‘ಕುಂತಿಯು ಈ ವಿಷಯವನ್ನು ರಹಸ್ಯವಾಗಿಟ್ಟಿದ್ದುದರಿಂದ ಪಾಪಿಷ್ಠನಾದ ನಾನು ನನ್ನ ಹಿರಿಯಣ್ಣನನ್ನೇ ಕೊಲ್ಲುವಂತಾಯಿತು. ಆದುದರಿಂದ ಇನ್ನು ಮುಂದೆ ಸ್ತ್ರೀಯರ ಮನಸ್ಸಿನಲ್ಲಿ ರಹಸ್ಯವಾದ ವಿಷಯವು ಸ್ಥಿರವಾಗಿ ಉಳಿಯದಿರಲಿ’–ಎಂದು ಶಾಪ ಕೊಡುತ್ತಾನೆ. ಬಳಿಕ ಯುಧಿಷ್ಠಿರನು ಅನುಜರೊಡನೆಯೂ ಬಂಧು ಗಳೊಡನೆಯೂ ಗಂಗಾತೀರಕ್ಕೆ ಹೊರಡುತ್ತಾನೆ. ಇಲ್ಲಿಗೆ ಸ್ತ್ರೀಪರ್ವವು ಮುಗಿಯುತ್ತದೆ.

ಸಂಕ್ಷೇಪದಲ್ಲಿ ಸ್ತ್ರೀಪರ್ವ

ಪುತ್ರಶೋಕಾಭಿಸಂತಪ್ತಃ ಪ್ರಜ್ಞಾಚಕ್ಷುರ್ನರಾಧಿಪಃ ।
ಕೃಷ್ಣೋಪನೀತಾಂ ಯತ್ರಾಸಾವಾಯಸೀಂ ಪ್ರತಿಮಾಂ ದೃಢಾಮ್ ॥೩೧೩॥

ಭೀಮಸೇನದ್ರೋಹಬುದ್ಧಿರ್ಧೃತರಾಷ್ಟ್ರೋ ಬಭಞ್ಜ ಹ ।
ತಥಾ ಶೋಕಾಭಿತಪ್ತಸ್ಯ ಧೃತರಾಷ್ಟ್ರಸ್ಯ ಧೀಮತಃ ॥೩೧೪॥

ಸಂಸಾರಗಹನಂ ಬುದ್ಧ್ಯಾ ಹೇತುಭಿರ್ಮೋಕ್ಷದರ್ಶನೈಃ ।
ವಿದುರೇಣ ಚ ಯತ್ರಾಸ್ಯ ರಾಜ್ಞ ಆಶ್ವಾಸನಂ ಕೃತಮ್ ॥೩೧೫॥

ಧೃತರಾಷ್ಟ್ರಸ್ಯ ಚಾತ್ರೈವ ಕೌರವಾಯೋಧನಂ ತಥಾ ।
ಸಾನ್ತಃಪುರಸ್ಯ ಗಮನಂ ಶೋಕಾರ್ತಸ್ಯ ಪ್ರಕೀರ್ತಿತಮ್ ॥೩೧೬॥

ವಿಲಾಪೋ ವೀರಪತ್ನೀನಾಂ ಯತ್ರಾತಿಕರುಣಃ ಸ್ಮೃತಃ ।
ಕ್ರೋಧಾವೇಶಃ ಪ್ರಮೋಹಶ್ಚ ಗಾನ್ಧಾರೀಧೃತರಾಷ್ಟ್ರಯೋಃ ॥೩೧೭॥

ಯತ್ರ ತಾನ್ಕ್ಷತ್ರಿಯಾಃ ಶೂರಾನ್ಸಂಗ್ರಾಮೇಷ್ವನಿವರ್ತಿನಃ ।
ಪುತ್ರಾನ್ಭ್ರಾತೄನ್ಪಿತೄಂಶ್ಚೈವ ದದೃಶುರ್ನಿಹತಾನ್ರಣೇ ॥೩೧೮॥

ಪುತ್ರಪೌತ್ರವಧಾರ್ತಾಯಾಸ್ತಥಾತ್ರೈವ ಪ್ರಕೀರ್ತಿತಾ ।
ಗಾನ್ಧಾರ್ಯಾಶ್ಚಾಪಿ ಕೃಷ್ಣೇನ ಕ್ರೋಧೋಪಶಮನಕ್ರಿಯಾ ॥೩೧೯॥

ಯತ್ರ ರಾಜಾ ಮಹಾಪ್ರಾಜ್ಞಃ ಸರ್ವಧರ್ಮಭೃತಾಂ ವರಃ ।
ರಾಜ್ಞಾಂ ತಾನಿ ಶರೀರಾಣಿ ದಾಹಯಾಮಾಸ ಶಾಸ್ತ್ರತಃ ॥೩೨೦॥

ತೋಯಕರ್ಮಣಿ ಚಾರಬ್ಧೇ ರಾಜ್ಞಾಮುದಕದಾನಿಕೇ ।
ಗೂಢೋತ್ಪನ್ನಸ್ಯ ಚಾಖ್ಯಾನಂ ಕರ್ಣಸ್ಯ ಪೃಥಯಾತ್ಮನಃ ॥೩೨೧॥

ಸೂತಸ್ಯೈತದಿಹ ಪ್ರೋಕ್ತಂ ವ್ಯಾಸೇನ ಪರಮರ್ಷಿಣಾ ।
ಏತದೇಕಾದಶಂ ಪರ್ವ ಶೋಕವೈಕ್ಲವ್ಯಕಾರಣಮ್ ॥೩೨೨॥

ಪ್ರಣೀತಂ ಸಜ್ಜನಮನೋವೈಕ್ಲವ್ಯಾಶ್ರುಪ್ರವರ್ತಕಮ್ ।
ಸಪ್ತವಿಂಶತಿರಧ್ಯಾಯಾಃ ಪರ್ವಣ್ಯಸ್ಮಿನ್ಪ್ರಕೀರ್ತಿತಾಃ ॥೩೨೩॥

ಶ್ಲೋಕಸಪ್ತಶತೀ ಚಾಪಿ ಪಞ್ಚಸಪ್ತತಿಸಂಯುತಾ ।
ಸಂಖ್ಯಯಾ ಭಾರತಾಖ್ಯಾನಮುಕ್ತಂ ವ್ಯಾಸೇನ ಧೀಮತಾ ॥೩೨೪॥

ಈ ಪರ್ವದ ಅಧ್ಯಾಯಗಳು ೨೭ ; ಶ್ಲೋಕಗಳು ೭೭೫. ನಾವು ವ್ಯಾಖ್ಯಾನಿಸುತ್ತಿರುವ ಪುಸ್ತಕದಲ್ಲಿ ೮೨೪ ಶ್ಲೋಕಗಳಿವೆ. ಭಂ.ರಿ. ಇನ್ಸ್ಟಿಟ್ಯೂಟಿನವರ ಪುಸ್ತಕದಲ್ಲಿಯೂ ೨೭ ಅಧ್ಯಾಯಗಳಿವೆ. ಶ್ಲೋಕಗಳು ೭೩೩ ಮಾತ್ರವೇ ಇವೆ. ನಾವು ಭಾಷಾಂತರಿಸುತ್ತಿರುವ ಪುಸ್ತಕದಲ್ಲಿನ ಒಂದು ಅಧ್ಯಾಯವು ಆ ಪುಸ್ತಕದಲ್ಲಿಲ್ಲದಿದ್ದರೂ ೧೫ನೆಯ ಅಧ್ಯಾಯವನ್ನು ಎರಡಾಗಿ ವಿಭಾಗಿಸಿರುವುದರಿಂದ ಅಧ್ಯಾಯಸಂಖ್ಯೆಯು ಸರಿಯಾಗಿದೆ. ಪರ್ವಸಂಗ್ರಹಪರ್ವದಲ್ಲಿರುವ ಮತ್ತೊಂದು ವಿಷಯವನ್ನು ಗಮನಿಸ ಬೇಕಾಗಿದೆ. ಪರ್ವಸಂಗ್ರಹಪರ್ವದ ಆರಂಭದಲ್ಲಿ ಭೀಮಸೇನನ ಲೋಹಪ್ರತಿಮೆಯನ್ನು ಧೃತರಾಷ್ಟ್ರನು ಒಡೆದು ಹಾಕಿದ ಪ್ರಕರಣವಿದೆ.

ಸಾಮಾನ್ಯವಾಗಿ ಪರ್ವಸಂಗ್ರಹಪರ್ವದಲ್ಲಿ ಬರುವಂತೆಯೇ ಕಥಾನುವರ್ತನೆಯಿರುತ್ತದೆ. ಆದರೆ ಈ ಪರ್ವದಲ್ಲಿ ಮಾತ್ರ ಅದು ವ್ಯತ್ಯಾಸವಾಗಿದೆ. ಪರ್ವಸಂಗ್ರಹಪರ್ವದಲ್ಲಿರುವಂತೆ ಧೃತರಾಷ್ಟ್ರನು ಅರಮನೆಯಲ್ಲಿದ್ದಾಗಲೇ ಭೀಮನ ಪ್ರತಿಮಾಭಂಗವಾಯಿತೆಂಬ ಕಥೆಯು ಬಂದಿದ್ದರೆ ನಾವು ಗಮನಿಸಿರುವ ಅಸಂಗತಗಳು ನಿವಾರಣೆಯಾಗುತ್ತಿದ್ದುವು. ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಕಥೆಯು ಅದಲು-ಬದಲಾಗಿರುವಂತೆಯೇ ಕಾಣುತ್ತದೆ. ಪರ್ವಸಂಗ್ರಹಪರ್ವದಲ್ಲಿ ಕೃಪಾಶ್ವತ್ಥಾಮ-ಕೃತವರ್ಮರು ರಾಜನನ್ನು ಸಂಧಿಸಿದ ಪ್ರಸ್ತಾಪವಿಲ್ಲ. ಅವರು ಯಾವಾಗ ಹೇಗೆ ಸಂಧಿಸಿದರೆಂಬುದೂ ಒಂದು ಸಮಸ್ಯೆಯೇ ಸರಿ. ಸೌಪ್ತಿಕಪರ್ವದ ೯ನೆಯ ಅಧ್ಯಾಯದಲ್ಲಿ ಸಂಜಯನೇ ಹೇಳಿಕೊಂಡಿರುವಂತೆ ಹದಿನೆಂಟನೆಯ ದಿವಸದ ರಾತ್ರಿಯು ಕಳೆದು ಹತ್ತೊಂಬತ್ತನೆಯ ದಿವಸ ಪ್ರಾತಃಕಾಲದಲ್ಲಿ ಅಶ್ವತ್ಥಾಮನು ದುರ್ಯೋಧನನಿಗೆ ಹೇಳಿದ ಮಾತನ್ನು ಕೇಳಿಸಿಕೊಂಡು ರಾಜನ ಬಳಿಗೆ ಬರುತ್ತಾನೆ.

ಇತ್ಯೇವಂ ದ್ರೋಣಪುತ್ರಸ್ಯ ನಿಶಮ್ಯ ಕರುಣಾಂ ಗಿರಮ್ ।
ಪ್ರತ್ಯೂಷಕಾಲೇ ಶೋಕಾರ್ತಃ ಪ್ರಾದ್ರವನ್ನಗರಂ ಪ್ರತಿ ॥೬೦॥

ಅನಂತರ ಸ್ತ್ರೀಪರ್ವದ ಪ್ರಾರಂಭದಲ್ಲಿ ಅಂದರೆ ಹತ್ತೊಂಬತ್ತನೆಯ ದಿವಸ ಬೆಳಗಾದ ನಂತರ ಸಂಜಯ, ವಿದುರ, ವ್ಯಾಸರು ರಾಜನಿಗೆ ಸಮಾಧಾನವನ್ನು ಹೇಳುತ್ತಾರೆ. ಬಳಿಕ ರಾಜನು ಪರಿವಾರದೊಡನೆ ರಣರಂಗಕ್ಕೆ ಹೊರಡುತ್ತಾನೆ. ಹಾದಿಯಲ್ಲಿ ಕೃಪಾಶ್ವತ್ಥಾಮ-ಕೃತವರ್ಮರು ರಾಜನನ್ನು ಸಂಧಿಸಿದರೆಂದು ಬಂದಿದೆ. ಮೇಲಾಗಿ ಸೂರ್ಯನು ಹುಟ್ಟುವುದರೊಳಗಾಗಿಯೇ ಅವರು ರಾಜನನ್ನು ಸಂಧಿಸಿದ್ದರೆಂದೂ ಇದೆ.

ಸಮೇತ್ಯ ವೀರಾ ರಾಜಾನಂ ತದಾ ತ್ವನುದಿತೇ ರವೌ ।
ವಿಪ್ರಜಗ್ಮುರ್ಮಹಾತ್ಮಾನೋ ಯಥೇಚ್ಛಕಮರಿಂದಮಾಃ (೨೩)

(ಅಧ್ಯಾಯ ೧೧)

ಇದು ಹೇಗೆ ನಡೆಯಿತೆಂಬುದನ್ನು ಊಹಿಸುವುದು ಅಥವಾ ಎರಡನ್ನೂ ಸಮನ್ವಯಗೊಳಿಸುವುದು ಬಹಳ ಕಷ್ಟವೇ. ಮೇಲಾಗಿ ಇವರು ಸಂಧಿಸಿದ್ದು

ನಡುದಾರಿಯೇ ಆಗಿರಬೇಕು. ಹಸ್ತಿನಾಪುರದಲ್ಲಿ ಸಂಧಿಸಿದನಂತರ ಕೃಪರು ಹಸ್ತಿನಾಪುರಕ್ಕೆ ಹೋದರೆಂಬ ವಾಕ್ಯವಿದೆ.

ಜಗಾಮ ಹಾಸ್ತಿನಪುರಂ ಕೃಪಃ ಶಾರದ್ವತಸ್ತದಾ (೨೧)

ಪರ್ವಸಂಗ್ರಹಪರ್ವದಲ್ಲಿ ಈ ಪ್ರಸ್ತಾಪವೇ ಇಲ್ಲದಿರುವುದರಿಂದ ಈ ಅಧ್ಯಾಯವು ಹೆಚ್ಚು ಪಾಠವಿರಬಹುದೆಂದು ಊಹಿಸಬಹುದಾಗಿದೆ. ಕೆಲವು ಸಂದರ್ಭಗಳಲ್ಲಿ ಬರುವ ಸಂಶಯಗಳನ್ನು ನಿವಾರಿಸಲು ಮಹಾಮಹಿಮರಾದ ವ್ಯಾಸರಿಂದ ಮಾತ್ರವೇ ಸಾಧ್ಯವಾದೀತು.

*****

ಪುನರ್ವಿಮರ್ಶೆ

ಕರ್ಣಪರ್ವ–ಅಧ್ಯಾಯ ೬೯ ; ಶ್ಲೋಕಗಳು ೨೫-೨೬. ೧೯ನೆಯ ಸಂಪುಟ ಪುಟ ೪೨೨೨-ಶ್ರೀಕೃಷ್ಣನು ಅರ್ಜುನನಿಗೆ ಹೇಳುತ್ತಾನೆ :

ಅಯುಧ್ಯಮಾನಸ್ಯ ವಧಸ್ತಥಾಶತ್ರೋಶ್ಚ ಮಾನದ ।
ಪರಾಙ್ಮುಖಸ್ಯ ದ್ರವತಃ ಶರಣಂ ಚಾಪಿ ಗಚ್ಛತಃ ॥೨೫॥

ಕೃತಾಞ್ಜಲೇಃ ಪ್ರಪನ್ನಸ್ಯ ಪ್ರಮತ್ತಸ್ಯ ತಥೈವ ಚ ।
ನ ವಧಃ ಪೂಜ್ಯತೇ ಸದ್ಭಿಸ್ತಚ್ಚ ಸರ್ವಂ ಗುರೌ ತವ ॥೨೬॥

ಯುಧಿಷ್ಠಿರನು ಗಾಂಡೀವವನ್ನು ಶ್ರೀಕೃಷ್ಣನಿಗೆ ಕೊಟ್ಟುಬಿಡುವಂತೆ ಅರ್ಜುನನಿಗೆ ಹೇಳಿದಾಗ ಅರ್ಜುನನು ತಾನು ಮಾಡಿದ್ದ ಉಪಾಂಶು ವ್ರತಾನುಸಾರವಾಗಿ ಯುಧಿಷ್ಠಿರನನ್ನು ಸಂಹರಿಸಲು ಹೋಗುತ್ತಾನೆ. ಆ ಸಮಯದಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಸಮಾಧಾನಗೊಳಿಸಲು ಹೇಳಿರುವ ಶ್ಲೋಕಗಳಿವು.

'ಯುದ್ಧಮಾಡದೇ ಇರುವವನ, ಶತ್ರುವಲ್ಲದವನ, ಯುದ್ಧದಲ್ಲಿ ಪರಾಙ್ಮುಖನಾಗಿ ಪಲಾಯನಮಾಡುತ್ತಿರುವವನ, ಶರಣಾಗತನಾದವನ, ಕೈಮುಗಿದುಕೊಂಡು ಆಶ್ರಯವನ್ನು ಪಡೆಯಲು ಬಂದವನ, ಅಸಾವಧಾನತೆಯಿಂದ ಇರುವವನ ವಧೆಯನ್ನು ಸತ್ಪುರುಷರು ಪುರಸ್ಕರಿಸುವುದಿಲ್ಲ.

ನಿನ್ನ ಅಣ್ಣನಲ್ಲಿ ವಧೆಗೆ ಅನರ್ಹನಾದವನ ಈ ಎಲ್ಲ ಗುಣಗಳೂ ಇವೆ'–ಎಂದು ಈ ಎರಡು ಶ್ಲೋಕಗಳ ಅರ್ಥವಾಗುತ್ತದೆ. ನಮ್ಮ ಓದುಗರೊಬ್ಬರು ಇಲ್ಲಿನ ಮುಖ್ಯವಾದ ಒಂದಂಶವನ್ನು ಗಮನಿಸಿ ಪತ್ರ ಬರೆದಿರುತ್ತಾರೆ– ಧರ್ಮರಾಜನು ಸ್ವತಃ ವೀರ. ಸಾವಧಾನತೆಯೇ ಅವನ ವಿಶಿಷ್ಟಗುಣ. ಹೀಗಿದ್ದೂ ಶ್ರೀಕೃಷ್ಣನು ಅವನನ್ನು ಇಷ್ಟು ಕೀಳುಮಟ್ಟದಲ್ಲಿ ಕಂಡು ಎಲ್ಲರೆದುರಿನಲ್ಲಿಯೂ ಹೀಗೆ ಹಳಿದಿರುವ ಕಾರಣ ಸ್ಪಷ್ಟವಾಗುತ್ತಿಲ್ಲ. ಅದರ ವಿವರಣೆಯನ್ನು ನೀವು ಕೊಟ್ಟಿದ್ದರೆ ಆಕರ್ಷಕವಾಗುತ್ತಿತ್ತು. ಗೋರಖಪುರದ ಗೀತಾಪ್ರೆಸ್ಸಿನ ಮಹಾಭಾರತದಲ್ಲಿಯೂ ಅರ್ಥವು ಹೀಗೆಯೇ ಇದೆ.

ನಮ್ಮ ಓದುಗರು ತಿಳಿಸಿರುವ ಅಭಿಪ್ರಾಯವು ಸಮಂಜಸವಾಗಿದೆ. ಈ ಎರಡು ಶ್ಲೋಕಗಳನ್ನೂ ಧರ್ಮರಾಜನ ವಿಷಯದಲ್ಲಿ ಸಮನ್ವಯಿಸಲಾಗುವುದಿಲ್ಲ. ಯುದ್ಧಮಾಡದೇ ಇರುವ, ಪರಾಙ್ಮುಖನಾಗಿ ಓಡಿಹೋಗುತ್ತಿರುವ, ಶರಣಾಗತನಾದ, ಬದ್ಧಾಂಜಲಿಯಾಗಿ ನಮಸ್ಕರಿಸುತ್ತಿರುವ, ಅಸಾವಧಾನತೆಯಿಂದಿರುವ (ಅನ್ಯಮನಸ್ಕನಾಗಿರುವ) ಶತ್ರುವಿನ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬುದನ್ನು ಈ ಶ್ಲೋಕಗಳು ಹೇಳುತ್ತವೆ. ಯುಧಿಷ್ಠಿರನಿಗೆ ಈ ಎಲ್ಲವನ್ನೂ ಸಮನ್ವಯಿಸಿ ಅರ್ಥಮಾಡಬೇಕಾಗಿರುವುದರಿಂದ ಸ್ವಾಭಾವಿಕವಾಗಿ **ತಥಾ–ಶತ್ರೋಃ** ಎಂದು ಪದವಿಭಾಗಮಾಡದೇ **ತಥಾ ಅಶತ್ರೋಃ** ಎಂದು ಪದವಿಭಾಗಮಾಡಿ ಅರ್ಥೈಸಬೇಕಾಗಿದೆ. **'ತಚ್ಚ ಸರ್ವಂ ಗುರೌ ತವ'** ನಿಮ್ಮ ಅಣ್ಣನಲ್ಲಿ ವಧಾರ್ಹನಾದವನ ಈ ಎಲ್ಲ ಗುಣಗಳೂ ಇವೆ–ಎಂದು ಯುಧಿಷ್ಠಿರನ ವಿಷಯದಲ್ಲಿ ಸಂಪೂರ್ಣವಾಗಿ ಅಸಮಂಜಸವಾಗಿಯೇ ಕಾಣುತ್ತದೆ. ಇವನು ಕರ್ಣನೊಡನೆ ಯುದ್ಧಮಾಡಲಾಗದೇ ಪರಾಙ್ಮುಖನಾದನೆಂಬುದೊಂದು ನಿಜ. ಉಳಿದ ಯಾವ ಗುಣಗಳೂ ಇವನಿಗೆ ಅನ್ವಯಿಸುವುದಿಲ್ಲ. ಬದ್ಧಾಂಜಲಿಯಾಗಿದ್ದ, ಪ್ರಣತನಾಗಿದ್ದ ಶರಣಾಗತನಾಗಿದ್ದ ಮುಂತಾಗಿ ಧರ್ಮರಾಜನ ವಿಷಯದಲ್ಲಿ ಹೇಳುವುದು ದೊಡ್ಡ ಅಪಚಾರವೇ ಆದೀತು.

ಪುನರ್ವಿಮರ್ಶೆಯಿಂದ ಹೀಗೆ ನಿರ್ಧರಿಸಿದ ನಾವು ಪಾಠಾಂತರಗಳೇನಾದರೂ ಇರುವುವೋ–ಎಂದು ಪರಿಶೀಲಿಸಿದೆವು. ಪಾಠಾಂತರವೊಂದಿದ್ದು ಆ ಪಾಠದಿಂದ ಸ್ವಲ್ಪ ಸಮಾಧಾನ ಹೊಂದಲು ಸಾಧ್ಯವಾಯಿತು.

ಭಂಡಾರ್‌ಕರ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನವರು ಪ್ರಕಟಿಸಿರುವ ಭಾರತ ; ಅಧ್ಯಾಯ ೪೯–ಶ್ಲೋಕ ೨೨.

ಅಯುಧ್ಯಮಾನಸ್ಯ ವಧಸ್ತಥಾಶಸ್ತ್ರಸ್ಯ ಭಾರತ ।
ಪರಾಙ್ಮುಖಸ್ಯ ದ್ರವತಃ ಶರಣಂ ವಾಭಿಗಚ್ಛತಃ ।
ಕೃತಾಞ್ಜಲೇಃ ಪ್ರಪನ್ನಸ್ಯ ನ ವಧಃ ಪೂಜ್ಯತೇ ಬುಧೈಃ ॥೨೨॥

ಯುದ್ಧಮಾಡದೇ ಇರುವವನ, ಶಸ್ತ್ರರಹಿತನಾದವನ, ಪರಾಙ್ಮುಖನಾಗಿ ಓಡಿಹೋಗುತ್ತಿರುವವನ, ಶರಣಾಗತನಾದವನ, ಬದ್ಧಾಂಜಲಿಯಾಗಿ ನಮಸ್ಕರಿಸುತ್ತಿರುವವನ ವಧೆಯು ವಿದ್ವಾಂಸರಿಂದ ಶ್ಲಾಘಿಸಲ್ಪಡುವುದಿಲ್ಲ.

ಈ ಶ್ಲೋಕವು ಸರ್ವಸಾಮಾನ್ಯವಾದ ಶ್ಲೋಕವಾಗಿದೆ. ಈ ಶ್ಲೋಕದಲ್ಲಿರುವ ಎಲ್ಲ ವಿಶೇಷಣಗಳನ್ನೂ ಧರ್ಮರಾಜನಿಗೆ ಅನ್ವಯಿಸಬೇಕಾಗಿಲ್ಲ. **ಅಶಸ್ತ್ರಸ್ಯ ವಧಃ ಬುಧೈಃ ನ ಪೂಜ್ಯತೇ**–ಎಂಬುದನ್ನು ಏಕದೇಶವಾಗಿ ಧರ್ಮರಾಜನಿಗೆ ಅನ್ವಯಿಸಬಹುದಾಗಿದೆ. ಈ ಪಾಠವನ್ನೇ ಇಟ್ಟುಕೊಳ್ಳುವುದು ಸೂಕ್ತವಾಗಿ ಕಾಣುತ್ತದೆ.

ಪರಿಶಿಷ್ಟವು ಮುಗಿಯಿತು.

*****

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57

Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.